ಸಂವಾದ

ಫೆಬ್ರವರಿ - ೨೦೦೫ ರೂ. ೪೦

ವಾರ್ಷಿಕ ವಿಶೇಷಾಂಕ

ಜನಮನದ ಹತ್ತಿರಕ್ಕೆ ಆಡಳಿತವನ್ನು ಒಯ್ಯುವತ್ತ ಮಹತ್ವದ ಹೆಜ್ಜೆ

ಮಹಾನಗರ ಪಾಲಿಕೆಯ ಹಲವಾರು ಸೇವೆಗಳನ್ನು ಒಂದೇ ಸೂರಿನಡಿ ಪಡೆಯಲು
ಬೆಂಗಳೂರು ಮಹಾನಗರ ಪಾಲಿಕೆಯ ನಾಗರಿಕ ಸೇವಾ ಕೇಂದ್ರಗಳು



ನಗರದ ನಾಲ್ಕು ಪ್ರದೇಶಗಳಲ್ಲೂ ಕೇಂದ್ರಗಳ ಸೇವೆ ಲಭ್ಯ

ಕೇಂದ್ರಗಳಲ್ಲಿ ದೊರಕುವ ಸೇವೆಗಳು

- ಆಸ್ತಿ ತೆರಿಗೆ ಪಾವತಿ
- ಖಾತಾ ವರ್ಗಾವಣೆ / ಸಂಯೋಜನೆ ವಿಭಜನೆ
- ರಸ್ತೆ ಅಗೆಯಲು ಅನುಮತಿ
- ಮಾಹಿತಿ ಪುಸ್ತಕ ಮತ್ತು ಅರ್ಜಿ ನಮೂನೆಗಾಗಿ ಅರ್ಜಿ
- ಖಾತಾ ನೋಂದಣಿ ಅರ್ಜಿ
- ಮನೆ ನಕ್ಷೆ ಮಂಜೂರು ಅರ್ಜಿ
- ಜನನ ಮತ್ತು ಮರಣ ಪ್ರಮಾಣ ಪತ್ರಗಳು
- ನಾಗರಿಕ ಕುಂದುಕೊರತೆಗಳ ನೋಂದಣಿ

ಸಾರ್ವಜನಿಕರು ದೂರುಗಳನ್ನು ಸಲ್ಲಿಸಬಹುದಾದ ವಿಷಯಗಳು

ಅನಧಿಕೃತ ಕಟ್ಟಡ ನಿರ್ಮಾಣ, ಸಾರ್ವಜನಿಕ ಹಾಗೂ ಸರ್ಕಾರದ ಸ್ವತ್ತುಗಳ ಒತ್ತುವರಿ ಉದ್ಯಮ ಪರವಾನಗಿ ಸಂಬಂಧ, ಸಾರ್ವಜನಿಕ ಆರೋಗ್ಯ ಸಂಬಂಧ ಸೊಳ್ಳೆ ನಿಯಂತ್ರಣ, ಬೀದಿ ನಾಯಿಗಳ ಕಾಟ, ರಸ್ತೆಗುಂಡಿಗಳು ಬೀದಿ ದೀಪಗಳ ದುರಸ್ತಿ, ಸಾಮಾನ್ಯ ಸ್ವಚ್ಛತೆ, ಚರಂಡಿ/ಸ್ವಚ್ಛತೆ ಇತರೆ ವಿಷಯಗಳು.

ನಾಗರಿಕ ಕೇಂದ್ರಗಳ ಕೆಲಸದ ವೇಳೆ :

ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 12.00 ಗಂಟೆ ಸಂಜೆ 4.00 ರಿಂದ 7.00 ಗಂಟೆ

ನಾಗರಿಕ ಸೇವಾ ಕೇಂದ್ರಗಳು

ಕೇಂದ್ರ ಕಛೇರಿ
ಎನ್.ಆರ್. ಚೌಕ,
ಬೆಂಗಳೂರು
ದೂರವಾಣಿ : 2975500

ಉಪ ಆಯುಕ್ತರು (ದಕ್ಷಿಣ) ವಲಯ,
9ನೇ ಅಡ್ಡರಸ್ತೆ, 9ನೇ ಮುಖ್ಯ ರಸ್ತೆ,
ಜಯನಗರ 2ನೇ ಹಂತ,
ಬೆಂಗಳೂರು,
ದೂರವಾಣಿ : 6566365

ಉಪ ಆಯುಕ್ತರು (ಪಶ್ಚಿಮ ವಲಯ) ,
ಬಾಷ್ಯಂ ಪಾರ್ಕ್, ಮಲ್ಲೇಶ್ವರಂ,
ಬೆಂಗಳೂರು
ದೂರವಾಣಿ : 3361704

ಉಪ ಆಯುಕ್ತರು (ಪೂರ್ವ ವಲಯ)
ನೆಲ ಮಹಡಿ,
ಪಬ್ಲಿಕ್ ಯುಟಿಲಿಟಿ ಕಟ್ಟಡ,
ಮಹಾತ್ಮಗಾಂಧಿ ರಸ್ತೆ,
ಬೆಂಗಳೂರು,
ದೂರವಾಣಿ : 2975800

ಬೆಂಗಳೂರು ಮಹಾನಗರ ಪಾಲಿಕೆ

ಫೆಬ್ರವರಿ-2005

ವಾರ್ಷಿಕ ವಿಶೇಷಾಂಕ ೨೦೦೫



ಸಂಪಾದಕೀಯ

ಅಂತರಂಗ

‘ಸಂವಾದ’ದ ಹೆಮ್ಮೆ ನಿಮ್ಮದೆ

‘**ಸಂ**ವಾದ’ಕ್ಕೀಗ ಮೂರರ ಹರೆಯ. ಎರಡು ವರ್ಷದ ಹಿಂದೆ ‘ಸಂವಾದ’ ಕಂಡ ಕನಸುಗಳು ಪೂರ್ಣ ನನಸಾಗದಿದ್ದರೂ ಮುಂಬೆಳಗಿನ ಹೆಜ್ಜೆಗುರುತುಗಳಂತೂ ಸ್ಪಷ್ಟವಾಗತೊಡಗಿವೆ. ಆರಂಭದ ಸಂಚಿಕೆಯಲ್ಲೇ ‘ಸಂವಾದ’ ತನ್ನ ದಾರಿಯನ್ನು ಸ್ಪಷ್ಟವಾಗಿ ಗುರುತಿಸಿಕೊಂಡಿತ್ತು. ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆ ಅದಕ್ಕಿತ್ತು. ಸ್ವಾಭಿಮಾನ, ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಹಂಬಲಿಸುವ ಎಲ್ಲರ ವೇದಿಕೆಯಾಗಬೇಕೆಂಬ ಆಶಯವೂ ಅದಕ್ಕಿತ್ತು. ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಮಹತ್ವಾಕಾಂಕ್ಷೆಯೂ ‘ಸಂವಾದ’ಕ್ಕಿತ್ತು. ಜತೆಗೆ ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರಿಗೂ ಮಾನವೀಯ ಬದುಕಿನ ಅನ್ವೇಷಣೆಗೆ ವೇದಿಕೆಯಾಗಬೇಕೆಂಬ ಅದಮ್ಯ ಉತ್ಸಾಹವೂ ಅದರದಾಗಿತ್ತು.

ಎರಡನೇ ವರ್ಷದ ವಿಶೇಷಾಂಕ ಪ್ರಕಟವಾಗುತ್ತಿರುವ ಈ ಹೊತ್ತಿನಲ್ಲಿ ‘ಸಂವಾದ’ ನಾಡಿನ ಬಹುತೇಕ ಎಲ್ಲ ಚಿಂತಕರ, ಸಾಹಿತಿ-ಕಲಾವಿದರ, ಸಾಮಾಜಿಕ ಕಾರ್ಯಕರ್ತರ, ಹೋರಾಟಗಾರರ ಮನೆ-ಮನಗಳನ್ನು ತುಂಬಿರುವುದು ತನ್ನ ಗುರಿಯತ್ತ ಅದು ಸ್ಪಷ್ಟ ಹೆಜ್ಜೆಗಳನ್ನು ಇರಿಸುತ್ತಿರುವುದರ ದ್ಯೋತಕ ಎಂದೇ ನನಗೆ ಅನಿಸುತ್ತಿದೆ. ‘ಸಂವಾದ’ ಓದುಗರ ಬಳಗ ಬೆಳೆಯುತ್ತಿದೆ. ಬರಹಗಾರರ ಬಳಗ ಬೆಳೆಯುತ್ತಿದೆ. ನಿತ್ಯ ಬರುವ ಅಂಚೆ ಪತ್ರಗಳು ನಮ್ಮ ಬೆನ್ನು ತಟ್ಟುತ್ತಿವೆ ಎಂದು ಹೇಳಿದರೆ ಮಾತ್ರ ಇದನ್ನು ಸಮರ್ಥಿಸಿದಂತಾಗುವುದಿಲ್ಲ. ಬಹುತೇಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ, ಕಾಲೇಜುಗಳಲ್ಲಿ ‘ಸಂವಾದ’ ಕುರಿತು ವ್ಯಾಪಕ ಚರ್ಚೆ ನಡೆಯುತ್ತಿದೆ. ಸಂಶೋಧನಾ ವಿದ್ಯಾರ್ಥಿಗಳು ‘ಸಂವಾದ’ದ ಲೇಖನಗಳನ್ನು ತಮ್ಮ ಸಂಶೋಧನೆಗಾಗಿ ‘ಆಕರ ಬರಹ’ಗಳನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಬಹುತೇಕ ಎಲ್ಲಾ ಕಾಲೇಜುಗಳ ಗ್ರಂಥಾಲಯಗಳು ‘ಸಂವಾದ’ವನ್ನು ತರಿಸಿಕೊಳ್ಳುತ್ತಿವೆ. ‘ಸಂವಾದ’ದಂಥ ಪತ್ರಿಕೆಗೆ ಇದಕ್ಕಿಂತ ಹೆಮ್ಮೆಯ ಸಂಗತಿ ಬೇರೇನಿದೆ!

‘ಸಂವಾದ’ದ ಈ ಹೆಮ್ಮೆಯಲ್ಲಿ ತಮ್ಮೆಲ್ಲರ ಪಾಲೇ ಅಧಿಕ! ಅದಕ್ಕಾಗಿ ನಾಡಿನ ಸಮಸ್ತರಿಗೂ ‘ಸಂವಾದ’ ಕೃತಜ್ಞತೆ ಸಲ್ಲಿಸುತ್ತದೆ. ಎಂದಿನ ಸಹಕಾರ ಮುಂದೂ ಇರಲೆಂದು ಬಯಸುತ್ತದೆ.

* * *

೨೦೦೪ ಭಾರತೀಯರ ಪಾಲಿಗೆ ಮಿಶ್ರ ಫಲ ನೀಡಿದ ವರ್ಷ. ಕೋಮುವಾದಿ ದುಷ್ಟರ ಕೈಯಿಂದ ದೇಶವನ್ನು ಪಾರು ಮಾಡಿದ ಮತದಾರ ನಿಜಕ್ಕೂ ವರ್ಷದ ಅದ್ವಿತೀಯ ನಾಯಕ! ರಾಷ್ಟ್ರೀಯ ಪ್ರಜಾತಾಂತ್ರಿಕ ಒಕ್ಕೂಟದ ಹೆಸರಿನಲ್ಲಿ ಅಧಿಕಾರ ಹಿಡಿದಿದ್ದ ಕೋಮುವಾದಿಗಳು ಇಡೀ ದೇಶವನ್ನು ಅಧಃಪತನದತ್ತ ದೂಡಿ ಭಾರತೀಯ ಸಂಸ್ಕೃತಿಯನ್ನೇ ಹಾದಿ ತಪ್ಪಿಸಿದ್ದರು. ಮಧ್ಯಮ ವರ್ಗದ ಬೋಳೆತನದಿಂದಾಗಿ ಕೋಮುಶಕ್ತಿಗಳು ಮತ್ತೆ ಅಧಿಕಾರಕ್ಕೆ ಬಂದಿದ್ದರೆ ದೇಶ ಕನಿಷ್ಠ ಒಂದು ಶತಮಾನ ಹಿಂದೆ ಸರಿಯುತ್ತಿತ್ತು. ಮತದಾರ ಈ ಗಂಡಾಂತರವನ್ನು ಮನಗಂಡು ದೇಶವನ್ನು ಪಾರು ಮಾಡಿದ! ಅಧಿಕಾರ ಕಳೆದುಕೊಂಡ ನಂತರ ಕೋಮುವಾದಿಗಳಿಗೆ ನಿರಂತರ ಸೋಲಿನ ಸರಮಾಲೆಯೇ ಆರಂಭವಾಯಿತು. ಕಂಚಿ ಮಠದ ಶಂಕರಾಚಾರ್ಯ ಜಯೇಂದ್ರ ಸರಸ್ವತಿ ಕೊಲೆ ಮೊಕದ್ದಮೆಯೊಂದರಲ್ಲಿ ಸಿಕ್ಕಿಬಿದ್ದಿದ್ದು ಅವರಿಗೆ ಬಿದ್ದ ಭಾರಿ ಪೆಟ್ಟು. ಇದಕ್ಕೆ ಪ್ರತಿಕ್ರಿಯೆಯಾಗಿ ಸಂಘ ಪರಿವಾರದ ಎಲ್ಲ ನಾಯಕರು ಮಾನಗೆಟ್ಟವರಂತೆ ನಡೆದುಕೊಂಡರು. ಸಂವಿಧಾನವನ್ನು ಕೆಲಸಕ್ಕೆ ಬಾರದ ಪುಸ್ತಕವನ್ನಾಗಿ ಮಾಡಲು ಹೊರಟರು. ಜನಗಳ ಮುಂದೆ ನಗೆಪಾಟಲಿಗೀಡಾದರು. ಭಾರತೀಯ ಮತದಾರರು ತೋರಿದ ಈ ಜಾಣ್ಮೆಯನ್ನು ಸದಾ ಜಾಗೃತಾವಸ್ಥೆಯಲ್ಲಿ ಇಟ್ಟುಕೊಂಡಲ್ಲಿ ಮಾತ್ರ ಮತ್ತೆ ಇಂಥ ಅನಾಹುತ ಎದುರಾಗುವುದನ್ನು ತಪ್ಪಿಸಬಹುದು.

ಜಾಗತಿಕ ಮಟ್ಟದಲ್ಲಿ ಮಾನವ ಹಕ್ಕುಗಳನ್ನು ನಾಶಮಾಡಿ ಜಾಗತಿಕ ಸಾಮ್ರಾಟನಾಗಿ ಮೆರೆಯಬೇಕೆಂದಿರುವ ಬುಷ್‌ಗೆ ಅಮೆರಿಕಾದ ಜನತೆ, ಸರಿಯಾದ ಪಾಠ ಕಲಿಸದಿದ್ದುದು ಮತ್ತೊಂದು ದುರಂತ. ನಮ್ಮ ನಡುವಿನ ‘ಕರ್ಮಠ ಗಾಂಧಿ’ ಯಂತಿದ್ದ ಪ್ರೊ॥ ನಂಜುಂಡಸ್ವಾಮಿ, ‘ಉದಾತ್ತ ಗಾಂಧಿ’ ಯಂತಿದ್ದ ಕಿಷನ್ ಪಟ್ನಾಯಕ್ ನಮ್ಮನ್ನ ಅಗಲಿದ್ದಂತೂ ‘ಸಂವಾದ’ಕ್ಕೆ ತುಂಬಲಾರದ ನಷ್ಟ

ಇದೆಲ್ಲದರ ನಡುವೆ ಕರ್ನಾಟಕದ ಮಟ್ಟಿಗಂತೂ ದಲಿತ - ರೈತ ಸಂಘಟನೆಗಳು ಒಟ್ಟಾಗಿ ಹೆಜ್ಜೆ ಇಡಲು ಆರಂಭಿಸಿ ರೋಮಾಂಚನ ಉಂಟು ಮಾಡಿವೆ. ದೇಶದ ದುಡಿಯುವ ವರ್ಗದ ಎರಡು ಬೃಹತ್ ಸಂಘಟನೆಗಳು ಜತೆಗೂಡಿ ಹೆಜ್ಜೆ ಹಾಕುವುದು ಸಾಮಾನ್ಯವಾದುದಲ್ಲ. ನಾಡಿನ ಹೊಸ ಸಂಕ್ರಮಣ ಈ ಪ್ರಯತ್ನ. ಕೊಳೆತು ನಾರುತ್ತಿರುವ ಸಾಮಾಜಿಕ ಬದುಕಿಗೆ ಈ ಮೂಲಕ ಹೊಸ ಜೀವಚೇತನವಾಗಲೆಂದು ‘ಸಂವಾದ’ ಹಾರೈಸುತ್ತದೆ.

ಂ ಇಂದೂಧರ ಹೊನ್ನಾಪುರ

ಒಳಪುಟಗಳಲ್ಲಿ

ಸಂವಾದ

ಮಾಸ ಪತ್ರಿಕೆ

ಸಂಪುಟ ೩ ಸಂಚಿಕೆ ೪
ವಾರ್ಷಿಕ ವಿಶೇಷಾಂಕ
ಫೆಬ್ರವರಿ ೨೦೦೫

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ|| ನಟರಾಜ್ ಹುಳಿಯಾರ್
ಪ್ರೊ|| ರಹಮತ್ ತರೀಕೆರೆ
ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು. ಸುಮ
ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ : ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು - ೫೬೦ ೦೯೧
© ೨೩೨೮೭೯೪೩ / ೯೪೪೮೦ ೪೮೩೦೬
ಇ-ಮೇಲ್ ವಿಳಾಸ : samvaada@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANANAGAR, MAGADI ROAD
VISHWANEEDAM POST
BANGALORE - 560 091
© 080-23287943, 94480 48306
e- mail : samvaada@yahoo.co.in

EDITOR :
INDUDHARA HONNAPURA

ಲೇಖನಗಳು:

೮ ಬೇಸಾಯ ಮತ್ತು ಅರಿವುಗೆಟ್ಟ ವಿಜ್ಞಾನ
ಎಲ್ಸಿ. ನಾಗರಾಜ್
೧೮ ಜೈಲು : ಅಭಿವೃದ್ಧಿಯ ಮೈಲಿ ಮತ್ತು ಗಲ್ಲು
ಬಿಳಿದಾಳೆ ಈಶ
೨೨ ದಲಿತ - ರೈತ ಜತೆಗೂಡಬೇಕು, ಯಾಕೆ ?
ವಡ್ಡಗೆರೆ ನಾಗರಾಜಯ್ಯ
೨೮ ವೀರ(?) ಸಾವರಕರ : ಒಂದು ಒಳನೋಟ
ಬಿ.ವಿ. ವೀರಭದ್ರಪ್ಪ



೩೯ ಪೂರ್ಣದೃಷ್ಟಿಯ ಕುವೆಂಪು ಮತ್ತು ಅಲ್ಪದೃಷ್ಟಿಯ ನಾವು...
ಡಿ.ಎಸ್. ನಾಗಭೂಷಣ
೫೦ ಮುಸ್ಲಿಮರ ಮುಂದಿನ ಆಯ್ಕೆಗಳು ಯಾವುವು?
ಪ್ರೊ|| ರಹಮತ್ ತರೀಕೆರೆ
೫೬ ಪರ್ಯಾಯ ಸಂಸ್ಕೃತಿ ಮತ್ತು ರಾಜಕೀಯದ ಅನ್ವೇಷಣೆಯ ಹಾದಿ
ಪ್ರೊ|| ವಿ.ಎಸ್. ಶ್ರೀಧರ
೭೬ ಇತಿಹಾಸದ ಅಧ್ಯಯನ
ಡಾ|| ಜಿ. ರಾಮಕೃಷ್ಣ



೮೦ 'ವಿಗ್ಗ ಅಥವಾ ಪಜ್ಞ'
ಪದ್ಮಾಲಯಾ ನಾಗರಾಜ
೯೧ ಹಸಿರು ಮಲೆನಾಡಿನಲ್ಲಿ ಕೆಂಪು ಕ್ರಾಂತಿಯ ಮುಂಬೆಳಗು
ಶಿವಸುಂದರ್
೯೮ ಪರಿಸರವಾದದಲ್ಲಿ ವಿಜ್ಞಾನ ಸಂಪನ್ಮೂಲಗಳ ಹಂಚಿಕೆ ಹಾಗೂ ಬಲಾಢ್ಯರ ಆಯ್ಕೆ
ಟಿ.ಎಸ್. ವಿವೇಕಾನಂದ
೧೦೪ ವೈದಿಕ ಮತ್ತು ಅವೈದಿಕರಲ್ಲಿ ಲಿಂಗ ಸಂಬಂಧಿ ನೆಲೆಗಳು
ಡಾ|| ಶೈಲಜ ಹಿರೇಮಠ

೧೧೬ ಭಾರತದ ಒಕ್ಕಲುತನ - ತಿಕ್ಕಲುತನ
ಅಲ್ಲಮಪ್ರಭು ಬೆಟ್ಟದೂರು
೧೧೮ ಭಾರತೀಯ ದರ್ಶನಗಳಲ್ಲಿ ಕೆಳವರ್ಗದ ಆಶಯಗಳು
ಎಸ್.ಎಸ್. ಹಿರೇಮಠ

ಮುಖಪುಟ : ಜಾನಪದ ಕಲೆ ವಿನ್ಯಾಸ: ರಾಥೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

೧೪೨ ಮಾರುಕಟ್ಟೆ ಮೌಲ್ಯಗಳು ಮತ್ತು ಮಹಿಳೆ
ಡಾ|| ಮಲ್ಲಿಕಾ ಘಂಟಿ
೧೪೭ ಕಲಿಕೆ ಮತ್ತು ಅಧಿಕಾರ ಸಂಬಂಧಗಳು
ಡಿ. ಡೊಮಿನಿಕ್
೧೫೨ ಅಂಬೇಡ್ಕರ್ ಮತ್ತು ರಾಷ್ಟ್ರೀಯತೆ : ವರ್ತಮಾನದ ಕೆಲವು ಸಂಧಿಗ್ಧಗಳು
ಬಿ.ಯು. ಸುಮಾ
೧೬೬ ಮುಸ್ಲಿಂ ಮಹಿಳೆಯ ಪಾತ್ರ ಬದಲಾಗುತ್ತಿದೆಯೇ ?
ಕೆ. ಷರೀಫಾ

೧೨೨
ಅನುಭವದ [illegible]
ಈರಪ್ಪ ಎಂ. ಕಂಬಳಿ
ಪದ್ಮಾಲಯಾ ನಾಗರಾಜ
ನಂಜನಹಳ್ಳಿ ನಾರಾಯಣ
ಡಾ|| ಸಣ್ಣರಾಮ
ಸುಭಾಷ್ ಮಾಡ್ರಹಳ್ಳಿ
ವಿ. ಬಾಲಕೃಷ್ಣ

೧೭೬ ದಕ್ಷತೆ ಮತ್ತು ಮೀಸಲಾತಿ
ಡಾ|| ಜಿ. ಪಾಂಡುನಾಯಕ್
೧೮೦ ರಂಗಭೂಮಿ ಹಿನ್ನೆಲೆಯಲ್ಲಿ ತಳ ಸಮುದಾಯಗಳ ಸಂವೇದನೆ
ಇಕ್ಬಾಲ್ ಅಹಮದ್
೧೮೨ ದಲಿತ ಸಾಂಸ್ಕೃತಿಕ ಚಳವಳಿಯ ವಸಾಹತೀಕರಣ
ಡಾ|| ಬಂಜಗೆರೆ ಜಯಪ್ರಕಾಶ
೧೯೪ ಅದಮ್ಯ ಕನಸುಗಳಿಲ್ಲದೆ ಸಿನಿಮಾ...
ಕೃಷ್ಣ ಮಾಸಡಿ
೧೯೮ ಶಾಸನಗಳಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ
ಪ್ರೊ|| ಮಲ್ಲೇಪುರಂ ಜಿ. ವೆಂಕಟೇಶ

ಕಾವ್ಯ

೬ ಶಿವ ಎನ್ನಲೆ ಯಮನ ಬಾರೆನ್ನಲೆ
ಸ. ರಘುನಾಥ
೭ ಗಜಲ್
ಜಂಬಣ್ಣ ಅಮರಚಿಂತ
೧೭ ಎರಡು ಕವನಗಳು
ಆನಂದ ಝುಂಜರವಾಡ
೨೧ ಕನಸುಗಳ ಕೊಲ್ಲದಿರಿ
ಸಿ. ವೆಂಕಟೇಶ
೩೮ ಓ ನೀಲಗಾರರೆ
ಬಿದರಹಳ್ಳಿ ನರಸಿಂಹಮೂರ್ತಿ
೬೧ ಮಳೆಯ ಪುಳಕ
ಚಂದ್ರಶೇಖರ ತಾಳ್ಯ
೭೫ ಸದಾ ಉರಿಯುತ್ತಲೇ ಇದೆ ಆ ಹಕ್ಕಿ
ಲಕ್ಷ್ಮೀಪತಿ ಕೋಲಾರ
೯೬ ಒಂದಿರುಳಿನ ಮೋಹಕ ಚಿತ್ರ
ಮಂಜುನಾಥ್ ವಿ.ಎಂ.
೯೭ ಧರೆಗೆ ದೊಡ್ಡವರು
ಜಿ.ವಿ. ಆನಂದಮೂರ್ತಿ
೧೧೧ ನವೀನ ಆಶ್ರಮ
ರಾಮಲಿಂಗಪ್ಪ ಟಿ. ಬೇಗೂರು
೧೨೭ ಅರಿವೇ ಅಂಬೇಡ್ಕರ
ಎನ್.ಕೆ. ಹನುಮಂತಯ್ಯ
೧೪೦ ಎರಡು ಕವನಗಳು
ಲಲಿತಾ ಸಿದ್ದಬಸವಯ್ಯ
೧೫೭ ತೆಂಗು ಚಾಮರ ಬೀಸುತ್ತಿದೆ
ಎಂ. ಆರ್. ಕಮಲ
೧೭೫ ಜೆನ್ ಹಾಯ್ಕು ಪದ್ಧತಿ
ಎಲ್ಸಿ. ನಾಗರಾಜ್
೧೯೩ ಎರಡು ಕವನಗಳು
ತಾಜುಮಾ ಇಕ್ಬಾಲ್
೧೯೭ ಮುಟ್ಟಾಟ
ಡಾ|| ಸಬಿಹಾ

ಕಥೆ

೧೨ ಬಾಡಿಯೂ ಬಾಡದ ಹೂವು
ಸಾರಾ ಅಬೂಬಕ್ಕರ್
೪೪ ಧರಿತ್ರಿ
ನಾ. ಡಿಸೋಜ
೭೨ ಕುರ್ಚಿ
ಡಾ|| ಮೊಗಳ್ಳಿ ಗಣೇಶ್
೮೪ ಮೀಯುವ ಆಟ
ಡಾ|| ಎಚ್. ನಾಗವೇಣಿ
೧೧೨ ಅನಾಮಧೇಯರಿಬ್ಬರ ಮುಖಾಮುಖಿ
ಡಾ|| ಪ್ರಹ್ಲಾದ ಅಗಸನಕಟ್ಟೆ
೧೨೦ ಮುಲ್ಲಾ ಇಸ್ಮಾಯಿಲ್ ಕೊತ್ವಾಲ್
ಅಬ್ದುಲ್ ರಶೀದ್
೧೫೮ ಕಳವು
ಡಾ|| ಕೆ.ವೈ. ನಾರಾಯಣಸ್ವಾಮಿ
೧೭೨ ಅವಯ್ಯನ ಹಂಡೇವು
ಬಿ.ಟಿ. ಜಾಹ್ನವಿ
೧೮೮ ರಶೀದ ಮಗಳ ಮದುವೆಗೆ ಹೋಗಲಿಲ್ಲ...!
ಆನಂದ್ ಋಗ್ವೇದಿ
೨೦೪ ಗವೀಮಠದ ಪವಾಡ
ಕೇಶವ ಮಳಗಿ



೬೨
ಡಾ|| ಯು.ಆರ್. ಅನಂತಮೂರ್ತಿ

ಸಂದರ್ಶನ

೧೨೨
ಎಲ್. ನಾರಾಯಣರೆಡ್ಡಿ

ಚರ್ಚೆ

೩೧
ಹೊಸ ತಲೆಮಾರಿನ ಲೇಖಕರ ಆಯ್ಕೆಗಳು
ಚಂದ್ರಶೇಖರ ಪಾಟೀಲ, ಜಯಂತ ಕಾಯ್ಕಿಣಿ ಟಿ. ಶ್ರೀನಿವಾಸರಾಜು, ಆನಂದ್ ಋಗ್ವೇದಿ, ವಿಕ್ರಮ ವಿಸಾಜಿ, ಮಂಜುನಾಥ್ ಗೀತಾ, ಮಂಜುನಾಥ್ ವಿ.ಎಂ.

ಶಿವ ಎನ್ನಲೆ ಉಮ/ಮನ ಬಾರೆನ್ನಲೆ!

ಹನಿಹನಿಯ ದರುವಿಗೆ
ಗುಡುಗು ಮದ್ದಳೆ ಮೇಳ
ಭೂರಂಗ ಸೀಮೆಯಲಿ
ಮಳೆನವಿಲ ನರ್ತನ

ಸೆಬ್ಬಿಕೆಬ್ಬೆಯ ಹೊಲ
ಬಿತ್ತಿದ ರಾಗಿ ಹುಚ್ಚೆಳ್ಳು ಸಜ್ಜೆ
ಹದವಾದ ಪದ ತಂತು
ಎದೆಯ ಒಳಗೆ

ಮೊಳೆತ ಮೊಳಕೆಗಳ ಕಾಯುತ್ತ
ಕುಂತಂತ ಕಣ್ಣಿನೆದುರಲ್ಲೆ
ಬಿದ್ದ ಕೋತಿಗಳು ಕಿತ್ತವು
ಮೈಯ ನರಗಳ ಕಿತ್ತು ಹರಿದ ಹಾಗೆ

ಕೋತಿಗಳ ಮೇಲೆ ಕೋಪ ಚೆಲ್ಲಿರಲು
ಹೈಕಳೆಂಬೊ ಹೈಕಳು ಆಡುತ್ತ ಬಂದಂತೆ
ಬಂದ ಅಳಿಲುಗಳು ಇನ್ನಷ್ಟು
ಪೈರುಗಳ ಕಿತ್ತವು ಬರೆ ಎಳೆದ ಹಾಗೆ

ಅಳಿಲುಗಳ ಮೇಲೆ ಮುನಿಸು ಮುಕ್ಕಳಿಸುವಾಗ
ಗುರುಗುರು ಹಂದಿಗಳು ಬಿದ್ದು
ಗೂರಿ ಗೂರಾಡಿ ಪೈರಷ್ಟು ಹೋಗಿ
ಮಟುಮಾಯವಾದಳು ಮಳೆದೇವಿ ತಾಯಿ

ಕೆಡಿಸಿದ ಕೈ ಕೆಡುಕ ಕಳೆವಂತೆ
ಮಳೆ ಬಂತು ಬೊಗಸೆ ನೀರು ಚೆಲ್ಲಿದಂತೆ

ಆ ಮಳೆಗೆ ಕರಿಮಣ್ಣ ಹೊಲನುತ್ತು ಬಿತ್ತಿದ
ಜೋಳ ಬೆಳೆಯಾಗಿ ಬರಲೆಂದು
ಕಾಯುತ್ತಲಿರುವಾಗ ಆಡುತ್ತ ಮೊಲ ಬಂದು
ತಿಂದವು ಕಬ್ಬಿನಜಲ್ಲೆ ಜಗಿದ ಹಾಗೆ



ಗಜಲ್

ವಾರ್ಷಿಕ
ವಿಶೇಷಾಂಕ
೨೦೦೫





ರೆಕ್ಕೆ ಮುರಿದು ಹಾರಲು ಆಕಾಶ ಬಿಟ್ಟು ಹೋದರು
ಏಣಿ ಮುರಿದು ಏರಲು ನೇಣುಪಾಶ ಬಿಟ್ಟು ಹೋದರು

ಅಡಕಿಲ ಗಡಿಗೆಗಳಂತೆ ಕುಲಗಳು ಒಂದರ ಮೇಲೊಂದು ಕೂಡಿವೆ
ಕುಲದ ವ್ಯಾಕುಲ ಅಲೆಗಳ ಆಕ್ರೋಶ ಬಿಟ್ಟುಹೋದರು

ಹಿಂದೆ ಸರಿದರೆ ಬೆಂಕಿ, ಮುಂದುವರೆದರೆ ಕಂದರ
ಬಾಳಲು ಬಾರದ ದುರ್ಗಮ ನಿವಾಸ ಬಿಟ್ಟುಹೋದರು

ಆ ಗಡಿಯಲಿ ಗುಂಡು ಈ ಗಡಿಯಲ್ಲಿ ಬಾಂಬು
ಮಾನವತೆಗೆ ಮಾನವ ರಹಿತ ಪ್ರದೇಶ ಬಿಟ್ಟು ಹೋದರು

ಮುಚ್ಚಿದ ಕಣ್ಣು ತೆರೆಯಲು ಯುಗಗಳು ಬೇಕಾದವು
ಕಂಗಳಲಿ ಬೆಳಕಿನ ಕುರುಡು ಅಭಾಸ ಬಿಟ್ಟುಹೋದರು

ಹಿಡುದುದ್ದೆಲ್ಲ ನೆರಳು ನಾವು ಏರಿದ್ದೆಲ್ಲ ಉರುಳು
ಬದುಕು ತಮಾಷೆ ಮಾಡಿ ಸಾವಕಾಶ ಸರಿದುಹೋದರು

ಮೃತ್ಯು ಸಾಗರದಲ್ಲಿ ಜೀವನಧಾರೆ ಹರಿಯುತ್ತಲಿದೆ
ವೇದನೆ ದಡಮಾಡಿಕೊಳ್ಳಲು ಸಂದೇಶ ಬಿಟ್ಟುಹೋದರು

○ ಜಂಬಣ್ಣ ಅಮರಚಿಂತ

ಮೊಲಗಳ ಮೇಲಿನ ಮುನಿಸಿಳಿವ ಮೊದಲೆ
ದ್ಯಾವರೆತ್ತು ನುಗ್ಗಿ ಉಳಿದಿದ್ದು ನೆಕ್ಕಿ
ಮಾರುದ್ದ ತೋಕೆ ಬಾನಿಗೆ ಎತ್ತಿ
ಗುಟುರಿಟ್ಟು ಹೋಯಿತು ದ್ಯಾವರನ ಹುಡುಕಿ

ಸಾಲಸೋಲದಲಿ ಕೊಂಡೆರಡು ಎತ್ತು
ಎದೆಮಟ್ಟ ಬೆಳೆದ ಮಗ ತೀರಿಹೋದಂತೆ
ಮಾರಿ ರೋಗವು ಬಡಿದು ಹರಹರ ಅಂದವು
ಸಾಲದ ಚಿಕ್ಕಾಸು ತೀರೋಕೆ ಮುಂಚೆ

ಬೆಳೆಯಿರದ ಹೊಲದಲ್ಲಿ ನಾಯೇನು ಕಾಯಲಿ
ಎತ್ತಿರದ ಮನೆಯಲ್ಲಿ ದೀಪವೆಲ್ಲಿ?

ಕಂದಾಯ ಸಂದಾಯವಿಲ್ಲೆಂದು
ಕೆಂಗಣ್ಣು ಬಿಡುತಾರೆ ಸರಕಾರಿನೋರು
ಬಡ್ಡಿಗುಡ್ಡೆ ಮಾಡಿ ಸೊಂಟ ಉಳುಕೂವಂತೆ
ಕುಂತವನೆ ಸಾವ್ಕಾರ ಏಜನಷ್ಟು ಹಾಕಿ

ಮೈಬಾಡು ಮೇದಿತ್ತು ಬರದ ಬಡತನವು
ಊರೆಂಬ ಊರು ಗುಳೆಯೆದ್ದು ಹೊರಟು
ಎದೆಯಲ್ಲಿ ಕುಡುಗೋಲು, ಹೊಟ್ಟೇಲಿ ಕಡೆಗೋಲು
ಒಲೆಯಲ್ಲಿ ತಂಬೂದಿ, ಗಡಿಗೇಲಿ ಕರಿನೆರಳು
ಶಿವ ಎನ್ನಲೆ, ಯಮನ ಬಾರೆನ್ನಲೆ!

○ ಸ. ರಘುನಾಥ



ಬೇಸಾಯ ಮತ್ತು ಅರಿವುಗೆಟ್ಟ ವಿಜ್ಞಾನ

ದಗಲು ಬಾಜಿಗಳು ಅಂತಾ ಒಂದು ಬೈಗುಳ ಇದೆ. ಈ ಬೈಗುಳವನ್ನು ಸ್ವೀಕರಿಸುವಂಥ ಮನುಷ್ಯರು ಯಾರಾದರೂ ಇದ್ದರೆ, ಅವರು ಲ್ಯಾಬೊರೇಟರಿಗಳಲ್ಲಿ ಕೊಳೆತು ಹಾಳಾಗುತ್ತಿರುವ, ಬಹುರಾಷ್ಟ್ರೀಯ ಕಂಪನಿಗಳ ಬಾಗಿಲ ಕಸಗುಡಿಸುವ ಕೆಲಸ ಮಾಡುತ್ತಿರುವ ಗುಲಾಮಿ ವಿಜ್ಞಾನಿಗಳು; ಮಾರುಕಟ್ಟೆಯ ದಲ್ಲಾಳಿಗಳಿಗೆ ಇವರು ವಿಜ್ಞಾನವನ್ನು ತಲೆ ಹಿಡಿಯುತ್ತಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳ ಲಾಭಕ್ಕಾಗಿ ದುಡಿಯುತ್ತಿರುವ ವಿಜ್ಞಾನಿಗಳು ಈಗ ನಂಬಿಕೆಗೆ ಅರ್ಹರಲ್ಲ. ಈಗ ರೈತರು ಸ್ವಂತ, ಸಾಮುದಾಯಿಕ ಬೀಜ ಬ್ಯಾಂಕುಗಳನ್ನು ಸ್ಥಾಪಿಸಿಕೊಳ್ಳಲು ಮುಂದಾಗುವುದು ಒಳಿತು. ಜೊತೆಗೆ ನಿಸರ್ಗದಲ್ಲೇ ಇರುವ ಕೀಟನಾಶಕಗಳು, ಪರಸ್ಪರ ಅವಲಂಬನೆ, ಸಹಕಾರದ ಲಯಗಳನ್ನು ಗ್ರಹಿಸುವುದು ಒಳ್ಳೆಯದು.

○ ಎಲ್ಸಿ. ನಾಗರಾಜ್

ವಿಜ್ಞಾನ ಮತ್ತು ಸಾಮಾಜಿಕ ಹೊಣೆಗಾರಿಕೆಯಿಲ್ಲದ ತಂತ್ರಜ್ಞಾನದಿಂದ ಮನುಷ್ಯ ನಾಗರಿಕತೆ ಎದುರಿಸುತ್ತಿರುವ ಬಿಕ್ಕಟ್ಟನ್ನ ಚಿಂತಕ ಜೋಸೆಫ್ ನೀದಂ ತಾವೊ ಪಂಥದ ಒಂದು ಪ್ರಸಗಂದ ಮೂಲಕ ವಿವರಿಸುತ್ತಾರೆ. ಪ್ರಸಂಗ ಹೀಗಿದೆ:

ಪುರಾತನ ಚೀನದಲ್ಲಿ ಒಬ್ಬ ಪ್ರಸಿದ್ಧ ಚಕ್ರವರ್ತಿ, ತುಂಬಾ ಕೀರ್ತಿವಂತ, ಜನರ ಒಳಿತು ಬಯಸಿದವನು. ಅವನ ಸಾಮ್ರಾಜ್ಯದ ಕೀರ್ತಿ ಬೆಳಗುತ್ತಿದೆ. ಇದಾವುದರ ಗೊಡವೆಯಿಲ್ಲದಂತೆ ಒಬ್ಬ ತಾವೊ ಸಂತ ಪರ್ವತದ ತಪ್ಪಲಿನಲ್ಲಿ ನದಿ ಹತ್ತಿರ ಗುಡಿಸಲು ಕಟ್ಟಿಕೊಂಡು ಋತುಮಾನಗಳ ನಿರಂತರತೆ, ನಿಸರ್ಗದ ಲಯಗಳನ್ನ ತನ್ನ ಅರಿವಾಗಿ ಕಟ್ಟಿಕೊಳ್ಳುತ್ತ ವಾಸಿಸುತ್ತಿದ್ದಾನೆ. ತನ್ನ ಕೀರ್ತಿಯನ್ನ ಕ್ಯಾರೇ ಅನ್ನದೇ ನಿರುಮ್ಮಳವಾಗಿ ಬದುಕುತ್ತಿರುವ ಸಂತನ ಬಗ್ಗೆ ಚಕ್ರವರ್ತಿಗೆ ಗೊತ್ತಾಗುತ್ತದೆ. ನಿಸರ್ಗದ ಲಯಗಳ ಕುರಿತಂತೆ ಸಂತನಿಗಿರುವ ಅರಿವು ತನ್ನದಾದರೆ ಹೆಚ್ಚುವರಿ ಧಾನ್ಯ ಉತ್ಪಾದಿಸಿ ತಾನು ಮತ್ತಷ್ಟು ಕೀರ್ತಿವಂತನಾಗಬಹುದು, ತನ್ನ ಚಕ್ರಾಧಿಪತ್ಯ ಮತ್ತಷ್ಟು ಬೆಳಗುತ್ತದೆ ಅಂತಾ ಲೆಕ್ಕ ಹಾಕುತ್ತಾನೆ.

ಚಕ್ರವರ್ತಿ ಪರ್ವತದ ತಪ್ಪಲಿಗೆ ಬಂದು, ಪ್ರಕಾಶಿಸುವ ಎಲ್ಲ ಚಕ್ರವರ್ತಿಗಳು ರೂಢಿಸಿಕೊಂಡ ವಿನಯದಿಂದ ಸಂತನಿಗೆ ಎದುರಾಗುತ್ತಾನೆ; ಸಂತ ಸಂತನ ಮುಗುಳ್ನಗುವಿನಿಂದ ಬರಮಾಡಿಕೊಳ್ಳುತ್ತಾನೆ. 'ನಿಸರ್ಗ ಋತುಮಾನಗಳು ಸೃಷ್ಟಿಯ ಲಯಗಳ ಬಗ್ಗೆ ತಮಗಿರುವ ಅರಿವಿನ ಬಗ್ಗೆ ಕೇಳಿ ತಿಳಿದಿದ್ದೇನೆ, ಅದರ ಸೂಕ್ಷ್ಮತೆಗಳ ಅವಶ್ಯಕತೆ ನನಗಿದೆ, ಜನರ ಪಾಲನೆಗಾಗಿ ಪಂಚಧಾನ್ಯಗಳ ಉತ್ಪಾದನೆ ಹೆಚ್ಚಿಸಬೇಕು; ಚಕ್ರವರ್ತಿಯಾದ ನಾನು ಸಕಲ ಜೀವಿಗಳ ಸೌಖ್ಯಕ್ಕಾಗಿ ಈ ಹಗಲು ಇರುಳುಗಳನ್ನ ನಿರ್ದೇಶಿಸುವಂತಾಗಬೇಕು. ಈ ವಿಷಯದಲ್ಲಿ ನಾನು ಹ್ಯಾಗೆ ಮುಂದುವರೆಯಲಿ?' ಅಂತಾ ಸಂತನಲ್ಲಿ ತನ್ನ ಮನದಿಂಗಿತ ಮುಂದಿಟ್ಟು ಕೈಕಟ್ಟಿ ನಿಂತ.

ಸಂತ ಹೇಳಿದ : 'ಅಲ್ಲ ಕಣಪ್ಪ ನೀನು ಕೇಳ್ತಿರೋದು ಪದಾರ್ಥಗಳ ಪದಾರ್ಥಿಕ ತಳಹದಿಯನ್ನ, ನೀನು ನಿಯಂತ್ರಿಸಲು ಬಯಸಿರೋದು ಈ ಪದಾರ್ಥಗಳ ಛಿದ್ರಗೊಂಡ ತುಣುಕುಗಳನ್ನ. ನಿನ್ನ ಈ ಹಿಂದಿನ ಹಸ್ತಕ್ಷೇಪಗಳಿಂದ ಅವು ಈಗಾಗಲೇ ಹಾಳಾಗಿವೆ. ನಿನ್ನ ಸರ್ಕಾರ ನೀರಾವಿಯನ್ನ ಹಿಡಿಯಲು ಪ್ರಯತ್ನಿಸುತ್ತದೆ. ಅದನ್ನ ನೀನು ನಿನ್ನ ಸುಪರ್ದಿಗೆ ತೆಗೆದುಕೊಳ್ಳುವುದಕ್ಕೆ ಮೊದಲೇ ಆವಿ ಮೋಡಗಟ್ಟಿ ಮಳೆಹನಿಯಾಗಿ ತಾನೇ ಭೂಮಿಗೆ ಬೀಳುತ್ತದೆ. ನಿನ್ನ ಹಿಂದಿನ ಹಸ್ತಕ್ಷೇಪಗಳ ದೆಸೆ ಗಿಡಮರಗಳ ಎಲೆಗಳು ಹಳದಿಯಾಗುವುದಕ್ಕೆ ಮೊದಲೇ ಉದುರಿ ಬೀಳುತ್ತಿವೆ. ನಿನ್ನದು ಅತಿರೇಕವಾಯ್ತು; ನಿಸರ್ಗದ ಲಯಗಳನ್ನ ನಿರ್ದೇಶಿಸಲು ನೀನು ಯಾರು? ಅಂತಾ ಯೋಗ್ಯತೆ ನಿನಗಿಲ್ಲ'.

* * *

ಅಜಾತಶತ್ರು ವಾಜಪೇಯಿ ನಾಯಕತ್ವದ ಎನ್‌ಡಿಎ ಸರ್ಕಾರದಲ್ಲಿ ವಿಜ್ಞಾನ ತಂತ್ರಜ್ಞಾನ ಮಂತ್ರಿಯಾಗಿದ್ದ ಮುರಳಿ ಮನೋಹರ ಜೋಷಿಯವರ ಇಲಾಖಾ ವ್ಯಾಪ್ತಿಯಲ್ಲಿ ಬರುವ Genetic Engineering approval committee ಯು ಅಮೆರಿಕದ ಬೀಜ ಕಂಪನಿಗಳು ಜೈವಿಕವಾಗಿ ಮಾರ್ಪಡಿಸಿದ ಒಂಬತ್ತು ಫಸಲುಗಳನ್ನ ಭಾರತದ ಮಣ್ಣಿನಲ್ಲಿ ಪ್ರಯೋಗಿಸಲು ಅನುಮತಿ ಕೊಟ್ಟಿರುವ ಸುದ್ದಿ ತಿಳಿದಾಗ ಮೊದಲಿಗೆ ನನಗನಿಸಿದ್ದು ಇವರು ದೇಶದ್ರೋಹಿಗಳು ಅಂತಾ, ಆಮ್ಯಾಲೆ, ಇವರು ಸ್ವದೇಶಿ ಅಂತಾ ಹೇಳಿಕೊಳ್ಳುವ ಇವರು ಪರದೇಶಿ ಗುಣಗಳಿರುವ ಬೀಜಗಳನ್ನ ನಮ್ಮ ದೇಶದ ಮಣ್ಣಿನಲ್ಲಿ ಹ್ಯಾಗೆ ಪ್ರಯೋಗಿಸಿ ಯಶಸ್ಸು ಕಾಣಲು ಸಾಧ್ಯ? ಅಂತಾ. ಇಷ್ಟೇ ಅಲ್ಲ ಅಮೇರಿಕದ ಕಂಪನಿಗಳು ರೂಪಿಸಿರುವ ಈ ಬೀಜಗಳು ಜಗತ್ತಿನ ಯಾವ ಮಣ್ಣಿನಲ್ಲೂ ಯಶಸ್ಸು ಕಾಣಲು ಸಾಧ್ಯವಿಲ್ಲ. ತಮಾಷೆ ಏನು ಅಂದರೆ ನಾವು ಬಾಳುತ್ತಿರುವ ಈ ವರ್ತಮಾನ ಕಾಲದಲ್ಲಿ ಎಲ್ಲ ರಾಜಕಾರಣಿಗಳು ಹೆಚ್ಚು ಉತ್ಪಾದನೆ ಬಗ್ಗೆ ಮಾತನಾಡುತ್ತಾರೆ. ಇಂತ ಮಾತುಗಳಿಗೆ ಬೆಲೆ ಇಲ್ಲ, ವಿಜ್ಞಾನಿಗಳ ಮಾತುಗಳಿಗೆ ಬೆಲೆ ಇದ್ಯಾ ಅಂದ್ರೆ ಅದೂ ಇಲ್ಲ.

ಮಹಾಭಾರತದಲ್ಲಿ ಒಬ್ಬ ಏಕಲವ್ಯ ಇದ್ದಾನೆ. ಆದರೆ ಸಮಕಾಲೀನ ಭಾರತದ ವೈಜ್ಞಾನಿಕ ಸಂಸ್ಥೆಗಳು ಹಲವು ಏಕಲವ್ಯರನ್ನ ಉತ್ಪಾದಿಸಿವೆ. Infact ಈಗ ಬೇಸಾಯ ವಲಯದಲ್ಲಿ ಚಾಲ್ತಿಯಲ್ಲಿರುವ ರಾಸಾಯನಿಕಗಳ ಬಳಕೆ ಚಾಲನೆಗೆ ಬಂದದ್ದು ಏಕಲವ್ಯ ವಧೆಯ ಮೂಲಕ, ರಾಸಾಯನಿಕ ಕೃಷಿಯ ಈ ಏಕಲವ್ಯ ವಧೆ ಮೊದಲಿಗೆ ಪ್ರಾರಂಭವಾದದ್ದು ಜರ್ಮನಿಯಲ್ಲಿ. ಭಾರತದಲ್ಲಿ ಈ ಏಕಲವ್ಯ ವಧೆ ೬೦ರ ದಶಕದಲ್ಲಿ ಪ್ರಾರಂಭವಾದದ್ದು ಇಂದಿಗೂ ನಿಂತಿಲ್ಲ.

ದೇವರು ರಥದಿಂದ ಇಳಿದು ಹೋದಮೇಲೆ ಭಕ್ತಾದಿಗಳು ರಥದ ಚಕ್ರಗಳನ್ನೇ ಕಿತ್ತುಕೊಂಡು ಹೋದರು ಅಂತಾರಲ್ಲ, ಅಂತದೊಂದು ಘಟನೆ ಜರ್ಮನಿಯಲ್ಲಿ ನಡೆಯಿತು. ಮಹಾಯುದ್ಧದ ನಂತರದ ದಿನಗಳಲ್ಲಿ ಜರ್ಮನಿಯಲ್ಲಿ ಅಪಾರ ಪ್ರಮಾಣದ ರಾಸಾಯನಿಕಗಳು

ರಾಶಿ ಬಿದ್ದಿದ್ದವು. ಜಗತ್ತಿನ ಆರ್ಯೇತರ ಜನಾಂಗಗಳನ್ನ ದಹಿಸಲು ನಾಜಿಗಳು ಉತ್ಪಾದಿಸಿದ್ದ ರಾಸಾಯನಿಕಗಳು. ಇದೇ ಕಾಲದಲ್ಲಿ ಜರ್ಮನಿಯಲ್ಲಿ ಜಸ್ಟಸ್ ವಾನ್ ಲೀಬಿಗ್ ಅಂತಾ ಒಬ್ಬ ತರುಣ ರಾಸಾಯನ ವಿಜ್ಞಾನಿ ಇದ್ದ. ತಾರುಣ್ಯ ಗುಣದಿಂದ ಸಹಜವಾಗೇ ಈ ವಿನಾಶಕಾರಿ ರಾಸಾಯನಿಕಗಳನ್ನ ಮಾನವ ಕುಲದ ಕಲ್ಯಾಣಕ್ಕೆ ಬಳಸಬಹುದೇ ಅಂತಾ ಚಿಂತಿಸುತ್ತ ಸಂಶೋಧನೆಯಲ್ಲಿ ತೊಡಗಿಸಿಕೊಂಡ. ಈ ಕಾರಣದಿಂದ ಆತನನ್ನ 'ರಾಸಾಯನಿಕ ಕೃಷಿಯ ಪಿತಾಮಹ' ಅಂತಾ ಕರೆದರೆ ಅದು ಅರ್ಧ ಸತ್ಯವಷ್ಟೇ ಅಲ್ಲ, ಲೀಬಿಗ್ ತನ್ನ ಸಂಶೋಧನೆಗೆ ಹಾಕಿಕೊಂಡಿದ್ದ ನೈತಿಕ ಎಲ್ಲೆಕಟ್ಟುಗಳನ್ನು ನಿರಾಕರಿಸಿದಂತಾಗುತ್ತದೆ.

ಉಳಿದ ಸತ್ಯದ ಕತೆ ಹೀಗಿದೆ: ಲೀಬಿಗ್ ಒಂದು ದಿನ ಗಿಡದ ಒಣಭಾಗಗಳನ್ನ ಸುಟ್ಟು ಆ ಬೂದಿಯನ್ನ ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದ. ವಿಶ್ಲೇಷಣೆಯ ನಂತರ ಸಸ್ಯಗಳ ಪಾಲನೆಗೆ ಬೇಕಾಗಿರುವುದು ನೈಟ್ರೋಜನ್, ಫಾಸ್ಫರಸ್ ಮತ್ತು ಪೊಟಾಸಿಯಂ ಕಾರ್ಬೋನೇಟ್ (ಇವತ್ತು ಮಾರುಕಟ್ಟೆಯಲ್ಲಿ ಸಿಗುತ್ತಿರುವ NPK) ಅಂತಾ ಒಂದು ತೀರ್ಮಾನಕ್ಕೆ ಬಂದ. ಇದು ಆತುರದ ತೀರ್ಮಾನ ಅಂತಾ ಗೊತ್ತಾಗಲು ಲೀಬಿಗ್‌ಗೆ ವರ್ಷಗಳೇ ಬೇಕಾಯಿತು. ಆದರೆ ಲೀಬಿಗ್‌ನ ಸಂಶೋಧನೆಯ ತೀರ್ಮಾನಗಳ ರುಚಿಯನ್ನ ಅಂದಾಜು ಮಾಡಿದ ಉದ್ದಿಮೆದಾರರು ಈಗಾಗಲೇ ರಾಸಾಯನಿಕಗಳ ವಹಿವಾಟು ಶುರುಮಾಡಿಕೊಂಡಿದ್ದರು; ಆದರೆ ಮರ್ಯಾದಸ್ತ ಲೀಬಿಗ್‌ನ ಸಂಶೋಧನೆ ಮುಂದುವರೆಯಿತು.

ಸಸ್ಯಗಳ ಬೆಳವಣಿಗೆಗೆ ಇವೆಲ್ಲ ಬೇಕು ಆದರೆ ಇವಿಷ್ಟೇ ಸಿಕ್ಕರೆ ಸಸ್ಯಗಳು ರೋಗಗ್ರಸ್ಥ ವಾಗುತ್ತವೆ; ಸಸ್ಯಗಳಿಗೆ ಆರೋಗ್ಯಕರವಾಗಿ ಬೆಳೆಯಲು ಮತ್ತಷ್ಟು ಖನಿಜ ಪೋಷಕಾಂಶಗಳು ಬೇಕು. ಕ್ಯಾಲ್ಸಿಯಂ, ಮೆಗ್ನೀಷಿಯಂ, ಬೋರಾನ್, ಸತು, ಕಬ್ಬಿಣ ಮುಂತಾದ ಈ ಖನಿಜ ಪೋಷಕಾಂಶಗಳಲ್ಲಿ ಯಾವುದೇ ಒಂದು ಖನಿಜಾಂಶ ಕಡಿಮೆಯಾದರೂ ಅಥವಾ ಜಾಸ್ತಿಯಾದರೂ ಸಸ್ಯದ ಆರೋಗ್ಯ ಹದಗೆಡುತ್ತದೆ; ಅದರ ಆಹಾರ ತಯಾರಿಕ ಕ್ರಮಗಳು ಲಯಗೆಡುತ್ತವೆ ಅಥವಾ ಹೇಳಹೆಸರಿಲ್ಲದ ರೋಗಬಾಧೆಗಳು ಸಸ್ಯಗಳನ್ನ ಪೀಡಿಸತೊಡಗುತ್ತವೆ. ಮನುಷ್ಯ ಜೀವಕೋಶಗಳು ಸಸ್ಯ ಜೀವಕೋಶಗಳ ವಿಸ್ತರಣೆ; ಅಂದರೆ ಸಸ್ಯಗಳು ಉತ್ಪಾದಿಸಿದ ಆಹಾರ ಪೋಷಕಾಂಶಗಳಿಂದ ಮನುಷ್ಯ ರಕ್ತಮಾಂಸದ ಕೋಶಗಳಾಗಿ ಬೆಳೆಯುವ ಜೀವ ವ್ಯವಸ್ಥೆ. ಸಸ್ಯಗಳಲ್ಲಿ ಕಾಣಿಸಿಕೊಳ್ಳುವ ಯಾವುದೇ ರೋಗಗಳು ಮನುಷ್ಯನ ಜೀವಕೋಶಗಳ ಪಾಲನೆಯಲ್ಲಿ ಕೂಡ ರೋಗಗಳಾಗಿ ಕಾಣಿಸಿಕೊಳ್ಳುತ್ತವೆ.

ಮಣ್ಣು ಒಂದು ಜೀವವ್ಯವಸ್ಥೆ, ಸಸ್ಯ ಈ ಮಣ್ಣಿನ ಜೀವ ವ್ಯವಸ್ಥೆಯ ವಿಸ್ತರಣೆ; ಪ್ರಾಣಿಗಳು ಮತ್ತು ಮನುಷ್ಯ ಜೀವಗಳು ಮತ್ತೊಂದು ವಿಸ್ತರಣೆ. ಭೂಮಿಯ ಮೇಲೆ ಮೊದಲಿಗೆ ಕೃಷಿ ಸಂಸ್ಕೃತಿಗಳು, ಆಹಾರ ಸಂಸ್ಕೃತಿಗಳು ರೂಪುಗೊಂಡದ್ದು ಈ ನೆಲೆಗಳಲ್ಲಿ.

ಅನೇಕ ಸಲ ಭಾರತಕ್ಕೆ ಬಂದು ಹೋಗಿರುವ ಆಸ್ಟ್ರೇಲಿಯಾದ ಸಾವಯವ ಕೃಷಿ ವಿಜ್ಞಾನಿ ಬಿಲ್ ಮೇಲಿಸನ್ ತಮ್ಮ permaculture ಪುಸ್ತಕದಲ್ಲಿ ದಾಖಲಿಸಿರುವ ಪ್ರಕಾರ ಕಳೆದ ೧೦೦ ವರ್ಷಗಳಿಂದ ಈಚೆಗೆ ಮನುಷ್ಯ ಜೀವವನ್ನ ಬಾಧಿಸುತ್ತಿರುವ ರೋಗಗಳು, ಕೇವಲ ರೋಗಗಳಷ್ಟೇ ಅಲ್ಲ, ಮನುಷ್ಯ ತನ್ನ ತೋಟದ, ಹೊಲದ ಮಣ್ಣಿನಲ್ಲಿ ರಾಸಾಯನಿಕ ಬಳಕೆಗಳಿಂದ ಉಂಟುಮಾಡಿರುವ ಪೋಷಕಾಂಶ ಕೊರತೆಗಳಿಂದ ಪ್ರಾಣಿಜೀವ ವ್ಯವಸ್ಥೆಯಲ್ಲಿ ಉಂಟಾಗಿರುವ ದೋಷ. ಅಂದರೆ ಅದು ಹೀಗೆ: ಮಣ್ಣು ಒಂದು ಜೀವವ್ಯವಸ್ಥೆ ಸಸ್ಯ ಈ ಮಣ್ಣಿನ ಜೀವ ವ್ಯವಸ್ಥೆಯ ವಿಸ್ತರಣೆ; ಪ್ರಾಣಿಗಳು ಮತ್ತು ಮನುಷ್ಯ ಜೀವಗಳು ಮತ್ತೊಂದು ವಿಸ್ತರಣೆ. ಭೂಮಿಯ ಮೇಲೆ ಮೊದಲಿಗೆ ಕೃಷಿ ಸಂಸ್ಕೃತಿಗಳು, ಆಹಾರ ಸಂಸ್ಕೃತಿಗಳು ರೂಪುಗೊಂಡದ್ದು ಈ ನೆಲೆಗಳಲ್ಲಿ. ಆದರೆ ಇಂದಿನ ನಮ್ಮ ಆಹಾರ ಸಂಸ್ಕೃತಿಯ ಗುಣಗಳಿಂದ ವಂಚಿತವಾಗುತ್ತಿದೆ.

ಮನುಷ್ಯನ ನೆನಪಿನ ಶಕ್ತಿಗೆ ಒಂದು ರೋಗಬರುತ್ತದೆ. ಅದಕ್ಕೆ ಡಾಕ್ಟರುಗಳು ಆಲ್ಜೀಮರ್ ಅಂತಾ ಹೆಸರಿಡುತ್ತಾರೆ. ಆಧುನಿಕ ಶಿಕ್ಷಣ ಕುರಿತಂತೆ ಕಹಿಸತ್ಯಗಳನ್ನ ಹೇಳಿರುವ ಇವಾನ್ ಇಲಿಚ್ ಹೇಳುವಂತೆ ಡಾಕ್ಟರುಗಳು ರೋಗವನ್ನ ಮನುಷ್ಯನ ದೇಹದಲ್ಲಿ ಮಾತ್ರ ಪತ್ತೆಹಚ್ಚಬಲ್ಲರು. ಆದರೆ ಈ ರೋಗಗಳನ್ನ ಅವುಗಳ ಮೂಲದಲ್ಲಿ ಪತ್ತೆ ಹಚ್ಚುವಂತಾಗಬೇಕು. ಅಂದರೆ ನಮ್ಮ ಹೊಲ, ತೋಟಗಳ ಮಣ್ಣಿನಲ್ಲಿ ಪತ್ತೆ ಹಚ್ಚಬೇಕು. ೧೯ನೇ ಶತಮಾನದಲ್ಲಿ ಅಥವಾ ೨೦ನೇ ಶತಮಾನದ ಆದಿಭಾಗದಲ್ಲಿ ಇಲ್ಲದ ಒಂದು ರೋಗ 'ಡಯಾಬಿಟಿಸ್' ಮನುಷ್ಯನ ಶರೀರದಲ್ಲಿ ಉಂಟಾಗುವ ಇನ್ಸುಲಿನ್ ಕೊರತೆಯಿಂದ ಉಂಟಾಗುತ್ತದೆ ಅಂತಾ ಡಾಕ್ಟರುಗಳು ಹೇಳುತ್ತಾರೆ.

ಬಿಲ್ ಮೊಲಿಸನ್ epidomological ವೈದ್ಯಕೀಯ ವಿಧಾನಗಳ ಮೂಲಕ ಖಚಿತಪಡಿಸಿರುವಂತೆ, ಮನುಷ್ಯನ ಶರೀರದಲ್ಲಿ ಇನ್ಸುಲಿನ್ ಕೊರತೆ ಕಾಣಿಸಿಕೊಳ್ಳುವುದು ಮಣ್ಣಿನಲ್ಲಿ ಸತುವಿನ ಕೊರತೆ ಉಂಟಾಗುವುದರಿಂದ ಮಣ್ಣಿನಲ್ಲಿ ಸತು (Zinc) ವಿನ ಕೊರತೆ ಉಂಟಾಗುವುದು ರಾಸಾಯನಿಕಗಳ ಬಳಕೆಯಿಂದ. ನಾವು ಮಣ್ಣಿನ ರಾಸಾಯನಿಕ ಗೊಬ್ಬರಗಳನ್ನ ಸುರಿದು ಮಣ್ಣಿನಲ್ಲಿರುವ ಜೀವರೂಪಗಳನ್ನ ಹೊರತುಪಡಿಸುವ ಬೇಸಾಯ ಮಾಡಿದರೆ ಕೊನೆಗೆ ನಾವು ಮನುಷ್ಯ ಜೀವರೂಪವನ್ನೇ ಹೊರತುಪಡಿಸಿದಂತಾಗುತ್ತದೆ. ಈಗ ನಾವು ರೂಪಿಸಿಕೊಂಡಿರುವ ಅಭಿವೃದ್ಧಿ ಮಾದರಿ, ಬೇಸಾಯ ವಿಧಾನಗಳು ಇತರೆ ಜೀವರೂಪಗಳನ್ನ ಹೊರತುಪಡಿಸುವ ಕೇವಲ ಮಾನವಕೇಂದ್ರಿತ (anthropo-centric) ವಾದ ಮಾದರಿಗಳು. ಈ ಮಾದರಿಗಳು ನಿಸರ್ಗದಲ್ಲಿನ ಪರಸ್ಪರ ಅವಲಂಬನೆ, ಸಹಕಾರಗಳನ್ನ ಗಣನೆಗೆ ತೆಗೆದುಕೊಳ್ಳುವುದಿಲ್ಲ. (ಬೇರು ಭೂಮಿಯನ್ನ ಶೋಷಿಸುತ್ತದೆ ಎಂದು ಶುರುವಾಗುವ ಅಡಿಗರ ಒಂದು ಪದ್ಯ ನಿಸರ್ಗದ ಬಗೆಗಿನ ಸಂಕುಚಿತ ಗ್ರಹಿಕೆ)

ನೆಲಕ್ಕೆ ಹತ್ತಿರದ ಒಂದು ಉದಾಹರಣೆ ಕೊಟ್ಟು ಇದನ್ನ ವಿವರಿಸಬಹುದು. ಒಬ್ಬ ರೈತ ಅವರೆಗಿಡ ಬೆಳೆಯುತ್ತಾನೆ. ಅವರೆಗಿಡ ಐದಾರು ಎಲೆಗಳಾಗುತ್ತಿದ್ದಂತೆ ಅದಕ್ಕೆ ಕಪ್ಪು ಹೇನುಗಳು ಬರುತ್ತವೆ. ಈ ಕಪ್ಪು ಹೇನು (aphids) ಗಳಿಂದ ಗಿಡ ರಕ್ಷಿಸಲು ಯಾವುದೋ ಒಂದು ವಿಷ ಸಿಂಪಡಿಸುತ್ತೇವೆ. ಕಪ್ಪು ಹೇನುಗಳು ಸಾಯುತ್ತವೆ. ಜೊತೆಗೆ ಈ ಕಪ್ಪು ಹೇನುಗಳನ್ನು ತಿಂದು ಹಾಕುವ ಗುಲಗಂಜಿ ದುಂಬಿ (lady bird beetle) ಗಳು ಕೂಡ ಸತ್ತು ಹೋಗುತ್ತವೆ. ಅಂದರೆ ಅವರೆಗಿಡಕ್ಕೆ ತೊಂದರೆ ಕೊಡುವ ಹೇನುಗಳನ್ನ ತಿಂದು ತಮಗೆ ಅರಿವಿಲ್ಲದೆ ರೈತರಿಗೆ ನೆರವಾಗುವ ಗುಲಗಂಜಿ ದುಂಬಿಗಳನ್ನೂ ಕೊಂದಿರುತ್ತೇವೆ. ಇದಾದ ನಂತರ ಅವರೆಗಿಡ ಹೂಬಿಡುತ್ತಿದ್ದಂತೆ ಅಮೇರಿಕನ್ ಕಾಯಿಕೊರಕ ಹುಳ (American boll worm - Heliothis armigera) ಕಾಣಿಸಿಕೊಳ್ಳುತ್ತವೆ. ಈ ಹುಳ ಮೊದಲು ಹೂವನ್ನ ನಂತರ ಕಾಯನ್ನ ತಿನ್ನತೊಡಗುತ್ತವೆ. ಈ ಹುಳುವಿನಿಂದ ಬೆಳೆ ರಕ್ಷಿಸಿಕೊಳ್ಳಲು ರೈತ ಎಂಡೋಸಲ್ಫಾನ್ ಅಥವಾ ತ್ರಿಶೂಲ್ ಎಂಬ ಹೆಸರಿನಲ್ಲಿ ಇತ್ತೀಚೆಗೆ ಮಾರುಕಟ್ಟೆಗೆ ಬಂದಿರುವ ಸಿಂಥೆಟಿಕ್ ವಿಷ ಸಿಂಪಡಿಸುತ್ತಾನೆ. ಅಮೇರಿಕನ್ ಕಾಯಿಕೊರಕ ಹುಳ ಈ ಸಿಂಥೆಟಿಕ್ ವಿಷಗಳಿಗೆ resistance ಬೆಳೆಸಿಕೊಂಡಿದೆ; ವಿಷ ಸಿಂಪಡಿಸಿದ ನಂತರವೂ ತಿನ್ನುವ ತನ್ನ

ಈ ಹಿಂದುತ್ವದ ತೋಪು ಪಾರ್ಟಿಗಳು ಗೋ ಸಂರಕ್ಷಣೆ ಬಗ್ಗೆ ಮಾತನಾಡುತ್ತಾರಲ್ಲಾ, ಹಾಗೆ ಮಾತನಾಡಲು ಇನ್ನು ಮೇಲೆ ಅವರಿಗೆ ಯಾವ ನೈತಿಕ ಹಕ್ಕು ಉಳಿದಿಲ್ಲ. ಯಾಕೆಂದರೆ ಇದುವರೆಗೆ ಹತ್ತಿ ಬೀಜಗಳನ್ನ ಹಸುಗಳಿಗೆ ಆಹಾರವಾಗಿ ಬಳಸಲಾಗುತ್ತಿತ್ತು, ಬಿ.ಟಿ. ಹತ್ತಿ ಬೀಜಗಳಲ್ಲಿ ಈಗ ವಿಷ ಬೆರೆತಿದೆ. ಈ ವಿಷ ಬಿಜೆಪಿಯ ಮುರುಳಿ ಮನೋಹರ ಜೋಷಿ ದಿಡ್ಡಿ ಬಾಗಿಲು ಮುರಿದು ದೇಶದ ಒಳಗೆ ಬಿಟ್ಟುಕೊಂಡ ಬಿ.ಟಿ.ಹತ್ತಿಯಿಂದ ಬಂದದ್ದು. ದುರಂತ ಎಂದರೆ ವಿಜ್ಞಾನ ತಂತ್ರಜ್ಞಾನದಂತ ಸೂಕ್ಷ್ಮ ಇಲಾಖೆಗಳು ಇಂತ ಬೂಟಾಟಿಕೆ ಪಾರ್ಟಿಗಳ ಕೈಗೆ ಸಿಕ್ಕಿದ್ದು.



ಫೋಟೋ : ಎಲ್.ಸಿ. ಚನ್ನರಾಜ್

ಗಿಳಿಗಳು ಮುಸುಕಿನ ಜೋಳದ ತೆನೆಗಳನ್ನ ತಿನ್ನಬಾರದು ಅಂತಾ ಮುಸುಕಿನ ಜೋಳದ ತಳಿಗಳನ್ನ ರೂಪಿಸಿದರೆ ಹ್ಯಾಗೆ ಅಂತಾ ಪ್ರಳಯಾಂತಕ ಐಡಿಯಾ ಬರುವುದು ಅರಿವುಗೇಡಿ ವಿಜ್ಞಾನಿಗಳಿಗೆ ಮಾತ್ರ. ವಿಜ್ಞಾನ ಇಂದು ತನ್ನ ನೈತಿಕ ಎಲ್ಲೆಕಟ್ಟುಗಳನ್ನ ಮೀರಿ ಮಾರುಕಟ್ಟೆ ಘಾತುಕತನಗಳನ್ನ ಮೈಗೂಡಿಸಿಕೊಂಡಿದೆ. ಚೇಳಿನಲ್ಲಿ ವಿಷ ಉತ್ಪಾದಿಸುವ ವಂಶವಾಹಿ ತಂತುಗಳನ್ನು ಮುಸುಕಿನ ಜೋಳದ ವಂಶವಾಹಿ ತಂತುಗಳೊಂದಿಗೆ ಬೆಸೆಯುವಂತ ಪ್ರಯೋಗವೊಂದು ಅಮೇರಿಕದ ಜೈವಿಕ ತಂತ್ರಜ್ಞಾನ ಲ್ಯಾಬೋರೇಟರಿಯಲ್ಲಿ ನಡೆಯುತ್ತಿದೆ. ಈ ತಂತ್ರಜ್ಞಾನ ಯಶಸ್ವಿಯಾಯಿತು ಅಂತಾ ಇಟ್ಟುಕೊಳ್ಳೋಣ. ರೈತರು ಇಂತಹ ಬೀಜಗಳನ್ನ ತಂದು ಜೋಳ ಬೆಳೆಯುತ್ತಾರೆ. ಈ ಜೋಳ ತಿನ್ನಲು ಗಿಳಿಗಳೂ ಬರುವುದಿಲ್ಲ. ಕಾಡುಹಂದಿ, ನಾಯಿ ನರಿಗಳೂ ಬರುವುದಿಲ್ಲ. ಬೆಳೆದ ಪೂರ್ತಿ ಜೋಳ ರೈತನ ಕೈಗೆ ಸಿಗುತ್ತದೆ. ಗಿಳಿ, ಕಾಡುಹಂದಿ, ನಾಯಿನರಿಗಳೂ ಮುಟ್ಟದ ಈ ಜೋಳ ತಿನ್ನುವವರು ಯಾರು? ಮನುಷ್ಯ ತಾನೇ ? ಇಂತಾ ಆಹಾರ ಪದಾರ್ಥಗಳನ್ನ ಯಾಕೆ ಬೆಳೆಯಬೇಕು ? ಎನ್‌ಡಿಎ ಸರ್ಕಾರದಲ್ಲಿ ವಿಜ್ಞಾನ ತಂತ್ರಜ್ಞಾನ ಮಂತ್ರಿಯಾಗಿದ್ದ ಮುರಳಿ ಮನೋಹರ ಜೋಷಿ ಇಂತಹ ಅಮೇರಿಕೃತ ಫಸಲಿನ ಬೀಜಗಳು ಭಾರತದ ತೋಟ ಹೊಲಗದ್ದೆಗಳಿಗೆ ಬರಲು ಸಾಧ್ಯವಾಗುವಂತೆ ಭಾರತದ ದಿಡ್ಡಿ ಬಾಗಿಲುಗಳನ್ನೇ ಮುರಿದುಹಾಕಿದ್ದಾರೆ. ಸ್ವದೇಶಿ ಮಂತ್ರ ಹೇಳುವ ಹಿಂದುತ್ವದ ತೋಪು ಪಾರ್ಟಿಗಳದು ಇಂತಹ ಜೀವ ವಿರೋಧಿ ಧೋರಣೆ.

ಕ್ರಿಯೆಯನ್ನ ಮುಂದುವರೆಸುತ್ತದೆ. ಈ ಹುಳದ ಹಾವಳಿ ಹೆಚ್ಚಿದಂತೆ ಇನ್ನೂ ಹೆಚ್ಚು ವಿಷ ಸಿಂಪಡಿಸಬೇಕಾಗುತ್ತದೆ. ಆದರೆ ಕಾಯಿಕೊರಕ ಹುಳ ಸಾಯುವುದಿಲ್ಲ (ಇದೇ ವಿಷ ಕುಡಿದ ರೈತ ಸಾಯುತ್ತಾನೆ)

ಇದಕ್ಕೆ ಪ್ರತಿಯಾದ ಹುಳು ನಿವಾರಣೆ ವಿಧಾನ ಹೀಗಿದೆ. ಅವರೆ ಗಿಡ ಹೂಬಿಡುತ್ತಿದ್ದಂತೆ ಕಾಜಾಣ ಪಕ್ಷಿ (Black drongo) ಕಾಣಿಸಿಕೊಳ್ಳುತ್ತದೆ. ಬೆಳಗಾಗ ಎದ್ದು ನೋಡಿದರೆ ನೂರಾರು ಗೊರವಂಕಗಳು ಅವರೆ ಗಿಡಗಳ ನಡುವೆ ನಡೆದಾಡುತ್ತಿರುತ್ತವೆ. ಸಂಬರ ಕಾಗೆಯಂತೂ ಅವರೆಗಿಡ ಬಿಟ್ಟು ಹೋಗುವುದೇ ಇಲ್ಲ. ಜೊತೆಗೆ ಆಗಾಗ ಕೊಕ್ಕರೆಗಳು ಬಂದು ಹೋಗುತ್ತಿರುತ್ತವೆ. ಅವರೆ ಕಾಯಿ ಕೊರೆದು ತಿನ್ನುವ ಅಮೇರಿಕನ್ ಕಾಯಿಕೊರಕ ಹುಳ ಈ ಎಲ್ಲ ಪಕ್ಷಿಗಳಿಗೂ ತುಂಬಾ ಪ್ರಿಯವಾದ ಆಹಾರ. ಆದರೆ ಬೆಳೆ ರಕ್ಷಿಸಿಕೊಳ್ಳುವ ಆತುರದಲ್ಲಿ ರೈತನಿಗೆ ನಿಸರ್ಗದ ಈ ಲಯಗಳು ಕಾಣಿಸುವುದಿಲ್ಲ ಅಥವಾ ಅದು ಕಾಣದಂತೆ ವಿಷದ ಕಂಪನಿಗಳು, ಆಕಾಶ ಮಳೆಗಳ ಕಿಸಬಾಯಿದಾಸರು ಅವರ ವೀಕ್ಷಣೆಯ ಸೂಕ್ಷ್ಮ ಸ್ವಭಾವವನ್ನ ನಾಶ ಮಾಡಿರುತ್ತಾರೆ. ಒಂದು ಎಕರೆ ಅವರೆಗಿಡದಲ್ಲಿ ನಾಲ್ಕಾರು ಕಡೆ ಕವಲುಕೋಲುಗಳನ್ನ ನಿಲ್ಲಿಸಿದರೆ ಕಾಜಾಣಗಳು ಎತ್ತರದಲ್ಲಿ ಕುಳಿತು ಅದರ ಸುತ್ತಮುತ್ತಲಿನ ಎಲ್ಲ ಗಿಡಗಳಲ್ಲಿನ ಕಾಯಿಕೊರಕ ಹುಳುಗಳನ್ನು ತಿಂದು ಹಾಕುಬಲ್ಲವು. ಆದರೆ ವಿಷ ಸಿಂಪಡಿಸಿದಾಗ ಅದರ ಗಬ್ಬು ವಾಸನೆಗೆ ಕಾಜಾಣಗಳು ಹತ್ತಿರ ಕೂಡ ಸುಳಿಯುವುದಿಲ್ಲ. ರೈತ ತನ್ನ ಆತ್ಮಹತ್ಯೆಗೆ ಮೊದಲು ಕಾಜಾಣ, ಗೊರವಂಕ, ಕೊಕ್ಕರೆ, ಸಂಬರ ಕಾಗೆಗಳಿಗೆ ಆಹಾರ ನಿರಾಕರಣೆ ಮಾಡಿರುತ್ತಾನೆ. ಜೀವದ ನೈಸರ್ಗಿಕ ಹಕ್ಕುಗಳನ್ನ ನಿರಾಕರಿಸುವ ಮೂಲಕ ತನ್ನ ಜೀವಕ್ಕೂ ಕುತ್ತು ತಂದುಕೊಳ್ಳುತ್ತಾನೆ.

ಈಗ ಹೆಚ್ಚು ಅಂಕಿ ಅಂಶಗಳ ಗೊಡವೆಗೆ ಹೋಗದೇ ಕೆಲವು ಸರಳ ಲೆಕ್ಕಗಳ ಮೂಲಕ ಕೃಷಿ ಆರ್ಥಿಕತೆ ಹಿಡಿದಿರುವ ಕೆಟ್ಟದಾರಿಗಳನ್ನ ಪರಿಶೀಲಿಸಬಹುದು. ಅವರೆ ಗಿಡವನ್ನು ಬಾಧಿಸುವ ಈ ಕಾಯಿಕೊರಕ ಹುಳು ಇತರೆ ಸುಮಾರು ೨೦ ಫಸಲುಗಳನ್ನು ಬಾಧಿಸುತ್ತದೆ ಎಂಬ ಅಂದಾಜಿದೆ. ತಾನು ಕಬಳಿಸುವ ಬೆಳೆಗೆ ಅನುಗುಣವಾಗಿ ಈ ಹುಳದ ಬಣ್ಣ ಬದಲಾಗುತ್ತಿರುತ್ತದೆ ಮತ್ತು ಇದು ವಿಶ್ವವ್ಯಾಪಿ ಹುಳ. ಅಮೇರಿಕದ ಟೆಕ್ಸಾಸ್‌ನಲ್ಲಿ ಬೆಳೆಯುವ ಹತ್ತಿ ಕಾಯಿಕೊರೆಯುವ ಹುಳವೂ ಇದೇ, ಗುಲ್ಬರ್ಗದಲ್ಲಿ ತೊಗರಿ ಬೆಳೆ, ಹೊಸಕೋಟೆಯಲ್ಲಿ ಹೂಕೋಸು, ಹಾವೇರಿಯ ಹತ್ತಿ ಬೆಳೆಯನ್ನು ಪೀಡಿಸುವುದು ಇದೇ ಹುಳ. ಗುಲ್ಬರ್ಗ ಜಿಲ್ಲೆಯೊಂದರಲ್ಲೇ ಪ್ರತಿವರ್ಷ ಈ ಹುಳುವಿನಿಂದ ತೊಗರಿ ಬೆಳೆ ರಕ್ಷಿಸಿಕೊಳ್ಳಲು ೨೫೦ ಕೋಟಿ ರೂಪಾಯಿ ಬೆಲೆಬಾಳುವ ವಿಷ ಖರ್ಚಾಗುತ್ತಿದೆ. ಭಾರತದ ೯ನೇ ಪಂಚವಾರ್ಷಿಕ ಯೋಜನೆಯ ಮಧ್ಯಂತರ ವರದಿ ಅಭಿಪ್ರಾಯಪಟ್ಟಿರುವಂತೆ ನಾವು ಈ ಫಸಲುಗಳಲ್ಲಿ ರಾಸಾಯನಿಕ ರಹಿತ ಸಮಗ್ರ ಕೀಟ ನಿರ್ವಹಣೆ ಪದ್ಧತಿ ಅನುಸರಿಸಿದರೆ ಗುಲ್ಬರ್ಗ ಜಿಲ್ಲೆ ಒಂದರಲ್ಲೇ ವರ್ಷಕ್ಕೆ ೨೫೦ ಕೋಟಿ ರೂಪಾಯಿಗಳು ರೈತರ ಜೇಬಲ್ಲೇ ಉಳಿಯುತ್ತದೆ ಅಥವಾ ರೈತ ಸಾಲ ಮಾಡಬೇಕಾದ ಅವಶ್ಯಕತೆ ಉಂಟಾಗುವುದಿಲ್ಲ. ರೈತ ಆತ್ಮಹತ್ಯೆ ಮಾಡಿಕೊಳ್ಳುವಂತಹ ವಿಷಮ ವಾತಾವರಣವಿರುವುದಿಲ್ಲ. ಆದರೆ ಪರಿಸ್ಥಿತಿ ಅಷ್ಟು ಸರಳವಾಗಿಲ್ಲ. ಸಮಗ್ರ ಕೀಟ ನಿರ್ವಹಣೆ ವಿಧಾನ ಅನುಸರಿಸಬೇಕೆಂದರೆ ನಾವು ನಮಗೆ ನೆರವಾಗುವ ಪಕ್ಷಿಗಳ ವಾಸಸ್ಥಾನಗಳನ್ನ (natural habitations) ರಕ್ಷಿಸಿಕೊಳ್ಳಬೇಕು.

ಒಂದು ಸಲ ಕುರುಚಲು ಕಾಡಿನ ನಡುವೆ ಮಣ್ಣು ರಸ್ತೆಯಲ್ಲಿ ನಡೆಯುತ್ತಾ ಬರುತ್ತಿದ್ದೆ. ಟಿಪ್‌ಟಾಪಾಗಿ ಡ್ರೆಸ್ಸು ಮಾಡಿಕೊಂಡಿದ್ದ ಒಬ್ಬ ರೈತ (?) ಮೊಬೈಲ್ ಫೋನಿನಲ್ಲಿ ಮಾತನಾಡುತ್ತ ನಿಂತಿದ್ದ. ರಾಕ್ಷಸಾಕಾರದ ಯಂತ್ರವೊಂದು ಬೇವಿನ ಮರಗಳನ್ನ ಬೇರು ಸಮೇತ ಕಿತ್ತು ಕೆಳಗುರುಳಿಸುತ್ತಿತ್ತು. ಮರದಿಂದ ಪಕ್ಷಿಗಳ ಗೂಡು, ಅದರೊಳಗಿದ್ದ ಮೊಟ್ಟೆಗಳು ಕೆಳಕ್ಕೆ ಬಿದ್ದವು. ರೈತ ಮೊಬೈಲಿನಲ್ಲಿ ಮಾತನಾಡುತ್ತಲೇ ಇದ್ದ. ನೋಡುತ್ತಾ ನಿಂತೆ. ಹತ್ತಿರ ಹೋದೆ. ಮಾತನಾಡುತ್ತ ಆತ 'ಬಾಳೆಗಿಡ ಹಾಕಿಸೋಣ ಅಂತಾ ಎಲ್ಲಾ ಕ್ಲೀನ್ ಮಾಡಿಸ್ತಿದ್ದೀನಿ' ಅಂದ. 'ಅಲ್ಲಾ ಕಣ್ರೀ ಅಮೇರಿಕದವರು ಬೇವಿನ ಮರದ ಪೇಟೆಂಟ್ ಹಕ್ಕನ್ನು ನಮ್ಮ ದೇಶದ ರೈತ ಸಮುದಾಯಗಳಿಂದ ಕಿತ್ತುಕೊಳ್ಳೋಕೆ ಹೊಂಚು ಹಾಕ್ತಿದಾರೆ, ನೀವಿಲ್ಲಿ ಬೇವಿನ ಮರಾನೇ ಬೀಳಿಸ್ತಿದ್ದೀರಲ್ರೀ' ಅಂದೆ. ಆತ ನನ್ನ ದುರುಗುಟ್ಟಿ ನೋಡತೊಡಗಿದ. ಕಾಡನ್ನು ಕ್ಲೀನು ಮಾಡಿ ನಾಡು ಕಟ್ಟುವ ಅಹಂಕಾರವಿತ್ತು. ಸಾಮಾನ್ಯವಾಗಿ ಬಾಳೆಗಿಡಕ್ಕೆ ಬರುವ ಬೇರುಗಂಟು ರೋಗಕ್ಕೆ ಬೇವಿನ ಬೀಜ ಒಳ್ಳೆಯ ಮದ್ದು. ಆದರೆ ಆ ಟಿಪ್‌ಟಾಪ್ ಡ್ರೆಸ್ಸಿನ, ಮೊಬೈಲು ಫೋನ್ ವಾಚಾಳಿ ರೈತ ಮದ್ದಿನ ಮೂಲಗಳನ್ನೇ ನೆಲಸಮ ಮಾಡುತ್ತಿದ್ದ.

ನಾವು ಬೆಳೆಯುವ ಮುಸುಕಿನ ಜೋಳದ ತೆನೆಗಳನ್ನ ತಿನ್ನಲು ಗಿಳಿಗಳು ಬರುತ್ತವೆ. ಗಿಳಿಗಳು ಮುಸುಕಿನ ಜೋಳದ ತೆನೆಗಳನ್ನ ತಿನ್ನಬಾರದು ಅಂತಾ ಮುಸುಕಿನ ಜೋಳದ ತಳಿಗಳನ್ನ ರೂಪಿಸಿದರೆ ಹ್ಯಾಗೆ ಅಂತಾ ಪ್ರಳಯಾಂತಕ ಐಡಿಯಾ ಬರುವುದು ಅರಿವುಗೇಡಿ ವಿಜ್ಞಾನಿಗಳಿಗೆ ಮಾತ್ರ.

Infact ಈಗ ಬೇಸಾಯ ವಲಯದಲ್ಲಿ ಚಾಲ್ತಿಯಲ್ಲಿರುವ ರಾಸಾಯನಿಕಗಳ ಬಳಕೆ ಚಾಲನೆಗೆ ಬಂದದ್ದು ಏಕಲವ್ಯ ವಧೆಯ ಮೂಲಕ, ರಾಸಾಯನಿಕ ಕೃಷಿಯ ಈ ಏಕಲವ್ಯ ವಧೆ ಮೊದಲಿಗೆ ಪ್ರಾರಂಭವಾದದ್ದು ಜರ್ಮನಿಯಲ್ಲಿ, ಭಾರತದಲ್ಲಿ ಈ ಏಕಲವ್ಯ ವಧೆ ೬೦ರ ದಶಕದಲ್ಲಿ ಪ್ರಾರಂಭವಾದದ್ದು ಇಂದಿಗೂ ನಿಂತಿಲ್ಲ.

ವಿಜ್ಞಾನ ಇಂದು ತನ್ನ ನೈತಿಕ ಎಲ್ಲೆಕಟ್ಟುಗಳನ್ನ ಮೀರಿ ಮಾರುಕಟ್ಟೆ ಘಾತುಕತನಗಳನ್ನ ಮೈಗೂಡಿಸಿಕೊಂಡಿದೆ. ಚೇಳಿನಲ್ಲಿ ವಿಷ ಉತ್ಪಾದಿಸುವ ವಂಶವಾಹಿ ತಂತುಗಳ (chromosomes)ನ್ನು ಮುಸುಕಿನ ಜೋಳದ ವಂಶವಾಹಿ ತಂತುಗಳೊಂದಿಗೆ ಬೆಸೆಯುವಂತ ಪ್ರಯೋಗವೊಂದು ಅಮೇರಿಕದ ಜೈವಿಕ ತಂತ್ರಜ್ಞಾನ ಲ್ಯಾಬೋರೇಟರಿಯಲ್ಲಿ ನಡೆಯುತ್ತಿದೆ. ಇಂತಹ ಕಸಿಯನ್ನೇ ಅವರು ಜೈವಿಕ ತಂತ್ರಜ್ಞಾನ (Bio technology) ಅಂತಾ ಕರೆಯುತ್ತಿದ್ದಾರೆ.

ಈ ತಂತ್ರಜ್ಞಾನ ಯಶಸ್ವಿಯಾಯಿತು ಅಂತಾ ಇಟ್ಟುಕೊಳ್ಳೋಣ. ರೈತರು ಇಂತಹ ಬೀಜಗಳನ್ನ ತಂದು ಜೋಳ ಬೆಳೆಯುತ್ತಾರೆ. ಈ ಜೋಳ ತಿನ್ನಲು ಗಿಳಿಗಳೂ ಬರುವುದಿಲ್ಲ, ಕಾಡುಹಂದಿ, ನಾಯಿ ನರಿಗಳೂ ಬರುವುದಿಲ್ಲ, ಬೆಳೆದ ಪೂರ್ತಿ ಜೋಳ ರೈತನ ಕೈಗೆ ಸಿಗುತ್ತದೆ. ಗಿಳಿ, ಕಾಡುಹಂದಿ, ನಾಯಿನರಿಗಳೂ ಮುಟ್ಟದ ಈ ಜೋಳ ತಿನ್ನುವವರು ಯಾರು ? ಮನುಷ್ಯ ತಾನೇ ? ಇಂತಾ ಆಹಾರ ಪದಾರ್ಥಗಳನ್ನ ಯಾಕೆ ಬೆಳೆಯಬೇಕು ? ಅಜಾತಶತ್ರು ವಾಜಪೇಯಿ ನಾಯಕತ್ವದ ಎನ್‌ಡಿಎ ಸರ್ಕಾರದಲ್ಲಿ ವಿಜ್ಞಾನ ತಂತ್ರಜ್ಞಾನ ಮಂತ್ರಿಯಾಗಿದ್ದ ಮುರಳಿ ಮನೋಹರ ಜೋಷಿ ಇಂತಹ ಅಮೇರಿಕೃತ ಫಸಲಿನ ಬೀಜಗಳು ಭಾರತದ ತೋಟ ಹೊಲಗದ್ದೆಗಳಿಗೆ ಬರಲು ಸಾಧ್ಯವಾಗುವಂತೆ ಭಾರತದ ದಿಡ್ಡಿ ಬಾಗಿಲುಗಳನ್ನೇ ಮುರಿದುಹಾಕಿದ್ದಾರೆ. ಸ್ವದೇಶಿ ಮಂತ್ರ ಹೇಳುವ ಹಿಂದುತ್ವದ ತೋಪು ಪಾರ್ಟಿಗಳದು ಇಂತಹ ಜೀವ ವಿರೋಧಿ ಧೋರಣೆ.

ಇನ್ನೊಂದು ಪ್ರಶ್ನೆ ತೆಗೆದುಕೊಳ್ಳೋಣ. ವಿಜ್ಞಾನಿಗಳು ಲ್ಯಾಬೋರೇಟರಿಗಳಲ್ಲಿ ಕುಂತು ಬಿ.ಟಿ. ಹತ್ತಿ ಅಂತಾ ಒಂದು ಹತ್ತಿ ತಳಿ ಉತ್ಪಾದಿಸಿದ್ದಾರೆ. ಬೇಸಿಲಸ್ ತುರೆ ಜೇನ್ಸಿಸ್ ಅಂತಾ ಒಂದು ಬ್ಯಾಕ್ಟೀರಿಯಾ, ಅದು ವಿಷ ಉತ್ಪಾದಿಸುವ ಬ್ಯಾಕ್ಟೀರಿಯಾ, ಈ ಬ್ಯಾಕ್ಟೀರಿಯಾದ ವಂಶವಾಹಿ ತಂತುಗಳನ್ನು ಹತ್ತಿಗಿಡದ ವಂಶವಾಹಿನಿಗಳೊಂದಿಗೆ ಕಸಿ ಮಾಡುವ ಮೂಲಕ ಉತ್ಪಾದಿಸಲಾಗಿರುವ ಹತ್ತಿ ತಳಿ. ಹತ್ತಿ ಕಾಯಿಗೆ ಕೊರೆಯುವ ಅಮೇರಿಕನ್ ಕಾಯಿಕೊರಕ ಹುಳುವಿನಿಂದ ರಕ್ಷಿಸಿಕೊಳ್ಳಲು ಈ ಬಿ.ಟಿ. ಹತ್ತಿಗಿಡ ತನ್ನ ವಿಷವನ್ನ ತಾನೇ ತಯಾರಿಸಿ ಕೊಳ್ಳುತ್ತದೆ. ಅಂದರೆ ಒಂದು ಗಿಡದ ನೈಸರ್ಗಿಕ ಗುಣವನ್ನು ನಿರಾಕರಿಸಿ ವಿಜ್ಞಾನಿಗಳು ದೇವರ ಪಾತ್ರ ನಿರ್ವಹಿಸಲು ಹೊರಟಿರುವುದು ಇಂದು ವಿಜ್ಞಾನ ತುಳಿದಿರುವ ದಾರಿ. ಆದರೆ ಈ ದೇವರ ಪಾತ್ರ ದಾರಿ ತಪ್ಪಿದೆ. ಬಿ.ಟಿ.ಹತ್ತಿಯನ್ನು ಯಾವ ಉದ್ದೇಶದಿಂದ ರೂಪಿಸಲಾಗಿತ್ತೋ ಆ ಉದ್ದೇಶ ವಿಫಲವಾಗಿದೆ. ಸಸ್ಯದಲ್ಲಿ ಆಂತರಿಕವಾಗಿ ವಿಷ ಉತ್ಪಾದನೆಯಾಗುವುದರಿಂದ ಗಿಡ ತನ್ನ ಮೂಲ ಉದ್ದೇಶಕ್ಕೆ ಆಹಾರ ಉತ್ಪಾದಿಸಿಕೊಳ್ಳುವ metabolic activity ಗಣನೀಯವಾಗಿ ಕುಸಿದಿದೆ ; ಅಂದರೆ ಈ ಬಿ.ಟಿ. ಹತ್ತಿ ಬೆಳೆದ ಚೀನಾ, ಥಾಯ್ಲೆಂಡಿನ ರೈತರು ಇಳುವರಿ ನಷ್ಟದಿಂದ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಈ ಹಿಂದುತ್ವದ ತೋಪು ಪಾರ್ಟಿಗಳು ಗೋ ಸಂರಕ್ಷಣೆ ಬಗ್ಗೆ ಮಾತನಾಡುತ್ತಾರಲ್ಲಾ, ಹಾಗೆ ಮಾತನಾಡಲು ಇನ್ನು ಮೇಲೆ ಅವರಿಗೆ ಯಾವ ನೈತಿಕ ಹಕ್ಕು ಉಳಿದಿಲ್ಲ. ಯಾಕೆಂದರೆ ಇದುವರೆಗೆ ಹತ್ತಿ ಬೀಜಗಳನ್ನ ಹಸುಗಳಿಗೆ ಆಹಾರವಾಗಿ ಬಳಸಲಾಗುತ್ತಿತ್ತು. ಬಿ.ಟಿ. ಹತ್ತಿ ಬೀಜಗಳಲ್ಲಿ ಈಗ ವಿಷ ಬೆರೆತಿದೆ. ಈ ವಿಷ ಬಿಜೆಪಿಯ ಮುರಳಿ ಮನೋಹರ ಜೋಷಿ ದಿಡ್ಡಿ ಬಾಗಿಲು ಮುರಿದು ದೇಶದ ಒಳಗೆ ಬಿಟ್ಟುಕೊಂಡ ಬಿ.ಟಿ.ಹತ್ತಿಯಿಂದ ಬಂದದ್ದು.

ದುರಂತ ಎಂದರೆ ವಿಜ್ಞಾನ ತಂತ್ರಜ್ಞಾನದಂತ ಸೂಕ್ಷ್ಮ ಇಲಾಖೆಗಳು ಇಂತ ಬೂಟಾಟಿಕೆ ಪಾರ್ಟಿಗಳ ಕೈಗೆ ಸಿಕ್ಕಿದ್ದು.

ವಿಜ್ಞಾನದ ಈ ಬೂಟಾಟಿಕೆ ಬಗ್ಗೆ ಇನ್ನೊಂದು ಉದಾಹರಣೆ ಕೊಡಬೇಕು. ಇದೇ ಮು.ಮ. ಜೋಷಿ ವಿಜ್ಞಾನ ತಂತ್ರಜ್ಞಾನ ಮಂತ್ರಿಯಾಗಿದ್ದಾಗ, ಭಾರತದ ನೆಲದಲ್ಲಿ ಪ್ರಯೋಗಿಸಲು Golden rice ಎಂಬ ಭತ್ತದ ತಳಿಗೆ ಅನುಮತಿ ಕೊಡಲಾಗಿತ್ತು. ಈಗ ಭಾರತದಲ್ಲಿ ಬೆಳೆಯಲಾಗುತ್ತಿರುವ ಭತ್ತದಲ್ಲಿ 'ಎ' ಅನ್ನಾಂಗಗಳಿಲ್ಲ, ಆದ್ದರಿಂದ 'ಎ' ಅನ್ನಾಂಗ ಉತ್ಪಾದಿಸುವ Golden rice ಬೆಳೆಯಿರಿ ಅಂತಾ ವಿಜ್ಞಾನಿಗಳು ಬೊಗಳಬಹುದು. ಆದರೆ ಅದು ಬೊಗಳೆ ಮಾತ್ರ.

ಅಲ್ಲ ಅಕ್ಕಿಯಲ್ಲಿ 'ಎ' ಅನ್ನಾಂಗ ಇರಬೇಕು ಅಂತಾ ಈ ವಿಜ್ಞಾನಿಗಳು ಯಾಕೆ ತಿಳಿಯಬೇಕು ? 'ಎ' ಅನ್ನಾಂಗ ಬೇಕೆಂದರೆ ಹೊಲಗಳಲ್ಲಿ ತನಗೆ ತಾನೇ ಬೆಳೆಯುವ ಅಣ್ಣೆ ಸೊಪ್ಪಿದೆ, ಮಡಿಗಳಲ್ಲಿ ಬೆಳೆಯುವ ಅರಿವೆ ಸೊಪ್ಪಿದೆ, ಸಬ್ಬಕ್ಕಿ ಸೊಪ್ಪು, ಕೆರೆಗಳ ಅಂಗಳದಲ್ಲಿ ಹೊನ್ನಗೊನೆ ಸೊಪ್ಪಿದೆ.

ಯಾವುದೇ ಒಂದು ಸಸ್ಯದಲ್ಲಿ ಎಲ್ಲ ಅನ್ನಾಂಗಗಳೂ ಇರಬೇಕು ಅಂತಾ ತಿಳಿಯುವುದು ಅದರಂತೆ ಜೈವಿಕ ತಂತ್ರಜ್ಞಾನ ಬಳಸಿ ಹೊಸ ತಳಿಗಳನ್ನು ರೂಪಿಸಿ ರೈತರು ಬೀಜ ಕಂಪನಿಗಳನ್ನ ಅವಲಂಬಿಸುವಂತೆ ಮಾಡುವುದು ಇದರ ಹಿಂದಿನ ಹುನ್ನಾರ.

ದಗಲು ಬಾಜಿಗಳು ಅಂತಾ ಒಂದು ಬೈಗುಳ ಇದೆ. ಈ ಬೈಗುಳವನ್ನು ಸ್ವೀಕರಿಸುವಂತ ಮನುಷ್ಯರು ಯಾರಾದರೂ ಇದ್ದರೆ ಅವರು ಲ್ಯಾಬೊರೇಟರಿಗಳಲ್ಲಿ ಕೊಳೆತು ಹಾಳಾಗುತ್ತಿರುವ, ಬಹುರಾಷ್ಟ್ರೀಯ ಕಂಪನಿಗಳ ಬಾಗಿಲ ಕಸಗುಡಿಸುವ ಕೆಲಸ ಮಾಡುತ್ತಿರುವ ಗುಲಾಮಿ ವಿಜ್ಞಾನಿಗಳು; ಮಾರುಕಟ್ಟೆಯ ದಲ್ಲಾಳಿಗಳಿಗೆ ಇವರು ವಿಜ್ಞಾನವನ್ನು ತಲೆ ಹಿಡಿಯುತ್ತಿದ್ದಾರೆ.

ಬಹುರಾಷ್ಟ್ರೀಯ ಕಂಪನಿಗಳ ಲಾಭಕ್ಕಾಗಿ ದುಡಿಯುತ್ತಿರುವ ವಿಜ್ಞಾನಿಗಳು ಈಗ ನಂಬಿಕೆಗೆ ಅರ್ಹರಲ್ಲ. ಈಗ ರೈತರು ಸ್ವಂತ, ಸಾಮುದಾಯಿಕ ಬೀಜ ಬ್ಯಾಂಕುಗಳನ್ನು ಸ್ಥಾಪಿಸಿಕೊಳ್ಳಲು ಮುಂದಾಗುವುದು ಒಳಿತು. ಜೊತೆಗೆ ನಿಸರ್ಗದಲ್ಲೇ ಇರುವ ಕೀಟನಾಶಕಗಳು, ಪರಸ್ಪರ ಅವಲಂಬನೆ, ಸಹಕಾರದ ಲಯಗಳನ್ನು ಗ್ರಹಿಸುವುದು ಒಳ್ಳೆಯದು. ದೋಷವಿರುವುದು ಕೀರ್ತಿದಾಹ ಹಿಡಿದ ಚಕ್ರವರ್ತಿಯಲ್ಲಿ, ಆತನ ಮನೆಯ ಬಾಗಿಲು ಕಾಯುತ್ತಿರುವ ವಿಜ್ಞಾನಿಗಳಲ್ಲಿ, ಪರ್ವತದ ತಪ್ಪಲಿನಲ್ಲಿ ನಿಸರ್ಗದ ಲಯಗಳನ್ನ ಗ್ರಹಿಸುತ್ತ ಕುಂತ ಸಂತ ನಮಗೀಗ ಬೇಕಾಗಿದ್ದಾನೆ. ಈ ಸಂತ ನಮಗೆ ಸಿಗುವುದು ಹೆದ್ದಾರಿಯ ಅಬ್ಬರಕ್ಕೆ ಅಂಜಿ ಕಾಡು ಹೊಕ್ಕ ಸಂಸ್ಕೃತಿಗಳಲ್ಲಿ.



ಅವರೆ ಗಿಡವನ್ನು ಬಾಧಿಸುವ ಈ ಕಾಯಿಕೊರಕ ಹುಳು ಇತರೆ ಸುಮಾರು ೨೦ ಫಸಲುಗಳನ್ನು ಬಾಧಿಸುತ್ತದೆ ಎಂಬ ಅಂದಾಜಿದೆ. ತಾನು ಕಬಳಿಸುವ ಬೆಳೆಗೆ ಅನುಗುಣವಾಗಿ ಈ ಹುಳದ ಬಣ್ಣ ಬದಲಾಗುತ್ತಿರುತ್ತದೆ ಮತ್ತು ಇದು ವಿಶ್ವವ್ಯಾಪಿ ಹುಳ. ಅಮೇರಿಕದ ಟೆಕ್ಸಾಸ್‌ನಲ್ಲಿ ಬೆಳೆಯುವ ಹತ್ತಿ ಕಾಯಿಕೊರೆಯುವ ಹುಳವೂ ಇದೇ, ಗುಲ್ಬರ್ಗದಲ್ಲಿ ತೊಗರಿಬೆಳೆ, ಹೊಸಕೋಟೆ ಯಲ್ಲಿ ಹೂಕೋಸು, ಹಾವೇರಿಯ ಹತ್ತಿ ಬೆಳೆಯನ್ನು ಪೀಡಿಸುವುದು ಇದೇ ಹುಳ. ಗುಲ್ಬರ್ಗ ಜಿಲ್ಲೆಯೊಂದರಲ್ಲೇ ಪ್ರತಿವರ್ಷ ಈ ಹುಳುವಿನಿಂದ ತೊಗರಿ ಬೆಳೆ ರಕ್ಷಿಸಿಕೊಳ್ಳಲು ೨೫೦ ಕೋಟಿ ರೂಪಾಯಿ ಬೆಲೆಬಾಳುವ ವಿಷ ಖರ್ಚಾಗುತ್ತಿದೆ. ಭಾರತದ ೯ನೇ ಪಂಚವಾರ್ಷಿಕ ಯೋಜನೆಯ ಮಧ್ಯಂತರ ವರದಿ ಅಭಿಪ್ರಾಯಪಟ್ಟಿರುವಂತೆ ನಾವು ಈ ಫಸಲುಗಳಲ್ಲಿ ರಾಸಾಯನಿಕ ರಹಿತ ಸಮಗ್ರ ಕೀಟ ನಿರ್ವಹಣೆ ಪದ್ಧತಿ ಅನುಸರಿಸಿದರೆ ಗುಲ್ಬರ್ಗ ಜಿಲ್ಲೆ ಒಂದರಲ್ಲೇ ವರ್ಷಕ್ಕೆ ೨೫೦ ಕೋಟಿ ರೂಪಾಯಿಗಳು ರೈತರ ಜೇಬಲ್ಲೇ ಉಳಿಯುತ್ತದೆ ಅಥವಾ ರೈತ ಸಾಲ ಮಾಡಬೇಕಾದ ಅವಶ್ಯಕತೆ ಉಂಟಾಗುವುದಿಲ್ಲ. ರೈತ ಆತ್ಮಹತ್ಯೆ ಮಾಡಿಕೊಳ್ಳುವಂತಹ ವಿಷಮ ವಾತಾವರಣವಿರುವುದಿಲ್ಲ. ಆದರೆ ಪರಿಸ್ಥಿತಿ ಅಷ್ಟು ಸರಳವಾಗಿಲ್ಲ. ಸಮಗ್ರ ಕೀಟ ನಿರ್ವಹಣೆ ವಿಧಾನ ಅನುಸರಿಸಬೇಕೆಂದರೆ ನಾವು ನಮಗೆ ನೆರವಾಗುವ ಪಕ್ಷಿಗಳ ವಾಸಸ್ಥಾನಗಳನ್ನ ರಕ್ಷಿಸಿಕೊಳ್ಳಬೇಕು.

ಕಥೆ

ಬಾಡಿಯೂ ಬಾಡದ ಹೂವು..

ಸಾರಾ ಅಬೂಬಕ್ಕರ್

ಇಬ್ರಾಹಿಂ ಹಾಜಿಯವರ ಮಗನ ಮದುವೆಗೆ ಹೋಗಿ ಊಟವಾದೊಡನೆ ನಾನು ಹೊರಟಾಗ ಹಾಜಿಯವರ ಹೆಂಡತಿ ಐಸಮ್ಮನ ಹಟವೇ ಹಟ, 'ಇಲ್ಲ ನೀವು ಹೋಗಬಾರದು. ಮದುಮಗಳ ಮನೆಗೆ ಹೋಗಿ ಅವಳನ್ನು ಕರೆದುಕೊಂಡು ಬಂದ ಬಳಿಕವೇ ನಿಮ್ಮನ್ನು ಬಿಡುವುದು.'

'ಬೇಡ ಐಸಮ್ಮ. ಮದುವೆಯ ಪಾರ್ಟಿ ಹಿಂತಿರುಗುವಾಗ ರಾತ್ರಿಯಾದೀತು. ಆಮೇಲೆ ನನಗೆ ಊರಿಗೆ ಹೋಗಲಿಕ್ಕೂ ತೊಂದರೆ. ನನ್ನನ್ನು ಬಿಟ್ಟುಬಿಡು' ನಾನಂದೆ.

'ಛೆ, ಅದು ಹೇಗಾದೀತು ? ಅದೆಲ್ಲ ಸಾಧ್ಯವಿಲ್ಲ. ನಿಮ್ಮನ್ನು ನಿಮ್ಮ ಮನೆ ಮುಟ್ಟಿಸುವ ಜವಾಬ್ದಾರಿ ನಮ್ಮದು. ಅದರ ಚಿಂತೆ ನಿಮಗೇಕೆ ? ನೀವು ನಮ್ಮ ಜೊತೆಯಲ್ಲಿರುವುದೇ ನಮಗೆ ಗೌರವ,' ಎಂದಾಗ ನಾನು ಒಪ್ಪಿಕೊಳ್ಳುವುದಲ್ಲದೆ ಬೇರೆ ದಾರಿ ಇರಲಿಲ್ಲ. ಹೇಗೂ ಬಂದಾಯಿತು. ಇಷ್ಟೊಂದು ಒತ್ತಾಯ ಮಾಡುವಾಗ ನಾನಾದರೂ ಯಾಕೆ ಹಟ ಹಿಡಿಯಬೇಕು ? ಹುಡುಗಿಯ ಮನೆಯ ಶ್ರೀಮಂತಿಕೆಯ ಕುರಿತು ಈಗಾಗಲೇ ಬಹಳ ಪ್ರಚಾರವೂ ಆಗಿದೆ. ಅದನ್ನೊಮ್ಮೆ ನೋಡುವುದರಿಂದ ನನಗೇನೂ ನಷ್ಟವಿಲ್ಲವಲ್ಲ ಎಂದುಕೊಳ್ಳುತ್ತಾ ನಾನೂ ಹೊರಟೆ.

ಮನೆಯಲ್ಲೇ ಮದುವೆ ಎಂದ ಬಳಿಕ ಎಲ್ಲವೂ ಕ್ರಮಪ್ರಕಾರವೇ ನಡೆಯಬೇಕು. ಬೆಳಿಗ್ಗೆ ಹುಡುಗಿಯ ತಂದೆ ಸಂಬಂಧಿಕರೊಡನೆ ಮದುಮಗನ ಮನೆಗೆ ಬಂದು ನಿಕಾಹ್ ನೆರವೇರಿಸಿ ತೆರಳಿದ ಬಳಿಕ ಮದುಮಗನ ದಿಬ್ಬಣ ಹೊರಟಿತು. ಒಂದೆರಡು ಬಸ್ಸು ಮತ್ತು ಹತ್ತಿಪ್ಪತ್ತು ಕಾರುಗಳ ದಿಬ್ಬಣ ಪೂರ್ವಾಭಿಮುಖವಾಗಿ ಹೊರಟು ಒಂದೆರಡು ಗಂಟೆಗಳ ಬಳಿಕ ಮದುಮಗಳ ಮನೆ ತಲುಪಿ ಎಲ್ಲರೂ ಕಾರು, ಬಸ್ಸುಗಳಿಂದ ಕೆಳಗಿಳಿದೆವು.

ಹುಡುಗಿಯ ಮನೆ ಮುಂದಿನ ಚಪ್ಪರವೇ ಬಹಳ ದೊಡ್ಡದಾಗಿ ಬಣ್ಣ ಬಣ್ಣದ ಹೂವು ಮತ್ತು ದೀಪಗಳಿಂದ ಅಲಂಕೃತವಾಗಿತ್ತು. ಕೇರಳದಿಂದ ಬಂದ ಹಾಡುಗಾರ್ತಿಯರು ಬಂದು ಹಾಡು ಹೇಳುತ್ತಾ ಮದುಮಗನ ಕಡೆಯಿಂದ ಬಂದ ಮಹಿಳೆಯರನ್ನು ಸ್ವಾಗತಿಸಿ ಕರೆದೊಯ್ದು ಮಹಡಿಯ ಮೇಲಿನ ವಿಶಾಲವಾದ ಹಾಲಿನಲ್ಲಿ ಕೂರಿಸಿದರು. ಅಲ್ಲೇ ಪಕ್ಕದಲ್ಲೇ ಅಲಂಕೃತವಾದ ಕೋಣೆಯಲ್ಲಿ ಮದುಮಗಳನ್ನು ಕೂರಿಸಿದ್ದರು. ಶ್ರೀಮಂತಿಕೆ ಎಲ್ಲೆಲ್ಲೂ ರಾರಾಜಿಸುತ್ತಿತ್ತು. ಹಳ್ಳಿಯ ಆ ಮನೆಯ ಮುಂಭಾಗದಲ್ಲಿ ಹೊಸ ಕೋಣೆಗಳನ್ನು ಸೇರಿಸಿ ಆ ಕೋಣೆಗೆ ಹವಾ ನಿಯಂತ್ರಿತ ಯಂತ್ರವನ್ನು ಅಳವಡಿಸಲಾಗಿತ್ತು. ಎಂದ ಮೇಲೆ ಅವರ ಶ್ರೀಮಂತಿಕೆಯ ಕುರಿತು ಕೇಳಬೇಕಾದದ್ದೇ ಇಲ್ಲವಲ್ಲ? ಚಿನ್ನದೊಡವೆಗಳಲ್ಲಿ ಹುಡುಗಿ ಹೂತು ಹೋಗಿದ್ದಳು ! ನಾನು ಅಲ್ಲೇ ಇದ್ದ ಕುರ್ಚಿಯೊಂದರಲ್ಲಿ ಕುಳಿತೆ.

'ಸುಮಾರು ಐವತ್ತು ವರ್ಷಗಳ ಹಿಂದೆ ನೀವೆಲ್ಲರೂ ಮನೆಯಂಗಳದಲ್ಲಿ ಹಲಸಿನ ಹಪ್ಪಳ ಮಾಡುತ್ತಿದ್ದಾಗ, ಬುರ್ಕಾ ಹಾಕಿದ ಹೆಂಗಸೊಬ್ಬಳು ಮೂರು ವರ್ಷದ ಮಗಳೊಡನೆ ನಿಮ್ಮ ಅಂಗಳ ಪ್ರವೇಶಿಸಿದ್ದು ನೆನಪುಂಟಾ ?' ನಗುತ್ತಾ ಕೇಳಿದರಾಕೆ. ಈಗ ಮತ್ತೊಮ್ಮೆ ನಾನು ಅವರ ಮುಖವನ್ನು ಸೂಕ್ಷ್ಮವಾಗಿ ನೋಡಿದೆ. ಕಂಡೂ ಕಾಣದಂತೆ ಆಕೆಯ ಹಣೆಯಲ್ಲಿ ಬಾಲಚಂದ್ರನ ನೀಲಿ ಬೊಟ್ಟೊಂದು ಆಕೆಯ ಇತಿಹಾಸಕ್ಕೆ ಸಾಕ್ಷಿಯಾಗದೆ ಇನ್ನೂ ಮಾಯವಾಗದೆ ಉಳಿದುಕೊಂಡಿತ್ತು. ಹೌದು. ಐವತ್ತು ವರ್ಷಗಳ ಹಿಂದಿನ ಆ ಘಟನೆ....

ಕೊಂಚ ವಯಸ್ಸಾದ ಹೆಂಗಸೊಬ್ಬರು ಕೋಣೆಯೊಳಗೆ ಬಂದವರು, ಮದು ಮಗಳ ಬಳಿ ಬಂದು ಅವಳ ತಲೆಯ ಮೇಲಿನ ದುಪಟ್ಟಾ ಸರಿಪಡಿಸಿ ಅವಳ ಪಕ್ಕದಲ್ಲಿ ಕುಳಿತುಕೊಂಡರು. 'ಅದು ಹುಡುಗಿಯ ಅಜ್ಜಿ!' ನನ್ನ ಪಕ್ಕದಲ್ಲಿದ್ದವರು ಪಿಸುಗುಟ್ಟಿದರು. ಸಕಲ ಸಂಪತ್ತಿನ ಒಡತಿ! ನಾನು ಮನದಲ್ಲಂದುಕೊಂಡು ಆಕೆಯನ್ನು ಸಮನಾಗಿ ನೋಡಿದೆ.

ಆಕೆಗೆ ಸುಮಾರು ಎಪ್ಪತ್ತು ವರ್ಷಗಳಾದರೂ ಆಗಿರಬಹುದು. ಬಿಳಿ ಮಿಶ್ರಿತ ಕಪ್ಪು ತಲೆಗೂದಲು. ಕಿವಿಯ ಮೇಲ್ಭಾಗ ಮತ್ತು ಕೆಳಭಾಗಗಳಲ್ಲಿ ಚಿನ್ನದ ಅಲಿ ಕತ್ತು ಮತ್ತು ಕಾದಿಲಗಳ ಭಾರದಿಂದ ಕಿವಿಗಳು ಬಗ್ಗಿ ಹೋಗಿದ್ದುವು. ಆಕೆಯ ಕತ್ತಿನಲ್ಲಿ ಹಿಂದಿನ ಕಾಲದ ದೊಡ್ಡದಾದ ಪವನು ಸರ, ಐದೆಳೆಯ ಚಕ್ರಸರ ಹೊಳೆಯುತ್ತಿತ್ತು. ಎರಡು ಕೈಗಳ ತುಂಬಾ ಚಿನ್ನದ ಬಳೆಗಳು.

ಈಗ ನಾನು ಆಕೆಯ ಮುಖವನ್ನು ಸಮನಾಗಿ ಗಮನಿಸಿದೆ. ಆಕೆಯನ್ನು ಎಲ್ಲೋ ನೋಡಿದ ನೆನಪು. ಬಹಳ ಹಿಂದೆ ಎಲ್ಲೋ ಕಂಡ ಮುಖ. ಮಂಜು ಮಂಜು ನೆನಪು. ಎಲ್ಲಿ? ಎಲ್ಲಿ? ನೆನಪಿನಾಳವನ್ನು ಕೆದಕುತ್ತಲೇ ಇದ್ದೆ, ಉಹುಂ, ನೆನಪಿನಾಳದಿಂದ ಆ ಮುಖ ಮೇಲೇಳಲಿಲ್ಲ.

ಈಗ ಆಕೆಯೂ ನನ್ನನ್ನು ನೆಟ್ಟ ದೃಷ್ಟಿಯಿಂದ ನೋಡತೊಡಗಿದರು. ಬಳಿಕ ನಿಧಾನವಾಗಿ ಎದ್ದು ನನ್ನ ತೀರಾ ಸಮೀಪ ಬಂದು ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾ 'ನೀನೂ... ನೀನೂ... ಜೈನಾ ಬಿಯಕ್ಕನ ಮಗಳು ಆಯಿಷಾ ಅಲ್ಲವಾ ? ಎಂದು ಕೇಳಿದರು.

'ನಿಮಗೆ ನನ್ನ ಪರಿಚಯವಿದೆಯೇ ?' ನೆನಪಿನಾಳ ಕೆದಕುತ್ತಲೇ ನಾನು ಕೇಳಿದೆ–

'ಪರಿಚಯವಿರುವುದು ಮಾತ್ರವಾ ಮೋಳೇ? ನಿನ್ನ ಉಮ್ಮಾ ಮಾಡಿದ ಉಪಕಾರವನ್ನು ನಾನು ಮರೆಯಲುಂಟಾ?' ಎನ್ನುತ್ತಾ ನನ್ನ ಸಮೀಪದ ಇನ್ನೊಂದು ಕುರ್ಚಿಯಲ್ಲಿ ಕುಳಿತರು.

'ನಿಮ್ಮನ್ನು ಎಲ್ಲೋ ನೋಡಿದ ನೆನಪುಂಟು. ಆದರೆ ಎಲ್ಲಿ, ಯಾವಾಗ ಎಂಬುದು ನೆನಪಾಗುತ್ತಲೇ ಇಲ್ಲ.' ಮುಜುಗರದಿಂದ ನಾನಂದೆ.

'ಸುಮಾರು ಐವತ್ತು ವರ್ಷಗಳ ಹಿಂದೆ ನೀವೆಲ್ಲರೂ ಮನೆಯಂಗಳದಲ್ಲಿ ಹಲಸಿನ ಹಪ್ಪಳ ಮಾಡುತ್ತಿದ್ದಾಗ ಬುರ್ಕಾ ಹಾಕಿದ ಹೆಂಗಸೊಬ್ಬಳು ಮೂರು ವರ್ಷದ ಮಗಳೊಡನೆ ನಿಮ್ಮ ಅಂಗಳ ಪ್ರವೇಶಿಸಿದ್ದು ನೆನಪುಂಟಾ ?' ನಗುತ್ತಾ ಕೇಳಿದರಾಕೆ.

ಈಗ ಮತ್ತೊಮ್ಮೆ ನಾನು ಅವರ ಮುಖವನ್ನು ಸೂಕ್ಷ್ಮವಾಗಿ ನೋಡಿದೆ. ಕಂಡೂ ಕಾಣದಂತೆ ಆಕೆಯ ಹಣೆಯಲ್ಲಿ ಬಾಲಚಂದ್ರನ ನೀಲಿ ಬೊಟ್ಟೊಂದು ಆಕೆಯ ಇತಿಹಾಸಕ್ಕೆ ಸಾಕ್ಷಿಯಾಗದೆ ಇನ್ನೂ ಮಾಯವಾಗದೆ ಉಳಿದುಕೊಂಡಿತ್ತು.

ಹೌದು. ಐವತ್ತು ವರ್ಷಗಳ ಹಿಂದಿನ ಆ ಘಟನೆ....

ನಾನಾಗ ಇನ್ನೂ ಹೈಸ್ಕೂಲು ವಿದ್ಯಾರ್ಥಿನಿ. ಬೇಸಗೆಯ ಆ ದಿನ ನಾವು, ಮನೆಯ ಹೆಣ್ಣು ಮಕ್ಕಳೆಲ್ಲರೂ ಸೇರಿ, ತಿನ್ನುವವರಿಲ್ಲದೆ ಕೊಳೆತು ಹಾಳಾಗಬಹುದಾದ ಹಲಸಿನಕಾಯಿಯ ಹಪ್ಪಳ ಒತ್ತುವುದರಲ್ಲಿ ಮಗ್ನರಾಗಿದ್ದೆವು. ಗೇಟು ತೆರೆದ ಶಬ್ದ ಕೇಳಿ ನಾನು ಆ ಕಡೆಗೆ ದೃಷ್ಟಿ

ಹೊರಳಿಸಿದಾಗ ಬುರ್ಕಾ ಹಾಕಿದ ಮಹಿಳೆಯೊಬ್ಬರು ಮೂರು ವರ್ಷದ ಹೆಣ್ಣು ಮಗುವಿನ ಕೈ ಹಿಡಿದು ಗೇಟಿನ ಒಳಗೆ ಬರುತ್ತಿದ್ದಂತೆ, ಆಕೆಯ ಜೊತೆಯಲ್ಲಿ ಬಂದ ಗಂಡಸೊಬ್ಬನು ಅವಳೊಡನೆ ಅದೇನೊ ಹೇಳಿ ಹೊರಟು ಹೋದನು. ಅವಳು ತಲೆಯಾಡಿಸಿ ಒಳಗೆ ಬಂದು ನನ್ನ ಬಳಿ ನಿಂತಳು.

'ಏನು ? ಯಾರು ನೀನು ? ಅಲ್ಲೇ ಇದ್ದ ನನ್ನ ತಾಯಿ ಕೇಳಿದರು.

'ವಕೀಲರನ್ನು ನೋಡಬೇಕಾಗಿತ್ತು.' ತಲೆ ತಗ್ಗಿಸಿ ನುಡಿದಳಾಕೆ.

'ಅವರು ಕೋರ್ಟಿನಿಂದ ಬರುವುದು ಸಂಜೆಯಾಗುತ್ತದೆ.'

'ಆಗಲಿ, ನಾನು ಕಾಯುತ್ತೇನೆ.'

'ಆಯಿತು, ಹಾಗಾದರೆ ಒಳಗೆ ಬಾ.' ನನ್ನ ತಾಯಿ ಆಕೆಯನ್ನು ಒಳಗೆ ಕರೆದೊಯ್ದರು.

ನಾವೆಲ್ಲರೂ ಹಪ್ಪಳದ ಕೆಲಸ ಮುಗಿಸಿ ಸುಸ್ತಾಗಿ ಮನೆಯೊಳಗೆ ಹೋದೆವು. ಆಗ ಬಂದಾಕೆ ಬುರ್ಕಾ ತೆಗೆದಳು. ಆಕೆ ರವಕೆಯನ್ನು ತೊಟ್ಟಿರಲಿಲ್ಲ. ಸೀರೆಯ ಸೆರಗನ್ನು ಮೈತುಂಬಾ ಹೊದ್ದುಕೊಂಡಿದ್ದಳು. ಹಣೆಯಲ್ಲಿ ನೀಲಿ ಬಣ್ಣದಲ್ಲಿ ಬಾಲಚಂದ್ರನ ಬೊಟ್ಟೊಂದು ರಾರಾಜಿಸುತ್ತಿತ್ತು! ಆಕೆ ಮುಸ್ಲಿಮಳಾಗಿರಲಿಲ್ಲ! ನಾನು ಆಶ್ಚರ್ಯದಿಂದ ಮೂಕಳಾದೆ.

ನನ್ನಮ್ಮನ ತನಿಖೆ ಪ್ರಾರಂಭವಾಗಿತ್ತು.

'ನೀನು ಯಾರು ? ಎಲ್ಲಿಯವಳು ? ನಿನ್ನನ್ನು ಕರೆದುಕೊಂಡುಬಂದ ಗಂಡಸು ಯಾರು ?'

ಆಕೆಯ ಕತೆ ಬಿಚ್ಚಿಕೊಳ್ಳತೊಡಗಿತು.

* * *

ಆಕೆಯ ಹೆಸರು ಮಾದೇವಿ. ತಾಯಿಯ ಹೆಸರು ಸೇಸಮ್ಮ. ಘಟ್ಟದ ಕೆಳಗಿನ ಒಂದು ಹಳ್ಳಿಯಲ್ಲಿ ವಾಸ. ಆಕೆ ಹುಟ್ಟಿದಾಗಲೇ ತಂದೆ ಊರು ಬಿಟ್ಟು ಹೋಗಿದ್ದರು. ತಾಯಿ ಕಷ್ಟಪಟ್ಟು ಮಗಳನ್ನು ಸಾಕಿ ಶಾಲೆಗೂ ಕಳುಹಿಸಿದ್ದಳು. ಮೂರೇ ವರ್ಷದಲ್ಲಿ ವಿದ್ಯಾಭ್ಯಾಸ ಕೊನೆಗೊಂಡಿತು.

ಭಟ್ಟರೊಬ್ಬರ ಅಡಿಕೆ ತೋಟದಲ್ಲಿ ಸೇಸಮ್ಮ ದುಡಿಯುತ್ತಲೇ ಮಗಳನ್ನು ಸಾಕಿ ಸಲಹುತ್ತಿದ್ದಳು. ತೋಟದ ಮೇಲ್ಭಾಗದ ಗುಡ್ಡೆಯ ಮೂಲೆಯಲ್ಲಿ ಆಕೆಯ ಗುಡಿಸಲು. ಭಟ್ಟರ ಮನೆಯ ಮಕ್ಕಳೊಡನೆ ಮಾದೇವಿಯೂ ಶಾಲೆಗೆ ಹೋಗತೊಡಗಿದ್ದಳು. ವಿದ್ಯಾಭ್ಯಾಸದಲ್ಲಿ ಸಾಕಷ್ಟು ಚುರುಕಾಗಿಯೇ ಇದ್ದಳು.

ಒಂದು ದಿನ ಭಟ್ಟರ ಹೆಂಡತಿ ಸೇಸಮ್ಮನನ್ನು ಕರೆದು,

'ಸೇಸೀ, ನಿನ್ನ ಮಗಳು ಓದಿ ಏನು ಮಾಡಬೇಕಾಗಿದೆ? ಇಲ್ಲಿ, ನಮ್ಮ ಮನೆಯಲ್ಲಿ ಚಿಕ್ಕಪುಟ್ಟ ಕೆಲಸಗಳನ್ನೇನಾದರೂ ಮಾಡಿಕೊಂಡಿರಲಿ. ಅವಳ ಹೊಟ್ಟೆಯೂ ತುಂಬುತ್ತದೆ; ವರ್ಷದ ಕೊನೆಗೆ ನಿನ್ನ ಕೈಗೆ ಏನಾದರೂ ಕಾಸೂ ಬರುತ್ತದೆ. ಈಗಿನಿಂದಲೇ ಅವಳಿಗೆ ಕೆಲಸ ಮಾಡಿ ಅಭ್ಯಾಸವಾದರೆ ಒಳ್ಳೆಯದಲ್ಲವಾ? ದುಡಿದು ತಿನ್ನಬೇಕಾದವರು ನೀವು. ಈಗಲೇ ತೋಟದ ಕೆಲಸ ಅಭ್ಯಾಸವಾದರೆ ಅವಳಿಗೇ ಒಳ್ಳೆಯದು.' ಎಂದರು.

ಧನಿಗಳ ಮಾತಿಗೆ ಎದುರಾಡಲುಂಟಾ ? ಸೇಸಮ್ಮ ಮಾದೇವಿಯನ್ನು ಕರೆದು ವಿಷಯ ತಿಳಿಸಿದಾಗ ಮೊದಲು ಆಕೆ ಪ್ರತಿಭಟಿಸಿದಳು. 'ಇಲ್ಲ ನಾನು ಶಾಲೆಗೆ ಹೋಗಬೇಕು.'

ಎಂದು ಹಟ ಹಿಡಿದಳು. ಆದರೆ ಏಳೆಂಟು ವರ್ಷದ ಪುಟ್ಟ ಹುಡುಗಿ ಎಷ್ಟು ದಿನ ತಾನೇ ಹಟ ಮಾಡಿಯಾಳು ? ಸಾಮ, ದಾನದ ಬಳಿಕ ತಾಯಿ ದಂಡವನ್ನೂ ಪ್ರಯೋಗಿಸಿದಾಗ ಮಗಳ ಪ್ರತಿಭಟನೆ ಕೊನೆಗೊಂಡಿತು. ಸೇಸಮ್ಮ ಮಗಳ ಮನವೊಲಿಸಿ ಭಟ್ಟರ ಮನೆಕೆಲಸಕ್ಕೆ ನಿಯಮಿಸಿದಳು. ಜೊತೆಗೆ ತಾಯಿಯೊಡನೆ ತೋಟದಲ್ಲಿ ಅಡಿಕೆ ಹೆಕ್ಕುವುದಕ್ಕೂ ಹೋಗತೊಡಗಿದಳು.

ಮಾದೇವಿ ಹದಿನಾಲ್ಕು ವರ್ಷ ಪ್ರಾಯದ ದೊಡ್ಡ ಹುಡುಗಿಯಾದಳು. ತಿಳಿಯಾದ ಮೈಬಣ್ಣದ, ದುಂಡು ಮುಖದ ಆ ಹುಡುಗಿ ಸಾಕಷ್ಟು ಚೆಲುವೆಯಾಗಿಯೇ ಇದ್ದಳು. ಅದೊಂದು ಕಾನನದ ಕುಸುಮ. ಪ್ರಾಯಕ್ಕೆ ತಕ್ಕ ಲವಲವಿಕೆ; ಚುರುಕುತನ, ಈಗ ಭಟ್ಟರ ಮನೆಯ ಕಸ, ಮುಸುರೆ, ಬಟ್ಟೆ ಎಲ್ಲ ಕೆಲಸವೂ ಆಕೆಯದು. ಮೈ ಮುರಿದು ದುಡಿದರೂ ಹೊತ್ತಿಗೆ ಸರಿಯಾಗಿ ಹೊಟ್ಟೆತುಂಬ ಅನ್ನ ಇನ್ನಿತರ ತಿಂಡಿ ಎಂದು ಮೂರು ಹೊತ್ತೂ ಹೊಟ್ಟೆತುಂಬಾ ಆಹಾರ ಬೀಳುತ್ತಿದ್ದುದರಿಂದ ಮೈ ಸೊಂಪಾಗಿಯೇ ಬೆಳೆಯಿತು.

ಒಂದು ದಿನ ಬೆಂಗಳೂರಿನಲ್ಲಿ ಕಾಲೇಜಿನಲ್ಲಿ ಓದುತ್ತಿದ್ದ ಭಟ್ಟರ ಕಿರಿಯ ಮಗನು ಬೇಸಿಗೆ ರಜವೆಂದು ಊರಿಗೆ ಬಂದನು. ಆತನು ಚಿಕ್ಕಂದಿನಿಂದಲೂ ಮಾದೇವಿಯನ್ನು ಬಲ್ಲವನು; ಮಾದೇವಿಗೆ ಅಪರಿಚಿತನೇನೂ ಅಲ್ಲ. ಆತನ ಕೋಣೆ ಗುಡಿಸುವುದಕ್ಕೊ, ಒಣ ಬಟ್ಟೆಗಳನ್ನು ತಂದು ಆತನ ಕೋಣೆಯಲ್ಲಿ ಮಡಚಿಡುವುದಕ್ಕೊ ಆಕೆಗೆ ಅಳುಕೇನೂ ಇರಲಿಲ್ಲ. 'ಓ... ಮಾದೇವಿ, ಎಷ್ಟು ದೊಡ್ಡವಳಾಗಿಬಿಟ್ಟೆ?' ಎಂದು ನಗುತ್ತಾ ಆತನೆಂದಾಗ ಆಕೆ ತನ್ನ ಬೆಳ್ಳಗಿನ ಹಲ್ಲು ತೋರಿಸಿ ನಗುತ್ತಾ ಸರಿದು ಹೋಗಿದ್ದಳು.

ಆ ದಿನ ಮಧ್ಯಾಹ್ನ ಆಕೆ ಭಟ್ಟರ ಮನೆ ಕೆಲಸ ಮುಗಿಸಿ ಮನೆಗೆ ಬಂದವಳು ಮಂಚದ ಮೇಲೆ ಮಲಗಿ ಭಟ್ಟರ ಮನೆಯಿಂದ ತಂದಿದ್ದ ಹಳೆಯ ಪತ್ರಿಕೆಯೊಂದರಲ್ಲಿದ್ದ ಕತೆಯನ್ನೋದಲು ಪ್ರಯತ್ನಿಸುತ್ತಿದ್ದಳು. ಸೇಸಮ್ಮ ಬೆಳಿಗ್ಗೆ ತೋಟದ ಕೆಲಸಕ್ಕೆ ಹೋದರೆ ಹಿಂತಿರುಗುವುದು ಸಂಜೆಯೇ. ತಾಯಿ ಮಗಳಿಬ್ಬರ ಊಟವೂ ಭಟ್ಟರ ಮನೆಯಲ್ಲೇ ಕಳೆದುಹೋಗುತ್ತಿತ್ತು.

ಬಾಗಿಲ ಬಳಿ ಸದ್ದಾದಾಗ ಮಾದೇವಿ ಮಲಗಿದಲ್ಲಿಂದಲೇ ಆ ಕಡೆ ತಿರುಗಿದಳು. ಬಾಗಿಲಲ್ಲಿ ನಿಂತಿದ್ದ ಭಟ್ಟರ ಮಗನನ್ನು ಕಂಡಾಕೆ ದಡಬಡಿಸಿ ಎದ್ದು ನಿಂತಳು. ಆತನು ಬಾಗಿಲಲ್ಲೇ ನಿಂತುಕೊಂಡು, 'ಸೇಸಿ ಇಲ್ಲವಾ?' ಎಂದು ಕೇಳಿದನು. 'ಇಲ್ಲ ಅಮ್ಮ ನಮ್ಮ ಸಂಬಂಧಿಕರ ಮನೆಗೆ ಹೋಗಿದ್ದಾರೆ.' ಎಂದಾಕೆ ಬಳಿಕ 'ಚಿಕ್ಕ ಧಣಿ ಈ ಕಡೆ ಬಂದಿದ್ದಿರಾ?' ಎಂದು ಕೇಳಿದಳು.

'ಹುಂ, ತೋಟ ನೋಡಿ ಹೋಗೋಣಾಂತ ಬಂದೆ.' ಎನ್ನುತ್ತಾ ಒಂದಡಿ ಮುಂದಿಟ್ಟನು. 'ಚಿಕ್ಕ ಧಣಿಗೆ ಕುಳಿತುಕೊಳ್ಳಲು ಒಂದು ಕುರ್ಚಿ ಕೂಡಾ ಇಲ್ಲವಲ್ಲಾ ?'

'ಮದುವೆ ?' ಆತನ ಕೈಯಿಂದ ಮೆಲ್ಲಗೆ ಬಿಡಿಸಿ ಕೊಳ್ಳಲು ಪ್ರಯತ್ನಿಸುತ್ತಾ ಕೇಳಿದಳಾಕೆ. 'ನೀವೆಲ್ಲಿ? ನಾವೆಲ್ಲಿ ?... ನಮ್ಮ ಜಾತಿ ?..' 'ಓ... ನೀನಿನ್ನೂ ಯಾವ ಕಾಲದಲ್ಲಿದ್ದೀ ? ನಿನಗೆ ನನ್ನನ್ನು ಮದುವೆಯಾಗಲು ಮನಸ್ಸಿಲ್ಲವಾ?' ಮಾತುಗಳಿಗೆ ಜೇನು ಸವರಿಯೇ ಕೇಳಿದನಾತ. ಸುಂದರನಾದ ಯುವಕನೊಬ್ಬನು ನುಡಿದ ಬಣ್ಣದ ಮಾತುಗಳಿಗೆ, ಘಟ್ಟದ ಸೆರಗಿನ ಹಳ್ಳಿಯ ತೋಟದ ಮೂಲೆಯಿಂದ ಹೊರಪ್ರಪಂಚಕ್ಕೆ ಕಾಲಿಡದ ಹದಿನೈದರ ಮುಗ್ಧ ಬಾಲೆ ಮನಸೋತಳು.

ಎನ್ನುತ್ತಾ ಮುಜುಗರದಿಂದ ನಿಂತಾಗ ಆತನು ಒಳಗೆ ಬಂದು ಮಂಚದ ತುದಿಯಲ್ಲಿ ಕುಳಿತನು. ಚಿಕ್ಕಂದಿನ ಆಟ ಪಾಠಗಳ ಕುರಿತು ಒಂದಷ್ಟು ಹರಟೆ ಹೊಡೆದು ಆತನು ಹೊರಟು ಹೋದನು.

ಆದರೆ ಆತನ ಆಗಮನ ಒಂದು ದಿನಕ್ಕೇ ಕೊನೆಗೊಳ್ಳಲಿಲ್ಲ. ಮೊದಲೆಲ್ಲ ಎರಡು, ಮೂರು ದಿನಕ್ಕೊಮ್ಮೆ ಸುತ್ತಾಡಲು ಬರುತ್ತಿದ್ದವನು ಆ ಮೇಲೆ ದಿನಾಲೂ ಬರತೊಡಗಿದನು. ಆತನ ಬರುವಿಕೆಯಿಂದ ಮಾದೇವಿಗೂ ಸಂತೋಷವೇ ಆಗುತ್ತಿತ್ತು. ಆಕೆ ಆತನೊಡನೆ ಬೆಂಗಳೂರಿನ ಕುರಿತು ಕೇಳಿ ತಿಳಿದುಕೊಳ್ಳುತ್ತಿದ್ದಳು.

ಒಂದು ದಿನ ಬಂದಾತನು ಹೀಗೆಯೇ ಹರಟುತ್ತಾ, ಬೆಂಗಳೂರಿನ ವರ್ಣನೆ ಮಾಡುತ್ತಾ, 'ಮಾದೇವಿ ನೀನೊಮ್ಮೆ ಬೆಂಗಳೂರು ನೋಡಬೇಕು, ಅದು ಸ್ವರ್ಗದಂತಹಾ ಊರು.' ಎಂದನು.

ದಂಗಾಗಿ ಕಣ್ಣರಳಿಸಿ ಆತನ ಮಾತು ಕೇಳುತ್ತಿದ್ದವಳು, 'ಅಯ್ಯ, ನಾನು ಬೆಂಗಳೂರು ನೋಡುವುದಾ?' ಎಂದಳು. ಆಕೆಯ ಮಾತುಗಳಲ್ಲಿದ್ದ ನಿರಾಸಕ್ತಿ ನಿರಾಶೆಯಿಂದ ಕೂಡಿದ್ದನ್ನಾತನು ಗಮನಿಸಿದನು.

'ಹೂಂ... ನೀನೇ, ಯಾಕಾಗಬಾರದು? ನೀನು ಬರುವುದಾದರೆ ನಾನು ಕರೆದೊಯ್ಯುವೆ.'

'ಹಾಂ..' ಆಕೆ ತೆರೆದ ಬಾಯಿ ಮುಚ್ಚುವುದರೊಳಗೆ ಆತನು ಕುಳಿತಲ್ಲಿಂದ ಎದ್ದು ಆಕೆಯ ಕೈ ಹಿಡಿದುಕೊಂಡು, 'ಮಾದೇವಿ, ನೀನೆಷ್ಟು ಚೆಂದ ಇದ್ದೀ? ಬೆಂಗಳೂರಿನಲ್ಲಿ ನಿನ್ನಷ್ಟು ಚೆಂದದ ಹುಡುಗಿಯರು ಯಾರೂ ಇಲ್ಲ!' ಎಂದನು. ಬಳಿಕ ಆಕೆಯನ್ನು ಅಪ್ಪಿಕೊಂಡು ಚುಂಬನದ ಮಳೆಗರೆದನು. ಬಳಿಕ,

'ಮಾದೇವಿ, ನಾನು ನಿನ್ನನ್ನು ಮದುವೆಯಾಗುತ್ತೇನೆ.' ಎಂದನು.

'ಮದುವೆ ?' ಆತನ ಕೈಯಿಂದ ಮೆಲ್ಲಗೆ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಾ ಕೇಳಿದಳಾಕೆ. 'ನೀವೆಲ್ಲಿ? ನಾವೆಲ್ಲಿ ?... ನಮ್ಮ ಜಾತಿ ?..'

'ಓ... ನೀನಿನ್ನೂ ಯಾವ ಕಾಲದಲ್ಲಿದ್ದೀ ? ನಿನಗೆ ನನ್ನನ್ನು ಮದುವೆಯಾಗಲು ಮನಸ್ಸಿಲ್ಲವಾ?' ಮಾತುಗಳಿಗೆ ಜೇನು ಸವರಿಯೇ ಕೇಳಿದನಾತ.

ಸುಂದರನಾದ ಯುವಕನೊಬ್ಬನು ನುಡಿದ ಬಣ್ಣದ ಮಾತುಗಳಿಗೆ, ಘಟ್ಟದ ಸೆರಗಿನ ಹಳ್ಳಿಯ ತೋಟದ ಮೂಲೆಯಿಂದ ಹೊರಪ್ರಪಂಚಕ್ಕೆ ಕಾಲಿಡದ ಹದಿನೈದರ ಮುಗ್ಧ ಬಾಲೆ ಮನಸೋತಳು. ಈ ಹಳ್ಳಿಯಿಂದ ಬೆಂಗಳೂರಿನ ಸ್ವರ್ಗಕ್ಕೆ ತನ್ನನ್ನು ಕರೆದೊಯ್ದು ಮದುವೆಯಾಗುವುದಾದರೆ ಯಾಕಾಗಬಾರದು? ಮನಸೋತ ಬಾಲೆ ಮೈಯನ್ನೂ ನೀಡಿದಳು.

ಆತನು ಊರಿನಲ್ಲಿ ಇದ್ದಷ್ಟು ದಿನ ಮಧ್ಯಾಹ್ನದ ಹೊತ್ತಿನಲ್ಲಿ ಆಕೆಯ ಬಳಿ ಬಂದು ಆಕೆ ನೀಡಿದ ಮೃಷ್ಟಾನ್ನ ಭೋಜನವನ್ನು ನಿರಾತಂಕವಾಗಿ ಉಂಡು ತೇಗಿದನು. ಕೊನೆಯ ದಿನ, 'ನಾನು ಬೆಂಗಳೂರಿಗೆ ಹೋಗಿ ಎಲ್ಲಾ ಏರ್ಪಾಟು ಮಾಡಿ ನಿನ್ನನ್ನು ಕರೆದೊಯ್ಯುವೆ, ಅವರೆಗೆ ಯಾರಲ್ಲೂ ಬಾಯಿ ಬಿಡಬೇಡ.' ಎಂದು ತಾಕೀತು ಮಾಡಿ ಹೊರಟು ಹೋದನು.

ವೈಶಾಖದ ಕಾದ ನೆಲದಲ್ಲಿ ಬಿತ್ತಿದ ಬೀಜ ಮೊದಲ

ಮಳೆಗೇ ಚಿಗುರೊಡೆಯತೊಡಗಿತ್ತು. ಕೆಲ ದಿನಗಳಿಂದಲೂ ಮಗಳು ಮಂಕಾಗಿದ್ದುದನ್ನು ಸೇಸಮ್ಮನೂ ಗಮನಿಸಿದ್ದಳು. 'ಮಾದೇವಿಗೆ ಹದಿನೈದಾಯಿತು. ಎಲ್ಲಾದರೊಂದು ಗಂಡು ನೋಡಿ ಮದುವೆ ಮಾಡಿ ಬಿಡಬೇಕು.' ಎಂದಾಕೆ ತನ್ನ ಗುರುತಿನ ಕೆಲವು ಗಂಡು ಹುಡುಗರ ಕುರಿತು ಚಿಂತಿಸತೊಡಗಿದಾಗಲೇ ಮಗಳು ವಾಂತಿ ಮಾಡಲಾರಂಭಿಸಿದಳು. ಈಗ ಸೇಸಮ್ಮ ಕಣ್ಣರಳಿಸಿ ಮಗಳನ್ನು ನೋಡಿದವಳೇ ಹುಚ್ಚಿಯಂತೆ ಅಂಗಳದಿಂದ ಬೆತ್ತದ ತುಂಡೊಂದನ್ನು ಹೆಕ್ಕಿ ತಂದು ಭದ್ರಕಾಳಿಯಂತೆ ಮಗಳ ಬಳಿ ಬಂದು ಕಿರುಚಲಾರಂಭಿಸಿದಳು. 'ಹೇಳು, ಇನ್ನೂ ಹದಿನೈದು ತುಂಬಿಲ್ಲ. ಆಗಲೇ ನಿನಗೆ ಅವಸರವಾಯಿತೇ? ಯಾರಾತ? ಹೇಳು... ಹೇಳು..' ಎನ್ನುತ್ತಾ ಮಗಳ ಬೆನ್ನಿಗೆ ಬಾರಿಸತೊಡಗಿದಳು. ತಲೆ ಕೂದಲು ಹಿಡಿದೆಳೆದು ಆಕೆಯ ತಲೆಯನ್ನು ಗೋಡೆಗೆ ಗಟ್ಟಿಸಿದಳು. ಅನಿರೀಕ್ಷಿತವಾದ ಈ ಆಕ್ರಮಣದಿಂದ ಮಾದೇವಿ ನೆಲಕ್ಕುರುಳಿದಳು.

ಈಗ ಸೇಸಮ್ಮನ ಬುದ್ಧಿ ಸ್ಥಿಮಿತಕ್ಕೆ ಬಂತು. 'ಅಯ್ಯೊ ಮಗಳೇ, ನಿನಗೆ ಈ ಗತಿಯಾಯಿತೇ?' ಎಂದು ಅಳುತ್ತಾ ಮಗಳ ಮುಖಕ್ಕೆ ತಣ್ಣೀರು ಚಿಮುಕಿಸಿ ಆಕೆಯ ತಲೆಯನ್ನೆತ್ತಿ ತನ್ನ ತೊಡೆಯ ಮೇಲಿಟ್ಟುಕೊಂಡಳು. 'ಹೇಳು ಮಗಾ, ನಿನಗೆ ಮೋಸ ಮಾಡಿದವರಾರು ?' ಎಂದು ಕಣ್ಣೀರು ಸುರಿಸುತ್ತಾ ಮೃದುವಾಗಿಯೇ, ಬಿಕ್ಕುತ್ತಾ ಕೇಳಿದಳು.

ಮಾದೇವಿ ಬಿಕ್ಕುತ್ತಾ ನಡೆದುದನ್ನು ತಾಯಿಗೆ ತಿಳಿಸಿ, 'ಅವರು ನನ್ನನ್ನು ಬೆಂಗಳೂರಿಗೆ ಕರೆದೊಯ್ದು ಮದುವೆಯಾಗುತ್ತಾರೆ'. ಎನ್ನುತ್ತಿದ್ದಂತೆ ಸೇಸಮ್ಮ ಸಿಡಿದೆದ್ದಳು.

'ಆತ ಹೇಳಿದ್ದನ್ನು ನೀನು ನಂಬಿದೆಯಾ ? ಇದೇನಾದರೂ ದೊಡ್ಡ ದನಿಗಳ ಕಿವಿಗೆ ಬಿದ್ದರೆ ನಾವಿಬ್ಬರೂ ಬದುಕಿ ಉಳಿಯುತ್ತೇವಾ? ನಿನಗಿಷ್ಟೂ ಬುದ್ಧಿ ಇಲ್ಲದೆ ಹೋಯಿತಲ್ಲಾ?' ಎನ್ನುತ್ತಾ ಎದೆ ಬಡಿದುಕೊಂಡು ಅಳುತ್ತಾ ಭಟ್ಟರ ಮಗನಿಗೆ ಹಿಡಿಶಾಪ ಹಾಕಿ ನೆಲಕ್ಕೆ ಕೈ ಬಡಿದಳು. ಭಟ್ಟರ ಭಯದಿಂದ ಸೇಸಮ್ಮ ಈ ವಿಷಯವನ್ನು ಹೊರ ಹಾಕಲೇ ಇಲ್ಲ.

ಮರುದಿನದಿಂದ ಆಕೆ ಭಟ್ಟರ ಮನೆಗೆಲಸಕ್ಕೆ ತಾನೇ ಹೋಗತೊಡಗಿದಳು. 'ಮಾದೇವಿಗೆ ಮೈ ಹುಷಾರಿಲ್ಲ, ಅವಳನ್ನು ಪಂಡಿತರ ಹತ್ತಿರ ಕರೆದೊಯ್ಯಬೇಕು' ಎಂದು ಭಟ್ಟರ ಹೆಂಡತಿಯೊಡನೆಂದಳು. ಆದರೆ ಆಕೆ ಯಾವ ಪಂಡಿತರ ಬಳಿಯೂ ಮಗಳನ್ನು ಕರೆದೊಯ್ಯಲಿಲ್ಲ. ಹೀಗಾದಾಗ ತಮ್ಮ ಬಳಗದ ಓರ್ವ ಹೆಣ್ಣು ಮಗಳು ಪಂಡಿತರ ಬಳಿ ಹೋಗಿ ಔಷಧ ತೆಗೆದುಕೊಂಡು ಪ್ರಾಣ ಕಳೆದುಕೊಂಡದ್ದು ಆಕೆಯ ನೆನಪಿನ ಪರದೆಯಿಂದ ಮಾಯವಾಗಿರಲಿಲ್ಲ. ರಕ್ತಸಂಬಂಧಿಗಳೆಂದು ಯಾರೂ ಇಲ್ಲದಿದ್ದ ಆಕೆಗೆ ಮಗಳು ಬದುಕಿ ಉಳಿಯುವುದು ಮುಖ್ಯವಾಗಿತ್ತು. ಭಟ್ಟರ ಮಗ ಬಂದಾನೆಂದು ಹಗಲಿರುಳೂ ದಾರಿ ನೋಡುತ್ತಾ ಎದೆಯಾಳದ ಆಶಾ ಜ್ಯೋತಿಗೆ ಭರವಸೆಯ ಎಣ್ಣೆ ಹೊಯ್ಯುತ್ತಾ ದಿನ ನೂಕಿದ ಆಕೆ ಕೊನೆಗೊಮ್ಮೆ ಸುಂದರವಾದ ಹೆಣ್ಣುಮಗುವಿಗೆ ಜನ್ಮ ನೀಡಿದಳು.

ವಿಷಯ ತಿಳಿದ ಭಟ್ಟರ ಹೆಂಡತಿ, 'ಈ ಜಾತಿಗಳ ಹಣೆಬರಹವೇ ಇಷ್ಟು. ಇವುಗಳಿಗೆ ನೀತಿ, ನಿಯಮ ಏನೂ ಇಲ್ಲ. ಹರೆಯ ಬಂದೊಡನೆ ಕಂಡವರಿಗೆ ಸೆರಗು ಹಾಸುತ್ತವೆ' ಎನ್ನುತ್ತಾ ಸೇಸಮ್ಮನೊಡನೆ, 'ಅಲ್ಲ ಮಗಳು ಇಂತಹ ಕೆಲಸ ಮಾಡುವಾಗ ನೀನೇನು ಸತ್ತು ಹೋಗಿದ್ದೆಯಾ ? ಅಥವಾ ನೀನೇ ಹಣಕ್ಕಾಗಿ ಮಗಳನ್ನು ಮಾರಿದೆಯಾ ?' ಎಂದು ಚುಚ್ಚಿದಳು.

ಸೇಸಮ್ಮ ನಿರುತ್ತರ. ಮನದಾಳದಲ್ಲಿ ಸಂಕಟದ, ನೋವಿನ ಅಲೆಗಳು ಎದ್ದೆದ್ದು ಬೀಳುತ್ತಿದ್ದರೂ ತನ್ನಾಳದ ನೋವನ್ನು 'ನಿಮ್ಮ ಮಗ' ಎಂಬ ಒಂದು ಮಾತಿನಿಂದ ಹೊರಹಾಕಿ ಪರಿಣಾಮವನ್ನೆದುರಿಸುವ ಧೈರ್ಯ ಆಕೆಗಿರಲಿಲ್ಲ. ಇದು ಶತಮಾನ ಗಳಿಂದಲೂ ಅನುಭವಿಸು ತ್ತಿರುವ ಅವಮಾನ ತಾನೇ ? ಕಣ್ಣೊರೆಸಿಕೊಳ್ಳುತ್ತಾ ಮನೆ ಸೇರಿದ ಸೇಸಮ್ಮ ಮೌನವಾಗಿ ಕಣ್ಣೀರು ಸುರಿಸಿ ದಂತದ ಬೊಂಬೆಯಂತಿದ್ದ ಮಗುವನ್ನು ಬಿರುಗಣ್ಣಿನಿಂದ ನೋಡುತ್ತಾ ಮಗಳ ಬಳಿ ಕುಳಿತಳು.

* * *

ಮಾದೇವಿ ಈಗ ತನ್ನ ಮೂರು ವರ್ಷದ ಮಗಳನ್ನೆತ್ತಿಕೊಂಡು ತೋಟ ಮತ್ತು ಗದ್ದೆಯ ಕೆಲಸಕ್ಕೆ ಹೋಗುತ್ತಾಳೆ. ಆಕೆ ಕೆಲಸ ಮಾಡುವಾಗ ಮಗಳು ಅಲ್ಲೆ ಮಣ್ಣಿನಲ್ಲೂ ನೀರಿನಲ್ಲೂ ಆಟವಾಡಿಕೊಳ್ಳುತ್ತಾಳೆ. ಮಾದೇವಿ ಆಗಾಗ ತನ್ನ ಕೆಲಸದಿಂದ ತಲೆ ಎತ್ತಿ 'ಪುಟ್ಟೀ' ಎಂದು ಮಗಳನ್ನು ಕರೆದು ಅವಳ ಇರವನ್ನು ಖಚಿತಪಡಿಸಿಕೊಂಡು ತನ್ನ ಕೆಲಸ ಮುಂದುವರಿಸುತ್ತಾಳೆ. ತಪ್ಪಿಯೂ ಭಟ್ಟರ ಮನೆಯ ಕಡೆ ಸುಳಿಯಲಿಲ್ಲ.

ಆ ದಿನ ಆಕೆ ಕೆಲಸ ಮಾಡುತ್ತಿದ್ದಂತೆ ಪುಟ್ಟಿ ಆಡುತ್ತಾ ಗದ್ದೆಯ ಮೂಲೆಯ ಕೊಳದ ಬಳಿ ಬಂದು ಕಾಲು ಜಾರಿ ಕೊಳದಲ್ಲಿ ಬಿದ್ದಳು. ಅದೇ ಕ್ಷಣದಲ್ಲಿ ಆ ದಾರಿಯಾಗಿ ಹೋಗುತ್ತಿದ್ದ ತೆಂಗಿನ ಕಾಯಿ ವ್ಯಾಪಾರಿ ಈಸುಬು, ಮಗು ಕೊಳದಲ್ಲಿ ಬೀಳುವುದನ್ನು ನೋಡಿದವನೇ ತನ್ನ ಕೈಯಲ್ಲಿದ್ದ ಗೋಣಿ ಚೀಲವನ್ನು ಕೆಳಗಿಟ್ಟು ಕೊಳದಲ್ಲಿ ಹಾರಿ ಮಗುವನ್ನೆತ್ತಿಕೊಂಡು ಮೇಲೆ ಬಂದನು. 'ಪುಟ್ಟೀ' ಎಂದು ಕೂಗಿದ ಮಾದೇವಿ ಈಸುಬು ಕೊಳದಿಂದ ಹೊರ ಬರುವುದನ್ನು ಕಂಡವಳೇ, 'ಅಯ್ಯೋ, ನನ್ನ ಮಗೂ..' ಎನ್ನುತ್ತಾ ಓಡೋಡಿ ಬಂದಳು. ಈಸುಬು ಮಗುವನ್ನು ಕವುಚಿ ಮಲಗಿಸಿ ಅದರ ಹೊಟ್ಟೆಸೇರಿದ್ದ ನೀರನ್ನು ವಾಂತಿ ಮಾಡಿಸಿದನು. 'ಏನಮ್ಮಾ, ಇಷ್ಟು ಚಿಕ್ಕ ಮಗುವನ್ನು ಕೊಳದ ಬಳಿ ಬಿಡುವುದೇ? ಏನು, ಮಕ್ಕಳು ಜಾಸ್ತಿಯಾಗಿದಾ? ನಾನು ನೋಡಿದ್ದಕ್ಕಾಯಿತು. ಇಲ್ಲದಿದ್ದರೇ...' ಎಂದಾಗ ಮಾದೇವಿ ಕಣ್ಣೊರೆಸಿಕೊಂಡು ಮಗುವನ್ನೆತ್ತಿ ಹೆಗಲ ಮೇಲೆ ಹಾಕಿಕೊಂಡಳು. ಈಗ ಈಸುಬು ಮಾದೇವಿಯನ್ನು ಸಮನಾಗಿ ನೋಡಿದನು. ಸುಂದರಿಯಾದ ಹದಿಹರೆಯದ ಹೆಣ್ಣು ಮಗಳು ಮಾಸಿದ ಸೀರೆಯುಟ್ಟು ಸೆರಗನ್ನು ರವಕೆ ಇಲ್ಲದ ಮೈಮೇಲೆ ಹೊದ್ದುಕೊಂಡಿದ್ದಳು. 'ನಿಮ್ಮಿಂದಾಗಿ ನನ್ನ ಮಗು... ಉಳಿಯಿತು' ಎಂದು ಗದ್ಗದಿತಳಾಗಿ ನುಡಿದು ತನ್ನ ಮನೆ ಕಡೆಗೆ ಹೆಜ್ಜೆ ಹಾಕಿದಳು.

ಈಸುಬು ಆಗಾಗ ತೆಂಗಿನಕಾಯಿ ಖರೀದಿಸಲು ಆ ಹಾದಿಯಾಗಿ ಬರುತ್ತಿದ್ದರೂ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಹೆಂಗಸರನ್ನು ವಿಶೇಷ ಮುತುವರ್ಜಿಯಿಂದ ಗಮನಿಸಿದವನಲ್ಲ. ಈ ದಿನವೂ ಮಗು ಕೊಳದಲ್ಲಿ ಬೀಳದಿದ್ದಿದ್ದರೆ ಆತನು ಮಾದೇವಿಯನ್ನು ಗಮನಿಸುತ್ತಲೂ ಇರಲಿಲ್ಲ. ಆದರೆ ಆಕೆಯನ್ನೊಮ್ಮೆ ಕಂಡ ಬಳಿಕ ಯುವಕನಾದ ಆತನಿಗೆ ಆಕೆಯನ್ನು ಮತ್ತೆ ಮತ್ತೆ ನೋಡಬೇಕೆನ್ನಿಸಿತ್ತು.

ಈಗ ದಿನಾಲೂ ಆ ದಾರಿಯಾಗಿ ಬರುವುದು ಆತನಿಗೊಂದು ಹವ್ಯಾಸವೇ ಆಗಿತ್ತು. ಹಾಗೆ ಬಂದಾಗೊಮ್ಮೆ ಮಾದೇವಿ ಆತನೆಡೆಗೆ ಪರಿಚಯದ ನಗೆ ಬೀರುತ್ತಿದ್ದಳು. ತನ್ನ ಮಗುವನ್ನು ಬದುಕಿಸಿದಾತನೆಡೆಗೆ ವಿಶೇಷ ಒಲವು. ಮಗುವೂ ಆತನನ್ನು 'ಅಣ್ಣಾ' ಎಂದು ಕರೆಯುತ್ತಿದ್ದಳು.

ಪರಿಚಯ ಸ್ನೇಹವಾಗಲು ಹೆಚ್ಚು ದಿನಗಳೇನೂ ಬೇಕಾಗಲಿಲ್ಲ. ಮಳೆ ಹನಿಗಾಗಿ ಕಾದ ನೆಲ. ಸ್ನೇಹ ನಟಿಸಿ, ಮಾತುಗಳಲ್ಲಿ ಜೇನಿನ ಹೊಳೆ ಹರಿಸಿ ಕೈಗೊಂದು ಮಗುವನ್ನು ನೀಡಿ ಮಾಯವಾದಾತನಿಂದ ಆಕೆಯ ಹೃದಯಕ್ಕೆ ಬಹಳ ದೊಡ್ಡ ಗಾಯವೇ ಆಗಿತ್ತು. ಕಾಲ ಎಂತಹ ಗಾಯವನ್ನೂ ಮಾಗಿಸುತ್ತದಲ್ಲ? ಸ್ನೇಹದ ಒಂದೆರಡು ನಲ್ನುಡಿಗಾಗಿ ಬಾಯಾರಿದ್ದ ಮಾದೇವಿ ಈ ಸ್ನೇಹ ಹಸ್ತಕ್ಕೆ ಕೈ ಚಾಚಿದಳು. ಆತನೆಂದೂ ಆಕೆಯ ಮನೆಯ ಕಡೆ ಹೆಜ್ಜೆ ಹಾಕಲಿಲ್ಲ. ಅತ್ತಿತ್ತ ಹೋಗಿ ಬರುವಾಗಲೊಮ್ಮೆ ಒಂದೆರಡು ಮಾತುಗಳು; ಪರಿಚಯದ ಮುಗುಳ್ನಗೆ. ಬಹಳ ಬೇಗನೆ ಸಂಭಾಷಣೆ ದೀರ್ಘವಾಯಿತು. ಮಾದೇವಿಯ ಇತಿಹಾಸ ಆತನೆದುರು ಬಿಚ್ಚಿಕೊಂಡಿತು.

ಮುಂದೊಂದು ದಿನ ಆತ ಕೇಳಿಯೇ ಬಿಟ್ಟ 'ನನ್ನ ಮನೆಗೆ ಬರುವೆಯಾ, ನನ್ನ ಹೆಂಡತಿಯಾಗಿ?'

ಮಾದೇವಿಯ ಇತಿಹಾಸ ಆತನೆದುರು ಬಿಚ್ಚಿಕೊಂಡಿತು. ಮುಂದೊಂದು ದಿನ ಆತ ಕೇಳಿಯೇ ಬಿಟ್ಟ, 'ನನ್ನ ಮನೆಗೆ ಬರುವೆಯಾ, ನನ್ನ ಹೆಂಡತಿಯಾಗಿ?' ಅನಿರೀಕ್ಷಿತವಾಗಿ ಬಂದ ಈ ಮಾತಿನಿಂದ ಮೊದಲೊಮ್ಮೆ ಆಕೆ ಬೆಚ್ಚಿ, ಮುಖ, ತುಟಿ ಬಿಳಿಚಿಕೊಂಡರೂ ಕೂಡಲೇ ಮುಖ ಆರಕ್ತವಾಯಿತು. ಕಣ್ಣುಗಳು ಮಿಂಚಿದುವು.

ಅನಿರೀಕ್ಷಿತವಾಗಿ ಬಂದ ಈ ಮಾತಿನಿಂದ ಮೊದಲೊಮ್ಮೆ ಆಕೆ ಬೆಚ್ಚಿ, ಮುಖ, ತುಟಿ ಬಿಳಿಚಿಕೊಂಡರೂ ಕೂಡಲೇ ಮುಖ ಆರಕ್ತವಾಯಿತು. ಕಣ್ಣುಗಳು ಮಿಂಚಿದುವು. ತುಟಿಯಲ್ಲಿ ಮಂದಹಾಸ ಅರಳಿ ಆಕೆ ನಿಂತಲ್ಲಿಂದ ಕಾಲ್ತೆಗೆದು ಮಗಳನ್ನೆತ್ತಿಕೊಂಡು ಒಮ್ಮೆ ಹಿಂತಿರುಗಿ ಆತನನ್ನು ನೋಡಿ ತನ್ನ ಮನೆ ಕಡೆಗೆ ಹೆಜ್ಜೆ ಹಾಕಿದಳು.

ಮನೆಗೆ ಬಂದವಳೇ ಮಾದೇವಿ. ಚಾಪೆ ಹಾಸಿ ಮಲಗಿದಳು. ತಲೆ ತುಂಬಾ ಈಸುಬುನ ಮಾತುಗಳು ಗುಂಯಿಗುಡುತ್ತಿದ್ದುವು. ಸೇಸಮ್ಮ ದಿನಕ್ಕೊಂದು ಬಾರಿಯಾದರೂ, 'ನೀನಿಂತ ಕೆಲಸ ಮಾಡದಿದ್ದಿದ್ದರೆ ನಿನ್ನ ಮದುವೆಯಾಗಿ ನೀನು ಗಂಡನೊಡನಿರುತ್ತಿದ್ದೆ' ಎಂದು ನಿಟ್ಟುಸಿರಿಡುತ್ತಿದ್ದಳು. ಮಗು ಹುಟ್ಟಿದ ಬಳಿಕ ಬಳಗದ ಗುರಿಕಾರ ಬಂದು ತಾಯಿ ಮಗಳಿಬ್ಬರನ್ನೂ ಬೈದು ಹಂಗಿಸಿ ಜಾತಿಯಿಂದ ಬಹಿಷ್ಕಾರ ಹಾಕಿದ್ದರಿಂದ ಬಳಗದವರೂ ದೂರವಾಗಿದ್ದರು. ತಾಯಿ ಮಗಳಿಬ್ಬರೂ ಮೂಕ ಸಂಕಟ ಅನುಭವಿಸುತ್ತಿದ್ದರು. ಮಗುವಿನಿಂದ ಮಾತ್ರ ಮನೆಯ ಮೌನ ಮುರಿಯುತ್ತಿತ್ತು. ತಮ್ಮ ಸುತ್ತಲೂ ಎತ್ತರವಾದ ಗೋಡೆಯೆದ್ದಂತೆ, ಬಂಧನದಂತಿದ್ದ ಬದುಕಿಗೆ ಈಗ ಈಸುಬುನ ಮಾತುಗಳು ಆ ಗೋಡೆಗೊಂದು ಬಾಗಿಲಾದಂತೆ ಕಂಡಿತವಳಿಗೆ. 'ಹೌದು, ಯಾಕಾಗಬಾರದು? ಆತನಂತೆ ನಂಬಿಸಿ ಕೊರಳು ಕೊಯ್ಯಲಿಲ್ಲವಲ್ಲಾ? ಮನೆಗೆ ಬರುತೀಯಾ ಎಂದು ನೇರವಾಗಿಯೇ ಕೇಳಿದ್ದಾನೆ. ಇಲ್ಲಿ ಹೀಗೆ ಕೊಳೆಯುವುದಕ್ಕಿಂತ ಅದಾದರೂ ಆದೀತು.'

ನಿರ್ಧಾರ ತಳೆಯಲು ಆಕೆ ಹೆಚ್ಚು ವೇಳೆಯನ್ನೇನೂ ತೆಗೆದುಕೊಳ್ಳಲಿಲ್ಲ. ಮಗಳು ತನ್ನೊಡನಿರುತ್ತಾಳೆ ಎಂಬುದೊಂದೇ ಶರ್ತ ಆಕೆಯದು. ಆ ದಿನ ಸೇಸಮ್ಮ ಮನೆಗೆ ಬಂದು ಭಟ್ಟರ ಮಗನ ಮದುವೆ ನಿಶ್ಚಯವಾದ ಸುದ್ದಿ ಹೇಳಿದಾಗ ಮಾದೇವಿಯ ನಿರ್ಧಾರ ಗಟ್ಟಿಗೊಂಡಿತು. ಒಂದೆರಡು ದಿನಗಳಲ್ಲಿ ಭತ್ತದ ಕೊಯ್ಲು ಆರಂಭವಾಗುತ್ತದೆ. ಕೊಯ್ಲಿಗೆ ನಿನ್ನನ್ನೂ ಕರೆದುಕೊಂಡು ಬರಬೇಕೆಂದಿದ್ದಾರೆ ಭಟ್ಟರು. ಮದುವೆಗೆ ಮೊದಲು ಕೊಯ್ಲಿನ ಕೆಲಸವಾಗಬೇಕಂತೆ.' ಸೇಸಮ್ಮ ಹೇಳುತ್ತಾ ಹೋದಳು. ಮಾದೇವಿ ಉಗುಳು ನುಂಗಿಕೊಂಡಳು.



ತಮ್ಮ ಸುತ್ತಲೂ ಎತ್ತರವಾದ ಗೋಡೆಯೆದ್ದಂತೆ, ಬಂಧನದಂತಿದ್ದ ಬದುಕಿಗೆ ಈಗ ಈಸುಬುನ ಮಾತುಗಳು ಆ ಗೋಡೆಗೊಂದು ಬಾಗಿಲಾದಂತೆ ಕಂಡಿತವಳಿಗೆ.

ಮರುದಿನ ಸೇಸಮ್ಮ ಹೋದ ಬಳಿಕ ಮಾದೇವಿ ಮಗಳನ್ನೆತ್ತಿಕೊಂಡು ಹೊರಟಳು. ಎಂದಿನಂತೆ ಈಸುಬು ಆ ದಾರಿಯಾಗಿ ಬಂದಾತನು ಮಾದೇವಿಯನ್ನು ಕಂಡೊಡನೆ, 'ಏನು ತೀರ್ಮಾನ ಮಾಡಿದೆ?' ಎಂದು ನೇರವಾಗಿಯೇ ಕೇಳಿದನು. 'ನಡೆಯಿರಿ ಹೋಗೋಣ' ಎಂದಾಕೆ ಆತನೊಡನೆ ಹೆಜ್ಜೆ ಹಾಕಿದಳು. ಆತನ ತಾಯಿಯೂ ವಿರೋಧ ಸೂಚಿಸದೆ ಈ ತಾಯಿ ಮಗಳನ್ನು ಬರಮಾಡಿಕೊಂಡಳು.

ವಿಷಯ ತಿಳಿದ ಈಸುಬುನ ನೆರೆಮನೆಯವರೊಬ್ಬರು ಆತನನ್ನು ಕರೆದು, 'ನೀನು ಆ ಹುಡುಗಿಯನ್ನು ಹೀಗೆಯೇ ಮನೆಯಲ್ಲಿಟ್ಟುಕೊಳ್ಳಬಾರದು. ಮಾಡಬೇಕಾದ ಕೆಲಸವನ್ನು ಕಾನೂನಿನ ಮುಖಾಂತರವೇ ಮಾಡು. ಕಾಸರಗೋಡಿನ ವಕೀಲರ ಮನೆಗೆ ಹೋಗಿ ವಿಚಾರಿಸು.' ಎಂದು ಸಲಹೆ ನೀಡಿದರು.

ಮರುದಿನ ಈಸುಬು ಮಾದೇವಿ ಮತ್ತು ಮಗಳನ್ನು ಕರೆದುಕೊಂಡು ನಮ್ಮ ಮನೆಗೆ ಬಂದವನು ಅವಳನ್ನು ನಮ್ಮ ಮನೆಯ ಬಳಿ ಬಿಟ್ಟು ಸಾಯಂಕಾಲ ನನ್ನ ತಂದೆ ನ್ಯಾಯಾಲಯದಿಂದ ಬರುವ ಹೊತ್ತಿಗೆ ನಮ್ಮ ಮನೆಗೆ ಬಂದು ತಂದೆಗೆ ವಿಷಯ ತಿಳಿಸಿದನು. ಓರ್ವರು ತಮ್ಮ ಧರ್ಮ ಬದಲಾಯಿಸಲು ಸರಕಾರದ ಅನುಮತಿ ಪಡೆದುಕೊಳ್ಳಬೇಕು. ಆ ಕುರಿತು ಮ್ಯಾಜಿಸ್ಟ್ರೇಟರಿಗೆ ಅರ್ಜಿ ಸಲ್ಲಿಸಬೇಕೆಂದು ಸಲಹೆ ನೀಡಿದರು ಅವರು.

ಮರುದಿನ ಅವರು ಮಾದೇವಿಯನ್ನು ಕರೆದು, 'ನಿನ್ನನ್ನು ಯಾರಾದರೂ ಒತ್ತಾಯ ಮಾಡುತ್ತಿದ್ದಾರಾ? ನೀನು ಸ್ವಂತ ಇಚ್ಛೆಯಿಂದ ತಾನೇ ನಿನ್ನ ನಂಬಿಕೆಯನ್ನು ಬದಲಾಯಿಸಿಕೊಳ್ಳುತ್ತಿರುವುದು ? ಅಥವಾ ಯಾರಾದರೂ ಹಣ ಕೊಡುತ್ತೇನೆಂದೇನಾದರೂ ಹೇಳಿದ್ದಾರಾ?' ಎಂದು ವಿವರವಾಗಿ ಕೇಳಿದರು. ಮಾದೇವಿ, 'ಇಲ್ಲ ಧನಿಗಳೇ, ಹಾಗೇನೂ ಇಲ್ಲ. ನಾನು ಸ್ವಂತ ಇಚ್ಛೆಯಿಂದಲೇ ಬಂದಿದ್ದೇನೆ' ಎಂದಳು ಕಣ್ಣೊರೆಸಿಕೊಳ್ಳುತ್ತಾ. ವಕೀಲರು ಅರ್ಜಿ ಫಾರ್ಮಿಗೆ ಅವಳ ಸಹಿ ಹಾಕಿಸಿಕೊಂಡು ಕಛೇರಿಗೆ ಹೊರಟು ಹೋದರು.

ಸಂಜೆಯಾಗುತ್ತಿದ್ದಂತೆ ನೆರೆಕರೆಯಲ್ಲಿ ಸುದ್ದಿ ಹಬ್ಬಿತು. 'ವಕೀಲರ ಮನೆಗೆ ಯಾರೊ ಒಬ್ಬ ಹೆಂಗಸು ಮತಾಂತರಗೊಳ್ಳಲು ಬಂದಿದ್ದಾಳೆ'.

ರಾತ್ರಿ ಎಂಟು ಗಂಟೆಗೆ ನಮ್ಮ ಮನೆಯ ಮುಂದೆ ಪೊಲೀಸ್ ಜೀಪೊಂದು ಬಂದು ನಿಂತಿತು. ಅದರಿಂದ ಇನ್ಸ್‌ಪೆಕ್ಟರ್ ಒಬ್ಬರು ಕೆಳಗಿಳಿದು ಬಂದು ನನ್ನ ತಂದೆಯೊಡನೆ, 'ನಿಮ್ಮ ಮನೆಗೆ ಓರ್ವ ಹುಡುಗಿ ಬಂದಿದ್ದಾಳಂತೆ. ನಮಗೆ ದೂರು ಬಂದಿದೆ. ನಾವು ಆಕೆಯೊಡನೆ ಮಾತನಾಡಬೇಕಾಗಿದೆ' ಎಂದರು. 'ಓ ಅದಕ್ಕೇನು?' ಎನ್ನುತ್ತಾ ಅವರು ಮಾದೇವಿಯನ್ನು ಕರೆದು ಇನ್ಸ್‌ಪೆಕ್ಟರಿಗೆ ಪರಿಚಯಿಸಿದರು. ಆತನು, 'ಸರ್, ನಾವೀಗ ಈಕೆಯನ್ನು ಸ್ಟೇಶನ್ನಿಗೆ ಕೊಂಡೊಯ್ಯುತ್ತೇವೆ. ಕೊಂಚ ವಿಚಾರಣೆ ನಡೆಸಿ ನಾಳೆ ಬೆಳಿಗ್ಗೆ ಕರೆದುಕೊಂಡು ಬರುತ್ತೇವೆ.' ಎಂದನು. 'ಸರಿ ಹಾಗೇ ಮಾಡಿ'. ವಕೀಲರೆಂದರು. ಅವರು ಮಾದೇವಿ ಮತ್ತು ಮಗಳನ್ನು ಜೀಪಿನಲ್ಲಿ ಕರೆದೊಯ್ದರು.

ಮರುದಿನ ಬೆಳಿಗ್ಗೆ ಎಂಟು ಗಂಟೆಗೆಲ್ಲಾ ಪೊಲೀಸರು ಆಕೆಯನ್ನು ಕರೆದುಕೊಂಡು ಬಂದು ನಮ್ಮ ಮನೆಯಲ್ಲಿ ಬಿಟ್ಟು ಹೋದರು. ಮಾದೇವಿಯೊಡನೆ ವಿಚಾರಿಸಿದಾಗ,

'ಇನ್ನೇನಿಲ್ಲ, ರಾತ್ರಿಯೆಲ್ಲಾ ನನ್ನೊಡನೆ, ನೀನು ಮತಾಂತರ ಮಾಡಿಕೊಳ್ಳುವುದು ಬೇಡವೆಂದು ಇನ್ನಿಲ್ಲದಂತೆ ಪುಸಲಾಯಿಸಿದರು. 'ನಿನಗೆ ಒಪ್ಪಿಗೆಯಾಗುವಂತಹ ಹುಡುಗನನ್ನು ತಂದು ನಾವು ಮದುವೆ ಮಾಡಿಸುತ್ತೇವೆ. ಈ ಮಗುವಿನ ತಂದೆಯನ್ನೇ ಕರೆಸಿ ನಿನಗೆ ಪರಿಹಾರ ಕೊಡಿಸುತ್ತೇವೆ. ಅವನಿಂದಲೇ ನಿನ್ನ ಮದುವೆ ಮಾಡಿಸುತ್ತೇವೆ.' ಎಂದೆಲ್ಲಾ ಹೇಳಿದರು. ಅದೆಲ್ಲ ಆಗದ ಹೋಗದ ಮಾತೂಂತ ನನಗೆ ಗೊತ್ತಿಲ್ಲವಾ? ಬೆಳಗ್ಗಿನವರೆಗೂ ಅವರು ನನ್ನ ಮನಸ್ಸು ಬದಲಾಯಿಸಲು ಪ್ರಯತ್ನಿಸಿದರು. ಕೊನೆಗೂ ನಾನು ಒಪ್ಪಿಕೊಳ್ಳದಿದ್ದಾಗ ಅವರು, 'ಅಬ್ಬ ಈ ಹೆಂಗಸನ್ನು ಏನೊ ಮಾಡಿ ಬಿಟ್ಟಿದ್ದಾರೆ. ಏನೊ ಮದ್ದು ಹಾಕಿದ್ದಾರೇನೊ.' ಎಂದು ಪೊಲೀಸನೊಬ್ಬನು ನುಡಿದನು. ಆದರೆ ಅವರು ಬೇರೇನೂ ಮಾಡುವಂತಿರಲಿಲ್ಲ. ಅವರು ಇಲ್ಲೇ ತಂದು ಬಿಟ್ಟರು' ಎಂದು ತನ್ನ ಅನುಭವ ವಿವರಿಸಿದಳು.

ಖ್ಯಾತ ನ್ಯಾಯವಾದಿಗಳೊಬ್ಬರ ಮನೆಯಿಂದ ಕರೆದೊಯ್ದ ಹೆಣ್ಣುಮಗಳಿಗೆ ಇನ್ನಾವ ರೀತಿಯಲ್ಲೂ ತೊಂದರೆ ಕೊಡುವ ಎದೆಗಾರಿಕೆ ಆ ದಿನಗಳಲ್ಲಿ ಈ ಪೊಲೀಸರಿಗೂ ಇರಲಿಲ್ಲ. ಹೀಗಾಗಿ ಆಕೆ ಸುರಕ್ಷಿತವಾಗಿಯೇ ನಮ್ಮ ಮನೆ ಸೇರಿದಳು.

ಮರುದಿನ ಆಕೆಗೆ ನನ್ನ ತಾಯಿ ಸುಂದರವಾದ ಕುಪ್ಪಸವೊಂದನ್ನು ಹೊಲಿದು ಕೊಟ್ಟರು. ಓರ್ವ ಮೌಲವಿಗಳನ್ನು ಮನೆಗೆ ಕರೆಸಿ ಏಕದೇವನ ವಿಶ್ವಾಸವನ್ನು ಬೋಧಿಸಿದರು. ಧಾರ್ಮಿಕ ಪದ್ಧತಿಯಂತೆ ಆಕೆಗೆ ಕುಪ್ಪಸ ತೊಡಿಸಿದರು. ಹೀಗೆ ಮಾದೇವಿ ಖತೀಜಾ ಆಗಿ ಆಕೆಯ ಮಗಳು ಫಾತಿಮ್ಮಳಾದಳು. ಅವರು ನಮ್ಮ ಮನೆಯಿಂದ ಹೊರಟಾಗ ಈಸುಬುನನ್ನು ಕರೆದು ನನ್ನ ತಾಯಿ,

'ನೋಡಪ್ಪಾ, ನಿನ್ನನ್ನು ನಂಬಿ ಆ ಹುಡುಗಿ ನಿನ್ನ ಹಿಂದೆ ಬಂದಿದ್ದಾಳೆ. ನಾನು ಆಕೆಗೆ ಕುಪ್ಪಸ ತೊಡಿಸಿದ್ದೇನೆ. ಅವಳನ್ನು ಚೆನ್ನಾಗಿ ನೋಡಿಕೊ. ಎಂದಿಗೂ 'ನಾನ್ಯಾಕೆ ಬಂದೆ' ಎಂದು ಆಕೆ ಕೊರಗುವಂತೆ ಮಾಡಬೇಡ. ಕೊನೆಯವರೆಗೂ ಕೈ ಹಿಡಿದು ಚೆನ್ನಾಗಿ ಬಾಳಿಸು. ಆ ಮಗುವನ್ನೂ ಚೆನ್ನಾಗಿ ನೋಡಿಕೊ' ಎಂದು ಬುದ್ಧಿವಾದ ಹೇಳಿದರು.

'ನೀವು ನಮ್ಮಿಬ್ಬರನ್ನೂ ಆಶೀರ್ವದಿಸಿ ಉಮ್ಮಾ.' ಎಂದಿದ್ದನಾತ.

ಕನಸಿನಿಂದ ಎಚ್ಚತ್ತಂತೆ ನಾನು ಕೇಳಿದೆ, 'ಅಂದರೆ... ನೀವು ಖತೀಜಾ ?..'

'ಹೌದು ಮೋಳೇ...

ನಾನು ಖತೀಜಾ. ಮದುಮಗಳು ನನ್ನ ಮೊಮ್ಮಗಳು. ನನ್ನ ಫಾತಿಮ್ಮನ ಮಗಳು!'

ಕಡ್ಡಿ ಗೀರಬೇಕು

ವಾರ್ಷಿಕ ವಿಶೇಷಾಂಕ ೨೦೦೫

ಕತ್ತಲೆಯ ಕಡ್ಡಿ - ಪೆಟ್ಟಿಗೆ ತುಂಬ ಲಕ್ಷ ನಕ್ಷತ್ರ
ಕಡ್ಡಿಗಳು, ಮನುಕುಲದ ಕಂಬನಿಯ ಕುಂಭದ್ರೋಣ-
-ದಲಿ ತಪ ತಪ ತೊಯ್ದು ಮಕ್ಕಿಗೆ ತಿಕ್ಕಿ, ತಿಕ್ಕಿ
ಒಳಸಂಚುಗಳ ಕೊತ್ತಳಗಳಿಗೆ ಸಿಡಿಮದ್ದನಿಡುವ
ಗುಪಿತ ಜಿದ್ದು, ಹೊಸೆದ ಹೊರಸಿನ ಹುರಿಯಿಂದ
ದಿಕ್ಕಟಗಳಿಗೆ ತಟ ತಟ ರಕ್ತ ಹರಿದೊಗೆದು ಇಲ್ಲದಾಕಾರ
ಹರಿತ ವರ್ತಮಾನದಲ್ಲೆಲ್ಲೋ ಅಡಗಿದ ಅಪರಾಧಿಯ
ಹುಡುಕುತ್ತ ತತ್ವ-ಬೆತ್ತದ ತೊಡೆಪಟ್ಟ ರಕ್ತ ಸಿಕ್ತ.

ಇವೇ ಕಡ್ಡಿಗಳು, ಅರಗಿನರಮನೆಗೆ ಬೆಂಕಿ ಇಟ್ಟು
ತುಂಬಿದ ಸೆರಗ ಸೆಳೆದು, ಹಿಂದಿನಿಂದ ತೋಳ
ಕತ್ತರಿಸಿದವು, ಪ್ರಾರ್ಥಿಸುವ ಗುಂಡಿಗೆಗೆ ಗುಂಡಿಟ್ಟು
ಗಡಿಗುಂಟ ಟ್ಯಾಂಕರುಗಳ ನಿಲಿಸಿ, ವಿಧವೆಯ
ಮಧುರ ಕಂಠದಿಂದ ರಾಷ್ಟ್ರಗೀತೆ ಹಾಡಿಸಿ, ಪದಕ
ಮಿರುಗಿದವು, ಚಾನೆಲ್ಲುಗಳ ಹೆಡೆಗೆ ನೆತ್ತರನ್ನೆರೆದವು,

ದೇವಸ್ಥಾನದಲ್ಲಿ ಸಂಜೆ ಸಮಯ ಬೆಳಗುವ ಮೊದಲು
ರಕ್ತ ಹೀರುವ ಕೀಟಗಳಿಗೆ ಸುಡು - ಚಕ್ರಗಳನ್ನುರಿ-
-ಸಬೇಕು. ಏನಿದ್ದರೂ ಕಡ್ಡಿಯನ್ನಂತೂ ಗೀರಬೇಕು.

ಆನಂದ ಝುಂಜರವಾಡ
ಎರಡು ಕವನಗಳು

ಬರೆಯಲೇಬೇಕೆಂದೇನಿಲ್ಲ..



ಬರೆಯಲೇಬೇಕೆಂದೇನಿಲ್ಲ, ಬರೆಯದೆ ಉಳಿದವರೂ
ಇಲ್ಲ, ಬೇಲಿಯಾಚೆ ಬದುವಿನ ಗುಂಟ ಬೆದೆಗುಣಿವ
ನವಿಲು, ಗರಿಗೆದರಿಸುವ ಮೃಗಶಿರದ ಢೋಲು, ಒಳ-
-ಮನೆಗೆ ಒಳಗಿನಿಂದಲೇ ಸಗಣೀ-ರಾಶಿ ಕಲಿಸುವ
ಮಲ್ಲಪ್ಪಶೆಟ್ಟಿ, ಅರ್ಥಕೂತ್ತಳಗಳ ಹುಡಿಗಟ್ಟಿ, ಎಲ್ಲ ಸ್ಫೋಟ ?
ಎಲ್ಲ ಕವಿತೆಗಳ ಕತೆಯಾ ಅಷ್ಟೇ, ಅಮೃತದ ನೆಪದಲ್ಲಿ ಬರೀ ಕಾಳಕೂಟ

ಹಡಪು ಕುದುರೆಗೆ ಭಾರೀ ತಮಟೆ - ತುತ್ತೂರಿ - ಕಹಳೆ,
ಬಾಗದೆ ಮಾಗಿಸುವ ನಿರಿ, ಮುರಿದ ಬಿಲ್ಲಿನ ಖಾಲೀ
ಬತ್ತಳಿಕೆಗೆ ರಿಕ್ತ - ರಂಗದ ಪಟ್ಟ, ಚಳಕಗಳ ಪುಳಕ,
ಎತ್ತ ತಿರುವಿದರೂ ರಥ ಎಲ್ಲರೂ ಹತ್ತು ದಿನದವರೇ
ಪೂರ್ವಪಂಕ್ತಿಯ ಅಂಬೋಡೆ - ಪಾಯಸಗಳ ಕಾಯಸದವರೇ

ಕುಸಿದ ಗಾಲಿಗಳನೆತ್ತಲು ಕೆಳಗಿಳಿದವರ ಕರ್ಣಕುಂಡಲಗಳಿಗೆ
ನಿರಿ ಇಡುವ (ಅ) ಪಾರ್ಥ, ಶಬ್ದ ಪಂಜರದಲ್ಲಿ ಕಾವ್ಯಭೀಷ್ಮ ರಕ್ತ-ಸಿಕ್ತ

ಜೈಲು : ಅಭಿವೃದ್ಧಿಯ ವೈರಿ ಮತ್ತುಗಲ್ಲು

○ ಬಿಳಿದಾಳೆ ಈಶ

ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ಎರಡು ಬೃಹತ್ ಸರ್ಕಾರಿ ಕಟ್ಟಡಗಳೆಂದರೆ ಒಂದು ವಿಕಾಸಸೌಧ. ಇನ್ನೊಂದು ಬೆಂಗಳೂರಿನ ಪರಪ್ಪನ ಅಗಹಾರದ ಸೆಂಟ್ರಲ್ ಜೈಲ್.

ಈಗಿನ ವಿಧಾನಸೌಧ ಪಕ್ಕದ ವಿಕಾಸಸೌಧವನ್ನು ಚುನಾಯಿತ ಪ್ರತಿನಿಧಿಗಳು ಹಾಗೂ ಆಡಳಿತ ಯಂತ್ರಾಂಗಕ್ಕೆ ಸ್ಥಳಾವಕಾಶ ಮಾಡಿಕೊಡಲು ನಿರ್ಮಿಸಲಾಗಿದೆ ಎಂದು ಹೇಳಲಾಗಿದೆ. ಆದರೆ ಹೊಸ ಬೃಹತ್ ಸೆರಮನೆಯ ನಿರ್ಮಾಣ ಏನನ್ನು ಸೂಚಿಸುತ್ತದೆ! ಹೆಚ್ಚು ಹೆಚ್ಚು ಪ್ರಜೆಗಳನ್ನು ಸಮಾಜದ ಮುಖ್ಯವಾಹಿನಿಯಿಂದ ಪ್ರತ್ಯೇಕಿಸಿ ನಿರ್ಬಂಧದಲ್ಲಿಡಬೇಕಾದ ಸ್ಥಿತಿ ಬಂದೊದಗಿದೆ ಎಂದು ತಾನೆ?

ಇತ್ತೀಚಿನ ವರ್ಷಗಳಲ್ಲಿ ನಮ್ಮ ಯಾವುದೇ ಸರ್ಕಾರ ಸೆಂಟ್ರಲ್ ಜೈಲಿನಷ್ಟೇ ವಿಸ್ತೀರ್ಣದ ಹಾಗೂ ಕೆಪಾಸಿಟಿಯ ಇನ್ನೊಂದು ಕಾರ್ಖಾನೆಯನ್ನಾಗಲೀ ಅಥವಾ ಆಸ್ಪತ್ರೆಯನ್ನಾಗಲೀ ನಿರ್ಮಿಸಿಲ್ಲ. ಇದನ್ನೂ ಗಮನದಲ್ಲಿಟ್ಟುಕೊಂಡೇ ಈ ಹೊಸ ಜೈಲುಗಳು ಯಾವ ಕಾಲಘಟ್ಟದಲ್ಲಿ ನಿರ್ಮಿಸಲ್ಪಡುತ್ತಿವೆ ಎಂಬುದನ್ನು ನಾವು ಪರಿಶೀಲಿಸಬೇಕಿದೆ. ಸ್ಪಷ್ಟವಾಗಿ ಹೇಳಬೇಕೆಂದರೆ ಇವತ್ತಿನ ಕರ್ನಾಟಕದ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಸ್ವರೂಪದಲ್ಲಿ ತೀವ್ರವಾಗಿ ಬದಲಾವಣೆಗಳು ಕಂಡುಬರುತ್ತಿವೆ. ಇದರ ಒತ್ತಡದ ಪರಿಣಾಮಕ್ಕೂ ಮತ್ತು ನಾಳೆ ಈ ಹೊಸ ಜೈಲುಗಳನ್ನು ಸೇರಲಿರುವ ಜನ ಯಾರು ಎಂಬುದಕ್ಕೂ ಒಂದು ಅಂತರ್ಗತ ಸಂಬಂಧವಿದೆ.



elected President of the U.S.A. in 1932. He made a series of great speeches to his own people and to the world, of which the keynote was, 'The only thing we have to fear is fear itself, a nameless, unreasonable, and unjustified terror.' He also took many practical steps to provide work for the unemployed and to get the huge bulk of American industry working again. Once things started to move upwards they continued.

ಆಧುನಿಕ ಜೈಲಿನ ಇತಿಹಾಸ

ನಾವೀಗ ನೋಡುತ್ತಿರುವ ಜೈಲು ಹಾಗೂ ಶಿಕ್ಷಾ ವಿಧಾನಗಳು ಕೇವಲ ೨೦೦ ವರ್ಷಗಳ ಹಿಂದೆ ಪಶ್ಚಿಮ ದೇಶಗಳಲ್ಲಿ ಚಾಲ್ತಿಗೆ ಬಂದಿವೆ. ಅದಕ್ಕೂ ಮುನ್ನ ಅಲ್ಲಿ ಅಪರಾಧವೆಸಗುವ ಬಡವರಿಗೆ ಬಹಿರಂಗ ನೇಣು ಅಥವಾ ಅಪರಾಧ ಮುದ್ರೆಯೊತ್ತಲಾಗುತ್ತಿತ್ತು (stamped). ಶ್ರೀಮಂತ ಅಪರಾಧಿಗಳು 'ನಗದು ದಂಡ' ನೀಡಿದರೆ ಸಾಕಾಗುತ್ತಿತ್ತು. ೧೮ನೇ ಶತಮಾನದ ಇಂಗ್ಲೆಂಡಿನಲ್ಲಿ ಹೀಗೆ ನೇಣಿಗೇರುತ್ತಿದ್ದವರಲ್ಲಿ ಶ್ರಮಜೀವಿಗಳು. ಕುಶಲಕರ್ಮಿಗಳು ಹಾಗೂ ಗ್ರಾಮೀಣ ಪ್ರದೇಶಗಳ ಬಡವರೇ ಹೆಚ್ಚಿರುತ್ತಿದ್ದರು. ಅದು ಆಧುನಿಕ ಉತ್ಪಾದನಾ ವಿಧಾನಗಳು ಅಂದರೆ ಕೈಗಾರಿಕಾ ಬಂಡವಾಳಶಾಹಿಯು ಪ್ರವರ್ಧಮಾನಕ್ಕೆ ಬರುತ್ತಿದ್ದ ಕಾಲ. ಅದರಿಂದಾಗಿ ತಮ್ಮ ದುಡಿಮೆಯ ಸಾಧ್ಯತೆ ಕಳೆದುಕೊಂಡು ಪಾಪರ್ ಆಗತೊಡಗಿದ ಈ ವರ್ಗದ ಜನ ತಮ್ಮ ಜೀವನೋಪಾಯಕ್ಕಾಗಿ ಎಸಗಿರಬಹುದಾದ ಆರ್ಥಿಕ ಅಪರಾಧಗಳು ಅವಾಗಿರುತ್ತಿದ್ದವು. ಅಷ್ಟೇ ಅಲ್ಲದೆ ಯಾವುದೇ ಅಪರಾಧ ಮಾಡದಿದ್ದರೂ, ಜೀವನಾಧಾರ ಕಳೆದುಕೊಂಡು ಭಿಕ್ಷುಕರು, ವೇಶ್ಯೆಯರು, ಅಲೆಮಾರಿಗಳಾಗಿ ಪರಿವರ್ತನೆಯಾದವರನ್ನು ಬಿಡದೆ ಸೆರೆ ಹಿಡಿದು Houses of correction ಎಂಬ work house ಗಳಲ್ಲಿ ತುಂಬಲಾಗುತ್ತಿತ್ತು.

ಇದರ ನಂತರದ ಅವಧಿಯಲ್ಲಿ ಜಾನ್ ಹೋವಾರ್ಡ್ ಎಂಬ ಇಂಗ್ಲಿಷ್ ಸುಧಾರಣಾವಧಿಯು ನಾವೀಗ ನೋಡುತ್ತಿರುವ ಆಧುನಿಕ ಸ್ವರೂಪದ ಜೈಲುಗಳನ್ನು ರೂಪಿಸಿದ. ಅಮೇರಿಕಾದಲ್ಲಿ ಮೊದಲ ಬಾರಿಗೆ ಇದನ್ನು ವ್ಯಾಪಕವಾಗಿ ಬಳಸಲಾಯಿತು. ಖ್ಯಾತ ಬರಹಗಾರ ಚಾರ್ಲ್ಸ್ ಡೆಕನ್ಸ್ ಅಮೇರಿಕಾದ ಜೈಲುಗಳನ್ನು ನೋಡಿ 'ಇಂತಾದ್ದೊಂದು ವ್ಯವಸ್ಥೆ ರೂಪಿಸಿದವರಿಗೆ ತಮ್ಮ ಘೋರ ಕೃತ್ಯದ ಅರಿವಾದಂತಿಲ್ಲ. ಈ ಬಂಧಿಗಳು ಅನುಭವಿಸುವ ಹಿಂಸೆ, ಯಾತನೆಯು ಕೆಲವರಿಗೆ ಮಾತ್ರ ಅರ್ಥವಾಗಬಹುದು. ಇಲ್ಲಿ ಬಂಧಿಗಳ ಮನಸ್ಸಿನ ಮೇಲೆ ನಡೆಯುತ್ತಿರುವ ವಿಚ್ಛಿದ್ರಕಾರಿ ದಾಳಿಗಳು ದೈಹಿಕ ಹಿಂಸೆಗಿಂತಾ ಹೆಚ್ಚು.' ಎಂದಿದ್ದ. ಅದೇ ವೇಳೆ ಖೈದಿಗಳನ್ನು ಸರಕು ಉತ್ಪಾದನಾ ಕೆಲಸಗಳಲ್ಲಿ ತೊಡಗಿಸುವ ಮೂಲಕ ಅಮೇರಿಕಾ ಬಂಡವಾಳಶಾಹಿಯು ಕಡಿಮೆ ಖರ್ಚಿನಲ್ಲಿ ಹೆಚ್ಚು ಲಾಭ ದೋಚುವ ದಾರಿ ಹುಡುಕಿಕೊಂಡಿತ್ತು. ಈ ದಿನ ಅಮೇರಿಕಾ ಒಂದರಲ್ಲೇ ೨೨ ಲಕ್ಷ ಜನರನ್ನು ಸೆರೆಮನೆಗಳಲ್ಲಿ ಇಡಲಾಗಿದ್ದು ಅವರೆಲ್ಲರನ್ನೂ ಅಲ್ಲಿನ ಕೈಗಾರಿಕೋದ್ಯಮಿಗಳು ಅಗ್ಗದ ಕೂಲಿ ನೀಡಿ ಸರಕು ಉತ್ಪಾದನೆಗೆ ಬಳಸಿಕೊಳ್ಳುತ್ತಿದ್ದಾರೆ. ಹೆಚ್ಚು ಜನ ಜೈಲು ಪಾಲಾದಷ್ಟೂ ಹೆಚ್ಚು ಲಾಭ ಅವರಿಗೆ..!

ಈ ಬೆಳವಣಿಗೆಗಳನ್ನು ಗಮನಿಸಿದ ಅಲ್ಲಿನ ಫೆಡರಲ್ ನ್ಯಾಯಾಧೀಶನೊಬ್ಬ 'ಅಮೇರಿಕಾದ ಸಾಮಾಜಿಕ ಖೈದಿಯು ಒಬ್ಬ ಗುಲಾಮನಿದ್ದಂತೆ, ಆದರೆ ಅವನನ್ನೂ ಮೊದಲಿನಂತೆ ಹರಾಜಾಕುತ್ತಿಲ್ಲ ಅಷ್ಟೇ..' ಎಂದಿದ್ದ.

ಅಮೇರಿಕಾದಲ್ಲಿ ಗುಲಾಮಿ ಪದ್ಧತಿ ರದ್ದಾಗಿದ್ದರೂ ಜೈಲುಗಳ ರೂಪದಲ್ಲಿ ಮತ್ತೆ ಚಾಲ್ತಿಗೆ ಬಂದಿದೆ ಎಂಬುದೇ ವಾಸ್ತವ. ಒಟ್ಟಾರೆ ಮನುಷ್ಯನನ್ನು ತಮ್ಮ ಖಾಸಗಿ ಆಸ್ತಿಯ ಭಾಗ ಎಂದು ಪರಿಗಣಿಸಿದ್ದ ಒಂದು ವರ್ಗದ ಜನರೇ ಈ ಆಧುನಿಕ ಜೈಲುಗಳ ರೂವಾರಿಗಳಾಗಿದ್ದರು.

> 'ಸಮಾಜದ ಅತೀ ಕೆಳವರ್ಗದ ನಿರುದ್ಯೋಗಿ ವಲಯಗಳಿಂದಲೇ ಈ ಕ್ರಿಮಿನಲ್ ಅಪರಾಧಿಗಳು ಸೃಷ್ಟಿಯಾಗುತ್ತಿದ್ದಾರೆ. ಉದ್ಯೋಗ ಸೃಷ್ಟಿ ಹೆಚ್ಚಿದರೆ ಅಪರಾಧಗಳು ಕಡಿಮೆಯಾಗುತ್ತವೆ. ನಿರುದ್ಯೋಗ ಬೆಳೆದಂತೆ ಅಪರಾಧಗಳೂ ಹೆಚ್ಚಾಗುತ್ತವೆ'
>
> -ಕಾರ್ಲ್‌ಮಾರ್ಕ್ಸ್

ವಾರ್ಷಿಕ ವಿಶೇಷಾಂಕ ೨೦೦೪

ಈಗಿನ ವಿಧಾನಸೌಧ ಪಕ್ಕದ ವಿಕಾಸಸೌಧವನ್ನು ಚುನಾಯಿತ ಪ್ರತಿನಿಧಿಗಳು ಹಾಗೂ ಆಡಳಿತ ಯಂತ್ರಾಂಗಕ್ಕೆ ಸ್ಥಳಾವಕಾಶ ಮಾಡಿಕೊಡಲು ನಿರ್ಮಿಸಲಾಗಿದೆ ಎಂದು ಹೇಳಲಾಗಿದೆ.

ಕಾರ್ಲ್‌ಮಾರ್ಕ್ಸ್ ಈ ಬಗ್ಗೆ ಪ್ರತಿಕ್ರಿಯೆ ನೀಡುತ್ತಾ 'ಸಮಾಜದ ಅತೀ ಕೆಳವರ್ಗದ ನಿರುದ್ಯೋಗಿ ವಲಯಗಳಿಂದಲೇ ಈ ಕ್ರಿಮಿನಲ್ ಅಪರಾಧಿಗಳು ಸೃಷ್ಟಿಯಾಗುತ್ತಿದ್ದಾರೆ. ಉದ್ಯೋಗ ಸೃಷ್ಟಿ ಹೆಚ್ಚಿದ್ದರೆ ಅಪರಾಧಗಳು ಕಡಿಮೆಯಾಗುತ್ತವೆ. ನಿರುದ್ಯೋಗ ಬೆಳೆದಂತೆ ಅಪರಾಧಗಳೂ ಹೆಚ್ಚಾಗುತ್ತವೆ' ಎಂದಿದ್ದರು. ಇದನ್ನು ಸಾಬೀತು ಪಡಿಸುವಂತೆ ೨ನೇ ಮಹಾಯುದ್ಧದ ನಂತರ ಅಮೇರಿಕಾದಲ್ಲಿ ಶುರುವಾದ 'ಮಹಾ ಆರ್ಥಿಕ ಕುಸಿತ' (Great Depression) ದ ಪರಿಣಾಮದಿಂದ ಬಡತನ, ನಿರುದ್ಯೋಗ ಬೆಳೆದು ವಿಯೆಟ್ನಾಂ ಯುದ್ಧ ಇತ್ಯಾದಿಗಳಿಂದ ಅಲ್ಲಿನ ಸಾಮಾಜಿಕ ಕ್ಷೋಭೆ ಹೆಚ್ಚಾಗಿತ್ತು. ದೊಂಬಿ, ಗಲಾಟೆಗಳಿಂದ ಜೈಲುಗಳೂ ಭರ್ತಿಯಾಗಿದ್ದವು. ಆಗ ಪ್ರತಿ ಒಂದು ಲಕ್ಷ ಜನರಲ್ಲಿ ೧೩೭ ಮಂದಿ ಜೈಲು ಸೇರಿದ್ದರು. ಇವರಲ್ಲಿ ಬಹುಪಾಲು ಮಂದಿ ಜೀವನೋಪಾಯ ಕಳೆದುಕೊಂಡು ನಿರ್ಗತಿಕರಾಗಿ ಬಂಡೆದಿದ್ದವರಾಗಿದ್ದರು. ಅಂತಾ ದಂಗೆಕೋರನೊಬ್ಬನನ್ನು ರಸ್ತೆಯಲ್ಲಿ ತಡೆದು ನಿಲ್ಲಿಸಿದ ಪತ್ರಕರ್ತನೊಬ್ಬ

'ನಿಜ ಹೇಳು, ನಿಮಗೇನು ಬೇಕು? ಎಂದು ಕೇಳಿದ.

'ಇನ್ನಷ್ಟು ಗನ್‌'ಗಳು' ಎಂಬ ಉತ್ತರ ಪಡೆದಿದ್ದ.

ಇಂತಾ ಪರಿಸ್ಥಿತಿಗಳಲ್ಲೇ ರೂಪುತಳೆದು, ಬೆಳೆಯುತ್ತಾ ಹೋದ ಆಧುನಿಕ ಜೈಲುಗಳು ಅಮೇರಿಕಾ, ಯುರೋಪ್‌ನಲ್ಲಿ ಹರಡಿದ ನಂತರ ಸಾಮ್ರಾಜ್ಯಶಾಹಿಗಳ ಅಧೀನದಲ್ಲಿದ್ದ ವಸಾಹತು ದೇಶಗಳಲ್ಲೂ ಅಸ್ತಿತ್ವಕ್ಕೆ ಬಂದವು. ಬ್ರಿಟೀಷರ ಅಧೀನದಲ್ಲಿದ್ದ ಮೈಸೂರು ಸಂಸ್ಥಾನದಲ್ಲೂ ಆಗ ಬೃಹತ್ ಜೈಲೊಂದನ್ನು ಕಟ್ಟಲಾಯಿತು. ಅದೇ, ಒಂದು ಸಾವಿರ ಪ್ರಜೆಗಳನ್ನೂ ಬಂಧಿಸಿಡಬಹುದಾಗಿದ್ದ ಬೆಂಗಳೂರು ಸೆಂಟ್ರಲ್ ಜೈಲು.

ಮೈಸೂರಿನ ಸಂಸ್ಥಾನಕ್ಕೆ ಜೈಲೇಕೆ ಬೇಕಾಯಿತು ?

ಈಗ ವಿಕಾಸ ಸೌಧ ಮತ್ತು ಪರಪ್ಪನ ಅಗ್ರಹಾರ ಸೆಂಟ್ರಲ್ ಜೈಲ್ ನಿರ್ಮಿಸಿರುವಂತೆ ೧೯ನೇ ಶತಮಾನದ ಕೊನೆಯಲ್ಲೂ ಮೈಸೂರು ಸಂಸ್ಥಾನದಲ್ಲಿ ಎರಡು ಬೃಹತ್ ಕಟ್ಟಡಗಳನ್ನು ನಿರ್ಮಿಸಲಾಯಿತು.

ಒಂದು ಒಡೆಯರ್‌ನ ಮೈಸೂರು ಅರಮನೆ ಹಾಗೂ ಇನ್ನೊಂದು ಬೆಂಗಳೂರು ಸೆಂಟ್ರಲ್ ಜೈಲು.

ಅರಮನೆಯನ್ನೇನೋ ಬ್ರಿಟೀಷರ ಗುಲಾಮನಂತಿದ್ದ ರಾಜನ ಮೋಜು, ಮಜಾಗಳಿಗೆಂದು ಕಟ್ಟಲಾಗಿತ್ತು ಸರಿ. ಆದರೆ ಆಗಿನ ಕಾಲದಲ್ಲೇ ಒಂದು ಸಾವಿರ ಜನರನ್ನು ತುಂಬಬಹುದಾದ ಜೈಲನ್ನು ಕಟ್ಟಬೇಕಾಗಿ ಬಂತೇಕೆ? ಅದೂ, ಮೈಸೂರು ಭಾರತದಲ್ಲೇ ಒಂದು ಅಭಿವೃದ್ಧಿ ಪಥದಲ್ಲಿರುವ 'ಮಾಡಲ್ ಸ್ಟೇಟ್' ಎಂಬ ಕೀರ್ತಿ ಗಳಿಸುವ ಹಾದಿಯಲ್ಲಿದ್ದಾಗ!

ಪರಿಶೀಲಿಸ ಹೊರಟರೆ ಆಗಿನ ವಾಸ್ತವ ಸ್ಥಿತಿಗತಿಗಳು ಬೇರೆಯದೇ ಕತೆ ಹೇಳುತ್ತವೆ.

ಕರ್ನಾಟಕ ಇತಿಹಾಸ ಕುರಿತಾದ ಸಾರೆಯವರ 'ಮೇಕಿಂಗ್ ಹಿಸ್ಟರಿ' ಕೃತಿ ಈ ಬಗ್ಗೆ ಬಹಳ ವಿವರಗಳನ್ನು ನೀಡುತ್ತದೆ. ಟೀಪೂ ಸುಲ್ತಾನನ ಆಡಳಿತದಲ್ಲೆ ಪ್ರಗತಿಯ ನಾಗಾಲೋಟದಲ್ಲಿದ್ದ ಮೈಸೂರು ರಾಜ್ಯ ಟೀಪೂ ಪತನಾನಂತರ ಬ್ರಿಟೀಷ್ ವಸಾಹತುಶಾಹಿಗಳ ಕ್ರೂರ ಆರ್ಥಿಕ ಶೋಷಣೆಗೆ ಬಲಿಯಾಯಿತು. ಬೆಳೆಗಂದಾಯದ ಬದಲು ಭೂಕಂದಾಯ ಜಾರಿಗೆ ತಂದು ರೈತಾಪಿಗೆ ದಕ್ಕುತ್ತಿದ್ದ ಮಿಗುತಾಯ ಮೌಲ್ಯವನ್ನು ಕಸಿದುಕೊಳ್ಳಲಾಯಿತು. ನೀರಾವರಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದರಿಂದಾಗಿ ಕೃಷಿ ಉತ್ಪಾದನೆ ಸ್ಥಗಿತತೆಗೀಡಾಗಿ ಒಂದರ್ಥದಲ್ಲಿ ಇಡೀ ಗ್ರಾಮೀಣ ಆರ್ಥಿಕತೆಯೇ ಕುಸಿಯಿತು. ಗ್ರಾಮೀಣ ಪ್ರದೇಶದಲ್ಲಿ ಪಾಪರೈಜೇಶನ್ ವ್ಯಾಪಕವಾಗಿ ಬೆಳೆಯಿತು. ಟೀಪೂ ಕಾಲದಲ್ಲಿ ಅವಸಾನದಲ್ಲಿದ್ದ ಅರೆ ಊಳಿಗಮಾನ್ಯ ಭೂಸಂಬಂಧಗಳನ್ನು ಮತ್ತು ಪ್ರತಿಗಾಮಿ ಸಾಂಸ್ಕೃತಿಕ ಮೌಲ್ಯಗಳಿಗೆ ಮತ್ತೆ ಜೀವ ತುಂಬಲಾಯಿತು. ಶೃಂಗೇರಿಯಂತಾ ಧಾರ್ಮಿಕ ಕೇಂದ್ರಗಳಲ್ಲೇ ಅನಾಥರಾದ ಮಹಿಳೆಯರನ್ನು ಬಹಿರಂಗವಾಗಿ ಹರಾಜು ಮಾಡಲಾಗುತ್ತಿತ್ತೆಂದರೆ ಆಗಿನ ಜನಸಾಮಾನ್ಯರ ಸ್ಥಿತಿಗತಿಗಳನ್ನು ನಾವೀಗ ಊಹಿಸಿಕೊಳ್ಳಬಹುದು.

ಜೊತೆಗೆ ೧೮೬೭ ರಿಂದ ೧೯೧೨ರ ಮೊದಲ ವಿಶ್ವ ಮಹಾಯುದ್ಧದವರೆಗೂ ಮೈಸೂರನ್ನು ಬಿಟ್ಟೂ ಬಿಡದೆ ಕಾಡಿದ ಬರಗಾಲ ರೈತಾಪಿಯನ್ನು ಮತ್ತಷ್ಟು ನಿತ್ರಾಣಗೊಳಿಸಿತ್ತು.

ಅದಕ್ಕೂ ಮುನ್ನ ಟೀಪೂವಿನ ಒಂದೂವರೆ ಲಕ್ಷದಷ್ಟಿದ್ದ ಸೇನೆಯನ್ನು ಬ್ರಿಟೀಷರು ವಿಸರ್ಜಿಸಿದ್ದರಿಂದ ಅಷ್ಟೂ ಜನ ನಿರುದ್ಯೋಗಿಗಳಾದರು. ಇದರಿಂದಾಗಿ ಸೇನೆಗೆ ಆಯುಧಗಳನ್ನು ತಯಾರಿಸಿ ಕೊಡುತ್ತಿದ್ದ ಸಹಸ್ರಾರು ಕುಲುಮೆ ಕೆಲಸಗಾರರು ಹಾಗೂ ಕಚ್ಚಾ ಅದಿರು ಪೂರೈಸುತ್ತಿದ್ದ ಗಣಿ ಕೆಲಸಗಾರರೂ ಉದ್ಯೋಗ ಕಳೆದುಕೊಂಡರು.

ಇಷ್ಟಲ್ಲದೆ ಬ್ರಿಟೀಷರು ಇಂಗ್ಲೆಂಡಿನ ಜವಳಿ ಉತ್ಪನ್ನಗಳನ್ನು ಇಲ್ಲಿಗೆ ತಂದು ಮಾರಲಾರಂಭಿಸಿದ್ದರಿಂದ ಮೈಸೂರಿನ ನೇಯ್ಗೆ ಉದ್ಯಮಕ್ಕೂ ಪೆಟ್ಟು ಬಿತ್ತು. ಐದು ಸಾವಿರದಷ್ಟಿದ್ದ ಕೈಮಗ್ಗಗಳ ಸಂಖ್ಯೆ ೧೮೫೦ರ ವೇಳೆಗೆ ಕೇವಲ ಒಂದು ಸಾವಿರಕ್ಕಿಳಿದಿತ್ತು. ಮಿಕ್ಕವರು ದಿವಾಳಿಯಾದರು. ಹೀಗೆ ಜೀವನೋಪಾಯ ಕಳೆದುಕೊಂಡ ಕುಶಲಕರ್ಮಿಗಳು ಪಟ್ಟಣ ತ್ಯಜಿಸಿ ಸಾವಿರಾರು ಸಂಖ್ಯೆಯಲ್ಲಿ ಆಸರೆ ಅರಸುತ್ತಾ ಗ್ರಾಮೀಣ ಪ್ರದೇಶಗಳತ್ತ ವಲಸೆ ಹೋದರು. ಆದರೆ ಹಾಗೆ ವಲಸೆ ಬಂದವರನ್ನು ಸ್ವೀಕರಿಸಿ ಆಸರೆ ನೀಡುವಂತಾ ನೆಮ್ಮದಿಯ ಸಮೃದ್ಧಿ ಸ್ಥಿತಿ ಮೈಸೂರು ಸಂಸ್ಥಾನದ ಗ್ರಾಮಗಳಲ್ಲೂ ಇರಲಿಲ್ಲ. ರೈತಾಪಿ ಅದಾಗಲೇ ಸಂಪೂರ್ಣ ದಿವಾಳಿ ಸ್ಥಿತಿ ತಲುಪಿತ್ತು.

ಬ್ರಿಟೀಷರ ಈ ಎಲ್ಲಾ ಲೂಟಿಕೋರ ಆರ್ಥಿಕ ನೀತಿಗಳು ಮೈಸೂರು ಸಂಸ್ಥಾನದಲ್ಲಿ ಭೀಕರ ಸಾಮಾಜಿಕ ಕ್ಷೋಭೆಗೆ ದಾರಿಮಾಡಿಕೊಟ್ಟವು. ಬದುಕುಳಿಯುವ ಸಲುವಾಗಿ ಜನ ತೆರಿಗೆ ಪಾವತಿ ನಿರಾಕರಣೆ, ದಂಗೆ ಏಳುವುದು ಹಾಗೂ ಆರ್ಥಿಕ ಅಪರಾಧಿ ಕೃತ್ಯಗಳಲ್ಲಿ ತೊಡಗುವುದು ಒಂದು ಸಹಜ ವಿದ್ಯಮಾನವಾಗಿ ಹೋಯಿತು. ಮತ್ತೊಂದೆಡೆ ಮೈಸೂರಿನ ಅರಮನೆಯಲ್ಲಿ ನಿತ್ಯ ಸಂಗೀತಗೋಷ್ಠಿ ವೇಶ್ಯಾಸ್ತ್ರೀಯರ ನರ್ತನದ ಮೋಜಿನಲ್ಲಿ ಮುಳುಗಿದ್ದ ಒಡೆಯರ್ ಹಾಗೂ ಇಡೀ ಸಂಸ್ಥಾನದ ಸಂಪತ್ತಿನ ಹುಟ್ಟುವಳಿ ದೋಚುತ್ತಿದ್ದ ಬ್ರಿಟೀಷರು ಸೇರಿ ಸಂಸ್ಥಾನದಲ್ಲಿ ಬೆಳೆಯುತ್ತಿದ್ದ

ಈಗಿನ ನಮ್ಮನ್ನಾಳುವ ಸರ್ಕಾರ ಯಾವುದೇ ಜನಪರ, ಅಭಿವೃದ್ಧಿ ಕೆಲಸ ನಿರ್ವಹಿಸಲು ನಿರಾಕರಿಸುತ್ತಿದೆ. ಶಿಕ್ಷಣ, ಆರೋಗ್ಯ, ಉದ್ಯೋಗಸೃಷ್ಟಿ ಸಮಾಜ ಕಲ್ಯಾಣದ ಯಾವೊಂದು ಜವಾಬ್ದಾರಿ ಹೊರದೆ 'Welfare State' ಎಂಬ ಆಶಯವೇ ಕರಗಿಹೋಗಿದೆ.



ಪ್ರಕ್ಷೋಭೆಕಾರಿ ಸ್ಥಿತಿ ಹತ್ತಿಕ್ಕಲು ಮುಂದಾದರು. ಅದನ್ನು ಕೇವಲ ಒಂದು ಕಾನೂನು-ಸುವ್ಯವಸ್ಥೆ ಸಮಸ್ಯೆ ಎಂದಷ್ಟೇ ಪರಿಗಣಿಸಿ ಅದಕ್ಕೊಂದು ರಾಜ ಕೀಯ ಪರಿಹಾರ ಕಂಡುಹಿಡಿದರು.

ಆಗ ಅಸ್ತಿತ್ವಕ್ಕೆ ಬಂದದ್ದೇ ಬೆಂಗಳೂರು ಸೆಂಟ್ರಲ್ ಜೈಲ್. ಒಂದು ಲೂಟಿಕೋರ, ದಮನಕಾರಿ ಸರ್ಕಾರಕ್ಕೆ ಜೈಲುಗಳು ಯಾವಾಗ ಮತ್ತು ಯಾಕೆ ಬೇಕಾಗುತ್ತದೆ ಎನ್ನಲು ಬೆಂಗಳೂರು ಸೆಂಟ್ರಲ್ ಜೈಲು ನಿರ್ಮಾಣ ಒಂದು ಜೀವಂತ ಉದಾಹರಣೆಯಾಗಿದೆ.

ಇವರಲ್ಲಿ ಬಹುತೇಕ ಜನ ಗ್ರಾಮೀಣ ರೈತಾಪಿ ಹಾಗೂ ಕುಶಲಕರ್ಮಿ ಜನಾಂಗ ಮತ್ತು ಉದ್ಯೋಗ ಭದ್ರತೆಯಿಂದ, ಪಟ್ಟಣಗಳ ಬಡಜನ ಎಂಬುದು ನಿಸ್ಸಂಶಯ. ಕರ್ನಾಟಕದ ಮಟ್ಟಿಗೆ ಹೇಳಬೇಕೆಂದರೆ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಬಡವರೂ ಹೆಚ್ಚಿನ ಸಂಖ್ಯೆಯಲ್ಲಿ ಜೈಲು ಪಾಲಾಗಿದ್ದಾರೆ. ಇವರೊಂದಿಗೆ ವಿವಿಧ ಚಳವಳಿ, ಹೋರಾಟಗಳ ಕಾರ್ಯಕರ್ತರು, ರಾಜಕೀಯ ಭಿನ್ನಮತೀಯರು, ಉಗ್ರಗಾಮಿಗಳೂ ಗಮನಾರ್ಹ ಸಂಖ್ಯೆಯಲ್ಲಿ ನಿರ್ಬಂಧಕ್ಕೊಳಗಾಗುತ್ತಾರೆ.

ಇದು ಕೇವಲ ಮೈಸೂರು ಸಂಸ್ಥಾನಕ್ಕೆ ಮಾತ್ರ ಸೀಮಿತವಲ್ಲ. ಜಗತ್ತಿನೆಲ್ಲೆಡೆ ಆಳುವ ವರ್ಗಗಳ ಸಹಜ ನಡವಳಿಕೆ ಇದು. ಖ್ಯಾತ ರಷ್ಯನ್ ಬರಹಗಾರ ಲಾವ್ರಿನೋವ್‌ನ 'ನಲವತ್ತೊಂದನೆಯವ' ಕೃತಿಯಲ್ಲಿ ಇಂತಾದ್ದೊಂದು ಸನ್ನಿವೇಶದ ಪ್ರಸ್ತಾಪ ಬರುತ್ತದೆ. ಝರ್ ಚಕ್ರವರ್ತಿ ವಿರುದ್ಧ ಸಂಕಷ್ಟ ಪೀಡಿತ ರಷ್ಯನ್ ರೈತರ ನಿರಂತರ ದಂಗೆಗಳನ್ನು ದಮನಿಸಲು ಓರ್ವ ಸೇನಾಧಿಕಾರಿ ನೇಮಕಗೊಂಡಿರುತ್ತಾನೆ.

ಕಾನೂನು ಉಲ್ಲಂಘಿಸುವವರನ್ನು ಸಮಾಜಕ್ಕೆ ಬೇಕಿರದ ಹೆಚ್ಚುವರಿ ಜನ ಎಂದೇ ಆತ ಪರಿಗಣಿಸಿರುತ್ತಾನೆ.

'ರಷ್ಯಾಗೆ ಇಷ್ಟೊಂದು ಜನ ಬೇಕಾಗಿಲ್ಲ. ನಮ್ಮ ಅಗತ್ಯ ಪೂರೈಸುವಷ್ಟು ಜನರನ್ನು ಮಾತ್ರ ಉಳಿಸಿಕೊಂಡು ಮಿಕ್ಕವರನ್ನು ಸೆರೆಯಲ್ಲಿಟ್ಟು ಕಾಫಿಯ ಬೀಜದಂತೆ ಹುರಿದು, ಪುಡಿ ಪುಡಿ ಮಾಡಿ ಇಡೀ ರಷ್ಯಾದಾದ್ಯಂತ ಗೊಬ್ಬರದಂತೆ ಎರಚಿ ಬಿಡಬೇಕು...'

-ಇದು ರೈತ ದಂಗೆಗಳಿಗೆ, ಸಾಮಾಜಿಕ ಕ್ಷೋಭೆಗಳಿಗೆ ಆತ ಸೂಚಿಸುವ ಪರಿಹಾರ. ಜೈಲು ಅಥವಾ ಹತ್ಯೆಗಳೇ ಅಂತವರಿಗೆ ಸೂಕ್ತ ಉತ್ತರ ಎಂದವನ ನಂಬಿಕೆಯಾಗಿರುತ್ತದೆ. ಬಹುಶಃ ಇಂದಿನ ಯಾವುದೇ ಸೆರೆಮನೆಗಳ ನಿರ್ಮಾಣದ ಉದ್ದೇಶವೂ ಇದೇ ಆಗಿರಲು ಸಾಧ್ಯ.

ಜಾಗತೀಕರಣ ಹಾಗೂ ಪರಪ್ಪನ ಅಗ್ರಹಾರ ಜೈಲು

ಒಂದು ನೂರು ವರ್ಷಕಾಲ ಅಸ್ತಿತ್ವದಲ್ಲಿದ್ದ ಒಂದು ಸಾವಿರ ಮಂದಿ ಕೆಪಾಸಿಟಿಯ ಬೆಂಗಳೂರು ಸೆಂಟ್ರಲ್ ಜೈಲು ತನ್ನಿಡೀ ಜೀವಮಾನ ಕಿಕ್ಕಿರಿದು ತುಂಬಿರುತ್ತಿತ್ತು. ಕೆಡವುವ ಮುನ್ನಾ ಅಲ್ಲಿ ಮೂರು ಸಾವಿರ ಜನರಿದ್ದರು. ನೂತನ ಪರಪ್ಪನ ಅಗ್ರಹಾರ ಜೈಲಿನ ಸಾಮರ್ಥ್ಯ ೧೦ ಸಾವಿರ. ಅದೀಗಾಗಲೇ ಭರ್ತಿಯಾಗಿ ಹೋಗಿದೆ.

ಹೀಗೆ ನಿರ್ಬಂಧದಲ್ಲಿಡಬೇಕಾದ ಪ್ರಜೆಗಳ ಸಂಖ್ಯೆ ಒಂದೇ ಸಮನೆ ಏರುತ್ತಿರುವುದಕ್ಕೂ ಹಾಗೂ ಕರ್ನಾಟಕದ ಬದಲಾಗುತ್ತಿರುವ ಆರ್ಥಿಕ, ರಾಜಕೀಯ ಸ್ಥಿತಿಗತಿಗೂ ನೇರ ಸಂಬಂಧವಿದೆ. ನಾವೀಗ ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣದ ಯುಗದಲ್ಲಿದ್ದೇವೆ. ಇವು ಕರ್ನಾಟಕದ ಎಲ್ಲಾ ಜನವರ್ಗಗಳನ್ನು ಪೀಡಿಸುತ್ತಿದ್ದು ಅದರ ಪರಿಣಾಮಗಳಿಂದ ತೀವ್ರ ಸಾಮಾಜಿಕ ಕ್ಷೋಭೆ ಸೃಷ್ಟಿಯಾಗುತ್ತಿದೆ. ವಿದೇಶೀ ಮಲ್ಟಿ ನ್ಯಾಷನಲ್ ಕಂಪನಿಗಳಿಗೆ ಮಾತ್ರ ಲಾಭವಾಗುವಂತಹ ಕೃಷಿ ನೀತಿಗಳನ್ನು ಜಾರಿಗೊಳಿಸುತ್ತಾ ಮತ್ತು ನಿರಂತರ ಸಬ್ಸಿಡಿ ಕಡಿತದಿಂದ ರೈತಾಪಿ ಪೂರಾ ದಿವಾಳಿಯಾಗುತ್ತಿದೆ. ಕೃಷಿ ಸಾಗುವಳಿ ವೆಚ್ಚ ಮಿತಿ ಮೀರುತ್ತಿದ್ದು ಗ್ರಾಮೀಣ ಆರ್ಥಿಕತೆ ಕುಸಿದು ಬಿದ್ದಿದೆ. ಈ ಒತ್ತಡವು ಸಣ್ಣ ಹಿಡುವಳಿದಾರರನ್ನು ಭೂ ಒಡೆತನದಿಂದ ಉತ್ಪಾದಿಸಿ ಸೆಮಿ ಫ್ಯೂಡಲ್ ಭೂ ಸಂಬಂಧವನ್ನು ನವೀಕರಿಸುತ್ತಿದೆ. ರಾಜ್ಯ ಸರ್ಕಾರಿ ಒಡೆತನದಲ್ಲಿದ್ದ ೭೮ ಉದ್ದಿಮೆಗಳಲ್ಲಿ ಅರ್ಧಕ್ಕೂ ಹೆಚ್ಚು ನಷ್ಟದಲ್ಲಿದ್ದು ಸಾವಿರಾರು ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ರಾಜ್ಯದ ೨.೫ ಲಕ್ಷ ಸಣ್ಣ ಕೈಗಾರಿಕಾ ಘಟಕಗಳಲ್ಲಿ ಶೇಕಡಾ ೨೮ ರೋಗಗ್ರಸ್ತವಾಗಿವೆ. ೧೫ ಲಕ್ಷ ಕಾರ್ಮಿಕರಲ್ಲಿ ಈಗಾಗಲೇ ೫ ಲಕ್ಷ ಮಂದಿ ಉದ್ಯೋಗ ವಂಚಿತರಾಗಿದ್ದಾರೆ. ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ನೀಡಬೇಕಿದ್ದ ಸಬ್ಸಿಡಿ ದಶಕಗಳಿಂದ ಬಾಕಿ ಉಳಿದಿದೆ. ಆಳುವ ವರ್ಗಗಳ ಹಣಕಾಸು ನೀತಿಗಳು ಸ್ಪಷ್ಟವಾಗಿ ಎಂಎನ್‌ಸಿಗಳು- ದಲ್ಲಾಳಿ ಬಂಡವಾಳಶಾಹಿಗಳ ಪರ ರೂಪುತಳೆದಿವೆ. ಬೃಹತ್ ಕೈಗಾಗಿಕೋದ್ಯಮಿಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಹಣಕಾಸು ಬಂಡವಾಳ ಪೂರೈಸಲು ಬ್ಯಾಂಕ್ ಠೇವಣಿಗಳ ಮೇಲಿನ ಬಡ್ಡಿದರ ಇಳಿಸಲಾಗಿದೆ. ಇದರಿಂದ ನಿವೃತ್ತರೂ ಕಂಗಾಲಾಗಿದ್ದಾರೆ. ಸತತ ಬೆಲೆ ಏರಿಕೆಯಿಂದ ಮಧ್ಯಮ ವರ್ಗವೂ ದಯನೀಯ ಸ್ಥಿತಿ ತಲುಪಿದೆ.

ಆದರೆ ನಮ್ಮ ಸರ್ಕಾರವು ಕರ್ನಾಟಕದ ಅಭಿವೃದ್ಧಿ ದರವು ಶೇ ೬ ರಿಂದ ೭ ಕ್ಕೇರಿದೆ. ೧೯೯೧ರಿಂದ ೨೦೦೦ದ ಅವಧಿಯಲ್ಲಿ ಒಟ್ಟು ೯೧ ಸಾವಿರ ಕೋಟಿ ವಿದೇಶಿ ಬಂಡವಾಳ ಹರಿದು ಬಂದಿದೆ. ಒಟ್ಟಾರೆ ಕರ್ನಾಟಕ ವೇಗವಾಗಿ ಅಭಿವೃದ್ಧಿಯಾಗುತ್ತಿದೆ ಎಂದೇ ಬಣ್ಣಿಸುತ್ತಿದೆ. ಆದರೆ ಈ ಅಭಿವೃದ್ಧಿಯ ಮಾನದಂಡ ಯಾವುದು ಎಂಬುದೇ ನಮ್ಮೆದಿರುಗಿರುವ ಪ್ರಶ್ನೆ? ಜಾಗತೀಕರಣ ಖಾಸಗೀಕರಣದ ಪರಿಣಾಮಗಳನ್ನು ಅಭ್ಯಸಿಸಲು ಹಾಗೂ ನಮ್ಮ ಸರ್ಕಾರ ಬಿಂಬಿಸುತ್ತಿರುವ ಪ್ರಗತಿಯ ಬಗ್ಗೆಯೇ ಒಂದು ವಿಮರ್ಶಾತ್ಮಕ ಅಂತರ ಇಟ್ಟುಕೊಳ್ಳಲು ಕರ್ನಾಟಕದಲ್ಲಿ ಇಂದು ಯಾವ ವರ್ಗದ, ಎಷ್ಟು ಜನ ಜೈಲು ಪಾಲಾಗುತ್ತಿದ್ದಾರೆಂಬುದನ್ನು ಗಮನಿಸಬೇಕಿದೆ.

ಇತ್ತೀಚಿನ ಒಂದು ಅಂಕಿ ಅಂಶ ಹೀಗಿದೆ.

ಇಸವಿ	ಜೈಲು ಸೇರಿದ ಪ್ರಜೆಗಳ ಸಂಖ್ಯೆ
೧೯೯೧	೫೪೨೨
೧೯೯೩	೬೦೭೭
೧೯೯೬	೭೧೩೩
೧೯೯೯	೮೩೫೧
೨೦೦೪	೧೧೫೦೦

-ಇವರಲ್ಲಿ ಬಹುತೇಕ ಜನ ಗ್ರಾಮೀಣ ರೈತಾಪಿ ಹಾಗೂ ಕುಶಲಕರ್ಮಿ ಜನಾಂಗ ಮತ್ತು ಉದ್ಯೋಗ ಭದ್ರತೆಯಿಂದ, ಪಟ್ಟಣಗಳ ಬಡಜನ ಎಂಬುದು ನಿಸ್ಸಂಶಯ. ಕರ್ನಾಟಕದ ಮಟ್ಟಿಗೆ ಹೇಳಬೇಕೆಂದರೆ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಬಡವರೂ ಹೆಚ್ಚಿನ ಸಂಖ್ಯೆಯಲ್ಲಿ ಜೈಲು ಪಾಲಾಗಿದ್ದಾರೆ. ಇವರೊಂದಿಗೆ ವಿವಿಧ ಚಳವಳಿ, ಹೋರಾಟಗಳ ಕಾರ್ಯಕರ್ತರು, ರಾಜಕೀಯ ಭಿನ್ನಮತೀಯರು, ಉಗ್ರಗಾಮಿಗಳೂ ಗಮನಾರ್ಹ ಸಂಖ್ಯೆಯಲ್ಲಿ ನಿರ್ಬಂಧಕ್ಕೊಳಗಾಗುತ್ತಾರೆ.

ಈಗಿನ ನಮ್ಮನ್ನಾಳುವ ಸರ್ಕಾರ ಯಾವುದೇ ಜನಪರ, ಅಭಿವೃದ್ಧಿ ಕೆಲಸ ನಿರ್ವಹಿಸಲು ನಿರಾಕರಿಸುತ್ತಿದೆ. ಶಿಕ್ಷಣ, ಆರೋಗ್ಯ, ಉದ್ಯೋಗಸೃಷ್ಟಿ ಸಮಾಜ ಕಲ್ಯಾಣದ ಯಾವೊಂದು ಜವಾಬ್ದಾರಿ ಹೊರದೆ 'Welfare State' ಎಂಬ ಆಶಯವೇ ಕರಗಿಹೋಗಿದೆ. ಸರ್ಕಾರ ಈಗೇನಿದ್ದರೂ ಶ್ರೀಮಂತರು, ಖಾಸಗಿ ವ್ಯಾಪಾರಿಗಳ ಸೇವಕನಂತೆ ರೂಪಾಂತರಗೊಂಡಿದೆ. ಬಡವರ ಪಾಲಿಗೆ ಅದು ಹತ್ತಾರು ತೆರಿಗೆ ಕಸಿಯುವ ರಕ್ತಪಿಪಾಸು ಮಾತ್ರ. ಇವರು ಇವುಗಳಿಂದಾಗಿ ಬೇಗನೆ ಬರಿಗೈ ಆಗುತ್ತಾರೆ. ಅಭದ್ರತೆ, ಕೌಟುಂಬಿಕ ನೆಮ್ಮದಿ ನಾಶ-ವಿಘಟನೆ, ಇತ್ಯಾದಿಗಳಿಂದ ಕ್ಷೋಭೆ ಬೆಳೆಯುತ್ತಲೇ ಹೋಗುತ್ತದೆ. ಅಸ್ತಿತ್ವದ ಪ್ರಶ್ನೆಯೇ ಮುಖ್ಯವಾದಾಗ ಕಾನೂನು ಕಟ್ಟಳೆ ಗೌಣವಾಗುವುದೇ ಆಗ.

ಇಂತಾ ಸಂದರ್ಭಗಳಲ್ಲೇ ನಮ್ಮ ಪೊಲೀಸು ಅಧಿಕಾರಿಗಳು ಹಾಗೂ ಉನ್ನತ ಐಎಎಸ್ ಅಧಿಕಾರಿಗಳು

ಕನಸುಗಳ ಕೊಲ್ಲದಿರಿ

ವಾರ್ಷಿಕ ವಿಶೇಷಾಂಕ ೨೦೦೫



ಮೊದಲ ಏಟಿಗೇ ತತ್ತರಿಸಿಹೋಗಿದ್ದ ಜೀವ
ಮತ್ತೊಂದು ಹೊಡೆತವನ್ನು ನಿರೀಕ್ಷಿಸಿಯೇ ಇರಲಿಲ್ಲ
ಆದರೂ ಬಿತ್ತು, ಬಿದ್ದಲ್ಲಿಯೇ ಬಿತ್ತು, ಮತ್ತೆ ಬಿತ್ತು
ಆಗಿದ್ದ ಅನಾಹುತ ಅಷ್ಟಿಷ್ಟಲ್ಲ ನೋಡಿ ;
ಗೆಳೆತನದ ಗೋಣು ಮುರಿದಿತ್ತು, ನಂಬಿಕೆ ನೆಲಕಚ್ಚಿತ್ತು
ವಿಶ್ವಾಸದ ಶಿರ ಉರುಳಿ ಸತ್ಯ ಸತ್ತಿತ್ತು.
ಮಾತುಗಳು ಮರಣಿಸಿದ ಸೂತಕದ ಮನೆಯಿಂದ
ಕೂಗೇ ಕೂಗಿತ್ತು ಜೀವ ಅತ್ತೂ ಅತ್ತೂ ;
'ಕನಸುಗಳ ಕೊಲ್ಲದಿರಿ ಕನಸುಗಳ ಕೊಲ್ಲದಿರಿ'
ಶುಭದ ಶಕುನದ ಹಕ್ಕಿ ಸುಮ್ಮನೆ ಕುಳಿತಿತ್ತು
ಆಗ ನಗುವ ನಕ್ಷತ್ರವೊಂದು ಕಳಚಿಬಿತ್ತು.
ಆ ದಿನದ ರಾತ್ರಿ ಹಗಲಿನಂತಿತ್ತು
ಇಡೀ ಹಗಲು ರಾತ್ರಿಯಾಗಿತ್ತು.

○ ಸಿ. ವೆಂಕಟೇಶ

ಮೀಟಿಂಗ್ ಮಾಡಿ ಪರಿಸ್ಥಿತಿ ನಿಯಂತ್ರಿಸಲು 'ಹೊಸ ಜೈಲುಗಳನ್ನು ಕಟ್ಟುವ' ಪರಿಹಾರ ಕಂಡುಹಿಡಿಯುತ್ತಾರೆ!

ನಮ್ಮಲ್ಲಿ ಈಗಾಗಲೇ ೯೭ ಸೆರೆಮನೆಗಳಿವೆ. ದೇಶಾದ್ಯಂತ ಹೊಸ ಜೈಲುಗಳ ನಿರ್ಮಾಣ ಹಾಗೂ ಸುಧಾರಣೆಗಾಗಿ ೧೮೦೦ ಕೋಟಿ ರೂಗಳ ಯೋಜನೆಒಂದು ಜಾರಿಯಾಗುತ್ತಿದ್ದು ಕರ್ನಾಟಕಕ್ಕೆ ೫೪ ಕೋಟಿ ರೂ. ದಕ್ಕಿದೆ. ಈ ಯೋಜನೆಯಡಿ ಬಾಗಲಕೋಟೆ, ಚಿತ್ರದುರ್ಗ, ಚಾಮರಾಜನಗರ, ಮಡಿಕೇರಿ, ಹಾವೇರಿ, ಉಡುಪಿ ಹಾಗೂ ಕೊಪ್ಪಳಗಳಲ್ಲಿ ತಲಾ ಒಂದು ಸಾವಿರ ಜನರಿಗಾಗಿ ಹೊಸ ಸೆರೆಮನೆಗಳನ್ನು ಕಟ್ಟಲಾಗುತ್ತಿದೆ. ಈಗಾಗಲೇ ಇರುವ ರಾಮನಗರ, ಚಿಂತಾಮಣಿ, ತುಮಕೂರು ಸಕಲೇಶಪುರ ಸಬ್ ಜೈಲುಗಳನ್ನು ದುರಸ್ತಿ ಮಾಡಿ ಇನ್‌ಮೇಟ್ ಕೆಪಾಸಿಟಿ ಹೆಚ್ಚಿಸಲಾಗುತ್ತಿದೆ.

ಇದನ್ನೇ ಇನ್ನೊಂದು ಆ್ಯಂಗಲ್‌ನಿಂದ ನೋಡುವುದಾದರೆ ೧೯೯೦ರಲ್ಲಿ ಬರೇ ೨೦ ಸಾವಿರದಷ್ಟಿದ್ದ ವಕೀಲರ ಸಂಖ್ಯೆ ಈಗ ೫೦ ಸಾವಿರಕ್ಕೇರಿದೆ. ನ್ಯಾಯಾಂಗ, ಪೊಲೀಸ್ ಇಲಾಖೆಗಳ ವೆಚ್ಚವೂ ವಿಪರೀತ ಏರುತ್ತಿದೆ. ಮಾನಸಿಕ ರೋಗಿಗಳ ಸಂಖ್ಯೆ ಗಾಬರಿಗೊಳಿಸುವಷ್ಟು ಹರಡಿದೆ. ಅತಂತ್ರರಾಗಿ ದಿವಾಳಿ ಏಳುತ್ತಿರುವ ಜನ ಮಾದಕವಸ್ತು-ಮದ್ಯ ಸೇವನೆಯ ಚಟಕ್ಕೆ ದಾಸರಾಗುತ್ತಿದ್ದಾರೆ. ೨೦೦೦ರಲ್ಲಿ ೧೨೫೪ ಕೋಟಿ ರೂನಷ್ಟಿದ್ದ ಲಿಕ್ಕರ್ ವ್ಯಾಪಾರ ೨೦೦೫ರ ಕೊನೆಯಲ್ಲಿ ೨೫೦೪ ಕೋಟಿ ರೂಗಳಿಗೆ ಏರಿದೆ. ಅಂದರೆ ಗ್ರಾಮೀಣ ಹಾಗೂ ನಗರವಾಸಿ ಮಾನಸಿಕ ಕ್ಷೋಭೆಗೀಡಾಗಿರುವ ಬಡವರಿಂದ ಇಷ್ಟು ಹಣ ಲಿಕ್ಕರ್ ವ್ಯಾಪಾರಿಗಳು ಕಸಿದುಕೊಂಡಿದ್ದಾರೆ.

ಸಮೃದ್ಧ ಪ್ರಗತಿಯ ಬೀಡು ಎಂದೇ ಬಿಂಬಿಸಲ್ಪಡುತ್ತಿರುವ ನಮ್ಮ ಕರ್ನಾಟಕ ನಿಜವಾಗಿಯೂ ಎತ್ತ ಸಾಗುತ್ತಿದೆ ಎಂದರಿಯಲು ಇವಿಷ್ಟೇ ಅಲ್ಲದೆ ಆತ್ಮಹತ್ಯೆಗೆ ಶರಣಾದ ಐದುನೂರಕ್ಕೂ ಹೆಚ್ಚು ರೈತರೂ ನಮ್ಮೆದಿರು ಇದ್ದಾರೆ.

ಈ ಎಲ್ಲಾ ಅನಾಹುತಗಳ ಸಂಚಯಿತ ಪರಿಣಾಮವಾಗಿ ಕರ್ನಾಟಕದಲ್ಲಿ ಮತ್ತೆ ಭೀಕರ ಆರ್ಥಿಕ ಬಿಕ್ಕಟ್ಟು ತಲೆದೋರಿ ಅದೇ ಈಗ ಸಾಮಾಜಿಕ ಕ್ಷೋಭೆಯ ಅಲ್ಲೋಲ ಕಲ್ಲೋಲಗಳನ್ನು ಸೃಷ್ಟಿಸುತ್ತಿದೆ. ವಿಧಾನಸೌಧವೊ, ವಿಕಾಸಸೌಧವೊ ನಮ್ಮನ್ನಾಳುತ್ತಿರುವವರಿಗೆ ಇದು ಕೇವಲ ಇನ್ನೊಂದು ಕಾನೂನು ಸುವ್ಯವಸ್ಥೆಯ ಪ್ರಶ್ನೆಯಾಗಷ್ಟೇ ಕಾಣುತ್ತದೆ.

ಮಾರ್ಕ್ಸ್ ತನ್ನ ಹೋಲಿ ಫ್ಯಾಮಿಲಿ ಕೃತಿಯಲ್ಲಿ 'ಕ್ರೈಮ್ ಗೆ ವೈಯಕ್ತಿಕ ಶಿಕ್ಷೆ ಪರಿಹಾರವಲ್ಲ. ಬದಲಾಗಿ ಅಪರಾಧಕ್ಕೆ ಪ್ರೇರಣೆ ನೀಡುವ ಸಮಾಜದೊಳಗಿನ ಮೂಲ ರಚನೆಯನ್ನು ಧ್ವಂಸಗೊಳಿಸಬೇಕು. ಮತ್ತು ಪ್ರತಿ ಮಾನವನ ಅಸ್ತಿತ್ವ ವಿಕಾಸಕ್ಕೆ ಪೂರ್ಣ ಅವಕಾಶವಿರಬೇಕು. ಮನುಷ್ಯ ಪ್ರಜ್ಞೆ ಭೌತಿಕ ಪರಿಸರದಿಂದ ರೂಪುಗೊಳ್ಳುತ್ತಾದ್ದರಿಂದ ಆ ಪರಿಸರವನ್ನೇ ಇನ್ನಷ್ಟು ಮಾನವೀಯಗೊಳಿಸಬೇಕು' ಎಂದು ವಿಶ್ಲೇಷಿಸಿದ್ದರು.

ಈ ದಿನ ಸರ್ಕಾರ ತಾನು ಸಾಧಿಸುತ್ತಿರುವ ಪ್ರಗತಿಯ ಬಗ್ಗೆ ತಂದಿಳಿಸುತ್ತಿರುವ ಸ್ವರ್ಗದ ಬಗ್ಗೆ ಏನೇ ಬಡಾಯಿ ಕೊಚ್ಚಿಕೊಂಡರೂ ವಸ್ತುಸ್ಥಿತಿ ಬೇರೆಯದೇ ಕತೆ ಹೇಳುತ್ತಿದೆ.

ಇನ್‌ಫೋಸಿಸ್ ನಾರಾಯಣ ಮೂರ್ತಿಗೆ ಸಾವಿರ ಕೋಟಿ ಲಾಭ ಬಂದರೆ, ಲಿಕ್ಕರ್ ಕಂಪನಿಗಳು ದುಡ್ಡು ದೋಚಿದರೆ ಅದು ಸಮಸ್ತ ಕನ್ನಡಿಗರ - ಕರ್ನಾಟಕದ ಪ್ರಗತಿ ಹೇಗಾಗುತ್ತದೆ? ಖ್ಯಾತ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ್ ತಮ್ಮ ಇತ್ತೀಚಿನ ಕೃತಿ 'Development as Freedom'ನಲ್ಲಿ 'ಸ್ವಾತಂತ್ರ್ಯದ ಅಳತೆಗೋಲು ಎಂಬುದು, ಅದು ನಮ್ಮನ್ನು ಎಷ್ಟು ಬಂಧನಗಳಿಂದ ಬಿಡಿಸಿ ಸ್ವತಂತ್ರರನ್ನಾಗಿಸಿದೆ ಎಂಬುದಾಗಿರಬೇಕು' ಎನ್ನುತ್ತಾರೆ. ಆದರಂತೆ ನಮಗೆ ಜಾತಿ ವ್ಯವಸ್ಥೆಯ ಬಂಧನದಿಂದ ಅರೆ ಊಳಿಗಮಾನ್ಯ ಶೋಷಣೆಯಿಂದ ಸಾಮ್ರಾಜ್ಯಶಾಹಿ ಆರ್ಥಿಕ ಲೂಟಿಯಿಂದ ನಿಜಕ್ಕೂ ಸ್ವಾತಂತ್ರ ಸಿಕ್ಕಿದೆಯೋ ಎಂದು ನೋಡಿಕೊಳ್ಳಬೇಕಿದೆ. ಕರ್ನಾಟಕದ ಜನ ಸ್ವಾತಂತ್ರಾ ನಂತರ ಬಡತನ, ಅಸಮಾನತೆ, ಲಿಂಗಭೇದ ಜಾತಿ ಈ ಎಲ್ಲಾ ಬಂಧನಗಳಿಂದ ಬಿಡುಗಡೆ ಆಶಿಸಿದ್ದರು. ಬಹುಶಃ ಆ ಜನರೇ ಈಗ ಹೊಸ ಜೈಲುಗಳಲ್ಲಿ ಭರ್ತಿಯಾಗುತ್ತಿದ್ದಾರೆ.

ಕೆಲವರಿಗೆ ಮಾತ್ರ ದಕ್ಕುತ್ತಿರುವ ಅಭಿವೃದ್ಧಿಯ ಫಲ ಉಳಿದ ನಿರ್ಭಾಗ್ಯರನ್ನು ಬಂಧನದ ಸಂಕೋಲೆಗಳಲ್ಲೇ ಇರಿಸುತ್ತಿದೆ.

ಹಾಗಾಗೇ ಈಗಿನ ಪರಿಸ್ಥಿತಿಗಳು ಉಳ್ಳವರ ಪಾಲಿಗೆ, ಸರ್ಕಾರದ ತರ್ಕಕ್ಕೆ ಅಭಿವೃದ್ಧಿಯ ಮೈಲಿಗಲ್ಲಾಗಿ ಭಾಸವಾಗುತ್ತಿವೆ. ಆದರೆ ನಿಷ್ಠುರವಾಗಿ ಗಮನಿಸುವವರ ಕಣ್ಣಿಗೆ ಜೈಲೇ ಅಭಿವೃದ್ಧಿಯ ಮೈಲಿ ಮತ್ತು ಗಲ್ಲು... ❑

ಸರ್ಕಾರ ತಾನು ಸಾಧಿಸುತ್ತಿರುವ ಪ್ರಗತಿಯ ಬಗ್ಗೆ ತಂದಿಳಿಸುತ್ತಿರುವ ಸ್ವರ್ಗದ ಬಗ್ಗೆ ಏನೇ ಬಡಾಯಿ ಕೊಚ್ಚಿಕೊಂಡರೂ ವಸ್ತುಸ್ಥಿತಿ ಬೇರೆಯದೇ ಕತೆ ಹೇಳುತ್ತಿದೆ.
ಇನ್‌ಫೋಸಿಸ್ ನಾರಾಯಣ ಮೂರ್ತಿಗೆ ಸಾವಿರ ಕೋಟಿ ಲಾಭ ಬಂದರೆ, ಲಿಕ್ಕರ್ ಕಂಪನಿಗಳು ದುಡ್ಡು ದೋಚಿದರೆ ಅದು ಸಮಸ್ತ ಕನ್ನಡಿಗರ - ಕರ್ನಾಟಕದ ಪ್ರಗತಿ ಹೇಗಾಗುತ್ತದೆ?

○ ವಡ್ಡಗೆರೆ ನಾಗರಾಜಯ್ಯ

ದಲಿತ - ರೈತ ಜತೆಗೂಡಬೇಕು, ಯಾಕೆ ?

ಸ್ಥಾಪಿತ ಶಕ್ತಿ ರಾಜಕಾರಣ ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಸೃಷ್ಟಿಸಿರುವ ಕೆಡುಕುಗಳ ವಿರುದ್ಧ ರೈತಸಂಘ ಮತ್ತು ದಲಿತ ಸಂಘಟನೆಗಳು ಜತೆಗೂಡಿ ಪರ್ಯಾಯ ರಾಜಕಾರಣದ ಮೂಲಕ ಒಂದು ಸಹನೀಯ ಸಾಮಾಜಿಕ ವಾತಾವರಣ ನಿರ್ಮಿಸಲೆತ್ನಿಸುತ್ತಿರುವ ಪ್ರಕ್ರಿಯೆ ಎರಡೂ ಸಂಘಟನೆಗಳನ್ನು ಅಧಿಕಾರ ರಾಜಕಾರಣದ ಮಹಾನ್ ಪ್ರವೇಶದ್ವಾರಕ್ಕೆ ತಂದು ನಿಲ್ಲಿಸುವಂಥದ್ದು.

ಹಾಗಿದ್ದ ಮೇಲೆ ಈ ಹಿಂದೆ ದಲಿತರಾಗಲೀ ರೈತರಾಗಲೀ ರಾಜಕೀಯ ಪ್ರವೇಶ ಮಾಡಿರಲಿಲ್ಲವೇ ? ಹೌದು ಪ್ರವೇಶಿಸಿದ್ದರು. ಇಬ್ಬರೂ ಈಗಾಗಲೇ ಅಧಿಕಾರ ರಾಜಕಾರಣವು ನೀಡುವ ಮಜ ಮೋಜು ಮೇಜವಾನಿಗಳ ವೈಭವದ ಬದುಕನ್ನು ಅನುಭವಿಸಿದ್ದಾರೆ. ಈಗಲೂ ಅನುಭವಿಸುತ್ತಲಿದ್ದಾರೆ. ಆದರೆ ಅಂತಹ ಎಲ್ಲಾ ನಾಯಕರೂ ಸಮಗ್ರ ದಲಿತರ ಅಥವಾ ರೈತರ ಸಾಮುದಾಯಿಕ ಪ್ರತಿನಿಧಿಗಳಾಗಿ ತಮ್ಮನ್ನು ಬದ್ಧತೆಯಿಂಧ ತಾವಾಗಿಯೂ ಸ್ಥಾಪಿಸಿಕೊಳ್ಳಲಿಲ್ಲ; ಸಂಘಟನೆಗಳೂ ಪ್ರತಿಷ್ಠಾಪಿಸಲಿಲ್ಲ. ಅಥವಾ ಜನಪರ ಸಂಘಟನೆಗಳನ್ನು ಪ್ರತಿನಿಧಿಸಿದ ನಾಯಕರ ಸಂಖ್ಯೆ ಮತ್ತು ಅವರ ಧ್ವನಿ ಅತ್ಯಂತ ಕ್ಷೀಣವೆಂದೇ ಹೇಳಬೇಕು.



ಈಗ ಪರಿಸ್ಥಿತಿ ಭಿನ್ನವಾಗಿದೆ. ನಾಡಿನ ರಾಜಕೀಯ ಭೂಮಿಕೆಯ ದೃಶ್ಯಾವಳಿ ಬದಲಾಗುತ್ತಿದೆ. ಜನಪರ ಚಳವಳಿಗಳನ್ನು ರೂಪಿಸಿ ಜನಸಾಮಾನ್ಯರ ಹಿತ ಕುರಿತು ಹಗಲಿರುಳು ಚಿಂತಿಸಿದ ದುಡಿದ ಘಟಾನುಘಟಿ ನೇತಾರರು, ಪರ್ಯಾಯ ರಾಜಕಾರಣದ ದೀವಟಿಗೆ ಹಿಡಿದು ಬದಲಾವಣೆಯ ಹೊಸದಿಕ್ಕು ಹುಡುಕ ಹೊರಟಿದ್ದಾರೆ. ಅಧಿಕಾರ ರಾಜಕಾರಣವನ್ನು ತಮ್ಮ ಜನಪರ ಹೋರಾಟದ ಒಂದು ಭಾಗವನ್ನಾಗಿ ಮನಗಂಡು 'ದಲಿತ ರೈತ ಒಕ್ಕೂಟವು' ಐಕ್ಯ ಹೋರಾಟಕ್ಕೆ ಧುಮುಕುತ್ತಿರುವುದು ಕರ್ನಾಟಕದ ರಾಜಕೀಯ ಪರಿವರ್ತನಾ ಪಥದಲ್ಲಿ ಒಂದು ಚಾರಿತ್ರಿಕ ಮೈಲಿಗಲ್ಲು.

ನಾಡಿನ ರಾಜಕೀಯ ಭೂಮಿಕೆಯ ದೃಶ್ಯಾವಳಿ ಬದಲಾಗುತ್ತಿದೆ. ಜನಪರ ಚಳವಳಿಗಳನ್ನು ರೂಪಿಸಿ ಜನಸಾಮಾನ್ಯರ ಹಿತ ಕುರಿತು ಹಗಲಿರುಳು ಚಿಂತಿಸಿದ ದುಡಿದ ಘಟಾನುಘಟಿ ನೇತಾರರು, ಪರ್ಯಾಯ ರಾಜಕಾರಣದ ದೀವಟಿಗೆ ಹಿಡಿದು ಬದಲಾವಣೆಯ ಹೊಸದಿಕ್ಕು ಹುಡುಕ ಹೊರಟಿದ್ದಾರೆ. ಅಧಿಕಾರ ರಾಜಕಾರಣವನ್ನು ತಮ್ಮ ಜನಪರ ಹೋರಾಟದ ಒಂದು ಭಾಗವನ್ನಾಗಿ ಮನಗಂಡು 'ದಲಿತ ರೈತ ಒಕ್ಕೂಟವು' ಐಕ್ಯ ಹೋರಾಟಕ್ಕೆ ಧುಮುಕುತ್ತಿರುವುದು ಕರ್ನಾಟಕದ ರಾಜಕೀಯ ಪರಿವರ್ತನಾ ಪಥದಲ್ಲಿ ಒಂದು ಚಾರಿತ್ರಿಕ ಮೈಲಿಗಲ್ಲು.

ರಾಜಕೀಯವೆಂದರೆ ಹೇವರಿಸಿಕೊಳ್ಳುತ್ತಾ ಗಾವುದ ದೂರವಿದ್ದವರಲ್ಲಿಯೂ ಈಗ ಪರ್ಯಾಯ ರಾಜಕಾರಣದ ಭಿನ್ನ ಪ್ರಜ್ಞೆಯೊಂದು ಜಾಗೃತವಾಗುತ್ತಿದೆ. ಇದಕ್ಕೆ ಮೂಲಕಾರಣ/ ಅಧಿಕಾರರೂಢ ಸ್ಥಾಪಿತ ರಾಜಕೀಯ ಹಿತಾಸಕ್ತಿಗಳು ಮೆತ್ತಿದ ಕೊಳೆ ಮತ್ತು ಸಾಮಾಜಿಕ ಜಡತ್ವವನ್ನು ತೊಳೆಯಲು ರಾಜಕಾರಣವೂ ಒಂದು ಪರ್ಯಾಯ ಉದಕವಾಗಬಲ್ಲದೆಂಬ ನಂಬಿಕೆ ಹಾಗೂ ಇಂತಹ ಮಹಾನ್ ಪ್ರಯತ್ನದ ಮುಂಚೂಣಿಯಲ್ಲಿರುವ ನಾಯಕರ ಸಾಮರ್ಥ್ಯದ ಮೇಲಿರುವ ವಿಶ್ವಾಸ. ದಲಿತ-ರೈತ ಒಕ್ಕೂಟವು ಪರ್ಯಾಯ ರಾಜಕಾರಣಕ್ಕೆ ವೇದಿಕೆಯಾಗುತ್ತದೆಯೇ ಹೊರತು ಅದೇ ಶಕ್ತಿ ರಾಜಕಾರಣದ 'ಕಣ' ವಾಗಲಾರದೆಂದು ನಂಬುತ್ತೇವೆ. ಪರ್ಯಾಯ ರಾಜಕಾರಣದ ನೆಪದಲ್ಲಿಯಾದರೂ ಸಮಾಜದಲ್ಲಿ ಪರಸ್ಪರ ಸಂಧಿಸಲಾರದ ವಿರುದ್ಧ ಧ್ರುವಗಳೆಂದೇ ಬಿಂಬಿತವಾಗಿದ್ದ ದಲಿತ ಮತ್ತು ರೈತಸಂಘಟನೆಗಳು ವಿಲೀನಗೊಳ್ಳುತ್ತಿರುವುದು ಈ ಮಣ್ಣಿನಲ್ಲಿ ಸಾಮಾಜಿಕ ಪರಿವರ್ತನೆಯ ನವಮನ್ವಂತರದ ಬೀಜ ಮೊಳೆಯಲು ಕಾರಣವಾಗಬಲ್ಲದು. ಹೊಸ ಜಾಗೃತಿಯ ಭಿನ್ನಪ್ರಜ್ಞೆಯ ಈ ಮೊಳಕೆ ಗಿಡವಾಗಿ ಬೆಳೆದು ಕರ್ನಾಟಕದ ಮೂಲಕ ಇಡೀ ದೇಶದಾದ್ಯಂತ ಎಲ್ಲಾ ಸ್ಥರಗಳ ಶೋಷಿತ, ದುಃಖಿತ, ಅವಮಾನಿತ, ಅಲಕ್ಷಿತ, ಶ್ರಮಿಕ ಜನಪರ ಮನಸ್ಸುಗಳಲ್ಲಿ ಮರವಾಗಿ ಆವರಿಸುವಂತಾಗಬೇಕು.

ದಲಿತ ಮತ್ತು ರೈತ ಸಂಘಟನೆಗಳು ವಿಲೀನಗೊಳ್ಳುತ್ತಿರುವ ಇದೇ ವೇಳೆಯಲ್ಲಿ ಇಬ್ಬರೂ ಪರಸ್ಪರ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಯಾಕೆಂದರೆ ಎರಡೂ ಚಳವಳಿಗಳು ಈಗಾಗಲೇ ತಮ್ಮ ಸ್ವಯಂಕೃತ ಅಪರಾಧಗಳಿಂದಲೂ, ಆಳುವ ವರ್ಗಗಳ ಪಿತೂರಿ ಗಳಿಂದಲೂ ಹಾಗೂ ಇತರ ಕೋಮುವಾದಿಗಳ ಜನ ವಿರೋಧಿ ಚಳವಳಿಗಳ ಒಳಸಂಚು ಗಳಿಂದಲೂ ಒಡೆದು ಒಪ್ಪಾಗಿ, ಸಿಗಿದು ಸೀಳಾಗಿ, ಹೋರಾಟಗಾರರು ಬಿದ್ದು ಬೆಪ್ಪಾದ ನಿದರ್ಶನ ನಮ್ಮ ಕಣ್ಣ ಮುಂದಿದೆ. ಪರ್ಯಾಯ ರಾಜಕಾರಣವೂ ಹಾಗಾಗದಿರ ಲೆಂದು ವಹಿಸುವ ಎಚ್ಚರ ನಮ್ಮ ಎದೆಯಲ್ಲಿ ಉರಿಯುವಂತೆ ನೋಡಿಕೊಳ್ಳುವುದು ಬಹಳ ಮುಖ್ಯ. ಆದುದರಿಂದ ಈ ಎರಡೂ ಸಂಘಟನೆಗಳು ಪರಸ್ಪರ ಆತ್ಮಾವಲೋಕನ ಮಾಡಿಕೊಂಡು ಎಚ್ಚರವಹಿಸಬೇಕಾಗಿರುವ ಈ ಸನ್ನಿವೇಶವನ್ನು ನಮ್ಮ ಗ್ರಾಮಭಾರತದ ಜಾತಿವ್ಯವಸ್ಥೆ ಹಾಗೂ ವರ್ಗ ಸ್ವಭಾವಗಳ ಚಹರೆಗಳ ಮೂಲಕ ವಿಶ್ಲೇಷಿಸಬೇಕಾದ ಅಗತ್ಯವಿದೆ.

ಬ್ರಾಹ್ಮಣ ಕನ್ಯೆ ಶ್ರೀ ಬಾಲಗೌರಿಯು ಐದು ಜನ ಗಂಡು ಮಕ್ಕಳನ್ನು ಪಡೆದ ಬಳಿಕ ತನ್ನ ಗಂಡನು ಮಾದಿಗನೆಂದು ತಿಳಿದವಳಾಗಿ ಗಂಡನಿಗೂ ಮಕ್ಕಳಿಗೂ ಕೋಣಗಳಾಗಿ ಹುಟ್ಟಿ ಬಲಿಕೊಡುವುದು ರೈತಾಪಿ ವರ್ಗದ ಗೌಡರು! ಅಂದರೆ ದಲಿತರನ್ನು ಕೊಲ್ಲಲು ಶೂದ್ರ ರೈತರು ಬ್ರಾಹ್ಮಣರ ಕೈಯಲ್ಲಿ ಆಯುಧಗಳಾಗಿ ಬಳಕೆಯಾಗುತ್ತಾರೆ. ಬ್ರಾಹ್ಮಣ ದೇವತೆ ಯನ್ನು ಸಂತೃಪ್ತಿಗೊಳಿಸಲು ತಮ್ಮ ಹೊಲಗದ್ದೆಗಳಲ್ಲಿ ದುಡಿಯು ತ್ತಿರುವ ಕೋಣ (ದಲಿತ) ಗಳನ್ನೇ ಬಲಿಗೊಡುತ್ತಾರೆ! ಇಲ್ಲಿ ಸಂಗತವಾಗುವ ಸತ್ಯವೆಂದರೆ ಬ್ರಾಹ್ಮಣರು ದುಡಿಯದೇ ತಿನ್ನುವರು. ಶೂದ್ರರು ದುಡಿಸಿಕೊಂಡು ತಿನ್ನುವರು. ದಲಿತರು ಪರಹಿತಕ್ಕಾಗಿ ದುಡಿಯುವುದೂ ಸಾಲದೆ ಅಸ್ಪೃಶ್ಯರಾಗಿ ಹುಟ್ಟಿದ ತಪ್ಪಿಗೆ ಯಜ್ಞಪಶುಗಳಂತೆ ಬಲಿಯಾಗುವರು. ಗೌಡರು ದಲಿತರ ದುಡಿಮೆಯನ್ನು ತಿಂದರೆ, ಬ್ರಾಹ್ಮಣರು ದಲಿತರನ್ನೇ ತಿಂದುಕೊಳ್ಳುತ್ತಾರೆ. ಹಾಗಾಗಿ ದಲಿತರು ಶೂದ್ರ ರಿಂದ ನೇರವಾಗಿಯೂ ಬ್ರಾಹ್ಮಣರಿಂದ ಪರೋಕ್ಷವಾಗಿಯೂ ಹತ್ಯೆಯಾಗಲಿಕ್ಕೇ ಇರುವ ಯಜ್ಞಪಶುಗಳು.

ಅಂತರ್‌ಜಾತಿ ವಿವಾಹ ಮಾಡಿಕೊಂಡ ಅಪರಾಧ ಕ್ಕಾಗಿ ದಲಿತನನ್ನೂ ಅವನ ಮಕ್ಕಳನ್ನೂ ಕೊಂದು ಬ್ರಾಹ್ಮಣರು ಸಾಧಿಸಿದ ದಿಗ್ವಿಜಯದ ಸಂಕೇತ ಮಾರಿಹಬ್ಬ. ಬ್ರಾಹ್ಮಣ ಶಾಹಿಯ ದಿಗ್ವಿಜಯವನ್ನು ಇಡೀ ಊರು ಸಂಭ್ರಮದಿಂದ ಮಾರಿಹಬ್ಬವನ್ನಾಗಿ ಆಚರಿಸುತ್ತದೆ. ಬ್ರಾಹ್ಮಣರಿಲ್ಲದ ಊರಿ ನಲ್ಲೂ ಈ ಹಬ್ಬ ಪ್ರಾಚೀನ ಕಾಲದಿಂದಲೂ ಚಾಲ್ತಿಯಲ್ಲಿದೆ.

ಪರ್ಯಾಯ ರಾಜಕಾರಣ ಕುರಿತು ತೀವ್ರ ಚರ್ಚೆ-ಸಂವಾದ ಗಳು ನಡೆಯುತ್ತಿರುವ ಈ ಹೊತ್ತಿನಲ್ಲಿ ಮೇಲಿನ ಇಷ್ಟೂ ವಿವರಗಳನ್ನು ರಾಜಕೀಯಕ್ಕೂ ಅನ್ವಯಿಸಿಕೊಂಡು ನೋಡಿ ಎಲ್ಲವೂ ಸ್ಪಷ್ಟವಾಗುತ್ತವೆ.

೧೯೫೦ ರಷ್ಟು ಹಿಂದೆಯೇ ಸರಕಾರವು ಮಾರಿಬಲಿ ಯಂತಹ ಸಂಪ್ರದಾಯವನ್ನು ನಿಷೇಧಿಸಿದ್ದರೂ ಸಹ ಅದು ಮುಂದುವರೆಯುತ್ತಲೇ ಬಂದಿದೆ. ಹಾಗೆಯೇ ಜೀತ ಪದ್ಧತಿ ಯನ್ನು ಸಂಪೂರ್ಣವಾಗಿ ನಿಷೇಧಿಸಿ ಕಾಯಿದೆ ಜಾರಿಯಾಗಿ ದ್ದರೂ ಸಹ ಒಕ್ಕಲಿಗರು ಅಥವಾ ಗೌಡಾಳಿಕೆ ಪರಂಪರೆಯ ಲಿಂಗಾಯಿತ ಮತ್ತಿತರ ರೈತರು, ಭೂಮಾಲೀಕರು ಆರ್ಥಿಕವಾಗಿ ದಲಿತರಿಗಿಂತ ಬಲಿಷ್ಠರಾಗಿರುವುದರಿಂದ ವರ್ಗದ ಯಜಮಾನಿಕೆಯಿಂದಲೂ, ಸಾಮಾಜಿಕವಾಗಿ ಜಾತಿ ಮೇಲ್ಮೆಯಿಂದಲೂ ದಲಿತರನ್ನು ತುಳಿದು ಅವರನ್ನು

'ಕೋಮುವಾದಿ ರಾಜಕೀಯ ಅಥವಾ ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ ನಮ್ಮ ಒಗ್ಗೂಡುವಿಕೆ' ಎಂದಾದರೆ ದಲಿತರನ್ನು ಶೋಷಿಸುವ ಮೇಲ್ಜಾತಿ ರೈತ, ಭೂಮಾಲೀಕ ಶೋಷಣಾ ನೆಲೆಗಳನ್ನು ಮೂಲೋತ್ಪಾಟನೆ ಮಾಡುವುದಕ್ಕಿಂತ ರಾಜಕೀಯಾಧಿಕಾರ ಹೊಂದುವುದೇ ನಿಮಗಿರುವ ಆದ್ಯ ಮೂಲೋದ್ದೇಶವೆ? ನಿಮ್ಮ ಒಗ್ಗೂಡುವಿಕೆಯನ್ನು ಇಂತಹ ವಿಷಯ ಸಾಮಾಜಿಕ ಚಹರೆಗಳು ಪ್ರಶ್ನಿಸುವುದರಿಂದ ಈಗ ರೈತ ಸಂಘಟನೆಯು 'ನಮ್ಮ ಒಗ್ಗೂಡುವಿಕೆಯಿಂದ ದಲಿತರ ಮೇಲೆ ಮೇಲ್ಜಾತಿ ಭೂ ಮಾಲೀಕರಿಂದಾಗುವ ಹತ್ಯಾಕಾಂಡ, ಅತ್ಯಾಚಾರ, ಹಲ್ಲೆ ಆಕ್ರಮಣ ಮುಂತಾದ ದೌರ್ಜನ್ಯಗಳಿಗೆ ತಡೆ ಹಾಕುವುದೇ ತತ್‌ಕ್ಷಣದ ಪರ್ಯಾಯ ರಾಜಕಾರಣ.



ತನಗೆ ಬಲಿಯಾಗುವಂತೆ ಶಾಪವಿಕ್ಕುತ್ತಾಳೆ. ಅದರಂತೆ ಮುಂದೆ ಅವಳು ಮಾರಿದೇವತೆಯಾಗಿ ಅವತರಿಸಿದಾಗ ಅವನ ಗಂಡನೂ ಮಕ್ಕಳೂ ರೈತಾಪೀ ಗೌಡರ ಹಟ್ಟಿಯಲ್ಲಿ ಕೋಣ ಗಳಾಗಿ ಹುಟ್ಟುತ್ತಾರೆ. ಅನೂಚಾನಾಗಿ ನಡೆದುಕೊಂಡು ಬಂದ ಸಂಪ್ರದಾಯದ ಪ್ರಕಾರ ಶೂದ್ರಗೌಡರು ಮಾರಿ ದೇವತೆಗೆ ಕೋಣಗಳನ್ನು ಬಲಿಗೊಟ್ಟುಸಂಪ್ರೀತಗೊಳಿಸುತ್ತಾರೆ. ಊರಿನ ಕೇಡುಗಳನ್ನು ನಿವಾರಿಸಿ ಹೊಲಗದ್ದೆಗಳಲ್ಲಿ ಫಲಸಮೃದ್ಧಿ ಅನುಗ್ರಹಿಸಬೇಕೆಂದು ಭಕ್ತಾದಿಗಳು ದೇವಿಯ ಮುಂದೆ ಬೇಡಿಕೊಳ್ಳುತ್ತಾರೆ. ಹೀಗೆ ದೇವಿಗೆ ಕೋಣಗಳನ್ನು ಬಲಿಗೊಟ್ಟು ಸಂತುಷ್ಟಗೊಳಿಸುವುದರಿಂದ ತಮಗೆ ಶ್ರೇಯಸ್ಕರ ವಾಗುವುದೆಂಬುದು ಗ್ರಾಮೀಣ ಜನಪದದಲ್ಲಿರುವ ಅಚಲ ನಂಬಿಕೆ, ದೃಢ ವಿಶ್ವಾಸ.

ಈ ಕಥೆಯಿಂದ ನಿಚ್ಚಳವಾಗುವುದು ಇಷ್ಟು : ಮಾರಿದೇವತೆ ಬ್ರಾಹ್ಮಣ ಜಾತಿಯವಳು. ತನ್ನ ಗಂಡ ಮತ್ತು ಮಕ್ಕಳನ್ನು ಕೋಣಗಳ ರೂಪದಲ್ಲಿ ಆಹುತಿ ತೆಗೆದುಕೊಳ್ಳು ವುದು ಅವಳ ಪರಮೋದ್ದೇಶ. ಆ ಕೋಣಗಳು ದಲಿತರೆಂಬು ದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕೋಣಗಳನ್ನು

ಈ ಕಥೆಯ ತಥ್ಯವಿಷ್ಟೆ : ಬ್ರಾಹ್ಮಣರು ದುಡಿಯುವ ವರ್ಗವಲ್ಲ, ಉತ್ಪಾದನೆಯಲ್ಲಿ ಅವರ ಬೆವರ ಪಾಲು ಏನೂ ಇಲ್ಲ. ಪೂಜೆ, ಪುನಸ್ಕಾರ, ಮದುವೆ-ಮುಂಜಿ, ಶ್ರಾದ್ಧ - ಶೋಭನ, ಜೋತಿಷ್ಯ, ಪೌರೋಹಿತ್ಯ, ವಾಸ್ತು ಅಪರಕರ್ಮ ಮುಂತಾದ ಮೌಢ್ಯಗಳನ್ನು ಬಿತ್ತಿ ದುಡಿಯುವ (ರೈತ) ವರ್ಗವನ್ನು ಮತಿ ಭ್ರಾಂತಿಯಲ್ಲಿರಿಸಿ, ಆ ಮೂಲಕವೇ ಶತ್ರು ಸಂಹಾರದ ಸೂತ್ರ ನೇಯುತ್ತಾರೆ. ಈ ಸೂತ್ರ ಎಲ್ಲ ಕಡೆ ವಿಸ್ತರಿಸುವಂತೆ ನೋಡಿಕೊಂಡು ತಾವು ಮಾತ್ರ ಅನಾಯಾಸವಾಗಿ ತಿಂದುಂಡು ಸುಖಿಸುತ್ತಾ ನೆಮ್ಮದಿಯ ಬದುಕು ಕಟ್ಟಿಕೊಳ್ಳುತ್ತಾರೆ. ಅಧಿಕಾರ ಮತ್ತು ಜಾತಿ ಶ್ರೇಣಿಯ ತುತ್ತತುದಿಯಲ್ಲಿದ್ದು ಬೌದ್ಧಿಕವಾಗಿ ಎಲ್ಲರ ಮೇಲೂ ಹಿಡಿತ ಸಾಧಿಸಿ ಅಧೀನವರ್ಗ ಮತ್ತು ಅಧೀನ ಜಾತಿಗಳನ್ನು ಹುಟ್ಟುಹಾಕುತ್ತಾ ಹೋಗುವುದು ಬ್ರಾಹ್ಮಣ ಮೀಮಾಂಸೆ. ಬ್ರಾಹ್ಮಣ ಯಾಜಮಾನ್ಯವು ಸೃಷ್ಟಿಸಿರುವ ಈ ಕಾರ್ಯತಂತ್ರವು ಅನೂಚಾನವಾಗಿ, ಅವಿಚ್ಛಿನ್ನವಾಗಿ, ಅನಿರ್ಬಂಧಿತವಾಗಿ ವೇಷ ಧರಿಸುತ್ತಾ ಸಾಮಾಜಿಕ ಅಸಮಾನತೆಗಳನ್ನು ಪೋಷಿಸಿಕೊಂಡು ನಿತ್ಯಧಾರೆಯಾಗಿ ಹರಿಯುತ್ತಿದೆ.

ಜೀತಗಾರರನ್ನಾಗಿ ನೇಮಿಸಿಕೊಂಡು ಅಥವಾ ಒಂದಲ್ಲಾ ಒಂದು ರೀತಿಯಲ್ಲಿ ತಮ್ಮ ಊಳಿಗದ ಒತ್ತಾಯದ ಚಾಕರಿಗಳಿಗೆ ಹಚ್ಚಿರುವುದು ಮುಂದುವರೆದುಕೊಂಡು ಬಂದಿದೆ.

ದಲಿತರ ಮಟ್ಟಿಗೆ ರೈತಾಪೀ ಶೂದ್ರ ವರ್ಗವು ದಲಿತರೊಂದಿಗೆ ಹೊಂದಿರುವ ಸಂಬಂಧಗಳು ಇನ್ನೂ ಸಂಗತವಾಗಿ, ಪೂರ್ಣವಾಗಿ, ಸುಗಮವಾಗಿ, ನಿರಾಳವಾಗಿ, ಕಾಣುತ್ತಿಲ್ಲ. ಶೂದ್ರರಿಂದ ದಲಿತರ ಮೇಲೆ ಆಗಾಗ ನಡೆಯುತ್ತಿರುವ ದೌರ್ಜನ್ಯಗಳೇ ಇದಕ್ಕೆ ಸಾಕ್ಷಿ. ದಲಿತರನ್ನು ಅಸ್ಪೃಶ್ಯವಾಗಿ ಕಾಣುವ ಇಲ್ಲಿ ಅವರನ್ನು ಅವಮಾನಪಡಿಸಲು ವೈಯಕ್ತಿಕ ಅಭಿರುಚಿಗೆ ಸಂಬಂಧಿಸಿದ ದನದ ಮಾಂಸಾಹಾರ ಸೇವನೆಯೂ ಒಂದು ಅಸ್ತ್ರವಾಗಿ ಬಳಕೆಯಾಗುತ್ತದೆ. ಅಷ್ಟೇ ಯಾಕೆ ಮಹಿಳೆಯನ್ನು ಸಾರ್ವಜನಿಕವಾಗಿ ಬೆತ್ತಲೆಗೊಳಿಸಿ ಹುಟ್ಟುಮಾರ್ಗದಲ್ಲಿ ಬೀದಿಯಲ್ಲಿ ಓಡಿಸುವುದು, ಬೆಲೆವೆಣ್ಣು ಗಳಾಗಿ ಬಳಸುವುದು ಅವಮಾನಕ್ಕೀಡುಮಾಡಲೆಂದೇ ಇರುವ ಒಂದು ವಿದಿಬದ್ಧ ಕಾರ್ಯಾಚರಣೆಯೆಂಬಷ್ಟು ಸಲೀಸಾಗಿದೆ.

ರೈತ ಸಂಘಟನೆಯಲ್ಲಿ ಭೂಮಾಲೀಕ ಪರಂಪರೆಗೆ ಸೇರಿದ ಲಿಂಗಾಯತ, ಒಕ್ಕಲಿಗ ಜನರೇ ಹೆಚ್ಚಾಗಿದ್ದಾರೆ. ಈ

'ಊರು ಗುಡಿಸಿ ಕೇರಿ ಗುಡಿಸಿ
ಸತ್ತ ಹೆಣವ ಮಸಣಕೊಯ್ದು
ಬಿಟ್ಟಿ ಚಾಕರಿ ನಿನ್ನದಾಯಿತೋ
ಓ ರಾಮಣ್ಣ
ಕೆರ ಹೊಲೆವ ಕಸುಬಾಯಿತೋ'
ಎಂಬ ಹಾಡು ಕಣ್ಣಂಚಿನಲ್ಲಿ
ನೀರು ಜಿನುಗಿಸುತ್ತಲೇ ಕಪ್ಪು
ಮೋಡದಲ್ಲಿ ಹೋರಾಟದ
ಕೆಂಪು ಚುಕ್ಕೆಯನ್ನು ಮೂಡಿಸಿ
ಬಡವರೆದೆಯಲ್ಲಿ ಭರವಸೆಯ
ಆಶಾಕಿರಣವನ್ನು ಹೊಮ್ಮಿಸುತ್ತದೆ.



ಜಾತಿಗಳು ತಮ್ಮ ವರ್ಗ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಎಂತಹ ಹೀನಾಯ ಕೃತ್ಯಗಳಿಗೂ ಇಳಿದುಬಿಡಬಲ್ಲರೆಂಬುದಕ್ಕೆ 'ದೊಡ್ಡಗೌಡರ ಬಾಗಿಲಿಗೆ ನಮ್ಮ ಮೂಳೆಯ ತೋರಣ ನಮ್ಮ ಜನಗಳ ಕಾಲು ಕೈಗಳೆ ಕಂಬ ಅವರ ಹಟ್ಟಿಗೆ' ಎಂಬ ದಲಿತ ಸಂಘರ್ಷ ಸಮಿತಿಯ ಹೋರಾಟದ ಹಾಡು ಒಂದು ಘೋರ ರೂಪಕ. ಅನಾದಿ ಕಾಲದಿಂದಲೂ ಭೂಮಾಲೀಕತ್ವದ ಮೇಲೆ ಏಕಸ್ವಾಮ್ಯವನ್ನು ಸಾಧಿಸಿಕೊಂಡು ಬಂದ ಇವರು ತಮ್ಮನ್ನು ಬಿಟ್ಟು ಅನ್ಯರಾರೂ ಭೂಮಾಲೀಕರಾಗುವುದನ್ನು ಯಾವೊತ್ತಿಗೂ ಸಹಿಸರು.

ಭೂಮಾಲೀಕತ್ವವು ಒಂದು ಸಾಮಾಜಿಕ-ಆರ್ಥಿಕ ಪ್ರತಿಷ್ಠೆಯ ಸಂಕೇತವೆಂಬ ತಿಳವಳಿಕೆಯಿರಿಸಿಕೊಂಡಿರುವ ಇವರು ಹಾಗೊಂದು ವೇಳೆ ತಮ್ಮ ಇಚ್ಛೆಗೆ ವಿರುದ್ಧವಾಗಿ ಭೂ ಸಾಗುವಳಿ ಹೊಂದಿರುವ ದಲಿತ ರೈತನೊಬ್ಬ ಕೌಟುಂಬಿಕ ಕಷ್ಟ ನಷ್ಟಗಳಿಗೆ ಸಿಲುಕಿದನೆಂದರೆ ಆತನ ಸುತ್ತ ನೊಣಗಳಂತೆ ಮುಸುರಿ ಅವನು ತನ್ನ ಭೂಮಿಯನ್ನು ಪರಭಾರೆ ಮಾಡುವಂತೆಯೋ ಮಾರಾಟ ಮಾಡುವಂತೆಯೋ ಒತ್ತಡ ಹಾಕಿ ತಂತ್ರ ರೂಪಿಸಿಬಿಡುತ್ತಾರೆ. ಇಂತಹ ವೇಳೆಯಲ್ಲಿ ಜಾತಿ-ವರ್ಗ ಪ್ರಜ್ಞೆಗಳೆರಡೂ ಜಾಗ್ರತವಾಗಿ ದಲಿತನ ಜಮೀನನ್ನು ತಮ್ಮ ಜಾತಿಬಾಂಧವರಿಗೇ ದೊರೆಯು ವಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯೂ ಆಗುತ್ತಾರೆ. ಯಾವ ಕಾರಣಕ್ಕೂ ಅನ್ಯ ದಲಿತರಿಗೆ ದಕ್ಕಗೊಡುವುದಿಲ್ಲ.

ಹೀಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಎರಡೂ ನೆಲೆಗಳಿಂದ ಶೋಷಣೆಗೆ ಒಳಗಾಗಿರುವುದರಿಂದಲೇ ಉತ್ಪಾದನೆಯ ಮೂಲದ್ರವ್ಯವಾದ ಬಹುಪಾಲು ಗ್ರಾಮೀಣ ದಲಿತರು ಮೊದಲ ತಲೆಮಾರಿನ ಅಕ್ಷರಸ್ಥರಾಗಲೂ ಸಾಧ್ಯವಾಗಿಲ್ಲ. ಶಾಲೆಯಲ್ಲಿರಬೇಕಾದ ಎಳೆಯ ಕಂದಮ್ಮಗಳು ಬಾಲಭಿಕ್ಷುಕರಾಗಿಯೋ, ಬಾಲವೇಶ್ಯೆಯರಾಗಿಯೋ, ಬಾಲ ಕಾರ್ಮಿಕರಾಗಿಯೇ, ಬಾಲಾಪರಾಧಿಗಳಾಗಿಯೋ, ಇಲ್ಲವೇ ಬೀದಿ ಬದಿಯಲ್ಲಿ ಬೂಟು ಪಾಲಿಶ್ ಮಾಡುತ್ತಲೋ ಸುಂದರ ಬದುಕನ್ನು ಕನಸಿನಲ್ಲೂ ಕಾಣದಷ್ಟು ಹೀತಸ್ಥಿತಿಯಲ್ಲಿ ಜೀವ ಸವೆಸುತ್ತಿದ್ದಾರೆ. ಇನ್ನು ವಯಸ್ಕರಾದರೋ ಮನಸ್ಸಿಲ್ಲದಿದ್ದರೂ ಹೇಸಿಗೆ ಹುಟ್ಟಿಸುವಂತಹ ಸತ್ತದನಗಳನ್ನು ಹೊತ್ತು ಬಿಸಾಡುವ, ಮಲ ಹೊರುವ ಮುಂತಾದ ಹೀನ ಕೆಲಸಗಳನ್ನು ಮಾಡಬೇಕಾಗಿದೆ. ಇದೊಂದು ಸಾಮಾಜಿಕ ಕ್ರೌರ್ಯ. ದಲಿತ ಕಲಾ ಮಂಡಲಿಯ

ಊರು ಗುಡಿಸಿ ಕೇರಿ ಗುಡಿಸಿ
ಸತ್ತ ಹೆಣವ ಮಸಣಕೊಯ್ದು
ಬಿಟ್ಟಿ ಚಾಕರಿ ನಿನ್ನದಾಯಿತೋ ಓ ರಾಮಣ್ಣ
ಕೆರ ಹೊಲೆವ ಕಸುಬಾಯಿತೋ

ಎಂಬ ಹಾಡು ಕಣ್ಣಂಚಿನಲ್ಲಿ ನೀರು ಜಿನುಗಿಸುತ್ತಲೇ ಕಪ್ಪು ಮೋಡದಲ್ಲಿ ಹೋರಾಟದ ಕೆಂಪು ಚುಕ್ಕೆಯನ್ನು ಮೂಡಿಸಿ ಬಡವರೆದೆಯಲ್ಲಿ ಭರವಸೆಯ ಆಶಾಕಿರಣವನ್ನು ಹೊಮ್ಮಿಸುತ್ತದೆ. ಆದುದರಿಂದ ಈಗ ಹೇಳಬೇಕಾಗಿದೆ ಮತ್ತೊಂದು ಹಾಡು -

ದಲಿತರು ಬಂದರು ದಾರಿಬಿಡಿ
ದಲಿತರ ಕೈಗೆ ರಾಜ್ಯ ಕೊಡಿ

ರೈತ ಸಂಘಟನೆಯೊಂದಿಗೆ ದಲಿತರು ಸಂವಾದಿಸತೊಡಗಿರುವ ಈ ಸಂದರ್ಭದಲ್ಲಿ ಎತ್ತಬೇಕಾಗಿರುವ ಪ್ರಶ್ನೆಗಳು:

'ಕೋಮುವಾದಿ ರಾಜಕೀಯ ಅಥವಾ ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ ನಮ್ಮ ಒಗ್ಗೂಡುವಿಕೆ' ಎಂದಾದರೆ ದಲಿತರನ್ನು ಶೋಷಿಸುವ ಮೇಲ್ಜಾತಿ ರೈತ, ಭೂಮಾಲೀಕ ಶೋಷಣಾ ನೆಲೆಗಳನ್ನು ಮೂಲೋತ್ಪಾಟನೆ ಮಾಡುವುದಕ್ಕಿಂತ ರಾಜಕೀಯಾಧಿಕಾರ ಹೊಂದುವುದೇ ನಿಮಗಿರುವ ಆದ್ಯ ಮೂಲೋದ್ದೇಶವೆ? ಅಥವಾ ರಾಜ್ಯಾಧಿಕಾರ ಹಿಡಿಯುವುದಕ್ಕಿಂತ ದಲಿತರನ್ನು ಶೋಷಣೆಯಿಂದ ವಿಮೋಚಿಸುವುದು ನಿಮಗೆ ಮೊದಲನೆ ಆದ್ಯತೆಯಾಗುತ್ತಿಲ್ಲವೇ ? ನಿಮ್ಮ ಒಗ್ಗೂಡುವಿಕೆಯನ್ನು ಇಂತಹ ವಿಷಯ ಸಾಮಾಜಿಕ ಚಹರೆಗಳು ಪ್ರಶ್ನಿಸುವುದರಿಂದ ಈಗ ರೈತ ಸಂಘಟನೆಯು 'ನಮ್ಮ ಒಗ್ಗೂಡುವಿಕೆಯಿಂದ ದಲಿತರ ಮೇಲೆ ಮೇಲ್ಜಾತಿ ಭೂಮಾಲೀಕರಿಂದಾಗುವ ಹತ್ಯಾಕಾಂಡ, ಅತ್ಯಾಚಾರ, ಹಲ್ಲೆ ಆಕ್ರಮಣ ಮುಂತಾದ ದೌರ್ಜನ್ಯಗಳಿಗೆ ತಡೆ ಹಾಕುವುದೇ ತತ್‌ಕ್ಷಣದ ಪರ್ಯಾಯ ರಾಜಕಾರಣ. ರಾಜಕೀಯ ವೇಸಿದ್ದರೂ ಆಮೇಲೆ ಎಂದು ಘೋಷಿಸಲು ಸಿದ್ಧವೆ ?

ಈಗಲೂ ಮೇಲ್ಜಾತಿ ರೈತರಿಂದ ಅಮಾಯಕ ದಲಿತರು ಸಾಯುತ್ತಿದ್ದಾರೆ. ಇನ್ನು ಮುಂದೆ ಯಾವುದೇ ತೊಂದರೆಯಾಗದಂತೆ ರೈತ ಚಳವಳಿಯ ಗ್ರಾಮೀಣ ಪ್ರದೇಶಗಳಲ್ಲಿ ಗರಿಷ್ಠ ಜಾಗ್ರತೆ ವಹಿಸುವ ಜತೆಗೆ ಸಾಮಾಜಿ ಸಾಮರಸ್ಯವನ್ನು ನೆಲೆಗೊಳಿಸಲು ದಲಿತರೊಂದಿಗೆ ಪರಸ್ಪರ ನಡುಮನೆಯಲ್ಲಿ ಉಂಡುಟ್ಟು ದೇವಾಲಯ, ನೀರಿನ ನಲ್ಲಿ, ಕೆರೆಕಟ್ಟೆ ಬಾವಿ ಮುಂತಾದ ಸಾರ್ವಜನಿಕ ಸ್ಥಳಗಳೂ ಸೇರಿದಂತೆ ವೈವಾಹಿಕ ಸಂಬಂಧಗಳನ್ನು ಬೆಸೆದು ಅವುಗಳನ್ನು ಊರ್ಜಿತಗೊಳಿಸುವ 'ದೀಕ್ಷಾವಿಧಿ' ತೊಡಲು ಬದ್ಧವಾಗುವುದೆ ?

ಪುರೋಹಿತಶಾಹಿಗಲು ಹೇರಿರುವ ದೇವಾಲಯ ಪ್ರವೇಶ ನಿರಾಕರಣೆ, ಗೋಹತ್ಯೆಯ ಪ್ರಶ್ನೆ, ಪೌರೋಹಿತ್ಯ, ಲಿಂಗತಾರತಮ್ಯ, ಅಸ್ಪೃಶ್ಯತೆ ಮುಂತಾದ ಕಟ್ಟಳೆಗಳನ್ನು ಸಾಮಾಜಿಕ ಕರ್ಮವಾಗಿ ಊರ್ಜಿತದಲ್ಲಿರಿಸಿಕೊಂಡು ಬಂದ ಶೂದ್ರ ಸಮುದಾಯ ತಮ್ಮ ಹಿತವನ್ನು ಎಂದಿಗೂ ಬಯಸದ ವೈದಿಕ ಪರಂಪರೆಯ ಧಾರ್ಮಿಕ ದೀಕ್ಷೆಗೆ ಬದ್ಧವಾಗಿರುವುದಾದರೆ ಎಂದೆಂದಿಗೂ ತಮ್ಮ ಹಿತಕ್ಕಾಗಿಯೇ ದುಡಿಯುತ್ತಿರುವ ದಲಿತ (ಕೋಣ) ರ ಶ್ರೇಯೋಭಿವೃದ್ಧಿಗಾಗಿ ಮೇಲೆ ಹೇಳಿದ ಮಾನವೀಯ ದೀಕ್ಷೆಯನ್ನು ತೊಡಬಾರದೇಕೆ ? ಇಂತಹ ದೀಕ್ಷಾವಿಧಿಯನ್ನು ಘೋಷಿಸದ ಹೊರತು ಅಥವಾ ತಮ್ಮಲ್ಲೇ ಅಂತರ್ಗತ ಮಾಡಿಕೊಳ್ಳದ ಹೊರತು ಶೂದ್ರರು ತಮ್ಮನ್ನು ವೈದಿಕ ಪರಂಪರೆಯನ್ನು ಘೋಷಿಸುವ ಊಳಿಗದ ತೊತ್ತುಗಳೆಂದು ಒಪ್ಪಿಕೊಂಡಂತಾಗುವುದಿಲ್ಲವೆ ?

ಆಯಿತು. ರೈತಸಂಘವು ಇಂತಹ ದೀಕ್ಷಾವಿಧಿಯನ್ನು ಕೈಗೊಳ್ಳುತ್ತದೆ ಅಂದುಕೊಳ್ಳೋಣ. 'ವಿಲೀನಗೊಳ್ಳುತ್ತಿರುವುದೇ ಸ್ಪೃಶ್ಯ - ಅಸ್ಪೃಶ್ಯತೆಯ ಗೆರೆಗಳನ್ನು ಅಳಿಸಿ ಜಾತಿ ಜಾತಿಗಳ ಮಧ್ಯದ ಅಸಮಾನತೆಯ ಕಳಂಕಗಳನ್ನು ನೀಗಿ ಎಲ್ಲರಿಗೂ ನೆಮ್ಮದಿಯ ಬದುಕನ್ನು ಕಲ್ಪಿಸುವುದೇ 'ಪರ್ಯಾಯ ರಾಜಕಾರಣ' ಎಂದು ಘೋಷಿಸುತ್ತದೆ ಅಂದುಕೊಳ್ಳೋಣ. ಆಗ ಹಳೆಯ ಸಾಮಾಜಿಕ ಶೈಥಿಲ್ಯಗಳನ್ನು ಹೋಗಲಾಡಿಸಲು ದಲಿತ ಸಂಘಟನೆಯೊಂದಿಗೆ ಕೈ ಜೋಡಿಸಲು ಮುಂತಾದ ರೈತ ಸಂಘವೂ ಕೂಡ ದಲಿತರನ್ನು ಕುರಿತು ತನ್ನದೇ ಆದ ಅನುಮಾನಗಳನ್ನು, ಪ್ರಶ್ನೆಗಳನ್ನು ಮುಂದಿಡುವುದು ಸಹಜ ತಾನೆ ?

ರೈತನ ಬದುಕು ಮೂರಾಬಟ್ಟೆಯಾಗಿದೆ. ಆತನ ಬದುಕು ಮಳೆಯ ಜತೆಗಿನ ಜೂಜು. 'ಪರಿಹಾರ ಸಿಗುತ್ತದೆಂದು ರೈತ ಆತ್ಮಹತ್ಯೆಗೆ ಮುಂದಾಗುತ್ತಾನೆಂದು' ಆತನ ಕಷ್ಟಕೋಟಲೆಗಳ, ದುಃಖ ದುಮ್ಮಾನಗಳ ಅರಿವಿರದ ಭಂಡ ರಾಜಕೀಯ ನಾಯಕರು ರೈತನ ಆತ್ಮಹತ್ಯೆಯನ್ನು ಲೇವಡಿ ಮಾಡುವುದೂ ಉಂಟು. 'ಬೇಸಾಯ ಮನೆ-ಮಕ್ಕಳ್ಳ ಸಾಯ' ಅನ್ನವಂತೆ ದುಡಿದು ಅನ್ನವಿಕ್ಕುವ ರೈತನ ಸುತ್ತ ಮೋಸದ ಜಾಲವೇ ಹಬ್ಬಿದೆ. ಒಂದು ಕಡೆ ಸರ್ಕಾರವೇ ಹೆಣೆದ ವಂಚನೆಯ ಜಾಲ, ಮತ್ತೊಂದೆಡೆ ಮಧ್ಯವರ್ತಿಗಳ ಸಂಚಿನ ಜಾಲ, ಮಗದೊಂದೆಡೆ ಜಾಗತೀಕರಣದ ಬಿರುಗಾಳಿ, ಕಳಪೆ ಬಿತ್ತನೆ ಬೀಜ, ಕಳಪೆ ರಸಗೊಬ್ಬರ, ಅವೈಜ್ಞಾನಿಕ ಬೆಲೆ, ದೇಶೀ ತಳಿಗಳ ನಾಶ, ನುಸಿಪೀಡೆ, ವಿದ್ಯುತ್ ಮತ್ತು ನೀರು ಹಂಚಿಕೆ ಸಮಸ್ಯೆ, ಪೇಟೆಂಟ್,

ಪ್ರಪಂಚವನ್ನೇ ಆವರಿಸಿ ರೈತನನ್ನು ನುಂಗಿ ನೊಣೆವ ಡಬ್ಲ್ಯೂಟಿಒದ ಮುಕ್ತ ಮಾರುಕಟ್ಟೆ ಅರ್ಥಶಾಸ್ತ್ರ ಬಂಡವಾಳಶಾಹಿ ವ್ಯವಸ್ಥೆ ವಿದೇಶೀ ಆಹಾರೋತ್ಪನ್ನಗಳ ಆಮದು, ಇವೆಲ್ಲವುಗಳ ನಡುವೆ ನೇಗಿಲಯೋಗಿಯ ತ್ಯಾಗದ ಬದುಕು ನುಗ್ಗುನುರಿಯಾಗಿದೆ. ರೈತ ಜೀವಂತ ಶವವಾಗಿದ್ದಾನೆ.

ಇವುಗಳನ್ನು ವಿರೋಧಿಸಿ ಮುಷ್ಕರ, ಬಂದ್, ರ್‍ಯಾಲಿ, ರಸ್ತೆತಡೆ, ರೈಲು ತಡೆ ಅಂತ ಹೇಳಿ ಹೋದರೆ ಲಾಠಿ, ಬೂಟು, ಬಂದೂಕುಗಳಿಂದ ರೈತರ ಬುರುಡೆಗಳನ್ನು ಸವರಿ ಹಾಕುವ ಮೂಲಕ ಚಳವಳಿಯನ್ನು ದಮನ ಮಾಡಲು ಯಾವುದೇ ಸರ್ಕಾರ ಹಿಂದು ಮುಂದೆ ನೋಡುವುದಿಲ್ಲ. ಇಂತಹ ಸಂದರ್ಭಗಳಲ್ಲೆಲ್ಲಾ ದಸಂಸ ಎಲ್ಲಿ ಹೋಗಿತ್ತು? ರೈತರು - ಭೂ ಮಾಲೀಕರು ದುಡಿಮೆ (ಕೂಲಿನಾಲಿ) ನೀಡಲಿಲ್ಲವೆಂದರೆ ದಲಿತರ ಬದುಕು ನಡೆಯೋಕಿಲ್ಲ. ಅಂತಾದ್ದರಲ್ಲಿ ರೈತರ ಸಮಸ್ಯೆಗಳಿಗೂ ದಸಂಸಕ್ಕೂ ಸಂಬಂಧವಿಲ್ಲ ಎಂದು ಹೇಳಲಿಕ್ಕೆ ಬರುತ್ತದೆಯೆ?

ಇನ್ನು 'ಎಲ್ಲ ಶೋಷಿತ ಸಮುದಾಯಗಳ ಪ್ರಾತಿನಿಧಿಕ ವೇದಿಕೆ' ಎಂದು ಘೋಷಿಸಿಕೊಳ್ಳುತ್ತಲೇ ಹುಟ್ಟಿದ ದಸಂಸ ಅದರೊಳಗೇ ಇರುವ ಮಹಿಳೆಯನ್ನು ಎಷ್ಟರಮಟ್ಟಿಗೆ ಪ್ರತಿನಿಧಿಸಿದೆ? ಇಲ್ಲೀತನಕ ಒಬ್ಬ ಮಹಿಳಾ ದಲಿತ ನಾಯಕಿಯನ್ನೂ ಅದು ರೂಪಿಸಲಾಗಲಿಲ್ಲಯಾಕೆ?

ಕೇವಲ ಕೊಲೆ, ಸುಲಿಗೆ ಅನ್ಯಾಯ, ಅತ್ಯಾಚಾರ ಜಾಥಾ ಮುಷ್ಕರಗಳಲ್ಲಿ ಮುಳುಗಿಹೋದ ದಲಿತ ಮುಖಂಡರು ತಮ್ಮೊಳಗೇ ಎದ್ದಿರುವ ಎಡ-ಬಲ ಜಾತಿ ವೈಷಮ್ಯವನ್ನು ನೀಗಿಕೊಳ್ಳಲಾಗಿಲ್ಲವೇಕೆ? ತಮ್ಮ ತಮ್ಮಲ್ಲೇ ಜಾತಿವಾದಿತ್ವ ಮತ್ತು ಒಳ ಪ್ರಭೇದಗಳನ್ನು ಪೋಷಿಸಿಕೊಂಡು ಬರುತ್ತಿರುವ ವಿದ್ಯಾಮಾನವನ್ನು ದಸಂಸ ಯಾವ ಬಗೆಯಲ್ಲಿ ನಿರ್ವಹಿಸುತ್ತಿದೆ?

(ಶಿಕ್ಷಣದಿಂದ ವಂಚಿಸಿ ಕತ್ತಲಿನಲ್ಲಿಟ್ಟ ದಲಿತರ ಕುರಿತು ಯಾರೇ ಸವರ್ಣೀಯ ಬಹಳ ಸುಲಭವಾಗಿ ಕೇಳಬಹುದಾದ ಈ ಪ್ರಶ್ನೆಯನ್ನು ಪ್ರತ್ಯೇಕವಾಗಿಯೇ ವಿವಿಧ ನೆಲೆಗಳಿಂದ ಚರ್ಚಿಸುವ ಅಗತ್ಯವಿದೆ.)

ಮೇಲ್ಜಾತಿ ಬಡವರಿಗೆ ಮೀಸಲಾತಿ ನೀಡಬೇಕೆಂದಾಗ 'ಮೀಸಲಾತಿಯ ಉದ್ದೇಶವು ಯೊವೊತ್ತೂ ಸಾಮಾಜಿಕ ನ್ಯಾಯವನ್ನು ಮಾನದಂಡವಾಗಿರಿಸಿಕೊಳ್ಳಬೇಕು, ಆರ್ಥಿಕ ಅರ್ಹತೆಯನ್ನಲ್ಲ' ಎನ್ನುತ್ತದೆ ದಸಂಸ. ಹಾಗಿದ್ದ ಮೇಲೆ ಇವರಲ್ಲೆ Touchable Daliths ಮತ್ತು Untouchable Daliths ಇದ್ದಾರೆ. ಮೀಸಲಾತಿಯ ಕನಿಷ್ಠ ಸೌಲಭ್ಯವನ್ನಾದರೂ 'ಅಸ್ಪೃಶ್ಯ ದಲಿತರಿಗೆ' ಒದಗಿಸಲು ದಸಂಸ ಎಷ್ಟು ಮಾತ್ರ ಪ್ರಯತ್ನಿಸಿದೆ? 'ವರ್ಗ ಸಂಘರ್ಷ'ದ ಕುರಿತು ಅಸಮಾನ ಆರ್ಥಿಕ ನೆಲೆಗಳನ್ನು ಛಿದ್ರಗೊಳಿಸುವ ಅಗತ್ಯವನ್ನು ಸಾರಿ ಹೇಳುವ ದಸಂಸ ತಮ್ಮೊಳಗೇ ತಲೆ ಎತ್ತುತ್ತಿರುವ ವರ್ಗದ ನೆಲೆಗಳನ್ನು ಕುರಿತು ಏನು ಹೇಳುತ್ತದೆ? ಹಾಗೂ ಸಿಕ್ಕಿದವರಿಗೆ ಸೀರುಂಡೆ ಎಂಬಂತೆ ಬಲಾಢ್ಯರೇ ಮೀಸಲಾತಿಯ ಫಲಾನುಭವಿಗಳಾಗುತ್ತಿರುವಾಗ ಮೊದಲ ತಲೆಮಾರಿನ ಅಕ್ಷರಸ್ಥರಾದ ದಲಿತರಿಗೆ ಮೀಸಲಾತಿಯಲ್ಲಿ ಆದ್ಯತೆ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತಿಲ್ಲ ಯಾಕೆ? ಅಥವಾ ಆರ್ಥಿಕವಾಗಿ ಮುಂದುವರೆದ ದಲಿತರು ಕಡುಬಡವ ದಲಿತರಿಗೆ ಮೀಸಲಾತಿ ದಕ್ಕುವಂತಾಗಲು ಮೀಸಲಾತಿ



'ವರ್ಗ ಸಂಘರ್ಷ' ಮತ್ತು 'ಜಾತಿ ಸಂಘರ್ಷ'ಗಳ ಆರ್ಥಿಕ ಸಾಮಾಜಿಕ ರಚನೆಗಳನ್ನು ಹೊರತುಪಡಿಸಿದಂತೆ ಪರಸ್ಪರ ದಲಿತರ ಮತ್ತು ರೈತರ ಬದುಕಿನ ನಡುವೆ ಅಷ್ಟಾಗಿ ಯಾವ ವ್ಯತ್ಯಾಸಗಳೂ ಇಲ್ಲ; ಇಬ್ಬರನ್ನೂ ಸಮಾನವಾಗಿ ಕಾಡುವ ಸಮಸ್ಯೆಗಳು ಅಪಾರವಾಗಿವೆ.

ಸೌಲಭ್ಯ ವೈಯಕ್ತಿಕವಾಗಿ ತಮಗೆ ಬೇಡವೆಂದು ಘೋಷಿಸಲು ಸಿದ್ಧರಿರುವರೇ? (ಸರ್ಕಾರಿ ಮೀಸಲಾತಿಯೂ ಅಪ್ರಸ್ತುತವಾಗುತ್ತಿರುವುದನ್ನು ಬೇರೆ ಬೇರೆ ಆಯಾಮಗಳಲ್ಲಿ ಪ್ರತ್ಯೇಕವಾಗಿ ಚರ್ಚಿಸಬಹುದು.)

ಇಂತಹ ಪ್ರಶ್ನೆಗಳು ದಲಿತ ಮತ್ತು ರೈತ ಚಳವಳಿಗಳ ಮೂಲ ತಾತ್ವಿಕತೆಯನ್ನೇ ಪ್ರಶ್ನಿಸುವುದರಿಂದ ಈ ಎರಡೂ ಚಳವಳಿಗಳ ಸ್ವರೂಪವನ್ನು ಬ್ರಾಹ್ಮಣಶಾಹೀ ಕೋಮುವಾದಿ ರಾಜಕೀಯ ಮತ್ತು ಬಲಪಂಥೀಯ ಚಳವಳಿಗಳ ಸ್ವರೂಪದೊಂದಿಗೆ ತೂಗಿ ನೋಡಿ ವಿಶ್ಲೇಷಿಸುವ ಅಗತ್ಯವಿದೆ.

'ವರ್ಗ ಸಂಘರ್ಷ' ಮತ್ತು 'ಜಾತಿ ಸಂಘರ್ಷ'ಗಳ ಆರ್ಥಿಕ ಸಾಮಾಜಿಕ ರಚನೆಗಳನ್ನು ಹೊರತುಪಡಿಸಿದಂತೆ ಪರಸ್ಪರ ದಲಿತರ ಮತ್ತು ರೈತರ ಬದುಕಿನ ನಡುವೆ ಅಷ್ಟಾಗಿ ಯಾವ ವ್ಯತ್ಯಾಸಗಳೂ ಇಲ್ಲ. ಇಬ್ಬರನ್ನೂ ಸಮಾನವಾಗಿ ಕಾಡುವ ಸಮಸ್ಯೆಗಳು ಅಪಾರವಾಗಿವೆ. ಇವರು ರೂಪಿಸಿದ ದಲಿತ ಚಳವಳಿ ಹಾಗೂ ರೈತ ಚಳವಳಿಗಳೆರಡೂ ಬೀದಿಯಲ್ಲಿ ಹುಟ್ಟಿದವು. ಇದಕ್ಕೆ ತದ್ವಿರುದ್ಧವಾದ ಬಲಪಂಥೀಯ ಸಂಘಪರಿವಾರದ ಚಳವಳಿ ಗರ್ಭಗುಡಿಯಲ್ಲಿ ಹುಟ್ಟಿ ಬೀದಿಗೆ ಬಂದಿತು. ವ್ಯತ್ಯಾಸವಿಷ್ಟೆ ಬೀದಿಯಲ್ಲಿ ಹುಟ್ಟುವ ಚಳವಳಿಗಳು ಜನಪರವಾಗಿರುತ್ತವೆ, ಮಾನವೀಯ ವಾಗಿರುತ್ತವೆ, ಅಷ್ಟೇ ಪ್ರಜಾಪ್ರಭುತ್ವವಾದೀ ನಿಲುವು ತಳೆದಿರುತ್ತವೆ. ಅವು ಹುಟ್ಟುವುದು ಬೀದಿಯಲ್ಲಾದರೂ ಹೋಗುವುದು ಜನರ ಬಳಿಗೆ. ಆದರೆ ಗರ್ಭಗುಡಿಯಲ್ಲಿ ಹುಟ್ಟಿ ಬೀದಿಗೆ ಬರುವ ಚಳವಳಿಗಳು ಜನವಿರೋಧಿ ಚಳವಳಿಗಳಾಗಿದ್ದು ಪ್ರಜಾಪ್ರಭುತ್ವ ವಿರೋಧಿಯಾಗಿರುತ್ತವೆ. ಅಷ್ಟೇ ಅಲ್ಲದೆ ತೀರಾ ಅಮಾನವೀಯವಾಗಿ ಹಿಟ್ಲರ್‌ನ Concentration Camp ಮತ್ತು Gas Chamber ಗಿಂತಲೂ ಮಿಗಿಲಾಗಿ ನರಮೇಧ ನಡೆಸಿ ಅಗ್ರಹಾರ ಸೇರಿಕೊಳ್ಳುತ್ತವೆ. ಈಗ ಗರ್ಭಗುಡಿಯಲ್ಲಿ ಹುಟ್ಟಿ ಬೀದಿಗೆ ಬರುವ ಚಳವಳಿ ಗಳಿಗಿಂತ ಬೀದಿಯಲ್ಲಿ ಹುಟ್ಟಿ ಗರ್ಭ ಗುಡಿಯನ್ನು ಪ್ರಶ್ನಿಸುವ ಚಳವಳಿಗಳು ಬಹಳ ಮುಖ್ಯ. ರೈತ ಚಳವಳಿ ಮತ್ತು ದಲಿತ ಚಳವಳಿಗಳು ಪ್ರಶ್ನಿಸುವ ಬಗೆಯವು.

ದಲಿತ ಚಳವಳಿಗೆ ರೈತರ ಸಾವು, ಕಳಪೆ ಬಿತ್ತನೆ ಬೀಜ, ಕಳಪೆ ರಸಗೊಬ್ಬರ, ನುಸಿಪೀಡೆ, ಗ್ಯಾಟ್, ವ್ಯಾಟ್, ಪೇಟೆಂಟ್ ಮುಂತಾದ ಅಂಶಗಳು ಕಾಡುವ ಪದಾರ್ಥಗಳಾದರೂ ಕೂಡ ಕಾಡುವಿಕೆಯ ತೀವ್ರತೆ ಕಮ್ಮಿಯೆಂದೇ ಹೇಳಬೇಕು.

ರೈತ ಚಳವಳಿಗೆ ದಲಿತರನ್ನು ಹಿಂಸಿಸುವ ಜೀತಪದ್ಧತಿ, ಬಿಟ್ಟಿ ಚಾಕರಿ, ಅಶುಚಿ ಅಥವಾ ಅನ್ಯ ಮರ್ಲ್ಯದ ಕೆಲಸಗಳು, ತೋಟಿ-ತಳವಾರಿಕೆಯಂತಹ ಹೀನ ಕಸುಬು, ಸಜೀವ ದಹನ, ಅತ್ಯಾಚಾರ, ಮಾನಭಂಗ, ಸಾಮಾಜಿಕ ಬಹಿಷ್ಕಾರ ಮುಂತಾದ ಸಮಸ್ಯೆಗಳು ಅಷ್ಟಾಗಿ ಕಾಡಲಾರವು. ಅದು ದೀಪದ ಕೆಳಗಿನ ಕತ್ತಲಿನಂತೆ!

ಸಂಘ ಪರಿವಾರದವರಿಗೆ ಈ ಮೇಲಿನ ದಲಿತರ ಮತ್ತು ಶೂದ್ರರ ಯಾವುದೇ ಸಮಸ್ಯೆ ಕಾಡುವುದೂ ಇಲ್ಲ, ಕಾಣುವುದೂ ಇಲ್ಲ. ಬದಲಾಗಿ ಅಂತಹ ಸಮಸ್ಯೆಗಳನ್ನು ಯಥಾಸ್ಥಿತಿಯಲ್ಲಿಯೇ ಉಳಿಸಿಕೊಂಡು ಅವಕಾಶವಿದ್ದ ಕಡೆ ಹೊಸ ಸಮಸ್ಯೆ ಸೇರಿಸುವುದು ಹೇಗೆಂಬುದು ಮಾತ್ರ ಗೊತ್ತಾಗುತ್ತಾ ಹೋಗುತ್ತದೆ. ಅವರಿಗೆ ಮಠ ಮಂದಿರದ ಸಮಸ್ಯೆ, ಗೋಹತ್ಯೆ, ಮತಾಂತರ, ಹಿಂದುತ್ವ, ಜೋತಿಷ್ ಶಾಸ್ತ್ರ ಅಪರ ಕರ್ಮ, ವೇದಗಣಿತ, ಪೌರೋಹಿತ್ಯ, ಸಂಸ್ಕೃತ ಭಾಷೆ, ಮಸೀದಿ-ಚರ್ಚು ಧ್ವಂಸ, ಸರಸ್ವತಿ ವಂದನೆ, ವಂದೇ ಮಾತರಂ, ತ್ರಿಶೂಲ, ರಾಷ್ಟ್ರೀಯತೆ, ಧಾರ್ಮಿಕ ಅಲ್ಪ ಸಂಖ್ಯಾತರ ಜನಸಂಖ್ಯಾ ಏರಿಕೆ ಇವೇ ಮುಂತಾದ ಅನುತ್ಪಾದಕ ಸಮಸ್ಯೆಗಳು ಮಾತ್ರ ಪದಾರ್ಥಗಳಾಗುತ್ತವೆ. ದಲಿತರು ಮತ್ತು ಶೂದ್ರರಿಗಿರುವ ಸಮಸ್ಯೆಗಳಿಗೆ ಅವರ ಪೂರ್ವಜನ್ಮದ ಕರ್ಮಫಲವೇ ಕಾರಣ! ಅವರು ನಿತ್ಯ ನಾರಕಿಗಳು, ತಮೋಯೋಗ್ಯರು! ಆದುದರಿಂದ ಬ್ರಾಹ್ಮಣರು ಇಂತಹ ಸಮಸ್ಯೆಗಳಿಗೆ ಬಾಧ್ಯಸ್ಥರಾಗುವುದು ಮಹಾಪಾಪ!

ದಲಿತ ಮತ್ತು ರೈತ ಸಮುದಾಯಗಳೆರಡೂ ತನ್ನ ಕಷ್ಟಗಳಿಗೆ ತಾನೇ ಪ್ರತ್ಯೇಕವಾಗಿ ಹೋರಾಟ ಮಾಡಬೇಕೆಂದು ತಮ್ಮ ತಮ್ಮೊಳಗೇ ಅಘೋಷಿತ ಕಟ್ಟಳೆಯೊಂದಕ್ಕೆ ಬದ್ಧವಾಗಿರುವಂತಹ ವಾತಾವರಣವೊಂದನ್ನು ನಿರ್ಮಾಣ ಮಾಡಿಕೊಂಡುಬಿಟ್ಟವು. ಆದರೆ ಕೂಡಿ ಹೋರಾಟ ಮಾಡಬೇಕೆಂಬ ಆಲೋಚನೆ ಬಲಗೊಳ್ಳಲೇ ಇಲ್ಲ. ಪರಸ್ಪರ ಒಂದುಗೂಡಿ ಹೋರಾಟ ಮಾಡದಿದ್ದರೆ ಇಷ್ಟೊತ್ತಿಗೆ ರೈತಾಪಿ ಶೂದ್ರ ಸಮುದಾಯವು ಬ್ರಾಹ್ಮಣಶಾಹಿಯ ಬಿಗಿಮುಷ್ಟಿ ಯಿಂದಲೂ ದಲಿತರು ಒಟ್ಟು ಯಜಮಾನತ್ವವಾದೀ ರಚನೆಗಳಿಂದಲೂ ಬಿಡುಗಡೆ ಹೊಂದುವ ಸಾಮಾಜಿಕ ಬದಲಾವಣೆಯ ಪರಿಕಲ್ಪನೆಯ ಪೂರ್ಣ ಆಕಾರ ದೊರೆಯುವ ಸಾಧ್ಯತೆಯಿತ್ತು. ಹೀಗೆ ಎರಡೂ ಚಳವಳಿಗಳು ಪ್ರತ್ಯೇಕವೇ ಆಗಿ ಉಳಿದು ಬಲಪಂಥೀಯ ಚಳವಳಿಗಳು ಬಲಗೊಳ್ಳಲು ಕಾರಣ ವಾದವು. ಇದಕ್ಕೊಂದು ನಿದರ್ಶನ ನೋಡುವುದಾದರೆ ೨೦೦೨ನೇ ಆಗಸ್ಟ್ ಮಾಸದಲ್ಲಿ ಎಸ್.ಎಂ. ಕೃಷ್ಣ ನೇತೃತ್ವದ

ಕಾಂಗ್ರೆಸ್ ಸರ್ಕಾರದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ದಸಂಸವನ್ನು ನಿಷೇಧಿಸಿ ಸುತ್ತೋಲೆಯೊಂದನ್ನು ಹೊರಡಿಸಿತು.

ಯಾವುದೇ ಜನಾಂಗ ದ್ವೇಷದ, ರಕ್ತಪಾತದ ಕೃತ್ಯಗಳನ್ನೆಸಗದೆ ಸಂವಿಧಾನದತ್ತ ನಾಗರಿಕ ಹಕ್ಕುಗಳಿಗಾಗಿ ಅಹಿಂಸಾತ್ಮಕ ಹೋರಾಟ ಮಾಡುತ್ತಾ ಬಂದ ಜನಪರ ಸಂಘಟನೆ ಡಿಎಸ್ಎಸ್ ಅನ್ನು 'ಸಮಾಜ ಘಾತುಕ' ಎಂಬ ಹಣೆಪಟ್ಟಿಯನ್ನು ಕಟ್ಟಿ ರಾಜ್ಯ ಪೊಲೀಸ್ ವರಿಷ್ಠರು ಅವಮಾನಪಡಿಸಿದಾಗ ಯಾವುದೇ ರೈತ ಬಣ ಪ್ರಜಾಪ್ರಭುತ್ವವಾದೀ ಜನಪರ ಸಂಘಟನೆಯೊಂದನ್ನು ನಿಷೇಧಿಸಿದ ರಾಜ್ಯ ಪೊಲೀಸ್ ವ್ಯವಸ್ಥೆಯ ಕ್ರಮವನ್ನು ವಿರೋಧಿಸಿ ಮುಷ್ಕರ ಹೂಡಲಿಲ್ಲ. ದಲಿತರ ನೋವು, ಸಂಕಟಗಳಿಗೆ ಸ್ಪಂದಿಸಲಿಲ್ಲ; ಧ್ವನಿ ನೀಡಲಿಲ್ಲ. ಜನಪರ ಚಳವಳಿಯನ್ನೇ ಹೀಗೆ ಕತ್ತು ಹಿಸುಕಿ ಕೊಂಡು ಬಿಡುವ ಹುನ್ನಾರ ಮಾಡಿದಾಗ ಒಕ್ಕಲಿಗ ಜಾತಿಯ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದದ್ದೊಂದು ವಿಶೇಷ!

ಕಂಬಾಲಪಲ್ಲಿಯಲ್ಲಿ ಕಳೆದ ಶತಮಾನದ ಅಂತ್ಯದಲ್ಲಿ ದಲಿತರ ಸಾಮೂಹಿಕ ಸಜೀವ ದಹನ ನಡೆದಾಗ ರೈತ ಸಂಘಟನೆ ವಿರೋಧಿಸಲಿಲ್ಲ ಎಂಬುದಕ್ಕಿಂತ ಮಾನವೀಯ ಕಾಳಜಿಗಳನ್ನೇ ಉಸಿರಾಗಿಸಿಕೊಂಡು ಹೋರಾಡುತ್ತಿದ್ದ ಜನಪರ ಚಳವಳಿಯೊಂದನ್ನು ತಲೆ ಎತ್ತದಂತೆ ಬಗ್ಗು ಬಡಿಯುವ ಹುನ್ನಾರದಿಂದ ಡಿಎಸ್ಎಸ್ ಅನ್ನು ನಿಷೇಧಿಸಿದಾಗ ರೈತ ಚಳವಳಿ ಮೌನ ತಾಳಿದ್ದು ಘೋರ ದುರಂತವಾಗಿ ಕಾಣಿಸುವುದಿಲ್ಲವೆ? ಕಂಬಾಲಪಲ್ಲಿ ದುರಂತದ ಸಮಯದಲ್ಲಿ ದಲಿತರೇ ಆದ ಮಲ್ಲಿಕಾರ್ಜುನ ಖರ್ಗೆ ಗೃಹಮಂತ್ರಿಯಾಗಿದ್ದರು!

ಡಿಎಸ್ಎಸ್ ಅನ್ನು ನಿಷೇಧಿಸಿದ್ದ ಅದೇ ಸಂದರ್ಭದಲ್ಲಿ ಆರ್‌ಎಸ್ಎಸ್ ಅನ್ನೂ ಸಹ 'ಸಮಾಜ ಘಾತುಕ' ಸಂಘಟನೆಯೆಂದು ನಿಷೇಧಿಸಲಾಗಿತ್ತು. ಹಿಂದುತ್ವ (ಬ್ರಾಹ್ಮಣವಾದ)ದ ಪ್ರತಿಪಾದನೆ ಮತ್ತು ಪ್ರತಿಷ್ಠಾಪನೆಯನ್ನೇ ಮೂಲ ಧ್ಯೇಯವಾಗಿರಿಸಿಕೊಂಡು ರಕ್ತಪಾತದ ಮೂಲಕ ಜನಾಂಗದ್ವೇಷವನ್ನು ಹರಡುವ ಜನವಿರೋಧೀ ಆರ್‌ಎಸ್ಎಸ್ ಅನ್ನು ನಿಷೇಧಿಸುವುದು ನ್ಯಾಯ ಸಮ್ಮತ ನಿರ್ಧಾರವೂ ಆಗಿತ್ತು. ಆದರೆ ಆರ್‌ಎಸ್ಎಸ್ ಅನ್ನು ಒಂದು ಸಾಂಸ್ಕೃತಿಕ ಸಂಘಟನೆಯೆಂದು ಸಮರ್ಥಿಸಲು ದೇಶವ್ಯಾಪಿ ಬಂದ್, ಮುಷ್ಕರ, ಖಂಡನಾ ನಿರ್ಣಯ, ದೊಂಬಿ ಮುಂತಾದ ಕಾರ್ಯಕ್ರಮಗಳು ನಡೆದವು. ಆಶ್ಚರ್ಯವೆಂದರೆ ಇಂತಹ ದ್ವಿಜಪರ ಸಂಘಟನೆಯ ಉಳಿವಿಗಾಗಿ ಮಾಡಿದ ಹೋರಾಟಗಳಲ್ಲಿ ದಲಿತರ ಮತ್ತು ಶೂದ್ರರ ಭಾಗೀದಾರಿಕೆ ಬ್ರಾಹ್ಮಣ ಸಂಖ್ಯೆಗಿಂತಲೂ ಅಧಿಕವಾಗಿತ್ತು.

ಈಗ ದಲಿತ ಸಂಘ ಮತ್ತು ರೈತ ಸಂಘಗಳಿಗೆ ಸೈದ್ಧಾಂತಿಕವಾಗಿ, ವೈಚಾರಿಕವಾಗಿ ಕೆಲವು ಮಿತಿಗಳಿದ್ದರೂ ಸಹ ಇಬ್ಬರಿಗೂ ಸಮಾನವಾಗಿ ಕಾಡುವ ಶತ್ರುವಂತೂ ಸ್ಪಷ್ಟವಾಗಿ ಕಾಣಿಸುತ್ತಿದ್ದಾನೆ. ಆ ಶತ್ರು ಒಬ್ಬ ವ್ಯಕ್ತಿಯಲ್ಲ, ಸಂಘಟನೆಯಲ್ಲ. ಬದಲಾಗಿ ಬ್ರಾಹ್ಮಣ್ಯವೆಂಬ ಜಾಡ್ಯ ಮತ್ತು ಆ ಜಾಡ್ಯದ ಬಹುರೂಪಿ ನೆಲೆಗಳು. ಪರ್ಯಾಯ ರಾಜಕಾರಣದ ನೆಪದಲ್ಲಿ ವಿಲೀನಗೊಳ್ಳುತ್ತಿರುವ ದಲಿತ ಮತ್ತು ರೈತ ಇಬ್ಬರೂ ಸಮಾನ ಶೋಷಿತರು. ತಮ್ಮ ತಮ್ಮೊಳಗೇ ಇರುವ ಶೋಷಣಾ ನೆಲೆಗಳನ್ನು ಪರಸ್ಪರ ಮುರಿದು ಹಾಕುತ್ತಾ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳುತ್ತಲೇ ಏಕಕಾಲದಲ್ಲಿ ಶತ್ರುವನ್ನೂ ಮಣಿಸಬೇಕು. ಶೃಂಗದಲ್ಲಿರುವ ಶತ್ರುವನ್ನೇ ಯಾವಾಗಲೂ ಗುರಿಯಾಗಿಸಿಕೊಂಡು ಹೋದರೆ ಒಳಗಿನ ಶತ್ರು ಕಾಣದೆ ಹೋಗಿ ಶಕ್ತಿವರ್ಧಿಸಿಕೊಳ್ಳತೊಡಗುತ್ತಾನೆ.

ಇದಕ್ಕೊಂದು ಸಾಕ್ಷ್ಯ ಒದಗಿಸುವುದಾದರೆ ಶೃಂಗದಲ್ಲಿರುವ ಅಥವಾ ಮೇಲ್‌ಸ್ತರದಲ್ಲಿರುವ ಬ್ರಾಹ್ಮಣಶಾಹಿ ಜಾತಿಪ್ರಜ್ಞೆ, ವರ್ಗ ಪ್ರಜ್ಞೆ ಹಾಗೂ ಅವುಗಳ ಯಾಜಮಾನ್ಯವನ್ನು ಬಲಿಹಾಕಬೇಕೆಂಬ ಛಲಹೊತ್ತು ಮೇಲಿನ ಶತ್ರುವನ್ನೇ ಗುರಿಯಾಗಿಸಿಕೊಂಡಿದ್ದ ದಲಿತ ಸಂಘರ್ಷ ಸಮಿತಿ ತನ್ನೊಳಗೇ ಇದ್ದ ಅಸಮಾನ ನೆಲೆಗಳನ್ನು ಪರಿಗಣಿಸದೇ ಹೋದುದರಿಂದ ಎಡಗೈ - ಬಲಗೈ ತಾರತಮ್ಯಗಳು ಉದ್ಭವಗೊಂಡು ಇಬ್ಬರು ಸೋದರ ಬಾಂಧವರು ಶತ್ರುಗಳಂತೆ ಬೀದಿ ಕಾಳಗಕ್ಕಿಳಿಯಬೇಕಾಯಿತು. ದಲಿತ ಚಳವಳಿಯ ದಿಕ್ಕು ತಪ್ಪಿಸಲು ಆಳುವ ವರ್ಗ ಹೂಡಿದ ತಂತ್ರವೂ ಇದಕ್ಕೆ ಕಾರಣ.

ಮೀಸಲಾತಿಯ ವರ್ಗೀಕರಣಕ್ಕಾಗಿ ನೆರೆಯ ಆಂಧ್ರ ಪ್ರದೇಶದಲ್ಲಿ ಎರಡು ಪ್ರಮುಖ ದಲಿತ ಜಾತಿಗಳಾದ ಮಾಲ ಮತ್ತು ಮಾದಿಗರು ಪರಸ್ಪರ ಕಡಿದಾಡಿಕೊಂಡು ಸತ್ತರು. ಆಂಧ್ರದಲ್ಲಿ ದಲಿತ ಚಳವಳಿಯಿಲ್ಲದೆ ನಕ್ಸಲ್ ಚಳವಳಿ ತಾರಕಕ್ಕೇರಿದ ಪರಿಣಾಮ ಇದು. ಆದರೆ ಕರ್ನಾಟಕದ ದಲಿತ ಚಳವಳಿ ಸಾಂಸ್ಕೃತಿಕವಾಗಿ ಹೊರತುಪಡಿಸಿದಂತೆ ಆಂಧ್ರದ ನಕ್ಸಲೈಟ್‌ಗಳ ಹಿಂಸಾತ್ಮಕ ಮಾರ್ಗಗಳಿಂದ ಯಾವೊತ್ತೂ ಪ್ರೇರಣೆ ಪಡೆದಿಲ್ಲ. ಈಗ ನಮ್ಮ ನಾಡಿನಲ್ಲೂ ನಕ್ಸಲ್ ಗಾಳಿ ಬೀಸತೊಡಗಿದೆ. ಆಂಧ್ರದ ನಾಯಕರೂ ಇಲ್ಲಿಗೆ ಬಂದು ಮೀಸಲಾತಿ ವರ್ಗೀಕರಣದ ಕಿಚ್ಚಿಗೆ ತುಪ್ಪ ಸುರಿದು ಹೋಗುತ್ತಿದ್ದಾರೆ. ಎಡಗೈ-ಬಲಗೈ ಶತ್ರುತ್ವಕ್ಕೆ ಕಾರಣವಾಗಿರುವ ಮೀಸಲಾತಿ ವಿವಾದಕ್ಕೆ ನಕ್ಸಲರು ಬಂದೂಕಿನಿಂದ ಮುಕ್ತಾಯ ದೊರಕಿಸುವ ಮೊದಲು ದಸಂಸವೇ ಈ ನೆಲದ ದಲಿತ ಸಹೋದರರು ಒಟ್ಟಿಗೆ ಉಣ್ಣುವ ತಟ್ಟೆಯನ್ನು ಶುಚಿಗೊಳಿಸಲಿ. ಈ ತಟ್ಟೆಯನ್ನು ಶುಚಿಗೊಳಿಸುವ ಉಸಾಬರಿಗೆ ನಕ್ಸಲರು ಬಂದರೆ ತಟ್ಟೆಯೂ ಸೇರಿದಂತೆ ಸೋದರತೆಯೂ ನೆಗ್ಗಿ ಹೋಗುವುದರಲ್ಲಿ ಸಂಶಯವಿಲ್ಲ. ಆಂಧ್ರದಲ್ಲಿ ನಕ್ಸಲರ ಒಂದು ಬಣ ಮಾದಿಗರ ಪರ ವಹಿಸುತ್ತೆಂಬುದು ಗಮನೀಯ ಅಂಶ. ಇಲ್ಲಿ ಪರಸ್ಪರ ಒಕ್ಕಳಬಳ್ಳಿ ಸಂಬಂಧವುಳ್ಳ ಹೊಲೆ - ಮಾದಿಗ ಸೋದರರು ತಮ್ಮಲ್ಲೇ ಹೀಗೆ ವೈರತ್ವ ಬೆಳೆಸಿಕೊಂಡರೆ ಪ್ರಬಲವಾಗುತ್ತಿರುವ ಶತ್ರುವಿನಿಂದ ಉಂಟಾಗುವ ಅನಾಹುತಗಳನ್ನು ದಸಂಸ ನಿಗ್ರಹಿಸುವುದಾದರೂ ಹೇಗೆ?

ಇಬ್ಬರಿಗೂ ಸಮಾನವಾಗಿ
ಕಾಡುವ ಶತ್ರುವಂತೂ ಸ್ಪಷ್ಟವಾಗಿ
ಕಾಣಿಸುತ್ತಿದ್ದಾನೆ.
ಆ ಶತ್ರು ಒಬ್ಬ ವ್ಯಕ್ತಿಯಲ್ಲ,
ಸಂಘಟನೆಯಲ್ಲ.
ಬದಲಾಗಿ ಬ್ರಾಹ್ಮಣ್ಯವೆಂಬ
ಜಾಡ್ಯ ಮತ್ತು ಆ ಜಾಡ್ಯದ
ಬಹುರೂಪಿ ನೆಲೆಗಳು.

ಮೀಸಲಾತಿ ವರ್ಗೀಕರಣದ ಇಂತಹ ಒಳ ಜಗಳದ ಪರಿಣಾಮ ಮಾದಿಗರು ತಮ್ಮ ಜಾತಿ ಸಂಘಟನೆಯ ಕಡೆಗೆ ಒತ್ತು ನೀಡುತ್ತಿರುವುದಲ್ಲದೆ ತಮ್ಮ ಸಮುದಾಯವು ಪ್ರಗತಿಯಿಂದ ವಂಚಿತವಾಗಲು ಹೊಲೆಯ ಸಮುದಾಯವೇ ಕಾರಣವೆಂಬ ಅಸಹನೀಯ ಮನೋಭಾವ ಹೊಂದುತ್ತಿದೆ. ಅದೇ ವೇಳೆ ಹೊಲೆಯ ಸಮುದಾಯವೂ ಈ ವಿಚಾರದಲ್ಲಿ ತೀರಾ ಜಿಗುಟಾಗಿ ವರ್ತಿಸುತ್ತಿದೆ. ಸಹಜೀವನ ಮಾಡುವ ಮಾದಿಗ ಸಮುದಾಯದ ಧ್ವನಿಯನ್ನು ಉಪೇಕ್ಷಿಸುತ್ತಲೇ ಬರುತ್ತಿದೆ.

ಹೀಗಾಗಿ ಈ ಹೊತ್ತು ಕೇಂದ್ರದಲ್ಲಿ ಬಿಜೆಪಿಯೊಂದಿಗೆ ಮಲಿನ ಮೈತ್ರಿ ಮಾಡಿಕೊಂಡಿದ್ದ ಬಿಎಸ್‌ಪಿ ನಾಯಕರ ಹಿತವಚನದಂತೆ ನಡೆಯುತ್ತಾ ಇನ್ನುಳಿದ ಅಪಾರ ಎಡಪಂಥೀಯರ ಬೆಂಬಲದಿಂದ ವಂಚಿತರಾಗಿ ತಮ್ಮನ್ನು ತಾವೇ ದಹಿಸಿಕೊಳ್ಳುವ ಮಟ್ಟವನ್ನು ದಲಿತರು ತಲುಪುತ್ತಿದ್ದಾರೆ. ದಲಿತರ ಇಂತಹ ರಾಜಕೀಯ ಹೊಂದಾಣಿಕೆ ಒಂದು ಗುಂಪಿನಲ್ಲಿ ಪ್ರಬಲವಾಗಿ ಬೆಳೆಯುತ್ತಿದ್ದು ಪರ್ಯಾಯ ರಾಜಕಾರಣದ ಏಕತೆಗೆ ಮುಳ್ಳಾಗುವುದು ಅಲ್ಲಗಳೆಯಲಾಗದ ಸಂಗತಿ. ಆಳುವ ವರ್ಗವೂ ಈ ಮೀಸಲಾತಿ ಸಮಸ್ಯೆಯನ್ನು ಬಗೆಹರಿಸದೆ ತಮ್ಮದೇ ಹಿತಕ್ಕನುಗುಣವಾಗಿ ಬಳಸಿಕೊಳ್ಳತೊಡಗಿದೆ. ರಾಜಕೀಯ ಅಧಿಕಾರವಿಲ್ಲದ ಹೊರತು ಅಭಿವೃದ್ಧಿ ಸಾಧ್ಯವೇ ಇಲ್ಲವೆಂಬ ವಾತಾವರಣ ನಿರ್ಮಾಣವಾಗಿ 'ಪಕ್ಷ ಯಾವುದಾದರೇನಂತೆ, ಅಧಿಕಾರ ಸಿಗಲಿ' ಎಂಬ ರಾಜಕೀಯ ಹೊಂದಾಣಿಕೆಯ ಚಿಂತನೆ ಬಹುಪಾಲು ಎಲ್ಲ ದಮನಿತ ವರ್ಗಗಳಲ್ಲಿ ಬಲಗೊಳ್ಳುತ್ತಿದೆ.

ವೈ.ಕೆ. ರಾಮಯ್ಯ ಈ ನಾಡಿನ ಸಮಾಜವಾದೀ ರಾಜಕೀಯ ಹೋರಾಟದಲ್ಲಿ ಒಂದು ಗಂಭೀರ ಹೆಸರು. ಇವರ ನಿಧನದ ನಂತರ ಅವರ ಪತ್ನಿ ಅನಸೂಯಮ್ಮ ತನ್ನ ಗಂಡನ ಸಮಾಜವಾದೀ ಚಿಂತನೆಗಳಿಗೆ ವಿರುದ್ಧವಾಗಿ ಕೋಮುವಾದೀ ಬಿಜೆಪಿಯೊಂದಿಗೆ ಕೈ ಜೋಡಿಸಿದರು. ವರ್ಚಸ್ವೀ ನಾಯಕನಿಗಿರಬೇಕಾದ ಯಾವ ಗುಣಗಳೂ ಇಲ್ಲದ ಅನುಸೂಯಮ್ಮ ಬಿಜೆಪಿ ಜತೆ ಅಪವಿತ್ರ ಮೈತ್ರಿ ಮಾಡಿಕೊಂಡು ಬಲಪಂಥೀಯ ಶಕ್ತಿಗಳ ಗುಲಾಮಗಿರಿಗೆ ತೊಡಗಿದರು. ತೀರಾ ಇತ್ತೀಚೆಗೆ ಕುಣಿಗಲ್‌ನಲ್ಲಿ ಭಜರಂಗ ದಳದ ಶಾಖಾ ಘಟಕವು ಉದ್ಘಾಟನೆಯಾದಾಗ ಇಡೀ ಕಾರ್ಯಕ್ರಮದ ಬೆನ್ನೆಲುಬಾಗಿ ದುಡಿದದ್ದು ಇದೇ ಅನಸೂಯಮ್ಮ. ಅಂದ ಹಾಗೆ ಒಕ್ಕಲಿಗ ಜಾತಿಯ ಅನಸೂಯಮ್ಮ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದು ಈಗ ಬಿಜೆಪಿಯ ಜತೆ ಗಾಢ ಸಖ್ಯದಲ್ಲಿರುವ ಆರ್‌ಎಸ್ಎಸ್ ಭಜರಂಗದಳ, ಎಬಿವಿಪಿ ಮುಂತಾದ ಸಂಘಟನೆಗಳ ಹಂಗಿಲ್ಲದೆ ತನ್ನ ಗೆಲುವು ಸಾಧ್ಯವಿಲ್ಲವೆಂದು ಬಲವಾಗಿ ನಂಬುವ ಮಟ್ಟಿಗೆ ಭ್ರಾಂತಿ ತಾಳಿದ್ದಾರೆ. ಅಂದಹಾಗೆ, ಅನಸೂಯಮ್ಮನವರನ್ನು ಬಿಜೆಪಿಗೆ ಓಲೈಸಿ ಎಳೆತಂದದ್ದು ಮಾದಿಗ ಮೀಸಲಾತಿ ಹೋರಾಟ ಸಮಿತಿಯ ಸಕ್ರಿಯ ಕಾರ್ಯಕರ್ತ ಹಾಗೂ ಕುಣಿಗಲ್‌ನ ಪ್ರಭಾವೀ ದಲಿತ

ರಾಜಕಾರಣಿ ವೈ. ಹೆಚ್. ಹುಚ್ಚಯ್ಯ! ಇವರು ಸಮಾಜವಾದೀ ರಾಜಕಾರಣಿ ವೈ.ಕೆ.ಆರ್. ಅವರ ಶಿಷ್ಯರೂ ಕೂಡ.

ದಲಿತರು ಮತ್ತು ರೈತರು ಸಾಮಾಜಿಕ ಅಸಮಾನತೆಯ ಸಮಾನ ಶೋಷಿತರೆಂಬ ಅರಿವು ಇಬ್ಬರಲ್ಲೂ ಮೂಡಿದಾಗ ಶತ್ರುವೂ ನಿಚ್ಚಳವಾಗಿ ಕಾಣತೊಡಗುತ್ತಾನೆ. ಪರ್ಯಾಯ ರಾಜಕಾರಣಕ್ಕೆ ಈ ಶತ್ರುವೇ ಸಮಾನ ಪ್ರತಿಸ್ಪರ್ಧಿಯೂ ಆಗುತ್ತಾನೆ. ಆಗ ಸಮಾನ ಪ್ರತಿಸ್ಪರ್ಧಿಯ ವಿರುದ್ಧ ಹೋರಾಡಿ ಗೆಲ್ಲಲು ಸಮಾನ ತತ್ವಗಳೂ ಮುಖ್ಯವಾಗುತ್ತವೆ. ಹಾಗಿದ್ದ ಮೇಲೆ ಪರ್ಯಾಯ ರಾಜಕಾರಣ ಮಾಡಲು ಈಗಿರುವ ಸಮಾನ ಕಾರ್ಯಸೂಚಿ ಅಥವಾ ಪ್ರಣಾಳಿಕೆ ಏನು ? ಹೆಂಡ-ಬೂಟು-ಸೀರೆ-ಪಂಚೆ ಹಂಚುವ ಅಧಿಕಾರಶಾಹಿ ರಾಜಕಾರಣಿಗಳ ತಂತ್ರಗಳಿಗೆ ವಿರುದ್ಧವಾಗಿ ಎಂತಹ ಪ್ರತಿತಂತ್ರಗಳನ್ನು ರೂಪಿಸಬೇಕು ?

ಬಿಜೆಪಿಯಂತಹ ಬಲಪಂಥೀಯ ರಾಜಕೀಯ ಶಕ್ತಿಗಳು ಹೊಂದಿರುವ 'ಮಾಧ್ಯಮ ಪ್ರಚಾರ ಶಕ್ತಿ' ಅಗಾಧವಾದುದು. ಅಧಿಕಾರದಲ್ಲಿಲ್ಲದ ಪಕ್ಷಗಳು, ಸಂಘಟನೆಗಳು ಸುದ್ದಿ ಮಾಧ್ಯಮಗಳಿಗಿಂತಲೂ ಜನರ ಉಪೇಕ್ಷೆಗೇ ಹೆಚ್ಚು ಗುರಿಯಾಗುತ್ತವೆ. ಲಾಗಾಯ್ತಿನಿಂದಲೂ ಬಲಪಂಥೀಯ ಪಕ್ಷ ಹಾಗೂ ಶಕ್ತಿಗಳ ಕಡೆಗೇ 'ಮಾಧ್ಯಮ ಮೋಹ' ವಿರುವುದರಿಂದ ಹಾಗೂ ಇಂತಹ ಮಾಧ್ಯಮಗಳು ಬಲಪಂಥೀಯರ ಕೈಗಳಲ್ಲೇ ಕೇಂದ್ರಸ್ಥವಾಗಿರುವುದರಿಂದ ದೃಶ್ಯ-ಶ್ರವ್ಯ-ಮುದ್ರಣ ಮಾಧ್ಯಮಗಳು ಪರ್ಯಾಯ ರಾಜಕಾರಣದಂತಹ ಚಾರಿತ್ರಿಕ ಮಹತ್ವವುಳ್ಳ ಸಂಗತಿಗಳ ಕಡೆ ಕಡೆಗಣ್ಣ ಕಿರುನೋಟವನ್ನೂ ಬೀರದೆ ಬೀದಿಗೆ (ಬದಿಗೆ) ಸರಿಸುವ ಅಪಾಯವಿದೆ. ಹಾಗಾಗಿ ಮಾಧ್ಯಮಗಳಿಗೆ ಮತ್ತು ಜನಗಳಿಗೆ ತಲುಪಲು ಕೈಗೊಳ್ಳಬೇಕಾದ ಯೋಜಿತ ಕಾರ್ಯಕ್ರಮಗಳೇನು ?

ಬಹು ಸಂಖ್ಯಾತರಾದ ದಲಿತರು ಮತ್ತು ರೈತರು ಈ ನಾಡಿನ ಅಧಿಕಾರ ಚುಕ್ಕಾಣಿ ಹಿಡಿಯಬೇಕಾಗಿರುವುದು ಸಾಮಾಜಿಕ ನ್ಯಾಯ. ಆದರೆ ಕೋಮುವಾದದ ಕಳ್ಳು ಕುಡಿಸಿ ಮತದಾರರ ಮೆದುಳನ್ನು ನಿಷ್ಕ್ರಿಯಗೊಳಿಸುವ ಬ್ರಾಹ್ಮಣಶಾಹಿಯು ಇಟಲಿಯ ಮುಸಲೋನಿ ಹಾಗೂ ಜರ್ಮನಿಯ ಹಿಟ್ಲರ್‌ಗಳಂತೆ ನಮ್ಮನ್ನು ಬಿಜೆಪಿಯ ಮುದಿಸಿಂಹಗಳ ರೂಪದಲ್ಲಿ ಕಾಡಲಾರಂಭಿಸಿದೆ. ಗಾಂಧೀಜಿಯ ಅಹಿಂಸಾ ತತ್ವಗಳನ್ನು ಎಂದೂ ಮೆಚ್ಚದೆ ಅವರ ಎದೆಗೆ ಗುಂಡಿಕ್ಕಿದ ಗೋಡ್ಸೆ ಸಂತಾನಗಳು ಇಂದು ಗಾಂಧೀಜಿಯನ್ನೂ ಅವರ ತತ್ವಗಳನ್ನೂ ಹೈಜಾಕ್ ಮಾಡುತ್ತಿವೆ. ಹಿಂದುತ್ವ ಪ್ರತಿಪಾದಿಸುವ ಕೇಡಾಳರನ್ನು ನಾಡಿನ ಸಾಂಸ್ಕೃತಿಕ ಯಜಮಾನರಂತೆ ಚಿತ್ರಿಸುವ ಮಾಧ್ಯಮಗಳು ಪರ್ಯಾಯ ರಾಜಕಾರಣದ ಚಾಲಕ ಶಕ್ತಿಗಳನ್ನು ಸಾಂಸ್ಕೃತಿಕ ವೈರಿಗಳಾಗಿ ಚಿತ್ರಿಸುವ ಸಾಧ್ಯತೆಯೂ ಇಲ್ಲದಿಲ್ಲ.

ಆದುದರಿಂದ ಬಿಜೆಪಿ, ಆರ್‌ಎಸ್‌ಎಸ್, ಬಜರಂಗದಳ, ಶಿವಸೇನೆ, ವಿಶ್ವ ಹಿಂದೂ ಪರಿಷತ್ ಮುಂತಾದ ಬಲಪಂಥೀಯರು ಉಗ್ರ ಹಿಂದುತ್ವಕ್ಕೆ ತಮ್ಮನ್ನು ಸಮರ್ಪಿಸಿಕೊಂಡಂತೆ ದಲಿತರು - ರೈತರು ತಮ್ಮನ್ನು ಅಷ್ಟೇ ಉಗ್ರವಾದ 'ಸೋದರ ಬಂಧುತ್ವ'ಕ್ಕೆ ಸಮರ್ಪಿಸಿಕೊಳ್ಳಬೇಕು ಹಾಗೂ ದಲಿತ ಮತ್ತು ರೈತರ ಕ್ರಿಯಾ ಕ್ಷೇತ್ರಗಳು ಪ್ರಧಾನವಾಗಿ ಗ್ರಾಮಗಳೇ ಆಗಿರುವುದರಿಂದ ಪರ್ಯಾಯ ರಾಜಕಾರಣವು 'ದೇಸೀಕರಣ'ಗೊಳ್ಳಬೇಕಾದ ತುರ್ತು ಅಗತ್ಯವಿದೆ. ಯಾವುದೇ ಚಳವಳಿ ಬಲಿಷ್ಠವಾದ ತಾತ್ವಿಕ ಮತ್ತು ವೈಚಾರಿಕ

ಬಹು ಸಂಖ್ಯಾತರಾದ ದಲಿತರು ಮತ್ತು ರೈತರು ಈ ನಾಡಿನ ಅಧಿಕಾರ ಚುಕ್ಕಾಣಿ ಹಿಡಿಯಬೇಕಾಗಿರುವುದು ಸಾಮಾಜಿಕ ನ್ಯಾಯ.

ಚಿಂತನೆಗಳನ್ನು ಮೈಗೂಡಿಸಿಕೊಂಡು ದೇಸೀಕರಣಗೊಂಡಾಗ ಮಾತ್ರ 'ಮಾಧ್ಯಮ ಪ್ರಚಾರ ಶಕ್ತಿ'ಯೂ ಗೌಣವಾಗಿ ಕಾಣತೊಡಗುತ್ತದೆ. ಗಾಂಧೀಜಿಯವರ ತತ್ವಗಳು ಮತ್ತು ಚಿಂತನೆಗಳು 'ದೇಸೀಕರಣ' ಹೊಂದುವುದರಲ್ಲಿಯೇ ಗಾಂಧೀಜಿಯ ಗೆಲುವಿನ ಮೂಲವೂ ಇತ್ತೆಂಬುದನ್ನು ಇಲ್ಲಿ ಮರೆಯಬಾರದು.

ಬಿಜೆಪಿಯ ಸೋಲಿಗೆ ಆ ಪಕ್ಷದ ಜನವಿರೋಧಿ ನೀತಿ ತತ್ವಗಳೇ ಕಾರಣವೆಂಬುದನ್ನು ಯಾವೊತ್ತಿಗೂ ಒಪ್ಪಲೊಲ್ಲದ ಸಂಘ ಪರಿವಾರದ ಮಂದಿ, ಹಿಂದುತ್ವವನ್ನು ಬಲವಾಗಿ ಪ್ರತಿಪಾದಿಸದಿರುವುದೇ ಸೋಲಿಗೆ ದೊಡ್ಡ ಕಾರಣವೆಂದು ಹೇಳುವುದುಂಟು. ಹಾಗೆಯೇ ಪರ್ಯಾಯ ರಾಜಕಾರಣದ ಗೆಲುವಿಗೆ 'ಸೋದರ ಬಂಧುತ್ವ' ಮತ್ತು 'ದೇಸೀಕರಣ' ಪ್ರಕ್ರಿಯೆಯನ್ನು ಬಲಿಷ್ಠವಾಗಿ ಪ್ರತಿಪಾದಿಸಿ ಕ್ರಿಯಸ್ಥಗೊಳಿಸುವಂತಾಗಬೇಕು. ಇಲ್ಲದೆ ಹೋದರೆ ಸೋಲಿನ ಕಾರಣಗಳಾಗಿ ಇವುಗಳನ್ನೇ ಮುಂದುಮಾಡಿ ಹೇಳಿಕೊಳ್ಳಬೇಕಾದೀತು.

ಇನ್ನು ರೈತ ಸಂಘಟನೆಯಾದರೋ 'ನಾವು ಈ ಮಣ್ಣಿನ ಮಕ್ಕಳು, ಈ ನೆಲದ ವಾರಸುದಾರರು, ವೈದಿಕ ಪರಂಪರೆಯನ್ನು ಪೋಷಿಸಲು ನೇಮಕಗೊಂಡ ಊಳಿಗದ ತೊತ್ತುಗಳು ನಾವಲ್ಲ, ಈ ನಾಡನ್ನು ಆಳುವ ಅಧಿಕಾರ ಸೂತ್ರ ನಮ್ಮದಾಗಬೇಕು. ಇದು ನಮ್ಮ ಮೂಲಭೂತ ಹಕ್ಕು' ಎಂದು ಹೇಳುತ್ತಲೇ 'ದಲಿತರು ಅಧಿಕಾರ ಹಂಚಿಕೊಳ್ಳಲು ನಮ್ಮೊಂದಿಗೆ ಸಮಾನರು' ಎಂದು ಘೋಷಿಸಿ ಕಡೆಗೆ ಅಧಿಕಾರದ ರಿಮೋಟ್ ತಮ್ಮಲ್ಲೇ ಉಳಿಯುವಂತೆ ನೋಡಿಕೊಳ್ಳುವಲ್ಲಿ ರೈತ ಸಂಘಟನೆಗಳು ತಂತ್ರ ಹೂಡುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

ಯಾಕೆಂದರೆ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಜಾತಿವಾರು ಮೀಸಲಾತಿಯಿಂದಾಗಿ ದಲಿತರು ಮಹಿಳೆಯರು ಸ್ಥಳೀಯ ಗ್ರಾಮ ಪಂಚಾಯತ್, ಪುರಸಭೆ ಮುಂತಾದ ಕಡೆಗಳಲ್ಲಿ ಸ್ಪರ್ಧಿಸಿ ಗೆದ್ದು ಅಧ್ಯಕ್ಷಸ್ಥಾನವನ್ನೇ ಅಲಂಕರಿಸಿದ್ದರೂ ಸಹ ಅವರ ಅಧಿಕಾರದ ರಿಮೋಟ್ ಮೇಲ್ಜಾತಿಯವರ ಬಳಿಯೇ ಇರುವುದನ್ನು ಯಾರೂ ಅಲ್ಲಗಳೆಯಲಾರರು. ಆದುದರಿಂದ ರೈತ ಸಂಘಟನೆಗಳು ದಲಿತ ಪರವಾದ ಯೋಜನೆಗಳನ್ನು ಹಮ್ಮಿಕೊಂಡು ಕ್ರಿಯಸ್ಥಗೊಳಿಸಬೇಕು. ಅದರ ಮೊದಲ ಭಾಗವಾಗಿ ದಲಿತನೇ ಮುಂದಿನ ಮುಖ್ಯಮಂತ್ರಿ ಎಂದು ಘೋಷಿಸುವಂತಾಗಬೇಕು. ಮೊದಲು ದಲಿತರ ಸ್ನೇಹಿಯಂತೆ, ಹಿತಚಿಂತಕನಂತೆ ತೋರಿಸಿಕೊಂಡು ರಾಜ್ಯಾಧಿಕಾರದ ಮಾತು ಬಂದಾಗ ಪರಸ್ಪರ ಕೆಸರೆರಚಿಕೊಳ್ಳುವ ಹಂತ ತಲುಪಬಾರದು.

ಕಡೆಯದಾಗಿ ಅಲ್ಪ ಸಂಖ್ಯಾತರು ಮತ್ತು ಕಾರ್ಮಿಕರ ವಿಲೀನವೂ ಪರ್ಯಾಯ ರಾಜಕಾರಣಕ್ಕೆ ಬಲ ತಂದು ಕೊಡುತ್ತದೆ. ಮುಸ್ಲಿಂ, ಕ್ರಿಶ್ಚಿಯನ್ ಮುಂತಾದ ಅಲ್ಪಸಂಖ್ಯಾತರನ್ನು ದೂರವಿಟ್ಟು ಏನೂ ಸಾಧಿಸಲು ಸಾಧ್ಯವಿಲ್ಲ. ರೈತರು ದಲಿತರು ಮಾಡಲಾಗದ್ದು ಮುಸ್ಲಿಮರನ್ನು ಐಕ್ಯಗೊಳಿಸಿಕೊಂಡಾಗ ಸಾಧ್ಯವಾಗುತ್ತದೆ. ಮತೀಯತೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಮುಸ್ಲಿಮರನ್ನು ಪರ್ಯಾಯ ರಾಜಕಾರಣದ ದಿಕ್ಕಿನಲ್ಲಿ ಬಳಸಿಕೊಳ್ಳಬೇಕಾದುದು ಅನಿವಾರ್ಯವೂ ಕೂಡ. ಅಲ್ಪಸಂಖ್ಯಾತರು, ಹಿಂದುಳಿ ದವರು, ದಲಿತರು, ರೈತರು, ಕಾರ್ಮಿಕರು ಮುಂತಾದ ದಮನಿತರ ಬಾಂಧವ್ಯ ಮೊದಲಿಗಿಂತಲೂ ಈಗ ಹೆಚ್ಚು ಪ್ರಸ್ತುತವೆನ್ನಿಸುತ್ತದೆ. ಮತೀಯವಾದ, ರಾಷ್ಟ್ರೀಯವಾದಗಳ ಹೆಸರಿನಲ್ಲಿ ಜಾತ್ಯಾತೀತ ಪ್ರಜಾಪ್ರಭುತ್ವ ವ್ಯವಸ್ಥೆಗೆ ಎರವಾಗುವ ಏಕ ಸಂಸ್ಕೃತಿ ಮತ್ತು ಏಕ ಪ್ರಭುತ್ವವನ್ನು ಹೇರಲು ಹವಣಿಸುತ್ತಿರುವ ಸಂದರ್ಭದಲ್ಲಿ ಮುಸ್ಲಿಂ ಹಾಗೂ ಕ್ರಿಶ್ಚಿಯನ್ನರ ಸೇರ್ಪಡೆ ಇಂತಹ ಪ್ರಯತ್ನಗಳನ್ನು ನಿಗ್ರಹಿಸಬಲ್ಲದು.

ಇಷ್ಟೆಲ್ಲಾ ಐಕ್ಯತೆಯು ಅಧಿಕಾರದಾಹೀ ಕೋಮುವಾದಿ ರಾಜಕಾರಣಿಗಳ ಉಪಟಳವನ್ನು ತೊಡೆದು ಹಾಕಿಬಿಡುತ್ತದೆ. ಇನ್ನು ಮುಂದೆ ನಾಡು ನಿಶ್ಚಿಂತವಾಗಿ ಉಸಿರಾಡಬಹುದೆಂದು ತರ್ಕಿಸಲಾಗುವುದಿಲ್ಲ. ಹೆಚ್ಚೆಂದರೆ ಅಧಿಕಾರ ಲಾಲಸೆ ತುಂಬಿದ ಸ್ವಾರ್ಥ ರಾಜಕಾರಣಿಗಳಿಗೆ ಮತ್ತು ಜನವಿರೋಧಿ ಚಳವಳಿಗಳ ಧಾವಂತಕ್ಕೆ ಒಂದು ರೀತಿಯ ತಡೆ ಒಡ್ಡಬಹುದು. ಅಷ್ಟು ಮಾಡಿದರೆ ಸಾಕು ನೂರು ವರ್ಷ ಹಿಂದಕ್ಕೆ ಚಲಿಸುವ ಚರಿತ್ರೆಯ ರಥ ಕೊಂಚವಾದರೂ ಮುಂದಕ್ಕೆ ಚಲಿಸುತ್ತದೆ.

ಒಟ್ಟಿನಲ್ಲಿ ಉರಿಬಿಸಿಲ ದಾರಿಯಲ್ಲಿ ಬಳಲಿ ಬೆಂಡಾಗಿ ಬಾಯಾರಿದ ದಾರಿಹೋಕನಿಗೆ ವಿಶ್ರಮಿಸಲು ತಂಪಾದ ನೆರಳ ಮರ ಹಾಗೂ ಕುಡಿಯಲು ಹಾಲುಗೊಳದ ತಣ್ಣೀರು ಸಿಕ್ಕಿದಾಗ ಉಂಟಾಗಬಹುದಾದಷ್ಟು ಸಂತೋಷದ ವಿಚಾರ ದಲಿತರು ಮತ್ತು ರೈತರ ಒಗ್ಗೂಡುವಿಕೆ. ಪರ್ಯಾಯ ರಾಜಕಾರಣಕ್ಕೆ ಯಶಸ್ಸು ಸಿಗಲಿ. ಬಾಳಲಿ. ಈಗ ದನಿಗೂಡಿ ಹಾಡೋಣ :

ಕಟ್ಟುತ್ತೇವ ನಾವು ಕಟ್ಟುತ್ತೇವ ನಾವು
ಕಟ್ಟೇ ಕಟ್ಟುತ್ತೇವ
ಒಡೆದ ಮನಸುಗಳ ಕಂಡ ಕನಸುಗಳ
ಕಟ್ಟೇ ಕಟ್ಟುತ್ತೇವಗ ನಾವು
ಕನಸ ಕಟ್ಟುತ್ತೇವ ನಾವು ಮನಸ ಕಟ್ಟುತ್ತೇವ
ಜಾತಿಯಿಲ್ಲದ ಭೀತಿಯಿಲ್ಲದ ನಾಡ ಕಟ್ಟುತ್ತೇವ

॥ ಕಟ್ಟುತ್ತೇವ ॥

ಕಾಂಗ್ರೆಸ್‌ನ ಮಣಿಶಂಕರ ಅಯ್ಯರ್ ಆಗಸ್ಟ್ ೯ ರಂದು ಶಿಲ್ಪ ಮತ್ತು ಫಲಗಳ ಸ್ಥಾಪನೆಯನ್ನು ನೆರವೇರಿಸಬೇಕಾಯಿತು. ಫಲಕಗಳ ಮೇಲೆ ಸಾವರಕರ, ಮದನಲಾಲ್ ಢಿಂಗ್ರಾ, ಭಗತ್‌ಸಿಂಗ್ ಮತ್ತು ಸುಭಾಷ್ ಬೋಸ್‌ರ ಹೇಳಿಕೆಗಳನ್ನು ಕೆತ್ತಿಸಲಾಗಿತ್ತು. ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಪಣವಾಗಿ ಒಡ್ಡಿದ ವೀರರ ಸಾಲಿನಲ್ಲಿ ಸಾವರಕರರು ಮಿಂಚುವುದು ಅಯ್ಯರ್ ಅವರಿಗೆ ಹಿಡಿಸಲಿಲ್ಲ. ಅವರು ಸಾವರಕರರ ಫಲಕವನ್ನು ತೆಗೆದು ಅದರ ಸ್ಥಾನದಲ್ಲಿ ಗಾಂಧಿಯವರ ಫಲಕವನ್ನು ಅಣಿಗೊಳಿಸಿದರು. ಆಗ ಸಂಘ ಪರಿವಾರದವರು 'ಇದು ವೀರಸಾವಕರರಿಗೆ ಮಾಡಿದ ಅವಮಾನ' ಎಂದು ಕೂಗಾಡಿದರು. ಅಯ್ಯರ್ ಅವರು ದಿಟ್ಟತನದಿಂದ ತಮ್ಮ ಕೃತ್ಯವನ್ನು ಸಮರ್ಥಿಸಿಕೊಂಡರು.

ವೀರ (?) ಸಾವರಕರ ಒಂದು ಒಳನೋಟ

ಬಿ.ವಿ. ವೀರಭದ್ರಪ್ಪ

ಹಿಂದುತ್ವವಾದದ ಜನಕ ಸಾವರಕರರ ಪೂರ್ಣ ಹೆಸರು ವಿನಾಯಕ ದಾಮೋದರ ಸಾವರಕರ ಎಂದಿದ್ದರೂ ಅವರು ಚಲಾವಣೆಯಲ್ಲಿರುವುದು ವೀರ ಸಾವರಕರ ಎಂದೇ ಅಲ್ಲವೇ ? ಅವರ ಶೌರ್ಯ ಎಂತಹುದು ಎಂಬುದನ್ನು ಅವರು ನಡೆಸಿದ ಹೋರಾಟಗಳಿಂದಲೇ ಮನವರಿಕೆ ಮಾಡಿ ಕೊಳ್ಳೋಣ.

ಬಿಜೆಪಿ ನೇತೃತ್ವದ ಮಿಶ್ರ ಸರ್ಕಾರ ಅಧಿಕಾರದಲ್ಲಿದ್ದಾಗ ಅಂಡಮಾನ್ ದ್ವೀಪದಲ್ಲಿ ೧೧ ವರ್ಷ ಕಠಿಣ ಶಿಕ್ಷೆಯನ್ನನುಭವಿಸಿದ ತಮ್ಮ ಕನಸಿನ ನಾಯಕ ಸಾವರಕರರ ನೆನಪಿಗಾಗಿ 'ಸ್ವಾತಂತ್ರ್ಯ ಜ್ಯೋತಿ' ಎಂಬ ಒಂದು ಶಿಲ್ಪ ಮತ್ತು ಕೆಲವು ಫಲಕಗಳನ್ನು ಸ್ಥಾಪಿಸುವ ಯೋಜನೆಯನ್ನು ಹಾಕಿಕೊಂಡಿತ್ತು. ಶಿಲ್ಪವು ಮೇ ೨೦೦೪ರ ವೇಳೆಗೆ ಸಿದ್ಧವಾಗುವುದಿತ್ತು. ಆ ವೇಳೆಗೆ ಲೋಕಸಭಾ ಚುನಾವಣೆಗಳು ನಡೆದು ಎನ್‌ಡಿಎ ತನ್ನ ಸ್ಥಾನ ಕಳೆದುಕೊಂಡಿತು.

ಆದ್ದರಿಂದ ಕಾಂಗ್ರೆಸ್‌ನ ಮಣಿಶಂಕರ ಅಯ್ಯರ್ ಆಗಸ್ಟ್ ೯ ರಂದು ಶಿಲ್ಪ ಮತ್ತು ಫಲಗಳ ಸ್ಥಾಪನೆಯನ್ನು ನೆರವೇರಿಸಬೇಕಾಯಿತು. ಫಲಕಗಳ ಮೇಲೆ ಸಾವರಕರ, ಮದನಲಾಲ್ ಢಿಂಗ್ರಾ, ಭಗತ್‌ಸಿಂಗ್ ಮತ್ತು ಸುಭಾಷ್ ಬೋಸ್‌ರ ಹೇಳಿಕೆಗಳನ್ನು ಕೆತ್ತಿಸಲಾಗಿತ್ತು. ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಪಣವಾಗಿ ಒಡ್ಡಿದ ವೀರರ ಸಾಲಿನಲ್ಲಿ ಸಾವರಕರರು ಮಿಂಚುವುದು ಅಯ್ಯರ್ ಅವರಿಗೆ ಹಿಡಿಸಲಿಲ್ಲ. ಅವರು ಸಾವರಕರರ ಫಲಕವನ್ನು ತೆಗೆದು ಅದರ ಸ್ಥಾನದಲ್ಲಿ ಗಾಂಧಿಯವರ ಫಲಕವನ್ನು ಅಣಿಗೊಳಿಸಿದರು. ಆಗ ಸಂಘ ಪರಿವಾರದವರು 'ಇದು ವೀರಸಾವಕರರಿಗೆ ಮಾಡಿದ ಅವಮಾನ' ಎಂದು ಕೂಗಾಡಿದರು. ಅಯ್ಯರ್ ಅವರು ದಿಟ್ಟತನದಿಂದ ತಮ್ಮ ಕೃತ್ಯವನ್ನು ಸಮರ್ಥಿಸಿಕೊಂಡರು. ಹೇಗೆ ಎಂಬುದನ್ನು ಮುಂದೆ ನೋಡೋಣ.

ಈ ಮಧ್ಯೆ ಮಹಾರಾಷ್ಟ್ರದ ಶಾಸನ ಸಭಾ ಚುನಾವಣೆಗಳು ಬಂದು ಅದರಲ್ಲಿ ತಾವು ಹೇಗಾದರೂ ಗೆಲ್ಲಲೇಬೇಕೆಂದು ಎನ್‌ಡಿಎ ವಿರೋಧ ಪಕ್ಷ ಸಂಸತ್ತಿನ ಕಲಾಪಗಳಿಗೆ ಅಡ್ಡಿಯನ್ನುಂಟು ಮಾಡಿ ಕೋಲಾಹಲ ವೆಬ್ಬಿಸಿತು. ಮಾಧ್ಯಮಗಳಲ್ಲಿ ತಮ್ಮ ಆರ್ಭಟ ಮಿಂಚುವಂತೆ ಮಾಡುವಲ್ಲಿ ಬಿಜೆಪಿ ಯಶಸ್ವಿಯಾಯಿತು. ಆದರೂ ಮಹಾರಾಷ್ಟ್ರದ ಮತದಾರರು ಹಿಂದುತ್ವವಾದದ ತಲೆಯ ಮೇಲೆ ಒಂದು ಗುದ್ದಲಿ ಪೆಟ್ಟನ್ನು ಕೊಟ್ಟು ಬಿಜೆಪಿಯನ್ನು ಹಿಂದಕ್ಕೆ ಸರಿಸಿದರು.

ಬ್ರಿಟಿಷ್ ಆಡಳಿತದಲ್ಲಿ ಉಗ್ರಕ್ರಾಂತಿಕಾರರನ್ನು ಮತ್ತು ಅವರ ಹಿಂದಿನ ಗುಪ್ತಪ್ರಚೋದಕರನ್ನು ಅಂಡಮಾನಿನ ಕರಾಳ ಕಾರಾಗೃಹಕ್ಕೆ ತಳ್ಳಲಾಗುತ್ತಿತ್ತು. ಅಂಥವರಲ್ಲಿ ಒಬ್ಬನಾಗಿದ್ದ ಸಾವರಕರನನ್ನು ಅಂಡಮಾನಿನ ರಾಜಧಾನಿಯಿಂದ ಪೋರ್ಟ್ ಬ್ಲೈರ್‌ಗೆ ೧೯೧೧ರ ಜುಲೈ ೪ ರಂದು ಕರೆತರಲಾಯಿತು. ಆ ವರ್ಷ ಮುಗಿಯುವ ಮೊದಲೇ ಅವರು ತಮ್ಮ ಮೇಲೆ ಕರುಣೆ ತೋರಲು ಬ್ರಿಟಿಷ್ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಆದರೆ ಅದರ ಪಾಠ ಈಗ ಲಭ್ಯವಿಲ್ಲವಾದರೂ ಅವರೇ ಸಲ್ಲಿಸಿದ ತಮ್ಮ ೧೯೧೩ನೇ ನವೆಂಬರ್ ೧೪ರ ಎರಡನೇ ಮನವಿಯಲ್ಲಿ ಮೊದಲ ಮನವಿಯ ಪ್ರಸ್ತಾಪ ಮಾಡಿರುವುದನ್ನು ನಾವು ನೋಡಬಹುದು. ಆ ಮನವಿಯನ್ನು ಗೌರ್ನರ್ ಜನರಲ್ಲರ ಕಾರ್ಯಮಂಡಳಿಯ ಗೃಹ ಸದಸ್ಯ ರೆಗಿನಾಲ್ಡ್ ಕ್ರಾಡಾಕ್ ಎಂಬುವನಿಗೆ ಸಲ್ಲಿಸಲಾಗಿದೆ. ಆ ಮನವಿಯ ಕೊನೆ ಭಾಗವನ್ನು ಇಲ್ಲಿ ಉದ್ಧರಿಸುತ್ತಿದ್ದೇನೆ:

'ಕೊನೆಯಲ್ಲಿ, ನನ್ನ ಬಗ್ಗೆ ದಯಾನುಕಂಪವನ್ನು ತೋರಲು ೧೯೧೧ರಲ್ಲಿ ನಾನು ಸಲ್ಲಿಸಿದ್ದ ಮನವಿಯನ್ನು ಮತ್ತು ಅದನ್ನು ಪರಾಂಬರಿಸುವಷ್ಟು ಕರುಣಾಮಯಿಗಳಾಗ ಬೇಕೆಂದು ಬೇಡಿಕೊಂಡುದನ್ನು ನಿಮ್ಮ ನೆನಪಿಗೆ ತರಬಹುದೆ?

'ಭಾರತೀಯ ರಾಜಕೀಯದ ಇತ್ತೀಚಿನ ಬೆಳವಣಿಗೆ ಗಳು ಮತ್ತು ಸರ್ಕಾರದ ಹೊಂದಿಕೊಂಡು ಹೋಗುವ ನೀತಿ ಮತ್ತೊಮ್ಮೆ ಸರ್ಕಾರದ ಸಂವಿಧಾನಾತ್ಮಕ ವಿಧಾನಕ್ಕೆ ಬಾಗಿಲನ್ನು ತೆರೆದಿವೆ. ಉದ್ರೇಕದ ಮತ್ತು ಹತಾಶೆಯ ಭಾರತೀಯ ವಾತಾವರಣ ೧೯೦೬-೧೯೦೭ರಲ್ಲಿ ನಮ್ಮನ್ನು ಶಾಂತಿ ಮತ್ತು ಪ್ರಗತಿಯ ದಾರಿಯಿಂದ ದಿಕ್ಕು ತಪ್ಪಿಸಿತ್ತು. ಈಗ ಭಾರತೀಯ ಅಭ್ಯುದಯವನ್ನು ಮತ್ತು ಮಾನವೀಯತೆಯನ್ನು ಹೃದಯಾಂತರಾಳದಲ್ಲಿ ಹೊಂದಿರುವ ಯಾವನೂ ಆ ಮುಳ್ಳಿನ ಹಾದಿಯನ್ನು ಕಣ್ಣು ಮುಚ್ಚಿಕೊಂಡು ತುಳಿಯಲಾರ. ಆದ್ದರಿಂದ ಸರ್ಕಾರವು ತನ್ನ ಬಹುಮುಖಿ ದಯಾಪೂರ್ಣ ಕಾರ್ಯಕ್ರಮಗಳಲ್ಲಿ ಒಂದನ್ನಾಗಿ ನನ್ನನ್ನು ಬಿಡುಗಡೆ ಮಾಡಿದರೆ ಸಾಕು, ನಾನಾದರೋ ಸಂವಿಧಾನಾತ್ಮಕ ಪ್ರಗತಿಗೆ ಹಾಗೂ ಆ ಪ್ರಗತಿಯ ಪೂರೈಕೆಗೆ ಅಗತ್ಯವಾದ ಇಂಗ್ಲಿಷ್ ಸರ್ಕಾರದ ಕಟ್ಟಾ ಬೆಂಬಲಿಗನಾಗದೆ ಬೇರೇನೂ ಮಾಡಲಾರೆ. ನಾವು ಕಾರಾಗೃಹದಲ್ಲಿರುವವರೆಗೂ ಬ್ರಿಟಿಷ್ ಸಾರ್ವಭೌಮಿಕೆಯ ಭಾರತದ ನಿಷ್ಠಾವಂತ ಪ್ರಜೆಗಳ ನೂರಾರು ಸಾವಿರಾರು ಮನೆಗಳಲ್ಲಿ ನಿಜವಾದ ಸುಖ ಸಂತೋಷಗಳಿರಲು ಸಾಧ್ಯವಿಲ್ಲ. ಎಷ್ಟಾದರೂ ರಕ್ತಸಂಬಂಧವು ಬಾಹ್ಯ ಸಂಬಂಧ ಕ್ಕಿಂತ ಮಿಗಿಲಾದುದಲ್ಲವೆ? ನಮ್ಮನ್ನು ಬಿಡುಗಡೆ ಮಾಡಿದರೆ, ಶಿಕ್ಷಿಸಿ ಸೇಡು ತೀರಿಸಿಕೊಳ್ಳುವುದಕ್ಕಿಂತ ಕ್ಷಮಿಸಿ ಬುದ್ಧಿ ಕಲಿಸುವುದನ್ನು ಚೆನ್ನಾಗಿ ಬಲ್ಲ ಸರ್ಕಾರಕ್ಕೆ ತಮ್ಮ ಕೃತಜ್ಞತೆಯನ್ನು ತೋರಿಸಲು ಅವರು ಸಂತೋಷದ ಹೇಷಾರವದಲ್ಲಿ ಕುಣಿದಾಡುತ್ತಾರೆ.

ಅಲ್ಲದೆ ನಾನು ಸಂವಿಧಾನಾತ್ಮಕ ವಿಧಾನದಲ್ಲಿ ಮಾತನಾಡತೊಡಗುವುದರಿಂದ ಒಮ್ಮೆ ದಾರಿತಪ್ಪಿದ ಭಾರತದ ಒಳಗಿನ ಹಾಗೂ ಹೊರಗಿನ ಯುವಕರು ಸರಿದಾರಿಗೆ ಬರುವಂತಾಗುತ್ತದೆ. ಸರ್ಕಾರವು ಯಾವ ರೀತಿ ಬಯಸು ತ್ತದೋ ಆ ರೀತಿ ನಾನು ಅದರ ಸೇವೆ ಮಾಡಲು ಸಿದ್ಧನಿದ್ದೇನೆ. ಏಕೆಂದರೆ ನನ್ನ ಪರಿವರ್ತನೆ ಪ್ರಜ್ಞಾಪೂರ್ವಕವಾದುದು. ಆದ್ದರಿಂದ ನನ್ನ ಭವಿಷ್ಯದ ವರ್ತನೆಯೂ ಅದೇ ರೀತಿ ಇರುತ್ತದೆ ಎಂದು ನಾನು ಆಶಿಸುತ್ತೇನೆ. ನನ್ನನ್ನು ಸೆರೆಮನೆಯಿಂದ ಬಿಡುಗಡೆ ಮಾಡುವ ಮತ್ತು ಹಾಗೇ ಬಂಧಿಸಿಡುವ ಎರಡನ್ನೂ ತೂಗಿ ನೋಡಿದಾಗ ಮೊದಲಿನದರಿಂದ ಆಗುವ ಪ್ರಯೋಜನ ಎರಡನೆಯದರಿಂದ ಆಗುವುದಿಲ್ಲ.

ಬಲಶಾಲಿಯು ಮಾತ್ರ ಕರುಣಾಳುವಾಗಿರಲು ಸಾಧ್ಯ. ಆದ್ದರಿಂದ ದಾರಿತಪ್ಪಿ ಎಲ್ಲೆಲ್ಲೋ ಅಲೆದಾಡುತ್ತಿದ್ದ ಮಗ ಪಿತೃ ಸಮಾನ ಸರ್ಕಾರದ ಮನೆ ಬಾಗಿಲಿಗೆ ಹಿಂತಿರುಗದೆ ಮತ್ತೆಲ್ಲಿಗೆ ಹೋದಾನು ? ಘನತೆವೆತ್ತ ತಾವು ಈ ಎಲ್ಲ ಅಂಶಗಳನ್ನು ಸಹಾನುಭೂತಿಯಿಂದ ನೋಡುವಿರೆಂದು ಆಶಿಸುತ್ತೇನೆ.' (ಆಕರ: ಆರ್.ಸಿ. ಮಜುಂದಾರ್, Penal Settlements in Andamans, ಪು. ೨೧೧-೧೩, ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರ, ೧೯೭೫)

ಯಾವೊಬ್ಬ ದೇಶಪ್ರೇಮಿಯ ಹಾಗೂ ಸ್ವಾತಂತ್ರ್ಯ ಹೋರಾಟಗಾರನ ಕ್ಷಮಾ ಯಾಚನೆಯು ಇಷ್ಟು ಹೀನಾಯವಾಗಿರಲು ಸಾಧ್ಯವಿಲ್ಲ. ಅದರಲ್ಲೂ ತನ್ನ ವಿರೋಧಿಗಳನ್ನು ಕೊಲ್ಲಲು ಇತರರನ್ನು ಹುರಿದುಂಬಿಸಿ ಅವರಿಗೆ ಬಂದೂಕುಗಳನ್ನು ತಂದೊದಗಿಸಿದ ವ್ಯಕ್ತಿಯು ತನ್ನ ಬಿಡುಗಡೆಗಾಗಿ ಹೇಡಿಯಂತೆ ಕ್ಷಮಾ ಯಾಚಿಸುವುದಷ್ಟೇ ಅಲ್ಲ, ಸೆರೆಯಿಂದ ಬಿಡುಗಡೆಯಾದ ನಂತರ ತನ್ನ ವಿರೋಧಿ ಸಾರ್ವಭೌಮರನ್ನು ಬೆಂಬಲಿಸಿ ಅವರ ಅಡಿಯಾಳಾಗಿರಲು ಹಂಬಲಿಸಿದರು ವೀರ(?) ಸಾವರಕರರು! ಈ ಎರಡು ಮನವಿಗಳ ಬಗ್ಗೆ ಬಹುಕಾಲ ಭಾರತದಲ್ಲಿ ಉಳಿದ ಯಾರಿಗೂ ತಿಳಿದಿರಲಿಲ್ಲ. ಅವುಗಳನ್ನು ತನ್ನ ಸೋದರ ನಾರಾಯಣ ಸಾವರಕರರಿಂದಲೂ ಮರೆಮಾಚಲಾಗಿತ್ತು.

ಮೇಲಿನ ಎರಡು ದಯಾ ಯಾಚನೆಗಳ ಜೊತೆಗೆ ಇನ್ನೂ ಎರಡು ಮುಚ್ಚಳಿಕೆಗಳನ್ನೂ ಸಹ ಸಾವರಕರರು ಬ್ರಿಟಿಷ್ ಸರಕಾರಕ್ಕೆ ಬರೆದುಕೊಟ್ಟು ಜೈಲಿನಿಂದ ಬಿಡುಗಡೆ ಪಡೆದರು. ಆ ಮುಚ್ಚಳಿಕೆಯ ಷರತ್ತುಗಳೇನೆಂದರೆ :-

'೧. ಸಾವರಕರರು ರತ್ನಗಿರಿ ಜಿಲ್ಲೆಯ ಎಲ್ಲೆಯೊಳಗೇ ವಾಸಿಸಬೇಕು. ಗೌರ್ನರರ ಅನುಮತಿ ಇಲ್ಲದೆ ಜಿಲ್ಲೆಯ ಗಡಿಯನ್ನೂ ದಾಟಕೂಡದು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಮಾತ್ರ ಜಿಲ್ಲಾ ಮ್ಯಾಜಿಸ್ಟ್ರೇಟರ ಅನುಮತಿಯನ್ನು ಪಡೆದು ಹೊರಹೋಗಬಹುದು.

೨. ಐದು ವರ್ಷಗಳ ಕಾಲ ಸರ್ಕಾರದ ಅನುಮತಿ ಇಲ್ಲದೆ ಖಾಸಗಿಯಾಗಿಯಾಗಲಿ, ಸಾರ್ವಜನಿಕವಾಗಿಯಾಗಲಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಬಾರದು. ಆ ನಿರ್ಬಂಧವನ್ನು ಐದು ವರ್ಷಗಳ ನಂತರ ಪುನರ್ನವೀಕರಿಸುವುದು ಅಥವಾ ನಿರಾಕರಿಸುವುದು ಸರ್ಕಾರದ ವಿವೇಚನೆಗೆ ಬಿಟ್ಟ ವಿಷಯ.'

ಈ ಮೇಲಿನ ಮುಚ್ಚಳಿಕೆಯ ಕೊನೆಯಲ್ಲಿ ಈ ಮುಂದಿನ ಲಿಖಿತ ಹೇಳಿಕೆಯನ್ನೂ ನೀಡಿದರು: 'ನಾನು ನ್ಯಾಯಯುತ ವಿಚಾರಣೆ ಮತ್ತು ಸರಿಯಾದ ತೀರ್ಪನ್ನೂ ಪಡೆದೆ ಎಂದು ಈ ಮೂಲಕ ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ನಾನು ಗತಿಸಿದ ದಿನಗಳಲ್ಲಿ ತೊಡಗಿದ್ದ ಹಿಂಸಾತ್ಮಕ ಕೃತ್ಯಗಳನ್ನು ತುಚ್ಛವಾಗಿ ಕಾಣುತ್ತೇನೆ. ಕಾನೂನು ಮತ್ತು ಸಂವಿಧಾನವನ್ನು ಎತ್ತಿ ಹಿಡಿಯುವ ನನ್ನ ಕರ್ತವ್ಯಕ್ಕೆ ಬದ್ಧನಾಗಿರುತ್ತೇನೆ. ಸರ್ಕಾರ ಕೈಗೊಂಡಿರುವ ಸುಧಾರಣೆಗಳ ಯಶಸ್ಸಿಗೆ ನಾನು ಮನಃಪೂರ್ವಕವಾಗಿ ನನ್ನ ಶಕ್ತ್ಯಾನುಸಾರ ದುಡಿಯುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ.' (ವಾರ್ತಾ ನಿರ್ದೇಶಕರು, ಬೊಂಬಾಯಿ ಅವರಿಂದ ದೊರಕಿದ ದಾಖಲೆ ಪತ್ರ ಪು. ೨/ ೫-೧-೧೯೨೪ - Frontline, ಏಪ್ರಿಲ್ ೭, ೧೯೯೫ರಲ್ಲಿ ಪ್ರಕಟವಾದಂತೆ)

ಮೇಲೆ ಉಲ್ಲೇಖಿತವಾದ ಸುಧಾರಣೆಗಳು ಭಾರತೀಯರನ್ನು ಬಹಳ ನಿರಾಶೆಗೊಳಿಸಿದ ಮಾಂಟಗೊ ಚೆಲ್ಮ್ಸ್ ಫೋರ್ಡ್ ಸುಧಾರಣೆಗಳಾಗಿವೆ. ಸೆರೆಯಿಂದ ಬಿಡುಗಡೆ ಪಡೆಯಲು ಸಾವರಕರರು ಸರ್ಕಾರವನ್ನು ನಾನಾ ರೀತಿ ಓಲೈಸಿದರೂ ಬಿಡುಗಡೆ ಸುಲಭವಾಗಿ ದೊರೆಯಲಿಲ್ಲ. ಆದರೆ ಅವರಿಗೆ ಆ ಮಧ್ಯೆ ಖೈದಿಗಳ ಮೇಲ್ವಿಚಾರಕ (Foreman) ನಾಗುವಷ್ಟು ರಿಯಾಯಿತಿ ದೊರೆಯಿತು. ತನ್ನ ಜೊತೆಗೆ ಇತರ ಕೆಲವರಿಗೂ ರಿಯಾಯಿತಿ ದೊರೆತಾಗ ಮಾತ್ರ ಅವರಿಗೆ ಸಹನೆಯಾಗಲಿಲ್ಲ. ಬದಲು ಅವರ ಬಗ್ಗೆ ತುಚ್ಛವಾಗಿ ಬರೆದಿದ್ದಾರೆ. 'ರಾಜಕೀಯ ಸೆರೆಯಾಳುಗಳು ಆಳುವವರ ಇಷ್ಟದಂತೆ ನಡೆದುಕೊಳ್ಳಲು ತುದಿಗಾಲ ಮೇಲೆ ನಿಂತಿರುತ್ತಾರೆ ಮತ್ತು ಅವರ ದಾಸಾನು ದಾಸರಂತೆ ವರ್ತಿಸುತ್ತಾರೆ' ಎಂದು ಆರೋಪಿಸಿದ್ದಾರೆ. ಸಾವರಕರರ ಬಗ್ಗೆ ಸಹಾನುಭೂತಿಯುಳ್ಳ ಇತಿಹಾಸಕಾರ ಆರ್.ಸಿ. ಮಜುಮದಾರರು ಅದನ್ನು ವಸ್ತುನಿಷ್ಠವಾಗಿ ದಾಖಲಿಸಿದ್ದಾರೆ. 'ಇದು ರಾಜಕೀಯ ಖೈದಿಗಳ ಬಗ್ಗೆ ಗಂಭೀರವಾದ ನಿಂದಾತ್ಮಕ ಆರೋಪ. ಸಾವರಕರರ ಈ ಭಾವನೆಗಳನ್ನು ಸಮರ್ಥಿಸಲು ನಮ್ಮಲ್ಲಿ ಏನೂ ಆಧಾರಗಳಿಲ್ಲ. ಅವರು ಯಾವ ಸಾಕ್ಷ್ಯಗಳನ್ನಾಗಲಿ ವಾಸ್ತವ ದೃಷ್ಟಾಂತಗಳನ್ನಾಗಲಿ ನೀಡುವುದಿಲ್ಲ' (ಪು. ೨೫೭, Penal Settlements in Andamans)



ಅಡ್ವಾಣಿಯವರು ೧೯೯೩ರಲ್ಲಿ ಆರ್‌ಎಸ್‌ಎಸ್, ಗೋಡ್ಸೆ ಮತ್ತು ಕಾಂಗ್ರೆಸ್ ಬಗ್ಗೆ ಹೇಳಿದುದನ್ನು ನೋಡಿ : 'ನಾಥುರಾಮ್ ಗೋಡ್ಸೆಯು ಆರ್‌ಎಸ್‌ಎಸ್ ನ್ನು ಕಟುವಾಗಿ ಟೀಕಿಸುತ್ತಿದ್ದ. ಅದು ಹಿಂದುಗಳನ್ನು ಹೇಡಿಗಳನ್ನಾಗಿ ಮಾಡಿದೆ ಎಂಬುದು ಗೋಡ್ಸೆಯ ಆರೋಪ. ನಮಗೆ ಗೋಡ್ಸೆಯೊಡನೆ ಆಗಬೇಕಾದುದೇನೂ ಇರಲಿಲ್ಲ. ಬೇರೇನೂ ಇಲ್ಲದಿದ್ದಾಗ ನಮ್ಮ ವಿರುದ್ಧ ಈ ಆರೋಪವನ್ನು ಪುನರುಜ್ಜೀವನ ಗೊಳಿಸುವುದು ಕಾಂಗ್ರೆಸ್‌ನ ಒಂದು ಚಾಳಿಯಾಗಿದೆ.'

ಸೆರೆಯಾಳುಗಳು ಸತ್ಯಾಗ್ರಹದಲ್ಲಿ ತೊಡಗಿದಾಗ ಸಾವರಕರರು ಹೇಗೆ ನಡೆದುಕೊಂಡರು ಎಂಬುದನ್ನು ಮಜುಮದಾರರು ಹೀಗೆ ದಾಖಲಿಸಿದ್ದಾರೆ : '೧೯೧೬ ರಿಂದ ೧೯೨೦ ರೊಳಗಿನ ಸೆಲುಲಾರ್ ಜೈಲಿನ ಕರಾಳ ಅನುಭವವನ್ನು ಸಾಮಾನ್ಯವಾಗಿ ಮಹರಾಜ್ ಎಂದು ಕರೆಯಲಾದ ತ್ರೈಲೋಕ್ಯನಾಥ ಚಕ್ರವರ್ತಿ ಎಂಬ ಕ್ರಾಂತಿಕಾರಿಗಳ ನೇತಾರರು ಸ್ವಾರಸ್ಯಕರವಾಗಿ ಚಿತ್ರಿಸಿದ್ದಾರೆ. ೧೯೧೬ ರಿಂದ ೧೯೨೧ರವರೆಗೆ ಅಂಡಮಾನಿನಲ್ಲಿದ್ದ ಅವರು ೧೯೭೦ರ ಆಗಸ್ಟ್ ೯ ರಂದು ನಿಧನರಾದರು. ೧೯೬೮ರಲ್ಲಿ ಪ್ರಕಟವಾದ ಚಕ್ರವರ್ತಿ ಅವರು 'ಜೈಲಿನಲ್ಲಿ ಮುವತ್ತು ವರ್ಷ' ಎಂಬ ಒಂದು ನೆನಪಿನ ಗ್ರಂಥವನ್ನು ರಚಿಸಿದ್ದಾರೆ. ಅದರಲ್ಲಿ ಅವರು

ಆ ಕಾಲದಲ್ಲಿ ಅಲ್ಲಿಯೇ ಇದ್ದ ಸಾವರಕರ ಮತ್ತು ಅವರ ಸೋದರ ಗಣಪತಿ ಗುಟ್ಟಾಗಿ ಚಕ್ರವರ್ತಿ ಮತ್ತಿತರರನ್ನು ಸತ್ಯಾಗ್ರಹ ಮಾಡಲು ಪ್ರೋತ್ಸಾಹಿಸಿದರಾದರೂ ಅವರು ಮಾತ್ರ ಅದರಲ್ಲಿ ಸೇರಲಿಲ್ಲ ಎಂದು ದಾಖಲಿಸಿದ್ದಾರೆ. ಇದು ಮಜುಮದಾರರಿಗೂ ಅನುದಾತ್ತವಾದ ಕಟುವರ್ತನೆಯಾಗಿ ಕಾಣುತ್ತದೆ. ಅದಕ್ಕೆ ಸಾವರಕರರು ಕೊಡುವ ನೆಪವನ್ನು ನೋಡಿ :

'ನಾನು ಪ್ರತ್ಯಕ್ಷವಾಗಿ ಅವರ ಮುಂದಾಳಾಗಿದ್ದರೆ ಬ್ಯಾರಿ ಮತ್ತು ಅವನ ಮೇಲಧಿಕಾರಿಗಳಿಗೆ ಜೈಲಿನ ನಿಯಮಗಳ ಪ್ರಕಾರ ನಾನು ಮತ್ತು ಇತರ ವೃದ್ಧ ರಾಜಕೀಯ ಖೈದಿಗಳು ಗಳಿಸಿರುವ ರಿಯಾಯಿತಿಗಳನ್ನು ರದ್ದು ಮಾಡಲು ಒಂದು ಅವಕಾಶ ದೊರೆಯುತ್ತಿತ್ತು. ಅವರು ಪುನಃ ನನ್ನನ್ನು ಕಗ್ಗತ್ತಲ ಕೋಣೆಗೆ ತಳ್ಳುತ್ತಿದ್ದರು... ಆದ್ದರಿಂದ ನಮ್ಮಲ್ಲಿ ತರುಣರು ಮತ್ತು ಶಕ್ತಿಶಾಲಿಗಳಾದವರು ಈ ಹೊರೆಯನ್ನು ಹೊರಬೇಕು. ಈ ನೂರಾರು ಜನ ಸರದಿಯ ಮೇಲೆ ಚಳವಳಿಯನ್ನು ಮತ್ತು ಅದಕ್ಕೆ ಸಂಬಂಧಿಸಿದ ಇತರ ಎಲ್ಲ ಕ್ರಿಯೆಗಳನ್ನು ಮುಂದುವರಿಸಬೇಕು. ನಾನು ಸತ್ಯಾಗ್ರಹದಲ್ಲಿ ಭಾಗವಹಿಸದಿರಲು ಕೊನೆಯ ಮತ್ತು ಬಹುಮುಖ್ಯ ಕಾರಣವೇನೆಂದರೆ, ಅದರಿಂದ ನಾನು ಭಾರತಕ್ಕೆ ಪತ್ರವನ್ನು ಕಳುಹಿಸುವ ಹಕ್ಕನ್ನು ಕಳೆದುಕೊಳ್ಳುತ್ತಿದ್ದೆ. ಯಾರು ವರ್ಷದುದ್ದಕ್ಕೂ ಶಿಕ್ಷೆ ಹೊಂದದೆ ಸ್ಪಷ್ಟ ದಾಖಲೆಗಳನ್ನು ಹೊಂದಿರುತ್ತಾರೋ ಅವರು ಮಾತ್ರ ವರ್ಷಕ್ಕೊಮ್ಮೆ ಭಾರತಕ್ಕೆ ಪತ್ರ ಕಳುಹಿಸಬಹುದು ಎಂಬ ನಿಯಮವಿತ್ತು. ನಾನು ಸತ್ಯಾಗ್ರಹ ಮಾಡಿದರೆ ಅಥವಾ ಶಿಕ್ಷೆಗೊಳಗಾದರೆ ನನ್ನ ಹಕ್ಕು ಚ್ಯುತಿಯಾಗುತ್ತಿತ್ತು. ನಾನು ಆ ಹಕ್ಕನ್ನು ಕಳೆದುಕೊಂಡರೆ ಸತ್ಯಾಗ್ರಹಕ್ಕೆ ಪೆಟ್ಟು ಬೀಳುತ್ತಿತ್ತು ಮತ್ತು ಇನ್ನೂ ಮುಖ್ಯವಾಗಿ ರಾಜಕೀಯ ಖೈದಿಗಳ ಸ್ವಾತಂತ್ರ್ಯಕ್ಕಾಗಿ ದುಡಿಯುವ ಅವಕಾಶವನ್ನೇ ಕಳೆದುಕೊಂಡಂತಾಗುತ್ತಿತ್ತು.'

ಸಾವರಕರರ ಮಾತುಗಳು ಎಷ್ಟು ಪೊಳ್ಳಾಗಿ ಕಾಣುತ್ತವೆ ಎಂದರೆ ಅವರಿಗಿಂತ ವಯಸ್ಸಾದ ವೃದ್ಧರೂ ಉಪವಾಸ ಸತ್ಯಾಗ್ರಹದಲ್ಲಿ ಭಾಗಿಗಳಾಗಿದ್ದರು ಎಂದು ಅವರೇ ಹೇಳಿದುದನ್ನು ಮಜುಮದಾರರು ದಾಖಲಿಸಿದ್ದಾರೆ.

'ಅವರಲ್ಲಿ ಒಬ್ಬ ಅರವತ್ತು ವರ್ಷ ವಯಸ್ಸಿನ ಸಿಖ್ ರಾಜಕೀಯ ಖೈದಿ ಸರದಾರ್ ಸೋಹನ್ ಸಿಂಗ್, ಇನ್ನೊಬ್ಬ ಪಂಜಾಬಿನ ರಜಪೂತ; ಅವನ ಹೆಸರು ಪೃಥ್ವಿ ಸಿಂಗ್. ಹನ್ನೆರಡು ದಿನ ಅವರನ್ನು ಸೆರೆಮನೆಯ ಕೋಣೆಯಲ್ಲಿ ಒಂದು ತುತ್ತು ಆಹಾರವನ್ನೂ ಕೊಡದೆ ಕೂಡಿ ಹಾಕಿದ್ದರು. ಕೊಟ್ಟಕೊನೆಗೆ ಅಧಿಕಾರಿಗಳು ಅವರ ಕುಂದು ಕೊರತೆಗಳನ್ನು ಕುರಿತ ಲಿಖಿತ ಹೇಳಿಕೆಯನ್ನು ಒಪ್ಪಿಕೊಳ್ಳಬೇಕಾಯಿತು.... ತಮ್ಮ ದೂರನ್ನು ಅಧಿಕಾರಿಗಳು ಸ್ವೀಕರಿಸಿದ ಕೂಡಲೆ ಸೋಹನ್ ಸಿಂಗ್ ಸತ್ಯಾಗ್ರಹವನ್ನು ನಿಲ್ಲಿಸಿದ, ಆದರೆ ಪೃಥ್ವಿಸಿಂಗ್ ಇನ್ನೂ ಎರಡು ವಾರ ಮುಂದುವರೆಸಿದ.' (ಪು. ೨೫೩)

ನಿಜವಾದ ಮತ್ತು ಖೋಟಾ ಕ್ರಾಂತಿಕಾರಿಯ ವ್ಯತ್ಯಾಸ ಇಲ್ಲಿ ಎದ್ದು ಕಾಣುತ್ತದೆ. ಅಂಡಮಾನ್‌ನಲ್ಲಿ ಸಾವರಕರರ ಜೀವನ ಅವರನ್ನು ನೈತಿಕವಾಗಿ ವಿಕಾಸಗೊಳಿಸಲಿಲ್ಲ. ಆದರೂ



ಅವರನ್ನು ರತ್ನಗಿರಿ ಜೈಲಿಗೆ ವರ್ಗಾಯಿಸಿದ ನಂತರ ಇನ್ನೂ ಹೆಚ್ಚು ನಿಕೃಷ್ಟವಾದುದು ಸಂಭವಿಸುತ್ತದೆ.

ಸಾವರಕರರು ಭಾರತಕ್ಕೆ ಹಿಂದಿರುಗಿದ ಮೇಲೆ ೧೯೨೩ರಲ್ಲಿ ಸಂಘ ಪರಿವಾರದವರಿಗೆ ಮಾರ್ಗದರ್ಶಕವಾದ 'ಹಿಂದುತ್ವ' ಎಂಬ ಕೃತಿಯನ್ನು ರಚಿಸಿದರು. ಅದರಲ್ಲಿ ಜಿನ್ನಾರಿಗಿಂತ ೧೬ ವರ್ಷ ಮೊದಲೇ ದ್ವಿ-ರಾಷ್ಟ್ರ ಸಿದ್ಧಾಂತವು ಪ್ರತಿಪಾದಿತವಾಗಿದೆ. ದೇಶ ವಿಭಜನೆಗೆ ಮೂಲ ಕಾರಣರಾರು ಎಂಬುದು ಅದರಲ್ಲಿ ದಾಖಲಾಗಿದೆ. ೧೯೪೮ರಲ್ಲಿ ಅವರನ್ನು ಗಾಂಧಿ ಕೊಲೆ ಪ್ರಕರಣದಲ್ಲಿ ಸಹಭಾಗಿಯಾಗಿದ್ದರು ಎಂದು ಗೋಡ್ಸೆಯೊಡನೆ ವಿಚಾರಣೆಗೆ ಗುರಿಪಡಿಸಲಾಗಿತ್ತು. ಅವರ ವಿರುದ್ಧದ ಆ ಪ್ರಕರಣ ಏಕೈಕ ಸಾಕ್ಷಿದಾರನ ಮೇಲೆ ಅವಲಂಬಿತವಾಗಿತ್ತು ಮತ್ತು ಅದಕ್ಕೆ ಬೆಂಬಲವಾಗಿ ಸ್ವತಂತ್ರ ಸಾಕ್ಷ್ಯಾಧಾರಗಳಾವುವೂ ದೊರೆಯದಿದ್ದುದರಿಂದ ಅವರನ್ನು ಬಿಡುಗಡೆ ಮಾಡಲಾಯಿತು. ಇನ್ನು ಮೇಲೆ ತಾವು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ ಎಂದು ಸರ್ಕಾರಕ್ಕೆ ಮುಚ್ಚಳಿಕೆ ಬರೆದುಕೊಟ್ಟು ೧೯೫೦ ರಿಂದ ೧೯೬೬ರವರೆಗೆ ಅವರು ಜೀವನ ನಡೆಸಿದರು.

ಅಲ್ಪ ಸಂಖ್ಯಾತರಿಗೆ ಸಂಬಂಧಿಸಿದ ನೆಹರು-ಲಿಯಾಖತ್ ಒಪ್ಪಂದದ ಹಿನ್ನೆಲೆಯಲ್ಲಿ ಕೆಲವು ಹಿಂದು ಮಹಾಸಭಾದ ಮುಖಂಡರ ಜೊತೆಗೆ ಸಾವರಕರರನ್ನು ಪ್ರಿವೆಂಟಿವ್ ಡಿಟೆಂಷನ್ ಆಕ್ಟ್ ಪ್ರಕಾರ ಏಪ್ರಿಲ್ ೪ ೧೯೫೦ ರಂದು ಬಂಧಿಸಲಾಯಿತು. ಅವರು ರಾಜ್ಯ ಸರ್ಕಾರಕ್ಕೆ ತಮ್ಮನ್ನು ಬಿಡುಗಡೆ ಮಾಡಲು ಮನವಿ ಮಾಡಿಕೊಂಡರು. ಧನಂಜಯ ಕೀರ್ ಅವರು ಅದನ್ನು ಹೀಗೆ ದಾಖಲಿಸಿದ್ದಾರೆ:

'ಸರ್ಕಾರ ಬೇಷರತ್ತಿನ ಮೇಲೆ ನನ್ನನ್ನು ಬಿಡುಗಡೆ ಮಾಡುವ ಮನಸ್ಸಿಲ್ಲದಿದ್ದರೆ ನಾನು ಸಮಕಾಲೀನ ರಾಜಕೀಯದಲ್ಲಿ ಸರ್ಕಾರವು ಹೇಳುವ ಎಷ್ಟೇ ದೀರ್ಘ ಅವಧಿಯವರೆಗಾದರೂ ಭಾಗವಹಿಸುವುದಿಲ್ಲ ಎಂಬ ಷರತ್ತಿನ ಮೇಲಾದರೂ ಬಿಡುಗಡೆ ಮಾಡಬೇಕು' ಎಂದು ಪುಸಲಾಯಿಸಿದರು.... 'ನಾನು ಈಗಾಗಲೇ ರಾಜಕೀಯದಿಂದ ನಿವೃತ್ತನಾಗಲು ಚಿಂತಿಸುತ್ತಿದ್ದೇನೆ ಎಂಬುದು ಸಾರ್ವಜನಿಕರಿಗೆ ತಿಳಿದ ವಿಷಯವೇ ಆಗಿದೆ' ಎಂಬುದನ್ನೂ ಸಾವರಕರರು ಸೇರಿಸಿದರು. (ಪು. ೪೩೦-೩೧, ವೀರ ಸಾವರಕರ). ತಾನು ಇನ್ನು ಮೇಲೆ ಯಾವುದೇ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ ಮತ್ತು ಬೊಂಬಾಯಿಯ ತನ್ನ ಮನೆಯಲ್ಲೇ ಇರುತ್ತೇನೆ ಎಂಬ ಮುಚ್ಚಳಿಕೆಯನ್ನು ತನ್ನ ವಕೀಲರ ಮೂಲಕ ಸಲ್ಲಿಸಿದ ನಂತರವೇ ನ್ಯಾಯಾಲಯ ಅವರನ್ನು ಜುಲೈ ೧೩, ೧೯೫೦ರಲ್ಲಿ ಬಿಡುಗಡೆ ಮಾಡಿತು.

ಅವರ ೧೯೧೧, ೧೯೧೩, ೧೯೨೫ ಮತ್ತು ೧೯೪೮ರ ಕ್ಷಮಾಯಾಚನೆಗಳು ನಿಜವಾಗಿಯೂ ವೀರನಾದವನಿಗೆ ಒಪ್ಪುವಂತಹ ಆಚರಣೆಗಳಲ್ಲ. ಅವರ ಜೀವನದ ಕೊನೆಯ ೫೫ ವರ್ಷಗಳಲ್ಲಿ ರಾಷ್ಟ್ರೀಯ ನಾಯಕನಲ್ಲಿರಬೇಕಾದ ಯಾವ ಅಂಶವೂ ಅವರಲ್ಲಿ ಕಂಡುಬರುವುದಿಲ್ಲ.

ಮೂಲೆಗುಂಪಾಗಿದ್ದ ಸಾವರಕರರನ್ನು ಹಿಂದುತ್ವ ವಾದಿಗಳು ಇಂದು ಹೊರ ತಂದು ಗಾಂಧಿಗೆ ಮುಖಾ ಮುಖಿಯಾಗಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ.

ಅಡ್ವಾಣಿಯವರು ೧೯೯೩ರಲ್ಲಿ ಆರ್‌ಎಸ್‌ಎಸ್, ಗೋಡ್ಸೆ ಮತ್ತು ಕಾಂಗ್ರೆಸ್ ಬಗ್ಗೆ ಹೇಳಿದುದನ್ನು ನೋಡಿ : 'ನಾಥುರಾಮ್ ಗೋಡ್ಸೆಯು ಆರ್‌ಎಸ್‌ಎಸ್‌ನ್ನು ಕಟುವಾಗಿ ಟೀಕಿಸುತ್ತಿದ್ದ. ಅದು ಹಿಂದುಗಳನ್ನು ಹೇಡಿಗಳನ್ನಾಗಿ ಮಾಡಿದೆ ಎಂಬುದು ಗೋಡ್ಸೆಯ ಆರೋಪ. ನಮಗೆ ಗೋಡ್ಸೆಯೊಡನೆ ಆಗಬೇಕಾದುದೇನೂ ಇರಲಿಲ್ಲ. ಬೇರೇನೂ ಇಲ್ಲದಿದ್ದಾಗ ನಮ್ಮ ವಿರುದ್ಧ ಈ ಆರೋಪವನ್ನು ಪುನರುಜ್ಜೀವನಗೊಳಿಸುವುದು ಕಾಂಗ್ರೆಸ್‌ನ ಒಂದು ಚಾಳಿಯಾಗಿದೆ.' (TOI ವರದಿ, ನವೆಂಬರ್ ೨೨, ೧೯೯೩)

ನಾಥುರಾಮ್ ಗೋಡ್ಸೆಯ ಸೋದರನಾದ ಗೋಪಾಲ ಗೋಡ್ಸೆಯೇ ಒಂದು ಸಂದರ್ಶನದಲ್ಲಿ ಅಡ್ವಾಣಿಯ ನಿರಾಕರಣೆಯ ಬಗ್ಗೆ ಪ್ರತಿಕ್ರಿಯಿಸಿದುದನ್ನು ನೋಡಿ:

ಪ್ರ : ನೀವು ಆರ್‌ಎಸ್‌ಎಸ್‌ನ ಒಂದು ಭಾಗವಾಗಿದ್ದಿರಾ ?

ಉ : ಎಲ್ಲ ಸೋದರರೂ ಆರ್‌ಎಸ್‌ಎಸ್‌ನಲ್ಲಿದ್ದೆವು. ನಾಥುರಾಮ್, ದತ್ತಾತ್ರೇಯ, ನಾನು ಮತ್ತು ಗೋವಿಂದ, ನಾವು ಮನೆಯೊಳಗೆ ಬೆಳೆಯದೆ ಆರ್‌ಎಸ್‌ಎಸ್‌ನಲ್ಲಿ ಬೆಳೆದೆವು. ಅದು ನಮಗೆ ಒಂದು ಕುಟುಂಬವಾಗಿತ್ತು.

ಪ್ರ : ನಾಥುರಾಮ್ ಆರ್‌ಎಸ್‌ಎಸ್ ಜೊತೆಗೇ ಇದ್ದರೆ? ಅವರು ಅದನ್ನು ತ್ಯಜಿಸಿರಲಿಲ್ಲವೆ ?

ಉ : ನಾಥುರಾಮನು 'ಬೌದ್ಧಿಕ ಕಾರ್ಯವಾಹ' ನಾಗಿದ್ದ. ಅವನು ತನ್ನ ಹೇಳಿಕೆಯಲ್ಲಿ ತಾನು ಆರ್‌ಎಸ್‌ಎಸ್ ತ್ಯಜಿಸಿರುವುದಾಗಿ ಹೇಳಿದ. ಗಾಂಧಿಯ ಕೊಲೆಯ ನಂತರ ಗೋಲ್ವಾಲ್ಕರ್ ಮತ್ತು ಆರ್‌ಎಸ್‌ಎಸ್ ಬಹಳ ತೊಂದರೆಯಲ್ಲಿದ್ದುದರಿಂದ ಅವನು ಹಾಗೆ ಹೇಳಿಕೆ ನೀಡಿದ. ಆದರೆ ಅವನು ಆರ್‌ಎಸ್‌ಎಸ್‌ನ್ನು ಬಿಟ್ಟಿರಲಿಲ್ಲ.

ಪ್ರ : ಇತ್ತೀಚೆಗೆ ಅಡ್ವಾಣಿಯವರು ನಾಥುರಾಮನಿಗೆ ಆರ್‌ಎಸ್‌ಎಸ್‌ನಿಂದ ಆಗಬೇಕಾದುದೇನೂ ಇರಲಿಲ್ಲ ಎಂದು ಹೇಳಿದ್ದಾರೆ.

ಉ : ಹಾಗೆಂದು ಹೇಳುವುದು ಹೇಡಿತನ ಎಂದು ನಾನು ಅವರಿಗೆ ಮಾರುತ್ತರ ನೀಡಿದ್ದೇನೆ. 'ಹೋಗಿ ಗಾಂಧಿಯನ್ನು ಕೊಲ್ಲು' ಎಂದು ಆರ್‌ಎಸ್‌ಎಸ್ ನಿರ್ಣಯ ಕೈಗೊಂಡಿರಲಿಲ್ಲ ಎಂದು ನೀವು ಹೇಳಬಹುದು. ಆದರೆ ನೀವು ಅವನನ್ನು ನಮ್ಮವನಲ್ಲ ಎಂದು ಹೇಳಲು ಸಾಧ್ಯವಿಲ್ಲ. ಹಿಂದು ಮಹಾಸಭಾ ಅವನನ್ನು ನಿರಾಕರಿಸಲಿಲ್ಲ. ೧೯೪೪ರಲ್ಲಿ ನಾಥುರಾಮನು ಆರ್‌ಎಸ್‌ಎಸ್‌ನ ಬೌದ್ಧಿಕ ಕಾರ್ಯಕರ್ತನಾಗಿದ್ದಾಗ ಹಿಂದು ಮಹಾಸಭಾದ ಕೆಲಸಗಳನ್ನೂ ಮಾಡಲು ತೊಡಗಿದ. (ಅರವಿಂದ ರಾಜಗೋಪಾಲರು ಗೋಪಾಲ ಗೋಡ್ಸೆಯೊಡನೆ ನಡೆಸಿದ ಸಂದರ್ಶನ, ಜನವರಿ ೨೮, ೧೯೯೪)

೧೯೭೦ರಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಜೀವನ್‌ಲಾಲ್ ಕಪೂರ್‌ರ ನಾಯಕತ್ವದಲ್ಲಿ ರಚನೆಯಾಗಿದ್ದ ಒಂದು ತನಿಖಾ ಮಂಡಳಿಯು ಸಾವರಕರರು ಗಾಂಧಿ ಹತ್ಯೆಗೆ ಕುಮ್ಮಕ್ಕು ನೀಡಿದ್ದರು ಎಂಬುದನ್ನು ಅನುಮೋದಿಸಿತು. ೧೯೦೯ರಲ್ಲಿ ಲಂಡನ್ನಿನಲ್ಲಿದ್ದ ಇಂಡಿಯಾ ಆಫೀಸಿನ ಅಧಿಕಾರಿ ವಿಲಿಯಂ ಕರ್ಜನ್ ವೈಲ್‌ನ ಕೊಲೆಗ ಮತ್ತು ಅದೇ ವರ್ಷ ನಾಸಿಕದ ಜಿಲ್ಲಾ ಕಲೆಕ್ಟರ್ ಸರ್ ಅರ್ನೆಸ್ಟ್ ಹಾಟ್ಸನ್ ಕೊಲೆಗೆ ಮಾಡಿದ ಪ್ರಯತ್ನದಲ್ಲಿ ಸಾವರಕರ ಕೈವಾಡವಿತ್ತು ಎಂಬುದನ್ನು ಸಾಬೀತು ಮಾಡಲು ಸಾಕಷ್ಟು ಐತಿಹಾಸಿಕ ಸಾಕ್ಷ್ಯಾಧಾರಗಳು ಲಭ್ಯ. ಈ ಹಿನ್ನೆಲೆಯಲ್ಲಿ ಮೂಲೆ ಗುಂಪಾಗಿದ್ದ ಸಾವರಕರರನ್ನು ಹಿಂದುತ್ವವಾದಿಗಳು ಇಂದು ಹೊರತಂದು ಗಾಂಧಿಗೆ ಮುಖಾಮುಖಿಯಾಗಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ.

'ಹಿಂದು ರಾಷ್ಟ್ರ ದರ್ಶನ್' ದಲ್ಲಿ ಸಾವರಕರರು ಆಗಾಗ ಮಾಡಿದ ಭಾಷಣಗಳನ್ನು ಸಂಗ್ರಹಿಸಲಾಗಿದೆ. ಅವುಗಳಲ್ಲೆಲ್ಲಾ ಮುಸ್ಲಿಮರ ಬಗ್ಗೆ ದ್ವೇಷವನ್ನೇ ಬೋಧಿಸಲಾಗಿದೆ. ಅವರ ದ್ವಿ-ರಾಷ್ಟ್ರ ಸಿದ್ಧಾಂತವನ್ನು ಅಂಬೇಡ್ಕರ್ ಹೀಗೆ ವಿಶ್ಲೇಷಿಸುತ್ತಾರೆ:

'ಅವರು ಹಿಂದು ರಾಷ್ಟ್ರ ಬಲಿಷ್ಠ ರಾಷ್ಟ್ರವಾಗಿರಬೇಕೆಂದು ಮತ್ತು ಮುಸ್ಲಿಂ ರಾಷ್ಟ್ರ ದಾಸ್ಯ ರಾಷ್ಟ್ರವಾಗಿರಬೇಕೆಂದು ಬಯಸುತ್ತಾರೆ. ಸಾವರಕರರು ಹಿಂದು ಮತ್ತು ಮುಸ್ಲಿಂ ರಾಷ್ಟ್ರಗಳಲ್ಲಿ ದ್ವೇಷವನ್ನು ಬಿತ್ತಿದ ನಂತರ ಅವೆರಡೂ ಒಂದೇ ಸಂವಿಧಾನವನ್ನು ಹೊಂದಿರಬೇಕು ಮತ್ತು ಒಂದೇ ದೇಶದಲ್ಲಿ ನೆಲಸಿರಬೇಕೆಂದು ಏಕೆ ಅಪೇಕ್ಷಿಸುವರೋ ವಿವರಿಸುವುದು ಕಷ್ಟ (ಪಾಕಿಸ್ತಾನ ಅಥವಾ ಭಾರತದ ವಿಭಜನೆ, ೧೯೪೬, ಪು ೧೩೩-೧೩೪). ಜಿನ್ನಾ ಮತ್ತು ಮುಸ್ಲಿಂ ಲೀಗ್‌ಗಳು ದೇಶ ವಿಭಜನೆಯ ವಿಷಪೂರ್ಣ ಸಿದ್ಧಾಂತವನ್ನು ತಮ್ಮ ಹೆಗಲ ಮೇಲೆ ಹೊತ್ತಿದ್ದಾರಾದರೂ ದೇಶ ವಿಭಜನೆಗೆ ಅವರೇ ಸಂಪೂರ್ಣ ಹೊಣೆಗಾರರಲ್ಲ.

ಸಾವರಕರರಲ್ಲಿ ಹಿಂದು ರಾಷ್ಟ್ರೀಯತೆ ಎಷ್ಟು ಆಳವಾಗಿ ಬೇರು ಬಿಟ್ಟಿತ್ತೆಂದರೆ ಅವರು ಭಾರತೀಯ ರಾಷ್ಟ್ರಧ್ವಜವನ್ನೇ ತಿರಸ್ಕರಿಸಿದರು. ೧೯೪೭ರ ಆಗಸ್ಟ್ ೧೫ ರಂದು ಕೆಂಪು ಕೋಟೆಯ ಮೇಲೆ ಹಾರಿಸಲು ಸಂವಿಧಾನ ಮಂಡಳಿಯು ತ್ರಿವರ್ಣ ಧ್ವಜವನ್ನು ಜುಲೈ ೨೯, ೧೯೪೭ ರಂದು ಅನುಮೋದಿಸಿತ್ತು. ಆದರೆ ಅದರ ಬಗ್ಗೆ ಸಾವರಕರರು ಹೇಳುವುದನ್ನು ಕೇಳಿ:

'ಅದನ್ನು ಹಿಂದುಸ್ಥಾನದ ರಾಷ್ಟ್ರಧ್ವಜವೆಂದು ಪರಿಗಣಿಸಲು ಎಂದೂ ಸಾಧ್ಯವಿಲ್ಲ... ನಮ್ಮ ಮಾತೃಭೂಮಿ, ಪವಿತ್ರ ಭೂಮಿಯ ಅಧಿಕೃತ ಧ್ವಜ... ಭಗವ ಧ್ವಜ (ಕೇಸರಿ ಧ್ವಜ)ಗ ವಲ್ಲದೆ ಬೇರೊಂದು ಇರಲು ಸಾಧ್ಯವಿಲ್ಲ... ಅದು ನಮ್ಮ ಹಿಂದು ಇತಿಹಾಸದ ಸಂಪೂರ್ಣ ವೈಶಾಲ್ಯವನ್ನು ಕನ್ನಡಿಸುತ್ತದೆ. ಹಿಂದುತ್ವವು ಹಿಂದು ಧ್ವಜವನ್ನು, ಈ ಭಗವ ಧ್ವಜವನ್ನು ಬಿಟ್ಟು ಬೇರೊಂದು ಧ್ವಜವನ್ನು ವಿಧೇಯತೆಯಿಂದ ವಂದಿಸಲಾರದು. (A.G. Noorani, "A National Hero?" Frontline, Nov.5, 2004) ಹೀಗೆ ಮಾತಾಡುವ ವ್ಯಕ್ತಿಯನ್ನು ಭಾರತೀಯ ನಾಯಕ ಅಲ್ಲ, ಕೊನೆ ಪಕ್ಷ ಭಾರತೀಯ ರಾಷ್ಟ್ರದವನು ಎಂದಾದರೂ ಪರಿಗಣಿಸಲಾದೀತೆ? ಈ ಹಿನ್ನೆಲೆಯಲ್ಲಿ ಸಾವರಕರರನ್ನು ರಾಜಕೀಯ ಪಕ್ಷ ಭೇದಗಳಿಂದ ದೂರನಿಂತು, ಮತ ಧರ್ಮಗಳ ಬಣ್ಣದ ಕನ್ನಡಕಗಳನ್ನು ತೆಗೆದಿಟ್ಟು ಪುನರ್ ಮೌಲ್ಯೀಕರಣ ಮಾಡಬೇಕಾಗಿದೆ.

ಚರ್ಚೆ

ಸಾಹಿತಿ, ವಿಮರ್ಶಕರ ಕಾಳಜಿಗಳು ಬೇರೆ

ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿರುವಂತೆ ಸಾಹಿತ್ಯ ಕ್ಷೇತ್ರದಲ್ಲಿ ಕೂಡ ತಲೆಮಾರಿನ ಅಂತರ ನಿರ್ದಿಷ್ಟ ಪ್ರಭಾವ ಬೀರುತ್ತದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ ಮತ್ತು ಬಂಡಾಯ ಸಾಹಿತ್ಯ ತನ್ನ ಕಾಲಘಟ್ಟದಲ್ಲಿ ವಿವಿಧ ಆಯಾಮಗಳನ್ನು ಪಡೆದುಕೊಂಡು ಪರಸ್ಪರ ವಿರೋಧಾಭಾಸದ ನಿಲುವನ್ನು ಪ್ರಕಟಿಸುದ್ದೂ ಉಂಟು. ಸಾಹಿತ್ಯದ ಒಟ್ಟಾರೆ ಅಭಿವ್ಯಕ್ತಿ ಮಾನವ ಬದುಕಿನ ಹೋಯ್ದಾಟ ಮತ್ತು ಸಾರ್ಥಕ್ಯವನ್ನು ವ್ಯಕ್ತಪಡಿಸುವುದಾದರೂ ಅದನ್ನೂ ಮೀರಿದ ಸಾಮಾಜಿಕ ಬದ್ಧತೆಯತ್ತ ಹೊರಳುವುದು ಅಗತ್ಯ. ಹೊಸ ತಲೆಮಾರಿನ ಲೇಖಕರಿಗೆ ಸಾಮಾಜಿಕ ಬದ್ಧತೆ ಕಡಿಮೆಯಾಗುತ್ತಿದೆ ಎಂದು ಹಿರಿಯ ತಲೆಮಾರಿನ ಲೇಖಕರು ದೂರುವುದು ಕಂಡುಬರುತ್ತಿದೆ. ಈ ಹಿನ್ನೆಲೆಯಲ್ಲಿ ಎರಡೂ ತಲೆಮಾರಿನ ಲೇಖಕರ ಅಭಿಪ್ರಾಯಗಳನ್ನು 'ಸಂವಾದ' ತನ್ನ ಓದುಗರ ಮುಂದಿಡಬಯಸುತ್ತಿದೆ.

ಹಿರಿಯ ತಲೆಮಾರಿನ ಲೇಖಕರಿಗೆ ಕೇಳಲಾಗಿರುವ ಪ್ರಶ್ನೆಗಳು :

೧ ಹೊಸ ತಲೆಮಾರಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ದಾಖಲಾಗುತ್ತಿರುವ ಸಾಮಾಜಿಕ ಕಾಳಜಿಯ ಸ್ವರೂಪವೇನು ? ಮತ್ತು ಅದರ ಹಿಂದೆ ಯಾವುದಾದರೂ ಸೈದ್ಧಾಂತಿಕ ಬದ್ಧತೆಯನ್ನು ಗುರುತಿಸಲು ಸಾಧ್ಯವೇ ?

೨ ಜಾಗತೀಕರಣ ಮತ್ತು ಏಕ ಸಂಸ್ಕೃತಿಯ ಆಕ್ರಮಣದ ಪ್ರಭಾವವನ್ನು ಈ ಸಾಹಿತ್ಯ ಹೇಗೆ ಗ್ರಹಿಸಿದೆ ?

೩ ಹೊಸ ತಲೆಮಾರಿನ ಮಹಿಳಾ ಸಾಹಿತ್ಯ, ೬೦-೮೦ರ ಸಾಹಿತ್ಯಕ್ಕಿಂತ ವಿಭಿನ್ನವಾದ ಕಾಳಜಿಯನ್ನು ವ್ಯಕ್ತಪಡಿಸುತ್ತಿದೆಯೇ ?

೪ ಕಾದಂಬರಿ ಪ್ರಕಾರದ ಬಗ್ಗೆ ಹೊಸ ತಲೆಮಾರಿನ ಬರಹಗಾರರು ಒಲವನ್ನು ತೋರುತ್ತಿಲ್ಲ ಎನಿಸುತ್ತದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು ?

೫. ಹೊಸ ತಲೆಮಾರಿನ ಲೇಖಕರ ಬಗ್ಗೆ ನಿಮ್ಮ ನಿರೀಕ್ಷೆಗಳೇನು ? ಮತ್ತು ನೀವು ಅವರಿಗೆ ನೀಡುವ ಸಲಹೆಗಳೇನು ?

○ ಪ್ರೊ॥ ಚಂದ್ರಶೇಖರ ಪಾಟೀಲ

ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

೧. ಕನ್ನಡ ಸಾಹಿತ್ಯ ಬಹಳ ಜೀವಂತವಾಗಿ ಮುಂದುವರಿಯುತ್ತಿರುವುದರಿಂದ ಹೊಸ ತಲೆಮಾರು ಅಸ್ತಿತ್ವಕ್ಕೆ ಬಂದಾಗಲೆಲ್ಲ ಹೊಸ ಹೊಸ ಸವಾಲುಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡುತ್ತಿದೆ.

ಹೊಸ ತಲೆಮಾರು ಅಂದರೆ ಹೊಸದಾಗಿ ಬರೆಯುವುದಕ್ಕೆ ಪ್ರಾರಂಭಿಸುತ್ತಿರುವುದು ಎಂದು ಸಾಹಿತ್ಯಕ ಮಾತಿನಲ್ಲಿ ಹೇಳಬಹುದು. ಒಂದು ಕಾಲು ಶತಮಾನದಿಂದ ನಾವು, ಕನ್ನಡ ಲೇಖಕರು ಯಾವ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ, ಆ ಸಮಸ್ಯೆ ಬಗೆಹರಿದಿಲ್ಲ. ಅದರ ಜೊತೆಗೆ ಇನ್ನೂ ಹೆಚ್ಚು ಸಮಸ್ಯೆಗಳು ಸೇರ್ಪಡೆಗೊಂಡಿವೆ. ಉದಾಹರಣೆಗೆ ಸಾಮಾನ್ಯವಾಗಿ ಹೇಳುವ ಪ್ರಕಾರ ಜಾಗತೀಕರಣ, ಉದಾರೀಕರಣ, ಕೇಸರೀಕರಣ, ಖಾಸಗೀಕರಣ ಮತ್ತು ನಮ್ಮ ದೇಶದ ಕೋಮುವಾದೀಕರಣ ಎಲ್ಲಾ 'ಕರಣ' ಸೇರಿ ಒಂದೇ ಪರಿಸ್ಥಿತಿ ನಿರ್ಮಾಣ ಮಾಡಿದವು.

ಒಬ್ಬ ಲೇಖಕ ತನ್ನ ಅಕ್ಷರಗಳ ಮೂಲಕ ಆಕಾರ ಕೊಡುವ ಪ್ರಕ್ರಿಯೆ ಪ್ರಾರಂಭದಲ್ಲಿ ಮಾಡಬೇಕಾದ ಕೆಲಸ. ಈ ವಾಸ್ತವದ ಅರ್ಥವೇನು, ಇದನ್ನು ಯಾವ ಚೌಕಟ್ಟಿನೊಳಗೆ ತಿಳಿದುಕೊಳ್ಳಬಹುದು ಮತ್ತು ಮೌಲ್ಯ ಮಾಪನ ಮಾಡಬಹುದು ಅನ್ನುವ ಗೊಂದಲ ಇನ್ನೂ ಮುಂದುವರಿದಿದೆ. ಹಳಬರಿಗೆ ಇದು ಪೂರ್ಣ ಅರ್ಥವಾಗುವುದಿಲ್ಲ. ಏಕೆಂದರೆ ಹೊಸ ವಾಸ್ತವದ ಸನ್ನಿವೇಶ, ಹಾಗೂ ಲೇಖಕರಾಗಿಯು ಕೂಡ ಹೊಸಬರಾಗಿರುವುದರಿಂದ ಈ ಗೊಂದಲ ಹೇಗೆ ಅರ್ಥಮಾಡಿಕೊಳ್ಳಬೇಕೆಂಬ ಗೊಂದಲದ ಸಂಕ್ರಮಣ ಸ್ಥಿತಿಯೊಳಗೆ ನಮ್ಮ ಹೊಸ ತಲೆಮಾರಿನವರು ಮತ್ತು ಹಳೆ ತಲೆಮಾರಿನವರು ಇರುವುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬಹುದು.

ಸೈದ್ಧಾಂತಿಕ ಬದ್ಧತೆಯ ವಿಷಯದಲ್ಲಿ ಯಾವುದೇ ಒಂದು ಸಿದ್ಧಾಂತವನ್ನು ನಂಬಿ ಆ ಸಿದ್ಧಾಂತದ ಹಿನ್ನೆಲೆಯೊಳಗೆ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವುದು ಅದರ ಅರ್ಥ. ಇಂದು ಆ ರೀತಿಯ ಸೈದ್ಧಾಂತಿಕ ಬದ್ಧತೆಯಿದೆಯೆಂದು ಖಚಿತವಾಗಿ ಹೇಳುವುದಕ್ಕೆ ಆಗುವುದಿಲ್ಲ. ಅದು ಸಮಾಜವಾದ ಆಗಬಹುದು, ಬಂಡವಾಳವಾದ ಆಗಬಹುದು, ಯಾವ ಸಿದ್ಧಾಂತದ ಸ್ಪಷ್ಟವಾದ ಚೌಕಟ್ಟು ನಮ್ಮ ಎದುರಿಗೆ ಇಲ್ಲದೆ ಇರುವುದರಿಂದ ಸ್ವಲ್ಪ ಮುಕ್ತ ಮನಸ್ಸಿನಿಂದಲೇ ವಿದ್ಯಮಾನವನ್ನು ನಮ್ಮ ಲೇಖಕರು ಗಮನಿಸಬೇಕು.

ಚಿಂತಕರ, ವಿಮರ್ಶಕರ ಕಾಳಜಿಗಳೇ ಬೇರೆ, ಕವಿಗಳ, ಕಥೆಗಾರರ, ಕಾದಂಬರಿಕಾರರ, ನಾಟಕಕಾರರ ಕಾಳಜಿಗಳೇ ಬೇರೆ. ಮೊದಲನೇ ವರ್ಗದವರಿಗೆ ಬೌದ್ಧಿಕ ಗ್ರಹಿಕೆ ಬಹಳ ಮುಖ್ಯ. ಆದರೆ ಸೃಜನಶೀಲ ಕಲಾವಿದರಿಗೆ ನೇರವಾಗಿ ನಮ್ಮ ಪಂಚೇಂದ್ರಿಯಗಳ ಮೂಲಕ ವಾಸ್ತವವನ್ನು ಹೇಗೆ ಸ್ವೀಕಾರ ಮಾಡಬೇಕು ಎಂಬುದು ಮುಖ್ಯ. ಕಂಡದ್ದನ್ನು ಕಂಡ ಹಾಗೆ ದಾಖಲಿಸಬಹುದು. ಆ ಮೂಲಕ ಕ್ರಮೇಣ ದಿಕ್ಕು ದೆಸೆಗಳನ್ನು ಪಡೆಯುವುದು ಹೀಗೆ ಒಬ್ಬ ಲೇಖಕ ಬೆಳೆಯಬೇಕಾಗುವುದು.

ಚಿಂತಕರ, ವಿಮರ್ಶಕರ ಕಾಳಜಿಗಳೇ ಬೇರೆ, ಕವಿಗಳ, ಕಥೆಗಾರರ, ಕಾದಂಬರಿಕಾರರ, ನಾಟಕಕಾರರ ಕಾಳಜಿಗಳೇ ಬೇರೆ. ಮೊದಲನೇ ವರ್ಗದವರಿಗೆ ಬೌದ್ಧಿಕ ಗ್ರಹಿಕೆ ಬಹಳ ಮುಖ್ಯ. ಆದರೆ ಸೃಜನಶೀಲ ಕಲಾವಿದರಿಗೆ ನೇರವಾಗಿ ನಮ್ಮ ಪಂಚೇಂದ್ರಿಯಗಳ ಮೂಲಕ ವಾಸ್ತವವನ್ನು ಹೇಗೆ ಸ್ವೀಕಾರ ಮಾಡಬೇಕು ಎಂಬುದು ಮುಖ್ಯ. ಕಂಡದ್ದನ್ನು ಕಂಡ ಹಾಗೆ ದಾಖಲಿಸಬಹುದು. ಆ ಮೂಲಕ ಕ್ರಮೇಣ ದಿಕ್ಕು ದೆಸೆಗಳನ್ನು ಪಡೆಯುವುದು ಹೀಗೆ ಒಬ್ಬ ಲೇಖಕ ಬೆಳೆಯಬೇಕಾಗುವುದು.

೨. ಗ್ರಹಿಸಿದೆ ಎಂದು ಹೇಳಲು ಸಾಧ್ಯವಿಲ್ಲ. ಗ್ರಹಿಸಲು ಪ್ರಯತ್ನಪಟ್ಟಿದೆ ಎಂದು ಅಷ್ಟು ಮಾತ್ರ ಹೇಳಬಹದು.

೩. ನನ್ನ ಓದಿನ ಮಿತಿಯೊಳಗೆ ನಾನು ಕಂಡುಕೊಳ್ಳುವುದು ಅಂದರೆ ಬಹುಶಃ ೬೦-೮೦ರ ದಶಕದ ಮಹಿಳಾ ಸಾಹಿತ್ಯ ಅನೇಕ ಆಯಾಮಗಳಲ್ಲಿ ಅನಾವರಣಗೊಂಡಿತ್ತು.

ನವೋದಯ ಕಾಲದಲ್ಲೂ ಮಹಿಳೆಯರು ಇದ್ದರು, ನವ್ಯ, ಪ್ರಗತಿಶೀಲದಲ್ಲೂ ಇದ್ದರು. ಅಲ್ಲೆಲ್ಲ ಬೆರಳೆಣಿಕೆಯ ಮಹಿಳೆಯರು ಇದ್ದರು. ಆದರೆ ದಲಿತ ಮತ್ತು ಬಂಡಾಯ ಸಾಹಿತ್ಯದ ಹಾವಭಾವ ಜೊತೆಗೆ ಒಂದು ಲೋಕ ಸಂಪೂರ್ಣವಾಗಿ ಅನಾವರಣಗೊಂಡಿತ್ತು. ಅದು ಮಹಿಳಾ ಲೋಕ. ಎಲ್ಲಾ ಸಾಮಾಜಿಕ ವರ್ಗ ಮತ್ತು ಜಾತಿಯ ಮಹಿಳೆಯರು ಬರೆಯಲಿಕ್ಕೆ ಪ್ರಾರಂಭ ಮಾಡಿದ್ದ ಒಂದು ರೀತಿಯ ಬಂಡಾಯತನ. ಆಮೇಲೆ ಬರುಬರುತ್ತಾ ಅವರಲ್ಲಿಯೂ ಸಹ ಅನುಭವದ ಆಳ, ವಿಸ್ತಾರ, ಭಾಷೆಯ ಸೂಕ್ಷ್ಮತೆ, ಕಲೆಯ ವಿನ್ಯಾಸ, ಇದರ ಬಗ್ಗೆ ಪ್ರಬುದ್ಧವಾದ ರೀತಿಯಲ್ಲಿ ನಮ್ಮ ಮಹಿಳೆಯರು ಸಾಹಿತ್ಯವನ್ನು ನಿರ್ಮಾಣ

(೩೩ನೇ ಪುಟಕ್ಕೆ)

ಕಣ್ತೆರೆದು ಬದುಕೋಣ ಕಣ್ಮುಚ್ಚಿ ಬರೆಯೋಣ

ಚರ್ಚೆ

○ ಜಯಂತ ಕಾಯ್ಕಿಣಿ
ಸಾಹಿತಿ, ಚಿಂತಕರು

೧. ನಾವು 'ಸಾಹಿತ್ಯಿಕ ಮತ್ತು ಸಾಂಸ್ಕೃತಿಕ' -ಎಂದು ಪ್ರತ್ಯೇಕಿಸಿ ಹೇಳಬೇಕಾಗಿ ಬಂದಿರುವುದೇ ಇಂದಿನ ಪರಿಸ್ಥಿತಿಯ ಪ್ರತಿಫಲನವಾಗಿದೆ. ಬದುಕಿನ ಧಾರೆಯ, ಸಂಸ್ಕೃತಿಯ ಒಂದು ಸಣ್ಣ ಭಾಗವಾಗಿ, ಉಪಉತ್ಪನ್ನವಾಗಿ ಸಾಹಿತ್ಯವಿರುತ್ತದೆ. ಕೊನೆಗೂ ಅದು ಇಡಿಯನ್ನು ಕಟ್ಟುವ, ಪ್ರತಿಫಲಿಸುವ ಒಂದು ಬಿಡಿ. ಮಾನವೀಯ ಕಳಕಳಿಯೇ ಎಲ್ಲ ಸೈದ್ಧಾಂತಿಕ, ಸಾಮಾಜಿಕ ಎಚ್ಚರಗಳ ಮೂಲಧಾತು. ಆದರೆ ಇಂದು 'ಹಣವೇ ನಿನ್ನಯ ಗುಣ' ವಾಗಿರುವ money driven frenzy ಯಲ್ಲಿರುವ ಮಧ್ಯಮ, ಕೆಳ ಮಧ್ಯಮ ವರ್ಗದ ಮೌಲ್ಯ ಪ್ರಜ್ಞೆಯೇ ಪಲ್ಲಟಗೊಂಡಿದೆ. values ಗಳ ಜಾಗವನ್ನು cost ಆಕ್ರಮಿಸಿದೆ. ಮತ್ತು ಇದೆಲ್ಲದರಿಂದಾಗಿ ಅನ್ಯರ ಕುರಿತ ಸಹಜ ಮಾನವೀಯ ಹೊಣೆಗಾರಿಕೆ ಹುಸಿದು ಹೋಗುತ್ತಿದೆ. ಭಾಷೆಯಂಥ ಭಾಷೆಯೂ ಅನುಭವದ ಭಾಗವಾಗುತ್ತಿಲ್ಲ.

ಅಕ್ಷರಗಳ ಆಸ್ಥೆಯುಳ್ಳವರು ಅತ್ಯಂತ ಎಚ್ಚರದಿಂದ ಪ್ರಾಮಾಣಿಕತೆಯಿಂದ ಸಂಕಿರಣಗಳಲ್ಲಿ, ಸಂಪಾದಕೀಯಗಳಲ್ಲಿ ಮಾತನಾಡುವ ಜಗತ್ತಿಗೂ - ನಾವು ನಿತ್ಯ ನೋಡುವ ಎಸ್‌ಟಿಡಿ ಬೂಥು, ಬಸ್‌ಸ್ಟ್ಯಾಂಡು, ಮದುವೆ ಮನೆ, ಆಸ್ಪತ್ರೆ, ತಾಲ್ಲೂಕಾಫೀಸು, ರೇಷನ್ ಕಾರ್ಡುಗಳ ಜಗತ್ತಿಗೂ ನಡುವೆ ಎಳೆಗಳೇ ಭಾಸವಾಗುತ್ತಿಲ್ಲ. ಈ ನಡುವೆ, ಈ ನಿತ್ಯದ ವೇಗ, ಆವೇಗಗಳ ಜತೆ ಕಿಂಚಿತ್ ಸ್ಪರ್ಶ ಇಲ್ಲದೆಯೂ, 'ರಾಜಕೀಯ ಸಮರ್ಪಕತೆ' ಯಲ್ಲಿ ಬಲ್ಲವರು ಬೆರಗಾಗುವಂತೆ ಮಾತನಾಡ ಬಹುದಾದ ಬುದ್ಧಿಜೀವಿಗಳ ಒಂದು ಒಣ ಒಕ್ಕಣಿಕೆಯೂ ಸಿದ್ಧವಾಗಿಬಿಟ್ಟಿದೆ. ಹೀಗಾಗಿ ಈ ಬದ್ಧತೆ ಗಿದ್ಧತೆ ಹೋಗಲಿ, ಎಲ್ಲರೂ ಒಬ್ಬ ಸರಾಸರಿ ನಾಗರಿಕನ ಸಹಜ ಮಾನವೀಯ ಎಚ್ಚರವನ್ನು, ಒಳಿತು ಕೆಡುಕಿನ ಕುರಿತ ಸ್ಪಷ್ಟ ಸರಳ ಆದ್ಯತೆಯನ್ನು ಇಟ್ಟುಕೊಂಡರೆ ಸಾಕು, ಎಲ್ಲ ಕ್ಷೇತ್ರಗಳಲ್ಲೂ ಒಂದು ಸಂವೇದನಾಶೀಲ ಸ್ಪಂದನ ಮೂಡಬಹುದು.

೨. ಮನುಷ್ಯನಲ್ಲೇ ಆಸಕ್ತಿ ಇಲ್ಲದ ಸಾಹಿತ್ಯ, ಯಾವ ಆಕ್ರಮಣದ ಪ್ರಭಾವಗಳನ್ನೂ ಗ್ರಹಿಸಲಾರದು. ನೈಟ್ ಬಸ್‌ನ ನಿದ್ರಾಹೀನ ಚಾಲಕನೊಬ್ಬನ ಕೌಟುಂಬಿಕ ಲಯಗಳು ಹೇಗಿರಬಹುದು ಎಂಬುದರ ಕುರಿತು ಕಾಳಜಿ ಇಲ್ಲದಿದ್ದರೆ, ನನಗೆ ಈ ಜಾಗತೀಕರಣ, ಖಾಸಗೀಕರಣಗಳ ಕುರಿತು ಮಾತನಾಡುವ ಯಾವ ನೈತಿಕ ಹಕ್ಕೂ ಇರುವುದಿಲ್ಲ. ಮನದ ಯಾವ ಆಳದಿಂದ ನಿಜವಾದ ಸಾಹಿತ್ಯ ಸದ್ದಿಲ್ಲದೆ ಹುಟ್ಟುತ್ತದೆಯೋ, ಆ ಆಳವನ್ನು ಇಂದಿನ ಪಲ್ಲಟಗಳು ಕಲುಕುತ್ತಿಲ್ಲವೆ? ಅಥವಾ ಸಾಹಿತ್ಯ ರಚನೆಯ ನೆಲೆಯೇ ಆ ಆಳದಿಂದ ವಂಚಿತವಾಗಿದೆಯೆ ? ಎಂದಿಗಿಂತ ಹೆಚ್ಚು ವ್ಯಗ್ರನೂ, ವ್ಯಸ್ತನೂ, ತ್ರಸ್ತನೂ ಆಗಿರುವ ಇಂದಿನ confused ಜೀವಿಯ ಆಯ್ಕೆಯ ಸಂಕಟಗಳಿಗೆ ಅಥವಾ 'ನಿರ್ಗುಣ ಸಂಕಟಹೀನ' ಸ್ಥಿತಿಗೆ ಸ್ಪಂದಿಸುವ ಹೊಸ 'ಮಾನಸಿಕ', 'ಭಾಷಿಕ' - ಬಾಗಿಲುಗಳು ತೆರೆಯಬೇಕಿವೆ. ಕಾಡಿನಲ್ಲಿ ಶಾಲೆಗೆ ಬಂದ ನರ್ಸರಿ ವಿದ್ಯಾರ್ಥಿಯ ಬಗ್ಗೆ ಅಸೂಯೆ, ಸಿಟ್ಟು ಪಡುವ ಮಾಸ್ತರನ ತಳಮಳದ ನಿಜವನ್ನು ತೀರ್ಪುಗಾರಿಕೆಯಿಲ್ಲದೆ ಅನುಭವಿಸಿ ತಿಳಿಯುವ ಯತ್ನ ಇಂದಿನ ಬರವಣಿಗೆ ಮಾಡಬೇಕಿದೆ.

೩. ನನಗೆ ಈ ಮಹಿಳಾ ಸಾಹಿತ್ಯ, ಮುಸ್ಲಿಂ ಸಾಹಿತ್ಯ, ದಲಿತ ಸಾಹಿತ್ಯ - ಎಂಬ ಪ್ರತ್ಯೇಕತಾವಾದದಲ್ಲಿ ನಂಬಿಕೆಯಿಲ್ಲ. ಇವೆಲ್ಲ ಖಾನೆಸುಮಾರಿಗಾಗಿ ಮಾಡಿಕೊಂಡ ವಿಂಗಡಣೆ ಗಳಾದರೂ - ಅವು ಲೇಖಕನೇ ಲೇಖಕಿಯ ಮೇಲೆ ಹೊರುವ ಭಾರ, ಹಿಂಸೆ, ಬಂಧನ - ಅತ್ಯಂತ ಅಮಾನುಷವಾದದ್ದು. ವಿಂಗಡಣೆಯಲ್ಲೇ ಸೂಕ್ಷ್ಮ ಶೋಷಣೆ ಇದೆ. ಬರೆಯುವವನ ವಿಶ್ವವನ್ನು ಕಿರಿದುಗೊಳಿಸುವ, ಸಪಾಟು ಮಾಡುವ ಇಂಥ ವಿಂಗಡಣೆಗಳ ಕುರಿತು ತಲೆ ಹಾಳುಮಾಡಿಕೊಳ್ಳದೆ, ಹೊಸ ಬರಹಗಾರರು ಸುಮ್ಮನೆ ಬರೆಯಬೇಕು. ಒಂದು ಕೃತಿ ಕೊಡುವ ಅನುಭವಕ್ಕೆ ಖಂಡಿತ ಕೃತಿಗಾರನ ಲಿಂಗ, ತೂಕ, ಎತ್ತರ, ಬಯೋಡಾಟಾದ ಹಂಗಿರಬೇಕಾಗಿಲ್ಲ.

ಮನುಷ್ಯನಲ್ಲೇ ಆಸಕ್ತಿ ಇಲ್ಲದ ಸಾಹಿತ್ಯ, ಯಾವ ಆಕ್ರಮಣದ ಪ್ರಭಾವಗಳನ್ನೂ ಗ್ರಹಿಸಲಾರದು. ನೈಟ್ ಬಸ್‌ನ ನಿದ್ರಾಹೀನ ಚಾಲಕನೊಬ್ಬನ ಕೌಟುಂಬಿಕ ಲಯಗಳು ಹೇಗಿರಬಹುದು ಎಂಬುದರ ಕುರಿತು ಕಾಳಜಿ ಇಲ್ಲದಿದ್ದರೆ, ನನಗೆ ಈ ಜಾಗತೀಕರಣ, ಖಾಸಗೀಕರಣಗಳ ಕುರಿತು ಮಾತನಾಡುವ ಯಾವ ನೈತಿಕ ಹಕ್ಕೂ ಇರುವುದಿಲ್ಲ. ಮನದ ಯಾವ ಆಳದಿಂದ ನಿಜವಾದ ಸಾಹಿತ್ಯ ಸದ್ದಿಲ್ಲದೆ ಹುಟ್ಟುತ್ತದೆಯೋ, ಆ ಆಳವನ್ನು ಇಂದಿನ ಪಲ್ಲಟಗಳು ಕಲುಕುತ್ತಿಲ್ಲವೆ? ಅಥವಾ ಸಾಹಿತ್ಯ ರಚನೆಯ ನೆಲೆಯೇ ಆ ಆಳದಿಂದ ವಂಚಿತವಾಗಿದೆಯೆ ?

೪. ಇಂದು 'ಏಕದಿನ ಪಂದ್ಯ'ಗಳ ಕಾಲ. ಮೂರು ತಾಸಿನ ಸಂಕ್ಷಿಪ್ತ ಯಕ್ಷಗಾನಗಳ ಕಾಲ. ಫಾಸ್ಟ್‌ಫುಡ್‌ಗಳ ಕಾಲ. ಒಂದು ಕಾದಂಬರಿ ರಚನೆಗೆ ಅಪಾರವಾದ ವ್ಯವಧಾನ, ಅರ್ಥವಾಗದ ತಳಮಳವೊಂದರ ಜತೆ ತಿಂಗಳುಗಟ್ಟಲೆ ಬಾಳುವ, ಸ್ಥೈರ್ಯ, ತಾಳ್ಮೆ, ಸಾವಧಾನಗಳು ಬೇಕು. ಮುಖ್ಯವಾಗಿ 'ಪರಿಶ್ರಮ' ಬೇಕು. ಪರಿಶ್ರಮವಿಲ್ಲದೇನೇ ಗಳಿಸುವುದು ಹೇಗೆ? -ಎಂಬುದೇ ಮುಖ್ಯ ಮೌಲ್ಯವಾಗಿರುವ ಇಂದಿನ ದಿನಗಳಲ್ಲಿ, ಬರೆದ ಕತೆ, ಕವಿತೆ, ಹನಿಗವನಗಳನ್ನೆಲ್ಲ ಗುಣಾವಗುಣಗಳ ತಾರತಮ್ಯವಿಲ್ಲದೆ ಸಮತಾಭಾವದಲ್ಲಿ ಚಕಚಕನೇ ಪ್ರಿಂಟು ಮಾಡುವ ಅಕ್ಷೋಹಿಣಿ ಪತ್ರಿಕೆ, ಪುರವಣಿಗಳ ಸಂತೆಯಲ್ಲಿ ಹೊಸ ಬರಹಗಾರರನ್ನೂ ಕಾದಂಬರಿ ಪ್ರಕಾರ ಆಕರ್ಷಿಸದೇ ಇರುವುದರಲ್ಲಿ ಅಚ್ಚರಿಯಿಲ್ಲ. ಆದರೆ ಒಂದು ಕಾದಂಬರಿಯ ಓದು ಕೊಡುವ ಸುಖವನ್ನು ಬಲ್ಲ ಪ್ರತಿ ಲೇಖಕನು ಒಂದು ಕಾದಂಬರಿ ಬರೆಯುವ ಕನಸನ್ನು ಕಾಣುತ್ತಲೇ ಇರುತ್ತಾನೆ. ಹೊಸ ತಲೆಮಾರಿನ ಕೆಲವು ಮುಖ್ಯ ಲೇಖಕರಾದರೂ ಈ ಪ್ರಕಾರದಲ್ಲಿ ಮಹತ್ವದ ಪ್ರಯತ್ನ ಮಾಡಿದ್ದಾರೆ. (ಕುಂ.ವೀ., ವಿವೇಕ ಶಾನಭಾಗ, ಸವಿತಾ ನಾಗಭೂಷಣ, ಕೆ. ಸತ್ಯನಾರಾಯಣ, ಶ್ರೀಧರ್ ಬಳಗಾರ, ಬಾಳಾ ಸಾಹೇಬ ಲೋಕಾಪುರ, ನಾಗವೇಣಿ, ರಾಘವೇಂದ್ರ ಪಾಟೀಲ...) ಆದರೆ ಈ ಮಹತ್ವದ ಪ್ರಯತ್ನಗಳನ್ನು ಎತ್ತಿ ತೋರಿಸುವ, ಚರ್ಚಿಸುವ ವಿಮರ್ಶಾ ವಲಯ ಕಣ್ಮರೆಯಾಗಿದೆ. ಏಕೆಂದರೆ ಈ ರಿವ್ಯೂಗಳದ್ದು ಮತ್ತೊಂದು ಫಾಸ್ಟ್ ಫುಡ್ ದರ್ಶಿನಿಯಾಗಿದೆ.

೫. ಇವೆರಡೂ ಪ್ರಶ್ನೆಗಳಿಗೆ ಉತ್ತರಿಸುವ ಅರ್ಹತೆ ನನಗಿಲ್ಲ. ಆದರೆ ನನ್ನನ್ನೂ ಒಳಗೊಂಡು ಇಂದು ಬರೆಯುತ್ತಿರುವ ಎಲ್ಲರೊಂದಿಗೆ ನಾನು ಹಂಚಿಕೊಳ್ಳಲೇ ಬೇಕಾದ ಆತಂಕ ಎಂದರೆ 'ನಾವು ಬರವಣಿಗೆಯನ್ನು ಸುಲಭ ಮಾಡಿಕೊಂಡುಬಿಟ್ಟಿದ್ದೇವೆ' ಎಂಬುದು ಏನೇ ಬರೆದರೂ ಅಚ್ಚಾಗುವ 'ಧಾರಾಳ' ಪತ್ರಿಕೋದ್ಯಮ ಇದೆ. ತುಸುವೇ ಪ್ರಯತ್ನ ಪಟ್ಟರೂ ಉಳಿದವರಿಗಿಂತ ಒಂದು ಗುಂಜಿ ಚೆನ್ನಾಗಿದೆ ಅಂತ (ನಮಗೇ) ತಿನ್ನಿಸುವಷ್ಟು ಕಳಪೆ (Mediocre) ಸಾಹಿತ್ಯ ಹೇರಳವಾಗಿದೆ. ಕ್ರೀಡಾಪಟುವೊಬ್ಬ ಒಲಂಪಿಕ್ ಹೈಜಂಪ್‌ನಲ್ಲಿ ಚಿನ್ನದ ಪದಕ ಸಿಕ್ಕಿದ ನಂತರವೂ ಮತ್ತೆ ಹೋಗಿ ತನ್ನ ರೆಕಾರ್ಡ್‌ನ್ನು ಹಿಗ್ಗಿಸಲು ಜಿಗಿಯುತ್ತಾನೆ. ಹಾಗೆ ಜಿಗಿಯುವಾಗ

(೩೫ನೇ ಪುಟಕ್ಕೆ)



ಚರ್ಚೆ

ಅಭಿವ್ಯಕ್ತಿಯ ಹೊಸತನಕ್ಕೆ ಹುಡುಕಾಟ ಅನಿವಾರ್ಯ

○ ಚಿ. ಶ್ರೀನಿವಾಸರಾಜು
ಸಾಹಿತಿ, ಚಿಂತಕರು

೧. ಹೊಸ ತಲೆಮಾರಿನ ಸಾಹಿತಿಗಳು ಮತ್ತು ಕಲಾವಿದರು ಜಾಗತೀಕರಣದ ಬಲೆಯಲ್ಲಿ, ಸೈಬರ್ ಸಂಸ್ಕೃತಿಯ ಸುಳಿಯಲ್ಲಿ ಸಿಕ್ಕಿಕೊಳ್ಳುವ ಅಪಾಯಗಳಿವೆ. ಹಿಂದೆ, ಸಾಹಿತ್ಯ ಮತ್ತು ಸಂಸ್ಕೃತಿ 'ಜನ ಬದುಕು'ವ ಕ್ರಿಯಾಶೀಲತೆಯಾಗಿತ್ತು. ಈಗ ಉದ್ಯಮವಾಗುತ್ತಿದೆ. ಕೆಲವರು ಈ ಅಗೋಚರ ಶಕ್ತಿಯನ್ನು ಗುರುತಿಸಿ ಪ್ರತಿಭಟಿಸುತ್ತಿದ್ದಾರೆ. ಏಕರೂಪ ಅರ್ಥವ್ಯವಸ್ಥೆ, ಏಕರೂಪ ಜೀವನ ಶೈಲಿಯಿಂದ ನಮ್ಮ ಸಾಹಿತಿಗಳು, ಕಲಾವಿದರು ಗೊಂದಲದಲ್ಲಿದ್ದಾರೆ.

೨. ಜಾಗತೀಕರಣ ವಸಾಹತುಶಾಹಿಗಿಂತ ಅಪಾಯಕಾರಿಯಾದದ್ದು. ವಿಶ್ವಬ್ಯಾಂಕ್, ವಿಶ್ವ ವ್ಯಾಪಾರ ಸಂಸ್ಥೆಗಳ ನಿಗೂಢ ಕಾರ್ಯ ಚಟುವಟಿಕೆ, ಗ್ಯಾಟ್ ಮತ್ತು ಟ್ಯಾರಿಫ್ ಒಪ್ಪಂದಗಳು ನಮ್ಮ ಸಮಗ್ರ ಬದುಕಿನ ಬೇರುಗಳನ್ನೇ ಅಲ್ಲಾಡಿಸುತ್ತಿವೆ. ನಮ್ಮ ಆಶಯಗಳು, ನಂಬಿಕೆಗಳು, ಮೌಲ್ಯಗಳು, ಆದ್ಯತೆಗಳು, ಸಂಪ್ರದಾಯಗಳು, ಬಹುಮುಖಿ ಸ್ವರೂಪವನ್ನು ಕಳೆದುಕೊಳ್ಳುತ್ತಿವೆ. ಜಾಗತೀಕರಣದ ಹಿಡಿತದಿಂದ, ಒತ್ತಡದಿಂದ ಏಕಮುಖಿ ಸಂಸ್ಕೃತಿಯ ಕಡೆಗೆ ಮುಖ ಮಾಡಿದೆ. ಈ ನೆಲೆಯನ್ನು, ಈ ಚಲನೆಯನ್ನು ನಮ್ಮ ಸಾಹಿತ್ಯ ಗುರುತಿಸಲು ಪ್ರಾರಂಭಿಸಿದೆ.

೩. ಹೊಸ ತಲೆಮಾರಿನ ಮಹಿಳಾ ಸಾಹಿತ್ಯ, ೧೯೭೦-೮೦ರ ಸಾಹಿತ್ಯಕ್ಕಿಂತ ಭಿನ್ನವಾಗಿ ಸ್ಪಂದಿಸುತ್ತಿದೆ. ಆಗ ದಾಖಲೆಯಾಗಿದ್ದ ಸಾಹಿತ್ಯ, ಈಗ ಸ್ತ್ರೀಯರ ಎಚ್ಚರದ ಮುಖವನ್ನು, ಶೋಷಣೆಗೆ ಪ್ರತಿಭಟನೆಯನ್ನು, ಹಕ್ಕಿನ ಅಗತ್ಯವನ್ನು ಪ್ರತಿಬಿಂಬಿಸುತ್ತಿದೆ. ಈಗಿನ ತಲೆಮಾರಿನವರು ಮುಕ್ತರಾಗಿ, ಬದುಕಿಗೆ ಬದ್ಧರಾಗಿ ಬರೆಯಲು ಪ್ರಾರಂಭಿಸುವುದು ಒಳ್ಳೆಯದು.

ಹೊಸ ತಲೆಮಾರಿನ ಲೇಖಕರು ಮುಖ್ಯವಾಗಿ ತಮ್ಮ ಬರವಣಿಗೆಯ ನಿರಂತರತೆಯನ್ನು ಉಳಿಸಿಕೊಳ್ಳಬೇಕು. ಒಂದೋ, ಎರಡೋ ಸಂಕಲನಗಳಿಗೇ ಶಕ್ತಿಹೀನರಾಗಬಾರದು. ಸದಾ ಅಧ್ಯಯನ ನಿರತರಾಗಿ, ಸುತ್ತಲ ಪ್ರಪಂಚವನ್ನು ಎಚ್ಚರದಿಂದ ಗಮನಿಸುತ್ತಾ, ಜೀವನಕ್ಕೆ ಬದ್ಧರಾಗಿ ಬರೆಯಬೇಕು. ಗಂಭೀರ ಕಲೆಗಾರಿಕೆಯ ನಿಗೂಢತೆಯನ್ನು ಉಳಿಸಿಕೊಳ್ಳಬೇಕು. ಅಭಿವ್ಯಕ್ತಿಯ ಹೊಸತನಕ್ಕೆ ಹುಡುಕಾಟ ಅನಿವಾರ್ಯ.

೪. ನಿಜ. ಹೊಸ ತಲೆಮಾರಿನ ಲೇಖಕರು ಕಾವ್ಯ ಮತ್ತು ಕಥಾ ರಚನೆಗಳಲ್ಲಿ ಹೆಚ್ಚಿನ ಒಲವನ್ನು ತೋರುತ್ತಿದ್ದಾರೆ. ಕಾದಂಬರಿ ಮತ್ತು ನಾಟಕದ ಕ್ಷೇತ್ರಗಳು ಹಿನ್ನಡೆಯನ್ನು ಪಡೆದಿವೆ. ಇದಕ್ಕೆ ಓದುವವರ ಹಾಗೂ ನೋಡುವವರ ಕೊರತೆ ಒಂದು ಕಡೆಯಾದರೆ, ಇನ್ನೊಂದು ಕಡೆ ಬರಹಗಾರರ ಧಾವಂತ ಬದುಕು, ಮಾಹಿತಿ ತಂತ್ರಜ್ಞಾನದ ಒತ್ತಡ, ವಿರಾಮದ ಬರವಣಿಗೆಗೆ ಹೆಚ್ಚಿನ ಅವಕಾಶ ಒದಗಿ ಬರುತ್ತಿಲ್ಲ.

೫. ಹೊಸ ತಲೆಮಾರಿನ ಲೇಖಕರು ಮುಖ್ಯವಾಗಿ ತಮ್ಮ ಬರವಣಿಗೆಯ ನಿರಂತರತೆಯನ್ನು ಉಳಿಸಿಕೊಳ್ಳಬೇಕು. ಒಂದೋ, ಎರಡೋ ಸಂಕಲನಗಳಿಗೇ ಶಕ್ತಿಹೀನರಾಗಬಾರದು. ಸದಾ ಅಧ್ಯಯನ ನಿರತರಾಗಿ, ಸುತ್ತಲ ಪ್ರಪಂಚವನ್ನು ಎಚ್ಚರದಿಂದ ಗಮನಿಸುತ್ತಾ, ಜೀವನಕ್ಕೆ ಬದ್ಧರಾಗಿ ಬರೆಯಬೇಕು. ಗಂಭೀರ ಕಲೆಗಾರಿಕೆಯ ನಿಗೂಢತೆಯನ್ನು ಉಳಿಸಿಕೊಳ್ಳಬೇಕು. ಅಭಿವ್ಯಕ್ತಿಯ ಹೊಸತನಕ್ಕೆ ಹುಡುಕಾಟ ಅನಿವಾರ್ಯ. ❑

ಸಾಹಿತಿ, ವಿಮರ್ಶಕರ ಕಾಳಜಿಗಳು ಬೇರೆ

(೩೧ನೇ ಪುಟದಿಂದ)

ಮಾಡುತ್ತಿದ್ದಾರೆ. ಅದು ತೀರ ವಿಭಿನ್ನವಾದಂತಹ ಕಾಳಜಿಗಳು ಎಂದು ಹೇಳಲು ಸಾಧ್ಯವಾಗುವುದಿಲ್ಲ. ಹಳೇ ಕಾಳಜಿಗಳು ಇನ್ನೂ ಹೆಚ್ಚು ಸ್ಪಷ್ಟವಾಗಿ, ಸೂಕ್ಷ್ಮವಾಗಿ ನಮ್ಮ ಅನುಭವದ ಗ್ರಹಿಕೆಗೆ ಬರುವುದರಿಂದ ಅವುಗಳ ಅಭಿವ್ಯಕ್ತಿಯು ಸಹ ವೈವಿಧ್ಯವನ್ನು ಪಡೆಯಬಹುದು.

೪. ಯಾವುದೇ ಒಂದು ಸಾಹಿತ್ಯ ಪ್ರಕಾರ ಸಮಾನವಾದ ರೀತಿಯಲ್ಲಿ ಎಲ್ಲಾ ಕಾಲಘಟ್ಟದಲ್ಲೂ ಮಾನ್ಯತೆ ಪಡೆಯುವುದಿಲ್ಲ. ಒಂದು ಕಾಲಕ್ಕೆ ನಾಟಕಗಳು ಬಂದವು, ಮತ್ತೊಮ್ಮೆ ಕಾವ್ಯ, ಮತ್ತೊಮ್ಮೆ ಕಥಾನಕಗಳು, ಸಣ್ಣಕಥೆ ಕಾದಂಬರಿಗಳಂಥವು ಮಾನ್ಯತೆ ಪಡೆದವು. ಕಾದಂಬರಿಗಳು ಹೆಚ್ಚು ಬರುತ್ತಿಲ್ಲ. ಸಣ್ಣಕಥೆಗಳು ಬರುತ್ತಿವೆ. ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ನಮ್ಮ ಪತ್ರಿಕೆಗಳು ನಡೆಸುವ ಸ್ಪರ್ಧೆಗಳ ಮೂಲಕ ಹೊಸ ಹೊಸ ಕಥೆಗಾರರು ಬೆಳಕಿಗೆ ಬರುತ್ತಿರುವುದು ಬಹಳ ಮುಖ್ಯ. ಈ ಕಥೆಯ ಮೇಲೆ ಹಿಡಿತ ಸಿಕ್ಕಿದ ಮೇಲೆ ಕಾದಂಬರಿಗೆ ಹೋಗಬಹುದು, ಆದರೆ ಹೋಗುತ್ತಿಲ್ಲ.

ಮೂಕಸಂವೇದನೆಗಳಿಗೆ, ಮೂಕ ಅನಿಸಿಕೆಗಳಿಗೆ ಬಾಯಿಕೊಡುವಂತೆ, ಅನೇಕ ಕೆಲಸಗಳು ಲೇಖಕನಾದವನು ಮಾಡಬಹುದಾದ ಕೆಲಸ.

೫. ನಿರೀಕ್ಷೆಗಳು ಎಲ್ಲಾ ತಲೆಮಾರಿನಲ್ಲಿ ಇದ್ದೇ ಇರುತ್ತವೆ. ಒಬ್ಬ ಲೇಖಕ ಮೂಕರಿಗೆ ಬಾಯಿ ಕೊಟ್ಟಂತೆ. ಮೂಕ ಸಂವೇದನೆಗಳಿಗೆ, ಮೂಕ ಅನಿಸಿಕೆಗಳಿಗೆ ಬಾಯಿ ಕೊಡುವಂತೆ, ಅನೇಕ ಕೆಲಸಗಳು ಲೇಖಕನಾದವನು ಮಾಡಬಹುದಾದ ಕೆಲಸ. ಆದ್ದರಿಂದ ಅವನು ಮೈತುಂಬ ಕಣ್ಣಾಗಿ, ಕಿವಿಯಾಗಿ ಎಲ್ಲವನ್ನೂ ಸೂಕ್ಷ್ಮವಾಗಿ ಸಂವೇದನೆ ಮೂಲಕ ಗ್ರಹಣ ಮಾಡಿಕೊಳ್ಳಬೇಕು. ಅದನ್ನು ಅರ್ಥ ಮಾಡಿಕೊಂಡು ಪದಕ್ಕೆ ತಕ್ಕುದಾದ ರೀತಿಯಲ್ಲಿ ಕಲೆಯ ಆಕಾರ ಕೊಡಬೇಕು. ಯಾವುದೇ ತಲೆಮಾರಿನ, ಲೇಖಕನ ಬಗ್ಗೆ ಓದುಗರು ಇಟ್ಟುಕೊಳ್ಳುವ ನಿರೀಕ್ಷೆ.

ಸಲಹೆಗಳು ಏನೂ ಇಲ್ಲ. ಏಕೆಂದರೆ, ಲೇಖಕರಿಗೆ ಸ್ವಲ್ಪ ಆ ರೀತಿ ಮಾಡಿ, ಈ ರೀತಿ ಮಾಡಿ ಎಂದು ಸಲಹೆ ಕೊಡಬಹುದೇ ಹೊರತು, ಬುದ್ಧ ಆನಂದನಿಗೆ ಹೇಳಿದ ಹಾಗೆ 'Be alight in to thy self' 'ನಿನಗೆ ನೀನೇ ಬೆಳಕಾಗಬೇಕು' ಎಂಬಂತೆ. ಒಂದು ಹಂತದ ನಂತರ ಬೇರೆಯವರ ಮಾರ್ಗದರ್ಶನ ಪಡೆದರೂ ಸಹ ನಮ್ಮ ದಾರಿಯನ್ನು ನಾವೇ ಕಂಡುಕೊಳ್ಳಬೇಕು. ❑

ವಾರ್ಷಿಕ ವಿಶೇಷಾಂಕ ೨೦೦೪

ವರ್ತಮಾನದ ಸಂಕೀರ್ಣತೆಯಲ್ಲಿ ಬಿಕ್ಕಟ್ಟು



ಚರ್ಚೆ

○ ಆನಂದ್ ಋಗ್ವೇದಿ

೧. ಹೊಸ ತಲೆಮಾರಿನ ಲೇಖಕರಲ್ಲಿ ಸಾಮಾಜಿಕ ಬದ್ಧತೆ ಕಡಿಮೆಯಾಗುತ್ತಿದೆ ಎಂದೇನೂ ನನಗೆ ಅನ್ನಿಸುವುದಿಲ್ಲ. ಬಹುತೇಕ ನನ್ನ ತಲೆಮಾರಿನ ಲೇಖಕರು ಸಮಾಜ ಮುಖಿಯಾಗಿಯೇ ಸ್ಪಂದಿಸುತ್ತಿದ್ದಾರೆ. ಈ ವರ್ತಮಾನದ ಸಂಕೀರ್ಣತೆಯೇ ಅಂತಹುದು. ಏಕಕಾಲಕ್ಕೆ ನಿರುದ್ಯೋಗ, ಜಾಗತೀಕರಣ, ಕೋಮುವಾದದಂತಹ ಪ್ರಖರ ಸಮಸ್ಯೆಗಳೊಂದಿಗೆ ಜಟಿಲವಾದಂತಹುದು. ಆ ಎಲ್ಲಾ ಸಾಮಾಜಿಕ ವ್ಯಾಧಿಗೆ ಪರಿಹಾರ ಕಂಡುಕೊಳ್ಳುವ ಸಾಂಸ್ಕೃತಿಕ ಜವಾಬ್ದಾರಿ ನನ್ನ ತಲೆಮಾರಿನ ಲೇಖಕರ ಮೇಲಿದೆ. ಎಂದೇ ಈ ನಿಟ್ಟಿನಲ್ಲಿ ಹಲವು ಸೃಜನಶೀಲ ಪ್ರಯತ್ನಗಳೂ ನಡೆದಿವೆ.

ಸ್ಥಿತ್ಯಂತರಗಳನ್ನು ಸೂಕ್ಷ್ಮವಾಗಿ ಗುರುತಿಸುವ, ಅವುಗಳೊಂದಿಗೆ ವೈಚಾರಿಕ ಸಂಘರ್ಷಕ್ಕೆ ಇಳಿಯುವ, ಸಾಹಿತ್ಯ ಪ್ರಕಾರಗಳಲ್ಲಿ ಅವುಗಳಿಗೆ ಸೃಜನಶೀಲವಾಗಿ ಮುಖಾಮುಖಿಯಾಗುವ ಪ್ರಯತ್ನ ನಡೆದಿದೆ. ಬುಡಕಟ್ಟುಗಳ ಅಧ್ಯಯನದ ಹಿನ್ನೆಲೆಯಲ್ಲಿ ಸ್ಥಿತ್ಯಂತರ ಗುರುತಿಸುವ ಎ.ಎಸ್. ಪ್ರಭಾಕರ್, ಬುಡಕಟ್ಟಿನ ಮನಶಾಸ್ತ್ರದ ನೆಲೆಯಿಂದ ಬರೆಯುವ ರಶ್ಮಿ ಹೆಗಡೆ, ಜನಪದ ಆಶಯಗಳೊಂದಿಗೆ ಕವಿತೆಕಟ್ಟುವ ಪೀರ್‌ಬಾಷ, ಚಿದಾನಂದಸಾಲಿ, ವೈಚಾರಿಕ ಸಂಘರ್ಷಕ್ಕೆಳಸುವ ವಿಕ್ರಮ ವಿಸಾಜಿ, ಡಾ|| ನಿಂಗಪ್ಪ ಮುದೇನೂರು ಮೊದಲಾದವರೆಲ್ಲ ಸಕ್ರಿಯರಾಗೇ ಇದ್ದಾರೆ. ಅವರೆಲ್ಲರ ಅಧ್ಯಯನ, ಬರಹ, ಸೃಜನಶೀಲ ಕೃತಿಗಳು ಸಮಾಜದ ಬಹುಮುಖಿ ಅಸ್ತಿತ್ವವನ್ನು ಈ ಎಲ್ಲಾ ಸಾಮಾಜಿಕ ಸಮಸ್ಯೆಗಳಿಂದ ರಕ್ಷಿಸುವುದೇ ಆಗಿದೆ. ಆದರೂ ಸೃಜನಶೀಲ, ಅಕಾಡೆಮಿಕ್ ವ್ಯಾಪ್ತಿಯಲ್ಲಿ ನನ್ನ ತಲೆಮಾರಿನ ಲೇಖಕರ ಸಂಖ್ಯೆ ಕಡಿಮೆ. ಇದಕ್ಕೆ ವರ್ತಮಾನದ ಸಾಹಿತ್ಯಿಕ ವಾತಾವರಣವೂ ಪೂರಕ ಎನ್ನಬಹುದು.

೨. ಮೊದಲೇ ಹೇಳಿದೆ - ಬಿಕ್ಕಟ್ಟು ಇರುವುದೇ ವರ್ತಮಾನದ ಸಂಕೀರ್ಣತೆಯಲ್ಲಿ. ಹಿಂದಿನ ತಲೆಮಾರಿನ ಲೇಖಕರು ತಮ್ಮ ಸೃಜನಶೀಲ ಚಟುವಟಿಕೆಯ ಭಾಗವಾಗಿ ಯಾವುದಾದರೊಂದು ಜನಪರ ಚಳವಳಿಯಲ್ಲಿ ಗುರುತಿಸಿಕೊಳ್ಳುತ್ತಿದ್ದರು. ನವೋದಯದ ಸಂದರ್ಭದಲ್ಲಿ 'ಭಾವುಕ ರಾಷ್ಟ್ರೀಯವಾದ', ನವ್ಯದ ಸಂದರ್ಭದ ಬಹುತೇಕರು ತೊಡಗಿಕೊಂಡ ಸಮಾಜವಾದಿ ಚಳವಳಿ, ನವ್ಯದ ನಂತರದ ಕಾಲಘಟ್ಟದಲ್ಲಿ ಶೋಷಿತರ ದನಿಯಾಗಬೇಕೆಂಬ 'ಬಂಡಾಯ', ತುಳಿತಕ್ಕೊಳಗಾದವರ - ದಲಿತರ ಆಶೋತ್ತರಗಳಿಗೆ ದಲಿತ ಚಳವಳಿ, ರೈತ ಚಳವಳಿ, ..ಈ ಎಲ್ಲಾ ಸಂದರ್ಭಗಳೇ ಲೇಖಕರನ್ನು ಅವರ ಆಶಯ, ಸಾಮಾಜಿಕ ಹಿನ್ನೆಲೆಯ ನೆಲೆಯಿಂದ ಚಳವಳಿಗಳಲ್ಲಿ ಗುರುತಿಸಿಕೊಳ್ಳುವಂತೆ ಮಾಡಿಬಿಡುತ್ತಿದ್ದವು. ಅದೊಂದು ಸದಾವಕಾಶ ಕೂಡ. ಆದರೆ ವರ್ತಮಾನದಲ್ಲಿ ನಡೆಯುತ್ತಿರುವ ದಾಳಿ ಹಲವು ಆಯಾಮ ಗಳದ್ದು. ಜಾಗತೀಕರಣವನ್ನು; ಸಂಸ್ಕೃತಿ, ಪರಂಪರೆ, ಗುಡಿ ಕೈಗಾರಿಕೆ, ಮಾನವ ಹಕ್ಕು, ಭಾಷೆಗಳ ಅಸ್ತಿತ್ವ, ಔದ್ಯೋಗೀ ಕರಣ, ರೈತರ ಅಸಹಾಯಕತೆ - ಈ ಎಲ್ಲಾ ಹಿನ್ನೆಲೆಯಲ್ಲಿ ಅರಿಯಬೇಕಿದೆ. ಅದಕ್ಕೆ ಸಂಘಟಿತ ಪ್ರತ್ಯುತ್ತರ ನೀಡಬೇಕಿದೆ. ಹೀಗೆಂದ ಕೂಡಲೇ ಚಳವಳಿಯೂ ಬಹುಮುಖಿ ಆಯಾಮ ಪಡೆದುಕೊಳ್ಳುತ್ತದೆ. ಅದರ ಸಶಕ್ತತೆಗಾಗಿ ಏಕರೂಪ ಗ್ರಹಿಕೆ ಮೂಡಿಸುವಂತಹ ತಾತ್ವಿಕತೆಯನ್ನು, ಚಿಂತನೆಯನ್ನು ವರ್ತಮಾನದ ಸಾಹಿತ್ಯಿಕ ಸಂದರ್ಭ ಮೂಡಿಸಬೇಕಿದೆ. ಹಾಗಾದಾಗ ಚಳವಳಿಯೊಂದು ತೀಕ್ಷ್ಣ ಸ್ವರೂಪ ಪಡೆದುಕೊಳ್ಳುತ್ತದೆ.

ಬಹುತೇಕ ನನ್ನ ತಲೆಮಾರಿನ ಲೇಖಕರು ಸಮಾಜಮುಖಿಯಾಗಿಯೇ ಸ್ಪಂದಿಸುತ್ತಿದ್ದಾರೆ. ಈ ವರ್ತಮಾನದ ಸಂಕೀರ್ಣತೆಯೇ ಅಂತಹುದು. ಏಕಕಾಲಕ್ಕೆ ನಿರುದ್ಯೋಗ, ಜಾಗತೀಕರಣ, ಕೋಮುವಾದದಂತಹ ಪ್ರಖರ ಸಮಸ್ಯೆಗಳೊಂದಿಗೆ ಜಟಿಲವಾದಂತಹುದು. ಆ ಎಲ್ಲಾ ಸಾಮಾಜಿಕ ವ್ಯಾಧಿಗೆ ಪರಿಹಾರ ಕಂಡುಕೊಳ್ಳುವ ಸಾಂಸ್ಕೃತಿಕ ಜವಾಬ್ದಾರಿ ನನ್ನ ತಲೆಮಾರಿನ ಲೇಖಕರ ಮೇಲಿದೆ.

ಸಹಜವಾಗಿಯೇ ಅದು ನಮ್ಮ ತಲೆಮಾರಿನ ಎಲ್ಲ ಸಂವೇದನಾಶೀಲರನ್ನು ತನ್ನ ತೆಕ್ಕೆಗೆ ಪಡೆಯುತ್ತದೆ. ಅದು ಹೊಸ ತಲೆಮಾರಿನ ಲೇಖಕರದಷ್ಟೇ ಅಲ್ಲದೇ ಒಟ್ಟು ಸಾಹಿತ್ಯಿಕ ಸಂದರ್ಭದ ಜವಾಬ್ದಾರಿಯೂ ಹೌದಲ್ಲವೇ? ಆದಾಗ್ಯೂ ಕೋಮುವಾದದ ವಿರುದ್ಧ, ಜಾಗತೀಕರಣದ ಮುಖಾಮುಖಿಯಾಗಿ ರೈತ-ದಲಿತಪರ ಆಶಯಗಳ ಹೋರಾಟಗಳಲ್ಲಿ ನನ್ನ ತಲೆಮಾರಿನ ಬಹುತೇಕರು ಸಹಭಾಗಿಗಳಾಗಿದ್ದೇವೆ. ಅದರ ಒಟ್ಟು ಸೃಜನಶೀಲ ಪ್ರತಿಕ್ರಿಯೆ, ಕೃತಿ, ತಾತ್ವಿಕತೆ ಇನ್ನೂ ಸ್ಪಷ್ಟವಾಗಿ ಒಡಮೂಡಬೇಕಾಗಿದೆ.

೩. ಓರ್ವ ಲೇಖಕನಾಗಿ ನನಗೆ ಸಾಹಿತ್ಯದಲ್ಲಿ ಕಥಾ ಪ್ರಕಾರ ಆಪ್ತವಾದುದು. ನಮ್ಮ ಸಂದರ್ಭದ ಬಿಕ್ಕಟ್ಟುಗಳನ್ನ, ಸಮಸ್ಯೆಗಳನ್ನು, ವೈಚಾರಿಕ ಸಂಘರ್ಷವನ್ನು ಕಥನ ಕ್ರಮದಲ್ಲಿ ಆಪ್ತವಾಗಿ ಶೃತಪಡಿಸಲು ಸಾಧ್ಯ ಎಂದೇ ನಾನು ನಂಬಿದ್ದೇನೆ. ನನ್ನ ಕತೆಗಳಲ್ಲಿ ವೈಚಾರಿಕತೆಯೇ ಪಾತ್ರವಾಗಿ ಬಿಡುತ್ತದೆ ಎಂಬ ಆರೋಪವನ್ನು ನಿರಾಕರಿಸಲಾರೆ ಆದರೂ ಭಾವ ತೀವ್ರತೆಯೊಂದಿಗೆ ಅದು ಪೂರಕ ಎಂದೇ ನಾನು ಭಾವಿಸಿದ್ದೇನೆ. ನನ್ನ ಕಥನದ ವಸ್ತುವಿನ ಆಯ್ಕೆಗೆ ಹಲವು ಸವಾಲುಗಳು, ಗೀಳುಗಳು ಕಾರಣವಾಗಿರುತ್ತವೆ.

ನನ್ನ ಅಭಿವ್ಯಕ್ತಿ ಮಾಧ್ಯಮ ಪ್ರಮುಖವಾಗಿ ಗದ್ಯವೇ ಆಗಿರುವಾಗ ನನ್ನ ಆಶಯಗಳೂ ಸಾಮಾಜಿಕ ಬದುಕಿನ ಸ್ವರೂಪಗಳನ್ನು ಕಥನಿಸುವುದೇ ಆಗಿವೆ. ಈ ಮಾತನ್ನ ನನ್ನ ಪ್ರಕಟಿತ ಮೊದಲ ಕಥಾ ಸಂಕಲನದ ಬಗ್ಗೆ ಹೇಳಲಾರೆ. ಬದುಕಿನ ವೈಯಕ್ತಿಕತೆಯಿಂದ ಸಾರ್ವತ್ರಿಕತೆಯೆಡೆಗೆ ಸಾಗಿ ಬಂದ ಹಾದಿಯಲ್ಲಿ ಅದೂ ಒಂದು ನೆಡುಗಲ್ಲು ಅಷ್ಟೇ.

ಕಥನದೊಂದಿಗೇ ರಂಗ ಸಾಧ್ಯತೆಯ ಮೂಲಕವೂ ನನ್ನ ಗದ್ಯದ ಅಭಿವ್ಯಕ್ತಿ ಸಾಧ್ಯವಾಗಿಸಲು ನನ್ನ ಎರಡನೇ ಆದ್ಯತೆ ನಾಟಕ ಪ್ರಕಾರದ್ದು. ನನ್ನ ನಾಟಕ 'ಉರ್ವಿ'ಯಲ್ಲಿ ಕಾಡಿನ ಜೊತೆಗೇ ಹಾಸುಹೊಕ್ಕಾದ ಜನಾಂಗವೊಂದನ್ನು ಅಧಿಕಾರ ಶಾಹಿ, ಜನಾಂಗೀಯವಾದವು ಒಕ್ಕಲೆಬ್ಬಿಸುವ ದಬ್ಬಾಳಿಕೆಯ ಸಂದರ್ಭಕ್ಕೆ ವೈಚಾರಿಕವಾಗಿ ಮುಖಾಮುಖಿಯಾಗುವ ಪ್ರತಿಭಟನೆಯ ಸಾಧ್ಯತೆಗಳು ಕೃತಿಯ ಸಾಧ್ಯತೆಯೂ ಆಗುತ್ತದೆ. ಈ ಪ್ರಯತ್ನ ಪೌರಾಣಿಕ ಆ ಕೃತಿಯಲ್ಲಿ ವರ್ತಮಾನದ

(೩೭ನೇ ಪುಟಕ್ಕೆ)

ಹೊಸ ತಲೆಮಾರಿನ ಲೇಖಕರಿಗೆ ಕೇಳಲಾಗಿರುವ ಪ್ರಶ್ನೆಗಳು :

೧ ಹೊಸ ತಲೆಮಾರಿನ ಲೇಖಕರಲ್ಲಿ ಸಾಮಾಜಿಕ ಬದ್ಧತೆ ಕಡಿಮೆಯಾಗುತ್ತಿದೆ ಎಂಬ ಅಭಿಪ್ರಾಯ ಇದೆ. ನಿಮ್ಮ ಪ್ರತಿಕ್ರಿಯೆ ಏನು?

೨ ಹಿಂದಿನ ತಲೆಮಾರಿನ ಬಹುತೇಕ ಲೇಖಕರು ಯಾವುದಾದರೊಂದು ಜನಪರ ಚಳವಳಿಯೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದರು. ಈಗಿನ ಬಹುತೇಕ ಲೇಖಕರು ಇಂತಹ ಚಳವಳಿಗಳೊಂದಿಗೆ ಹೆಚ್ಚು ಗುರುತಿಸಿಕೊಳ್ಳುತ್ತಿಲ್ಲ ಏಕೆ?

೩ ಪ್ರಕಾರ, ವಸ್ತು ಮತ್ತು ಸಾಮಾಜಿಕ ಬದ್ಧತೆ ದೃಷ್ಟಿಯಿಂದ ನಿಮ್ಮ ಆಯ್ಕೆ ಏನು ?

೪ ಕಲೆಗಾಗಿ ಕಲೆ ಅಥವಾ ಸಮಾಜಕ್ಕಾಗಿ ಕಲೆ- ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು ?

೫ ಆಧುನಿಕ ಸಾಹಿತ್ಯ ಆರಂಭದ ಹಂತದಿಂದಲೂ ಪಾಶ್ಚಾತ್ಯ ಸಾಹಿತ್ಯ, ತತ್ವಜ್ಞಾನದೊಂದಿಗೆ ಮುಖಾಮುಖಿಯಾಗಿದೆ. ಈ ದಶಕದಲ್ಲಿ ಈ ರೀತಿಯ ಮುಖಾಮುಖಿಯನ್ನು ಗುರುತಿಸಲು ಸಾಧ್ಯವೇ ?

ಚರ್ಚೆ

ವಿಕ್ರಮ ವಿಸಾಜಿ

'ಕಲೆಗಾಗಿ ಕಲೆ' ಎನ್ನುವ ಸಿದ್ಧಾಂತ ಈಗ ಬರಹದ ಜಗತ್ತಿನಲ್ಲಿ ಬಿದ್ದು ಹೋಗಿದೆ. ಇದರಿಂದ ಬರಹಕ್ಕಾಗಲಿ, ಮನುಕುಲದ ಬದುಕಿಗಾಗಲಿ ಹೆಚ್ಚಿನ ಪ್ರಯೋಜನವಾಗುವುದಿಲ್ಲವೆಂಬುದನ್ನು ಮನಗಂಡಿದ್ದೇವೆ. ಜೊತೆಗೆ 'ಸಮಾಜಕ್ಕಾಗಿ ಕಲೆ' ಎಂಬ ನಂಬಿಕೆಯನ್ನು ಎಚ್ಚರದಿಂದ ಬಳಸಬೇಕಾಗಿದೆ.

ವಾರ್ಷಿಕ ವಿಶೇಷಾಂಕ ೨೦೦೫

ನೈತಿಕ ಎಚ್ಚರವೇ ಮಹತ್ವದ ಸಂಗತಿ

೧. ಹೊಸ ತಲೆಮಾರಿನ ಲೇಖಕರಲ್ಲಿ ಸಾಮಾಜಿಕ ಬದ್ಧತೆ ಖಂಡಿತಾ ಕಡಿಮೆಯಾಗುತ್ತಿಲ್ಲ. ಅದು ಹೊಸಸ್ವರೂಪದಲ್ಲಿ ಪ್ರಕಟಗೊಳ್ಳುತ್ತಿರುವುದರಿಂದ ಇಂಥ ಅನುಮಾನ ನಿಮಗೆ ಉಂಟಾಗಿರಬಹುದು. ಇದು ಸಾಕಷ್ಟು ಸೂಕ್ಷ್ಮವೂ, ವಿಭಿನ್ನವೂ ಆಗಿದೆ. ದಲಿತ - ಬಂಡಾಯದಲ್ಲಿ ಸಾಮಾಜಿಕ ಬದ್ಧತೆ ಸಾಹಿತ್ಯದ ಮೇಲ್ಪದರನಲ್ಲಿತ್ತು ಮತ್ತು ಕಣ್ಣಿಗೆ ಹೊಡೆದು ಕಾಣುತ್ತಿತ್ತು. ಇಂದು ರೂಪಕಗಳ ಒಡಲಿನಲ್ಲೋ, ಅನುಭಾವದ ಮುಖೇನವೊ, ಜಾತ್ಯಾತೀತ ಪುರಾಣಗಳನ್ನು ಕಂಡಿರಿಸುವ ಹಂಬಲದಲ್ಲೋ ಅಥವಾ ವ್ಯವಸ್ಥೆಯನ್ನು ನೈತಿಕ ಎಚ್ಚರದಲ್ಲಿ ಒಳಗು ಮಾಡಿಕೊಳ್ಳುವ ಕ್ರಮದಲ್ಲೋ - ಹೀಗೆ ಬೇರೆ-ಬೇರೆ ಮುಖಗಳಲ್ಲಿ ಈ ಬದ್ಧತೆ ಹರಿಯುತ್ತಿದೆ. ಹೊಸಬರು ಕೋಮುವಾದವನ್ನು ಸೃಜನಶೀಲವಾಗಿ ಎದುರಿಸಿದ ನಿದರ್ಶನಗಳು ನಮ್ಮ ಕಣ್ಣೆದುರಿವೆ. ಹೊಸ ಸಾಹಿತ್ಯವನ್ನು ಅರಿಯಲು ಹೊಸ ಕ್ರಮಗಳೆ ಬೇಕು. ಇಂಥ ಅರಿವಿನ ಕ್ರಮಗಳನ್ನು ಗುರುತಿಸುವಲ್ಲಿ ಹಿಂದೆ ಬಿದ್ದಿರುವುದರಿಂದಲೆ ಹೊಸ ಸಾಹಿತ್ಯದ ಸಾಮಾಜಿಕ ಬದ್ಧತೆ ಎಂಥದ್ದು ಎಂಬುದನ್ನು ಕಂಡುಕೊಳ್ಳುವಲ್ಲಿ ಸೋಲುತ್ತಿದ್ದೇವೆ.

೨. ಈಗ ಚಳವಳಿಗಳೇ ದಿಕ್ಕು ತಪ್ಪಿವೆ. ಸ್ವಾರ್ಥ ಮತ್ತು ದ್ವೇಷವೆ ಮುನ್ನೆಲೆಗೆ ಬಂದು ಚಳವಳಿಯ ಕಾಳಜಿಗಳೆಲ್ಲ ಮರೆತುಹೋಗಿವೆ. ಜನಪರ ಸಂಘಟನೆಗಳೆಲ್ಲ ಒಡೆದು ಹೋಳುಗಳಾಗುತ್ತಿರುವ ಕಾಲವಿದು. ಇಂಥಲ್ಲಿ ಲೇಖಕ ಯಾವ ಚಳವಳಿಯೊಂದಿಗೆ ಗುರುತಿಸಿಕೊಳ್ಳಬೇಕು? ಅಲ್ಲದೆ, ಬರಹಗಾರನಾದವನು ಚಳವಳಿಗಳ ಮೂಲಕವೆ ತನ್ನ ನಿಲುವುಗಳನ್ನು ಪ್ರತಿಪಾದಿಸಬೇಕೆಂದೇನೂ ಇಲ್ಲ. ಆತ ಇದನ್ನು ಬರಹದ ಒಳಶಕ್ತಿಯಾಗಿ ಸ್ವೀಕರಿಸಿ ನೈತಿಕ ಎಚ್ಚರದಿಂದ ಬದುಕುತ್ತಿದ್ದರೆ ಬರೆಯುತ್ತಿದ್ದರೆ, ಅದು ಕೂಡ ಮಹತ್ವದ ಸಂಗತಿಯೆ, ಇದನ್ನು ಅನುಮಾನದಿಂದ ಕಾಣಬಾರದು.

೩. ಇದಕ್ಕೆ ಖಚಿತವಾದ ಉತ್ತರಕೊಡಲು ನನಗೆ ಕಷ್ಟವೆನಿಸುತ್ತಿದೆ. ಯಾವಾಗಲೂ ಅಂದುಕೊಳ್ಳುವ ಪ್ರೀತಿ ಮತ್ತು ಕರುಣೆ ತುಂಬಿದ ಅನುಭವಗಳ ಮೂಲಕ ಕಣ್ಣೆದುರಿನ ಕಟುಸತ್ಯಗಳಿಗೆ ಮುಖಾಮುಖಿಯಾಗಬೇಕು ಅಂತ. ಇಷ್ಟಂತೂ ನಿಜ. ಅದು ಯಾವ ಪ್ರಕಾರ, ವಸ್ತು ಸಾಮಾಜಿಕ ಬದ್ಧತೆ ಏನೇ ಇರಲಿ ನೈತಿಕ ಎಚ್ಚರದಿಂದಲ್ಲದೆ ಏನನ್ನೂ ಬರೆಯಬಾರದೆನಿಸುತ್ತಿದೆ.

೪. 'ಕಲೆಗಾಗಿ ಕಲೆ' ಎನ್ನುವ ಸಿದ್ಧಾಂತ ಈಗ ಬರಹದ ಜಗತ್ತಿನಲ್ಲಿ ಬಿದ್ದು ಹೋಗಿದೆ. ಇದರಿಂದ ಬರಹಕ್ಕಾಗಲಿ, ಮನುಕುಲದ ಬದುಕಿಗಾಗಲಿ ಹೆಚ್ಚಿನ ಪ್ರಯೋಜನವಾಗುವುದಿಲ್ಲವೆಂಬುದನ್ನು ಮನಗಂಡಿದ್ದೇವೆ. ಜೊತೆಗೆ 'ಸಮಾಜಕ್ಕಾಗಿ ಕಲೆ' ಎಂಬ ನಂಬಿಕೆಯನ್ನು ಎಚ್ಚರದಿಂದ ಬಳಸಬೇಕಾಗಿದೆ. ಯಾಕೆಂದರೆ ಈ ನಂಬಿಕೆಯಡಿ ರಚನೆಗೊಂಡ ಸಾಹಿತ್ಯ ಕೆಲವೊಮ್ಮೆ ಸಂಕುಚಿತವೂ, ಅಪಾಯಕಾರಿಯೂ ಆಗಿದೆ ಎಂಬುದನ್ನು ಮರೆಯದಿರೋಣ. ಒಟ್ಟಿನಲ್ಲಿ 'ನೈತಿಕತೆ, ಕಲೆ, ಸಮಾಜ' - ಈ ಮೂರೂ ಒಂದು ಕೇಂದ್ರದಲ್ಲಿ ಸಂಧಿಸಿದರೆ ಒಳಿತು. ಇಂಥ ಕಷ್ಟದ ಹಾದಿಯನ್ನು ಲೇಖಕ ಆಯ್ಕೆ ಮಾಡಿಕೊಳ್ಳಬೇಕಾಗಿದೆ.

೫. ಆಧುನಿಕ ಕನ್ನಡ ಸಾಹಿತ್ಯ ಆರಂಭದಿಂದಲೂ ಪಾಶ್ಚಾತ್ಯ ಮತ್ತು ದೇಸೀ ಎರಡರೊಂದಿಗೂ ಮುಖಾಮುಖಿಯಾಗಿದೆ. ವಿಚಿತ್ರವೆಂದರೆ ಕನ್ನಡ ವಿಮರ್ಶೆ ಪಾಶ್ಚಾತ್ಯ ಸಾಹಿತ್ಯದೊಂದಿಗೆ ಅನುಸಂಧಿಸಿದ ಬರಹವನ್ನು ಕುತೂಹಲದಿಂದ ಅವಲೋಕಿಸಿದಂತೆ ದೇಸೀ ಅನುಸಂಧಾನದ ಬರಹವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಇತ್ತೀಚೆಗೆ ಈ ಕೊರತೆಯನ್ನು ತುಂಬುವ ಪ್ರಯತ್ನ ನಡೆದಿದೆ. ಕಳೆದ ದಶಕದಲ್ಲಿ ಪಾಶ್ಚಾತ್ಯ ಸಾಹಿತ್ಯದೊಂದಿಗಿನ ಮುಖಾಮುಖಿ ಹಿನ್ನೆಲೆಗೆ ಸರಿದಿದೆ. (ಮುಖಾಮುಖಿ ನಡೆದರೂ ಇದರ ಕ್ರಮ ಸಂಪೂರ್ಣವಾಗಿ ಬೇರೆ ತರಹದ್ದಾಗಿದೆ.) ವಚನಗಳು, ನಡುಗನ್ನಡ ಸಾಹಿತ್ಯ, ಜನಪದ ಮಹಾಕಾವ್ಯಗಳು, ತತ್ವಪದಗಳು ಹೊಸಬರ ಗಮನವನ್ನು ಸೆಳೆಯುತ್ತಿವೆ. ಅದರಲ್ಲೂ ವಚನ ಚಳವಳಿ ಉಂಟುಮಾಡುತ್ತಿರುವ ಪ್ರಭಾವ ವಿಶೇಷವಾದದ್ದು. ಕನ್ನಡ ಸಾಹಿತ್ಯದ ಆಸಕ್ತಿಯ ಕೇಂದ್ರ ಈಗ ದೇಸೀ ಜಗತ್ತಿನ ಕಡೆ ಹೊರಳುತ್ತಿದೆ. ಇದು ಜೀವಂತವಾದ ಚಲನೆಯೆಂದೇ ನಾನು ಭಾವಿಸಿರುವೆ. ❑

ಕಣ್ತೆರೆದು ಬದುಕೋಣ ಕಣ್ಮುಚ್ಚಿ ಬರೆಯೋಣ

(೩೨ ನೇ ಪುಟದಿಂದ)

ಅವನು ಇಡೀ ಮನುಕುಲವನ್ನು ಎತ್ತುತ್ತಾನೆ. ಅದರ ನೈತಿಕತೆಯಲ್ಲಿ ಲೇಖಕನು ತನ್ನ ಅತ್ಯುತ್ತಮವನ್ನು ಕೊಡಲು ಒದ್ದಾಡಬೇಕು. ಅತ್ಯಂತ ಕಠಿಣವಾದ ಸವಾಲುಗಳನ್ನು ತನಗೆ ಹಾಕಿಕೊಳ್ಳಬೇಕು. ಮೊದಲೇ ಹೇಳಿದಂತೆ ಇಂದಿನಷ್ಟು 'ಮಿಶ್ರ ರೂಪಕ'ನಾದ ಮನುಷ್ಯ ಎಂದಿಗೂ ಇರಲಿಲ್ಲ. 'ಇಂದಿನ ----ಅನಿರ್ವಚನೀಯ'ವನ್ನು ಹಿಡಿಯುವುದು ಹೇಗೆ? ಎಂಬುದು ನಮ್ಮ ಬರವಣಿಗೆಯ ಧ್ಯಾಸವಾಗಬೇಕು. Passion ಬೇಕು. ಕ್ರಮ, ಅನುಕ್ರಮಗಳನ್ನು ಮುರಿದು ಮನುಜ ಸೀಮೆಗಳನ್ನು ಹಿಗ್ಗಿಸುವ ಅನಾಮಿಕ ಸುಖದಲ್ಲಿ ನಾವು ಬೆಳೆಯಬೇಕು. ಬರೆಯುವಾಗ ಬರೆವವ ಬೆಳೆದರೆ ಮಾತ್ರ, ಬರವಣಿಗೆಯಲ್ಲಿ ಜೀವ ಬರುತ್ತದೆ. ಮತ್ತು ಆ ಅಂಥ ಜೀವ ಇದ್ದರೆ ಮಾತ್ರ ಅದು ಇತರರಿಗೂ ತಟ್ಟುತ್ತದೆ.

ಹೊಸ ಬರಹಗಾರರಿಗೆ ಸಹ ಲೇಖಕನಾಗಿ ಒಂದು ಮಾತು ಹೇಳಲೇಬೇಕು. ಪತ್ರಿಕೆಗಳನ್ನು ಓದದಿದ್ದರೆ ಏನೇನೂ ದಾಡಿಯಿಲ್ಲ. ಆದರೆ, ಕನ್ನಡದ ಪ್ರಮುಖ ಲೇಖಕರ ಪುಸ್ತಕಗಳನ್ನು ಓದಿ. ಕವಿಯನ್ನು ಆತನ ಸಂಕಲನದಲ್ಲಿ ಓದಿ. ಕನಿಷ್ಠ ಕಳೆದರ್ಧ ಶತಮಾನದ ಮನಸ್ಸುಗಳ ಜೊತೆ ಸಂಪರ್ಕ ಬೆಳೆಸಿ. ಕುವೆಂಪು, ಬೇಂದ್ರೆ, ಮಾಸ್ತಿ, ಕಾರಂತ, ಪು.ತಿ.ನ., ನಿರಂಜನ, ಮಧುರಚೆನ್ನ, ಶಾಂತಿನಾಥ ದೇಸಾಯಿ, ಕೆ.ಎಸ್.ನ., ಯಶವಂತ ಚಿತ್ತಾಲ, ಪೂರ್ಣ ಚಂದ್ರ ತೇಜಸ್ವಿ, ಪಿ.ಲಂಕೇಶ್, ಅನಂತಮೂರ್ತಿ, ಕೆ.ವಿ. ತಿರುಮಲೇಶ್, ಗೋಪಾಲಕೃಷ್ಣ ಅಡಿಗ, ದೇವನೂರು ಮಹದೇವ, ಗಂಗಾಧರ ಚಿತ್ತಾಲರಂಥ ಮಹತ್ವದ ಲೇಖಕರ ತಲಾ ಒಂದೆರೆಡು ಕೃತಿಗಳನ್ನಾದರೂ ಓದಿ. ಬರವಣಿಗೆ ಗುರಿಯಲ್ಲ, ಅದೊಂದು ದಾರಿ, ವಿಕಾಸದ ದಾರಿ.

ಸುತ್ತ ಮುತ್ತಲಲ್ಲಿ ಸಹಜ ಆಸಕ್ತಿಯಿಲ್ಲದೆ, ಮನುಷ್ಯರಲ್ಲಿ ಮಮತೆಯಿಲ್ಲದೆ ಕಣ್ಮುಚ್ಚಿಕೊಂಡು ಬದುಕಿದರೆ, ಬರೆಯುವಾಗ ಎಷ್ಟೇ ಎಚ್ಚರದಿಂದ ಕಣ್ತೆರೆದರೂ ಪ್ರಯೋಜನವಿಲ್ಲ.

ಕಣ್ತೆರೆದು ಬದುಕೋಣ, ಕಣ್ಮುಚ್ಚಿ ಬರೆಯೋಣ. ❑

ಸಾಹಿತ್ಯವೆನ್ನುವುದೇ ಮಾನವೀಯ ಕಾಳಜಿ

ಚರ್ಚೆ

○ ಮಂಜುನಾಥ್ ಗೀತಾ

೧. ನನಗನ್ನಿಸಿರುವಂತೆ ಯಾವುದೇ ಲೇಖಕ ಯಾವತ್ತೂ ಸಾಮಾಜಿಕ ಬದ್ಧತೆ ಹೊಂದಿದವನಾಗಿರುತ್ತಾನೆ ಮತ್ತು ಹೊಂದಿರಬೇಕು. ನನ್ನ ಪ್ರಕಾರ ಸಾಹಿತ್ಯವೆನ್ನುವುದೇ ಮಾನವೀಯ ಕಾಳಜಿ. ಹಾಗೆ ನೋಡಿದರೆ ಇಡೀ ಕನ್ನಡ ಸಾಹಿತ್ಯ ಪರಂಪರೆಯೇ ಸಾಮಾಜಿಕ ಕಾಳಜಿಯನ್ನು, ಜನಪರತೆಯನ್ನು ನಿರಂತರವಾಗಿ ಪ್ರಕಟಿಸುತ್ತಲೇ ಬಂದಿದೆ. ಇಂದು ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಎಲ್ಲಾ ಹೊಸ ತಲೆಮಾರಿನ ಬರಹಗಾರರು ವ್ಯವಸ್ಥೆಯ ವಿರುದ್ಧದ ಧ್ವನಿಗಳನ್ನು ತಮ್ಮದೇ ಹೊಸ ಹೊಸ ರೂಪಗಳ ಮೂಲಕ ದಾಖಲಿಸುತ್ತಲೇ ಇದ್ದಾರೆ. ಆದರೆ ಆ ಧ್ವನಿ ಮತ್ತು ರೂಪಗಳು ಯಾವುದೋ ಕಾರಣಕ್ಕೆ ಅವರಷ್ಟಕ್ಕೇ, ಬಿಡಿ ಬಿಡಿಯಾಗಿ ಉಳಿದುಬಿಟ್ಟಂತಿವೆ. ಇಡಿಯಾಗಿ ಇಲ್ಲದಿರುವ ಕಾರಣಕ್ಕೆ ಅಥವಾ ಸಾಮೂಹಿಕವಾದ ಚಳವಳಿಯ ಸ್ವರೂಪ ಹೊಂದಿಲ್ಲ ಎಂಬ ಕಾರಣಕ್ಕೆ ಇಂದಿನವರಿಗೆ ಸಾಮಾಜಿಕ ಬದ್ಧತೆಯೇ ಇಲ್ಲವೆನ್ನುವುದು ಸರಿಯಲ್ಲ. ಹೊಸದಾಗಿ ಬರೆಯುತ್ತಿರುವವರನ್ನು ಪಟ್ಟಿ ಮಾಡಿ, ಅವರ ಬರಹಗಳನ್ನೊಮ್ಮೆ ಅವಲೋಕಿಸಿ ನೋಡಿ. ಹಿಂದಿನ ಲೇಖಕರಷ್ಟೆ ಸಮರ್ಥವಾಗಿ ತಮ್ಮ ಬರಹಗಳ ಮೂಲಕ ಕಾಳಜಿ ತೋರಿಸುತ್ತಿದ್ದಾರೆ. ಆ ಬಗೆಯ ಧ್ವನಿಗಳನ್ನು ಗುರುತಿಸುವ ಕೆಲಸವಾಗುತ್ತಿಲ್ಲ ಅಷ್ಟೆ.

೨. ಪ್ರಶ್ನೆಯಲ್ಲಿಯೇ ಉತ್ತರದ ಹೊಳಹು ಇದೆ. ನಿಜ, ೭೦-೮೦ರ ದಶಕದ ಎಲ್ಲಾ ಜನಪರ ಚಳವಳಿಗಳು, ಎಲ್ಲಾ ಲೇಖಕರು ಪರಸ್ಪರ ಕೊಡುಕೊಳ್ಳುವ ಮೂಲಕ ಕನ್ನಡ ನೆಲದಲ್ಲಿ ಒಂದು ಹೊಸ ಇತಿಹಾಸವೇ ದಾಖಲಾಗಿದೆ. ಅಷ್ಟೊಂದು ರಭಸವಾಗಿ ಜನರನ್ನು ತಲುಪಿ ದೊಡ್ಡದೊಂದು ಪ್ರವಾಹವನ್ನೇ ಸೃಷ್ಟಿಸಿ ಅನೇಕ ಬದಲಾವಣೆಗಳಿಗೆ ಕಾರಣವಾದ ಎಲ್ಲಾ ಜನಪರ ಚಳವಳಿಗಳು ಇಂದು ಏನಾಗಿವೆ? ದಲಿತ ಚಳವಳಿಯಾಗಲಿ, ರೈತ ಚಳವಳಿಯಾಗಲಿ, ಬಂಡಾಯ ಸಾಹಿತ್ಯ ಸಂಘಟನೆಯಾಗಲಿ ಇಂದು ಯಾವ ಮಟ್ಟಮುಟ್ಟಿವೆ? ಪ್ರಗತಿಪರ ಚಿಂತಕರ, ಲೇಖಕರ, ಕಲಾವಿದರ, ಬುದ್ಧಿಜೀವಿಗಳ ಚೈತನ್ಯ ಚಿಂತನೆಗಳೊಂದಿಗೆ ಅವರನ್ನೂ ಬೆಳೆಸಿದ ಎಲ್ಲಾ ಚಳವಳಿಗಳು ಈಗ ಸುಸ್ತು ಹೊಡೆದಂತೆ ಮಂಕಾಗಿ ಕುಳಿತಿರುವುದು ಕರ್ನಾಟಕದ ಚರಿತ್ರೆ ಬಲ್ಲ ಎಲ್ಲರಿಗೂ ಗೊತ್ತಿರುವ ಸಂಗತಿ. ಬಹು ದೊಡ್ಡ ಆಶಯ, ಕನಸುಗಳೊಂದಿಗೆ ಚಾಲನೆ ಪಡೆದುಕೊಂಡ ಚಳವಳಿಗಳು ಕ್ರಮೇಣ ವ್ಯವಸ್ಥೆಯೊಂದಿಗೆ ಸಮೀಕರಣಗೊಂಡೋ, ವಿಲೀನಗೊಂಡೋ ಶಕ್ತಿಗುಂದಿವೆ. ಹಿಂದೆಂದಿಗಿಂತ ಹೆಚ್ಚು ಅನಿವಾರ್ಯ ಎನಿಸುತ್ತಿರುವ ಈ ಹೊತ್ತಿನಲ್ಲಿ ಕಳೆ ಕಳೆದುಕೊಂಡಿರುವ ಚಳವಳಿಗಳಲ್ಲಿ ಗುರುತಿಸಿಕೊಳ್ಳುವ ಉಮೇದು ನನ್ನ ಮನಸ್ಥಿತಿಯ ಎಲ್ಲಾ ಹೊಸ ಬರಹಗಾರರಿಗೂ ಇದೇ ಅಂತಲೇ ಅಂದುಕೊಂಡಿದ್ದೇನೆ. ಹೊಸ ಆಲೋಚನೆಗಳನ್ನು ತುಂಬಿಕೊಂಡು ಬರೆಯುತ್ತಿರುವ ಹೊಸ ಲೇಖಕರು ಒಂದಲ್ಲಾ ಒಂದು ಜನಪರ ವೇದಿಕೆಯೊಂದಿಗೆ ಗುರುತಿಸಿಕೊಳ್ಳಲು ಆಸೆ ಇಟ್ಟುಕೊಂಡೇ ಇದ್ದಾರೆ. ಆದರೆ ವೇದಿಕೆಯಾಗಿ ಹೊಸ ತಲೆಮಾರು ಹೊಸ ಇತಿಹಾಸ ಮತ್ತೊಮ್ಮೆ ಸೃಷ್ಟಿಸಬೇಕಾದ ಚಳವಳಿಗಳು ಯಾಕೋ ದಣಿದಿವೆ. (ಹೀಗೆ ಹೇಳುವಾಗ ನಾನು ಈ ಎಲ್ಲಾ ಚಳವಳಿಗಳು ಇದುವರೆಗೆ ಉಂಟು ಮಾಡಿರುವ ಸಾಧನೆ, ಬದಲಾವಣೆ ಗಳನ್ನು ಸಾರಾಸಗಟಾಗಿ ಕಡೆಗಣಿಸಿಲ್ಲ)

ಹೊಸ ಆಲೋಚನೆಗಳನ್ನು ತುಂಬಿಕೊಂಡು ಬರೆಯುತ್ತಿರುವ ಹೊಸ ಲೇಖಕರು ಒಂದಲ್ಲಾ ಒಂದು ಜನಪರ ವೇದಿಕೆಯೊಂದಿಗೆ ಗುರುತಿಸಿಕೊಳ್ಳಲು ಆಸೆ ಇಟ್ಟುಕೊಂಡೇ ಇದ್ದಾರೆ.

೩. ಪ್ರಕಾರ, ವಸ್ತು ಹಾಗೂ ಸಾಮಾಜಿಕ ಬದ್ಧತೆ ಈ ಮೂರೂ ಯಾವುದೇ ಲೇಖಕನಲ್ಲಿ ಏಕಕಾಲದಲ್ಲಿ ಆವಿರ್ಭವಿಸಿಕೊಂಡಿರಬೇಕಾದ ಪ್ರಜ್ಞೆಗಳು ಅಂದುಕೊಂಡಿದ್ದೇನೆ. ಸಾಹಿತ್ಯಾದಿ ಕಲೆಗಳನ್ನು ಯಾವುದೋ ಒಂದೇ ಪ್ರಕಾರಕ್ಕೆ ಸೀಮಿತಗೊಳಿಸುವುದು ಅದರ ಸಾಧ್ಯತೆಯನ್ನು ಕುಗ್ಗಿಸಿದಂತೆಯೇ. ವಸ್ತುವಿನ ಆಯ್ಕೆಯೂ ನಿರ್ದಿಷ್ಟವಾದುದಾಗಿರಬೇಕೆಂದೇನೂ ಇಲ್ಲ. ಇರುವ ವಸ್ತುವಿನಲ್ಲೇ ನಮ್ಮೆಲ್ಲ ಕಾಳಜಿಗಳು ಪ್ರಕಟಗೊಳ್ಳಬೇಕು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಸಾಮಾಜಿಕ ಬದ್ಧತೆ ವ್ಯಕ್ತಿಯೊಬ್ಬನ ವೈಯಕ್ತಿಕತೆಯನ್ನು ಕುರಿತದ್ದೂ ಆಗಿರಬಹುದು. ವ್ಯಕ್ತಿಯ ವೈಯಕ್ತಿಕ ತುಮುಲಗಳನ್ನು ಹೇಳುತ್ತಲೇ ಅದು ಸಾಮಾಜಿಕ ಜಡತ್ವಕ್ಕೆ ತಳುಕು ಹಾಕಿಕೊಂಡಿರುತ್ತದೆ ಎಂಬುದನ್ನು ಹೇಳುತ್ತಿದ್ದ ನವ್ಯ ಪಂಥದ ಕೆಲ ಲೇಖಕರನ್ನು ನಾವು ನೆನೆಯಬಹುದು. ಉದಾಹರಣೆಗೆ ಪಿ. ಲಂಕೇಶ್. ಈ ದೃಷ್ಟಿಯಲ್ಲಿ ಸಾಮಾಜಿಕ ಕಳಕಳಿ ಎನ್ನುವುದು ಯಾವುದೇ ಬರಹಗಾರನ ಸ್ಥಾಯಿ ಸ್ಥಿತಿ ಅನ್ನುವುದು ನನ್ನ ಅಭಿಪ್ರಾಯ. ಅದನ್ನು ಮಾನವೀಯ ಕಾಳಜಿ ಎಂದೇ ಕರೆಯಲು ನಾನು ಇಚ್ಛಿಸುತ್ತೇನೆ.

೪. ಜಗತ್ತಿನ ಎಲ್ಲಾ ಕಲಾ ಪ್ರಕಾರಗಳು ಆರಂಭದಲ್ಲಿ ಹುಟ್ಟಿಕೊಂಡದ್ದು ಕಲಾಭಿವ್ಯಕ್ತಿಯ ಒಂದು ಕ್ರಮವಾಗಿಯೆ ಎಂಬುದು ನಿಜವಾದರೂ ವಾಸ್ತವದೊಳಗೆ ಅಲ್ಲಿ ಇದ್ದದ್ದು ಜೀವಗಳ ನೋವು ನಲಿವಿನ ಅಭಿವ್ಯಕ್ತಿಯೇ. ಹೀಗೆ ವಿಶ್ಲೇಷಿಸಿದರೆ ಎಲ್ಲಾ ಕಲಾಭಿವ್ಯಕ್ತಿಗಳ ಉದ್ದೇಶವೂ ಸಮುದಾಯದತ್ತ ಮುಖ ಮಾಡಿರುವುದು ಸ್ಪಷ್ಟವಾಗುತ್ತದೆ. ಇದನ್ನು ಒಂದು ಸರಳ ಉದಾಹರಣೆಯ ಮೂಲಕ ಹೀಗೆ ಹೇಳಬಹುದು : ತಮಟೆ ಬಡಿಯುವ ಅಥವಾ ಚಂಡೆ ನುಡಿಸುವ ತಳಸಮುದಾಯದ ಒಬ್ಬ ಕಲಾವಿದ ತನ್ನ ಅದ್ಭುತ ಕಲಾಪ್ರತಿಭೆಯನ್ನೂ ರಾತ್ರಿ ಹೊಟ್ಟೆಗೆ ಅನ್ನವಿಲ್ಲದೆ ನರಳಿದ ತನ್ನ ವೇದನೆಯನ್ನೂ ಏಕಕಾಲದಲ್ಲಿ ಅಭಿವ್ಯಕ್ತಿಗೊಳಿಸುತ್ತಿರುತ್ತಾನೆ. ಅಲ್ಲಿ ಕಲೆಗಾಗಿ ಕಲೆ ಎನ್ನಬಹುದೋ ? ಸಮುದಾಯದತ್ತ ಕಲಾವಿದ ತನ್ನ ಕಲೆಯ ಮೂಲಕ ಎಸೆಯಬಹುದಾದ ಪ್ರಶ್ನೆ ಎನ್ನಬಹುದೋ? ಈ ದೃಷ್ಟಿಯಿಂದ ನೋಡಿದರೆ ಅದು ಯಾವುದೇ ಕಲಾಪ್ರಕಾರವಾಗಿರಲಿ ಸಾಮಾಜಿಕ ಬದ್ಧತೆಗೆ ಮುಖ ಮಾಡಿಯೇ ಇರುತ್ತದೆ ಎನ್ನಬಹುದು.

೫. ಇದು ಎರಡನೇ ಪ್ರಶ್ನೆಯ ಇನ್ನೊಂದು ರೂಪದಂತೆ ನನಗೆ ಕಾಣಿಸುತ್ತಿದೆ. ಒಂದು ಕಾಲದಲ್ಲಿ ಜಗತ್ತಿನ ಎಲ್ಲೆಡೆ ತಮ್ಮ ಪ್ರಭಾವ ಪಸರಿಸಿದ ಪಾಶ್ಚಾತ್ಯ ಸಾಹಿತ್ಯವಾದ, ಸಾಹಿತ್ಯ ಮಾದರಿಗಳು ಇಂದು 'ಯೂರೋಪೀಕರಣ'ದ ಕರಿಛಾಯೆಯಡಿ ತಲೆ ಮರೆಸಿಕೊಂಡಿವೆ. ಸಾಹಿತ್ಯ ವಾದಗಳ ಬದಲಾಗಿ ವ್ಯಕ್ತಿ ವಾದಗಳು, ಕಲಾ ಮೀಮಾಂಸೆಗಳ ಬದಲಾಗಿ ಜಾಗತಿಕ ಮಾರುಕಟ್ಟೆ ಮೀಮಾಂಸೆಗಳು ವಿಜೃಂಭಿಸತೊಡಗಿವೆ. ಅಭಿವೃದ್ಧಿ ಶೀಲ ರಾಷ್ಟ್ರಗಳ ಕುತ್ತಿಗೆ ಹಿಡಿದಿರುವ ಅಮೆರಿಕಾ ಸಾಮ್ರಾಜ್ಯಶಾಹಿಯ ಬಗ್ಗೆ ಚಕಾರವೆತ್ತದ ಸಾಹಿತಿಗಳು, ಕಲಾವಿದರು ಸಾಹಿತ್ಯ ಶ್ರೇಷ್ಠತೆ, ಕಲಾ ನೈಪುಣ್ಯತೆಗಳ ಬಗ್ಗೆ ಬಗೆ ಬಗೆಯ ವಾದಗಳನ್ನು ಮಂಡಿಸುತ್ತಲೇ ಇದ್ದಾರೆ. ಮಾರ್ಕ್ಸ್, ಲೆನಿನ್‌ರಂತಹ ಚಿಂತಕರೊಂದಿಗೆ ಟಾಲ್‌ಸ್ಟಾಯ್, ಮ್ಯಾಕ್ಸಿಮ್ ಗಾರ್ಕಿ, ಚಿನುವ ಅಚಿಬೆ, ವೊಲೆ ಶೋಯಿಂಕಾ, ಪಾಬ್ಲೊ ನೆರೂಡ, ಆಕ್ಟೋವಿಯಾ ಪಾಜ್, ಗೂಗಿ ವಾ ಥಿಯಾಂಗೋ ಇಂತಹ ಅನೇಕ ಹೊರಗಿನ ಬರಹಗಾರರು ಕನ್ನಡ ಸಾಹಿತ್ಯವನ್ನು ಮಾನವೀಯ ಕಳಕಳಿಯ ತಮ್ಮ ಬರಹಗಳ ಮೂಲಕ ಪ್ರಭಾವಿಸಿದಷ್ಟು ಸಮರ್ಥವಾಗಿ ಈಗ ಸಾಹಿತ್ಯ ಕೃಷಿಯಲ್ಲಿ ತೊಡಗಿರುವ ಹೊಸ ಲೇಖಕರು ಅಭಿವ್ಯಕ್ತಿ ಕ್ರಮಗಳನ್ನು ರೂಢಿಸಿಕೊಂಡಿದ್ದಾರೆಯೇ ಎಂಬುದು ನನ್ನ ಪ್ರಶ್ನೆ. ಪ್ರಸ್ತುತ ಜಾಗತಿಕ ಮಟ್ಟದಲ್ಲಿ ಎಲ್ಲೋ ಜೀವಪರ ಆಶಯಗಳ ಅಪರೂಪದ ಪುಣ್ಯದಂತೆ ನೋಮ್ ಚಾಮ್‌ಸ್ಕಿಯಂತಹವರು ಗೋಚರಿಸುತ್ತಾರೆ. ಆದರೂ ಚಾಮ್‌ಸ್ಕಿ ಅಂತಹವರ ಚಿಂತನೆಗಳ ಮುಖಾಮುಖಿ ಕನ್ನಡ ಸಾಹಿತ್ಯದ ಮಟ್ಟಿಗೆ ಈಗಷ್ಟೇ ಆರಂಭಗೊಂಡಿದೆ ಎಂದೇ ನನಗನ್ನಿಸುತ್ತದೆ. □

ಒಳಚರ್ಚೆ

> ಆಗಿನ ಚಳವಳಿಗಳಲ್ಲಿ ಶಿಸ್ತುಬದ್ಧ ಒಗ್ಗಟ್ಟಿತ್ತು, ಎಲ್ಲವನ್ನೂ ಪ್ರಾಮಾಣಿಕವಾಗಿ ಮುನ್ನಡೆಸುವ ದಿಟ್ಟ ಮನೋಭಾವದ ಲೇಖಕರಿದ್ದರು. 'ಇಟ್ಟಿಗೆ ಪವಿತ್ರ ಅಲ್ಲ; ಜೀವ ಪವಿತ್ರ' ಎಂದ ಸಂತನ ಮಾತಿಗೇ ಪ್ರಾಣವನ್ನೇ ಮುಡುಪಾಗಿಡುವ ಒಂದು ತಲೆಮಾರಿನ ಲೇಖಕರಿದ್ದದ್ದು ಸತ್ಯ. ಅದು ಮುಗಿದುಹೋದ ಅಧ್ಯಾಯ.

○ ಮಂಜುನಾಥ ವಿ.ಎಂ.

ಮುಗಿದುಹೋದ ಅಧ್ಯಾಯ

೧. ಹೌದು, ಇಲ್ಲಿನ ಬದುಕಿನ ಗೊಂದಲಗಳು ಮನುಷ್ಯನಾಳದ ಎಲ್ಲಾ ಆಶೆ, ಆಕಾಂಕ್ಷೆಗಳನ್ನು ಮೀರಿ ನೆಗೆಯುತ್ತವೆ. ಸಾಹಿತಿಯಾದವನ ಪಾಡು ಇದಕ್ಕೆ ಹೊರತಾಗಿರದೆ, ಇವೆಲ್ಲದರ ಆಳದಲ್ಲಿ ತನ್ನ ಪ್ರಭೆ ಕಳೆದುಕೊಳ್ಳುತ್ತಿದ್ದಾನೆ. ಕಂಪ್ಯೂಟರ್ ಕ್ಷೇತ್ರ, ಮಾಧ್ಯಮಗಳು, ನಡತೆಗೆಟ್ಟ ರಾಜಕಾರಣ- ಕೃತಕ ಬಣ್ಣದ ಲೋಕವನ್ನು ಸೃಷ್ಟಿಸಿ, ಇಡೀ ಮಾನವ ಕುಲವನ್ನೇ ತನ್ನ ರಾಕ್ಷಸ ಮುಷ್ಟಿಯಲ್ಲಿರಿಸಿಕೊಳ್ಳುವಲ್ಲಿ ಸಫಲವಾಗುತ್ತಿದೆ. ಇವೆಲ್ಲದರ ಗುಂಗಿನಲ್ಲಿ ಸಾಮಾಜಿಕ ಬದ್ಧತೆಯ ದೃಷ್ಟಿಯಿಂದ ಹೊರಹೊಮ್ಮಿದ ಕಾವ್ಯ (ಪ್ರಸ್ತುತದ ಯಾವುದೇ ಸಾಹಿತ್ಯ ಪ್ರಕಾರ) ಹಳಸಲು ವಸ್ತುವಾಗಿ, ತೀರಾ ಹಾಸ್ಯಾಸ್ಪದವಾಗಿ ಸೋಲುತ್ತಿರುವುದನ್ನು ಗಮನಿಸಬಹುದು. ಅಪಾಯದ ಇಂತಹ ದಿನಗಳಲ್ಲಿ ಬೇರೆಯದೇ ಆದ ಸಾಹಿತ್ಯವನ್ನು ಕಂಡುಕೊಳ್ಳುವುದು (ಸಾಮಾಜಿಕ ಬದ್ಧತೆಯಿಂದ ಹೊರತಾದ) ಅನಿವಾರ್ಯವಾಗಿದೆ.

೨. ಆಗಿನ ಚಳವಳಿಗಳಲ್ಲಿ ಶಿಸ್ತುಬದ್ಧ ಒಗ್ಗಟ್ಟಿತ್ತು ಎಲ್ಲವನ್ನೂ ಪ್ರಾಮಾಣಿಕವಾಗಿ ಮುನ್ನಡೆಸುವ ದಿಟ್ಟ ಮನೋಭಾವದ ಲೇಖಕರಿದ್ದರು. 'ಇಟ್ಟಿಗೆ ಪವಿತ್ರ ಅಲ್ಲ; ಜೀವ ಪವಿತ್ರ' ಎಂದ ಸಂತನ ಮಾತಿಗೇ ಪ್ರಾಣವನ್ನೇ ಮುಡುಪಾಗಿಡುವ ಒಂದು ತಲೆಮಾರಿನ ಲೇಖಕರಿದ್ದದ್ದು ಸತ್ಯ. ಅದು ಮುಗಿದುಹೋದ ಅಧ್ಯಾಯ. ಸದ್ಯದ ಚಳವಳಿಗಳ ತತ್ವ ಸಿದ್ಧಾಂತಗಳ ಮೇಲೆ ಯಾರಿಗೂ ವಿಶ್ವಾಸವಿಲ್ಲದಂತಾಗಿದೆ. ಗಳಿಗೆಗೊಂದರಂತೆ ನೀತಿ ಬದಲಾಗುತ್ತಿದೆ, ಹೇಳಿದ್ದನ್ನೇ ಹೇಳಿ ದ್ವಂದ್ವಕ್ಕೀಡು ಮಾಡುವ ಅವಿವೇಕತನ ತೋರುತ್ತಿದೆ. ರಾಜಕಾರಣದ ಹಾವಸೆಯಿಂದ ಹದಗೆಟ್ಟೋಗಿದೆ. ಡಿಎಸ್ಎಸ್ ರ್‍ಯಾಲಿಯಲ್ಲಿ ಉಗ್ರವಾಗಿ ಮಾತನಾಡುವ ಮುಖಂಡನೊಬ್ಬ ನಾಳೆ ಬಿಎಸ್‌ಪಿ ವೇದಿಕೆಯಲ್ಲಿ ನೊಣ ಹೊಡೆಯುತ್ತಿರುತ್ತಾನೆ. ಮೂರು ದಶಕಗಳಿಗೂ ಹೆಚ್ಚುಕಾಲ ಸಂಘಟನೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಪ್ರಖ್ಯಾತ ಕಲಾವಿದರಾದ ಕೆ.ಟಿ. ಶಿವಪ್ರಸಾದ್‌ರವರು ಇದ್ದಕ್ಕಿದ್ದಂತೆ ಒಬ್ಬಂಟಿಯಾಗಿಬಿಡುತ್ತಾರೆ. ಇದು ಇಲ್ಲಿನ ಎಲ್ಲಾ ಚಳವಳಿಗಳ ದುಸ್ಥಿತಿ.

೩. ಪ್ರಕಾರ ಮತ್ತು ವಸ್ತು-ಸಾಮಾಜಿಕ ಬದ್ಧತೆ ದೃಷ್ಟಿಯಿಂದ ನೋಡುವಾಗ ಭಿನ್ನವಾಗಿ ಕಾಣಲಾರದು. ಅವೆರಡೂ ಜೊತೆಜೊತೆಯಾಗಿಯೇ ಸೃಜಿಸುವಂತಹುದ್ದು, ಪ್ರತ್ಯೇಕವಾಗಿ ಪರಿಗಣಿಸಲಾಗದೇನೊ.

೪. ಸಮಾಜಕ್ಕಾಗಿ ಕಲೆ - ಇಲ್ಲಿ ಒಂದು ಅಪ್ಪಟ ಕಲಾಕೃತಿ ದೂಷಣೆಗೊಳಗಾಗುವುದರ ಮತ್ತು ಮಲಿನಗೊಳ್ಳುವುದರ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಅದೇ ಕಲಾಕೃತಿ ಪರಿಶುದ್ಧವಾಗಿ ಅಥವಾ ತನ್ನ ತಲೆತಲಾಂತರಗಳ ನೈತಿಕ ಧೋರಣೆಗಳಿಂದ ಜೀವಂತವಾಗಿ ಉಳಿಯಬೇಕಾದಲ್ಲಿ ಕಲೆಗಾಗಿ ಕಲೆಯೇ ಸೂಕ್ತವೆನಿಸಿಬಿಡುತ್ತದೆ.

೫. ವಿಚಿತ್ರ ತಿರುವುಗಳಿಂದ ಕೂಡಿದ್ದು ಅರ್ಥಹೀನತೆಯ ಗರ್ಭದಲ್ಲಿ ಜೀವಿಸುತ್ತಿದ್ದಂತೆ -

ಈ ದಶಕದ ಸಾಹಿತ್ಯ ತನ್ನದೇ ಆದ ಹುಸಿ ನೆಲೆಗಟ್ಟನ್ನು ಕಟ್ಟಿಕೊಳ್ಳುತ್ತಿದೆಯೇನೊ ಎಂಬ ಭೀತಿ ಹುಟ್ಟುತ್ತಿದೆಯಷ್ಟೇ. ಇಲ್ಲಿ ಪಾಶ್ಚಾತ್ಯ ತತ್ವಜ್ಞಾನದೊಂದಿಗಿನ ಮುಖಾಮುಖಿಯ ಪ್ರಶ್ನೆಯೇ ನಿರರ್ಥಕ. ❑

ವರ್ತಮಾನದ ಸಂಕೀರ್ಣತೆಯಲ್ಲಿ ಬಿಕ್ಕಟ್ಟು

(೩೪ನೇ ಪುಟದಿಂದ)

ಸಾಮಾಜಿಕ ಸಮಸ್ಯೆಗೆ ಒಂದು ಸೃಜನಶೀಲ ಪ್ರತಿಕ್ರಿಯೆ ಎಂದು ಭಾವಿಸಿದ್ದೇನೆ. ಇದು ನನ್ನ ಬದ್ಧತೆಯೂ ಹೌದು.

೪. ಕಲೆಗಾಗಿ ಕಲೆ ಎಂಬ ಶುದ್ಧ ಸಾಹಿತ್ಯಿಕ ತಾತ್ವಿಕತೆ ನನ್ನ ಪೀಳಿಗೆಗೆ ತುಂಬಾ ಹಳತಾದುದು. ಆದಾದ ನಂತರದಲ್ಲಿ ನಡೆದ ಸಾಹಿತ್ಯಿಕ ಚಳವಳಿಯ ಮುಂದುವರಿಕೆಯ ಭಾಗವಾಗಿ ಈ ವರ್ತಮಾನ ನಮ್ಮೆಲ್ಲರನ್ನು 'ಸಮಾಜಕ್ಕಾಗಿ ಕಲೆ' ಎಂಬ ಆಶಯದೆಡೆಗೆ ಕರೆದೊಯ್ದಿದೆ. ಕಲೆ ಅಥವಾ ಕಲಾತ್ಮಕತೆ ಸಮಾಜಕ್ಕಾಗಿ ಆದರೂ ಆ ಕಲಾತ್ಮಕತೆ ಸಾಮಾಜಿಕ ಒಡಲಿನಿಂದ ಮೂಡಿಬರಬೇಕಿದೆ. ಈ ನಿಟ್ಟಿನಲ್ಲಿ ನನ್ನ ಪೀಳಿಗೆಯ ಲೇಖಕರ ಮೇಲೆ ಜಾನಪದ ಅಧ್ಯಯನ, ಸಾಮಾಜಿಕ ಬದುಕಿನ ಗ್ರಹಿಕೆ ಹೆಚ್ಚು ಪ್ರಭಾವ ಬೀರಿವೆ. ದೇಸೀಯತೆ ಎಂಬುದೊಂದು ಕೇವಲ ನುಡಿಗಟ್ಟಿನ ಸ್ವರೂಪದಲ್ಲಷ್ಟೇ ಅಲ್ಲದೇ ಸಮಗ್ರತೆಯ ಸ್ವರೂಪದಲ್ಲಿ ವರ್ತಮಾನದ ಸಾಹಿತ್ಯಕ್ಕೆ ದಕ್ಕಬೇಕಿದೆ. ಹೆಚ್ಚು ಆರ್ದ್ರಗೊಂಡ ಮೂಲ ಬೇರೇ ವರ್ತಮಾನದ ಆಕ್ರಮಣಗಳಿಗೆ ಪ್ರತಿಭಟಿಸಲು, ಪರ್ಯಾಯ ರೂಪಿಸಲು ಸಶಕ್ತವಾದುದು ಎಂಬುದು ನನ್ನ ಗ್ರಹಿಕೆ. ಹಾಗೆಂದೇ ಸಾಮಾಜಿಕ ಒಡಲಿನಿಂದ ಒಡಮೂಡಿದ ಕಲಾತ್ಮಕತೆ ನಮ್ಮ ಪೀಳಿಗೆಯ ಸೃಜನಶೀಲ ಕಲಾತ್ಮಕತೆಯೂ ಆಗುವ ಸಾಧ್ಯತೆಗಾಗಿ, ಬೆರಗಿಗಾಗಿ ನಾನೂ ಧೇನಿಸುತ್ತಿದ್ದೇನೆ.

೫. ನಿಜ. ಆಧುನಿಕ ಸಾಹಿತ್ಯ ಆರಂಭದಿಂದಲೂ ಪಾಶ್ಚಾತ್ಯ ಸಾಹಿತ್ಯದ, ತತ್ವಜ್ಞಾನದ ಪ್ರಭಾವದೊಂದಿಗೆ ಮುಖಾಮುಖಿಯಾಗಿದೆ. ಬಿ.ಎಂ.ಶ್ರೀ ಯವರ ಇಂಗ್ಲಿಷ್ ಗೀತೆಗಳಿಂದ ವಾಸ್ತವವಾದದ ಸಾಹಿತ್ಯದವರೆಗೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಗುರುತಿಸಬಹುದಾಗಿದೆ. ನವ್ಯದ ಸಂದರ್ಭದಲ್ಲಿ ಬದುಕಿನ ಹತಾಶ ಗ್ರಹಿಕೆ, ಗೀಳು, ಅಸಂಗತವಾದಗಳು ಮೊದಲಾದ ತಾತ್ವಿಕತೆಯ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮುಖಾಮುಖಿಯಾಗಿವೆ. ಬಹುತೇಕ ಸಂದರ್ಭಗಳಲ್ಲಿ ಅಂತಹ ಎರವಲು ತತ್ವಜ್ಞಾನವನ್ನು ನಮ್ಮ ದೇಸೀ ಪರಿಕಲ್ಪನೆಯೊಂದಿಗೆ ಸಂವಾದಕ್ಕೆಳಸಿದ ಜಾಣ ಪ್ರಜ್ಞಾಪೂರ್ವಕತೆ ಗೋಚರವಾಗುತ್ತದೆ. ಆದರೆ ಈ ಹೊತ್ತು ಅಂತಹ ಪ್ರಭಾವಕಾರಿಯಾದ ಪಾಶ್ಚಾತ್ಯ ತತ್ವಜ್ಞಾನ ಮುಖಾಮುಖಿಯಾಗುವ ನೆಲೆಯಲ್ಲಿ ಕಂಡುಬರುತ್ತಿಲ್ಲ. ಎಡ್ವರ್ಡ್ ಸೈದ್, ಡೆರಿಡಾ, ಚೋಮ್‌ಸ್ಕಿ ಮೊದಲಾದವರ ಚಿಂತನಾ ಸರಣಿ ಇನ್ನೂ ಕನ್ನಡದ ಅಕಾಡೆಮಿಕ್ ವಲಯದಿಂದ ಮುಕ್ತವಾಗಿ ಸೃಜನಶೀಲ ವಲಯಕ್ಕೆ ಮುಖಾಮುಖಿಯಾಗಿಲ್ಲ. ಅಲ್ಲದೇ ಇದರೊಂದಿಗೆ ಜಾಗತಿಕ ಆರ್ಥಿಕ ಸಿದ್ಧಾಂತಗಳು, ಜಾಗತಿಕ ಮಾರುಕಟ್ಟೆಯ ವ್ಯವಹಾರಗಳು, ಜನಾಂಗ - ರಾಷ್ಟ್ರೀಯತೆಯನ್ನು ಕಲಸುಮೇಲೋಗರ ಮಾಡಿದ ಜಾಗತಿಕ ಯುದ್ಧ ರಾಜಕಾರಣ ಮೊದಲಾದ ನವ ತಾತ್ವಿಕತೆ ಈ ಹೊತ್ತಿನ ಸಾಹಿತ್ಯಕ್ಕೆ ಹೆಚ್ಚು ಮುಖಾಮುಖಿಯಾಗಿದೆ. ಈ ದಶಕದಲ್ಲಿ ಗುರುತಿಸಬಹುದಾದ ಈ ಬಹುಮುಖಿ ದಾಳಿಯನ್ನ ಸಾಹಿತ್ಯ, ತತ್ವ ಜ್ಞಾನದ ಪರಿಭಾಷೆಯಲ್ಲಿ ಅರ್ಥೈಸುವ, ಮುಖಾಮುಖಿಯಾಗುವ ತುರ್ತು ನಮ್ಮ ಸಾಹಿತ್ಯ ಸಂದರ್ಭಕ್ಕಿದೆ. ಅದರ ಉತ್ತರದಾಯಿತ್ವ ಹೊಣೆಗಾರಿಕೆ ನಮ್ಮ ಪೀಳಿಗೆಯ, ಹೊಸ ತಲೆಮಾರಿನ ಲೇಖಕರ ಮೆ ಹೆಚ್ಚಾಗಿಯೇ ಇದೆ ಎಂದು ನಾನು ಭಾವಿಸುತ್ತೇನೆ. ❑

ಕಾವ್ಯ

ಓ ನೀಲಗಾರರಕ್ಕೆ

ನೀಲಽತ್ತಹಳ್ಳಿಯ ಓ ನೀಲಗಾರರೇ ಽಽಽ
ನೀಲೀ ಕತ್ತಿನ ನೀಽಲ ಕಂಠಽನ ತೋರಿರೋ ಽಽಽ ॥ ಪ ॥

ಕಡುನೀಲಿ ತಾಮಽಸ ಮನಸೀನಂಗಳದಲ್ಲಿ
ತಿಳಿನೀಲಿ ಆಗಸ ತೆರೆದೂಕೊಂಬೋ ಹಾಂಗೆ
ತಿಳಿಗಟ್ಟ ಎಳೆಬೆಳಕು ತುಂಬೀ ತುಳುಕೊ ಹಾಂಗೆ
ತಿಳಿವೀನ ಹೊಳೆಗಣ್ಣ ನೀಲಽಮಣಿ ಹೊಳೆವಾಂಗೆ ॥ ೧ ॥

ಲೋಕಽದ ನೋವೀನ ವಿಷನೀಲಿ ಕಡಲಽನು
ಶಾಪಽದ ಕಹಿ ಶಾಮಕಂಠಽನೆ ಕುಡಿದನು
ಪಾಪಽದ ರಸನೆಲ್ಲ ಕಂಠಽದಿ ಸ್ತಂಭಿಸಿ
ಸರ್ವವಿನಾಶದ ಭೀತಿ ಕೊಂದೂ ಕೂಗಿದನೂ ॥ ೨ ॥

ಕಾಮ ಕತ್ತಽಲ ಸುಟ್ಟು ನೀಲೀ ಪ್ರೇಮಽವನುಟ್ಟು
ನೀಲಾ ಚೆಲುವನು ನಮ್ಮಾ ಗೌರಾಂಗಿಗೊಲಿದಽನು
ನೀಲಾಚಲದ ಆಚೆ ಕೈಲಾಽಸದೇಕಾಽಂತ
ಲೋಕಾವ ಕೆರಗಿಽಸೊ ಅರಿವೀನ ಚಂದ್ರಾಮ ॥ ೩ ॥

ಖಾಲೀಯಾಗಿದೆ ರಂಗ ನೀಲಾನಾಟ್ಯಽವನಾದೆ
ತೇಲೀಹೋಗಽಲಿ ಈ ಲೋಕಽದ ಸಾಲಸೋಲ
ಮೂಽಕವೇದನೆ ಏಽಕ ತಾರೀಯ ಮಿಡಿಯಿಽರಿ
ಸಾಕೂ ಹೋಗೋಣು ಮತ್ತ ಮೂಲಽದ ಲಯಕೇ ॥ ೪ ॥

○ ಬಿದರಹಳ್ಳಿ ನರಸಿಂಹಮೂರ್ತಿ

ಪೂರ್ಣದೃಷ್ಟಿಯ ಕುವೆಂಪು ಮತ್ತು ಅಲ್ಪದೃಷ್ಟಿಯ ನಾವು...

ಕುವೆಂಪು ಪದೇ ಪದೇ ತಮ್ಮ ಸಾಹಿತ್ಯ, ವೈಚಾರಿಕತೆ, ದರ್ಶನ ಇತ್ಯಾದಿಗಳ ಬಗ್ಗೆ ಸ್ವತಃ ತಾವೇ ಏಕೆ ಹೇಳಿಕೊಳ್ಳುತ್ತಾರೆ ಮತ್ತು ಬರೆದುಕೊಳ್ಳುತ್ತಾರೆ ಎಂಬ ಪ್ರಶ್ನೆಯನ್ನೂ ಒಳಗೊಂಡಂತೆ ಅವರ ಈ ಮಾತುಗಳು ಆಧುನಿಕ ಕನ್ನಡ ಸಂಸ್ಕೃತಿಯ ದೊಡ್ಡ ಬಿಕ್ಕಟ್ಟೊಂದನ್ನು ಸೂಚಿಸುತ್ತಿವೆಯೆಂದು ನಾನು ಭಾವಿಸುತ್ತೇನೆ. ಕುವೆಂಪು ಅವರನ್ನು ಕವಿಯನ್ನಾಗಿ ಲೇಖಕನನ್ನಾಗಿ ಮಾತ್ರ ಸ್ವೀಕರಿಸಿದ ಕನ್ನಡ ಸಂಸ್ಕೃತಿ, ಅವರನ್ನು ಓರ್ವ ಸಾಂಸ್ಕೃತಿಕ ನಾಯಕನನ್ನಾಗಿ ಏಕೆ ಸ್ವೀಕರಿಸದೇ ಹೋಯಿತು.

○ ಡಿ.ಎಸ್. ನಾಗಭೂಷಣ

'ನನ್ನ ಸಾಹಿತ್ಯದಲ್ಲಿ ಆಧ್ಯಾತ್ಮ ದೃಷ್ಟಿಯೇ ಸರ್ವವ್ಯಾಪಿ. ಅದು ನನ್ನ ಇಡೀ ಜೀವನವನ್ನೆಲ್ಲ ಆಕ್ರಮಿಸಿಕೊಂಡಿದೆ. ಸಾಹಿತ್ಯಕ್ಕಾಗಿ ಸಾಹಿತ್ಯ ರಚಿಸುವುದು ನನ್ನ ಉದ್ದೇಶವಲ್ಲ. ಆಧ್ಯಾತ್ಮ ಸಾಧನೆ ನನ್ನ ಜೀವನೋದ್ದೇಶ. ಈ ಸಾಧನೆಯ ಅನುಭವವೇ ಸಾಹಿತ್ಯವಾಗಿ ಹೊರಹೊಮ್ಮುತ್ತದೆ'[1] ಎಂದು ಸ್ಪಷ್ಟವಾಗಿ ಸಾರಿಕೊಂಡ ಸಾಹಿತಿಯೊಬ್ಬ ಅದೂ ಆ ಆಧ್ಯಾತ್ಮದ ಸಾಧ್ಯತೆ-ಬಾಧ್ಯತೆಗಳೆರಡಕ್ಕೂ ಪಾರಂಪರಿಕವಾಗಿ ಎರವಾಗಿದ್ದ ಸಾಮಾಜಿಕ ಹಿನ್ನೆಲೆಯಿಂದ ಬಂದ ಸಾಹಿತಿಯೊಬ್ಬ ಧರ್ಮ, ಜಾತಿ, ಕೋಮುವಾದಗಳ ಬಗ್ಗೆ ತಳೆದ ನಿಲುವುಗಳು ಮತ್ತು ವ್ಯಕ್ತಪಡಿಸಿದ ಪ್ರತಿಕ್ರಿಯೆಗಳು ಸಾಂಸ್ಕೃತಿಕ ಮಾತ್ರವಲ್ಲದೆ ಚಾರಿತ್ರಿಕವಾಗಿಯೂ ಮಹತ್ವದ್ದೆನಿಸಬಲ್ಲವು.

ಕುವೆಂಪು ಅವರ ಅಧ್ಯಾತ್ಮ ಸಾಧನೆಯ ಉತ್ತುಂಗ ಶಿಖರದ ಸಾಹಿತ್ಯಿಕ ಪ್ರತಿಬಿಂಬ ಎಂದು ಬಹುಜನರಿಂದ ಭಾವಿಸಲ್ಪಟ್ಟ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ರಚನೆಯ ಕಾಲದಲ್ಲಿ ಸ್ವತಃ ಕುವೆಂಪು ಅವರೇ ತಮ್ಮದೊಂದು ತರಗತಿಯಲ್ಲಿ 'I am not a mere artist. ಕಲೆ ನನ್ನ ಜೀವನದ ಗೌಣಪಕ್ಷ. Predominantly and primarily I am a philosopher. The concept of Rasa was never in my mind when I wrote Sri Ramayana Darashanam' ಎಂದು ಉದ್ಗರಿಸಿದುದನ್ನು ಅವರ ವಿದ್ಯಾರ್ಥಿಯೊಬ್ಬರು ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ.[2] ಅಂದರೆ ಕುವೆಂಪು ಪ್ರಕಾರ ತಮ್ಮ ಮಹಾಕಾವ್ಯ ಮೂಲತಃ ಒಂದು ದರ್ಶನ; ಅದು ಕಾವ್ಯವಾಗಿರುವುದು ಆನುಷಂಗಿಕ ಮಾತ್ರ. ಪ್ರಾಚೀನ ಭಾರತೀಯ ಕಾವ್ಯ ಪರಂಪರೆಯ ಒಟ್ಟಾರೆ ಆಶಯದ ದೃಷ್ಟಿಯಿಂದ ನೋಡಿದ್ದಾದರೆ ಇದೇನೂ ಹೊಸಮಾತಲ್ಲ. ಆದರೆ ಕುವೆಂಪು ಆಧುನಿಕ ಕಾಲದ ಕವಿ. ಅನೇಕ ಮತಾಚಾರಗಳಿಗೂ, ಮತವಿಮುಖವಾದ ವಿಚಾರಲಹರಿ ಗಳಿಗೂ, ತಾತ್ವಿಕ ಚರ್ಚೆಗಳಿಗೂ, ಪ್ರಾಚೀನ ಭಾರತ ಕಂಡರಿಯದಂತಹ ಜನತಾ ಹೋರಾಟಗಳಿಗೂ ವೇದಿಕೆಯಾಗಿ ನವನವೀನವಾದ - ಮುಂದೆ ಆಧುನಿಕವೆಂದು ಕರೆಯಲ್ಪಟ್ಟ - ಮನೋಭೂಮಿಕೆಯೊಂದು ಸಂಶ್ಲೇಷಣೆಗೊಳ್ಳುತ್ತಿದ್ದ ಭಾರತದ ಚರಿತ್ರೆಯ ಬಹುಮಹತ್ವದ ಸಂಕ್ರಮಣ ಕಾಲದಲ್ಲಿ ರೂಪುಗೊಂಡ ಕವಿ-ಬರಹಗಾರ. ಈ ದೃಷ್ಟಿಯಿಂದ ಅವರ ಅಧ್ಯಾತ್ಮ ಸಾಧನೆ, ಆ ಹಿನ್ನೆಲೆಯಲ್ಲಿ ರೂಪುಗೊಂಡ ಸಾಹಿತ್ಯ ಮತ್ತು ಅದರ ಒಲವು ನಿಲುವುಗಳು ಸಹಜ ಕುತೂಹಲಕ್ಕೆ ಎಡೆಮಾಡಿಕೊಡುವಂತಹವೇ ಆಗಿವೆ.

ನಿಜ, ಕವಿ ತನ್ನ ಬಗ್ಗೆ ತಾನೇ ಹೇಳಿಕೊಂಡ ಮಾತುಗಳನ್ನು ಅದರ ಮುಖಬೆಲೆಯಲ್ಲೇ ನಾವು ಸ್ವೀಕರಿಸಬೇಕಿಲ್ಲ. ಕುವೆಂಪು ಅವರ ವಿಷಯದಲ್ಲಿಯೂ ಇದು ಸತ್ಯವೇ. ಕನ್ನಡ ಸಂಸ್ಕೃತಿ ಕೂಡಾ ಇದುವರೆವಿಗೂ ಕುವೆಂಪು ಅವರನ್ನು ಮೂಲತಃ ಕವಿ-ಬರಹಗಾರ ಎಂದು ಕಂಡು ಮಾನ್ಯ ಮಾಡಿದೆಯೇ ಹೊರತು ತತ್ವ ದರ್ಶಕನಾಗಿ ಅಲ್ಲ-ಅವರ ವಿಶ್ವಮಾನವ ಗೀತೆ ಅಥವಾ ತತ್ವದ ಅಲ್ಲಲ್ಲಿ ಆಗಾಗ್ಗೆ ಪ್ರಾಯೋಜಿತವಾದ ಪ್ರಚಾರದ ಹೊರತಾಗಿಯೂ ಕುವೆಂಪು ಇದನ್ನು ಗಮನಿಸಿಯೂ ಇದ್ದಾರೆ. ತಮ್ಮ 'ನೆನಪಿನ ದೋಣಿಯಲ್ಲಿ' ಈ ಬಗ್ಗೆ ಅವರು ಹೀಗೆ ಅಲವತ್ತುಕೊಂಡಿದ್ದಾರೆ : 'ಸಾಧಾರಣವಾಗಿ ನನ್ನ ಕವಿ ಬದುಕಿನ ಸಾಹಿತ್ಯಭೂಮಿಕೆಯನ್ನೇ ನನ್ನ ಜೀವನ ಮೌಲ್ಯದ ಸರ್ವಸ್ವವೆಂಬಂತೆ ನನ್ನ ಜೀವನ ಚರಿತ್ರೆ ಬರೆದವರು ಮತ್ತು ನನ್ನ ಸಾಹಿತ್ಯದ ವಿಮರ್ಶೆ ಮಾಡಿರುವವರು ತಿಳಿದು ಬರೆದಿದ್ದಾರೆ ಮತ್ತು ಬರೆಯುತ್ತಿದ್ದಾರೆ. ನನ್ನ ಸಮಾಜ ಸುಧಾರಣಾ ಪಕ್ಷವನ್ನಾಗಲೀ, ನನ್ನ ವಿಚಾರವಾದಿ ಮನೋಧರ್ಮವನ್ನಾಗಲೀ ಅವರು ಅಷ್ಟೇನೂ ಗಂಭೀರವಾಗಿ ಪರಿಗಣನೆಗೆ ತಂದುಕೊಳ್ಳುತ್ತಿಲ್ಲ. ನನ್ನ ಕವಿ ಪ್ರತಿಭೆ ತನ್ನ ರಸಧರ್ಮಕ್ಕೆ

ಒಂದಿನಿತೂ ಭಂಗ ಬರದ ರೀತಿಯಲ್ಲಿ ವೈಚಾರಿಕ ಬುದ್ಧಿಯನ್ನೂ, ವೈಜ್ಞಾನಿಕ ದೃಷ್ಟಿಯನ್ನೂ ಸಮ ಪ್ರಮಾಣದಲ್ಲಿ ಅಳವಡಿಸಿಕೊಂಡಿರುವುದನ್ನು ಸಹೃದಯರು ಗುರುತಿಸಲಾಗದಿದ್ದರೆ ನನ್ನನ್ನು ಆಂಶಿಕವಾಗಿ ಮಾತ್ರ ಪರಿಶೀಲಿಸಿದಂತಾಗುತ್ತದೆ; ನನ್ನ ಪೂರ್ಣತ್ವಕ್ಕೆ ಚ್ಯುತಿ ಬರುತ್ತದೆ.'

ಕುವೆಂಪು ಪದೇ ಪದೇ ತಮ್ಮ ಸಾಹಿತ್ಯ, ವೈಚಾರಿಕತೆ, ದರ್ಶನ ಇತ್ಯಾದಿಗಳ ಬಗ್ಗೆ ಸ್ವತಃ ತಾವೇ ಏಕೆ ಹೇಳಿಕೊಳ್ಳುತ್ತಾರೆ ಮತ್ತು ಬರೆದುಕೊಳ್ಳುತ್ತಾರೆ ಎಂಬ ಪ್ರಶ್ನೆಯನ್ನೂ ಒಳಗೊಂಡಂತೆ ಅವರ ಈ ಮಾತುಗಳು ಆಧುನಿಕ ಕನ್ನಡ ಸಂಸ್ಕೃತಿಯ ದೊಡ್ಡ ಬಿಕ್ಕಟ್ಟೊಂದನ್ನು ಸೂಚಿಸುತ್ತಿವೆಯೆಂದು ನಾನು ಭಾವಿಸುತ್ತೇನೆ. ಕುವೆಂಪು ಅವರನ್ನು ಕವಿಯನ್ನಾಗಿ ಲೇಖಕನನ್ನಾಗಿ ಮಾತ್ರ ಸ್ವೀಕರಿಸಿದ ಕನ್ನಡ ಸಂಸ್ಕೃತಿ, ಅವರನ್ನು ಓರ್ವ ಸಾಂಸ್ಕೃತಿಕ ನಾಯಕನನ್ನಾಗಿ ಏಕೆ ಸ್ವೀಕರಿಸದೇ ಹೋಯಿತು. (ಈ ಪ್ರಶ್ನೆಯನ್ನು ಕುವೆಂಪು ವಿಶ್ವವಿದ್ಯಾಲಯದ ವಿಚಾರ ಸಂಕಿರಣದಲ್ಲಿ ಮುಂದಿಟ್ಟಾಗ ಕೆಲವು ಕುವೆಂಪು ಅಭಿಮಾನಿಗಳು ಪ್ರತಿಭಟಿಸಿದ್ದುಂಟು. ಅದಕ್ಕೆ ನನ್ನ ಒಂದು ಸಾಲಿನ ಪ್ರತಿಕ್ರಿಯೆ : ಕುವೆಂಪು ಅವರನ್ನು ಕನ್ನಡದ ಜನ ತನ್ನ ಸಾಂಸ್ಕೃತಿಕ ನಾಯಕನನ್ನಾಗಿ ನಿಜವಾಗಿಯೂ ಸ್ವೀಕರಿಸಿದ್ದರೆ ಕನ್ನಡ ಶಾಲೆಗಳು ಸದ್ಯದ ದುರ್ಗತಿಗೀಡಾ ಗುತ್ತಿರಲಿಲ್ಲ) ಎಂಬ ಪ್ರಶ್ನೆಗೆ ಸಂಬಂಧಿಸಿದ ಬಿಕ್ಕಟ್ಟಿದು - ಅದೂ ಕುವೆಂಪು ಕನ್ನಡ ಸಂಸ್ಕೃತಿಯು ಯಾವ ಭಾರತೀಯ ಸಂಸ್ಕೃತಿಯ ಒಂದು ಪ್ರಧಾನ ಧಾರೆಯಾಗಿದೆಯೋ, ಅದರ ಮುಖ್ಯ ಸ್ರೋತವೆನಿಸಿರುವ ಅಧ್ಯಾತ್ಮ ಸಾಧನೆಯ ಪರಮಗುರಿಯನ್ನು ಇಟ್ಟುಕೊಂಡಿದ್ದಾಗ್ಯೂ!

-೨-

ಈ ಬಿಕ್ಕಟ್ಟಿನ ಮೂಲ ಇರುವುದು ಕುವೆಂಪು ಪ್ರತಿಪಾದಿಸಿದ ಆಧ್ಯಾತ್ಮಿಕ ಸಾಧನೆಯ ಹಾದಿಯ ಚಾರಿತ್ರಿಕ ವಿಶಿಷ್ಟತೆಯಲ್ಲಿ ಎಂದು ನಾನು ಭಾವಿಸಿದ್ದೇನೆ. ಕುವೆಂಪು ಅವರ ಪ್ರಜ್ಞೆ ಅರಳಿದ್ದು ರಾಷ್ಟ್ರೀಯ ನವೋದಯದ ಸಂದರ್ಭದಲ್ಲಿ. ಆಗ ಅರಳಿದ ಅದೆಷ್ಟೋ ಪ್ರತಿಭೆಗಳ ಕಥೆಯೇ ಒಂದಾದರೆ ಕುವೆಂಪು ಅವರದ್ದೇ ಇನ್ನೊಂದು. ಕಾರಣ ಕುವೆಂಪು ಅವರ ಸಾಮಾಜಿಕ ಹಿನ್ನೆಲೆ. ಪಾರಂಪರಿಕವಾಗಿ ಸಂಸ್ಕೃತಿಯಲ್ಲಿ ಸಮಪಾಲು ನಿರಾಕರಿಸಲ್ಪಟ್ಟ ಜನಸಮುದಾಯದಿಂದ ಬಂದು, ಆ ಜನಸಮುದಾಯದ ಸ್ಮೃತಿಗಳೆಲ್ಲವನ್ನೂ ಹೊತ್ತು ತಂದು, ಧರ್ಮ-ವಿಜ್ಞಾನಗಳ ಸಂಬಂಧವನ್ನು ಒಂದು ಹೊಸ ವೈಚಾರಿಕ ಪಾತಳಿಯಲ್ಲಿ ಬೆಸೆಯಲು ಯತ್ನಿಸುತ್ತಿದ್ದ ರಾಷ್ಟ್ರೀಯ ನವೋದಯದ ಅಗ್ನಿದಿವ್ಯಕ್ಕೆ ಒಪ್ಪಿಸಿದ ಕುವೆಂಪು ಅವರು ಸಮಕಾಲೀನ ನವೋದಯದ ಧ್ವನಿಗಳಿಗಿಂತ ಭಿನ್ನವಾದ ಧ್ವನಿಯಲ್ಲಿ ಮಾತಾಡಬೇಕಾಗಿ ಬಂದದ್ದು ಸಹಜವೂ ಅನಿವಾರ್ಯವೂ ಆಗಿತ್ತು. ಹಾಗಾಗಿಯೇ ಅವರು ತಮ್ಮ ವ್ಯಕ್ತಿತ್ವ ವಿಕಾಸದ ಸಮಯದಲ್ಲಿ ತಮ್ಮ ಸುತ್ತಲಿದ್ದ ಸಾಂಪ್ರದಾಯಿಕ ವಾತಾವರಣದಲ್ಲಿ ಭಿನ್ನ ಧ್ವನಿಯಲ್ಲಿ ಮಾತನಾಡುವ ಆತ್ಮಬಲವನ್ನು ಸಂಘಟಿಸಿಕೊಂಡಿದ್ದು ಅವರ ಸಾಮಾಜಿಕ ಹಿನ್ನೆಲೆಯಲ್ಲಿದ್ದ ಜಾನಪದೀಯ ಸಾಂಸ್ಕೃತಿಕ ಮೌಲ್ಯಗಳಿಂದಲ್ಲ, ಬದಲಾಗಿ ಶ್ರೀ ರಾಮಕೃಷ್ಣ ಪರಮಹಂಸ ಪ್ರಣೀತವಾದ ವಿವೇಕಾನಂದರ ಶಿಷ್ಟ ಧೀರವಾಣಿಯಿಂದ.

ಈ ಸಂಬಂಧವಾದ ವಿಚಿತ್ರವೂ, ಸಾಂಕೇತಿಕವೂ ಆದ ಒಂದು ಚಾರಿತ್ರಿಕ ವಿವರವೆಂದರೆ, ಕುವೆಂಪು ಅವರನ್ನು ಅವರ ವಿದ್ಯಾರ್ಥಿ ದೆಸೆಯಲ್ಲಿ ಪಾಲಿಸಿ ಪೋಷಿಸಿದ ಶ್ರೀ ರಾಮಕೃಷ್ಣಾಶ್ರಮಕ್ಕೆ ಅವರ ಮೊದಲ ಪರಿಚಯವಾದದ್ದು ಶ್ರೀ ರಾಮಕೃಷ್ಣರ ಜನ್ಮ ದಿನೋತ್ಸವದ ಅಂಗವಾಗಿ 'That caste system is a hindrance to progress of India' ಎಂಬ ವಿಷಯ ಕುರಿತು, ಏರ್ಪಾಡಾಗಿದ್ದ ಚರ್ಚಾಸ್ಪರ್ಧೆಯ ಆರಂಭಿಕ ಭಾಷಣಕಾರರಾಗಿ ಅವರು ವಿವೇಕಾನಂದರ ವಿಚಾರಗಳನ್ನು ಬಳಸಿಕೊಂಡು ಜಾತಿಪದ್ಧತಿಯ ವಿರುದ್ಧ ಮಾಡಿದ ವೈಚಾರಿಕ ದಾಳಿಯ ಮೂಲಕ ಎಂಬುದು! ಈ ದಾಳಿ ಆರಂಭ ಮಾತ್ರವಾಗಿತ್ತು. ತಮ್ಮ ಸಾಹಿತ್ಯ-ಜೀವನಗಳುದ್ದಕ್ಕೂ ಕುವೆಂಪು ಈ ದಾಳಿಯನ್ನು ಮುಂದುವರಿಸಿದರು ಮಾತ್ರವಲ್ಲ, ಬೇರೆ ಬೇರೆ ನೆಲೆಗಳಿಗೊಯ್ದು ಈ ದಾಳಿಗೊಂದು ವೈಚಾರಿಕ ಪ್ರಭೆಯನ್ನು, ಸಾಹಿತ್ಯಿಕ ಸೌಂದರ್ಯವನ್ನೂ, ಅಧ್ಯಾತ್ಮಿಕ ಘನತೆಯನ್ನೂ ಒದಗಿಸಿದರು.

ಇದು ಸಾಧ್ಯವಾದುದು ಕುವೆಂಪು ತಾವು ಬಹು ಎಚ್ಚರದಿಂದ ಜಾತ್ಯಾತೀತರಾಗಿದ್ದುಕೊಂಡು ಭಾರತೀಯ ಪರಂಪರೆಯನ್ನು ಜಾತ್ಯಾತೀತ ಕಣ್ಣುಗಳಿಂದ ನೋಡಬಲ್ಲವರಾಗಿದ್ದುದರಿಂದ. ಹಾಗಾಗಿಯೇ ಕುವೆಂಪು ಅವರಿಗೆ ತಮ್ಮ ಶೂದ್ರ ಹಿನ್ನೆಲೆ ಒಂದು ಚಾರಿತ್ರಿಕ ಆಕಸ್ಮಿಕವಾಗಿ ಮಾತ್ರ ಕಂಡು ಭಾರತೀಯ ಶಿಷ್ಟ ಪರಂಪರೆಯೊಂದಿಗೆ ಪರಕೀಯತೆಯನ್ನು ಅನುಭವಿಸುವ ನೈಜ್ಯಾನು ಸಂಧಾನವನ್ನು ಸೃಷ್ಟಿಸಲಿಲ್ಲ, ವೇದೋಪನಿಷತ್ತುಗಳನ್ನೊಳಗೊಂಡ ಸಂಸ್ಕೃತ ಪರಂಪರೆಯನ್ನು ಯಾರದೋ ಅನ್ಯರ ಸ್ವತ್ತೆಂದು ಭಾವಿಸದೆ ಅದಕ್ಕೆ ತಾನೂ ಸಹಜ ಉತ್ತರಾಧಿಕಾರಿ ಎಂಬ ಆತ್ಮವಿಶ್ವಾಸ ದೊಡನೆ ಅವರು ಅದರೊಡನೆ ಸೃಜನಶೀಲ ಅನುಸಂಧಾನ ನಡೆಸಿದರು. ಪೂರ್ಣ ದೃಷ್ಟಿಯನ್ನು ಅನಾವರಣ ಮಾಡಿದ ಈ ಮಹಾ ಅನುಸಂಧಾನವೇ ಕುವೆಂಪು ಎಂಬ ಇಪ್ಪತ್ತನೇ ಶತಮಾನದ ಕನ್ನಡದ ವಿಶಿಷ್ಟ ಸಾಮಾಜಿಕ - ಸಾಂಸ್ಕೃತಿಕ ವಿದ್ಯಮಾನ. ಈ ಮಹಾವಿದ್ಯಮಾನವು ಬಹುಬೇಗನೆ ಆರಾಧನೆಯ ಸುಲಭ ದಾರಿ ಹಾಗೂ ಅನುಮಾನದ ಜಾಣ ದಾರಿಗಳ ದ್ವಂದ್ವಕ್ಕೆ ಸಿಕ್ಕು ತನ್ನ ಕೇಂದ್ರಾಕರ್ಷಣೆಯನ್ನು ಕಳೆದುಕೊಂಡದ್ದು ಕನ್ನಡ ಸಂಸ್ಕೃತಿಯ ದುರಂತವಾಗಿದೆ. ಇದು ಅಲ್ಪ ದೃಷ್ಟಿಗೆ ಸಿಕ್ಕಿದ ಪೂರ್ಣ ದೃಷ್ಟಿಯ ದುರಂತ.



ಕುವೆಂಪು ಧರ್ಮವನ್ನು ಅಧ್ಯಾತ್ಮವೆಂದು ಕರೆದರು. ಧರ್ಮದ ಜೊತೆ ಬೆಳೆದಿದ್ದ ಜಾತಿಪದ್ಧತಿ ಹಾಗೂ ಇತರ ಮೌಢ್ಯಾಚಾರಗಳನ್ನು ಅವರು ಮತಾಚಾರಗಳೆಂದು ಕರೆದರು. ಆ ಮತಾಚಾರಗಳನ್ನು ಪೋಷಿಸುವಂತಿದ್ದ ದೇವರು, ಗುರು, ಪುರೋಹಿತಶಾಹಿಯನ್ನು ಅವರು 'ಹೊಟ್ಟು' ಎಂದು ಕರೆದರು.

-೩-

ಕುವೆಂಪು ಧರ್ಮವನ್ನು ಅಧ್ಯಾತ್ಮವೆಂದು ಕರೆದರು. ಧರ್ಮದ ಜೊತೆ ಬೆಳೆದಿದ್ದ ಜಾತಿಪದ್ಧತಿ ಹಾಗೂ ಇತರ ಮೌಢ್ಯಾಚಾರಗಳನ್ನು ಅವರು ಮತಾಚಾರಗಳೆಂದು ಕರೆದರು. ಆ ಮತಾಚಾರಗಳನ್ನು ಪೋಷಿಸುವಂತಿದ್ದ ದೇವರು, ಗುರು, ಪುರೋಹಿತಶಾಹಿಯನ್ನು ಅವರು 'ಹೊಟ್ಟು' ಎಂದು ಕರೆದರು. ಅಧ್ಯಾತ್ಮ ಸಾಧನೆ ಎಲ್ಲ ಜೀವಿಗಳ ಆ ಜನ್ಮ ಸಿದ್ಧ ಹಕ್ಕು; ಅದನ್ನು ನಿರಾಕರಿಸುವ ಎಲ್ಲ ನಂಬಿಕೆ, ಆಚಾರ-ವಿಚಾರಗಳನ್ನು ಅವರು ಧರ್ಮ ಬಾಹಿರವೆಂದರು. ಅಷ್ಟೇ ಅಲ್ಲ, ವೇದಗಳು ಕಾಲಾತೀತವಲ್ಲ; ಕಾಲಕಾಲಕ್ಕೆ ವಿಜ್ಞಾನ ಹಾಗೂ ಇತರ ಜ್ಞಾನಶಾಸ್ತ್ರಗಳು ಬಿಚ್ಚಿಡುವ ಸತ್ಯಗಳ ಬೆಳಕಿನಲ್ಲಿ ವೇದಗಳೂ ಪರಿಷ್ಕಾರಗೊಳ್ಳಬೇಕು ಎಂದರು.

ಆ ಕಾಲದಲ್ಲಿ ಹೀಗೆನ್ನಲು ತಮಗೆ ಶಕ್ತಿ ನೀಡಿದ 'ಶ್ರೀ ರಾಮಕೃಷ್ಣ ಚರಿತಾಮೃತ'ದ ಕನ್ನಡ ಅನುವಾದಕ್ಕೆ 'ಶ್ರೀ ರಾಮಕೃಷ್ಣ ವಚನವೇದ' ಎಂದು ಹೆಸರು ಸೂಚಿಸಿ ತಮ್ಮ ವಾದವನ್ನು ಹೀಗೆ ಸಮರ್ಥಿಸಿಕೊಂಡರು : "ಈ 'ವಚನ ವೇದ' ವೇದಗಳೂ ಮಾಡದ ಕೆಲಸವನ್ನು ಮಾಡುತ್ತದೆ. ಈ 'ವಚನ ವೇದ' ವೇದಗಳು ಹೊಗಲಾರದ, ಬಹುಶಃ ಕೆಲವರ ದೃಷ್ಟಿಯಲ್ಲಿ ಹೊಗಬಾರದ ಮೂಲೆ ಮೂಲೆಗಳನ್ನು ಪ್ರವೇಶಿಸಿ ಜ್ಯೋತಿರ್ದಾನ ಮಾಡುತ್ತದೆ. ಈ 'ವಚನ ವೇದ' ಅಂಧಶ್ರದ್ಧೆಯ ಮೂಢಾಚಾರದ ಜನಜಂಗುಳಿಯನ್ನು ಪುರೋಹಿತ ವರ್ಗದ ನಖ ಪಂಜರದಿಂದ ಪಾರುಮಾಡಿ, ಅವರ ಧರ್ಮದಾಸ್ಯ, ದೈನ್ಯಗಳನ್ನು ಪರಿಹರಿಸಿ ಅವರನ್ನು ಮನುಷ್ಯರನ್ನಾಗಿ ಮಾಡುತ್ತದೆ. ಈ 'ವಚನ ವೇದ' ಪ್ರಜ್ಞಾಪರಾಧಜನ್ಯವಾದ ಭಯಭೀತಿಗಳಿಂದಲೂ ನಮ್ಮನ್ನು ದ್ಧರಿಸಿ ಉದಾರಧೀರರನ್ನಾಗಿ ಮಾಡಿ ಸಂರಕ್ಷಿಸುತ್ತದೆ; ಜೀವನ್ಮುಕ್ತಿಗೆ ನಡೆಸುತ್ತದೆ". ಇದೇ ಸಂದರ್ಭದಲ್ಲಿ ಅವರು 'ಸೆಕ್ಯುಲರ್ ಸ್ಟೇಟ್' ಎಂಬುದರ ಅರ್ಥ ವ್ಯಾಖ್ಯಾನವನ್ನು ಮಾಡುತ್ತಾರೆ. ಈ ವ್ಯಾಖ್ಯಾನದಲ್ಲಿಯೇ ಕುವೆಂಪು ಅವರ ಧಾರ್ಮಿಕ ದೃಷ್ಟಿಕೋನದ ವಿಶಿಷ್ಟತೆಯೂ ವಿದಿತವಾಗುತ್ತದೆ:

"ಸ್ವತಂತ್ರ ಭಾರತವನ್ನು ನಮ್ಮ ರಾಜ್ಯಾಂಗ 'ಸೆಕ್ಯುಲರ್ ರಾಜ್ಯ' ಎಂದು ಕರೆದಿದೆ. ಸೆಕ್ಯುಲರ್ ಅಂದರೆ ಧಾರ್ಮಿಕ ವಲ್ಲದ, ಮತದೂರವಾದ, ಲೌಕಿಕ, ಲೋಕಾಯತ ಎಂದು

ಅರ್ಥವಾಗುತ್ತದೆ. ಯಾವ ಭರತಖಂಡವನ್ನು ಆಧ್ಯಾತ್ಮಿಕ ದೃಷ್ಟಿಯಿಂದ ಪುಣ್ಯ ಭೂಮಿಯೆಂದು ಕರೆದರೋ; ಯಾವುದರ ವಿಶೇಷ ಪ್ರಜ್ಞೆ, ವಿಶೇಷ ಪ್ರತಿಭೆ, ವಿಶಿಷ್ಟ ಕರ್ತವ್ಯ, ಸ್ವಭಾವ, ಸ್ವಧರ್ಮ ಸರ್ವವೂ ಧಾರ್ಮಿಕದಲ್ಲಿ ಮಾತ್ರ ನಿಷ್ಠವಾಗಿದೆ ಎಂದು ಸ್ವಾಮಿ ವಿವೇಕಾನಂದರು ಸಾರಿದರೋ, ಯಾವುದರ ಸ್ವಾತಂತ್ರ್ಯಕ್ಕಾಗಿ ದುಡಿದು ಮಡಿದ ಸ್ವಾತಂತ್ರ್ಯ ಶಿಲ್ಪಿ ಮಹಾತ್ಮಾ ಗಾಂಧೀಜಿಯ ನಡೆ ನುಡಿ ಉಸಿರು ಎಲ್ಲವೂ ಭಗವದಭಿಮುಖವಾದ ದಿವ್ಯಧರ್ಮದಲ್ಲಿಯೇ ಸಮರ್ಪಿತವಾಗಿದ್ದಿತೋ ಆ ಭೂಭಾಗವನ್ನು 'ಧಾರ್ಮಿಕವಲ್ಲದ', 'ಮತದೂರವಾದ', 'ಲೌಕಿಕ', 'ಲೋಕಾಯತ', 'ಸೆಕ್ಯುಲರ್' ಎಂದು ಕರೆದರೆ ಏನರ್ಥ ವಾಗುತ್ತದೆ? ಹಿಮಾಲಯವನ್ನಾದರೂ ಎತ್ತಿ ಬೇರೆ ದಿಕ್ಕಿಗೆ ಸಾಗಿಸಬಹುದೋ ಏನೋ? ಆದರೆ ಭಾರತೀಯ ಸಂಸ್ಕೃತಿಯ ಈ ಆಧ್ಯಾತ್ಮಿಕ ಲಕ್ಷಣವನ್ನು ಮಾತ್ರ ಮಾರ್ಪಡಿಸಲು ಎಂದೆಂದಿಗೂ ಸಾಧ್ಯವಿಲ್ಲ. ಹಾಗೆ ಮಾಡುವುದೂ ರಾಜ್ಯಾಂಗದ ಉದ್ದೇಶವಲ್ಲ. ರಾಜ್ಯಾಂಗ 'ಸೆಕ್ಯುಲರ್' ಎಂದು ಕರೆದುದರ ಉದ್ದೇಶ ಆಡಳಿತದ ಸಮನ್ವಯ ದೃಷ್ಟಿಯನ್ನೂ ಮತೀಯ ನಿಷ್ಪಕ್ಷಪಾತವನ್ನೂ, ಎಲ್ಲ ಮತದವರಿಗೂ ಸರ್ವ ಸಮಾನವಾದ ಹಕ್ಕು ಬಾಧ್ಯತೆ, ಹೊರೆ ಹೊಣೆ ಉಂಟೆಂಬುದನ್ನೂ ಸಾರುವುದೇ ವಿನಾ, ಯಾವ ಆಸ್ತಿಕ ನಾಸ್ತಿಕ ಸಿದ್ಧಾಂತಗಳನ್ನು ಸಂಸ್ಥಾಪಿಸುವುದೂ ಅಲ್ಲ, ಉತ್ಪಾಟಿಸುವುದೂ ಅಲ್ಲ.

ಅಂದರೆ ನಮ್ಮ ರಾಷ್ಟ್ರದ ಆಡಳಿತದ ಈ ಲಕ್ಷಣವನ್ನು ಸರಿಯಾದ ಮಾತಿನಲ್ಲಿ ವರ್ಣಿಸುವುದಾದರೆ, ಸಮನ್ವಯ ರಾಷ್ಟ್ರ ಎಂದು ಕರೆಯಬೇಕಾಗುತ್ತದೆ. ಅಂತಹ ಸಮನ್ವಯ ರಾಷ್ಟ್ರಕ್ಕೆ ಅತ್ಯಂತ ಅವಶ್ಯವಾಗಿರುವ ಸರ್ವಧರ್ಮ ಸಮನ್ವಯ ದೃಷ್ಟಿಯನ್ನು ಈ ಯುಗದಲ್ಲಿ ಸ್ವಾತಂತ್ರ್ಯೋದಯಕ್ಕೆ ಬಹು ಪೂರ್ವದಲ್ಲಿಯೇ ಸ್ಪಷ್ಟವಾಗಿ ಅನುಭವಪೂರ್ವಕವಾಗಿ ಸರ್ವಜನ ಸುಲಭ ಗ್ರಾಹ್ಯವಾಗಿ ಪ್ರಭಾವಯುತವಾಗಿ ಕ್ರಾಂತಿಪೂರ್ಣವಾದರೂ ಸಂಪ್ರದಾಯ ಅವಿರುದ್ಧವೆಂಬಂತೆ ಲೋಕ ಸಮಸ್ತಕ್ಕೂ ತೋರಿ ಸಾರಿದವರೆಂದರೆ ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರು. ಅವರ ಈ 'ವಚನ ವೇದ' ನಿಜವಾಗಿಯೂ ಸಮನ್ವಯ ದೃಷ್ಟಿಯನ್ನು ಸರ್ವ ಪ್ರಜೆಗಳಿಗೂ ಸುಲಭವಾಗಿ ಹೃದಯಸ್ಪರ್ಶಿಯಾಗಿ ಬೋಧಿಸುವ ನವೀನ ವೇದ...''

ಇನ್ನೂ ಮುಖ್ಯವೆಂದರೆ ಕುವೆಂಪು ಅವರು ಉಪನಿಷತ್ತುಗಳು ವೇದಗಳ ವಿಸ್ತರಣೆ ಎಂಬ ನಂಬಿಕೆ ಆಧಾರರಹಿತ, ವೇದಗಳು ಮೂಲತಃ ಲೋಕಾರ್ಥವಾದ ಪ್ರಾರ್ಥನೆಗಳಾದರೆ ಉಪನಿಷತ್ತುಗಳು ಅವುಗಳಲ್ಲಿರುವುದೆಲ್ಲ ಪರಮ ಸತ್ಯ ಅಥವಾ ಸತ್ಯದ ಪರಮಾವಧಿಗಳೇನಲ್ಲ; ಪರಮಾರ್ಥದ ಅನ್ವೇಷಣೆಯಲ್ಲಿ ತೊಡಗಿರುವಂತಹವು; ಮನುಷ್ಯರ ಇತರ ಕೃತಿಗಳಲ್ಲಿರುವಂತೆ ವೇದೋಪನಿಷತ್ತುಗಳಲ್ಲಿಯೂ ಮೂಢಭಾವನೆಗಳೂ ತಪ್ಪು ಭಾವನೆಗಳೂ ಇಲ್ಲದೇ ಇಲ್ಲವೆಂದು ಘೋಷಿಸಿ ಇಂತಹ ಮೂಢಭಾವನೆಗಳಿಲ್ಲದುವೆಂದು ತಾವು ನಂಬಿದ ಉಪನಿಷತ್ ವಾಕ್ಯಗಳನ್ನು 'ಋಷಿವಾಣಿ' ಎಂಬ ಶೀರ್ಷಿಕೆಯಡಿ ಆಯ್ದು ಪ್ರಕಟಿಸಿ, ಶ್ರುತಿಗಳು ಅಪೌರುಷೇಯ ಎಂಬ ನಂಬಿಕೆಗೆ ಮರ್ಮಾಘಾತವನ್ನೇ ಉಂಟುಮಾಡಿದರು. ತಮ್ಮ ಈ 'ಋಷಿವಾಣಿ'ಯನ್ನು ಪ್ರಕಟಿಸಲು ಶ್ರೀ ರಾಮಕೃಷ್ಣಾಶ್ರಮಕ್ಕೆ ಕಷ್ಟವಾಗಬಹುದೆಂದು ತೋರಿದಾಗ, ಅದನ್ನು ಖಾಸಗಿ ಪ್ರಕಾಶನವೊಂದರ ಹೆಸರಿನಲ್ಲಿ

ಕುವೆಂಪು ಅವರ ವೈಚಾರಿಕ ದಾಳಿ ಬೆಂಕಿಯಂತೆ ಧರ್ಮದ ಕಿಲುಬನ್ನು ಸುಟ್ಟು ಹಾಕಿದರೆ ಅವರ ಕಾವ್ಯ ನಾಟಕಗಳು ಸುಟ್ಟುಳಿದ ಧರ್ಮದ ಹೃದಯಭಾಗವಾದ ಆಧ್ಯಾತ್ಮಿಕತೆಯ ಸೌಂದರ್ಯವನ್ನು ಬೆಳಗಿಸುವ ಬೆಳಕಿನಂತಿದೆ.

ಪ್ರಕಟಿಸಿದರು. ಹೀಗೆ ಶ್ರೀ ರಾಮಕೃಷ್ಣ ಪರಮಹಂಸರ ವಿಚಾರದ ಮೊಟ್ಟೆಗಳು ಕುವೆಂಪು ಅವರ ವ್ಯಕ್ತಿತ್ವದ ಕಾವಿನಲ್ಲಿ ಶ್ರೀ ರಾಮಕೃಷ್ಣಾಶ್ರಮದ ಗೋಡೆಗಳನ್ನೇ ಅಲುಗಾಡಿಸುವಂತಹ ರೆಕ್ಕೆಗಳನ್ನುಳ್ಳ ಮರಿಗಳಿಗೆ ಕಾರಣವಾಗತೊಡಗಿದವು. ಮುಂದೆ ಕಾಲಾನುಕ್ರಮದಲ್ಲಿ ಇದೇ ಮರಿಗಳು ದೊಡ್ಡವಾಗಿ ಎಲ್ಲ ತತ್ವದೆಲ್ಲೆ ಮೀರಿ ನಿರ್ದಿಗಂತವಾಗಿ ಏರಿ ಅನಂತ ಆಕಾಶದಲ್ಲಿ ರೆಕ್ಕೆ ಬಡಿಯುತ್ತ ವಿಶ್ವ ಮಾನವ ಗೀತೆಯನ್ನು ವಿನ್ಯಾಸಗೊಳಿಸಿದವು. ಇದರ ಪರಿಣಾಮ ಎಷ್ಟು ಕ್ರಾಂತಿಕಾರಕವಾದುದೆಂದರೆ ಸನಾತನ ಹಿಂದೂಧರ್ಮದ ಅನೇಕ ಪ್ರಸ್ಥಾನಗಳಿಗೆ ಹೊಸ ವ್ಯಾಖ್ಯಾನ ಬರೆದಿದ್ದ ಕುವೆಂಪು ತಾವು ಕೊಟ್ಟ ಕೊನೆಯ ಪತ್ರಿಕಾ ಸಂದರ್ಶನದಲ್ಲಿ ಹೇಳಿದ್ದು ಹೀಗೆ :

''...ಹಾಗೆ ನೋಡಿದರೆ, ನಾನು ಹಿಂದೂ ಅಂತ ಹೇಳಿಕೊಳ್ಳೋದೇ ಇಲ್ಲ. ನಾನು ಹಿಂದೂ ಅಲ್ಲ. ಹಿಂದೂ ಅಂದರೆ ಗಂಗಾ-ಗಾಯತ್ರಿ-ಗೋ- ಇವು ಪವಿತ್ರ ಅಂತ ಭಾವಿಸೋದು. ಗಂಗಾ ಯಾಕೆ ಪವಿತ್ರ? ನಮ್ಮ ಮಲೆನಾಡಿನ ತುಂಗಾ ಕೂಡ ಪವಿತ್ರವಲ್ಲವೇ? ಗಾಯತ್ರಿ ಒಂದು ಪ್ರಾರ್ಥನೆ ಆದರೆ ನಾನು ಹಾಡೋ ಪದ್ಯಾನೂ ಗಾಯತ್ರೀನೇ. ಇನ್ನು ಗೋವು ಕಡಿಬಾರದು ಅನ್ನೋದಾದ್ರೆ ಅದೊಂದೇ ಪ್ರಾಣೀನಾ? ಬೇರೆ ಪ್ರಾಣಿಗಳೇನು ಪಾಪ ಮಾಡಿದಾವೆ? ಅವೂ ಇಷ್ಟೇ ಮುಖ್ಯ. ಪೂಜೆ, ಪುನಸ್ಕಾರ, ವಿಧಿ ಇಂಥವುಗಳನ್ನು ಮಾಡೋರು ಹಿಂದುಗಳಾದರೆ, ಇದಾವುದನ್ನೂ ನಾನು ಮಾಡೋದಿಲ್ಲ. ನೀವು ಹೇಳುವ ಹಿಂದುವಿನ ಯಾವ ಲಕ್ಷಣಗಳೂ ನನ್ನಲ್ಲಿಲ್ಲ. ಹಾಗಾದರೆ ನಾನೆಂಥ ಹಿಂದು? ಎಂಥ ದೊಡ್ಡ ಸಾಹಿತೀನೇ ಆಗಿರಲಿ - ಅವನು ಅನುಷ್ಠಾನಕ್ಕೆ ತರೋದಕ್ಕೆ ಆಗದೇ ಇದ್ರೂ ಚಿಂತೆ ಇಲ್ಲ - ವಿಶ್ವಮಾನವತ್ವವನ್ನು ಭಾವದ ಮಟ್ಟದಲ್ಲಾದರೂ ಒಪ್ಪಿಕೊಳ್ಳದೇ ಹೋದರೆ, ಅಂಥವನನ್ನೂ ಮೂರನೇ ದರ್ಜೆ ಅಥವಾ ನಾಲ್ಕನೇ ದರ್ಜೆಯವನಂತಲೇ ತಿಳಕೊಳ್ಳಬೇಕು''[5]

-೪-

ಕುವೆಂಪು ಇದೆಲ್ಲವನ್ನೂ, ಧರ್ಮವನ್ನು ನಿರಾಕರಿಸದೆ ತಾವು ಓದಿಕೊಂಡ ವಿಜ್ಞಾನವೂ ಸೇರಿದಂತೆ ಇಪ್ಪತ್ತನೇ ಶತಮಾನದ ನವನವೀನ ಜ್ಞಾನಶಾಸ್ತ್ರಗಳಲ್ಲಿನ ಹೊಸ ಸಂಶೋಧನೆಗಳ, ವಿಚಾರ ಲಹರಿಗಳ ಅನುಸಂಧಾನದೊಂದಿಗೆ, ಅದನ್ನು ಹೊಸ ವ್ಯಾಖ್ಯಾನಕ್ಕೆ ಒಳಪಡಿಸತೊಡಗಿದ್ದರು. ಇದನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಲು ಅವರಿಗೆ ಒದಗಿಬಂದಿದ್ದು ಅವರ ಸೃಜನಶೀಲ ಪ್ರತಿಭೆ. ಈ ಮುನ್ನ ವಿವರಿಸಿದ ಅವರ ವೈಚಾರಿಕ ದಾಳಿ ಬೆಂಕಿಯಂತೆ ಧರ್ಮದ ಕಿಲುಬನ್ನೂ ಸುಟ್ಟು ಹಾಕಿದರೆ ಅವರ ಕಾವ್ಯ ನಾಟಕಗಳು ಸುಟ್ಟುಳಿದ ಧರ್ಮದ ಹೃದಯಭಾಗವಾದ ಆಧ್ಯಾತ್ಮಿಕತೆಯ ಸೌಂದರ್ಯವನ್ನು ಬೆಳಗಿಸುವ ಬೆಳಕಿನಂತಿವೆ.

ಕುವೆಂಪು ರಾಷ್ಟ್ರೀಯ ನವೋದಯದ ಉತ್ಪನ್ನವೆಂದು ಈ ಹಿಂದೆಯೇ ಸೂಚಿಸಿದೆ. ಈ ರಾಷ್ಟ್ರೀಯ ನವೋದಯದ ಒಡಲಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಜ್ಞಾನಯೋಗದ



ಬೆಂಕಿಯಿದ್ದರೆ ಗಾಂಧೀಜಿಯವರ ಕರ್ಮಯೋಗದ ಬೆಳಕೂ ಇತ್ತು. ಇವೆರಡರಿಂದಲೂ ಪ್ರಭಾವಿತರಾಗಿದ್ದ ಕುವೆಂಪು ವಿದ್ಯಾರ್ಥಿ ದೆಸೆಯಲ್ಲಿ ಬೆಳಗಾಂ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿ ಗಾಂಧೀಜಿ ದರ್ಶನ ಮಾಡಿಕೊಂಡು ಬಂದಿದ್ದರು. ಸ್ವಾತಂತ್ರ್ಯ ಹೋರಾಟದಿಂದ ಉದ್ದೀಪ್ತವಾಗಿ ಅನೇಕ ಕ್ರಾಂತಿ ಗೀತೆಗಳನ್ನು ರಚಿಸಿದ್ದರು. ೧೯೩೧ರ ಹೊತ್ತಿಗೇ

ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಭಾರ

ಎಂದು ಆರಂಭವಾಗಿ

ಇಂದೊ ನಾಳೆಯೋ ದಾಸನೀಶನಾಗಲೇ ಬೇಕು
ಎಂದಿಂದೆ ಎದ್ದೇಳಿ; ನಾಳೆಯನು ಹೋಕು
ನಾವೆ ದೇವತೆಗಳೈ! ಭಾರತವೇ ಸ್ವರ್ಗವೈ!
ಭಾರತಾಂಬೆಯೆ ನಮಗೆ ದೇವಿಯೈ ಜನನಿ

ಎಂದು ಮುಗಿಯುವ, ದೈವ ಕಲ್ಪನೆಯನ್ನೂ ಭಾರತಾಂಬೆ ಎಂಬ ಹೊಸಮಂತ್ರದಿಂದ ಮರ್ತ್ಯಗೊಳಿಸಿ ಧರ್ಮವನ್ನೂ ಪ್ರಜಾಸತ್ತೆಯೆಂಬ ಹೊಸ ತಂತ್ರದಿಂದ ಲೌಕಿಕಗೊಳಿಸುವ; ಮತ್ತು ೧೯೩೪ರ ಹೊತ್ತಿಗೇ

ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು
ಎಂದೊ ಯಮ ಬರೆದಿಟ್ಟುದಿಂದೆಮಗೆ ಕಟ್ಟೇನು
ನಿನ್ನೆದೆಯ ಋಷಿ ! ಮನು ನಿನಗೆ ನೀನು

...........।

ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ
ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ
ಕಾಲಕ್ಕೆ ತಕ್ಕಂತೆ ದೇಶಕ್ಕೆ ತಕ್ಕಂತೆ
ನಮ್ಮ ಹೃದಯವೇ ನಮಗೆ ಶ್ರೀಧರ್ಮ ಸೂತ್ರ

ವೆಂದು ಹೊಸ ಧರ್ಮಸೂತ್ರವನ್ನೇ ಘೋಷಿಸಿ ಲೌಕಿಕ ಜಾತಿಪದ್ಧತಿಗೆ ಧಾರ್ಮಿಕ ಒತ್ತಾಸೆಯಾಗಿ ನಿಂತಂತಿದ್ದ ವರ್ಣಾಶ್ರಮ ಧರ್ಮದ ಅಡಿಗಲ್ಲನ್ನೇ ಸಡಿಲಿಸಿದರು.

ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ
ಓ ಬನ್ನಿ ಸೋದರರೆ ಬೇಗ ಬನ್ನಿ

ಎಂದು ಕರೆಕೊಡುವ ಮೂಲಕ ಪುರೋಹಿತಶಾಹಿಯ ಬುಡಕ್ಕೆ ಕೈಹಾಕಿದರು.

ಜೊತೆಗೆ ಕುವೆಂಪು ಇದೇ ಕೆಲಸವನ್ನು ಇನ್ನೂ ಹೆಚ್ಚಿನ ಭಾವಶಕ್ತಿ ತುಂಬಿಕೊಂಡ ರೂಪಕ ಭಾಷೆಯಲ್ಲಿ ಕಟ್ಟಿ ನಿಲ್ಲಿಸಿದ ತಮ್ಮ ನಾಟಕಗಳ ಮೂಲಕವೂ ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಿದರು. ಗಾಂಧಿ-ಅಂಬೇಡ್ಕರ್ ಮುಖಾಮುಖಿಯಾಗಲೀ, ಅದರ ಪರಿಣಾಮವಾಗಿ ಕಾಂಗ್ರೆಸ್ ಆಂದೋಲನದಲ್ಲಿ ಮೂಡಿದ ದಲಿತ ದೃಷ್ಟಿಯಾಗಲೀ ರಾಷ್ಟ್ರೀಯ ನವೋದಯದ ಚರ್ಚಾ ವಸ್ತುವಾಗುವ ಬಹುಮುನ್ನವೇ ಅಂದರೆ ೧೯೨೭ರ ಹೊತ್ತಿಗೇ ತಮ್ಮ ೨೪ನೇ ವಯಸ್ಸಿನಲ್ಲಿಯೇ 'ಜಲಗಾರ' ಎಂಬ ನಾಟಕ ಬರೆದು ಶಿವನನ್ನು ಜಗದ ಜಲಗಾರ ಎಂದು ನಿರೂಪಿಸಿ ಅವನನ್ನು ಜಲಗಾರ ಜಾತಿಗೆ ಸೇರಿಸಿ ಅಸ್ಪೃಶ್ಯತಾ ಸಮಸ್ಯೆ ಕಡೆ ಸಾರಸ್ವತ ಲೋಕದ ಗಮನ ಸೆಳೆದಿದ್ದರು. ಇಲ್ಲಿ ಜಲಗಾರ ಹಾಡುವ ಹಾಡನ್ನು ಗಮನಿಸಿದರೆ, ಶ್ರೀ ರಾಮಕೃಷ್ಣರ ಧರ್ಮ ಸಮನ್ವಯ ತತ್ವವು ಹೇಗೆ ಗಾಂಧೀಜಿಯು ಕರ್ಮಯೋಗದಲ್ಲಿ ಕಂಡುಕೊಂಡ ಕೋಮುಸೌಹಾರ್ದದ ಸಂದೇಶವಾಗಿ ಮಾರ್ಪಾಟಾಗಿದೆ ಎಂಬುದು ಗೊತ್ತಾಗುತ್ತದೆ:

ವಿಗ್ರಹದೊಳಗಿರೆ ರಾಮ, ಯಾರಿಂದೀ ಲೋಕದಾರಾಮ?
ಮೂಡಣದೊಳಗಿರುವನು ರಾಮ ಪಡುವಣದಿ ಅಲ್ಲಾಹು
ಹೃದಯದೊಳು ನೀನೊಮ್ಮೆ ಸೆಲೆ ವಿಚಾರಿಸೆ
ಅಲ್ಲೇ ಇರುವನು ಕರೀಮ, ಅಲ್ಲೇ ಇರುವನು ರಾಮ
ಅಲ್ಲಿ ರಾಮರ ಕಂದನೇ ಆಗಿರುವನು ಕಬೀರ

ಈ ನಾಟಕದಲ್ಲಿ ಶಿವ ಜಲಗಾರನಿಗೆ ತನ್ನ ನಿಜವೇಷ ತೋರಿಸುವಾಗ ತ್ರಿಶೂಲ ಬ್ರಹ್ಮ ಬೀದಿಗಳನ್ನು ಗುಡಿಸುವ ಪೊರಕೆಯಾಗುತ್ತದೆ, ಯಜ್ಞೋಪವೀತ ಸ್ಮಶಾನಗಳಲ್ಲಿ ಚಟ್ಟಕಟ್ಟುವ ಹಗ್ಗವಾಗುತ್ತದೆ. ಕಾಳಿಯ ಬೀದಿಯಲ್ಲಿ ಶಂಕರಾಚಾರ್ಯರನ್ನು ದಬಾಯಿಸಿ ನಿಂತ ಚಂಡಾಲನನ್ನು ಆ ವರ್ಣಾಶ್ರಮ ಧರ್ಮದ ಮಾನ ಉಳಿಸಿಕೊಳ್ಳಲು ಶಿವನೆಂದು ಕರೆದು ಅದ್ವೈತ ದರ್ಶನವನ್ನು ಅದ್ವೈತ ಪುರಾಣವನ್ನಾಗಿ ಮಾರ್ಪಡಿಸಿದ ಮಾಯಾವಾದಿ ಪ್ರತಿಭೆಗೆ ಈ ನಾಟಕವನ್ನು ಕಟ್ಟಿದ ಶಂಬೂಕ ಪ್ರತಿಭೆ ಶಿವನನ್ನೇ ಜಲಗಾರರನ್ನಾಗಿ ತೋರಿಸಿ ತಿರುಗೇಟು ನೀಡಿದಂತಿದೆ.

ಈ ನಾಟಕವನ್ನು ಕುವೆಂಪು ಮೊದಲು ಶಿವರಾತ್ರಿಯ ದಿನ ಬಹಿರಂಗವಾಚನ ಮಾಡಿದಾಗ ಶಿವಭಕ್ತನೊಬ್ಬ ಕುವೆಂಪು ಅವರನ್ನು 'ಶಿವದ್ರೋಹಿ, ಶಿವದ್ರೋಹಿ' ಎಂದು ಬೊಟ್ಟು ಮಾಡಿ ಆರ್ಭಟಿಸಿ ಹೋದನಂತೆ. ಈ ನಾಟಕ ಮೊದಲು ಪ್ರದರ್ಶಿತಗೊಂಡಾಗ ಮೈಸೂರಿನ ಹಿರಿಯ ಪತ್ರಕರ್ತ ತಾತಯ್ಯನವರು ತಮ್ಮ 'ಸಾಧ್ವಿ' ಪತ್ರಿಕೆಯಲ್ಲಿ 'ಇದೊಂದು ಬ್ರಾಹ್ಮಣರ ಹೀಯಾಳಿಕೆಗೆಂದೇ ಬರೆದ ನಾಟಕ' ಎಂದು ವಿಮರ್ಶಿಸಿದರಂತೆ.[೪] ಆದರೆ ಅವರಿಗೆ ಬೆಂಬಲವಾಗಿ ಬ್ರಾಹ್ಮಣರಾದ ತಳುಕಿನ ವೆಂಕಣ್ಣಯ್ಯನವರು, ಬ್ರಾಹ್ಮಣೇತರರಾದ ಪ್ರೊ|| ವಾಡಿಯಾ ಅವರೂ, ಎಲ್ಲಕ್ಕಿಂತ ಹೆಚ್ಚಾಗಿ ಶ್ರೀ ರಾಮಕೃಷ್ಣಾಶ್ರಮದ ಮೈಸೂರು ಶಾಖೆಯ ಸ್ಥಾಪಕಾಧ್ಯಕ್ಷರಾದ ಶ್ರೀ ಸಿದ್ಧೇಶ್ವರಾನಂದರೂ ಇದ್ದರು. ಅವರೆಲ್ಲರ ಹಿಂದೆ ಇದ್ದುದು ಶ್ರೀ ವಿವೇಕಾನಂದರ ಧೀರವಾಣಿಯ ಮೂಲಕ ಪ್ರಕಟಗೊಂಡ ಶ್ರೀ ರಾಮಕೃಷ್ಣರ ಆಧುನಿಕ ಅದ್ವೈತ ದರ್ಶನ ಎಂದು ಬೇರೆ ಹೇಳಬೇಕಾಗಿಲ್ಲ.

ಈ ಹೊತ್ತಿಗೆ ಸ್ವತಃ ಶೂದ್ರತಪಸ್ವಿ ಎನಿಸಿದ್ದ ಕುವೆಂಪು ತಮ್ಮ ಒಳತೋಟಿಯನ್ನು ತೋಡಿಕೊಳ್ಳಲೋ ಎಂಬಂತೆ ತನಗೆ ಎದುರಾಗಲಾರಂಭಿಸಿದ್ದ ವಿರೋಧವು ಎಂತಹ ಸಂಕುಚಿತ ಹಾಗೂ ಜಡವಾದಿ ದೃಷ್ಟಿಕೋನದಿಂದ ಒಡಮೂಡಿತ್ತು ಎಂಬುದನ್ನು ವಿವರಿಸಲೋ ಎಂಬಂತೆ 'ಶೂದ್ರತಪಸ್ವಿ' ನಾಟಕ ಬರೆದರು. ವರ್ಣಾಶ್ರಮ ಧರ್ಮ ಮತ್ತು ರಾಜಧರ್ಮಗಳೆರಡನ್ನೂ ಮುಖಾಮುಖಿಯಾಗಿಸುತ್ತ ನಿಜವಾದ ರಾಜಧರ್ಮ ವಿವೇಚನೆ ಬಳಸಿ ಎತ್ತಿ ಹಿಡಿಯಬೇಕಾದದ್ದು ಋತಧರ್ಮವನ್ನೇ ಹೊರತು ಜಾತಿಗರ್ವಾಂಧತೆಯನ್ನಾಗಲೀ ಶಾಸ್ತ್ರ ಸಂಮೂಢತೆಯನ್ನಾಗಲೀ ಅಲ್ಲ ಎಂದು ಸಾರುವ ಈ ನಾಟಕ ಮಾಸ್ತಿಯವರಂತಹ ಉದಾರವಾದಿಗಳನ್ನೇ ಕೆಣಕಿತು. ಈ ನಾಟಕ ಪರಂಪರೆಯನ್ನು ಅನಗತ್ಯವಾಗಿ ಕೀಟಲೆ ಮಾಡುವ ಪ್ರಯತ್ನವಾಗಿ ಕಂಡಿತು. ಕುವೆಂಪು ಧೃತಿಗೆಡದೆ, ಪರಂಪರೆ ಸತ್ವಯುತವಾಗಿ ಸಂಪತ್ತಿನ ರೂಪದಲ್ಲಿ ಉಳಿಯುವುದು ಋತು ಧರ್ಮಾನುಸಾರವಾದ ವ್ಯಾಖ್ಯಾನ ಗಳಿಂದಲೇ ಎಂದು ಉತ್ತರ ನೀಡಿದರು.

ಅವರ 'ಬೆರಳ್‌ಗೆ ಕೊರಳ್' ಮತ್ತು 'ಶ್ಮಶಾನ ಕುರುಕ್ಷೇತ್ರಂ' ನಾಟಕಗಳೂ, 'ಶ್ರೀ ಮನ್ನೂಕವಾಗಿತ್ತು', 'ಸಾಲದ ಮಗು', 'ಧನ್ವಂತರಿಯ ಚಿಕಿತ್ಸೆ' ಮುಂತಾದ ಸಣ್ಣಕತೆಗಳೂ, 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಕಾದಂಬರಿಯೂ ಮಾಡುವುದು ಇಂತಹ ವ್ಯಾಖ್ಯಾನಗಳನ್ನೇ, ಇನ್ನಷ್ಟು ವಿಶಾಲ ವ್ಯಾಪ್ತಿಯ ತಾತ್ವಿಕತೆಯಲ್ಲಿ: ಶೂದ್ರನ ಬೆರಳನ್ನು

ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು
ಎಂದೊ ಯಮ ಬರೆದಿಟ್ಟುದಿಂದೆಮಗೆ ಕಟ್ಟೇನು
ನಿನ್ನೆದೆಯ ಋಷಿ ! ಮನು ನಿನಗೆ ನೀನು

ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ
ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ
ಕಾಲಕ್ಕೆ ತಕ್ಕಂತೆ ದೇಶಕ್ಕೆ ತಕ್ಕಂತೆ
ನಮ್ಮ ಹೃದಯವೇ ನಮಗೆ ಶ್ರೀಧರ್ಮ ಸೂತ್ರ

-ಕುವೆಂಪು

ದಕ್ಷಿಣೆಯಾಗಿ ಪಡೆಯುವ ಬ್ರಾಹ್ಮಣ ತನ್ನ ಕರ್ಮ ಚಕ್ರಕ್ಕೆ ಸಿಲುಕಿಕೊಂಡು ತನ್ನ ಕೊರಳನ್ನೇ ಬಲಿಕೊಡಬೇಕಾಗುತ್ತದೆ ಎಂಬುದನ್ನು ಸೂಚಿಸುತ್ತದೆ. 'ಬೆರಳ್‌ಗೆ ಕೊರಳ್' ನಾಟಕ. ದೇಶದಲ್ಲಿ ಪ್ರಜಾಸತ್ತೆ ಸಮಾಜವಾದ ಎಂಬ ತತ್ವಗಳು ಇನ್ನೂ ದೂರದ ಕನಸುಗಳಾಗಿ ಕೂಡಾ ಕಾಣದಿದ್ದ ಕಾಲದಲ್ಲಿ (೧೯೩೧) ರಚಿತವಾದ 'ಶ್ಮಶಾನ ಕುರುಕ್ಷೇತ್ರಂ' ನಾಟಕವು 'ಸ್ವತಂತ್ರ ಭಾರತ ರಂಗ, ಸರ್ವಪ್ರಜಾಧಿಪತ್ಯ, ಸರ್ವಸಮತ್ವ, ಜಗತ್‌ಕಲ್ಯಾಣ, ಭೂವೈಕುಂಠ ನೋಡದೋ...' ಎಂಬ ಕಾಣ್ಕೆಯನ್ನು ತನ್ನ ಒಡಲಲ್ಲಿಟ್ಟುಕೊಂಡಿದೆ. ಇದು ಕುವೆಂಪು ಕಾಣ್ಕೆಯ ಧರ್ಮದರ್ಶನ. ಅದುವೇ 'ಧನ್ವಂತರಿ ಚಿಕಿತ್ಸೆ' ಕತೆಯಲ್ಲಿ ಕಾಣುವ ವಸಿಷ್ಠದರ್ಶನಕ್ಕೆ ವಿರುದ್ಧವಾದ ವಿಶ್ವಾಮಿತ್ರ ದರ್ಶನ; 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಯಲ್ಲಿ ಕಾಣುವ ಬುದ್ಧದರ್ಶನ, ಕಾದಂಬರಿಯ ಬಂಧದ ದೃಷ್ಟಿಯಿಂದ ಸಡಿಲವಾದದ್ದಾದರೂ...

-೫-

ಆದರೆ ಕುವೆಂಪು ಅವರ ಇನ್ನೊಂದು ಕಾದಂಬರಿ 'ಮಲೆಗಳಲ್ಲಿ ಮದುಮಗಳು' ಈ ಎಲ್ಲ ದರ್ಶನಗಳನ್ನೂ ಉತ್ತರಣೆಸಿಕೊಂಡ ಅವರ ಪೂರ್ಣದೃಷ್ಟಿಗೆ ಸಜೀವ ಉದಾಹರಣೆಯಂತಿದೆ. ಮುಟ್ಟಿದೆಡೆಯಲ್ಲೆಲ್ಲಾ ಉಸಿರಾಡುವ ಈ ಕಾದಂಬರಿ ಸಕಲ ಜೀವ ಜಗತ್ತನ್ನೂ ಅಖಂಡ ಸಂಬಂಧದಲ್ಲಿಟ್ಟು, ವ್ಯಾವಹಾರಿಕ ಪಾತಳಿಯ ತರತಮಗಳ ಆತ್ಯಂತಿಕ ಹುಸಿತನವನ್ನು ಕಲಾಸಿದ್ಧಿಯ ಪ್ರಪೂರ್ಣತೆಯ ಮೂಲಕ ಮನದಟ್ಟು ಮಾಡಿಸುತ್ತದೆ. ಮತಾಂತರ ಮತ್ತು ವರ್ಣಾಶ್ರಮ ಧರ್ಮಗಳ ನಡುವೆ ಆಯ್ಕೆ ಮಾಡಿಕೊಳ್ಳಲಾಗದ ಸಂಧಿಗ್ಧದಲ್ಲಿರುವ ಅಸಹಾಯಕ ಮನುಷ್ಯರ ಪ್ರಪಂಚವನ್ನೇ ಒಳಗೊಂಡ ಈ ಕಾದಂಬರಿಯ ಸಕಲ ಪಾತ್ರಗಳೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ದಿವ್ಯಾನುಭವ ಅಥವಾ ಭೂಮಾನುಭೂತಿಗೆ ಪಾತ್ರವಾಗಿ; ತಮೋಯೋಗ್ಯ, ನಿತ್ಯನಾರಕಿ ತತ್ವಗಳನ್ನು - ಅವರನ್ನು ಯಾರಾದರೂ ಪ್ರತಿಪಾದಿಸಿದ್ದರೆ - ಮೌಢ್ಯದ ಪರಮಾವಧಿಗಳೆಂಬಂತೆ ನಿರ್ಲಕ್ಷಿಸುವವರಾಗಿ ಅಧ್ಯಾತ್ಮ ಸಾಧನೆಗೆ, ಅಂದರೆ ತಮ್ಮ ಅನಂತತೆಯ ಅನುಭವಕ್ಕಾಗಿ ಸಾಲಾಗಿ ನಿಲ್ಲುತ್ತವೆ.

ಶೃಂಗೇರಿ, ಧರ್ಮಸ್ಥಳ, ತಿರುಪತಿಗಳು ಬಿತ್ತುತ್ತಿದ್ದ ಮತೀಯ ಮೌಢ್ಯಗಳು ಹಾಗೂ ಕ್ರೈಸ್ತ ಪಾದ್ರಿಗಳು ಒಡ್ಡುತ್ತಿದ್ದ ಲೌಕಿಕ ಆಮಿಷಗಳ ದಟ್ಟ ವಾತಾವರಣದಲ್ಲೂ, ಈ ಧಾರಣ ಶಕ್ತಿಯನ್ನು ಈ ಪಾತ್ರಗಳಿಗೆ ಪ್ರದಾನ ಮಾಡುತ್ತಿರುವ ಸನಾತನ ಶಕ್ತಿಯ ಸಂಕೇತದಂತಿರುವ, ಈ ಕಾದಂಬರಿಯ ಹೃದಯ ಭಾಗದಲ್ಲಿ ಪ್ರವೇಶಿಸಿ 'ಮಿಂಚಿ' ಮಾಯವಾಗುವ ಗಡ್ಡದಯ್ಯನ ಪಾತ್ರ ಕುವೆಂಪು ಅವರ ಅಪ್ರತಿಮ ವಿಶ್ವಾಮಿತ್ರ ಸೃಷ್ಟಿ ಪ್ರತಿಭೆಗೆ ಸಾಕ್ಷಿಯಂತಿದೆ. 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ಕೂಡಾ ಸಕಲರಿಗೂ ಆತ್ಮವಿಕಾಸದ ಅವಕಾಶ ವಿರುವ ಧರ್ಮವನ್ನೇ ಪ್ರತಿಪಾದಿಸುತ್ತದೆ ಎಂದು ಕೇಳಿದ್ದೇನೆ.

'ಪ್ರಾಚೀನದ ಸತ್ವದ ಮೇಲೆ ನಿಂತು ಅರ್ವಾಚೀನವನ್ನು ಸೃಜಿಸುತ್ತಾ ಭವಿಷ್ಯತ್ತಿನ ನೂತನ ಆಗಾಮಿಕದತ್ತ ಮುಂದುವರೆಯಬೇಕು ಎಂಬುದು ನನ್ನ ಆದರ್ಶ'[೫] ಎಂದು ಒಂದೆಡೆ ಹೇಳಿಕೊಂಡಿರುವ ಕುವೆಂಪು ಪ್ರಾಚೀನದ ಸತ್ವವನ್ನು ಶೋಧಿಸುವಲ್ಲಿ ಕಟು ನಿಷ್ಠುರರಾಗಿದ್ದರು. ಹಾಗೇ ನೂತನ ಆಗಾಮಿಕದ ಕಾಣ್ಕೆಯ ವಿಷಯದಲ್ಲೂ ಬಹು ಎಚ್ಚರಿಕೆಯಿಂದಿದ್ದರು. ಇದು ವಿವರವಾಗಿ ಎದ್ದು ಕಾಣುವುದು ಅವರ 'ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ' ಎಂದು ಪ್ರಸಿದ್ಧವಾದ ಒಕ್ಕೂಟದ ಭಾಷಣದಲ್ಲಿ, ಕುವೆಂಪು ತಮ್ಮ ಜೀವನ-ಸಾಹಿತ್ಯಗಳೆರಡರಲ್ಲೂ ಯಾವುದರ ವಿರುದ್ಧ ಸಮರ ಸಾರಿದ್ದರೋ ಅಂತಹ ಪುರೋಹಿತಶಾಹಿಯ ವಿರುದ್ಧ ಸಂಘಟನಾತ್ಮಕವಾಗಿ ಸಮರ ಸಾರುವುದಕ್ಕೆ ಕಂಕಣಬದ್ಧವಾಗಿ ೧೯೭೪ರಲ್ಲಿ ಅಸ್ತಿತ್ವಕ್ಕೆ ಬಂದ (ಹಾಗೇ ವಿಸರ್ಜನೆಗೊಂಡ) ಕರ್ನಾಟಕ ಕಲಾವಿದರ ಹಾಗೂ ಬರಹಗಾರರ ಒಕ್ಕೂಟದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಾ ಹೇಳಿದರು: 'ಇಲ್ಲಿಯೂ ಯಾವ ತತ್ವವಾಗಲಿ ನಿಮ್ಮಿಂದ ಸ್ವೀಕಾರವಾಗುವುದಕ್ಕೆ ಅರ್ಹತೆ ಪಡೆಯಬೇಕಾದರೆ ಅದು ವಿಶ್ವಕ್ಕೆ, ವಿಶ್ವ ಜನತೆಗೆಲ್ಲ ಅನ್ವಯವಾಗುವಂತಿದ್ದರೆ ಮಾತ್ರ ಗ್ರಾಹ್ಯ. ಬರೀ ಹಿಂದೂಗಳಿಗೆ, ಹಿಂದೂ ದೇಶಕ್ಕೆ, ಅವರಿಗೆ ಇವರಿಗೆ ಅಂತ ಇಲ್ಲ, ವಿಶ್ವಕ್ಕೆಲ್ಲ ಅನ್ವಯವಾಗುವಂತಿದ್ದರೆ ಅದನ್ನು ನೀವು ಮಾನ್ಯ ಮಾಡಲೇಬೇಕು. ಅದು ವೈಜ್ಞಾನಿಕ ಸತ್ಯದಂತೆ ಶಾಶ್ವತ ಸತ್ಯ.

ಇಂತಹ ಶಾಶ್ವತ ಸತ್ಯದ ಕೇಂದ್ರಗಳು ನಮ್ಮ ಪ್ರಾಚೀನ ಸಾಹಿತ್ಯ-ಸಂಸ್ಕೃತಿಗಳಲ್ಲಿವೆ. ಅವಕ್ಕೆ ಹೊಸ ವ್ಯಾಖ್ಯಾನಗಳನ್ನು ಮಾಡಬೇಕು, ಸರಿಯಾದ ಸರ್ವಸಮ್ಮತವಾದ ರೀತಿಯಲ್ಲಿ ವಿಶ್ವಕ್ಕೆ ಅನ್ವಯವಾಗುವಂತೆ... ಆ ವ್ಯಾಖ್ಯಾನ ಮಾಡುವವರು ಯಾರು? ಲೇಖಕರು, ಬರಹಗಾರರು ನೀವು. ನಮ್ಮ ಹಿಂದಿನ ಆಚಾರ್ಯ ವರ್ಗವೆಲ್ಲ ಅದನ್ನು ತೆಗೆದುಕೊಂಡು ಅತ್ಯಂತ ಅವಿವೇಕವಾಗಿ ವ್ಯಾಖ್ಯಾನ ಮಾಡಿದ್ದಾರೆ. ಆ ತರದ ಆಚಾರ್ಯರು ಋಷಿಗಳು ಎನ್ನುವ ಗೌರವವನ್ನು ನೀವು ನಿಮ್ಮ ತರುಣರಿಂದ ಮೊದಲು ತೆಗೆದುಹಾಕಬೇಕಾಗುತ್ತದೆ. ಸಂಪೂರ್ಣವಾಗಿ ವಿಚಾರಪೂರ್ವಕರಾಗಿ ಕೆಲಸ ಮಾಡಿ...

ಪುರೋಹಿತಶಾಹಿ ಹುಲಿಯಂತೆ ಇದಕ್ಕೆ ಸಣ್ಣಪುಟ್ಟ ಕಲ್ಲನ್ನು ಜೇಬಿನಲ್ಲಿಟ್ಟುಕೊಂಡು ಹೋಗಿ ಹೊಡೆಯುತ್ತೇನೆಂದರೆ ಹುಡುಗಾಟದ ಕೆಲಸವಲ್ಲ. ಅದನ್ನು ಹೊಡೆಯು



ಜಾಗತೀಕರಣದ ಸವಾಲಿನ ಎದುರು ಕನ್ನಡ ಸಂಸ್ಕೃತಿಯನ್ನು ಪುನಾರಚಿಸಬಯಸುವವರು ಕುವೆಂಪು ಅವರನ್ನು ತಮ್ಮ ಪುರಾತನ, ಸವಕಲು ಮನೋಭಾರಗಳನ್ನು ಇಳಿಸಿ ಪುನರನ್ವೇಷಿಸಿಕೊಳ್ಳಬೇಕಿದೆ.

ಬೇಕಾದರೆ ನಾವು ಮದ್ದುಗುಂಡುಗಳನ್ನು ತಯಾರು ಮಾಡಬೇಕು... ಆದರೆ ಈ ವಿಚಿತ್ರ ಬೇಟೆಯಲ್ಲಿ ಮೊದಲ ಗುಂಡು ತಗುಲಬೇಕಾದ್ದು ಆ ಹುಲಿಯ ತಲೆಗಲ್ಲ, ನಿಮ್ಮ ತಲೆಗೇ.. ತಲೆ.. ತಲೆ... ತಲೆ.. ಮೊದಲು ನಿಮ್ಮ ತಲೆಯಲ್ಲಿರುವ ಮೆದುಳನ್ನು ಕ್ಲೀನ್ ಮಾಡಬೇಕು. ಅವರಿಗಲ್ಲ ಆ ಪುರೋಹಿತ ವರ್ಗದವರಿಗಲ್ಲ, ನಿಮಗೆ ! ನನ್ನ ಮಟ್ಟಿಗೆ ನಾನೇನೋ ಅವರಿಂದ ಸಂಪೂರ್ಣ ಪಾರಾಗಿದ್ದೇನೆ. ನಾನು ಯಾವ ದೇವಸ್ಥಾನಕ್ಕಾಗಲೀ ಪೂಜೆ ಮಾಡಿಸಲು ಹೋಗದೆ ಬಹುಶಃ ೫೦ ವರ್ಷಗಳ ಮೇಲೆ ಆಗಿದೆ. ಯಾವ ಭಟ್ಟನಾಗಲೀ, ಯಾವ ಪುರೋಹಿತನಾಗಲೀ ಯಾವ ಪಂಚಾಂಗವಾಗಲಿ ನನ್ನ ಬಳಿ ಸುಳಿಯಗೊಡುವುದಿಲ್ಲ. ಆದರೆ ಬೇರೆ ಬೇರೆ ಜನರಿಗೆ ಇದನ್ನೆಲ್ಲ ಹೇಳಿದರೆ, ಏನಿದು? ನೀವು ಹೇಳುವುದು ಭಯಂಕರವಾಗಿ ಕಾಣಿಸುತ್ತದೆ ಅನ್ನುತ್ತಾರೆ. ಅಂದರೇನು ಅರ್ಥ? ಅಜ್ಞಾನದ ಅಲ್ಲಣ ನಿಮ್ಮ ತಲೆಯೊಳಗೇ ತುಂಬಿದೆ. ಅದನ್ನು ನೀವು ತೆಗೆಯಬೇಕು. ಅದಕ್ಕೆ ಎಷ್ಟು ಕೆಲಸ ಮಾಡಬೇಕಾಗುತ್ತದೆ ಗೊತ್ತೆ?'

-೬-

ಬಹುಶಃ ಅದು ಆಗಲೂ ಗೊತ್ತಿರಲಿಲ್ಲ, ಈಗಲೂ ಗೊತ್ತಾಗಿಲ್ಲ. ಒಂದೆಡೆ ಜಾತ್ಯಾಂಧ ಶೂದ್ರವಾದಿಗಳಿಂದಲೂ ಮತ್ತೊಂದೆಡೆ ಜಡ ವಿಚಾರವಾದಿಗಳಿಂದಲೂ ಸುತ್ತುವರಿಯಲ್ಪಟ್ಟ ಕುವೆಂಪುವೆಂಬ ವಿದ್ಯಮಾನ ಕರ್ನಾಟಕದಲ್ಲಿ ಸೃಜನಶೀಲ ತತ್ವ ಪರಂಪರೆಯಾಗಿ ಬೆಳೆಯಲೇ ಇಲ್ಲ- ಆಗಾಗ್ಗೆ ಹುಟ್ಟಿ ಸಾಯುತ್ತಿದ್ದ ಜನಪರ ಚಳವಳಿಗಳನೇಕಕ್ಕೆ ಸಾಂದರ್ಭಿಕ ಸ್ಫೂರ್ತಿ ಸೆಲೆಯಾಗಿ ಕಾಣಿಸಿಕೊಂಡಿದ್ದರ ಹೊರತಾಗಿ. ಅವರ 'ಮಲೆಗಳಲ್ಲಿ ಮದುಮಗಳು' ಕೃತಿ ಆಧುನಿಕ ಕನ್ನಡ ಸಂಸ್ಕೃತಿಯ ಮಹಾಕಾವ್ಯವಾಗಿರುವಂತೆ ಕುವೆಂಪು ಕೂಡಾ ಆಧುನಿಕ ಕನ್ನಡ ಸಂಸ್ಕೃತಿಯ ನಾಯಕರಾಗಬಲ್ಲವರಾಗಿದ್ದರು. ಆದರೆ ಆಗದೆ ಉಳಿದುಹೋದರು. ಅವರು ಹಾಗೆ ಆಗಿದ್ದರೆ ಕರ್ನಾಟಕದ ಇಂದಿನ ಜಾತಿವಾದಿ, ಕೋಮುವಾದಿ, ಭೋಗವಾದಿ ಹಿಂಸಾ ಸಂಸ್ಕೃತಿಯ ವಿರುದ್ಧ ವೈಚಾರಿಕ ನಾಯಕತ್ವಕ್ಕಾಗಿ ಇಷ್ಟು ಪರದಾಡಬೇಕಾದ ಅಗತ್ಯವಿರಲಿಲ್ಲ. ಈ ದೃಷ್ಟಿಯಿಂದ ಈಗ ಜಾಗತೀಕರಣದ ಸವಾಲಿನ ಎದುರು ಕನ್ನಡ ಸಂಸ್ಕೃತಿಯನ್ನು ಪುನಾರಚಿಸಬಯಸುವವರು ಕುವೆಂಪು ಅವರನ್ನು ತಮ್ಮ ಪುರಾತನ, ಸವಕಲು ಮನೋಭಾರಗಳನ್ನು ಇಳಿಸಿ ಪುನರನ್ವೇಷಿಸಿಕೊಳ್ಳಬೇಕಿದೆ.

ಉಲ್ಲೇಖಗಳು

೧. ದೇಜಗೌ ; ರಾಷ್ಟ್ರಕವಿ ಸಂದರ್ಶನ, ಸಹ್ಯಾದ್ರಿ ಪ್ರಕಾಶನ, ಮೈಸೂರು
೨. ಡಾ॥ ಎಸ್.ಎಂ. ವೃಷಭೇಂದ್ರಸ್ವಾಮಿ, ಶ್ರೀ ಕುವೆಂಪು ಸಂಭಾಷಣೆ ಮತ್ತು ಸಂದರ್ಶನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು
೩. ಜಿ.ಎಸ್. ಶಿವರುದ್ರಪ್ಪ ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರು, ಕುವೆಂಪು ಸಂ: ಸುಜನಾ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ
೪,೫. ವಿಚಾರ ಕ್ರಾಂತಿಗೆ ಆಹ್ವಾನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಧರಿತ್ರಿ



ನಾ. ಡಿಸೋಜ

ಸಾಮಾನ್ಯವಾಗಿ ಕತೆಗಾರರು ಎಲ್ಲೋ ನಡುವಿನಿಂದ ಕತೆ ಆರಂಭಿಸಿ, ಮುಂದಿನದನ್ನು ಹೇಳುತ್ತಿರುವಾಗಲೇ ಹಿಂದಿನ ದಿನ ಮಾನಗಳಿಗೆ ಹೊರಳಿ, ಮತ್ತೆ ಬಿಟ್ಟಲ್ಲಿಗೇನೆ ಬಂದು ನಿಂತು ಕತೆ ಮುಂದುವರಿಸಿಕೊಂಡು ಹೋಗುವುದುಂಟು. ಆದರೆ ನಾನು ಪಳಗಿದ ಕತೆಗಾರನಲ್ಲವಾದ್ದರಿಂದ ನೇರವಾಗಿ ಕತೆ ಪ್ರಾರಂಭವಾದಾಗಿನಿಂದ ಶುರು ಮಾಡಿ, ಅದು ನಡೆದ ಕ್ರಮದಲ್ಲಿಯೇ ಹೇಳಿಕೊಂಡು ಹೋಗುತ್ತೇನೆ. ನನಗಿಲ್ಲಿ ಕತೆ ಹೇಳುವುದಕ್ಕಿಂತ ನಮ್ಮ ಸಾಹೇಬರಾಗಿದ್ದ ಜನಾರ್ಧನ ಅಂತೂಳೆಯವರ ವಿಷಯ ಹೇಳಬೇಕೆಂಬುದೇ ಮುಖ್ಯ.

ನಾನು ಬಿ.ಇ. ಮುಗಿಸಿ ಅಲ್ಲಿ ಇಲ್ಲಿ ದಿನಗೂಲಿಯ ಮೇಲೆ ಒಂದು ವರ್ಷ ಕೆಲಸ ಮಾಡಿದ ನಂತರ ನನಗೆ ಸರಕಾರಿ ಕೆಲಸ ದೊರಕಿತು. ಶರಾವತಿ ಯೋಜನೆಯ ಕಾರ್ಗಲ್ಲಿಗೆ ಬಂದು ಕಛೇರಿಗೆ ನನ್ನನ್ನು ನೇಮಕ ಮಾಡಲಾಗಿ, ಆದೇಶದ ಪ್ರತಿ ಹಿಡಿದು ನಾನು ಕಾರ್ಗಲ್ಲಿಗೆ ಹೋದೆ. ಒಂದರ ಬೆನ್ನಿಗೆ ಇನ್ನೊಂದು ಮೂತಿ ಚಾಚಿಕೊಂಡು ನಿಂತ ಬೆಟ್ಟಗಳೇ ತುಂಬಿರುವ ವಿಚಿತ್ರ ಊರು. ಈ ಬೆಟ್ಟಗಳ ಬೆನ್ನ ಮೇಲೆ ಸಾಲು ಸಾಲು ಮನೆಗಳು. ಅಂಗೈ ಅಗಲದ ಬಯಲು, ಮೈದಾನವಿಲ್ಲದ ಪ್ರದೇಶ. ಗುಡ್ಡ ಹತ್ತಿ ಗುಡ್ಡ ಇಳಿದು ನಾನು ಕೈಯಲ್ಲಿ ಸೂಟಕೇಸ್ ಹಿಡಿದುಕೊಂಡೇ ಲಿಂಗನಮಕ್ಕಿ ಜಲಾಶಯ ನಿರ್ಮಾಣ ವಿಭಾಗದ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರ ಕಛೇರಿಗೆ ಹೋದೆ. ದಿನಗೂಲಿ ನೌಕರನಾಗಿ ಕೆಲಸ ಮಾಡಿದ ಅನುಭವವಿದ್ದರೂ ಕೊಂಚ ದಿಗಿಲು, ಗಾಬರಿ, ಹೆದರಿಕೆ ಇತ್ತು. ಅದು ಏನಿದ್ದರೂ ದಿನಗೂಲಿ ಕೆಲಸ, ಇದು ಹಾಗಲ್ಲ, ಖಾಯಂ ವೃತ್ತಿ. ಇಲ್ಲಿ ಜವಾಬ್ದಾರಿ ಹೆಚ್ಚು. ಸಹಾಯಕ ಇಂಜಿನಿಯರ್ ಎಂಬ ಹುದ್ದೆ ಬೇರೆ.

ಸೂಟ್‌ಕೇಸನ್ನು ಹೊರಗಿರಿಸಿ ಮ್ಯಾನೇಜರ ಮುಂದೆ ಹೋಗಿ ಕುಳಿತು ಹೀಗೆ ಹೀಗೆ ಎಂದು ಪೀಠಿಕೆ ಹೇಳಿದೆ. ಅವರು ನನ್ನ ಮುಂದೆ ಒಂದು ಬಿಳಿ ಕಾಗದವಿರಿಸಿ 'ಡ್ಯೂಟಿ ರಿಪೋರ್ಟ್ ಕೊಡಿ' ಎಂದರು. ಮುಂಚಿತವಾಗಿ ಖಚಿತ ಪಡಿಸಿಕೊಂಡಂತೆ ಮೂರು ಸಾಲಿನ ರಿಪೋರ್ಟ್ ಬರೆದು ಅವರ ಮುಂದಿಟ್ಟಾಗ ಅವರು ಅದರ ಮೇಲೆ ಕಣ್ಣಾಡಿಸಿ-

'ಸಾಹೇಬರಿಗೇನೆ ಕೊಡಿ..'

ಎಂದರು.

ಲೋಕೋಪಯೋಗಿ ಇಲಾಖೆಯಲ್ಲಿ ಈ ಸಾಹೇಬ ಅನ್ನುವವ ಒಂದು ಹುಲಿ. ಅವನ ಘರ್ಜನೆ, ಆಟಾಟೋಪ, ಗುಟುರು ಹಾಕುವುದು, ಕೈಕೆಳಗಿನ ನೌಕರರನ್ನು ಹೆದರಿಸಿ ಇರಿಸಿಕೊಳ್ಳುವುದು ಪರಂಪರೆಯಿಂದ ನಡೆದುಬಂದದ್ದು. ದಿನಗೂಲಿ ನೌಕರನಾಗಿ ನಾನು ಕೆಲಸ ಮಾಡಿದ್ದರಿಂದ ಇದನ್ನೆಲ್ಲ ಕಂಡಿದ್ದೆ, ಅನುಭವಿಸಿದ್ದೆ. ಸೂಪರಿಂಟೆಂಡಿಂಗ್ ಇಂಜಿನಿಯರ್ ಅಂದರಂತೂ ಅವನ ದರ್ಪ ಮತ್ತೂ ಹೆಚ್ಚು. ಹೀಗಾಗಿ ಅಂಜುತ್ತ ರೆಕ್ಕೆ ಬಾಗಿಲು ತಳ್ಳಿಕೊಂಡು ಒಳಹೋದೆ.

ಅವರಲ್ಲಿ ನಾನು ಮೆಚ್ಚಿಕೊಂಡ ಮತ್ತೂ ಒಂದು ಗುಣವೆಂದರೆ ಅವರು ತಮ್ಮ ಹೆಂಡತಿಯ ಬಗ್ಗೆ ತೋರುತ್ತಿದ್ದ ಗೌರವ. '...ಧರೀತ್ರಿ ...ಊಟಕ್ಕೆ ಕುಮಾರ ಬಂದಿದ್ದಾರೆ' ಎಂದು ಅವರು ಹೆಂಡತಿಗೆ ಕೂಗಿ ಹೇಳುತ್ತಿದ್ದರು. ಧರೀತ್ರಿ ಮೇಡಂ ಸಾಮಾನ್ಯ ಹೆಂಗಸಾಗಿ ಇರಲಿಲ್ಲ. ತುಂಬಾ ಓದಿಕೊಂಡವರು. ಸಾಹಿತ್ಯ ಸಂಗೀತದಲ್ಲಿ ಒಳ್ಳೆಯ ಅಭಿರುಚಿ. ದೇಶದ ನಾಡಿನ ರಾಜಕೀಯವನ್ನು ಕುರಿತು ತಿಳಿದುಕೊಂಡಿದ್ದರು, ಮಾತನಾಡುತ್ತಿದ್ದರು.

ಯೋಜನಾ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದ ಇಂಜಿನಿಯರುಗಳು ಯಾವುದಾದರೂ ರೀತಿಯಲ್ಲಿ ಹೆಚ್ಚು ಹೆಚ್ಚು ಹಣ ಸಂಪಾದಿಸಬೇಕು ಅನ್ನುವಾಗ ಅಂತೂಳೆ ನಿಷ್ಠೆ, ಪ್ರಾಮಾಣಿಕತೆ, ದೇಶ ಸೇವೆ ಎಂದೇ ದುಡಿಯುತ್ತಿದ್ದರು. ನಾನು ಕೂಡ ಇದೇ ಬಗೆಯ ವ್ಯಕ್ತಿತ್ವವನ್ನು ರೂಢಿಸಿ ಕೊಂಡಿದ್ದರಿಂದ ಅವರ ಜೊತೆ ಕೆಲಸ ಮಾಡುವುದು ನನಗೆ ಸಂತಸ ತಂದಿತು.



ಜನಾರ್ಧನ ಅಂತೂಳೆಯವರನ್ನು ನಾನು ನೋಡಿದ್ದು ಅದೇ ಮೊದಲು. ವಿಶಾಲವಾದ ಛೇಂಬರಿನ ತಿರುಗು ಕುರ್ಚಿಯ ಮೇಲೆ, ಯಾವುದೇ ಬಡಿವಾರವಿಲ್ಲದೆ ಕುಳಿತಿದ್ದರು. ಸರಳವಾಗಿ ನಕ್ಕರು.

'ಏನಾದರೂ ಅನುಭವವಿದೆಯೆ?'

ಎಂದು ಕೇಳಿದರು.

ಹೇಳಿದೆ. ಎಸ್ಟಿಮೇಟ್ ಮಾಡುವುದು ಗೊತ್ತು, ವರ್ಕ್ ಸೂಪರ್‌ವಿಷನ್ ಕೂಡ ಮಾಡಿದ್ದೇನೆ ಎಂದೆ. ರಸ್ತೆ ಕಟ್ಟಡ, ಸೇತುವೆಗಳ ಕೆಲಸ ಮಾಡಿಸಿದ್ದೇನೆ ಎಂದು ಹೇಳಿದೆ.

'ಇಲ್ಲಿ ಏನು ಮಾಡಬೇಕೂಂತ ಇದೀರಾ?'

ಎಂದು ಕೇಳಿದರು.

ಮಾತು ಬಹುವಚನದಲ್ಲಿ ತೂರಿ ಬಂದರೂ ಅದರಲ್ಲಿ ಪ್ರೀತಿ ಇತ್ತು ಗೌರವವಿತ್ತು ಸಲಿಗೆ ಇತ್ತು.

ಏನು ಹೇಳುವುದು ಎಂದು ನಾನು ವಿಚಾರ ಮಾಡುತ್ತಿರಲು ಅವರೇ ಮಾತನ್ನು ಮುಂದುವರೆಸಿದರು–

'..ಯಾಕೆ ಕೇಳತಿದೀನಿ ಗೊತ್ತ? ಬರುವವರೆಲ್ಲ ವರ್ಕ್‌ಸ್ಪಾಟ್‌ಗೆ ಹೋಗಬೇಕು ಅಂತಾರೆ... ಡ್ಯಾಮು.. ಛಾನೆಲ್ಲು... ಅಂತಾರೆ...

'ನನಗೆ ಹಾಗಿಲ್ಲ ಸಾರ್... ನೀವು ಹೇಳಿದ ಕೆಲಸಾನ ನಾನು ಮಾಡತೀನಿ...'

ಎಂದೆ ನಾನು ನಡುವೆ ಬಾಯಿ ಹಾಕಿ.

'ನಿಮ್ಮ ಆಸೆ ಆಕಾಂಕ್ಷೆಗಳಿಗೆ ನಾನು ನೀರು ಎರಚೋದಿಲ್ಲ. ಆದರೂ... ಹೊಸದಾಗಿ ಬಂದಿದೀರಾ... ಆರು ತಿಂಗಳು ಆಫೀಸಿನಲ್ಲಿ ಕೆಲಸ ಮಾಡಿ... ಪ್ರಾಜೆಕ್ಟ್ ಬ್ರ್ಯಾಂಚ್‌ನಲ್ಲಿ ಕೆಲಸ ಮಾಡಿದರೆ ನಿಮಗೆ ಅನುಭವ ಸಿಗುತ್ತೆ... ಅನುಕೂಲ ಕೂಡ ಇದೆ..'

ಈ ಅನುಕೂಲ ಅನ್ನುವ ಶಬ್ದವನ್ನು ಅವರು ವಿಶೇಷವಾಗಿ ನುಡಿದರು. ಆ ಕ್ಷಣದಲ್ಲಿ ನನಗಿದು ಅರ್ಥವಾಗಲಿಲ್ಲ, ನಂತರ ಅವರ ಧ್ವನಿಯನ್ನು ಗುರುತಿಸಿದೆ.

ನನ್ನ ರಿಪೋರ್ಟ್ ಮೇಲೆ ಏನೋ ಬರೆದರು.

'ಆಯ್ತು.. ನಿಮಗೆ ಒಳ್ಳೆಯದಾಗಲಿ'

ಎಂದು ನನ್ನ ಕೈಹಿಡಿದು ಕುಲುಕಿದರು.

ಪ್ರಾಜೆಕ್ಟ್ ಬ್ರ್ಯಾಂಚಿನಲ್ಲಿ ನನ್ನ ಮೇಲಧಿಕಾರಿಯಾಗಿ ಓರ್ವ ತಾಂತ್ರಿಕ ಸಹಾಯಕರಿದ್ದರಾದರೂ ನಾನು ನೇರವಾಗಿ ಕೆಲಸ ಮಾಡಬೇಕಾದದ್ದು ಜನಾರ್ಧನ ಅಂತೂಳೆಯವರ ಕೈ ಕೆಳಗೇನೆ.

ಲಿಂಗನಮಕ್ಕಿ ಅಣೆಕಟ್ಟಿನ ನಕ್ಷೆ ಸಿದ್ಧವಾಗಿತ್ತು. ಗುತ್ತಿಗೆ ಕರೆದು ಕಾಮಗಾರಿಯನ್ನು ವಿವಿಧ ಕಂಪನಿಗಳಿಗೆ ಕೊಡುವ ಬಗ್ಗೆ ಸರಕಾರದ ಹಂತದಲ್ಲಿ ಕೆಲಸ ಆರಂಭವಾಗಿತ್ತು. ಬೃಹತ್ ಪ್ರಮಾಣದ ಕೆಲಸ. ಒಂದಿಬ್ಬರು ಗುತ್ತಿಗೆದಾರರಿಂದ ಆಗದ ಕೆಲಸ. ವರುಷದ ನಾಲ್ಕೆ ತಿಂಗಳು ಕೆಲಸ. ಅಲ್ಪಾವಧಿಯಲ್ಲಿ ಕೆಲಸ ಮುಗಿಸಬೇಕು. ದೀರ್ಘ ಕಾಲದವರೆಗೆ ಕೆಲಸವನ್ನು ಮುಂದುವರಿಸಿಕೊಂಡು ಹೋಗುವಂತಿಲ್ಲ. ಯೋಜನೆಗೆ ಓರ್ವ ಮುಖ್ಯ ಇಂಜಿನಿಯರ್ ಬೇರೆ ಇದ್ದರು. ಎಲ್ಲ ಪತ್ರಗಳು ಡಾಕ್ಯುಮೆಂಟುಗಳು ಅವರ ಮೂಲಕ ಮೇಲೆ ಹೋಗಬೇಕು. ಸರಕಾರ ಕೇಳುವ ಎಲ್ಲ ಮಾಹಿತಿ ಸಮಜಾಯಿಶಿ ನಮ್ಮ ಕಛೇರಿಯಲ್ಲಿ ಸಿದ್ಧವಾಗಬೇಕು. ಹೀಗಾಗಿ ನನಗೆ ಸಾಕಷ್ಟು ಕೆಲಸ.

ಅಣೆಕಟ್ಟು ನಿರ್ಮಾಣವಾಗಲಿರುವ ಜಾಗದ ಮಣ್ಣಿನ ಪರೀಕ್ಷೆ, ಕಲ್ಲಿನ ಪರೀಕ್ಷೆ, ನದಿ ನೀರಿನ ಹರಿಯುವಿಕೆಯ ವೇಗ, ಅಣೆಕಟ್ಟಿಗೆ ಬಳಸಲಾಗುವ ಮರಳು, ಕಲ್ಲುಗಳ ಪರೀಕ್ಷೆ, ಈ ಹಿಂದಿನ ೫೦ ವರ್ಷಗಳ ಅವಧಿಯಲ್ಲಿ ಬಿದ್ದ ಮಳೆ ನೀರಿನ ಅಂಕಿ ಅಂಶಗಳು, ಅಣೆಕಟ್ಟಿಗೆ ಬೇಕಾದ ಕಲ್ಲು ಮರಳನ್ನು ಎಲ್ಲೆಲ್ಲಿಂದ ತರಬಹುದು ಎಂಬ ಬಗ್ಗೆ ವಿವರ ಹೀಗೆ ಪ್ರಾಜೆಕ್ಟ್ ಬ್ರ್ಯಾಂಚಿನಲ್ಲಿ ರಾಶಿ ರಾಶಿ ಕೆಲಸ ಹುಟ್ಟಿಕೊಂಡಾಗ ಅಂತೂಳೆಯವರು ರಾತ್ರಿ ಹತ್ತು ಹನ್ನೊಂದು ಗಂಟೆಯವರೆಗೆ ಆಫೀಸಿನಲ್ಲಿಯೇ ಉಳಿಯುತ್ತಿದ್ದರು–

'ಕುಮಾರ ಇದನ್ನಷ್ಟು ಮುಗಿಸಿ ಊಟಕ್ಕೆ ಹೋಗೋಣ.. ಮನೇಲಿ ನಿಮಗೂ ಅಡಿಗೆ ಮಾಡಲಿಕ್ಕೆ ಹೇಳಿದೀನಿ'

ಎಂದು ಹೇಳುತ್ತಿದ್ದರು.

ಕೆಲಸಕ್ಕೆ ಸೇರಿದ ಎರಡು ದಿನಗಳಲ್ಲಿ ನಾನು ಅವರ ಅಚ್ಚು ಮೆಚ್ಚಿನವನಾಗಿದ್ದೆ.

'ನಾವು ಈಗ ಮಾಡತಿರೋ ಕೆಲಸ ಇದೆಯಲ್ಲ... ಇದು ಸಾಮಾನ್ಯವಾದ್ದು ಅಂತ ತಿಳೀಬೇಡ... ವಿದ್ಯುತ್ ಉತ್ಪಾದನೆಯಲ್ಲಿ ನಮ್ಮ ರಾಜ್ಯಾನ ಹತ್ತು ವರ್ಷ ಮುಂದಕ್ಕೆ ತಬ್ಬಂತ ಕರಕೊಂಡು ಹೋಗುತ್ತೆ ಈ ಕೆಲಸ... ನಾಳಿನ ಎಲ್ಲ ಪ್ರಗತಿಗೆ ಈ ಕೆಲಸ ಕಾರಣವಾಗುತ್ತೆ. ನಾವು ತುಂಬಾ ಅಭಿಮಾನದಿಂದ ಈ ಕೆಲಸ ಮಾಡಬೇಕು...'

ಎಂದವರು ಹೇಳುತ್ತಿದ್ದರು.

'ನೀವು ನಿಮ್ಮ ಸರ್ವೀಸಿನ ಪ್ರಾರಂಭವನ್ನೇ ಶರಾವತಿಯಲ್ಲಿ ಮಾಡತಿರೋದು ಕೂಡ ನೀವು ಹೆಮ್ಮೆಯಿಂದ ಯಾವತ್ತೂ ಹೇಳಿಕೊಳ್ಳಬಹುದು ನೋಡಿ...

ಅನ್ನುವುದು ಕೂಡ ಅವರ ಮಾತೆ.

ಹೀಗೆ ಅಭಿಮಾನ, ಹೆಮ್ಮೆ, ನಾಡಿನ ಏಳಿಗೆ ಎಂಬಿತ್ಯಾದಿ ಮಾತುಗಳನ್ನು ಅಂತೂಳೆಯವರೊಬ್ಬರೇ ಹೇಳುತ್ತಿದ್ದರು. ಯೋಜನಾ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದ ಇಂಜಿನಿಯರುಗಳು ಯಾವುದಾದರೂ ರೀತಿಯಲ್ಲಿ ಹೆಚ್ಚು ಹೆಚ್ಚು ಹಣ ಸಂಪಾದಿಸಬೇಕು ಅನ್ನುವಾಗ ಅಂತೂಳೆ ನಿಷ್ಠೆ ಪ್ರಾಮಾಣಿಕತೆ, ದೇಶ ಸೇವೆ ಎಂದೇ ದುಡಿಯುತ್ತಿದ್ದರು. ನಾನು ಕೂಡ ಇದೇ ಬಗೆಯ ವ್ಯಕ್ತಿತ್ವವನ್ನು ರೂಢಿಸಿಕೊಂಡಿದ್ದರಿಂದ ಅವರ ಜೊತೆ ಕೆಲಸ ಮಾಡುವುದು ನನಗೆ ಸಂತಸ ತಂದಿತು.

ಅವರಲ್ಲಿ ನಾನು ಮೆಚ್ಚಿಕೊಂಡ ಮತ್ತೂ ಒಂದು ಗುಣವೆಂದರೆ ಅವರು ತಮ್ಮ ಹೆಂಡತಿಯ ಬಗ್ಗೆ ತೋರುತ್ತಿದ್ದ ಗೌರವ. ಕಛೇರಿ ಕೆಲಸ ರಾತ್ರಿಗೂ ಮುಂದುವರಿದಾಗ ಅವರು 'ಕುಮಾರ.. ನಡೀರಿ ಊಟ ನಮ್ಮಲ್ಲೇ ಮಾಡುವಿರಂತೆ'

ಎಂದು ಹೇಳುತ್ತಿದ್ದರು.

ಐ.ಬಿ. ಕಾಳಯ್ಯನ ಊಟ ಒಂದು ರಾತ್ರಿಗಾದರೂ ತಪ್ಪಿತಲ್ಲ ಎಂದು ನಾನು ಅವರ ಕಾರನ್ನು ಏರುತ್ತಿದ್ದೆ.

'...ಧರೀತ್ರಿ ...ಊಟಕ್ಕೆ ಕುಮಾರ ಬಂದಿದ್ದಾರೆ'

ಎಂದು ಅವರು ಹೆಂಡತಿಗೆ ಕೂಗಿ ಹೇಳುತ್ತಿದ್ದರು.

ಧರೀತ್ರಿ ಮೇಡಂ ಸಾಮಾನ್ಯ ಹೆಂಗಸಾಗಿ ಇರಲಿಲ್ಲ. ತುಂಬಾ ಓದಿಕೊಂಡವರು. ಸಾಹಿತ್ಯ ಸಂಗೀತದಲ್ಲಿ ಒಳ್ಳೆಯ ಅಭಿರುಚಿ. ದೇಶದ ನಾಡಿನ ರಾಜಕೀಯವನ್ನು ಕುರಿತು ತಿಳಿದುಕೊಂಡಿದ್ದರು. ಮಾತನಾಡುತ್ತಿದ್ದರು. ಇದಕ್ಕೆ ಹಿನ್ನೆಲೆಯಾಗಿ ಅವರ ತಂದೆ ಅಣ್ಣಂದಿರು ರಾಜಕೀಯದಲ್ಲಿದ್ದಾರೆ ಎಂದು ಕೇಳಿದೆ. ರಾಜಕೀಯದಲ್ಲಿದ್ದ ಜನ ಅವರ ಮನೆಗೂ ಬಂದು ಹೋಗುತ್ತಿದ್ದರು. ರಾಜ್ಯದಲ್ಲಿ ನಡೆಯುವ ರಾಜಕೀಯ ಸಮಾವೇಷಗಳಲ್ಲಿ, ಸಾಹಿತ್ಯ ಸಂಗೀತದ ಕಾರ್ಯಕ್ರಮಗಳಲ್ಲಿ ಧರೀತ್ರಿ ತಪ್ಪದೆ ಭಾಗವಹಿಸುತ್ತಿದ್ದರು. ಬಿಡುವಿದ್ದರೆ ಜನಾರ್ಧನ ಅಂತೂಳೆಯವರೇ ಅವರನ್ನು ಕರೆದೊಯ್ಯುತ್ತಿದ್ದರು.

ಜನಾರ್ಧನ ಅಂತೂಳೆಯವರ ಮನೆಯಲ್ಲಿ ಇದ್ದಷ್ಟೂ ಹೊತ್ತು ಧರೀತ್ರಿ ಮೇಡಂ ರಾಜಕೀಯದ ಬಗ್ಗೆ, ಅದೇ ಹೊರಬಿದ್ದ ಒಂದು ಪುಸ್ತಕದ ಬಗ್ಗೆ, ತೆರೆ ಕಂಡ ಕಲಾತ್ಮಕ ಚಲನಚಿತ್ರದ ಬಗ್ಗೆ ಮಾತನಾಡುತ್ತಿದ್ದರು. ಅವರ ಅಭಿಪ್ರಾಯ ಮಂಡಿಸುತ್ತಿದ್ದರು. ಆಗೆಲ್ಲ ಜನಾರ್ಧನ ಹಾಗಲ್ಲ ಹೀಗೆ ಎಂದು ಹೇಳುತ್ತಿದ್ದರು. ಇಲ್ಲವೆ ಅಚ್ಚರಿ ಮೆಚ್ಚುಗೆಯಿಂದ ಹೆಂಡತಿ ಮಾತುಗಳನ್ನು ಆಲಿಸುತ್ತ ಕೂರುತ್ತಿದ್ದರು. ಮಡಚಿದ ಕೈ ಬೆರಳುಗಳ ಮೇಲೆ ಗದ್ದ ಊರಿಕೊಂಡು ತಲೆದೂಗುತ್ತ ಹೆಂಡತಿ ಮಾತುಗಳನ್ನು ಅವರು ಕೇಳುತ್ತಿದ್ದ ರೀತಿ ಆಕರ್ಷಕವಾಗಿರುತ್ತಿತ್ತು. ಯಾವ ಗಂಡನೂ ಹೆಂಡತಿ ಮಾತುಗಳನ್ನು ಹೀಗೆ ಕೇಳುವುದಿಲ್ಲ ಅನಿಸುತ್ತಿತ್ತು ನನಗೆ.

ಕೆಲ ಬಾರಿ ಧರೀತ್ರಿ ಮೇಡಂ ಸಾರು ಅನ್ನ ಅಪ್ಪಳ ತರಲು ಒಳ ಹೋದಾಗ ಜನಾರ್ಧನ ಅಂತೂಳೆ ನನ್ನ ಕಡೆ ತಿರುಗುತ್ತಿದ್ದರು–

'ನಿನ್ನ ಮೇಡಂ ಮಾತನ್ನು ಹಗುರವಾಗಿ ತೊಕೋಬೇಡ ಕುಮಾರ... ಅವಳು ಎಲ್ಲದರಲ್ಲೂ ಜೀನಿಯಸ್... ಅವಳು ನನ್ನ ಹೆಂಡತಿ ಆಗದೇ ಇದ್ದಿದ್ದರೆ ಇಷ್ಟು

ಹೊತ್ತಿಗೆ ಎಂಎಲ್ಎನೋ ಮಂತ್ರಿನೋ ಆಗಿರತಿದ್ಲು... ಅವಳಿಗೆ ಎಲ್ಲ ವಿಷಯದಲ್ಲೂ ಜ್ಞಾನ ಇದೆ... ಖಚಿತವಾದ ಅಭಿಪ್ರಾಯವಿದೆ..'

ಎಂದೂ ಹೇಳುತ್ತಿದ್ದರು.

ಧರೀತ್ರಿ ಮೇಡಂ ಅವರಲ್ಲಿ ಈ ಪ್ರತಿಭೆ ಇದೆ ಅನ್ನುವುದು ನನ್ನ ಗಮನಕ್ಕೂ ಬಂದಿತ್ತು.

* * *

ಲಿಂಗನಮಕ್ಕಿ ಅಣೆಕಟ್ಟಿನ ನಿರ್ಮಾಣದ ಎಸ್ಟಿಮೇಟು, ಪ್ಲ್ಯಾನು, ಡ್ರಾಯಿಂಗು ಮತ್ತಿತರ ಮಾಹಿತಿ ದಾಖಲೆಗಳನ್ನು ತೆಗೆದುಕೊಂಡು ನಾವೇ ಬೆಂಗಳೂರಿಗೆ ಹೋಗಬೇಕಾಯಿತು.

ಮುಖ್ಯ ಇಂಜಿನಿಯರ್ ಅವರು ಜನಾರ್ಧನ ಅಂತೂಳೆಯವರನ್ನು ಕರೆದು,

'ನೀವೇ ಹೋಗಿ ಎಲ್ಲ ಫೈನಲೈಸ ಮಾಡಿಕೊಂಡು ಬನ್ನಿ. ಎಂಟು ದಿನ ಆದ್ರೂ ಪರವಾ ಇಲ್ಲ...'

ಎಂದದ್ದರಿಂದ ಅಂತೂಳೆಯವರ ಜೊತೆ ನಾನೂ ಹೊರಟೆ. ಎಂದಿನಂತೆ ಧರೀತ್ರಿ ಮೇಡಂ ಕೂಡ ನಮ್ಮ ಜೊತೆಗಿದ್ದರು.

'ಅಲ್ಲಿ ಅವರ ಪಕ್ಷದ ಒಂದು ಮೂರು ದಿನಗಳ ಅಧಿವೇಶನ ಇದೆಯಂತೆ... ಅವಳೂ ಬರತಾಳೆ. ಇಲ್ಲಿದ್ದು ಅವಳು ಏನು ಮಾಡಬೇಕು... ಬರಲಿ...'

ಎಂದರು ಅಂತೂಳೆ.

ಜೇಪಿನಲ್ಲಿ ತಾಳಗುಪ್ಪದವರೆಗೆ ಬಂದು ಅಲ್ಲಿ ನಾವು ರೈಲು ಅತ್ತಿದೆವು.

ಧರೀತ್ರಿ ಮೇಡಂ ಮೂರು ಜನರಿಗಾಗುವಷ್ಟು ಊಟ ತಂದಿದ್ದರು. ರೈಲಿನಲ್ಲಿಯೇ ನಮ್ಮ ರಾತ್ರಿ ಊಟ ಕೂಡ ಆಯಿತು. ಮಾತಿನ ನಡುವೆ ಧರೀತ್ರಿ ಮೇಡಂ ಬೆಂಗಳೂರಿನ ರಾಜಕೀಯ ಅಧಿವೇಶನದ ಬಗ್ಗೆ ಮಾತನ್ನಾಡಿದರು. ರಾಜಕೀಯ ಸಿದ್ಧಾಂತಗಳು ಸರಕಾರದ ಆಡಳಿತದ ಮೇಲೆ ಬೀರುವ ಪ್ರಭಾವ, ಅದರಿಂದ ದೇಶಕ್ಕೆ ಒಳ್ಳೆಯದಾಗುವ ರೀತಿ, ಸರಕಾರಿ ಅಧಿಕಾರಿ ನೌಕರರ ಪ್ರಾಮಾಣಿಕತೆ, ನಿಷ್ಠೆ, ಶರಾವತಿಯಂತಹ ಯೋಜನೆಗಳ ಯಶಸ್ಸು ಹೀಗೆ ಬಹಳಷ್ಟು ಮಾತುಗಳು ಅವರ ಬಾಯಿಂದ ಹೊರಬಿದ್ದವು. ನಡು ನಡುವೆ ಸ್ತ್ರೀಯರು ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ವಹಿಸುವ ಪಾಲುದಾರಿಕೆಯ ಬಗ್ಗೆಯೂ ಮಾತನಾಡಿದರು. ಸಮಾಜ ಒಂಟೆತ್ತಿನ ಗಾಡಿಯಾಗಬಹುದು ಎಂದರು. ಎಲ್ಲ ಭಾರವನ್ನೂ ಪುರುಷರಷ್ಟೇ ಹೊರಬಾರದು. ಮಹಿಳೆಯರಿಗೂ ಸಮಪಾಲು ನೀಡಬೇಕು. ಪುರುಷರಷ್ಟೇ ಎಲ್ಲ ಕ್ಷೇತ್ರಗಳಲ್ಲೂ ಮುಂದಾದರೆ ಅದು ಸಾಮಾಜಿಕ ಪ್ರಗತಿಗೆ ಪೂರಕವಾಗಲಾರರು. ಭಿನ್ನ ಭಿನ್ನ ಆಲೋಚನೆಗಳಿಂದಷ್ಟೇ ಪ್ರಗತಿ ಸಾಧ್ಯವಾಗುತ್ತದಲ್ಲದೆ ಒಂದೇ ಬಗೆಯ ಚಿಂತನೆಗಳಿಂದಲ್ಲ ಎಂದರು ಅವರು.

ಜನಾರ್ಧನ ಅಂತೂಳೆಯವರು

'ಹೌದು... ಹೌದು...'

ಮಾತಿನ ನಡುವೆ ಧರೀತ್ರಿ ಮೇಡಂ ಬೆಂಗಳೂರಿನ ರಾಜಕೀಯ ಅಧಿವೇಶನದ ಬಗ್ಗೆ ಮಾತನ್ನಾಡಿದರು. ರಾಜಕೀಯ ಸಿದ್ಧಾಂತಗಳು ಸರಕಾರದ ಆಡಳಿತದ ಮೇಲೆ ಬೀರುವ ಪ್ರಭಾವ, ಅದರಿಂದ ದೇಶಕ್ಕೆ ಒಳ್ಳೆಯದಾಗುವ ರೀತಿ, ಸರಕಾರಿ ಅಧಿಕಾರಿ ನೌಕರರ ಪ್ರಾಮಾಣಿಕತೆ, ನಿಷ್ಠೆ, ಶರಾವತಿಯಂತಹ ಯೋಜನೆಗಳ ಯಶಸ್ಸು, ಹೀಗೆ ಬಹಳಷ್ಟು ಮಾತುಗಳು ಅವರ ಬಾಯಿಂದ ಹೊರಬಿದ್ದವು. ನಡು ನಡುವೆ ಸ್ತ್ರೀಯರು ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ವಹಿಸುವ ಪಾಲುದಾರಿಕೆಯ ಬಗ್ಗೆಯೂ ಮಾತನಾಡಿದರು. ಸಮಾಜ ಒಂಟೆತ್ತಿನ ಗಾಡಿಯಾಗಬಹುದು ಎಂದರು. ಎಲ್ಲ ಭಾರವನ್ನೂ ಪುರುಷರಷ್ಟೇ ಹೊರಬಾರದು. ಮಹಿಳೆಯರಿಗೂ ಸಮಪಾಲು ನೀಡಬೇಕು. ಪುರುಷರಷ್ಟೇ ಎಲ್ಲ ಕ್ಷೇತ್ರಗಳಲ್ಲೂ ಮುಂದಾದರೆ ಅದು ಸಾಮಾಜಿಕ ಪ್ರಗತಿಗೆ ಪೂರಕವಾಗಲಾರರು. ಭಿನ್ನ ಭಿನ್ನ ಆಲೋಚನೆಗಳಿಂದಷ್ಟೇ ಪ್ರಗತಿ ಸಾಧ್ಯವಾಗುತ್ತದಲ್ಲದೆ ಒಂದೇ ಬಗೆಯ ಚಿಂತನೆಗಳಿಂದಲ್ಲ ಎಂದರು ಅವರು.

ಎಂದು ತಲೆದೂಗುತ್ತ ಕುಳಿತಿದ್ದರು.

ಅವರ ಕಣ್ಣಿನ ಹೊಳಪು, ಅವರು ತೋರುತ್ತಿದ್ದ ಆಸಕ್ತಿ ಅವರಿಗೆ ಧರೀತ್ರಿ ಮೇಡಂ ಅವರ ಮಾತಿನಲ್ಲಿ ಸಂಪೂರ್ಣ ವಿಶ್ವಾಸವಿರುವುದನ್ನು ವ್ಯಕ್ತಪಡಿಸುತ್ತಲಿತ್ತು.

ನಾನು ಕೂಡ ಧರೀತ್ರಿ ಮೇಡಂ ಅವರ ಮಾತಿಗೆ ತಲೆದೂಗಿದೆ. ಅವರೆಗಿನ ನನ್ನ ಅನುಭವಕ್ಕೆ ಹೀಗೆಲ್ಲ ಮಾತನಾಡುವ ಓರ್ವ ಮಹಿಳೆ ಕಂಡಿರಲಿಲ್ಲ. ಮಹಿಳೆಯೋರ್ವಳು ಇಷ್ಟೊಂದು ಸ್ಪಷ್ಟವಾಗಿ, ನಿಖರವಾಗಿ ಮಾತನಾಡಬಹುದು ಅನ್ನುವ ನಿರೀಕ್ಷೆ ಕೂಡ ನನಗೆ ಇರಲಿಲ್ಲ.

ಹಾಗೆಯೇ ಧರೀತ್ರಿ ಮೇಡಂ ಅವರ ವಿಚಾರಗಳ ಹಿಂದೆ ಜನಾರ್ಧನ ಅಂತೂಳೆಯವರೂ ಇದ್ದಾರೆ ಎಂದು ನನಗೆ ಖಚಿತವಾಯಿತು. ಅವರ ಮಾತಿನಲ್ಲಿ ಕೂಡ ನಾನು ಇದೇ ಬಗೆಯ ದನಿಯನ್ನು ಗುರುತಿಸುತ್ತ ಬಂದಿದ್ದೆ. ಅಲ್ಲದೆ ಅವರು ತಮ್ಮ ವ್ಯಕ್ತಿತ್ವದಿಂದ ಧರೀತ್ರಿ ಮೇಡಂ ಅವರನ್ನು ಈ ಎತ್ತರಕ್ಕೆ ಬೆಳೆಸುತ್ತಿದ್ದಾರೆ ಎಂದು ನನಗೆ ಅನಿಸಿತು. ಹೆಂಡತಿಯಾದವಳು ಗಂಡನ ಎದುರೇ ಹೀಗೆ ಮಾತನಾಡುವಾಗ, ಈ ಬೆಳವಣಿಗೆಗೆ ಅವನ ಬೆಂಬಲವೂ ಇದೆ ಎಂದು ನಂಬದಿರಲು ಹೇಗೆ ಸಾಧ್ಯ ?

ರಾತ್ರಿಯ ರೈಲು ಹೋಗುತ್ತಿರಲು ಗಂಡ ಹೆಂಡತಿ ಆ ಬದಿಯ ಸೀಟಿನಲ್ಲಿ ನಿದ್ದೆ ಹೋದರೆ ನಾನು ಈ ಕಡೆಯಲ್ಲಿ ಒರಗಿಕೊಂಡೆ. ಮೊದಲನೇ ದರ್ಜೆಯಾಗಿದ್ದರಿಂದ ಪ್ರಯಾಣಿಕರ ನೂಕು ನುಗ್ಗಲು ಗದ್ದಲವೇನೂ ಇರಲಿಲ್ಲ.

* * *

ಬೆಂಗಳೂರಿನಲ್ಲಿ ನಾವು ಜನರಲ್ ಹಾಸ್ಟೆಲ್‌ನಲ್ಲಿ ಕೊಠಡಿ ಹಿಡಿದೆವು. ಬೆಳಗ್ಗೆ ಎದ್ದ ತಕ್ಷಣ ನಾನು ಅಂತೂಳೆಯವರು ಫೈಲು ಕಡತಗಳನ್ನು ಹಿಡಿದು ವಿಧಾನಸೌಧಕ್ಕೆ ಹೋಗುವುದು ಧರೀತ್ರಿ ಮೇಡಂ ಆಗಲೇ ಕೊಠಡಿಗೆ ಬಂದ ಅವರ ಪಕ್ಷದ ಕಾರ್ಯಕರ್ತರ ಜೊತೆ ಅವರ ಅಧಿವೇಶನಕ್ಕೆ ಹೋಗುವುದು ಹೀಗೆ ನಾಲ್ಕು ದಿನ ನಡೆಯಿತು.

ರಾತ್ರಿ ಕೊಠಡಿಗೆ ಬಂದಾಗ ಧರೀತ್ರಿ ಮೇಡಂ ಅಧಿವೇಶನದ ಹೈಲೈಟ್‌ಗಳನ್ನು ಹೇಳುತ್ತಿದ್ದರು.

* * *

ಅಣೆಕಟ್ಟಿನ ನಿರ್ಮಾಣದ ಕೆಲಸವನ್ನು ಐದಾರು ದೊಡ್ಡ ಗುತ್ತಿಗೆದಾರರಿಗೆ ಹಂಚಿ ಕೊಡಲಾಯಿತು. ಇದಕ್ಕೂ ಮೊದಲು ಟೆಂಡರ್ ಕರೆಯುವ, ಬಂದ ಟೆಂಡರುಗಳನ್ನು ಸಂಗ್ರಹಿಸಿ ಪರಿಶೀಲಿಸುವ, ಟೆಂಡರ್ ಯಾರಿಗೆ ನೀಡಬಹುದು ಎಂಬ ಬಗ್ಗೆ ವರದಿ ತಯಾರಿಸುವ ಸಾಕಷ್ಟು ಕೆಲಸಗಳು ನಡೆದವು. ಹೊಸದಾಗಿ ಬಂದ ಇಂಜಿನಿಯರುಗಳು ಏಕೆ ಕಛೇರಿ ಕೆಲಸ ಒಪ್ಪಿಕೊಳ್ಳಲಿಲ್ಲ ಎಂಬ ವಿಷಯ ನನಗೆ ಮನವರಿಕೆಯಾಯಿತು. ಪ್ರಾಜೆಕ್ಟ್ ಬ್ರ್ಯಾಂಚಿನ ಈ ಕೆಲಸದಲ್ಲಿ ಹಣ ಮಾಡುವಂತಹುದೇನೂ ಇರಲಿಲ್ಲ. ಆದರೆ ಲಿಂಗನಮಕ್ಕಿ, ತಲಕಳಲೆ ಮುಂತಾದ ಕಡೆ ನೇಮಕಗೊಂಡ ಇಂಜಿನಿಯರುಗಳು ರಸ್ತೆ ಕಟ್ಟಡ, ಸೇತುವೆ, ನಾಲೆ ಎಂದೆಲ್ಲ ಕಾಮಗಾರಿ ಮಾಡಿಸುತ್ತ ಸಾಕಷ್ಟು ಹಣ ಮಾಡಿದ್ದರು. ನಾನು ಕೇವಲ ಏಳು ಎಂಟು ಗಂಟೆಗಳ ನಿದ್ದೆ ಮಾಡುತ್ತ ಅಂತೂಳೆಯವರ ನೆರಳಿನಂತೆ ದುಡಿಯತೊಡಗಿದ್ದೆ.

ಒಮ್ಮೆ ಅಂತೂಳೆಯವರೆ –

'ಕುಮಾರ' ಎಂದರು.

ವಾರ್ಷಿಕ ವಿಶೇಷಾಂಕ ೨೦೦೫

'ಸಾರ್' ಎಂದೆ.

'ನಿಮಗೆ ಬರೀ ಕೆಲಸ ಆಯ್ತು, ಅಲ್ಲ?'

'ಇಲ್ಲ ಸಾರ... ಈ ಕೆಲಸದಲ್ಲೂ ಒಂದು ಸಂತೋಷ ಇದೆ...'

ಎಂದೆ.

'ಆದರೂ ಬೇರೆಯವರ ಜೊತೆ ಹೋಲಿಸಿದಾಗ ನಿಮ್ಮದು ಕೇವಲ ಕೆಲಸ ಆಯ್ತು...' ಎಂದವರು ಮತ್ತೆ –

'ನೀವು ಯೋಚಿಸಬೇಡಿ'

ಎಂದರವರು.

'ಅಂದ್ರೆ ಸಾರ?'

'ಟೆಂಡರ್ ಆಗಿದೆ..: ದೊಡ್ಡ ಕಂಪನಿಯವರು ನಮ್ಮಲ್ಲಿಗೆ ಬರತಾರೆ... ನಾನು ಅವರಿಗೆ ಹೇಳತೇನೆ...'

ನನಗೆಲ್ಲ ಅರ್ಥವಾಯಿತು.

'ದಯವಿಟ್ಟು ಬೇಡ ಸಾರ್.... ನನ್ನ ಪಾಲಿನ ಕೆಲಸಾನ ನಾನು ಪ್ರಾಮಾಣಿಕವಾಗಿ ಮಾಡಿದೆ ಅನ್ನುವ ತೃಪ್ತಿ ನನಗಿರಲಿ ಸಾರ್. ನಿಮ್ಮ ಶಿಷ್ಯನಾಗಿ ನಾನು ಹಾಗೆಲ್ಲ ಮಾಡಬಾರದು...'

ಎಂದೆ.

ಅವರು ನಕ್ಕರು.

ಮುಂದೆ ಕೆಲಸ ಪ್ರಾರಂಭವಾಯಿತು. ದೊಡ್ಡ ದೊಡ್ಡ ಗುತ್ತಿಗೆದಾರರು ಏನೇನೋ ಕಾರಣಗಳಿಗಾಗಿ ಕಛೇರಿಗೆ ಬರುತ್ತಿದ್ದರು. ಬರುವಾಗ ತಮ್ಮ ಬ್ಯಾಗುಗಳಲ್ಲಿ ದಪ್ಪ ಗಾತ್ರದ ಬಿಳಿ ಕವರುಗಳನ್ನು ಅವರು ಇರಿಸಿಕೊಂಡೇ ಬರುತ್ತಿದ್ದರು. ಆದರೆ ಜನಾರ್ಧನ ಅಂತೂಳೆ ಎದುರು ನನ್ನ ಎದುರು ಅವರು ಈ ಕವರುಗಳನ್ನು ಹೊರ ತೆಗೆಯುತ್ತಿರಲಿಲ್ಲ. ಈ ಮಟ್ಟಿಗೆ ನಾನು ನನ್ನ ವೃತ್ತಿ ಗೌರವವನ್ನು ಉಳಿಸಿಕೊಂಡಿದ್ದೆ.

ಈ ಬಗ್ಗೆ ಧರೀತ್ರಿ ಮೇಡಂ ಕೂಡ ಪ್ರಶಂಸೆಯ ಮಾತುಗಳನ್ನು ಹೇಳಿದರು.

'ನೀವೂ ಇವರ ಹಾಗೇ ಅಂತ ಕೇಳಿದೆ... ಗುಡ್'

ಎಂದರವರು.

'ಮಾಡೋ ಕೆಲಸಕ್ಕೆ ಸರಕಾರ ಸಂಬಳ ಕೊಟ್ಟ ನಂತರವೂ ಬೇರೊಬ್ಬರಿಂದ ಹಣ ತೊಕೊಳ್ಳೋದು ಹೇಸಿಗೆ...'

ಎಂದವರು ಹೇಳಿದ್ದು ನನಗೆ ಸರಿ ಅನಿಸಿತು.

* * *

ಅಣೆಕಟ್ಟಿನ ಕೆಲಸ ಪ್ರಾರಂಭವಾಯಿತು. ನೆಲದೊಳಗಿನಿಂದ ಕಟ್ಟಿಕೊಂಡು ಬರಲಾದ ಅಣೆಕಟ್ಟು ಮೇಲೆ ಮೇಲೆ ಏರತೊಡಗಿದ ಹಾಗೆ ಜನಾರ್ಧನ ಅಂತೂಳೆಯವರು ಆಗಾಗ್ಗೆ ಹೋಗಿ ತಾವೇ ಖುದ್ದು ನಿಂತು ಕೆಲಸ ಪರೀಕ್ಷಿಸುತ್ತಿದ್ದರು. ಕೆಲ ಬಾರಿ ಅವರು ನನ್ನನ್ನೂ ಕರೆದು ಕೆಲಸ ವೀಕ್ಷಣೆ ಮಾಡಲು ಹೇಳುತ್ತಿದ್ದರು.

ಅಣೆಕಟ್ಟಿನ ನಿರ್ಮಾಣ ಸ್ಥಳ ಕೂಲಿಗಳಿಂದ ವಾಹನಗಳಿಂದ ತುಂಬಿ ಹೋಗುತ್ತಿತ್ತು. ಮರಳು, ಕಲ್ಲು, ಸಿಮೆಂಟು ಹೊತ್ತ ಲಾರಿಗಳು ಒಂದೇ ಸಮನೆ ಡ್ಯಾಮ್ ಸೈಟಿಗೆ ಬರುತ್ತಿದ್ದವು. ಕಲ್ಲುಗಳನ್ನು ಅಡ್ಡೆಗೆ ತೂಗುಹಾಕಿಕೊಂಡು ಕೂಲಿಕಾರರು ಅಣೆಕಟ್ಟಿನ ಮೇಲೆ ಸಾಗುತ್ತಿದ್ದರು. ಕಾಂಕ್ರೀಟು ಮಿಕ್ಸರುಗಳಿಂದ ಅರೆದ ಕಾಂಕ್ರೀಟು ನಿರಂತರವಾಗಿ ಸರಬರಾಜಾಗುತ್ತಿತ್ತು. ಅಣೆಕಟ್ಟಿನ ಮೇಲೆ ಕೂರಿಸಲಾಗುವ ಪ್ರತಿಕಲ್ಲನ್ನೂ ನೋಡಲು ಕಂಪನಿಯಿಂದ, ವಿಭಾಗ ಕಛೇರಿಯಿಂದ ಇಂಜಿನಿಯರುಗಳು, ಮೇಸ್ತ್ರಿಗಳು ಇರುತ್ತಿದ್ದರು. ಆದರೂ ನಮ್ಮ ಕಛೇರಿಯಿಂದಲೂ ಯಾರಾದರೂ ಇರಬೇಕು ಅನ್ನುತ್ತಿದ್ದರು ಅಂತೂಳೆ.

'ಈ ಕೆಲಸದಲ್ಲಿ ಎಲ್ಲೂ ಪಡಪೋಸಿ ಆಗಬಾರದು. ಈ ಅಣೆಕಟ್ಟು ಮುಂದೆ ನೂರು ವರ್ಷ ನಿಲ್ಲಬೇಕಲ್ಲ...'

ಎಂದವರು ಹೇಳುತ್ತಿದ್ದರು.

ನನಗೂ ಅವರ ಮಾತು ಹೌದೆನಿಸುತ್ತಿತ್ತು.

ಇಡೀ ಅಣೆಕಟ್ಟಿನ ನಿರ್ಮಾಣ ನೋಡಿಕೊಳ್ಳಲು ಎಡದಂಡೆ ನಿರ್ಮಾಣ ವಿಭಾಗ, ಬಲದಂಡೆ ನಿರ್ಮಾಣ ವಿಭಾಗ ಎಂದು ಎರಡು ವಿಭಾಗಗಳಿದ್ದವು. ಇಬ್ಬರು ಕಾರ್ಯಪಾಲಕ ಇಂಜಿನಿಯರುಗಳು, ಹಲವಾರು ಸಹಾಯಕ ಇಂಜಿನಿಯರುಗಳು ಇದ್ದರು. ಇವರ ಮೇಲೆ ನಮ್ಮ ಕಛೇರಿ. ಕೆಲಸ ಸಮರ್ಪಕವಾಗಿ ತೆಗೆದುಕೊಳ್ಳುವ ಜವಾಬ್ದಾರಿ ಎಲ್ಲರ ಮೇಲೆ. ಹೀಗಾಗಿ ಜನಾರ್ಧನ ಅಂತೂಳೆಯವರು ಆಗಾಗ್ಗೆ ಕಾಮಗಾರಿ ವೀಕ್ಷಣೆಗೆ ಹೋದರೆ, ಅವರು ಇಲ್ಲದಿರುವಾಗ ನಾನು ಧಾವಿಸುತ್ತಿದ್ದೆ. ಇಷ್ಟಾದರೂ ಸಿಮೆಂಟಿನ ಪ್ರಮಾಣ ಕಡಿಮೆ ಮಾಡುವುದು, ಎಳೆಕಲ್ಲುಗಳನ್ನು ಬಳಸುವುದು, ಮಣ್ಣು ಮಿಶ್ರಿತ ಮರಳನ್ನು ತಂದು ಸುರಿಯುವುದು ನಡೆಯುತ್ತಿತ್ತು– ಇದನ್ನು ಆದಷ್ಟು ತಪ್ಪಿಸಬೇಕೆಂಬುದು ನಮ್ಮ ಪ್ರಯತ್ನವಾಗಿತ್ತು.

ಈ ಕಾಮಗಾರಿ ನೋಡಲೆಂದು ಹೋದಾಗಲೇ ಒಂದು ದಿನ ವಿಭಾಗ ಕಛೇರಿಯ ಇಂಜಿನಿಯರ್ ದಯಾನಂದ ಭೇಟಿಯಾದ.

ಛವಾಲಿಗಳು ಹೊತ್ತು ತಂದ ಕಲ್ಲನ್ನು ಡ್ಯಾಮಿಗೆ ಜೋಡಿಸುವ ಮುನ್ನ ಅದಕ್ಕೆ ಮೆತ್ತಿರುವ ಮಣ್ಣನ್ನು ಕೆರೆದು ತೆಗೆದು ಆಯಕಟ್ಟಿನ ಜಾಗದಲ್ಲಿರಿಸಿ ಸುತ್ತ ಕಾಂಕ್ರೀಟ್ ಹಾಕುವುದನ್ನು ನೋಡುತ್ತ ನಿಂತ ನನ್ನ ಬಳಿ ಬಂದು ಆತ ಸಣ್ಣಗೆ ಕೆಮ್ಮಿದ.

'ಏನು ದಯಾನಂದ?'

ಎಂದು ಕೇಳಿದೆ.

'ಸಾಹೇಬರು ಊರಲ್ಲಿ ಇಲ್ಲವೇನೋ ?'

'ಇಲ್ಲ ಬೆಂಗಳೂರಿಗೆ ಹೋಗಿದಾರೆ'

'ಮೇಡಂ ಕೂಡ ಬೆಂಗಳೂರಿನಲ್ಲಿ ಇರೋ ಹಾಗಿದೆ'

ಎಂದು ಆತ ಅದೊಂದು ರೀತಿಯಲ್ಲಿ ನಕ್ಕ.

ನನಗೆ ಈ ಬಗೆಯ ಮಾತುಗಳು ಹಿಡಿಸುತ್ತಿರಲಿಲ್ಲ.

'ಅದು ಅವರ ಖಾಸಗಿ ವಿಷಯ'

ಎಂದೆ ನಾನು.

'ನೀವು ಎಲ್ಲ ವಿಷಯದಲ್ಲೂ ಹೀಗೆ ಭೋಳೆಶಂಕರ ಆಗಿರಬಾರದು...'

ಎಂದು ನಗುವನ್ನು ಮುಂದುವರಿಸಿದ ಆತ.

ನಾನು ಹಣಗಿಣ ಮುಟ್ಟದ್ದರಿಂದ ನನಗೆ ಭೋಳೆ ಶಂಕರ ಎಂಬ ಹೆಸರು ಬಂದಿತ್ತು. ಈ ಹೆಸರಿಗೆ ಪಾತ್ರದಾರ ಮತ್ತೊಬ್ಬರೆಂದರೆ ನನ್ನ ಸಾಹೇಬರಾದ ಜನಾರ್ಧನ ಅಂತೂಳೆಯವರು.

ದಯಾನಂದ ತಾನೇ ಮಾತನ್ನು ಮುಂದುವರೆಸಿದ.

'... ನಿನ್ನ ಧರೀತ್ರಿ ಮೇಡಂ ಈಗ ಇಲ್ಲಿಗೆ ಬರೋದೇ ಇಲ್ಲವಂತೆ ಹೌದೆ ?'

ಎಂದೂ ಕೇಳಿದ.

'ಹೇಳಿದ್ನಲ್ಲ.. ನನಗೆ ಅದರಲ್ಲಿ ಆಸಕ್ತಿ ಇಲ್ಲ'

ಎಂದೆ.

'ಏನು ದಯಾನಂದ?' ಎಂದು ಕೇಳಿದೆ. 'ಸಾಹೇಬರು ಊರಲ್ಲಿ ಇಲ್ಲವೇನೋ ?' 'ಇಲ್ಲ ಬೆಂಗಳೂರಿಗೆ ಹೋಗಿದಾರೆ' 'ಮೇಡಂ ಕೂಡ ಬೆಂಗಳೂರಿನಲ್ಲಿ ಇರೋ ಹಾಗಿದೆ' ಎಂದು ಆತ ಅದೊಂದು ರೀತಿಯಲ್ಲಿ ನಕ್ಕ. ನನಗೆ ಈ ಬಗೆಯ ಮಾತುಗಳು ಹಿಡಿಸುತ್ತಿರಲಿಲ್ಲ. 'ಅದು ಅವರ ಖಾಸಗಿ ವಿಷಯ' ಎಂದೆ ನಾನು. 'ನೀವು ಎಲ್ಲ ವಿಷಯದಲ್ಲೂ ಹೀಗೆ ಭೋಳೆಶಂಕರ ಆಗಿರಬಾರದು...' ಎಂದು ನಗುವನ್ನು ಮುಂದುವರಿಸಿದ ಆತ. ನಾನು ಹಣಗಿಣ ಮುಟ್ಟದ್ದರಿಂದ ನನಗೆ ಭೋಳೆ ಶಂಕರ ಎಂಬ ಹೆಸರು ಬಂದಿತ್ತು. ಈ ಹೆಸರಿಗೆ ಪಾತ್ರದಾರ ಮತ್ತೊಬ್ಬರೆಂದರೆ ನನ್ನ ಸಾಹೇಬರಾದ ಜನಾರ್ಧನ ಅಂತೂಳೆಯವರು. ದಯಾನಂದ ತಾನೇ ಮಾತನ್ನು ಮುಂದುವರೆಸಿದ. '... ನಿನ್ನ ಧರೀತ್ರಿ ಮೇಡಂ ಈಗ ಇಲ್ಲಿಗೆ ಬರೋದೇ ಇಲ್ಲವಂತೆ ಹೌದೆ ?'

ಅಷ್ಟರಲ್ಲಿ ತುಸು ಪಿಟ್ಟು ಪಿಟ್ಟಾದ ಒಂದು ಕಲ್ಲನ್ನು ಓರ್ವ ಮೇಸನ ಅಣೆಕಟ್ಟಿಗೆ ಜೋಡಿಸುತ್ತಿದ್ದ. ನಾನು-

'..ಏಯ್.. ಆ ಕಲ್ಲು ತೆಗಿ ಅಲ್ಲಿಂದ...'

ಎಂದು ಕೂಗುತ್ತ ಅತ್ತ ಓಡಿದೆ. ದಯಾನಂದ ಬೇರೆ ಕಡೆ ನಡೆದ.

ಆ ಕಲ್ಲು ತೆಗಿಸಿ ಬೇರೊಂದು ಕಲ್ಲು ಇರಿಸಿ ಮೇಸನ ಸಂದಿಗೆಲ್ಲ ಗಾರೆ ಮೆತ್ತುವುದನ್ನು ನೋಡುತ್ತ ನಿಂತರೂ ದಯಾನಂದನ ಮಾತು ಮನಸ್ಸಿನಿಂದ ಮರೆಯಾಗಲಿಲ್ಲ.

ಈ ಕಡೆ ಅಣೆಕಟ್ಟು ನೆಲಮಟ್ಟದಿಂದ ಮೇಲೇರುತ್ತಿರ ಬೇಕಾದರೆ ಧರಿತ್ರಿ ಮೇಡಂ ಒಂದಲ್ಲಾ ಒಂದು ಸಮಾವೇಶ, ಅಧಿವೇಶನ ಎಂದು ಬೆಂಗಳೂರು, ಹುಬ್ಬಳ್ಳಿ, ದಾವಣಗೆರೆಗಳಿಗೆ ತಿರುಗಾಡತೊಡಗಿದರು. ಒಮ್ಮೊಮ್ಮೆ ಹೋದರೆ ನಾಲ್ಕು ಐದು ದಿನ ಅವರು ಬರುತ್ತಿರಲಿಲ್ಲ.

ಈ ವಿಷಯ ನನಗೂ ಗೊತ್ತಾಗುತ್ತಿತ್ತು.

ಸಾಹೇಬರು ನನ್ನ ಜೊತೆಗೇನೆ ಕಾಳಯ್ಯನ ಮೆಸ್ಸಿಗೆ ಬರುತ್ತಿದ್ದರು. ಇಲ್ಲವೆ ಕಾಳಯ್ಯನಿಗೆ ಹೇಳಿ ಕ್ಯಾರಿಯರನ್ನು ಬಂಗಲೆಗೆ ತರಿಸಿಕೊಳ್ಳುತ್ತಿದ್ದರು.

'ಕುಮಾರ ನಾಲ್ಕು ದಿನ ನಾನೂ ಈ ಕಾಳಯ್ಯನ ಅಡಿಗೆಗೆ ಹೊಂದಿಕೊಳ್ಳಬೇಕು ಕಣ್ರಿ...'

ಎಂದು ನಗುತ್ತಿದ್ದರು.

'ನಿಮ್ಮ ಮೇಡಂಗೆ ಈಗೀಗ ರಾಜಕೀಯದಲ್ಲಿ ಆಸಕ್ತಿ ಬಂದಿದೆ. ಮೊದಲಿನಿಂದಾನು ಅವಳ ಫ್ಯಾಮಿಲಿನಲ್ಲಿ ಎಲ್ಲರಿಗೂ ಈ ಆಸಕ್ತಿ ಇತ್ತು. ಇವಳು, ಅದು ಯಾಕೋ ಅದನ್ನ ತಲೆಗೆ ಹಾಕಿಕೊಂಡಿರಲಿಲ್ಲ. ಮದುವೆಯಾದ ಮೇಲೆ ನಾನೇ ಅವಳಿಗೆ ಬೆಂಬಲ ಕೊಟ್ಟೆ.. ನಿನ್ನ ಅಭಿರುಚಿ ಆಸಕ್ತಿ ಏನಿದೆ ಅದರಲ್ಲಿ ಮುಂದುವರಿ ಅಂದೆ. ಭಾಷಣಗಳಿಗೆ ಅವಳನ್ನ ಕರಕೊಂಡು ಹೋದೆ.. ಅವಳ ಪಾರ್ಟಿ ನಾಯಕರು ಬಂದಾಗ ನಾನೇ ಮುಂದಾಗಿ ಅವರಿಗೆ ಪರಿಚಯ ಮಾಡಿಕೊಟ್ಟೆ.. ಅವಳು ಕೂಡ ಭಾಳ ಬೇಗ ಅದನ್ನೆಲ್ಲ ಅರಗಿಸಿಕೊಂಡಳು... ಈಗ ಏನಾಗಿದೆ ಅಂದರೆ ಅವಳು ಇಲ್ಲದೆ ಯಾವುದೇ ಕಾರ್ಯಕ್ರಮ ನಡೆಯೋದಿಲ್ಲ. ಇವಳ ಸಲಹೆ ಸಹಕಾರದ ಮೇಲೇನೆ ಎಲ್ಲ ನಡೆಯುತ್ತೆ... ಕೆಲವೇ ವರ್ಷಗಳಲ್ಲಿ ಅವಳು ೨ನೇ ಮಟ್ಟದ ನಾಯಕಿಯಾಗಿ ರೂಪು ಗೊಂಡಿದಾಳೆ... ನನಗಂತೂ ಇದು ಹೆಮ್ಮೆ ವಿಷಯ...'

ಎಂದು ಸವಿಸ್ತಾರವಾಗಿ ಧರಿತ್ರಿ ಮೇಡಂ ವಿಷಯ ಹೇಳಿದರು.

'ನನಗೆ ಊಟಕ್ಕೆ ಸ್ನಾನಕ್ಕೆ ತೊಂದರೆಯಾಗುತ್ತೆ... ಬೇರೆ ದಾರಿ ಇಲ್ಲ.. ಗಂಡಸರು ಊಟಕ್ಕೆ ಸ್ನಾನಕ್ಕೆ ಹೆಂಗಸರನ್ನೇ ಅವಲಂಬಿಸಿಕೊಂಡಿರೋದು ಎಷ್ಟು ಸರಿ ಅಂತ ಯೋಚನೆ ಮಾಡತಿದೀನಿ... ಈ ನಮ್ಮ ಕಲ್ಪನೆ ನಾವು ನೇರವಾಗಿ ಹೆಂಗಸರನ್ನ ಅಡಿಗೆ ಮನೆಯೊಳಗೆ ಬಂಧಿಸಿ ಇಟ್ಟಹಾಗೆ ಆಗಲ್ವೆ ಅಂತ...'

ಅವರು ನನ್ನನ್ನೇ ಕೇಳಿದರು.

ನಾನು ಏನು ಉತ್ತರ ಕೊಡಲಿ ?

ಸುಮ್ಮನೆ ನಕ್ಕಿದ್ದೆ...

ಜನಾರ್ಧನ ಅಂತೂಳೆ ಕೆಲ ದಿನ ಮೆಸ್‌ಗೆ ಬಂದರು. ಕೆಲ ದಿನ ಮೇಡಂ ಊರಿಗೆ ಬಂದ ವಿಷಯ ತಿಳಿಯಿತು. ಮತ್ತೆ ಕೆಲ ದಿನ ಕಾಳಯ್ಯ ಅವರ ಮನೆಗೆ ಕ್ಯಾರಿಯರ್ ಕೊಂಡೊಯ್ದ. ಇವರೇ ಸರಕಾರಿ ಕೆಲಸದ ಮೇಲೆ ಬೆಂಗಳೂರಿಗೂ ಹೋದರು.

ದಯಾನಂದ ಹೇಳಿದ ಮಾತಿನಲ್ಲಿ ಬೇರೇನೋ ಅರ್ಥವಿತ್ತು, ಆ ದನಿ, ಆ ಧಾಟಿ ಸಹಜವಾಗಿರಲಿಲ್ಲ. ಅದರಲ್ಲಿ ವ್ಯಂಗ್ಯವಿತ್ತು, ಅಣಕವಿತ್ತು, ಅಪಹಾಸ್ಯವಿತ್ತು.

ನಿಜ ಹೇಳಬೇಕೆಂದರೆ ಧರಿತ್ರಿ ಊರಲ್ಲಿದ್ದಾರೆಯೇ ಇಲ್ಲವೆ ಎಂಬ ಬಗ್ಗೆ ವಿಚಾರ ಮಾಡಲು ನಾನು ಹೋಗಲಿಲ್ಲ. ಅವರು ಒಮ್ಮೊಮ್ಮೆ ಸಿಗುತ್ತಿದ್ದರು. ಇಲ್ಲವೆ ಜನಾರ್ಧನ ಅಂತೂಳೆ ಮೇಡಂ ಬಗ್ಗೆ ಏನಾದರೂ ಹೇಳುತ್ತಿದ್ದರು. ಇದು ಬಿಟ್ಟು ಹೆಚ್ಚು ವಿಷಯ ನನಗೆ ತಿಳಿದಿರಲಿಲ್ಲ. ಕಛೇರಿ ಕೆಲಸ, ಕಾಮಗಾರಿ ವೀಕ್ಷಣೆ, ನಡುವೆ ಊರಿಗೆ ಹೋಗುವುದು ಎಂದು ನಾನು ಬಿಝಿಯಾಗಿದ್ದೆ.

ಈಗ ಈ ದಯಾನಂದ ಏನು ಹೇಳುತ್ತಿದ್ದಾನೆ.

ಧರಿತ್ರೀ ಮೇಡಂ ಕ್ವಾರ್ಟರ್ಸ್‌ಗೆ ಬರುವುದನ್ನೇ ಬಿಟ್ಟುಬಿಟ್ಟಿದ್ದಾರಂತೆ. ಹೌದೆ ?

ನಾನು ಕೊಂಚ ಚಿಂತಿತನಾದೆ.

ನನ್ನ ಸುತ್ತ ನಾನು ಗಮನಿಸಿದ ಹಾಗೆ ತುಂಬಾ ಅನುರೂಪ ದಾಂಪತ್ಯ ಇದು. ಗಂಡ ಹೆಂಡಿರ ನಡುವೆ ಒಳ್ಳೆಯ ಸಂಬಂಧವಿತ್ತು. ಪರಸ್ಪರ ಅರ್ಥಮಾಡಿ ಕೊಂಡಿದ್ದರು. ಒಬ್ಬರಿಗೆ ಒಬ್ಬರು ಪೂರಕವಾಗಿ ನಿಲ್ಲುತ್ತಿದ್ದರು. ಗಂಡನ ವ್ಯಕ್ತಿತ್ವವನ್ನು ಹೆಂಡತಿ ಅರ್ಥಮಾಡಿಕೊಂಡಂತೆ ಹೆಂಡತಿಯನ್ನು ಕೂಡ ಅಂತೂಳೆ ಅರ್ಥಮಾಡಿಕೊಂಡಿದ್ದರು. ಹೀಗಿರುವಾಗ ಇದೇನು ಹೀಗೆ ಆಯಿತು?

ದಯಾನಂದ ಹೇಳಿದ ಮಾತಿನಲ್ಲಿ ಬೇರೇನೋ ಅರ್ಥವಿತ್ತು, ಆ ದನಿ, ಆ ಧಾಟಿ ಸಹಜವಾಗಿರಲಿಲ್ಲ. ಅದರಲ್ಲಿ ವ್ಯಂಗ್ಯವಿತ್ತು, ಅಣಕವಿತ್ತು, ಅಪಹಾಸ್ಯವಿತ್ತು.

ಹೀಗಾಗದಿರಲಿ ಅಂದುಕೊಂಡೆ. ಇದು ಹೌದೆ ಎಂಬುದನ್ನು ಖಚಿತ ಪಡಿಸಿಕೊಳ್ಳಲು ಯತ್ನಿಸಿದೆ.

ಜನಾರ್ಧನ ಅಂತೂಳೆ ಎಂದಿನಂತೆಯೇ ಇದ್ದರು. ಅದೇ ಸರಳತೆ. ಅದೇ ಆತ್ಮೀಯತೆ. ಅದೇ ನಿಧಾನ ಪ್ರವೃತ್ತಿ.

ಅವರ ಮನೆಗೊಬ್ಬ ಹುಡುಗ ಬಂದು ಸೇರಿದ್ದ. ಅವರಿಗೆ ಅಡಿಗೆ ಮಾಡಲು, ನೀರು ಕಾಯಿಸಲು, ಅವರ ಬಟ್ಟೆ ಒಗೆಯಲು. ಧರಿತ್ರಿ ಮೇಡಂ ಅವರ ಜೊತೆ ಇಲ್ಲ ಅನ್ನುವುದು ಈಗ ಕಾಲೋನಿಗೆಲ್ಲ ತಿಳಿಯುವ ವಿಷಯವಾಯಿತು. ಇಂತಹದ್ದೇನಾದರೂ ಮಾತನಾಡಲು ಸಿಗುತ್ತದೇನೋ ಎಂದು ಕಾದ ಜನಕ್ಕೆ ಒಳ್ಳೆಯ ಗ್ರಾಸ ದೊರೆಯಿತು.

ಧರಿತ್ರಿ ಮೇಡಂ ಬಗ್ಗೆಯೂ ಜನ ಮಾತನಾಡಿದರು. ಜನಾರ್ಧನ ಅಂತೂಳೆಯವರ ಕುರಿತೂ ಮಾತನಾಡಿದರು.

ಆಡಿ ಆಡಿ ಜನ ನಿಧಾನವಾಗಿ ಈ ವಿಷಯ ಮರೆತರು.

ಧರಿತ್ರಿ ಮೇಡಂ ಅಂತೂಳೆಯವರನ್ನು ಬಿಟ್ಟಿದ್ದಾರೆ ಎಂಬಲ್ಲಿಗೆ ಈ ಮಾತು ಬಂದು ನಿಂತಿತು.

ಮುಂದೆ ಮಾತು ಬೆಳೆಸಲು ಸಾಧ್ಯವಾಗದ್ದರಿಂದ ಜನ ಸುಮ್ಮನಾದರು.

* * *

ಶರಾವತಿ ಮೊದಲ ಹಂತದ ಕೆಲಸ ಮುಗಿಯುತ್ತಿದೆ ಅನ್ನುವಾಗ ಜನಾರ್ಧನ ಅಂತೂಳೆಯವರಿಗೆ ಡೆಹರಾಡೂನಿಗೆ ಒಂದು ತರಬೇತಿಗಾಗಿ ಸರಕಾರ ನಿಯೋಜಿಸಿತು. ಒಂದು ವರ್ಷದ ತರಬೇತಿ. ಅವರ ಜಾಗಕ್ಕೆ ಬೇರೆಯವರೊಬ್ಬರೂ ಬಂದರು.

ಅವರನ್ನು ಬೀಳ್ಕೊಡಲು ಒಂದು ಸಮಾರಂಭವಿರಿಸಿಕೊಳ್ಳಲಾಗಿತ್ತು. ಸಮಾರಂಭ ಮುಗಿದ

ನಂತರ ಅಂತೂಳೆ –

'ಕುಮಾರ.. ಮನೆಗೆ ಬಂದು ಹೋಗಿ'

ಎಂದರು.

ಹೋದೆ.

'ನಾಳೆ ಬೆಳಿಗ್ಗೆ ಹೊರಡತಿದೀನಿ ಕುಮಾರ... ನಿಮ್ಮಿಂದ ನನಗೆ ತುಂಬಾ ಸಹಾಯ ಆಯ್ತು.. ನಿಮಗೆ ಒಳ್ಳೆಯದಾಗಲಿ... ಬೇಗನೆ ನಿಮಗೆ ಬಡ್ತಿ ಸಿಗಲಿ...'

ಎಂದೆಲ್ಲ ಹೇಳಿ ನಂತರ–

'... ಇನ್ನು ನಿಮಗೆ ತುಂಬಾ ಕಷ್ಟ ಆಗಬಹುದು'

ಎಂದರು.

'ಯಾಕೆ ಸಾರ್?'

'ನನ್ನ ಜಾಗಕ್ಕೆ ಬರತಿರೋ ಮನುಷ್ಯ ಸರಿಇಲ್ಲ... ಗುತ್ತಿಗೆದಾರರಿಂದ ಹಣ ಕೀಳೋದು ಇರಲಿ... ಕಛೇರಿ ನೌಕರರಿಂದಾನೂ ಹಣ ಕೀಳತಾನೆ...

ನಿಮಗೆ ತೊಂದರೆ ಆದರೆ... ನೀವು ಮುಖ್ಯ ಇಂಜಿನಿಯರ್ ಕಛೇರಿಗೆ ಹೋಗಿ... ನಾನು ಮುಖ್ಯ ಇಂಜಿನಿಯರ್ ಅವರಿಗೆ ಹೇಳಿದೀನಿ...'

ಎಂದರು.

ಅವರು ಊರು ಬಿಡುತ್ತಿರಲು ನಾನು ಹೋಗಿ ಮುಖ್ಯ ಇಂಜಿನಿಯರ್ ಅವರನ್ನು ಕಂಡೆ.

'...ನಿಮ್ಮಂತಹಾ ವರ್ಕರ್ ನಮಗೆ ಬೇಕು... ಬನ್ನಿ' ಎಂದರು ಅವರು.

ನಾನು ಮುಖ್ಯ ಇಂಜಿನಿಯರ್ ಅವರ ಕಛೇರಿಯನ್ನು ಸೇರಿಕೊಂಡೆ.

* * *

ಮಳೆಗಾಲದ ನಂತರ ಮತ್ತೆ ಕೆಲಸ ಪ್ರಾರಂಭ ವಾಯಿತು. ದಟ್ಟಮಳೆಯ ಹಿಂದೆ ಅಡಗಿಕೊಂಡ ಬೆಟ್ಟ ಗುಡ್ಡಗಳ ಮೇಲೆ ಬಿಸಿಲು ಬೀಳುತ್ತಿರಲು ಕೂಲಿಕಾರರು ಎಲ್ಲೆಲ್ಲಿಂದಲೋ ಬಂದು ಊರಿಗೆ ಸೇರಿಕೊಂಡರು.

ಜನಾರ್ಧನ ಅಂತೂಳೆಯವರು ಡೆಹರಾಡೂನ ಸೇರಿದ ನಂತರ ಒಂದು ಪತ್ರ ಬರೆದಿದ್ದರು. ನಂತರ ಅವರಿಂದ ಯಾವುದೇ ಸುದ್ದಿ ನನಗೆ ಬರಲಿಲ್ಲ.

ಆದರೆ ಧರೀತ್ರಿ ಮೇಡಂ ಅವರನ್ನು ಮರೆಯಲಾಗಲಿಲ್ಲ.

ಅವರು ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರು.

ಅವರ ಹೇಳಿಕೆಗಳು ಪ್ರಕಟವಾಗುತ್ತಿದ್ದವು.

ಚುನಾವಣೆಗೆ ನಿಂತ ಅವರು ಬೆಂಗಳೂರು ಉತ್ತರ ಕ್ಷೇತ್ರದಿಂದ ಗೆದ್ದೂ ಬಂದರು. ಈ ವಿಷಯ ಅಂತೂಳೆಯವರಿಗೆ ತಿಳಿದಿರುತ್ತದೆ. ಅವರಿಗೆ ಸಂತೋಷವಾಗುತ್ತದೆ ಅಂದುಕೊಂಡೆ.

ನಂತರ ಕೂಡ ಧರೀತ್ರಿ ಮೇಡಂ ಅವರು ರಾಜಕೀಯ ಕ್ಷೇತ್ರದಲ್ಲಿ ಮುಂದೆ ಮುಂದೆ ಸಾಗಿದ್ದನ್ನು ಗಮನಿಸಿದೆ. ಅವರು ಮಂತ್ರಿಗಳೂ ಆದರು. ಒಳ್ಳೆಯ ಹೆಸರನ್ನೂ ಮಾಡಿದರು. ಉತ್ತಮ ಆಡಳಿತಗಾರ್ತಿ ಎಂದೂ ಕರೆಸಿಕೊಂಡರು. ಆದರೆ ಅವರು ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಹಲವು ವರ್ಷಗಳೇ ಬೇಕಾದವು. ಆದರೆ ಅವರು ಅಂತೂಳೆಯವರ ಬಳಿಗೆ ತಿರುಗಿ ಹೋಗಲಿಲ್ಲ ಎಂದು ನಾನು ಕೇಳಿದೆ.

ಅಷ್ಟು ಹೊತ್ತಿಗೆ ನನಗೂ ಬಡ್ತಿ ದೊರಕಿತ್ತು. ಮದುವೆಯಾಗಿತ್ತು. ಮಕ್ಕಳಾಗಿದ್ದವು.. ಲಿಂಗನಮಕ್ಕಿ ಡ್ಯಾಮಿನ ಕಾಮಗಾರಿ ಮುಗಿದು ಅದು ಆಗಲೇ ಒಂದು ಇತಿಹಾಸವಾಗಿತ್ತು.

* * *

ಈಗ, ಇದೀಗ, ಈ ಕತೆ ಹೇಳುವಾಗ, ನಾನು ಬೆಳಗಾಂಗೆ ಬಂದಿದ್ದೇನೆ. ನಿವೃತ್ತಿಗೆ ಮತ್ತೂ ಐದಾರು ವರ್ಷಗಳಿವೆ. ಬೆಳಗಾಂ ವಿಭಾಗದ ಕಾರ್ಯಪಾಲಕ ಇಂಜನಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ.

ನಮ್ಮ ಕಛೇರಿಯ ಮ್ಯಾನೇಜರ್ ಹಿರೇಮಠ ನಾನು ಶರಾವತಿಯಲ್ಲಿ ನೌಕರಿ ಸಲ್ಲಿಸಿದವನು ಎಂಬ ವಿಷಯ ಕೇಳಿ–

'ಸಾರ್, ನಿಮಗೆ ಅಂತೂಳೆ, ಜನಾರ್ಧನ ಅಂತೂಳೆ ಗೊತ್ತೆ?'

ಎಂದು ಕೇಳಿದ್ದು ನನ್ನ ಕಣ್ಣುಗಳು ಹೊಳೆಯಲು ಕಾರಣವಾಯಿತು.

'ಹೌದು, ಯಾಕೆ?'

'ಅವರು ಇಲ್ಲೇ ಸಾವಂತ ನಾಡಿನಲ್ಲಿ ಮನೆ ಮಾಡಿಕೊಂಡಿದಾರೆ...'

ಎಂದರವರು.

'ಹೌದೆ?'

ಎಂದು ನಾನು ಮತ್ತೂ ಕುತೂಹಲ ವ್ಯಕ್ತಪಡಿಸಿದೆ.

'ಅವರು ಮನೇಲಿ ಒಬ್ಬರೇ ಇದಾರೆ... ಆರೋಗ್ಯವಾಗಿದಾರೆ... ನಿವೃತ್ತರಾಗಿ ಆಗಲೆ ಐದಾರು ವರ್ಷ ಆಗಿರಬೇಕು...'

ಎಂದರು.

ಬಹಳ ವರ್ಷಗಳ ನಂತರ ಅಂತೂಳೆಯವರನ್ನು ಭೇಟಿಯಾಗುವುದು ಸಾಧ್ಯವಾಯಿತಲ್ಲ ಎಂದು ನನಗೆ ಸಂತೋಷವಾಯಿತು.

ಈ ಸುದ್ದಿ ಕಿವಿಗೆ ಬಿದ್ದ ಎರಡು ಮೂರು ದಿನಗಳಲ್ಲಿ ನಾನು ಜನಾರ್ಧನ ಅಂತೂಳೆಯವರನ್ನು ಕಂಡೆ.

ಅವರಿಗೆ ವಯಸ್ಸಾಗಿತ್ತು. ಆದರೆ ಅವರ ಉತ್ಸಾಹ ಅಡಗಿರಲಿಲ್ಲ. ಅದೇ ಮುಗುಳು ನಗೆ. ಸರಳತೆ. ಆತ್ಮೀಯತೆ.

'... ಕುಮಾರ್... ಬನ್ನಿ ಬನ್ನಿ..'

ಎಂದವರು ನನ್ನ ಕೈ ಹಿಡಿದು ಮನೆಯೊಳಗೆ ಕರೆದೊಯ್ದರು.

'ನಿಮಗೆ ಗೊತ್ತಿರಬೇಕು.. ನನ್ನ ಮೂಲ ಸ್ಥಳ ಬೆಳಗಾಂ.. ಹೀಗಾಗಿ ಇಲ್ಲಿಯೇ ಮನೆ ಕಟ್ಟಿದ್ದೆ... ರಿಟೈರ ಆದ ಮೇಲೆ ನಾನೇ ಮುಂದೆ ನಿಂತು ಕಟ್ಟಿಸಿದ್ದು... ಬನ್ನಿ... ಮನೆ ನೋಡುವಿರಂತೆ...'

ನನ್ನ ಕೈ ಹಿಡಿದುಕೊಂಡೇ ಅವರು ಕೊಠಡಿಯಿಂದ ಕೊಠಡಿಗೆ ನನ್ನನ್ನು ಕರೆದೊಯ್ದರು.

ವಿಶಾಲವಾದ ಕೊಠಡಿಗಳು. ಗೋಡೆಗೆ ನೆಲಕ್ಕೆ ಹಾಸಿದ ಹೊಳಪಿನ ಬಿಲ್ಲೆಗಳು. ಗಾಳಿ ಬೆಳಕು ಕೊಠಡಿಗಳಲ್ಲಿ ತುಂಬಿಕೊಂಡಿತ್ತು. ಎಲ್ಲ ಆಧುನಿಕ ವ್ಯವಸ್ಥೆಗಳಿಂದ ಕೊಠಡಿಗಳು ಸುಸಜ್ಜಿತಗೊಂಡಿದ್ದವು.

ಇಂತಹ ಒಂದು ಕೊಠಡಿಗೆ ನನ್ನನ್ನು ಕರೆದೊಯ್ದರು. ಟಿ.ವಿ., ಫ್ರಿಜ್ಜು ಪುಸ್ತಕದ ಕಪಾಟು ಎಲ್ಲವನ್ನೂ ಅಲ್ಲಿ ಜೋಡಿಸಲಾಗಿತ್ತು.

'ಇದು ನನ್ನ ಕೋಣೆ... ಲಿವಿಂಗ್ ರೂಂ ಅಂತಾರಲ್ಲ ಅದು'

ಎಂದು ನಕ್ಕರು.

'ಒಂಟಿಯಾಗಿ ಟಿ.ವಿ. ನೋಡ್ತ... ಟೇಪ ಕೇಳ್ತ... ನಾನು ಇಲ್ಲೇ ಟೈಮ್ ಕಿಲ್ ಮಾಡೋದು..'

ಎಂದು ಮತ್ತೆ ನಕ್ಕರು.

ಆ ಕೊಠಡಿಯಿಂದ ಹೊರಬರುವಾಗ ಅದರ ಮಗ್ಗುಲಲ್ಲಿ ಮತ್ತೊಂದು ಕೊಠಡಿ ಕಂಡೆ. ಮಜಬೂತಾದ ಮರದ ಬಾಗಿಲು. ಅದಕ್ಕೆ ತೂಗುಬಿದ್ದ ತೆಳುಪರದೆ. ನಾನತ್ತ ತಿರುಗಿದಾಗ ಗಾಳಿಗೆ ಆ ಪರದೆ ಅಲುಗಾಡಿತು. ಹಿತ್ತಾಳೆಯ ಹಳದಿ ಬೀಗ ಕಂಡಿತು.

ನಾನು ಸಹಜವಾಗಿ ಅವರತ್ತ ತಿರುಗಿದೆ.

'ಈ ಕೊಠಡಿ ಅವಳಿಗೆ...'

ಅವರ ಮುಖದ ಮೇಲಿನ ನಗೆ ತುಸು ಮಾಸಿತು.

'... ಅವಳು ಬರತಾಳೆ... ಊರೆಲ್ಲ ತಿರುಗಾಡಿದವರು ಕೊನೆಗೂ ಒಂದು ಮನೆಗೆ ಬರಬೇಕಲ್ಲ... ಅವಳಿಗಾಗಿ ನಾನು ಕಾದಿಟ್ಟಿರೋ ಕೊಠಡಿ ಇದು... ಅವಳು ಬರತಾಳೆ...'

ತಮ್ಮಷ್ಟಕ್ಕೆ ತಾವೇ ಎಂಬಂತೆ ಅವರು ನುಡಿದರು.

ನಾನು ಅವರ ಮುಖ ನೋಡುತ್ತ ನಿಂತೆ. ❑

ಮುಸ್ಲಿಮರ ಮುಂದಿನ ಆಯ್ಕೆಗಳು ಯಾವುವು ?

ಸೆಪ್ಟಂಬರ್ ೧೧ರ ಘಟನೆ ಅಮೆರಿಕೆಯ ಅಂತಸ್ಥೈರ್ಯವನ್ನೆ ಅಲುಗಿಸಿಬಿಟ್ಟಿತು. ಇದು ಅಮೆರಿಕದ ಮಾತ್ರವಲ್ಲ, ಜಗತ್ತಿನ ರಾಜಕೀಯ ಸಮೀಕರಣಗಳನ್ನು ಬದಲು ಮಾಡಿಬಿಡುವಷ್ಟು ಮಹತ್ವದ ವಿದ್ಯಮಾನವಾಗಿಬಿಟ್ಟಿತು. ಎರಡನೆಯ ಮಹಾಯುದ್ಧದ ನಂತರ ಅಂತಾರಾಷ್ಟ್ರೀಯ ರಾಜಕಾರಣವನ್ನು ಇಷ್ಟು ಗಾಢವಾಗಿ ಕಲಕಿದ ಘಟನೆ ಇನ್ನೊಂದಿಲ್ಲ. ಇದು ಅಮೆರಿಕೆಯ ಸಾಮ್ರಾಜ್ಯಶಾಹಿ ಹುನ್ನಾರಗಳಿಗೆ ಹೊಸ ಅವಕಾಶ ಒದಗಿಸಿದೆ. ಇರಾಕಿನ ಮೇಲೆ ಅಮೆರಿಕ ಆಕ್ರಮಣ ಮಾಡಿಸಿದೆ. ಮುಸ್ಲಿಮ್ ಭಯೋತ್ಪಾದಕರಿಂದ ಅಮೆರಿಕಕ್ಕೆ ಅಪಾಯವಿದೆ ಎಂಬ ಆತಂಕ ಹುಟ್ಟಿಸಿ ಬುಶ್ ಚುನಾವಣೆ ಗೆಲ್ಲುವಂತೆ ಮಾಡಿದೆ. ಇವೆಲ್ಲ ಇದರ ಪರಿಣಾಮಗಳು. ಒಟ್ಟಿನಲ್ಲಿ ಮುಸ್ಲಿಮರನ್ನೂ ಇಸ್ಲಾಮನ್ನೂ ರಾಕ್ಷಸೀಕರಿಸುವ ಒಂದು ಚಾರಿತ್ರಿಕ ಸನ್ನಿವೇಶವೀಗ ನಿರ್ಮಾಣವಾಗಿದೆ. ಇದು ಭಾರತದಲ್ಲಿ ಸಂಘಪರಿವಾರಕ್ಕೆ ತನ್ನ ಮುಸ್ಲಿಂ ದ್ವೇಷದ ಕಥನವನ್ನು ಪ್ರಸಾರ ಮಾಡಲು ಸುವರ್ಣಾವಕಾಶ ಕಲ್ಪಿಸಿಕೊಟ್ಟಿದೆ.

○ ಪ್ರೊ॥ ರಹಮತ್ ತರೀಕೆರೆ

ಕಮಲಹಾಸನ ಅನುಭವ

ಕೆಲವು ತಿಂಗಳ ಹಿಂದೆ ಪತ್ರಿಕೆಗಳು ಒಂದು ವಿಚಿತ್ರ ಸುದ್ದಿಯನ್ನು ವರದಿ ಮಾಡಿದ್ದವು. ಅದು ಚಿತ್ರನಟ ಕಮಲಹಾಸನ್‌ಗೆ ಸಂಬಂಧ ಪಟ್ಟಿದ್ದು. ಅವನು ಅಮೆರಿಕಕ್ಕೆ ಹೋದಾಗ, ಅಲ್ಲಿನ ವಿಮಾನ ನಿಲ್ದಾಣಗಳಲ್ಲಿ ತೀವ್ರ ವಿಚಾರಣೆ ಮಾಡಲಾಗುತ್ತಿತ್ತಂತೆ. ನಾನು ಮುಸ್ಲಿಮನಲ್ಲ ಎಂದು ಸಾಬೀತುಪಡಿಸಿ ಹೊರಬರುವ ಹೊತ್ತಿಗೆ ಅವನಿಗೆ ಸುಸ್ತಾಗಿ ಹೋಗುತ್ತಿತಂತೆ. ಈ ಕಷ್ಟಕ್ಕೆ ಕಾರಣವಾಗುತ್ತಿದ್ದುದು ಅವನ ಗಡ್ಡ ಹಾಗೂ ಹೆಸರು.

ಸಂಸ್ಕೃತದಲ್ಲಿ ಕಮಲಹಾಸ ಎಂದರೆ ಕಮಲದಂತಹ ನಗು ಎಂದರ್ಥ. ಈ ಹೆಸರನ್ನು ಇಂಗ್ಲಿಷಿನಲ್ಲಿ ಕಮಾಲ್ ಹಸನ್ ಎಂದು ಕೂಡ ಓದಬಹುದು. ಆಗದು ಮುಸ್ಲಿಂ ಹೆಸರಾಗಿಬಿಡುತ್ತದೆ. ಅದರಲ್ಲೂ ಹಸನ್ ಎಂಬುದು ಅಮೆರಿಕದ ಕೆಂಗಣ್ಣಿಗೆ ಗುರಿಯಾಗಿರುವ ಇರಾಕಿನ ಮಾಜಿ ಅಧ್ಯಕ್ಷನಾದ ಸದ್ದಾಂ ಹುಸೇನನ ಹೆಸರಿನ ನೆನಪನ್ನು ತರುತ್ತದೆ. ಇದರಿಂದ ಅರ್ಧ ಅಮೆರಿಕದವರಿಗೆ ಗುಮಾನಿ ಯಾಗುತ್ತಿತ್ತೋ ಏನೋ. ವಾಸ್ತವದಲ್ಲಿ ಹಸನ್ ಪೈಗಂಬರ ಮಹಮದರ ಮೊಮ್ಮಗನ ಹೆಸರು. ಅರಬ ಜನರಿಗೆ ನಾಯಕನಾಗಬೇಕಾಗಿದ್ದ ಅವನನ್ನು ಶತ್ರುಗಳು ಫಿತೂರಿ ಮಾಡಿ ವಿಷಹಾಕಿ ಕೊಲ್ಲುತ್ತಾರೆ. ಅದೊಂದು ಬೇರೆಯೇ ಕತೆ.

ಸೆಪ್ಟಂಬರ್ ೧೧, ೨೦೦೧ರಂದು ಅಮೆರಿಕೆಯ ಟ್ರೇಡ್ ಯೂನಿಯನ್ನಿನ ಎರಡು ಬಾನೆತ್ತರದ ಕಟ್ಟಡಗಳು ಅಲ್‌ಖೈದಾ ಸಂಘಟನೆಯ ದಾಳಿಗೆ ಉರುಳಿಬಿದ್ದವಷ್ಟೆ. ಇದಾದ ನಂತರ ಅಮೆರಿಕ ಯೂರೋಪುಗಳಲ್ಲಿ ಒಂದು ಬಗೆಯ ಇಸ್ಲಾಂ ದ್ವೇಷದ ಗಾಳಿಯು ಬೀಸಲಾರಂಭಿಸಿದೆ. ಕಮಲಹಾಸನ ಫಜೀತಿ ಇದರದೊಂದು ಫಲ. ವಾಸ್ತವದಲ್ಲಿ ಅಮೆರಿಕವು ಇರಾಕ್ ಆಫಘಾನಿಸ್ಥಾನಗಳ ಮೇಲೆ ಸಾರಿರುವ ಯುದ್ಧಗಳಲ್ಲಿ ನಿಜವಾಗಿ ಇರುವುದು ಅದರ ಆರ್ಥಿಕ ರಾಜಕೀಯ ಹಿತಾಸಕ್ತಿಗಳೇ.

ಆದರೆ ಈ ಯುದ್ಧಗಳ ಹಿಂದೆ ಬಿಳಿಯರ ಸಾಂಸ್ಕೃತಿಕ ಅಹಂಕಾರವೂ ಕೆಲಸ ಮಾಡುತ್ತಿವೆ. ಅನಾಗರಿಕರಾಗಿರುವ ಸಮುದಾಯಗಳಿಗೆ ನಾಗರಿಕತೆ ಕೊಡಬೇಕು, ಅವರನ್ನು ಸರ್ವಾಧಿಕಾರಿಗಳಿಂದ ಬಿಡಿಸಿ ಪ್ರಜಾಪ್ರಭುತ್ವವನ್ನು ಕೊಡಬೇಕು. ಇದು ನಾಗರಿಕರಾದ ನಮ್ಮ ಜವಾಬ್ದಾರಿ ಎಂಬ ಅಹಂಕಾರ. ತಮನ್ನು ವಿರೋಧಿಸುವ ಸಮುದಾಯ ಗಳನ್ನು ಸಂಶಯಾಸ್ಪದವಾಗಿಯೂ ಅನಾಗರಿಕತೆಯ ಪ್ರತೀಕವಾಗಿಯೂ ಕಾಣುವ ಈ ದೃಷ್ಟಿಕೋನವು ಮೊದಲಿ ನಿಂದಲೂ ಯೂರೋಪಿಯನ್ನರಲ್ಲಿದೆ. ೨೦ನೇ ಶತಮಾನದ ದೊಡ್ಡಚಿಂತಕ ಎಡ್ವರ್ಡ್ ಸೈದ್ ಇದನ್ನು ವಿಶ್ಲೇಷಿಸು ತ್ತಾನೆ. ಬಿಳಿಯರು ಏಶಿಯಾ ಅಫ್ರಿಕಾಗಳ ಜನರನ್ನು ಮಾನವರೆಂದೇ ಪರಿಗಣಿಸುವುದಿಲ್ಲ. ಇರಾಕಿನ ಜೈಲಿನಲ್ಲಿ ಕೈದಿಗಳಿಗೆ ನಾಯಿಯ ಪಟ್ಟಿ ಕಟ್ಟಿ ಎಳೆಯುವ ಚಿತ್ರಗಳು ಪ್ರಾಣಿಗಳನ್ನು ಅಥವಾ ಅನಾಗರಿಕರನ್ನು ನಾಗರಿಕರು

ಪಳಗಿಸುವ ವಿಧಾನಗಳು ತಾನೆ? ಈ ದ್ವೇಷ ಹಾಗೂ ಅಹಂಕಾರಗಳಿಗೆ ಕ್ರುಸೇಡುಗಳ ಚಾರಿತ್ರಿಕ ನೆನಪೂ ಸೇರಿದೆ. ಕ್ರುಸೇಡುಗಳು ಎಂದರೆ, ಕ್ರೈಸ್ತರ ಪವಿತ್ರ ಜಾಗಗಳಾದ ಜೆರುಸಲೇಂ ಬೆತ್ಲೆಹೆಂ ಮುಂತಾದ ಜಾಗಗಳನ್ನು ಇಸ್ಲಾಮಿಕ ರಾಜ್ಯಗಳಿಂದ ಬಿಡುಗಡೆ ಮಾಡುವುದಕ್ಕಾಗಿ ಯೂರೋಪಿನ ಚರ್ಚುಗಳು ಸಾವಿರಾರು ಜನರನ್ನು ಕಳಿಸಿ ಮಾಡಿಸಿದ ಧರ್ಮಯುದ್ಧ. ಜಾರ್ಜ್‌ಬುಶ್ ಸೆಪ್ಟಂಬರ್ ೧೧ರ ಘಟನೆಯ ನಂತರ ಮಾಡಿದ ಭಾಷಣದಲ್ಲಿ ನಾವು ಈಗ ಕ್ರುಸೇಡುಗಳನ್ನು ಮಾಡಬೇಕಾಗಿದೆ ಎಂದು ಹೇಳಿದನು. ಇದು ಬಾಯಿತಪ್ಪಿ ಆಡಿದ ಮಾತೆಂದು ನಂತರ ಸಮಜಾಯಿಶಿ ಬಂತಾದರೂ, ವಾಸ್ತವದಲ್ಲಿ ಅದು ಬಿಳಿಯರಲ್ಲಿ ಇಸ್ಲಾಂ ಮತ್ತು ಮುಸ್ಲಿಮರ ಬಗ್ಗೆ ಇರುವ ಸುಪ್ತದ್ವೇಷದ ಸಂಕೇತವಾಗಿತ್ತು.

ಅಮೆರಿಕವು ಈಗ ಮಧ್ಯ ಏಶಿಯಾದ ಮೇಲೆ ಸಾರಿರುವ ಯುದ್ಧಕ್ಕೆ ನಿಜವಾದ ಕಾರಣ, ಕ್ರುಸೇಡುಗಳ ನೆನಪಲ್ಲ. ತೈಲ ದಾಹ. ಇರಾಕು ತೈಲರಾಷ್ಟ್ರವಾಗಿರದಿದ್ದರೆ ಅದಕ್ಕೆ ಈ ಸ್ಥಿತಿಯೆ ಬರುತ್ತಿರಲಿಲ್ಲ. ತೈಲ ಕಬಜಾ ಮಾಡುವುದಕ್ಕಾಗಿ ಅಪಾಯವಿದೆ ಎಂಬ ಆತಂಕ ಹುಟ್ಟಿಸಿ ಬುಶ್ ಚುನಾವಣೆ ಗೆಲ್ಲುವಂತೆ ಮಾಡಿದೆ. ಇವೆಲ್ಲ ಇದರ ಪರಿಣಾಮಗಳು. ಕಮಲಹಾಸನನಿಗೆ ಮುಸ್ಲಿಮನೆಂದು ತಿಳಿದು ಮಾಡಲಾದ ತಪಾಸಣೆ ಮತ್ತು ಅಪಮಾನ ಇದರ ಸಣ್ಣ ಪರಿಣಾಮ.

ರಾಕ್ಷಸೀಕರಣಕ್ಕೆ ಚಾರಿತ್ರಿಕ ಅವಕಾಶ

ಒಟ್ಟಿನಲ್ಲಿ ಮುಸ್ಲಿಮರನ್ನೂ ಇಸ್ಲಾಮನ್ನೂ ರಾಕ್ಷಸೀಕರಿಸುವ ಒಂದು ಚಾರಿತ್ರಿಕ ಸನ್ನಿವೇಶವೀಗ ನಿರ್ಮಾಣವಾಗಿದೆ. ಇದು ಭಾರತದಲ್ಲಿ ಸಂಘಪರಿವಾರಕ್ಕೆ ತನ್ನ ಮುಸ್ಲಿಂ ದ್ವೇಷದ ಕಥನವನ್ನು ಪ್ರಸಾರ ಮಾಡಲು ಸುವರ್ಣಾವಕಾಶ ಕಲ್ಪಿಸಿಕೊಟ್ಟಿದೆ. ಅದು ಇಲ್ಲಿ ತನಕ ಮುಸ್ಲಿಮರನ್ನು ಪಾಕಿಸ್ತಾನದ ಜತೆ ತಳುಕು ಹಾಕುತ್ತಿತ್ತು. ಈಗ ಅಂತಾರಾಷ್ಟ್ರೀಯ ಭಯೋತ್ಪಾದನೆ ಮತ್ತು ಬಿನ್‌ಲ್ಯಾಡೆನ್ನಿಗೆ ತಳುಕು ಹಾಕುತ್ತಿದೆ. ಚರಿತ್ರೆಯಲ್ಲಿ ಸೋಮನಾಥ ದೇವಾಲಯವನ್ನು ನಾಶಮಾಡಿದ ಮಹಮದ್ ಘಜನಿ. ಅಯೋಧ್ಯೆಯಲ್ಲಿ ಬಾಬರನು ರಾಮಮಂದಿರ ಕೆಡವಿದ. ಅಮೆರಿಕೆಯ ಜಾಗತಿಕ ವಾಣಿಜ್ಯಕೇಂದ್ರಗಳನ್ನು ಕೆಡವಿದರು. ಬಮಿಯಾನ್ ಬುದ್ಧನ ವಿಗ್ರಹ ಕೆಡವಿದರು. ಪಾರ್ಲಿಮೆಂಟಿನ ಮೇಲೆ ಆಕ್ರಮಣವಾಯಿತು. ಮುಸ್ಲಿಮರದು ಯಾವಾಗಲೂ ಕೆಡಹುವ ಜಾಯಮಾನ. ಇದಕ್ಕೆ ಪರಿಹಾರ ಅವರನ್ನು ದಮನ ಮಾಡುವುದು ಎಂದು ಹೇಳುತ್ತಿದೆ. ಗತಕಾಲದ ಚರಿತ್ರೆಯ ಘಟನೆಗಳ ಮೂಲಕ ಮುಸ್ಲಿಮರನ್ನು ರಾಕ್ಷಸೀಕರಣ ಮಾಡಲಾಗುತ್ತಿತ್ತು. ಈಗ ವರ್ತಮಾನದ ವಿದ್ಯಮಾನಗಳ ಮೂಲಕ ಮಾಡಲಾಗುತ್ತಿದೆ. ಮೇಲ್ಕಾಣಿಸಿದ ಪ್ರಸಂಗಗಳು ಮುಸ್ಲಿಮರಿದ್ದಾರೆ. ನಿಜ, ಆದರೆ ಈ ವಿದ್ಯಮಾನಗಳ ಹಿಂದಿನ ರಾಜಕೀಯ ಆರ್ಥಿಕ ಪ್ರೇರಣೆಗಳೇನು ಎಂಬುದನ್ನು ವಿಶ್ಲೇಷಿಸದೆ ಹೋದರೆ, ಇವೆಲ್ಲ ಮುಸ್ಲಿಮರಲ್ಲಿರುವ ಜನಜಾತವಾದ ರಕ್ತಗತವಾದ ತಿದ್ದಲಾರದ ಒಂದು ಗುಣದಿಂದ ಘಟಿಸಿವೆ ಎಂದೇ ಅನಿಸುತ್ತದೆ.

ಅಮೆರಿಕವು ಇಸ್ಲಾಮಿಕ್ ರಾಷ್ಟ್ರಗಳ ಜತೆ ಆಡಿದ ಅನೈತಿಕ ಆಟಗಳ ಫಲವೇ ಬಿನ್‌ಲ್ಯಾಡೆನ್. ಅವನು ಮೊದಲು ಪಕ್ಕಾ ಅಮೆರಿಕೆಯ ಮನುಷ್ಯನಾಗಿದ್ದವನು. ರಶಿಯಾದ ಸೇನೆ ಆಫ್ಘಾನಿಸ್ಥಾನವನ್ನು ಆಕ್ರಮಿಸಿಕೊಂಡಿದ್ದಾಗ ಸಿಐಎ ಅವನನ್ನು ಬಳಸಿಕೊಂಡಿತು. ನಂತರದ ಬೆಳವಣಿಗೆಗಳಲ್ಲಿ ಅವನು ಅಮೆರಿಕದ ವಿರುದ್ಧ ತಿರುಗಿ ಬಿದ್ದನು. ಇದರ ಪರಿಣಾಮಗಳಲ್ಲಿ ಒಂದು ಸೆಪ್ಟಂಬರ್ ೧೧ರ ಘಟನೆ.

ಈ ಘಟನೆ ಅಮೆರಿಕೆಯ ಅಂತಸ್ಥೈರ್ಯವನ್ನೆ ಅಲುಗಿಸಿ ಬಿಟ್ಟಿತು. ಇದು ಅಮೆರಿಕದ ಮಾತ್ರವಲ್ಲ, ಜಗತ್ತಿನ ರಾಜಕೀಯ ಸಮೀಕರಣಗಳನ್ನು ಬದಲು ಮಾಡಿಬಿಡುವಷ್ಟು ಮಹತ್ವದ ವಿದ್ಯಮಾನವಾಗಿಬಿಟ್ಟಿತು. ಎರಡನೆಯ ಮಹಾಯುದ್ಧದ ನಂತರ ಅಂತಾರಾಷ್ಟ್ರೀಯ ರಾಜಕಾರಣವನ್ನು ಇಷ್ಟು ಗಾಢವಾಗಿ ಕಲಕಿದ ಘಟನೆ ಇನ್ನೊಂದಿಲ್ಲ. ಇದರ ಪರಿಣಾಮವು ಇನ್ನೂ ಬೇರೆಬೇರೆ ಘಟನೆಗಳಿಗೆ ಕಾರಣವಾಗುತ್ತಲೇ ಇದೆ. ಮುಖ್ಯವಾಗಿ ಅಮೆರಿಕೆಯ ಸಾಮ್ರಾಜ್ಯಶಾಹಿ ಹುನ್ನಾರಗಳಿಗೆ ಸಿಕ್ಕ ಹೊಸ ಅವಕಾಶ ಒದಗಿಸಿದೆ. ಇರಾಕಿನ ಮೇಲೆ ಅಮೆರಿಕ ಆಕ್ರಮಣ ಮಾಡಿಸಿದೆ. ಮುಸ್ಲಿಮ್ ಭಯೋತ್ಪಾದಕರಿಂದ ಅಮೆರಿಕಕ್ಕೆ

ಸಂಘಪರಿವಾರ ನಿರ್ದೇಶಿತ ಎನ್‌ಡಿಎ ಸರಕಾರವು ತನ್ನ ಐದು ವರುಷಗಳ ಅಧಿಕಾರಾವಧಿಯಲ್ಲಿ ಮುಸ್ಲಿಮರನ್ನು ದ್ವೇಷಿಸುವ ಇಸ್ರೇಲ್ ಜತೆ ಗಾಢಸಂಬಂಧ ಬೆಳೆಸಿತು. ಆಫಘಾನಿಸ್ಥಾನ ಇರಾಕುಗಳ ಮೇಲೆ ಅಮೆರಿಕ ಯುದ್ಧ ಸಾರಿದಾಗ ಸೈನ್ಯ ಕಳಿಸಬೇಕೆಂದು ಯೋಚಿಸಿತ್ತು. ವಿಎಚ್‌ಪಿ ಮಾತ್ರ ಭಾರತವು ಈಗ ಅಮೆರಿಕ ಸಾರಿರುವ ಯುದ್ಧಗಳನ್ನು ಬೆಂಬಲಿಸಬೇಕು ಎಂದು ಸ್ಪಷ್ಟವಾಗಿ ಸೂಚಿಸಿತು. ಆದರೆ ಚುನಾವಣಾ ಪರಿಣಾಮಗಳಿಗೋ ಜನಪ್ರತಿಭಟನೆಗಳಿಗೋ ಹೆದರಿ ಕಳಿಸಲಿಲ್ಲ. ಆದರೆ ಅಮೆರಿಕವನ್ನು ಹಿಂದೆಂದೂ ಇಲ್ಲದಷ್ಟು ಅದು ತಬ್ಬಿಕೊಂಡಿತು.

ಸಂಘಪರಿವಾರ ನಿರ್ದೇಶಿತ ಎನ್‌ಡಿಎ ಸರಕಾರವು ತನ್ನ ಐದು ವರುಷಗಳ ಅಧಿಕಾರಾವಧಿಯಲ್ಲಿ ಮುಸ್ಲಿಮರನ್ನು ದ್ವೇಷಿಸುವ ಇಸ್ರೇಲ್ ಜತೆ ಗಾಢಸಂಬಂಧ ಬೆಳೆಸಿತು. ಆಫಘಾನಿಸ್ಥಾನ ಇರಾಕುಗಳ ಮೇಲೆ ಅಮೆರಿಕ ಯುದ್ಧ ಸಾರಿದಾಗ ಸೈನ್ಯ ಕಳಿಸಬೇಕೆಂದು ಯೋಚಿಸಿತ್ತು. ವಿಎಚ್‌ಪಿ ಮಾತ್ರ ಭಾರತವು ಈಗ ಅಮೆರಿಕ ಸಾರಿರುವ ಯುದ್ಧಗಳನ್ನು ಬೆಂಬಲಿಸಬೇಕು ಎಂದು ಸ್ಪಷ್ಟವಾಗಿ ಸೂಚಿಸಿತು. ಆದರೆ ಚುನಾವಣಾ ಪರಿಣಾಮಗಳಿಗೋ ಜನಪ್ರತಿಭಟನೆಗಳಿಗೋ ಹೆದರಿ ಕಳಿಸಲಿಲ್ಲ. ಆದರೆ ಅಮೆರಿಕವನ್ನು ಹಿಂದೆಂದೂ ಇಲ್ಲದಷ್ಟು ಅದು ತಬ್ಬಿಕೊಂಡಿತು.

ಅಯೋಧ್ಯೆ, ಈದಗಾ ಮೈದಾನ, ಬಾಬಾಬುಡನಗಿರಿ ಪ್ರಕರಣಗಳನ್ನು ೧೯೯೦ರ ನಂತರದ ಜಾಗತಿಕ ರಾಜಕೀಯ ಹಿನ್ನೆಲೆಯಲ್ಲಿ ಗಮನಿಸಬೇಕು. ಗುಜರಾತಿನ ಹಿಂಸಾತಕ ದಂಗೆಗಳು ಸಾಬರಮತಿ ರೈಲುಡಬ್ಬಿಗೆ ಬೆಂಕಿಬಿದ್ದದ್ದಕ್ಕಾಗಿ ಕೂಡಲೆ ಸ್ಫೋಟಗೊಳ್ಳಲಿಲ್ಲ. ಅದು ಹಿಂದಿನಿಂದ ವ್ಯವಸ್ಥಿತವಾಗಿ ಮಾಡಲಾದ ರಾಕ್ಷಸೀಕರಣದ ಫಲವಾಗಿತ್ತು. ಗಮನಾರ್ಹವೆಂದರೆ, ಗುಜರಾತಿನಲ್ಲಿ ಸಂಘಪರಿವಾರದವರು ಮುಸ್ಲಿಮರನ್ನು ಬೀದಿಗಳಲ್ಲಿ ಓಡಾಡಿಸಿ ಕೊಲ್ಲು

ವಾಗ, ಅಮೇರಿಕನ್ ಸರಕಾರವು ಖಂಡಿಸಲಿಲ್ಲ. ಗೋಳ್ವಾಲ್ಕರ್ ಚಿಂತನಗಂಗಾದಲ್ಲಿ ನಮ್ಮ ಶತ್ರುಗಳು ಮುಸ್ಲಿಮರು ಕಮ್ಯುನಿಸ್ಟರು ಎಂದು ಸ್ಪಷ್ಟವಾಗಿ ಸೂಚಿಸಿದ್ದರು. ಅಮೆರಿಕ ಈಗ ಮುಸ್ಲಿಮರ ಇರಾಕ್ ಹಾಗೂ ಕಮ್ಯುನಿಸ್ಟರ ನೇಪಾಳ ಮೇಲೆ ಯುದ್ಧ ಸಾರಿದೆ. ಅದು ಕ್ಯೂಬಾದ ಬಳಿಯಿರುವ ಗ್ವಾಂಟೆಮಾವೊ ದ್ವೀಪದಲ್ಲಿ ಭಯೋತ್ಪಾದಕರು ಎಂದು ಕೈದುಮಾಡಿರುವ ವ್ಯಕ್ತಿಗಳು ಒಂದೋ ಮುಸ್ಲಿಮರಾಗಿದ್ದಾರೆ ಇಲ್ಲವೇ ಕಮ್ಯುನಿಸ್ಟ್ ಕ್ರಾಂತಿಕಾರರಾಗಿದ್ದಾರೆ. ಹೀಗಾಗಿ ಯಾವುದೇ ಸ್ಥಳೀಯ ವೆನಿಸುವ ಕೋಮುಗಲಭೆಗೆ ಕಾರಣವೆಂದು ತೋರುವ ಒಂದು ಘಟನೆಯು ನೆಪ ಮಾತ್ರವಾಗಿದ್ದು, ನಿಜದಲ್ಲಿ ಅದು ಅಂತಾರಾಷ್ಟ್ರೀಯ ರಾಜಕಾರಣದ ದೊಡ್ಡ ವಿನ್ಯಾಸದ ಭಾಗವಾಗಿ ಹೆಣೆದುಕೊಂಡಿದೆ.

ಈ ಜಾಗತಿಕ ವಿದ್ಯಮಾನಗಳ ಅರಿವು ಮುಸ್ಲಿಮರಿಗೆ ಇದೆಯೊ ಇಲ್ಲವೊ, ಅವು ಮಾತ್ರ ನಿತ್ಯ ಬದುಕಿನ ಮೇಲೆ ಪರಿಣಾಮ ಬೀರುತ್ತಿದೆ. ಇವತ್ತು ಯಾವ ಹೊತ್ತಿನಲ್ಲಿ ಟೀವಿ ಹಾಕಿದರೂ ಅಲ್ಲಿ ಒಂದಾದರೂ ಭಯೋತ್ಪಾದನೆಗೆ ಲಗತ್ತಾದ ಸುದ್ದಿ ಇರುತ್ತದೆ. ಸುದ್ದಿಗಾರರು ಅದನ್ನು ಮುಸ್ಲಿಂ ಅಥವಾ ಇಸ್ಲಾಮಿಕ್ ಭಯೋತ್ಪಾದನೆ ಎಂದು ಕರೆಯುತ್ತಾರೆ. ಹಿಂದೆ ಯಜ್ಞಯಾಗಗಳನ್ನು ನಾಶಮಾಡಲು ಬರುತ್ತಿದ್ದ ಕೋರೆಹಲ್ಲುಗಳ ಕಪ್ಪನೆಯ ವಿಕರಾಳ ಜೀವಿಗಳನ್ನು ವೈದಿಕ ಪುರಾಣಗಳು ಸೃಷ್ಟಿಸಿದಂತೆ, ಈಗ ಜಾಗತಿಕ ರಾಜಕಾರಣವು ಮುಸ್ಲಿಮರ ಚಿತ್ರವನ್ನು ಸೃಷ್ಟಿಸಿದೆ. ಹಿಂದೆ ಸಿನಿಮಾಗಳಲ್ಲಿ ಆಡನ್ನು ಕತ್ತರಿಸಲು ಎಳೆದುಕೊಂಡು ಹೋಗುತ್ತಿದ್ದ ಲುಂಗಿಯುಟ್ಟ ಗಡ್ಡಧಾರಿ ಮುಸ್ಲಿಮರ ಪಾತ್ರಗಳಿದ್ದವು. ಈಗ ಏಕೆ೪೭ ಹಿಡಿದುಕೊಂಡು ಮುಖ ವನ್ನು ಕಣ್ಣುಹೊರತುಪಡಿಸಿ ಮುಖವನ್ನು ಮುಚ್ಚಿಕೊಂಡಿ ರುವ ಒಬ್ಬ ಭಯೋತ್ಪಾದಕ ಮುಸ್ಲಿಮರ ಚಿತ್ರವಿದೆ.

ಸೆಪ್ಟಂಬರ್, ೧೧ರ ಬಳಿಕ ಮುಸ್ಲಿಮ್ ಇಸ್ಲಾಂ ಎಂಬ ಶಬ್ದಗಳಿಗೆ ಕೂಡಲೇ ಲಗತ್ತಾಗುತ್ತಿರುವ ಪದವೆಂದರೆ ಭಯೋತ್ಪಾದನೆ. ಅರೆಸತ್ಯಗಳ ಈ ಗ್ರಹಿಕೆಗಳ ಮೂಲಕ ಇಡೀ ಸಮುದಾಯದ ರಾಕ್ಷಸೀಕರಣ ಮಾಡುತ್ತಿದೆ. ಇಂದಿರಾಗಾಂಧಿ ಕೊಲೆಯಾದಾಗಲೂ ಸಿಕ್ಖರ ಬಗ್ಗೆ ಇಂತಹ ಒಂದು ರಾಕ್ಷಸೀಕರಣದ ಚಿತ್ರವು ಭಾರತದಲ್ಲಿ ತಯಾರಾಗಿತ್ತು. ಪೇಟಕಟ್ಟಿಕೊಂಡು ಗಡ್ಡಬಿಟ್ಟಪ್ರತಿಯೊಬ್ಬ ಸಿಖ್ಖನು ಭಿಂದ್ರನ್‌ವಾಲೆಯಂತೆ ತೋರುತ್ತಿದ್ದನು. ಆಗ ಸಾವಿರಾರು ಸಿಕ್ಖರನ್ನು ಬೇಟೆಯಾಡಿ ಕೊಂದಾಗ, ಬಹಳಷ್ಟು ಸಜ್ಜನರು ಅವರಿಗೆ ಹಾಗೇ ಆಗಬೇಕು ಎಂದುಕೊಂಡರು. ಈಗ ಅಮೆರಿಕದಲ್ಲಿ ಗಡ್ಡಬಿಟ್ಟ ಮುಸ್ಲಿಮರಿರಲಿ ಸಿಕ್ಖರೂ ಕೂಡ ಹಲ್ಲೆಗೊಳಗಾಗುತ್ತಿದ್ದಾರೆ. ಇದು ಪರಿಸ್ಥಿತಿಯ ವಿಕೋಪವನ್ನು ಸೂಚಿಸುತ್ತದೆ.



ಈ ಜಾಗತಿಕ ವಿದ್ಯಮಾನಗಳ ಅರಿವು ಮುಸ್ಲಿಮರಿಗೆ ಇದೆಯೊ ಇಲ್ಲವೊ, ಅವು ಮಾತ್ರ ನಿತ್ಯ ಬದುಕಿನ ಮೇಲೆ ಪರಿಣಾಮ ಬೀರುತ್ತಿದೆ. ಇವತ್ತು ಯಾವ ಹೊತ್ತಿನಲ್ಲಿ ಟೀವಿ ಹಾಕಿದರೂ ಅಲ್ಲಿ ಒಂದಾದರೂ ಭಯೋತ್ಪಾದನೆಗೆ ಲಗತ್ತಾದ ಸುದ್ದಿ ಇರುತ್ತದೆ. ಸುದ್ದಿಗಾರರು ಅದನ್ನು ಮುಸ್ಲಿಂ ಅಥವಾ ಇಸ್ಲಾಮಿಕ್ ಭಯೋತ್ಪಾದನೆ ಎಂದು ಕರೆಯುತ್ತಾರೆ. ಹಿಂದೆ ಯಜ್ಞಯಾಗಗಳನ್ನು ನಾಶಮಾಡಲು ಬರುತ್ತಿದ್ದ ಕೋರೆಹಲ್ಲುಗಳ ಕಪ್ಪನೆಯ ವಿಕರಾಳ ಜೀವಿಗಳನ್ನು ವೈದಿಕ ಪುರಾಣಗಳು ಸೃಷ್ಟಿಸಿದಂತೆ, ಈಗ ಜಾಗತಿಕ ರಾಜಕಾರಣವು ಮುಸ್ಲಿಮರ ಚಿತ್ರವನ್ನು ಸೃಷ್ಟಿಸಿದೆ. ಹಿಂದೆ ಸಿನಿಮಾಗಳಲ್ಲಿ ಆಡನ್ನು ಕತ್ತರಿಸಲು ಎಳೆದುಕೊಂಡು ಹೋಗುತ್ತಿದ್ದ ಲುಂಗಿಯುಟ್ಟ ಗಡ್ಡಧಾರಿ ಮುಸ್ಲಿಮರ ಪಾತ್ರಗಳಿದ್ದವು. ಈಗ ಏಕೆ೪೭ ಹಿಡಿದುಕೊಂಡು ಮುಖವನ್ನು ಕಣ್ಣುಹೊರತುಪಡಿಸಿ ಮುಖವನ್ನು ಮುಚ್ಚಿಕೊಂಡಿ ರುವ ಒಬ್ಬ ಭಯೋತ್ಪಾದಕ ಮುಸ್ಲಿಮರ ಚಿತ್ರವಿದೆ.

ಘಟನೆ ಚರಿತ್ರೆಯದಿರಲಿ, ವರ್ತಮಾನದ್ದಿರಲಿ, ಅದಕ್ಕೆ ಇಡೀ ಸಮುದಾಯವನ್ನು ಜವಾಬ್ದಾರಿ ಮಾಡುವುದು ಹಾಗೂ ಶಿಕ್ಷಿಸುವುದು ಫ್ಯಾಸಿಸ್ಟ್ ಕ್ರಮ. ಭಾರತದಲ್ಲಿ ಕೋಮುವಾದವು ಈ ಕೆಲಸವನ್ನು ಪೂರ್ವಯೋಜಿತವಾಗಿ ಒಂದು ರಾಜಕೀಯ ಕಾರ್ಯಕ್ರಮವಾಗಿ ಮಾಡಿಕೊಂಡು ಬಂದಿದೆ. ನಮ್ಮ ಬಹುತೇಕ ಮಾಧ್ಯಮಗಳು ಜಾಗತಿಕ ವಿದ್ಯಮಾನಗಳ ಬಗ್ಗೆ ಅಮೆರಿಕನ್ ಮಾಧ್ಯಮಗಳ ನಿಲುವನ್ನು ಪ್ರಶ್ನಿಸದೆ ಅನುಸರಿಸುವುದರಿಂದ, ಅಮೆರಿಕದ ನಿಲುವೇ ಜಾಗತಿಕ ದೃಷ್ಟಿಕೋನ ಎಂಬಂತಾಗಿದೆ. ಸಿನಿಮಾಗಳು ಕೂಡ ಇವತ್ತು ಮುಸ್ಲಿಮರ ಭಯೋತ್ಪಾದನೆಯ ವಿಷಯವನ್ನು ಇಟ್ಟುಕೊಂಡು ಹಣ ಮಾಡುತ್ತಿವೆ. ಇಂತಹ ಮಾಧ್ಯಮಗಳ ಮೂಲಕ ತಮ್ಮ ಲೋಕಜ್ಞಾನ ಬೆಳೆಸಿಕೊಳ್ಳುವ ಮಧ್ಯಮವರ್ಗದ ಜನ, ಈ ಪೂರ್ವಗ್ರಹಗಳನ್ನೇ ತಮ್ಮ ದೃಷ್ಟಿಕೋನವನ್ನಾಗಿ ಮಾಡಿಕೊಳ್ಳುತ್ತಾರೆ. ತಮಗರಿಯದಂತೆಯೇ ಸುಪ್ತದ್ವೇಷ ಬೆಳೆಸಿಕೊಳ್ಳುತ್ತಾರೆ. ಇದು ಆಯಾ ಸಮುದಾಯ ಮೇಲೆ ಹಲ್ಲೆ ಮಾಡಲು, ಅಥವಾ ಇನ್ನೊಬ್ಬರು ಹಲ್ಲೆಮಾಡುವಾಗ ಮೌನಸಮ್ಮತಿ ನೀಡಲು ಕಾರಣವಾಗುತ್ತದೆ.

ಚರಿತ್ರೆಯಲ್ಲಿ ಎಂದೊ ಯಾರಿಂದಲೊ ಯಾವಕಾರಣಕ್ಕಾಗಿಯೇ ಘಟಿಸಿದ ವಿದ್ಯಮಾನಗಳಿಗೆ ಮತ್ತೊಂದು ಕಾಲಕ್ಕೆ ಸೇರಿದ, ಸಮುದಾಯವು ಜವಾಬ್ದಾರರಾಗಬೇಕು ಮತ್ತು ಬೆಲೆತೆರಬೇಕು. ಆ ಕೃತ್ಯವು ಸರಿಯೊ ತಪ್ಪೊ, ಅದಕ್ಕೆ ಕೊಡಲಾಗುವ ಅರ್ಥಗಳಿಗೆ ಒಪ್ಪಿಗೆ ಕೊಡಬೇಕು ಎಂಬುದು ಒಂದು ವಿಚಿತ್ರ ಕ್ರೌರ್ಯವಾಗಿದೆ. ವ್ಯಂಗ್ಯವೆಂದರೆ ನಮಗೆ ಮುಸ್ಲಿಮರಿಂದ ಅಪಾಯವಿದೆ ಎಂದು ದೊಡ್ಡ ಗಂಟಲಲ್ಲಿ ಕೂಗುತ್ತಿರುವುದು ತನ್ನ ಮಿಲಿಟರಿಯನ್ನು ಭೂಮಂಡಲದ ತುಂಬ ಇಟ್ಟು ಸಣ್ಣಪುಟ್ಟ ದೇಶಗಳನ್ನು ಬೆದರಿಸುತ್ತಿರುವ ಅಮೆರಿಕ ಅಥವಾ ಹಿಂದುತ್ವದ ಹೆಸರಲ್ಲಿ ಜನಾಂಗದ್ವೇಷವನ್ನು ತ್ರಿಶೂಲಗಳನ್ನು ಹಂಚುತ್ತ ತಿರುಗುವ ಮುತಾಲಿಕ್ ಅಥವಾ ತೊಗಾಡಿಯಾನಂತಹವರು. ಗೋಧ್ರಾದಲ್ಲಿ ಬೆಂಕಿ ಹಚ್ಚಿದವರು ಯಾರು ಎಂದು ಇನ್ನೂ ನಿರ್ಧಾರವಾಗಿಲ್ಲ. ಆದರೆ ಗುಜರಾತಿನ ಮುಸ್ಲಿಮರು ಇದಕ್ಕಾಗಿ ಶಿಕ್ಷೆಯನ್ನು ಕೊಟ್ಟಾಗಿದೆ. ಈ ಶಿಕ್ಷೆಗೆ ಅದು ಜಾರಿಯಾಗುವಾಗ ವ್ಯಾಪಕವಾದ ಸಾರ್ವಜನಿಕ ಸಮ್ಮತಿಯಿತ್ತು. ಈ ಹೊತ್ತು ಜಗತ್ತಿನಲ್ಲಿ ಯಾವುದೆ ಮುಸ್ಲಿಮನನ್ನು ಕೊಂದು ಭಯೋತ್ಪಾದಕ ಎಂದು ಕರೆದು ಕೈತೊಳೆದುಕೊಳ್ಳಬಹುದು. ಅವರನ್ನು ಕೊಲ್ಲುವುದು ವಿಶ್ವಶಾಂತಿಗಾಗಿ ಮಾಡುವ ಪುಣ್ಯದ ಕೆಲಸ ಎಂಬ ಭಾವನೆ ಇದೆ.

ಒಟ್ಟಿನಲ್ಲಿ ಇಸ್ಲಾಮಿಕ್ ಮೂಲಭೂತವಾದದ ವಿರುದ್ಧ ಜಗತ್ತಿನ ಪ್ರಜಾಪ್ರಭುತ್ವವಾದಿ ಶಕ್ತಿಗಳು ಸಮರ ಸಾರಿವೆ ಎಂಬ ಚಿತ್ರವಿದೆ. ಮೂಲಭೂತವಾದದಿಂದ ದಮನಕ್ಕೊಳಗಾದ ಈ ಲೇಖಕರನ್ನು ಪ್ರಗತಿಪರರನ್ನು ಬೆಂಬಲಿಸುವ ಆಶ್ರಯಕೊಡುವ ಅವರನ್ನು ಸನ್ಮಾನಿಸುವ ಕೆಲಸವೂ ಈ ಚಿತ್ರವನ್ನು ಗಟ್ಟಿಗೊಳಿಸುತ್ತದೆ. ವಿಚಿತ್ರವೆಂದರೆ ಲೇಖಕರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ಇವೇ ದೇಶಗಳು ಇಸ್ಲಾಮಿಕ್ ರಾಷ್ಟ್ರಗಳ ಸರ್ವಾಧಿಕಾರಿಗಳು ಮಿಲಿಟರಿ ಜನರಲುಗಳೂ ಆಳುತ್ತಿರುವ ಸರಕಾರಗಳನ್ನು ತಮ್ಮ ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲ ಮಾಡಿಕೊಟ್ಟಿವೆ ಎಂಬ ಕಾರಣಕ್ಕಾಗಿ ಮುದ್ದಿಸುತ್ತವೆ. ಸೌದಿ ಕುವೈತುಗಳಲ್ಲಿ ರಾಜವಂಶದ ಆಡಳಿತವನ್ನು ಹಾಗೂ ನೇಪಾಳದ ರಾಜಪ್ರಭುತ್ವವನ್ನು ಅವು ಬೆಂಬಲಿಸುತ್ತಿವೆ. ಮಾತ್ರವಲ್ಲ ಈ ದೇಶಗಳಲ್ಲಿ ಜನರು ಪ್ರಜಾಪ್ರಭುತ್ವಕ್ಕಾಗಿ ಮಾಡುತ್ತಿರುವ ಚಳುವಳಿಗಳನ್ನು ಹತ್ತಿಕ್ಕಲು ಅಲ್ಲಿನ ಸರಕಾರಗಳಿಗೆ ಬೆಂಬಲ ಕೊಡುತ್ತಿವೆ. ನೇಪಾಳದಲ್ಲಿ ಈಗ ಇದಾಗುತ್ತಿದೆ.

ಸಂಕೀರ್ಣ ಪರಿಸ್ಥಿತಿ

ಕಷ್ಟದ ಸಂಗತಿಯೆಂದರೆ ಮುಸ್ಲಿಂ ಮೂಲಭೂತವಾದವೆಂದು ಹೆಸರಿಸಲಾಗುವ ಶಕ್ತಿಗಳು ಈಹೊತ್ತು ಸಾಮ್ರಾಜ್ಯಶಾಹಿ ಅಮೆರಿಕದ ವಿರುದ್ಧದ ಹೋರಾಟದ

ಮುಸ್ಲಿಂ ಸಮುದಾಯದ ಮೇಲೆ ಮುಸ್ಲಿಂ ಮೂಲಭೂತವಾದವು ಭಾರವಾಗಿ ಕೂತಿದೆ. ಅದು ಮಹಿಳೆಯರ ಮೇಲೆ, ಲೇಖಕರು ಕಲಾವಿದರ ಮೇಲೆ, ಪ್ರಗತಿಪರ ಚಿಂತನೆಯ ಮೇಲೆ ಮಾಡಿರುವ ಹಲ್ಲೆಗಳು ಕ್ರೂರವಾಗಿವೆ. ಮುಸ್ಲಿಂರಾಷ್ಟ್ರಗಳ ಸಾಮಾಜಿಕ ಹಿಂದುಳಿವಿಕೆಗೆ ಅದೂ ಒಂದು ಕಾರಣವಾಗಿದೆ. ತಾಲಿಬಾನು ರಷಿಯಾ ಅಮೆರಿಕಗಳ ಸಾಮ್ರಾಜ್ಯವಾದದ ವಿರುದ್ಧ ಹೇಗೆ ಪ್ರತಿರೋಧ ಮಾಡಿರಲಿ, ಅದು ಆಫಘಾನಿಸ್ಥಾನದ ಪ್ರಜೆಗಳ ಮೇಲೆ ಕೂಡ ಹಿಂಸಾತ್ಮಕವಾಗಿತ್ತು ಎನ್ನುವುದು ಸುಳ್ಳಲ್ಲ. ಹೀಗೆ ಜಗತ್ತಿನ ಮುಸ್ಲಿಮರು ನಾಲ್ಕು ಇಕ್ಕಟ್ಟುಗಳಲ್ಲಿ ಬದುಕುತ್ತಿದ್ದಾರೆ.

ಸವಾಲನ್ನು ಇಟ್ಟಿರುವುದು. ಮೂಲಭೂತವಾದ ಹಾಗೂ ಸಾಮ್ರಾಜ್ಯಶಾಹಿಗೆ ಪ್ರತಿರೋಧಕ್ಕಾಗಿ ಹುಟ್ಟಿರುವ ಮಿಲಿಟನ್ಸಿ ಇವೆರಡೂ ಬೇರ್ಪಡಿಸಲಾಗದಂತೆ ಬೆರೆತು ಬಿಟ್ಟಿವೆ. ಅದನ್ನು ಕೇವಲ ರಾಜಕೀಯವಾಗಿ ನೋಡಿದರೆ ಅದರೊಳಗಿನ ಸಂಪ್ರದಾಯವಾದವನ್ನು ಅಲಕ್ಷಿಸಿದಂತೆ. ಅದನ್ನು ಕೇವಲ ಇಸ್ಲಾಮಿಕ್ ಭಯೋತ್ಪಾದನೆ ಎಂದು ಬಿಟ್ಟರೆ ಅದರ ರಾಜಕೀಯ ಪ್ರತಿರೋಧದ ಆಯಾಮವನ್ನು ಅವಗಣಿಸಿದಂತೆ ಆಗುತ್ತದೆ. ಅವು ಧರ್ಮದ ಹೆಸರಲ್ಲಿ ಉಗ್ರಗಾಮಿಯಾಗಿದ್ದರೂ ಕೇವಲ ಧಾರ್ಮಿಕವಾಗಿಲ್ಲ.

ಪಾಕಿಸ್ತಾನದಲ್ಲಿ ಇವತ್ತು ಅಮೆರಿಕನ್ ಸೈನಕ್ಕೂ ಅದರ ಬಹುರಾಷ್ಟ್ರೀಯ ಕಂಪನಿಗಳಿಗೂ ತೊಡಕೊಡ್ಡಿರುವವರು ಈ ಮೂಲಭೂತವಾದಿಗಳೆ. ಪ್ಯಾಲಸ್ತೈನಿನಲ್ಲಿ ಇರಾಕಿನಲ್ಲಿ ಅಫಘಾನಿಸ್ತಾನ ಚೆಚನ್ಯಾಗಳಲ್ಲಿ ಜನ ತಂತಮ್ಮ ನಾಡುಗಳ ಸ್ವಾಯತ್ತತೆಗಾಗಿ ಮಾಡುವ ಹೋರಾಟಗಳಲ್ಲಿ ಇರುವವರು ಈ ಭಯೋತ್ಪಾದಕರು. ಟ್ರೇಡ್‌ಸೆಂಟರ್ ಕಟ್ಟಡಗಳ ಮೇಲಿನ ದಾಳಿ, ಅಮೆರಿಕದ ಬಹುರಾಷ್ಟ್ರೀಯ ಕಂಪನಿ ಮತ್ತು ರಾಯಭಾರ ಕಛೇರಿಗಳ ಮೇಲೆ ನಡೆಯುತ್ತಿರುವ ದಾಳಿಗಳಿಗೆ ಸಂಬಂಧಿಸಿ ಒಂದು ಪ್ರಶ್ನೆಯನ್ನು ಕೇಳಿಕೊಳ್ಳಲೆ ಬೇಕು. ಇವು ಯಾಕೆ ಅಮೆರಿಕವನ್ನೇ ಗುರಿಯಾಗಿಸಿ ಕೊಂಡಿವೆ. ಇದರ ರಾಜಕೀಯ ಆರ್ಥಿಕ ವಿಶ್ಲೇಷಣೆಯನ್ನು ಮಾಡುವ ಬದಲಿಗೆ ಕಾರಣಗಳನ್ನು ಧರ್ಮದಲ್ಲಿ ಜನಾಂಗದಲ್ಲಿ ಹುಡುಕಲಾಗುತ್ತದೆ. ಇದು ಅಚಾರಿತ್ರಿಕ ಮಾತ್ರವಲ್ಲ. ಇಂತಹ ಪರಿಸ್ಥಿತಿಯನ್ನು ಹುಟ್ಟುಹಾಕಿರುವ ಜಾಗತಿಕ ರಾಜಕಾರಣವನ್ನು ಮರೆಮಾಚುವ ತಂತ್ರ ಕೂಡ. ವಾಸ್ತವದಲ್ಲಿ ಈಗಿನ ಮಧ್ಯ ಏಶಿಯಾದ ಮೇಲಿನ ಯುರೋಪು ಅಮೆರಿಕಗಳ ಅಕ್ರಮಣಕ್ಕೆ ಕಾರಣ,ಅವರ ರಾಜಕೀಯ ಹಿತಾಸಕ್ತಿಗಳೆ ಹೊರತು ಧಾರ್ಮಿಕ ಭಾವನೆಗಳಲ್ಲ. ರಾಜಕೀಯವಾಗಿ ಮುಸ್ಲಿಮರ ಆಕ್ರೋಶ ವನ್ನು ಕೇವಲ ಅಮೆರಿಕ ಅಥವಾ ಸಂಘಪರಿವಾರ ಹಬ್ಬಿಸಿರುವ ಜನಾಂಗದ್ವೇಷಿ ಕ್ಲೀಷೆಗಳಲ್ಲಿ ಹುಡುಕುವುದು ಉಪಯುಕ್ತವಲ್ಲ.

ಆದರೆ ಮುಸ್ಲಿಂ ಸಮುದಾಯದ ಮೇಲೆ ಮುಸ್ಲಿಂ ಮೂಲಭೂತವಾದವು ಭಾರವಾಗಿ ಕೂತಿದೆ. ಅದು ಮಹಿಳೆಯರ ಮೇಲೆ, ಲೇಖಕರು ಕಲಾವಿದರ ಮೇಲೆ, ಪ್ರಗತಿಪರ ಚಿಂತನೆಯ ಮೇಲೆ ಮಾಡಿರುವ ಹಲ್ಲೆಗಳು ಕ್ರೂರವಾಗಿವೆ. ಮುಸ್ಲಿಂರಾಷ್ಟ್ರಗಳ ಸಾಮಾಜಿಕ ಹಿಂದುಳಿವಿಕೆಗೆ ಅದೂ ಒಂದು ಕಾರಣವಾಗಿದೆ. ತಾಲಿಬಾನು ರಷಿಯಾ ಅಮೆರಿಕಗಳ ಸಾಮ್ರಾಜ್ಯವಾದದ ವಿರುದ್ಧ ಹೇಗೆ ಪ್ರತಿರೋಧ ಮಾಡಿರಲಿ, ಅದು ಆಫಘಾನಿಸ್ಥಾನದ ಪ್ರಜೆಗಳ ಮೇಲೆ ಕೂಡ ಹಿಂಸಾತ್ಮಕವಾಗಿತ್ತು ಎನ್ನುವುದು ಸುಳ್ಳಲ್ಲ. ಹೀಗೆ ಜಗತ್ತಿನ ಮುಸ್ಲಿಮರು ನಾಲ್ಕು ಇಕ್ಕಟ್ಟುಗಳಲ್ಲಿ ಬದುಕುತ್ತಿದ್ದಾರೆ. ಒಂದನೆಯದಾಗಿ ತಮ್ಮನ್ನು ಸಂಪ್ರದಾಯದಲ್ಲಿ ಹೂತುಹಾಕುವ ಮೂಲಭೂತವಾದ. ಎರಡನೆಯದಾಗಿ ತಮ್ಮ ಸರ್ವನಾಶಮಾಡುವ ಸಾಮ್ರಾಜ್ಯಶಾಹಿ ದಬ್ಬಾಳಿಕೆ. ಮೂರನೆಯದಾಗಿ ಭಾರತ ಇಸ್ರೇಲುಗಳಲ್ಲಿ ಅವರನ್ನು ದ್ವೇಷಿಸುವ ಜನಾಂಗವಾದ ಹಾಗೂ ಕೋಮುವಾದ. ನಾಲ್ಕನೆಯದಾಗಿ ಭಾರತದ ಮಟ್ಟಿಗೆ ಸಾಮಾಜಿಕ ಹಿಂದುಳುವಿಕೆ. ಹೀಗೆ ಮುಸ್ಲಿಮರ ಪ್ರಶ್ನೆಯು ಅಂತರಾಷ್ಟ್ರೀಕರಣದ ಆಯಾಮ ಪಡೆದಿದೆ.

ಪಾಕಿಸ್ತಾನದಲ್ಲಿ ಬಾಂಗ್ಲಾದಲ್ಲಿ ಹಿಂದುಗಳ ಮೇಲೆ ಹಲ್ಲೆಯಾದರೆ, ಅಮೆರಿಕದ ಮೇಲೆ ಬಿನ್‌ಲ್ಯಾಡೆನ್ ಸೇಡು ತೀರಿಸಿಕೊಂಡರೆ, ಮುಂಬೈಯಲ್ಲಿ ದಾವೂದ ಇಬ್ರಾಹಿಮ ನಂತಹ ಭೂಗತ ಲೋಕದ ಪಾತಕಿಗಳು ಬಾಂಬು ಸಿಡಿಸಿದರೆ, ಅದಕ್ಕೆ ಭಾರತದ ಯಾವುದೋ ಮೂಲೆಯಲ್ಲಿ ತನ್ನ ಪಾಡಿಗೆ ತಾವಿರುವ ಮುಸ್ಲಿಮರು ಬಾಧ್ಯರಾಗುತ್ತಾರೆ. ಇದೊಂದು ವಿಚಿತ್ರ ಪರಿಸ್ಥಿತಿ.

ಇದು ಚಾರಿತ್ರಿಕವಾಗಿ ಬಾಬರ್ ಘೋರಿ ಘಜನಿ ಮಹಮದ್ ಔರಂಗಜೇಬರು ಮಾಡಿದರು ಎನ್ನಲಾಗುವ ದೇವಸ್ಥಾನ ಲೂಟಿ, ಯುದ್ಧಗಳಿಗೆ ಎಷ್ಟೋ ಶತಮಾನಗಳ ನಂತರದ ವರ್ತಮಾನದ ಮುಸ್ಲಿಮರು ಹೊಣೆಗಾರರಾಗುವುದಕ್ಕಿಂತಲೂ ಕಷ್ಟಕರವಾದುದು. ಭಾರತೀಯ ಮುಸ್ಲಿಮರನ್ನು ಕಂಗೆಡಿಸಿರುವ ಮೂರು ಘಟನೆಗಳೆಂದರೆ, ಶಾಬಾನು ಪ್ರಕರಣ, ಬಾಬರಿಮಸೀದಿ ಘಟನೆ. ಗುಜರಾತಿನ ನರಮೇಧ. ಇವೆಲ್ಲಕ್ಕೆ ಪೂರಕವಾಗಿ ಸೆಪ್ಟಂಬರ ೧೧ರ ಘಟನೆ. ಇವು ಮುಸ್ಲಿಮರ ಬದುಕಿನಲ್ಲಿ ಕೆಲವು ಕಷ್ಟಗಳನ್ನು ನಿಲ್ಲಿಸಿವೆ. ಇವಕ್ಕೆಲ್ಲ ಭಾರತೀಯ ಮುಸ್ಲಿಮರು ಹೇಗೆ ಆಲೋಚಿಸುತ್ತಿರಬಹುದು.

ರಾಜಕೀಯ ಪ್ರಜ್ಞೆಯಿಲ್ಲದ ಮುಸ್ಲಿಮರು

ಭಾರತೀಯ ಮುಸ್ಲಿಮರು ಎನ್ನುವದ ಅದೊಂದು ಅಮೂರ್ತ ಕಲ್ಪನೆ. ಯಾರನ್ನು ಭಾರತೀಯ ಮುಸ್ಲಿಮರ ಪ್ರತಿನಿಧಿಸಿ ಮಾತಾಡುವುದು. ನಮ್ಮ ಮನೆಗೆ ಹಳೆಪೇಪರ್ ಕೊಳ್ಳಲು ಒಬ್ಬ ಮುಸ್ಲಿಮನು ಬಂದ. ಅವನ ಹೆಸರು ಕೇಳಿದೆ. ದಾದಾಪೀರ್ ಎಂದ. ಇದು ಬಾಬಾಬುಡನಗಿರಿಯ ಸೂಫಿಸಂತನ ಹೆಸರು. ಅವನು ಪ್ರತಿವರ್ಷ ಅಲ್ಲಿಗೆ ಹೋಗುವವನು. ಅವನಿಗೆ ಅಲ್ಲಿ ಸಂಘಪರಿವಾರವು ದತ್ತಪೀಠದ ಹೆಸರಲ್ಲಿ ಎಬ್ಬಿಸಿರುವ ತರಲೆಗಳ ಬಗ್ಗೆ ಕೇಳಿದೆ. ಅವನಿಗೆ ಏನೂ ಗೊತ್ತಿರಲಿಲ್ಲ. ಅನಕ್ಷರತೆ, ಬಡತನ, ಸಾಮಾಜಿಕ ಹಿಂದುಳುವಿಕೆ ವ್ಯಾಪಕವಾಗಿರುವ, ನಿತ್ಯ ಜೀವನಕ್ಕೆ ಹೋರಾಡುವ ಮುಸ್ಲಿಮರಲ್ಲಿ ರಾಜಕೀಯವಾಗಿ ಪ್ರಜ್ಞೆಯಿಂದ ಚಿಂತಿಸಬಲ್ಲ ಮಧ್ಯಮವರ್ಗವೇ ಕಡಿಮೆ.

ಕೆಲವೊಮ್ಮೆ ಮಸೀದಿಗಳಲ್ಲಿ ನಮಾಜಿನ ಕೊನೆಗೆ ಮಾಡುವ ಹಾರೈಕೆಗಳಲ್ಲಿ ದುವಾ ಧರ್ಮಗುರುವು ತಮ್ಮ ಭೂಮಿಗೆಂದು ಹೋರಾಟ ಮಾಡುತ್ತಿರುವ ಪ್ಯಾಲಸ್ತೈನಿಗಳ ಬೇಡಿಕೆಯನ್ನು ಅಲ್ಲಾ ಈಡೇರಿಸಲಿ, ಇರಾಕಿನ ಜನರ ಕಷ್ಟವನ್ನು ಕಡಿಮೆ ಮಾಡಲಿ, ಎಂದು ಹೇಳುವುದುಂಟು. ಜನ ಕೈಯೆತ್ತಿ ಆಮೀನ್ ತಥಾಸ್ತು ಎನ್ನುವುದುಂಟು. ಆದರೂ ಅದೊಂದು ಯಾಂತ್ರಿಕವಾದ ಕ್ರಿಯೆಯಾಗಿದೆಯೇ ವಿನಾ ಬೌದ್ಧಿಕವಾಗಿ ಚಿಂತಿಸುವ ಮತ್ತು ಕ್ರಿಯಾತ್ಮಕವಾದ ತೊಡಗುವಿಕೆಯಲ್ಲ. ಹೀಗಾಗಿ ಭಾರತೀಯ ಮುಸ್ಲಿಮರು ಈಹೊತ್ತು ಹೇಗೆ ಚಿಂತಿಸುತ್ತಿದ್ದಾರೆ ಎನ್ನುವುದು ಅಸೂಕ್ಷ್ಮ ಪ್ರಶ್ನೆ. ಬಹುತೇಕ ಮುಸ್ಲಿಮರಿಗೆ ಗುಜರಾತಿನ ಪ್ರಯೋಗದ ಬಿಸಿಯು ತಲುಪಿಯೇ ಇಲ್ಲ. ಆದರೂ ಹಿಂದಿಗೆ ಹೋಲಿಸಿದರೆ, ಸಾಮಾನ್ಯ ಮುಸ್ಲಿಮರು ಈಚೆಗೆ ರಾಜಕೀಯ ಪ್ರಜ್ಞೆಯುಳ್ಳವರಾಗುತ್ತಿದ್ದಾರೆ ಎನ್ನಬಹುದು. ಮುಸ್ಲಿಮರು ಚಾರಿತ್ರಿಕ ಇಕ್ಕಟ್ಟಿನಲ್ಲಿ ಸಿಲುಕಿದ್ದಾರೆ. ಜತೆಗೆ ಇದರಿಂದ ಹೊರಬರಲು ಅನೇಕ ಯತ್ನಗಳನ್ನು ಮಾಡುತ್ತಿದ್ದಾರೆ. ಅದರ ಫಲವಾಗಿಯೇ ಈ ಸಲದ ಬಿಜೆಪಿಯ ಸೋಲು. ಆದರೂ ಅವರ ಮುಂದಿನ ಆಯ್ಕೆಗಳು ಸುಲಭವಾಗಿಲ್ಲ.

ಹಾದಿ ೧ : ಮೂಲಭೂತವಾದದ ತೆಕ್ಕೆಗೆ ಹೋಗುವುದು.

ಇವತ್ತಿನ ಜಾಗತಿಕ ಸನ್ನಿವೇಶವು ಮುಸ್ಲಿಮ್ ಸಮಾಜದಲ್ಲಿ ಹುಟ್ಟಿಸಿರುವ ಅಸಹಾಯಕತೆ, ಆಕ್ರೋಶಗಳು ಅವರನ್ನು ಇಸ್ಲಾಮಿನ ಮೂಲಭೂತವಾದದತ್ತ ತಳ್ಳುತ್ತಿವೆ. ಇಂದು ಭಾರತದಲ್ಲಿ ತಬ್ಲೀಕ್ ಎಂಬ ಸಂಪ್ರದಾಯವಾದಿ ಚಳುವಳಿಯು ವ್ಯಾಪಕವಾಗಿ ಹರಡುತ್ತಿದೆ. ಅದಕ್ಕೆ ಪ್ರಾರ್ಥನೆ, ಇಸ್ಲಾಮಿನ ಮೂಲಭೂತ ರಚನೆಗೆ ಬದ್ಧವಾಗಿಸುವ ಪರಲೋಕದ ಸುಖಕ್ಕೆ ಇಲ್ಲಿಮಾಡಬೇಕಾದ ತ್ಯಾಗ, ಪ್ರಾರ್ಥನೆಗಳ ಕಾರ್ಯಕ್ರಮಗಳೇ ಮುಖ್ಯ. ಇದು ಸಮಸ್ಯೆಗಳನ್ನು ರಾಜಕೀಯವಾಗಿ ವಿಶ್ಲೇಷಿಸುವ ಪ್ರಜ್ಞಾವಂತಿಕೆಗೆ ಬದಲು ಎಲ್ಲವನ್ನೂ ಧಾರ್ಮಿಕ ನೈತಿಕತೆ ಬೆಳೆಸುತ್ತಿದೆ.

ಭಾರತೀಯ ಮುಸ್ಲಿಂ ಸಮಾಜವು ಆಧುನಿಕಗೊಳ್ಳುವ ಬದಲು ಹೆಚ್ಚು ಸಾಂಪ್ರದಾಯಕವಾಗುತ್ತಿದೆ ಅನಿಸುತ್ತಿದೆ.

ಧಾರವಾಡದ ಒಬ್ಬ ಗೆಳೆಯರು ಹೇಳಿದರು. ಈ ಊರಲ್ಲಿ ಹಿಂದೆಗಿಂತ ಈಗ ಮಹಿಳೆಯರು ಹೆಚ್ಚು ಬುರುಖ ಹಾಕುತ್ತಿದ್ದಾರೆ. ಇದು ಒಂದು ಸಣ್ಣ ಸೂಚನೆ ಇರಬಹುದು. ಧಾರ್ಮಿಕ ಮುಸ್ಲಿಮನಾಗುವ ಈ ಹಾದಿ ಭಾರತದಂತಹ ದೇಶದಲ್ಲಿ ಇತರೆ ಧರ್ಮಗಳ ಧರ್ಮೀಯರ ಜತೆ ಬದುಕಲು ಬೇಕಾದ ಕೊಡುಕೊಳೆಯ ಮನೋಭಾವವನ್ನೇ ಕಳೆದುಬಿಡಬಹುದು. ಇಂತಹ ಪರಿಸ್ಥಿತಿಯನ್ನೇ ಹಿಂದುತ್ವವಾದ ಬಯಸುತ್ತಿರುವುದು. ಭಾರತದಲ್ಲಿ ಮುಸ್ಲಿಂ ಹಾಗೂ ಮುಸ್ಲಿಮೇತರ ಸಂಬಂಧ ಬೆಸೆಯುವಲ್ಲಿ ಮುಖ್ಯವಾದ ಪಾತ್ರ ನಿರ್ವಹಿಸುವ ಸೂಫಿಪರಂಪರೆಯನ್ನು ಸಂಪ್ರದಾಯವಾದಿ ಇಸ್ಲಾಮ್ ಹಾಗೂ ಸಂಘಪರಿವಾರ ಎರಡೂ ನಿರಾಕರಿಸುತ್ತದೆ ಎನ್ನುವುದು ಗಮನಾರ್ಹ. ಮುಸ್ಲಿಮರು ಹೆಚ್ಚು ಸನಾತನವಾದಿಗಳಾದಷ್ಟು ಅವರನ್ನು ರಾಕ್ಷಸೀಕರಿಸುವುದಕ್ಕೆ ಅದಕ್ಕೆ ಸುಲಭ. ಶಾಬಾನು ಪ್ರಕರಣದ ಗರಿಷ್ಠ ಪ್ರಯೋಜನ ಪಡೆದಿದ್ದು ಹಿಂದುತ್ವವಾದ. ಮುಸ್ಲಿಮರು ಸಂಪ್ರದಾಯವಾದಿಯಾದರೆ, ಅದನ್ನು ರಾಕ್ಷಸೀಕರಿಸಿ ದಮನಮಾಡುವವರಿಗೆ ಸಂತೋಷವಾಗುತ್ತದೆ. ಮುಸ್ಲಿಮ್ ಸಮಾಜ ಆಧುನಿಕಗೊಳ್ಳುವ ಚಾರಿತ್ರಿಕ ಅವಕಾಶ ಕಳೆದುಕೊಳ್ಳುತ್ತದೆ.

ಹಾದಿ ೨: ಸಜ್ಜನ ಮುಸ್ಲಿಮನಾಗುವುದು

ಯಾರು ತಮ್ಮನ್ನು ರಾಕ್ಷಸೀಕರಣ ಮಾಡುತ್ತಿದ್ದಾರೊ, ಅವರು ಇಷ್ಟಪಡುವ ಮಾದರಿಯ ಸಜ್ಜನನಾಗುವುದು. ಅಂದರೆ ಬುಶ್ ಮುಂತಾದವರಿಗೆ ಪ್ರಿಯವಾಗಿರುವ ಜನರಲ್ ಮುಶರಫ್‌ನಂತಾಗುವುದು. ಗುಜರಾತು ದಂಗೆಗಳ ಕ್ರೌರ್ಯದ ಮೇಲೆಪರದೆ ಎಳೆಯುವ ಕಾರ್ಯಕ್ರಮವಾಗಿ ರಾಷ್ಟ್ರಪತಿಯಾದ, ಪಕ್ಕದ ದೇಶದ ಮೇಲೆ ಹಾಕಲು ಕ್ಷಿಪಣಿ ತಯಾರಿಸಿದ ವಿಜ್ಞಾನಿ ರಾಷ್ಟ್ರಪತಿ ಅಬ್ದುಲ್ ಕಲಾಮರಂತಾಗುವುದು. ಅಥವಾ ಬಿಜೆಪಿಯಲ್ಲಿರುವ ಸೈಯದ ಅಬ್ಬಾಸ್ ನಖ್ವಿ, ಶಹನವಾಜ ಹುಸೇನ್, ನಜಾ ಹೆಪ್ತುಲ್ಲಾರಂತೆ ಆಗುವುದು.

೨೦೦೪ರ ಮಹಾಚುನಾವಣೆಗೆ ಮುಂಚೆ ಬಿಜೆಪಿಗೆ ಮುಸ್ಲಿಮರು ಸಜ್ಜನರಾಗಲು ವಲಸೆ ಹೋಗುವ ಘಟನೆಗಳನ್ನು ಪತ್ರಿಕೆಗಳು ವರದಿಮಾಡುತ್ತಿದ್ದವು. ಕರ್ನಾಟಕದಲ್ಲಿ ಜನರ ಸಮಸ್ಯೆಗಳ ಬಗ್ಗೆ ವಾಚಕರವಾಣಿ ಬರೆಯುತ್ತಿದ್ದ ಸಮಾಜಶಾಸ್ತ್ರದ ಪ್ರೊಫೆಸರ್ ಮಮ್ತಾಜ್ ಅಲಿಖಾನರು ಬಿಜೆಪಿಗೆ ಸೇರಿದರು. ಮಾತ್ರವಲ್ಲ ಬೆಂಗಳೂರಿನ ಒಂದು ಕ್ಷೇತ್ರದಿಂದ ಚುನಾವಣೆಗೂ ಬಿಜೆಪಿ ಟಿಕೇಟಿನಿಂದ ಸ್ಪರ್ಧಿಸಿದರು. ಬಿಜೆಪಿ ಸರಕಾರಗಳ ಆಳ್ವಿಕೆಯಲ್ಲಿ ಗುಜರಾತಿನ ಅಭೂತಪೂರ್ವ ಹಿಂಸೆಯನ್ನು ಸಂಘಟಿಸಿದ ನಂತರವೂ ಮುಸ್ಲಿಮರು ಬಿಜೆಪಿಗೆ ಸೇರುವುದು ಎಂದರೇನು. ಭಯವೋ ಅಧಿಕಾರದಾಸೆಯೊ. ಆದರೆ ಇದು ತಲೆಮಾಸಿದ ಕೆಲವರ ಕೆಲಸ ಎಂದೂ ಹೇಳಲಾಗದು.



ಮುಸ್ಲಿಮರು ಹೆಚ್ಚು ಸನಾತನವಾದಿಗಳಾದಷ್ಟು ಅವರನ್ನು ರಾಕ್ಷಸೀಕರಿಸುವುದಕ್ಕೆ ಅದಕ್ಕೆ ಸುಲಭ. ಮುಸ್ಲಿಮರು ಸಂಪ್ರದಾಯವಾದಿಯಾದರೆ, ಅದನ್ನು ರಾಕ್ಷಸೀಕರಿಸಿ ದಮನಮಾಡುವವರಿಗೆ ಸಂತೋಷವಾಗುತ್ತದೆ. ಮುಸ್ಲಿಮ್ ಸಮಾಜ ಆಧುನಿಕಗೊಳ್ಳುವ ಚಾರಿತ್ರಿಕ ಅವಕಾಶ ಕಳೆದುಕೊಳ್ಳುತ್ತದೆ. ಸಜ್ಜನ ಮುಸ್ಲಿಮನಾಗುವುದು ಯಾರು ತಮ್ಮನ್ನು ರಾಕ್ಷಸೀಕರಣ ಮಾಡುತ್ತಿದ್ದಾರೊ, ಅವರು ಇಷ್ಟಪಡುವ ಮಾದರಿಯ ಸಜ್ಜನನಾಗುವುದು. ಅಂದರೆ ಬುಶ್ ಮುಂತಾದವರಿಗೆ ಪ್ರಿಯವಾಗಿರುವ ಜನರಲ್ ಮುಶರಫ್‌ನಂತಾಗುವುದು. ಗುಜರಾತು ದಂಗೆಗಳ ಕ್ರೌರ್ಯದ ಮೇಲೆಪರದೆ ಎಳೆಯುವ ಕಾರ್ಯಕ್ರಮವಾಗಿ ರಾಷ್ಟ್ರಪತಿಯಾದ, ಪಕ್ಕದ ದೇಶದ ಮೇಲೆ ಹಾಕಲು ಕ್ಷಿಪಣಿ ತಯಾರಿಸಿದ ವಿಜ್ಞಾನಿ ರಾಷ್ಟ್ರಪತಿ ಅಬ್ದುಲ್ ಕಲಾಮರಂತಾಗುವುದು. ಅಥವಾ ಬಿಜೆಪಿ ಯಲ್ಲಿರುವ ಸೈಯದ ಅಬ್ಬಾಸ್ ನಖ್ವಿ, ಶಹನವಾಜ ಹುಸೇನ್, ನಜಾ ಹೆಪ್ತುಲ್ಲಾರಂತೆ ಆಗುವುದು.

ಯಾಕೆಂದರೆ ಆರಿಫ್ ಮೊಹಮದ್‌ಖಾನರು ಬಿಜೆಪಿ ಸೇರಿದರು.

ಶಾಬಾನು ಪ್ರಕರಣದಲ್ಲಿ ಸುಪ್ರೀಂ ಕೋರ್ಟಿನ ತೀರ್ಪಿಗೆ ವಿರುದ್ಧವಾಗಿ ರಾಜೀವಗಾಂಧಿಯವರು ಪಾರ್ಲಿಮೆಂಟಿನಲ್ಲಿ ಮುಸ್ಲಿಂ ವಿಚ್ಛೇದಿತ ಮಹಿಳೆಗೆ ಪರಿಹಾರವನ್ನು ತಲಾಖ ಕೊಟ್ಟ ಗಂಡನಲ್ಲ, ಬದಲಿಗೆ ವಕ್ಫ್‌ಬೋರ್ಡುಗಳು ಕೊಡ ಬೇಕು ಎಂದು ಶಾಸನ ಪಾಸುಮಾಡಿದಾಗ, ಮಂತ್ರಿಯಾಗಿದ್ದ ಮೊಹಮದ ಖಾನರು ವಿರೋಧಿಸಿ ರಾಜಿನಾಮೆ ಕೊಟ್ಟವರು. ಇದು ಮುಸ್ಲಿಂ ಸಮಾಜವನ್ನು ಒಳಗೊಂದಲೇ ಸುಧಾರಿಸ ಬಯಸುವ ಎಲ್ಲ ಮುಸ್ಲಿಂ ಪ್ರಜ್ಞಾವಂತರ ಪ್ರಾತಿನಿಧಿಕ ದನಿಯಂತಿತ್ತು. ಅವರನ್ನು ಪ್ರಗತಿಪರರೆಲ್ಲರೂ ಬೆಂಬಲಿಸಿದ್ದರು. ಆದರೆ ಅಂತಹವರೇ ಬಿಜೆಪಿ ಸೇರಿದರು. ಮುಸ್ಲಿಂ ಸಮುದಾಯಗಳು ಕಾಂಗ್ರೆಸ್ಸಿನ ವಿರುದ್ಧ ತೋರಿದ ಕೋಪವು ಬಿಜೆಪಿಯ ಸಿದ್ಧಾಂತಕ್ಕೆ ಬಲಕೊಡುವ ನಿದರ್ಶನವಿದು.

ಹಾದಿ ೩ : ಸೆಕ್ಯುಲರ್ ಪಕ್ಷಗಳಲ್ಲಿ ಗುರುತಿಸಿಕೊಳ್ಳುವುದು

ಬಿಜೆಪಿಗೆ ಬೆದರಿ ಮುಸ್ಲಿಮರು ನಿರಂತರವಾಗಿ ಮಧ್ಯಮಾರ್ಗಿಯ ಪಕ್ಷಗಳನ್ನು ಉದ್ದಕ್ಕೂ ಬೆಂಬಲಿಸುವ ಕೆಲಸ ಮಾಡಿಕೊಂಡು ಬಂದಿದ್ದಾರೆ.

ಪಿ.ವಿ ನರಸಿಂಹರಾವ್ ಸರಕಾರದ ಮೌನ ಸಮ್ಮತಿಯಲ್ಲಿ ಮಸೀದಿ ಉರುಳಿಬಿದ್ದ ಬಳಿಕ ಅವರಲ್ಲಿ ಕಾಂಗ್ರೆಸ್ಸ್ ವಿರೋಧಿ ಧೋರಣೆ ಬಂದಿತು. ಇದು ಇತರೆ ಬಿಜೆಪಿಯೇತರ ಪಕ್ಷಗಳಲ್ಲಿ ಗುರುತಿಸಿಕೊಳ್ಳಲು ಕಾರಣವಾಯಿತು. ಇದರಿಂದ ತಮ್ಮ ತಪ್ಪನ್ನು ತಿದ್ದಿಕೊಂಡವರಂತೆ ಮತ್ತೆ ಕಾಂಗ್ರೆಸ್ಸನ್ನು ಬೆಂಬಲಿಸತೊಡಗಿದರು. ಈ ಸಲದ ಪಾರ್ಲಿಮೆಂಟ್ ಚುನಾವಣೆಯಲ್ಲಿ ಇದು ಪರಿಣಾಮ ತೋರಿಸಿದೆ. ಆದರೆ ಅವರು ಬಿಟ್ಟು ಅವರು ಆಟಕ್ಕೆ ಕೊನೆಯೆಂದು. ಸಮ್ಮಿಶ್ರ ಸರಕಾರಗಳ ಈ ಯುಗದಲ್ಲಿ ನಡುಪಂಥೀಯ ರಾಜಕೀಯ ಪಕ್ಷಗಳನ್ನು ನಂಬುವುದೇ ಕಷ್ಟ. ಡಿಎಂಕೆ ತೆಲುಗುದೇಶಂ ಜನತಾದಳಗಳು, ಯಾವಾಗ ಬಿಜೆಪಿಯ ಜತೆ ಸೇರುತ್ತವೆ ಯಾವಾಗ ಹೊರಬರುತ್ತವೆ ಎಂದು ಹೇಳಲಾಗದು. ಕರ್ನಾಟಕದಲ್ಲಿ ಬಂಗಾರಪ್ಪನವರದು ಒಂದು ಉತ್ತಮ ಉದಾಹರಣೆ. ಬಿಜೆಪಿ ಕುರಿತ ಮುಸ್ಲಿಮರ ಆತಂಕದ ಪ್ರಯೋಜನ ಪಡೆಯುವ ಈ ನಡುಪಂಥೀಯ ಪಕ್ಷಗಳು ಮುಸ್ಲಿಮರನ್ನು ದೂರವಿಟ್ಟರೆ ಗೆಲ್ಲಬಹುದು ಅನಿಸಿದರೆ ಹಾಗೂ ಮಾಡುತ್ತವೆ. ಅವು ಅವರನ್ನು ಒಲಿಸಲು ಹಜ್ ಯಾತ್ರೆಗೆ ಹಣಕೊಡುತ್ತವೆ. ಮಸೀದಿ ಕಟ್ಟಿಸಿಕೊಡುತ್ತವೆ. ಅವರ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವುದಿಲ್ಲ.

ಹಾದಿ ೪ : ಎಡಪಂಥೀಯ ಚಳುವಳಿಯಲ್ಲಿ ತೊಡಗುವುದು

ಈ ಹಿಂದೆ ಹೇಳಿದಂತೆ, ಸದ್ಯದ ಪರಿಸ್ಥಿತಿಯಲ್ಲಿ ಅಮೆರಿಕ ಹಾಗೂ ಸಂಘಪರಿವಾರಗಳೆರಡಕ್ಕೂ ಸಮಾನ ಶತ್ರುಗಳು ಮುಸ್ಲಿಮರು ಹಾಗೂ ಕಮ್ಯುನಿಸ್ಟರು. ಭಾರತದಲ್ಲಿ ಮುಸ್ಲಿಮರು ಸ್ವಾತಂತ್ರ್ಯ ಚಳುವಳಿಯನ್ನೂ ಒಳಗೊಂಡಂತೆ, ದಮನಿತ ಜನರ ಬಿಡುಗಡೆ ಮಾಡಬಲ್ಲ ಎಲ್ಲ ಚಳುವಳಿಗಳಲ್ಲಿ ಪಾತ್ರವಹಿಸಿದ್ದಾರೆ. ಆದರೂ ಸಮಾನ ಶತ್ರುಗಳ ವಿರುದ್ಧ ಅಥವಾ ಸಮಾನ ಆಶಯಕ್ಕಾಗಿ

ಎರಡೂ ಸಮುದಾಯಗಳು ಬರಬೇಕಾದಷ್ಟು ಹತ್ತಿರ ಬಂದಿಲ್ಲ.

ಇಸ್ಲಾಮಿಕ್ ದೇಶಗಳಲ್ಲಿ ಕಮ್ಯುನಿಸ್ಟ್ ಚಳುವಳಿಗಳು ಕಡಿಮೆ. ಇದಕ್ಕೆ ಕಾರಣ ಎಡಪಂಥೀಯ ರಾಜಕಾರಣದಲ್ಲಿದೆಯೊ ಮುಸ್ಲಿಮರಲ್ಲಿದೆಯೊ ಗೊತ್ತಿಲ್ಲ. ಆದರೆ ಇದ್ದಕ್ಕೂ ಎಲ್ಲ ಬಗೆಯ ಕಮ್ಯುನಿಸ್ಟ್ ಪಕ್ಷಗಳು ಏಕಕಾಲದಲ್ಲಿ ಮುಸ್ಲಿಂ ಮೂಲಭೂತವಾದವನ್ನು ವಿರೋಧಿಸುತ್ತಲೇ ಸಂಘಪರಿವಾರವು ಅವರ ಮೇಲೆ ಮಾಡುವ ದ್ವೇಷದ ರಾಜಕೀಯವನ್ನು ಪ್ರತಿರೋಧಿಸುತ್ತ ಬಂದಿವೆ. ಆದರೆ ಮೂಲಭೂತವಾದದ ಹಿಡಿತದಿಂದಲೋ, ಧರ್ಮಭೀರುತನದಿಂದಲೊ, ನಾಸ್ತಿಕ ವಿಚಾರವಾದವನ್ನು ಮುಂದೊಡ್ಡುವ ಕಮ್ಯುನಿಸ್ಟರಿಂದಲೊ ಅವರಿಗೆ ಪ್ರಗತಿಪರ ಚಳುವಳಿಯಲ್ಲಿ ಹೆಚ್ಚಾಗಿ ಗುರುತಿಸಿಕೊಳ್ಳಲು ಸಾಧ್ಯವಾಗಿಲ್ಲ. ಗುರುತಿಸಿಕೊಳ್ಳುವುದಾದರೆ, ಅವರಲ್ಲಿ ಹೊಗೆಯಾಡುತ್ತಿರುವ ಸಾಮ್ರಾಜ್ಯಶಾಹಿ ವಿರೋಧಿ ಮನೋಭಾವಕ್ಕೂ ದನಿ ಸಿಕ್ಕಂತಾಗುತ್ತದೆ. ಹಿಂದುತ್ವದ ಫ್ಯಾಸಿಸ್ಟ್ ಆಕ್ರಮಣಗಳಿಂದ ರಕ್ಷಣೆಕೊಡುತ್ತದೆ. ಕಮ್ಯುನಿಸ್ಟರು ಸರಕಾರ ನಡೆಸುವಲ್ಲಿ ಅಥವಾ ಚಳವಳಿಗಳಿರುವಲ್ಲಿ ಕೋಮುವಾದದ ಉಪಟಳಗಳು ಕಡಿಮೆಯಿವೆ.

ಮುಸ್ಲಿಮರು ವರ್ಗಹೋರಾಟಗಳಲ್ಲಿ ತೊಡಗಿಕೊಂಡರೆ, ಬಡತನದ ರೇಖೆಯ ಕೆಳಗೆ ಲಂರಷ್ಟು ಜನಸಂಖ್ಯೆ ಇರುವ ಅವರಿಗೇ ಪ್ರಯೋಜನ. ಮುಸ್ಲಿಮರ ಸಮಸ್ಯೆಗಾಗಿಯೆ ಒಂದು ಚಳುವಳಿ ಇರುವುದು ಸಾಧ್ಯವಿಲ್ಲ. ಅದು ಎಲ್ಲ ದಮನಿತರ ಬಿಡುಗಡೆಯ ಭಾಗವಾಗಿರುವ ಚಳವಳಿಗಳಲ್ಲಿಯೇ ಅವರ ಬಿಡುಗಡೆಯಿದೆ. ಇದರಿಂದ ಅವರಿಗೆ ತಮ್ಮ ಸಮಸ್ಯೆಗಾಗಿ ಮಾತ್ರವಲ್ಲ ಇತರರ ನೋವನ್ನೂ ಅರಿಯುವ ವಿಶ್ಲೇಷಿಸುವ ಕೆಲಸ ಮಾಡುವ ವಿಶಾಲ ಜನಪರ ಚಳವಳಿ, ಪಕ್ಷ ಹಾಗೂ ಸಂಘಟನೆಗಳ ಭಾಗವಾಗಿ ಸೇರಿಕೊಳ್ಳಲು ಸಾಧ್ಯವಾಗುತ್ತದೆ. ಇಡೀ ದೇಶವನ್ನು ಸಮಾಜವನ್ನು ಮಾನವೀಯವಾಗಿ ಕಟ್ಟಲು ಬೇಕಾದ ಕನಸನ್ನು ಕಾಣಲು ಹಾಗೂ ಕಂಡ ಕನಸನ್ನು ನನಸಾಗಿಲು ಬೇಕಾದ ಕ್ರಿಯೆಯಲ್ಲಿ ತೊಡಗಲು ಪ್ರೇರಿಸುವುದು.

ಇದು ಅಂತರಾಷ್ಟ್ರೀಯ ರಾಜಕೀಯ ಪ್ರಜ್ಞೆಯನ್ನು ಪಡೆದುಕೊಳ್ಳುವುದಕ್ಕೆ ಕಾರಣವಾಗುವುದು. ಇದು ಅವರನ್ನು ಒಂಟಿತನ, ಹತಾಶಾ ಮನೋಭಾವಗಳಿಂದ ಹೊರತರಬಲ್ಲದು ಮುಖ್ಯವಾಗಿ ತಮ್ಮ ಧರ್ಮ ಹಾಗೂ ಸಮಾಜವನ್ನು ವಿಮರ್ಶಿಸುವ ಆಧುನಿಕ ಮನೋಧರ್ಮ ಬೆಳೆಸುವುದು. ಧಾರ್ಮಿಕ ಮೂಲಭೂತವಾದಿಗಳ ಹಿಡಿತದಿಂದ ಪಾರಾಗಲು ನೆರವಾಗಬಲ್ಲದು. ಮುಸ್ಲಿಂ ಸಮಾಜವನ್ನು ಆಧುನೀಕರಣದ ಪ್ರಕ್ರಿಯೆಗೆ ಒಡ್ಡುವುದು.

ಮುಸ್ಲಿಮರು ತಮ್ಮ ಸಮಸ್ಯೆಗಾಗಿ ತಾವೇ ಹೋರಾಡುವ ಸ್ಥಿತಿ ಭಾರತದಲ್ಲಿ ಸಾಧ್ಯವಿಲ್ಲ. ಅದು ಅವರು ಎಲ್ಲ ಸಮುದಾಯಗಳೊಂದಿಗೆ ಕೂಡಿಬದುಕುವ ವಿಶಾಲ ಸಮಾಜವಾದಿ ಸಮಾಜದ ನಿರ್ಮಾಣದಲ್ಲಿಯೇ ಅವರ ಬಿಡುಗಡೆಯಿದೆ. ಇದೊಂದೇ ಅವರನ್ನು ಈ ಹೊತ್ತಿನ ಜಾಗತಿಕ ಹಾಗೂ ಸ್ಥಳೀಯ ಚಾರಿತ್ರಿಕ ಇಕ್ಕಟ್ಟುಗಳಿಂದಲೂ ಅವರ ಸಾಮಾಜಿಕ ಆರ್ಥಿಕ ಹಿಂದುಳಿಕೆಯಿಂದಲೂ

ಮುಸ್ಲಿಮರು ವರ್ಗಹೋರಾಟಗಳಲ್ಲಿ ತೊಡಗಿಕೊಂಡರೆ, ಬಡತನದ ರೇಖೆಯ ಕೆಳಗೆ ಲಂರಷ್ಟು ಜನಸಂಖ್ಯೆ ಇರುವ ಅವರಿಗೇ ಪ್ರಯೋಜನ. ಮುಸ್ಲಿಮರ ಸಮಸ್ಯೆಗಾಗಿಯೆ ಒಂದು ಚಳುವಳಿ ಇರುವುದು ಸಾಧ್ಯವಿಲ್ಲ. ಇದರಿಂದ ಅವರಿಗೆ ತಮ್ಮ ಸಮಸ್ಯೆಗಾಗಿ ಮಾತ್ರವಲ್ಲ ಇತರರ ನೋವನ್ನೂ ಅರಿಯುವ ವಿಶ್ಲೇಷಿಸುವ ಕೆಲಸ ಮಾಡುವ ವಿಶಾಲ ಜನಪರ ಚಳವಳಿ, ಪಕ್ಷ ಹಾಗೂ ಸಂಘಟನೆಗಳ ಭಾಗವಾಗಿ ಸೇರಿಕೊಳ್ಳಲು ಸಾಧ್ಯವಾಗುತ್ತದೆ. ಇಡೀ ದೇಶವನ್ನು ಸಮಾಜವನ್ನು ಮಾನವೀಯವಾಗಿ ಕಟ್ಟಲು ಬೇಕಾದ ಕನಸನ್ನು ಕಾಣಲು ಹಾಗೂ ಕಂಡ ಕನಸನ್ನು ನನಸಾಗಿಲು ಬೇಕಾದ ಕ್ರಿಯೆಯಲ್ಲಿ ತೊಡಗಲು ಪ್ರೇರಿಸುವುದು. ಇದು ಅಂತರಾಷ್ಟ್ರೀಯ ರಾಜಕೀಯ ಪ್ರಜ್ಞೆಯನ್ನು ಪಡೆದು ಕೊಳ್ಳುವುದಕ್ಕೆ ಕಾರಣವಾಗುವುದು. ಇದು ಮುಖ್ಯವಾಗಿ ತಮ್ಮ ಧರ್ಮ ಹಾಗೂ ಸಮಾಜವನ್ನು ವಿಮರ್ಶಿಸುವ ಆಧುನಿಕ ಮನೋಧರ್ಮ ಬೆಳೆಸುವುದು. ಧಾರ್ಮಿಕ ಮೂಲಭೂತವಾದಿಗಳ ಹಿಡಿತದಿಂದ ಪಾರಾಗಲು ನೆರವಾಗಬಲ್ಲದು. ಮುಸ್ಲಿಂ ಸಮಾಜವನ್ನು ಆಧುನೀಕರಣದ ಪ್ರಕ್ರಿಯೆಗೆ ಒಡ್ಡುವುದು.



ಪಾರುಗಾಣಿಸಬಲ್ಲ ಹಾದಿ. ಆದರೆ ಈ ಹಾದಿಗಾಗಿ ಬಹಳ ನಡೆಯಬೇಕು.

ಸಂಗಾತಿಗಳ ಪಾತ್ರ

ಇಂತಹ ಚಾರಿತ್ರಿಕ ವಿಷಮ ಸನ್ನಿವೇಶದಲ್ಲಿ ಪ್ರಗತಿಪರ ಚಿಂತಕರ, ರಾಜಕೀಯ ಮುಖಂಡರ ಹಾಗೂ ಬುದ್ಧಿಜೀವಿಗಳ ಪಾತ್ರ ಮಹತ್ವದ್ದಾಗಿದೆ. ಭಾರತದಲ್ಲಿ ಬಹುತೇಕ ಮುಸ್ಲಿಂ ಬುದ್ಧಿಜೀವಿಗಳಿಗೆ ತಮ್ಮ ಸಮುದಾಯದಲ್ಲಿ ಜನಪ್ರಿಯ ನಾಯಕತ್ವವಿಲ್ಲ. ಆರಿಫ ಮೊಹಮದ ಖಾನರು ಕಾಂಗ್ರೆಸ್ಸಿನ ಓಲೈಸುವ ನೀತಿಯನ್ನು ಶಾಬಾನು ಕೇಸಿನಲ್ಲಿ ವಿರೋಧಿಸಿದರೂ, ಅವರಿಗೆ ಮುಸ್ಲಿಂ ಸಮುದಾಯದ ಜನಪ್ರಿಯ ನಾಯಕರಾಗಲು ಸಾಧ್ಯವಾಗಲಿಲ್ಲ. ಅಷ್ಟರೊಳಗೆ ಅವರನ್ನು ತನ್ನ ಮುಸ್ಲಿಂ ವಿರೋಧಿರಾಜಕಾರಣಕ್ಕೆ ಸಂಘಪರಿವಾರವು ಪಿಕ್‌ಆಪ್ ಮಾಡಿಬಿಟ್ಟಿತು. ಸಲಾನ್ ರಶ್ದಿ, ತಸ್ಲೀಮಾ ನಸ್ರೀನರನ್ನು ತನ್ನ ಇಸ್ಲಾಂ ವಿರೋಧಿ ರಾಜಕಾರಣಕ್ಕೆ ಪಶ್ಚಿಮದೇಶಗಳು ಬಳಸಿಕೊಂಡಿದ್ದು ಹೀಗೇ.

ಮುಸ್ಲಿಮ್ ಸಮಾಜವನ್ನು ವೈಚಾರಿಕವಾಗಿ ವಿಮರ್ಶಿಸದೆ ಇದ್ದರೆ ಎಲ್ಲ ಕಂದಾಚಾರಗಳನ್ನು ಸಹಿಸಿಕೊಳ್ಳುವ, ವಿಮರ್ಶಿಸಿದರೆ ಸಮುದಾಯ ಬಾಹಿರರಾಗುವ ಹಾಗೂ ಮುಸ್ಲಿಮ್ ದ್ವೇಷಿಗಳ ಕೈಗೆ ಆಯುಧವಾಗಿಬಿಡುವ ಇಕ್ಕಟ್ಟು ಇದೆ. ತಮ್ಮ ಸಮಾಜಗಳನ್ನು ವಿಮರ್ಶಿಸುವುದನ್ನು ಬಿಟ್ಟುಕೊಡದೆ ಸಮುದಾಯ ಬಾಹಿರರಾದಂತೆ ಎಚ್ಚರ ವಹಿಸಬೇಕಿದೆ. ಈ ಕೆಲಸವನ್ನು ತಮ್ಮೆಲ್ಲ ಮಿತಿಗಳಲ್ಲಿ ಮುಂಬಯಿಯ ಅಸಘರಅಲಿ ಇಂಜಿನಿಯರು ಮಾಡುತ್ತಿದ್ದಾರೆ.

ಕರ್ನಾಟಕದಲ್ಲಿ ರಂಜಾನದರ್ಗಾ, ಫಕೀರಮುಹಮದ್ ಕಟ್ಪಾಡಿ, ಬಾನುಮುಶ್ತಾಕ್, ಸಾರಾಅಬೂಬಕರ್ ಮುಂತಾದ ಲೇಖಕರು ಮಾಡುತ್ತಿದ್ದಾರೆ. ಕೋಮುಸೌಹಾರ್ದ ವೇದಿಕೆ, ಜನಮತ, ಮುಂತಾದ ಸಂಘಟನೆಗಳು ಮಾಡುತ್ತಿವೆ. ಮುಸ್ಲಿಮರನ್ನು ಸಂಘಪರಿವಾರದ ಕಣ್ಣಲ್ಲಿ ದ್ವೇಷದ ಬಲಿಪಶುವಾಗಿಸದೆ, ಸಂಗಾತಿಗಳಾಗಿ ವಿಮರ್ಶಿಸುವ ಮತ್ತು ಜತೆಯಲ್ಲಿ ಕರೆದುಕೊಂಡು ಹೋಗುವ ಹೊಣೆಗಾರಿಕೆ ಎಲ್ಲ ಪ್ರಗತಿಪರ ಚಿಂತನೆ ಹಾಗೂ ರಾಜಕಾರಣದ ಮೇಲಿದೆ. ನನ್ನ ಖಚಿತ ನಂಬಿಕೆಯಿದು.

ಭಾರತದಲ್ಲಿ ಮುಸ್ಲಿಮರು ತಮ್ಮ ಕಷ್ಟಗಳಿಗೆ ತಾವಷ್ಟೆ ಮಾಡುವ ಹೋರಾಟ ಎಂದೂ ಬಿಡುಗಡೆ ಕೊಡುವುದಿಲ್ಲ. ಇರಾಕಿನ ತೈಲದ ಪ್ರಯೋಜನ ಪಡೆಯುವ ಸಾಧ್ಯತೆಯಿದ್ದ ಲಕ್ಷಲಕ್ಷಅಮೆರಿಕನ್ನರು ಇಂಗ್ಲೆಂಡಿನ ಜನರ ತೈಲಕ್ಕಾಗಿ ರಕ್ತ ಹರಿಸಬೇಡಿ ಎಂದು ಬೀದಿಗಿಳಿದು ಘೋಷಿಸಿದ ಚಿತ್ರವು ಈ ಶತಮಾನದ ಅಪೂರ್ವ ಮಾನವೀಯ ಚಿತ್ರವಾಗಿದೆ. ❑

ಪರ್ಯಾಯ ಸಂಸ್ಕೃತಿ ಮತ್ತು ರಾಜಕೀಯದ ಅನ್ವೇಷಣೆಯ ಹಾದಿ

ಇಂದು ಮತ್ತೆ ಪರ್ಯಾಯ ಚಿಂತನೆ ಮತ್ತು ಚಳವಳಿಗಳ ಬಗ್ಗೆ ಚರ್ಚೆಯಾಗುತ್ತಿದೆ. ವಿಭಿನ್ನ ಸೈದ್ಧಾಂತಿಕ ಮತ್ತು ಅಷ್ಟೇನು ಸೈದ್ಧಾಂತಿಕವಲ್ಲದ ಕಾರಣಗಳಿಗಾಗಿ ಹರಿದು ಹಂಚಿಹೋಗಿದ್ದ ಅನೇಕ ಸಂಘಟನೆಗಳು ಮತ್ತೆ ಒಂದಾಗಿ ಪರ್ಯಾಯ ರಾಜಕೀಯವೊಂದನ್ನು ನಿರ್ಮಾಣ ಮಾಡುವತ್ತ ತಮ್ಮ ಒಲವುಗಳನ್ನು ಪ್ರಕಟಸುತ್ತಿವೆ. ಮತ್ತು ಈ ಪರ್ಯಾಯ ಕೇವಲ ರಾಜಕಾರಣಕ್ಕಾಗಿ ಮಾತ್ರವಲ್ಲದೆ ಒಂದು ಹೊಸ ಸಂಸ್ಕೃತಿ, ಚಿಂತನಾ ಕ್ರಮ, ಹಾಗೂ ಕ್ರಿಯಾಶೀಲತೆಯನ್ನು ಹುಡುಕಿಕೊಳ್ಳುವ ಪ್ರಯತ್ನವಾಗಿಯೂ ಮೂಡಿಬರುತ್ತಿದೆ.

○ ಪ್ರೊ॥ ವಿ.ಎಸ್. ಶ್ರೀಧರ

ಇದರ ಅಗತ್ಯ ಮತ್ತು ಅನಿವಾರ್ಯತೆಯ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇರಲಾರದಾದರೂ, ಈ ಪರ್ಯಾಯ ಕುರಿತ ಮುನ್ನೋಲವಿನ ರೂಪು-ರೇಷೆ, ಗುರಿ ಮತ್ತು ಸಾಧ್ಯತೆಗಳ ಬಗ್ಗೆ ಬಹುಸ್ತರದ ಆಲೋಚನೆಗಳಿರಲು ಸಾಧ್ಯವಿದೆ. ಕಳೆದ ಹಲವು ದಶಕಗಳಿಂದೀಚೆಗೆ ನಮ್ಮ ಸಮಾಜ ಕಂಡ ದಲಿತ, ಮಹಿಳಾ, ಪರಿಸರ ಹಾಗೂ ಇತರ ಅಲ್ಪಸಂಖ್ಯಾತರ ಹಕ್ಕುಗಳಿಗಾಗಿ ನಡೆದಿರುವ ಚಳವಳಿಗಳನ್ನು, ಅವುಗಳ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳನ್ನು, ಎಲ್ಲಕ್ಕಿಂತ ಮುಖ್ಯವಾಗಿ, ಈ ಚಳವಳಿಗಳು ಮತ್ತು ಪ್ರಭುತ್ವದ ನಡುವೆ ಇರುವ ಅಧಿಕಾರ ಸಂಬಂಧದ ಸ್ವರೂಪಗಳನ್ನು ಗಣನೆಗೆ ತೆಗೆದುಕೊಳ್ಳದ ಪರ್ಯಾಯ ಚಿಂತನೆ ಅಪೂರ್ಣವಾಗುತ್ತದೆ.

'ಪರ್ಯಾಯ ಚಿಂತನೆ ಮತ್ತೊಮ್ಮೆ ಚರ್ಚೆಯಾಗುತ್ತಿದೆ' ಎನ್ನುವಾಗ ಇಲ್ಲಿ ವಿಶೇಷವಾಗಿ 'ಮತ್ತೊಮ್ಮೆ' ಎನ್ನುವುದನ್ನು ಗಮನಿಸಬೇಕು. ಪರ್ಯಾಯದ ಚಿಂತನೆಗೆ ಕೂಡ ಒಂದು ಚರಿತ್ರೆ ಇದೆ. ಅದರ ಚಾರಿತ್ರಿಕ ಹಿನ್ನೆಲೆಯ ವಿಶ್ಲೇಷಣೆ ಒಂದು ವಿಶೇಷ ಅಧ್ಯಯನವನ್ನೇ ಬೇಡುವಷ್ಟು ಮುಖ್ಯವಾದದ್ದು ಕೂಡ. ಸದ್ಯದ ಮುಖ್ಯ ಪ್ರಶ್ನೆ ಎಂದರೆ, ವರ್ತಮಾನದ ಪರ್ಯಾಯ ಚಿಂತನೆ. ಹಿಂದಿನ ಪ್ರಯತ್ನಗಳ ಮುಂದುವರಿಕೆಯೇ ಅಥವಾ ಅದು ಹಾದು ಬಂದ ಹಾದಿಗಳನ್ನು ಬಿಟ್ಟು ಹೊಸ ಸಾಧ್ಯತೆಯತ್ತ ಹೆಜ್ಜೆ ಹಾಕುವ ಇಚ್ಛೆಯಿಂದ ಕೂಡಿರುವಂಥದ್ದೇ ಎನ್ನುವುದು. ಈ ಹೊಸ ಹಾದಿಯ ಅನಿವಾರ್ಯತೆಯನ್ನು ೯೦ರ ದಶಕದ ನಂತರ ಹುಟ್ಟಿಕೊಂಡಿರುವ ಹೊಸ ಸವಾಲುಗಳಾದ ಜಾಗತೀಕರಣ, ಕೋಮುವಾದ, ಈಗಿನ ಪ್ರಜಾತಾಂತ್ರಿಕ ವ್ಯವಸ್ಥೆಯ ಕುಸಿತ ಮತ್ತು ಅದರೊಳಗಡೆಯೇ ಅಂತರ್ಗತವಾಗಿರುವ ದೋಷ ಮತ್ತಿತರ ವಿದ್ಯಮಾನಗಳೇ ಒದಗಿಸಿವೆ. ಆದ್ದರಿಂದ ಈ ಸವಾಲುಗಳನ್ನು ಎದುರಿಸದ ಪರ್ಯಾಯ ಚಿಂತನೆ ಅಪೂರ್ಣ ಮಾತ್ರವಲ್ಲ, ಅಸಾಧ್ಯ ಕೂಡ ಎಂಬುದು ನನ್ನ ಗ್ರಹಿಕೆ.

ಪರ್ಯಾಯ, ಸಂಸ್ಕೃತಿ, ರಾಜಕೀಯ; ಈ ಮೂರು ವಿಷಯಗಳನ್ನು ಕುರಿತ ಚರ್ಚೆ ಪ್ರಾರಂಭಿಸುವ ಮುನ್ನ ಎರಡು ಮುಖ್ಯ ವಿಚಾರಗಳನ್ನು ಪರಿಶೀಲಿಸುವುದು ಅತ್ಯಗತ್ಯ. ಒಂದು 'ಪರ್ಯಾಯ' ಮತ್ತು 'ಸಂಸ್ಕೃತಿ' ಎಂಬ ಪದಗಳ ಹಿಂದಿನ ಪರಿಕಲ್ಪನೆಯ ಬಗ್ಗೆ ಸ್ಪಷ್ಟನೆ; ಎರಡು ಸಂಸ್ಕೃತಿಗೂ ರಾಜಕೀಯಕ್ಕೂ ಇರುವ ಸಂಬಂಧದ ವಿಶ್ಲೇಷಣೆ.

ಸಾಂಸ್ಕೃತಿಕ ಪರ್ಯಾಯ ಚಿಂತನೆಯ ಚರ್ಚೆಗೆ ಮುನ್ನ ಈ 'ಸಂಸ್ಕೃತಿ' ಎಂಬ ಪರಿಕಲ್ಪನೆ ಬಗ್ಗೆ ಕೂಡ ಸ್ಪಷ್ಟನೆ ಮುಖ್ಯ. 'ಸಂಸ್ಕೃತಿ' ಇಂಗ್ಲಿಷಿನ culture ಪದದ ಹಾಗೆ ವೈವಿಧ್ಯಮಯ. ಅರ್ಥ ವಿನ್ಯಾಸ ಹೊಂದಿರುವಂಥದು. ಸಂದರ್ಭಕ್ಕೆ ತಕ್ಕ ಹಾಗೆ ಬದಲಾವಣೆ ಹೊಂದುವ ಪರಿಕಲ್ಪನೆ ಇದು. 'ಪರ್ಯಾಯ'ದ ಪರಿಕಲ್ಪನೆಯಂತೆ ಇದು ಕೂಡ ಸಾಪೇಕ್ಷಿತವಾದದ್ದು, ಸಂಬಂಧ ಸೂಚಕವಾದದ್ದು.

'ಪರ್ಯಾಯ' ಎಂಬ ಶಬ್ದವನ್ನೇ ನೋಡೋಣ. ಅದು ಒಂದು ಪೂರ್ವ ನಿರ್ಧಾರಿತ ತತ್ವ ಅಥವಾ ಸಿದ್ಧಾಂತವಲ್ಲ. ಅದು ವರ್ತಮಾನವನ್ನು ಅರ್ಥೈಸಲು ಉಪಯೋಗಿಸಬಹುದಾದ ಒಂದು ಅಖೈರಾದ ಮಾನದಂಡವೂ ಅಲ್ಲ. ಪರ್ಯಾಯ ಎಂದ ಕೂಡಲೇ ಯಾವುದಕ್ಕೆ 'ಪರ್ಯಾಯ' ಎಂಬ ಪ್ರಶ್ನೆ ಏಳುತ್ತದೆ. ಆದ್ದರಿಂದ ಅದು ಒಂದು ಸಂಬಂಧ ಸೂಚಿತವಾದ ಪರಿಕಲ್ಪನೆ. ತನ್ನ ಸ್ವ-ನಿರ್ವಚನವನ್ನು ಅದು ತಾನು ಯಾವುದಕ್ಕೆ ಪರ್ಯಾಯ ಎನ್ನುವ ಆ ಇನ್ನೊಂದರ ಸ್ವರೂಪವನ್ನು ಅವಲಂಬಿಸಿ ಮಾಡಿಕೊಳ್ಳುತ್ತದೆ. ಅಂದರೆ ಪರ್ಯಾಯ ಚಿಂತನೆ ತಾನು ವಿರೋಧಿಸುವ ವ್ಯವಸ್ಥೆಯನ್ನು, ಆ ವ್ಯವಸ್ಥೆಯನ್ನು ಪೋಷಿಸಿಕೊಂಡು ಬಂದಿರುವ ಸಂರಚನೆಗಳನ್ನು ಹೇಗೆ ಅರ್ಥೈಸುತ್ತದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ವಿರೋಧಿ ನೆಲೆಯಿಂದ ಹೊರಡುವ ಪರ್ಯಾಯ ಚಿಂತನೆ, ತಾನು ವಿರೋಧಿಸುವ ರಚನೆಯ

ಭಾಗವೇ ಆಗಿಬಿಡುವ ವಿರೋಧಾಭಾಸ ನಮ್ಮ ಕಣ್ಮುಂದೆಯೇ ಇದೆ. ಪರ್ಯಾಯದ ಉದ್ದೇಶ ವಿಮೋಚನೆ, ಸ್ವಾತಂತ್ರ್ಯ ಮತ್ತು ಸಮಾನತೆಯ ಸ್ಥಾಪನೆ ಎನ್ನುವುದಾದರೆ, ಈ ಗುರಿಯನ್ನು ಜನರು ತಲುಪಲು ಅಡ್ಡಗಾಲಾಗಿರುವ ವ್ಯವಸ್ಥೆ, ಆ ವ್ಯವಸ್ಥೆಯನ್ನು ಎತ್ತಿ ಹಿಡಿದಿರುವ ಅಧಿಕಾರ, ರಾಜಕೀಯ ಶಕ್ತಿಗಳ ತಳಸ್ಪರ್ಶಿ ವಿಶ್ಲೇಷಣೆ ಬಹಳ ಅಗತ್ಯ.

ಅಂದರೆ ಈ ಶೋಷಿತ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳುವ ಬಗೆಯೇ ಪರ್ಯಾಯ ಚಿಂತನೆಗೆ ಬೇಕಾದ ಸೈದ್ಧಾಂತಿಕ ಚೌಕಟ್ಟುಗಳನ್ನು ನಿರ್ಮಿಸುತ್ತದೆ. ಹಿಂದೆ ನಡೆದ ಪರ್ಯಾಯ ಚಿಂತನೆಗಳು ಹಿಡಿದ ಮಾರ್ಗಗಳನ್ನು ವಿಶ್ಲೇಷಿಸುವುದೆಂದರೆ, ಆಯಾ ಕಾಲಘಟ್ಟದ ವ್ಯವಸ್ಥೆಯ ಸ್ವರೂಪಗಳ ವ್ಯಾಖ್ಯಾನವೇ. ಸಾಂಸ್ಕೃತಿಕ ವಲಯದಲ್ಲಿ ಇಲ್ಲಿಯವರೆಗೆ ನಡೆದಿರುವ ವಿಪುಲವಾದ ಪರ್ಯಾಯ ಚಿಂತನೆಗಳು, ಈ ಅನುಸಂಧಾನವನ್ನು ಅರ್ಥಮಾಡಿಕೊಳ್ಳಲು ಬೇಕಾದ ಒಳನೋಟಗಳನ್ನು ನೀಡುತ್ತವೆ. ಆದ್ದರಿಂದ ಪರ್ಯಾಯ ರಾಜಕೀಯ ಪ್ರಸ್ಥಾನಕ್ಕೆ ಪರ್ಯಾಯ ಸಾಂಸ್ಕೃತಿಕ ಚಿಂತನೆ ಹಾದು ಬಂದ ನೆಲೆಗಳು ಮುನ್ನುಡಿಯಿದ್ದಂತೆ.

ಸಾಂಸ್ಕೃತಿಕ ಪರ್ಯಾಯ ಚಿಂತನೆಯ ಚರ್ಚೆಗೆ ಮುನ್ನ ಈ 'ಸಂಸ್ಕೃತಿ' ಎಂಬ ಪರಿಕಲ್ಪನೆ ಬಗ್ಗೆ ಕೂಡ ಸ್ಪಷ್ಟನೆ ಮುಖ್ಯ. 'ಸಂಸ್ಕೃತಿ' ಇಂಗ್ಲಿಷಿನ culture ಪದದ ಹಾಗೆ ವೈವಿಧ್ಯಮಯ. ಅರ್ಥ ವಿನ್ಯಾಸ ಹೊಂದಿರುವಂಥದು. ಸಂದರ್ಭಕ್ಕೆ ತಕ್ಕ ಹಾಗೆ ಬದಲಾವಣೆ ಹೊಂದುವ ಪರಿಕಲ್ಪನೆ ಇದು. 'ಪರ್ಯಾಯ'ದ ಪರಿಕಲ್ಪನೆಯಂತೆ ಇದು ಕೂಡ ಸಾಪೇಕ್ಷಿತವಾದದ್ದು, ಸಂಬಂಧ ಸೂಚಕವಾದದ್ದು.

-೨-

ತೀರಾ ಸಾಮಾನ್ಯ ಅರ್ಥದಲ್ಲಿ ಸಂಸ್ಕೃತಿ ಎನ್ನುವುದು ಸಾಹಿತ್ಯ, ಸಂಗೀತ, ಚಿತ್ರಕಲೆ, ನೃತ್ಯ ಇತ್ಯಾದಿ ಲಲಿತ ಕಲೆಗಳಿಗೆ ಸಂಬಂಧ ಪಟ್ಟದ್ದು ಎಂದೇ ಬಳಕೆಯಾಗುತ್ತದೆ. 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ' ಅಥವಾ 'ಸಾಂಸ್ಕೃತಿಕ' ಕಾರ್ಯಕ್ರಮ ಎನ್ನುವಾಗ ಧ್ವನಿತವಾಗುವ ಅರ್ಥ ಇದೇ. ಸ್ವಲ್ಪ ವಿಶಾಲಾರ್ಥದಲ್ಲಿ ಇದನ್ನು 'ಜೀವನ ಶೈಲಿ' ಎಂದೂ, ವಿಶೇಷವಾಗಿ 'ಶ್ರೇಷ್ಠ ಜೀವನಾದರ್ಶ, ಚಿಂತನೆ, ಮೌಲ್ಯ' ಎಂದೂ ಅರ್ಥೈಸಲಾಗುತ್ತದೆ. ತೊಡಕು ಪ್ರಾರಂಭವಾಗುವುದೇ ಇಲ್ಲಿಂದ. ನಮ್ಮ ನವೋದಯ ರಮ್ಯಕಾಲದ ಅನೇಕ ಸಾಹಿತಿ-ಚಿಂತಕರು ಸಂಸ್ಕೃತಿಯನ್ನು ಈ ಅರ್ಥದಲ್ಲೇ ಬಳಸಿದರು. ಅದನ್ನು ಮನುಷ್ಯನ ವ್ಯಕ್ತಿತ್ವ ಹಾಗೂ ವಿಕಾಸಕ್ಕೆ ಸಂಬಂಧಿಸಿದ (ಅಂದರೆ 'ಸಂಸ್ಕರಿಸಲಾದ' ಎಂಬಂತೆ) ಚಟುವಟಿಕೆ, ಸ್ಥಿತಿ ಎಂದು ಕರೆದರು. ಡಿ.ವಿ.ಜಿ ಇದನ್ನು 'ಅಂತರಂಗದ ವ್ಯವಸಾಯದ ಫಲ' ಎಂದರೆ, ಕುವೆಂಪು ಅದನ್ನು ಅಲ್ಪಮಾನವತ್ವದಿಂದ, ವಿಶ್ವಮಾನವತ್ವದತ್ತ ಕೊಂಡೊಯ್ಯಬಲ್ಲ ಸಾಧನ ಎನ್ನುವ ಹಾಗೆ ಬಳಸಿದರು. ಇವರಿಬ್ಬರ ಸಮಗ್ರ ಚಿಂತನಾ ವಿಧಾನದಲ್ಲಿ ಅಜಗಜಾಂತರ ವ್ಯತ್ಯಾಸವಿದೆ ನಿಜ. ಆದರೂ ಇಲ್ಲಿ ಸಂಸ್ಕೃತಿ ಎನ್ನುವುದನ್ನು 'ವಿಕಾಸ' ಮತ್ತು 'ಕೃಷಿ' ಎಂಬ ರೂಪಕಗಳ ಮೂಲಕ ಅರ್ಥೈಸಿರುವುದು ಗಮನಾರ್ಹ. (ಇಂಗ್ಲಿಷಿನ ಕಲ್ಚರ್ ಎನ್ನುವ ಪದ 'ಕೃಷಿ' ಎನ್ನುವ ಪ್ರಧಾನ ಅರ್ಥದಲ್ಲಿ ಇಂದಿಗೂ ಬಳಕೆಯಲ್ಲಿದೆ. ಉದಾ : ಅಗ್ರಿಕಲ್ಚರ್)

ಅಂದರೆ ಮನುಷ್ಯ ಮತ್ತು ಸಮುದಾಯ ವಿಕಾಸಗೊಳ್ಳುವ ಮತ್ತು ಹಾಗೆ ಬೆಳೆಯುವುದರ ಮೂಲಕ ಸುಸಂಸ್ಕೃತವಾಗುವ ಪ್ರಕ್ರಿಯೆಯನ್ನು ಈ ಅರ್ಥ ಸೂಚಿಸುತ್ತದೆ. ಆದರೆ ಈ ವಿಕಾಸ ಮತ್ತು ಬೆಳವಣಿಗೆ ಎಂಬ ಪರಿಭಾಷೆಯ ಹಿಂದೆ ಕೆಲಸ ಮಾಡುವ ಮಾನದಂಡ ಯಾವುದು ಎಂಬುದನ್ನು ಪರೀಕ್ಷಿಸಿದರೆ, ಅದು ಮೇಲ್ಜಾತಿ, ಮಧ್ಯಮ ವರ್ಗದ ಪ್ರಜ್ಞೆಯಿಂದ ಲೇಪಿತವಾದದ್ದು ಎಂಬುದು ವೇದ್ಯವಾಗುತ್ತದೆ. ಇದು ೧೯ನೇ ಶತಮಾನದ ಇಂಗ್ಲಿಷ್ ಲೇಖಕ ಮಾಥ್ಯೂ ಆರ್ನಾಲ್ಡ್‌ನ 'ಸಂಸ್ಕೃತಿಯ' ಕಲ್ಪನೆಯ ಹಾಗೆ : The best that is known and thought in the world. ಇಲ್ಲಿ ಬೆಸ್ಟ್ ಎನ್ನುವುದು ಸಭ್ಯತೆ ಅಥವಾ ಶ್ರೇಷ್ಠತೆಯ ವ್ಯಸನದಿಂದ ಹುಟ್ಟಿದ ಪರಿಕಲ್ಪನೆ.

ಈ ಭವ್ಯತೆ, ಪಕ್ವತೆ ಮತ್ತು ಶ್ರೇಷ್ಠತೆ ಎಂಬ ಪರಿಕಲ್ಪನೆಗಳು ರಾಷ್ಟ್ರೀಯವಾದದ ಹಿನ್ನೆಲೆಯಲ್ಲಿ ಇನ್ನಷ್ಟು ಸಮರ್ಥನೆಯನ್ನು ಪಡೆದುಕೊಂಡುಬಿಟ್ಟವು. ವಸಾಹತು ದಾಳಿಯಿಂದ ಬಿಡಿಸಿಕೊಳ್ಳುವ, ಪಾಶ್ಚಿಮಾತ್ಯ ಸಂಸ್ಕೃತಿಯ ಅಧಿಪತ್ಯಕ್ಕೆ ಪರ್ಯಾಯವೊಂದನ್ನು ಹುಡುಕಿಕೊಳ್ಳುವ ಅನಿವಾರ್ಯತೆಯ ಭಾಗವಾಗಿಯೇ ಈ ರಾಷ್ಟ್ರೀಯ ಸಂಸ್ಕೃತಿ ಎಂಬ ಪರಿಭಾಷೆ ಮೂಡಿಬಂತು. ರಾಷ್ಟ್ರೀಯ ಸಾಂಸ್ಕೃತಿಕ ಅನನ್ಯತೆಯ ಹುಡುಕಾಟ ನಮ್ಮ ಸಾಂಸ್ಕೃತಿಕ ಚಿಂತಕರನ್ನು ಈ ದೇಶದ ಸನಾತನ 'ಭವ್ಯ' ಪರಂಪರೆಯತ್ತಲೇ ಕರೆದೊಯ್ದಿತು.



ಹಾಗೆಯೇ ಆರ್ನಾಲ್ಡ್ ಇಡೀ ಪ್ರಪಂಚದ ಬಗ್ಗೆ ಮಾತಾಡುತ್ತಿದ್ದರೂ, ಆ ಪ್ರಪಂಚದಲ್ಲಿ ಆಫ್ರಿಕಾ, ಭಾರತದಂಥ ರಾಷ್ಟ್ರಗಳಿಗೆ ಜಾಗವೇ ಇರಲಿಲ್ಲ ಎಂಬುದೂ ಅಷ್ಟೇ ಸತ್ಯ. ಮೇಲುನೋಟಕ್ಕೆ ಸೊಗಸಾಗಿ ಕಾಣುವ ಈ ವ್ಯಾಖ್ಯಾನದ ಹಿಂದೆ ಕೆಲಸ ಮಾಡುವ ತಾರತಮ್ಯತೆಯನ್ನು ಇಪ್ಪತ್ತನೆ ಶತಮಾನದ ಮಧ್ಯಭಾಗದವರೆಗೂ ಇಂಗ್ಲಿಷ್ ಸಾಂಸ್ಕೃತಿಕ ಚಿಂತನೆ ಗುರುತಿಸಿರಲಿಲ್ಲ. ದುಡಿಯುವ ವರ್ಗ, ಜಾನಪದ ಅಥವಾ ಜನಪ್ರಿಯವಾದ ಸಂಸ್ಕೃತಿ ಮತ್ತು ಜೀವನ ಕ್ರಮ ಈ ವ್ಯಾಖ್ಯಾನಕ್ಕೆ ಹೊರತಾದದ್ದು. ವಿಮರ್ಶಕ ರಹಮತ್ ತರೀಕೆರೆ ಹೇಳುವಂತೆ ಈ ವ್ಯಾಖ್ಯಾನದ ಪ್ರಕಾರ ಸಂಸ್ಕೃತಿ ಎಂದರೆ ಭೌತ ಸಂಪತ್ತಿನ, ವ್ಯಾವಹಾರಿಕವಾದ ನಾಗರಿಕತೆಯ ಬೆಳವಣಿಗೆಯಲ್ಲ; ಆತ್ಮ ಸಂಪತ್ತಿನ ಒಳಗಿನ ಮಾಗುವಿಕೆ. ಇದು ನವ್ಯದ ಕಾಲದಲ್ಲೂ ಸ್ವಲ್ಪ ಬದಲಾವಣೆಯೊಂದಿಗೆ ಮುಂದುವರೆಯಿತು. ಕುವೆಂಪು ಅವರ ಹೂವಯ್ಯನಿಗೆ ಅನುಭೂತಿ ಎನ್ನುವುದು ಈ ಮಾಗುವಿಕೆಯ ಲಕ್ಷಣವಾದರೆ, ಅನಂತಮೂರ್ತಿಯವರ ನಾಯಕರಿಗೆ (ನಾಯಿಕೆಯರ 'ಮಾಗುವಿಕೆ' ನವ್ಯದವರ ಕಾಳಜಿಯೇ ಆಗಿರಲಿಲ್ಲ!) ಅನುಭವದಿಂದ ಮಾಗುವುದು, ಕ್ಷುದ್ರ ದೈವಿಕದಿಂದ ಪಾರಾಗಿ ದಿವ್ಯದತ್ತ ಕೈ ಚಾಚಿ ಆತ್ಮಾ ರಾಮನಾಗುವುದು ಸಂಸ್ಕೃತಿಯ ಸೂಚಕವಾಗುತ್ತದೆ. ಹೀಗಾಗಿ ಸಮುದಾಯಕ್ಕಿಂತ ವ್ಯಕ್ತಿ ಪ್ರಧಾನವಾಗುವ, 'ಹೀನತೆ'ಯಿಂದ 'ಭವ್ಯತೆಗೆ' ತುಡಿಯುವ ಆದರ್ಶದ ತಡಕಾಟ ಸಂಸ್ಕೃತಿ ಎಂಬ ಪರಿಕಲ್ಪನೆಯೊಂದಿಗೇ ಸೇರಿಕೊಂಡು ಬಂದಿದೆ.

ಈ ಭವ್ಯತೆ, ಪಕ್ವತೆ ಮತ್ತು ಶ್ರೇಷ್ಠತೆ ಎಂಬ ಪರಿಕಲ್ಪನೆಗಳು ರಾಷ್ಟ್ರೀಯವಾದದ ಹಿನ್ನೆಲೆಯಲ್ಲಿ ಇನ್ನಷ್ಟು ಸಮರ್ಥನೆಯನ್ನು ಪಡೆದುಕೊಂಡುಬಿಟ್ಟವು. ವಸಾಹತು ದಾಳಿಯಿಂದ ಬಿಡಿಸಿಕೊಳ್ಳುವ, ಪಾಶ್ಚಿಮಾತ್ಯ ಸಂಸ್ಕೃತಿಯ ಅಧಿಪತ್ಯಕ್ಕೆ ಪರ್ಯಾಯವೊಂದನ್ನು ಹುಡುಕಿಕೊಳ್ಳುವ ಅನಿವಾರ್ಯತೆಯ ಭಾಗವಾಗಿಯೇ ಈ ರಾಷ್ಟ್ರೀಯ ಸಂಸ್ಕೃತಿ ಎಂಬ ಪರಿಭಾಷೆ ಮೂಡಿಬಂತು. ರಾಷ್ಟ್ರೀಯ ಸಾಂಸ್ಕೃತಿಕ ಅನನ್ಯತೆಯ ಹುಡುಕಾಟ ನಮ್ಮ ಸಾಂಸ್ಕೃತಿಕ ಚಿಂತಕರನ್ನು ಈ ದೇಶದ ಸನಾತನ 'ಭವ್ಯ' ಪರಂಪರೆಯತ್ತಲೇ ಕರೆದೊಯ್ದಿತು.

ಈ ನಾಡಿನಲ್ಲಿ ಈ ಸನಾತನ ಪರಂಪರೆಯ ಯಾಜಮಾನ್ಯತೆಯನ್ನು ವಿರೋಧಿಸುವ ಅನೇಕ ಚಳವಳಿಗಳು ಮೂಡಿಬಂದಿದ್ದರೂ ರಾಷ್ಟ್ರೀಯ ಸಂಸ್ಕೃತಿಯ ಅನ್ವೇಷಕರಿಗೆ ಅದು ಪರ್ಯಾಯ ಸಂಸ್ಕೃತಿ ಎಂದು ಅನಿಸಲಿಲ್ಲ. ಬದಲಿಗೆ ಬುದ್ಧ-ಬಸವರಂಥ ಕ್ರಾಂತಿಕಾರಿಗಳು ಕೂಡ, ಈ ಸನಾತನ ಪರಂಪರೆಯ ಭಾಗವಾಗಿಯೇ ಅವರಿಗೆ ಕಂಡರು. ಪರ್ಯಾಯ ಚಿಂತನೆಯೊಂದು ರಾಷ್ಟ್ರೀಯವಾದವೆಂಬ ವಿರಾಟ್ ಕಥನದ ಅಡಿಟಿಪ್ಪಣಿಯಾಗಿದ್ದು ಹೀಗೆ. ಬಂಡಾಯ



ವನ್ನು ಸ್ವಾಧೀನಗೊಳಿಸಿ, ಪಳಗಿಸುವ ಯಾಜಮಾನ್ಯ ಸಂಸ್ಕೃತಿಯ ಚರಿತ್ರೆಯಲ್ಲಿ, ರಾಷ್ಟ್ರೀಯವಾದ ಬಹುಮುಖ್ಯ ಘಟ್ಟ. ಇದಕ್ಕೆ ವಿವೇಕಾನಂದ, ರಾಜಾರಾಮ್ ಮೋಹನ್ ರಾಯ್ ಅಂಥ ಸುಧಾರಕರಿಂದ ಹಿಡಿದು, ತೀರಾ ಸಂಕುಚಿತ, ಫ್ಯಾಸಿಸ್ಟ್ ಧೋರಣೆಯ ಸಾವರ್‌ಕರ್ - ಗೋಳ್ವಾಲ್‌ಕರ್ ಅಂಥವರೂ ಹೊರತಾಗಿರಲಿಲ್ಲವೆಂದರೆ ಈ ರಾಷ್ಟ್ರೀಯ ಸಂಸ್ಕೃತಿಯ ಹೆಸರಿನಲ್ಲಿ ವೇದೋಪನಿಷತ್ತುಗಳ ಸನಾತನ ಪರಂಪರೆಯ ಪುನರುತ್ಥಾನದ ಶಕ್ತಿ ಎಷ್ಟು ಎನ್ನುವುದು ಅರಿವಾಗುತ್ತದೆ.

ಈ ಉಪಖಂಡದ ಬಹುಮುಖೀ ಸಾಂಸ್ಕೃತಿಕ ಪರಂಪರೆಯನ್ನು ಮಾನ್ಯ ಮಾಡುವ ಲಿಬರಲ್ ಧೋರಣೆಗಳೂ ಸಹ, ನೆಹರೂರವರ 'ವಿಭಿನ್ನತೆಯಲ್ಲಿ ಏಕತೆ' ಸೂತ್ರದಡಿ, ಅನೇಕವನ್ನು ಗುರುತಿಸಿದರೂ, ಈ ವೈವಿಧ್ಯತೆಯಲ್ಲಿ ಅಂತರ್ಧಾನವಾಗಿರುವ ಮೂಲಧಾತುವನ್ನು ಎತ್ತಿ ಹಿಡಿಯುವ ಕಾಯಕವನ್ನೇ ಮುಂದುವರೆಸಿದರು. ಆದರೆ ಬಹುಮುಖೀ ಸಂಸ್ಕೃತಿಯೊಳಗಡೆಯೇ ಇರುವ ಸಂಘರ್ಷ, ವಿರೋಧಗಳನ್ನು ಪ್ರತಿಭಟನೆಯ ಧ್ವನಿಗಳನ್ನು ಅವುಗಳಿಗಿದ್ದ ತಾತ್ವಿಕ ಹಿನ್ನೆಲೆಯಲ್ಲಿ ಗ್ರಹಿಸುವ ಒಳನೋಟಗಳನ್ನು ಕಾಣದೆ ಹೋದರು.

ಹೀಗೆ ನಮ್ಮ ಪರಂಪರೆಯಲ್ಲೇ ಇದ್ದ ಪ್ರತಿ ಸಂಸ್ಕೃತಿಯ ಪರ್ಯಾಯದ ನೆಲೆಗಳು ಅಮಾನ್ಯಗೊಂಡಿದ್ದಕ್ಕೆ ವಸಾಹತು ಶಾಹಿಯೊಂದೇ ಕಾರಣವಲ್ಲ. ವಸಾಹತುಶಾಹಿ ಒದಗಿಸಿದ ಪೂರ್ವ-ಪಶ್ಚಿಮವೆಂಬ ಸಾಂಸ್ಕೃತಿಕ ಮುಖಾಮುಖಿಯ ಸವಾಲನ್ನು ನಮ್ಮ ರಾಷ್ಟ್ರೀಯತೆ ಎದುರಿಸಬೇಕಾಗಿತ್ತು ನಿಜ. ಪಾಶ್ಚಿಮಾತ್ಯ ಸಂಸ್ಕೃತಿಯ ವೈಚಾರಿಕತೆ, ವೈಜ್ಞಾನಿಕ ಜ್ಞಾನ, ತಾಂತ್ರಿಕ ಕೌಶಲ್ಯಗಳ ಎದುರು ನಮ್ಮ ಹಿರಿಮೆಯನ್ನು ತೋರಲು, ರಾಷ್ಟ್ರೀಯ ಸಂಸ್ಕೃತಿಯ ಉನ್ನತಿ, ಶ್ರೇಷ್ಠತೆಯನ್ನು ಪ್ರತಿಪಾದಿಸುವ ಅನಿವಾರ್ಯತೆ ಕೂಡ ಆಗ ಇತ್ತು. ಆದರೆ ಹೀಗೆ ರಾಷ್ಟ್ರೀಯ ಸಂಸ್ಕೃತಿಯ ಹಿರಿಮೆಯನ್ನು ಕಂಡುಕೊಳ್ಳುವ ಪ್ರಕ್ರಿಯೆ, ಪರಕೀಯ ವಸಾಹತು ದಬ್ಬಾಳಿಕೆಯನ್ನು ಎದುರಿಸುವುದರ ಜತೆ ಜತೆಯಲ್ಲೇ, ಈ ದೇಶದ ಒಳಗಡೆಯೇ ಅಂತರ್ಗತವಾಗಿದ್ದ ಒಳ ವಸಾಹತುಶಾಹಿ ಶಕ್ತಿಯನ್ನು ಮುಂದುವರೆಸಿತು. ಆದ್ದರಿಂದಲೇ ಈಗಲೂ ಅನೇಕ ದೇಶೀ ಸಾಂಸ್ಕೃತಿಕ ರಚನೆಗಳು, ಚಿಂತನಾ ಕ್ರಮಗಳು 'ರಾಷ್ಟ್ರೀಯ ಸಂಸ್ಕೃತಿ'ಯ ಭಾಗವೆಂದು ಪರಿಗಣಿಸಲ್ಪಡುವುದಿಲ್ಲ. ಹಿಂದುತ್ವ ಮಾದರಿಯ ರಾಷ್ಟ್ರೀಯ ಸಂಸ್ಕೃತಿಯಂತೂ ಇದೇ ಬ್ರಾಹ್ಮಣ್ಯದ, ವೈದಿಕ ಸಂಸ್ಕೃತಿಯನ್ನೇ ಈಗಲೂ ಎತ್ತಿ ಹಿಡಿಯುತ್ತಿರುವುದು, ಅದೇ ವಸಾಹತು ಶಾಹಿಯ ಮುಂದುವರಿಕೆಯೇ. ಬಾಬಾಬುಡನ್ ಗಿರಿಯ ದರ್ಗಾದಲ್ಲಿ ದತ್ತ ಜಯಂತಿಯನ್ನು ಆಚರಿಸಲು ಹೊರಟಿರುವ ಪ್ರಯತ್ನ ಇದಕ್ಕೆ ಸ್ಪಷ್ಟ ಉದಾಹರಣೆ.

ರಾಷ್ಟ್ರೀಯ ಸಂಸ್ಕೃತಿ ಎಂದರೆ ಏನು, ಅದು ಹೇಗೆ ತನ್ನ ಮಾನ್ಯತೆಯನ್ನು ಪಡೆದುಕೊಳ್ಳುತ್ತದೆ ಎನ್ನುವುದು ರಾಷ್ಟ್ರವೆಂಬ ಪರಿಕಲ್ಪನೆಯೊಂದಿಗೇ ತಳುಕು ಹಾಕಿಕೊಂಡಿದೆ.

ರಾಷ್ಟ್ರೀಯತೆಯ ನೆಲೆಯನ್ನು ಪ್ರಶ್ನಿಸುವ ಪ್ರಕ್ರಿಯೆಯಲ್ಲಿ ರಾಷ್ಟ್ರೀಯ ಸಂಸ್ಕೃತಿ ಎಂಬ ಪರಿಕಲ್ಪನೆಯೂ ಪ್ರಶ್ನೆಗೆ ಈಡಾಯಿತು. ೮೦-೯೦ರ ದಶಕದಲ್ಲಿ ಬಂದ ಹೊಸ ವಿಮರ್ಶಾವಿಧಾನ, ಭಾಷೆಯ ಸ್ವರೂಪದ ಬಗ್ಗೆ ನಡೆದ ಸೈದ್ಧಾಂತಿಕ ಚರ್ಚೆ, ಅದು ಹುಟ್ಟು ಹಾಕಿದ ಆಧುನಿಕ ಥಿಯರಿಗಳು ಈ ಸಂಸ್ಕೃತಿ ಎಂಬ ಶಬ್ದಕ್ಕೆ ಹೊಸ ನಿರ್ವಚನೆಯನ್ನೇ ನೀಡಿದವು.

ಇದರಲ್ಲಿ ಮುಖ್ಯವಾಗಿ ಹೊರಬಂದ ವಿಚಾರಗಳು ಎರಡು. ಒಂದು 'ಸಂಸ್ಕೃತಿ' ಎಂಬ ಪರಿಕಲ್ಪನೆಯ ನವ ವ್ಯಾಖ್ಯಾನ. ಇನ್ನೊಂದು ಸಂಸ್ಕೃತಿಗೂ, ರಾಜಕೀಯಕ್ಕೂ ಇರುವ ಸಂಬಂಧವನ್ನು ಕುರಿತದ್ದು. ಎರಡನೆಯ ವಿಚಾರ ತುಂಬ ಜಟಿಲವಾದುದು. ಇದನ್ನು ನಂತರ ಪರಿಶೀಲಿಸೋಣ.

> **ಹಿಂದುತ್ವ ಕೋಮುವಾದಿ ಚಿಂತನೆ ಬಹುತೇಕ ಹಿಂದೂಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿರುವುದು, ಜಾಗತೀಕರಣದ ಶಕ್ತಿಗಳು ಕೆಂಟಕಿ ಚಿಕನ್, ಮ್ಯಾಕ್‌ಡೊನಾಲ್ಡ್, ಪೆಪ್ಸಿ ಮುಂತಾದ ಸಾಂಸ್ಕೃತಿಕ ಬಂಡವಾಳ ಚಿನ್ಹೆಗಳ ಮೂಲಕ ನಮ್ಮ ಬದುಕಲ್ಲಿ ಪ್ರವೇಶ ಪಡೆದಿರುವುದು ಸಂಸ್ಕೃತಿಯ ಈ ಅಸಮಾನ್ಯ ಶಕ್ತಿಗೆ ಉದಾಹರಣೆಗಳು.**

ಮೊದಲಿಗೆ 'ಸಂಸ್ಕೃತಿ' ಎನ್ನುವುದು ಕಲೆ, ವ್ಯವಸಾಯ, ಹಿರಿಮೆ ಅಥವಾ ವಿಕಾಸ ಎಂಬ, ಮೇಲೆ ಚರ್ಚಿಸಿರುವ ಅರ್ಥಗಳಿಗಿಂತ ಭಿನ್ನವಾದ, ಹೊಸ ವ್ಯಾಖ್ಯಾನವನ್ನು ಪಡೆದುಕೊಂಡಿತು ಎಂಬುದನ್ನು ನೋಡೋಣ.

ಇದರ ಪ್ರಕಾರ, ಸಂಸ್ಕೃತಿ ಎನ್ನುವುದು ಸಿದ್ಧವಾದ ಮೌಲ್ಯವನ್ನಾಗಲೀ ವಿಕಸನ ಹೊಂದಿದ ಆತ್ಮೋನ್ನತಿಯನ್ನಾಗಲೀ ಸೂಚಿಸುವಂಥದಲ್ಲ; ಬದಲಿಗೆ ಮೌಲ್ಯವೊಂದರ ಪ್ರತಿಷ್ಠಾಪನೆಗಾಗಿ ರಚಿತವಾದಂಥದು. ಈ ಅರ್ಥದಲ್ಲಿ ಸಂಸ್ಕೃತಿ ಮೌಲ್ಯದ ಪ್ರತೀಕವಲ್ಲ; ಪ್ರತಿಪಾದಕ. ಅಂದರೆ ಸಂಸ್ಕೃತಿ ಮೌಲ್ಯಗಳನ್ನು ಎತ್ತಿ ಹಿಡಿಯುವುದಿಲ್ಲ, ಮೌಲ್ಯಗಳೇ ಸಂಸ್ಕೃತಿಯ ಹೆಸರಿನಲ್ಲಿ ತಮ್ಮ ಶ್ರೇಷ್ಠತೆಯನ್ನು ಪ್ರತಿಪಾದಿಸುತ್ತಿರುತ್ತದೆ. ಸಂಸ್ಕೃತಿ ಎನ್ನುವುದು ಕೆಲವು ಮೌಲ್ಯಗಳನ್ನು ಮಾನ್ಯ ಮಾಡಿ ಇನ್ನು ಕೆಲವನ್ನು ನಗಣ್ಯಗೊಳಿಸಲು ಪ್ರಭುತ್ವ ಅಥವಾ ಆಳುವ ವರ್ಗಗಳು ಹುಟ್ಟಿಹಾಕುವ ಒಂದು ಸಂರಚನೆ (construction).

ಆದರೆ ಈ ರಚನೆಯನ್ನು ವ್ಯವಸ್ಥೆ ಎಷ್ಟು ಸೂಕ್ಷ್ಮವಾಗಿ ನಿಶಬ್ಧವಾಗಿ, ಸುಸೂತ್ರವಾಗಿ ಮಾಡುತ್ತದೆ ಎಂದರೆ, ಶ್ರೇಷ್ಠ ಸಂಸ್ಕೃತಿ ಎಂದು ಪ್ರತಿಬಿಂಬಿತವಾಗುವ ಮೌಲ್ಯಗಳು ಪ್ರಕೃತಿಯಂತೆ ಸಹಜವೂ, ನಿತ್ಯನೂತನವೂ, ಶಾಶ್ವತವಾದ ಸತ್ಯಗಳಾಗಿಯೂ ತೋರುತ್ತವೆ. ಮೇಲ್ಜಾತಿ, ಮೇಲ್ವರ್ಗದ ಮೌಲ್ಯಗಳು ಸಮಾಜದ ಇತರ ಹಿಂದುಳಿದ ಸಮುದಾಯಕ್ಕೂ ಆದರ್ಶವಾಗುವುದು, ಅನುಕರಣೀಯವಾಗುವುದು ಹೀಗೆ. ಸಂಸ್ಕೃತಿಯ ಹೆಸರಿನಲ್ಲಿ ರಾಜಕೀಯ ಅಧಿಕಾರಬಲವುಳ್ಳ ಪರಂಪರಾನುಗತ ಯಾಜಮಾನ್ಯತೆ ಸದ್ದಿಲ್ಲದೆ ನಮ್ಮ ಮೈ-ಮನಸ್ಸುಗಳನ್ನು ಆಕ್ರಮಿಸಿ, ಅದನ್ನು ಸಾಮಾನ್ಯ ಜ್ಞಾನವೇನೋ ಎಂಬಂತೆ ಭಾವಿಸುವ ಹಾಗೆ ಮಾಡುವ ಪರಿಯೂ ಇದೇ.

ಸಂಸ್ಕೃತಿ ಒಂದು 'ವ್ಯವಸಾಯ'ವಾದ್ದರಿಂದ ಅದರ ಹಿಂದೆ ಬೆಳೆಸುವ, ಪೋಷಿಸುವ, ಸಂರಕ್ಷಿಸುವ ಕ್ರಿಯೆಯೊಂದು ಇದ್ದೇ ಇರುತ್ತದೆ. ಈ ಅರ್ಥದಲ್ಲಿ ಸಂಸ್ಕೃತಿ ಕೇವಲ ಸಮಾಜದ ಮೇಲ್ಪದರದಲ್ಲಿ ಕಾಣುವ ಕ್ರಿಯೆಯಲ್ಲ, ನಮ್ಮ ಕ್ರಿಯೆ, ಚಿಂತನೆ, ಉತ್ಪಾದನೆ - ಉಪಭೋಗ ಇತ್ಯಾದಿಗಳನ್ನು ನಿಯಂತ್ರಿಸುವ ಶಕ್ತಿ. ಹಿಂದುತ್ವ ಕೋಮುವಾದಿ ಚಿಂತನೆ ಬಹುತೇಕ ಹಿಂದೂಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿರುವುದು, ಜಾಗತೀಕರಣದ ಶಕ್ತಿಗಳು ಕೆಂಟಕಿ ಚಿಕನ್, ಮ್ಯಾಕ್‌ಡೊನಾಲ್ಡ್, ಪೆಪ್ಸಿ ಮುಂತಾದ ಸಾಂಸ್ಕೃತಿಕ ಬಂಡವಾಳ ಚಿನ್ಹೆಗಳ ಮೂಲಕ ನಮ್ಮ ಬದುಕಲ್ಲಿ ಪ್ರವೇಶ ಪಡೆದಿರುವುದು ಸಂಸ್ಕೃತಿಯ ಈ ಅಸಮಾನ್ಯ ಶಕ್ತಿಗೆ ಉದಾಹರಣೆಗಳು.

-೩-

ಸಂಸ್ಕೃತಿ ಮತ್ತು ರಾಜಕೀಯಗಳ ನಡುವೆ ಇರುವ ಸಂಕೀರ್ಣ ಸಂಬಂಧವನ್ನು ಈ ಹಿನ್ನೆಲೆಯಲ್ಲೇ ನಾವು ಗುರುತಿಸಬೇಕಾಗುತ್ತದೆ. ಕ್ಲಾಸಿಕಲ್ ಮಾರ್ಕ್ಸ್‌ವಾದ ಈ ಸಂಬಂಧವನ್ನು ಸರಳಗೊಳಿಸಿ, ಸಾಂಸ್ಕೃತಿಕ ಬದಲಾವಣೆಗಳನ್ನು ಸಮಾಜದ ಆರ್ಥಿಕ ರಚನೆಯೇ ನಿರ್ಧರಿಸುತ್ತಿರುತ್ತದೆ ಎಂದು ವ್ಯಾಖ್ಯಾನಿಸುತ್ತದೆ. ಈ ವಾದದ ಪ್ರಕಾರ ಸಾಂಸ್ಕೃತಿಕ ಪರ್ಯಾಯಗಳನ್ನು ಆರ್ಥಿಕ ಬದಲಾವಣೆಗಳ - ಉದಾಹರಣೆಗೆ ಆಸ್ತಿ - ಉತ್ಪಾದನೆ ಸಂಬಂಧಗಳ - ಮೂಲಕವೇ ಕಂಡುಕೊಳ್ಳಲು ಸಾಧ್ಯ ಎಂದಾಗುತ್ತದೆ. ಆರ್ಥಿಕತೆ ರಾಜಕೀಯದ ಪ್ರಶ್ನೆಯಾದ್ದರಿಂದ ಸಮಾಜದ ಆರ್ಥಿಕ-

ರಾಜಕೀಯ ವಲಯಗಳ ಆಮೂಲಾಗ್ರ ಬದಲಾವಣೆ ಇಲ್ಲದೆ ಸಾಂಸ್ಕೃತಿಕ ಪರ್ಯಾಯಗಳ ಹುಡುಕಾಟ ಕೇವಲ ರೊಮ್ಯಾಂಟಿಕ್ ಬಯಕೆಯಾಗಿ ಮಾತ್ರ ಉಳಿಯುತ್ತದೆ ಎನ್ನುವ ಈ ವಾದ ಪ್ರಸ್ತುತದಲ್ಲಿ ತೀವ್ರವಾಗಿ ಚರ್ಚೆಗೆ ಒಳಗಾಗಿರುವ ವಿಚಾರ. ಸಂಸ್ಕೃತಿಗೆ ಇರುವ ಆರ್ಥಿಕ ಬುನಾದಿಯನ್ನು ಅಲ್ಲಗಳೆಯಲು ಸಾಧ್ಯವಿಲ್ಲವಾದರೂ, ಸಾಂಸ್ಕೃತಿಕ ವಲಯಕ್ಕೆ ತನ್ನದೇ ಆದ ಸ್ವಾಯತ್ತತೆ ಇದೆ ಎನ್ನುವುದರ ಬಗ್ಗೆ ನವ ಎಡಪಂಥೀಯ ಚಿಂತನೆಯೊಳಗೇ ಸಾಕಷ್ಟು ಒಳನೋಟಗಳು ಹುಟ್ಟಿಕೊಂಡಿವೆ. ಸಂಸ್ಕೃತಿ ಮತ್ತು ಆರ್ಥಿಕ ವ್ಯವಸ್ಥೆಯ ಪರಸ್ಪರ ಸಂಬಂಧಗಳನ್ನು ಎಡಪಂಥೀಯ ಸಿದ್ಧಾಂತಗಳು ಹೇಗೆ ಅರ್ಥೈಸಿವೆ ಎನ್ನುವುದರ ಬಗ್ಗೆ ಕನ್ನಡದಲ್ಲಿ ಇನ್ನೂ ಸಾಕಷ್ಟು ಚರ್ಚೆಯಾಗಬೇಕಿದೆ.

ಪರ್ಯಾಯದ ಬಗ್ಗೆ ಹೊಸ ಮಾತುಕತೆ ಕೇಳಿಬರುತ್ತಿರುವ ಈ ಸಂದರ್ಭಕ್ಕಂತೂ ಈ ಚರ್ಚೆ ಅತಿ ಮುಖ್ಯ. ಈ ಮೂಲಭೂತ ಅಂಶದ ಬಗ್ಗೆ ಸ್ಪಷ್ಟತೆ ಇಲ್ಲದ ಪರ್ಯಾಯದ ಮಾತು ಕೇವಲ ಗಾಳಿಯಲ್ಲಿ ತೇಲಾಡುವ ಬಯಕೆಗಳಾಗಿ ಮಾತ್ರ ಉಳಿಯುತ್ತವೆ.

ಭವ್ಯತೆಯ ಸೂಚಕವಾಗಿ ಕಾಣುವ ಮಾದರಿಯಲ್ಲಿ ಇಂಥ ನಿರಚನೆ ಸಾಧ್ಯವಿಲ್ಲ) ಆದ್ದರಿಂದಲೇ ಸಾಂಸ್ಕೃತಿಕ ಕ್ಷೇತ್ರದಲ್ಲಿ ಪರ್ಯಾಯದ ಹುಡುಕಾಟ ಸಿದ್ಧ ಮಾದರಿಗಳನ್ನು ಒಡೆಯುವ, ಪ್ರಶ್ನಿಸುವ, ಅವುಗಳ ಅಂತರಂಗವನ್ನು ಪದರ ಪದರವಾಗಿ ಬಿಚ್ಚಿಡಬಲ್ಲ ಕ್ರಿಯೆಯಿಂದಲೇ ಪ್ರಾರಂಭಿಸಬೇಕಾಗುತ್ತದೆ.

ಯಾಜಮಾನ್ಯ ಸಂಸ್ಕೃತಿಗೆ ಸೆಡ್ಡು ಹೊಡೆದು ನಿಂತ ಪ್ರತಿಭಟನಾತ್ಮಕವಾದ ಪರ್ಯಾಯದ ದೊಡ್ಡ ಚರಿತ್ರೆಯೇ ಈ ದೇಶದಲ್ಲಿದೆ. ವಚನ-ಭಕ್ತಿ ಚಳವಳಿಗಳು, ಅದಕ್ಕೂ ಈ ಪರ್ಯಾಯದ ಅತಿ ಮುಖ್ಯ ಕಾಣ್ಕೆಗಳು. ಅದೇ ರೀತಿ ಚರಿತ್ರೆಯಲ್ಲಿ ಪ್ರತಿರೋಧದ ನೆಲೆಯಿಂದ ಮುಂಚಿನ ಬೌದ್ಧಮತ ಪ್ರಾರಂಭವಾದ ಚಳವಳಿಗಳು ತಾವೇ ಸಾಂಸ್ಥಿಕ ರೂಪಗಳನ್ನು ಪಡೆದು, ತಾವು ವಿರೋಧಿಸುತ್ತಿದ್ದ ತತ್ವಗಳಿಗೆ ತಾವೇ ಮಣೆ ಹಾಕಿದ ಉದಾಹರಣೆಗಳೂ ಇವೆ. ಅಂದು ಮಠಗಳು ಮಾಡಿದ ಕೆಲಸವನ್ನು ಇಂದು ಪ್ರಭುತ್ವ ಮುಂದುವರೆಸಿದೆ. ಜಾಗತೀಕರಣದ ಇಂದಿನ ಕಾಲದಲ್ಲಿ ಪ್ರಭುತ್ವದ ಶಕ್ತಿ ರಾಷ್ಟ್ರಗಳ ಎಲ್ಲೆ ಮೀರಿ ಜಾಗತಿಕ ಮಟ್ಟದ

ಪರಂಪರೆಯ ಹೆಸರಿನಲ್ಲೇ ಅದೇ ಬ್ರಾಹ್ಮಣ್ಯದ ಸಂಸ್ಕೃತಿಯೇ ಮತ್ತೆ ಮರು ಹುಟ್ಟು ಪಡೆದುಕೊಂಡಿದ್ದು ಈಗ ಇತಿಹಾಸ.

ಈ ಮಾದರಿಗೆ ಪರ್ಯಾಯವಾಗಿ, ನವವಸಾಹತುಶಾಹಿ ಚಿಂತನೆ ಮೂಡಿಬಂತು. ಈ ವಸಾಹತೋತ್ತರ ಸಂಸ್ಕೃತಿ ಚಿಂತನೆ ತನ್ನ ಬೇರುಗಳನ್ನು ಅವೈದಿಕವಾದ, ಮೂಲೆಗುಂಪಾಗಿದ್ದ ಬಹುಮುಖೀ ಸಂಸ್ಕೃತಿಗಳಲ್ಲಿ ಹುಡುಕಿಕೊಳ್ಳಲು ಯತ್ನಿಸಿತು. ಎರಡು ಕಾಳಜಿಗಳು ಇಲ್ಲಿ ಮುಖ್ಯವಾಯಿತು. ಒಂದು, ವಸಾಹತುಶಾಹಿ ಆಧುನಿಕತೆ ತಟ್ಟದೇ ಇರುವ ಸಾಂಸ್ಕೃತಿಕ ಅಡಗುತಾಣಗಳನ್ನು ಗುರುತಿಸುವುದು. ಅಂದರೆ ವಸಾಹತು ಪೂರ್ವದಿಂದಲೂ ಉಳಿದುಕೊಂಡು ಬಂಧಿರುವ – ಆಧುನಿಕವಲ್ಲದ ಸಾಂಸ್ಕೃತಿಕ ನೆಲೆಗಳನ್ನು ಜನಪದ,

ಐಲಯ್ಯ ಅವರ ಪುಸ್ತಕದ ವಿಮರ್ಶೆ ಮಾಡುತ್ತಾ ಡಿ.ಆರ್. ನಾಗರಾಜ್ ಈ ದ್ವಂದ್ವವನ್ನು ಸರಿಯಾಗಿಯೇ ಗುರುತಿಸಿದ್ದಾರೆ. 'ಬ್ರಾಹ್ಮಣ ಮತ್ತು ಶೂದ್ರ ಈ ಎರಡೂ ರಚನೆಗಳಲ್ಲೂ ಅಳಿಸಲಾಗದ, ಇಳಿಸಲಾಗದ ಕೆಲವು ಆಶಯಗಳು ಮತ್ತು ರೂಪಕಗಳಿದ್ದರೂ, ಒಂದು ಇನ್ನೊಂದನ್ನು ಅನೇಕ ಸಂಕೀರ್ಣ ರೀತಿಯಲ್ಲಿ ಮಲಿನಗೊಳಿಸಿವೆ, ಪರಿವರ್ತಿಸಿವೆ. ಹಾಗೆ ನೋಡಿದರೆ, ಭಾರತೀಯ ಸಂಸ್ಕೃತಿಯ ಉಜ್ವಲ ಭಾಗಗಳಿರುವುದೇ ಇಂಥ ಸೃಜನಶೀಲ ಬೆರಕೆ ತಳಿಗಳಲ್ಲಿ. ಹೀಗಾಗಿ ಯಾವುದೇ ದ್ವಿಮುಖಿ ಓದು ಭಾರತೀಯ ಸಂಸ್ಕೃತಿಯ ಬಹುಮುಖ್ಯ ಆಯಾಮದ ಪೂರ್ಣ ಚಿತ್ರವನ್ನು ಕೊಡುವಲ್ಲಿ ಸೋಲುತ್ತದೆ.'

-೪-

ಪರ್ಯಾಯ ಸಾಂಸ್ಕೃತಿಕ ನೆಲೆಗಳ ಹುಡುಕಾಟದ ಭಾಗವಾಗಿ ಕನ್ನಡದಲ್ಲಿ ಸದ್ಯಕ್ಕೆ ಬಂದಿರುವ ವಿಚಾರಗಳು ಸಂಸ್ಕೃತಿಗೆ ಇರುವ ಪ್ರಾಪಂಚಿಕ ನೆಲೆಗಳ ಬಗ್ಗೆ ಗಂಭೀರವಾದ ಗಮನ ನೀಡಿಲ್ಲ. ದಮನಕ್ಕೊಳಗಾದ ಸಂಸ್ಕೃತಿಗಳು ತಮ್ಮ ಮೇಲೆ ಅವ್ಯಾಹತವಾಗಿ ನಡೆಸಿಕೊಂಡು ಬಂದಿರುವ ದಬ್ಬಾಳಿಕೆಯನ್ನು ಹೇಗೆ ನಿಭಾಯಿಸಿವೆ? ಯಾವ ಶಕ್ತಿ ಸಂಪನ್ಮೂಲಗಳು ಈ ಸಂಸ್ಕೃತಿಗಳನ್ನು ಪೂರ್ತಿ ನಿರ್ನಾಮವಾಗದಂತೆ ಕಾಪಾಡಿಕೊಂಡು ಬಂದಿವೆ? 'ಕಿರು' ಅಥವಾ 'ತಳ' ಸಂಸ್ಕೃತಿಗಳೆಂದು ಕರೆಯಲ್ಪಡುವ ಈ ಸಾಂಸ್ಕೃತಿಕ ನೆಲೆಗಳ ಧಾರಣಾಶಕ್ತಿಯ ಮೂಲ ಯಾವುದು? ಇವೇ ಮುಂತಾದ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು ಸಮಾಜವೊಂದರಲ್ಲಿ ಸಾಂಸ್ಕೃತಿಕ ರಚನೆಗಳು ಹೇಗೆ ನಿರ್ಮಾಣಗೊಳ್ಳುತ್ತವೆ ಎಂಬುದನ್ನು ಅರಿಯುವುದು ಅಗತ್ಯ.

ಸಂಸ್ಕೃತಿಯನ್ನು ಒಂದು 'ರಚನೆ' ಎನ್ನುವುದಾದರೆ, ಒಂದು ಕಡೆ ಈ ರಚನೆಯನ್ನೂ ಪೋಷಿಸಿ, 'ಕೃಷಿ' ಮಾಡುವ ಯಾಜಮಾನ್ಯ ಶಕ್ತಿಗಳಿದ್ದರೆ, ಇನ್ನೊಂದು ಕಡೆ ಈ ರಚನೆಯ ಹಿಂದೆ ಕೆಲಸಮಾಡುವ ಶಕ್ತಿಗಳನ್ನು ಗುರುತಿಸುವ, ವಿಮರ್ಶೆಗೆ ಒಡ್ಡುವ ನಿರಚನೆಯ ಸಾಧ್ಯತೆಯೂ ಇರುತ್ತದೆ. (ಸಂಸ್ಕೃತಿಯನ್ನು ಒಂದು ಹಿರಿಮೆಯ, ಉನ್ನತವಾದ,

ಸಾಮ್ರಾಜ್ಯಶಾಹಿ ವ್ಯವಸ್ಥೆಯ ಭಾಗವಾಗುತ್ತಿದೆ. ಆದ್ದರಿಂದ ನಾವು ಮಾಡುವ ಪರ್ಯಾಯ ಚಿಂತನೆ ಅದು ಎದುರಿಸಬೇಕಾದ ವ್ಯವಸ್ಥೆ ಅದು ಒಡ್ಡುವ ಸವಾಲುಗಳನ್ನು ತೀಕ್ಷ್ಣವಾದ ವಿಮರ್ಶೆಗೆ ಗುರಿಮಾಡಿಯೇ ಮುಂದುವರೆಯಬೇಕಾಗಿದೆ. ಇಲ್ಲದಿದ್ದರೆ ಇವತ್ತಿನ ಪರ್ಯಾಯ ಚಿಂತನೆ ಕೂಡ ಮುಂದೊಂದು ದಿನ ತನ್ನ ಉಳಿವಿಗಾಗಿ ತಾನು ವಿರೋಧಿಸಿದ ವ್ಯವಸ್ಥೆಯ ಭಾಗವೇ ಆಗಿಬಿಡುವ ಅಪಾಯ ತಪ್ಪಿದ್ದಲ್ಲ.

ಈ ಅಪಾಯದಿಂದ ಪಾರಾಗುವ ಒಂದು ಮಾರ್ಗವೆಂದರೆ ಸಾಂಸ್ಕೃತಿಕ ಪರ್ಯಾಯ ಚಿಂತನೆ ಮುಂದಿಟ್ಟಿರುವ ಕೆಲವು ಮಾದರಿಗಳ ಮಿತಿ ಮತ್ತು ಸಾಧ್ಯತೆಗಳನ್ನು ಇವತ್ತಿನ ಸಂದರ್ಭದ ಅವಸರದಿಂದ ಪರಿಶೀಲಿಸುವುದು.

ವಸಾಹತುಶಾಹಿ ಸಂದರ್ಭದಲ್ಲಿ ಹುಟ್ಟಿದ ರಾಷ್ಟ್ರೀಯವಾದ ತನ್ನ ಪರ್ಯಾಯ ಚಿಂತನೆಯನ್ನು ಆಧುನಿಕತೆ-ಸಂಪ್ರದಾಯವೆಂಬ ದ್ವಿಮುಖೀ ವೈರುಧ್ಯಗಳಲ್ಲಿ ಕಂಡುಕೊಳ್ಳಲು ಯತ್ನಿಸಿತು. ಈ ಮೊದಲೇ ಸೂಚಿಸಿದ ಹಾಗೆ ರಾಷ್ಟ್ರೀಯ ಸಂಸ್ಕೃತಿ ಎಂಬ ರಚನೆ ತನ್ನ ಅಸ್ತಿತ್ವಕ್ಕೆ ತಾನು ವಿರೋಧಿಸುತ್ತಿದ್ದ ಪಾಶ್ಚಿಮಾತ್ಯ ಆಧುನಿಕತೆಯ ಪರಿಕರಗಳನ್ನೇ ಬಳಸಿಕೊಳ್ಳಬೇಕಾಯಿತು. ಭಾರತದ ಭವ್ಯ ಸನಾತನ

ಬುಡಕಟ್ಟುಗಳ ಮಹಾಕಾವ್ಯ, ಕೆಳಸ್ತರಗಳ ಜೀವನ ಕ್ರಮ ಇತ್ಯಾದಿಗಳಲ್ಲಿ 'ಕಂಡುಹಿಡಿಯುವ' ಪ್ರಯತ್ನವಾಗಿ ಇದು ಮೂಡಿಬಂತು. ಈ ಸಾಂಸ್ಕೃತಿಕ ನೆಲೆಗಳು ನಮ್ಮೊಡನಿದ್ದೂ ನಮಗೇ ಕಾಣದಂತೆ ಅಡಗಿಕೊಂಡದ್ದಕ್ಕೆ, ವಸಾಹತುಶಾಹಿ - ಆಧುನಿಕತೆ ಉಂಟುಮಾಡಿದ್ದ ವಿಸ್ಮೃತಿಯೇ ಕಾರಣ ಎಂಬುದು ಈ ವಾದದ ತಿರುಳು. ಉಧಾಹರಣೆಗೆ ಈ ಬಗೆಯ ವ್ಯಾಖ್ಯಾನವನ್ನು ನಾವು ಡಿ.ಆರ್. ನಾಗರಾಜರ ಅಕ್ಷರ ಚಿಂತನೆ ಮಾಲೆಯ ಆಶಯವಾಗಿ ಪ್ರಕಟವಾಗಿರುವುದನ್ನು ನೋಡಬಹುದು.

ಎರಡನೆಯದು, ಯಾಜಮಾನ್ಯ ಸಂಸ್ಕೃತಿಯ ದಾಳಿಯಿಂದ ಹೊರಗುಳಿಯದೇ ಅದರೊಂದಿಗೆ ನೇರವಾಗಿಯೋ, ಪರೋಕ್ಷವಾಗಿಯೋ ಸೆಣಸಾಡುತ್ತಲೇ ಬಂದ ದೇಶಿ ಸಾಂಸ್ಕೃತಿಕ ರಚನೆಗಳು. ಈ ಅನುಸಂಧಾನದ ಮಾದರಿಯಲ್ಲಿ ದೇಸಿ-ಮಾರ್ಗಗಳ ನಡುವೆ ನಡೆದ ಕೊಡು-ಕೊಳ್ಳುವಿಕೆಯ ಪ್ರಕ್ರಿಯೆಯೇ ಮುಖ್ಯ. ವಿವಿಧ ಶೈವ ಸಂಪ್ರದಾಯಗಳ ಒಳಗೆ ನಡೆದ ವಾಗ್ವಾದದಲ್ಲಿ ದೇಶ ಭಾಷೆಗಳ ಮತ್ತು ಸಂಸ್ಕೃತದ ಸಾಹಿತ್ಯದ ನಡುವೆ ನಡೆದ ಸಂವಾದಗಳಲ್ಲಿ, ಪರ್ಯಾಯದ ನೆಲೆಗಳನ್ನು ಹುಡುಕುವ ಈ ಮಾದರಿಗೆ ತಕ್ಕ ಉದಾಹರಣೆಗಳನ್ನು ಡಿ.ಆರ್. ನಾಗರಾಜ್ ಅವರ 'ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ' ಯಲ್ಲಿ ಶಂಬಾ

ಜೋಷಿಯವರ ಚಿಂತನೆಯಲ್ಲಿ ಕೆ.ವಿ. ಸುಬ್ಬಣ್ಣ ಅವರ ಬರಹಗಳಲ್ಲಿ ನಾವು ಕಾಣಬಹುದು.

ಇವೆರಡೂ ಮಾದರಿಗಳೂ ಅನ್ಯ ಅಥವಾ ಉಚ್ಛ ಸಂಸ್ಕೃತಿಯೊಂದು ದೇಶಿ ಸಂಸ್ಕೃತಿಗಳ ಮೇಲೆ ಸಂಪೂರ್ಣ ದಿಗ್ವಿಜಯ ಸಾಧಿಸಲಾರವು ಎನ್ನುವ ತತ್ವವನ್ನೇ ಪ್ರತಿಪಾದಿಸುತ್ತವೆ. ಎಷ್ಟೇ ಆಕ್ರಮಣಕ್ಕೆ ಈಡಾದರೂ ಈ ನಾಟೀ ಸಂಸ್ಕೃತಿಗಳು ಸಂಪೂರ್ಣವಾಗಿ ನಾಶವಾಗಲಾರವು ಎನ್ನುವುದೇ ಪರ್ಯಾಯ ಚಿಂತನೆಯ ಸಾಧ್ಯತೆಗಳನ್ನು ಅನಾವರಣಗೊಳಿಸುತ್ತದೆ ಎಂಬುದು ಈ ಎರಡೂ ಮಾದರಿಗಳ ತಿರುಳು.

ಇದಲ್ಲದೆ, ಪರ್ಯಾಯ ಸಾಂಸ್ಕೃತಿಕ ಪ್ರಸ್ಥಾನದಲ್ಲಿ ಇನ್ನೂ ಒಂದು ಚಿಂತನಾ ಕ್ರಮವಿದೆ. ಅದು ದ್ವಿಜರ ಮತ್ತು ದಲಿತ - ಬಹುಜನರ ಸಂಸ್ಕೃತಿಗಳ ನಡುವೆ ಒಂದು ದ್ವಿಮುಖ ವೈರುಧ್ಯ ಇದೆ ಎನ್ನುವ ಕಾಂಚಾ ಐಲಯ್ಯ ಅಂಥವರ ವಾದ. ಅವರ 'ನಾನೇಕೆ ಹಿಂದೂ ಅಲ್ಲ?' ಎನ್ನುವ ಪುಸ್ತಕದಲ್ಲಿ ಇಂಥ ವೈರುಧ್ಯದ ಒಂದು ಪಟ್ಟಿಯೇ ಇದೆ. ದಲಿತ ಬಹುಜನರಿಗಾಗಿ ಪರ್ಯಾಯ ಸಾಂಸ್ಕೃತಿಕ ನಿರ್ವಚನವನ್ನು ರೂಪಿಸುವ ಐಲಯ್ಯ ಅವರು ಗುರಿ ಎಷ್ಟೇ ಅಪೇಕ್ಷಣೀಯವಾದರೂ, ಹೀಗೆ ಪರ್ಯಾಯವನ್ನು ರೂಪಿಸುವ ಭರಾಟೆಯಲ್ಲಿ ಭಾರತೀಯ ಸಂಸ್ಕೃತಿಯನ್ನೂ ಅವರು ತೀರಾ ನೀಟಾದ ಗೆರೆ ಎಳೆದು ವಿಭಜಿಸುತ್ತಾರೆ.

ಈ ದ್ವಿಮುಖೀ ವೈರುಧ್ಯ ಮೇಲೆ ಚರ್ಚಿಸಿದ ಆಧುನಿಕತೆ - ಸಂಪ್ರದಾಯದ ಸರಳ ವಿಭಜನೆಯಷ್ಟೇ ಅಪಾಯದಿಂದ ಕೂಡಿದ್ದು ಈ ತೆರನಾದ ಪರ್ಯಾಯ ತಾರ್ಕಿಕವಾಗಿ ತಾನು ವಿರೋಧಿಸುವ ನೆಲೆಗೇ ಮತ್ತೆ ಜೋತು ಬೀಳುತ್ತದೆ. ಅಂದರೆ ಇಲ್ಲಿ ದಲಿತ ಬಹುಜನ ಸಂಸ್ಕೃತಿ ಪರ್ಯಾಯವಾಗಿ ಮೂಡಿಬರುವುದರ ಬದಲು, ದ್ವಿಜರ ಸಂಸ್ಕೃತಿಯ ಪ್ರತಿಬಿಂಬವಾಗಿ ಮೂಡಿಬರುತ್ತದೆ. ಶೂದ್ರಾತಿ ಶೂದ್ರರ ಸಂಸ್ಕೃತಿ ತನ್ನಷ್ಟಕ್ಕೆ ತಾನೇ ಸ್ವಭಾವತಃ ಜೀವ ಪರವಾದದ್ದೆಂದೂ, ಪುರುಷ ಪ್ರಧಾನ ಸಂಸ್ಕೃತಿಗೆ ವಿರೋಧವಾದದ್ದೆಂದೂ, ಸಮಾನತೆ - ಸಹಬಾಳ್ವೆಗಳ ತತ್ವದ ಮೇಲೆ ನಿಂತಿರುವುದೆಂದೂ ಹೇಳುತ್ತಲೇ, ಬ್ರಾಹ್ಮಣತ್ವದ ಕನ್ನಡಿಯ ಮೂಲಕವೇ ತನ್ನ ಸ್ವಂತ ದರ್ಶನವನ್ನು ಮಾಡುತ್ತಿರುತ್ತದೆ. ಐಲಯ್ಯ ಅವರ ಪುಸ್ತಕದ ವಿಮರ್ಶೆ ಮಾಡುತ್ತಾ ಡಿ.ಆರ್. ನಾಗರಾಜ್ ಈ ದ್ವಂದ್ವವನ್ನು ಸರಿಯಾಗಿಯೇ ಗುರುತಿಸಿದ್ದಾರೆ.

'ಬ್ರಾಹ್ಮಣ ಮತ್ತು ಶೂದ್ರ ಈ ಎರಡೂ ರಚನೆಗಳಲ್ಲೂ ಅಳಿಸಲಾಗದ, ಇಳಿಸಲಾಗದ ಕೆಲವು ಆಶಯಗಳು ಮತ್ತು ರೂಪಕಗಳಿದ್ದರೂ, ಒಂದು ಇನ್ನೊಂದನ್ನು ಅನೇಕ ಸಂಕೀರ್ಣ ರೀತಿಯಲ್ಲಿ ಮಲಿನಗೊಳಿಸಿವೆ, ಪರಿವರ್ತಿಸಿವೆ. ಹಾಗೆ ನೋಡಿದರೆ, ಭಾರತೀಯ ಸಂಸ್ಕೃತಿಯ ಉಜ್ವಲ ಭಾಗಗಳಿರುವುದೇ ಇಂಥ ಸೃಜನಶೀಲ ಬೆರಕೆ ತಳಿಗಳಲ್ಲಿ. ಹೀಗಾಗಿ ಯಾವುದೇ ದ್ವಿಮುಖ ಓದು ಭಾರತೀಯ ಸಂಸ್ಕೃತಿಯ ಬಹುಮುಖ್ಯ ಆಯಾಮದ ಪೂರ್ಣ ಚಿತ್ರವನ್ನು ಕೊಡುವಲ್ಲಿ ಸೋಲುತ್ತದೆ.'

ಗೆಳೆಯ ಡಿ.ಆರ್. ಅವರ ಆಸಕ್ತಿ ಪರಿವರ್ತನಾಶೀಲವಾದ ವೈರುಧ್ಯಗಳಲ್ಲಿದೆ; ಒಂದರ ಮುಂದೆ ಇನ್ನೊಂದನ್ನು ಪ್ರತಿಬಿಂಬವಾಗಿ ನೋಡುವುದರಲ್ಲಿಲ್ಲ ಎನ್ನುವುದು ಸ್ಪಷ್ಟ ಆದ್ದರಿಂದ ಡಿ.ಆರ್. ಸೂಚಿಸುವ ಪರ್ಯಾಯ ಚಿಂತನೆಯ ನೆಲೆ ಭಾರತದ ಸಂಪ್ರದಾಯದ ಒಳಗೇ ಹರಿದು ಬಂದಿರುವ ಪರಿವರ್ತನಾಶೀಲವಾದ, ಸಂಕೀರ್ಣವಾದ ಕೊಡು-ಕೊಳ್ಳುವಿಕೆಯಲ್ಲದೆ. ಈ ಪ್ರಸ್ತಾಪ ಪ್ರಸ್ತುತ ಪರ್ಯಾಯ ಚಿಂತನೆಗೆ ಬೇಕಾದ ಸೂಕ್ಷ್ಮ ಒಳನೋಟಗಳನ್ನು ನೀಡುತ್ತದೆಯಾದರೂ ಈ ಚಿಂತನಾ ಕ್ರಮಕ್ಕೆ ದೊಡ್ಡ ಮಿತಿಯೂ ಇದೆ.

ಸಾಂಪ್ರದಾಯಿಕ ಸಮಾಜದಿಂದ ಆಗುವ ಶೋಷಣೆ ಒಂದು ಕಡೆ ಇದ್ದರೆ, ಆಧುನಿಕ ತಂತ್ರಜ್ಞಾನದಿಂದ ಉಂಟಾಗುತ್ತಿರುವ ನಿರ್-ಕೈಗಾರಿಕರಣದಿಂದ ಉದ್ಭವವಾಗುತ್ತಿರುವ ಶೋಷಣೆ ಇನ್ನೊಂದು ಕಡೆ ಇದೆ. ಇದನ್ನೇ ಡಿ.ಆರ್. 'ಮಾನವವಾದ' ಮತ್ತು 'ಮಿಷನ್‌ವಾದ'ಗಳ ಶೋಷಣೆ ಎನ್ನುತ್ತಾರೆ. ಆಧುನಿಕತೆಯಿಂದ ಬಡವರು, ದಲಿತರು, ಮಹಿಳೆ ಮತ್ತು ಇತರೆ ಅಲ್ಪಸಂಖ್ಯಾತರು ಶೋಷಿತರಾಗುತ್ತಿರುವುದರ ಬಗ್ಗೆ ಡಿ.ಆರ್. ಬರೆಯುತ್ತಾರಾದರೂ, ಈ ಆಧುನಿಕತೆಗೆ ಇರುವ ಸಂಕೀರ್ಣತೆಯ ಬಗ್ಗೆ ಅದರ ಹಿಂದಿನ ಬಂಡವಾಳಶಾಹಿ ಪ್ರೇರಕ ಶಕ್ತಿಗಳ ಬಗ್ಗೆ ಅಷ್ಟು ಉತ್ಸುಕರಾಗಿ ಬರೆಯುವುದಿಲ್ಲ. ಮೊದ ಮೊದಲಿಗೆ ದಲಿತರು ಪರ್ಯಾಯವನ್ನು ಆಧುನಿಕತೆಗೆ ಇರುವ ಬಿಡುಗಡೆಯ ಶಕ್ತಿಯಲ್ಲಿ ಗುರುತಿಸಿದರೂ, ಅದೇ ನಂಬಿಕೆಯನ್ನು ಈಗ ಕೂಡ ಆಧುನಿಕತೆ ಬಗ್ಗೆ ಇಟ್ಟುಕೊಳ್ಳಲಾಗುವುದಿಲ್ಲ.

ಸಾಂಪ್ರದಾಯಿಕ ಸಮಾಜದಲ್ಲಿರಬಹುದಾದ ಬಹುಮುಖೀ ನೆಲೆಗಳ, ಅವುಗಳ ವಿಭಿನ್ನ ಆಯಾಮಗಳ ಬಗ್ಗೆ ಉಜ್ವಲವಾಗಿ ಬರೆಯಬಲ್ಲ ಡಿ.ಆರ್., ಆಶೀಶ್ ನಂದಿ ಮುಂತಾದ ವಿಮರ್ಶಾತ್ಮಕ ಸಂಪ್ರದಾಯಸ್ಥರು, ಆಧುನಿಕತೆಯೊಳಗೂ ಇರುವ ಅನೇಕ ನೆಲೆಗಳ ಬಗ್ಗೆ ಅಷ್ಟೇ ಸೂಕ್ಷ್ಮ ವಿಮರ್ಶೆಯನ್ನು ಮಾಡುವುದಿಲ್ಲ. ಸಮಾಜವಾದ ಒದಗಿಸಬಹುದಾದ ಪರ್ಯಾಯದ ಬಗ್ಗೆ ಮೌನವಹಿಸುವ ಈ ನವ ಸಂಪ್ರದಾಯಸ್ಥ ಚಿಂತಕರು ಬಂಡವಾಳಶಾಹಿ ಶಕ್ತಿಯನ್ನು ಎದುರಿಸುವಂಥ ಯಾವುದೇ ಪರ್ಯಾಯ ಹೋರಾಟ ಮಾರ್ಗಗಳನ್ನು ಸೂಚಿಸುವುದಿಲ್ಲ. ಅದು ಇದರ ಚಿಂತನೆಯ ದೊಡ್ಡ ಮಿತಿ ಕೂಡ.



ಯಜಮಾನ್ಯ ಸಂಸ್ಕೃತಿ ಸ್ವಾಧೀನ ಪಡಿಸಿಕೊಳ್ಳಲಾಗದ ಪರ್ಯಾಯ ಮಾತ್ರ ಕ್ರಾಂತಿಕಾರಿ ಪರ್ಯಾಯವಾಗಿ ಉಳಿಯಲು ಸಾಧ್ಯ.

ಬಂಡವಾಳಶಾಹಿಯಿಂದ ಹೊರಹೊಮ್ಮುವ ಆಧುನಿಕತೆಗೂ, ಅದರ ಕಟು ವಿಮರ್ಶೆಯಾದ ಸಮಾಜವಾದಿ ಆಶಯಗಳಿಂದ ಪ್ರೇರಿತವಾದ ಆಧುನಿಕತೆಗೂ ಬಹಳ ಮೂಲಭೂತ ವ್ಯತ್ಯಾಸಗಳಿವೆ. ಮತ್ತು ಈ ವ್ಯತ್ಯಾಸಗಳು ಜಾಗತೀಕರಣದ ಇಂದಿನ ಕಾಲಘಟ್ಟದಲ್ಲಿ ಇನ್ನೂ ಹೆಚ್ಚು ನಿಖರವಾಗಿ ಕಾಣುತ್ತಿವೆ. ಈ ವ್ಯತ್ಯಾಸವನ್ನು ಗಮನಿಸಿದೆ, ಆಧುನಿಕತೆ ಒಂದೇ ಎಂಬಂತೆ ಅದನ್ನು ಜಾಗತೀಕರಣದ ಜತೆ ಸಮೀಕರಿಸಿ, ಜಾಗತೀಕರಣದಿಂದ ಮಾತ್ರ ದಲಿತರ ವಿಮೋಚನೆ ಸಾಧ್ಯ ಎನ್ನುವ ಮೊಗಳ್ಳಿ ಗಣೇಶ್ ಅಂಥವರ ವಾದ ಕೂಡ ಹಾಸ್ಯಾಸ್ಪದವಾಗುತ್ತದೆ.

ಇಂದು ರಾಜಕೀಯ ಪರ್ಯಾಯ ಚಳವಳಿ ಆಧುನಿಕತೆಯೊಳಗಡೆ ಇರಬಹುದಾದ ಕ್ರಾಂತಿಕಾರಿ ಆಶಯಗಳನ್ನು ಮೊದಲು ಗುರುತಿಸಬೇಕಾಗಿದೆ. ಪರಿವರ್ತನಾಶೀಲವಾದ ಸಮಾಜ ಆಧುನಿಕತೆಯಿಂದ ವಿಮುಖವಾಗಿ ತನ್ನ ಸಂಪ್ರದಾಯದ ಒಳಗೇ ಇರಬಹುದಾದ ಬಿಡುಗಡೆಯ ನೆಲೆಗಳನ್ನು ಹುಡುಕುತ್ತಾ ಹೋಗುವುದು ಅಚಾರಿತ್ರಿಕವಾಗುತ್ತದೆ. ಮಂಟೇಸ್ವಾಮಿಯ ಪವಾಡಗಳನ್ನು ರೂಪಕವಾಗಿ ನೋಡಲು ಸಾಧ್ಯ. ಆದರೆ ಅದನ್ನು ಈಗಿನ ಜೀವನಾನುಭವದ ಮಾದರಿಯನ್ನಾಗಿಟ್ಟು ನೋಡಲು ಸಾಧ್ಯವಿಲ್ಲ. ಸಂಪ್ರದಾಯದೊಳಗೆ ಇದ್ದ ಕ್ರಾಂತಿಕಾರಿ ಪರ್ಯಾಯಗಳು ಆ ಕಾಲದ ಭೌತಿಕತೆಯಿಂದ ಹುಟ್ಟಿದಂಥವು. ಈಗಿನ ಭೌತಿಕ ವಾಸ್ತವಗಳ ಒತ್ತಡ, ಧಾತುಗಳೇ ಬೇರೆ. ಸಾಂಸ್ಕೃತಿಕ ಜಗತ್ತು ಭೌತಿಕ ಜಗತ್ತಿನಿಂದ ಪೂರ್ತಿಯಾಗಿ ಬೇರೆ ಇರುವ, ಸಂಪೂರ್ಣ ಸ್ವಾಯತ್ತತೆಯಿಂದ ಕೂಡಿರಲು ಸಾಧ್ಯವಿಲ್ಲ. ಆದರೆ ಭೌತಿಕ ವಾಸ್ತವಗಳ ಬದಲಾವಣೆ ನಾವು ಕಂಡೇ ಇಲ್ಲದ ಹೊಸ ಸಾಂಸ್ಕೃತಿಕ ಕ್ರಿಯಾಶೀಲತೆ ಮತ್ತು ಜೀವನ ಶೈಲಿಯನ್ನು ತರಬಲ್ಲದು. ಸಂಸ್ಕೃತಿಯೊಳಗಡೆ ಇರುವ ಜೀವಪೋಷಕ ಅಂಶಗಳು ಕೂಡ, ಸಮಾನತೆ-ಸ್ವಾತಂತ್ರ್ಯದ ಸಮಾಜವಾದೀ ಆಶಯಗಳ ಭಾಗವಾಗಿಯೇ ಮೂಡಿಬರಬೇಕಾದದ್ದು ಅನಿವಾರ್ಯ.

ಒಟ್ಟಿನಲ್ಲಿ ಪರ್ಯಾಯ ಸಂಸ್ಕೃತಿ ಚಿಂತನೆ ತಾನು ವಿರೋಧಿಸುವ ವ್ಯವಸ್ಥೆಯ ಭದ್ರ ನೆಲೆಗಳಾವುವು, ಅದರ ಶಕ್ತಿ-ಸ್ವರೂಪಗಳೆಂಥದು ಎಂಬುದನ್ನು ಅರಿಯುವ ಜತೆಗೇ, ತಾನು ಕಟ್ಟುತ್ತಿರುವ ಪರ್ಯಾಯದ ಬುನಾದಿಯ ಬಗ್ಗೆಯೂ ಎಚ್ಚರವಹಿಸುವುದು ಅಗತ್ಯ. ಯಜಮಾನ್ಯ ಸಂಸ್ಕೃತಿ ಸ್ವಾಧೀನ ಪಡಿಸಿಕೊಳ್ಳಲಾಗದ ಪರ್ಯಾಯ ಮಾತ್ರ ಕ್ರಾಂತಿಕಾರಿ ಪರ್ಯಾಯವಾಗಿ ಉಳಿಯಲು ಸಾಧ್ಯ. ಇಂಥ ಪರ್ಯಾಯ ಸಂಸ್ಕೃತಿ, ಪರ್ಯಾಯ ರಾಜಕಾರಣದ ಹುಡುಕಾಟದ ಭಾಗವಾಗಿಯೇ ಬರಬೇಕಾಗಿದೆ. ಆದರೆ ಈ ಪರ್ಯಾಯ ರಾಜಕಾರಣಕ್ಕೆ ಬೇಕಾದ ದ್ರವ್ಯವನ್ನು ಪರ್ಯಾಯ ಸಾಂಸ್ಕೃತಿಕ ಚಿಂತನೆ ಈವರೆಗೆ ಕಂಡ ಹಲವು ಪಲ್ಲಟಗಳು ಮತ್ತು ಅದು ಮುಂದಿಟ್ಟಿರುವ ಮಾದರಿಗಳ ಇತಿ-ಮಿತಿಗಳ ಅಧ್ಯಯನ ಒದಗಿಸಬಲ್ಲದು. ಪರ್ಯಾಯ ರಾಜಕೀಯ ಚಿಂತನೆ ಸಾಗಬೇಕಾದ ಮಾರ್ಗವನ್ನು ತೋರುವ ಕೈಗಂಬಗಳಾಗಿ ಸಾಂಸ್ಕೃತಿಕ ಚಿಂತನೆ ಕೆಲಸ ಮಾಡಬೇಕಾಗಿದೆ. ❑

ವಾರ್ಷಿಕ
ವಿಶೇಷಾಂಕ
೨೦೦೪



ಸೃಷ್ಟಿಯ ಸುರತ

ಮೊದಲ ಮಳೆಯ ಮೊದಲ ಹನಿಯು ಇಳೆಯ ಮುಟ್ಟಿತು
ಬೆದರುಗಣ್ಣ ತೆರೆದ ಹೆಣ್ಣು ಪುಳಕಗೊಂಡಿತು
ಮಿಂಚು ಬಳಗ ನಗೆಯ ಚೆಲ್ಲಿ ಬೆಳಕು ಅರಳಿತು
ಕೊರಳ ತುಂಬ ಹಸಿರು ಹಾಡು ಚಿಗುರಿ ಹರಿಯಿತು.

ಕೇಳಿರಡೂ ತಬ್ಬಿ ತಬ್ಬಿ ಸುಗಂಧ ಸುರಿದವು
ತುಳಿಗಳೆರಡೂ ಹಬ್ಬಿ ಹಬ್ಬಿ ಬಳ್ಳಿಯಾದವು
ಬಳ್ಳಿ ತುಂಬ ಹೂವ ತೊಡುಗೆ ಕುಸುರಿಯಿಕ್ಕಿತು
ಗಾಳಿ ಬಳಗ ಬಂದು ಬಂದು ಕುಶಲ ಕೇಳಿತು

ಸುಖದ ಎಲ್ಲೆ ಮೀರಿ ನಿಂತು ಸುಖವೆ ಈಯಿತು
ಒಸುಳು ಒಸುಳು ಭ್ರೂಣದೆಡೆಗೆ ತುಯ್ದು ನಿಂತಿತು
ಸಂದು ಗೊಂದು ಕನಸು ಕೆಸರು ತೊಳೆದು ಬಿಟ್ಟಿತು
ಇರುಳ ಮನೆಗೆ ಹಾಲವು ಹಗಲು ಹೆಜ್ಜೆ ಇಟ್ಟಿತು

ಮೌನವನೆದೆ ಕೊಳಲಿನಲ್ಲು ಕನಸು ಹುಟ್ಟಿತು
ಹರಿವ ನದಿಯ ನಡಿಗೆ ಜೊತೆಗೆ ಮನವ ನೆಟ್ಟಿತು.

— ಚಂದ್ರಶೇಖರನಿಟ್ವ

ಅನಂತಮೂರ್ತಿ ಅವರದು ಈ ಕಾಲಮಾನದ ಅತ್ಯಂತ ಸೋಜಿಗದ ವ್ಯಕ್ತಿತ್ವ ಬಹುಶಃ ಅನಂತಮೂರ್ತಿ ಅವರಿಗೆ ಇರುವಷ್ಟು ಅಭಿಮಾನಿಗಳು - ವೈರಿಗಳು ಬೇರೆಯವರಿಗೆ ಇಲ್ಲವೆಂದೇ ಹೇಳಬಹುದು. ಗಾಢ ಪ್ರೀತಿ-ಅಭಿಮಾನದ ಅನಂತಮೂರ್ತಿ ಕೇವಲ ಲೇಖಕರಾಗಷ್ಟೇ ನಮಗೆ ಮುಖ್ಯರಲ್ಲ. ಸಮಾಜದ ಮುಖ್ಯ ವಾಹಿನಿಯ ದಿಕ್ಕುದೆಸೆಗೆ ನಿರ್ದೇಶನ ನೀಡುವ ಸಾಮಾಜಿಕ ಕಾರ್ಯಕರ್ತರೂ ಹೌದು. ಹಳೆಬೇರು - ಹೊಸ ಚಿಗುರಿನ ಮಿಶ್ರಣದಂತಿರುವ ಅನಂತಮೂರ್ತಿ ಅದಮ್ಯ ಚಿಂತನೆ - ವಿವಾದ ಹಾಗೂ ದಿಟ್ಟ ನಡೆಗೆ ಹೆಸರಾದವರು. ಅವರೊಂದಿಗೆ ಸತತ ಮೂರು ಗಂಟೆಗಳ ಕಾಲ ನಡೆಸಿದ 'ಸಂವಾದ' ಇಲ್ಲಿದೆ.

ಕನಸುಗಾರರು ಇರಬೇಕು

ಇಂದೂಧರ ಹೊನ್ನಾಪುರ : ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು ಆರು ತಿಂಗಳಾಗುತ್ತಾ ಬಂದಿದೆ. ಕಾಂಗ್ರೆಸ್, ಭಾರತೀಯ ಸಮಾಜವನ್ನು ವಿಭಿನ್ನ ದಿಕ್ಕಿನತ್ತ ಕೊಂಡೊಯ್ಯಬಲ್ಲುದು ಎನಿಸುತ್ತಿದೆಯೇ? ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಇರೋದ್ರಲ್ಲಿ ಒಳ್ಳೆ ಆಲ್ಟರ್‌ನೇಟಿವ್ ಅಂತ ನೀವು ಹೇಳಿದ್ದಿರಿ, ಅದಕ್ಕೆ ಈ ಪ್ರಶ್ನೆ.

ಅನಂತಮೂರ್ತಿ : ಎಲ್ಲರಿಗೂ ಆಶ್ಚರ್ಯ ಆಗೊ ಹಾಗೆ 'ಇಂಡಿಯಾ ಇಸ್ ಶೈನಿಂಗ್' ಅಂತಾ ಇದ್ದ ಬಿಜೆಪಿ ಅಧಿಕಾರ ಕಳೆದುಕೊಂಡಿದೆ. ನಾನು ಕೂಡಲೇ ಇದನ್ನು ಹೇಗೆ ವ್ಯಾಖ್ಯಾನಿಸ್ತೀನಿ ಅಂದರೆ, ಜನ ಕೋಮುವಾದವನ್ನ ತಿರಸ್ಕರಿಸಿದರು ಅಂತ ಅಂದುಕೊಂಡು ಕಾಂಗ್ರೆಸ್ ಮುಂದುವರಿತಾ ಇದೆ. ಆದರೆ ಅವರ ಗ್ರಹಿಕೆ ತಪ್ಪು. ಜನ ತಿರಸ್ಕರಿಸಿದ್ದು ಕೋಮುವಾದ ಮಾತ್ರವಲ್ಲ, ಲಿಬರಲೈರ್ಝೇಷನನ್ನೂ ಕೂಡ ಅನ್ನುವುದನ್ನ ಕಾಂಗ್ರೆಸ್ ಗ್ರಹಿಸಬೇಕು. ಆ ಗ್ರಹಿಕೆಯಲ್ಲಿ ಬದಲಾವಣೆ ಆಗಬೇಕು. ಆ ರೀತಿ ಆಗುವ ಹಾಗೆ ಕಮ್ಯುನಿಸ್ಟರು ಒತ್ತಾಯ ತರ್‍ತಾ ಇದ್ದಾರೆ. ಅದು ನನಗೆ ಸಂತೋಷದ ವಿಷಯ.

ಅನೇಕ ವಿಷಯಗಳನ್ನು ನಾವು ಸದ್ಯದಲ್ಲಿ ಏನಾಗುತ್ತೆ ಅಂತಾನೂ ಯೋಚನೆ ಮಾಡ್ಬೇಕಾಗುತ್ತೆ. ಮತ್ತು ಲಾಂಗ್ ಟರ್ಮ್‌ನಲ್ಲಿ ಏನಾಗುತ್ತೆ ಅಂತನೂ ನೋಡ್ಬೇಕು. ನಮಗೆ ಈ ಎರಡು ಟ್ಯೂನು ಇರಬೇಕು. ಆದಕ್ಕೇನೆ ಆಗ ಸದ್ಯದಲ್ಲಿ ಬಿಜೆಪಿ ಸೋಲಬೇಕಾಗಿತ್ತು. ಕಾಂಗ್ರೆಸ್ ಬಂದ್ರೂ ಪರವಾಗಿಲ್ಲ. ಅದು ಸರಿಯೇ ನಾವು ಹೇಳಿದ್ದು. ಆದರೆ ಬಂದ ನಂತರ ನಾವು ಕೇಳೋ ಬೇರೆ ಪ್ರಶ್ನೆಗಳಿವೆ. ಇಲ್ದೆ ಇದ್ರೆ ನೀವು ರಾಜಕೀಯದಲ್ಲಿ ಸಕ್ರಿಯವಾಗಿರೊದಿಕ್ಕೆ ಆಗೊದಿಲ್ಲ. ಬರೀ ಲಾಂಗ್‌ಟರ್ಮ್ ಒಂದನ್ನೇ ಇಟ್ಕೊಂಡವನು ಕನಸುಗಾರ ಆಗ್ಬಿಡ್ತಾನೆ. ಬರೀ ಶಾರ್ಟ್ ಟರ್ಮ್ ಮಾತ್ರ ಇಟ್ಕೊಂಡಿರೊವನು ಸಮಯವಾದಿ ಆಗ್ಬಿಡ್ತಾನೆ. ನೀವು ಸಮಯವಾದಿಯೂ ಆಗ್ದೇನೆ, ಬರೀ ಕನಸುಗಾರನೇ ಆಗದೆ ಇರ್ಬೇಕಾದ್ರೆ ಶಾರ್ಟ್ ಟರ್ಮಿಂದೂ ಯೋಚನೆ ಮಾಡ್ಬೇಕಾಗುತ್ತೆ, ಲಾಂಗ್ ಟರ್ಮಿಂದೂ ಯೋಚನೆ ಮಾಡ್ಬೇಕಾಗುತ್ತೆ. ಈ ರೀತಿಯ ಒಂದು ಆಲೋಚನ ಕ್ರಮ ನಮಗೆ ಬರ್ಬೇಕು.

ಸಂದರ್ಶನ

ಬಿ.ಯು. ಸುಮಾ : ಆದರೆ ಇವಾಗ ಗ್ಲೋಬಲೈಝೇಷನ್‌ನ ಹಿನ್ನೆಲೆನಲ್ಲಿ ನಾವು ಲಾಂಗ್ ಟರ್ಮ್‌ನಲ್ಲಿ ಪ್ಲಾನ್ ಮಾಡೊಕೆ ಸಾಧ್ಯನಾ ಸರ್ ?

ಅನಂತಮೂರ್ತಿ : ಅದಕ್ಕೆ ತಡೆಗಳನ್ನ ಹಾಕಬಹುದು. ನಾವು ಮೈ ಮೇಲೆ ಬಿದ್ದು ಒಪ್ಕೊಳ್ದೆ ಇರೊದು ಸಾಧ್ಯವಿದೆ. ಅನೇಕ ವಿಷಯಗಳನ್ನ ನಾವು ಬೇಕೂ ಅಂತಲೆ ನಮ್ಮ ಮೈ ಮೇಲೆ ಹಾಕೊಂಡಿದ್ದೀವಿ. ಅದನ್ನು ತಡೆಹಿಡಿಬಹುದಾಗಿತ್ತು. ಇದೊಂದು ದೊಡ್ಡ ರಾಷ್ಟ್ರ. ನಮ್ಮ ಅಗತ್ಯಗಳನ್ನ ನೋಡಿ ನಾವು ಯಾವ ಸಂದರ್ಭದಲ್ಲಾದ್ರೂ, ಇದೊಂದೇ ಮಾರ್ಗ ಇದ್ದಿದ್ದು ಮಾಡೊದಿಕ್ಕೆ ಅಂತ ತಿಳ್ಕೊಳ್ಳೊದು ಇದೆಯಲ್ಲ, ಅದು ಅನ್‌ಕ್ರಿಯೇಟಿವ್ ಆದ ಆಲೋಚನೆಗಳು. ಬೇರೆ ಮಾರ್ಗಗಳೂ ಇರುತ್ತೆ.

ಸುಮಾ : ಆದರೆ, ನಾವು ಪ್ಲಾನ್ ಮಾಡ್ತಾ ಇದ್ದವ್ರೊ, ನಮ್ಗೋಸ್ಕರ ಶಕ್ತ ರಾಷ್ಟ್ರಗಳು ಪ್ಲಾನ್ ಮಾಡ್ತಾ ಇದ್ದಾವೊ ?

ಅನಂತಮೂರ್ತಿ : ಶಕ್ತ ರಾಷ್ಟ್ರಗಳು ಹೇಳಿದ್ದನ್ನು ನಾವು ಕೇಳಬೇಕಾಗಿಲ್ಲ.

ಡಿ. ಡೊಮಿನಿಕ್ : ಸರ್, ಅದಕ್ಕಿಂತ ಹೆಚ್ಚಾಗಿ ಇವತ್ತಿನ ಮಾಧ್ಯಮಗಳ ಮೂಲಕ ಒಂದು ಕನ್ಸೆಂಟ್ ಅನ್ನು ಕ್ರಿಯೇಟ್ ಮಾಡ್ತಾ ಇದ್ದಾರೆ...

ಅನಂತಮೂರ್ತಿ : ಮಾಡ್ತಾ ಇದ್ದಾರೆ, ಆದರೆ ಒಟ್ಟಿನಲ್ಲಿ ಜನ ಅದನ್ನ ತಿರಸ್ಕರಿಸಿದ್ದಾರೆ. ತಿರಸ್ಕರಿಸಿದವರು ಸಾಮಾನ್ಯ ಜನ. ನಿಮ್ಮ ಮಾಧ್ಯಮಗಳಿಂದ ಪ್ರಭಾವಿತವಾಗದೇ ಇರುವ ಜನ ಇದಾರಲ್ಲ, ಅವರಿಂದನೇ ನಮ್ಮ ಹೊಸ ರಾಜಕೀಯಕ್ಕೆ ಭರವಸೆ ಇರೋದು. ಅವರನ್ನ ಮುಟ್ಟೋಕೆ ಸಾಧ್ಯವಾದ್ರೆ ಹೊಸ ಮಾತುಗಳು ಬರೋದಕ್ಕೆ ಸಾಧ್ಯವಿದೆ.

ಇಂದೂಧರ : ಸರ್, ಹೊಸ ರಾಜಕೀಯ ಅಂದ್ರಿ. ಮೂರನೇ ರಾಜಕೀಯ ಶಕ್ತಿ ಉದಯ ಆಗಬೇಕು ಅನ್ನೋದು ಬಹಳ ವರ್ಷಗಳಿಂದ ನಡೀತಾ ಇದೆ. ಆದರೆ ಈ ಮೂರನೇ ರಾಜಕೀಯ ಶಕ್ತಿಗಳು ಕಾಂಗ್ರೆಸ್ ಜೊತೆನೊ ಅಥವಾ ಬಿಜೆಪಿಯ ಜೊತೆನೊ ಕರಗಿಹೋಗುವಂತಹ ವಾತಾವರಣ ನಮಗೆ ಕಾಣ್ತಾ ಇದೆ. ಆ ಹಿನ್ನೆಲೆನಲ್ಲಿ ಈ ಮೂರನೇ ರಾಜಕೀಯ ಶಕ್ತಿ ಬಗ್ಗೆ ಅದು ಯಾವ ರೀತಿ ರೂಪು ಪಡೆಯಬಹುದು ಅಥವಾ ಏನಿರಬಹುದು ಅಂತಾ ಅನಿಸುತ್ತೆ?

ಅನಂತಮೂರ್ತಿ : ಅದರ ಬಗ್ಗೆ ಸ್ವಲ್ಪ ತಾತ್ವಿಕವಾಗಿ ಹೇಳ್ತೀನೆ. ಲೋಹಿಯಾರವರು ಸಾಯೋದಕ್ಕಿಂತ ಕೆಲವು ವರ್ಷಗಳ ಹಿಂದೆ ಒಂದು ಲೇಖನ ಬರೆದ್ರು, 'Socialism in one hundred years' ಅಂತ. ಈ ಸಮಾಜವಾದ ಅನ್ನೋದು ಕೂಡಲೇ ಬಂದುಬಿಡುತ್ತೆ ಅಂತ ತಿಳ್ಕೊಂಡರೆ ನಾವು ಕಂಡಿದ್ದೆಲ್ಲವೂ ಸಮಾಜವಾದ ಅನ್ನೋದಿಕ್ಕೆ ಶುರು ಮಾಡ್ತೀವಿ. ನಮ್ಮ ಮನಸ್ಸಿನ ಸಮಾಧಾನಕ್ಕಾಗಿ. ನಮ್ಮ ನಿಜವಾದ ಕನಸಿನ ಸಮಾಜವಾದಕ್ಕೆ ಇನ್ನು ನೂರು ವರ್ಷ ಬೇಕಾಗಬಹುದು. ನೀವು ಯಾವುದಾದರೊಂದು ವಿಚಾರನ ಹುಟ್ಟುಹಾಕಿದ್ರಿ ಅಂದ್ರೆ ಅದು ತಕ್ಷಣದಲ್ಲಿ ಯಶಸ್ವಿಯಾಗದೇ ಇದ್ರೂ ವಿಚಾರಗಳು ಸಾಯೋದಿಲ್ಲ. ಅದು ಇದ್ದೇ ಮನುಷ್ಯನ ಮನಸ್ಸಿನ ಮೇಲೆ ಎಲ್ಲೋ ಒಂದು ಪರಿಣಾಮ ಮಾಡುತ್ತೆ.

ವಿಚಾರಗಳನ್ನ ಸತತವಾಗಿ ಅಂದರೆ, ಅದರ ಅಲೆಗಳನ್ನ ಹುಟ್ಟುಸ್ತಾನೆ ಇರ್ಬೇಕು. ಅದು ಕೂಡಲೇ ಫಲದಾಯಕವಾಗುತ್ತೊ, ಇಲ್ಲವೊ ಅನ್ನೋದು ನಮ್ಮ ಮನಸ್ಸಿನಲ್ಲಿ ಬರಲೇಬಾರ್ದು. ಒಂದು ಸರಿ ಆಗೋದಾದ್ರೆ, ನಿಜ ಆಗೋದಾದ್ರೆ, ಆ ಸರಿಯನ್ನ ನಿಜವನ್ನ ಯಾರು ಒಪ್ಕೊಳ್ಳಿ ಬಿಡ್ಲಿ ನಾವು ಹೇಳ್ತಾನೆ ಇರ್ಬೇಕು. ತಕ್ಷಣದ ಅಗತ್ಯಗಳಿಂದ ಪರ್ಯಾಯ ಶಕ್ತಿ ಎಲ್ಲಿ ಹುಟ್ಟುತ್ತೆ ಅಂದ್ರೆ ಪ್ರಾದೇಶಿಕವಾಗಿ ಹುಟ್ಟುತ್ತೆ. ಅದರ ಸಾಧ್ಯತೆಗಳಿದ್ದಾವೆ. ನನಗೆ ಕಾಣೋದು, ಒಬ್ಬ ಎನ್.ಟಿ. ರಾಮ್‌ರಾವ್ ತೆಲುಗುದೇಶಂ ಮಾಡ್ದಾಗ್ಲೂ ಇಂತ ಆಸೆಗಳೇ ಅದರ ಹಿಂದೆ ಕೆಲಸ ಮಾಡಿದ್ದು. ಆದರೆ ಅದು ದಿಕ್ಕು ತಪ್ಪಿ ಹೋಯಿತು. ಈಗ ಅನೇಕ ಸಾರಿ ಇಂತಹ ಆಸೆಗಳು ಕೆಲಸ ಮಾಡಿದ್ರು ಅವು ದಿಕ್ಕು ತಪ್ಪಿ ಹೋಗ್ತಾನೆ ಇವೆ.

ಮನುಷ್ಯ ಅದನ್ನು ಕಲ್ತುಕೊಂಡು ಮತ್ತೆ ಸರಿ ಹೋಗ್ತಾನೆ. ಅದರಿಂದ ಒಂದು ಕಾಂಗ್ರೆಸ್ಸೆ ಯಾತಕ್ಕಾಗಿ ಆ ಮೂರನೇ ಶಕ್ತಿ ಆಗಬಾರ್ದು. ನನಗೆ ಅನೇಕ ಸಾರಿ, ಬಿಜೆಪಿ ಹಾಗೆ ಮೂರನೇ ಶಕ್ತಿ ಆಗೋದು ಬಹಳ ಕಷ್ಟ. ಯಾಕೆಂದರೆ ಅದಕ್ಕೊಂದು ತತ್ವ ಇದೆ. ಕಾಂಗ್ರೆಸ್ಸು ಸಾಮಾನ್ಯವಾಗಿ ಜನಪರವಾದ ಒಂದು ಪಕ್ಷ. ಅದು ವಿಕಾರವಾಗಿದೆ. ಅದಕ್ಕೆ ಅನೇಕ ವಿಕಾರಗಳು, ರೋಗಗಳು ಇವೆಲ್ಲಾ ಬಂದಿದಾವೆ. ಆದರೆ ಅದು ತಳದಲ್ಲಿರೊ ಅಂತ ಜನರಿಂದನೆ ಹುಟ್ಟಿಬೆಳದಿರೊ ಪಕ್ಷ. ಅದಕ್ಕೆ ಅದು ಇವತ್ತಿಗೂ ಗಟ್ಟಿಯಾಗಿ ನಿಂತಿದೆ. ನನಗೆ ಯಾವುದೊ ಒಂದು ಭರವಸೆಯಲ್ಲಿ ಕಾಂಗ್ರೆಸ್ ಕೂಡ ಹಾಗಾಗಬಹುದೇನೊ ಅಂತ ಅನ್ನಿಸುತ್ತೆ. ಸ್ವಲ್ಪ ಮಟ್ಟಿಗೆ ನೋಡಿ, ರಾಜೀವ್‌ಗಾಂಧಿ ಇದ್ದಾಗ ಹಾಗಾಗಬಹುದೇನೊ ಅನ್ನೊ ಕೆಲವು ಲಕ್ಷಣಗಳು ಕಂಡವು. ಆದ್ದರಿಂದ ಒಂದು ಸಣ್ಣ ಗುಂಪಾದ್ರೂ ಪರವಾಗಿಲ್ಲ, ಒಂದು ಮೂರನೆ ಶಕ್ತಿ ಹುಟ್ಟು ಹಾಕೊದು ಮುಖ್ಯ. ಅದಕ್ಕೆ ನಾನು ಕಿಷನ್ ಪಟ್ನಾಯಕ್ ಅಂತವರು ಬಹಳ ಮುಖ್ಯ ಅಂತ ಅನ್ನೋದು ನನಗೆ. ಕನಸುಗಾರರು ನಮ್ಮೆಲ್ಲರ ನಡುವೆ ಯಾವಾಗಲೂ ಇರಬೇಕು. ಅವಾಗ್ಲೇನೆ ಭಾರತೀಯ ರಾಜಕೀಯ ಕ್ಷೇತ್ರಕ್ಕೆ ಒಂದು ಕಳೆ ಇರೋದು.

ಸುಮಾ : ಸರ್, ಬಿಜೆಪಿಗೆ ತತ್ವ ಇದೆ ಅಂತ ಹೇಳಿದ್ರಲ್ಲ ಅದೂ ಕೂಡ ವಿಕಾರವಾಗಿಲ್ಲವೇ?

ಅನಂತಮೂರ್ತಿ : ತತ್ವವೇ ವಿಕಾರವಾದ್ದು.

> **ಕರ್ನಾಟಕ ತಾವೊಂದು ಮಿನಿ ಇಂಡಿಯಾ ಅಂತಾನೆ ತಿಳ್ಕೊಂಡು ಕೆಲ್ಸ ಮಾಡ್ಬೇಕು. ಗೋಕಾಕ್ ಚಳವಳಿ ಕಾಲದಲ್ಲಿ ನಾನು ಅದನ್ನು ವಿರೋಧಿಸಿದ್ದೆ. ಜನ ಅದನ್ನ ತಪ್ಪು ತಿಳಿದ್ರು. ನಾನು ವಿರೋಧಿಸಿದ್ದು ಕನ್ನಡವನ್ನಲ್ಲ. ಇದ್ದಕ್ಕಿದ್ದ ಹಾಗೆ ನಾವು ಕನ್ನಡದ ಒಳಗಿರುವ ತಮಿಳ್‌ರನ್ನ, ತೆಲುಗರನ್ನ, ಮುಸ್ಲಿಂರನ್ನ ನಮ್ಮವರಲ್ಲಾ ಅಂತ ನೋಡುವ ತರದಲ್ಲಿ, ಆಮೇಲೆ ಕೆಲವು ಘಟನೆಗಳಾಯ್ತು. ಒಂದು ತಮಿಳು ಪುಸ್ತಕ ಒಬ್ಬ ಹಿಡ್ಕೊಂಡಿದ್ರೆ ಆ ಹುಡುಗನಿಗೆ ಹೊಡೆಯೊದು, ಒಬ್ಬ ಉರ್ದು ಪುಸ್ತಕ ಹಿಡ್ಕೊಂಡೋಗಿದ್ರೆ ಅವನನ್ನು ಚಚ್ಚೋದು. ಯೇ, ಇದನ್ನ ನಾನು ಸಹಿಸಲಾರೆ.**



'ಸಂವಾದ'ದಲ್ಲಿ ಡಾ॥ ಯು.ಆರ್. ಅನಂತಮೂರ್ತಿ, ಇಂದೂಧರ ಹೊನ್ನಾಪುರ, ಡಿ. ಡೊಮಿನಿಕ್ ಮತ್ತು ಬಿ.ಯು. ಸುಮಾ

ಡೊಮಿನಿಕ್ : ಅದನ್ನು ಇನ್ನು ಸ್ವಲ್ಪ ವಿಸ್ತರಿಸುತ್ತೀರಾ ಸರ್...

ಅನಂತಮೂರ್ತಿ : ನಮ್ಮ ಭಾರತ ಯಾವ ರೀತಿಯ ರಾಷ್ಟ್ರ ಆಗಬೇಕು ಅನ್ನೊ ಒಂದು ಪ್ರಶ್ನೆ ಇದೆ. ಅದು ಯೂರೋಪಿಯನ್ ರೀತಿಯ ರಾಷ್ಟ್ರ ಆಗಬೇಕು ಅಂತ ಬಯಸಿದರೆ ನಾವು ಜ್ಞಾಪಕದಲ್ಲಿಡಬೇಕಾದ್ದು ಏನಂದ್ರೆ, ಯೂರೋಪಿನ ರಾಷ್ಟ್ರಗಳೆಲ್ಲವೂ ತಾವು ಬಲವಾಗಿದ್ದು ಒಂದು ಧರ್ಮದ ಮುಖಾಂತರ, ಒಂದು ಜನಾಂಗದ ಮುಖಾಂತರ ಅಂತ. ಒಂದು ರೇಸ್ ಅಥವಾ ಒಂದು ಭಾಷೆ ಮುಖಾಂತರ. ಆದರೆ ಭಾರತ ಹಂಗ್ ಆಗೊದಿಕ್ಕೆ ಆಗೊದಿಲ್ಲ. ಯಾಕೆಂದ್ರೆ ನಮ್ಮಲ್ಲಿ ಬಹಳ ಭಾಷೆಗಳಿದ್ದಾವೆ. ಬಹಳ ಬೇರೆ ಬೇರೆ ರೀತಿ ಸಾಂಸ್ಕೃತಿಕ ನಡಾವಳಿಗಳಿದಾವೆ. ಆಮೇಲೆ ಬಹಳ ರಿಚ್ ಆಗಿದೆ ಭಾರತ. ಇದಕ್ಕೊಂದು ಕಥೆ ಹೇಳ್ತೀನಿ. ನಾನು ಅರಬ್ ರಾಷ್ಟ್ರಗಳನ್ನು ಸಂಚಾರ ಮಾಡ್ದೆ. ಮಾಡ್ದಾಗ ಎಲ್ಲ ಅರಬ್ ಲೇಖಕರೆಲ್ಲ ನನ್ನ ಕೇಳಿದ್ರು. 'ನೋಡಪ್ಪ ನಮ್ಮ ಧರ್ಮ ಒಂದೇನೆ, ಇಸ್ಲಾಂ. ನಾವ್ ಮಾತಾಡೋದೆಲ್ಲ ಅರೇಬಿಕ್ ಭಾಷೆ, ಒಂದೇ ಭಾಷೆ, ಒಂದೇ ಧರ್ಮ ಆದರೂ ನಾವು ಇಷ್ಟು ದೇಶಗಳಾಗಿ ಒಡಕೊಂಡಿದೀವಿ. ನೀವು ಎಷ್ಟು ಧರ್ಮಗಳು, ಎಷ್ಟು ಭಾಷೆಗಳು, ಹೇಗೆ ಒಂದು ದೇಶವಾಗಿದ್ದೀರಿ ಅಂತ?' ನಾವು ಒಂದು ದೇಶವಾಗಿದೀವಿ ಅನ್ನೋದಿಕ್ಕೆ ಉತ್ತರ ಏನು ಅಂದ್ರೆ, ನಾವು ಗಾಂಧಿ ಮತ್ತು ಠಾಗೋರರ ರಾಷ್ಟ್ರದ ಕಲ್ಪನೆಯನ್ನು ಒಪ್ಕೊಂಡಿದ್ರಿಂದ ನಾವು ಒಂದು ದೇಶವಾಗಿದ್ದೀವಿ, ಇಲ್ದೇ ಇದ್ರೆ ನಾವು ಒಡೆದು ಹೋಗಿರುತ್ತಿದ್ದವು. ಅಸ್ಸಾಂ ಒಡೆದು ಹೋಗಿರೋದು, ಪಂಜಾಬ್ ಒಡೆದು ಹೋಗಿರೋದು, ತಮಿಳುನಾಡು ಒಡೆದು ಹೋಗಿರೋದು, ಯಾರೂ ಇರ್ತಿರ್ಲಿಲ್ಲ.

ಡೊಮಿನಿಕ್ : ಆದರೆ ಈ ಏಕತೆ ಒಳಗೇನೆ ಉಪರಾಷ್ಟ್ರೀಯ ಪ್ರಶ್ನೆಗಳು ಇವೆಯಲ್ಲಾ... 'ಉಪ' ಅನ್ನೋದು ಪ್ರಾಬ್ಲಮ್ಯಾಟಿಕ್, ಆದರೆ ಇತರೆ ರಾಷ್ಟ್ರೀಯ ಪ್ರಶ್ನೆಗಳನ್ನು ತೆಗೆದುಕೊಂಡ್ರೆ, ಉದಾಹರಣೆಗೆ ಕರ್ನಾಟಕವನ್ನ ತೆಗೆದುಕೊಳ್ಳೊದಾದ್ರೆ, ಉತ್ತರ ಕರ್ನಾಟಕ, ಕೊಡವ, ತುಳುರಾಷ್ಟ್ರ ಈ ಪರಿಕಲ್ಪನೆಗಳೆಲ್ಲ ಹಾಗೆ ಇದ್ದಾವಲ್ಲ, ಸೊ ಅವು ಯಾವುದೇ ಸಮಯದಲ್ಲಿ ಸ್ಫೋಟಗೊಳ್ಳಬಹುದಲ್ಲವೇ?

ಅನಂತಮೂರ್ತಿ : ಅದಕ್ಕೇನೆ ಕರ್ನಾಟಕ ತಾವೊಂದು ಮಿನಿ ಇಂಡಿಯಾ ಅಂತಾನೆ ತಿಳ್ಕೊಂಡು ಕೆಲ್ಸ ಮಾಡ್ಬೇಕು. ಗೋಕಾಕ್ ಚಳವಳಿ ಕಾಲದಲ್ಲಿ ನಾನು ಅದನ್ನು ವಿರೋಧಿಸಿದ್ದೆ. ಜನ ಅದನ್ನ ತಪ್ಪು ತಿಳಿದ್ರು.

ನಾನು ವಿರೋಧಿಸಿದ್ದು ಕನ್ನಡವನ್ನಲ್ಲ. ಇದ್ದಕ್ಕಿದ್ದ ಹಾಗೆ ನಾವು ಕನ್ನಡದ ಒಳಗಿರುವ ತಮಿಳ್‌ರನ್ನ, ತೆಲುಗರನ್ನ, ಮುಸ್ಲಿಂರನ್ನ ನಮ್ಮವರಲ್ಲಾ ಅಂತ ನೋಡುವ ತರದಲ್ಲಿ, ಆಮೇಲೆ ಕೆಲವು ಘಟನೆಗಳಾಯ್ತು. ಒಂದು ತಮಿಳು ಪುಸ್ತಕ ಒಬ್ಬ ಹಿಡ್ಕೊಂಡಿದ್ರೆ ಆ ಹುಡುಗನಿಗೆ ಹೊಡೆಯೋದು, ಒಬ್ಬ ಉರ್ದು ಪುಸ್ತಕ ಹಿಡ್ಕೊಂಡೋಗಿದ್ರೆ ಅವನನ್ನು ಚಚ್ಚೋದು. ಯೇ, ಇದನ್ನ ನಾನು ಸಹಿಸಲಾರೆ. ಅಂದರೆ ಕರ್ನಾಟಕವೂ ಕೂಡ ಯಾವತ್ತೂ ತಾನೊಂದು ಮಿನಿ ಇಂಡಿಯಾ ಅನ್ನೋದನ್ನ ಮರೀಬಾರ್ದು. ಅದಕ್ಕೆ ನನಗೆ ಚಿದಾನಂದಮೂರ್ತಿ ಇಂತವರ ಆಲೋಚನಾ ಕ್ರಮಗಳು ಸರಿಯಾಗಿ ಕಾಣೋದಿಲ್ಲ. ಇದರಿಂದ ನೀವ್ ಹೇಳ್ದಂಗೆ ನಾವು ಬೇರೆ ಬೇರೆ ರಾಜ್ಯಗಳಾಗಿ ಒಡೆದುಕೊಳ್ಳದೇನೆ ರಾಜ್ಯಗಳೂ ಉಪರಾಜ್ಯಗಳಾಗಿ ಒಡೆದುಕೊಂಡು ಬಿಡುತ್ತವೆ.

ಕಡೆಯಿಂದ ಇನ್ನೊಂದು ಕಡೆಗೆ ಹೂಡಲಿಕ್ಕೆ ಸಾಧ್ಯ. ಇನ್ನೊಂದು ಕಾರಣ ಏನಂದ್ರೆ ಬಡಜನರು ಕೂಲಿ ಹುಡುಕಿಕೊಂಡು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗ್ತಾರೆ. ಬಿಹಾರಿಗಳು ಬಂಗಾಳಕ್ಕೆ ಹೋಗ್ತಾರೆ, ತಮಿಳನವರು ಇಲ್ಲಿಗೆ ಬರ್ತಾರೆ, ಬಿಜಾಪುರದವರು ಗೋವಾಕ್ಕೆ ಹೋಗ್ತಾರೆ. ಆದರಿಂದ ಇಂಡಿಯಾ ಒಡೆದುಹೋಗ್ಲಿ, ಬೇರೆ ಬೇರೆ ರಾಜ್ಯಗಳಾಗ್ಲಿ ಅನ್ನೋದನ್ನ ನಾನು ಸಂಪೂರ್ಣ ತಿರಸ್ಕರಿಸ್ತೀನಿ. ಹಾಗೇನೆ ಇಂಡಿಯಾ ಒಂದು ಆಗಿರೋಕ್ಕೋಸ್ಕರವಾಗಿ ಒಂದು ಧರ್ಮ, ಒಂದು ಭಾಷೆ ಆಗ್ಲಿ ಅನ್ನೋದನ್ನೂ ತಿರಸ್ಕರಿಸ್ತೀನಿ.

ಸುಮಾ : ಈ ಹಿನ್ನೆಲೆಯಲ್ಲಿ ಸಮಾನ ನಾಗರಿಕ ಸಂಹಿತೆ ಬಗ್ಗೆ ಏನು ಹೇಳ್ತೀರಿ ಸರ್ ?

ಅನಂತಮೂರ್ತಿ : ಐ ಆ್ಯಮ್ ಫಾರ್ ಯೂನಿಫಾರ್ಮ್ ಸಿವಿಲ್ ಕೋಡ್. ಈಗ ತಾತ್ವಿಕವಾಗಿ ಪ್ರಶ್ನೆ ಏನಂದ್ರೆ ಈಗ ಮುಸ್ಲಿಮರಿಗೆ ಯೂನಿಫಾರ್ಮ್ ಸಿವಿಲ್ ಕೋಡ್ ಬೇಕು ಅಂದಾಗ ನಾವು ಅದನ್ನ ಹಾಕಬೇಕಾಗುತ್ತೆ. ಆದರೆ ನಾವು ಮುಸ್ಲಿಂರನ್ನು ಎಷ್ಟು ಹೆದರಿಸಿ ಇಟ್ಕೊಂಡಿದೀವಿ ಈ ದೇಶದಲ್ಲಿ ಅನ್ನೋದು ನಮಗೆ ಆ ಕೋರ್ಟ್ ಕೇಸ್‌ನಲ್ಲೇ ಗೊತ್ತಾಗುತ್ತೆ. ಭಯಗ್ರಸ್ಥರಾಗಿದ್ದಾಗ ಅಂಜುಕೊಳ್ಳೊದಿಕ್ಕೆ ಶುರು ಮಾಡ್ತೀವಿ. ಅಂದ್ರೇನಪ್ಪ ಅಂದ್ರೆ ಒಂದು ಸಣ್ಣ



ಫ್ಯೂಡಲಿಸಂಗಿಂತ ಜಾಗತೀಕರಣ ಹೆಚ್ಚು ಅಪಾಯಕಾರಿ

ಅದರಿಂದ ಯಾವ ಧೋರಣೆಯಿಂದ ನಾವು ಇದ್ದಾಗ ನಾವು ಒಂದು ರಾಷ್ಟ್ರವಾಗಿರೋದಿಕ್ಕೆ ಸಾಧ್ಯ ಎಂದರೆ ಗಾಂಧಿ ಮತ್ತು ಠಾಗೋರ್‌ರಿಂದ ಪ್ರಣೀತವಾದ ಯಾವ ಒಂದು ಧರ್ಮಕ್ಕೂನೂ ಇದೇ ಒಂದೇ ಧರ್ಮ ಅನ್ನೋ ಒಂದಕ್ಕೆ ಜಾಗವಾನ್ನ ಕೊಡದ ಯಾವ ಒಂದು ಭಾಷೆಗೂ ಇದು ಒಂದೇ ಭಾಷೆ ಮುಖ್ಯ ಅಂತ ಅನ್ನದೇ ಇರುವ ಯಾವ ಒಂದು ಸಾಂಸ್ಕೃತಿಕ ಆಚರಣೆಗೂ ಇದು ಮೇಲ್ ರೀತಿಯ ಆಚರಣೆ ಕೆಳ ರೀತಿಯ ಆಚರಣೆ ಅನ್ನುವ ಭೇದ ಭಾವ ಇಲ್ಲದೆ ಇರುವ ಮಾಡಿದರೆ ಯಾವುದು ಅರಬ್ ರಾಷ್ಟ್ರಗಳಿಗೆ ಸಾಧ್ಯವಾಗ್ಲಿಲ್ಲ ಅದನ್ನು ನಾವು ಸಾಧ್ಯ ಮಾಡಿದ್ದೀವಿ. ಒಂದೇ ಧರ್ಮ, ಒಂದೇ ಭಾಷೆ ಇಟ್ಕೊಂಡು ಅವರಿಗೆ ಒಟ್ಟಾಗೊಕ್ಕೆ ಆಗ್ಲಿಲ್ಲ.

ಡೊಮಿನಿಕ್ : ಆದರೆ ಈ ರೀತಿ ಒಟ್ಟಾಗೋದು ಅನ್ನುವುದೇ ಭಿನ್ನತೆಯನ್ನ ಕಾಪಾಡ್ಕೊಳ್ಳೊದು ಅಂತ ಆಗುತ್ತಲ್ವಾ ಸರ್ ?

ಅನಂತಮೂರ್ತಿ : ಒಟ್ಟಾಗಿರೋದ್ರಿಂದ ಬಹಳ ಅನುಕೂಲಗಳಿವೆ. ನಾವು ಇದನ್ನು ತಿಳವಳಿಕೆ ಇಲ್ಲದ್ದೆನೆ ಕೆಲವು ಸಾರಿ ಮಾತಾಡಿಬಿಡ್ತೀವಿ. ನಾವು ಒಂದು ರಾಷ್ಟ್ರ ಅಲ್ಲದೆ ಇದ್ದಿದ್ರೆ ನಾವು ಸ್ವತಂತ್ರ ಆದ ಕೂಡಲೇನೆ ಎಲ್ಲರಿಗೂ ಮತ ಕೊಡಬೇಕು ಅನ್ನುವ ಒಂದು ನಿರ್ಧಾರವನ್ನ ತಗೊಂಡ್ವಿ ಇದು ಮೊದಲನೆ ವಿಷಯ, ಎರಡನೆದು ಹರಿಜನ ದೇವಾಲಯ ಪ್ರವೇಶದ ಬಿಲ್ ಇದ್ಯಲ್ಲ ಇವತ್ತು ಅದನ್ನು ತರೋಕ್ಕೆ ಆಗ್ತಿರ್ಲಿಲ್ಲ. ಅದನ್ನ ಅವತ್ತು ತರೋಕೆ ಆಯ್ತು. ಯಾಕೆ ತರೋಕೆ ಆಯ್ತು ಅಂದ್ರೆ ನಾವು ಒಂದು ರಾಷ್ಟ್ರ. ಇವತ್ತಿಗೂ ಕೆಲವು ರೀತಿಯ ಅನ್ಯಾಯಗಳನ್ನ ಪ್ರತಿಭಟಿಸಬೇಕಾದ್ರೆ ನಾವು ಭಾರತ ಅನ್ನೋ ಒಂದು ಭಾವನೆ ಇರಬೇಕು. ಒಂದಾಗಿರೋದ್ರಿಂದ ಇನ್ನೊಂದು ಲಾಭಾನೂ ಇದೆ. ಬಂಡವಾಳವನ್ನ ಒಂದು

ಗುಂಪುಗಳಾಗ್ತೀವಿ. ಮುಸ್ಲಿಮರು ಹಂಗ್ ಆಗಿಬಿಟ್ಟಿದ್ದಾರೆ. ಬಹುಶಃ ಪಾಕಿಸ್ತಾನದಲ್ಲಿ ಇರೋ ಮುಸ್ಲಿಂ ಇದಾರಲ್ಲ ಅವರು ಹೆಚ್ಚು ಪ್ರೊಗ್ರೆಸಿವ್ ಆಗಿರ್ತಾರೆ. ಯಾಕೆಂದ್ರೆ ಮೆಜಾರಿಟಿ ಅದು. ನಾನು ಬೇರೆ ಬೇರೆ ಕಡೆ ಮುಸ್ಲಿಂರನ್ನು ನೋಡಿದಿನಿ, ಬಹಳ ಮುಕ್ತವಾಗಿ ಯೋಚನೆ ಮಾಡ್ತಾರೆ, ಭಾರತದಲ್ಲಿ ಅವರು ಮುಕ್ತವಾಗಿ ಆಲೋಚನೆ ಮಾಡುವ ಹಾಗೆ ಒಂದು ವಾತಾವರಣವನ್ನ ಸೃಷ್ಟಿಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ಅವರು ಮುಕ್ತರಾದ ಕೂಡ್ಲೇನೆ ಅದನ್ನು ಅವರು ಕೇಳ್ತಾರೆ ಅನ್ನಿಸುತ್ತೆ. ನಾವು ಇನ್ನೊಂದು ನೆನಪಿಡಬೇಕು. ಹಿಂದೂಗಳು ನಾವೆಲ್ಲ ಬಹಳ ಮುಂದಿದ್ದೀವಿ, ಮುಸ್ಲಿಮರು ಎಲ್ಲ ಹಿಂದಿದ್ದಾರೆ ಅಂತಂತೀವಿ. ಅದಲ್ಲ ಮಹಮದ್ ಕಾನೂನನ್ನು ತರೂವಾಗ ಮಹಿಳೆಯರಿಗೆ ಏನೇನ್ ರೈಟ್ಸ್ ಇದೆ ಅನ್ನೊದನ್ನ ಸರಿಯಾಗಿ ಮಾತಾಡಿದಾನೆ, ಹಾಗನೆ ಕ್ರಿಶ್ಚಿಯನ್ನರಲ್ಲಿ ಮದುವೆ ಅಂದ್ರೆ, ಹಿಂದೂಗಳಲ್ಲಿ ಮದುವೆ ಅಂದ್ರೆ ಅದು ಒಡೆಯೊ ಹಾಗಿಲ್ಲ ಇಲ್ಲಿ, ಆದರೆ ಮುಸ್ಲಿಂರಲ್ಲಿ ಮದುವೆ ಒಂದು ಬರೀ ಒಪ್ಪಂದ, ಆದ್ರಿಂದ ಅವು ಏನ್ ಹೇಳ್ತಾರೆ ಅಂದ್ರೆ ನಾವು ಯಾವ ರೀತಿಯ ಪರ್ಸನಲ್ ಕೋಡ್ ಇರಬೇಕು ಅನ್ನೊದನ್ನ ನಾವು ನಮ್ಮ ಗ್ರಂಥದಲ್ಲಿ ಕರೆಕ್ಟಾಗಿ ಬರೆದಿಟ್ಟಾಗಿದೆ, ನೀವು ಯಾರ್ ಅದನ್ನ ಕೇಳೋದಿಕ್ಕೆ ಅಂತಾರೆ. ಅದು ಅವರ ವಾದ. ನಾನು ಆ ವಾದವನ್ನು ಗೌರವಿಸ್ತೇನೆ. ನಿಮಗೆ ಅದರ ಒಳಗೆ ಇರೋದಿಕ್ಕೆ ಕಷ್ಟ ಆಗ್ತಾ ಇದ್ದರೆ ನೀವು ಯಾಕೆ ಸ್ವಲ್ಪ ಖುರಾನಿನ ತತ್ವವನ್ನೇ ಯಾಕ್ ಬದಲಾವಣೆ ಮಾಡ್ಕೊ ಬಾರ್ದು, ಮಾಡ್ಕೊಬೇಕು ಅಂತ ಅನ್ನಿಸಬಹುದು ಅವರಿಗೆ. ಈಗ ಅದು ಯಹೂದ್ಯರಿಗೆ ಅನ್ನಿಸಿದೆ. ಹಿಂದೂಗಳಿಗೆ ಅನ್ನಿಸಿದೆ. ಬೇಕಾದಷ್ಟು ಕಡೆ ಮುಸ್ಲಿಂರಿಗೂ ಅನಿಸಿದೆ. ಮುಸ್ಲಿಮರು ಚಲನಶೀಲ ವಾಗೊದನ್ನ ನಾವು ಭರವಸೆಯಿಂದ, ಪ್ರೀತಿಯಿಂದ

ಕಾಯಬೇಕು ಅಷ್ಟೆ. ಅದನ್ನು ಅವರ ಮೇಲೆ ಹೇರಲಿಕ್ಕೆ ಹೋಗ್ಬಾರ್ದು. ಅದರಿಂದ ರಿಆ್ಯಕ್ಷನ್ ಬರೊಲ್ಲ.

ಇಂದೂಧರ : ಪರ್ಯಾಯ ರಾಜಕಾರಣದ ಪ್ರಯತ್ನದ ಬಗ್ಗೆ ನಿಮ್ಮ ಅಭಿಪ್ರಾಯ...

ಅನಂತಮೂರ್ತಿ : ೨೦-೩೦ ವರ್ಷಗಳ ಹಿಂದೆ ಜಾತಿ ಮತ್ತು ವರ್ಗ ಅಂತ ಮಾತಾಡ್ದಾಗ ನಮ್ಮ ಅನೇಕ ಸತ್ಯಗಳನ್ನ ನಾವು ತಿಳಿದುಕೊಳ್ಳೊವಾಗ ಜಾತಿಯೇ ಮುಖ್ಯವಾಗಿ ಸತ್ಯಗಳನ್ನ ತಿಳ್ಕೊಳ್ಬೇಕಾಗಿತ್ತು. ವರ್ಗಗಳನ್ನೇ ಮುಖ್ಯವಾಗಿಟ್ಟುಕೊಂಡು ಸತ್ಯಗಳನ್ನ ತಿಳ್ಕೊಳ್ಳೊಕೆ ಆಗ್ತಿರ್ಲಿಲ್ಲ. ಈಗ ಗ್ಲೋಬಲೈಝೇಷನ್ ಆಗ್ತಿದ್ದಂಗೆ ಇಂತವೆಲ್ಲ ಕಡಿಮೆ ಆಗ್ತಾ ಇದೆ. ಈಗ ವರ್ಗ ಮುಖ್ಯ. ಆದರೆ ಜಾತಿ ಹೋಗಿದೆ ಅಂತ ಅಲ್ಲ, ಅದೂ ಇದೆ. ಆದ್ದರಿಂದ ಜಾತಿ ಮತ್ತು ವರ್ಗ ಇವೆರಡರ ಹಿಂದಿನ ತತ್ವವನ್ನು ಗ್ರಹಿಸುವಂಥ ಒಂದು ಪರ್ಯಾಯ ರಾಜಕೀಯದ ಅಗತ್ಯ ಇದೆ. ಆದ್ದರಿಂದ, ರೈತರು ಮತ್ತು ದಲಿತರು - ಇವೆರಡೂ ಶಕ್ತಿಗಳು ಒಂದಾಗಿಬಿಟ್ರೆ, ಇದು ಬಹುಶಃ ಮೂರನೇ ಶಕ್ತಿಗೆ ಅಡಿಪಾಯ ಆಗುತ್ತೆ.

ಸುಮಾ : ಆದರೆ ಮಹಾರಾಷ್ಟ್ರದಲ್ಲಿ, ಆಂಧ್ರದಲ್ಲಿ, ಒರಿಸ್ಸಾದಲ್ಲಿ, ಬಂಗಾಳದಲ್ಲಾಗಲೀ ದಲಿತರು ಹೋರಾಡುತ್ತಿರೋದೆ ಫ್ಯೂಡಲಿಸಂ ವಿರುದ್ಧ. ಈ ನಿಟ್ಟಿನಲ್ಲಿ ಈ ಅಲೆಯನ್ಸ್ ಹೇಗೆ ವಿನ್ ಆಗ್ಬೋದು ಅನ್ಸುತ್ತೆ?

ಅನಂತಮೂರ್ತಿ : ನೋಡಿ. ಈ ಫ್ಯೂಡಲಿಸಂ ಇದೆಯಲ್ಲ, ಅದು ಕೂಡ ನಿನ್ನೆಯ ಮಾತಾಗಿ ಹೋಯಿತು. ಫ್ಯೂಡಲಿಸಂ ಎಂದರೆ ಏನು ಅದು ಒಂದು ಮನಸ್ಸಿನ ಆ್ಯಟಿಟ್ಯೂಡ್ ಆಗಿದೆ. ಒಂದು ಧಿಮಾಕು. ಅದರಿಂದ ನಮಗೆ ನೋವಾಗುತ್ತೆ ಕಷ್ಟವಾಗುತ್ತೆ, ಅದು ಒಂದು ರೀತಿ ರೋಪ್

ಹಾಕ್ದಂಗೆ, ಧಿಮಾಕ್ ಮಾಡ್ದಂಗೆ, ಫ್ಯೂಡಲಿಸಂ ಅಂತ ಅನ್ನೊದು ಆ ಶಬ್ದ ಇರೋದ್ರಿಂದ ಎಲ್ಲದೂ ಅದರ ಮುಖಾಂತರ ಭಯಂಕರವಾದ್ದು ಅಂತ ತಿಳ್ಕೊಳ್ಳದಲ್ಲ ಇದು. ಭಯಂಕರವಾದ್ದು ಯಾವುದಪ್ಪಾ ಅಂದ್ರೆ ಗ್ಲೋಬಲೈಝೇಷನ್‌ನಿಂದ ಬರುವ ಒಂದು ಹೊಸ ರೀತಿಯ ಸಮಾಜ ವ್ಯವಸ್ಥೆ ಇದೆಯಲ್ಲಾ, ಅದನ್ನ demonic ಅಂತೀನಿ ನಾನು. ಅದಕ್ಕೆ ಒಂದು ರಾಕ್ಷಸೀಯವಾದ ಗುಣ ಇದೆ. ಮತ್ತು ಪ್ರಾಯಶಃ ನಮ್ಮಲ್ಲಿ ಅನೇಕ ಜನರು ಅಮಾನವೀಯವಾಗಿರೊ ಸ್ಥಿತಿಯೂ ಬಂದಿದೆ. ಅಮಾನವೀಯವಾದ, ಬಹಳ ಕ್ರೂರವಾಗಿರುವ ಕಾರ್ಯಕ್ರಮ ನಡೆಯುವ, ಈಗ ಬುಷ್ ಯಾವ ರೀತಿಯ ಒಂದು ವಾರ್ ಮಾಡಿದ್ದಾನಲ್ಲ ಆ ರೀತಿಯದು. ಇಂತಹ ಸ್ಥಿತಿಯಲ್ಲಿ ಇವರೇ ನಿಜವಾದ ಫ್ಯೂಡಲ್ ಅಲ್ವಾ. ಅಲ್ಲಾ ಅಂತ ಅನ್ನೋಕೆ ಬರಲ್ಲ. ಇವೆಲ್ಲ ಮೂರ್ಖತನ, ಇವೆಲ್ಲಾ ಹೋಗುತ್ತೆ ಅಂತ ಅನ್ಸುತ್ತೆ ನನಗೆ. ಅದನ್ನೆ ಮುಂದಿಟ್ಟುಕೊಂಡು ರಾಜಕೀಯ ಮಾಡೋದರ ಅಗತ್ಯ ಇವತ್ತು ಇಲ್ಲ.

ಡೊಮಿನಿಕ್ : ಬದುಕಿನಲ್ಲಿ ಇಂತಹ ಒಂದು ಸಾಧ್ಯತೆ ತೀವ್ರವಾಗಿ ಇದೆ ಅಂತ ಅನ್ಸುತ್ತೆ ಅಲ್ವೆ ಸರ್ ?

ಅನಂತಮೂರ್ತಿ : ಇದೆ. ಮತ್ತು ಇದರ ಅಗತ್ಯ ಇನ್ನೂ ಯಾಕಿದೆ ಅಂತ ಹೇಳ್ತೀನಿ. ನಾವು ಜಾತಿ ಮತ್ತು ವರ್ಗ ಎರಡನ್ನೂ ಒಟ್ಗೇ ತಗೊಬೇಕು. ಕೇವಲ ಜಾತಿಯನ್ನ ತೆಗೆದುಕೊಂಡರೆ ಆಗೊದಿಲ್ಲ. ಈಗ ಅಂಬೇಡ್ಕರ್ ದಲಿತರನ್ನ ಎಚ್ಚರ ಮಾಡುವ ಒಂದು ಸ್ಥಿತಿಯಲ್ಲಿ ದಲಿತರು ಬಹಳ ತಗ್ಗಿನ ಸ್ಥಿತಿಯಲಿದ್ದರು. ಈಗ ದಲಿತರಲ್ಲಿ ಒಂದು ಮಿಡ್ಲ್ ಕ್ಲಾಸ್ ಆಗಿದೆ. ಎಲ್ಲಾ ಜಾತಿಗಳಲ್ಲೂ ಒಂದು ಮಧ್ಯಮ ವರ್ಗ ಇದೆ. ಮಧ್ಯಮವರ್ಗದ್ದೇ ಒಂದು ತರಹ ಯೋಚನೆ ಇದೆ. ಮಿಡ್ಲ್ ಕ್ಲಾಸ್ ಕ್ರಿಯೇಟ್ ಆಗಿರೋದ್ರಿಂದ ಇವತ್ತು ಎಲ್ಲಾ ದಲಿತ ಹೋರಾಟಗಳು ಕೂಡ ಆ ಮಿಡ್ಲ್ ಕ್ಲಾಸ್ ಒಳಗೆ ಬಂದವರ ಹಿತಾಸಕ್ತಿಗಳನ್ನ ಕಾಯುವ ಹೋರಾಟಗಳೇ ಆಗೊದಿಕ್ಕೆ ಶುರುವಾಗಿದೆ. ಇವೆಲ್ಲಾ ಹೆಚ್ಚೆಚ್ಚು ಆಗೊಕೆ ಶುರುವಾದ ಕೂಡಲೇನೆ ನೀವು ದಲಿತರಲ್ಲೇನೆ ಇವರು ಎಡ, ಇವರು ಬಲ ಅನ್ನೊದಿಕ್ಕೆ ಶುರುವಾಗಿದೆ. ಅವರಿಗೆ ಹೆಚ್ಚು ಸಿಕ್ತು ಇವರಿಗೆ ಹೆಚ್ಚು ಸಿಗ್ಲಿಲ್ಲ ಅನ್ನೊದಿಕ್ಕೆ ಶುರುವಾಗಿದೆ. ಇದೆಲ್ಲ ಬೆಳಿತಾ ಇರೊ ಕಾಲ್ದಲ್ಲಿ ನಿಜವಾದ ದಲಿತರನ್ನು ಮುಟ್ಟೊ ಕಾರ್ಯ ಇದೆಯಲ್ಲಾ ಅದು ಬಹಳ ಮುಖ್ಯವಾಗಿದೆ. ನಿಜವಾದ ದಲಿತರು ಯಾರು ? ಇವತ್ತು ಹಳ್ಳಿಗಳಲ್ಲಿ ಒಕ್ಕಲಿಗರೂ ಬೈತಾರೆ, ದಲಿತರೂ ಬೈತಾರೆ, ನಿತ್ಯ ಜಗಳ ಆಡಿಕೊಂಡು ಇರ್ತಾರೆ. ಇದನ್ನು ಅನೇಕ ಸಾರಿ ನಾನು ದೇವನೂರು ಮಹದೇವ ಹತ್ತಿರ ಮಾತಾಡೊವಾಗ ಗಮನಿಸಿದ್ದೀನಿ. ಅವನು ಯಾವಾಗ್ಲೂ ನನಗೆ ಹೇಳುತಿದ್ದ. ನಮಗೂ, ಗೌಡರಿಗೂ, ಲಿಂಗಾಯಿತರಿಗೂ ಸಾಂಸ್ಕೃತಿಕವಾಗಿ ಅಂತ ವ್ಯತ್ಯಾಸವೇ ಇಲ್ಲ ಸಾರ್ ಅಂತ. ನೋಡೊಕೂ ಒಂದೇ ತರ ಇದ್ದೀವಿ ನಾವು. ಮಾತಾಡೋದು ಒಂದೇ ತರ ನಾವು. ಭಾಷೆ, ಆಚಾರ-ವಿಚಾರ ಎಲ್ಲಾ ಒಂದೇ. ಇದು ಒಂದು ಉದಾತ್ತವಾದ ಭಾವನೆ.

ಇಂದೂಧರ : ಪಯಾರ್ಯ ರಾಜಕಾರಣ ಯಾವ ದಿಕ್ಕಿನಲ್ಲಿ ಹೋದರೆ ಒಳ್ಳೆದು ಅಂತ ಅನಿಸುತ್ತೆ ನಿಮಗೆ. ವಿಸ್ತರಿಸಿ ಹೇಳಿ.

ಅನಂತಮೂರ್ತಿ : ಒಂದು ಪರ್ಯಾಯ ರಾಜಕೀಯ ಶಕ್ತಿಯನ್ನ ಮಾಡೋಕೆ ಹೊರಟಾಗ ಅದು ಬರೀ ಸಂಘರ್ಷವೊಂದೇ ಅಲ್ದೇನೆ ಕಟ್ಟುವ ಕೆಲಸದಲ್ಲೂ ಒಂದಾಗ್ಬೇಕು ಅನ್ನಿಸುತ್ತೆ. ಈಗ ಹಳ್ಳಿಯ ಶಾಲೆಗಳ ಅಭಿವೃದ್ಧಿ ಪಡಿಸೋದು, ಪಂಚಾಯಿತಿಗಳಲ್ಲಿ ನಡೆಯೊ ಅಂತ ಕೆಲಸಗಳಲ್ಲಿ ಹೆಚ್ಚು ಪಾಲ್ಗೊಳ್ಳೋದು, ಮಕ್ಕಳು ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ತನಕ ಆದರೂ ಓದಿಯೇ ಓದುತ್ತಾರೆ ಅನ್ನೋದನ್ನ ಗ್ಯಾರಂಟಿ ಮಾಡ್ಕೊಳ್ಳೋದು ಒಂದು. ಆ ರೀತಿ. ಆಮೇಲೆ ಆರೋಗ್ಯದ ವಿಷಯದಲ್ಲಿ ಜನರಿಗೆ ಸಹಾಯ ಮಾಡೋದು ಒಂದು. ನೋಡಿ ಗಾಂಧೀಜಿ ಸ್ವಾತಂತ್ರ್ಯದ ಹೋರಾಟವನ್ನು ಹಂಗೆ ನಡೆಸಿದ್ದು. ಅದಕ್ಕೆ ಒಂದು ಖಾದಿ ಅಂತ ಒಂದು ಗ್ರಾಮಸೇವೆ ಇವೆಲ್ಲ ಇಟ್ಟುಕೊಂಡೇ ಮಾಡುದ್ರು ಅವರು. ನಾವು ಬರೀ ಸಂಘರ್ಷ ಒಂದೇ ಮಾಡೋಕೆ ಹೋದ್ರೆ ಈ ಒಟ್ಟಾಗಿ ಮಾಡೋದಿದೆಯಲ್ಲ ಅದು ಆಗೊಲ್ಲ. ಬಹುಶಃ ಪರ್ಯಾಯ ರಾಜಕೀಯ ಹೆಚ್ಚು ಈ ರೀತಿಯಲ್ಲಿ ತನ್ನನ್ನ ತೊಡಗಿಸ್ಕೊಬೇಕು ಅನ್ನಿಸುತ್ತೆ.

ದಿನನಿತ್ಯದ ಬದುಕಿನ ವಿಷಯಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಡೋದು ಬಹಳ ಮುಖ್ಯ ಅನ್ಸುತ್ತೆ ನನಗೆ.



ಕಟ್ಟುವ ಕೆಲಸವೇ ಪರ್ಯಾಯ ರಾಜಕಾರಣ

ಈಗ ದಲಿತರಲ್ಲಿ ಒಂದು ಮಿಡ್ಲ್ ಕ್ಲಾಸ್ ಆಗಿದೆ. ಎಲ್ಲಾ ಜಾತಿಗಳಲ್ಲೂ ಒಂದು ಮಧ್ಯಮ ವರ್ಗ ಇದೆ. ಮಧ್ಯಮವರ್ಗದ್ದೇ ಒಂದು ತರಹ ಯೋಚನೆ ಇದೆ. ಮಿಡ್ಲ್ ಕ್ಲಾಸ್ ಕ್ರಿಯೇಟ್ ಆಗಿರೋದ್ರಿಂದ ಇವತ್ತು ಎಲ್ಲಾ ದಲಿತ ಹೋರಾಟಗಳು ಕೂಡ ಆ ಮಿಡ್ಲ್ ಕ್ಲಾಸ್ ಒಳಗೆ ಬಂದವರ ಹಿತಾಸಕ್ತಿಗಳನ್ನ ಕಾಯುವ ಹೋರಾಟಗಳೇ ಆಗೊದಿಕ್ಕೆ ಶುರುವಾಗಿದೆ.

ಭ್ರಷ್ಟಾಚಾರ ಬಹಳ ಕಾಮನ್ ಆಗಿ ಹೋಗಿದೆ. ಇದು ವ್ಯವಸ್ಥೆಯ ಒಳಗೆನೇ ಇರುವ ಒಂದು ದೋಷ ನೋಡಿ. ಇದರ ವಿರುದ್ಧ ಹೋರಾಡೊದಿಕ್ಕೆ ತುಂಬಾ ತಾಳ್ಮೆ ಬೇಕು. ಆ ದಿಕ್ಕಿನಲ್ಲಿ ಹೋಗಬೇಕು ಅನ್ನಿಸುತ್ತೆ.

ಇನ್ನು ಮೂರನೆಯ ವಿಷಯ : ಇದು ಇಷ್ಯೂ ಬೇಸ್ಡ್ ಆಗಿದ್ದಾಗ ಯಾವ ರಾಜಕೀಯ ಪಕ್ಷ ಕೂಡ ನಿಮ್ಮ ಜೊತೆ ಕೆಲ್ಸ ಮಾಡೋಕೆ ಸಾಧ್ಯ. ನೀವು ತೃತೀಯ ಶಕ್ತಿ ಅಂತ ಅನ್ನೊ ಶಬ್ದನೂ ಉಪಯೋಗಿಸದೇ ಒಂದು ಪರ್ಯಾಯ ಜನ ಶಕ್ತಿಯನ್ನ ಉಂಟು ಮಾಡಬೇಕು. ಆಮೇಲೆ ನಿಮ್ಮ ಜೊತೆ ಕೆಲಸ ಮಾಡೊವ್ರಿಗೆ ಸಣ್ಣ ಸಣ್ಣ ಅಧ್ಯಯನ ಕೂಟಗಳನ್ನ ಏರ್ಪಡಿಸಬೇಕು, ಅಧ್ಯಯನ ಕೂಟ ಅಂತ ಅಂದ್ರೆ ಒಂದು ಹತ್ತು ಹದಿನೈದು ಜನ ವಾರಕ್ಕೆ ಒಂದ್ಸರಿ ಆದ್ರೂ ಬಂದು ಯಾವುದೋ ಒಂದು ಹೊಸ ಪುಸ್ತಕವನ್ನ ಓದುದೊ ಒಂದು ಚರ್ಚೆ ಮಾಡೊದು. ಇದರಿಂದ ಒಂದು ದೊಡ್ಡ ಕಲ್ಚರಲ್ ಚೇಂಜ್ ಆಗೋಕೆ ಸಾಧ್ಯ.

ಇನ್ನೊಂದು, ನೀವು ಒಟ್ಟಾಗಿ ಕೆಲಸ ಮಾಡುವಾಗ ದಲಿತರ ಹುಡುಗರು ಹುಡುಗಿಯರು ಡಿಸ್‌ಪರ್ಸ್ ಆಗಿರಬೇಕು. ಬೇರೆ ಬೇರೆ ವಾತಾವರಣದಿಂದ ಬಂದಿರಬೇಕು. ಬರೀ ಇಂಜಿನಿಯರಿಂಗ್, ಮೆಡಿಸನ್ ಇದಕ್ಕೆ ಹೋಗಬಾರ್ದು. ಅವರು ಹಿಸ್ಟ್ರಿಗೆ ಬರಬೇಕು. ಫಿಝಿಕ್ಸ್‌ಗೆ ಬರೆಬೇಕು, ಮ್ಯಾಥಮೆಟಿಕ್ಸ್‌ಗೆ ಬರಬೇಕು... ಅದು ಒಂದು ಚಳವಳಿಯೇ ಆಗಬೇಕು. ಅದು ಎಲ್ಲ ಜಾತಿಗಳಲ್ಲೂ ಆಗಬೇಕು. ಈಗ ಲಿಂಗಾಯಿತರು, ಒಕ್ಕಲಿಗರು ಮೇಲ್ ಬಂದಿದ್ದಾರೆ ಅಂದ್ರೆ ಒಂದ್ ಕಾಲದಲ್ಲಿ ಯಾವ್ಯಾವ ಮುಖ್ಯವಾದ ಜಾಗದಲ್ಲಿ ಬ್ರಾಹ್ಮಣರು ಇದ್ದರೋ ಆ ಎಲ್ಲ ಜಾಗಕ್ಕೂ ಬರೋವಷ್ಟು ಸಮರ್ಥರಾಗಿಬಿಟ್ರು ಲಿಂಗಾಯಿತರು. ಒಂದು ಉದಾಹರಣೆ ಕೊಡ್ತಿನಿ. ನಾನು ಹುಡುಗ ಆಗಿದ್ದಾಗ ಎಲ್ಲಾ ಯೂನಿವರ್ಸಿಟಿ ಡಿಪಾರ್ಟ್‌ಮೆಂಟ್ಸ್ ಹೆಡ್ಸ್ ಎಲ್ಲ ಬ್ರಾಹ್ಮಣರು, ಸ್ವಲ್ಪ ನಾನು ದೊಡ್ಡವನು ಆಗುತ್ತಿದ್ದಾಗೆನೆ ಎಲ್ಲ ಹೆಡ್ಸ್ ಲಿಂಗಾಯಿತರು ಆಗಿಬಿಟ್ಟರು. ಬ್ರಾಹ್ಮಣರ ಜಾಗಕ್ಕೆ ಲಿಂಗಾಯಿತರು ಬಂದರು. ಯಾಕೆಂದ್ರೆ ಲಿಂಗಾಯಿತ ಮಠಗಳು ಅಷ್ಟು ಒಳ್ಳೆ ಶಿಕ್ಷಣವನ್ನು ಕೊಟ್ರು. ಅವು ಕ್ರಿಶ್ಚಿಯನ್ ಮಿಷನರಿಗಳು ಮಾಡೊ ಅಂತ ಕೆಲಸವನ್ನು ಮಾಡಿದ್ದವು. ದಲಿತರಲ್ಲಿ ಇನ್ನೂನು ಅಷ್ಟು ಡಿಸ್‌ಪರ್ಸ್ ಆಗಿಲ್ಲ. ಕೆಲವು ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸಕ್ಕೆ ಅನೌನ್ಸ್ ಮಾಡಿದರೆ ಅವರು ಸಿಗೊದೆ ಇಲ್ಲ. ಪರ್ಯಾಯ ರಾಜಕಾರಣ ಈ ರೀತಿಯ ಕೆಲಸವನ್ನ ಶುರು ಮಾಡಬೇಕು.

ಸುಮಾ : ಇಂತಹ ಒಂದು ಹೋರಾಟವನ್ನು ಪೊಲಿಟಿಕ್ಸ್‌ನಲ್ಲಿ ಆಧ್ಯಾತ್ಮಿಕತೆಗೆ ಆದ್ಯತೆ ಕೊಡುವುದರ ಮೂಲಕ ಸಾಧ್ಯವಾಗಿಸಬಹುದಾ ?

ಅನಂತಮೂರ್ತಿ : ಇದನ್ನೇ ಆಧ್ಯಾತ್ಮ ಅಂತೀನಿ ನಾನು. ಆಧ್ಯಾತ್ಮಕ್ಕೆ ವಿಶಾಲವಾದ ಒಂದು ಅರ್ಥ ಇದೆ. ಆಧ್ಯಾತ್ಮ ಅಂದ್ರೆ ನನ್ನ ಸದ್ಯವನ್ನ ಯೋಚನೆ ಮಾಡದೇ ಇರೋದೆ

ಆಧ್ಯಾತ್ಮ. ಲೋಹಿಯಾ ಅದನ್ನ ಬಹಳ ಚೆನ್ನಾಗಿ ಹೇಳ್ತಾರೆ. Religion is politics in eternity, politics is religion today ಒಂದು ಟಾಲ್‌ಸ್ಟಾಯ್ ಕಾದಂಬರಿಯನ್ನ ಕುಳಿತು ಓದುವುದಿದೆಯಲ್ಲ ಅದು ಆಧ್ಯಾತ್ಮಿಕತೆ. ಒಂದು ಒಳ್ಳೆ ಪದ್ಯ ಓದೊದ್ ಇದ್ಯಲ್ಲಾ ಅದು ಆಧ್ಯಾತ್ಮಿಕ ಧ್ಯಾನ. ಒಂದು ಸುಂದರವಾದ ಚಿತ್ರ ನೋಡಿ ಮೈ ಮರೆಯೋದಿದ್ಯಲ್ಲಾ ಎಲ್ಲಾ ಮೈ ಮರೆಯೊ ಕೆಲಸಗಳೆಲ್ಲ ಆಧ್ಯಾತ್ಮ. ಪ್ರೀತಿ ಮಾಡೋದು ಆಧ್ಯಾತ್ಮವೇ. ಅದು ಮೈ ಮರೆಯೊ ಕೆಲಸವೇ. ಅಂದರೆ ಇನ್ನೊಂದು ವ್ಯಕ್ತಿಯನ್ನ ಯೋಚನೆ ಮಾಡೋಕೆ ಶುರು ಮಾಡುತ್ತೆ. ತನ್ನನ್ನು ಬಿಟ್ಟು, ಬಹಳ ಸಾರಿ ನಮಗೆ ಬಹಳ ಪ್ರೀತಿ ಇರೊವ್ರಿಗಾಗಿ ನಾವು ಸಾಯಬೇಕು ಅನ್ಸುತ್ತೆ. ಅದು ಆಧ್ಯಾತ್ಮಿಕ.

ಇಂದೂಧರ : ನಮ್ಮ ಸಮಾಜದಲ್ಲಿ ಒಳ್ಳೆತನ ಅನ್ನೊದಿಕ್ಕೆ ವಿಪರೀತ ಅರ್ಥ ಹಚ್ಚಿದ್ದಾರೆ. ಯಾರ ತಂಟೆಗೂ ಹೋಗದೆ, ಯಾರ್ ಏನೇ ಮಾಡ್ಕೊಂಡ್ರೂ ಕೇಳದೆ, ತನ್ನ ಹೆಂಡತಿಮಕ್ಕಳು, ತನ್ನ ಮನೆ, ತನ್ನ ವ್ಯವಸ್ಥೆ ಅದನ್ನು ನೋಡಿಕೊಂಡು ಸುಮ್ಮನಿದ್ದುಬಿಡೊದೆ ಒಳ್ಳೆತನ ಅನ್ನೊದು ಇದೆ ಇದರ ಬಗ್ಗೆ ನೀವು ಕಾಮೆಂಟ್ ಮಾಡಬೇಕು. ಯಾಕಂದ್ರೆ ಈಗ ರಾಜಕೀಯ ಕೆಟ್ಟುಹೋಗಿಬಿಟ್ಟಿದೆ ಅಂತಾರೆ. ಆ ಕೆಟ್ಟೋಗಿರೋ ಕಡೆ ಒಳ್ಳೆಯವರು ಹೋಗಿ ಕೆಲಸ ಮಾಡಬೇಕು ಅನ್ನೊ ಮನೋಭಾವ ಯಾರಿಗೂ ಬರ್‍ತಾ ಇಲ್ಲ.

ಅನಂತಮೂರ್ತಿ : ನಮ್ಮ ಕಾಲದ ಒಬ್ಬ ಪರಮ ರಾಜಕಾರಣಿ ಗಾಂಧಿ ಇದಾನಲ್ಲ, ಅವನಿಗಿಂತ ಒಳ್ಳೆಯವನು ಯಾರೂ ಇರ್ಲಿಲ್ಲ. ಆದರೆ ಅವನು ಮನೆ ಮನೆಯಲ್ಲಿ ಕಲಹ ಉಂಟಾಗೊ ಹಾಗೆ ಮಾಡ್ತಾ ಇದ್ದ. ಎಷ್ಟು ಕಾನ್‌ಫ್ಲಿಕ್ಟ್‌ಗಳನ್ನು ಅವನು ಉಂಟು ಮಾಡ್ದಾ ಅಂದ್ರೆ, ಇಂಡಿಯಾ ದೇಶನೆಲ್ಲಾ ಒಟ್ಟುಮಾಡಿ ಬ್ರಿಟಿಷರ ವಿರುದ್ಧ ಹೋರಾಡ್ತಾ ಇದ್ದಾಗ ಅಷ್ಟೂ ಜನ ಬ್ರಾಹ್ಮಣರನ್ನು ನಿಲ್ಲಿಸಿಕೊಂಡು ಹರಿಜನ ದೇವಾಲಯ ಪ್ರವೇಶ ಮಾಡ್ಬೇಕು ಅಂದಿದ್ದ. ಅವರು ಹೇಳಿದ್ರು, ನೀನು ಯಾಕೆ ಈ ಸಮಯದಲ್ಲಿ ಇದನ್ನ ಎತ್ತಿದೆ. ಜನ ಒಗ್ಗಟ್ಟಾಗಿದ್ದಾಗ ನೀನು ಒಡಿತಾ ಇದ್ಯಲ್ವಾ ಅಂದ್ರು. ಗಾಂಧಿಗೆ ಗೊತ್ತಿತ್ತು. ಯಾಕಂದ್ರೆ, ನಾವು ಸ್ವತಂತ್ರರಾಗಬೇಕಾದರೆ ಆ ಅರ್ಹತೆಯನ್ನ ಪಡೆಯಬೇಕಾದ್ರೆ, ನಮ್ಮ ವಿರುದ್ಧವೇ ನಾವು ಒಂದು ದಾಳಿಯನ್ನ ಮಾಡ್ಕೊಬೇಕು ಅಂತ. ಇವತ್ತು ಏನಾಗಿದೆ ಅಂದ್ರೆ ನಮ್ಮ ಎಲ್ಲ ಮೂಮೆಂಟ್ಸ್, ದಲಿತ ಮೂಮೆಂಟ್ಸ್‌ಗೆ ಕೂಡ ಆ ಸೆಲ್ಫ್‌ಕ್ರಿಟಿಸಿಸಂ ಅನ್ನೋದು ಇಲ್ಲ. ಅದರಿಂದನೇ ಅದಕ್ಕೆ ಭಾರಿ ದೊಡ್ಡ ಒಂದು ಶಕ್ತಿ ಬರ್‍ತಾ ಇಲ್ಲ. ರಾಜಕೀಯ ಅಂದ್ರೆ ಈ ರೀತಿ ವಿಶ್ಲೇಷಣೆಗೆ ಒಳಪಡಿಸೋದು, ವಿಶ್ಲೇಷಣೆಗೆ ಒಳಗಾಗೋದು. ಇದನ್ನು ಇನ್ನೂ ಸ್ಪಷ್ಟವಾಗಿ ಹೇಳೊದಾದ್ರೆ ಮನೆ ಹತ್ತಿ ಉರಿಯೊ ತನಕವೂ ಇದನ್ನು ಮಾಡಬೇಕು. ಈಗ ರಾಜಕೀಯಕ್ಕೆ ಬರಬೇಡ ಅಂತ ಇರಾಕ್‌ನವರಿಗೆ, ಕಾಶ್ಮೀರದವರಿಗೆ ಹೇಳೋಕೆ ಸಾಧ್ಯನಾ ? ಯಾಕೆಂದ್ರೆ ಅವರ ಮನೆ ಹತ್ತಿ ಉರಿತಾ ಇದೆ. ಅಲ್ಲೆಲ್ಲಾ ರಾಜಕೀಯ ಅಂದ್ರೆ ಸಮುದಾಯದ ಪ್ರಶ್ನೆ. ಸಮುದಾಯದ ಪ್ರಶ್ನೆ ವ್ಯಕ್ತಿಗಿಂತ ಮುಖ್ಯವಾಗೋದೆ ರಾಜಕೀಯ. ನಿಜವಾದ ರಾಜಕೀಯ ಮಾಡುವವನು ರಾಜಕಾರಣ ಮಾಡ್ದೇ ಇರುವವನು.

ಇವತ್ತು ಕರ್ನಾಟಕದಲ್ಲಿರುವ ಕಾಂಗ್ರೆಸ್ ನಾಯಕರೇ ಆಗಲಿ, ಯಾವ ನಾಯಕರೇ ಆಗಲಿ ಮಾಡಿದ್ದಕ್ಕಿಂತ ಹೆಚ್ಚು ದೊಡ್ಡ ರಾಜಕೀಯವನ್ನ ನಾವು ಲೇಖಕರು ಮಾಡಿದೀವಿ. ಇಲ್ಲಿ ಮನಸ್ಸುಗಳನ್ನು ಬದಲಾವಣೆ ಮಾಡೋದಿದೆ. ಹೊಸ ರೀತಿಯ ಚಿಂತನೆಗೆ ಹಚ್ಚೊದು ಇದೆ. ಇದಕ್ಕೆ ನೀವೆಲ್ಲರೂ ಆಸಕ್ತರಾಗಿದ್ದಕ್ಕೆ ತಾನೆ, ಕಾರಂತರನ್ನ ಕುವೆಂಪುನ, ಬೇಂದ್ರೆನ ಎಲ್ಲ ಓದಿಕೊಂಡೆ ಬಂದವ್ರಲ್ವೆ ಆಮೇಲೆ ಅಂಬೇಡ್ಕರನ್ನ ಮಾರ್ಕ್ಸ್ ಅನ್ನ ಹೀಗೆ. ಇದು ಬಹಳ ಮುಖ್ಯ ಅನ್ಸುತ್ತೆ.

ಸುಮಾ : ಜಾಗತೀಕರಣ ಮತ್ತು ಅಭಿವೃದ್ಧಿ, ಅದಕ್ಕಾಗಿ ನಡೆಯುತ್ತಿರುವ ಪ್ರಯೋಗಗಳಿಂದಾಗಿ ತಳಸಮುದಾಯ ಗಳಿಗೆ ನ್ಯಾಯವಾಗಿ ದಕ್ಕಬೇಕಾಗಿರುವ ಸಂಪನ್ಮೂಲಗಳು ದಕ್ಕದೆ ಅವರು ತಮ್ಮ ಹಕ್ಕನ್ನು ಕಳೆದುಕೊಳ್ಳುತ್ತಿದ್ದಾರಲ್ಲ...

ಅನಂತಮೂರ್ತಿ : ತಳಸಮುದಾಯಗಳು ಮತ್ತೆ ಟ್ರೈಬಲ್ಸ್ ಇದಾರಲ್ಲ ಅವರು ತುಳಿತಕ್ಕೊಳಗಾಗಿದ್ದರು, ನಮ್ಮಲ್ಲಿ ದಲಿತರು ಆದ ಹಾಗೆ. ಈಗ ಅವರು ಮುಖ್ಯವಾಹಿನಿಯಲ್ಲಿ ಸೇರುತ್ತಿದ್ದಾರೆ. ಸಂಪೂರ್ಣ ಸೇರಿಲ್ಲ, ಸೇರುವ ಹಾದಿಯಲ್ಲಿದ್ದಾರೆ. ಆಮೇಲೆ ಮುಂದಿನ ರಾಜಕೀಯವನ್ನ ಅವರೇ ಕಂಟ್ರೋಲ್ ಮಾಡುವವರೂ ಆಗ್ತಾರೆ. ಆದರೆ ನಮ್ಮ ಟ್ರೈಬಲ್ಸ್ ಇದಾರಲ್ಲ ಅವರು ಮುಖ್ಯವಾಹಿನಿಯಿಂದ ಹೊರಗುಳಿದವರು. ಹೊರಗೆ ಇರ್‍ತಾರೆ. ಅವರನ್ನ ಎಲ್ಲರೂ ಸೇರಿ ತುಳಿದು ಬಿಡುತ್ತಾರೆ. ಯಾಕೆಂದ್ರೆ ಎಲ್ಲಾ ಅಭಿವೃದ್ಧಿಯಲ್ಲುನೂ ಟಾರ್ಗೆಟ್ ಅವರೆನೆ. ಆದ್ದರಿಂದ ಈ ಸಮುದಾಯಗಳು ತಮ್ಮನ್ನೇ ತಾವು ಈ ದೃಷ್ಟಿಯಲ್ಲಿ ವಿಶ್ಲೇಷಣೆ ಮಾಡುವುದು ಮುಖ್ಯ. ಈಗ ನಡೆಯುತ್ತಿದೆಯಲ್ಲ ನರ್ಮದಾ ಆಂದೋಲನ ಅಂಥ ಎಚ್ಚರಿಕೆಯನ್ನ ಮೂಡಿಸಬೇಕು.

ಡೊಮಿನಿಕ್ : ಅಲ್ಲಿ ಹೋರಾಟವಷ್ಟೇ ಅಲ್ಲ, ಇತ್ತೀಚೆಗೆ ಈ ಸಂಪನ್ಮೂಲಗಳು ಅಭಿವೃದ್ಧಿಯ ಹಿನ್ನೆಲೆಯಲ್ಲಿ ಕೆಲವು ಕಂಪನಿಗಳ ಒಡೆತನಕ್ಕೆ ಸಿಕ್ಕಿ ಹಾಕಿಕೊಳ್ಳುತ್ತಿದೆ, ಅದು ನೀರು ಆಗಬಹುದು, ಕಾಡು ಅಥವಾ ಅದರ ಉಪಉತ್ಪನ್ನಗಳಾಗಬಹುದು, ಇವೆಲ್ಲ ಅಲ್ಲಿನ ಜನಗಳ ಕೈ ತಪ್ಪಿಹೋಗ್ತಾ ಇದೆ. ಇದು ಅಲ್ಲಿನ ಸಮುದಾಯಗಳಲ್ಲಿ ಬಿಕ್ಕಟ್ಟನ್ನು ಸೃಷ್ಟಿಸುತ್ತಿದೆ.

ಅನಂತಮೂರ್ತಿ : ಹೌದು, ನೀವು ಹೇಳುತ್ತಿರುವುದು ಸರಿ, ಕೇರಳದಲ್ಲಿ ನನಗೆ ಒಬ್ಬರು ಸ್ನೇಹಿತರಿದ್ದಾರೆ. ಈಗ ಅವರು ಮೆಂಬರ್ ಆಫ್ ಪಾರ್ಲಿಮೆಂಟ್ ಆಗಿದಾರೆ. ವೀರೇಂದ್ರ ಕುಮಾರ್ ಅಂತ. ಕನ್ನಡ ಬಲ್ಲವರು, ಅವರ ಮುಖ್ಯ ಹೋರಾಟ ಇದೆ. ಕೊಕ ಕೋಲಾ ಕಂಪನಿಯ ವಿರುದ್ಧ ಹೋರಾಡ್ತಾ ಇದಾರೆ, ಈಗ ನೀರಿನ ವಿಷಯವನ್ನ ಅವರು ಎತ್ತಿಕೊಂಡಿದಾರೆ. ಈ ರೀತಿಯ ಹೋರಾಟ ಕರ್ನಾಟಕದಲ್ಲಿ ಅದು ಎಷ್ಟು ಆಗಬೇಕು ಅದು ಆಗ್ಲೇ ಇಲ್ಲ. ನಮಗೆ ಗೊತ್ತಿಲ್ದೆನೆ ನಮದೆಲ್ಲ ಮಾರಾಟ ಮಾಡ್ತಾ ಇದಾರೆ. ನಮ್ಮ ಕೈ ತಪ್ಪಿ ಹೋಗ್ತಾ ಇದೆ. ಇದನ್ನ ಬಿಜೆಪಿ ಇದ್ರೂ ಮಾಡುತ್ತೆ ಕಾಂಗ್ರೆಸ್ ಇದ್ರೂ ಮಾಡುತ್ತೆ.

ಈಗ ಉದಾಹರಣೆಗೆ ಬೆಂಗಳೂರು-ಮೈಸೂರು ನಡುವೆ ಸ್ಪೀಡ್ ಆಗಿ ಕಾರುಗಳು ಹೋಗೊದಿಕ್ಕೆ ಏನು ಮಾಡ್ತಾ ಇದಾರೊ ಅದನ್ನು ಮಾಡಬೇಕಾಗಿರಲಿಲ್ಲ. ಇರೊ ರಸ್ತೆನೆ ಚೆನ್ನಾಗಿ ಮಾಡಿದ್ರೆ ಆಗಿತ್ತು. ಈ ಅಭಿವೃದ್ಧಿಯಲ್ಲಿ ಏನೇನು ಚ್ಯೂಸ್ ಮಾಡ್ಬೇಕು ಅಂತ ಅನ್ನೊದು ನಮಗೆ ಗೊತ್ತಿರಬೇಕು. ಗೊತ್ತಿರೋದರ ಮುಖಾಂತರ ನಾವು ಪ್ರಯತ್ನ ಪಡಬೇಕು. ಇದು ಹೀಗೆ ಮುಂದುವರಿದರೆ ಈಗ ಪೆಟ್ರೋಲ್‌ಗಾಗಿ ಹೇಗೆ ಯುದ್ಧಗಳು ಆಗ್ತವೊ ಪ್ರಾಯಶಃ ಅವಾಗ ನೀರಿಗಾಗಿ ಕೂಡ ಯುದ್ಧಗಳು ಸಂಭವಿಸಬಹುದು.

ಡೊಮಿನಿಕ್ : ಸರ್ ಆದ್ರೆ, ಸಮಸ್ಯೆ ಇಷ್ಟಕ್ಕೆ ಮುಗಿಯಲಿಲ್ಲ, ಒಂದು ಕಂಪನಿ ಶುರುವಾಗುತ್ತೆ ಅದು ಸಂಪನ್ಮೂಲಗಳನ್ನು ಎಷ್ಟು ಬೇಕೊ ಅಷ್ಟನ್ನು ಕಿತ್ತುಕೊಳ್ಳುತ್ತಾ

ನಮ್ಮಲ್ಲಿ ದಲಿತರು ಈಗ ಮುಖ್ಯವಾಹಿನಿಯಲ್ಲಿ ಸೇರುವ ಹಾದಿಯಲ್ಲಿದ್ದಾರೆ. ಆಮೇಲೆ ಮುಂದಿನ ರಾಜಕೀಯವನ್ನ ಅವರೇ ಕಂಟ್ರೋಲ್ ಮಾಡುವವರೂ ಆಗ್ತಾರೆ. ಆದರೆ ನಮ್ಮ ಟ್ರೈಬಲ್ಸ್ ಇದಾರಲ್ಲ ಅವರು ಮುಖ್ಯವಾಹಿನಿಯಿಂದ ಹೊರಗುಳಿದವರು. ಹೊರಗೆ ಇರ್‍ತಾರೆ. ಅವರನ್ನ ಎಲ್ಲರೂ ಸೇರಿ ತುಳಿದು ಬಿಡುತ್ತಾರೆ. ಯಾಕೆಂದ್ರೆ ಎಲ್ಲಾ ಅಭಿವೃದ್ಧಿಯಲ್ಲುನೂ ಟಾರ್ಗೆಟ್ ಅವರೆನೆ.



ಇರ್ತದೆ, ಆದರೆ ಅದು ತನ್ನ ತ್ಯಾಜ್ಯನ ಪುನಃ ಅದಕ್ಕೆನೆ ಬಿಡ್ತಾ ಇರುತ್ತೆ. ಹಾಗಾಗಿ ಇರೋದನ್ನು ಜನ ಉಪಯೋಗಿಸಲಿಕ್ಕೆ ಆಗೊದಿಲ್ಲ. ಇಂತಹುದಕ್ಕೆ ಅಕೌಂಟಬಲಿಟಿಯನ್ನ ನಾವು ಮಾರುಕಟ್ಟೆಯಿಂದ ಎಕ್ಸ್‌ಪೆಕ್ಟ್ ಮಾಡೋಕೆ ಆಗೋದಿಲ್ವಾ ?

ಅನಂತಮೂರ್ತಿ : ಮಾಡಲೇಬೇಕು. ಆ ಒತ್ತಡ ಅವರ ಮೇಲೆ ತರಬೇಕು. ಅದಕ್ಕೆ ಸಂಘಟಿತರಾಗಬೇಕು. ಪರ್ಯಾಯ ರಾಜಕೀಯ ಶಕ್ತಿ ವ್ಯಾಪಕವಾದಾಗ ಇಂತಹ ಶಕ್ತಿಗಳನ್ನೆಲ್ಲ ತನ್ನ ಒಳಗೆ ಇಟ್ಟುಕೊಳ್ಳಬೇಕು, ಬರೀ ರಾಜಕಾರಣ ಒಂದೇ ಅಲ್ಲ ಅದರಲ್ಲಿ ವ್ಯಕ್ತವಾಗೋದು, ಇದರಲ್ಲಿ ಎಲ್ಲ ಚಳವಳಿಗಳನ್ನು ತನ್ನೆಡೆಗೆ ಸೆಳೆದುಕೊಳ್ಳುವ, ಅಥವಾ ತಾನದಕ್ಕೆ ಪ್ರೇರಕವಾಗುವ ಕ್ರಮಗಳನ್ನೆಲ್ಲ ತೆಗೆದುಕೊಳ್ಳಬೇಕು.

ರಾಜಾಜಿ ನೈತಿಕವಾಗಿ ಬಹಳ ದೊಡ್ಡ ಮನುಷ್ಯ. ಇಷ್ಟಿದ್ದರೂ ಆ ಕೆಲಸವನ್ನ ಕಾಮರಾಜ್‌ಗೆ ವಹಿಸಿದ್ದರು. ಹೀಗೆ ಎಲ್ಲ ಕಡೆನೂ ಸಾಮಾನ್ಯ ವರ್ಗದಿಂದ ನಾಯಕತ್ವ ಬರುವುದನ್ನ ಡೆಮಾಕ್ರಸಿ ಎನ್‌ಕರೇಜ್ ಮಾಡಿತು.

ಸುಮಾ : ವರ್ಗ ಅಂದಾಗ ಆರ್ಥಿಕ ಸ್ಥಿತಿಯನ್ನು ಸೂಚಿಸುತ್ತೆ ಅಲ್ಲವೇ ? ಕೆಳವರ್ಗ ಅಂದಾಗ, ಕೆಳವರ್ಗ ಆ ಸ್ಥಿತಿಯಲ್ಲಿಯೇ ಉಳಿಬೇಕು ಅಂದಾಗ ಆರ್ಥಿಕ ಸ್ಥಿತಿ ಹಾಗೇ ಉಳಿಬೇಕು ಅನ್ನೊ ಅರ್ಥ...

ಅನಂತಮೂರ್ತಿ : ಅಲ್ಲ ಅಲ್ಲ ಹಾಗಲ್ಲ, ಅದು ಬಂದಿರೋದ್ರಿಂದಾನೆ ಅವರ ಆರ್ಥಿಕ ಸ್ಥಿತಿ ಉತ್ತಮ ಆಗೋಕೆ ಸಾಧ್ಯ. ಇವತ್ತು ನೋಡಿ ಇಂಡಿಯಾದಲ್ಲಿ ಏನೂ ಆಗಿಲ್ಲ ಅಂತ ಜನರೇಷನ್‌ಗೇ ಎಷ್ಟು ಎತ್ತರ ಆದ್ರು, ಅದಕ್ಕೆನೆ ಈ ೩೦-೪೦ ವರ್ಷಗಳ ಕಾಲ ಬಹಳ ಅದ್ಭುತವಾದ್ದದು. ನಾನು ಏನು ಹೇಳೋಕೆ ಪ್ರಯತ್ನ ಪಟ್ಟೆ ಅಂದರೆ ನಾಯಕತ್ವ ಎನ್ನುವುದು ಜನಸಮುದಾಯದಿಂದ ಬರುತ್ತೆ ಅಂತ. ಹೀಗಾದರೆ ಎಷ್ಟು ಒಳ್ಳೇದು ನೋಡಿ.

ನೆಹರೂ ಅಥವಾ ಗಾಂಧಿ ತೆಗೆದುಕೊಂಡ ಬಹಳ ದೊಡ್ಡ ನಿಲುವು ಏನೆಂದರೆ ಎಲ್ಲರಿಗೂ ಓಟು ಕೊಡೊದು. ನಾನು ಆಗ ಹುಡುಗ, ನನಗೆ ಗೊತ್ತಿದೆ. ಕೊಟ್ಟ ಕೂಡಲೇ, ಜನ ಏನಪ್ಪಾ, ಈ ಹೆಬ್ಬೆಟ್ಟು ಗುರುತು ಹಾಕೊವರಿಗೆಲ್ಲ ಓಟು ಕೊಟ್ಟುಬಿಟ್ರು, ಇನ್ನೇನು ಈ ದೇಶದ ಗತಿ ಅಂತ ಮಾತಾಡ್ತಾ ಇದ್ರು. ಯಾವ ಬುದ್ಧಿವಂತ ವರ್ಗವೂ ಅದನ್ನು ಒಪ್ಪಲಿಲ್ಲ. ನೆಹರೂ ಏನಾದರೂ ವಿದ್ಯಾವಂತ ಜನರ ಹತ್ತಿರಕ್ಕೆ ಹೋಗಿಬಿಟ್ಟು ಅವರ ಓಟು ತೆಗೆದುಕೊಂಡಿದ್ದರೆ ಇದು ಆಗ್ತಾನೆ ಇರಲಿಲ್ಲ ಅಷ್ಟೆ. ಎರಡನೆ ವಿಷಯ ಏನಂದ್ರೆ ನೆಹರೂ ಬಹಳ ಡೆಮಾಕ್ರಟಿಕ್ ಆಗಿದ್ರು.



ಸುಮಾ : ಇತ್ತೀಚೆಗೆ ಭಿಕ್ಕು ಪರೇಖ್ ಬೆಂಗಳೂರಿಗೆ ಬಂದಿದ್ದಾಗ, ವಿಶ್ವವಿದ್ಯಾಲಯದ ವಿಚಾರ ಸಂಕಿರಣದಲ್ಲಿ ಮಾತನಾಡುತ್ತಾ 'ಭಾರತದಲ್ಲಿ ಪ್ರಜಾಪ್ರಭುತ್ವ ಉಳಿದಿರುವುದೇ ಕೆಳವರ್ಗದ ಜನರಿಂದ' ಎಂದಿದ್ದಿರಿ... ಈ ಆ ಮಾತನ್ನು ಸ್ವಲ್ಪ ಸ್ಪಷ್ಟೀಕರಿಸುತ್ತೀರಾ ?

ಅನಂತಮೂರ್ತಿ : ನೆಹರೂ ಅಥವಾ ಗಾಂಧಿ ತೆಗೆದುಕೊಂಡ ಬಹಳ ದೊಡ್ಡ ನಿಲುವು ಏನೆಂದರೆ ಎಲ್ಲರಿಗೂ ಓಟು ಕೊಡೊದು. ನಾನು ಆಗ ಹುಡುಗ, ನನಗೆ ಗೊತ್ತಿದೆ. ಕೊಟ್ಟ ಕೂಡಲೇ, ಜನ ಏನಪ್ಪಾ, ಈ ಹೆಬ್ಬೆಟ್ಟು ಗುರುತು ಹಾಕೊವರಿಗೆಲ್ಲ ಓಟು ಕೊಟ್ಟುಬಿಟ್ರು, ಇನ್ನೇನು ಈ ದೇಶದ ಗತಿ ಅಂತ ಮಾತಾಡ್ತಾ ಇದ್ರು. ಯಾವ ಬುದ್ಧಿವಂತ ವರ್ಗವೂ ಅದನ್ನು ಒಪ್ಪಲಿಲ್ಲ. ನೆಹರೂ ಏನಾದರೂ ವಿದ್ಯಾವಂತ ಜನರ ಹತ್ತಿರಕ್ಕೆ ಹೋಗಿಬಿಟ್ಟು ಅವರ ಓಟು ತೆಗೆದುಕೊಂಡಿದ್ದರೆ ಇದು ಆಗ್ತಾನೆ ಇರಲಿಲ್ಲ ಅಷ್ಟೆ. ಎರಡನೆ ವಿಷಯ ಏನಂದ್ರೆ ನೆಹರೂ ಬಹಳ ಡೆಮಾಕ್ರಟಿಕ್ ಆಗಿದ್ರು. ತಮಿಳುನಾಡಿನಲ್ಲಿ ಹೆಚ್ಚು ಹೆಚ್ಚು ಶಕ್ತಿಯನ್ನ ಗಳಿಸಿಕೊಳ್ಳೊದಿಕ್ಕೆ ನೋಡಿದಾಗ ಅವರು ರಾಜಾಜಿಯನ್ನ ಬಿಟ್ಟು ಆ ಕೆಲಸವನ್ನು ಕಾಮರಾಜ್‌ಗೆ ವಹಿಸಿದರು. ನೆಹರೂಗೆ ಬಹಳ ಹತ್ತಿರದವನು ರಾಜಾಜಿ, ನೆಹರೂಗೆ ರಾಜಾಜಿ ಭಾಷೆ ಅರ್ಥವಾಗೋದು, ರಾಜಾಜಿಗೆ ನೆಹರೂ ಭಾಷೆ ಅರ್ಥ ಆಗುತ್ತೆ ಆಪ್ತರು, ಅದಲ್ಲದೆನೆ ಗಾಂಧೀಜಿಗೆ ಬೀಗರು ರಾಜಾಜಿ. ಅಷ್ಟು ಹತ್ತಿರ ಇದ್ರು. ಹಾಗೂ ನಾವು ತಪ್ಪು ಮಾಡ್ತಾ ಇದೀವಿ, ಇವತ್ತು ಎಲ್ಲ ಜಾತಿಗಳಿಂದನೂ ವಿದ್ಯಾವಂತರಾದವರು ಬಂದಿದಾರೆ. ಎಲ್ಲ ಊರಿನಲ್ಲೂ ವಿದ್ಯಾವಂತರಿದ್ದಾರೆ. ೪೭ನೇ ಇಸವಿಗಿಂತ ಇವಾಗ ಏನು ಬದಲಾವಣೆ ಆಗಿಲ್ಲ ಅನ್ನೊದು ಬಹಳ ಒಂದು ಮೂರ್ಖತನದ ಮಾತು. ಇದು ಕಾಂಗ್ರೆಸ್ ಇರೊವಾಗ್ಲೆನೆ ಆಗಿದೆ. ಬಹಳ ವರ್ಷ ಕಾಂಗ್ರೆಸ್ ಆಡಳಿತದಲ್ಲೇನೆ ಆಗಿದೆ. ಆಗಿದೆ ಅಂದರೆ ಅವರ ಒಂದು ಉಪಕಾರ ಮಾಡಿದ್ರು ಅನ್ನೊ ಅರ್ಥ ಅಲ್ಲ, ಆಗ್ಲೇಬೇಕಾಗಿದೆ. ಹೀಗೆ ಆಗೋದು ಅನಿವಾರ್ಯ ಆಗಿದೆ.

ಇಂದೂಧರ : ಪ್ರಜಾಪ್ರಭುತ್ವದ ಬಗ್ಗೆ ಹೇಳಿದಾಗಲೂ ತುಂಬಾ ಜನ ಹಾಗೆ ಕಾಮೆಂಟ್ ಮಾಡ್ತಾ ಇದ್ದರು. ದುರ್ಬಲ ವರ್ಗದವರು ಹಾಗೇ ಇರಬೇಕು, ಅವರು ಹಾಗಿದ್ದರೆ ಮಾತ್ರ ಪ್ರಜಾಪ್ರಭುತ್ವ ಉಳಿತದೆ, ಇದು ನಿಮ್ಮ ವಿಚಾರ ಅಂತ. ಇದರ ಬಗ್ಗೆ ನಿಮ್ಮ ಕಾಮೆಂಟ್ ಏನು ?

ಅನಂತಮೂರ್ತಿ : ತಪ್ಪು ಅದು, ನಾನ್ ಹಾಗೆ ಹೇಳಿದ್ ಯಾಕೆ ಅಂದ್ರೆ ಉದಾಹರಣೆಗೆ ನಮ್ಮಲ್ಲಿ ಬಂದಿರೋ ಅನೇಕ ರಾಜಕಾರಣಿಗಳು ಈಗ ಬಸವಲಿಂಗಪ್ಪ ಎಂತ ಕಡೆಯಿಂದ ಬಂದವರು ಅವರು, ನಿಜಲಿಂಗಪ್ಪ ಎಷ್ಟು ಬಡತನದಿಂದ, ಕಷ್ಟದಿಂದ ಬಂದವರು, ನಮ್ಮ ಮೊಯಿಲಿಯವರು ಇವರೆಲ್ಲಾ ಅದ್ಭುತವಾದ ಪವಾಡಗಳು. ಮತ್ತು ಈ ಪವಾಡಗಳು ಸಾಧ್ಯವಾಗಿದ್ದೇ ಡೆಮಾಕ್ರಸಿಯಿಂದಾಗಿ. ಇವರೆಲ್ಲಾ ಒಂದನೇ

ಡೊಮಿನಿಕ್ : ಮೇಲು ಜಾತಿ/ವರ್ಗಗಳಿಗೆ ಹೋದಾಗ ಅವು ಹೆಚ್ಚೆಚ್ಚು ಪ್ರೊಫೆಷನಲ್ ಆಗ್ತಾ ಇವೆ, ಒಂದು ಸ್ಥಿತಿವಂತಿಕೆಯನ್ನ ಪಡೆದುಕೊಳ್ಳುತ್ತಾ ಇವೆ. ಆದರೆ ತಳ ಸಮುದಾಯಗಳಿಗೆ ಈ ರೀತಿಯ ಸಾಧ್ಯತೆಗಳು ಇನ್ನೂ ವಿಸ್ತರಿಸಿಲ್ಲ. ಇದು ದ್ವಂದ್ವ ಅಂತ ಅನಿಸುವುದಿಲ್ಲವೇ ?

ಅನಂತಮೂರ್ತಿ : ಪ್ರಾಯಶಃ ಇವಾಗ ಹೆಚ್ಚು ಜನ ಮೇಲ್ ಜಾತಿಯ ಯುವಕರು, ಬ್ರಾಹ್ಮಣರು ದೊಡ್ಡವ್ರಾಗ್ತಾರೆ, ಅವರೆಲ್ಲ ಪ್ರೊಫೆಷನಲ್ಸ್ ಆಗ್ತಾರೆ, ಮತ್ತು ರಾಜಕಾರಣಕ್ಕೂ ಮಹತ್ವ ಕಡಿಮೆ ಆಗ್ತಾ ಹೋಗಿ ಪ್ರೊಫೆಷನ್ಸ್‌ಗೆ ಮಹತ್ವ ಹೆಚ್ಚು ಆಗ್ತಾ ಹೋಗುತ್ತಿದೆ, ಆದರೆ ಈ ಪ್ರೊಫೆಷನಲ್ಸ್ ಎಲ್ಲ ಎಷ್ಟು ಮುಖ್ಯವಾಗಿ ಹೋಗುತ್ತಿದ್ದಾರೆಂದರೆ, ಎಷ್ಟು ನಮ್ಮ ಆರ್ಥಿಕ ನೀತಿಯನ್ನು ಕಂಟ್ರೋಲ್ ಮಾಡ್ತಾ ಇದಾರೆ ಅಂದ್ರೆ ರಾಜಕೀಯವಾಗಿ ನಾವು ಮಾಡುವ ಆಯ್ಕೆಗಳಿಗೆ ಕಡಿಮೆ ಮಹತ್ವ ಬರೊ ಹಾಗೆ ಮಾಡಿಬಿಟ್ಟಿದಾರೆ. ಅದನ್ನೆ ಇವಾಗ ಖಾಸಗೀಕರಣದ ವಿರುದ್ಧ ಚಳವಳಿ ಅಂದ್ರೆ ಈ ಅರ್ಥದಲ್ಲಿ ಕೊನೆ ಪಕ್ಷ ಆರೋಗ್ಯ ಮತ್ತು ಶಿಕ್ಷಣ ಖಾಸಗೀಕರಣ ಆಗಲೇ ಕೂಡದು. ಹೋಟೆಲ್‌ಗಳು ಖಾಸಗೀಕರಣ ಆಗಲೇಬೇಕು. ಸರ್ಕಾರ ಹೋಟೆಲ್‌ಗಳನ್ನ ನಡೆಸೋಕೆ ಆಗಲ್ಲ, ಅಂಗಡಿಗಳನ್ನು ನಡೆಸೊದೆಲ್ಲ ಖಾಸಗೀಕರಣ ಆಗಬೇಕು. ಅಂದ್ರೆ ಯಾವುದು ಖಾಸಗೀಕರಣ ವಲಯದಲ್ಲಿ ಇರಬೇಕು, ಯಾವುದು ಖಾಸಗೀಕರಣ ಆಗ್ಬೇಕು ಅನ್ನೊದ್ರಲ್ಲಿ ಸರಿಯಾದ ಕಲ್ಪನೆ ಇದ್ದರೆ

ಸಾಮಾನ್ಯ ಶಾಲೆಗಳಿಗಾಗಿ ಚಳವಳಿ ಬೇಕು

ಪ್ರೊಫೆಷನಲ್ಸ್ ಕ್ಲಾಸ್ ನೀವು ಹೇಳಿದ ಹಾಗೆ ಬಹಳ ಮುಖ್ಯ ಆಗುತದ.

ಡೊಮಿನಿಕ್ : ಕರ್ನಾಟಕದಲ್ಲಿ ಕರುನಾಡ ಸೇನೆ ಎಂಬ ಕನ್ನಡ ಪರ ಮಿಲಿಟೆಂಟ್ ಚಳವಳಿಯೊಂದು ಅಸ್ತಿತ್ವಕ್ಕೆ ಬಂದಿದೆ. ಈ ಚಳವಳಿಯಲ್ಲಿ ಲಿಬರಲ್ ಮಾನವತಾವಾದಿಗಳು, ಎಡಪಂಥೀಯರು, ಬಸವಾನುಯಾಯಿಗಳು ಮತ್ತು ಅಲ್ಪಸಂಖ್ಯಾತರು ಪಾಲ್ಗೊಂಡಿರುವ ಈ ಸಂದರ್ಭವನ್ನು ತಾವು ಹೇಗೆ ಅರ್ಥೈಸುತ್ತೀರಿ ?

ಅನಂತಮೂರ್ತಿ : ಈ ತರಹದೆಲ್ಲ ಆಗ್ತಾನೆ ಇರ್‍ತಾವೆ. ಒಂದು ಸರಿಯಾದ ಅಭಿವ್ಯಕ್ತಿ ನಮ್ಮ ಕನಸುಗಳಿಗೆ ಸಿಗೊ ತನಕ ಈ ರೀತಿಯೂ ಆಗ್ತಿರ್‍ತಾವೆ. ಇವೆಲ್ಲ ಸಂಪೂರ್ಣ ಅಭಿವೃದ್ಧಿಯನ್ನ ಕೊಡಬಲ್ಲಂತಹ ಚಳವಳಿಗಳಲ್ಲ. ಯಾಕೆಂದ್ರೆ ನೋಡಿ, ಈ ಕನ್ನಡ ಚಳವಳಿ ಅಂತಿದೆಯಲ್ಲ. ಈ ಕನ್ನಡ ಚಳವಳಿ ನಾವೆಲ್ಲ ಬಹಳಷ್ಟು ಮಾತಾಡ್ತೀವಿ. ಆದರೆ ಒಂದೇ ಒಂದು ಒಳ್ಳೆ ಕನ್ನಡ ಸ್ಕೂಲು ಇಡೀ ದೇಶದಲ್ಲಿ ಇಲ್ಲ. ವಿದ್ಯಾವಂತರಾದ ನಮ್ಮ ಮಕ್ಕಳು ಹೋಗುವಂತಹ ಸ್ಕೂಲುಗಳೇ ಅಲ್ಲ ಅವು. ನಾವೆಲ್ಲ ಪ್ರೈವೇಟ್ ಸ್ಕೂಲಿಗೆ ಸೇರಿಸ್ತೀವಿ. ಇಲ್ಲಿ ಎರಡು ದೇಶ ಆಗುತ್ತೆ. ಒಂದು ಅಡಿಗೆ ಮನೆ ಭಾಷೆಯಾಗಿ ಕನ್ನಡವನ್ನು ಉಪಯೋಗಿಸುವ ಮಧ್ಯಮವರ್ಗಗಳು, ಇಂಗ್ಲಿಷ್‌ನ್ನು ವ್ಯವಹಾರದಲ್ಲಿ, ಚಿಂತನೆಗೆ ಉಪಯೋಗಿಸೋದು, ಇನ್ನು ಕೆಲವರು ಸಾಕಷ್ಟು ವಿದ್ಯಾವಂತರೇ ಆಗದೇನೆ ಕನ್ನಡವನ್ನ ಬಳಸೋದು. ಕನ್ನಡ ಗೌಣವಾಗುತ್ತದೆ. ಹೀಗೆ ಕನ್ನಡ ಗೌಣವಾಗೊದರ ಬಗ್ಗೆ ಯಾತನೆಯನ್ನು ಪಡದವರು ಯಾವ ಕನ್ನಡದ ಚಳವಳಿಯನ್ನ ಮಾಡುದ್ರೂ ನಾನು ಒಪ್ಪಲ್ಲ.

ಈಗ ಆಗಬೇಕಾಗಿದ್ದ ಚಳವಳಿ ಯಾವುದಪ್ಪಾ ಅಂದ್ರೆ ಕಾಮನ್‌ಸ್ಕೂಲ್. ಸಾಮಾನ್ಯ ಶಾಲೆಗಳಿದ್ದಾವಲ್ಲ ಅವುಗಳನ್ನ ಬಲಪಡಿಸೊವಂತಹ ಕೆಲಸ. ಅದನ್ನು ಯಾರು ಮಾಡ್ತಾರೊ ಅವರು ಕನ್ನಡವನ್ನ ಉಳಿಸುತಾರೆ. ಈಗ ನಾವೇನ್ ಮಾಡ್ತೀವಿ ಅಂದ್ರೆ ಗ್ರಾಮಸ್ತರಿಗಾಗಿ ಒಂದು ಸ್ಕೂಲು, ಪಟ್ಟಣದಲ್ಲಿರೊ ನಮಗಾಗಿ ಇನ್ನೊಂದು ಸ್ಕೂಲು, ಐಟಿ ಮಕ್ಕಳಿಗೆ ಇನ್ನೊಂದು ಸ್ಕೂಲು ಅಂತ ಮಾಡ್ತಿದೀವಿ. ಆದ್ದರಿಂದ ಕರುನಾಡ ಸೇನೆಯವರು ಬೆಂಗಳೂರಿನಲ್ಲಿ ಒಂದು ಹತ್ತು ಸ್ಕೂಲುಗಳನ್ನು ನಡೆಸಲಿ, ಎಲ್ಲ ನಮ್ಮ ಮಕ್ಕಳು ಹೋಗುವಂತಹ ಸ್ಕೂಲುಗಳನ್ನು. ಅದು ಬರೀ ಬಡವರಿಗೆ ಅಂತ ಮಾಡುದು ಕೂಡ್ಲೇನೆ ಅದು ಆಗೊಲ್ಲ. ಕನ್ನಡ ಫಲಕ ಇರಬೇಕು ಅನ್ನೊದು ಸರಿ, ಅದನ್ನೇನು ನಾನು ವಿರೋಧಿಸಲ್ಲ. ಅವೆಲ್ಲ ಇರಬೇಕಾಗುತ್ತೆ. ಆದರೆ ಇದು ಒಂದು ತೋರಿಕೆಗೆ ಒಂದು, ಒಳಗಡೆಯಿಂದ ಇರಬೇಕಾದ್ರೆ, ಕನ್ನಡ ಭಾಷೆನ ಜ್ಞಾನಾರ್ಜನೆಗೆ ಉಪಯೋಗಿಸಬೇಕು, ಜ್ಞಾನವನು ಅದರಲ್ಲಿ ಹುಟ್ಟಿಸಬೇಕು, ಅದೇ ನಾವು ಮಾಡಬೇಕಾದ್ದು. ಅದು ಕಷ್ಟ ಅಲ್ಲ ನಮ್ಮ ಬಹಳ ಅತ್ಯುತ್ತಮವಾದ ಲೇಖಕರೆಲ್ಲಾ ಅದನ್ನು ಮಾಡಿದ್ದಾರೆ.

ಇಂದೂಧರ : ಈಗ ಯಾರೊ ಒಬ್ಬ ಬಡವ, ಅವನು ಹೊಟ್ಟೆಪಾಡಿಗಾಗಿ ಕನ್ನಡದಲ್ಲಿ ಏನಾರು ಮಾಡೋಕೆ ಹೊದ್ರೇ ಅವನ ಹೊಟ್ಟೆ ತುಂಬದೆ ಇರೊ ವಾತಾವರಣ ಇದೆ. ಹೀಗಿದ್ದಾಗ ಕನ್ನಡವನ್ನ ಹೇಗೆ ಉಳಿಸಬಹುದು ?

ಅನಂತಮೂರ್ತಿ : ಹೇಗೆ ಗೊತ್ತ. ನಾನು ಈ ಸಾಮಾನ್ಯ ಶಾಲೆ ಅಂದೆನಲ್ಲ. ಎಲ್ಲ ಶಾಲೆಗಳಲ್ಲಿ ಹೇಳಿಕೊಡೊದಕ್ಕಿಂತ ಒಳ್ಳೆ ಇಂಗ್ಲಿಷನ್ನ ಇಲ್ಲಿ ಹೇಳಿಕೊಡಬೇಕು. ಇಂಗ್ಲಿಷನ್ನು ಭಾಷೆಯಾಗಿ ಉಪಯ್ೋಗಿ ಸೊದು ಅಂದರೆ ಮೊದಲನೆಯ ತರಗತಿಗೆ ಮಗು ಬಂದ ಕೂಡ್ಲೇನೆ ಇಂಗ್ಲಿಷ್‌ನಲ್ಲಿ ನಾನೂ ಕೂಡ ಮಾತಾಡ್‌ಬಲ್ಲೆ ಅನ್ನೊ ಒಂದು ಧೈರ್ಯವನ್ನ ಮಗುಗೆ ಹುಟ್ಟಿಸಬೇಕು. ಈ ರೀತಿ ಹೇಳಿಕೊಟ್ಟರೆ ಏನಾಗುತ್ತೆ ಅಂದ್ರೆ, ಅವರಿಗೆ ಒಂಥರ ಕಾನ್ಫಿಡೆನ್ಸ್ ಬರುತ್ತೆ. ಯಾಕೆಂದ್ರೆ ಇವತ್ತು ಇಂಗ್ಲಿಷ್ ಎಲ್ಲ ಕಡೆ ಇದೆ. ಕಾನ್ಫಿಡೆನ್ಸ್ ಬರೊದ್ರಿಂದ ಕನ್ನಡವನ್ನ ಅವರಿಂದ ಉಳಿಸೊಕೆ ಸಾಧ್ಯ. ಇಲ್ಲಂದ್ರೆ ಸಂಪೂರ್ಣವಾಗಿ ಅವರು ಪ್ರೈವೇಟ್ ಸ್ಕೂಲಿಗೆ ಹೋಗ್ತಾರೆ. ಇಂಗ್ಲಿಷ್ ಮತ್ತು ಯೂರೊಪು ಅಲ್ಲಿರುವ ಜ್ಞಾನ ಸಮುಚ್ಚಯವನ್ನೆಲ್ಲ ಕನ್ನಡದೊಳಗೆ ತರಬೇಕು, ಮತ್ತು ಕನ್ನಡವನ್ನ ಬಳಸೊವರಿಗೆ ಎಲ್ಲರಿಗೂ ಅದರಲ್ಲಿ ಇರೋದನ್ನ ಪಡೆಯುವ ಶಕ್ತಿಯನ್ನ ಕೊಟ್ಟುಬಿಡಬೇಕು. ಶಕ್ತಿಯನ್ನ ಕೊಡದೆನೇ ಇದ್ರೆ ಅವರು ಮುಂದೆ ನರಳ್ತಾರೆ. ಇನ್‌ಫಿರಿಯಾರಿಟಿ ಕಾಂಪ್ಲೆಕ್ಸ್‌ಗೆ ಒಳಗಾಗ್ತಾರೆ.

ಇಂದೂಧರ : ಆದರೆ ಇಂಗ್ಲಿಷ್‌ನೆ ಯಾಕೆ ಕಲಿಬೇಕು ?

ಅನಂತಮೂರ್ತಿ : ಈಗ ಅದೇ ಬಹಳ ಶಕ್ತವಾದ ಭಾಷೆ. ಅಷ್ಟೆ ಬೇರೆ ಕಾರಣ ಏನೂ ಇಲ್ಲ. ತಮಿಳುನಾಡಿನಲ್ಲಿ ಒಂದು ಮೆಡಿಕಲ್ ಕಾಲೇಜ್ ಇದೆ. ಹೇಳಿಕೊಡೊದೆಲ್ಲ ತಮಿಳಿನಲ್ಲಿ. ನಾವು ಹಾಗೆ ಮಾಡಿಯೇ ಇಲ್ಲ. ಹಾಗಾಗಿ ಯಾವ ಭಾರತೀಯ ಭಾಷೆಯವನಿಗೂ ಇನ್ನೊಂದು ಭಾರತೀಯ ಭಾಷೆಯನ್ನ ಕಲೀಬೇಕು ಅಂತ ಅನಿಸುವುದೇ ಇಲ್ಲ. ಯಾಕೆಂದ್ರೆ ಶಕ್ತಿಯುತವಾದದನ್ನ ಆ ಭಾಷೆಯಲ್ಲಿ ನಾವು ಮಾತಾಡಲ್ಲ.

ಇಂದೂಧರ : ಈ ರೀತಿನೆ ಇಂಗ್ಲಿಷ್ ಕಲೀತಾ ಹೋದರೆ ಕನ್ನಡ ಈಗಿರೊವಷ್ಟು ಅಸ್ತಿತ್ವದಲ್ಲಿ ಉಳಿಯೊದಿಲ್ಲ ಅನ್ನೊ ಒಂದು...

ಅನಂತಮೂರ್ತಿ : ಕನ್ನಡ ಮೀಡಿಯಂನಲ್ಲಿ ಎಲ್ಲ ಓದುತ್ತ ಇರ್‍ತಾರಲ್ಲ. ಇಂಗ್ಲಿಷನ್ನ ಕೇವಲ ಭಾಷೆಯಾಗಿ ಕಲಿತಿರ್‌ತೀವಿ, ಫಿಸಿಕ್ಸ್ ಹಿಸ್ಟರಿ ಎಲ್ಲವನ್ನೂ ಕನ್ನಡದಲ್ಲಿ ಓದಿರುತ್ತೀವಿ, ಯಾವಾಗ ಬೇಕಾದ್ರೂ ಇವನ್ನ ಇಂಗ್ಲಿಷ್‌ಗೆ ಟ್ರಾನ್ಸ್‌ಲೇಟ್ ಮಾಡೋಕೆ ಗೊತ್ತಿರುತ್ತೆ. ಈಗ ಬರೀ ಇಂಗ್ಲಿಷ್‌ನಲ್ಲೇ ಕಲಿಯೋದ್ರಿಂದ ಕನ್ನಡ ಹೋಗಿಯೇ ಬಿಡುತ್ತೆ. ಭೌತಿಕ ಭಾಷೆಯಾಗಿ ಹೊರಟುಹೋಗಿರುತ್ತೆ. ಆವಾಗ ಭೌತಿಕ ಭಾಷೆಯಾಗಿ ಉಳಿಯುತ್ತೆ ನೋಡಿ. ಇದೊಂದು ಉಪಾಯ.

ಡೊಮಿನಿಕ್ : ಇದು ಇನ್ನಷ್ಟು ವಿಭಿನ್ನ ಚರ್ಚೆಯ ಅಗತ್ಯವಿದೆ. ಪರಿಕಲ್ಪಿಸುವ ವಿಧಾನ ಇದೆಯಲ್ಲ ಇವತ್ತು ಒಂದು ಪ್ರೊಫೆಷನಲ್ ಆದ ಮೆಡಿಕಲ್ ಕಾಲೇಜಿಗೆ ಹೋದರೆ ಅಲ್ಲಿನ ವೊಕಾಬುಲರಿನೆ ಬೇರೆ ಇರ್‍ತದೆ. ಅದೇ ನೀವೊಂದು ಆರ್ಟ್ಸ್ ಕಾಲೇಜಿಗೆ ಬನ್ನಿ ಅಲ್ಲಿ ಮಾನವೀಯ ಶಿಕ್ಷಣವನ್ನ ಕಲಿಸೊ ಕಡೆ, ಅಲ್ಲಿ ಬಂದರೆ ಬಳಸುವ ಪರಿಕಲ್ಪನೆಗಳೆ ಬೇರೆ ಇರ್‍ತವೆ. ಈ ಸಂದರ್ಭದಲ್ಲಿ ನನ್ನ ಅನುಮಾನ ಏನೂ ಅಂದ್ರೆ ಕನ್ನಡದಲ್ಲಿ ಪರಿಕಲ್ಪಿಸುವ ಒಂದು ನೈಪುಣ್ಯತೆ ಎಲ್ಲೊ ಒಂದು ಕಡೆ ಕಳೆದುಹೋಗುತ್ತಿದೆ ಅಂತ...

ಅನಂತಮೂರ್ತಿ : ಪ್ರತಿಯೊಂದು ಸಬ್ಜೆಕ್ಟ್‌ಗೂ ಒಂದು ರೆಜಿಸ್ಟರ್ ಇದೆ. ಇಂಜಿನಿಯರಿಂಗ್‌ನಲ್ಲಿ ಒಂದು ರೀತಿಯ ರೆಜಿಸ್ಟರ್ ಇದೆ. ಆದರೆ ಅದು ಇಂಗ್ಲಿಷ್ ಭಾಷೆ ಅಲ್ಲ.

ಇಂಗ್ಲಿಷ್ ಭಾಷೆ ಗೊತ್ತಿರುವವರು ಇದ್ದರೂ ಇಂಜಿನಿಯರಿಂಗ್ ವಿಷಯ ಮಾತಾಡುತ್ತಿದ್ದಾಗ ಅರ್ಥವಾಗೊಲ್ಲ. ಹಾಗೆನೇ ಮೆಡಿಕಲ್ ಡಾಕ್ಟರ್ಸ್ ಮೆಡಿಸಿನ್ ಬಗ್ಗೆ ಮಾತಾಡ್ತಾ ಇದ್ದಾಗ ನಮಗೆ ಗೊತ್ತಾಗಲ್ಲ ಅಥವಾ ಫಿಸಿಸಿಸ್ಟ್ ಮಾತಾಡ್ತಾ ಇದ್ದರೆ ಗೊತ್ತಾಗೊಲ್ಲ. ಯಾಕಂದ್ರೆ ಅವರು ಅವರ ರೆಜಿಸ್ಟರ್‌ನಲ್ಲಿ ಮಾತಾಡ್ತಾ ಇರ್ತಾರೆ. ಅಲ್ಲಿ ಭಾಷೆಯ ಇಂಪಾರ್ಟೆನ್ಸ್ ಕಡಿಮೆ ಆಗ್ತಾ ರೆಜಿಸ್ಟರ್ ಇಂಪಾರ್ಟೆನ್ಸ್ ಜಾಸ್ತಿ ಆಗ್ತಾ ಹೋಗುತ್ತೆ. ಹ್ಯೂಮಾನಿಟೀಸ್‌ಗೆ ಬಂದಾಗ ಹ್ಯೂಮಾನಿಟೀಸ್‌ನಲ್ಲಿನೂ ಇವಾಗ ಸೋಸಿಯಲ್ ಸೈನ್ಸ್ ಪೊಲಿಟಿಕಲ್ ಸೈನ್ಸ್ ಇವನ್ನೆಲ್ಲಾ ತೀರಾ ಶಾಸ್ತ್ರೀಯವಾಗಿ ಮಾಡಿದಾಗ ಅವುಗಳ ರೆಜಿಸ್ಟರ್‌ಗೆ ಮೊರೆ ಹೋಗಬೇಕಾಗುತ್ತೆ. ರೆಜಿಸ್ಟೆನ್ಸ್‌ಗೆ ಒಳಗಾಗ್ತವೆ. ಅದರಿಂದ ನಾನು ಹೇಳೊದು ಅಂದ್ರೆ ಈ ಕನ್ನಡದಲ್ಲಿ ಕಲಿಯೊ ಹುಡುಗ ಇದಾನಲ್ಲ ಅವನು ಫಿಸಿಕ್ಸ್ ಕಲಿಯೊವಾಗ ಇನ್ನೊಂದು ರೆಜಿಸ್ಟರ್ ಅನ್ನು ಕಲಿತ್ಕೊತಾನೆ. ಅವರಿಗೆ ಭಾಷೆ ಪ್ರಶ್ನೆನೆ ಬರೊದಿಲ್ಲ.

ಇಂದೂಧರ : ಈಗ ಭಾಷಾ ಚಳವಳಿ ಅಥವಾ ಕನ್ನಡ ಚಳವಳಿ ಬೇಕು ಅನಿಸುತ್ತಾ ಅಥವಾ ಅದು ಯಾವ ರೀತಿ ಇರಬೇಕು?

ಅನಂತಮೂರ್ತಿ : ಕನ್ನಡ ಚಳವಳಿ ಬೇಕು, ಹೇಗೆ, ಎಲ್ಲ ಶಾಲೆಗಳು ಅತ್ಯುತ್ತಮವಾದ ಕನ್ನಡ ಶಾಲೆಗಳಾಗಬೇಕು. ಕನ್ನಡವನ್ನ ಕಲಿಸುವ ಶಾಲೆಗಳಲ್ಲ, ಈಗ ಯಾವ ಶಾಲೆಗೆ ಹೋದ್ರೂನು ನಾವು ಕನ್ನಡನ ತೃತೀಯ ಭಾಷೆಯಾಗಿ ಕಲಿಸ್ತೀವಿ ಅಂತಾರೆ, ಕನ್ನಡ ಮೇಷ್ಟ್ರು ಇರ್ತಾರೆ, ಲಾಸ್ಟ್ ಪೀರಿಯಡ್ ಪಾಠ ಮಾಡೊಕೆ ಅಲ್ವೆ. ಏನು ಪ್ರಯೋಜನ, ಕನ್ನಡ ಮಾಧ್ಯಮ. ನಾನು ಅದನ್ನೆಲ್ಲ ಹಂತ ಹಂತವಾಗಿ ಮಾಡೋಕೆ ತಯಾರಿದ್ದೀನಿ. ಸೈನ್ಸ್ ಬೇಕದ್ರೆ ಅವರು ಇಂಗ್ಲಿಷ್‌ನಲ್ಲಿ ಹೇಳಿಕೊಡ್ಲಿ, ಹ್ಯೂಮಾನಿಟೀಸ್‌ನೆಲ್ಲ ಕನ್ನಡದಲ್ಲಿ ಹೇಳಿಕೊಡ್ಲಿ.

ಸುಮಾ : ೯೦ರ ನಂತರ ಬಂದಿರೋ ಆರ್ಥಿಕ ನೀತಿ ಬೇಸಿಕ್ ಸೈನ್ಸ್‌ಗಳನ್ನ ಮತ್ತು ಹ್ಯೂಮಾನಿಟೀಸ್‌ಗಳನ್ನ ಕೂಡ ನಾನ್ ಮೆರಿಟ್ ಗೂಡ್ಸ್ ಅಂತ ಕನ್ಸಿಡರ್ ಮಾಡುತ್ತದೆ. ಹೀಗಿರುವಾಗ ಕನ್ನಡ, ಇಂಗ್ಲಿಷ್ ಈ ತರಹದ ಭಾಷೆಗಳು ಎಲ್ಲಿ ಇರುತ್ತೆ ಅನ್ನೊ ಒಂದು ಆತಂಕ ಶುರುವಾಗಿದೆ.

ಅನಂತಮೂರ್ತಿ : ಬಿ.ಎ., ಬಿ.ಎಸ್ಸಿ ಮುಖ್ಯವಾಗದೆ ಇದ್ರೆ ಬೇಸಿಕ್ ಸೈನ್ಸ್ ಅಷ್ಟು ಬೆಳೆಯಲ್ಲ. ಫಿಸಿಕ್ಸ್ ಕೆಮಿಸ್ಟ್ರಿ, ಮ್ಯಾಥಮೆಟಿಕ್ಸ್ ಇಂಥವು ಬೆಳೆಯದೇ ಇದ್ದರೆ ತಂತ್ರಜ್ಞಾನ ಬೆಳೆಯಲ್ಲ. ಎಲ್ಲಾ ತಂತ್ರಜ್ಞಾನದ ಆವಿಷ್ಕಾರದ ಹಿಂದೆ ವೈಜ್ಞಾನಿಕವಾದ ಆಲೋಚನಾ ಕ್ರಮ ಇದೆ. ಅಮೇರಿಕಾದಲ್ಲೂ ಹಾಗೆ ಆಗ್ತಾ ಇದೆ. ಫಿಸಿಕ್ಸ್‌ಗೆ ಜನ ಇಲ್ಲ ಈಗ, ಮ್ಯಾಥಮೆಟಿಕ್ಸ್‌ಗೆ ಜನ ಬರ್ತಾ ಇಲ್ಲ ಈಗ, ಯಾವುದನ್ನ ಕೂಡಲೇ ದುಡ್ಡು ಮಾಡೋಕೆ ಸಾಧ್ಯವೊ ಅದು ಮುಖ್ಯವಾಗುತ್ತಾ ಇದೆ. ಅಂದ್ರೆ ತಂತ್ರಜ್ಞಾನದ ಕಡೆ ಹೆಚ್ಚು ಒಲವು ಹೋಗುತ್ತಿದೆ. ತಂತ್ರಜ್ಞಾನಕ್ಕೂ, ವಿಜ್ಞಾನಕ್ಕೂ ಇರುವ ಸಂಬಂಧ ಮತ್ತೆ ಮುಖ್ಯವಾಗಬೇಕು. ಅದರಿಂದ ಎಲ್ಲ ಕಾಲೇಜುಗಳು ನಮಗೆ ಬೇಕು ಇವಾಗ. ಇದರ ಮಂಥನದಲ್ಲಿ ಹುಟ್ಟಿ ಬರುವ ಅತ್ಯುತ್ತಮ ವಿದ್ಯಾರ್ಥಿಗಳು ಯೂನಿವರ್ಸಿಟಿಗೆ ಬರುತ್ತಾರೆ. ಇದೊಂದು ದೊಡ್ಡ ಮಂಥನ, ಇಡೀ ದೇಶದ ಮಂಥನ ಅಲ್ಲಿ ನಡೆಯುತ್ತದೆ. ಅಷ್ಟೇ ಅಲ್ಲ ನಾನು ತೀರ್ಥಹಳ್ಳಿಯವನು. ತೀರ್ಥಹಳ್ಳಿಯ ಸುತ್ತ ಮುತ್ತ ಬೆಳೆದ ಹುಡುಗಿಗೆ ಇವತ್ತು ೧೮-೧೯ ವರ್ಷಕ್ಕೆ ಮದುವೆ ಆಗ್ದೆ ಇದ್ದರೆ ಅದಕ್ಕೆ ಕಾರಣ ಏನಂದ್ರೆ ಮಗಳು ಕಾಲೇಜಿಗೆ ಹೋಗ್ತಾ ಇದಾಳೆ, ನಮ್ಮ ಮಗಳು ಕಾಲೇಜು ಮುಗಿಸಲಿ, ಆಮೇಲೆ ಮಾಡಿದರಾಯಿತು. ಒಂದು ಬಿ.ಎ., ಬಿ.ಎಸ್ಸಿ ಆದರೂ ಮಾಡಲಿ. ಹೀಗಾಗಿರೋದ್ರಿಂದ ಎಷ್ಟು ಹೆಣ್ಣುಮಕ್ಕಳ ಮದುವೆ ಆಗೊ ವಯಸ್ಸು ಕಡಿಮೆ ಆಗಿದೆ. ಅದರಿಂದ ಅವರೆಲ್ಲರೂ ಹೋಗಿ ಒಂದು ದೊಡ್ಡ ತಂತ್ರಜ್ಞಾನದ ಕೆಲಸ ಮಾಡದೇ ಇದ್ದರೂ ಸಮಾಜಕ್ಕೆ ಮುಖ್ಯವಾದ ಒಬ್ಬ ಪ್ರಜೆ ಆಗ್ತಾರೆ. ಶಿಕ್ಷಣ ಕ್ಷೇತ್ರದಲ್ಲಿ ನಾವು ಬದಲಾಣೆ ಮಾಡಬೇಕಾದರೆ ಮಾಡಬೇಕಾದ ಬಹಳ ಮುಖ್ಯವಾದ ಕೆಲಸ ಅಂದರೆ ಸಾಮಾನ್ಯ ಶಾಲೆಗಳನ್ನ ಬಲಪಡಿಸಬೇಕು, ಬಲಪಡಿಸುವುದಕ್ಕಾಗಿ ಅಲ್ಲಿರುವ ಮಕ್ಕಳಿಗೂ ಇಂಗ್ಲಿಷ್ ಹೇಳಿಕೊಡಬೇಕು. ಮಾತಾಡೊದಿಕ್ಕೆ, ಆದರೆ ಮಾಧ್ಯಮದ ಮಟ್ಟಿಗೆ ಕನ್ನಡವೇ ಆಗಿರಬೇಕು. ಎಲ್ಲ ಮಕ್ಕಳಿಗೂ ಮಾಧ್ಯಮ ಕನ್ನಡ ಆಗಿರಬೇಕು. ಸಾಧ್ಯವಿದ್ದಷ್ಟು ಮಟ್ಟಿಗೆ. ಕಾನ್ವೆಂಟ್ಸ್ ಸ್ಕೂಲ್‌ನವರು ನಾವು ಇದೆಲ್ಲ ಮಾಡೊದೆ ಇಲ್ಲ ಅನ್ನೊದಾದ್ರೆ, ಹಾಗಾದರೆ ನೀವು ಸೈನ್ಸ್‌ನೆಲ್ಲ ಇಂಗ್ಲಿಷ್‌ನಲ್ಲಿ ಹೇಳಿಕೊಡಿ, ಆದರೆ ಈ ಹ್ಯೂಮಾನಿಟೀಸ್ ಇರ್ತಾವಲ್ಲ ಅವನ್ನ ಕನ್ನಡದಲ್ಲಿ ಹೇಳಿಕೊಡಿರಿ ಎಂದು ಹೇಳಬೇಕು, ಇವೆಲ್ಲ ಉಪಾಯಗಳು. ಇದನ್ನ ಕನ್ನಡದಲ್ಲಿ ಹೇಳಿಕೊಡಬಹುದು. ಆಗ ತಾಯಿ ತಂದೆನೂ ಅಬ್ಜೆಕ್ಟ್ ಮಾಡಲ್ಲ. ಯಾಕೆಂದ್ರೆ ಅವರಿಗೆ ಬೇಕಾಗಿರೋದು ಸೈನ್ಸ್ ತಾನೆ ಅವರಿಗೆಲ್ಲ ಐಟಿ, ಐಐಟಿಗೆ ಹೋಗಬೇಕಾಗಿರೋದು, ಕನ್ನಡದಲ್ಲಿ ಯೋಚನೆ ಮಾಡೋದನ್ನ ಕಲಿತುಕೊಂಡುಬಿಟ್ಟರೆ, ಅದು ಯಾವತ್ತೊ ಒಂದಿನ ಸರಿಹೊಗುತ್ತೆ.

ಡೊಮಿನಿಕ್ : ಉಡುಪಿ ಕನಕ ಗೋಪುರಕ್ಕೆ ಸಂಬಂಧಪಟ್ಟಹಾಗೆ ಆ ಗೋಪುರವನ್ನ ಕೆಡವಿದ್ದು ಅದರ ಬಗ್ಗೆ ಏನು ನಿಮ್ಮ ಅಭಿಪ್ರಾಯ?

ಅನಂತಮೂರ್ತಿ : ಅದು ಅವರು ಕೆಡವೊಕೆ ಹೋಗಬಾರದಿತ್ತು ಅಷ್ಟೆ ನಾನು ಒಂದು ಹೇಳ್ತೀನಿ. ಪೇಪರ್ ತೆಗೆದರೆ ಕಾವಿಯ ಚಿತ್ರ ಇಲ್ಲದೇ ಇರೊ ಒಂದೇ ಒಂದು ಪತ್ರಿಕೆ ಇವತ್ತು ಇರೊಲ್ಲ. ಎಲ್ಲ ಸಭೆಯಲ್ಲೂ ಅವರು ಇರುತ್ತಾರೆ. ಅವರೇನು ಮಹಾ ಆಧ್ಯಾತ್ಮದ ಮನುಷ್ಯರೂ ಅಲ್ಲ, ಕೆಲವರನ್ನು ಬಿಟ್ಟರೆ. ಅವರೆಲ್ಲ ಸಾಮಾನ್ಯ ಜನಗಳು. ಇವರೆಲ್ಲಾ ಎಷ್ಟು ಲೋಕ ವ್ಯವಹಾರದಲ್ಲಿ ತೊಡಗಿಬಿಟ್ಟಿದ್ದಾರೆ ಅಂದ್ರೆ, ಅವರು

ಮಠಗಳಿಗೆ ಸ್ವಲ್ಪವಾದರೂ ಆಧ್ಯಾತ್ಮ ಬೇಕು



ಕನಕ ಗೋಪುರ ಅವರು ಕೆಡವೊಕೆ ಹೋಗಬಾರದಿತ್ತು, ಅಷ್ಟೆ. ಪೇಪರ್ ತೆಗೆದರೆ ಕಾವಿಯ ಚಿತ್ರ ಇಲ್ಲದೇ ಇರೊ ಒಂದೇ ಒಂದು ಪತ್ರಿಕೆ ಇವತ್ತು ಇರೊಲ್ಲ. ಅವರು ಆಧ್ಯಾತ್ಮದ ಅಗತ್ಯವೇ ಕಾಣದೇ ಇರೋವಷ್ಟು ಲೋಕನಿರತರಾಗಿಬಿಟ್ಟಿದ್ದಾರೆ. ಉಡುಪಿ ಮಠಗಳು ಹಾಗೇ ಆಗಿದ್ದು.

ಆಧ್ಯಾತ್ಮದ ಅಗತ್ಯವೇ ಕಾಣದೇ ಇರೋವಷ್ಟು ಲೋಕನಿರತರಾಗಿಬಿಟ್ಟಿದ್ದಾರೆ. ಉಡುಪಿ ಮಠಗಳು ಹಾಗೇ ಆಗಿದ್ದು. ಹಾಗಾಗಿ ಅವರು ದುಡ್ಡು ಮಾಡಿದರು, ದೊಡ್ಡ ಗೋಪುರ ಕಟ್ಟಿಸಿದರು. ಆಮೇಲೆ ಇನ್ನೊಂದು ಏನು ಅಂದ್ರೆ ಕುರುಬರು ನಮಗೆ ದೇವಸ್ಥಾನ ಬೇಕು ಅಂತಾ ಇದಾರಲ್ಲ ಅದು ಬಹಳ ದೊಡ್ಡ ವಿಷಯ ಅಂತ ಬ್ರಾಹ್ಮಣರು ತಿಳಿದುಕೊಳ್ಳಬೇಕಾಗಿತ್ತು, ಅಲ್ಲವೇ, ಯಾಕೆ ಅಂದ್ರೆ, ಅರೆರೆ ನೀವು ಮಾಡುತ್ತಾ ಇರೋದು ನಮಗೂ ಬೇಕು ಅಂತಾ ಇದಾರಲ್ಲ ಅವರು.. ಅದನ್ನು ತಿಳಿದುಕೊಳ್ಳಬೇಕಾಗಿತ್ತು ಇವರು.. ಇದು ನನಗೆ ವಿಚಿತ್ರ ಅನಿಸುತ್ತೆ. ಆ ಕಟ್ಟಡ ಎಲ್ಲರೂ ನೋಡುವ, ಕಣ್ಣಿಗೆ ಬೀಳುವ ಕಟ್ಟಡ ಅದಕ್ಕೆ ಕೈ ಹಾಕಬಾರದಿತ್ತು.

ನಮ್ಮ ಮಠಗಳಿಗೆ ಇಂದು ಸ್ವಲ್ಪ ಆಧ್ಯಾತ್ಮ ಬೇಕಾಗಿದೆ. ನಿಜವಾಗಿ ಇವತ್ತು ಯಾರು ರೀಲಿಜಿಯಸ್ ಅಂದ್ರೆ ಹಳ್ಳಿಗಳಲ್ಲಿ ಹಬ್ಬಹರಿದಿನ ಎಲ್ಲ ಮಾಡ್ತಾರೆ ನೋಡಿ ಅವರು ನಿಜವಾಗಲೂ ರಿಲೀಜಿಯಸ್. ಬಹುಶಃ ದಲಿತರು ಮೊರ್ ರಿಲೀಜಿಯಸ್, ಆ ದೃಷ್ಟಿಯಲ್ಲಿ ನೋಡೊದಾದ್ರೆ. ಆಮೇಲೆ ಯಾವ ಯಾವ ಜಾತ್ರೆಗೆ ಹೋಗ್ತಾರೆ, ಮಹಾರಾಷ್ಟ್ರಕ್ಕೆ ವಿಠಲನ ಜಾತ್ರೆಗೆ ಹೋಗ್ತಾರೆ, ನಡಕೊಂಡು, ಕಾಲ್ನಡಿಗೆಯಲ್ಲಿ ಬುತ್ತಿ ಕಟ್ಟಿಕೊಂಡು ಹೋಗ್ತಾರೆ. ಅದನ್ನು ನಾವು ರಿಲೀಜಿಯಸ್ ಅಂತ ಕರಿತಿವಿ.

ಡೊಮಿನಿಕ್ : ಸುಮಾರು ೨ ವರ್ಷಗಳ ಹಿಂದೆ ಪಶ್ಚಿಮ ಘಟ್ಟಗಳಲ್ಲಿ ಈ ಗಣಿಗಾರಿಕೆ ವಿರುದ್ಧ ಪರಿಸರ ಚಳವಳಿ ನಡೆದಾಗ ತಾವು ಅದರ ಮುಂದಾಳತ್ವ, ಮುಂಚೂಣಿ

ಯಲ್ಲಿದ್ದಿರಿ. ಆದರೆ ಇತ್ತೀಚೆಗೆ ಅಲ್ಲಿ ಆದಿವಾಸಿಗಳು, ಗಣಿಗಾರಿಕೆ ಸಮಸ್ಯೆ ಇನ್ನಷ್ಟು ತೀವ್ರವಾಗಿದೆ. ಆದರೆ ತಾವು ಮೌನ ವಹಿಸಿದ್ದಿರಿ ಅಂತ ಅನ್ನಿಸುತ್ತಿದೆ.

ಅನಂತಮೂರ್ತಿ : ಇಲ್ಲ ಮೌನವಿಲ್ಲ, ನಾನು ಖರ್ಗೆಯವರನ್ನು ನೋಡಿ ಹೇಳಿದ್ದೆ ಅವರಿಗೆಲ್ಲ ಪಟ್ಟ ಕೊಟ್ಟುಬಿಡಿ ಅಂತ, ಅಲ್ಲಿರುವವರಿಗೆ, ಯಾಕಂದ್ರೆ ನಾವು ಕಾಡಿನಲ್ಲೇ ಇರುತ್ತೀವಿ ಅಂತ ಅವರು ಅಂದ್ರೆ ಅದಕ್ಕೆ ಅವಕಾಶ ಮಾಡಿಕೊಡಬೇಕು, ಅಂತ ಅಂದೆ. ಅದು ನಾವು ಹಾಗೆ ಹೇಳಿದ ಕೂಡಲೆ ಮಾಡೊಕಾಗಲ್ಲ, ಏನ ಮಾಡಬೇಕು ನನಗೆ ಗೊತ್ತಾಗಿಲ್ಲ ಸುಮ್ಮನೆ ಇದ್ದೀನಿ ಅಷ್ಟೆ ನಾನಿನ್ನೂನು ಅದರಲ್ಲಿ ಆಸಕ್ತನಾಗಿದ್ದೇನೆ. ಅಲ್ಲಿರುವವರಿಗೆ ಪಟ್ಟ ಕೊಡಬೇಕು, ಅಲ್ಲಿರೊದಿಕ್ಕೆ ಅವಕಾಶ ಮಾಡಿಕೊಡಬೇಕು. ಆದರೆ ಅಲ್ಲಿ ನಾಶ ಮಾಡಬಾರದು, ಯಾವಾಗ ಅವರಿಗೆ ಬಿಡಬೇಕು ಅನ್ನಿಸುತ್ತೆ ಆವಾಗ ಅವರಿಗೆ ಸಹಾಯ ಮಾಡಬಹುದು.

ಇಂದೂಧರ : ಈ ಪರಿಸರ ಚಳವಳಿ ಮತ್ತು ನಕ್ಸಲೀಯ ಚಳವಳಿ ವಿಶೇಷವಾಗಿ, ಅಲ್ಲಿ ಕೆಲಸ ಮಾಡ್ತಾ ಇದೆಯಲ್ಲ ಅದರ ಬಗ್ಗೆ ಏನು ಹೇಳುತ್ತೀರಿ ?

ಅನಂತಮೂರ್ತಿ : ಈ ನಕ್ಸಲಿಸಂ ಇದೆಯಲ್ಲ ಅದನ್ನು ನಾನು ಒಪ್ಪುವುದೇ ಇಲ್ಲ, ಯಾಕೆಂದ್ರೆ ಮೊದಲನೆ ಕಾರಣ ಏನು ಅಂದ್ರೆ ಅದು ಅಪಾರವಾದ ಭರವಸೆಯನ್ನು ಬಡಜನರಲ್ಲಿ ಹುಟ್ಟಿಸಿ ಕೈಗೂಡಕ್ಕೆ ಆಗದೆ ಇರೋ ಹಾಗೆ ಮಾಡಿಬಿಡುತ್ತೆ. ಸ್ಟೇಟ್‌ಗೆ ಬಹಳ ದೊಡ್ಡ ಪವರ್ ಇದೆ ಅದರ ವಿರುದ್ಧ ಒಂದು ಸಶಸ್ತ್ರ ಹೋರಾಟ ಇದೆಯಲ್ಲ ಅದು ಆಗೋದಿಲ್ಲ, ಅದರಿಂದ ಅಮಾಯಕರು ಸಾಯ್ತಾರೆ. ಸುಮ್ಮನೆ ಹಿಂಸಾಚಾರ ಆಗುತ್ತೆ. ಆದರೆ ಕೆಲವರು ಇದರಿಂದ ರೋಸಿ ಹೋಗಿ ಹೀಗೆ ಮಾಡಬೇಕು ಅಂತ ಕೆಲವರಿಗೆ ಅನಿಸಿದೆಯಲ್ಲ ಆ ಭಾವನೆಯನ್ನ ಗೌರವಿಸುತ್ತೀನಿ ನಾನು. ಆದರೆ ಆ ಭಾವನೆಯಿಂದ ಹುಟ್ಟುವ ಕ್ರಿಯೆಯನ್ನ ನಾನು ವಿರೋಧಿಸುತ್ತಿನಿ. ಅದರ ಹಿಂದಗಡೆ ಇರೋ ಪ್ರೇರಣೆಯನ್ನ ಒಪ್ಪಿಕೊಳ್ಳತೀನಿ. ಆಮೇಲೆ ಇನ್ನೊಂದು ಸಮಸ್ಯೆ ಏನೂ ಅಂತ ಡ್ಯಾಮ್ ಮಾಡೊದಿಕ್ಕೆ ಹೊರಟಿದ್ದಾರೆ. ಎಲ್ಲರನ್ನ ಎಬ್ಬಿಸೋಕಾಗಿ ಇದನ್ನು ಮಾಡಿದ್ದಾರೆ. ಈ ರೀತಿಯ ಬೆಳವಣಿಗೆ ಒಳ್ಳೆದಲ್ಲ ಅಂತ ನನಗೆ ಅನ್ನಿಸುತ್ತೆ ಸೈಂಟಿಫಿಕ್ ಆಗಿ. ಆದರಿಂದ ಅವರನ್ನ ಒಕ್ಕಲೆಬ್ಬಿಸಬಾರದು. ಅವರನ್ನು ಇರೊ ರೀತಿಲೆನೆ ಬಿಡಬೇಕು. ಯಾಕೆಂದ್ರೆ ಇಲ್ಲಿ ಕೆಲವನ್ನ ಮಾರಾಟ ಮಾಡಬೇಕಾದ್ರೆ ಅವರು ಇಲ್ಲಿ ಬರುತ್ತಾ ಇರುತ್ತಾರೆ. ಅದರಿಂದ ಅವರಿಗೆ ಅದನ್ನು ಬಿಟ್ಟು ಬರಬೇಕು ಅಂದಾಗ ಅದಕ್ಕೆ ಅವಕಾಶ ಮಾಡಿಕೊಡಬೇಕು.

ಇಂದೂಧರ : ಈಗ ಸರ್ಕಾರದ ಇಕ್ಕಟ್ಟೇನೆಂದರೆ ಅರಣ್ಯದ ಬಗ್ಗೆ ಸುಪ್ರಿಂ ಕೋರ್ಟ್‌ದು ಒಂದು ಡೈರೆಕ್ಷನ್ ಇದೆ, ಕೇಂದ್ರ ಸರ್ಕಾರದ ಒಂದು ಡೈರೆಕ್ಷನ್ ಇದೆ. ಅಲ್ಲಿ ಜನವಸತಿ ಇರಬಾರದು, ಜನ ವಾಸ ಮಾಡಬಾರದು ಅಂತ.

ಅನಂತಮೂರ್ತಿ : ಯಾಕೆ ಗಾರ್ಡ್‌ಗಳು ಬೇಡ್ವಾ ಅಲ್ಲಿ, ಅರಣ್ಯನ ರಕ್ಷಿಸೋಕೆ, ಮಾಡೋಕೆ, ಅವರಿಗೆ ಒಂದು ಚೂರು ಟ್ರೈನಿಂಗ್ ಕೊಟ್ಟು ಮಾಡಿಸಲಿ, ಇಷ್ಟರವರೆಗೆ ಅರಣ್ಯ ಉಳಿದಿರೋದೆ ಅವರಿಂದ. ಹೋಗಿರೋದೆಲ್ಲ ನಮ್ಮ ನಾಟ ಗೀಟ ಮಾರೋವವರಿಂದ.

ನಕ್ಸಲಿಸಂ ಬಡವರಲ್ಲಿ ಅಪಾರವಾದ ಭರವಸೆಯನ್ನು ಹುಟ್ಟಿಸಿ ಕೈಗೂಡದಂತೆ ಮಾಡುತ್ತೆ

> **ಸ್ಟೇಟ್‌ಗೆ ಬಹಳ ದೊಡ್ಡ ಪವರ್ ಇದೆ. ಅದರ ವಿರುದ್ಧ ಒಂದು ಸಶಸ್ತ್ರ ಹೋರಾಟ ಇದೆಯಲ್ಲ ಅದು ಆಗೋದಿಲ್ಲ. ಅದರಿಂದ ಅಮಾಯಕರು ಸಾಯ್ತಾರೆ. ಸುಮ್ಮನೆ ಹಿಂಸಾಚಾರ ಆಗುತ್ತೆ. ಆದರೆ ಕೆಲವರು ಇದರಿಂದ ರೋಸಿ ಹೋಗಿ ಹೀಗೆ ಮಾಡಬೇಕು ಅಂತ ಅನಿಸಿದೆಯಲ್ಲ ಆ ಭಾವನೆಯನ್ನ ಗೌರವಿಸುತ್ತೀನಿ ನಾನು. ಆದರೆ ಆ ಭಾವನೆಯಿಂದ ಹುಟ್ಟುವ ಕ್ರಿಯೆಯನ್ನ ನಾನು ವಿರೋಧಿಸ್ತೀನಿ.**



ಅವರಿಗೆ ಎಲೆಕ್ಟ್ರಿಕ್ ಲೈನ್ ಹಾಕಿ ಅಂದರೆ ಹಾಕೊಕಾಗಲ್ಲ, ಟಾರ್ ರೋಡ್ ಮಾಡಿ ಅಂದರೆ ಮಾಡೊಕಾಗಲ್ಲ, ನಾವು ಅಲ್ಲಿ ಇರೊ ಸ್ಥಿತಿಯಲ್ಲೇ ಇರ್ತೀವಿ ಅಂತ ಅನ್ನೊದಾದ್ರೆ ಅವರನ್ನು ಎಬ್ಬಿಸೊದು ಬೇಡ. ಆದರೆ ಅವರಿಗೆ ಕೆಲವು ಏಯ್ಡ್ ಬೇಕಾಗುತ್ತೆ, ಮೆಡಿಕಲ್ ಏಯ್ಡ್. ಅಲ್ಲೂ ಕೂಡ ಅವರು ಅವರದೇ ಆದ ಔಷದೋಪಾಚಾರ ಪದ್ಧತಿ ಇದೆ, ಅದನ್ನು ಅಂದ್ರೆ ಈ ಸಶಸ್ತ್ರಹೋರಾಟ ಮಾಡಬೇಕೂಂದ್ರೆ ಅವರಿಗೆ ಈ ಡ್ರಗ್ ಟ್ರಾಫಿಕ್‌ನ ಅವಶ್ಯಕತೆ ಇದೆ. ಹಾಗಾಗಿ ಈ ಹಿಂಸಾತ್ಮಕ ಚಟುವಟಿಕೆಗಳು ಒಂದು ರೀತಿಯ ಅಪರಾಧದಿಂದ ಇನ್ನೊಂದು ರೀತಿಯ ಅಪರಾಧಕ್ಕೆ ಅವರನ್ನ ಅನಿವಾರ್ಯವಾಗಿ ಎಳೆದುಕೊಂಡು ಹೋಗುತ್ತೆ. ಆಮೇಲೆ ಅದರ ಒಳಗೆ ತಮ್ಮದೇ ಲಾಭಕ್ಕಾಗಿ ಬರೊ ಜನ ಬಂದು ಸೇರಿಕೊಂಡು ಬಿಡುತ್ತಾರೆ. ಹೇಗೋ ಅದು ಗುಪ್ತವಾಗಿ ನಡಿತಾ ಇರೋದ್ರಿಂದ ಯಾರ ಅದರಲ್ಲಿ ಜಿನಿಯನ್ ಯಾರು ಅದರಲ್ಲಿ ಒಳ್ಳೆಯವರು ಅಂತ ಗೊತ್ತಾಗದೆ ಇದ್ದಾಗೆ ಆಗುತ್ತೆ. ಆಮೇಲೆ ಇವರು ಹೇಳಬೇಕು. ನಾವು ನಕ್ಸಲೀಯರು ಅವರಲ್ಲ ಅಂತ. ದರೋಡೆ ಮಾಡೋವ್ರೆಲ್ಲ ಅವರ ಹೆಸರಲ್ಲೆ ಇದನ್ನು ಮಾಡ್ತಾರೆ. ಇದನ್ನ ನಾನು ಹೇಳೋದು.

ಇಂದೂಧರ : ಆದಿವಾಸಿಗಳ ಅಭಿವೃದ್ಧಿ ಅಂದ್ರೆ ಅವರನ್ನು ನಗರೀಕರಣಗೊಳಿಸೋದು ಅಂತ ಸರ್ಕಾರ ತಿಳ್ಕೊಂಡಿದೆ. ಈಗ ಆದಿವಾಸಿಗಳಿಗೆ ಪುನರ್ವಸತಿ ಕಲ್ಪಿಸಬೇಕು ಅನ್ನೊದೇ ನಿಜವಾಗಿ ಆದಿವಾಸಿಗಳನ್ನ ಒಕ್ಕಲೆಬ್ಬಿಸೊ ಕೆಲಸ. ಆದರೆ ಅವರಿಗೆ ಸೌಲಭ್ಯ ಕಲ್ಪಿಸಿಕೊಡಬೇಕು ಅಂದ್ರೆ ಸರ್ಕಾರಕ್ಕೆ ನಿಜವಾದ ಇಕ್ಕಟ್ಟಿದೆ, ಅದರ ಬಗ್ಗೆ ಏನು...

ಅನಂತಮೂರ್ತಿ : ಅವರನ್ನ ಎಬ್ಬಿಸಕ್ಕೆ ಹೋಗಬಾರದು. ಯಾಕೆ ಇದನ್ನ ಮಾಡ್ತಾ ಇದಾರೆ ಅಂದ್ರೆ ಈ

ಇಂದೂಧರ : ಈ ಸಮಸ್ಯೆ ಈಗ ಸರ್ಕಾರದ ತಲೆ ಮೇಲಿದೆ, ಸರ್ಕಾರಕ್ಕೆ ಏನು ಹೇಳ್ತೀರಿ ?

ಅನಂತಮೂರ್ತಿ : ಸರ್ಕಾರಕ್ಕೆ ಗೊತ್ತಿದೆ ಇದು. ಲೂಟಿ ಹೊಡೆಯೊಕ್ಕೋಸ್ಕರವಾಗಿ ಅವರನ್ನ ಒಕ್ಕಲೆಬ್ಬಿಸ್ತಾ ಇದಾರೆ. ಅರಣ್ಯವನ್ನ ಕಾಪಾಡಿದವರೆ ಆದಿವಾಸಿಗಳು. ಅದರಿಂದ ಅವರಿಗೆ ಅಲ್ಲಿರುವ ಹಕ್ಕಿದೆ. ಅವರೇ ಅರಣ್ಯ ರಕ್ಷಕರು. ಅವರಿಗೆ ಎಲ್ಲಿ ಎಷ್ಟು ಕಾಯನ್ನ ಎತ್ತಿಕೊಬೇಕು, ಎಷ್ಟು ಬಿಡಬೇಕು, ಎಲ್ಲ ಗೊತ್ತಿರುತ್ತೆ. ಈಗ ಏನಾಗಿದೆ ಅಂದ್ರೆ ನಾನು ಇತ್ತೀಚೆಗೆ ಅಲ್ಲಿ ಹೋಗಿ ಬಂದೆ. ಊರಿನ ದನನೆಲ್ಲ ಅಲ್ಲಿಗೆ ಹೊಡಿತಾರೆ. ದನನ ಸಾಕೊಂಡು ಕೊಡಿ ಅಂತ ಅವರ ಹತ್ತಿರ ಬಿಡತಾರೆ. ಅವರು ಹೋಗಿ ಅಲ್ಲಿ ಅದನ್ನ ಮೇಯಿಸ್ತಾರೆ. ಮೇಯಿಸಿದ ನಂತರ ಅಲ್ಲಿ ಮತ್ತೆ ಹುಲ್ಲು ಬರಬೇಕು ಅಂತ ಅದನ್ನ ಸುಡುತಾರೆ, ನಾವು ಅವರನ್ನ ಹಾಳು ಮಾಡ್ತಿದಿವಿ, ಊರಿನವರು ಅವರನ್ನ ಬಳಸಿಕೊಳ್ಳುತ್ತಾ ಇದಾರೆ.

ಡೊಮಿನಿಕ್ : ಈ ಜಾತಿ ಆಧಾರಿತ ಮೀಸಲಾತಿಯಿಂದ ಪ್ರತಿಭೆ ಹಾಗೂ ಸಾಮರ್ಥ್ಯ ಹಾಳಾಗ್ತಾ ಇದೆ ಅಂತ ಒಂದು ಕಡೆ ಕೂಗೆಬ್ಬಿಸ್ತಾ ಇದಾರೆ. ಅದು ಹೆಚ್ಚೆಚ್ಚು ಐಟಿ ಸೆಕ್ಟರ್‌ಲ್ಲಿ ಆ ಕೂಗು ಕೇಳ್ ಬರ್ತಾ ಇದೆ.

ಅನಂತಮೂರ್ತಿ : ಅದಕ್ಕೆ ಹೇಳ್ತೀನಿ ನೋಡಿ. ಈ ಐಟಿ ಸೆಕ್ಟರ್‌ನಲ್ಲಿ ಜಾತಿ ಆಧಾರಿತ ಮೀಸಲಾತಿ ಕೊಡಲಿ, ಮಲ್ಟಿ ನ್ಯಾಷನಲ್ ಕಂಪನಿಗಳೆನಾದ್ರೂ ಇಲ್ಲಿಗೆ ಬಂದ್ರೆ ಅಲ್ಲಿ ಮೀಸಲಾತಿ ಕೊಡಬೇಕು. ನನ್ನದೊಂದು ಸ್ಲೋಗನ್ ಇದೆ. 'ಮೀಸಲಾತಿಯನ್ನ ಕೊನೆಗಾಣಿಸುವುದಕ್ಕಾಗಿ ಮೀಸಲಾತಿ' ಅಂದರೆ ಮೀಸಲಾತಿಯನ್ನ ಕೊನೆಗಾಣಿಸೊದಕ್ಕಾಗಿ ಬೇಕಾದಷ್ಟು ಮೀಸಲಾತಿಯನ್ನ ಈಗಲೇ ಮಾಡಿಬಿಡಿ.

ಇನ್ನು ಹತ್ತಿಪ್ಪತ್ತು ವರ್ಷಗಳಲ್ಲಿ ಈ ಮೀಸಲಾತಿಯ ಅಗತ್ಯವೇ ಇರಬಾರದು. ಇದು ಯಾವಾಗ ಸಾಧ್ಯ. ಯಾವಗಂದ್ರೆ ಎಲ್ಲ ಪ್ರೈವೇಟ್ ಕಂಪನಿಗಳಲ್ಲೂ

ಮೀಸಲಾತಿಯನ್ನ ಕೊಟ್ಟು ಒಂದು ಜನರೇಷನ್‌ಗೇನೆ ಮೀಸಲಾತಿ ಅಗತ್ಯ ಇಲ್ಲದೆ ಇರೊ ಹಾಗೆ ಮಾಡಬೇಕು. ಇಷ್ಟರವರೆಗೆ ದಲಿತ ಪ್ರಶ್ನೆ ಇದ್ದಾಗ, ಸವರ್ಣೀಯರಲ್ಲಿ ಒಂದು ಅವಮಾನ ಕೆಲಸ ಮಾಡ್ತಾ ಇತ್ತು. ದಲಿತರಲ್ಲೂ ಒಂದು ಕಿಚ್ಚು ಹೊಸ ಮಾಡ್ತಾ ಇತ್ತು. ಸವರ್ಣೀಯರಲ್ಲಿ ಅವಮಾನ ಹುಟ್ಟಿಸಿದ್ದು ಗಾಂಧಿ. ದಲಿತರಲ್ಲಿ ಕೆಚ್ಚನ್ನ ಹುಟ್ಟಿಸಿದ್ದು ಅಂಬೇಡ್ಕರ್. ಇವರಿಬ್ಬರೂ ಕೂಡಿ ನಮ್ಮ ದೇಶವನ್ನ ಈ ಸ್ಥಿತಿಗೆ ತಂದಿದಾರೆ. ಈಗ ಸವರ್ಣೀಯರಲ್ಲಿರೋ ಅವಮಾನ ಕಡಿಮೆ ಆಗ್ತಾ ಇದೆ, ದಲಿತರಲ್ಲಿ ಕೆಚ್ಚು ಹೊರಟು ಹೋಗುತ್ತಿದೆ. ಮತ್ತೆ ದಲಿತರಲ್ಲಿ ಕೆಚ್ಚು ಬರಬೇಕೂಂದ್ರೆ ಇದ್ಯಾವುದರ ಪ್ರಯೋಜನವನ್ನು ಪಡೆದೇ ಇರೊ ದಲಿತರ ಹತ್ತಿರ ಅವರು ಹೋಗಬೇಕು. ಈ ಸ್ಥಿತಿಯಲ್ಲಿ ಒಂದು ಹೊಸ ಪ್ರೇರಣೆ ಹುಟ್ಟೋದು. ಇದನ್ನ ದಲಿತರು ಅರ್ಥ ಮಡ್ಕೊಬೇಕು, ನಮ್ಮಂಗೆ ಯೋಚನೆ ಮಾಡೊವರು ಅರ್ಥ ಮಾಡ್ಕೊಬೇಕು. ಮತ್ತು ಅದು ಹೋಗಬೇಕಾದ್ರೆ ಸೆಕೆಂಡ್ ಜನರೇಷನ್ ದಲಿತ್ಸ್ ಈಗ ಇದಾರಲ್ಲ ಯಾವ ಲಾಭವನ್ನೂ ಪಡೆದುಕೊಳ್ಳದೇ ಇರೊವರು ಅವರಿಗೆ ಆದ್ಯತೆಯನ್ನ ಕೊಟ್ಟು ಎಲ್ಲ ಮೀಸಲಾತಿಯನ್ನ ಮಾಡಬೇಕು. ಪ್ರೈವೇಟ್ ಕಂಪನೀಸ್‌ನಲ್ಲೂ ಮಾಡಬೇಕು.

ಇಂದೂಧರ : ಮೀಸಲಾತಿ ಈಗ ನೌಕರಿ, ರಾಜಕೀಯ, ಶಿಕ್ಷಣ ಇದಕ್ಕಷ್ಟೆ ಇದೆ ಇವತ್ತು ಈ ಜಾಗತೀಕರಣದಿಂದಾಗಿ ಉದ್ಯೋಗಗಳು ತುಂಬಾ ಕಡಿಮೆ ಆಗಿವೆ. ಹಾಗಾಗಿ ಇನ್‌ಫೈಟ್ ಶುರುವಾಗಿದೆ ದಲಿತರಲ್ಲಿ. ಈಗ ಅಮೆರಿಕದಲ್ಲಿ ಡೈವರ್ಸಿಟಿ ಪ್ರೋಗ್ರಾಮ್ ಅಂತ ಮಾಡ್ತಾರಲ್ಲ, ಸರ್ಕಾರದ ಎಲ್ಲಾ ಗುತ್ತಿಗೆ ಸರಬರಾಜಿನಲ್ಲಿ ಎಲ್ಲದರಲ್ಲೂ ಮೂಲನಿವಾಸಿಗಳಿಗೆ ಇಷ್ಟು ಪರ್ಸೆಂಟ್ ಅಂತ ಅವರು ಪಾಲುದಾರಿಕೆ ಕೊಡುತ್ತಿದ್ದಾರೆ. ಇಲ್ಲಿ ಇಂಡಿಯಾದಲ್ಲಿ ಆ ತರಹದ್ದು ಇಲ್ಲ...

ಅನಂತಮೂರ್ತಿ : ಇಲ್ಲೂ ಮಾಡಬೇಕು. ಗುತ್ತಿಗೆ ಹಿಡಿಯೋದು ಎಲ್ಲ ಇದೆಯಲ್ಲ ಅದಕ್ಕೆ ಡೈವರ್ಸಿಫೈ ಆದರೆ ದಲಿತರು ಕೂಡ ಅದರಲ್ಲಿ ಪಾಲ್ಗೊಳ್ಳುತ್ತಾರೆ.

ಡೊಮಿನಿಕ್ : ಸ್ತ್ರೀವಾದವು ಸಾರ್ವಜನಿಕ ಮನ್ನಣೆ ಪಡೆಯುತ್ತಿರುವ ಈ ಸಂದರ್ಭದಲ್ಲಿ ಹೆಚ್ಚಾಗಿ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಮತ್ತು ಇತರ ಮೇಲ್ಜಾತಿ ಮಹಿಳೆಯರು ಮಾತ್ರ Gender politics ಅನ್ನು ಗುರುತಿಸುವ, ಸ್ತ್ರೀ ಸಂವೇದನೆಯನ್ನು ವಿವರಿಸುವ ಪ್ರಯತ್ನಗಳನ್ನು ನಡೆಸಿದ್ದಾರೆ. ಇದನ್ನು ಒಟ್ಟಾರೆ ಸ್ತ್ರೀ ಸಮುದಾಯದ ಪ್ರಾತಿನಿಧೀಕರಣವೆಂದ್ದು ಗ್ರಹಿಸಲು ಸಾಧ್ಯವೇ ?

ಅನಂತಮೂರ್ತಿ : ಇಂತದರಲ್ಲಿ ಪ್ರಶ್ನೆನೆ ಕೇಳಬೇಕಾದ ಅಗತ್ಯ ಇಲ್ಲ ಅನಿಸುತ್ತೆ ನನಗೆ. ಈಗ ಸ್ತ್ರೀ ಪ್ರಶ್ನೆನ ಎತ್ತಿಕೊಂಡರೆ ಮೇಲ್ಜಾತಿಯವಳಾಗಲಿ, ಯಾರೇ ಆಗಲಿ, ಮಾತಾಡ್ತಾ ಇದ್ದಾಗ ಎಲ್ಲ ಸ್ತ್ರೀಯರನ್ನ ಮುಟ್ಟುವ ಶಕ್ತಿಯನ್ನ ಪಡೆದಿರುತ್ತೆ. ಆ ಮಾತಿಗೆ, ಆ ವಿಚಾರಕ್ಕೆನೆ, ಆ ವಿಚಾರ ಎಲ್ಲಿಂದ ಹುಟ್ಟಿ ಬರುತ್ತೆ ಅದು ಬ್ರಾಹ್ಮಣ ಹೆಂಗಸರೇ ಮಾಡ್ತಾ ಇರಲಿ, ಲಿಂಗಾಯಿತರ ಹೆಂಗಸರೇನೆ ಮಾಡ್ತಾ ಇರಲಿ, ಆಮೇಲೆ ದಲಿತ ಹೆಂಗಸರೂ ಮಾಡಲಿ.

ಡೊಮಿನಿಕ್ : ಆದರೆ ಅದು ಸಾಮಾಜಿಕ ಅಥವಾ ಆರ್ಥಿಕ ಕ್ಷೇತ್ರಗಳಿಗೆ ಅನ್ವಯಿಸಿದರೆ ಅಲ್ಲಿ ದಲಿತ

ಒಂದು ಕಾಲದಲ್ಲಿ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ವ್ಯವಸ್ಥೆ ಎಲ್ಲ ಇತ್ತಲ್ಲ ಬಹಳ ಇಂಪಾರ್ಟ್‌ಟೆಂಟ್ ಆಗಿರ್ತಾ ಇತ್ತು. ಈಗ ಅದರ ಇಂಪಾರ್ಟೆನ್ಸ್ ಕಡಿಮೆ ಆಗಿದೆ. ಅದಕ್ಕಿಂತ ಹೆಚ್ಚಿಗೆ ಇಂಪಾರ್ಟೆಟೆಂಟ್ ಇವನ್ನೆಲ್ಲ ಮೀರಿ ನಮ್ಮೆಲ್ಲರನ್ನೂ ಇವತ್ತು ಕಬಳಿಸೊಕೆ ಬಂದಿರೊ ಅಂತಹ ಗ್ಲೋಬಲೈಝೇಷನ್.

ಹೆಣ್ಣುಮಕ್ಕಳು ಅಥವಾ ತಳಸಮುದಾಯದ ಆದಿವಾಸಿಗಳ ಹೆಣ್ಣು ಮಕ್ಕಳು ಅಲ್ಲಿ ಪ್ರತಿನಿಧಿಸೊದು ಅದು ತೀವ್ರವಾಗಿ...

ಅನಂತಮೂರ್ತಿ : ಅಲ್ಲ ನೀವು ಹೇಳ್ತಿರೊದಕ್ಕೆ ಒಂದು ಕಾರಣ ಇದೆ. ಇನ್ಸ್‌ಟಿಟ್ಯೂಷನ್ ಮಾಡೊಕೆ ಹೊರಟರೆ ಈಗ ಇವರ್‍ಯಾರಿಗೊ, ಸ್ತ್ರೀ ವಾದಿಗಳು ಎಂಎಲ್‌ಎನೊ, ಎಂಎಲ್‌ಸಿನೊ ಕೊಡಬೇಕು ಅಂತಂದಾಗ ನೀವು ಹೇಳೊ ಪ್ರಶ್ನೆಗಳೆಲ್ಲ ಬರ್ತವೆ. ನಾನು ಅದನ್ನ ಯೋಚ್ನೆ ಮಾಡ್ತಾ ಇಲ್ಲ. ಅದು ಬಂದಾಗ ನೀವು ಅಲ್ಲು ಕೂಡ ಎಲ್ಲ ಜಾತಿಯವರಿಗೂ ಕೊಡಿ ಅಂತ ತಿರ್ಮಾನ ಮಾಡಬೇಕು. ವಿಚಾರಕ್ಕೆ ಬಂದಾಗ ಆ ವಿಚಾರ ಎಲ್ಲಿಂದ ಹುಟ್ಟಲಿ, ಯಾರೇ ಅದನ್ನು ಇವತ್ತು ಪ್ರಬಲವಾಗಿ ಪ್ರತಿಪಾದಿಸಲಿ, ಅರ್ಥಪೂರ್ಣವಾಗಿರೊದಿಕ್ಕೆ ಸಾಧ್ಯ ಇದೆ.

ಡೊಮಿನಿಕ್ : ಆದರೆ ಸ್ವಲ್ಪ ಪ್ರಾಬ್ಲಂ ಅಂತಾನೆ ಅನಿಸ್ತದೆ. ಈಗ ಗುಜರಾತ್ ಹಿಂಸಾಚಾರನೇ ತೆಗೆದುಕೊಂಡರೆ ಅಲ್ಲಿ ಸ್ತ್ರೀವಾದಿಗಳು ಅಂತ ಯಾರು ಕೆಲವರು ಹೇಳಿಕೊಳ್ತಾ ಇದ್ದರು ಅವರು ಮುಂದಕ್ಕೆ ಆ ಹಿಂಸೆಗೆ ಬೆಂಬಲ ಕೊಟ್ಟು...

ಅನಂತಮೂರ್ತಿ : ಸ್ತ್ರೀ ವಾದಿಗಳಲ್ಲ ಅವರು. ಯಾರೇಳಿದ್ರು ಅವರು ಸ್ತ್ರೀವಾದಿಗಳು ಅಂತ. ಹೆಂಗಸರು ಮಾಡಿದಾರೆ. ತುಂಬ ಜನ ಮಧ್ಯಮವರ್ಗದ ಹೆಂಗಸರು ಗಂಡಸರಷ್ಟೆಕ್ರೂರಿಗಳಾಗಿರ್ತಾರೆ. ನಾನು ಸ್ತ್ರೀವಾದ ಅಂದಾಕ್ಷಣ ಎಲ್ಲ ಹೆಂಗಸರು ವಂಡರ್‌ಫುಲ್ ಅಂತ ನಾನು ಖಂಡಿತ ಹೇಳೊಲ್ಲ, SO ಹೆಂಗಸರು ಅಷ್ಟೇ ದುಷ್ಟರಾಗಿರ್ತಾರೆ, ಇವರು ಅಷ್ಟೆ ದುಷ್ಟರಾಗಿರ್ತಾರೆ, ಅನೇಕ ಸಾರಿ ಹೆಂಗಸರು ದುಷ್ಟರಾಗಿರೋ ಹಾಗೆ ಗಂಡಸರು ರಾಜಕೀಯ ಮಾಡ್ತಾರೆ.

ಅವರನ್ನ ಉಪಯೋಗಿಸಿಕೊಳ್ಳುತ್ತಾರೆ. ಅವರು ಉಪಯೋಗಕ್ಕೆ ಒಳಗಾಗ್ತಾರೆ. ಅದರಿಂದ ಒಳ್ಳೆವರು ಯಾರು, ಕೆಟ್ಟವರು ಯಾರು ಅನ್ನೊದನ್ನ ಇದರೊಳಗೆ ತಂದ್ರೆ ಪ್ರಯೋಜನವಾಗೊದಿಲ್ಲ.

ಆದರೆ ಸ್ತ್ರೀವಾದ ಅಂತ ಅನ್ನೊದು ಇದೆಯಲ್ಲ ಅದನ್ನೆ ನಾ ಹೇಳಿದ್ದು. ಅವರಿಗೆ ಇರುವ ಅವಶ್ಯಕತೆಗಳು, ಅವರ ಅಗತ್ಯಗಳು, ಅವಳಿಗೇ ಇರುವ ಕಾಮಜೀವನದ ಅಗತ್ಯಗಳು, ಅದರ ಬಗ್ಗೆ ಅವರಿಗೆ ಮಾತಾಡೊದಿಕ್ಕೆ ಅವರಿಗಿರುವ ಸ್ವಾತಂತ್ರ್ಯ, ಇವನ್ನೆಲ್ಲ ಪ್ರತಿನಿಧಿಸೊದು ಯಾವ ಜಾತಿ ಹೆಣ್ಣು ಮಗಳು ಪ್ರತಿನಿಧಿಸಿದರೂ ಎಲ್ಲರಿಗೂ ಅನ್ವಯಿಸುವಂತಹ ಪ್ರಶ್ನೆ ಇದು. ಅನೇಕ ಸಾರಿ ಈ ವಿಮೋಚನೆ ಅನ್ನೊದು ಬಡ ಜಾತಿ ಹೆಣ್ಣು ಮಕ್ಕಳಿಗಿಂತ ಮೇಲ್ಜಾತಿ ಹೆಣ್ಣು ಮಕ್ಕಳಿಗೆ ಅಗತ್ಯವಾದದ್ದು. ಅದು ಮಿಡ್ಲ್ ಕ್ಲಾಸ್‌ನಲ್ಲಂತೂ ತುಂಬಾ ಅಗತ್ಯ ಇದೆ. ಲೊಯರ್ ಕ್ಲಾಸ್‌ನಲ್ಲಿ ಸುಲಭವಾಗಿ ಮದುವೆ ಮಾಡಿಕೊಳ್ಳೊದು, ಬಿಡೊದು ಎಲ್ಲಾ ಮಾಡ್ತಾರೆ. ಅಲ್ಲವಾ, ಯಾಕೆಂದ್ರೆ ಅವರು ಹೊರಗೆ ಹೋಗಿ ದುಡಿತಾ ಇರ್ತಾರಲ್ಲ. ಅವರು ಹೊಲದಲ್ಲಿ ಕೆಲಸ ಮಾಡ್ತಾರೆ. ಗಂಡಿನ ಸಮನಾಗಿ ನಿಲ್ತಾರೆ. ಅದೇನೆ ಮದುವೆ ಮಾಡಿಕೊಂಡು ಅಮೆರಿಕಾಗೆ ಕರಕೊಂಡು ಹೋಗ್ತಾರಲ್ಲ, ಅವರನ್ನ ಮೊದಲು ವಿಮೋಚನೆ ಮಾಡಬೇಕು.

ಡೊಮಿನಿಕ್ : ಕೊನೆಯದಾಗಿ ತಮ್ಮ ವೈಯಕ್ತಿಕ ಬರವಣಿಗೆ ಸಂಬಂಧಪಟ್ಟ ಹಾಗೆ ಪ್ರಶ್ನೆ. ಅನೇಕ ಸಲ ಈ ಪರಂಪರೆಯನ್ನ ಇನ್ನೊಂದು ರೀತಿ ಅರ್ಥೈಸುವಾಗ ಒಂದು ಕಡೆ ಆ ಪರಂಪರೆ ವಿರುದ್ಧನೆ ಪ್ರತಿಭಟನೆಗಳು ನಡೀತಾ ಹೋಗ್ತಾ ಇರುತ್ತೆ. ಆದರೆ ಇನ್ನೊಂದು ಕಡೆ ಆ ಪರಂಪರೆಯಲ್ಲಿ ಒಳ್ಳೆದುನು ಇದೇ ಅಂತ ಹೇಳೊ ಅಂತದ್ದು. ಇವೆಲ್ಲ ನೋಡೊವಾಗ ಎಲ್ಲೊ ಒಂದು ಕಡೆ ಈ ಓರಿಯಂಟಲಿಸ್ಟ್ ಥಿಂಕಿಂಗ್ ತಮ್ಮ ಆಲೋಚನೆಯಲ್ಲಿ ಬರ್ತಾ ಇದೆಯೊ ಏನೊ ಅಂತ ಒಂದು..

ಅನಂತಮೂರ್ತಿ : ಇಲ್ಲ ಇಲ್ಲ, ಆ ಶಬ್ದವನ್ನ ಉಪಯೋಗಿಸಬೇಡಿ. ನಾನು ವಿರೋಧಿಸಿ ಬಿಡ್ತಿನಿ. ನಾನು ಒಂದು ಕಾಲದಲ್ಲಿ ನಮ್ಮ ಸಾಮಾಜಿಕ ವ್ಯವಸ್ಥೆಯ ಬಗ್ಗೆ ನಾನು ಯಾವ ಹಠದಿಂದ ಮತ್ತು ನನ್ನ ಚಿಕ್ಕ ವಯಸ್ಸಿನಲ್ಲಿ ಬ್ರಾಹ್ಮಣ ಸಮುದಾಯದೊಳಗಿದ್ದವನು, ಜಾತಿ ವ್ಯವಸ್ಥೆ ಎಲ್ಲ ಇತ್ತಲ್ಲ ಬಹಳ ಇಂಪಾರ್ಟ್‌ಟೆಂಟ್ ಆಗಿರ್ತಾ ಇತ್ತು. ಈಗ ಅದರ ಇಂಪಾರ್ಟೆನ್ಸ್ ಕಡಿಮೆ ಆಗಿದೆ. ಅದಕ್ಕಿಂತ ಹೆಚ್ಚಿಗೆ ಇಂಪಾರ್ಟೆಟೆಂಟ್ ಇವನ್ನೆಲ್ಲ ಮೀರಿ ನಮ್ಮೆಲ್ಲರನ್ನೂ ಇವತ್ತು ಕಬಳಿಸೊಕೆ ಬಂದಿರೊ ಅಂತಹ ಗ್ಲೋಬಲೈಝೇಷನ್.

ಇಂದೂಧರ : ಕೊನೇದೊಂದು ಪ್ರಶ್ನೆ. ನೀವು ಮತ್ತೆ ಚುನಾವಣೆಗೆ ನಿಲ್ತೀರಾ ?

ಅನಂತಮೂರ್ತಿ : ನಾನು ನಿಲ್ಲಬೇಕು ಅಂತಿದ್ದೆ, ಯಾರೂ ನಿಲ್ಲಿಸ್ಲಿಲ್ಲ... ಹ್ಹ ಹ್ಹ ಹ್ಹ ಹ್ಹ... ನಂಗೆ ವಯಸ್ಸಾಯ್ತು ಕಣಯ್ಯಾ... ❑

ಕಥೆ



ಕುರ್ಚಿ

ಡಾ|| ಮೊಗಳ್ಳಿ ಗಣೇಶ್

ಹತ್ತಾರು ತರದ ಸಾಹೇಬರನ್ನು ಮಾದಪ್ಪ ಕಂಡಿದ್ದನಾದರೂ ಅವರೆಲ್ಲರಿಗೂ ಅವನದು ಒಂದೇ ನಿಷ್ಠೆ. ನಿಜ ಹೇಳಬೇಕೆಂದರೆ ಅಂತಹ ಸಾಹೇಬರು ಕೂರುತ್ತಿದ್ದ ಕುರ್ಚಿಯ ಬಗೆಗೆ ಮಾದಪ್ಪನದು ದಿವ್ಯ ಭಾವ. ಅಂತಹ ಕುರ್ಚಿಯ ಮೇಲೆ ಕೂತು ಲೋಕ ಆಳೊ ಪುಣ್ಯವಂತರನ್ನು ಕಾಯಬೇಕಾದದ್ದು ತನ್ನ ಕರ್ತವ್ಯ ಎಂದು ಭಾವಿಸುತ್ತಿದ್ದ. ಆ ಕುರ್ಚಿಯು ಬ್ರಿಟಿಷರ ಕಾಲದ್ದು. ಹಿಂದಿನ ಹಜಾರ ಕಛೇರಿಯ ಬಹುಮುಖ್ಯ ಪೀಠವದಾಗಿತ್ತು. ಇಡೀ ಸೀಮೆಯೆಲ್ಲ ಆ ಕುರ್ಚಿಯ ಮಹಿಮೆಗೆ ಒಳಪಟ್ಟಿತ್ತು. ನೂರಾರು ಹಿರಿಕಿರಿಯ ಅಧಿಕಾರಿಗಳೆಲ್ಲ ಅದರ ಮುಂದೆ ತಲೆಬಾಗುತ್ತಿದ್ದರು.

ಮಾದಪ್ಪ ಜಿಲ್ಲಾ ಕಛೇರಿಯ ಜವಾನ. ನಲವತ್ತು ವರ್ಷಗಳಿಂದಲೂ ಅವನಿಗೆ ಅದೇ ಕಸುಬು. ಕೆಲಸದಲ್ಲಿ ಬಾರೀ ನಿಷ್ಠೆ. ಸಾಹೇಬರ ವಿಶಾಲ ಕೊಠಡಿಯ ಕಸ ಗುಡಿಸಿ, ದೂಳು ಜಾಡಿಸಿ ದುಂಡು ಮೇಜಿನ ಗಾಜನ್ನು ಒರೆಸಿ ನೀಟಾಗಿ ಎಲ್ಲ ವಸ್ತುಗಳನ್ನು ಜೋಡಿಸಿ ಹೂಗುಚ್ಛವನ್ನು ಒರಣಗೊಳಿಸಿ ಆ ಕೊಠಡಿಯ ಬಗ್ಗೆ ಭಾವುಕನಾಗುವುದು ಹಿಂದಿನಿಂದಲೂ ನಡೆದು ಬಂದ ಅಭ್ಯಾಸ. ಸಿಂಹಾಸನದಂತಿದ್ದ ಸಾಹೇಬರ ಕುರ್ಚಿಯನ್ನು ಭಯ ಭಕ್ತಿ ಗೌರವಗಳಿಂದ ಮುಟ್ಟಿ ಸರಿಯಾಗಿ ಇಟ್ಟು ಸುಗಂಧವಾದ ಗಂಧದ ಕಡ್ಡಿ ಹಚ್ಚಿ ಯಾಕೊ ಆ ಕುರ್ಚಿಗೂ ಒಮ್ಮೆ ಬೆಳಗಿ ಮನೆದೇವರ ನೆನೆದು ಕೊನೆಗೆ ಆ ಕುರ್ಚಿಯ ಹಿಂದೆ ತಗುಲಿ ಹಾಕಿದ್ದ ಗಾಂಧೀಜಿ ಯವರ ದೊಡ್ಡ ಫೋಟೋಗೆ ಸಿಕ್ಕಿಸುತ್ತಿದ್ದ.

ಸಾಹೇಬರು ಬಂದ ಕೂಡಲೆ ತಮ್ಮ ಛೇಂಬರಿನ ಐಸಿರಿಯ ಸೊಬಗನ್ನು ನೋಡಿ ಶಹಬ್ಬಾಸ್ ಹೇಳುವರೆಂಬುದು ಮಾದಪ್ಪನ ಯತಾಪ್ರಕಾರದ ನಿರೀಕ್ಷೆ. ಅವರು ಬಂದ ಕೂಡಲೆ ಮಾಮೂಲಿ ಗೌರ್ಮೆಂಟ್ ಸೆಲ್ಯೂಟ್ ಕೊಟ್ಟು ವಿನೀತವಾಗಿ ಬಾಗಿಲಲ್ಲಿ ನಿಂತು ದಿನದ ಜರೂರುಗಳಿಗೆ ಹೊಂದಿಕೊಳ್ಳುತ್ತಿದ್ದ. ಸಾಹೇಬರ ಮೇಲೆ ಮಾದಪ್ಪನಿಗೆ ವಿಪರೀತ ಭಯ ಗೌರವ. ಹಾಗೆ ನೋಡಿದರೆ ಮಾದಪ್ಪ ಹಳೆ ಕಾಲದ ಮನುಷ್ಯ. ಮೈಸೂರಿನ ದೊರೆಗಳ ಕಾಲದ ಜವಾನರ ಪೇಟ ತೊಟ್ಟು, ಬಿಳಿ ಬಟ್ಟೆ ಧರಿಸಿ, ಹಣೆ ಮೇಲೆ ತಿರುಪತಿ ನಾಮ ಅಂಟಿಸಿಕೊಂಡು; ಸಾಹೇಬರನ್ನು ನೋಡಲು ಬಂದ ಪ್ರತಿ ಒಬ್ಬರಿಗೂ ನಡು ಬಗ್ಗಿಸಿ ನಮಸ್ಕಾರ ಕೊಟ್ಟು, ಸೌಜನ್ಯದ ನಗುವಿನಲ್ಲಿ ಅರೆಗಣ್ಣು ಮಾಡಿ ಒಳಕ್ಕೆ ಬಿಟ್ಟುಕೊಡುತ್ತಿದ್ದ.

ಹತ್ತಾರು ತರದ ಸಾಹೇಬರನ್ನು ಮಾದಪ್ಪ ಕಂಡಿದ್ದನಾದರೂ ಅವರೆಲ್ಲರಿಗೂ ಅವನದು ಒಂದೇ ನಿಷ್ಠೆ. ನಿಜ ಹೇಳಬೇಕೆಂದರೆ ಅಂತಹ ಸಾಹೇಬರು ಕೂರುತ್ತಿದ್ದ ಕುರ್ಚಿಯ ಬಗೆಗೆ ಮಾದಪ್ಪನದು ದಿವ್ಯ ಭಾವ. ಅಂತಹ ಕುರ್ಚಿಯ ಮೇಲೆ ಕೂತು ಲೋಕ ಆಳೊ ಪುಣ್ಯವಂತರನ್ನು ಕಾಯಬೇಕಾದದ್ದು ತನ್ನ ಕರ್ತವ್ಯ ಎಂದು ಭಾವಿಸುತ್ತಿದ್ದ. ಆ ಕುರ್ಚಿಯು ಬ್ರಿಟಿಷರ ಕಾಲದ್ದು. ಹಿಂದಿನ ಹಜಾರ ಕಛೇರಿಯ ಬಹುಮುಖ್ಯ ಪೀಠವದಾಗಿತ್ತು. ಅದರ ಮೇಲೆ ಹಿಂದೆ ಯಾರೊ ಒಬ್ಬ ವೈಸ್‌ರಾಯ್ ಕುಳಿತಿದ್ದರಂತೆ. ಇಡೀ ಸೀಮೆಯೆಲ್ಲ ಆ ಕುರ್ಚಿಯ ಮಹಿಮೆಗೆ ಒಳಪಟ್ಟಿತ್ತು. ನೂರಾರು ಹಿರಿಕಿರಿಯ ಅಧಿಕಾರಿಗಳೆಲ್ಲ ಅದರ ಮುಂದೆ ತಲೆಬಾಗುತ್ತಿದ್ದರು. ಅಂತಹ ಕುರ್ಚಿಯಿರುವ ಕೊಠಡಿಯ ಕಸ ಗುಡಿಸಿ ಒಪ್ಪ ಒರಣ ಮಾಡಿ ಆ ಕುರ್ಚಿಯ ಸಾಹೇಬರಿಗೆ

ಮೊದಲು ಸೆಲ್ಯೂಟ್ ಮಾಡುವುದು ನಾನೇ ಎಂಬ ವಿಚಿತ್ರ ಹೆಮ್ಮೆ ಮಾದಪ್ಪನಿಗೆ ಸ್ವಾತಂತ್ರ್ಯ ಬಂದ ಕಾಲದಿಂದಲೂ ಜೊತೆಯಾಗಿಯೆ ಬಂದಿತ್ತು.

ಮಾದಪ್ಪ ಒಮ್ಮೊಮ್ಮೆ ನಿದ್ದೆಯಲ್ಲು ಸೆಲ್ಯೂಟ್ ಹೊಡೆಯುತ್ತಿದ್ದ. ದೇವರಿಗೆ ನಮಸ್ಕರಿಸುವಷ್ಟೆ ಶ್ರದ್ಧೆ ಭಕ್ತಿಯಲ್ಲಿ ಸಾಹೇಬರಿಗೂ ಗೌರವಿಸಬೇಕೆಂಬುದು ಅವನ ನಂಬಿಕೆ. ರಜಾ ದಿನಗಳಲ್ಲಿ ಸರಿಯಾಗಿ ಕಛೇರಿಯ ವೇಳೆಗೆ ಆತ ತಂತಾನೆ ಎದ್ದು ನಿಂತು ಒಂದು ಸುತ್ತು ಸಲಾಂ ವಗೆಯುತ್ತಿದ್ದ. ಆಗಾಗ ಕುಂತಾಗ ನಿಂತಾಗ ಬಜಾರಿನಲ್ಲಿ ಸುತ್ತುವಾಗ ಯಾರಾದರು ಪರಿಚಿತರು ಅಥವಾ ಗೌರವಾನ್ವಿತರಂತೆ ಕಾಣುವವರು ಎದುರಾದರೆ; ಅಂತವರಿಗೆ ನಮಸ್ಕರಿಸದೆ ಹಾಗೇ ಮುಂದೆ ಹೊರಟುಹೋದರೆ ಖಂಡಿತ ಆ ರಾತ್ರಿ ಅವನಿಗೆ ನಿದ್ದೆಯೇ ಹತ್ತುತ್ತಿರಲಿಲ್ಲ. ಎಷ್ಟೋ ಜನ ಅವನ ನಮಸ್ಕಾರಗಳನ್ನು ಸ್ವೀಕರಿಸದೆ; ಆ ಯಕಶ್ಚಿತ್ ಜವಾನನ ನಮಸ್ಕಾರಗಳಿಗೆ ಪ್ರತಿಕ್ರಿಯಿಸುವುದು ಕೀಳೆಂದು ತಿರುಗಿಯೂ ನೋಡದೆ ಹೊರಟು ಹೋಗುತ್ತಿದ್ದರು.

ಬೇರೆ ಕಛೇರಿಗೆ ವರ್ಗಾಯಿಸಲು ಹಲವು ಸಲ ಸೂಚನೆ ಬಂದಿದ್ದರೂ ಮಾದಪ್ಪ ಗೋಳುಗರೆದುಕೊಂಡು ವರ್ಗಾವಣೆಯಿಂದ ತಪ್ಪಿಸಿಕೊಂಡಿದ್ದ. ಆ ಕಾಲದಿಂದಲೂ ತಾನು ಸಾಹೇಬರ ಈ ಕೊಠಡಿಯ ಕಸ ಗುಡಿಸಿಕೊಂಡು; ಬಂದ ಎಲ್ಲ ಸಾಹೇಬರಿಂದ ಶಹಬ್ಬಾಸ್ ಎನಿಸಿಕೊಂಡು, ಇಷ್ಟು ಕಾಲದ ತನಕ ಸಾಹೇಬರ ಈ ಕುರ್ಚಿಯನ್ನು ಇಲ್ಲಿರುವ ಒಂದೊಂದು ಫೈಲುಗಳನ್ನೂ ಪ್ರಾಣದಂತೆ ಕಾಯ್ದುಕೊಂಡು ಬಂದಿರುವುದರಿಂದ, ತನಗೆ ಕೊನೆತನಕ ಇಲ್ಲೇ ಇದ್ದು ಸೇವೆ ಮಾಡುವುದಕ್ಕೆ ಕರುಣಿಸಬೇಕೆಂದು ಬೇಡಿಕೊಂಡಿದ್ದ. ಬಂದ ಸಾಹೇಬರೆಲ್ಲ ಮಾದಪ್ಪನ ನಯವಿನಯದ ಚಾಕರಿಯನ್ನು ಮೆಚ್ಚಿಕೊಂಡಿದ್ದವರೇ ಆಗಿದ್ದರು.

ಮಾದಪ್ಪನಿಗೆ ಅಂತಹ ಮಹಾ ಆಸೆಗಳೇನೂ ಇರಲಿಲ್ಲ. ಗಾಂಧೀಜಿಯ ಜೊತೆ ಒಂದೆರೆಡು ಬಾರು ಆತ ಒಡಾಡಿದ್ದ ಎಂಬುದು ಯಾರಿಗೂ ಗೊತ್ತಿರಲಾರದು. ಅಷ್ಟೇಕೆ; ಸ್ವತಃ ಮಾದಪ್ಪನೆ ಹಿಂದಿನ ಆ ನೆನಪನ್ನು ಮರೆತಿರಲೂಬಹುದು. ಸ್ವಾತಂತ್ರ ಚಳವಳಿಯನ್ನು ರೂಪಿಸುವ ಕಾಲದಲ್ಲಿ ಗಾಂಧಿ ಮಹಾತ್ಮರು ದೇಶದ ಮೂಲೆ ಮೂಲೆಯನ್ನೂ ಸುತ್ತುವಾಗ ಮಾದಪ್ಪ ಗಾಂಧೀಜಿಯವರನ್ನು ಕಂಡಿದ್ದ. ಅವರ ವರ್ಚಸ್ಸಿಗೆ ಮಾರುಹೋಗಿದ್ದ. 'ಬೋಲೋ ಭಾರತ್ ಮಾತಾಕಿ ಜೈ' ಎಂದು ಗಂಟಲು ಹರಿದುಹೋಗುವಂತೆ ಕೂಗು ಹಾಕಿದ್ದ. ಅಸಹಕಾರ ಚಳವಳಿಯಲ್ಲಿ ಪಾಲುಗೊಂಡು ಪೇದೆಗಳಿಂದ ಬಲವಾಗಿ ಏಟು ತಿಂದು ಮೂರು ತಿಂಗಳ ಕಾಲ ಜೈಲಿನಲ್ಲಿ ಯಾತನೆ ಅನುಭವಿಸಿ ಹೇಗೊ ಬಿಡುಗಡೆಗೊಂಡು ಬೀದಿಗೆ ಬಿದ್ದು ಸ್ವಾತಂತ್ರ್ಯ ಬಂದ ಮೇಲೆ ಹತಾರ ಕಛೇರಿಯಲ್ಲಿ ಆಕಸ್ಮಿಕವಾಗಿ ಜವಾನನ ಕೆಲಸಕ್ಕೆ ಸೇರಿಕೊಂಡಿದ್ದ. ಓದು ಬರಹ ತಿಳಿಯದ ಮಾದಪ್ಪ ನೋಡಲು ಕಟ್ಟುಮಸ್ತಾಗಿದ್ದ. ಬಾಗಿಲು ಕಾಯುವ ಚಾಕರಿಗೆ ಲಾಯಕ್ಕಾಗಿದ್ದಾನೆಂದು ಆಗಿನವರು ಮಾದಪ್ಪನಿಗೆ ಕೆಲಸ ಕೊಟ್ಟಿದ್ದರು. ಆ ಕೆಲಸವನ್ನು ಮಾದಪ್ಪ ಅತ್ಯಂತ ನಿಷ್ಠೆಯಿಂದ ಮಾಡುತ್ತ ಯಾಕೊ ಏನೊ ಸಾಹೇಬರ ಕುರ್ಚಿಯ ಬಗ್ಗೆ ಏನೇನೊ ಕಲ್ಪನೆಗಳನ್ನು ಕಟ್ಟಿಕೊಂಡಿದ್ದ.

ಇದ್ದಕ್ಕಿದ್ದಂತೆ ಒಂದು ದಿನ, ಮಾದಪ್ಪ ಕಸಗುಡಿಸುತ್ತ ಇರುವಂತೆಯೆ ಸಾಹೇಬರ ಆ ಕುರ್ಚಿಯು ಕರೆದಂತಾಯಿತು.

ಸ್ವಾತಂತ್ರ ಚಳವಳಿಯನ್ನು ರೂಪಿಸುವ ಕಾಲದಲ್ಲಿ ಗಾಂಧಿ ಮಹಾತ್ಮರು ದೇಶದ ಮೂಲೆ ಮೂಲೆಯನ್ನೂ ಸುತ್ತುವಾಗ ಮಾದಪ್ಪ ಗಾಂಧೀಜಿಯವರನ್ನು ಕಂಡಿದ್ದ. ಅವರ ವರ್ಚಸ್ಸಿಗೆ ಮಾರುಹೋಗಿದ್ದ. 'ಬೋಲೋ ಭಾರತ್ ಮಾತಾಕಿ ಜೈ' ಎಂದು ಗಂಟಲು ಹರಿದುಹೋಗುವಂತೆ ಕೂಗು ಹಾಕಿದ್ದ.

ಯಾರೊ ಕೂಗಿದಂತೆ ಕೇಳಿಸಿತಲ್ಲಾ ಎಂದು ವಿಶಾಲವಾದ ಕೊಠಡಿಯ ಸುತ್ತ ದಿಟ್ಟಿಸಿದ. ಯಾರೂ ಕಾಣಿಸಲಿಲ್ಲ. ದುಂಡು ಮೇಜಿನ ಕೆಳಗೆ ನೋಡಿದ. ಯಾವ ಆಕೃತಿಯೂ ಗೋಚರಿಸಲಿಲ್ಲ. ಇದ್ಯಾರೆಂದು ಕಿಟಕಿಗಳೆಡೆ ಕಣ್ಣು ಹಾಯಿಸಿದ. ದೃಷ್ಟಿಗೆ ಏನೂ ಸಿಗಲಿಲ್ಲ. ಮತ್ತೆ ಭೂಮಿಯ ಆಳದಿಂದ 'ಮಾದಪ್ಪಾ ಬಾರೊ ಮಾದಪ್ಪಾ' ಎಂದು ಸ್ಪಷ್ಟವಾಗಿ ಅವನ ಕಿವಿಯನ್ನು ತಟ್ಟಿತು. ಬೆಚ್ಚಿದ ಮಾದಪ್ಪ ಇದೇನು ಮಾಯೆಯೊ; ಸಾಹೇಬರು ಬರುವ ಹೊತ್ತಾಯಿತೆಂದು ಹೊರಬಂದು ಸೆಲ್ಯೂಟ್ ಹೊಡೆಯಲು ಸಿದ್ಧವಾಗಿ ನಿಂತ. ಅವನ ಮನಸ್ಸಿನ ತುಂಬ ಮಾಯಾಮಯವಾದ ಆ ದನಿ ಸುತ್ತಿಕೊಳ್ಳುತ್ತಿತ್ತು. ಹಾಗೆ ಯಾರು ನನ್ನನ್ನು ಕರೆದದ್ದು ಎಂದು ಯೋಚಿಸುತ್ತಿರುವಂತೆಯೆ ಸಾಹೇಬರು ಬಂದು ತಾವೇ ಬಾಗಿಲಿಗೆ ಅಡ್ಡವಾಗಿರಿಸಿದ್ದ ತಡೆಯ ಪಟ್ಟಿಗಳನ್ನು ಸರಿಸಿಕೊಂಡು ಒಳ ಹೋಗಿಬಿಟ್ಟಿದ್ದರು.

ಯಾರೊ ಗಾಳಿಯಲ್ಲಿ ಒಳಕ್ಕೆ ತೇಲಿ ಹೋದಂತಾಯಿತಲ್ಲಾ ಎಂದು ಎಚ್ಚರಗೊಳ್ಳುವುದಕ್ಕೂ ಸಾಹೇಬರು ಒಳಗಿನಿಂದ ಟ್ರೀಣ್ ಎಂದು ಬೆಲ್ ಮಾಡುವುದಕ್ಕೂ ಒಂದೇ ಆಗಿ; ಮಾದಪ್ಪ ಎದ್ದುಬಿದ್ದು ಹೋಗಿ ನೋಡಿ, ಅಯ್ಯೋ ಎಂತಹ ಪ್ರಮಾದವಾಯಿತೆಂದು ಪಶ್ಚಾತ್ತಾಪ ಪಡುತ್ತಾ ಕ್ಷಮೆ ಕೋರುತ್ತ ನಡು ಬಗ್ಗಿಸಿದ. ವಯಸ್ಸಾದ ಜವಾನರಿಂದ ಸರ್ಕಾರಕ್ಕೆ ಹೊರೆಯಾಗಿದೆ

ಎಂದು ಚಿಂತಿಸುವ ಆ ಸಾಹೇಬರು ಕೊಂಚ ರೇಗಾಡಿ ಎಚ್ಚರಿಕೆಯಿಂದ ಇರಬೇಕೆಂದು ಹೇಳಿ ಹೊರಕ್ಕೆ ಕಳಿಸಿಬಿಟ್ಟರು. ದಿನವೆಲ್ಲ ಮಾದಪ್ಪ ಮಂಕಾಗಿದ್ದ. ಕಛೇರಿ ಮುಗಿಸಿ ಮನೆಗೆ ಬಂದು ಮಲಗಿದರೂ ಆತನಿಗೆ ಯಾವುದೊ ಭಯ ಎಂತದೊ ಆಸೆ ಜೊತೆಗೂಡಿ ಮನಸ್ಸಿನ ತುಂಬ ಓಡಾಡುತ್ತಿದ್ದವು.

ಐದಾರು ದಿನಗಳು ಕಳೆದ ನಂತರ ಮತ್ತೆ ಅದೇ ಸಾಹೇಬರ ಕೊಠಡಿಯ ಕಸ ಧೂಳು ಗುಡಿಸುತ್ತಿರಬೇಕಾದರೆ ಮಾದಪ್ಪನನ್ನು ಸಾಹೇಬರ ಕುರ್ಚಿಯು ಪಿಸುದನಿಯಲ್ಲಿ ಕರೆಯಿತು. ತನಗೆಲ್ಲೊ ಭ್ರಮೆ ಇರಬೇಕೆಂದು ಮಾದಪ್ಪ ಕುರ್ಚಿಯನ್ನೆ ಆಸೆಯಿಂದ ದಿಟ್ಟಿಸಿದ. ನಿಜಕ್ಕೂ ಅದು ಬೆಲೆಯುಳ್ಳ ದೊಡ್ಡ ಸಾಹೇಬರ ಕುರ್ಚಿ. ಎಂತದೊ ಸೆಳೆತದಿಂದ ಮಾದಪ್ಪ ಆ ಕುರ್ಚಿಯನ್ನು ಮುಟ್ಟಿ ಮುಟ್ಟಿ ತಿರುಗಿಸಿದ. ಸೊಯ್ಯನೆ ಹಾಯಾಗಿ ಏಳುಮಲ್ಲಿಗೆ ತೂಕದ; ಬಳುಕುವ ಸೊಂಟದ ಚೆಲುವೆಯಂತೆ ಆ ಕುರ್ಚಿಯು ಮೋಹಕವಾಗಿ ಸುತ್ತಿತು. ಸುಖದ ಸುಪ್ಪತ್ತಿಗೆಯೇ ಈ ಕುರ್ಚಿಯ ಹಿತವಾದ ಮೆತ್ತನೆಯ ಹೊದಿಕೆಯ ಮೇಲೆ ಕುಳಿತಿದೆ ಎನಿಸಿ ಮಾದಪ್ಪನ ಭಾವನೆಗಳು ಗರಿಬಿಚ್ಚಿದವು. ಮತ್ತೆ ಮತ್ತೆ ಕುರ್ಚಿಯನ್ನು ತಿರುಗಿಸುತ್ತಾ ಅದರ ಮೇಲೆ ಕೂತು ಹೋದ ಸಾಹೇಬರುಗಳನ್ನು ನೆನೆಯುತ್ತಾ ಈ ಕುರ್ಚಿಯ ಮೇಲೆ ತಾನೂ ಕೂಡ ಕೂತುಕೊಳ್ಳಬಹುದೇ ಎಂದು ಆಲೋಚಿಸಿದ. ಒಮ್ಮೆಲೆ ಅವನ ಹಣೆ ತುಂಬ ಬೆವರು ಮೂಡಿ ಅಳುಕುವಂತಾಯಿತು. ತನಗೇನು ಕೇಡಾಸೆ ಉಂಟಾಯಿತೆಂದು ಅನಿಸಿತಾದರೂ ಬೇಗ ಬೇಗನೆ ಕೆಲಸ ಮುಗಿಸಿ ಹೊರ ಬಂದು ಯತಾ ಪ್ರಕಾರ ನಿಂತ. ಹತಾರ ಕಛೇರಿಯು ತರಾವರಿ ಜನರಿಂದ ಗಿಜಿಗುಟ್ಟುತ್ತಿತ್ತು. ಬಂದವರಿಗೆಲ್ಲ ಮಾದಪ್ಪ ಸಲಾಮು ಹಾಕುತ್ತಲೆ ಕುರ್ಚಿಯ ಬಗ್ಗೆಯೇ ಕಲ್ಪಿಸುತ್ತಿದ್ದ.

ಸಾಹೇಬರು ಕರೆದು ಸುಮ್ಮನೆ, 'ಏನಯ್ಯ, ಹೇಗಿದೆ ನಿನ್ನ ವ್ಯವಹಾರ' ಎಂದು ಕೇಳಿದರು. ಮಾದಪ್ಪನಿಗೆ ಆ ಪ್ರಶ್ನೆ ಹೇಗೇಗೊ ಕೇಳಿಸಿತು. 'ತಪ್ಪಾಗಿದ್ರೆ ಸಾಹೇಬರು ಕ್ಷಮಿಸಬೇಕು; ನಂದೇನಿದೆ ಸ್ವಾಮಿ ವ್ಯವಹಾರಾ' ಎಂದು ನುಣುಚಿಕೊಂಡು ಮಾದಪ್ಪ ಬಂದುಬಿಟ್ಟಿದ್ದ. ಎಂದಿನಂತೆ ಸಂಜೆ ವೇಳೆ ಸಾಹೇಬರು ಕಛೇರಿ ಮುಗಿಸಿ ಮನೆಗೆ ಹೊರಟ ಮೇಲೆ ಕಿಟಕಿ ಬಾಗಿಲು ಮುಚ್ಚಿ ಬೀಗ ಹಾಕಿಕೊಳ್ಳುವಾಗ ಮಾದಪ್ಪನಿಗೆ ಮತ್ತದೇ ಆಸೆ ಬಂದು 'ಈಗ ನೀನು ಕೂತುಕೊಬಹುದಿತ್ತು. ಯಾರೂ ಇರ್ತಿಲ್ಲ.' ಎಂದು ರೇಗಿದಂತಾಯಿತು. 'ಹೌದಲ್ಲವೆ; ತಾನೀಗ ಕೂತುಕೊಂಡಿದ್ದರೆ ಯಾರ ಕಣ್ಣಿಗೂ ಕಾಣ್ತಿರಲಿಲ್ಲ' ಎಂದುಕೊಳ್ಳುತ್ತಲೆ, 'ಇರಲಿ ನಾಳೆಯೊ ನಾಡಿದ್ದೋ ಸಮಯ ನೋಡಿ ಕೂತೇ ಬಿಡುವ' ಎಂದು ಮನೆಗೆ ಬಂದುಬಿಟ್ಟಿದ್ದ. ಮಾದಪ್ಪನ ಮನಸ್ಸಿನ ತುಂಬ ಸಾಹೇಬರ ಕುರ್ಚಿಯು ತರಾವರಿಯಾಗಿ ಆವರಿಸಿಕೊಂಡು ಒಂದು ದಿನವಾದರೂ

ಅದರಲ್ಲಿ ಕೂತುಕೊಂಡೇ ಸಾಯಬೇಕು ಎಂದು ತನಗೆ ತಾನೇ ಆದೇಶಿಸಿಕೊಂಡ.

ಪ್ರತಿದಿನ ಕಛೇರಿಗೆ ಮೊದಲು ಕಸಗುಡಿಸುವಾಗ ಮತ್ತು ಅದೇ ಸಂಜೆ ಕಛೇರಿ ಮುಗಿದು ಬಾಗಿಲು ಮುಚ್ಚುವಾಗಲೆಲ್ಲಾ ಮಾದಪ್ಪನ ಒಳಗೆ ಕುರ್ಚಿಯ ಆಸೆ ಬಲಗೊಂಡಿತು. ಆದರೆ ಯಾಕೊ ಪ್ರತಿ ಬಾರಿಯೂ ಒಂದಲ್ಲಾ ಒಂದು ಅಡೆತಡೆ ಮನಸ್ಸಿನಲ್ಲಿ ಎದುರಾಗಿ ಹಿಂಜರಿಯುತ್ತಿದ್ದ ಮಾದಪ್ಪ ಮತ್ತೆ ರಾತ್ರಿ ನಿದ್ದೆಯಲ್ಲಿ ಆ ಕುರ್ಚಿಯ ಬಗ್ಗೆ ಏನಾದರೊಂದು ಕನಸು ಕಾಣದೇ ಇರುತ್ತಿರಲಿಲ್ಲ. ಹೀಗೇ ಸುಮಾರು ದಿನಗಳು ಕಳೆದುಹೋದವು. ಮಾದಪ್ಪ ಇನ್ನು ಸ್ವಲ್ಪ ದಿನಗಳಲ್ಲೆ ನಿವೃತ್ತಿಯಾಗುವನೆಂದು ಕೆಲವರು ಲೆಕ್ಕ ಮಾಡಿದ್ದರು. ಈ ಮುಪ್ಪಿನಲ್ಲಿ ತನಗೇನು ಆಸೆ ಹಿಡಿದುಕೊಂಡಿತೊ ಎಂದು ಆಗೊಮ್ಮೆ ಈಗೊಮ್ಮೆ ವಿಚಾರ ಬರುತ್ತಿತ್ತಾದರೂ ಮಾದಪ್ಪನನ್ನು ಆಸೆಯು ಬಿಟ್ಟಿರಲಿಲ್ಲ. ಸಾಹೇಬರು ಮತ್ತೊಮ್ಮೆ ಕರೆದು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ರೇಗಿದ್ದರು. ಮಾದಪ್ಪ ಸಾಹೇಬರ ಮುಂದೆ ಹೆಚ್ಚುವರಿಯಾಗಿ ಅನೇಕ ಬಾರಿ ಸಲಾಮು ಹೊಡೆದಿದ್ದರಿಂದ ಅವರ ಕೋಪ ಒಂದಿಷ್ಟು ತಗ್ಗಿತ್ತು. ದಿನಗಳು ಹೀಗೇ ಸಾಗಿದ್ದವು.

ಒಂದು ದಿನ ಮಾದಪ್ಪ ಸಾಹೇಬರ ಬಾಗಿಲ ಕಾಯುತ್ತ ಸ್ಟೂಲಿನ ಮೇಲೆ ಕೂತು ಒಳಗಿರುವ ದೊಡ್ಡ ಸಾಹೇಬರ ಕುರ್ಚಿಯನ್ನೆ ರಮ್ಯವಾಗಿ ಕಲ್ಪಿಸಿಕೊಳ್ಳುತ್ತಾ ಆ ಕಲ್ಪನೆಯಲ್ಲೇ ಮುಳುಗಿ ಹೊರಗಿನ ಬಿಸಿಲ ಜಳದಲ್ಲಿ ದೀರ್ಘವಾಗಿ ಉಸಿರಾಡುತ್ತ ತೂಕಡಿಕೆಗೆ ಜಾರಿ ನಿದ್ದೆಗೆ ಇಳಿಯುತ್ತಿರುವಂತೆಯೇ ಮಾಯಾ ಮಯ ಅಮಲು ಅವನ ನೆತ್ತಿಯಲ್ಲಿ ಸುಳಿದಾಡಿತು. ಗಾಂಧೀಜಿಯವರು ಖುದ್ದಾಗಿ ಬಂದು ಮಾದಪ್ಪನ ಕೈ ಹಿಡಿದು ಸಾಹೇಬರ ಕೊಠಡಿಯ ಒಳಕ್ಕೆ ಕರೆದುಕೊಂಡು ಹೋಗಿದ್ದರು. ಆ ಸಾಹೇಬನನ್ನು ಕಿರುಬೆರಳಿನಲ್ಲಿ ಎತ್ತಿ ಬಿಸಾಡಿದಂತೆ ಕುರ್ಚಿ ಬಿಟ್ಟು ಅತ್ತ ತೊಲಗು ಎಂಬಂತೆ ಗಾಂಧಿ ಮಹಾತ್ಮರು ಸೂಚಿಸಿದ್ದರು. ಮಾದಪ್ಪನನ್ನು ಅತ್ಯಂತ ಗೌರವ ಪ್ರೀತಿಗಳಿಂದ ಆ ಕುರ್ಚಿಯ ಮೇಲೆ ಕೂರಿಸಿ ಏನೇನೊ ಕನಸುಗಳ ಬಗ್ಗೆ ಮಾತನಾಡಿದ್ದರು.

ಬ್ರಿಟಿಷರ ಕಾಲದ ಆ ದೊಡ್ಡ ಸಾಹೇಬರ ಪೀಠವು ಮಾದಪ್ಪನನ್ನು ತನ್ನ ತಲೆ ಮೇಲೆ ಕೂರಿಸಿಕೊಂಡಿತ್ತು. ಗಾಂಧಿ ೀಜಿಯವರು ನೆರೆದಿದ್ದ ಎಲ್ಲ ಅಧಿ ಕಾರಿಗಳಿಗೂ ನೀತಿ ಸಂಹಿತೆಯನ್ನು ಬೋಧಿಸುತ್ತಿದ್ದರು. ಊರೂರು ಕೇರಿಗಳಿಂದ ಜನಸಾಗರವೆ ಬಂದು ನೆರೆದು ಮಾದಪ್ಪನನ್ನು ನೋಡಲು ಕಾತರಿಸುತ್ತಾ ಹೊರಗೆ ಜೈಕಾರ ಹಾಕುತ್ತಿರುವುದು ಕಿವಿಗಡಚಿಕ್ಕುತ್ತಿತ್ತು. ಮಾದಪ್ಪ ಕನಸಿನಲ್ಲಿ

ಗಾಂಧೀಜಿಯವರು ಖುದ್ದಾಗಿ ಬಂದು ಮಾದಪ್ಪನ ಕೈ ಹಿಡಿದು ಸಾಹೇಬರ ಕೊಠಡಿಯ ಒಳಕ್ಕೆ ಕರೆದುಕೊಂಡು ಹೋಗಿದ್ದರು. ಆ ಸಾಹೇಬನನ್ನು ಕಿರುಬೆರಳಿನಲ್ಲಿ ಎತ್ತಿ ಬಿಸಾಡಿದಂತೆ ಕುರ್ಚಿ ಬಿಟ್ಟು ಅತ್ತ ತೊಲಗು ಎಂಬಂತೆ ಗಾಂಧಿ ಮಹಾತ್ಮರು ಸೂಚಿಸಿದ್ದರು. ಮಾದಪ್ಪನನ್ನು ಅತ್ಯಂತ ಗೌರವ ಪ್ರೀತಿಗಳಿಂದ ಆ ಕುರ್ಚಿಯ ಮೇಲೆ ಕೂರಿಸಿ ಏನೇನೊ ಕನಸುಗಳ ಬಗ್ಗೆ ಮಾತನಾಡಿದ್ದರು. ಬ್ರಿಟಿಷರ ಕಾಲದ ಆ ದೊಡ್ಡ ಸಾಹೇಬರ ಪೀಠವು ಮಾದಪ್ಪನನ್ನು ತನ್ನ ತಲೆ ಮೇಲೆ ಕೂರಿಸಿಕೊಂಡಿತ್ತು.

ಮುಳುಗಿದ್ದ. ಸಾಹೇಬರು ಜೋರಾಗಿ ಬೆಲ್ ಮಾಡಿದ್ದು ಅವನ ಕನಸನ್ನು ಮುರಿದಿತ್ತು. ಮಾದಪ್ಪನಿಗೆ ಕನಸ್ಯಾವುದು ದಿಟವ್ಯಾವುದು ಎಂಬ ಬೇಧವೆ ಒಂದು ಕ್ಷಣ ಇಲ್ಲದಂತಾಗಿ ದಂಗಾಗಿ ಸಾಹೇಬರಿಗೆ ಕಾಫಿ ತಂದಿಟ್ಟು ಅನಾಥ ಪ್ರಜ್ಞೆಯಲ್ಲಿ ಆ ಕುರ್ಚಿಯನ್ನೆ ವಾರೆಗಣ್ಣಲ್ಲಿ ನೋಡುತ್ತ ಬಂದುಬಿಟ್ಟ.

ಇವತ್ತು ಸಂಜೆ ಏನೇ ಆಗಲಿ ಕುರ್ಚಿ ಮೇಲೆ ಕೂತುಬಿಡಬೇಕೆಂದು ತೀರ್ಮಾನಿಸಿದ. ಸಾಹೇಬರು, ಇಂದು ರಾತ್ರಿ ಎಂಟು ತನಕ ಏನೇನೊ ಮೀಟಿಂಗ್‌ಗಳಿವೆ; ಸ್ವಾತಂತ್ರ್ಯೋತ್ಸವವನ್ನು ಈ ಬಾರಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲು ಸರ್ಕಾರವು ತೀರ್ಮಾನಿಸಿದೆ; ಇದರಲ್ಲಿ ನೀನು ಓಡಾಡಿ ಕೆಲಸ ಮಾಡಬೇಕಾದ್ದು ಸಾಕಷ್ಟಿದೆ; ಇಲ್ಲೇ ಇದ್ದು ಸರಿಯಾಗಿ ನಡಕೋಬೇಕು; ಗೊತ್ತಾಯ್ತಲ್ಲಾ? ಎಂದು ಎಚ್ಚರಿಸಿದ್ದರು. ಸಾಲುಸಾಲಾಗಿ ಮೀಟಿಂಗ್‌ಗಳು ನಡೆದು ಎಲ್ಲರಿಗೂ ಸಲಾಮು ಹೊಡೆದು ನಡು ಸುಸ್ತಾಗಿತ್ತು. ಮಾದಪ್ಪನ ಕುರ್ಚಿಯ ಆಸೆ ಮುಂದೂಡಲ್ಪಡುತ್ತಲೆ ಇತ್ತು. ಅದ್ದೂರಿಯಾದ ಸ್ವಾತಂತ್ರ್ಯೋತ್ಸವದ ಸಿದ್ಧತೆಗಳಲ್ಲಿ ಹಠಾರ ಕಛೇರಿಯು ಮುಳುಗಿತ್ತು. ಮಾದಪ್ಪನಿಗೆ ಅದರ ಕಡೆ ಅಷ್ಟಾಗಿ ಗಮನ ಇರಲಿಲ್ಲ. ಸಾಹೇಬರ ಕುರ್ಚಿ ಮೇಲೆ ಯಾವತ್ತು ಕೂರುವುದೊ ಎಂಬ ಹೆಬ್ಬಯಕೆ ಹೆಮ್ಮರವಾಗಿ ಹಬ್ಬಿಕೊಂಡಿತ್ತು.



ಅಂತೂ ಆ ದಿನ ಬಂದೇ ಬಿಟ್ಟಿತು. ಮುಂಚಿತವಾಗಿ ಬಂದು ಕಛೇರಿ ಬಾಗಿಲು ತೆಗೆದು ಎಂದಿನಂತೆ ಸಾಹೇಬರ ಕೊಠಡಿಯ ಕಸಗುಡಿಸಲು ಮುಂದಾದಂತೆಯೆ ಆ ಕುರ್ಚಿಯು 'ಅಯ್ಯಾ, ಬಾರಯ್ಯಾ ಸಾಕು ನಿನ್ನ ಸೇವೆ. ಒಂದು ಕ್ಷಣ ನನ್ನ ಮೇಲೆ ಕೂತು ಹೋಗಯ್ಯಾ' ಎಂದಿತು. ಬರಬರನೆ ಕಸಗುಡಿಸಿ ಒಪ್ಪ ಓರಣ ಮಾಡಿ ಗಂಧದ ಕಡ್ಡಿ ಹಚ್ಚಿ ದಿಕ್ಕು ದಿಕ್ಕಿಗು ನಮಸ್ಕಾರ ಮಾಡಿ ಮಹಾತ್ಮಗಾಂಧಿಯವರ ಪಟಕ್ಕೂ ಕಡ್ಡಿಯನ್ನು ಬೆಳಗಿ ಕೊನೆಗೆ ಕುರ್ಚಿಗೂ ಪೂಜಿಸಿ ಕಡ್ಡಿಯನ್ನು ಗಾಂಧೀಜಿಯವರ ಪಾದದ ಬಳಿ ಸಿಕ್ಕಿಸಿ; ಏಕ ಚಿತ್ತದಲ್ಲಿ ಕಾಲಾಂತರದಿಂದಲೂ ತುಂಬಿಕೊಂಡು ಬಂದಿದ್ದ ಆಸೆಯನ್ನೆಲ್ಲ ತೀರಿಸಿಕೊಳ್ಳುವಂತೆ ದೊಡ್ಡ ಸಾಹೇಬರ ಆ ಕುರ್ಚಿಯ ಮೇಲೆ ಮಾದಪ್ಪ ಕೂತುಬಿಟ್ಟ. ಒಂದು ಕ್ಷಣ ಅವನೊಳಗಿನ ಪುರಾತನರ ಜಗತ್ತು ಕಂಪಿಸಿತು. ಅನಾಥರ ಆಸೆ ಸಂಭ್ರಮಿಸಿತು. ಗಾಂಧೀಜಿಯವರ ಪಟ ಅವನ ತಲೆ ಮೇಲೆ ತೂಗುತ್ತಿತ್ತು. ಮಾದಪ್ಪ ಗಾಂಧಿಯವರನ್ನೆ ದಿಟ್ಟಿಸಿ ಕಣ್ಣು ಮುಚ್ಚಿ ಆ ಕುರ್ಚಿಯ ವಿಸ್ಮಯ ಹಿತವನ್ನ ಮೈದುಂಬಿಕೊಳ್ಳುತ್ತಿರುವಂತೆಯೆ ಧಿಡೀರನೆ ಸಾಹೇಬರು ಕೊಠಡಿಯ ಒಳಕ್ಕೆ ಬಂದುಬಿಟ್ಟಿದ್ದರು. ಸ್ವಾತಂತ್ರ್ಯೋತ್ಸವದ ವಿಪರೀತ ಕೆಲಸಗಳ ಒತ್ತಡದಲ್ಲಿ ಕಛೇರಿಗೆ ಸಾಹೇಬರು ಬೇಗ ಬರಬೇಕಾಗಿತ್ತು. ಮಾದಪ್ಪ ಹಾಗೆ ಕುಳಿತಿರುವುದನ್ನು ನೋಡಿದ ಸಾಹೇಬರು ಕೆಂಡಾಮಂಡಲವಾದರು. ಉರಿಗಣ್ಣು ಬಿಟ್ಟು ಕ್ರೂರವಾಗಿ ಕೂಗಿಕೊಂಡರು. ಮಾದಪ್ಪ ಆ ಕೂಗಿನ ಕತ್ತಿಯಲುಗಿನ ಆಘಾತಕ್ಕೆ ಒಳಗಾಗಿ ಭೀತಿಯಿಂದ ಸಾಹೇಬರನ್ನು ನೋಡಿ 'ಹಾಽ' ಎಂದು ಕುಸಿದು ಹೋದ. ಸಾಹೇಬರು ಹೊರಬಂದು ಜನರನ್ನು ಕೂಗಿದರು. ಇನ್ನೂ ಯಾರೂ ಅಷ್ಟಾಗಿ ಬಂದಿರಲಿಲ್ಲ. ಯಾರು ಯಾರಿಗೊ ಪೋನು ಮಾಡಿದರು. ಪೊಲೀಸ್ ಇಲಾಖೆಯವರು ಬಂದರು. ಸ್ವಲ್ಪ ಸಮಯದ ಒಳಗೇ ಸುದ್ದಿ ಹಬ್ಬಿ ಜನ ನೆರೆದರು.

ಕುರ್ಚಿಯಲ್ಲಿ ಕುಸಿದಿದ್ದ ಮಾದಪ್ಪನನ್ನೇ ನೋಡುತ್ತಿರುವಂತೆ ಗಾಂಧೀಜಿಯವರ ಪೋಟೊ ನಿಶ್ಚಲವಾಗಿತ್ತು. ಉಪ್ಪಿನ ಸತ್ಯಾಗ್ರಹದಲ್ಲಿ ಎರಡೂ ಕೈಗಳಿಂದ ಉಪ್ಪು ಹಿಡಿದು ಜನರೆಡೆಗೆ ನೀಡುತ್ತಿರುವ ಪೋಟೋ ಅದಾಗಿತ್ತು. ಮಾದಪ್ಪನ ದೇಹದಲ್ಲಿ ಉಸಿರು ಇದೆಯೊ ಇಲ್ಲವೊ ಎಂದು ಪರೀಕ್ಷಿಸುತ್ತಿದ್ದರು. ಸಾಹೇಬರು ಪೊಲೀಸಿನವರ ಜೊತೆ ಮಾದಪ್ಪನ ಬಗ್ಗೆ ಏನೇನನ್ನೊ ಹೇಳುತ್ತಿದ್ದರು. ಸಣ್ಣಗೆ ಮಾದಪ್ಪನ ಹೃದಯ ಬಡಿದುಕೊಳ್ಳುತ್ತಿತ್ತು. 'ಸಾಯಬೇಡ ಬದುಕಿರು, ಇನ್ನೊಂದಿಷ್ಟು ಕಾಲ ತಡೆದುಕೊ' ಎಂದು ಹೇಳುತ್ತಿರುವಂತೆ ಗಾಂಧೀಜಿಯವರ ಪೋಟೋ ಇಡೀ ವಾತಾವರಣದ ಮೂಕಸಾಕ್ಷಿಯಂತೆ ಕಾಲವನ್ನು ತೂಗುವಂತೆ ಎಲ್ಲರನ್ನೂ ನೋಡುತ್ತಿತ್ತು. ❑

ಸದಾ ಉರಿಯುತ್ತಲೇ ಇದೆ ಆ ಹಕ್ಕಿ..

ಹಗಲಿರುಳೂ ಎಡೆಬಿಡದೆ
ಉರಿಯುತ್ತಲೇ ಇದೆ ಆ ಹಕ್ಕಿ
ಉರಿಯುವುದೊಂದೇ ಎಂದೆಂದಿಗೂ
ಬದುಕಿಸಬಲ್ಲ ಜೀವದ್ರವ್ಯವೆಂಬಂತೆ
ಎವೆ ಹಳಚುವ ವಿಸ್ಮೃತಿಗೆಂದಿಗೂ ಕಾಣದಂತೆ

ಉರಿಹಕ್ಕಿ ಸದಾ ಉರಿಯುತ್ತ
ಹಾರಿದರೆ ಜ್ವಾಲೆಯೊಂದು ತೇಲುತ್ತ ಹೋದಂತೆ
ಕೊನೆ ಕೊಂಬೆಗೆ ಕೂತರೆ ಕೆಂಡ ಸಂಪಿಗೆ
ಆಳ ಶಾಂತಿಯ ಹಣತೆ ಶಾಂತಿಯಂತೆ
ದೂರವಾದರೆ ಹಗಲ ಚಿಕ್ಕೆಯಂತೆ
ನಿಂತಲ್ಲೇ ಬೇರೂರಿ ಗಾಳಿ ಆತ್ಮದಂತೆ
ಮಣ್ಣಲ್ಲಿ ಜೀವಶಾಖ ; ನೀರ ತಳದ ಹಣೆಗಣ್ಣು
ನಡೆದರೆ ನೆನಪು ಚಮ್ಮಾಳಿಗೆ ಮೆಟ್ಟಿ
ನಿಜದಾಚೆಯ ಜೀವ ಜ್ಯೋತಮ್ಮನಂತೆ
ಮಿಸುನಿ ಬೇಸತ್ತು ಲೋಭದುಡುಗೆಯ ಕಳಚಿ
ಬೆತ್ತಲೆ ಲಕ್ಷ್ಮಿಯ ಕೋಟಿ ಕಾಮಕಣ್ಣುಗಳ
ಸುಲಿದ ದಾಳಿಂಬೆ ಕನ್ನಡಿ

ಅಗ್ನಿಯನ್ನೆ ಭೋಗಿಸುವ ಯಾಜಿಗಳಿಗೆ
ಮಾಯಾ ಲೋಕಕೆ ನೆಗೆವ ಹಾರುಗುದುರೆ

ಉರಿಹಕ್ಕಿ ಎದೆಯಲ್ಲಿ ತಿಳಿಯಿಲ್ಲ ತಿಳಿದರೆ
ತಿಳಿಯುಂಟು ತಿಳಿಯದಂತಿದ್ದಲ್ಲಿ

ಸುಮ್ಮನೆ ಉರಿಯುತ್ತಲೇ ಇದೆ ಆ ಹಕ್ಕಿ
ಅಳಿಸಲಾಗದ ಕೋಟಿ ನೆರಳ ಹೆಜ್ಜೆಗಳನ್ನೂರುತ್ತ
ಉರಿಯುತ್ತ ಉಳಿವುದೇ ಅದರ ಮಹಾಕಾವ್ಯವೆಂಬಂತೆ
ಉರಿಯುತ್ತ ಉರಿವ – ಉರಿಸುವ ಹಸಿವು ಹೆಚ್ಚುವಂತೆ
ಉರಿಯೇ ನಿಂತರೆ ನಂತರ ನಿರಂತರ ಸಾವೆಂಬಂತೆ !

○ ಲಕ್ಷ್ಮೀಪತಿ ಕೋಲಾರ

ಇತಿಹಾಸದ ಅಧ್ಯಯನ

○ ಡಾ|| ಜಿ. ರಾಮಕೃಷ್ಣ

ಆರ್.ಎಸ್. ಶರ್ಮ ಮೊದಲಾದ ಇತಿಹಾಸ ತಜ್ಞರನ್ನು ಭಯೋತ್ಪಾದಕರೆಂದು ಬಣ್ಣಿಸಿದ್ದ ಮುರಳಿ ಮನೋಹರ ಜೋಶಿ ಈಗ ಕೇಂದ್ರದಲ್ಲಿ ಶಿಕ್ಷಣ ಸಚಿವನಾಗಿಲ್ಲ. ಆದರೆ ಆತ ಹುಟ್ಟಿಹಾಕಿದ ವಿಷಬೀಜ ಇನ್ನೂ ಜೀವಂತವಾಗಿದೆ. ಇತಿಹಾಸವನ್ನು ಉಪಹಾಸಕ್ಕೆ ಈಡು ಮಾಡುವುದು ಒಂದು ಸಂಪ್ರದಾಯವಾಗಿ ಕಳೆದ ನಾಲ್ಕೈದು ದಶಕಗಳಲ್ಲಿ ನಮ್ಮಲ್ಲಿ ಬೆಳೆದುಬಂದಿದೆ. ವಾಸ್ತವಿಕ ಘಟನೆಗಳ ಅವಲೋಕನ ಮತ್ತು ವಿಶ್ಲೇಷಣೆಯ ಜಾಗದಲ್ಲಿ, ಪ್ರಸ್ತುತ ರಾಜಕೀಯದಲ್ಲಿ ಫಲ ನೀಡಬಹುದಾದ ಸಂದರ್ಭವನ್ನು ಸೃಷ್ಟಿಸಿಕೊಳ್ಳಲು ಇತಿಹಾಸವನ್ನು ಮನಸ್ವೀ ಬದಲಾಯಿಸಿಬಿಡುವ ಕ್ರಮವನ್ನು ಜೋಶಿ ಪುಷ್ಟೀಕರಿಸಿದ್ದು ಒಂದು ದುರಂತ. ಇತಿಹಾಸದ ಸ್ವರೂಪ, ಆಯಾಮ, ಇತಿಮಿತಿಗಳು, ಅಧ್ಯಯನ ಪದ್ಧತಿ, ಅಧ್ಯಯನ ಸಾಮಗ್ರಿ ಮುಂತಾದುವನ್ನು ಪರಿಚಯಿಸುವ ಅನೇಕ ಗ್ರಂಥಗಳಿವೆ. ಆದರೆ ಅವು ಜೋಶಿ ಕ್ರಮಕ್ಕೆ ಒಗ್ಗುವಂಥವಲ್ಲ. ಗಾರ್ಡನ್ ಚೈಲ್ಡ್, ಇ.ಎಚ್.ಕಾರ್, ಡಿ.ಡಿ. ಕೋಸಾಂಬಿ ಮುಂತಾದವರ ಕೃತಿಗಳು ಮೌಲಿಕವಾದುವೆಂದು ಜೋಶಿ ಸಂಪ್ರದಾಯದವರು ಪರಿಗಣಿಸುವುದಿಲ್ಲ.

ಇತಿಹಾಸ ರಚಿಸುವುದರ ಉದ್ದೇಶವೇನಾಗಿತ್ತೆಂದು ವಿವರಿಸುತ್ತಾ ಪ್ರಾಚೀನ ಗ್ರೀಸಿನ ಹೆರೊಡೋಟಸ್ ಹೇಳುತ್ತಾನೆ, ಗ್ರೀಕರ ಹಾಗೂ ಬರ್ಬರರ ನಡುವಿನ ಯುದ್ಧದಲ್ಲಿ ಜರುಗಿದ ಘಟನೆಗಳನ್ನು ದಾಖಲಿಸುವುದು ಮತ್ತು ಅವರಿಬ್ಬರೂ ಪರಸ್ಪರ ಕಾದಾಡಲು ಕಾರಣವೇನಿತ್ತೆಂಬುದನ್ನು ಗುರುತಿಸುವುದು ಎಂದು. ಅವನು ಇನ್ನೆಷ್ಟು ವಸ್ತುನಿಷ್ಠನಾಗಿರಬಹುದೆಂದು ಭ್ರಮಿಸುವ ಅಗತ್ಯವಿಲ್ಲ; ಏಕೆಂದರೆ, ಆರಂಭದಲ್ಲೇ ಅವನು ಪರ್ಷಿಯಾದವರನ್ನು ಬರ್ಬರರೆಂದೂ ಗ್ರೀಕರನ್ನು ನಾಗರಿಕರೆಂದೂ ವರ್ಣಿಸಿದ್ದಾನೆ. ತಾನು ಗ್ರೀಸಿನವನಾಗಿದ್ದರಿಂದ ಗ್ರೀಕರು ನಾಗರಿಕರು; ಇತರರು ಬರ್ಬರರು ! ನಿಜಕ್ಕೂ ನೋಡಿದರೆ ಇತಿಹಾಸದ ಕೆಲಸವು ಸಮಾಜದ ವಿಕಾಸದ ಹಾದಿಯನ್ನು ಗುರುತಿಸುವುದೇ ಆಗಿದೆ.

ವರ್ತಮಾನದ ಸಂಗತಿಗಳ ಬಗೆಗಿನ ಅಂತರ್ದೃಷ್ಟಿಯು ಭೂತಕಾಲದ ಘಟನೆಗಳನ್ನು ವೀಕ್ಷಿಸಲು ದಾರಿದೀಪವಾಗುತ್ತದೆ ಮತ್ತು ಆಗ ಸದೃಢವಾದ ಇತಿಹಾಸದ ರಚನೆಯಾಗಬಲ್ಲದೆಂದು ಕಾರ್ ವ್ಯಾಖ್ಯಾನಿಸಿದ್ದಾನೆ. ಅದನ್ನು ಬೇರೆ ರೀತಿಯಲ್ಲೂ ಹೇಳಬಹುದು : ವರ್ತಮಾನಕ್ಕೆ ಸ್ಪಂದಿಸುವ ವಿಧಾನವು ಭೂತಕಾಲವನ್ನು ಒಬ್ಬ ಇತಿಹಾಸಕಾರ ಹೇಗೆ ಅರ್ಥೈಸಬಹುದೆಂಬುದಕ್ಕೆ ಸೂಚಕವಾಗುತ್ತದೆ.

ಉದಾಹರಣೆಗೆ, ಇಂದು ಮೀಸಲಾತಿಯನ್ನು ವಿರೋಧಿಸುವ ವ್ಯಕ್ತಿ ಸಾಮಾನ್ಯವಾಗಿ ಹಿಂದೆ ವರ್ಣ ವಿಭಜನೆಯು ಸಮಾಜಕ್ಕೆ ಮಾರಕವಾಗಿದ್ದಿತೆಂದು ಭಾವಿಸುವುದಿಲ್ಲ, ಅಥವಾ, ಇಂದು ಜಾಗತೀಕರಣವನ್ನು ವಿರೋಧಿಸುವ ವ್ಯಕ್ತಿ ಹಿಂದೆ ವಸಾಹತುಶಾಹಿ ದೌರ್ಜನ್ಯಗಳ ವಿರುದ್ಧ ಹೋರಾಡಿದ್ದವರನ್ನು ಸಾಮಾನ್ಯವಾಗಿ ಶ್ಲಾಘಿಸಿ ಆದರ್ಶ ಮೂರ್ತಿಗಳನ್ನಾಗಿಸುತ್ತಾನೆ.

ಆದರೆ ಯಾವುದು ಪ್ರಿಯವೋ ಅದೇ ಇತಿಹಾಸವೆನಿಸುವುದಿಲ್ಲ. ಸ್ವಕಪೋಲ ಕಲ್ಪಿತವಾದ ಅಂಶಗಳಾಗಲಿ, ನಮಗೆ ರುಚಿಕರವೆಂದು ತೋರುವ ಅಂಗಗಳಾಗಲಿ ಇತಿಹಾಸದ ಘಟನೆಗಳ ನಿರೂಪಣೆಗೆ ಸಾಧನಗಳಲ್ಲ. ವೈಯಕ್ತಿಕ ಭಾವನೆಗಳ ಪ್ರತಿಫಲನಗಳನ್ನು ಇತಿಹಾಸದಲ್ಲಿ ಕಾಣಹೊರಟರೆ ವಿರೋಧಗಳ ಸರಮಾಲೆ ನಮ್ಮ ಕಣ್ಣು

ಇಂದು ಮೀಸಲಾತಿಯನ್ನು ವಿರೋಧಿಸುವ ವ್ಯಕ್ತಿ ಸಾಮಾನ್ಯವಾಗಿ ಹಿಂದೆ ವರ್ಣ ವಿಭಜನೆಯು ಸಮಾಜಕ್ಕೆ ಮಾರಕವಾಗಿದ್ದಿತೆಂದು ಭಾವಿಸುವುದಿಲ್ಲ. ಅಥವಾ, ಇಂದು ಜಾಗತೀಕರಣವನ್ನು ವಿರೋಧಿಸುವ ವ್ಯಕ್ತಿ ಹಿಂದೆ ವಸಾಹತುಶಾಹಿ ದೌರ್ಜನ್ಯಗಳ ವಿರುದ್ಧ ಹೋರಾಡಿದ್ದವರನ್ನು ಸಾಮಾನ್ಯವಾಗಿ ಶ್ಲಾಘಿಸಿ ಆದರ್ಶ ಮೂರ್ತಿಗಳನ್ನಾಗಿಸುತ್ತಾನೆ. ಆದರೆ ಯಾವುದು ಪ್ರಿಯವೋ ಅದೇ ಇತಿಹಾಸವೆನಿಸುವುದಿಲ್ಲ.

ಕುಕ್ಕುತ್ತದೆ. ಏಕೆಂದರೆ ಒಬ್ಬೊಬ್ಬನೂ ತನ್ನ ಭಾವನೆಗಳ ಪ್ರತಿಫಲನಗಳನ್ನೇ ಅರಸಿ, ಆರೋಪಿಸಿ, ಅದನ್ನೇ ಸತ್ಯವೆಂದು ಪ್ರತಿಪಾದಿಸುವ ಅಪಾಯವುಂಟು.

ಕಾಲಾನುಕ್ರಮವಾಗಿ ಉತ್ಪಾದನಾ ಸಂಬಂಧಗಳು ಹೇಗೆ ಬೆಳೆದುಬಂದುವೆಂದು ಗುರುತಿಸದಿರುವುದು ಇತಿಹಾಸ ವಾಗುವುದಿಲ್ಲ. ರಾಜಕೀಯ ಜಾತ್ರೆ, ಹಲವು ಸಂತತಿಗಳು ಪ್ರಭುತ್ವದಲ್ಲಿ ಪಾಲ್ಗೊಂಡದ್ದು ಇವೆಲ್ಲವೂ ಇತಿಹಾಸದ ಭಾಗವೇ; ಇತಿಹಾಸವನ್ನು ನಿರೂಪಿಸಲು ಅವು ಸಾಮಗ್ರಿ ಒದಗಿಸುತ್ತವೆ. ಆದರೆ ಅದಷ್ಟೇ ಇತಿಹಾಸವಲ್ಲ. ಒಂದು ಮಾನವ ಜನಾಂಗವು ವಿಕಸಿಸಿದ್ದು ಮತ್ತು ಅದು ಒಂದು ಸಂಸ್ಕೃತಿಯನ್ನು ಬೆಳೆಸಿದ್ದು ಮೂಲತಃ ಇತಿಹಾಸದ ಸಾಮಗ್ರಿಯಾಗುತ್ತದೆ. ಇಂದಿನ ಅಗತ್ಯ ಅಥವಾ ಆಕಾಂಕ್ಷೆಗಳಿಗೆ ಸಮರ್ಥನೆ ಒದಗಿಸಿಕೊಳ್ಳಲು ಬಳಸಲಾಗುವ ಇತಿಹಾಸದ ಪ್ರಮೇಯಗಳು ಯಥಾವತ್ತಾದುವೇ, ಅಲ್ಲವೇ, ಎಂಬುದನ್ನು ತಿಳಿಯವುದು ಅಸಾಧ್ಯವಲ್ಲ. ಏಕೆಂದರೆ, ಚರಿತ್ರೆಯ ದಾಖಲೆಗಳು ಗುಟ್ಟಾದುವೇನೂ ಅಲ್ಲ ಮತ್ತು ದಾಖಲೆಗಳಿಲ್ಲದೆ ಚರಿತ್ರೆ ಇಲ್ಲ. ಅವು ಲಿಖಿತ ಮತ್ತು ಮೌಖಿಕ ಪರಂಪರೆಗಳೆರಡನ್ನೂ ಒಳಗೊಳ್ಳುತ್ತವೆ. ಶಾಸನಗಳು, ಉತ್ಖನನಗಳ ಕೊಡುಗೆಗಳು, ಸಾಹಿತ್ಯದಿಂದ ಸಂಗ್ರಹಗೊಂಡ ಮಾಹಿತಿಗಳು ಒಂದು ಬಗೆಯವಾದರೆ ಪುರಾಣ, ಜಾನಪದ ಮುಂತಾದುವು ಇನ್ನೊಂದು ಬಗೆಯವು. ಎರಡೂ ಇತಿಹಾಸಕ್ಕೆ ಆಕರಗಳೇ; ಆದರೆ ಯಾವುದರಲ್ಲಿ ಎಷ್ಟನ್ನು ಸ್ವೀಕರಿಸಬೇಕೆಂಬುದನ್ನು ಇತಿಹಾಸಕಾರನ ಶಿಸ್ತು ನಿಗದಿಗೊಳಿಸುತ್ತದೆ.

ಒಂದು ಉದಾಹರಣೆಯನ್ನು ನೋಡುವುದಾದರೆ, ಪುರಾಣದ ಮಿಥಕಗಳಲ್ಲಿ ಇತಿಹಾಸದ ಅಂಗಗಳಿವೆ; ಅವೇ ಇತಿಹಾಸವಲ್ಲ. ಪುರಾಣವನ್ನು ಇತಿಹಾಸವೆಂಬಂತೆ ಗ್ರಹಿಸುವುದು ಅವಿವೇಕವಾದರೆ, ಸಾಹಿತ್ಯವನ್ನು ಪುರಾಣವೆಂಬಂತೆ ಸ್ವೀಕರಿಸುವುದು ಬಾಲಿಶತನವಾಗುತ್ತದೆ. ಹೀಗಿರುವಾಗ, ದಾಖಲೆಗಳನ್ನು ತುಂಡರಿಸುವ ಕ್ರಮವಾಗಲಿ, ದಾಖಲೆಗಳನ್ನೇ ಸೃಷ್ಟಿಸಿಬಿಡುವ ಚಮತ್ಕಾರವಾಗಲಿ ಇತಿಹಾಸದ ಪದ್ಧತಿಗೆ ಹೊರತಾದುವೆಂದು ಧಾರಾಳವಾಗಿ ಹೇಳಬಹುದು. ಇರುವ ದಾಖಲೆಗಳ ಮರುಪರೀಕ್ಷೆ ಅಥವಾ ನೂತನ ಅರ್ಥೈಸುವಿಕೆ ಸಾಧ್ಯ; ಆದರೆ ಅದು ಸ್ವೇಚ್ಛಾಚಾರದ ಅರ್ಥೈಸುವಿಕೆ ಆಗಬಾರದು. ವೈಜ್ಞಾನಿಕ ಪದ್ಧತಿಯಲ್ಲಿರುವಂತೆ ಇತಿಹಾಸದ ಪದ್ಧತಿಯಲ್ಲಿ ಕೂಡ ಪರಿಚ್ಛಿನ್ನವಾದ ದೃಷ್ಟಿಗೆ ಆದ್ಯತೆ ಇದೆ. ಖ್ಯಾತ ಇತಿಹಾಸಕಾರರಾಗಿದ್ದ ಕೆ.ಎ. ನೀಲಕಂಠ ಶಾಸ್ತ್ರಿಗಳು ಭಾರತೀಯ ಇತಿಹಾಸ ಸಮಾವೇಶದ ಅಧ್ಯಕ್ಷರಾಗಿ ಒಮ್ಮೆ ನೀಡಿದ್ದ ಎಚ್ಚರವನ್ನು ಗಮನಿಸಬೇಕು.

ಅವರ ಮಾತಿನ ಸಾರಾಂಶ ಇದು: ಹತ್ತು-ಹದಿನೈದು ಶತಮಾನಗಳ ಹಿಂದಿನ ತಾಮ್ರ ಶಾಸನವೊಂದು ದೊರೆಯಿತೆಂದು ಭಾವಿಸೋಣ; ಅದರಲ್ಲಿ ಅರಮನೆಯೊಂದರ ವಿವರಣೆ ಇದೆಯೆಂದಿಟ್ಟುಕೊಳ್ಳೋಣ ; ಅದರ ಪ್ರಕಾರ ಅರಮನೆಗೆ ಚಿನ್ನದ ಬಾಗಿಲುಗಳಿದ್ದುವೆಂದು ತಿಳಿದುಬರುತ್ತದೆಯೆಂದು ಭಾವಿಸೋಣ. ಇಂದಿನ ಇತಿಹಾಸಕಾರ ಅದರಿಂದ ಸ್ಫುಟವಾಗಿ ತೀರ್ಮಾನಿಸಬಹುದಾದ್ದೇನು ? ಶಾಸ್ತ್ರಿಗಳು ಹೇಳುತ್ತಾರೆ, ಎರಡು ತೀರ್ಮಾನಗಳು ಮಾತ್ರ ಖಚಿತವಾಗಿ ಸಾಧ್ಯ: ಅ. ಆಗಿನ ಕಾಲದ ಅರಮನೆಗಳಿವೆ ಬಾಗಿಲುಗಳಿರುತ್ತಿದ್ದುವು; ಮತ್ತು ಆ. ಆ ಕಾಲದಲ್ಲಿ ಚಿನ್ನವೆಂಬ ಖನಿಜದ ಪರಿಚಯವಿತ್ತು. ಅದನ್ನು ಬಿಟ್ಟು ನಿಜಕ್ಕೂ ಚಿನ್ನದ ಬಾಗಿಲುಗಳೇ ಇದ್ದುವೆಂಬ ವಾದ ಹೂಡಿದರೆ ಇತಿಹಾಸಕಾರನು ತನ್ನ ಶಿಸ್ತಿನ ಪರಿಧಿಯನ್ನು ಮೀರಿ ಹೋಗಿದ್ದಾನೆಂದರ್ಥ.

ಕಳೆದ ಶತಮಾನದಲ್ಲಿ ನಡೆದ ಇತಿಹಾಸದ ಅಧ್ಯಯನವು ನಮ್ಮ ದೇಶದ ಸಮಕಾಲೀನ ಸಂದರ್ಭಗಳಿಗೆ ಅನುಗುಣವಾಗಿ ಮತ್ತು ಪ್ರತಿಕ್ರಿಯೆಯಾಗಿ ನಡೆದಿದೆ. ಇದಕ್ಕೆ ಕೆಲವು ಅಪವಾದಗಳಿರಬಹುದು. ಘೋಷಾಲ್, ಜಯಸ್ವಾಲ್, ರಾನಡೆ, ತಿಲಕ್, ಡಾಂಗೆ ಮುಂತಾದವರು ಮಿಲ್, ಮೆಕಾಲೆ, ಸ್ಮಿತ್ ಮೊದಲಾದ ಆಂಗ್ಲ ಚರಿತ್ರಕಾರರಿಗೆ ಪ್ರತಿಯಾಗಿ ಭಾರತದ ಬಗ್ಗೆ ಸಮರ್ಥನೆ ನೀಡುವ ಅವಶ್ಯಕತೆಯಿದ್ದುದು ಆರಂಭದ ಕಾಲದ ಒಂದು ವಾಸ್ತವಿಕ ಸನ್ನಿವೇಶ. ಬ್ರಿಟಿಷರು ಭಾರತದಲ್ಲಿ ವಸಾಹತನ್ನು ಸ್ಥಾಪಿಸಿ ಭಾರತಕ್ಕೆ ಗಣನೀಯವಾದ ಸಹಾಯ ಮಾಡಿದರೆಂಬ ನಿಟ್ಟಿನಲ್ಲಿ ಮಿಲ್ ಮೊದಲಾದವರು ಚರಿತ್ರೆ ಬರೆದಿದ್ದರು. ತಮ್ಮ ವಸಾಹತುಶಾಹಿ ದಬ್ಬಾಳಿಕೆಗೆ ಇದೊಂದು ರೀತಿಯ ಸಮರ್ಥನೆಯಾಗಿತ್ತು.

ಭಾರತದ ಪ್ರಾಚೀನ ಸಮಾಜವು ಅಸ್ತವ್ಯಸ್ತವಾಗಿತ್ತು, ಅಂದಿನ ಸಾಂಘಿಕ ಸಂಸ್ಥೆಗಳು ಅಪಕ್ವವಾಗಿದ್ದವು, ರಾಷ್ಟ್ರೀಯತೆಯ ಕಲ್ಪನೆ ಇರಲಿಲ್ಲ, ಕೇಂದ್ರೀಯ ಆಡಳಿತವಿರಲಿಲ್ಲ; ಅವಕ್ಕೆಲ್ಲಾ ಬ್ರಿಟಿಷರು ಪರ್ಯಾಯ ಕಲ್ಪಿಸಿಕೊಟ್ಟಿದ್ದಾರೆಂಬ ಉದ್ಧಟತನ ಮಿಲ್ ವಾದದಲ್ಲಿತ್ತು. ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಈ ವಾದಕ್ಕೆ ಪ್ರಬಲವಾದ ಉತ್ತರ ನೀಡುವುದು ಬೌದ್ಧಿಕ ವಲಯದ ಜವಾಬ್ದಾರಿಯಾಗಿತ್ತು. ಘೋಷಾಲ್ ಮುಂತಾದ ಚರಿತ್ರಕಾರರು ಅದನ್ನು ನಿರ್ವಹಿಸಲು ಪ್ರಾಚೀನ ಭಾರತದ ಭವ್ಯತೆಯನ್ನು ಕೊಂಡಾಡಲು ಮುಂದಾದರು. ನಮ್ಮ ಸಮಾಜಕ್ಕೆ ನಿಗದಿತ ಸ್ವರೂಪವಿತ್ತು, ನಿಷ್ಕೃಷ್ಟವಾದ ಸಂಸ್ಥೆಗಳಿದ್ದವು, ಸಾಮ್ರಾಜ್ಯಗಳು ಕೇಂದ್ರೀಯ ಆಡಳಿತದಿಂದಲೇ ಸುಭದ್ರವಾಗಿದ್ದವು, ಋಗ್ವೇದ ಕಾಲದ ಗಣಸಂಘಗಳು ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿದ್ದುವು, ರಾಷ್ಟ್ರೀಯತೆಯು ಸಾಕಾರಗೊಂಡಿತ್ತು ಮುಂತಾಗಿ ಇವರು ವಾದಿಸಿದರು.

> **ವೇದದಲ್ಲಿ ಆಧುನಿಕ ಜ್ಞಾನವೆಲ್ಲಾ ಅಡಗಿದೆಯೆಂದು ಹೇಳುವುದು ಒಂದು ರೀತಿಯ ವೈಭವೀಕರಣವಾದರೆ, ಆಕ್ರಮಣಗಳು ನಮ್ಮ ವೈಭವವನ್ನು ನುಚ್ಚುನೂರು ಮಾಡಿದುವೆಂಬುದು ಇನ್ನೊಂದು ರೀತಿಯ ಗೊಡ್ಡು ಸಮರ್ಥನೆಯಾಗುತ್ತದೆ. ಆಯುಧಗಳನ್ನು ತಯಾರಿಸಲು ಬೇಕಾದ ತಂತ್ರಜ್ಞಾನವಿದ್ದಾಗ್ಯೂ ನಾವೇಕೆ ನಮ್ಮ ದೇವಸ್ಥಾನಗಳನ್ನು ರಕ್ಷಿಸಿಕೊಳ್ಳಲು ಅಶಕ್ತರಾದೆವು? ಈ ಪ್ರಶ್ನೆಯನ್ನು ಹಾಕಿಕೊಳ್ಳದೆ ಇತಿಹಾಸ ರಚನೆ ಮಾಡಹೊರಡುವುದು ಮೂರ್ಖತನ.**



ಅಂದರೆ, ಬ್ರಿಟಿಷರು ಭಾರತಕ್ಕೆ ನೀಡಬಹುದಾದ ಬಳುವಳಿ ಯಾವುದೂ ಇಲ್ಲವೆಂದು ಹೇಳುತ್ತಾ ವಸಾಹತುಶಾಹಿ ವಿರೋಧದ ಸಂಘರ್ಷಕ್ಕೆ ಒಂದು ತಾತ್ವಿಕ ಬುನಾದಿಯನ್ನು ರಚಿಸಿಕೊಡುವುದು ಇವರ ಕೊಡುಗೆಯಾಯಿತು. ಭೂತಕಾಲದ ವೈಭವೀಕರಣವನ್ನು ಕೈಬಿಟ್ಟು ಸ್ವಲ್ಪ ಹೆಚ್ಚಿನ ವಸ್ತುನಿಷ್ಠತೆಯನ್ನು ಮೈಗೂಡಿಸಿಕೊಂಡಿದ್ದು ನಮ್ಮ ದೇಶವು ರಾಜಕೀಯ ಸ್ವಾತಂತ್ರ್ಯ ಪಡೆದ ನಂತರವೇ ಎನ್ನಬಹುದು. ವರ್ಣ ವ್ಯವಸ್ಥೆಯ ದುಷ್ಟ ಪರಿಣಾಮ, ಊಳಿಗಮಾನ್ಯ ಪದ್ಧತಿಯ ನಿರಂತರ ಪಿಡುಗು, ಆಂತರಿಕ ಬಿಕ್ಕಟ್ಟುಗಳು, ಪರಕೀಯರ ಪ್ರವೇಶಕ್ಕೆ ಪ್ರತಿರೋಧ ಒಡ್ಡದ ವಿಭಜಿತ ಸಮಾಜ, ಮುಂತಾದ ಪ್ರಶ್ನೆಗಳನ್ನು ಆಳವಾಗಿ ಶೋಧಿಸಲು ಸ್ವಾತಂತ್ರ್ಯೋತ್ತರ ಕಾಲದ ಚರಿತ್ರಕಾರರು ವಿವಿಧ ದೃಷ್ಟಿಕೋನಗಳಿಂದ ಯತ್ನಿಸಿದ್ದಾರೆ. ಇದರಲ್ಲಿ ಕೆಲವರಿಗೆ ಮತೀಯ ಅಂಶಗಳು ಪ್ರಮುಖವಾದರೆ, ಇನ್ನು ಬೇರೆಯವರಿಗೆ ಇತರ ಅಂಶಗಳು ಮುಖ್ಯವೆನಿಸಿವೆ. ಭಾರತದ ಇತಿಹಾಸದ ಎಲ್ಲ ಕಪ್ಪು ಚುಕ್ಕೆಗಳಿಗೂ ಪರಕೀಯ ದುರಾಕ್ರಮಣಕಾರರನ್ನು ದೂಷಿಸುವಾಗ ಅಂತಹ ಆಕ್ರಮಣಗಳನ್ನು ತಡೆಗಟ್ಟಲು ಅಡ್ಡಿ ಎಲ್ಲಿಂದ ಮತ್ತು ಹೇಗೆ ಬಂದಿತೆಂಬ ಮೂಲಭೂತ ಪ್ರಶ್ನೆಯನ್ನು ಕೆಲವು ಚರಿತ್ರಕಾರರು ಎದುರಿಸಲು ಇಷ್ಟಪಡುವುದಿಲ್ಲ. ಭಾರತವು ಸೊಗಸಾಗಿತ್ತು ಪರಕೀಯರು ಬಂದು ಹಾಳುಗೆಡವಿದರು, ಎಂದು ಹೇಳುವುದರಲ್ಲಿ ತೃಪ್ತಿ ಹೊಂದುವುದು ಇತಿಹಾಸವನ್ನು ಭಾಗಶಃ ಮಾತ್ರ ನಿರೂಪಿಸಿದಂತಾಗುತ್ತದೆ.

ನಮ್ಮ ಸಾಮಾಜಿಕ-ಆರ್ಥಿಕ ವ್ಯವಸ್ಥೆಯು ಸಮಾಜದ ಬಹುಭಾಗದ ಜನರನ್ನು ನಮ್ಮ ದೇಶದಲ್ಲೇ ಪರಕೀಯರನ್ನಾಗಿಸಿತ್ತೆಂಬ ಕಹಿ ಸತ್ಯವು ಕೆಲವರಿಗೆ ರುಚಿಸುವುದಿಲ್ಲ. ಸಮಕಾಲೀನ ಸಂದರ್ಭದಲ್ಲಿ ಹಿಂದಿನ ಆ ಪರಕೀಯರ ಸಂತತಿಯವರೆಂದು ಹೆಸರಿಸುತ್ತಾ ಕೆಲವು ವಿಭಾಗಗಳನ್ನು ದ್ವೇಷಕ್ಕೆ ಗುರಿಮಾಡುವ ರಾಜಕಾರಣ ಸಹ ಇದರಲ್ಲಿದೆ. ಮತೀಯ ದೃಷ್ಟಿಯಿಂದ ಇತಿಹಾಸ ರಚನೆ ಆರಂಭವಾಗುವುದು ಮತ್ತು ಮುನ್ನಡೆಯುವುದು. ಹೀಗೆ ವೇದದಲ್ಲಿ ಆಧುನಿಕ ಜ್ಞಾನವೆಲ್ಲಾ ಅಡಗಿದೆಯೆಂದು ಹೇಳುವುದು ಒಂದು

ವಾರ್ಷಿಕ ಸಂಚಿಕೆ ೨೦೦೫

ಇಂದಿನ ಸನ್ನಿವೇಶ, ಆಶಯ, ಇತ್ಯಾದಿಗಳನ್ನು ಆರೋಪಿಸಿ ಇತಿಹಾಸವನ್ನು ವ್ಯಾಖ್ಯಾನಿಸುವುದು ಅಪಚಾರವೆನಿಸುತ್ತದೆ.



ರೀತಿಯ ವೈಭವೀಕರಣವಾದರೆ, ಆಕ್ರಮಣಗಳು ನಮ್ಮ ವೈಭವವನ್ನು ನುಚ್ಚುನೂರು ಮಾಡಿದುವೆಂಬುದು ಇನ್ನೊಂದು ರೀತಿಯ ಗೊಡ್ಡು ಸಮರ್ಥನೆಯಾಗುತ್ತದೆ. ಆಯುಧಗಳನ್ನು ತಯಾರಿಸಲು ಬೇಕಾದ ತಂತ್ರಜ್ಞಾನವಿದ್ದಾಗ್ಯೂ ನಾವೇಕೆ ನಮ್ಮ ದೇವಸ್ಥಾನಗಳನ್ನು ರಕ್ಷಿಸಿಕೊಳ್ಳಲು ಅಶಕ್ತರಾದೆವು ? ಈ ಪ್ರಶ್ನೆಯನ್ನು ಹಾಕಿಕೊಳ್ಳದೆ ಇತಿಹಾಸ ರಚನೆ ಮಾಡಹೊರಡುವುದು ಮೂರ್ಖತನ.

ಆದರೆ ಮೂರ್ಖತನದಲ್ಲಿ ವಿಜೃಂಭಿಸಲು ಒಂದು ಕಾರಣವಿದೆ. ಅದೇನೆಂದರೆ, ಆ ಪ್ರಶ್ನೆಯು ನಮ್ಮನ್ನು ನೇರವಾಗಿ ಉತ್ಪಾದನಾ ಸಂಬಂಧಗಳತ್ತ ಕರೆದೊಯ್ಯುತ್ತದೆ. ದೇವಸ್ಥಾನದೊಳಕ್ಕೆ ಯಾರಿಗೆ ಪ್ರವೇಶವಿರಲಿಲ್ಲವೋ ಅವರು ಆಯುಧ ಹಿಡಿದು ಆಕ್ರಮಣ ಮಾಡಿದವರನ್ನು ಹಿಮ್ಮೆಟ್ಟಿಸಬೇಕಾಗಿತ್ತೆ ? ಹಾಗೆಂದು ಹೇಳಿದ ಮಾತ್ರಕ್ಕೆ ಪರಕೀಯರು ಎಸಗಿದ ಧ್ವಂಸಕೃತ್ಯಗಳನ್ನು ಸಮರ್ಥಿಸಬೇಕು ಅಥವಾ ನಗಣ್ಯವೆಂದು ಬಿಟ್ಟುಬಿಡಬೇಕು ಅಥವಾ ಅಂದಿನ ಅನಿವಾರ್ಯತೆಯೆಂದು ಹತಾಶರಾಗಬೇಕು ಎಂದಲ್ಲ. ಇಂದಿನ ಜಾಗತೀಕರಣದ ಕೆಟ್ಟ ಪರಿಣಾಮಗಳಿಗೆ ನಾವು ಪರಕೀಯರನ್ನು ದೂಷಿಸಿ ತೆಪ್ಪಗೆ ಕುಳಿತುಕೊಳ್ಳುತ್ತೇವೆಯೆ ? ಜಾಗತೀಕರಣ ಪ್ರಕ್ರಿಯೆಗೆ ಆಧಾರಸ್ತಂಭವಾಗಿ ನಿಲ್ಲುವ ನರಸಿಂಹರಾವ್ - ವಾಜಪೇಯಿ - ಮನಮೋಹನ ಸಿಂಗರನ್ನೂ ನಾವು ವಿರೋಧಿಸುವುದು ಸಹಜವಲ್ಲವೆ ? ಇದೇ ರೀತಿಯ ವಿಶ್ಲೇಷಣೆಯು ಮಧ್ಯಕಾಲೀನ ಭಾರತದ ಇತಿಹಾಸದ ಸಂದರ್ಭದಲ್ಲೂ ಪ್ರಸ್ತುತವಾಗುತ್ತದೆ.

ಪ್ರಾಚೀನ ಭಾರತದ ಚರಿತ್ರೆಯಲ್ಲೂ ಕೆಲವು ಪ್ರಶ್ನೆಗಳು ಕಠಿಣವಾಗಿ ತೋರುತ್ತವೆ. ಹರಪ್ಪ ನಾಗರಿಕತೆಯು ಪತನವಾದದ್ದೇಕೆ ಎಂಬುದಕ್ಕಿಂತಲೂ ಒಮ್ಮೆ ಪತನಗೊಂಡಿದ್ದು ಪುನರ್ರಚನೆಗೊಳ್ಳಲು ಎರಡು ಸಾವಿರ ವರ್ಷಗಳ ಅವಧಿ ಏಕೆ ಬೇಕಾಯಿತು ಎಂಬುದು ಹೆಚ್ಚು ಮುಖ್ಯವಾದ ಪ್ರಶ್ನೆ. ಋಗ್ವೇದದ ಆರ್ಯರಿಗೂ ಹರಪ್ಪ ಸಂಸ್ಕೃತಿಯ ನಿರ್ಮಾಪಕರಿಗೂ ಐಕ್ಯತೆ ಕಲ್ಪಿಸುವಾಗ ಈ ಪ್ರಶ್ನೆಯನ್ನು ಹಾಕಿಕೊಳ್ಳಲೇಬೇಕು. ಎರಡೂ ಸಂಸ್ಕೃತಿಯ ಪ್ರವರ್ತಕರು ಒಬ್ಬರೇ ಆಗಿದ್ದರೆ ನಗರೀಕರಣವು ಅಲ್ಪಕಾಲದಲ್ಲೇ ಮತ್ತೆ ಅಸ್ತಿತ್ವಕ್ಕೆ ಬರಬೇಕಾಗಿತ್ತು. ಏಕೆಂದರೆ, ಅದಕ್ಕೆ ಬೇಕಾದ ಸಾಮಗ್ರಿಗಳಿದ್ದವು ಮತ್ತು ತಾಂತ್ರಿಕ ಕೌಶಲ್ಯವಿತ್ತು. ಆದರೆ ಹರಪ್ಪ ಪತನದ ನಂತರ ಅಶೋಕನ ಕಾಲದವರೆಗೆ ಮತ್ತೆ ನಗರೀಕರಣದ ಸೂಚನೆ ಇಲ್ಲ. ಲಾತೂರಿನಲ್ಲಿ ಭೂಕಂಪದಿಂದ ಉಂಟಾದ ಧ್ವಂಸವನ್ನು ಹತ್ತು ವರ್ಷಗಳಲ್ಲಿ ನಾವು ತುಂಬಿಕೊಂಡಿರುವುದಾದರೆ ಹರಪ್ಪದ ಜನರು ನೂರು ವರ್ಷಗಳಲ್ಲಾದರೂ ಏಕೆ ಮತ್ತೆ ತಮ್ಮ ನಾಗರಿಕತೆಯ ಆವಿರ್ಭಾವವನ್ನು ಮಾಡಿಕೊಳ್ಳಲಾಗಲಿಲ್ಲ ? ಋಗ್ವೇದದ ಆರ್ಯರು ಮತ್ತು ಹರಪ್ಪದ ನಿರ್ಮಾಪಕರು ಬೇರೆ ಬೇರೆ ಎಂಬುದು ಇದರಿಂದ ತಿಳಿದುಬರಬೇಕು. ಆದರೆ ಮುರಳಿ ಮನೋಹರ ಜೋಶಿ ಸಂಪ್ರದಾಯದ ಚರಿತ್ರಕಾರರು ಪುಟಗಟ್ಟಲೆ ಅಸಂಬದ್ಧವಾದ ಲೇಖನಗಳನ್ನು ಬರೆದು ತಮ್ಮ ಅಪ್ರೌಢಿಮೆಯನ್ನು ಬಹಿರಂಗಗೊಳಿಸಿಕೊಳ್ಳುತ್ತಿದ್ದಾರೆ. ಅಂತೆಯೇ ವರ್ಣ ವ್ಯವಸ್ಥೆಯು ಕೇವಲ ದುಡಿಮೆಯ ವಿಭಜನೆಯಾದಾಗ ಕಸುಬುಗಳು ವಂಶಪಾರಂಪರ್ಯವಾಗಬೇಕಾಗಿಲ್ಲ. ಆದರೆ ಜಾತಿ ವ್ಯವಸ್ಥೆಯಲ್ಲಿ ಇದೇ ಪ್ರಮುಖ ಲಕ್ಷಣವಾಯಿತು. ಹಾಗಿದ್ದರೆ ವರ್ಣ ವ್ಯವಸ್ಥೆಗೆ ಬೇರೇನೋ ಕಾರಣವಾಗಿರಬೇಕಲ್ಲವೆ ?

ಇಂತಹ ನೂರಾರು ಪ್ರಶ್ನೆಗಳು ನಮ್ಮ ಇತಿಹಾಸದ ಸಂದರ್ಭದಲ್ಲಿ ಎದ್ದು ನಿಲ್ಲುತ್ತವೆ. ಭಾವೋದ್ರೇಕವಿಲ್ಲದೆ ಅವನ್ನು ವಿಶ್ಲೇಷಿಸಿಕೊಳ್ಳುವುದು ಆರೋಗ್ಯಕರ. ಭಾರತದ ಬಗೆಗಿನ ಹೆಮ್ಮೆ, ಅಭಿಮಾನ, ಯಾವುದನ್ನು ಕಡಿಮೆ ಮಾಡಿಕೊಳ್ಳದೆ ಆ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಸಾಧ್ಯವಿದೆ. ಅದಕ್ಕೆ ತರ್ಕಮತಿ ಬೇಕು, ವ್ಯಕ್ತಿನಿಷ್ಠವಾಗಿ ವಸ್ತುಸ್ಥಿತಿಯನ್ನು ವಿಶ್ಲೇಷಿಸಿಕೊಳ್ಳುವ ಜಾಡ್ಯವನ್ನು ದೂರಮಾಡಿಕೊಳ್ಳಬೇಕು ಅಷ್ಟೆ. ಇಂದಿನ ರಾಜಕೀಯವನ್ನು ಹಿಂದಿನ ಚರಿತ್ರೆಗೆ ಗಂಟು ಹಾಕುವ ಪ್ರಸಂಗವೇನಿದ್ದರೂ ಆಗಿಹೋದ ಕೆಟ್ಟ ಘಟನೆಗಳು ಮತ್ತೆ ಮರುಕಳಿಸದಿರುವಂತೆ ಮಾಡಲು ಸೀಮಿತಗೊಳ್ಳಬೇಕು. ಅಂತಹ ಹಿಂದಿನ ಘಟನೆಗಳಿಗೆ ನಾವು ಜವಾಬ್ದಾರರಲ್ಲ ; ಆದರೆ ಅಂಥವು ಈಗ ಸಂಭವಿಸಿದರೆ ಅದಕ್ಕೆ ನಮ್ಮದೂ ಜವಾಬ್ದಾರಿ ಇದೆ. ಏನೋ ಕುತ್ಸಿತ ಅಥವಾ ಅಮಾನವೀಯ ಪ್ರವೃತ್ತಿ ಹಿಂದೆಂದೋ ಕಂಡುಬಂದಿದ್ದರೆ ನಮ್ಮ ಅಭಿಮಾನಕ್ಕೇನೂ ಕುಂದುಂಟಾಗುವುದಿಲ್ಲ; ಅದು ಇಂದು ಕಂಡುಬರಬಾರದು, ಅಷ್ಟೆ. ಅಂತಹ ಪ್ರವೃತ್ತಿಯೇ ಇರಲಿಲ್ಲವೆಂದು ಪೊಳ್ಳುವಾದ ಹೂಡಿ ಸಮಾಧಾನ ಪಡೆಯುವುದು ಅನಗತ್ಯ. ಇದನ್ನು ಇನ್ನೊಂದು ರೀತಿಯಲ್ಲೂ ಗ್ರಹಿಸಬಹುದು : ಇತಿಹಾಸದಲ್ಲಿ ಜರುಗಿರುವ ಅನರ್ಥಗಳನ್ನು ಇಲ್ಲವಾಗಿಸುವ ಸುತ್ತ ಪ್ರಯತ್ನವು ಇಂದಿನ ಘಟನೆಗಳ ಸಂದರ್ಭದಲ್ಲಿ ಅಗತ್ಯತೆ ಏಕೆಂದರೆ, ಇತಿಹಾಸದ ನಿರ್ಮಿತಿಯಲ್ಲಿ ನಾವಿಂದು ಭಾಗಿಗಳು. ರೂಪ ಕನ್ವರಳನ್ನು ನಾವು ವೈಯಕ್ತಿಕವಾಗಿ ಸುಟ್ಟಿದ್ದಲ್ಲ; ಆದರೆ ಸುಡುವ ಪ್ರಕರಣ ಸಾಧ್ಯವಾಗುವ ವಾತಾವರಣವನ್ನು ತೊಡೆದುಹಾಕುವ ಕೆಲಸದಲ್ಲಿ ನಾವು ಪೂರ್ಣ ಪ್ರಮಾಣದಲ್ಲಿ ಭಾಗವಹಿಸಿ ಯಶಸ್ಸು ಗಳಿಸಿಲ್ಲ.

ಕಂಬಾಲಪಲ್ಲಿಯಲ್ಲಿ ದಲಿತರನ್ನು ಸುಟ್ಟವರು ನಾವಲ್ಲದಿರಬಹುದು, ಆದರೆ ಸುಡುವ ಪ್ರಕ್ರಿಯೆ ಅಸ್ತಿತ್ವದಲ್ಲಿರುವಂತಹ ವಿದ್ಯಮಾನಗಳಿಗೆ ನಾವು ಸಾಕಷ್ಟು ಪ್ರಮಾಣದಲ್ಲಿ ಜವಾಬ್ದಾರರು. ಇತಿಹಾಸದ ಅನರ್ಥಗಳನ್ನು ತಿದ್ದುವುದೆಂದರೆ ಈ ಅರ್ಥದಲ್ಲಿ ಮಾತ್ರ ಸಾಧ್ಯ ಮತ್ತು ಅಂಗೀಕಾರಾರ್ಹ. ಅದನ್ನು ಬಿಟ್ಟು ಮಸೀದಿಯನ್ನು ಮತ್ತು ಮನಸುಗಳನ್ನು ಉರುಳಿಸಿ ಹಿಂದಿನ ಅನರ್ಥವನ್ನು ತಿದ್ದಹೊರಟರೆ, ಹಿಂದಿನ ಅನರ್ಥದ ಜೊತೆಗೆ ಇಂದಿನ ಅನರ್ಥವೂ ಸೇರಿ ಮುಂದಿನ ಮತ್ತೊಂದು ಅನರ್ಥಕ್ಕೆ ಹಾದಿ ಮಾಡಿಕೊಟ್ಟಂತೆಯೇ. ಹಿಂದೆ ನಮ್ಮ ಗೌರವಕ್ಕೆ ಚ್ಯುತಿ ತಂದವರ ಪೀಳಿಗೆಯನ್ನು ಇಲ್ಲವೆ ಅವರ ಮತಧರ್ಮಕ್ಕೆ ಸೇರಿದವರನ್ನು ಇಂದು ಶಿಕ್ಷಿಸುವುದರಿಂದ ಅಂದು ಹೋದ ಗೌರವ ಮತ್ತೆ ಲಭಿಸುವುದರ ಬದಲು ನಾವಿಂದು ಗಳಿಸಿರಬಹುದಾದ ಅಲ್ಪಸ್ವಲ್ಪ ಗೌರವವೂ ನಷ್ಟವಾಗುತ್ತದೆ.

ಒಂದು ಉದಾಹರಣೆ ನೋಡಬಹುದು : ನಮ್ಮಲ್ಲಿ ಇಂದಿಗೂ ಅಸ್ಪೃಶ್ಯತೆ ಇದೆ. ಸಂವಿಧಾನದಲ್ಲಿ ಮಾತ್ರ ಅದನ್ನು ನಿರ್ಮೂಲನಗೊಳಿಸಿದ್ದೇವೆ. ಇದು ತಲೆ ತಗ್ಗಿಸಬೇಕಾದ ಸಂಗತಿ. ಆದರೆ ಈಗ ನೂರು ವರ್ಷಗಳ ಹಿಂದೆ ಇದ್ದಷ್ಟು ಅಸ್ಪೃಶ್ಯತೆಯ ಆಚರಣೆ ಇಂದು ಇಲ್ಲ. ಇತಿಹಾಸದ ಅನರ್ಥಗಳಲ್ಲಿ ಅಸ್ಪೃಶ್ಯತೆ ಒಂದೆಂದು ಯಾರಾದರೂ ಒಪ್ಪಲೇಬೇಕಾದ್ದು. ಕೆಲವು ಜಾಣ ವಿದ್ವಾಂಸರು ಅದನ್ನು ಬೇರೆ ರೀತಿಯಲ್ಲಿ ತೂಕಮಾಡಿ ತೃಪ್ತಿ ಪಡೆಯುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿ ಗುಲಾಮರನ್ನು ನಡೆಸಿಕೊಂಡಷ್ಟು ಹೀನಾಯವಾಗಿ ನಾವು ಅಸ್ಪೃಶ್ಯರನ್ನು ನಡೆಸಿಕೊಳ್ಳಲಿಲ್ಲವೆಂದು ಅವರ ಅಭಿಪ್ರಾಯ. ಗುಲಾಮರು ದಂಗೆಯೆದ್ದಂತೆ ಅಸ್ಪೃಶ್ಯರು ದಂಗೆಯನ್ನು ಮಾಡದಿರುವಷ್ಟು ಮಟ್ಟಿಗೆ ಅವರ ಮನಸ್ಸುಗಳಿಗೆ ಕಡಿವಾಣ ಹಾಕಿದ್ದೇವೆಂದು ಅವರಿಗೆ ಅನ್ನಿಸುವುದಿಲ್ಲ. ಹೇಗೂ ಇರಲಿ, ಅನರ್ಥವಂತೂ ಜರುಗಿಹೋಯಿತು. ಚರಿತ್ರೆಯ ಪುಟಗಳಿಂದ ಅದನ್ನು ತೆಗೆದುಹಾಕಲು ಸಾಧ್ಯ ; ಆದರೆ ನಡೆದ ಘಟನೆಯನ್ನು ಇಲ್ಲವಾಗಿಸಲು ಸಾಧ್ಯವಿಲ್ಲ.

ಅಸ್ಪೃಶ್ಯರೆನಿಸಿಕೊಂಡವರು ಇತಿಹಾಸದ ಈ ಅನರ್ಥವನ್ನು ಸರಿಪಡಿಸುವುದು ಹೇಗೆ ? ಅವರ ಅಭಿಮಾನವನ್ನು ಕಾಪಾಡಿಕೊಳ್ಳುವುದು ಹೇಗೆ ? ಮುರಳಿ ಮನೋಹರ ಜೋಶಿ - ಅಡ್ವಾನಿ ಹಾದಿಯನ್ನು ಅನುಸರಿಸುವುದಾದರೆ ಅವರು ಅಸ್ಪೃಶ್ಯತೆಯನ್ನು ಮಾನ್ಯಮಾಡಿ ಆಚರಿಸಿದವರ ಸಂತತಿಗಳ ನಮ್ಮನ್ನು ತರಿದುಹಾಕಬೇಕು, ನಮ್ಮ ತಲೆ ಚೆಂಡಾಡಬೇಕು. ಹಾಗೆ ಮಾಡಿಲ್ಲದಿರುವುದು ಅವರ ಉದಾತ್ತ ಸಂಸ್ಕೃತಿಯ ಪ್ರತೀಕವೆನ್ನೋಣವೆ ? ಅಥವಾ, ಅಂತಹ ಅನರ್ಥ ಇನ್ನು ಸಾಧ್ಯವಾಗದಿರುವಂತಹ ಸಾಮಾಜಿಕ - ಆರ್ಥಿಕ - ಸಾಂಸ್ಕೃತಿಕ ಪರ್ಯಾಯವನ್ನು ರಚಿಸಲು ಒಗ್ಗೂಡೋಣವೆ ? ಸಮಾಜದ ವಿಕಾಸದ ಹಾದಿಯಲ್ಲಿ ಏನೆಲ್ಲಾ ಘಟಿಸಿವೆ! ಅದನ್ನು ತಿಳಿಯುವುದರ ಪ್ರಯೋಜನಕ್ಕೆ ಹಲವು ಮುಖ ಗಳಿವೆ: ವಿಕಾಸದ ಹಾದಿಯನ್ನು ಯಥಾವತ್ತಾಗಿ ಗ್ರಹಿಸುವುದು; ಅಪೇಕ್ಷಿತ ವಿಕಾಸಕ್ಕಿರುವ ಅಡೆತಡೆಗಳನ್ನು ಗುರುತಿಸುವುದು; ಅಂತಹ ನಿರ್ಬಂಧಕಗಳ ನಿವಾರಣೆಗೆ ಸೂತ್ರಗಳನ್ನು ಕಂಡು ಕೊಳ್ಳುವುದು ಮತ್ತು ಕಾರ್ಯಪ್ರವೃತ್ತರಾಗಲು ಮಾರ್ಗದರ್ಶನ ಪಡೆಯುವುದು. ಅಂದು ಹಾಗಿತ್ತು ಆದ್ದರಿಂದ ಇಂದೂ ಹಾಗೆಯೇ

ಇಂದಿನ ರಾಜಕೀಯವನ್ನು ಹಿಂದಿನ ಚರಿತ್ರೆಗೆ ಗಂಟುಹಾಕುವ ಪ್ರಸಂಗವೇನಿದ್ದರೂ ಆಗಿಹೋದ ಕೆಟ್ಟ ಘಟನೆಗಳು ಮತ್ತೆ ಮರುಕಳಿಸದಿರುವಂತೆ ಮಾಡಲು ಸೀಮಿತಗೊಳ್ಳಬೇಕು.

ಇತಿಹಾಸದ ಅಧ್ಯಯನವು ಯಾವ ಕ್ರಮವನ್ನು ಅನುಸರಿಸಬೇಕೆಂಬುದರಲ್ಲಿ ಸಂದಿಗ್ಧತೆಯೇನೂ ಇಲ್ಲ. ಭೂತ ಮತ್ತು ವರ್ತಮಾನಗಳಿಗೆ ಭಿನ್ನವಾದ ಉತ್ತಮಿಕೆಯು ನಮ್ಮ ಆಕಾಂಕ್ಷೆಯಾದರೆ ಭಾವನಾಪರವಶರಾಗದೆ ನಮ್ಮನ್ನು ನಾವು ಬೌದ್ಧಿಕವಾಗಿ ಸಜ್ಜುಗೊಳಿಸಿಕೊಳ್ಳಬೇಕು.

ಇರಬೇಕೆಂಬ ಒತ್ತಾಯ ಅಥವಾ ಅನಿವಾರ್ಯತೆಯೇನೂ ಇಲ್ಲ. ಉದಾಹರಣೆಗೆ, ಗೋಮಾಂಸ ಭಕ್ಷಣೆ. ಐದು ಸಾವಿರ ವರ್ಷಗಳ ಹಿಂದೆ ನಮ್ಮ ಪೂರ್ವಿಕರು ಗೋಮಾಂಸ ಭಕ್ಷಣೆ ಮಾಡುತ್ತಿದ್ದರೆಂದರೆ ಇಂದು ನಾವು ಅದನ್ನು ಮಾಡಿಯೇ ತೀರಬೇಕೆಂಬ ನಿರ್ಬಂಧವೇನೂ ಇಲ್ಲ. ಅಥವಾ, ಅವರು ತಿನ್ನುತ್ತಿದ್ದರೆಂದು ನಾವು ಸಂಕೋಚ ಪಡಬೇಕಾಗಿಯೂ ಇಲ್ಲ. ಈಗಲೂ ಪ್ರಪಂಚದಲ್ಲಿ ಅದನ್ನು ತಿನ್ನುವವರಿದ್ದಾರೆ, ತಿನ್ನದವರೂ ಇದ್ದಾರೆ. ಆದರೆ ನಮ್ಮ ಪೂರ್ವಿಕರು ಅದನ್ನೆಂದೂ ತಿನ್ನುತ್ತಲೇ ಇರಲಿಲ್ಲವೆಂದು ಮೊಂಡು ವಾದ ಏಕೆ ಬೇಕು?

ಮಾನವ ಜನಾಂಗದ ಇತಿಹಾಸದಲ್ಲಿ ಅನೇಕ ಹಂತಗಳಿವೆ. ಅವನ್ನು ತಟಾಯಿಸಿಯೇ ನಾವೆಲ್ಲಾ ಬಂದಿರುವುದು. ಒಂದು ಹಂತದಲ್ಲಿ ಮಾನವ ಬೇಯಿಸದ ಮಾಂಸವನ್ನು ತಿನ್ನುತ್ತಿದ್ದ ಆಮೇಲೆ ಬೇಯಿಸುವುದನ್ನು ಕಲಿತುಕೊಂಡ. ನಮ್ಮ ಪೂರ್ವಿಕರು ಈ ಹಂತದಲ್ಲೆಂದೂ ಇರಲೇ ಇಲ್ಲವೆಂದು ಆಗ್ರಹಿಸುವುದು ಅವಿವೇಕಿಯ ಲಕ್ಷಣ. ಇಂದು ನಾವು ಗೋಮಾಂಸ ಅಥವಾ ಮೇಕೆ ಮಾಂಸ ತಿನ್ನಬೇಕೆ, ಬೇಡವೆ ಎಂಬುದು ಸ್ವತಂತ್ರ ವಿಷಯ. ನಮ್ಮ ಹಿಂದಿನವರು ತಿನ್ನುತ್ತಿದ್ದರೆಂಬುದು ಇಂದಿನವರು ತಿನ್ನಬೇಕೆಂಬುದಕ್ಕೆ ಕಾರಣವಾಗಬೇಕಿಲ್ಲ.

ಇನ್ನೊಂದು ಉದಾಹರಣೆ ನೋಡಬಹುದು : ಋಗ್ವೇದದಲ್ಲಿ ಯಮ-ಯಮಿ ಎಂಬ ಸೋದರ - ಸೋದರಿಯರ ನಡುವಣ ಒಂದು ಪ್ರಖ್ಯಾತ ಸಂವಾದವಿದೆ. ಸೋದರಿಯು ಸೋದರನನ್ನು ಸಂಭೋಗಕ್ಕೆ ಆಹ್ವಾನಿಸುವ ಪ್ರಕರಣ ಅದು. ಯಾವುದೋ ಕಾಲದಲ್ಲಿದ್ದ ಆಚರಣೆಯ ಒಂದು ಸ್ಮೃತಿ ಇದರಲ್ಲಡಗಿದೆ. ಮಾನವ ಶಾಸ್ತ್ರದ ಎಲ್ಲ ವಿದ್ಯಾರ್ಥಿಗಳಿಗೂ ಅಂತಹ ಆಚರಣೆಯ ಹಂತದ ಪರಿಚಯವಿರುತ್ತದೆ. ಆ ಹಂತದ ಪುನರಾವರ್ತನೆಯಾಗಬೇಕೆಂದು ಯಾರು ಹೇಳುತ್ತಾರೆ? ಅಂತಹ ಹಂತವೇ ಇರಲಿಲ್ಲವೆಂದು ಆರ್ಭಟ ಮಾಡುವುದು ತೀರಾ ಅಪಕ್ವವಾದ ಮನಸ್ಸಿನ ಲಕ್ಷಣ.

ಇದರ ಅರ್ಥವಿಷ್ಟೆ: ಇಂದಿನ ಸನ್ನಿವೇಶ, ಆಶಯ, ಇತ್ಯಾದಿಗಳನ್ನು ಆರೋಪಿಸಿ ಇತಿಹಾಸವನ್ನು ವ್ಯಾಖ್ಯಾನಿಸುವುದು ಅಪಚಾರವೆನಿಸುತ್ತದೆ. ಇತಿಹಾಸದ ಪಠ್ಯಪುಸ್ತಕದಲ್ಲಿ ಗೋಮಾಂಸ ಭಕ್ಷಣೆಯನ್ನು ಪ್ರಸ್ತಾಪಿಸಿದರೆ ನಮ್ಮ ಮನಸ್ಸಿಗೆ ಘಾಸಿ ಉಂಟಾಗುತ್ತದೆಯೆಂಬ ಮಾತು ನಿರರ್ಥಕ. ಇದು ಘಾಸಿ ಉಂಟುಮಾಡುತ್ತದೆಯಾದರೆ, ಯಾರೋ ದುಷ್ಟ ಆಕ್ರಮಣಕಾರರು ನಮ್ಮ ದೇವಸ್ಥಾನಗಳನ್ನು ಲೂಟಿ ಮಾಡಿದರೆಂಬುದು ಏಕೆ ಘಾಸಿಯನ್ನುಂಟುಮಾಡುವುದಿಲ್ಲ? ಅಥವಾ, ಇಲ್ಲಿಯವರೇ ಬೌದ್ಧ ವಿಹಾರಗಳನ್ನು, ಜೈನ ಬಸದಿಗಳನ್ನು ಧ್ವಂಸಗೊಳಿಸಿದ್ದು ಘಾಸಿಯುಂಟು ಮಾಡುವುದಿಲ್ಲವೇಕೆ? ಹಾಗೇನಾದರೂ ಘಾಸಿಯುಂಟಾಗುವುದಾದರೆ ನಾವು ಇತಿಹಾಸದ ಅಧ್ಯಯನಕ್ಕೆ ಅಗತ್ಯವಾದ ಬೌದ್ಧಿಕ ಶಿಸ್ತನ್ನು ಬೆಳೆಸಲು ಮೊದಲು ಕಲಿಯೋಣ, ಇಂತಹ ವಿಷಯಗಳಿಂದ ಘಾಸಿಗೊಳ್ಳುವುದನ್ನು ಬಿಡೋಣ.

ಶಿಕ್ಷಣವಿರುವುದು ಬೌದ್ಧಿಕ ಶಿಸ್ತನ್ನು ಕರಗತ ಮಾಡಿಕೊಳ್ಳಲು ತರಬೇತಿ ನೀಡುವುದಕ್ಕೆ ಎಂಬುದನ್ನು ಮರೆಯದಿರೋಣ. ಅನೇಕ ಬಾರಿ ಪರಕೀಯರು ದಂಡೆತ್ತಿ ಬಂದು ನಮ್ಮ ದೇಶವನ್ನು ಕೊಳ್ಳೆ ಹೊಡೆದರೆಂದು ಉಲ್ಲೇಖಿಸಿದರೆ ಮನಸ್ಸಿಗೆ ನೋವಾಗುತ್ತದೆಂದು ಇನ್ನು ಮೇಲೆ ಅಂತಹದ್ದೇನೂ ಘಟಿಸಲಿಲ್ಲವೆಂದು ಪರ್ಯಾಯ ಇತಿಹಾಸವನ್ನು ಬರೆದಿಟ್ಟುಕೊಳ್ಳೋಣವೇನು? ದೇವಸ್ಥಾನಗಳು ಸಂಪತ್ತಿನ ಶೇಖರಣೆಗೆ ಆಗರವಾದದ್ದೇ ಅವುಗಳ ಲೂಟಿಗೆ ಪ್ರೇರಣೆಯಾಯಿತಾದರೂ ಇಂದಿನ ನಮ್ಮ ದೇವಸ್ಥಾನಗಳು ಸಂಪತ್ತನ್ನು ದೂರವಿಡುವುದಿಲ್ಲವೇಕೆ? ಹಾಗೆ ನೋಡಿದರೆ, ನಮ್ಮ ದೇವಾಲಯಗಳು ವಿದೇಶಿ ಲೂಟಿಕೋರರನ್ನು ಮಾತ್ರವೇ ಸೆಳೆದಿಲ್ಲ, ಸ್ವಕೀಯರ ಕಣ್ಣಿಗೂ ಅವು ಬಿದ್ದಿವೆ.

ಕಲ್ಹಣನ ರಾಜತರಂಗಿಣಿಯಲ್ಲಿ ಅಂದಿನ ಕಾಶ್ಮೀರದ ಪ್ರಕ್ಷುಬ್ಧತೆಯನ್ನು ವಿವರವಾಗಿ ಪ್ರಸ್ತಾಪಿಸಲಾಗಿದೆ. ಶ್ರೀ ಹರ್ಷನೆಂಬ ರಾಜನಿಗೆ ಲೋಷ್ಟಧರನೆಂಬ ಬಂಟನಿದ್ದ. ಅವನೊಮ್ಮೆ ಹೇಳಿದ : 'ಕಲಶೇಶ್ವರ ಮಂದಿರದಲ್ಲಿ ಇರುವ ಚಿನ್ನ ಸಂಪತ್ತನ್ನೆಲ್ಲಾ ತಂದುಕೊಟ್ಟಲ್ಲಿ ಈ ವಿತಸ್ತಾ ನದಿಗೊಂದು ಸೇತುವನ್ನು ನಾನು ಕಟ್ಟಿಸಿಬಿಡುತ್ತೇನೆ'. ಇನ್ನೊಮ್ಮೆ ಹೇಳಿದ : 'ಅರಸನೆ, ದೇವನೊಬ್ಬನು ಬಂಧನದಲ್ಲಿದ್ದಾನೆ. ಆತನ ಬಿಡುಗಡೆಯಾಗಬೇಕಾಗಿದೆ', ಅದರರ್ಥ 'ಕಳ್ಳರ ಭಯವನ್ನುಂಟುಮಾಡುವ ಮಂದಿರದ ಸಂಪತ್ತನ್ನೆಲ್ಲಾ ಇಲ್ಲಿಗೆ ತರಬೇಕು'.

ರಾಜನು ಅಂತೆಯೇ ಮಾಡಿ ಯೋಚಿಸಿದ : 'ಶೂನ್ಯವಾದ ಮಂದಿರದಲ್ಲಿ ಇಷ್ಟೊಂದು ಸಂಪತ್ತು ಇರುವಾಗ, ಇನ್ನುಳಿದ ಪ್ರಾಚೀನ ಮಹಾದೇವ ಮಂದಿರಗಳಲ್ಲಿ ಎಷ್ಟೊಂದು ಅಪಾರ ಸಂಪತ್ತು ಇರಬಹುದು!' ಹಾಗೆ ಯೋಚಿಸಿದ ನಂತರ 'ದೇವಳಗಳಲ್ಲಿ ಉಳಿದಿದ್ದ ದೇವರ ಪ್ರತಿಮೆಗಳನ್ನು ತರುವ ಬಗ್ಗೆ ಉದಯರಾಜನನ್ನು ದೇವೋತ್ಪಾಟನ ನಾಯಕನನ್ನಾಗಿ ನೇಮಿಸಿದನು. ಅವನು ದೇವಮಂದಿರಕ್ಕೆ ಹೋಗುವಾಗ ಮೂಗು, ಕಾಲು, ಕೈ ಇಲ್ಲದ ನಗ್ನ ಭಿಕ್ಷುಕರಿಂದ ಮಲಮೂತ್ರ ಮೊದಲಾದವುಗಳನ್ನು ಮೂರ್ತಿಗಳಿಗೆ ಚೆಲ್ಲಿಸಿ, ಆಮೇಲೆ ಪ್ರತಿಮೆಗಳನ್ನು ಕೀಳುತ್ತಿದ್ದನು. ಚಿನ್ನ ಬೆಳ್ಳಿ, ಮೊದಲಾದವುಗಳಿಂದ ನಿರ್ಮಿಸಿದ ದೇವ ಪ್ರತಿಮೆಗಳು ಕಟ್ಟಿಗೆಯ ತುಂಡುಗಳಂತೆ ರಸ್ತೆಗಳಲ್ಲಿ ಹೊರಳಾಡುತ್ತಿದ್ದವು.... ಹರ್ಷನೆಂಬ ತುರುಷ್ಕರಾಜನು ತನ್ನ ರಾಜ್ಯದ ಗ್ರಾಮ, ಪುರ, ನಗರಗಳಲ್ಲಿ ಯಾವ ಮಂದಿರದಲ್ಲಿಯೂ ಮೂರ್ತಿಯಿಲ್ಲದಂತೆ ಮಾಡದೆ ಉಳಿಯಲಿಲ್ಲ (ರಾಜತರಂಗಿಣಿ, ಎಂಟನೆಯ ತರಂಗ). ಅವನ ಇತರ ದುಷ್ಕೃತ್ಯಗಳ ಮಾಹಿತಿಯನ್ನು



ವಿಸ್ತರಿಸುವುದು ಅನಗತ್ಯ. ಹರ್ಷನು ತುರುಷ್ಕನಲ್ಲ, ಆದರೆ ಅವನ ಹೀನಾಯ ಕೃತ್ಯಗಳನ್ನು ಪರಿಗಣಿಸಿ ಕಲ್ಹಣ ಅವನನ್ನು ಹಾಗೆಂದಿದ್ದಾನೆ.

ಒಂದು ಮತಧರ್ಮದವರು ಮಾತ್ರವೇ ಸಂಪತ್ತನ್ನು ಲೂಟಿ ಮಾಡಿಲ್ಲ, ದೇವಾಲಯಗಳನ್ನು ಅಪವಿತ್ರಗೊಳಿಸಿಲ್ಲ. ಹೀಗಿರುವಾಗ ಇತಿಹಾಸದ ಅಧ್ಯಯನದಿಂದ ನಾವು ತಿಳಿಯಬಹುದಾದದ್ದೇನು ? ಯಾರೂ ಯಾವ ಪೂಜಾ ಮಂದಿರಗಳನ್ನೂ ಭಗ್ನಗೊಳಿಸಿ ಕೀರ್ತಿ ಪಡೆಯಲಾರರು, ಎಂಬುದನ್ನಲ್ಲವೆ ? ಇತಿಹಾಸದ ಪಠ್ಯಪುಸ್ತಕಗಳಲ್ಲಿ ಸ್ಪಷ್ಟಪಡಿಸಬೇಕಾದ್ದು ಇದನ್ನೇ. ಅದನ್ನೆಲ್ಲಾ ತೆಗೆದುಹಾಕುವುದರಿಂದ ಪ್ರಯೋಜನಕ್ಕಿಂತ ಅಪಾಯವೇ ಹೆಚ್ಚು. ನಿರ್ಬಲ ಹೃದಯಗಳೇನಾದರೂ ಶಾಲಾ - ಕಾಲೇಜುಗಳಲ್ಲಿದ್ದರೆ ಅವಕ್ಕೆ ಸಾಂತ್ವನ ನೀಡುವುದು ವಿಷಯಗಳನ್ನು ಮುಚ್ಚಿಡುವುದರಿಂದ ಅಲ್ಲ. ಇಂದಿನ ಐತಿಹಾಸಿಕ ಸವಾಲುಗಳನ್ನು ಗುರುತಿಸಿ, ಎದುರಿಸಿ, ಸಾಮುದಾಯಿಕ ಮಧ್ಯಪ್ರವೇಶಕ್ಕೆ ಹೊಂದಿಸಿಕೊಡುವುದು ಶಿಕ್ಷಣಕ್ಕೆ ಮತ್ತು ಪಠ್ಯಪುಸ್ತಕಗಳಿಗೆ ಭೂಷಣವಲ್ಲ. ಆದ್ದರಿಂದ 'ನಮ್ಮ ಮನಸ್ಸಿಗೆ ತೀವ್ರವಾಗಿ ನೋವುಂಟಾಗುತ್ತದೆ, ದಯವಿಟ್ಟು ಇತಿಹಾಸವನ್ನು ಬೇರೆ ರೀತಿಯಲ್ಲಿ ಬರೆಯಿರಿ' ಎನ್ನುವುದು ಹುಂಬತನವಲ್ಲ; ಯಾವುದೋ ಸಮಕಾಲೀನ ರಾಜಕೀಯ ದುರುದ್ದೇಶಗಳ ಪೂರೈಕೆಗೆ ಒಂದು ಆಯುಧವನ್ನಾಗಿ ಮಾರ್ಪಡಿಸಿಕೊಳ್ಳುವ ಹುನ್ನಾರ ಅದರಲ್ಲಿದೆ. ಇತಿಹಾಸದ ಅಧ್ಯಯನ ಮಾರ್ಗದಲ್ಲಿ ಇದು ಸ್ವಾಗತಾರ್ಹವಾದ ನೀತಿಯಲ್ಲ.

ಪ್ರಾಚೀನ ಕಾಲದಲ್ಲಾಗಲಿ, ಇಂದಾಗಲಿ, ಇರದಿದ್ದ ಅಥವಾ ಇಲ್ಲದ ವರ್ಚಸ್ಸು ಮತ್ತು ಶ್ರೇಯಸ್ಸುಗಳನ್ನು ಇದ್ದುವು ಅಥವಾ ಇವೆಯೆಂದು ಹೇಳಿಕೊಂಡರೆ ಇಂದಿನ ವಿಕೃತ ಘಟನೆಗಳನ್ನು ವೀಕ್ಷಿಸುವುದರಲ್ಲಿ ಅನಾಸಕ್ತಿಯನ್ನು ಬೆಳೆಸಿಕೊಳ್ಳಬೇಕೆಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದಂತೆ ಆಗುತ್ತದೆ. ಅಸ್ತಿತ್ವದಲ್ಲಿರುವುದನ್ನು ಅಥವಾ ಇದ್ದುದನ್ನು ಮರೆಮಾಚಿಕೊಂಡು ಬದಲಾವಣೆಗೆ ಹರಿಕಾರರಾಗುವ ಸಾಧ್ಯತೆ ಸೊನ್ನೆ.

ಇತಿಹಾಸದ ಅಧ್ಯಯನವು ಯಾವ ಕ್ರಮವನ್ನು ಅನುಸರಿಸಬೇಕೆಂಬುದರಲ್ಲಿ ಸಂದಿಗ್ಧತೆಯೇನೂ ಇಲ್ಲ. ಭೂತ ಮತ್ತು ವರ್ತಮಾನಗಳಿಗೆ ಭಿನ್ನವಾದ ಉತ್ತಮಿಕೆಯು ನಮ್ಮ ಆಕಾಂಕ್ಷೆಯಾದರೆ ಭಾವನಾಪರವಶರಾಗದೆ ನಮ್ಮನ್ನು ನಾವು ಬೌದ್ಧಿಕವಾಗಿ ಸಜ್ಜುಗೊಳಿಸಿಕೊಳ್ಳಬೇಕು. ಇತಿಹಾಸದ ಅಧ್ಯಯನದಲ್ಲಿ ಬಾಲಿಶ ಪ್ರತಿಕ್ರಿಯೆಗಳು ಸಮಕಾಲೀನ ರಾಜಕಾರಣದ ಅಂಗವಾಗುವುದು ಅಹಿತಕರ. ಹರಪ್ಪದ ಮೊಹರುಗಳಲ್ಲಿ ಇಲ್ಲದ ಕುದುರೆಯನ್ನು ಸೃಷ್ಟಿಸುವುದು ಅಥವಾ ಓಂ ಎಂಬುದನ್ನು ಅರಸುವುದರಲ್ಲಿ ಬುದ್ಧಿವಂತಿಕೆ ಪ್ರದರ್ಶಿಸುವುದು ಇಂತಹ ಬಾಲಿಶತನಕ್ಕೆ ಉದಾಹರಣೆಗಳಾಗುತ್ತವೆ. ನಮ್ಮ ತಥಾಕಥಿತ ಇತಿಹಾಸದ ಪಂಡಿತರು ಕೆಲವರು ಈ ರೀತಿಯ ಪ್ರದರ್ಶನಗಳಲ್ಲಿ ಸೊಗಸನ್ನು ಕಾಣುವುದು ಒಂದು ಸೋಜಿಗದ ಸಂಗತಿ. ❑

ವಾರ್ಷಿಕ ವಿಶೇಷಾಂಕ ೨೦೦೫

'ವಿಗ್ಗ ಅಥವಾ ಪ್ರಜ್ಞೆ.'

○ ಪದ್ಮಾಲಯಾ ನಾಗರಾಜ

ಬೋಧಿ ವೃಕ್ಷದಡಿಯಲ್ಲಿ ಬುದ್ಧನಿಗಾದ ಜ್ಞಾನೋದಯವು ಭಾರತೀಯ ದರ್ಶನ ಮೀಮಾಂಸೆಗಳು ಅತ್ಯುನ್ನತವೆಂದು ವಾದಿಸುವ ಜ್ಞೇಯವಲ್ಲ; ಹಳಸಲು ಬೂಸಾದಂತಿರುವ ಅನುಭಾವೀ ವ್ಯಾಖ್ಯಾನಗಳಲ್ಲಿ ವಿವೇಕವನ್ನು ಹುಡುಕುವ ಅಸಂಬದ್ಧ ಶ್ರಮವಲ್ಲ; ಬೈಬಲ್ಲಿನಲ್ಲಿರುವಂತೆ (ಪರ್ವತ ಪ್ರಸಂಗ) ಬಡವ ಮತ್ತು ದುರ್ಬಲರಿಗೆ ಸ್ವರ್ಗದ ಭರವಸೆಯನ್ನೀಡಿ ಸಾಮಾಜಿಕ ಅಸ್ತಿತ್ವದಲ್ಲಿ ರೋಗ, ಅನ್ನಹೀನ, ವಸತಿಹೀನ, ಬಟ್ಟೆಹೀನದಂತಹ ದಾರಿದ್ರ್ಯವನ್ನು ಉಪೇಕ್ಷಿಸುವಂತೆ ಮಾಡುವ ಭಾವನಾತ್ಮಕ ಆಶ್ವಾಸನೆಯೂ ಅಲ್ಲ; ಬದುಕಿನಲ್ಲಿನ ಸರ್ವಸ್ವವನ್ನೂ ಭಗವಂತನಿಗೆ ಸಮರ್ಪಿಸುವುದೇ ಶ್ರೇಷ್ಠಪಥವೆಂದು ಸಾರುವ ದೈವ ಕೇಂದ್ರಿತ ತತ್ವವೂ ಅಲ್ಲ.

ಈ ಜಗತ್ತು ವಾಸ್ತವಿಕದಲ್ಲಿ ದುಃಖದಿಂದ ತುಂಬಿದೆ. ಇಲ್ಲಿ ಅಶಾಂತಿಯೇ ತುಂಬಿ ತುಳುಕುತ್ತಿದೆ. ಈ ದುಃಖ ಮತ್ತು ಅಶಾಂತಿಗೆ ಕಾರಣಗಳನ್ನು ಕಂಡುಕೊಳ್ಳಲು ತನ್ನ ಸಂಪೂರ್ಣ ಲಕ್ಷ್ಯವನ್ನು ಕೇಂದ್ರೀಕರಿಸಿದ ಪರಿಣಾಮವಾಗಿ ಉಗಮಿಸಿದ ಮಹಾನ್ ಪ್ರಜ್ಞೆಯೇ ಬುದ್ಧನ ಜ್ಞಾನೋದಯದ ಸಾರಾಂಶವಾಗಿತ್ತು. ಆ ಪ್ರಜ್ಞೆ ಆಪೋಹಾತ್ಮಕವಾದವಲ್ಲ, ಪರಿಪೂರ್ಣವಾದ ವಸ್ತುಸ್ಥಿತಿಯ ವಿವೇಕ. ಜೈವಿಕ ಜಗತ್ತಿನ ಸ್ವಾಭಾವಿಕ ಕ್ಷಣಗಳಾದ ರೋಗ-ಆರೋಗ್ಯ, ಹುಟ್ಟು-ಸಾವು, ದುಃಖ-ಸುಖ ವಿಧಿ-ಅವಿಧಿ, ನಿರೀಕ್ಷಿತ-ಅನಿರೀಕ್ಷಿತದಂತಹ ಸಂದರ್ಭಗಳನ್ನು ವಿನಾಕಾರಣಗಳ ಕಡೆ ಬೆರಳು ಮಾಡದೆ ಕಾರ್ಯ ಕಾರಣಗಳೆಂಬ ಮೂಲ ಸತ್ಯವನ್ನು ಕಂಡುಕೊಂಡ ಕೋಟಿ ಸೂರ್ಯ ಪ್ರಕಾಶಮಾನವಾದ ಸ್ವಯಂ ಪೂರ್ಣ ಬೆಳಕದು.

ಈ ವಿಶ್ವವು ದುಃಖ ಮತ್ತು ಅಶಾಂತಿಯಿಂದ ತುಂಬಿದೆ ಎಂಬ ಕರುಣಾಜನಕ ಅರಿವಿನ ಆಧಾರದ ಮೇಲೆ, ಅವುಗಳನ್ನು ಹೋಗಲಾಡಿಸುವ ಗುರಿಯಲ್ಲಿ ಬುದ್ಧನ ತತ್ವವು ರೂಪುಗೊಂಡಿತ್ತು. ಲೋಕದ ಸತ್ಯಗಳೆನಿಸಿಕೊಂಡ ಅನ್ಯಾಯ ಅಧರ್ಮ, ಮೋಸ, ಹಿಂಸೆ, ಸ್ವಾರ್ಥ, ಕೊಲೆಗಳನ್ನು ಕಂಡು ಜಿಗುಪ್ಸೆಗೊಂಡು ಇವುಗಳನ್ನು ಹೋಗಲಾಡಿಸುವ ಉದ್ದೇಶದೊಂದಿಗೆ ತನ್ನ ತತ್ವವನ್ನು ಬೆಳೆಸಿದನು. ಮುಂದೆ ಇವು 'ಪಾರಮಿತ ತತ್ತ್ವ'ಗಳೆಂದು ಕೀರ್ತಿ ಪಡೆದವು. ಒಟ್ಟಿನಲ್ಲಿ ಲೋಕಾರ್ಥ ಪರವಾದ ವಸ್ತುಸ್ಥಿತಿಯ ವಿವೇಕವನ್ನೇ ಜ್ಞಾನವೆಂದು ಕರೆದನು. ಈ ತತ್ತ್ವವು ಮಹತ್ವವಾದ ವಾಸ್ತವ ಪ್ರಜ್ಞೆಗಳಾಗಿ ಅತ್ಯಂತ ವಿಶಾಲವೂ, ಮಾನವೀಯತೆಯನ್ನು ಪವಿತ್ರವೆಂದು ಭಾವಿಸುವ ಜನಕ್ಕೆ ಪ್ರೀತಿಪಾತ್ರವಾಗಿ ಅತ್ಯಂತ ಹೃದಯ ಶ್ರೀಮಂತಿಕೆಯಿಂದ ಕೂಡಿವೆ. ಈ ತತ್ವವು ಹೃದಯ ಶ್ರೀಮಂತಿಕೆಯಲ್ಲಿ ಅಹಿಂಸೆಗೂ ಮೀರಿ ಎಷ್ಟು ಸಮೃದ್ಧವಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಿದೆ. ಬುದ್ಧನು ಜಗತ್ತಿನ ದುಃಖ ಮತ್ತು ಅಶಾಂತಿಗೆ ಕಾರಣಗಳನ್ನು ಕಂಡು ಅವುಗಳನ್ನೇ ತನ್ನ ಧರ್ಮದಲ್ಲಿ ಬೋಧಿಸಿದ. ಈ

> ಮನುಷ್ಯನಿಗೆ ಸ್ವಭಾವತಃ ಎರಡು ಮುಖಗಳಿವೆ. ಅಂತರ್ಮುಖ, ಬಹಿರ್ಮುಖ. ಹೊರಗಿನ ಪ್ರಪಂಚದ ಒತ್ತಡಗಳಿಂದ ಅಂತರ್ಮುಖದ ಸ್ವಭಾವಗಳು ರೂಪುಗೊಂಡಿವೆ. ಹೀಗೆ ಹೊರಗಿನ ಪ್ರಪಂಚದ ಪ್ರಭಾವದಿಂದ ರೂಪುಗೊಂಡ ಅಂತರ್ಮುಖವು ಮನುಷ್ಯನ ಬಹಿರ್ಮುಖದ ಕೆಲಸಗಳಿಗೆ ಪ್ರೇರಣಾ ಶಕ್ತಿಯಾಗಿ ವ್ಯಕ್ತಿಯ ಗುಣಧರ್ಮಗಳನ್ನು ಅಂತರ್ಮುಖದ ಆಲೋಚನೆಗಳೇ ನಿರ್ಧರಿಸುತ್ತವೆ.

ಕಾರಣಗಳು ಎರಡು. ೧. ಭಾಗಶಃ ಮನುಷ್ಯ ತನ್ನಿಂದ ತನಗೆ ಮಾಡಿಕೊಳ್ಳುವ ಅನ್ಯಾಯ. ೨. ಮನುಷ್ಯ ಇನ್ನೊಬ್ಬನಿಗೆ ಮಾಡುವ ಅನ್ಯಾಯ.

ಈ ಅನ್ಯಾಯಗಳನ್ನು 'ಯುಕ್ತಾಯುಕ್ತ ವಿವೇಚನೆ' ಮೂಲಕ ಎಂಬುದನ್ನು ಅವನ ಧಮ್ಮದಲ್ಲಿ ತೋರಿಸಿದನು. ಮತ್ತು ವಸ್ತುರೂಪವಾದ ವಿವೇಚನೆಯಡಿಯಲ್ಲಿ ಬದುಕನ್ನು ಸುಗಮವಾಗಿಸಿಕೊಳ್ಳುವ ಅವಕಾಶಗಳನ್ನು ದುಃಖಿತರಿಗೆ ಮತ್ತು ಶೋಷಿತರಿಗೆ ಒದಗಿಸಿ ಲೋಕದ ಕುರಿತಾದ ಎಲ್ಲಾ ಅನುಮಾನ ಮತ್ತು ಸಂಶಯಗಳನ್ನು ಹೋಗಲಾಡಿಸಿದನು.

ಅ. ತನ್ನಿಂದ ತನಗೆ ಮಾಡಿಕೊಳ್ಳುವ ಅನ್ಯಾಯ :

ಮನುಷ್ಯನಿಗೆ ಸ್ವಭಾವತಃ ಎರಡು ಮುಖಗಳಿವೆ. ಅಂತರ್ಮುಖ, ಬಹಿರ್ಮುಖ. ಹೊರಗಿನ ಪ್ರಪಂಚದ ಒತ್ತಡಗಳಿಂದ ಅಂತರ್ಮುಖದ ಸ್ವಭಾವಗಳು ರೂಪುಗೊಂಡಿವೆ. ಹೀಗೆ ಹೊರಗಿನ ಪ್ರಪಂಚದ ಪ್ರಭಾವದಿಂದ ರೂಪುಗೊಂಡ ಅಂತರ್ಮುಖವು ಮನುಷ್ಯನ ಬಹಿರ್ಮುಖದ ಕೆಲಸಗಳಿಗೆ ಪ್ರೇರಣಾ ಶಕ್ತಿಯಾಗಿ ವ್ಯಕ್ತಿಯ ಗುಣಧರ್ಮಗಳನ್ನು ಅಂತರ್ಮುಖದ ಆಲೋಚನೆಗಳೇ ನಿರ್ಧರಿಸುತ್ತವೆ. ಅಂತರ್ಮುಖ ಪ್ರೇರಣೆ ಪೂರ್ವ ನಿರ್ಧಾರಿತವಾಗಿರುವುದರಿಂದ ಆ ಪ್ರೇರಣೆಯೇ ಸಂಸ್ಕಾರವಾಗಿ ರೂಪುಗೊಂಡಿರುತ್ತದೆ. ಅಥವಾ ಅಂತರ್ಮುಖಿಯಾದ ಪ್ರೇರಣೆಯು ಸ್ವಾಭಾವಿಕ ಸಿದ್ಧಗುಣ ಅಥವಾ ಸಹಜ ಪ್ರವೃತ್ತಿಗಳಾಗಿ ಸಂಸ್ಕಾರಗಳಾಗಿ ದಿನೇ ದಿನೇ ಗಟ್ಟಿಗೊಳ್ಳುತ್ತಿರುತ್ತವೆ. ಹೀಗೆ ಗಟ್ಟಿಗೊಂಡ ಸಂಸ್ಕಾರವು ಯಾವ ರೀತಿಯದ್ದು? ಎಂಬುದರ ಮೇಲೆ ವ್ಯಕ್ತಿಯ ಸುಖ ಮತ್ತು ದುಃಖ ಎಷ್ಟೆಂಬುದನ್ನು ನಿರ್ಧರಿಸುತ್ತದೆ. ಸಂಸ್ಕಾರವೆಂದರೆ ಹಿಂದಿನ ಜನ್ಮದಲ್ಲಿ ಮಾಡಿದ್ದು ಎಂದರ್ಥವಲ್ಲ, ಇಂದಿನ ಬಹುತೇಕ ದುಃಖ ಮತ್ತು ಅಶಾಂತಿ, ಒತ್ತಡದ ಬದುಕಿಗೆ ನಿನ್ನೆ ನಾವು ಮಾಡಿದ ಅವಿವೇಕಯುತವಾದ ಅಂತಃಪ್ರೇರಣೆಗಳು ಕಾರಣವಾಗುತ್ತವೆ. ಇಂದುಗಳು ವಿವೇಕಿಯಾಗಿದ್ದಾಗ ನೆನ್ನೆಗಳಿಗೆ ದುಃಖ ಅಂಟಲಾರದೆಂಬ ನಿರಂತರ ಪ್ರಜ್ಞೆ ಶ್ರೇಷ್ಠವಾದ ಸಂಸ್ಕಾರವನ್ನು ರೂಪಿಸಬಲ್ಲದು. ಬಹುಶಃ ಇದಕ್ಕೆ ವಿರುದ್ಧವಾಗಿ ಮನುಷ್ಯನು ಆಲೋಚಿಸುತ್ತಾ... ಹಿಂದೆ ಬೇವಿನ ಮರವನ್ನು ನೆಟ್ಟು ಇಂದು ಅದರಲ್ಲಿ ಮಾವಿನಹಣ್ಣು ಬರಬೇಕೆಂದು ಆಶಿಸಿ ಹಠತನ ಪ್ರದರ್ಶಿಸುತ್ತಾ... ಈ ಅಸಾಧ್ಯತೆಗೆ ವಿಧಿ, ಹಣೆಬರಹ, ಕರ್ಮ ಎಂದು ಸಮ್ಮತಿಸುತ್ತಾ ಅಸಂಬದ್ಧತೆಯನ್ನು ಪ್ರದರ್ಶಿಸುತ್ತಿರುತ್ತಾನೆ.

ಒಬ್ಬ ರೆಗ್ಯುಲರ್ ಮದ್ಯವ್ಯಸನಿಯನ್ನು ತೆಗೆದುಕೊಳ್ಳೋಣ. ನಮ್ಮ ಮಿತ್ರರಲ್ಲಿ ಮತ್ತು ಪರಿಚಯಸ್ಥರಲ್ಲಿ ಇಂತಹವರು ಬೇಕಾದಷ್ಟಿರುತ್ತಾರೆ. ಅವನು ಸಂಜೆಯಾಗು

(ಹೃದಯ ಕೃಷಿಗೆ ಸಂಬಂಧಿಸಿದ ಬುದ್ಧ ತತ್ತ್ವದ ಜ್ಞಾನ ಮತ್ತು ವಿವೇಕದ ಕುರಿತ ಇಣುಕುನೋಟ)

ತ್ತಿದ್ದಂತೆ ತೀಕ್ಷ್ಣವಾದ ಮಾನಸಿಕ ಒತ್ತಡ ಮತ್ತು ದುಗುಡಗಳಿಗೆ ಬಲಿಯಾಗಿ ಚಿತ್ರ ವಿಚಿತ್ರವಾಗಿ ವರ್ತಿಸುತ್ತಿರುತ್ತಾನೆ. ಆ ವ್ಯಕ್ತಿ ಹಣವಿಲ್ಲದವನಾಗಿದ್ದರಂತೂ ಹಣಕ್ಕಾಗಿ ಏನು ಬೇಕಾದರೂ ಹೇಳಬಲ್ಲ ಮತ್ತು ಮಾಡಬಲ್ಲ. ಇಡೀ ಜಗತ್ತೇ ಅವನ ಮೇಲೆ ಬಿದ್ದಂತಾಗಿ ಈಗ ಕುಡಿದರೆ ಎಲ್ಲಾ ಸರಿಹೋಗುತ್ತೆ ಎಂಬ ಭಾವನೆ ಸ್ವಾಭಾವಿಕ. ಈ ಮನೋಸ್ಥಿತಿ ಇಂದಿಗೇ ಕಡೆಯಾಗ ಲಾರದು. ಅವನ ಸಾವಂಚಿನವರೆಗೂ ಮರುಕಳಿಸುತ್ತಿರಬಹುದು. ಈ ಮನುಷ್ಯ ಮಹಾಜ್ಞಾನಿಯಾಗಿರಬಹುದು, ಚಿಂತಕ, ಕಲಾವಿದನಾಗಿರಬಹುದು. ಅವನ ಸಾಮರ್ಥ್ಯವು ಮೆಚ್ಚತಕ್ಕ ವಿಚಾರವೇ ಆಗಿದ್ದರೂ, ಕುಡಿಯುವುದು ತಪ್ಪೆಂಬ ಅರಿವಿದೆ. ಇದರಿಂದ ಜೀವನ ಹೇಗೆ ತೊಂದರೆಗೊಳಗಾಗುತ್ತೆ ಎಂಬ ಅನುಭವವೂ ಇದೆ. ಮತ್ತೆ ಈ ಚಟ ಎಂತಹ ವಿಪತ್ಕರ ಪರಿಣಾಮಗಳನ್ನುಂಟು ಮಾಡುತ್ತದೆಂಬುದೂ ಗೊತ್ತು!

ಇವೆಲ್ಲವುಗಳ ಪರಿಜ್ಞಾನದಲ್ಲೂ ಅವನು ಕುಡಿಯಲೇಬೇಕು!!!. ಈ ವಿಚಾರದಲ್ಲಿ ಇವನು ಪೂರ್ಣವಾದ ಅಸಹಾಯಕ. ಏಕೆಂದರೆ ಅವನು ಪ್ರಕ್ಷುಬ್ಧವಾದ ಮನೋವಿಕಾರಕ್ಕೆ ಒಳಗಾಗಿದ್ದಾನೆ. ಏಕೆ ಈ ಪ್ರಕ್ಷುಬ್ಧತೆ? ನಿಧಾನಗತಿಯಲ್ಲಿ ಅವನನ್ನು ಇದು ಆವರಿಸಿತು. ಅದನ್ನು ತನ್ನೊಳಗೆ ಬಿಟ್ಟುಕೊಂಡ ಪ್ರೇರಣೆ ಇಂದು ಅವನ ಕೇಂದ್ರ ಬಿಂದುವಾಗಿ ಅವನ ಸಂಪೂರ್ಣ ವ್ಯಕ್ತಿತ್ವವನ್ನು ನಿರ್ದೇಶಿಸುತ್ತಿದೆ. ಇದರ ಸಾಂದ್ರತೆ ಎಷ್ಟೆಂದರೆ, ಅವನಿಗೆ ಬುದ್ಧಿ ಇದ್ದರೂ ಆ ಬುದ್ಧಿಯೊಂದಿಗೆ ಸಂಸ್ಕಾರವು ಬಲವತ್ತರವಾದ ಕಠಿಣವಾದ ಸವಾಲೊಡ್ಡುತ್ತಿದೆ. ಬುದ್ಧಿ ಮತ್ತು ಸಂಸ್ಕಾರಗಳ ಈ ತೆರನಾದ ಕಾಳಗದಲ್ಲಿ ಸಂಸ್ಕಾರವೇ ಶಕ್ತಿಯಾಗಿದೆ, ಗಟ್ಟಿಯಾಗಿದೆಯಾದ್ದರಿಂದ ಬುದ್ಧಿಯೇ ಸೋತು ಸುಣ್ಣವಾಗುತ್ತದೆ. ಇನ್ನು ಮುಂದೆ ಕುಸಂಸ್ಕಾರವು ಅವನ ಜೀವನವನ್ನು ನಿರ್ಧರಿಸುತ್ತದೆಯೇ ವಿನಃ ಬುದ್ಧಿಯು ನಿರ್ಧರಿಸಲಾರದು... ಹೀಗೆ ಬುದ್ಧಿಯು ಕ್ಷಯವಾಗುತ್ತಾ... ಕುಸಂಸ್ಕಾರವು ಅಕ್ಷಯವಾಗುತ್ತಾ... ಮಹಾನ್ ಅವಕಾಶವಾಗಿ ಬಂದ ಹಾಗೂ ಮತ್ತೆಂದೂ ಈ ಜಗತ್ತಿಗೆ ಬಾರದ ಈ ಮಾನವ ತನ್ನ ಅಮೂಲ್ಯವಾದ ಬದುಕನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದಾನೆ. ಅದಕ್ಕಾಗಿಯೇ ಬುದ್ಧರು 'ಓ. ಮಾನವಾ... ತಿಳಿದಿಕೋ... ತನ್ನ ಮನಸ್ಸಿನ ಮೇಲೆ ಹಿಡಿತವಿಲ್ಲದವರು ಯಾರೂ ಕಾಪಾಡಲಾರದಷ್ಟು ದೂರ ಹೋಗಿ ನಾಶವಾಗುತ್ತಾರೆ... ಎಚ್ಚರಿಕೆ...!!! ನಿನ್ನನ್ನು ನೀನು ರಕ್ಷಿಸಿಕೋ... ನಿನ್ನನ್ನು ನೀನು ರಕ್ಷಿಸಿಕೋ... ಎಂದು ಎಚ್ಚರಿಸಿದರು.

ದಯವಿಟ್ಟು ಕ್ಷಮಿಸಿ! ಕೇವಲ ಕುಡಿತವೊಂದೇ ಮನುಷ್ಯನ ಪ್ರಕ್ಷುಬ್ಧವಾದ ಮನೋಸ್ಥಿತಿಗೆ ಕಾರಣವಾಗಲಾರದು. ಇನ್ನೂ ಭಯಂಕರವಾದ ಪ್ರಕ್ಷುಬ್ಧತೆಗಳನ್ನುಂಟು ಮಾಡುವ ವಿಚಾರಗಳಿವೆ. ೧. ಜೂಜು (ಇಸ್ಪೀಟ್, ಆನ್‌ಲೈನ್) ೨. ಮೈಗಳ್ಳತನ ೩. ತನ್ನ ಸೀಮಿತ ಜನ ವರ್ಗದಲ್ಲಿ ಒಡೆತನ ಸ್ಥಾಪಿಸಿಕೊಳ್ಳಲು ಸಂಚು ಮಾಡುವುದು ೪. ಅಸಂಬದ್ಧ ಮೈಥುನ ೫. ಇನ್ನೊಬ್ಬರದ್ದನ್ನು ಕಸಿದುಕೊಳ್ಳುವುದು ೬. ಅವಶ್ಯಕತೆಗಿಂತ ಹೆಚ್ಚಾದ ಗಳಿಕೆ ೭. ಒಬ್ಬರ ಮೇಲೆ ಇನ್ನೊಬ್ಬರಿಗೆ ಇಲ್ಲದ್ದನ್ನು ಹೇಳುವುದು. ಇತ್ಯಾದಿಗಳೆಲ್ಲಾ ಮನುಷ್ಯನ ಮನಸ್ಸನ್ನು ಪ್ರಕ್ಷುಬ್ಧಗೊಳಿಸಿ ಮರಗಟ್ಟಿಸುತ್ತವೆ. ಈ ಸಂಸ್ಕಾರಗಳು ಹೆಬ್ಬಂಡೆಯಂತೆ ಬೆಳೆಯುತ್ತಾ ದ್ವೇಷ, ಅಸೂಯೆ, ದುರಂಕಾರ, ಈರ್ಶ್ಯೆಗಳೆಂಬ ಅಡ್ಡ ಪರಿಣಾಮಗಳಿಗೆ ಎಡೆಮಾಡಿಕೊಡುತ್ತದೆ.

ಜ್ಞಾನ ವಿಕಾಸದ ನಿರಂತರ ಹಾದಿಯಲ್ಲಿ ಮನುಷ್ಯನಿಗೊಂದು ಸ್ಪಷ್ಟ ಪರಮ ಅರ್ಥವಿದ್ದೇ ಇದೆ. ಏಕೆಂದರೆ ನಿರಂತರ ವಿಕಾಸವು ಪ್ರಬುದ್ಧಮಾನವಾದ ಈ ಜಗತ್ತಿಗೆ ಹೇಗೆ ನಿಖರವಾದ ಒಂದು ರೂಪವನ್ನು ಕೊಟ್ಟಿತೋ ಹಾಗೆಯೇ ಪ್ರಜ್ಞಾಪೂರ್ವಕವಾದ ನಿರಂತರ ಪ್ರಯತ್ನವೂ ಮನುಷ್ಯನನ್ನು ಪ್ರಬುದ್ಧಮಾನವಾದ ಮಾನವನನ್ನಾಗಿ ಮಾಡಲು ಅವಕಾಶಗಳನ್ನು ನೀಡುತ್ತದೆ. ಈ ನಿಟ್ಟಿನಲ್ಲಿ ಪ್ರಾಥಮಿಕವಾಗಿ ಮನುಷ್ಯನು ತನ್ನ ಹೃದಯದಲ್ಲಿ ರೂಪುಗೊಂಡಿರುವ ವ್ಯಕ್ತಿತ್ವ ಮತ್ತು ಅದರ ಪರಿಣಾಮದ ಬಗ್ಗೆ ಯೋಚಿಸುವ ವೇದಿಕೆಯಾಗಿ ಬುದ್ಧನು ನಮಗೆ ನೀಡಿದ್ದೇ 'ವಿಗ್ಗ'. ಈ ವೇದಿಕೆಯಲ್ಲಿ ಅವನು ಮೊದಲು ಬಳಸಿಕೊಂಡಿದ್ದು ಮೊದಲು ಯಾರನ್ನು ಗೊತ್ತೆ? ಅವಿದ್ಯಾವಂತರಾದ ನಿರಾಶ್ರಿತರನ್ನು, ಶೋಷಿತರನ್ನು, ದುಃಖಿತರನ್ನು, ವೇಶ್ಯೆಯರನ್ನು, ರೋಗಿಗಳನ್ನು ಮತ್ತು ಸಮಾಜದಿಂದ ಬಹಿಷ್ಕರಿಸಲ್ಪಟ್ಟವರನ್ನು ಎಂಬುದು ಗಮನಾರ್ಹ.

ಈ ಪರಿಣಾಮಗಳಿಗೆ ಬಲಿಪಶುವಾಗಿ ಮನುಷ್ಯನು ತನ್ನ ಅರಿವಿನೊಂದಿಗೆ ಸಂಪೂರ್ಣ ಸಂಬಂಧವನ್ನು ಕಳಚಿಕೊಂಡು ಅಧೋಗತಿಗೆ ಒಯ್ಯುತ್ತಾನೆ. ಇಲ್ಲಿ ಮುಖ್ಯವಾಗಿ ಗ್ರಹಿಸಬೇಕಾದುದೇನೆಂದರೆ ಮನುಷ್ಯನಲ್ಲಿ ದುರ್ನಡತೆ ಇರಬಾರದೆಂದು ಅರ್ಥವಲ್ಲ; ಇವೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಇವೆಯೆಂಬುದೂ ಸತ್ಯ! ಎಷ್ಟಾದರೂ ಇವೆಲ್ಲಾ ಮನುಷ್ಯ ಸಹಜ ಗುಣಗಳಲ್ಲವೆ ? ...ಆದಾಗ್ಯೂ ವಿಷಯಾಧಾರಿತ ಈ ಜಗತ್ತಿನಲ್ಲಿ ಜ್ಞಾನದ ಸೊಗಡು ಮಾನವನಿಗೆ ಮಾತ್ರ ಎನ್ನುವುದಾದರೆ 'ಮನುಷ್ಯನ ಹೃದಯ ಲೋಕ ಸಂಬಂಧಿಯಾದ ವಿಚಾರಗಳ ಗೊಂದಲದಲ್ಲೇ ಅಂತ್ಯ' ಎಂಬ ಮಾತಿಗೆ ಅರ್ಥವೇ ಇರಲಾರದು. ಲೌಕಿಕ ಗೊಂದಲಕ್ಕೊಂದು ಮಾರ್ಗಸೂಚಿ ಇರಲೇಬೇಕು. ಏಕೆಂದರೆ ಈ ಜಗತ್ತು ಗೊಂದಲದಿಂದಾಗಿದ್ದಲ್ಲವೆ ಅಲ್ಲ! ನಿರಂತರ ವಿಕಾಸದಿಂದಾಗಿದ್ದು.

ಜ್ಞಾನ ವಿಕಾಸದ ನಿರಂತರ ಹಾದಿಯಲ್ಲಿ ಮನುಷ್ಯನಿಗೊಂದು ಸ್ಪಷ್ಟ ಪರಮ ಅರ್ಥವಿದ್ದೇ ಇದೆ. ಏಕೆಂದರೆ ನಿರಂತರ ವಿಕಾಸವು ಪ್ರಬುದ್ಧಮಾನವಾದ ಈ ಜಗತ್ತಿಗೆ ಹೇಗೆ ನಿಖರವಾದ ಒಂದು ರೂಪವನ್ನು ಕೊಟ್ಟಿತೋ ಹಾಗೆಯೇ ಪ್ರಜ್ಞಾಪೂರ್ವಕವಾದ ನಿರಂತರ ಪ್ರಯತ್ನವೂ ಮನುಷ್ಯನನ್ನು ಪ್ರಬುದ್ಧಮಾನವಾದ ಮಾನವನನ್ನಾಗಿ ಮಾಡಲು ಅವಕಾಶಗಳನ್ನು ನೀಡುತ್ತದೆ. ಈ ನಿಟ್ಟಿನಲ್ಲಿ ಪ್ರಾಥಮಿಕವಾಗಿ ಮನುಷ್ಯನು ತನ್ನ ಹೃದಯದಲ್ಲಿ ರೂಪುಗೊಂಡಿರುವ ವ್ಯಕ್ತಿತ್ವ ಮತ್ತು ಅದರ ಪರಿಣಾಮದ ಬಗ್ಗೆ ಯೋಚಿಸುವ ವೇದಿಕೆಯಾಗಿ ಬುದ್ಧನು ನಮಗೆ ನೀಡಿದ್ದೇ 'ವಿಗ್ಗ'. ಈ ವೇದಿಕೆಯಲ್ಲಿ ಅವನು ಮೊದಲು ಬಳಸಿಕೊಂಡಿದ್ದು ಮೊದಲು ಯಾರನ್ನು ಗೊತ್ತೆ? ಅವಿದ್ಯಾವಂತರಾದ ನಿರಾಶ್ರಿತರನ್ನು ಶೋಷಿತರನ್ನು, ದುಃಖಿತರನ್ನು, ವೇಶ್ಯೆಯರನ್ನು, ರೋಗಿಗಳನ್ನು ಮತ್ತು ಸಮಾಜದಿಂದ ಬಹಿಷ್ಕರಿಸಲ್ಪಟ್ಟವರನ್ನು ಎಂಬುದು ಗಮನಾರ್ಹ.

ಮಾನವ ಜೀವನಕ್ಕೆ ಸಂಬಂಧವಿಲ್ಲದ ವಿಚಾರಗಳ ವಿವೇಚನೆಯು ವಿಗ್ಗ ಎನಿಸಿಕೊಳ್ಳುವುದಿಲ್ಲ. ತನ್ನಿಂದ ತನಗೆ ತಾನು ತನಗಾಗಿ ತನ್ನ ವ್ಯಕ್ತಿತ್ವ ಮತ್ತು ಅದರ ಪರಿಣಾಮಗಳ ಕುರಿತಾದ ಚಿಂತನೆ ಅಥವಾ ಸ್ವವಿಮರ್ಶೆ ಮಾಡಿಕೊಳ್ಳುವುದೇ 'ವಿಗ್ಗ' (ಪಾಳಿ ಭಾಷೆಯದು) ವಿಗ್ಗ ಎಂದರೆ ಜ್ಞಾನ ಎಂದರ್ಥ. ಜ್ಞಾನ ಎಂದರೆ ಸತ್ಯದ ಗ್ರಹಿಕೆ. ತನ್ನಲ್ಲಿರುವ ಅಂಕುಡೊಂಕುಗಳಿಂದಾಗಿ ನನಗೆಷ್ಟು ತೊಂದರೆ ದುಃಖವಾಗಿದೆ ಎಂಬುದನ್ನು 'ಇರುವುದು ಇದ್ದಂತೆ' ಗ್ರಹಿಸುವುದೆಂದರ್ಥ. ಈ ತೆರನಾದ ಮಹತ್ವಪೂರ್ಣ ಸತತವಾದ ಗ್ರಹಿಕೆಯು ತನಗಾದ ದುಃಖ ಮತ್ತು ಅಶಾಂತಿಗೆ ಕಾರಣಗಳಲ್ಲಿ ಅಸಹನೀಯತೆಯನ್ನು ತಾಳಲು ಅವಕಾಶಗಳನ್ನುಂಟುಮಾಡಿ ಅತೀ ಇಕ್ಕಟ್ಟಾದ ಮಾನವೀಯ ಸತ್ಪಥದ ದ್ವಾರದಲ್ಲಿ ಸಣ್ಣ ಪ್ರವೇಶವನ್ನು ನಮಗೆ ನೀಡುತ್ತದೆ. ಈ ಬದುಕಿನ ಹಾದಿಯಲ್ಲಿ ಪೂರ್ವ ಸಂಸ್ಕಾರಗಳು ಅರ್ಥವನ್ನು ಕಳೆದುಕೊಳ್ಳುತ್ತಾ ರೂಪಾಂತರದಲ್ಲಿ ಜತವಾಗು

ತ್ತವೆ. ಏಕೆಂದರೆ ಈ ಹಂತದಲ್ಲಿ ಪೂರ್ವ ಸಂಸ್ಕಾರಗಳಿಗೆ ಅಸಮಧಾನ ಉಂಟಾಗಿದೆ. ಈ ಅಸಮಧಾನಕ್ಕೆ ಪ್ರಜ್ಞೆ ಇದೆ. ಪ್ರಜ್ಞೆಗೆ ಅಡ್ಡ ಪರಿಣಾಮಗಳಿಲ್ಲ; ಅದು ನೇರ ಪರಿಣಾಮ; ಪ್ರಜ್ಞೆಯ ಪರಿಣಾಮ ವಿವೇಕ. ಆ ವಿವೇಕವೇ 'ಪಜ್ಞ'. ಜ್ಞಾನವು ಸತ್ಯದ ಗ್ರಹಿಕೆಯಾದರೆ, ವಿವೇಕವು ಸತ್ಯವನ್ನು ಪ್ರೀತಿಸುವುದಾಗಿದೆ. ವಿವೇಕವು ಮಹಾಸಂಸ್ಕಾರವಾಗಿ ರೂಪುಗೊಂಡು ದ್ವಂದ್ವವು-ಸ್ಪಷ್ಟತೆಯಿಂದಾಗಿದೆ, ದುಃಖವು-ಆನಂದವಾಗಿದೆ, ದ್ವೇಷವು ಪ್ರೀತಿಯಾಗಿದೆ, ಅಸೂಯೆಯು-ಅಂತಃಕರಣೆಯಾಗಿ ರೂಪುಗೊಂಡಿದೆ. ಲೋಕದ ಕುರಿತಾದ ಕಗ್ಗತ್ತಲು-ಬೆಳಕಾಗಿ ತನಗೆ ತಾನು ತನ್ನಿಂದ ತನ್ನಲ್ಲಿ ಮಹಾಭಾವವಾಗಿ ವಿಕಸಿತವಾಗಿದೆ.

ಇಂತಹ ಪರಂಪರೆಯನ್ನು ಪಡೆದ ಬಹುಶಃ ಭಾರತದ ಜನತೆಯಲ್ಲಿ 'ಸ್ವಯಂ ಪ್ರಕಾಶ' ತತ್ವವು ಮಾಯವಾಗಿ ವಸ್ತು ಪ್ರಕಾಶವು ಭ್ರಮೆಯನ್ನುಂಟು ಮಾಡಿ ವಸ್ತು ಅವಲಂಬಿತರಾಗಿ ಅವುಗಳ ಹಿಂದೆ ಬೆನ್ನಟ್ಟಿದೆ. 'ಜ್ಞಾನ' ಮತ್ತು 'ವಿವೇಕ'ಗಳು ವಿಷಯಾಂತರವಾಗಿ ಅರ್ಥ ಹೀನವಾಗಿವೆ.

೨. ಮನುಷ್ಯ ಮನುಷ್ಯನಿಗೆ ಮಾಡುವ ಅನ್ಯಾಯ

ಬುದ್ಧನ ಮುಖ್ಯ ತತ್ವವಾದ 'ಆಸೆಯೇ ದುಃಖಕ್ಕೆ ಮೂಲ ಕಾರಣ' ಎಂಬ ವಾಕ್ಯವನ್ನು ಎಲ್ಲಾ ಆಸೆಗಳನ್ನು ಕೊಂದುಕೊಳ್ಳುವುದು 'ಪೂರ್ಣತ್ವದ' ಸ್ಥಿತಿ ಎಂದು ಕೆಲವರು ವಾದಿಸುತ್ತಾರೆ. ಇದು ಅಸಂಬದ್ಧ ಏಕೆಂದರೆ ಬುದ್ಧನಿಗೆ ಅತಿಯಾದ 'ಮೋಕ್ಷಾಪೇಕ್ಷೆ'ಯ ಆಸೆಯೂ ಇತ್ತು. ಈ ಅತಿಯಾದ ಆಸೆಯಿಂದಲೇ ಅವನು ಪರಿಪೂರ್ಣವಾದ ಸ್ಥಿತಿಗೆ ತಲುಪಿದ. ದುಃಖದ ಮೂಲವನ್ನು ಆಸೆಯಲ್ಲಿ ಕಂಡು ಕೊಂಡರೂ ಆಸೆಗೊಂದು ಪಾರಮಾರ್ಥವನ್ನು ನೀಡಿದಾಗ ಅದು ಆಸೆಯೆನಿಸಿಕೊಳ್ಳಲಾರದೆಂಬುದು ಅವನ ತತ್ವಗಳಲ್ಲಿ ವೇದ್ಯವಾಗುತ್ತದೆ. ಹಾಗಾಗಿ ಬುದ್ಧನು ನಿರಾಶಾವಾದವನ್ನೆಂದೂ ಪ್ರತಿಪಾದಿಸಲಿಲ್ಲ. ಬುದ್ಧನಿಗೆ ಇಡೀ ಜಗತ್ತಿಗೇ ದುಃಖ ಮತ್ತು ಬಂಧನದಿಂದ ಪಾರಾಗುವ ಮಾರ್ಗವನ್ನು ಸೂಚಿಸಬೇಕೆಂಬ ಮಹತ್ವಾಕಾಂಕ್ಷೆಯೂ ಇದ್ದಿತು.

ಬುದ್ಧ ಧಮ್ಮದ ತಿರುಳು ದುರ್ಬಲವಾದ ಜಗತ್ತನ್ನು ಸಬಲವಾಗಿ ಪುನರ್‌ರಚಿಸುವುದು. ಈ ವಿಶ್ವವು ದುರ್ಬಲವೇಕೆಂದರೆ... ಮನುಷ್ಯ ಮನುಷ್ಯನಿಗೆ ಮಾಡುವ ಅನ್ಯಾಯವು ಅಧಿಕವಾಗಿದೆ. ಹಾಗಾಗಿ ದುಃಖ ಮತ್ತು ಅಶಾಂತಿಯೂ ಅತ್ಯಧಿಕವಾಗಿದೆ. ಈ ಅನ್ಯಾಯವನ್ನು ಹೋಗಲಾಡಿಸಲು ಏಕೈಕ ಮಾರ್ಗವಾಗಿ ಬುದ್ಧ ತನ್ನ 'ಧಮ್ಮ'ವನ್ನು ಲೋಕಕ್ಕೆ ವಿಧಿಸಿದ ಇವನ ಧಮ್ಮವು ಮಾನವ ಬದುಕಿನ ಕುರಿತಾದ ಒಂದು ಕ್ರಮ ಶಿಕ್ಷಣವಾಗಿತ್ತು. ಧಮ್ಮವು ಬಲಾತ್ಕಾರವಾಗಿ ಮನುಷ್ಯನಿಗೆ ವಿಧಿಸಿದ ಕಾನೂನಿನ ಹೊರೆ ಆಗಿರಲಿಲ್ಲ. ಅವನ ಧಮ್ಮದ ವೇದಿಕೆಯಲ್ಲಿ ಸೃಜನಾತ್ಮಕ ಚಿಂತನೆಯನ್ನು ಬಲಗೊಳಿಸುವುದುರ ಮೂಲಕ ಮಾನವ ಜನಾಂಗಕ್ಕೆ ಸನ್ಮಾರ್ಗವನ್ನು ಕಲ್ಪಿಸುವುದಾಗಿತ್ತು. ಈ ಎಲ್ಲಾ ಕಾರಣಗಳಿಂದಾಗಿ ಅವನ ಧಮ್ಮವು ಅಫೀಮು ಎಂಬರ್ಥವನ್ನು ಪಡೆದುಕೊಳ್ಳುವುದಿಲ್ಲ.

ಈ ಅಖಂಡ ವಿಶ್ವವು ಹುಟ್ಟುವಿಕೆ, ಇರುವಿಕೆ, ನಾಶವಾಗುವಿಕೆಯ ಮೂರು ತತ್ತ್ವಗಳೊಂದಿಗೆ ಸರ್ವತಂತ್ರ ಸ್ವತಂತ್ರ್ಯವಾಗಿದೆ. ಅನಂತಾನಂತವಾದ ಈ ಸ್ಥಳಾವಕಾಶದ ಗರ್ಭದಲ್ಲಿ ಭೌತಿಕ ವಸ್ತು ಸ್ಥಿತಿಯ ಮೂಲಕ ಈ ಜಗತ್ತುಂಟಾಗಿದೆ. ಈ ವಿಶ್ವಾತ್ಮಕ ಸೃಷ್ಟಿಯು ಜೀವಿಗಳಿಗೆ ಬದುಕುವ, ವಸ್ತುಗಳಿಗೆ ಇರುವಿಕೆಯಲ್ಲಿ ಬದಲಾಗುವ ಅವಕಾಶಗಳನ್ನೂ ನೀಡಿದೆ. ಈ ಯತಾರ್ಥದಲ್ಲಿ ಸೃಷ್ಟಿಯ ಅಂಶಗಳ ಮೇಲೆ ಅತಿಕ್ರಮ ಪ್ರವೇಶವನ್ನು ಮಾಡಲು ಸಾಧ್ಯವೇ ಇಲ್ಲ. ಸಾಧ್ಯವೆಂದು ಭಾವಿಸುವುದಾದರೆ ಅವನ ಸೀಮಿತ ಜಗತ್ತಿಗೆ ಮಾತ್ರ ಅದು ಅನ್ವಯಿಸುತ್ತದೆ. ಶೂನ್ಯ ಗರ್ಭಿತ ಸೃಷ್ಟಿಯು ಕೊನೆ ಮೊದಲಿಲ್ಲದ್ದು ಎಂಬ ಅತ್ಯುನ್ನತ ಸ್ಥಿತಿಗೆ ಕಣ್ಣು ತೆರೆದಾಗ, ನಾಶರಹಿತವಾದ ಕಾಲಗರ್ಭದಲ್ಲಿ ಈ ಮನುಷ್ಯ ಪಾಲು ಎಷ್ಟು ಅಲ್ಪ! ಕ್ಷಣಕಾಲ ಬಾಳುವ ಈ ಮನುಷ್ಯ ಇನ್ನೊಂದು ಜೀವಿ ಬದುಕುವುದನ್ನು ದುರ್ಬಲಗೊಳಿಸಿದ್ದಾನೆ! ಆದರೆ ಅನಂತ ಸೃಷ್ಟಿಯು ಜೀವಿಗೆ ಜೀವಿಸುವ ಹಕ್ಕನ್ನು ನೀಡಿದೆ. ಈ ರೀತಿಯ ಸೃಷ್ಟಿಗೆ ವಿರುದ್ಧವಾಗಿ ಮನುಷ್ಯ ನಡೆಯುವ ಅಂತರ್ಯಕ್ಕೆ ಯಾವ ಅರ್ಥ ಇರಬಲ್ಲದು? ಹುಟ್ಟು ಸಾವು, ರೋಗದ ಬಗ್ಗೆ ನಾವೆಷ್ಟು ಅಸಾಹಕರೋ ಎಲ್ಲಾ ಜೀವಿಗಳೂ ಅಷ್ಟೇ ಅಸಹಾಯಕ! ತನ್ನ ಸಾವು ಮತ್ತು ನೋವನ್ನು ಗಂಭೀರವಾಗಿ ಪರಿಗಣಿಸುವ ಮನುಷ್ಯ ಇನ್ನೊಬ್ಬರ ಸಾವನ್ನು ಏಕೆ ಪರಿಗಣಿಸುವುದಿಲ್ಲ! ಇಂತಹ ಕಠೋರವಾದ ಹಿಂಸೆ ಜಗತ್ತಿನಲ್ಲಿ ಎಲ್ಲಾದರೂ ಇದೆಯೆ ? ...ಹೀಗೆ ಯತಾರ್ಥ ಅರಿವಿನ ಕೋಶದ ತಳದಲ್ಲಿ ಚಿಂತಿಸುವ ವಾಸ್ತವಿಕ ವಸ್ತುಸ್ಥಿತಿಯ ವಿವೇಕವೇ 'ವಿಗ್ಗ'.

ಈ ತೆರನಾದ ಗ್ರಹಿಕೆಯು ಪರಿಣಾಮದಲ್ಲಿ ಇಡೀ ವಿಶ್ವದ ನಿಯಮಗಳನ್ನು ಒಪ್ಪಿಕೊಂಡು ಪ್ರೀತಿಸುವುದರ ಮೂಲಕ ಎಲ್ಲಾ ಅಸಹಾಯಕ ಜೀವಿಗಳ ಬಗ್ಗೆ ಅನುಕಂಪ ತೋರುತ್ತಾ... ಮಾನವ ಜನಾಂಗದಲ್ಲಿ ವಿಶ್ವಪ್ರೇಮವನ್ನುಂಟು ಮಾಡಲು ಮತ್ತು ವಿಶ್ವಪ್ರೇಮವುಂಟಾಗದಿದ್ದಾಗ ಆ ಸಮಾಜದ ಸ್ಥಿತಿ ಯಾವ ಹಂತವನ್ನು ತಲುಪುತ್ತದೆ. ಅದು ಎಷ್ಟು ಸತ್ಯ ಎಂಬ ಅರಿವನ್ನುಂಟು ಮಾಡಲು ಅನೇಕ ಉಪದೇಶಗಳನ್ನು ನೀಡಿದನು. ಧರ್ಮದ ಆಳ್ವಿಕೆಯು ಯಾವ ಯಾವ ಸರ್ವಕಾಲಿಕವಾದ ಸತ್ಯಗಳನ್ನು ಅವಲಂಬಿಸಿದೆ. ಅಧರ್ಮವು ವೃದ್ಧಿಯಾದಾಗ ಸಮಾಜ ಮತ್ತು ದೇಶಗಳು ಎಂತಹ ಅಮಾನವೀಯವಾದ ಘಟನೆಗಳನ್ನು ಎದುರಿಸಬೇಕಾಗುತ್ತದೆಂದು ತನ್ನ ಉಪದೇಶಗಳಲ್ಲಿ ತಿಳಿಸಿದ್ದಾನೆ. ಅದು ಹೀಗಿದೆ...

...ಸೋದರರೇ... ಒಂದಾನೊಂದು ಕಾಲದಲ್ಲಿ ಡಲ್ಹೇನೇಮಿ ಎಂಬ ಚಕ್ರವರ್ತಿ ಮಹಾರಾಜನಿದ್ದನು. ಅವನು ಧರ್ಮದಿಂದ ರಾಜ್ಯವಾಳುತ್ತಿದ್ದನು. ಅವನು ಭೂಮಂಡಲದ ಚತುರ್ ದಿಕ್ಕುಗಳಿಗೂ ಪ್ರಭುವಾಗಿದ್ದನು. ಅವನು ಮಹಾದಿಗ್ವಿಜಯಿ, ಪ್ರಜಾಪಾಲಕನಾಗಿದ್ದನು. ಅವನು 'ದಿವ್ರಚಕ್ರ'ದ ಒಡೆಯನಾಗಿದ್ದನು. (ಬೌದ್ಧಧರ್ಮದ ಸಂಕೇತ ದಿವ್ಯಚಕ್ರ) ಸಮುದ್ರ ತೀರದವರೆಗೂ ಚಾಚಿಕೊಂಡಿರುವ ಭೂಮಂಡಲವನ್ನು ಧೈರ್ಯದಿಂದಾಗಲಿ, ಖಡ್ಗದಿಂದಾಗಲಿ ಗೆಲ್ಲದೇ, ಧರ್ಮದಿಂದ ಗೆದ್ದು ಅದರ ಏಕ ಚಕ್ರಾಧಿಪತಿಯಾಗಿದ್ದನು.

ಅನೇಕ ವರ್ಷಗಳ ನಂತರ, ಅನೇಕ ಶತಮಾನಗಳ ನಂತರ... ಅನೇಕ ಸಹಸ್ರ ವರ್ಷಗಳ ನಂತರ... ದಿವ್ಯ ಚಕ್ರವು ತನ್ನ ಜಾಗದಿಂದ ಜಾರಿತ್ತು. (ಅಂದರೆ ಭಾವಾರ್ಥದಲ್ಲಿ ಧರ್ಮದ ಪತನವನ್ನು ಸೂಚಿಸುತ್ತದೆ) ವಯಸ್ಸಾದ ಡಲ್ಹೇನೇಮಿ ತನ್ನ ಮಗನಿಗೆ ಪಟ್ಟಗಟ್ಟಿ ತಾನು ಸಾಮ್ರಾಜ್ಯವನ್ನು ತೊರೆದು ಸಂನ್ಯಾಸಿಯಾಗಿ ಅನಿಕೇತನ ಸಾಮ್ರಾಜ್ಯಕ್ಕೆ ತೆರಳಿದ. ಬಳಿಕ ದಿವ್ಯ ಚಕ್ರವು ಇಲ್ಲದೆ ಆಯಿತು (ಅಂದರೆ ಧರ್ಮವು

ಬುದ್ಧನ ಮುಖ್ಯ ತತ್ವವಾದ 'ಆಸೆಯೇ ದುಃಖಕ್ಕೆ ಮೂಲ ಕಾರಣ' ಎಂಬ ವಾಕ್ಯವನ್ನು ಎಲ್ಲಾ ಆಸೆಗಳನ್ನು ಕೊಂದುಕೊಳ್ಳುವುದು 'ಪೂರ್ಣತ್ವದ' ಸ್ಥಿತಿ ಎಂದು ಕೆಲವರು ವಾದಿಸುತ್ತಾರೆ. ಇದು ಅಸಂಬದ್ಧ ಏಕೆಂದರೆ ಬುದ್ಧನಿಗೆ ಅತಿಯಾದ 'ಮೋಕ್ಷಾಪೇಕ್ಷೆ'ಯ ಆಸೆಯೂ ಇತ್ತು. ಈ ಅತಿಯಾದ ಆಸೆಯಿಂದಲೇ ಅವನು ಪರಿಪೂರ್ಣವಾದ ಸ್ಥಿತಿಗೆ ತಲುಪಿದ.

ನಶಿಸಿತು) ಕಸಿವಿಸಿಗೊಂಡ ರಾಜ ತನ್ನ ತಂದೆಯಾದ ಸಂನ್ಯಾಸಿಯನ್ನು ಭೇಟಿ ಮಾಡಿ ಈ ವಿಚಾರವನ್ನು ತಿಳಿಸಿದ. ಧರ್ಮ ರಾಜ್ಯವನ್ನು ಪುನರ್‌ಸ್ಥಾಪಿಸಬೇಕೆಂದು ಸಂನ್ಯಾಸಿ ಹೇಳಿದನು. ಧರ್ಮ ರಾಜ್ಯದ ಸ್ಥಾಪನೆ ಹೇಗೆ? ಮನುಷ್ಯ ಮನುಷ್ಯನಿಗೆ ಮಾಡುವ ಅನ್ಯಾಯಗಳನ್ನು ತಡೆಯುವುದು!

...'ಸೋದರರೇ... ನಿರ್ಗತಿಕರಿಗೆ ಅಗತ್ಯವಾದ ವಸ್ತುಗಳನ್ನು ಕೊಡಬೇಕು! ಏಕೆಂದರೆ ಅಗತ್ಯಕ್ಕಿಂತ ಹೆಚ್ಚಾದ ಆಸ್ತಿ ಸಂಗ್ರಹಣೆಯು ನಿರ್ಗತಿಕರನ್ನು ಅಧಿಕಾಧಿಕವಾಗಿ ಸೃಷ್ಟಿಸುತ್ತದೆ. ಆಸ್ತಿ ಸಂಗ್ರಹಣಾಕಾರರು ದುರಾಸೆಯಿಂದ ನಿರ್ಗತಿಕರು ಬದುಕುವುದನ್ನು ದುರ್ಬಲಗೊಳಿಸುತ್ತಿದ್ದಾರೆ... ಈ ರೀತಿಯ ಅನ್ಯಾಯದಿಂದ ದುರ್ಬಲ ಬದುಕಿನ ನಿರ್ಗತಿಕರು ಹೆಚ್ಚಾದಂತೆಲ್ಲಾ ಬಡತನವು ಹೆಚ್ಚಿತು. ಬಡತನವು ಕಳ್ಳತನಕ್ಕೆ ಪ್ರೇರಣೆ ಉಂಟುಮಾಡಿತು. ಕಳ್ಳತನದಿಂದ ಹಿಂಸಾಚಾರವು ಪ್ರಾರಂಭವಾಯಿತು. ಹಿಂಸಾಚಾರವು ಹೆಚ್ಚಾದರಿಂದ ಜೀವ ನಾಶವು ಸರ್ವೇ ಸಾಮಾನ್ಯವೆಂಬಂತಾಯಿತು... ಈ ರೀತಿ ಕೊಲೆಗೆ ಪ್ರೇರಣೆ ಸಿಕ್ಕಿ ಜನರ ಆಯುವು ಮತ್ತು ಜೀವನ ಸೌಂದರ್ಯಗಳು ತಮ್ಮ ಅಂದವನ್ನು ಕಳೆದುಕೊಂಡವು. ಕೊಲೆಯಿಂದ ಸುಳ್ಳು ಹುಟ್ಟಿತು. ಸುಳ್ಳೆಂಬುದು ಅನೈತಿಕತೆಗೆ ದಾರಿ ಮಾಡಿಕೊಟ್ಟಿತು. ಅನೈತಿಕತೆಯಿಂದ ಅಕ್ರಮ ಸಂಬಂಧಗಳು, ದುರಾಸೆ, ವಿಕೃತ ಕಾಮಗಳು ಉದಯಿಸಿದವು.

ಈ ಭಾವನೆಗಳ ಪರಿಣಾಮವಾಗಿ ತಂದೆ ತಾಯಿಗಳ ಮೇಲಿನ ಪೂಜ್ಯ ಭಾವನೆ ಮತ್ತು ಹಿರಿಯರ ಮೇಲಿನ ಗೌರವಗಳು ಇಲ್ಲವಾಯಿತು, ಗೌರವಗಳು ಇಲ್ಲವಾದಾಗ ಅಭಿರುಚಿಗಳು ಇಲ್ಲವಾದವು. ಅಭಿರುಚಿಯಿಂದ ಷಡ್ರಸಗಳಾದ ಉಪ್ಪು, ಹುಳಿ, ಒಗರು ಇತ್ಯಾದಿಗಳು ರುಚಿಯನ್ನು ಕಳೆದುಕೊಂಡವು. ಇಂತಹ ಸಮಾಜದಲ್ಲಿ ನೀತಿಯ ಮಾತೇ ಇರುವುದಿಲ್ಲ, ನೀತಿಯ ನಿಯೋಗಿಗಳೂ (ನೀತಿ ಆಚರಿಸುವವರು) ಇರುವುದಿಲ್ಲ. ಮೃಗಗಳಲ್ಲಿರುವಂತೆ ತಾಯಿಯ ಜೊತೆಯಲ್ಲಾಗಲಿ ತಂಗಿಯ ಜೊತೆಯಲ್ಲಾಗಲಿ, ಗುರುಪತ್ನಿಯ ಜೊತೆಯಲ್ಲಾಗಲಿ ಮದುವೆ ನಿಷಿದ್ಧವೆಂಬ ಗೌರವಯುತವಾದ ಭಾವನೆಗಳಿಗೆ ಜನಕ್ಕೆ ಸ್ಥಾನವಿರುವುದಿಲ್ಲ. ಮೃಗಗಳಲ್ಲಿರುವಂತೆ ನೀತಿಗೆಟ್ಟ ಲೈಂಗಿಕತೆಗೆ ಪ್ರಪಂಚ ಗುರಿಯಾಗುತ್ತದೆ. ಇಂತಹ ಜನರಲ್ಲಿ ಸೋದರರೇ... ತೀವ್ರ ಅಸೂಯೆ... ತೀವ್ರ ವೈರತ್ವ, ತನ್ನ ಕಂದನನ್ನು ಕೊಲ್ಲಲು ತಾಯಿಗೆ, ತನ್ನ ತಂದೆಯನ್ನೇ ಕೊಲ್ಲಲು ಮಗುವಿಗೆ, ಸೋದರನನ್ನು ಕೊಲ್ಲಲು ಸೋದರನಿಗೆ ರಾಗೋ ಜ್ವಲ ಭಾವನೆಗಳುಂಟಾಗುತ್ತವೆ. ಆಟಗಾರನಿಗೆ ಆಟವನ್ನು ನೋಡಿ ಉಂಟಾಗುವ ಉತ್ಸಾಹಿತ ಸನ್ನಿವೇಶಗಳಂತೆ ಇಂತಹವುಗಳನ್ನು ಜನರು ಸಾಮಾನ್ಯವೆಂಬಂತೆ ಭಾವಿಸುವರು'.

ಅಬ್ಬಾ!!! ಎಷ್ಟು ಹಳೆಯದು ! ಎಷ್ಟು ಹೊಸತು ! ಇದು ಬಹುಶಃ ಮನುಷ್ಯ ಮನುಷ್ಯನಿಗೆ ಮಾಡುವ ಅನ್ಯಾಯದಿಂದ ನೀತಿಗೆಟ್ಟು ಧರ್ಮದಿಂದ ಬೇರ್ಪಟ್ಟ ಸಮಾಜ ಎಂತಹ ವಿಪತ್ಕರ ಪರಿಣಾಮಗಳನ್ನುಂಟು ಮಾಡುತ್ತದೆ. ಎಂಬುದಕ್ಕೊಂದು ವಾಸ್ತವ ನಿದರ್ಶನವೂ ಹೌದು! ಕ್ಷಣ ಮಿಂಚಿ ಮಾಯವಾಗುವ ಈ ಮನುಷ್ಯನ ಅನ್ಯಾಯದ ಅವಶೇಷ ಅನೇಕಾನೇಕ ವರ್ಷಗಳು ಈ ಸಮಾಜವನ್ನು ಕಲುಷಿತಗೊಳಿಸಲು ಸಾಧ್ಯವಿದೆ. ಮನುಷ್ಯ ಜೀವಿ ಎಂದರೆ ಹಲವಾರು ವರ್ಷಗಳ ಕಾಲ ಬಾಳುವ ಪಾರಂಪರಿಕ ಪ್ರಭಾವವಾಗಿರು



ವುದರಿಂದ, ಜೀವನ ನಶ್ವರ ಎಂಬ ಮಹತ್ವಾಕಾಂಕ್ಷೆಯಲ್ಲಿ ಧರ್ಮದ ಪ್ರಭಾವವನ್ನುಂಟು ಮಾಡಬೇಕೆ ಹೊರತು ಅಧರ್ಮವನ್ನಲ್ಲ; ಒಂದು ವೇಳೆ ಅಧರ್ಮವಾದಾಗ ಈ ಲೋಕದ ಸತ್ಯವನ್ನು ಕೊಂದು ಕೊಳ್ಳುವುದಲ್ಲದೇ ಮತ್ತೇನು ?

ಬಹುಶಃ ಭಾರತೀಯ ಪರಂಪರೆಯಲ್ಲಿ ಧರ್ಮ ರಕ್ತಗತವಾಗಿ ಬಂದಿರುವುದರಿಂದಲೇ... ಸಮಸ್ತ ಪ್ರಾಜ್ಞರು ಮಾನವತಾಧರ್ಮವಾದ ಬೌದ್ಧ ಧರ್ಮವನ್ನು ಒಪ್ಪಿಕೊಳ್ಳುತ್ತಾರೆ. ಅತ್ಯಂತ ಹಳೆಯದಾದ ಈ ಧರ್ಮದ ಮಾನವೀಯತೆ ಇಂದಿಗೂ ಭಾರತೀಯನ ಹೃದಯಂತರಾಳದಲ್ಲಿ ಒಂದು ಸಣ್ಣ ಸಂವೇದನೆಯನ್ನಾದರೂ ಇಟ್ಟುಕೊಂಡಿರುತ್ತದೆ. ಇದು ಗೌತಮನ ಪ್ರಭಾವ. ಇಂದು ಈ ಸಂವೇದನೆಗೆ ಬಹಿರ್ ಪ್ರಪಂಚದಲ್ಲಿ ಪ್ರೇರಣೆ ಮತ್ತು ಸೂಕ್ತ ಮಾರ್ಗದರ್ಶನವಿಲ್ಲದೆ ಸತ್ವವನ್ನು ಕಳೆದುಕೊಂಡಿದೆ. ಈ ಸನ್ನಿವೇಶಗಳನ್ನು ಸೃಷ್ಟಿಸಿದರೆ ಮಾನವತಾ ಧರ್ಮ ಇಲ್ಲಿ ಮತ್ತೆ ಪ್ರಾದುರ್ಭವಿಸಲು ಸಾಧ್ಯತೆಗಳಿವೆ. ಇಂತಹ ಮಹತ್ವಪೂರ್ಣ ಆಕಾಂಕ್ಷೆಯಿಂದಲೇ ಸ್ವತಂತ್ರ್ಯ ಭಾರತವು ರಾಷ್ಟ್ರಧ್ವಜಕ್ಕೆ 'ಅಶೋಕ ಚಕ್ರ'ವನ್ನೂ ರಾಷ್ಟ್ರ ಲಾಂಛನವಾಗಿ 'ನಾಲ್ಕು ತಲೆಯ ಸಿಂಹವನ್ನು' ರಾಷ್ಟ್ರದ ಸಂಕೇತಗಳಾಗಿ ಸ್ವೀಕರಿಸಲಾಯಿತು.

ಸಂವಿಧಾನದಲ್ಲಿ ಕಾನೂನಿನ ಆಳ್ವಿಕೆ ಬಲದ ಆಳ್ವಿಕೆಯಾಗಿ ರೂಪುಗೊಂಡು ಸ್ವತಂತ್ರ್ಯವನ್ನು ದುರುಪಯೋಗ ಮಾಡಿಕೊಳ್ಳುವ ಅಡ್ಡದಾರಿ ಇರುವುದರಿಂದ ಧರ್ಮರಾಜ್ಯಕ್ಕೆ ಹೆಚ್ಚು ಒತ್ತುಕೊಡಲಾಯಿತು. ಧರ್ಮ ಚಕ್ರವೆಂದರೆ 'ಅಶೋಕ ಚಕ್ರ'. ಅಶೋಕ ಎಂಬ ಪದವೇ ಸೂಚಿಸುವಂತೆ 'ಶೋಕ ರಹಿತವಾದ ಸಮಾಜದ ಗುರಿ'. ಚಕ್ರವು ತಿರುಗುವಾಗ ಇದ್ದಲ್ಲಿಯೇ ಪುನರಾವರ್ತನೆಯಾಗುವಂತೆ ಚಲನಶೀಲ ಸಮಾಜದಲ್ಲಿ ಧರ್ಮ ಸಂಬಂಧಿಯಾದ ನೈತಿಕತೆಯೂ ಇಲ್ಲಿ ಪುನರಾವರ್ತಿತವಾದರೆ ದೇಶವು ಉಳಿಯುತ್ತದೆ. ಈ ಗುರಿಯನ್ನೇ ಮಹಾನ್ ಮಾನವತಾಮೂರ್ತಿಯಾದ ಡಾ|| ಬಿ.ಆರ್. ಅಂಬೇಡ್ಕರರು ಸಂವಿಧಾನದಲ್ಲೂ ಅಳವಡಿಸಿದರು.

ಸ್ವತಂತ್ರ್ಯ ಭಾರತವು ರಾಷ್ಟ್ರಧ್ವಜಕ್ಕೆ 'ಅಶೋಕ ಚಕ್ರ'ವನ್ನೂ ರಾಷ್ಟ್ರ ಲಾಂಛನವಾಗಿ 'ನಾಲ್ಕು ತಲೆಯ ಸಿಂಹವನ್ನು' ರಾಷ್ಟ್ರದ ಸಂಕೇತ ಗಳಾಗಿ ಸ್ವೀಕರಿಸಲಾಯಿತು. ಸಂವಿಧಾನದಲ್ಲಿ ಕಾನೂನಿನ ಆಳ್ವಿಕೆ ಬಲದ ಆಳ್ವಿಕೆಯಾಗಿ ರೂಪುಗೊಂಡು ಸ್ವತಂತ್ರ್ಯವನ್ನು ದುರುಪಯೋಗ ಮಾಡಿಕೊಳ್ಳುವ ಅಡ್ಡದಾರಿ ಇರುವುದರಿಂದ ಧರ್ಮರಾಜ್ಯಕ್ಕೆ ಹೆಚ್ಚು ಒತ್ತುಕೊಡಲಾಯಿತು. ಧರ್ಮ ಚಕ್ರವೆಂದರೆ 'ಅಶೋಕ ಚಕ್ರ'. ಅಶೋಕ ಎಂಬ ಪದವೇ ಸೂಚಿಸು ವಂತೆ 'ಶೋಕ ರಹಿತವಾದ ಸಮಾಜದ ಗುರಿ'.

ಈ ದುಃಖ ರಹಿತವಾದ ಸಮಾಜದ ಗುರಿಯನ್ನು ಆಡಳಿತಾತ್ಮಕ ಭ್ರಷ್ಟರಾಜಕಾರಣಗಳು ಎಷ್ಟೊಂದು ಕ್ರೂರವಾಗಿ ಕೊಂದು ಹಾಕಿದವು ಎಂಬುದನ್ನು ನೆನೆಸಿಕೊಂಡರೆ ಹೃದಯ ತಲ್ಲಣಿಸುತ್ತದೆ. ಸರ್ವರಿಗೂ ಸಮಪಾಲು, ಸಮಾನತೆ ಎಂಬ ಸಂವಿಧಾನಕ ಊಹೆಗಳು ಕೇವಲ ಅಣಕಗಳಾದವು. 'ಯಥಾರಾಜಾ ತಥಾಪ್ರಜಾ' ಎಂಬಂತೆ ರಾಜನಿಂದ ಹಿಡಿದು ಸಾಮಾನ್ಯನವರೆಗೂ ಭ್ರಷ್ಟತೆಯ ಏಡ್ಸ್ ಭಾರತೀಯನಿಗೆ ಸೋಂಕಿದೆ.

ಇಂದಿಗೆ ಬಹುತೇಕ ಧರ್ಮ ತಿರಸ್ಕರಣೀಯವಾಗುತ್ತಿದ್ದಂತೆ ವಸ್ತು ಅವಲಂಬನೆ ಪ್ರಕಾಶಮಾನವಾಗುತ್ತಿದೆ. ಹೃದಯವನ್ನು ವಿಕಾಸಗೊಳಿಸುವ ಧರ್ಮದ ಬದಲಿಗೆ ವಸ್ತುಗಳು ಮನುಷ್ಯ ಮನಸ್ಸನ್ನು ಸಂಕುಚಿತಗೊಳಿಸುತ್ತಿವೆ... ಮಾನವ ಇನ್ನೊಬ್ಬನಿಗೆ ಕಂಟಕಪ್ರಾಯನಾಗಿ ಕಪಟಿಯಾಗುತ್ತಿದ್ದಾನೆ. ಕಪಟತ್ವವು ಮನುಷ್ಯನನ್ನು ಶೂನ್ಯವಾಗಿಸಿ ಒಂದು ಕಾಲಕ್ಕೆ ಜಗತ್ತೆಂದರೆ ಬರೀ ನಿರುಪಯುಕ್ತ ವಸ್ತುಗಳ ರಾಶಿಯಂತಾಗಬಹುದು. ಈ ದಿನಗಳು ಇನ್ನು ಜಾಸ್ತಿ ದೂರ ಉಳಿದಂತಿಲ್ಲವೆನಿಸುತ್ತದೆ.

ನಾಗರಿಕತೆಯ ನೆಪವೋ... ವೈಜ್ಞಾನಿಕ ಯುಗದ ಪರಿಣಾಮವೋ... ಸಂಸ್ಕಾರ ರಹಿತ ಶಿಕ್ಷಣದ ಪ್ರಭಾವವೋ... ಅಂತೂ ಈ ಪರಿ ನೆಪಗಳಲ್ಲಿ ಮನುಷ್ಯನು 'ಜ್ಞಾನ' ಮತ್ತು 'ವಿವೇಕ'ಗಳನ್ನು ಕಳೆದುಕೊಳ್ಳುತ್ತಾ... ತನ್ನ ಇಂದ್ರಿಯಗಳನ್ನು ದುರ್ಬಲಗೊಳಿಸಿಕೊಂಡಿರುವುದಂತೂ ಸತ್ಯ... ಈ ಕಠಿಣತಮ ಪರಿಸ್ಥಿತಿಯಲ್ಲಿ ಧರ್ಮದ ಹಾದಿಯಲ್ಲಿ 'ವಿಗ್ಗ' ಅಥವಾ 'ಪಜ್ಞ'ಗಳು ಅತ್ಯಾವಶ್ಯಕವೆನಿಸದಿರಲಾರವು. ❑

ಮೀಯುವ ಆಟ

ಕಥೆ



ಮಳೆಯ ಜಿಟಿ ಜಿಟಿ ರಾಗ ಶುರುವಾಗಿ ಆಗಲೇ ಮೂರು ದಿನ ಕಳೆದಿದೆ. ಕಾರ್ತೆಲ್ ತಿಂಗಳ ನಡುವದು. ಒಲೆ ಬೆಳಗುವ ತೆಂಗಿನ ಮಡಲು – ಕೊತ್ತಳಿಗೆ, ಸೌದೆ, ತರಗಲೆಗಳೆಲ್ಲ ಆ ರೀತಿ ಜೀರಿಗಟ್ಟಿ ಸುರಿವ ಮಳೆಯ ಆಲಾಪನೆ, ಥಂಡಿಗೆ ಬೆದರಿ ಬಚ್ಚಲು ಮನೆಯ ಕೋಡಿಮೂಲೆಯಲ್ಲಿ ಚಳಿ ಹಿಡಿದು ಹನಿದು ಕೂತಿವೆ. ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲೂ ಖಾದ್ರಿಬ್ಯಾರಿಯವರು ವೆಂಕಪ್ಪಶೆಟ್ಟರ ಬಚ್ಚಲು ಮನೆಯ ಉರಿವ ಒಲೆಬಾಯಿಗೆದುರಾಗಿ ಕುಕ್ಕರುಗಾಲಲ್ಲಿ ಕೂತು, ಉರಿವ ತೆಂಗಿನ ಮಡಲ ಸೀಳನ್ನು ಒಲೆಗಂಟಲತ್ತ ತಳ್ಳುತ್ತಿದ್ದರು. ತಳ್ಳುವ ತೆಂಗಿನಗರಿಗಳೆಲ್ಲ ಬರಬರನೆ ಉರಿದುಬಿಟ್ಟು ಬರಿ ನಡುದಂಡು ಬಂದಾಗ ಉರಿಯ ಅಬ್ಬರವನ್ನೊಮ್ಮೆ ಕುಗ್ಗಿಸಿ ಒಂದಷ್ಟು ಹೊಗೆಯ ಕಾಣಿಕೆಯನ್ನು ಖಾದ್ರಿಬ್ಯಾರಿಯವರಿಗೆ ಕರುಣಿಸು ವಾಗಲೆಲ್ಲ ಅವರು ಸುಕ್ಕು ಮುಖದಲ್ಲಿ ಕ್ಷೀಣವಾಗಿ ಬೆಳಗುತ್ತಿದ್ದ ಕಣ್ಣುಗಳಿಗೆ ನೀರು ತುಳುಕಿಸುವ ಸಡಗರ!

ತೊಟ್ಟ ಹಸಿರು ರುಮಾಲಿನ ಅಂಚಿನಿಂದಲೆ ಕಣ್ಣನೀರನ್ನು ಇಂಗಿಸಿಕೊಂಡು ಒಲೆಬಾಯಿಗೆ ಮತ್ತಷ್ಟು ತೆಂಗಿನ ಗರಿ ತುರುಕಿಸುವಷ್ಟರಲ್ಲಿ ಆ ಮಳೆಗಾಳಿಯೊಂದಿಗೆ ಬೀಸಿ ಬಂತು – ವೆಂಕಪ್ಪಶೆಟ್ಟರ ಹಕ್ಕಿನ ಶೆಡ್ತಿ ಉಮ್ಮಕ್ಕೆಯವರ ಎಂದಿನ ಎಚ್ಚರಿಕೆ ಅವುಚಿದ ಹಿತವಚನ!

○ ಡಾ|| ಎಚ್. ನಾಗವೇಣಿ

'ನೀರು ಉಗುರುಬಿಸಿ ಆದ್ರೆ ಸಾಕು ಸ್ಯಾಬೆರೇ... ಇವತ್ತೇ ಎಲ್ಲ ಮರಮಟ್ಟನ್ನು ಆ ಒಲೆಗಂಟಲಿಗೆ ತುರುಕಿದರೆ ನಾಳೆ ಅದರ ಬಾಯಿಗೆ ನಮ್ಮ ಕೈಕಾಲನ್ನು ತುರುಕಿಸುವುದಾ ಹೇಗೆ...? ಆ ಒಲೆಯೇನೊ ಈ ಊರಲ್ಲಿರುವ ಸೌದೆ-ಸೌಟುಗಳೆಲ್ಲಾ ನನ್ನ ಬಾಯಿಗೇ ಬಂದು ಬೀಳಲಿ ಎಂದು ಕೇಳಬಹುದು..., ಆದ್ರೆ ನಾವು ನಾಳೆನೂ ಬಾಣಂತಿ-ಮಗು ಮೀಯಿಸಬೇಕಲ್ಲ...'

ಎಂದಿನಂತೆ ಇಂದೂ ತೇಲಿಬಂದ, ಉಮ್ಮಕ್ಕೆ ಶೆಡ್ತಿಯವರ ಉರಿಮಾತು ಖಾದ್ರಿಬ್ಯಾರಿಯವರ ನೆಮ್ಮದಿಯನ್ನು ಕದಡುವಂತಿದ್ದರೂ, ಅವರು ಅದನ್ನು ಆಲಿಸಿಯೂ ಆಲಿಸದವರಂತಿದ್ದು ಇನ್ನೊಂದಷ್ಟು ತೆಂಗಿನ ಗರಿಗಳನ್ನು ಎಳೆದು ಒಲೆಗಂಟಲಿಗೆ ತುರುಕಿಸುವಷ್ಟರಲ್ಲಿ ಶೆಡ್ತಿಯವರು ಉರಿ ಮುಸುಡಿ ಮಾಡಿ ಬಂದೇ ಬಿಟ್ಟರು. ಕಾವಿಗೆ ಕೂತ ಹೇಂಟೆಯಂತೆ – ಅದ್ಯಾವುದೋ ಅಸಮಾಧಾನ, ಅಶಾಂತಿಯಿಂದ ಬೇಯುತ್ತಾ ಬಂದ ಶೆಟ್ಟರ ಮಡದಿಯ ದಿಢೀರ್ ಆಗಮನದಿಂದ ಒಲೆಮುಂದೆ ಕೂತಿದ್ದ ಖಾದ್ರಿಬ್ಯಾರಿಯವರ ಆಸೆಯ ಕಿಡಿಗೆ ತಣ್ಣೀರು ಎರಚಿದಂತಾಯ್ತು!

ಬಾಣಂತಿ ಮೀಯುವ ತಾಮ್ರದ ಹಂಡೆಗೆ ಕಂಠ ಮುಟ್ಟುವಷ್ಟು ನೀರು ತುಂಬಿ, ಒಲೆಗಂಟಲು ಬಿರಿವಷ್ಟು ಸೌದೆ ತುರುಕಿಸಿಟ್ಟು ನೀರನ್ನು ಸಾಕಷ್ಟು ಜಾಸ್ತಿಯೇ ಕಾಯಿಸಿಟ್ಟು...

'ನೀರು ಉಗುರುಬಿಸಿ ಆದ್ರೆ ಸಾಕು ಸ್ಯಾಬೆರೇ... ಇವತ್ತೇ ಎಲ್ಲ ಮರಮಟ್ಟನ್ನು ಆ ಒಲೆಗಂಟಲಿಗೆ ತುರುಕಿದರೆ ನಾಳೆ ಅದರ ಬಾಯಿಗೆ ನಮ್ಮ ಕೈಕಾಲನ್ನು ತುರುಕಿಸುವುದಾ ಹೇಗೆ...? ಆ ಒಲೆಯೇನೊ ಈ ಊರಲ್ಲಿರುವ ಸೌದೆ-ಸೌಟುಗಳೆಲ್ಲಾ ನನ್ನ ಬಾಯಿಗೇ ಬಂದು ಬೀಳಲಿ ಎಂದು ಕೇಳಬಹುದು..., ಆದ್ರೆ ನಾವು ನಾಳೆನೂ ಬಾಣಂತಿ-ಮಗು ಮೀಯಿಸಬೇಕಲ್ಲ...'

'ಓಯ್ ಮಾರಾಯಿತ್ತಿಯೆ... ಒಮ್ಮೆ ಆ ಮಗುವನ್ನು ಮೀಯುಸ್ಸದಕ್ಕೆ ತಗೊಂಬಾರೆ... ಈ ಸ್ಯಾಬರು ಬಾಣಂತಿ - ಮಗುಗೆ ನೀರು ಕಾಯಿಸ್ಸಿದ್ದಲ್ಲ..., ನನ್ನ ಹೆಣ ಮೀಯುಸ್ಸದಕ್ಕೆ ನೀರು ಕಾಸಿದಂತಿದೆ...' ಎಂದು ಗಟ್ಟಿಯಾಗಿ ಒದರುತ್ತಲೇ ತನ್ನ ಬಾಣಂತಿ ಮಗಳು ಸುಮತಿಗಾಗಿ ಫೀಳಿಟ್ಟರು.

ಇನ್ನೇನು ಆ ನೀರೊಳಗೆ ತನ್ನ ವಾತ ಹಿಡಿದ ಕೈಗಳೆರಡನ್ನು ಮೂರ್‍ನಾಕುಗಳಿಗೆ ಅದಿಟ್ಟು... ನಾಕೇ ನಾಕು ಚೊಂಬು ನೀರನ್ನು ನೋವಿನಿಂದ ಮರಗಟ್ಟಿ ಹೋಗಿರುವ ತನ್ನ ಕಾಲ್ಗಂಟುಗಳಿಗೆ ಎರೆದುಕೊಳ್ಳಬೇಕು - ಎಂಬ ಆಸೆಯೆಳೆಯನ್ನು ಅದುವರೆಗೂ ಮೈಯಿಡೀ ಸುತ್ತಿಕೊಂಡು ಹೊಗೆಯ ದೆಸೆಯಿಂದ ಮುದಿ ಕಣ್ಗಳನ್ನು ಕೆಂಪು ಕೇಪಳಹಣ್ಣು ಮಾಡಿ ಕೂತಿದ್ದ ಖಾದ್ರಿಬ್ಯಾರಿಯವರ ಎದೆಯೊಳಗೆ ನಿರಾಸೆಯ ಕಗ್ಗತ್ತಲೆಯೇ ಕವಿದಂತಾಯ್ತು!

ಬಚ್ಚಲುಮನೆಗೆ ಹಾಗೆ ನುಗ್ಗಿ ಬಂದ ಉಮ್ಮಕ್ಕೆಯವರು ಎಂದಿನಂತೆ ನೇರವಾಗಿ ಬಂದು, ಹಂಡೆಯ ಮರದ ಮುಚ್ಚಳ ಸರಿಸಿ ಸಾವಧಾನದಿಂದ ಬಿಸಿನೀರಿಗೆ ಬಲಗೈಯ ಬೆರಳುಗಳಷ್ಟು ಸೋಕಿಸಿದವರೆ,

'ಎಲಾ ನನ ಕರ್ಮವೇ... ಅಲ್ಲಾ ಸ್ಯಾಬೆರೆ, ನಿಮ್ಗೆ ಎಷ್ಟೊಂತ ಹೇಳುದು ಮಾರಾಯ್ರೇ! ಇದು ಮಗು-ಬಾಣಂತಿ ಮೀಯುವ ನೀರಾ ಅಥವ ಹೆಣ ಮೀಯಿಸುವ ನೀರಾ...? ಒಲೆಬಾಯಿಗೆ ಕಸಕಡ್ಡಿ ತಳ್ಳುವುದಕ್ಕೆ ನಿಮ್ಗೆ ಒಂದು ತಲೆಬುಡ ಯಾವ್ದೂ ಇಲ್ಲಾಂತ ಕಾಣೆಸುತ್ತೆ...?'

ಸ್ಯಾಬೆರಿಗೆ ನಯವಾಗಿ ಗದರುತ್ತಲೇ ಉಮ್ಮಕ್ಕೆಯವರು ಉರಿವ ಒಲೆಗಂಟಲತ್ತ ತಿರುಗಬೇಕೆನ್ನುವಷ್ಟರಲ್ಲಿ ಖಾದ್ರಿಬ್ಯಾರಿ ಯವರು ಒಲೆಗೆದುರಾಗಿ ಕೂತವರು ಕೂತಲ್ಲಿಂದ ತಟ್ಟನೆ ಎದ್ದುನಿಂತರು. 'ಒಮ್ಮೆ ನೀವು ಅಡಿ ಸರಿಸಿ ನೋಡುವಾ...' ಎಂದು ಹೇಳುತ್ತಲೇ ಉಮ್ಮಕ್ಕೆಯವರು ತಮ್ಮ ಎರಡೂ ಕೈಗಳಿಂದ, ಒಲೆಗಂಟಲೊಳಗೆ ಭಾರಿ ಸಂಭ್ರಮದಿಂದ ಉರಿಯುತ್ತಿದ್ದ ತೆಂಗಿನ ಕೊತ್ತಳಿಗೆಗಳನ್ನು ಬಲವಾಗಿ ಹೊರಗೆಳೆದು ಹಾಕಿ, ಆಗಲೆ ಅವೆಲ್ಲವನ್ನು ಹೊಸಕಿ ಹಾಕಿದೊಡನೆ ಎದ್ದ ಹೊಗೆರಂಪಕ್ಕೆ ಖಾದ್ರಿಬ್ಯಾರಿಯವರು ಅಂಗಳ ಪಾಲಾದರು.

'ಓಯ್ ಮಾರಾಯಿತ್ತಿಯೆ... ಒಮ್ಮೆ ಆ ಮಗುವನ್ನು ಮೀಯುಸ್ಸದಕ್ಕೆ ತಗೊಂಬಾರೆ... ಈ ಸ್ಯಾಬರು ಬಾಣಂತಿ - ಮಗುಗೆ ನೀರು ಕಾಯಿಸ್ಸಿದ್ದಲ್ಲ..., ನನ್ನ ಹೆಣ ಮೀಯುಸ್ಸದಕ್ಕೆ ನೀರು ಕಾಸಿದಂತಿದೆ...' ಎಂದು ಗಟ್ಟಿಯಾಗಿ ಒದರುತ್ತಲೇ ತನ್ನ ಬಾಣಂತಿ ಮಗಳು ಸುಮತಿಗಾಗಿ ಫೀಳಿಟ್ಟರು.

ಹೊಗೆ ಘಾಟಿನ ಏಟನ್ನಾದರೂ ಸಹಿಸಿಕೊಳ್ಳಬಲ್ಲೆ - ಆದರೆ ಈ ಶೆಡ್ತಿಯವರ ಮಾತಿನ ಏಟನ್ನು ಸಹಿಸಿಕೊಳ್ಳಲಾರೆ ಎಂಬ ನಿಷ್ಠುರ ಭಾವವನ್ನು ಹೊತ್ತು ಖಾದ್ರಿ ಬ್ಯಾರಿಯವರು ಅಂಗಳವಿಳಿದವರು ಅಲ್ಲೆ ಹೊರಪಾಗಾರಕ್ಕೆ ಒರಗಿಸಿಟ್ಟ ತನ್ನ ತಲೆಗೊರಬನ್ನು ತಲೆಗೇರಿಸಿಕೊಂಡು ಮನೆತಡಮೆ ದಾಟಬೇಕೆನ್ನುವಷ್ಟರಲ್ಲಿ, ಉಮ್ಮಕ್ಕೆಯವರಂದ 'ಈ ನೀರು ಹೆಣ ಮೀಯುಸ್ಸದಕ್ಕಾ...' ಎಂಬ ಮಾತಿನೇಟಿಗೆ ಒಂದರೆಗಳಿಗೆ ತತ್ತರಿಸಿದಂತಾಗಿ ದುಃಖದಿಂದ ಅಧೀರ ಹೃದಯ ಹೊತ್ತು ಮನೆತಡಮೆ ದಾಟಿದರು.

ಉಮ್ಮಕ್ಕೆಯವರು ಹಂಡೆಯ ಕುದಿನೀರಿಗೆ ಮೂರು ಕೊಡ ತಣ್ಣೀರು ಬೆರಸುವಷ್ಟರಲ್ಲಿ ಮಗುವನ್ನು ಎತ್ತಿಕೊಂಡು ಬಂದ ಮಗಳು ಸುಮತಿ - ''ಅಲ್ಲಮ್ಮ ಆ ಮುದಿಸ್ಯಾಬರು ಈ ಕಿರಿ ಕಿರಿ ಮಳೆಗೆ ಮುಂಜಾನೆಗೇ ಎದ್ದು ಬಂದು ಇಷ್ಟು ಬೆಂದರ್ ಕಾಯಿಸ್ದ್ದೇ ಹೆಚ್ಚು! ಏನೋ ಆ ಮುದಿವಾತದ ಜೀವ ನಾಕು ಚೊಂಬು ಬಿಸಿನೀರಿಗಾಗಿ ಇನ್ನಿಲ್ಲದಂತೆ ಜೀವಬಿಡುತ್ತೆ, ಅವ್ರೇನು ನಮ್ಮಿಂದ ಉಣ್ಣುವ ಅನ್ನ ಕೇಳ್ತಾರಾ... ಅಥವಾ ಉಡುವ ಬಟ್ಟೆ ಕೇಳ್ತಾರಾ? ಬರೀ ಹೊಯ್ದುಕೊಳ್ಳಲು ಒಂದಷ್ಟು ಬಿಸಿನೀರು ಬಯಸ್ತಿದ್ದಾರೆ ಅಷ್ಟೆ. ಅದುನ್ನೂವೆ ಅವರೇನು ನಮ್ಮಿಂದ ಪುಕ್ಕಟೆಯಾಗಿ ಅವರಾಗಿಯೇ ಬೇಡಿದ್ದಾರಾ...? ನಮ್ಗೆ ಬಾಣಂತಿ ನೀರು ಕಾಯ್ಸಿ ಕೊಡಿ... ನಮ್ಮ ಬಾಣಂತಿ ಮಿಂದಾದ ಮೇಲೆ ನೀವೂ ಒಂದು ಗಡದ್ದಾಗ್ಗಿ ಮಿಂದು ಬಿಡಿ...' ಎಂದು ಅಪ್ಪ ಅವರಿಗೆ ಹೇಳಿ ಒಪ್ಪಸಿದ್ದಲ್ವಾ?''

ಮಗಳ ಮಾತಿನ ಸರಣಿಗೆ ಉಮ್ಮಕ್ಕೆಯವರ ವಿಕ್ಷಿಪ್ತ ಅರಿವು ತಿಳಿಯಾಗತೊಡಗಿತ್ತು. ಮಗು ಮೀಯಿಸುವ ನೀರನ್ನು ಹದಗೊಳಿಸುತ್ತಿದ್ದ ಅವರು ಮಗಳಾಡಿದ



ಮಾತುಗಳನ್ನು ಅತ್ಯಂತ ಪರಿತಾಪದಲ್ಲೇ ಮನನ ಮಾಡಿಕೊಳ್ಳುತ್ತಿದ್ದಂತೆ ಅವರಿಗೆ ತಮ್ಮ ಮಾತಿನ ಬಗ್ಗೆ ಮನದ ಭಾವದ ಬಗ್ಗೆ ಪಶ್ಚಾತ್ತಾಪ ಹುಟ್ಟದಿರಲಿಲ್ಲ. ಅವರಿಗೂ ಖಾದ್ರಿಬ್ಯಾರಿಯವರೆಂದರೆ ಉದಾಸೀನವಿಲ್ಲ - ನಿರ್ಲಕ್ಷವಿಲ್ಲ; ಉಡಾಫೆಯ ಭಾವವೂ ಇಲ್ಲ. ಈ ಮಾನ ತೆಗೆವ ಮಳೆಗಾಲದಲ್ಲಿ 'ಅನಪತ್ಯ'ಕ್ಕೆ ಅಂತಾ ಇಟ್ಟಿದ್ದ ಸೌದೆ-ಸೊಪ್ಪುಗಳೆಲ್ಲವನ್ನು ಖಾದ್ರಿಬ್ಯಾರಿಯವರು ಏನೂ ಫಿಕೀರಿಲ್ಲದಂತೆ ಈ ಬಚ್ಚಲ ಒಲೆಗಂಟಲೆಂಬ ಯಜ್ಞಕುಂಡಕ್ಕೆ ಎಸೆದರೆ ಆ ನಂತರ ಈ ಮಳೆಗೆ ಬಾಣಂತಿ-ಮಗುವನ್ನು ಮೀಯಿಸುವ ಕತೆ ಹೇಗೆ - ಎಂಬ ಆತಂಕದಿಂದಲೇ ದಿನನಿತ್ಯವೂ ಅವರು 'ಬಚ್ಚಲ ಯಜ್ಞಕುಂಡದಿಂದ' ಹೊಗೆ ಎದ್ದಾಕ್ಷಣ 'ಉಗುರುಬಿಸಿನೀರು ಸಾಕು ಸ್ಯಾಬರೇ...' ಎಂಬ ಎಚ್ಚರಿಕೆ ಗಂಟೆಯನ್ನು ಅಬ್ಬರದ ಧ್ವನಿಯಲ್ಲಿ ಮೊಳಗಿಸುತ್ತಿದ್ದರಷ್ಟೆ.

ಖಾದ್ರಿಬ್ಯಾರಿಯವರಿಗೂ ಶೆಟ್ಟರ ಪತ್ನಿ ಉಮ್ಮಕ್ಕೆಯವರ ಅಂತರಂಗ ಏನೆಂಬುದು ತಿಳಿಯದ್ದೇನಲ್ಲ. ಉಮ್ಮಕ್ಕೆಯವರು ಮೈಪಾರ್ಡಿಗುತ್ತಿನ ಸುಸಂಸ್ಕೃತ ಮನೆತನದ ಮಗಳಾಗಿದ್ದು, ಆಕೆಯಲ್ಲಿರುವ ಸ್ತ್ರೀ ಸಹಜವಾದ ಔದಾರ್ಯ, ನಯವಿನಯ, ಕಷ್ಟಸಹಿಷ್ಣುತೆ, ಮನುಷ್ಯತ್ವ ಎಲ್ಲವೂ ಆಕೆಗೆ ತಾಯಿ ಮಾಣ್ಯಕ್ಕೆ ಶೆಡ್ತಿಯವರಿಂದಲೇ ಬಂದಿರುವಂತಹದ್ದು - ಎಂಬ ಮಾತನ್ನು ಅದೆಷ್ಟು ಬಾರಿ ಅವರು ವೆಂಕಪ್ಪಶೆಟ್ಟರಲ್ಲಿ ಹೇಳಿಲ್ಲ. ಇದುವರೆಗೆ ಅದೆಷ್ಟು ಬಾರಿ ಅವರು ಉಮ್ಮಕ್ಕೆಯವರ ಕೈಯಿಂದಲೇ ಎಂತೆಂಥ ಸಹಾಯವನ್ನು ಪಡೆದಿಲ್ಲ. ಆದರೆ ಈ ಕಾರ್ತೆಲ್ ತಿಂಗಳ ಆರಂಭದಿಂದ ಹೀಗೆ ಸುರಿವ ಮಳೆಯ ಕಾರಣದಿಂದಾಗಿ ಖಾದ್ರಿಬ್ಯಾರಿಯವರು ಉಮ್ಮಕ್ಕೆಯವರ ನಡೆ-ನುಡಿ-ವ್ಯವಹಾರಗಳ ಬಗ್ಗೆ ಸಾಂದರ್ಭಿಕವಾಗಿ ವ್ಯತಿರಿಕ್ತವಾದ ತೀರ್ಪನ್ನೇ ನೀಡುವಂತಾಗಿದೆ. ಮನುಷ್ಯ ಬೆಳೆದ ಹಾಗೆ ಆತನ ಮನಸ್ಸು ಮಾತ್ರ ಸಂಕುಚಿತವಾಗತೊಡಗುತ್ತದೆ, ಮುರುಟುತ್ತದೆ ಎಂದು ಹಿರಿಯರು ಹೇಳುವ ಮಾತು ನಿಜವೋ ಏನೋ ಎಂದು ಒಂದರಗಳಿಗೆ ಖಾದ್ರಿಬ್ಯಾರಿಯವರಿಗೆ ಆ ಸಂದರ್ಭದಲ್ಲಿ ಅನಿಸದೆನೂ ಇರಲಿಲ್ಲ.

ಇದೀಗ ಖಾದ್ರಿಬ್ಯಾರಿಯವರು ಉಮ್ಮಕ್ಕೆಯವರ ಬಗ್ಗೇನೇ ಯೋಚಿಸುತ್ತ, ಅದರ ಜೊತೆ ಜೊತೆಗೆ ಈ ತನ್ನ ವಾತದ ಮೈಗೆ ಎಂದು ನಾಕು ಗೆರಟೆ ಬಿಸಿನೀರು ಬಿದ್ದೀತೋ... ಅದು ಹೇಗೆ ಎಲ್ಲಿ ಎಂಬ

'ತಾನೇನು ಆ ಮನೆಯಲ್ಲಿ ಬಿಸಿನೀರು ಮೀಯಬೇಕು ಎಂಬ ಆಸೆಯನ್ನು ಹೊದ್ದುಕೊಂಡು ನಾನಾಗಿಯೇ ಮೇಲೆಬಿದ್ದು 'ಬಾಣಂತಿ ನೀರು ಕಾಯಿಸಿ ಕೊಡುತ್ತೇನೆ' ಎಂದು ಕೇಳಿಕೊಂಡು ಹೋಗಿದ್ದೇನೆಯೇ ? ಈ ಶೆಡ್ತಿ ಯಾಕಾಗಿ ಈ ರೀತಿ ದಿನಾ ನನ್ನ ಮೇಲೆ ಹರಿಹಾಯ್ತಾರೋ...'

ಹಂಬಲ-ಯೋಚನೆಯಲ್ಲಿ ಭಾರವಾದ ಹೆಜ್ಜೆಗಳನ್ನಿಡುತ್ತಲೇ ಕಟ್ಟಹುಣಿಯ ನೀರತೋಡಿನ ಬಳಿ ಬರುವಾಗ ಭರದಿಂದ ಹರಿಯುವ ತೋಡಿನ ನೀರು ಕೂಡಾ ಅವರನ್ನು ಹಾಗೂ ಅವರಾಸೆಯನ್ನು ಕಂಡು ಗಹಗಹಿಸಿ ನಕ್ಕಂತಾಯಿತು.

ಖಾದ್ರಿಬ್ಯಾರಿಯವರು ತಮ್ಮ ಬಿಸಿನೀರಿನ ಆಸೆಯನ್ನಲ್ಲೇ ಮುರುಟಿಸಿಕೊಂಡು ತೋಡು ದಾಟಿದರು.

ತೋಡು ದಾಟಿದರೇನು ಅವರೊಳಗಿನ ಯೋಚನೆ ಮಾತ್ರ ಅವರ ತಲೆಯಿಂದ ದಾಟಿ ಹೋಗಲಿಲ್ಲ. ಉಮ್ಮಕ್ಕೆಯವರು ಅಂದಿದ ನಿಷ್ಠುರದ ಮಾತುಗಳು ಅವರೆದೆಯೊಳಗೆ ಹುದುಗಿ ಕೂತು ಒದ್ದೆ ಎದೆಯನ್ನು ಬಟ್ಟೆ ಹಿಂಡಿದಂತೆ ಹಿಂಡತೊಡಗಿದ್ದವು. ಖಾದ್ರಿಬ್ಯಾರಿಯವರು ಅದೇ ಯೋಚನೆಯ ಸುಳಿಯಲ್ಲಿ ಸಿಲುಕಿ ತೀರಾ ಖಿನ್ನರಾಗಿ ದಾರಿ ಸವೆಸತೊಡಗಿದರು. 'ತಾನೇನು ಆ ಮನೆಯಲ್ಲಿ ಬಿಸಿನೀರು ಮೀಯಬೇಕು ಎಂಬ ಆಸೆಯನ್ನು ಹೊದ್ದುಕೊಂಡು ನಾನಾಗಿಯೇ ಮೇಲೆಬಿದ್ದು 'ಬಾಣಂತಿ ನೀರು ಕಾಯಿಸಿಕೊಡುತ್ತೇನೆ' ಎಂದು ಕೇಳಿಕೊಂಡು ಹೋಗಿದ್ದೇನೆಯೇ ? ಈ ಶೆಡ್ತಿ ಯಾಕಾಗಿ ಈ ರೀತಿ ದಿನಾ ನನ್ನ ಮೇಲೆ ಹರಿಹಾಯ್ತಾರೋ...' ಎಂಬ ಪ್ರಶ್ನೆಯು ಅವರ ಆತ್ಮಗೌರವದ ಪ್ರಶ್ನೆಯಾಗಿ ಅವರನ್ನು ಇನ್ನಿಲ್ಲದಂತೆ ಚುಚ್ಚತೊಡಗಿತ್ತು.

ಉಮ್ಮಕ್ಕೆಯವರು ಆಸ್ತಿ-ಅಂತಸ್ತು-ಸ್ಥಾನಮಾನದಲ್ಲಿ ಖಾದ್ರಿಬ್ಯಾರಿಯವರಿಗಿಂತ ಮೇಲಿದ್ದರೂ, ಆತ್ಮ ಗೌರವ, ಮಾನವತೆ, ಶ್ರಮಸಂಸ್ಕೃತಿ, ಕಷ್ಟಸಹಿಷ್ಣುತೆ, ನಿಸ್ವಾರ್ಥತೆಯಲ್ಲಿ ಇಬ್ಬರೂ ಸಮಾನರೆ. ವಯಸ್ಸಲ್ಲಂತೂ ಖಾದ್ರಿಬ್ಯಾರಿಯವರು ಉಮ್ಮಕ್ಕೆಯವರ ತಂದೆ ಕರಿಯಶೆಟ್ಟರಿಗೆ ಸಮಾನರು. ಖಾದ್ರಿಬ್ಯಾರಿಯವರಿಗೆ ಮೈರ್ಪಾಡಿಗುತ್ತಿನ ಕರಿಯಶೆಟ್ಟರಲ್ಲಿ ಅದೆಷ್ಟು ಗೌರವ, ವಿಶ್ವಾಸ, ಸಲಿಗೆ, ಅಭಿಮಾನ ಇದೆಯೋ ಅಷ್ಟೇ ಅಥವಾ ಅದಕ್ಕಿಂತ ಒಂದು ಮುಷ್ಠಿ ಜಾಸ್ತಿಯೇ ಪ್ರೀತಿ-ಅಭಿಮಾನ ಗೌರವ ಈ ವೆಂಕಪ್ಪಶೆಟ್ಟರ ಕುಟುಂಬದ ಮೇಲಿದೆ. ಮೊನ್ನೆ ಮೊನ್ನೆ ತನ್ನ ಮೊಮ್ಮಗಳ ಪ್ರಾಯದವಳಾದ ಸುಮತಿಯ ಬಾಣಂತನಕ್ಕೆ 'ಬಾಣಂತಿ ಮದ್ದು' ತಯಾರಿಸಲು ಊರಿಡೀ ಹುಡುಕಿ ಓಲೆಬೆಲ್ಲ ತಲಾಶ್ ಮಾಡಿ ತಂದುಕೊಟ್ಟವರಾರು? ಇದೇ ಖಾದ್ರಿಬ್ಯಾರಿಯವರು. ಊರೆಲ್ಲ ಹುಡುಕಿದರೂ, ನಾಕು ಕಾಸು ಜಾಸ್ತಿಯೇ ಕೊಡುತ್ತೇನೆಂದರೂ ವೆಂಕಪ್ಪಶೆಟ್ಟರಿಗೆ ದೊರಕದ 'ಓಲೆಬೆಲ್ಲ', ಸುಂದರ ಪೂಜಾರಿ ಮನೆಯಲ್ಲಿ ಖಾದ್ರಿಬ್ಯಾರಿಯವರಿಗೆ ದೊರಕಿತ್ತು. ತಾನೇ ದುಡ್ಡುಕೊಟ್ಟು ತಂದು 'ಅವಳು ನನ್ನ ಮೊಮ್ಮಗಳು ಖೈರುವಿನ ಸಮಾನ...' ಎಂದನ್ನುತ್ತ ಓಲೆಬೆಲ್ಲದ ಹಣವನ್ನು ಶೆಟ್ಟರು ಜುಲುಮೆ ಮಾಡಿಕೊಟ್ಟರೂ ಅವರು ಸುತರಾಂ ಮುಟ್ಟಿರಲಿಲ್ಲ.

ಮೊನ್ನೆಯ ಭೇಷ ತಿಂಗಳ ಶುರುವಿರಬೇಕು. ಖಾದ್ರಿಬ್ಯಾರಿಯವರು ಮುಂಜಾನೆಯ ನಮಾಜು ಮುಗಿಸಿ ಬಂದು, ಚಾಯಬ್ಬಬ್ಯಾರಿಯ ಗೂಡಂಗಡಿಯ ಹೊರಜಗಲಿಯಲ್ಲಿರುವ ಬೆಂಚಿನ ಮೇಲೆ ಕುಳಿತು ಅರೆಗಳಿಗೆ ಕಳೆದಿದೆಯಷ್ಟೆ. ಅದೇ ಗಳಿಗೆಗೆ ತಮ್ಮ ಬೈಲುಗದ್ದೆಗಳ ವಿಚಾರಣೆಗೆಂದು ಪಡ್ಲಾಗೆ ಹೊರಟಿದ್ದ ವೆಂಕಪ್ಪಶೆಟ್ಟರಿಗೆ ಖಾದ್ರಿಬ್ಯಾರಿಯವರ ಹಸಿರು ರುಮಾಲು ಕಣ್ಣಿಗೆ ಬಿದ್ದಿದೆ! ತಮ್ಮ ಅಂತರಂಗದ ಅಹವಾಲನ್ನು ಖಾದ್ರಿಬ್ಯಾರಿಯವರ ಮುಂದೆ ಬಿಡಿಸಿಟ್ಟರೆ ತನ್ನ ಕೆಲಸ ಹಣ್ಣಾಗಬಹುದು ಅಥವಾ ಒಂದು ಒಳ್ಳೆಯ ಸಲಹೆಯಾದರೂ ಸಿಗಬಹುದು ಎಂಬ ದೂರದಾಸೆಯಿಂದ ಶೆಟ್ಟರು ಹತ್ತಿರ ಬಂದವರೇ 'ಸ್ಯಾಬೆರೇ ನಾನೀಗ ಒಂದು ದೊಡ್ಡ ಮುಷ್ಕಿಲಲ್ಲಿ ಸಿಕ್ಕಿಹಾಕಿಕೊಂಡಿದ್ದೇ ನಲ್ಲವಾ...? ನಮ್ಮ ಸುಮತಿಯ ಹೆರಿಗೆಯ ದಿನ ಹತ್ತಿರ ಬಂದಾಗಿದೆ. ಬಾಣಂತಿ ಸಾಕುದಕ್ಕೆ ನಮ್ಮವಳೇ ಇದ್ದಾಳೆ. ಹೆರಿಗೆ ಮಾಡಿಸುವ ದೇಯಿ ಪದೆತಿಗೆ, ಹೆರಿಗೆಯ ಹಿಂದೆ ಮುಂದಿನ ದಿನಗಳಲ್ಲಿ ನಮ್ಮಲ್ಲೇ ಇರಬೇಕೆಂದು ಹೇಳಿಯೂ ಆಗಿದೆ. ಆದರೆ ಈ ಒಂದು ಮಳೆ ಶುರುವಾದರೆ... ಬಾಣಂತಿ ನೀರು ಕಾಯಿಸುದಕ್ಕೆ ಈಗ ಯಾವ ನರಿನಾಯಿಯೂ ಒಪ್ಪುತ್ತಿಲ್ಲ ಮಾರಾಯ್ರೆ...! ನಮ್ಮ ಬಿಡಿ ಒಕ್ಕಲು-ಪುಡಿ ಒಕ್ಕಲು ಮಕ್ಕಳನ್ನೆಲ್ಲ ಕೇಳಿಯಾಯ್ತು - ಈಗ ನಾನವರ ಕೈಕಾಲು ಹಿಡಿದು ಬೇಡುವುದೊಂದು ಬಾಕಿ ಇದೆ ಅಷ್ಟೆ. ನಿಮ್ಮ ಗೊತ್ತಲ್ಲಿ ಯಾರಾದ್ರೂ ಇದ್ರೆ ಹೇಳಿ ಸ್ಯಾಬೆರೆ...'

'...ನನ್ನ ಗೊತ್ತಲ್ಲಿ ಯಾರಿದ್ದಾರೆ ಶೆಟ್ರೇ...! ನನ್ನದೀಗ ಊರ ದೂರಾಯ್ತು. ಕಾಡು ಹತ್ತಿರವಾಯ್ತು ಎಂಬಂಥ ಕತೆ. ಅಲ್ಲಾ... ನಿಮ್ಗೆ ಯಾರು ಸಿಗದಿದ್ರೆ ನಾನೇ ಬಂದು ಬಾಣಂತಿ ನೀರು ಬಿಸಿಮಾಡಿ ಕೊಡ್ತೇನೆ... ಆಗ್ಬೋದಾ ಅಂತಾ ನಿಮ್ಮ 'ಯಜಮಾನ್ತಿಯಲ್ಲೊಮ್ಮೆ ಕೇಳಿ ನೋಡಿ ಶೆಟ್ರೇ.'

'ಅವಳಲ್ಲೆಂಥದ್ದು ಕೇಳುದು...? ಕೋಳಿಯಲ್ಲೇ ಕೇಳಿ ಮಸಾಲೆ ಅರಿ ಎಂದು ಹೇಳಿದ ಹಾಗಾಯ್ತು ನಿಮ್ಮ ಪಂಚಾತಿಕೆ. ಅಲ್ಲಾ ಸ್ಯಾಬೆರೆ ನೀವು ನಮ್ಮಲ್ಲಿಗೆ ಸುಮ್ಮನೆ ಬಂದು ನೀರು ಕಾಯಿಸುದು ಬೇಡಾ..., ನಿಮಗೆ ಬಾಣಂತಿ ನೀರು ಮುಗಿದ ಮೇಲೆ 'ಇಂತಿಷ್ಟು' ಅಂತಾ ನಾನು ಕೊಟ್ಟೇ ಕೊಡುವುದು ಸೈ. ಅದೂ ಅಲ್ಲದೆ ನಿಮ್ಗೆ ಬಿಸಿನೀರು ಅಂದ್ರೆ ಎಷ್ಟು ಜೀವ ಅಂತಾ ನನಗೆ ಗೊತ್ತಿಲ್ವಾ..., ದಿನಾ ಬಾಣಂತಿ ಮಿಂದಾದ ಮೇಲೆ ಅದೇ ನೀರಲ್ಲಿ ನೀವೂ ಒಂದು ಗಡದ್ದ್ ಮಿಂದು ಬಿಡಿ. ನಿಮ್ಮ ವಾತದ ಮೈಗೆ ಅದೇ ಒಂದು ದೊಡ್ಡ ಮದ್ದು... ಆಗದಾ'

ಶೆಟ್ಟರಿಂದ 'ಮೀಯುವ ಮಾತು' ಬಂದೊಡನೆ ಖಾದ್ರಿಬ್ಯಾರಿಯವರು ಹಿಂದು ಮುಂದು ನೋಡದೆ 'ಆ ಮಗು ಸುಮತಿ ಬೇರೆ ಅಲ್ಲ... ನನ್ನ ಮೊಮ್ಮಗಳು ಅದೇ ಮಗಳ ಮಗಳು ಖೈರುನ್ನೀಸಾ ಬೇರೆ ಅಲ್ಲ..., ನೀವೊಮ್ಮೆ ಸುಮ್ಮನಿದ್ದು ಬಿಡಿ ಶೆಟ್ರೇ..., ಎಂತಹ ಊರುತೆಗೆವ ಮಳೆಬಂದರೂ ಬಾಣಂತಿಗೆ ನೀರು ಕಾಯಿಸುವ ಜವಾಬ್ದಾರಿ ನಂಗೆ ಬಿಡಿ'. ಶೆಟ್ಟರು ನಿರಾಳರಾದರು.

ವೆಂಕಪ್ಪ ಶೆಟ್ಟರಿಗೆ ಖಾದ್ರಿಬ್ಯಾರಿಯವರ ಮಾತಿನ ಬಗ್ಗೆ ಇರುವ ವಿಶ್ವಾಸ ಈಗಿನದ್ದಲ್ಲ. ಸ್ಯಾಬರು ಎಂದೂ ಕೊಟ್ಟ ಮಾತಿಗೆ ತಪ್ಪಿದ ಮನುಷ್ಯನೇ ಅಲ್ಲ. ಕೃತಜ್ಞತಾಭಾವದಿಂದ ಶೆಟ್ಟರು ಖಾದ್ರಿಬ್ಯಾರಿಯವರ ಕೈಗಳನ್ನು ಕಣ್ಣಿಗೊತ್ತಿ 'ತನ್ನ ಕೆಲಸ ಫೈಸಲ್ ಆಯಿತು' ಎಂಬ ಭಾವಹೊತ್ತು ಪಡುವಣದ ಗದ್ದೆಗಳತ್ತ ನಡೆದಿದ್ದರು.

ಕೊಟ್ಟ ಮಾತಿನಂತೆ ಖಾದ್ರಿಬ್ಯಾರಿಯವರು ವೆಂಕಪ್ಪ ಶೆಟ್ಟ ಮನೆಯ ಮಗು-ಬಾಣಂತಿಗೆ ಬಾಣಂತಿನೀರು ಕಾಯಿಸಲಾರಂಭಿಸಿ ಅಂದಿಗೆ ನಲವತ್ತನೇ ದಿನ. ಇಷ್ಟು ದಿನಗಳಲ್ಲಿ ನೀರು ಕಾಯಿಸಲಾರಂಭಿಸಿದ ಖಾದ್ರಿಬ್ಯಾರಿಯವರು ಮಗು-ಬಾಣಂತಿ ಮಿಂದಾದ ನಂತರ ತಮ್ಮ ವಾತ ಹಿಡಿದ ಕೈ-ಕಾಲ ಗಂಟುಗಳಿಗೆ ಕೇವಲ ಏಳೆಂಟು ಬಾರಿ ಬಿಸಿನೀರ ಅಭ್ಯಂಜನ ಮಾಡಿಸಿದ್ದಿರಬಹುದು. ಆದರೆ ಇಡೀ ದೇಹಕ್ಕೆ ಬಿಸಿನೀರ ಅಭ್ಯಂಜನ ಮಾಡಿಕೊಳ್ಳುವ ಯೋಗವೆಂದೂ ಅವರಿಗೆ ಶೆಟ್ಟರ ಆ ಬಚ್ಚಲು ಮನೆಯಲ್ಲಿ ಇದುವರೆಗೂ ಲಭ್ಯವಾಗಿಲ್ಲ. ಆದರೆ ವೆಂಕಪ್ಪಶೆಟ್ಟರು ಖಾದ್ರಿಬ್ಯಾರಿಯವರಿಗೆ ಕೊಟ್ಟ ಬಾಯ್ಮಾತಿನಂತೆ, ಇಂದಿನವರೆಗೆ ಅವರಿಗೆ ನಲವತ್ತು ದಿನಗಳ ಬಿಸಿನೀರ ಅಭ್ಯಂಜನದ ಸುಖ ದೊರಕಬೇಕಿತ್ತು.

ಆದರೆ ಶೆಟ್ಟರು ಸ್ಯಾಬರಿಗೆ ಕೊಟ್ಟ ವಾಗ್ದಾನವನ್ನು ಈಡೇರಿಸಿಕೊಳ್ಳಲು ಶೆಟ್ಟರ ಪತ್ನಿ ಉಮ್ಮಕ್ಕೆಯವರು ಅವಕಾಶ ಕೊಟ್ಟರೆ ತಾನೆ! ಖಾದ್ರಿಬ್ಯಾರಿಯವರನ್ನು ಇಲ್ಲಿ ಬಚ್ಚಲು ಮನೆಯಲ್ಲಿ ಮೀಯಲು ಬಿಡಬಾರದು ಎಂಬ 'ಹಠದ ಭಾವ' ಮಾತ್ರ ಉಮ್ಮಕ್ಕೆಯವರಲ್ಲಿ ಖಂಡಿತಾ ಇಲ್ಲ. ಈ ಮಳೆಗಾಲದಲ್ಲಿ... ಮಳೆಗಾಲದ ಅನಪತ್ಯಕ್ಕೆಂದೇ ಇಟ್ಟಿದ್ದ ಸೌದೆಗಳನ್ನೆಲ್ಲ ಈಗಲೇ ಬಿಟ್ಟಿ ಬಿಸಿನೀರು ಕಾಯಿಸಿದರೆ ನಾಳೆಗೇನು ಎಂಬ ಕಾಳಜಿ-ಆತಂಕದಲ್ಲಿ ಬೇಯುತ್ತಿದ್ದ ಉಮ್ಮಕ್ಕೆಯವರಿಗೆ, ತನ್ನ ಗಂಡ ಖಾದ್ರಿಬ್ಯಾರಿಯವರ ಜತೆ ಮಾಡಿಕೊಂಡಿರುವ 'ಮೀಯುವ ಒಪ್ಪಂದ' ಒಂಥರದಲ್ಲಿ ಅಸಮಾಧಾನವನ್ನು ಮಾತ್ರ ತಂದಿದೆ. ಆದರೆ ಆಕೆ ಈ ರೀತಿ ಅಸಮಾಧಾನಪಡುವುದು ತಪ್ಪು ಎನ್ನುವ ಹಾಗೂ ಇಲ್ಲ. ಎಂತಹ ತಾಯಿಯೂ ಮೊದಲು ತೋರುವ ಕಾಳಜಿ, ಪ್ರೀತಿ ತನ್ನ ಸ್ವಂತ ಬಳ್ಳಿಗೆ ತಾನೇ. ನಂತರವಷ್ಟೆ ಸುತ್ತಲ ಬಳ್ಳಿ-ಜೀವಗಳಿಗೆ. 'ಇಂಥಾ ಪೋಕಾಲದ ಮಳೆಯಲ್ಲಿ... ಇಷ್ಟೊಂದು ಸೌದೆ-ತರಗಲೆಯ ಸಮಸ್ಯೆ ಇರುವಾಗ, ನಮ್ಮ ಮಗು-ಬಾಣಂತಿಗೆ ನೀರು ಕಾಯಿಸುದೇ ಕಷ್ಟ. ಬೇಕಾದರೆ ಒಂದ್ನಾಕು ಕಾಸು ಜಾಸ್ತಿಯೇ ಹೋಗಲಿ ಒಂದು ಆಳನ್ನು ಇಟ್ಟು ಬಾಣಂತಿಗೆ ನೀರು ಕಾಯಿಸುವ ವ್ಯವಸ್ಥೆ ಮಾಡ್ತಿದ್ರೆ ಆಗ್ತಿರ್ಲಿಲ್ವಾ...? ದುಡ್ಡು ಕೊಟ್ರೂ ಒಣ ಸೌದೆ ಸಿಗದ ಈ ಥಂಡಿ ಕಾಲದಲ್ಲಿ... ಇವ್ರು ಹೋಗಿ ಹೋಗಿ... ಆ ಕಣ್ಣಲ್ಲಿ ಮಾತ್ರವೇ ಜೀವ ಇಟ್ಟುಕೊಂಡಿರುವ, ಬಿಸಿನೀರಿಗೆ ಜೀವ ಬಿಡುವ ಆ ಮುದಿಸ್ಯಾಬರಿಗೆ ಹೇಳುದಾ...? ಈ ಸ್ಯಾಬ್ರಾದ್ರು ಬಯಕುದೇನು! ಕಾಸೂ ಅಲ್ಲ ಕಾಣಿಯೂ ಅಲ್ಲ..., ಮೀಯುದ್ದಕ್ಕೆ ಬಾಣಂತಿ ಬಿಸಿ ನೀರು! ಇದೆಂಥಾ ಪೋಕಾಲದ ಪಾಯಿಂಟಪ್ಪ?'

ಗಂಡ ವೆಂಕಪ್ಪಶೆಟ್ಟರು ಖಾದ್ರಿಬ್ಯಾರಿಯವರ ಜತೆಗೆ 'ಬಿಸಿನೀರ ಒಪ್ಪಂದ' ಮಾಡಿಕೊಂಡು, ಬಂದಾಗಿನಿಂದಲೂ ಉಮ್ಮಕ್ಕೆಯವರಿಗೆ ಜೀವದಲ್ಲಿ ಸಹನೆಯೆಂಬುದಿಲ್ಲ. ಈ ಬಗ್ಗೆ 'ಗಂಡನ ಜತೆ ಹಲವು ಬಾರಿ ವಾದಿಸಿಯೂ ಆಗಿದೆ.'

'ಬಚ್ಚಲು ಮನೆಯಲ್ಲಿ ಬಾಣಂತಿ-ಮಗುವಿಗೆ ನೀರು ಹಾಕುವಾಗ ಈ ಸ್ಯಾಬರದ್ದೇನು ಹೊಸ ಪಂಚಾತಿಕೆ! ಇವರಿಗೆ ಬಿಸಿನೀರು ಆಸೆ ನೀಗಿಸಿಕೊಳ್ಳಲು ಸಿಕ್ಕಿದ್ದು ನಮ್ಮ ಹಿತ್ಲೇನು? ಅವರ ಸೊಸೆ ನಫೀಸಮ್ಮನಿಗೇನು ದಾಡಿ, ದಿನಾ ಮಾವನಿಗೊಂದು ಗುರ್ಕೆ ಬಿಸಿನೀರು ಕಾಯಿಸಿ ಕೊಡುವುದಕ್ಕೆ...? ಈ ಮಳೆಗಾಲದಲ್ಲಿ ದುಡ್ಡು ಕೊಟ್ರೆ ಒಣಗಿದ ಉರುವಲು ಸಿಗುವುದಾದರೆ ಆ ಸ್ಯಾಬರಿಗೆ ಒಂದು ಹಂಡೆ ಯಾಕೆ, ಎರಡು ಹಂಡೆ ನೀರು ಬಿಸಿ ಮಾಡಿ ಮೀಯಿಸುವ... ಆಗದಾ?'- ಉಮ್ಮಕ್ಕೆಯವರು ಶೆಟ್ಟರ ಜತೆ ಹೀಗೆ ವಾದದ ಮಾಲೆ ಹಿಡಿದಾಗಲೆಲ್ಲ, ಶೆಟ್ಟರನ್ನುತ್ತಿದ್ದ ಸಮಾಧಾನ, ಸಂಯಮದ ಮಾತನ್ನು ಶೆಡ್ತಿಯವರು ಕಿವಿಯ ಒಳಗೂ ಸೇರಿಸಿಕೊಳ್ಳುತ್ತಿರಲಿಲ್ಲ.

ವೆಂಕಪ್ಪಶೆಟ್ಟರು, ಅತ್ಯಂತ ತಾಳ್ಮೆಯಿಂದ ತಮ್ಮ ಮಡದಿಗೆ ಹೇಳುವಷ್ಟು ಹೇಳಿ ನೋಡಿದರು. ಆಕೆಯದ್ದೇ ವಾದ ಬಿಗಿಯಾಗತೊಡಗಿದಾಗ ಶೆಟ್ಟರು ''ಏಯ್ ಬಿಕನಾಸಿ, ಈ ಮಳೆಯ ವರಾತಕ್ಕೆ ಮಣ್ಣಂಗಿ ಹೋದ ನಿನ್ನಪ್ಪ ಬಂದು ಬಾಣಂತಿನೀರು ಬಿಸಿಮಾಡ್ತಾನೇನೆ? ಆ ನಿನ್ನ ಬಿಡಿ ಒಕ್ಕಲ ಮಕ್ಕಳು ನೋಡಿದ್ರೆ ನಿನ್ನ ಹಿತ್ಲ ಕಡೆ ತಲೆ ಹಾಕಿ ಮಲಗಲ್ಲ. ಅವುಗಳಿಗೆ ಬಂದಿರುವ ದಪ್ಪ ಥರ್ಬಿ ಇಳಿಸ್ಬೇಕಾದ್ರೆ ಆ ಚಾವಡಿಯೊಳಗಿನ ಭೂತ ಪಂಜುರ್ಲಿಯೆ ಬರಬೇಕು ಅಷ್ಟೆ. ಇಂತಹ ಇಕ್ಕಟ್ಟಿನ ಜಂಬರದಲ್ಲಿ ಬಿದ್ದು ನಾನು ಒದ್ದಾಡ್ತಿದ್ರೆ... ನನ್ನನ್ನು ಆದರಿಸಿ ಹಿಡಿದವರೇ ಆ ಖಾದ್ರಿಬ್ಯಾರಿಯವರು. ಯಾವುದೇ ವಾತ ಹಿಡಿದ ಜೀವಕ್ಕೆ 'ಬಿಸಿನೀರೆಂದ್ರೆ ಪ್ರಾಣ' ಅಂತಾ ನನಗೊತ್ತಿಲ್ಲವಾ? 'ಎರಡೊತ್ತು ಊಟ ಇರದಿದ್ರೂ ದೊಡ್ಡದಲ್ಲ. ಒಂದೊತ್ತು ಮೀಯುದ್ದಕ್ಕೆ ಬಿಸಿನೀರು ಮಾಡಿ ಕೊಡಮ್ಮ' ಎಂದು ಇವರು ಸೊಸೆಗೆ ಎಷ್ಟು ದೊಗ್ಗಲು ಸಲಾಂ ಹಾಕಿದ್ರೂ... ಆಕೆ ಬಿಸಿನೀರ ಹನಿ ಸೋಕಿಸ್ತಿಲ್ಲ ಎಂದು ಸ್ಯಾಬರು ಎಂದೋ ಹೇಳಿದ್ದು ನನಗೆ ನೆನಪಲ್ಲಿದ್ದುದರಿಂದಲೇ ನಾನು ಅವರನ್ನು ಒತ್ತಾಯದಿಂದ ಈ 'ಬಿಸಿನೀರ ಒಪ್ಪಂದ'ಕ್ಕೆ ಒಪ್ಪಿಸಿದ್ದು. ಅವ್ರು ಬಾಣಂತಿ ಏಳುವವರೆಗೆ ಮಾತ್ರವೇ ನಮ್ಮ ಬಚ್ಚಲ ಮನೆಯಲ್ಲಿ ಮೀಯುವುದಲ್ಲ... ಬಾಣಂತಿ ಎದ್ದ ನಂತರವೂ ಇಲ್ಲೇ ಬಿಸಿನೀರು ಕಾಸಿಕೊಂಡು ಮೀಯುತ್ತಾರೆ..., ಈಗೇನಂತೆ ನಿನ್ನ ಮಸಾಲತ್ತು' - ಎಂದು ಕಣ್ಣಲ್ಲೇ ಕೆಂಡ ಕಾರಿಸುತ್ತ ಹೆಂಡತಿಯ ಬಾಯ್ಮುಚ್ಚಿಸಿದ್ದರು.

ಆ ಕ್ಷಣಕ್ಕೆ ಉಮ್ಮಕ್ಕೆಯವರ ಬಾಯೇನೋ ಮುಚ್ಚಿರ ಬಹುದು. ಆದರೆ ಖಾದ್ರಿಬ್ಯಾರಿಯವರು ಎಂದು ಶೆಟ್ಟರ ಮನೆಯಬಚ್ಚಲು ಮನೆಯಲ್ಲಿ ಉರಿ ಹಾಕತೊಡಗಿದರೋ ಅಂದಿನಿಂದಲೇ ಉಮ್ಮಕ್ಕೆಯವರು, ಸ್ಯಾಬರ ಒಳಜೀವಕ್ಕೆ ಕಿರಿ ಕಿರಿ ಹುಟ್ಟಿಸುವಂತೆಯೂ, ಆತ್ಮಗೌರವಕ್ಕೆ ಧಕ್ಕೆಯಾಗುವಂತೆಯೂ ವರ್ತಿಸತೊಡಗಿದ್ದರು. ಖಾದ್ರಿಬ್ಯಾರಿಯವರು ತಮ್ಮ ಕಣ್ಣುಗಳನ್ನು ಕೇಪಳಹಣ್ಣು ಮಾಡಿಕೊಂಡು ಹೊಗೆಘಾಟಿನೊಂದಿಗೆ ಗುದ್ದಾಡುತ್ತ ಹಂಡೆ ನೀರನ್ನು ಬಿಸಿ ಮಾಡಿ ಇಟ್ಟಾಕ್ಷಣ ಮಗುವಿನೊಂದಿಗೆ ನುಗ್ಗಿ ಬರುತ್ತಿದ್ದ ಉಮ್ಮಕ್ಕೆಯವರು ತಕ್ಷಣ ಮಗು-ಬಾಣಂತಿಯನ್ನು ಮೀಯಿಸುವ ಏರ್ಪಾಡು ಮಾಡಿ ಬರೀ ಮೂರ್ನಾಕು ಗೆರಟೆ ನೀರನ್ನಷ್ಟೆ ಹಂಡೆಯಲ್ಲಿ ಉಳಿಸಿ ಮಿಕ್ಕೆಲ್ಲವನ್ನು ಮಗು-ಬಾಣಂತಿಗೆ ಎರೆದುಬಿಡುತ್ತಿದ್ದು ಇಷ್ಟಕ್ಕೂ ಸಮಾಧಾನವಿಲ್ಲವೆಂಬಂತೆ ಒಲೆಗಂಟಲಿಗೆ ನೀರು ಹನಿಸಿಬಿಟ್ಟು ಒಲೆಬಾಯನ್ನು ತಂಪುಗೊಳಿಸಿಬಿಡುತ್ತಿದ್ದರು. ಆ ಹನಿದ ಒಲೆಗಂಟಲಿಗೆ ಮತ್ತೆ ಆ ಕ್ಷಣದಲ್ಲಿ ಉರಿಹಾಕಬೇಕೆಂದರೆ ಭೂತ ಪಂಜುರ್ಲಿಯೇ ಮಾಯ ತೋರಬೇಕು ಅಷ್ಟೆ. ಖಾದ್ರಿಬ್ಯಾರಿಯವರಿಗೆ ಉಮ್ಮಕ್ಕೆಯವರ ಆ ಕ್ಷಣದ ವರ್ತನೆ ಬಗ್ಗೆ ಯೋಚಿಸಲು ಏನೂ ತೋಚದಂತಾಗದೆ ತಕ್ಷಣ ನಿಡುಸುಯ್ಲೊಂದನ್ನು ಬಿಡುತ್ತಾ ಮೌನವಾಗಿ ಎದ್ದು ಹೊರಡುತ್ತಿದ್ದರು.

'ಇಂಥಾ ಪೋಕಾಲದ ಮಳೆಯಲ್ಲಿ... ಇಷ್ಟೊಂದು ಸೌದೆ-ತರಗಲೆಯ ಸಮಸ್ಯೆ ಇರುವಾಗ, ನಮ್ಮ ಮಗು-ಬಾಣಂತಿಗೆ ನೀರು ಕಾಯಿಸುದೇ ಕಷ್ಟ. ಬೇಕಾದರೆ ಒಂದ್ನಾಕು ಕಾಸು ಜಾಸ್ತಿಯೇ ಹೋಗಲಿ ಒಂದು ಆಳನ್ನು ಇಟ್ಟು ಬಾಣಂತಿಗೆ ನೀರು ಕಾಯಿಸುವ ವ್ಯವಸ್ಥೆ ಮಾಡ್ತಿದ್ರೆ ಆಗ್ತಿರ್ಲಿಲ್ವಾ..? ದುಡ್ಡು ಕೊಟ್ರೂ ಒಣ ಸೌದೆ ಸಿಗದ ಈ ಥಂಡಿ ಕಾಲದಲ್ಲಿ... ಇವ್ರು ಹೋಗಿ ಹೋಗಿ...

ವಾರ್ಷಿಕ ವಿಶೇಷಾಂಕ ೨೦೦೫

ಇತ್ತಿತ್ತಾಗ್ಲೆ, ಕೆಲದಿನಗಳಿಂದ ಸ್ಯಾಬರು ಒಲೆಗಂಟಲೆದುರು ಕೂತಾಗಲೆಲ್ಲ ಉಮ್ಮಕ್ಕೆಯವರು ಪಡಸಾಲೆಯಿಂದಲೇ - 'ಒಲೆಗಂಟಲಿಗೆ ನಾಲ್ಕು ಬಾಯಿ ಸೌದೆ ತುರುಕಿದರೆ ಸಾಕು ಸ್ಯಾಬರೇ; ಸಾಕು ಉರಿ ನಿಲ್ಸಿ... ಉಗುರು ಬಿಸಿ ಸಾಕು..., ಮೀಯಿಲಿಕ್ಕಿರುವುದು ಮಗು-ಬಾಣಂತಿ ಅಷ್ಟೇ..' ಎಂದು ಏರುದನಿಯಿಂದ ಹೇಳುವಾಗಲೆಲ್ಲ ಖಾದ್ರಿಬ್ಯಾರಿಯವರ ಜೀವ ಹಿಡಿ ಜೀವವಾಗುತ್ತಿತ್ತು. ಅವರ ಎದೆಯೊಳಗೆ ನಿರಾಶೆಯ ಕಗ್ಗತ್ತಲೇ ಕವಿಯುತ್ತಿತ್ತು. ಕಣ್ಣೂ ಹನಿಗಣ್ಣಾಗುತ್ತಿತ್ತು.

ನನಗೆ ಈ ಅಂಗಳದ ಬಿಸಿನೀರೂ ಬೇಡ... ಸುಡುನೀರೂ ಬೇಡಾ... ಎಂದು ಅವರಿಗೆ ಅನೇಕ ಬಾರಿ ಅನಿಸಿದ್ದರೂ, ತನ್ನ ಮೊಮ್ಮಗಳ ಸಮಾನಳಾದ, ಅದರಲ್ಲೂ ತನ್ನ ಬಗ್ಗೆ ಜೀವವನ್ನೇ ಇಟ್ಟುಕೊಂಡಿರುವ ಆ ಬಾಣಂತಿ, ತಾನು ಇದ್ದಕ್ಕಿದ್ದಂತೆ ನೀರು ಕಾಯಿಸುವ ಕೆಲಸವನ್ನಲ್ಲೇ ಬಿಟ್ಟರೆ ಎಷ್ಟು ನೊಂದುಕೊಂಡಾಳೋ ಎಂಬ ಹಿಂಜರಿಕೆಯಿಂದಲೇ ಅವರು ಇಂದಿನವರೆಗೂ ಆ ಕಾಯಕವನ್ನು ಅಷ್ಟೇ ಮುತುವರ್ಜಿಯಿಂದ ಮುಂದುವರಿಸಿದ್ದಾರೆ. ಆದರೆ ಅವರು ಆ ಬಚ್ಚಲು ಮನೆಯಲ್ಲಿ ಇದುವರೆಗೂ ಒಂದು ಬಾರಿಯೂ ಮಿಂದಿಲ್ಲ.

ಖಾದ್ರಿಬ್ಯಾರಿಯವರಿಗೇನು ಆ ಅಂಗಳ- ಆ ಮನೆ ಮಂದಿ ನಿನ್ನೆ ಮೊನ್ನೆಯ ಪರಿಚಯವೇನಲ್ಲ. ವೆಂಕಪ್ಪಶೆಟ್ರ ಅಪ್ಪ ಕುಡುಪ್ಪಶೆಟ್ರ ಕಾಲದಿಂದಲೂ ಅವರು ಆ ಅಂಗಳದಲ್ಲೇ ಓಡಾಡಿ ಈಗ ಮುಪ್ಪು ಕಂಡವರು. ಹುಡುಗು ಪ್ರಾಯದಲ್ಲಿ ಅಪ್ಪನ ಜತೆ ಸೇರಿ ಮಣಿಸರ-ಮೆಣಸಿನ ವ್ಯಾಪಾರಕ್ಕಾಗಿ ಬಡಗುದಿಕ್ಕಿನ ಗಟ್ಟವನ್ನೇರಿದ ಖಾದ್ರಿಸ್ಯಾಬರು, ಕ್ರಮೇಣ ಅಲ್ಲಿನ ಗೌಡ್ತಿಯರ ಕಾಟ ತಾಳಲಾರದೆ, ಏಳೆಂಟು ವರುಷಗಳಲೆ ಅಲ್ಲಿನ ವ್ಯಾಪಾರ ವಹಿವಾಟುಗಳನ್ನು ಕೈದು



ಮಾಡಿ, ಅಪ್ಪನ ಜತೆಗೂಡಿ ಕನ್ನಡ ಜಿಲ್ಲೆಯಲ್ಲೇ ವ್ಯಾಪಾರಕ್ಕೆ ಅಡಿಗಲ್ಲಿಟ್ಟಿದ್ದರು.

ಖಾದ್ರಿಸ್ಯಾಬರು ಎಂದೂ ಒಂದೇ ವ್ಯಾಪಾರಕ್ಕೆ ಜೋತುಬಿದ್ದವರಲ್ಲ. ಆರಂಭದಲ್ಲಿ ಮಣಿಸರಕಿನ ವ್ಯಾಪಾರದ ಜತೆ ನಾಲ್ಕು ಊರು ಸುತ್ತುತ್ತ ಎಮ್ಮೆ, ಹಸು,

'ಇಂವ ಹೆಣಕ್ಕೆ ಮಾತ್ರ ಲಂಗ-ಗವನನ್ನು ಹೊಲಿಲಿಕ್ಕೆ ಲಾಯಕ್ಕು... ಜೀವ ಇರುವವರಿಗಲ್ಲ' ಎಂದು ಕೈನಾಲು ಮನೆಯ ಹರಿಯಪ್ಪನೆಂದರೆ, 'ಇವ್ರು ಹೊಲಿದ ರವಿಕೆಯಲ್ಲಿ ಹೆಣ್ಮಕ್ಕಳ ದುಂಡೆದೆ ಮೈದಾನದಷ್ಟೇ ಸಪಾಟಾಗಿ ಕಾಣೆಸುತ್ತೆ' ಎಂದು ಊರುಮನೆ ರಂಗಪ್ಪ ಗಾಣಿಗ ಊರಿಡೀ ಹೇಳಿಕೊಂಡು ಬಂದಿದ್ದ. 'ಈ ಖಾದ್ರಿಬ್ಯಾರಿಯವರು ಹೊಲಿದ ಗವನು ಹಾಕಿದ್ರೆ ಥೇಟ್ ಹೆಣವೇ ಗೋರಿಯಿಂದ ಎದ್ದು ಬಂದಂತೆ ಕಾಣೆಸುತ್ತೆ ಮಾರಾಯ್ರೇ' ಎಂದು ಬೆಸ್ತರ ಕೇರಿಯ ವಾಸುಸಾಲ್ಯಾನ್ ಕೂಡ ಅಂದಿದ್ದನಂತೆ.

ಕೋಣಗಳ ದಲ್ಲಾಳಿ ಕೆಲಸಕ್ಕೆ ಕೈಹಾಕಿದ ಖಾದ್ರಿಬ್ಯಾರಿಯವರು ಮನೆಯಲ್ಲಿ ಸಂತಾನ ಭಾಗ್ಯ ಹೆಚ್ಚಿದಂತೆಲ್ಲ ತಮ್ಮ ಜಾಣ್ಮೆ ಚಾಕಚಕ್ಯತೆ, ದೂರಾಲೋಚನೆಯನ್ನು ಮುಂದಿಟ್ಟುಕೊಂಡು ಋತುಗಳಿಗನುಗುಣವಾಗಿ ತಮ್ಮ ವ್ಯಾಪಾರದ ಕ್ಷೇತ್ರವನ್ನು ವಿಸ್ತರಿಸುತ್ತಿದ್ದುದು ಅವರ ವ್ಯವಹಾರ ಜ್ಞಾನ, ಅವರು ಬದುಕುವ ದಾರಿಯನ್ನು ಅರಸುವ ಕೌಶಲ್ಯಕ್ಕೊಂದು ಮಾದರಿಯಾಗಿತ್ತು.

ಪಗ್ಗು-ಭೇಷ ತಿಂಗಳು ಬಂತೆಂದರೆ ಸಾಕು-ದಲ್ಲಾಳಿ ಕೆಲಸದ ಜತೆಗೆ ಮುಂದೆ ದಿಗಿಣ ತೆಗೆದು ಬರಲಿರುವ ಕಾರ್ತೆಲ್ ತಿಂಗಳ ಮಳೆರಾಯನಿಗೆ, ಇರಲಿ ತನ್ನೊದೊಂದು 'ಛತ್ರಿಸೇವೆ' ಎಂಬಂತೆ ಖಾದ್ರಿಬ್ಯಾರಿಯವರು ಹೆಗಲ ಮೇಲೊಂದು ಸುತ್ತೆ-ಕತ್ರಿ- ಮೊಳೆ-ಕಡ್ಡಿಗಳಿರುವ ಬಟ್ಟೆ ಚೀಲ ನೇತುಹಾಕಿಕೊಂಡು ಊರು ಸುತ್ತಲು ಹೊರಟರೆಂದರೆ - ಊರವರ ಮೂಲೆ ಸೇರಿದ ಹಾಳು ಮೂಳು ಬಣ್ಣಗೇಡಿ ಕೊಡೆಗಳೆಲ್ಲ ಸ್ಯಾಬರಿಗೆ ಸಲಾಮು ಹೊಡೆಯತೊಡಗುತ್ತದೆ. ಮತ್ತೆ ಆ ಕೊಡೆರಿಪೇರಿ ಕೆಲಸ ಕೈದಾಗುವುದು ಮುಂದೆ ಶ್ರಾವಣಮಾಸ ಬಂದ ನಂತರವಷ್ಟೆ. ಅಷ್ಟರಲ್ಲಿ ಕನ್ಯಾ ತಿಂಗಳು ಎದುರುಬಂದರೆ ಪುನಃ ಶುರು - ಕತ್ರಿಸಾಣೆ, ಕಮ್ಮಾರಿಕೆಯ ಕೆಲಸ. ಕೊಟ್ಟು-ಪಿಕಾಸಿ - ಕತ್ತಿಗಳ ಬಾಯಿಗಳಿಗೆ ಹೊಡೆದು ಬಡಿದು ಜಳಪಿಸುವ ಕೆಲಸವೆಲ್ಲ ಮುಗಿದೊಡನೆ, ಪೆರಾರ್ದೆ ತಿಂಗಳಲ್ಲಿ ಗಾಡಿ ಎತ್ತುಗಳಿಗೆ ಲಾಳ ಹೊಡೆಯುವ ಕೆಲಸದ ಜತೆಗೆ ತಾಮ್ರ ಹಿತ್ತಾಳೆ ಪಾತ್ರೆಗಳಿಗೆ ಕಲಾಯಿ ಹಚ್ಚುವ ಕೆಲಸವೂ ಮಾಮೂಲು.

ಇವೆಲ್ಲವೂ ಮುಗಿಯುವ ಹೊತ್ತಿಗೆ ವಸಂತಕಾಲ ಅಡಿಯಿಟ್ಟರೆ ಮತ್ತೆ ಖಾದ್ರಿಬ್ಯಾರಿಯವರ ಅಂಡಿಗೆ ಪುರುಸೊತ್ತಿಲ್ಲದ ಕಾಲ. ಕಾಲಿಗೊಂದು ಚರ್ಮದ ಮೆಟ್ಟು ಮೆಟ್ಟಿಕೊಂಡು ವಸಂತಕಾಲದ ಪ್ರಕೃತಿ ವ್ಯಾಪಾರದ ಜತೆಗೆ ಇವರ ವ್ಯಾಪಾರ ಶುರುವಾಗುತ್ತದೆ, ಊರಿಡೀಯ ಸಾಲುಮರ, ಉಳ್ಳವರ ತೋಪು-ಹಿತ್ತಲಲ್ಲಿರುವ ಹೂ-ಹಣ್ಣು ಹೊತ್ತಿರುವ ಬಸುರಿ ಮರಗಳನ್ನು ದಿಟ್ಟಿಸುವುದು; ಈ ಬಾರಿ ಈ ಮರದಲ್ಲಿ ಕಾಯಿಯೆಷ್ಟು ಹಿಡಿಯಬಹುದು, ಎಷ್ಟಕ್ಕೆ ವಹಿಸಿಕೊಳ್ಳಬಹುದು ಎಂಬ ಲೆಕ್ಕಾಚಾರ ಅವರೊಳಗೆ ಆರಂಭಗೊಳ್ಳುತ್ತದೆ. ಊರಲ್ಲಿರುವ ಮಾವು-ಹಲಸು-ಗೇರು-ಹುಣಿಸೆ-ಬುಗುರಿ ಮರಗಳನ್ನು ವಹಿಸಿಕೊಂಡ ನಂತರ ಮುಂದೆ ಗೀಷ್ಮ ಋತು ಬರುವವರೆಗೆ ಇದೇ ಕಾಯಕದಲ್ಲಿ ಸ್ಯಾಬರು ಹಣ್ಣಾಗುತ್ತಾರೆ.

ಹಣ್ಣು ಮಾಗುವ ಕಾಲ ಮುಗಿದ ನಂತರ ಅವರ ಕೆಲಸವೆಂದರೆ ಸುಗ್ಗಿ ಕಾಲದ ದವಸ-ಧಾನ್ಯಗಳನ್ನು ಗೇಣಿ ಮಕ್ಕಳಿಂದ ಕೊಂಡು, ಕೊಳಕೆಯ ಬಳೆಯನ್ನೂ ಧಣಿಗಳಿಂದ ಖರೀದಿಸಿಕೊಂಡು ಅದನ್ನು ಕೂಡಿಟ್ಟು ಲಾಭ ಬರುವ ಋತುಮಾನದಲ್ಲಿ ಮಾರಿ ಒಂದಷ್ಟು ಲಾಭ ಗಿಟ್ಟಿಸಿಕೊಳ್ಳುವುದು.

ಗ್ರೀಷ್ಮ ಕಾಲದ ನಂತರದ ವರ್ಷಋತುವಿನಲ್ಲಿ



ಖಾದ್ರಿಬ್ಯಾರಿಯವರಿಗೆ ಸ್ವಲ್ಪ ಪುರುಸೊತ್ತು ಸಿಗುವುದಿದೆ. ಆದರೆ ಪುರುಸೊತ್ತು ಸಿಗುವುದು ಅವರ ಕಾಲುಗಳಿಗೆ ವಿನಃ ಅವರ ದುಡಿಮೆಗಲ್ಲ, ವಹಿವಾಟಿಗಲ್ಲ. ಹೊರಗಡೆ ಆ ಪರಿಯಲ್ಲಿ ಮಳೆ ಸುರಿಯುತ್ತಿರಬೇಕಾದರೆ ಖಾದ್ರಿಬ್ಯಾರಿಯವರು ಜಗಲಿಯ ಮೂಲೆಯಲ್ಲಿ ಕುಳಿತು ಹೊಲಿಗೆ ರಾಟೆ ತಿರುಗಿಸತೊಡಗುತ್ತಾರೆ. ಖಾದ್ರಿಬ್ಯಾರಿಯವರು ತಮ್ಮ ಅಪ್ಪನಿಂದಲೇ ಈ ದರ್ಜಿ ಕೆಲಸವನ್ನು ಕಲಿತವರು. ಅಲ್ಲಾನ ಪಾದ ಸೇರುವ ಜಾತಿ ಬಾಂಧವರಿಗೆ ಕಫನ್ ಹೊಲಿಯುವ ಕೆಲಸವನ್ನು ಆ ಊರಲ್ಲಿ ನಿರ್ವಹಿಸಿದವರು ಖಾದ್ರಿಬ್ಯಾರಿಯವರ ಅಪ್ಪ ಮೂಸೆಬ್ಯಾರಿಯವರು. ಕಫನ್ ಹೊಲಿಯುವ ಕೆಲಸಕ್ಕೆಂದೇ ಆರಂಭದಲ್ಲಿ ರಾಟೆ ತಿರುಗುವ ಕೆಲಸ ಆರಂಭಿಸಿದ ಖಾದ್ರಿಬ್ಯಾರಿಯವರು ನಿಧಾನಕ್ಕೆ ತಮ್ಮ ಮಡದಿ, ಮಕ್ಕಳಿಗೆ ಲಂಗ, ರವಿಕೆ, ಗವನವನ್ನೂ ಹೊಲಿಯತೊಡಗಿದ್ದರು. ಮಡದಿ ಮೈಮೂನಮ್ಮನವರಿಗೆ ಖಾದ್ರಿಬ್ಯಾರಿಯವರು ಕುಪ್ಪಸ ಹೊಲೀತಾರೆಂದು ಸುದ್ದಿಯಾದೊಡನೆ ಸುತ್ತಮುತ್ತಲ ಮನೆಯವರೂ ಅವರನ್ನೇ ಲಂಗ-ರವಿಕೆ-ಗವನಿಗಾಗಿ ಆಶ್ರಯಿಸಿದ್ದರು. ಆದರೆ ಎಲ್ಲಾ ಕಾಯಕದಲ್ಲೂ ಯಶಸ್ವಿ ಪಟ್ಟ ಪಡೆದುಕೊಂಡ ಖಾದ್ರಿಬ್ಯಾರಿಯವರಿಗೆ ಈ ದರ್ಜಿ ಕಾಯಕದಲ್ಲಿ ಮಾತ್ರ 'ಯಶಸ್ವಿ ದರ್ಜಿ' ಪಟ್ಟವನ್ನು ಮಾತ್ರ ಪಡೆದುಕೊಳ್ಳಲಾಗಲಿಲ್ಲ. ಅವರು ಹೊಲಿದ ಲಂಗ-ರವಿಕೆಗಳ ಬಗ್ಗೆ ಊರಿನ ಪುರುಷ ಸಂಕುಲದಿಂದ ಹಲವಾರು ಅಪಸ್ವರಗಳು ಎದ್ದು ಅವು ಊರಿಡೀ ವ್ಯಂಗ್ಯ-ಕುಹಕ-ಲೇವಡಿ-ಹಾಸ್ಯಗಳ ಮೂಲಕ ತೇಲಾಡಿದ್ದವು.

'ಇಂವ ಹೆಣಕ್ಕೆ ಮಾತ್ರ ಲಂಗ-ಗವನನ್ನು ಹೊಲಿಲಿಕ್ಕೆ ಲಾಯಕ್ಕು... ಜೀವ ಇರುವವರಿಗಲ್ಲ' ಎಂದು ಕೈನಾಲು ಮನೆಯ ಹರಿಯಪ್ಪನೆಂದರೆ,

'ಇವ್ರು ಹೊಲಿದ ರವಿಕೆಯಲ್ಲಿ, ಹೆಣ್ಮಕ್ಕಳ ದುಂಡೆದೆ ಮೈದಾನದಷ್ಟೇ ಸಪಾಟಾಗಿ ಕಾಣೆಸುತ್ತೆ' ಎಂದು ಊರುಮನೆ ರಂಗಪ್ಪ ಗಾಣಿಗ ಊರಿಡೀ ಹೇಳಿಕೊಂಡು ಬಂದಿದ್ದ.

'ಈ ಖಾದ್ರಿಬ್ಯಾರಿಯವರು ಹೊಲಿದ ಗವನು ಹಾಕಿದ್ರೆ ಥೇಟ್ ಹೆಣವೇ ಗೋರಿಯಿಂದ ಎದ್ದು ಬಂದಂತೆ ಕಾಣೆಸುತ್ತೆ ಮಾರಾಯ್ರೇ' ಎಂದು ಬೆಸ್ತರ ಕೇರಿಯ ವಾಸುಸಾಲ್ಯಾನ್ ಕೂಡ ಅಂದಿದ್ದನಂತೆ.

ಹೀಗೆ ಊರಮಂದಿಯ ಹತ್ತು ಹಲವು ಬಗೆಯ ವ್ಯಂಗ್ಯ ಕುಹಕ ಸಿಟ್ಟಿನ ಮಾತುಗಳನ್ನು ನಗು ಮುಖದಿಂದ ಕೇಳಿಸಿಕೊಳ್ಳುತ್ತಲೇ ಖಾದ್ರಿಬ್ಯಾರಿಯವರು, ಕಫನ್ ಹೊಲಿಯುವ ಕಾಯಕವನ್ನು ಮಾತ್ರ ನಿರಾತಂಕವಾಗಿ ಮುಂದುವರಿಸಿಕೊಂಡು ಬಂದು ತನ್ನ ಮೂವತ್ತರ ಹರೆಯವನ್ನು ಇದೀಗ ಎಂಬತ್ತೆರಡಕ್ಕೇರಿಸಿಕೊಂಡು, ಆರು ಮಂದಿ ಹೆಣ್ಣುಮಕ್ಕಳು ಒಬ್ಬ ಗಂಡು ಮಗ ಇದ್ದೂ ಈ ವಯಸ್ಸಲ್ಲಿ ಪಡಬಾರದ ಪಾಡು ಪಡುತ್ತಾ ಸೊಸೆಯ ದೌಲತ್ತಿನಡಿ ಸಂಪೂರ್ಣ ಹಣ್ಣಾಗಿ ನಲುಗುತ್ತಿದ್ದಾರೆ.

'ಕೈಯ ಕಾಸೂ ಹೋಯಿತು, ಮೈಯ ಮಾಂಸವೂ ಹೋಯಿತು' ಎಂಬಂಥ ಸ್ಥಿತಿಯಲ್ಲಿರುವ ಖಾದ್ರಿಬ್ಯಾರಿಯವರ ಈ ಕಫನ್ ಹೊಲಿಯುವ ಕಾಯಕವನ್ನು ಇದೀಗ ಅವರ ಏಕೈಕ ಗಂಡು ಸಂತಾನವಾಗಿರುವ ಹುಸೇನಬ್ಬ ಮುಂದುವರಿಸುತ್ತಿದ್ದಾನೆ. ಎಲ್ಲ ಹೆಣ್ಣುಮಕ್ಕಳ ಹಿಂದೆ ಹುಟ್ಟಿದ ಮಗ ಹುಸೇನಬ್ಬನೆಂದರೆ ಖಾದ್ರಿಬ್ಯಾರಿ ಮೈಮೂನಮ್ಮನವರಿಗೆ ತುಂಬು ಜೀವ. ಆತನಿಗೊಂದು ಸಂಗಾತಿಯಾಗಿ ಎಂದು ಮೈಮೂನಮ್ಮನವರು ಮಾಪ್ಳಕಡಪುವಿನ ಬಾವುಬ್ಯಾರಿಯ ಮಗಳು ನಫೀಸಮ್ಮಳನ್ನು ಸೊಸೆಯಾಗಿ ಮನೆ ತುಂಬಿಸಿಕೊಂಡರೋ ಅಂದಿನಿಂದಲೇ ಅವರಿಬ್ಬರಿಗೂ ಮಗನ ಮೇಲಿನ ಮಮಕಾರ ಕುಂದತೊಡಗಿತ್ತು. ನಫೀಸಮ್ಮ ಗಂಡನನ್ನು ಸಂಪೂರ್ಣವಾಗಿ ತನ್ನ ಸೆರಗಿನ ತುದಿಗೆ ಗಂಟು ಹಾಕಿಕೊಂಡ ನಂತರ ಮಗನ ವರ್ತನೆಯಲ್ಲಾದ ಅದ್ಭುತ ಬದಲಾವಣೆ ಕಂಡು ಮೈಮೂನಮ್ಮನವರನ್ನು ಕಾಡಿದ್ದು 'ತನ್ನ ಗಂಡನ ಮುಂದಿನ ಪಾಡೇನು' ಎಂಬ ಚಿಂತೆ.

ಹುಸೇನಬ್ಬ ಬದುಕುವ ದಾರಿ ಹಿಡಿಯಲು, ಅಪ್ಪ ಸವೆಸಿದ ದಾರಿಯಲ್ಲೇ ಸಾಗಿಬಂದನಾದರೂ, ತಾನು ಸಾಗಿಬಂದ ದಾರಿಯಲ್ಲಿನ ಏರು, ತಗ್ಗುಗಳೆಲ್ಲ ಸಾವಧಾನದಿಂದ ತಗ್ಗಿ-ಬಗ್ಗಿ ಏರಿ ನಡೆಯಬೇಕೆಂಬ ವ್ಯತ್ಯಾಸದರಿವಿಲ್ಲದೆ ತಿಳಿಗೇಡಿಯಾಗಿ ಊರಲ್ಲಿ ಅಪ್ಪ ಪಡೆದ ಹೆಸರನ್ನು ಆತನಿಂದ ಉಳಿಸಿಕೊಳ್ಳಲಾಗಲಿಲ್ಲ. ಸಿಗಿಯುವುದೊಂದೇ ಗರಗಸದ ನಿಯಮ-ಎಂಬಂತೆ ಅಪ್ಪನ ಮೈಯಲ್ಲಿ ತಾಕತ್ತು ಇರುವವರೆಗೂ ಅವರನ್ನು ಮುಂದಿಟ್ಟುಕೊಂಡು ತನ್ನ ಬದುಕುವ ದಾರಿಯನ್ನು ಸುಗಮ ಮಾಡಿಕೊಂಡಿದ್ದನಾತ. ಖಾದ್ರಿಬ್ಯಾರಿಯವರೂ ತಮ್ಮ ಮೈಯಲ್ಲಿ ಬಿಸಿರಕ್ತದ ವಹಿವಾಟು ತಣ್ಣಗಾಗುವುದರೊಳಗೆ ತನ್ನೆಲ್ಲ ಹೆಣ್ಣು ಮಕ್ಕಳ ಮದುವೆ-ಬಾಣಂತನವನ್ನು ಮುಗಿಸಿ, ಮಗನಿಗೆ ಬದುಕುವ ದಾರಿಗಳನ್ನು ಅತ್ಯಂತ ಸ್ಪಷ್ಟವಾಗಿ ಪರಿಚಯಿಸಿಬಿಟ್ಟು, ದಮ್ಮುರೋಗದಿಂದ ನರಳುತ್ತಿದ್ದ ತಮ್ಮ ಮೈಮೂನಮ್ಮನವರ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡುಬಿಟ್ಟಿದ್ದರು.

ತನ್ನ ನಂತರ ಗಂಡನಿಗೆ ದಿಕ್ಕ್ಯಾರು? ಎಂಬ ಚಿಂತೆಯಲ್ಲಿ ಹೂ ಮನಸ್ಸಿನ ಮೈಮೂನಮ್ಮನವರು ತಮ್ಮ ದಮ್ಮುರೋಗವನ್ನು ಮತ್ತಷ್ಟು ಹೆಚ್ಚಿಸಿಕೊಂಡು ಹಾಸಿಗೆ ಹಿಡಿದಾಗ, ಅವರ ಸೇವೆ ಮಾಡುವ ಸಂಪೂರ್ಣ ಜವಾಬ್ದಾರಿ ಖಾದ್ರಿಬ್ಯಾರಿಗಳದ್ದಾಗಿತ್ತು. ಈ ದಮ್ಮುರೋಗದಿಂದ ತನಗಿನ್ನು ಉಳಿಗಾಲವೆಂಬುದು ಮೈಮೂನಮ್ಮನವರಿಗೆ ಖಾತ್ರಿಯಾದೊಡನೆ ಮಗ-ಸೊಸೆಯನ್ನು ಎದುರಿಗಿರಿಸಿ ಕೊಂಡು 'ಆ ದೇವರಂತಹ ಮನುಷ್ಯನನ್ನು ಕಾಲಕಸ ಮಾಡದೆ, ಹೂ-ಚೆಂಡನ್ನು ರಕ್ಷಿಸುವಷ್ಟು ಮೃದುವಾಗಿ ರಕ್ಷಿಸಬೇಕೆಂದು' ಸೊಸೆಯ ಕೈಗಳನ್ನು ತನ್ನ ಕಣ್ಣಿಗೊತ್ತಿಕೊಂಡು ಬೇಡಿಕೊಂಡಿದ್ದರು. ಹಾಗೆ ಬೇಡಿದ ಮರುದಿನವೇ ಮೈಮೂನಮ್ಮ ಖಾದ್ರಿಬ್ಯಾರಿಯವರನ್ನು ಈ ಜಗತ್ತಲ್ಲಿ ಏಕಾಂಗಿಯಾಗಿರಿಸಿ ಅಲ್ಲಾನ ಪಾದ ಸೇರಿದ್ದರು.

ಇಂದಿಗೆ ಮೈಮೂನಮ್ಮ ಖಾದ್ರಿಬ್ಯಾರಿಯವರನ್ನು ತೊರೆದು ಹತ್ತು ವರುಷಗಳೇ ಸಂದಿದೆ. ಹೆಂಡತಿಯ ಕಾಲಾನಂತರ ಖಾದ್ರಿಬ್ಯಾರಿಯವರಿಗೆ ಈ ಜಗತ್ತಿನ ಏನೂ ಯಾವುದೂ ಬೇಡವಾಯ್ತು. ಸೊಸೆಯ ದೌಲತ್ತು ಏರಿದಂತೆಲ್ಲ ಅಪ್ಪನನ್ನು ಆಗಾಗ್ಗೆ ವಿಚಾರಿಸಲು ಮನೆಗೆ ಬರುತ್ತಿದ್ದ ಹೆಣ್ಣುಮಕ್ಕಳೂ ಬರುವುದನ್ನು ಕೈದು ಮಾಡಿಬಿಟ್ಟರು. ಇದರಿಂದಾಗಿ ಖಾದ್ರಿಬ್ಯಾರಿಯವರು ಇನ್ನಷ್ಟು ಒಂಟಿಯಾದರು. ಮಗ ಹುಸೇನಬ್ಬನಂತೂ ಮಡದಿ ನಫೀಸಳಿಗೆ ಹೆದರಿ ಅಪ್ಪನನ್ನು ಸಂಪೂರ್ಣ ಮರೆತೇಬಿಟ್ಟವನಂತೆ ಮುಖತಪ್ಪಿಸಿ ಓಡಾಡತೊಡಗಿದ್ದ. ಎಳೆ ವಯಸ್ಸಿನ ಮೊಮ್ಮಕ್ಕಳೇನಾದರೂ ಖಾದ್ರಿಬ್ಯಾರಿಯವರಿಗೆ ಒಗ್ಗಿಹೋಗದಿರುತ್ತಿದ್ದರೆ ಅವರ ಸ್ಥಿತಿ ವೈರಿಗೂ ಬೇಡವಾಗಿರುತ್ತಿತ್ತು. ಹುಸೇನಬ್ಬನ ಇಬ್ಬರು ಹೆಣ್ಣು ಮಕ್ಕಳು, ಇಬ್ಬರು ಗಂಡುಮಕ್ಕಳಿಗಂತೂ ಅಜ್ಜನೆಂದರೆ ಜೀವ. ಆದರೇನು ಅವಿನ್ನೂ ರೆಕ್ಕೆ ಬಲಿತವು ಅಲ್ಲ- ಅಜ್ಜನ ಬೇಕು ಬೇಡಗಳನ್ನು ಪೂರೈಸಲು. ಆದರೆ ಅಜ್ಜನ ಪರವಾಗಿ ಅಮ್ಮನ ಜತೆ ವಾದಿಸುವಷ್ಟು ಅವುಗಳ ಕೊರಳು ಬಲಿತಿರುವುದೇ ಖಾದ್ರಿಬ್ಯಾರಿಯವರಿಗೆ ಇನ್ನಿಲ್ಲದ ಸಂಕಟವನ್ನು ತಂದೊಡ್ಡಿದ್ದಂತಾಗಿದೆ. 'ಮಕ್ಕಳ ತಲೆಕೆಡಿಸಿದ್ದಾರೆ' ಎಂಬ ಆರೋಪ ನಫೀಸಮ್ಮನ ಕಡೆಯಿಂದ ತೇಲಿಬಂದು ಖಾದ್ರಿಬ್ಯಾರಿಯವರ ರುಮಾಲೇರಿ ಕುಳಿತ ನಂತರ, ಖಾದ್ರಿಬ್ಯಾರಿಯವರು ಮೊಮ್ಮಕ್ಕಳಿಂದಲೂ ದೂರವಿರಲು ಪ್ರಯತ್ನಿಸುತ್ತಿದ್ದಾರೆ. ಆದರೆ ಅವು ಬಿಡಬೇಕಲ್ಲ.

ಹೀಗೆ ಮುಪ್ಪಿನಲ್ಲಿ ಖಾದ್ರಿಬ್ಯಾರಿಯವರು ಒಂಟಿಬಾಳ್ವೆ ನಡೆಸುತ್ತಿರುವಾಗ, ಜತೆಗೊಂದು ಸಂಗಾತಿ ಇರಲೆಂದು ದೇವರು ಅವರ ಜೀವದೊಳಗೊಂದು ವಾತರೋಗವನ್ನು ಹೊಗಿಸಿಬಿಟ್ಟಿದ್ದರಿಂದ ಅವರ ಸ್ಥಿತಿ ಮತ್ತಷ್ಟು ವಿಷಮ ಗೊಂಡಿತ್ತು. ದಿನನಿತ್ಯ ಮುಂಜಾನೆಯ ನಮಾಜಿಗೆಂದು ಎದ್ದು ನಿಲ್ಲಬೇಕಾದರೆ ಆ ವಾತರೋಗ ಕೊಡುವ ಕಾಟ-ನೋವನ್ನು ಖಾದ್ರಿಬ್ಯಾರಿಯವರು ಚಾಪೆ ತುಂಬ ಕಣ್ಣೀರು ಇಳಿಸುವ ಮೂಲಕವೇ ಶಮನಗೊಳಿಸಲು ಪ್ರಯತ್ನಿಸುತ್ತಾರೆ. ಅಮ್ಮನ ಕಣ್ತಪ್ಪಿಸಿ ಮೊಮ್ಮಕ್ಕಳೇನಾದರೂ ಅಜ್ಜನ ಕೈ-ಕಾಲ್ಗಳ ಗಂಟು ನೀವಿದರೆ ಅವರು ಕೂತಲ್ಲಿಂದ ಎದ್ದು ನಿಂತಾರು ಅಷ್ಟೆ.

ಈ ವಾತಕ್ಕೆ ಬಿಸಿನೀರೇ ದಿವ್ಯ ಔಷಧಿ ಎಂಬುದನ್ನು ಬಲ್ಲ ಖಾದ್ರಿಬ್ಯಾರಿಯವರು ಮೊಮ್ಮಕ್ಕಳ ಮೂಲಕ ಸೊಸೆಗೆ ಈಗಾಗಲೇ ಒಂದು ಸಂದೇಶವನ್ನು ರವಾನಿಸಿದ್ದರು. 'ಅಜ್ಜನಿಗೆ ಬೆಳಗ್ಗಿನ ತಿಂಡಿ ಬೇಡವಂತೆ - ಅದರ ಬದಲಿಗೆ ಅವರಿಗೆ ಮೀಯಲು ಒಂದಷ್ಟು ಬಿಸಿನೀರು ಕೊಡಬೇಕಂತೆ' ಎಂಬ ಮಕ್ಕಳ ಮಾತಿನ ಓಲೆಗೆ ನಫೀಸಮ್ಮ ರವಾನಿಸಿದ ಮರು ಓಲೆ ಹೀಗಿತ್ತು. 'ಅಡುಗೆಮನೆಗೆ ಉರಿ ಹಚ್ಚುದಕ್ಕೇ ಮನೆಯ ರೀಪು-ಪಕ್ಕಾಸುಗಳನ್ನು ಕೀಳಬೇಕೆಂದಿದ್ದೇನೆ. ಇನ್ನು ಅವರನ್ನು ಮೀಯಿಸಲು ಒಂದು ಕಾಡು ಬೆಳೆಸಿ ನಂತರ ಮೀಯಿಸಿ ಬಿಡುವ.. ಆಗದಾ ?'

ಹೆಂಡತಿಯ ಕಾಲಾನಂತರ ಖಾದ್ರಿಬ್ಯಾರಿಯವರಿಗೆ ಈ ಜಗತ್ತಿನ ಏನೂ ಯಾವುದೂ ಬೇಡವಾಯ್ತು. ಸೊಸೆಯ ದೌಲತ್ತು ಏರಿದಂತೆಲ್ಲ ಅಪ್ಪನನ್ನು ಆಗಾಗ್ಗೆ ವಿಚಾರಿಸಲು ಮನೆಗೆ ಬರುತ್ತಿದ್ದ ಹೆಣ್ಣುಮಕ್ಕಳೂ ಬರುವುದನ್ನು ಕೈದು ಮಾಡಿಬಿಟ್ಟರು. ಇದರಿಂದಾಗಿ ಖಾದ್ರಿಬ್ಯಾರಿಯವರು ಇನ್ನಷ್ಟು ಒಂಟಿಯಾದರು. ಮಗ ಹುಸೇನಬ್ಬನಂತೂ ಮಡದಿ ನಫೀಸಳಿಗೆ ಹೆದರಿ ಅಪ್ಪನನ್ನು ಸಂಪೂರ್ಣ ಮರೆತೇಬಿಟ್ಟವನಂತೆ ಮುಖತಪ್ಪಿಸಿ ಓಡಾಡತೊಡಗಿದ್ದ. ಎಳೆ ವಯಸ್ಸಿನ ಮೊಮ್ಮಕ್ಕಳೇನಾದರೂ ಖಾದ್ರಿಬ್ಯಾರಿಯವರಿಗೆ ಒಗ್ಗಿಹೋಗದಿರುತ್ತಿದ್ದರೆ ಅವರ ಸ್ಥಿತಿ ವೈರಿಗೂ ಬೇಡವಾಗಿರುತ್ತಿತ್ತು. ಹುಸೇನಬ್ಬನ ಇಬ್ಬರು ಹೆಣ್ಣು ಮಕ್ಕಳು, ಇಬ್ಬರು ಗಂಡುಮಕ್ಕಳಿಗಂತೂ ಅಜ್ಜನೆಂದರೆ ಜೀವ. ಆದರೇನು ಅವಿನ್ನೂ ರೆಕ್ಕೆ ಬಲಿತವು ಅಲ್ಲ-ಅಜ್ಜನ ಬೇಕು ಬೇಡಗಳನ್ನು ಪೂರೈಸಲು.

ಸೊಸೆಯ ಮಾತಿನಿಂದ ಖಾದ್ರಿಬ್ಯಾರಿಯವರು ಸಂಪೂರ್ಣ ಕುಂದಿ ಹೋಗಿದ್ದರು. 'ಇಳಿವಯಸ್ಸಿನಲ್ಲಿ ಹಿಡಿದ ವಾತವೂ... ಮುದಿಮರಕ್ಕೆ ಹಿಡಿದ ಗೆದ್ದಲೂ - ಹಿಡಿದ ಜೀವ ವನ್ನು ಬಿಡುವುದು ಸತ್ತ ನಂತರವಷ್ಟೆ' ಎಂಬ ಗಾದೆಯಿದೆಯಲ್ಲ ಹಾಗೆ ನನ್ನ ಕತೆ ಎಂದು ಖಾದ್ರಿಬ್ಯಾರಿಯವರು ಹನಿಗಣ್ಣಾಗಿ ಆಪ್ತರಾಗಿ ಹೇಳಿಕೊಂಡಾಗಲೆಲ್ಲ ಎಲ್ಲರೂ ಆ ಮುದಿಜೀವಕ್ಕೆ ಮರುಗುವವರೇ ವಿನಾ ಯಾರಿಂದಲೂ ಆ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಿರಲಿಲ್ಲ.

ಹಾಗೆ ಬಿಸಿನೀರಿನ ಆಸೆಯೊಂದನ್ನು ತನ್ನ ವಾತರೋಗ ದಂತೆಯೇ ಗಟ್ಟಿಯಾಗಿ ತಬ್ಬಿಕೊಂಡ ಖಾದ್ರಿಬ್ಯಾರಿಯವರು ಈ ಮನೆಯಲ್ಲಿ, ಸೊಸೆಯ ದರ್ಬಾರಿನಲ್ಲಿ ಅದೆಂದೂ ನೆರವೇರದು ಎಂದು ಅರಿತವರೇ ಊರಲ್ಲಿರುವ ತಮ್ಮ ನಂಬಿಗಸ್ಥ ಕುಟುಂಬದ 'ದೊಡ್ಡ ತಲೆ'ಗಳನ್ನು ಕಂಡಾಗಲೆಲ್ಲ ತಮ್ಮ ಆಸೆಯನ್ನು ಅವರೊಂದಿಗೆ ನಿವೇದಿಸಿಕೊಂಡದ್ದಿದೆ.

ಆ ಮುದಿ ಜೀವದೊಳಗೆ ನಡೆಯುತ್ತಿರುವ ಸರ್ವ ಮನೋವ್ಯಾಪಾರಗಳ ಬಗ್ಗೆ ಅರಿವಿದ್ದ ಊರಿನ ಹಲವು ಸಹೃದಯ ಯಜಮಾನರು, ಖಾದ್ರಿಬ್ಯಾರಿಯವರ ಆ ಒಂದು ಪುಟ್ಟ ಆಸೆಗೆ ಮಮ್ಮಲ ಮರುಗಿ ಅವರ ಆಸೆಯನ್ನು ಹಲವು ಬಾರಿ ಈಡೇರಿಸಿಕೊಳ್ಳಲು ತಾವು ಅನುವು ಮಾಡಿಕೊಟ್ಟದ್ದಿದೆ. ಆದರೆ ಅವೆಲ್ಲವೂ ಬೇಸಿಗೆಯ ವಹಿವಾಟಿನ ಕಾಲದಲ್ಲಿ ಮಾತ್ರ. ಆದರೆ ಈ ಹಡಬೆಗುಟ್ಟಿದ ಮಳೆಗಾಲ ಬಂತೆಂದರೆ ಎಲ್ಲರ ಮನಸ್ಸೂ - ಕೈಯೂ ಈ ವಿಚಾರದಲ್ಲಿ ಸ್ವಲ್ಪ ಹಿಂಜರಿಯುವುದು ಸಾಮಾನ್ಯವೇ. ಎಲ್ಲರಿಗೂ ಆ ಕಾಲದಲ್ಲಿ ಉರುವಲಿದ್ದೇ ಬಹುದೊಡ್ಡ ಕಾಟ. ಜಾರಿಗೆ ಬೆಟ್ಟಿನ ಮುದರ ಪೂಜಾರಿ, ಮೈರ್ಪಾಡಿಗುತ್ತಿನ ಅಂತಪ್ಪ ಶೆಟ್ರು, ಒಂತಿಬೆಟ್ಟಿನ ವಾಮಯ್ಯ ಮೂಲ್ಯ, ಮೈಲಿಬೆಟ್ಟಿನ ಸೂರಪ್ಪ ಮೈಲಿ ಎಲ್ಲರೂ ಮಾಯಿ-ಸುಗ್ಗಿ ಕಾಲದಲ್ಲಿ ಈ ವಯೋವೃದ್ಧ ಖಾದ್ರಿಬ್ಯಾರಿಯವರಿಗೆ ತಮ್ಮ ತಮ್ಮ ಬಚ್ಚಲುಮನೆಯಲ್ಲಿ ಯಥೇಚ್ಛವಾದ ಬಿಸಿನೀರ ಅಭ್ಯಂಜನದ ಅವಕಾಶ ಮಾಡಿ ಕೊಟ್ಟಿದ್ದಾರೆ.

ಇಂತಹ ಒಂದು ಮಳೆಗಾಲದಲ್ಲೇ, ಖಾದ್ರಿಬ್ಯಾರಿಯವರ ಬಿಸಿನೀರ ಆಸೆಯನ್ನು ಬಹಳಷ್ಟು ಬಾರಿ ಕೇಳಿದ್ದ ವೆಂಕಪ್ಪ ಶೆಟ್ಟರು - ಒಂದು ಅಂಕದ ಹುಂಜದಿಂದ ನಾಕು ಅಂಕದ ಹುಂಜಗಳನ್ನು ಪಡೆವಂತಹ ಜಾಣ್ಮೆ ಉಳ್ಳವರು, ಈ ಮಳೆಗಾಲದ ಆರ್ಭಟಕ್ಕೆ ತಮ್ಮ ಮಗಳಿಗೆ ಬಾಣಂತಿನೀರು ಕಾಯಿಸುವುದಕ್ಕೆ ಯಾವ ಹುಳವೂ ಇತ್ತ ತಲೆಹಾಕದು ಎಂದು ಬಲ್ಲವರೇ, ತಮ್ಮ ಮನಸ್ಸಿನ ಲೆಕ್ಕಾಚಾರವನ್ನು ಖಾದ್ರಿಬ್ಯಾರಿಯವರ ಮುಂದೆ ತೆರೆದಿಟ್ಟು ಬ್ಯಾರಿಗೆ ಒಂದು ರೀತಿಯಲ್ಲಿ ಬಿಸಿನೀರಿನ ಆಮಿಷವನ್ನು ಪರೋಕ್ಷವಾಗಿ ಒಡ್ಡಿಯೇ ತಮ್ಮ ಜವಾಬ್ದಾರಿಯನ್ನು ಹಗುರ ಮಾಡಿಕೊಂಡಿದ್ದರು.

ಇದೀಗ ಖಾದ್ರಿಬ್ಯಾರಿಯವರು ವೆಂಕಪ್ಪಶೆಟ್ಟರ ಅಂಗಳದಲ್ಲಿ ತನ್ನ ಆತ್ಮಗೌರವಕ್ಕಾದ ಪುಟ್ಟ ಏಟನ್ನು



ಶಮನಮಾಡಿಕೊಳ್ಳಲು ನಿರ್ಧರಿಸಿಯೇ ತಮ್ಮ ಮನೆಯಂಗಳ ಹೊಕ್ಕವರು ನೇರ ಮೊಮ್ಮಕ್ಕಳ ಜತೆ ಮಾತುಕತೆಗಿಳಿದು ಬಿಟ್ಟಿದ್ದರು. ಹಿರಿಮೊಮ್ಮಗಳು ಜೊಹರಾ ಅಕ್ಕಿ ಪುಂಡಿ-ಜತೆ ಬೂತಾಯಿ ಮೀನಿನ ಸಾರನ್ನು ತಂದಿಟ್ಟವಳೇ ಎಂದಿನಂತೆ ನಿಡಿದಾಗಿ ಕಾಲು ಚಾಚಿ ಕೂತ ಅಜ್ಜನ ಕೈಕಾಲನ್ನು ನೀವತೊಡಗಿದಾಗ, ಖಾದ್ರಿಬ್ಯಾರಿಯವರ ಕಣ್ಣುಗಳು ಹನಿದುಂಬಿ ಮಂಜಾಗತೊಡಗಿತ್ತು. ಹಾಗೆ ಒಂದೋ ಎರಡೋ ಅಕ್ಕಿಪುಂಡಿ ತಿಂದಿದ್ದಾರಷ್ಟೇ - ಸ್ಯಾಬರಿಗೆ ಇದ್ದಕ್ಕಿದ್ದಂತೆ ಒಂದೇ ಒಂದು ತೇಗು ಬಂದಂತಾಗಿ ತಲೆ ಗಿರಗಿರನೆ ಸುತ್ತತೊಡಗಿತ್ತು. ಬಾಯಲ್ಲಿದ್ದ ಪುಂಡಿ ಇರುವ ಹಾಗೆಯೇ ಅಜ್ಜಯ್ಯ ಮೊಮ್ಮಗಳು ಜೊಹರನ ತೊಡೆಗೆ ತಲೆ ಒರಗಿಸಿ ಮಲಗಿಯೇ ಬಿಟ್ಟರು. ಜೊಹರ ಏನು ಎತ್ತ ಎಂದು ತಿಳಿಯದೆ ಅಜ್ಜನನ್ನು ಸಂತೈಸುತ್ತ ಅಮ್ಮನನ್ನು ಕೂಗುವಷ್ಟರಲ್ಲಿ ಖಾದ್ರಿಬ್ಯಾರಿಯವರು ತಾನು ಮಡದಿ ಮೈಮೂನಮ್ಮನವರ ಮಡಿಲಿಗೆ ತಲೆಯಿಡಲು ಹೊರಟೆನೆಂಬಂತೆ ಅಲ್ಲಾನ ಪಾದ ಸೇರಿಯಾಗಿತ್ತು!

'ಇದು ಎಂತಹ ಸಾವು ಹೂವೆತ್ತಿದಷ್ಟು ಮೌನ, ಹಗುರ!' 'ಲಕ್ಷದಲ್ಲೊಬ್ಬರಿಗೆ ಇಂಥ ಸಾವು ಮಾರಾಯ್ರೆ!' 'ನಾಕು ಮಂದಿಗೆ ಬೇಕಾಗಿ ಬದುಕಿದ ಜೀವಕ್ಕೆ ಇಂಥ ಸಾವಲ್ಲದೆ, ಅಲ್ಲಾಹು ಬೇರೆಂಥ ಸಾವು ಕರುಣಿಸುತ್ತಾನೆ!' 'ಒಟ್ಟಿನಲ್ಲಿ ಇವ್ರು ಪುಣ್ಯಾತ್ಮರಪ್ಪ - ನಮಗೂ ಹೀಗೆಯೇ ಸದ್ದಿಲ್ಲದ ಸಾವು ಬರಲಿ' ಎಂದು ಜಾತಿ ಭೇದವಿಲ್ಲದೆ ಎಲ್ಲರೂ ಹನಿಗಣ್ಣಾಗಿಯೇ ಬಂದು ಖಾದ್ರಿಬ್ಯಾರಿಯವರಿಗೆ ಅಂತಿಮ ನಮನ ಸಲ್ಲಿಸತೊಡಗಿದ್ದರು.

ಖಾದ್ರಿಬ್ಯಾರಿಯವರ ಈ ಸಾವಿನ ಸುದ್ದಿ ಊರಿನ ಎಲ್ಲ ಮನೆಗೂ ತಕ್ಷಣ ಹರಡಿದ್ದರೂ ವೆಂಕಪ್ಪಶೆಟ್ಟರ ಹೊಸ್ತಿಲು ತಲುಪಿದ್ದು ತುಂಬ ತಡವಾಗಿಯೇ. ಆ ದಿನ ಅಲ್ಲಿ ಬಾಣಂತಿ ಎದ್ದುದರಿಂದ ಶೆಟ್ಟರು ತಮ್ಮ ಎತ್ತಿನ ಗಾಡಿಯಲ್ಲಿ ಪತ್ನಿ ಸಮೇತರಾಗಿ ಮಗು ಮತ್ತು ಬಾಣಂತಿಗೆ ದೇವರ ನೀರು ಹನಿಸಲು ಊರಿನ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ತೆರಳಿದ್ದರಿಂದ ಆ ಸಾವಿನ ಸುದ್ದಿ ಅವರಿಗೆ ಆ ಕ್ಷಣ ತಲುಪಿರಲಿಲ್ಲ. ದೇವಸ್ಥಾನದಿಂದ ಹಿಂದಿರುಗುವಾಗ ಒಕ್ಕಲ ಮಕ್ಕಳಿಂದ ವಿಷಯ ತಿಳಿದೊಡನೆ ವೆಂಕಪ್ಪಶೆಟ್ಟರೊಬ್ಬರಿಗೆ ಮಾತ್ರವಲ್ಲ ಬಾಣಂತಿ ಮಗಳು ಸುಮತಿ ಮತ್ತು ಮಡದಿ ಉಮ್ಮಕ್ಕೆಯವರ ಅಂತರಂಗದ ವ್ಯಾಪಾರಗಳೆಲ್ಲ ಒಂದರೆಗಳಿಗೆ ನಿಂತಂತಾಗಿ ಎಲ್ಲರೂ ಮಾತಿನಿಂದ ಮೌನಕ್ಕೆ ದುಮುಕಿದ್ದರು. ಸುಮತಿಗಂತೂ, ಖಾದ್ರಿಬ್ಯಾರಿಯವರು ಆ ಮುಪ್ಪಿನಲ್ಲೂ ಪುಟ್ಟಮಗುವಿನಂಥ ನಿಷ್ಕಳಂಕ ಮನಸ್ಸನ್ನಿಟ್ಟುಕೊಂಡು ತನ್ನತ್ತ ತೋರುತ್ತಿದ್ದ ಕಾಳಜಿ-ಪ್ರೀತಿ ಎಲ್ಲವೂ ದುತ್ತನೆ ಎದುರಿಗೆ ಬಂದಂತಾಗಿ ಆ ಕ್ಷಣದಲ್ಲಂತೂ ಆಕೆಗೆ ಈ ಪ್ರಪಂಚದ ಪ್ರೀತಿಯನ್ನೆಲ್ಲ ಕಳೆದುಕೊಂಡ ಅನುಭವವಾಯ್ತು!

ಖಾದ್ರಿಬ್ಯಾರಿಯವರ ಸಾವಿನ ಸುದ್ದಿ ಕೇಳಿಸಿಕೊಳ್ಳುವುದಕ್ಕೆ ಮುಂಚೆಯೇ ಉಮ್ಮಕ್ಕೆಯವರ ಒಳಮನಸ್ಸಿನಲ್ಲಿ ಪೂರ್ವಾಹ್ನದ ಘಟನೆಯೇ ಸುತ್ತತೊಡಗಿದ್ದರಿಂದ, ಇದೀಗ ಬಂದ ಸಾವಿನ ಸುದ್ದಿ ಅವರನ್ನು ಇನ್ನಷ್ಟು ಶೋಕಪ್ರೇರಿತರನ್ನಾಗಿ ಮಾಡಿತ್ತು.

'ತನ್ನ ಮನಸ್ಸು ಯಾಕಾಗಿ ಅದು ಈ ರೀತಿ ಸಂಕುಚಿತವಾಯಿತು, ಯಾಕಾಗಿ ಆಗ್ಗಾಗ್ಗೆ ಕರಟುತ್ತದೆ-ಮುರುಟುತ್ತದೆ' ಎಂದು ತನ್ನನ್ನೇ ಪ್ರಶ್ನಿಸಿಕೊಳ್ಳುತ್ತ ತನ್ನ ಅಪ್ಪನೆಂದ ಮಾತುಗಳನ್ನು ಆಕೆ ನೆನಪಿಸಿಕೊಂಡರು.

'ನಮ್ಮ ವಯಸ್ಸು ಹೆಚ್ಚಿದಂತೆಲ್ಲ ನಮ್ಮ ಮನಸ್ಸೂ ಬೆಳೆಯಬೇಕು - ಬುದ್ಧಿಯೂ ಬೆಳೆಯಬೇಕು - ಭಾವವೂ ಬೆಳೆಯಬೇಕು, ಆದರೆ ನಮ್ಮೊಳಗಿನ ಗುಣ-ಸ್ವಭಾವ ಎಳಸಾಗಿಯೇ ಉಳಿಯಬೇಕು' ಎಂದು ಆಕೆ, ತಮ್ಮ ಅಪ್ಪ ಹೇಳಿದ್ದನ್ನು ಮೆಲುಕು ಹಾಕುತ್ತಲೇ ಅಪ್ಪನ ಸಮಾನರಾದ ಖಾದ್ರಿಬ್ಯಾರಿಯವರಿಗಾಗಿ ಒಂದಷ್ಟು ಕಣ್ಣೀರ ಮುತ್ತು ಉರುಳಿಸುವಷ್ಟರಲ್ಲಿ ವೆಂಕಪ್ಪಶೆಟ್ಟರು, ಖಾದ್ರಿಬ್ಯಾರಿಯವರ ಶವಸಂಸ್ಕಾರದಲ್ಲಿ ಪಾಲ್ಗೊಳ್ಳಲು ದುಃಖತಪ್ತರಾಗಿಯೇ ಅವರ ಹಿತ್ತಲತ್ತ ಹೆಜ್ಜೆ ಹಾಕಿದ್ದರು.

ಆಗಲೇ ಖಾದ್ರಿಬ್ಯಾರಿಯವರ ಅಂಗಳದಲ್ಲಿ ಜಾತಿಬೇಧವಿಲ್ಲದೆ ಎಲ್ಲರೂ ನೆರೆದಿದ್ದರು. ಶವಸಂಸ್ಕಾರದ ಸಿದ್ಧತೆ ನಡೆದಿತ್ತು. ಹೆಣಕ್ಕೆ ಹೊದಿಸುವ ಕಫನ್ ಕೂಡಾ ಸಿದ್ಧವಾಗಿ ಕೂತಿತ್ತು. ಹೆಣ ಮೀಯಿಸಲು ಬಿಸಿನೀರಿಗೂ ತಯಾರಿ ನಡೆದಿತ್ತು. ಅಂದಿನ ಬಿಸಿನೀರು ಕಾಯಿಸುವ ಜವಾಬ್ದಾರಿ ಖಾದ್ರಿಬ್ಯಾರಿಯವರ ಮೊಮ್ಮಕ್ಕಳ ಮೇಲಿತ್ತು. ಆ ಪರಿಯ ಮಳೆಯ ಸೀರಣಿಗೆ ಹನಿದು ಕೂತ ಸೌದೆ ಕಟ್ಟಿಗೆಗಳು ನೀರಹಂಡೆಯ ಸುತ್ತ ಹೊಗೆ ಎಬ್ಬಿಸುತ್ತಿದ್ದವೇ ವಿನಾ ಹಂಡೆಯನ್ನು ಬಿಸಿ ಮಾಡಲು ಸುತರಾಂ ಒಪ್ಪುತ್ತಿರಲಿಲ್ಲ. ಸ್ಯಾಬರ ಮೊಮ್ಮಕ್ಕಳು ಒಲೆಗಂಟಲು ಸೌದೆ ರಾಶಿಯೊಂದಿಗೆ ಇನ್ನಿಲ್ಲದಂತೆ ಗುದ್ದಾಡುವುದನ್ನು ಕಂಡ ಶೆಟ್ಟರು, ತಮ್ಮ ಬಚ್ಚಲು ಮನೆ, ಖಾದ್ರಿಬ್ಯಾರಿಗಳು ಮತ್ತು ಬಾಣಂತಿ ನೀರಿನ ಹಂಡೆಯನ್ನು ಮತ್ತೊಮ್ಮೆ ನೆನಪಿಸಿಕೊಂಡು ಕಣ್ಣು ಹನಿಸಿಕೊಂಡರು. ಶವಸಂಸ್ಕಾರಕ್ಕೆ ನೆರೆದವರೆಲ್ಲರ ಸಹಕಾರದಿಂದ ಒಲೆಗಂಟಲಲ್ಲಿ ಕೊನೆಗೂ ಉರಿ ಎದ್ದು ಬಿಸಿನೀರೂ ಸಿದ್ಧವಾಯಿತು.

ಇನ್ನೇನು ಹೆಣ ಮೀಯಿಸುವಲ್ಲಿಗೆ ಹೆಣವನ್ನು ತರುವಷ್ಟರಲ್ಲಿ ಅಂಗಳದಲ್ಲಿ ನಿಂತಿದ್ದ ಶೋಕತಪ್ತ ವಿಜಾತಿಯ ತಲೆಗಳೆಲ್ಲ ಖಾದ್ರಿಬ್ಯಾರಿಯವರ ಇಳಿವಯಸ್ಸಿನ ಆಸೆಯನ್ನು ನೆನಪಿಸಿಕೊಂಡು ಮೌನವಾಗಿಯೇ ಕಣ್ಣೀರ ತರ್ಪಣವನ್ನು ಅವರಿಗರ್ಪಿಸಿ ಕೈಮುಗಿದು ತಮ್ಮ ಮನೆಯ ದಾರಿ ಹಿಡಿಯುವಷ್ಟರಲ್ಲಿ ಉಮ್ಮಕ್ಕೆಯವರು ಆ ಸಾವಿನ ಮನೆಯನ್ನು ಹೊಕ್ಕುಬಿಟ್ಟಿದ್ದರು. ಆಗಷ್ಟೇ ಹೆಣಕ್ಕೆ ಬಿಸಿನೀರ ಸ್ನಾನ ನಡೆಯುತ್ತಿತ್ತು. ಉಮ್ಮಕ್ಕೆಯವರು ಮುಂಜಾನೆ ಗಂಡನೆಂದಿದ್ದ ಮಾತನ್ನು ಮತ್ತೊಮ್ಮೆ ಚಿತ್ತದಿಂದ ಮೇಲಕ್ಕೆತ್ತಿ ತಂದರು : ಆನೆ ಹೋದ ದಾರಿಯಲ್ಲಿ ಆಡು ಹೋದೀತು... ಮಾರಾಯ್ತಿ, ಆದರೆ ಆಡು ಹೋದ ದಾರಿಯಲ್ಲಿ ಆನೆಯೆಂದೂ ಸಾಗದು. ಉಮ್ಮಕ್ಕೆ ಮತ್ತೆ ಹನಿಗಣ್ಣಾದರು. □

ಖಾದ್ರಿಬ್ಯಾರಿಯವರ ಸಾವಿನ ಸುದ್ದಿ ಕೇಳಿಸಿಕೊಳ್ಳುವುದಕ್ಕೆ ಮುಂಚೆಯೇ ಉಮ್ಮಕ್ಕೆಯವರ ಒಳಮನಸ್ಸಿನಲ್ಲಿ ಪೂರ್ವಾಹ್ನದ ಘಟನೆಯೇ ಸುತ್ತತೊಡಗಿದ್ದರಿಂದ, ಇದೀಗ ಬಂದ ಸಾವಿನ ಸುದ್ದಿ ಅವರನ್ನು ಇನ್ನಷ್ಟು ಶೋಕಪ್ರೇರಿತರನ್ನಾಗಿ ಮಾಡಿತ್ತು. 'ತನ್ನ ಮನಸ್ಸು ಯಾಕಾಗಿ ಅದು ಈ ರೀತಿ ಸಂಕುಚಿತವಾಯಿತು, ಯಾಕಾಗಿ ಆಗ್ಗಾಗ್ಗೆ ಕರಟುತ್ತದೆ-ಮುರುಟುತ್ತದೆ' ಎಂದು ತನ್ನನ್ನೇ ಪ್ರಶ್ನಿಸಿಕೊಳ್ಳುತ್ತ ತನ್ನ ಅಪ್ಪನೆಂದ ಮಾತುಗಳನ್ನು ಆಕೆ ನೆನಪಿಸಿಕೊಂಡರು.
'ನಮ್ಮ ವಯಸ್ಸು ಹೆಚ್ಚಿದಂತೆಲ್ಲ ನಮ್ಮ ಮನಸ್ಸೂ ಬೆಳೆಯಬೇಕು - ಬುದ್ಧಿಯೂ ಬೆಳೆಯಬೇಕು - ಭಾವವೂ ಬೆಳೆಯಬೇಕು, ಆದರೆ ನಮ್ಮೊಳಗಿನ ಗುಣ-ಸ್ವಭಾವ ಎಳಸಾಗಿಯೇ ಉಳಿಯಬೇಕು' ಎಂದು.

ಹಸಿರು ಮಲೆನಾಡಿನಲ್ಲಿ ಕೆಂಪು ಕ್ರಾಂತಿಯ ಮುಂಬೆಳಗು!



ನಾಗರಿಕ ಆಡಳಿತ ಮುಸುಕಿನಲ್ಲಿ ದಲಿತ-ಆದಿವಾಸಿಗಳ ಘನತೆ ಹಾಗೂ ಬದುಕಿನ ಹಕ್ಕುಗಳನ್ನು ಹರಿಸುವ ಸರ್ಕಾರದಲ್ಲಿ ೪೭ರ ಹಿಂದೆ ಯಾವ ಭೂಮಾಲೀಕ ಬಂಡವಾಳಿಗ ವರ್ಗದ ಸೇವೆ ಮಾಡುತ್ತಿದ್ದವೋ, ಅವುಗಳ ಸೇವೆಯನ್ನೇ ಈಗಲೂ ಮುಂದುವರೆಸುತ್ತಿರುವಾಗ, ಬ್ರಿಟಿಷರಿಗಿಂತಲೂ ಕ್ರೂರವಾಗಿ ಜನತೆಯ ಮೇಲೆ ದಮನ ದಬ್ಬಾಳಿಕೆ ಮುಂದುವರೆಸುತ್ತಿರುವಾಗ, ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗಗಳು ಒಂದಕ್ಕೊಂದು ಪೈಪೋಟಿ ನೀಡುವಂತೆ ಅಂತರರಾಷ್ಟ್ರೀಯ ಬಂಡವಾಳಿಗರ ಕೈಗೊಂಬೆಯಾಗಿ, ಜನತೆಯ ಮೇಲೆ ಪ್ರಹಾರ ನಡೆಸುತ್ತಿರುವಾಗ, 'ನಾನು ಈ ದೇಶದ ಜನತೆ...' (we, the people...) ರಚಿಸಿಕೊಂಡಿರುವ ಸಂವಿಧಾನ ಹಾಗೂ ಅದರ ಅಂಗರಚನೆಗಳು ಜನತೆಯ ಆಶೋತ್ತರಗಳಿಗೆ ದ್ರೋಹ ಬಗೆಯುತ್ತಿರುವಾಗ, ಸಂವಿಧಾನಕ್ಕೆ ಜನತೆಯ ಹಿತಾಸಕ್ತಿ ಕಾಪಾಡುವ ಸಾಮರ್ಥ್ಯವೇ ಇಲ್ಲದಂತಾಗಿರುವಾಗ, ಬದಲಿಗೆ ಸರ್ಕಾರದ ಶಸ್ತಾಸ್ತ್ರ ಪಡೆಗಳು ಜನತೆಯನ್ನು ಬಲಿತೆಗೆದುಕೊಳ್ಳುವ ಭೂ-ಮಾಲೀಕರ - ಬಂಡವಾಳಿಗರ - ಬಹುರಾಷ್ಟ್ರೀಯ ಕಂಪನಿಗಳ ಖಾಸಗಿ ಸೇನೆಗಳೇ ಆಗಿಬಿಟ್ಟಿರುವಾಗ 'ನಾವು, ಈ ದೇಶದ ಜನತೆ...' ಅವುಗಳ ವಿರುದ್ಧ ಸಶಸ್ತ್ರ ಹೋರಾಟ ಮಾಡಿ ನಮ್ಮ ಬದುಕು ಹಾಗೂ ಘನತೆಗಳನ್ನು ಕಾಪಾಡಿಕೊಳ್ಳುವುದು ಸಹ ಪ್ರಜಾತಾಂತ್ರಿಕ ಹಕ್ಕೇ ಆಗುತ್ತದೆ ಎಂಬ ಪ್ರತಿವಾದ ಮೊಟ್ಟಮೊದಲಿಗೆ ಹುಟ್ಟಿಕೊಂಡಿದ್ದು ಪಶ್ಚಿಮ ಬಂಗಾಳದ ನಕ್ಸಲ್ಬರಿಯ ಟೀ ತೋಟಗಳಲ್ಲಿ! ತಮ್ಮನ್ನು ಕಾನೂನು ಬದ್ಧವಾಗಿ ಕೊಂದುಹಾಕಲು ಮುಂದೆ ಬಂದ ಪಶ್ಚಿಮ ಬಂಗಾಳದ ಪೊಲೀಸರ ಮೇಲೆ ಅಲ್ಲಿನ ಆದಿವಾಸಿ ಕೂಲಿ ಕಾರ್ಮಿಕರು ೧೯೬೭ರ ಮೇ ೧೦ ರಂದು ನಕ್ಸಲ್ಬರಿಯಲ್ಲಿ ಪ್ರತಿಯಾಗಿ ಗುಂಡು ಹಾರಿಸುವ ಮೂಲಕ... ಪ್ರಜಾತಂತ್ರದ ಉಳಿವಿಗೆ 'ಎರಡನೇ ಬಂದೂಕಿನ ಅಗತ್ಯ' ವನ್ನು ಜನತೆ ಹಾಗೂ ಪ್ರಭುತ್ವದ ಮುಂದಿಟ್ಟರು.

ಒಂದು ನಿಜವಾದ ಪ್ರಜಾಪ್ರಭುತ್ವ ಆದಿವಾಸಿಗಳ ಎರಡನೇ ಬಂದೂಕು ಎತ್ತಿದ ಪ್ರಶ್ನೆಯನ್ನು ಬಗೆಹರಿಸಿ, ಬಂದೂಕಿನ ಅಗತ್ಯಗಳೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣ ಮಾಡಬೇಕಿತ್ತು. ಆದರೆ, ತೆಲುಗಿನ ಕ್ರಾಂತಿಕವಿ ಚರಬಂಡ ರಾಜು ಹೇಳುವಂತೆ

'ನಮ್ಮ ಪ್ರಶ್ನೆಗೆ ಅವರ ಬಳಿ ಉತ್ತರವಿಲ್ಲದಾಗ
ಅರ್ಧ ರಾತ್ರಿಯಲ್ಲಿ ಬಂದು ನಮ್ಮ ಮನೆಯ
ಬಾಗಿಲು ತಟ್ಟುತ್ತಾರೆ...
ನಾನು ಮುತ್ತಿಟ್ಟ ಹಸು ಕಂದಮ್ಮನ ಕೆನ್ನೆಯನ್ನು
ಕತ್ತಿಯಿಂದ ಕೆರೆದು ಬಚ್ಚಿಟ್ಟ ರಹಸ್ಯಗಳನ್ನು ಹುಡುಕುತ್ತಾರೆ...'

ಕುಡಿಯಲು ನೀರು ಕೊಡುವುದೂ ದುಸ್ತರವಾಗಿರುವ ಈ ಲೋಕದಲ್ಲಿ ಪರರ ಒಳಿತಿಗಾಗಿ ತುಂಬು ಪ್ರಾಣವನ್ನೇ ಬಲಿ ನೀಡುವುದು ಸುಲಭದ ಮಾತಲ್ಲ. ಅಂತಹ ತ್ಯಾಗ ಬಲಿದಾನಗಳಿಂದಾಗಿಯೇ ಅವರು ಜನಪದರ ನಾಯಕರೇ ಆಗಿದ್ದರು. ಪಾರ್ವತಿ - ಹಾಜಿಮಾರು ಹುತಾತ್ಮರಾಗಿ ಒಂದು ವರ್ಷವಾದರೂ ಅವರು ಎತ್ತಿದ ಪ್ರಶ್ನೆಗಳು ಮಾತ್ರ ಹಾಗೆ ಉಳಿದಿವೆ. ೪೭ರ ಸ್ವಾತಂತ್ರ್ಯದ ನಂತರವೂ ಸತ್ಯ - ನ್ಯಾಯಗಳನ್ನು, ಪ್ರಜೆಗಳ ಸ್ವಾತಂತ್ರ್ಯವನ್ನು ಬಂದೂಕಿನ ಮೊರೆ ಹೋಗದೆ ರಕ್ಷಿಸಿಕೊಳ್ಳಲು ಸಾಧ್ಯವೇ ಎಂಬ ಪ್ರಶ್ನೆ ಇದೀಗ ಇಡೀ ಕರ್ನಾಟಕದ ಪ್ರಜಾತಂತ್ರವಾದಿಗಳು, ಹಾಗೂ ಮಾನವತಾವಾದಿಗಳ ಮಧ್ಯೆ ತೀವ್ರ ಚರ್ಚೆಗೆ ಒಳಪಟ್ಟಿದೆ.

ಶಿವಸುಂದರ್

ಕಳೆದ ನವೆಂಬರ್ ೧೭ಕ್ಕೆ ಸತ್ಯ-ನ್ಯಾಯಗಳಿಗೆ ಬಂದೂಕಿನ ರಕ್ಷಣೆ ನೀಡುತ್ತಿದ್ದ ನಕ್ಸಲೈಟ್ ಕಾರ್ಯಕರ್ತೆಯರಾದ ಪಾರ್ವತಿ-ಹಾಜಿಮಾರನ್ನು ಕಾರ್ಕಳದ ಈದುವಿನಲ್ಲಿ ಪೊಲೀಸ್ ಗುಂಡುಗಳು ಬಲಿ ತೆಗೆದುಕೊಂಡು ಒಂದು ವರ್ಷವಾಯಿತು. 'ಶಾಂತಿ ಪ್ರಿಯ'ರ ನಾಡೆಂಬ ಕರ್ನಾಟಕದಲ್ಲಿ ಇದು ನಕ್ಸಲೈಟರ ಮೇಲೆ ನಡೆದ ಎರಡನೇ ನಕಲಿ ಎನ್‌ಕೌಂಟರ್. ೧೯೯೯ರ ಆಗಸ್ಟ್ ೨೭ನೇ ತಾರೀಖು ರಾಯಚೂರಿನ ಭೂಮಾಲೀಕರ ದೌರ್ಜನ್ಯದ ವಿರುದ್ಧ ರೈತ ಕೂಲಿಗಳನ್ನು ಸಂಘಟಿಸಿ ಸಶಸ್ತ್ರ ಹೋರಾಟಕ್ಕೆ ಅಣಿಗೊಳಿಸುತ್ತಿದ್ದ ಮತ್ತೊಬ್ಬ ನಕ್ಸಲೈಟ್ ಕಾರ್ಯಕರ್ತ ಭಾಸ್ಕರರನ್ನು [illegible]೦ ಮಂದಿ ಪೊಲೀಸರು ಸುತ್ತುವರೆದು ಅವರ ಬಾಳಸಂಗಾತಿ ಸುಮಾಳ ಎದುರಿಗೇ ಗುಂಡಿಟ್ಟು ಕೊಂದರು. ಸುಮಾರ ಮೇಲೆ ಸುಳ್ಳು ಕೇಸುಗಳನ್ನು ಹೊರೆಸಿ ೫ ವರ್ಷಗಳ ಕಾಲ ಜೈಲಿಗೆ ದೂಡಿದರು.

ಕುಡಿಯಲು ನೀರು ಕೊಡುವುದೂ ದುಸ್ತರವಾಗಿರುವ ಈ ಲೋಕದಲ್ಲಿ ಪರರ ಒಳಿತಿಗಾಗಿ ತುಂಬು ಪ್ರಾಣವನ್ನೇ ಬಲಿ ನೀಡುವುದು ಸುಲಭದ ಮಾತಲ್ಲ. ಅಂತಹ ತ್ಯಾಗ ಬಲಿದಾನಗಳಿಂದಾಗಿಯೇ ಅವರು ಜನಪದರ ನಾಯಕರೇ ಆಗಿದ್ದರು. ಪಾರ್ವತಿ - ಹಾಜಿಮಾರು ಹುತಾತ್ಮರಾಗಿ ಒಂದು ವರ್ಷವಾದರೂ ಅವರು ಎತ್ತಿದ ಪ್ರಶ್ನೆಗಳು ಮಾತ್ರ ಹಾಗೆ ಉಳಿದಿವೆ. ೪೭ರ ಸ್ವಾತಂತ್ರ್ಯದ ನಂತರವೂ ಸತ್ಯ - ನ್ಯಾಯಗಳನ್ನು, ಪ್ರಜೆಗಳ ಸ್ವಾತಂತ್ರ್ಯವನ್ನು ಬಂದೂಕಿನ ಮೊರೆ ಹೋಗದೆ ರಕ್ಷಿಸಿಕೊಳ್ಳಲು ಸಾಧ್ಯವೇ ಎಂಬ ಪ್ರಶ್ನೆ ಇದೀಗ ಇಡೀ ಕರ್ನಾಟಕದ ಪ್ರಜಾತಂತ್ರವಾದಿಗಳು, ಹಾಗೂ ಮಾನವತಾವಾದಿಗಳ ಮಧ್ಯೆ ತೀವ್ರ ಚರ್ಚೆಗೆ ಒಳಪಟ್ಟಿದೆ.

ಪ್ರಜಾತಂತ್ರದಲ್ಲಿ ಒಂದೇ ಬಂದೂಕಿರಲು ಸಾಧ್ಯ. ಅದು ಪೊಲೀಸರ ಬಳಿ ಮಾತ್ರ ಎಂಬುದು ಪ್ರಭುತ್ವದ ವಾದ. ಹಾಗೆಯೇ 'ಕಾನೂನು ಬದ್ಧ ನಾಗರಿಕ ಆಡಳಿತ'ವೆಂಬ ಪ್ರಜಾತಂತ್ರದ ಆಡಳಿತಾತ್ಮಕ ಮೌಲ್ಯಗಳಿಗೆ ಬದ್ಧರಾದ ಕೆಲವು ಪ್ರಗತಿಪರ ಬುದ್ಧಿಜೀವಿಗಳ ವಾದ. ಇದಕ್ಕೆ ಪ್ರತಿಯಾಗಿ ಕಾನೂನೆಂಬುದೇ ಜನವಿರೋಧಿಯಾಗಿದ್ದಾಗ ಕಾನೂನು ಪಾಲಕರಿಗೆ ಸಶಸ್ತ್ರ ಶಕ್ತಿ ಹೆಚ್ಚಿದಷ್ಟು ಅದು ಜನರ ಪ್ರಜಾತಾಂತ್ರಿಕ ಹಕ್ಕುಗಳನ್ನು ಹರಣಗೊಳಿಸುತ್ತ ಹೋಗಿ, ಅಂತಿಮವಾಗಿ ಸಶಸ್ತ್ರ ಹೋರಾಟಕ್ಕೆ ಸಮರ್ಥನೆಯನ್ನೇ ಒದಗಿಸುತ್ತದೆ ಎಂಬುದು ಕಾನೂನಿನ ಮಿತಿಯಾಚೆಗೆ ಸಮಪಾಲು-ಸಮಬಾಳಿನ 'ನ್ಯಾಯ-ನೀತಿ'ಗಳ ಪ್ರತಿಪಾದನೆ ಮಾಡುವ ಬುದ್ದಿಜೀವಿಗಳು ಎತ್ತುವ ಪ್ರಶ್ನೆ.

೧೯೬೭ರಲ್ಲಿ ನಕ್ಸಲ್ಬರಿ ಎತ್ತಿದ ಪ್ರಶ್ನೆಯನ್ನೇ ಇಂದು ದೇಶದಾದ್ಯಂತ ಆದಿವಾಸಿಗಳು, ದಲಿತರು, ರೈತಕೂಲಿಗಳು, ಕಾರ್ಮಿಕರು, ನೌಕರರು, ಮಧ್ಯಮವರ್ಗದ ಜನತೆ, ಒಕ್ಕೊರಲಿನಿಂದ ಕೇಳುತ್ತಿದ್ದಾರೆ. ದಂಡಕಾರಣ್ಯ ದಟ್ಟ ಅಡವಿಯಿಂದ ಹಿಡಿದು ಕಲ್ಕತ್ತ ನಗರದ ಬೀದಿಗಳವರೆಗೆ ತೆಲಂಗಾಣದ ಬೀಳು ಭೂಮಿಯಿಂದ ಬಿಹಾರದ ಧನಬಾದ್‌ನ ಕಲ್ಲಿದ್ದಲ ಹಗೆಗಳವರೆಗೆ ಈ ಪಶ್ನೆ ಕಳೆದ ೩೭ ವರ್ಷಗಳಲ್ಲಿ ಇನ್ನಷ್ಟು ಗಟ್ಟಿಯಾಗಿ, ವ್ಯವಸ್ಥಿತವಾಗಿ ಪ್ರಭುತ್ವದ ಮುಂದೆ ಬಂದು ನಿಂತಿದೆ. ಸಮಸ್ಯೆಗಳಿಗೆ ಸಮಾಧಾನ ಒದಗಿಸಿದ ಪ್ರಭುತ್ವ, ಪ್ರಶ್ನೆ ಕೇಳುವ ಧ್ವನಿಯನ್ನೇ ಕಿತ್ತು ಹಾಕಲು ತನ್ನೆಲ್ಲಾ ಸಂಪನ್ಮೂಲಗಳನ್ನು ವ್ಯಯಿಸುತ್ತಿದೆ!

ನವೆಂಬರ್ ೧೭ ರಂದು ಪಾರ್ವತಿ - ಹಾಜಿಮಾರು ಮಲೆನಾಡಿನಲ್ಲಿ ಕೇಳಿದ್ದು ಇದೇ ಪ್ರಶ್ನೆಗಳನ್ನೇ. ಶಾಂತಿಪ್ರಿಯ ಕರ್ನಾಟಕ ಸರ್ಕಾರ ಈ ಮುಜುಗರದ ಪ್ರಶ್ನೆಗಳನ್ನು ನಿವಾರಿಸಿಕೊಂಡಿದ್ದು ಶಾಂತಿಯುತ ರೀತಿಯಲ್ಲೇನೂ ಅಲ್ಲ!

ಭಾರತದ ಇತರ ಜನವರ್ಗಗಳಿಗೆ ೧೯೪೭ ಒಂದಷ್ಟು ಹುಸಿ ಭರವಸೆಗಳನ್ನಾದರೂ ತಂದುಕೊಟ್ಟಿರಬಹುದು. ಆದರೆ ಆದಿವಾಸಿಗಳಿಗಂತೂ ೧೯೪೭ರ ಸ್ವಾತಂತ್ರ್ಯ ಅಂತಹ ಯಾವ ಹುಸಿ ಭರವಸೆಗಳನ್ನೂ ಸಹ ನೀಡಿಲ್ಲ. ಹೀಗಾಗಿಯೇ ಆದಿವಾಸಿಗಳು ತಲೆತಲಾಂತರದಿಂದ ವಾಸಿಸುತ್ತಿರುವ ಭೂ ಪ್ರದೇಶಗಳು ೪೭ರ ನಂತರವೂ ಒಂದು ಆಂತರಿಕ ವಸಾಹತುಗಳಾಗಿಯೇ ಮುಂದುವರೆದಿವೆ. ೪೭ಕ್ಕೆ ಮುನ್ನ ಬ್ರಿಟೀಷರ ಪಾಲಿಗೆ ಇಡೀ ಭಾರತ ಹೇಗೆ ಅಪಾರ ಸಂಪತ್ತುಳ್ಳ ಒಂದು ಭೂ ಪ್ರದೇಶವಾಗಿ ಮಾತ್ರ ಕಂಡಿತ್ತೋ, ೪೭ರ ನಂತರವೂ ಆದಿವಾಸಿಗಳು ವಾಸ ಮಾಡುವ ಭೂ ಪ್ರದೇಶ ದೆಹಲಿ ಬೆಂಗಳೂರಿನ ದೃಷ್ಟಿಗೆ ಒಂದು ಖನಿಜ ಹಾಗೂ ವನ್ಯ ಸಂಪತ್ತುಳ್ಳ ಭೂ ಪ್ರದೇಶವಾಗಿ ಕಂಡವೇ ವಿನಃ ಅಲ್ಲಿನ ಆದಿವಾಸಿಗಳು ಸ್ವಾತಂತ್ರ್ಯದ ನಕ್ಷೆಯೊಳಗೆ ಬರಲಿಲ್ಲ.

ಇಂದಿಗೂ ಸಹಸ್ರಾರು ಆದಿವಾಸಿ ಗ್ರಾಮಗಳು ಭಾರತದ ಭೂಪಟದಲ್ಲೂ ಇಲ್ಲ. ಅಲ್ಲಿ ವಾಸಿಸುತ್ತಲೇ ಬಂದಿರುವ ಆದಿವಾಸಿಗಳು ಮತದಾರರ ಪಟ್ಟಿಯಲ್ಲೂ ಇಲ್ಲ. ಸಾರಾಂಶವೇನೆಂದರೆ ೧೯೪೭ರ ನಂತರ ಅವರನ್ನು ಸ್ವತಂತ್ರ ಭಾರತದ ನಾಗರಿಕರೆಂದೇ ಪರಿಗಣಿಸಲಾಗಿಲ್ಲ. ಬದಲಿಗೆ, ವಾಷಿಂಗ್‌ಟನ್ನಿನಲ್ಲಿ - ದೆಹಲಿಯಲ್ಲಿ - ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಕಾರ್ಪೊರೇಟ್ ಉದ್ಯಮಿಗಳು, ವಿಶ್ವಬ್ಯಾಂಕ್‌ನಂತಹ ಹಣಕಾಸು ಸಂಸ್ಥೆಗಳು, ಆಡಳಿತ ಪ್ರಭುಗಳು ಒಟ್ಟಿಗೆ ಸೇರಿ 'ದೇಶದ ಹಿತಾಸಕ್ತಿ'ಗಾಗಿ ರಚಿಸುವ ಡ್ಯಾಮ್, ಗಣಿಗಾರಿಕೆ, ಎಕ್ಸ್‌ಪ್ರೆಸ್ ಹೆದ್ದಾರಿಯಂತಹ ಯೋಜನೆಗಳಿಗೆಂದು ಅರಣ್ಯವನ್ನೇ ನಂಬಿ ಬದುಕುತ್ತಿದ್ದ ಆದಿವಾಸಿಗಳನ್ನು ಕಾಡಿನಿಂದಾಚೆಗೆ ಹೊರದೂಡಲಾಗಿದೆ.

೧೯೯೧ರವರೆಗೆ ಈ ಬಗೆಯಲ್ಲಿ ೩ ಕೋಟಿಗೂ ಹೆಚ್ಚು ಆದಿವಾಸಿಗಳನ್ನು ವಿವಿಧ ಯೋಜನೆಗಳ ಹೆಸರಲ್ಲಿ ಎತ್ತಂಗಡಿ ಮಾಡಿದ್ದು, ಅವರಲ್ಲಿ ಶೇ ೮೦ ಜನರಿಗೆ ಈವರೆಗೆ ಯಾವ



೧೯೯೧ರವರೆಗೆ ೩ ಕೋಟಿಗೂ ಹೆಚ್ಚು ಆದಿವಾಸಿಗಳನ್ನು ವಿವಿಧ ಯೋಜನೆಗಳ ಹೆಸರಲ್ಲಿ ಎತ್ತಂಗಡಿ ಮಾಡಿದ್ದು, ಅವರಲ್ಲಿ ಶೇ ೮೦ ಜನರಿಗೆ ಈವರೆಗೆ ಯಾವ ಪರಿಹಾರ, ಪುನರ್‌ವಸತಿಯೂ ಸಿಕ್ಕಿಲ್ಲ. ಅರಣ್ಯದಲ್ಲಿ ಘನತೆಯಿಂದ ಬದುಕುತ್ತಿದ್ದ ಆದಿವಾಸಿಗಳು ನಿರ್ವಸತಿಗರಾಗಿ ನಗರದಲ್ಲಿ ಭಿಕಾರಿಗಳಾಗಿ ಬದುಕುತ್ತಿದ್ದರೆ ಹಲವು ಆದಿವಾಸಿ ಹೆಣ್ಣುಮಕ್ಕಳು ಗತಿಯಿಲ್ಲದೆ ಮೈಯನ್ನೇ ಮಾರಿಕೊಳ್ಳುವ ದುಸ್ಥಿತಿಗೆ ದೂಡಲ್ಪಟ್ಟಿದ್ದಾರೆ. ಮೇಲಾಗಿ ಈ ತಥಾಕಥಿತ 'ರಾಷ್ಟ್ರೀಯ ಹಿತಾಸಕ್ತಿ'ಯ ಯೋಜನೆಗಳ್ಯಾವುದರ ಫಲಾನುಭವಿಗಳು ಆದಿವಾಸಿಗಳಲ್ಲ.

ಪರಿಹಾರ, ಪುನರ್‌ವಸತಿಯೂ ಸಿಕ್ಕಿಲ್ಲ. ಅರಣ್ಯದಲ್ಲಿ ಘನತೆಯಿಂದ ಬದುಕುತ್ತಿದ್ದ ಆದಿವಾಸಿಗಳು ನಿರ್ವಸತಿಗರಾಗಿ ನಗರದಲ್ಲಿ ಭಿಕಾರಿಗಳಾಗಿ ಬದುಕುತ್ತಿದ್ದರೆ ಹಲವು ಆದಿವಾಸಿ ಹೆಣ್ಣುಮಕ್ಕಳು ಗತಿಯಿಲ್ಲದೆ ಮೈಯನ್ನೇ ಮಾರಿಕೊಳ್ಳುವ ದುಸ್ಥಿತಿಗೆ ದೂಡಲ್ಪಟ್ಟಿದ್ದಾರೆ. ಮೇಲಾಗಿ ಈ ತಥಾಕಥಿತ 'ರಾಷ್ಟ್ರೀಯ ಹಿತಾಸಕ್ತಿ'ಯ ಯೋಜನೆಗಳ್ಯಾವುದರ ಫಲಾನುಭವಿಗಳು ಆದಿವಾಸಿಗಳಲ್ಲ.

ಆ ವಿಷಯಕ್ಕೆ ಬಂದರೆ ಈ ದೇಶದ ಇತರ ದುಡಿಯುವ ವರ್ಗಗಳು, ಸಮುದಾಯಗಳು ಆ ಯೋಜನೆಗಳ ಫಲಾನುಭವಿಗಳಲ್ಲ. ಹೀಗಾಗಿಯೇ ಈ ಯೋಜನೆಗಳು ಯಾರ ಹಿತಾಸಕ್ತಿ ಕಾಪಾಡುತ್ತಿವೆ ಎಂಬ ಪ್ರಶ್ನೆ ಎದುರಾದರೇ ಅದೇ ವಾಷಿಂಗ್‌ಟನ್ ದೊರೆಗಳು, ಹಾಗೂ ದೆಹಲಿ ದಲ್ಲಾಳಿಗಳು, ಸ್ಥಳೀಯ ಭೂಮಾಲೀಕರು ಎಂಬ ಉತ್ತರ ಸ್ಪಷ್ಟವಾಗಿ ದೊರೆಯುತ್ತದೆ. ಹಾಗಾದಲ್ಲಿ ಈ ವರ್ಗಗಳ ಆಸಕ್ತಿಯೇ 'ರಾಷ್ಟ್ರೀಯ ಹಿತಾಸಕ್ತಿ' ಎಂದಾಗಲಿಲ್ಲವೇ? ರಾಷ್ಟ್ರವೆಂದರೆ ಈ ವರ್ಗಗಳೇ ಎಂದಾದಲ್ಲಿ ಇನ್ನುಳಿದ ಜನವರ್ಗಗಳ ಕಥೆಯೇನು? ಈ ಯೋಜನೆಗಳ ವಿರೋಧಿಗಳನ್ನೆಲ್ಲಾ 'ರಾಷ್ಟ್ರದ್ರೋಹಿ'ಗಳೆಂದೂ ಅಂತಹ ಯೋಜನೆಗಳ ವಿರುದ್ಧದ ಹೋರಾಟಗಳನ್ನು 'ಪ್ರಭುತ್ವದ ವಿರುದ್ಧದ ಸಂಚೆಂದೂ' ಮೊಕದ್ದಮೆಗಳು ದಾಖಲಾಗುತ್ತವೆ. ಹಾಗಾದರೆ, ಅದರ ಅರ್ಥವೇನು?

ಈ ೧೯೪೭ರ ನಂತರ 'ರಾಷ್ಟ್ರ'ವಾಗಿರುವ ಆ ವರ್ಗಗಳ ಗುಲಾಮರಾಗಿಯೇ ಇತರ ವರ್ಗಗಳು ಜೀವಿಸಬೇಕೆಂದೇ? ಹಾಗಾದರೆ, ೪೭ ನೀಡಿದ ಪ್ರಜಾತಂತ್ರದ ಭರವಸೆಯ ಮಾತೇನು? ಈ ವರ್ಗಗಳ ಯೋಜನೆಗಳ ಅನುಷ್ಠಾನಕ್ಕೆ ಯಾವುದೇ ಅಡ್ಡಿ ಬರದಿರುವಂತೆ ಪ್ರಭುತ್ವದ ಪಡೆಗಳು ಸಶಸ್ತ್ರರಾಗಿ ಜನತೆಯ ಮೇಲೆ ದಾಳಿಗಿಳಿದಿರುವಾಗ, ಜನತೆಯ ಪ್ರತಿರೋಧ ಮಾತ್ರ ಪ್ರಜಾತಂತ್ರದ ಹೆಸರಲ್ಲಿ ಎಂದೆಂದಿಗೂ ನಿಶಸ್ತ್ರವಾಗಿಯೇ ಇರಬೇಕೆನ್ನುವುದು ಕಾನೂನು ಬದ್ಧವಿರಬಹುದಾದರೂ ನ್ಯಾಯಬದ್ಧವೇ? ಆಗ ಪ್ರಜಾತಂತ್ರದ ವ್ಯಾಖ್ಯೆ ಏಕಪಕ್ಷೀಯವಾಗಲಿಲ್ಲವೇ? ೫೭ ವರ್ಷಗಳ ನಮ್ಮ ಪ್ರಜಾತಂತ್ರವೆಂಬುದು ಈ ರೀತಿ ಆಳುವ ವರ್ಗಗಳು ಶೋಷಿತ ವರ್ಗಗಳ ಮೇಲೆ ನಡೆಸಿರುವ ಯುದ್ಧವೆಂದೇ ಸಾಬೀತಾಗಿರುವ ತಮ್ಮ ರಕ್ಷಣೆಗೆ ಜನತೆ ಶಸ್ತ್ರ ಸಜ್ಜಿತಗೊಳ್ಳುವುದು ಪ್ರಜಾತಂತ್ರ ವಿರೋಧಿ ಹೇಗಾಗುತ್ತದೆ? ಘನತೆಯುಳ್ಳ ಬದುಕಿಗಾಗಿ ಶೋಷಿತ ಜನರು ಮಾಡಿಕೊಳ್ಳುವ ಈ ಆಯ್ಕೆ ಅಪ್ರಜಾತಾಂತ್ರಿಕ ಹೇಗಾಗುತ್ತದೆ?

ಅಸಲು ೪೭ರ ಪ್ರಭುತ್ವ ಆಳುವ ವರ್ಗಗಳ ಪಕ್ಷಪಾತಿ ಹಾಗೂ ಅವರ ಶೋಷಣೆಯ ಸಾಧನ ಎಂದು ಸಾಬೀತಾದ ನಂತರವೂ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆಗೆ, ಕ್ರಾಂತಿಗೆ, ನಿಜವಾದ ಸ್ವಾತಂತ್ರ್ಯ ಹೋರಾಟದ ಮುಂದುವರಿಕೆಗೆ ಮುಂದಾಗಬೇಕೇ ಅಥವಾ ಪ್ರಭುತ್ವ ನಿಷ್ಪಕ್ಷಪಾತಿ ಎಂಬ ಕಂಫರ್ಟ್ ಜೋನಿನ ಅನೈತಿಕ ಭ್ರಾಂತಿಗಳಲ್ಲಿ ಮುಳುಗಿಸಬೇಕೆ?

ಪಾರ್ವತಿ - ಹಾಜಿಮಾ ಮಲೆನಾಡಿನಲ್ಲಿ ನೆಲೆನಿಂತು ಕೇಳಿದ್ದು ಇದೇ ಪ್ರಶ್ನೆಗಳನ್ನೇ! ಮಲೆನಾಡಿನ ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ ಹಾಗೂ ದಕ್ಷಿಣ ಕನ್ನಡದಲ್ಲಿ ಹರಡಿಕೊಂಡಿರುವ ಗಿರಿ-ಕಂದರಗಳಲ್ಲಿ ೨೦ ಸಾವಿರಕ್ಕೂ ಹೆಚ್ಚು ಆದಿವಾಸಿಗಳು ಶತಶತಮಾನಗಳಿಂದಲೂ ಅರಣ್ಯವನ್ನೇ

ನಂಬಿಕೊಂಡು, ಅರಣ್ಯವನ್ನು ಹೊರೆಯುತ್ತಾ ಬಂದಿದ್ದಾರೆ. ಘಟ್ಟದ ಮೇಲೆ ಗೌಡ್ಲುಗಳೆಂದೂ, ಘಟ್ಟದ ಕೆಳಗೆ ಮಲೆಕುಡಿಯರೆಂದೂ ಕರೆಯಲ್ಪಡುವ ಈ ಆದಿವಾಸಿಗಳ ಬದುಕಿನ ಸ್ಥಿತಿ-ಗತಿಗಳು ಪವಾಡ ಸದೃಶವಾದಂತಹದು. ದಟ್ಟ ಕಾನನದ ಮೂಲೆಮೂಲೆಗಳಲ್ಲಿ ಹರಿದು ಹಂಚಿದಂತಿರುವ ಈ ಗಿರಿಜನ ಗ್ರಾಮಗಳಲ್ಲಿ ಶೇ ೯೦ ಭಾಗದಷ್ಟು ಕಡೆ ಈಗಲೂ ವಿದ್ಯುತ್ ಸೌಕರ್ಯವಿಲ್ಲ, ಶಾಲೆ, ಆಸ್ಪತ್ರೆಗಳಿಲ್ಲ. ರಸ್ತೆ ಸಂಪರ್ಕಗಳಿಲ್ಲ. ಹೀಗಾಗಿಯೇ ಅಲ್ಲಿನ ಆದಿವಾಸಿಗಳ ಗ್ರಾಮಗಳ ದೂರಗಳ ಲೆಕ್ಕ ಈಗಲೂ ಕಿ.ಮೀಗಳಲ್ಲಿ ನಡೆಯುವುದಿಲ್ಲ. ಬದಲಿಗೆ ಎಷ್ಟು ಹೊತ್ತಿನ ನಡಿಗೆ ಎಂಬುದೇ ದೂರದ ಮಾನದಂಡ. ಶೇ ೫೦ ಭಾಗದಷ್ಟು ಹಳ್ಳಿಗಳ ಆದಿವಾಸಿಗಳು ದಟ್ಟ ಕಾನನದ ನಡುವೆ ದಿನಪೂರ್ತಿ ನಡೆಯದೆ ಒಂದು ಆಸ್ಪತ್ರೆ ಅಥವಾ ಅಂಗಡಿಯೂ ಸಿಗುವುದಿಲ್ಲ.

ದಟ್ಟಾರಣ್ಯಗಳ ನಡುವೆ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗುವ ಒಂದಷ್ಟು ಬಯಲು ಭೂಮಿಯನ್ನೇ ಸಾಗುವಳಿ ಮಾಡಿಕೊಂಡು ಜೀವನ ಸಾಗಿಸಬೇಕಾದ ಅನಿವಾರ್ಯತೆ ಈ ಆದಿವಾಸಿಗಳದ್ದು. ಇದರೊಡನೆ ಕಾನನದ ಅಂಚಿನಲ್ಲಿ ಇರುವ ನದಿ ತೀರದ ಅಥವಾ ಒಳನಾಡಿನ ಮುಖಜ ಭೂಮಿಯ ನೂರಾರು ಎಕರೆ ಸಾಗುವಳಿಯ ಒಡೆತನ ಮಾತ್ರ ಬ್ರಾಹ್ಮಣ, ಬಂಟ, ಜೈನ ಹಾಗೂ ಅಲ್ಲಲ್ಲಿ ಒಕ್ಕಲಿಗ ಸಮುದಾಯದ ಭೂ ಮಾಲೀಕರದ್ದೇ. ಆದಿವಾಸಿಗಳು ಹಾಗೂ ಸುತ್ತಮುತ್ತಲಿನ ರೈತ-ಕೂಲಿಗಳು-ಮುಖ್ಯವಾಗಿ ಆದಿವಾಸಿಗಳು, ದಲಿತರು, ಬಿಲ್ಲವರು, ಒಕ್ಕಲಿಗರು ಹೊಟ್ಟೆಪಾಡಿಗಾಗಿ ಈ ದೊಡ್ಡ ಭೂಮಾಲೀಕರ ಬಳಿ ಕೆಲಸಕ್ಕೆ, ಜೀತಕ್ಕೆ, ದೇಣಿಗೆ ಹೋಗಲೇ ಬೇಕು. ಗೇಣಿ ಕೆಲಸಕ್ಕೆ ಇತರ ಸಮುದಾಯಗಳ ಬಡರೈತರು ಹೋಗುತ್ತಾರೆಂದರೇ, ಕೂಲಿ ಹಾಗೂ ಜೀತಕ್ಕೆ ಹೋಗುವುದು ಮಾತ್ರ ದಲಿತ ಹಾಗೂ ಆದಿವಾಸಿಗಳೇ! ಬದುಕಿನ ಅನಿವಾರ್ಯತೆಯಿಂದ ಕೂಲಿ ಜೀತಕ್ಕೆ ಬರುವ ದಲಿತ - ಆದಿವಾಸಿಗಳನ್ನು, ಬ್ರಾಹ್ಮಣ-ಜೈನ-ಬಂಟ- ಒಕ್ಕಲಿಗ ಭೂಮಾಲೀಕರು ನಡೆಸಿಕೊಳ್ಳುವ ರೀತಿ ದಾರುಣವಾದದ್ದು.

ಇಲ್ಲಿನ ಭೂ ಮಾಲೀಕರ ಶೋಷಣೆ ಕುಂ.ವೀ. ಕಥೆಗಳಲ್ಲಿ ಬರುವ ಬಯಲು ಪ್ರದೇಶದ ಭೂಮಾಲೀಕರ ಶೋಷಣೆಯಷ್ಟು ವ್ಯಕ್ತಿ ಬೀಭತ್ಸತೆ ಹೊಂದಿರದಿದ್ದರೂ, ಪರಿಣಾಮದ ಕ್ರೌರ್ಯದಲ್ಲಿ ಮಾತ್ರ ಏನೇನೂ ವ್ಯತ್ಯಾಸವಿಲ್ಲ. ತೀರಾ ಇತ್ತೀಚಿನವರೆಗೂ (೮೦ರ ಸುಮಾರಿನ ತನಕ) ಗೇಣಿ ತಂದುಕೊಡದಿದ್ದಕ್ಕೆ, ಕೂಲಿಗೆ ಬರದಿದ್ದಕ್ಕೆ ಬಾರುಕೋಲಿನ ಹೊಡೆತ ಅತಿ ಸಾಮಾನ್ಯವಾಗಿತ್ತು. ಇದರೊಡನೆ ಶೃಂಗೇರಿ ಹಾಗೂ ಇತರ ಮಠಗಳ ಪಾರುಪತ್ತೆದಾರರು ನಡೆಸುತ್ತಿದ್ದ ಗೇಣಿ ಶೋಷಣೆ ೫೦ರ ದಶಕದ ಕಾಗೋಡಿನಷ್ಟೇ ತೀವ್ರವಾಗಿದೆ.

ಬದುಕಿನ ಹಲವು ಅನಿವಾರ್ಯತೆಗಳಿಗಾಗಿ ಈ ಭೂಮಾಲೀಕರ ಬಳಿ ಸಾಲ ಬೇಡಲೇಬೇಕಾದ ಪರಿಸ್ಥಿತಿ ಇಲ್ಲಿನ ಜನರದ್ದು. ಒಂದೆಡೆ ಸಾಲದ ಮೇಲೆ ಬಡ್ಡಿಯ ಮೇಲಿನ ಬಡ್ಡಿ ಹೇರಿ ಸುಲಿಯುವ ಭೂ-ಮಾಲೀಕರು, ಮತ್ತೊಂದೆಡೆ ರೈತ-ಕೂಲಿಗಳ ಈ ದೈನೇಸಿ ಪರಿಸ್ಥಿತಿಯ ದುರ್ಲಾಭ ಪಡೆಯುತ್ತಾ ಅವರು ಶಾಶ್ವತ ಜೀತವಿರಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ಇಡೀ ಮಲೆನಾಡಿನಲ್ಲೆಲ್ಲೂ ಇಂದಿಗೂ ಕನಿಷ್ಠ ಕೂಲಿ ಜಾರಿಯಲ್ಲಿಲ್ಲ. ವರ್ಷ ಪೂರ್ತಿ ಗದ್ದೆ ಕೆಲಸಗಳಿಗೆಂದೇ ಅಲ್ಲದೆ, ಡಿಸೆಂಬರ್ - ಮಾರ್ಚಿ ತಿಂಗಳಿನ ಅಡಿಕೆ ಕುಯಿಲು ಇತ್ಯಾದಿ ಕೆಲಸಗಳಿಗೂ ಭೂಮಾಲೀಕರ ಬಳಿ ದಲಿತ-ರೈತ-ಆದಿವಾಸಿಗಳು ಕೂಲಿ ಕೆಲಸಗಳಿಗೆ ಹೋಗುತ್ತಾರೆ. ಒಂದೆಡೆ ಈ ಅವಲಂಬಿತ ಬದುಕಿನ ದುರ್ಲಾಭ ಪಡೆಯುವ ಭೂ ಮಾಲೀಕರು ಮತ್ತೊಂದೆಡೆ ಊಟ-ಕಾಫಿ-ಎಲೆ ಅಡಿಕೆಯನ್ನೇ ಕೂಲಿಯ ಅರ್ಧ ಭಾಗವೆಂದು ಪರಿಗಣಿಸಿ, ಉಳಿದ ಅರ್ಧ ಭಾಗವನ್ನು ಮಾತ್ರ (೨೦-೩೫ ರೂ.ಗಳನ್ನು) ಕೂಲಿಯೆಂದು ನೀಡುತ್ತಾರೆ. ಅದರಲ್ಲಿ ಮತ್ತರ್ಧ ಭಾಗ ಹಳೆಯ ಸಾಲಕ್ಕೆಂದು ಮುರಿದುಕೊಳ್ಳಲಾಗುತ್ತದೆ.

ದೇವರಾಜ ಅರಸರ ಗೇಣಿ ಪದ್ಧತಿ ಕಾಯಿದೆಯಾಗಲೀ, ಭೂಮಿತಿ ಕಾಯಿದೆಯಾಗಲೀ, ಇತರ ಯಾವುದೇ ಕಾನೂನುಗಳಾಗಲೀ, ಮಲೆನಾಡಿನ ಮೂಲಭೂತ ಈ ಸಾಮಾಜಿಕ ರಚನೆಯನ್ನು ಬದಲಾಯಿಸಿಲ್ಲ. ಒಂದಷ್ಟು ಕಡೆ ಹಳೆಯ ಭೂಮಾಲೀಕತ್ವ ವಿಘಟಿತಗೊಂಡು ಹೊಸ ಭೂ ಮಾಲೀಕರ ಹುಟ್ಟಿಗೆ ಕಾರಣವಾಗಿದೆ. ಒಂದೆಡೆ ಹಲವಾರು ದೊಡ್ಡ ಹಿಡುವಳಿಗಳು ಹಾಗೆಯೇ ಉಳಿದುಕೊಂಡಿದ್ದರೇ, ದಲಿತ-ಆದಿವಾಸಿಗಳಿಗೆ ಮಾತ್ರ ಒಂದೆಕರೆ ಭೂಮಿಯೂ ದೊರೆತಿಲ್ಲ. ಈಗಲೂ ಮಲೆನಾಡಿನಲ್ಲಿ ಶೇ ೩೫ ಭಾಗದ ಜನ ಶೇ ೬೫ ಭಾಗದಷ್ಟು ಭೂಮಿಯ ಒಡೆತನ ಹೊಂದಿದ್ದಾರೆ. ನಕ್ಸಲೈಟ್ ಹೋರಾಟ ನಡೆದಿರುವ ಪ್ರದೇಶಗಳಲ್ಲಿ ೫೦ ಎಕರೆಗೂ ಹೆಚ್ಚು ಭೂಮಿ ಹೊಂದಿರುವ ೬೦ ಭೂಮಾಲೀಕರಿದ್ದಾರೆ.

ಮಲೆನಾಡಿನ ಆದಿವಾಸಿಗಳ ಮತ್ತೊಂದು ಪ್ರಮುಖ ಆದಾಯದ ಮೂಲ ಕಿರು ಅರಣ್ಯ ಉತ್ಪನ್ನ ಸಂಗ್ರಹ. ಜೇನು, ರಾಮಪತ್ರೆ, ಮರಗನ ಹುಳಿ, ಇನ್ನಿತ್ಯಾದಿ ಅರಣ್ಯೋತ್ಪನ್ನಗಳನ್ನು

ಬದುಕಿನ ಹಲವು ಅನಿವಾರ್ಯತೆಗಳಿಗಾಗಿ ಈ ಭೂಮಾಲೀಕರ ಬಳಿ ಸಾಲ ಬೇಡಲೇಬೇಕಾದ ಪರಿಸ್ಥಿತಿ ಇಲ್ಲಿನ ಜನರದ್ದು. ಒಂದೆಡೆ ಸಾಲದ ಮೇಲೆ ಬಡ್ಡಿಯ ಮೇಲಿನ ಬಡ್ಡಿ ಹೇರಿ ಸುಲಿಯುವ ಭೂ-ಮಾಲೀಕರು, ಮತ್ತೊಂದೆಡೆ ರೈತ-ಕೂಲಿಗಳ ಈ ದೈನೇಸಿ ಪರಿಸ್ಥಿತಿಯ ದುರ್ಲಾಭ ಪಡೆಯುತ್ತಾ ಅವರು ಶಾಶ್ವತ ಜೀತವಿರಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ಇಡೀ ಮಲೆನಾಡಿನಲ್ಲೆಲ್ಲೂ ಇಂದಿಗೂ ಕನಿಷ್ಠ ಕೂಲಿ ಜಾರಿಯಲ್ಲಿಲ್ಲ. ವರ್ಷ ಪೂರ್ತಿ ಗದ್ದೆ ಕೆಲಸಗಳಿಗೆಂದೇ ಅಲ್ಲದೆ, ಡಿಸೆಂಬರ್ - ಮಾರ್ಚಿ ತಿಂಗಳಿನ ಅಡಿಕೆ ಕುಯಿಲು ಇತ್ಯಾದಿ ಕೆಲಸಗಳಿಗೂ ಭೂಮಾಲೀಕರ ಬಳಿ ದಲಿತ- ರೈತ-ಆದಿವಾಸಿಗಳು ಕೂಲಿ ಕೆಲಸಗಳಿಗೆ ಹೋಗುತ್ತಾರೆ. ಒಂದೆಡೆ ಈ ಅವಲಂಬಿತ ಬದುಕಿನ ದುರ್ಲಾಭ ಪಡೆಯುವ ಭೂ ಮಾಲೀಕರು ಮತ್ತೊಂದೆಡೆ ಊಟ-ಕಾಫಿ-ಎಲೆ ಅಡಿಕೆಯನ್ನೇ ಕೂಲಿಯ ಅರ್ಧ ಭಾಗವೆಂದು ಪರಿಗಣಿಸಿ, ಉಳಿದ ಅರ್ಧ ಭಾಗವನ್ನು ಮಾತ್ರ (೨೦-೩೫ ರೂ.ಗಳನ್ನು) ಕೂಲಿಯೆಂದು ನೀಡುತ್ತಾರೆ. ಅದರಲ್ಲಿ ಮತ್ತರ್ಧ ಭಾಗ ಹಳೆಯ ಸಾಲಕ್ಕೆಂದು ಮುರಿದುಕೊಳ್ಳಲಾಗುತ್ತದೆ.

ವಾರ್ಷಿಕ ವಿಶೇಷಾಂಕ ೨೦೦೫

ಅರಣ್ಯ ಸಂರಕ್ಷಣೆಯ ಹೆಸರಲ್ಲಿ ಕುದುರೆಮುಖ ನ್ಯಾಷನಲ್ ಪಾರ್ಕ್ ಯೋಜನೆಯನ್ನು ಘೋಷಿಸಿರುವ ಸರ್ಕಾರ, ಒಂದೆಡೆ ಇದುವರೆಗೆ, ಅರಣ್ಯ ನಾಶ ಮಾಡುತ್ತಲೇ ಬಂದಿದೆ.

ಆದಿವಾಸಿಗಳು, ದಿನವಿಡೀ ಕಾಡಿನಾದ್ಯಂತ ಓಡಾಡಿ, ಅಪಾಯಗಳನ್ನೆದುರಿಸಿ ಸಂಗ್ರಹಿಸುತ್ತಾರೆ. ಅದನ್ನು ಮತ್ತೆ ಇದೇ ಭೂ-ಮಾಲೀಕ ವರ್ತಕರಿಗೆ ಮಾರುತ್ತಾರೆ. ಆದಿವಾಸಿಗಳಿಂದ ಅತ್ಯಂತ ಕಡಿಮೆ ಬೆಲೆಗೆ ಕೊಳ್ಳುವ ಈ ಭೂಮಾಲೀಕ ವರ್ತಕರು ಅದನ್ನು ದುಪ್ಪಟ್ಟು ಬೆಲೆಗೆ ಮಾರುಕಟ್ಟೆಯಲ್ಲಿ ಮಾರಿಕೊಂಡು ಲಾಭ ಮಾಡಿಕೊಳ್ಳುತ್ತಾರೆ. ಉದಾಹರಣೆಗೆ ಮರಗನಹುಳಿ ಸಂಗ್ರಹಕ್ಕೆ ಭೂಮಾಲೀಕರು ನೀಡುವ ಬೆಲೆ ೨೦/- ರೂ. ಗಳಾದರೆ ಅವರು ಮಾರಿಕೊಳ್ಳುವುದು ೮೦/- ರೂ.ಗಳಿಗೆ. ಈ ವರ್ತಕನ ಸಾಲದ ಋಣ ಇರುವುದರಿಂದ ಆದಿವಾಸಿಗಳು ಅದನ್ನು ಬೇರೆಯವರಿಗೋ, ಅಡಿಕೆ ದಾರಣೆ ಇರುವ ಕಡೆಗೋ ಮಾರಿಕೊಳ್ಳಲು ಸಾಧ್ಯವಿಲ್ಲ! ಇಷ್ಟಾಗಿಯೂ ಈ ಕಿರು ಅರಣ್ಯ ಉತ್ಪನ್ನ ಸಂಗ್ರಹವೇ ಆದಿವಾಸಿಗಳಿಗೆ ಶೇ ೫೦ರಷ್ಟು ಆದಾಯವನ್ನು ತಂದುಕೊಡುತ್ತದೆ.

ಅರಣ್ಯದ ಜೀವ ಪರಿಸರಕ್ಕೆ ಯಾವ ರೀತಿಯಿಂದಲೂ ಹಾನಿ ಮಾಡದ ಆದಿವಾಸಿಗಳ ಈ ಚಟುವಟಿಕೆಗಳನ್ನೇ ಇಂದು ಅರಣ್ಯ ಇಲಾಖೆ ನಿಷೇಧಿಸಲು ಹೊರಟಿದೆ. ಗಂಧದ ಕಳ್ಳರ, ಗಣಿಕಳ್ಳರ ಜೊತೆ ಸರ್ಕಾರವೇ ಶಾಮೀಲಾಗಿ ಕಾನೂನುಬದ್ಧ ಲೂಟಿಗೆ ಹೊರಟಿರುವ ಸರ್ಕಾರ ಅರಣ್ಯ ಇಲಾಖೆ ಕಿರು ಅರಣ್ಯ ಉತ್ಪನ್ನ ಸಂಗ್ರಹವನ್ನು ಮಾತ್ರ ನಿಷೇಧಿಸಲು ಹೊರಟಿದೆ.

ಇದೀಗ, ಅರಣ್ಯ ಸಂರಕ್ಷಣೆಯ ಹೆಸರಲ್ಲಿ ಕುದುರೆಮುಖ ನ್ಯಾಷನಲ್ ಪಾರ್ಕ್ ಯೋಜನೆಯನ್ನು ಘೋಷಿಸಿರುವ ಸರ್ಕಾರ, ಒಂದೆಡೆ ಇದುವರೆಗೆ, ಅರಣ್ಯ ನಾಶ ಮಾಡುತ್ತಲೇ ಬಂದಿದೆ. ಕುದುರೆಮುಖ ಕಬ್ಬಿಣ ಕಾರ್ಖಾನೆಗೆ ಸಂಪೂರ್ಣ ಅನುಮತಿ ನೀಡಿದ್ದ ಸರ್ಕಾರ ಮತ್ತೊಂದೆಡೆ ಭೂಮಾಲೀಕರ ಜಮೀನುಗಳನ್ನೂ, ದೊಡ್ಡ ದೊಡ್ಡ ಕಾಫಿ ಎಸ್ಟೇಟುಗಳನ್ನು ನ್ಯಾಷನಲ್ ಪಾರ್ಕ್ ವ್ಯಾಪ್ತಿಯಿಂದ ಹೊರಗಿಟ್ಟು ಅವರ ಹಿತಾಸಕ್ತಿ ರಕ್ಷಣೆ ಮಾಡಿತು. ಅಸಲು ಅರಣ್ಯ ರಕ್ಷಣೆಯ ಹೆಸರಲ್ಲಿ ನ್ಯಾಷನಲ್ ಪಾರ್ಕ್ ಯೋಜನೆ ಜಾರಿಯಾಗುತ್ತಿರುವುದೇ ಜೀವವೈವಿಧ್ಯತೆಯ ಮೇಲೆ ಕಣ್ಣಿಟ್ಟಿರುವ ಜೈವಿಕ ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿಗೆಂದು, ಮಲೆನಾಡಿನಲ್ಲಿ ಇದುವರೆಗೆ ಅಲ್ಲಿನ ಜನತೆಯ ಆರೋಗ್ಯ ಹೊರೆಯುತ್ತಿದ್ದ ಔಷಧೀಯ ಸಸ್ಯಗಳನ್ನು ಬಹು ರಾಷ್ಟ್ರೀಯ ಔಷಧ ಕಂಪನಿಗಳು ಲೂಟಿ ಮಾಡಲೆಂದು ಶತಶತಮಾನಗಳಿಂದ ವಾಸಿಸುತ್ತಾ ಬಂದಿದ್ದ ಆದಿವಾಸಿಗಳನ್ನು ಒಕ್ಕಲೆಬ್ಬಿಸಿ, ಅದನ್ನು ವಿಲಾಸಿ ಶ್ರೀಮಂತ ಪ್ರವಾಸಿಗರ ತಾಣ ಮಾಡುವುದೇ ಈ ನ್ಯಾಷನಲ್ ಪಾರ್ಕ್‌ನ ಅಸಲಿ ಉದ್ದೇಶ. ಇದೇ ಇದರ ಹಿಂದಿನ 'ರಾಷ್ಟ್ರೀಯ ಹಿತಾಸಕ್ತಿ'! ಹೀಗಾಗಿ ಅಲ್ಲಿ ನ್ಯಾಷನಲ್ ಪಾರ್ಕ್ ಬೇಡವೆಂಬುವರು 'ದೇಶದ್ರೋಹಿಗಳು'. ಅದರ ವಿರುದ್ಧ 'ಆದಿವಾಸಿಗಳ ಹಿತಾಸಕ್ತಿ'ಗಾಗಿ ಹೋರಾಟ ಮಾಡುವವರು 'ರಾಷ್ಟ್ರೀಯ ಹಿತಾಸಕ್ತಿ'ಯ ವಿರುದ್ಧವಿರುವ 'ಸಂಚುಕೋರರು'.

ಕಳೆದ ೫೭ ವರ್ಷಗಳಲ್ಲಿ ಆದಿವಾಸಿಗಳು ಸರ್ಕಾರದಿಂದ ಏನನ್ನೂ ನಿರೀಕ್ಷೆ ಇಟ್ಟುಕೊಂಡಿರಲಿಲ್ಲ. ಸರ್ಕಾರವೂ ಆದಿವಾಸಿಗಳ ಕಲ್ಯಾಣಕ್ಕೆಂದು ಇಲಾಖೆ ಮಾಡಿ ಆದಿವಾಸಿಗಳ ಹೆಸರಲ್ಲಿ ಅಧಿಕಾರ ವರ್ಗವನ್ನು ಪೋಷಿಸಿದ್ದನ್ನು ಬಿಟ್ಟರೆ ಬೇರೇನೂ ಮಾಡಿರಲಿಲ್ಲ. ಆದರೆ ಈಗ ತಮ್ಮ ಪಾಡಿಗೆ ತಾವು ಬದುಕಿಕೊಂಡಿದ್ದವರನ್ನು ಅವರ ನೆಲೆಯಿಂದಲೂ ಕಿತ್ತೊಗೆಯುವ ಯೋಜನೆ ಜಾರಿ ಮಾಡುತ್ತದೆ. ಹೀಗಾಗಿ ಆದಿವಾಸಿಗಳು ಅನಿವಾರ್ಯವಾಗಿ ತಮ್ಮ ಬದುಕು-ಭವಿಷ್ಯಗಳ ರಕ್ಷಣೆಗೆ ಹೋರಾಟದ ದಾರಿ ಹಿಡಿಯಬೇಕಾಗಿ ಬಂದಿದೆ.

ಆಗಲೂ, ಆದಿವಾಸಿಗಳು ಈ ಪ್ರಭುತ್ವ ತಮ್ಮ ಕರೆಗೆ ಓಗೊಡಬಹುದೆಂದು ಭಾವಿಸಿಕೊಂಡೇ ೧೯೯೭ರಿಂದ, 'ಕುದುರೆಮುಖ ನ್ಯಾಷನಲ್ ಪಾರ್ಕ್ ವಿರೋಧಿ ಒಕ್ಕೂಟ'ವನ್ನು ರಚಿಸಿಕೊಂಡು ಶಾಂತಿಯುತ ಹೋರಾಟವನ್ನು ಪ್ರಾರಂಭಿಸಿದರು. ಅದರ ಆಗ್ರಹವಿದ್ದದ್ದು ಒಂದೇ ಒಂದು. 'ನ್ಯಾಷನಲ್ ಪಾರ್ಕ್ ರದ್ದು ಮಾಡಿ - ಆದಿವಾಸಿಗಳನ್ನು ಎತ್ತಂಗಡಿ ಮಾಡಬೇಡಿ'. ಅಂದರೆ, ಆದಿವಾಸಿಗಳನ್ನು ಬದುಕಲು ಬಿಡಿ ಎಂದು ಕಳೆದ ೮ ವರ್ಷಗಳೇ ಈ ಒಕ್ಕೂಟವು ಶಾಂತಿಯುತವಾಗಿ ಮಾಡಿದ ಹೋರಾಟಗಳಿಗೆ, ಕೊಟ್ಟ ಮನವಿ ಪತ್ರಗಳಿಗೆ, ಪ್ರದರ್ಶನ-ಘೇರಾವ್‌ಗಳಿಗೆ ಲೆಕ್ಕವಿಲ್ಲ. ಇವುಗಳಿಗೆ ಬಂಡೆಗಲ್ಲಿನಂತ ಸರ್ಕಾರ ಕೊಟ್ಟ ಉತ್ತರ ಒಂದೇ 'ಕೇಸುಗಳು-ಲಾಠಿ ಚಾರ್ಜುಗಳು ಹಾಗೂ ಯಾವ ಕಾರಣಕ್ಕೂ ಕುದುರೆಮುಖ ನ್ಯಾಷನಲ್ ಪಾರ್ಕ್ ಯೋಜನೆ ರದ್ದಾಗುವುದಿಲ್ಲ - ಆದಿವಾಸಿಗಳ ಎತ್ತಂಗಡಿ ಖಂಡಿತ' ಎಂಬ ಅಧಿಕೃತ ಘೋಷಣೆಗಳು.



ಈ ಹೋರಾಟ ಉತ್ತುಂಗದಲ್ಲಿ ಇರುವಾಗಲೇ, ಆದಿವಾಸಿಗಳ ಹಕ್ಕು-ಬದುಕನ್ನೇ ನಿರ್ಲಕ್ಷಿಸಿ ಸರ್ಕಾರವು ೨೦೦೧ರ ಜೂನ್‌ನಲ್ಲಿ, ಆದಿವಾಸಿಗಳು ಇನ್ನು ಮುಂದೆ ಕಿರು ಅರಣ್ಯ ಉತ್ಪನ್ನ ಸಂಗ್ರಹಕ್ಕೆ ಕಾಡಿಗೆ ಹೋಗಬಾರದು, ಅರಣ್ಯದೊಳಗೆ ಸಂಚರಿಸ ಬಾರದೆಂಬ ಆದೇಶ ಹೊರಡಿಸಿತು. ಅರ್ಥಾತ್, ಮೀನಿಗೆ ನೀರನ್ನು ಬಿಟ್ಟು ಎಲ್ಲಿ ಬೇಕಾದರೂ ಸ್ವೇಚ್ಛೆಯಾಗಿ ಜೀವಿಸಿಬಹುದೆಂಬ ಆದೇಶ. ಈ ಆದೇಶದಿಂದ ಆತಂಕಗೊಂಡು ಅಡಿಕೇಸು ಎಂಬ ಗ್ರಾಮದಲ್ಲಿ ಆದಿವಾಸಿ ರೈತರಿಬ್ಬರು ಆತ್ಮಹತ್ಯೆಯನ್ನೇ ಮಾಡಿಕೊಂಡರು. ಅರಣ್ಯ ಇಲಾಖೆಯ ಸಿಬ್ಬಂದಿಗಳ ನಿಗ್ರಹ ಹಾಗೂ ಕಿರುಕುಳ ಆದಿವಾಸಿಗಳ ನಿತ್ಯ ಬದುಕನ್ನೇ ದುಸ್ತರ ಮಾಡತೊಡಗಿತು. ಈ ಭಾಗದ ಭೂಮಾಲೀಕರಿಗೆ ಇದರಿಂದ ಯಾವ ಹಾನಿಯೂ ಇರಲಿಲ್ಲವಾದ್ದರಿಂದ ಅವರನ್ನು ಪ್ರತಿನಿಧಿಸುತ್ತಿದ್ದ ಯಾವ ರಾಜಕೀಯ ಪಕ್ಷಗಳು ಆದಿವಾಸಿಗಳ ಸಹಾಯಕ್ಕೆ ಬರಲಿಲ್ಲ. ಬದಲಿಗೆ ಆದಿವಾಸಿಗಳ ಎತ್ತಂಗಡಿ ಅನಿವಾರ್ಯವೆಂದೇ ಪ್ರತಿಪಾದಿಸಿದವು. ಸರ್ಕಾರದ ದಮನಕ್ಕೆ ಬೆಂಬಲ ಸೂಚಿಸಿದವು. ಇನ್ನೊಂದೆಡೆ ಒಕ್ಕೂಟದ ಹೋರಾಟ ಆದಿವಾಸಿಗಳ ಆಶಯವನ್ನೇ ಧ್ಯೇಯವಾಗಿಟ್ಟುಕೊಂಡಿದ್ದರೂ, ಅದರ ಮೊರೆಯನ್ನು ಕೇಳದಷ್ಟು ಸರ್ಕಾರ ಕಿವುಡಾಗಿತ್ತು.

ಅಂದರೆ, ಇದೀಗ ಸರ್ಕಾರ-ಪ್ರಭುತ್ವ ಆದಿವಾಸಿಗಳ ಮುಂದೆ ತನ್ನ ನಿಜ ವರ್ಗ ಸ್ವಭಾವವನ್ನು ಬೆತ್ತಲೆ ಮಾಡಿಕೊಂಡು ನಿಂತಿತ್ತು. ಈ ಪ್ರಜಾತಂತ್ರ ಹಾಗೂ ಪ್ರಭುತ್ವ ವಾಷಿಂಗ್‌ಟನ್, ದೆಹಲಿ, ಬೆಂಗಳೂರಿನಲ್ಲಿರುವ ದೊರೆಬಾಬುಗಳದೇ ವಿನಃ ಆದಿವಾಸಿಗಳದಲ್ಲ ಹಾಗೂ ಆದಿವಾಸಿಗಳು ಈ ಪ್ರಭುತ್ವದ ಲೆಕ್ಕದಲ್ಲಿ ನಾಗರಿಕರೇ ಅಲ್ಲ... ಅಥವಾ.. ಎರಡನೇ ದರ್ಜೆ ನಾಗರಿಕರು. ಹಾಗೂ ಈ ದೇಶದ ಕಾನೂನು - ಪೊಲೀಸರು ಆದಿವಾಸಿಗಳ, ದಲಿತರ, ರೈತರ ರಕ್ಷಣೆಗಲ್ಲ - ಅವು ವಿದೇಶಿ ಬಂಡವಾಳ ಹಾಗೂ ಸ್ಥಳೀಯ ದಲ್ಲಾಳಿಗಳ ರಕ್ಷಣೆಗೆಂದೇ ತಮ್ಮ ಮೇಲೆ ಆಕ್ರಮಣ ನಡೆಸುತ್ತಿವೆ ಎಂದು ಆದಿವಾಸಿಗಳು ತಮ್ಮ ಬದುಕಿನಿಂದಲೇ ಅರ್ಥಮಾಡಿಕೊಳ್ಳುವ ಪರಿಸ್ಥಿತಿ ಬಂದೊದಗಿತ್ತು.

ಈ ಸಂದರ್ಭದಲ್ಲೇ ಪಾರ್ವತಿ-ಹಾಜಿಮಾ ಕೇಳಿದ ಪ್ರಶ್ನೆ ಬಹಳಷ್ಟು ಸರಿಯೆಂದು ಮಲೆನಾಡಿನ ಆದಿವಾಸಿಗಳು ಕಂಡುಕೊಂಡು ಹೃತ್ಪೂರ್ವಕವಾಗಿ ನಕ್ಸಲ್ಬರಿಯನ್ನು ಮಲೆನಾಡಿಗೆ ಬರಮಾಡಿಕೊಂಡರು. ೨೦೦೩ರ ನವೆಂಬರ್ ೧೭ರ ವೇಳೆಗೆ, ಸರಕಾರದ ಬಂದೂಕು ತಮ್ಮ ಹಕ್ಕಿನ ರಕ್ಷಣೆ ಮಾಡುವುದಿಲ್ಲವೆಂದೂ, ತಮ್ಮ ಹಕ್ಕಿನ ರಕ್ಷಣೆಗೆ ತಾನೇ ಬಂದೂಕು ಹಿಡಿಯಬೇಕೆಂದು ಅರ್ಥಮಾಡಿಕೊಳ್ಳತೊಡಗಿ



ದರು. ನವೆಂಬರ್ ೧೭ರ ಈದು ಎನ್‌ಕೌಂಟರಿನ ನಂತರ, ಸರ್ಕಾರ ಮಲೆನಾಡಿನಲ್ಲಿ ಭುಗಿಲೇಳುತ್ತಿರುವ ಆಕ್ರೋಶವನ್ನು ಕಂಡು ಬೆದರಿ ೬೦ ಕೋಟಿ ರೂ. ಪ್ಯಾಕೇಜು ಎಂಬ ಹುಸಿ ಯೋಜನೆ ಘೋಷಿಸಿತು! ನ್ಯಾಷನಲ್ ಪಾರ್ಕ್ ವ್ಯಾಪ್ತಿಯಲ್ಲಿ 'ಆದಿವಾಸಿಗಳನ್ನು ಬಲವಂತದಿಂದ ಎತ್ತಂಗಡಿ ಮಾಡುವುದಿಲ್ಲ' ಎಂಬ ಫಲಕವನ್ನು ತೂಗುಹಾಕಿತು. ಈವರೆಗೆ ಆದಿವಾಸಿಗಳ ಹಳ್ಳಿಗಳ ಕಡೆ ಪಂಚಾಯ್ತಿ ನೌಕರನೂ ತಲೆಹಾಕಿ ಮಲಗಿರಲಿಲ್ಲವಾದರೂ, ಪಾರ್ವತಿ - ಹಾಜಿಮಾ ಹುತಾತ್ಮರಾದ ನಂತರ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳೇ ಎರಡೆರಡು ಬಾರಿ ಪ್ರದೇಶಗಳಿಗೆ ಭೇಟಿ ನೀಡಿದರು.

ಈದು ಎನ್‌ಕೌಂಟರಿನ ನಂತರ ಎಂದರೆ ಮಲೆನಾಡಿನಲ್ಲಿ ಸಶಸ್ತ್ರ ಹೋರಾಟ ಪ್ರಾರಂಭವಾದ ನಂತರ ಈಗ ಅಲ್ಲಿನ ಪರಿಸ್ಥಿತಿ ಏನು?

ಇತ್ತೀಚೆಗೆ ಮಲೆನಾಡಿನ ಈ ಹೋರಾಟದ ಅಧ್ಯಯನ ಮಾಡಲೆಂದೇ ಅಲ್ಲಿಗೆ ಭೇಟಿ ನೀಡಿದ್ದ 'ಶಾಂತಿಗಾಗಿ ನಾಗರಿಕ ವೇದಿಕೆ' (CIP) ಯ ೪೫ ಸದಸ್ಯರು ವಿಸ್ತೃತ ಅಧ್ಯಯನ ಮಾಡಿ ವರದಿ ನೀಡಿದ್ದಾರೆ. ಈಗ ಆದಿವಾಸಿಗಳಿಗೆ ಅರಣ್ಯ ಇಲಾಖೆಯ ಕಿರುಕುಳ ನಿಂತಿದೆ. ಕಿರು ಅರಣ್ಯ ಉತ್ಪನ್ನ ಸಂಗ್ರಹ ಸಾಧ್ಯವಾಗಿರುವುದೇ ನಕ್ಸಲೈಟ್‌ರ ಎರಡನೇ ಬಂದೂಕು ಅವರ ಬೆಂಬಲಕ್ಕೆ ಇರುವುದಕ್ಕೆ. ಹೀಗಾಗಿ ಆದಿವಾಸಿಗಳ ಸಂಪೂರ್ಣ ಬೆಂಬಲ ನಕ್ಸಲೈಟರಿಗೆ.

ಮತ್ತೊಂದೆಡೆ ಸರ್ಕಾರ ಈಗ ನೇರವಾಗಿ ಎತ್ತಂಗಡಿ ಮಾಡುವುದಾಗಿ ಹೇಳದಿದ್ದರೂ ಪರೋಕ್ಷವಾಗಿ ಅವರನ್ನು ಎತ್ತಂಗಡಿ ಮಾಡುವ ಎಲ್ಲಾ ವ್ಯವಸ್ಥಿತ ಪ್ರಯತ್ನಗಳು ಮುಂದುವರೆದಿವೆ. ಹೀಗಾಗಿಯೇ ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ನಕ್ಸಲೈಟ್ ಸಂಘಟನೆಗಳಿಗೆ ಸೇರಿಕೊಳ್ಳುತ್ತಿದ್ದಾರೆ. ಮತ್ತೊಂದೆಡೆ ನಕ್ಸಲೈಟರು ಸ್ಥಳೀಯ ಭೂ-ಮಾಲೀಕ ವರ್ಗದ ಶೋಷಣೆಯ ವಿರುದ್ಧವೂ ಆದಿವಾಸಿಗಳನ್ನು - ದಲಿತ - ರೈತ ಕೂಲಿಗಳನ್ನು ಸಂಘಟಿಸುತ್ತಿರುವುದರಿಂದ, ಭೂ-ಮಾಲೀಕ ವರ್ಗ ಪ್ರಬಲ ನಕ್ಸಲೈಟ್ ವಿರೋಧಿ ಭಾವನೆಯನ್ನು ಹೊಂದಿದ್ದಾರೆ ಹಾಗೂ ಆ ಕಾರಣದಿಂದಲೇ ಬಿಜೆಪಿ, ಭಜರಂಗದಳವನ್ನು ಸೇರಿಕೊಳ್ಳುತ್ತಿದ್ದಾರೆ. ಹಾಗೂ ನಕ್ಸಲೈಟರ ಚಲನ-ವಲನಗಳ ನೇರ ಮಾಹಿತಿಯನ್ನು ಪೊಲೀಸರಿಗೆ ಒದಗಿಸುತ್ತಾ ಪೊಲೀಸರ ಬೇಹುಗಾರರಾಗಿ ಕೆಲಸ ಮಾಡುತ್ತಿದ್ದಾರೆ. ಹಲವು ಭೂ-ಮಾಲೀಕರು ಪೊಲೀಸರ ರಕ್ಷಣೆ ಕೇಳುತ್ತಿದ್ದಾರೆ. ಪೊಲೀಸರು ಭೂ ಮಾಲೀಕರನ್ನು ರಕ್ಷಣೆ ಮಾಡಲು ಸಾಧ್ಯವಿಲ್ಲವೆಂಬ ಸಂದೇಶ ನೀಡಲೆಂದೇ ನಕ್ಸಲೈಟರು ಮುಗೇಟೇಲಿನ ಭೂಮಾಲೀಕ ಚಂದ್ರಶೇಖರ ತನ್ನ ರಕ್ಷಣೆಗೆಂದು ನೇಮಿಸಿಕೊಂಡಿದ್ದ ಪೊಲೀಸ್ ಪೇದೆ ಮುದ್ದಪ್ಪನನ್ನು ಸೆರೆ ಹಿಡಿದು ಬಂದೂಕು ಕಸಿದುಕೊಂಡು ವಾಪಸ್ ಕಳಿಸಿದ್ದಾರೆ.

ಈದು ಎನ್‌ಕೌಂಟರಿನ ನಂತರ ಎಂದರೆ ಮಲೆನಾಡಿನಲ್ಲಿ ಸಶಸ್ತ್ರ ಹೋರಾಟ ಪ್ರಾರಂಭವಾದ ನಂತರ ಈಗ ಅಲ್ಲಿನ ಪರಿಸ್ಥಿತಿ ಏನು? ಇತ್ತೀಚೆಗೆ ಮಲೆನಾಡಿನ ಈ ಹೋರಾಟದ ಅಧ್ಯಯನ ಮಾಡಲೆಂದೇ ಅಲ್ಲಿಗೆ ಭೇಟಿ ನೀಡಿದ್ದ 'ಶಾಂತಿಗಾಗಿ ನಾಗರಿಕ ವೇದಿಕೆ' ಯ ೪೫ ಸದಸ್ಯರು ವಿಸ್ತೃತ ಅಧ್ಯಯನ ಮಾಡಿ ವರದಿ ನೀಡಿದ್ದಾರೆ. ಈಗ ಆದಿವಾಸಿಗಳಿಗೆ ಅರಣ್ಯ ಇಲಾಖೆಯ ಕಿರುಕುಳ ನಿಂತಿದೆ. ಕಿರು ಅರಣ್ಯ ಉತ್ಪನ್ನ ಸಂಗ್ರಹ ಸಾಧ್ಯವಾಗಿರುವುದೇ ನಕ್ಸಲೈಟ್‌ರ ಎರಡನೇ ಬಂದೂಕು ಅವರ ಬೆಂಬಲಕ್ಕೆ ಇರುವುದಕ್ಕೆ. ಹೀಗಾಗಿ ಆದಿವಾಸಿಗಳ ಸಂಪೂರ್ಣ ಬೆಂಬಲ ನಕ್ಸಲೈಟರಿಗೆ. ಮತ್ತೊಂದೆಡೆ ಸರ್ಕಾರ ಈಗ ನೇರವಾಗಿ ಎತ್ತಂಗಡಿ ಮಾಡುವುದಾಗಿ ಹೇಳದಿದ್ದರೂ ಪರೋಕ್ಷವಾಗಿ ಅವರನ್ನು ಎತ್ತಂಗಡಿ ಮಾಡುವ ಎಲ್ಲಾ ವ್ಯವಸ್ಥಿತ ಪ್ರಯತ್ನಗಳು ಮುಂದುವರೆದಿವೆ.

ನಕ್ಸಲೈಟ್ ಚಳವಳಿ ಗಟ್ಟಿಗೊಳ್ಳುತ್ತಿದ್ದಂತೆ ಭೂಮಾಲೀಕ-ಬಂಡವಾಳಿಗ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿ ರಕ್ಷಣೆ ಕಷ್ಟವೆಂದು ಅರ್ಥಮಾಡಿಕೊಂಡಿರುವ ಪ್ರಭುತ್ವ, ನಕ್ಸಲೈಟ್ ಚಳವಳಿಯ ಧರ್ಮಕ್ಕೆ ಎಸ್‌ಟಿಎಫ್‌ಅನ್ನು ಕಳಿಸುವ ಯೋಚನೆ ಮಾಡುತ್ತಿದೆ. ಒಂದೆಡೆ ಮಾತುಕತೆಯ ಮಂತ್ರ ಜಪಿಸುತ್ತಲೇ ಮತ್ತೊಂದೆಡೆ ಸಿಕ್ಕ ಕಡೆ ಕೊಂದು ಹಾಕುವ 'ಕೂಂಬಿಂಗ್' ಮುಂದುವರೆಸಿದೆ. ಬರ್ಕಣದ ಘಟನೆ ಅದರಲ್ಲೊಂದು.

ಮಲೆನಾಡಿನ ಹೊರಗೆ ಬಹುಪಾಲು ಜನತೆ ನಕ್ಸಲ್ ಚಳವಳಿಯನ್ನು ದಮನ ಮಾಡಬಾರದೆಂಬ ಅಭಿಪ್ರಾಯ ಹೊಂದಿರುವುದು ಇತ್ತೀಚೆಗೆ 'ಪ್ರಜಾವಾಣಿ' ದಿನಪತ್ರಿಕೆಯ ವೇದಿಕೆ ಸ್ಪಷ್ಟಪಡಿಸಿದೆ. ಮತ್ತೊಂದೆಡೆ ಪ್ರಜಾತಂತ್ರ ಹಾಗೂ ಸಶಸ್ತ್ರ ಹೋರಾಟವನ್ನು ಎರಡು ಬೈನರಿ ವೈರುಧ್ಯಗಳೆಂದು ಕಲ್ಪಿಸಿಕೊಂಡಿರುವ ಬುದ್ಧಿಜೀವಿಗಳು ಗೊಂದಲಕ್ಕೊಳಗಾಗಿದ್ದರೆ, ಸಂವಿಧಾನ-ಕಾನೂನುಗಳು ಜನತೆಯ ಪ್ರಜಾತಾಂತ್ರಿಕ ಹಕ್ಕುಗಳನ್ನು ಕಾಪಾಡದಿದ್ದರೆ ಸಮಬಾಳಿನ ನ್ಯಾಯವೇ ಮುಖ್ಯವೆಂದು ಭಾವಿಸುವ ಬುದ್ಧಿಜೀವಿಗಳು, ಸಂತ-ಸ್ವಾಮೀಜಿಗಳು ಚಳವಳಿಯನ್ನು ಸಹಾನುಭೂತಿಯಿಂದ ನೋಡಬೇಕೆಂದು ಆಗ್ರಹಿಸುತ್ತಿದ್ದಾರೆ.

ಇವೆಲ್ಲದರ ನಡುವೆ ನಕ್ಸಲ್ ಘರ್ಜನೆ ಮಲೆನಾಡಿನ ಸ್ಮಶಾನ ಮೌನವನ್ನು ಬೇಧಿಸಿದೆ. ಪರ್ಯಾಯ ರಾಜಕಾರಣದ ಬಗ್ಗೆ ಚರ್ಚೆ ನಡೆದಿರುವ ಈ ಸಂದರ್ಭದಲ್ಲೇ ಇಡೀ ಶೋಷಕ ವ್ಯವಸ್ಥೆಗೆ, ಹೋಗಿ ಮೌಲ್ಯಗಳಿಗೆ ಪರ್ಯಾಯ ಧ್ರುವ ಸೃಷ್ಟಿಸಿರುವ ನಕ್ಸಲ್ ಚಳವಳಿ ಪರ್ಯಾಯದ ಒಂದು ಮಾನದಂಡವಾಗಿ, ಸಮತಾವಾದ ಆಶಯದ ಸಾಕ್ಷಿ ಪ್ರಜ್ಞೆಯಾಗಿ ಮುಂದೆ ಬಂದಿದೆ.

ಪ್ರಜಾಯುದ್ಧ ಪ್ರಾರಂಭವಾಗಿದೆ. ಪ್ರತಿಯೊಬ್ಬರೂ ಈ ಯುದ್ಧದ ಬಗೆಗೆ ಯಾವುದಾದರೂ ಒಂದು ಪಕ್ಷ ವಹಿಸಲೇ ಬೇಕಾಗಿದೆ.

ಏಕೆಂದರೆ, 'ಅಪರಾಧವೇ ಅಧಿಕಾರವಾಗಿ ರಾಜ್ಯವಾಳುತ್ತಿರುವಾಗ, ಬಾಯಿದ್ದು ಮೌನವಾಗಿ ಕುಳಿತ ಪ್ರತಿಯೊಬ್ಬನೂ ಅಪರಾಧಿಯೇ' !

ಒಂದಿರುಳಿನ ಮೋಹಕ ಚಿತ್ರ

ಅವಳ ಸ್ತನಗಳ ಗೊಂಚಲಿನಲಿ
ಮಿಂಚು ಮತ್ತು ಸಿಡಿಲು ಎಷ್ಟೊಂದು ಮನಮೋಹಕವಾಗಿ ಅಬ್ಬರಿಸುತ್ತಿವೆ,
ಬಹಳಷ್ಟು ಗಂಡಸರಿಗೆ ಅಲ್ಲಿನ ದಿವ್ಯಪ್ರಶಾಂತತೆಯ ಅರಿವು ಕೂಡಾ
ಇರಲಾರದು -

ಶ್ರೀಮಂತನೊಬ್ಬ ಎಸೆಯಬಹುದಾದ ತುಂಡುರೊಟ್ಟಿಗೆ ಮುಗಿಬೀಳುವ,
ಮೈಮೇಲೆ ಉಡುಪಿಲ್ಲದ ಬಡಜಂತುಗಳಂತೆ ಹಸಿದು ತಿನ್ನುತ್ತಿರುತ್ತಾರೆ

ಗಾಳಿ ಸ್ತಬ್ಧಗೊಂಡು ಹೆಪ್ಪುಗಟ್ಟಿ ಹೋಗುತ್ತಿರುವುದನ್ನು ಬಹಳ ಕಾಲ
ಸಹಿಸಲಾಗುತ್ತಿಲ್ಲ,
ಆ ಕ್ಷಣದ ನಿರ್ಲಿಪ್ತತೆಯ ಮರಗಳು ಅನಾಥ ಪಿಶಾಚಿಯೊಂದರ ಬೆನ್ನಿಗೆ
ಬಿದ್ದಂತೆ ಕಾಣತೊಡಗಿವೆ

ಹಾರುವ ಸ್ವಭಾವದ ಅವಳು,
ಹೀಗೆ ಎಲ್ಲೋ ಒಂದು ಕಡೆ ನಿಲ್ಲುವ ಜಾಣತನ ತೋರುತ್ತಿದ್ದಾಳೆ;
ಇನ್ನುಳಿದ ಮೂಕಹಕ್ಕಿಗಳು ದೂರ, ಬಹುದೂರ ಹಾರಿ ಮರೆಯಾಗುತ್ತಲಿವೆ

ಇರುಳೆನ್ನುವುದು ಮತ್ತೊಮ್ಮೆ ತಾನು ಅಶುದ್ಧವೆನ್ನುವುದನ್ನು ಪ್ರಬಲವಾಗಿ
ಪ್ರಕಟಿಸುತ್ತಿದೆ;
ಎಂದಿನಂತೆ ನಾವೆಲ್ಲರೂ ಹಲವು ರೋಗರುಜಿನಗಳಲಿ ತುತ್ತಾಗಬಹುದಾಗಿದ್ದ
ಅಥವಾ ಶವವಾಗಿ ನೆಲಕ್ಕುರುಳಬಹುದಾಗಿದ್ದ ಸಹಜ ಪ್ರೇಮದ ಕತ್ತಲೆ-
ಯಾಗಿರಲಿಲ್ಲ ಅದು

ನೇರಳೆಯ ಬೆಳಕು,
ಅವಳ ದೇಹವನ್ನು ತನ್ನ ಬಿಳಿಮಿಶ್ರಿತ ಕಪ್ಪುಹೊಗೆಯಿಂದ ವಿಲಕ್ಷಣ-
ಗೊಳಿಸುತ್ತಿರುವ ದೀಪದ ಬೆಂಕಿಯ ಜ್ವಾಲೆಗಳನ್ನು ಆವರಿಸಿಕೊಳ್ಳಲಾಗದೆ,
ಮಂಜು ಮುಸುಕಿದಂತೆ ಭಾಸವಾಗುತ್ತಿದೆ

ಮಂಚದ ತಲೆಭಾಗದಲ್ಲಿ-
ಅಲ್ಲಲ್ಲಿ, ದುರ್ನಾತದ ನಿನ್ನೆ ಸಂಜೆಯ ವಿಸ್ಕಿ ಪ್ರೇರಿತ ಪದ್ಯಗಳು ಅರೆ
ಎಚ್ಚರದ ಸ್ಥಿತಿಯಲ್ಲಿ ತೂರಾಡತೊಡಗಿವೆ

ಅವಳು ಶುಭ್ರವಾಗಿ ಮಿಂದು,
ನೇರಳೆವರ್ಣದ ಹೂಗಿಡಗಳ ಪೊದೆಯಿಂದ ತನ್ನ ಮಾದಕ ತ್ವಚೆಯನ್ನು
ಬೀಸುಬೀಸಾಗಿ ಪಸರಿಸುವ ಪರಿಮಳದೊಂದಿಗೆ ವೈಭವೀಕರಿಸುತಾ
ಹೊರಬಂದು, ಆ ಇರುಳಿನೆದುರಿಗೆ ನಿಲ್ಲುವಳು

ಆಗ ಕನಿಷ್ಠಮಟ್ಟದ ಬಣ್ಣದ ಕೀಟಗಳೆಲ್ಲವೂ ಒಮ್ಮೆಲೇ ಮೈಮೇಲೆ
ಹಾಯತೊಡಗುತ್ತವೆ ;
ಅಲ್ಲಿ ಎಲ್ಲವೂ ಸಾಯಲಾರದ ದುಃಖದಲ್ಲಿ ಸತ್ತು ಹೋಗುತ್ತವೆ ಸಂತೋ-
ಷದೊಂದಿಗೆ....

ಅವೆಲ್ಲವೂ ಅವಳ ಸೊಂಟದ ಸಲಿಗೆಯಿಂದ ನರ್ತಿಸಲು ಬಂದ
ಸಾಮೂಹಿಕ ಎಂಜಲು ಕೀಟಗಳು

○ ಮಂಜುನಾಥ್ ವಿ.ಎಂ.

ಕಾವ್ಯ

○ ಜಿ.ವಿ. ಆನಂದಮೂರ್ತಿ

ಧರೆಗೆ ದೊಡ್ಡವರು



ಉರಿವ ಬೆಟ್ಟ ಬತ್ತಿದ ನದಿ ಒಣಗಿದ ಮರಗಳ
ಹಿಂದಿಕ್ಕಿ ಓಡುವವು ದಿಕ್ಕುದೆಸೆ ಕಾಣದೆ
ಗಾಳಿ ಕುದುರೆಯನ್ನೇರಿ ಮಳೆಯ ದಂಡು
ಕೈಯಲ್ಲಿ ಹೊಳೆವ ಬಿಸಿಲ ಅಲುಗು

ಆ ಕಡೆ ಒಣಗಿದ ಎಲೆಯಂಬು
ಈ ಏಣಿನಲಿ ಬಾಡಿದ ವಡಬತ್ತಲು ಪೈರು
ಕಣ್ಣೀರ ಬೀಜಗಳು ಇನ್ನು ಮೊಳೆಯಲಾರವು
ನಮ್ಮ ತೇವವಿಲ್ಲದ ಕಂಗಳಲ್ಲಿ

ಏಳುಮಲೆ ಎಪ್ಪತ್ತೇಳುಮಲೆ ಚಿಗುರುವ ಹಾಗೆ
ನದಿಗಳು ಮುಳುಗುವ ಹಾಗೆ
ಮಲೆ ಕಾನು ಹಣ್ಣಾಗುವಂತೆ
ಧರೆಗೆ ದೊಡ್ಡವರಾಗಿ
ಹಿಂಡು ಮೋಡಗಳ ಮುಂದೆ
ಗಂಡ್ಹುಲಿಯ ಮೇಲೇರಿ ಬಂದು
ನೀನು ಇಲ್ಲಿಯೇ ನಿಲ್ಲು
ಬತ್ತಿದ ಕಣ್ಣುಗಳಲ್ಲಿ ಜಲತುಳುಕುವಂತೆ

ಬಿಸಿಲ ಧಾಳಿಗೆ ಸೀದ ಹೊಲಗಳು
ಬಿರಿದು ಬಾಯಿಬಿಟ್ಟ ಕೆರೆಯಂಗಳ
ಮಂಡಿಯೂರಿ ಕುಳಿತಿವೆ.
ಬಿಸಿಲ ಕೊಂಡವ ಹಾಯ್ದು
ಮೂಡಣದ ಮಾರುತಗಳ ಸಿಗಿದು ಬರುವ
ವರ್ಷಧಾರೆಯ ಹೂ ಸ್ಪರ್ಶಕ್ಕೆ

ಪಡುವಣದ ನೆತ್ತಿ ಸೀಳಿ ಬಂದ
ಅಂಕೆಯಿಲ್ಲದ ಕೂಗೋಮಾರಿ
ಬಲದ ಕೈಯಲ್ಲಿ ಬಾಗ್ದಾದಿನ ರುಂಡ
ಎಡದ ಕೈಯಲ್ಲಿ ಸಿಡಿಮದ್ದು ಫಿರಂಗಿ
ಎಲ್ಲ ನದಿಗಳನ್ನೂ ರಾಡಿಯೆಬ್ಬಿಸಿ
ಬರುತ್ತಿರುವ ಅಂಕೆಯಿಲ್ಲದ ಕೂಗೋಮಾರಿ

ಅನ್ನ ಬೇಡುವ ಹಸಿದ ತಣಿಗೆಗಳ ಮುಂದೆ
ಭೀತಿ ಗರ್ಭವ ಸೀಳಿಬಂದ ತ್ರಿಶೂಲಧಾರಿಗಳು
ಬಸುರಿ ಬಾಣಂತಿಯರ ಕರುಳ ಬಗೆದರು
ತೊಟ್ಟಿಲ ಕೂಸುಗಳ ಸೊಲ್ಲಡಗಿಸಿದರು

ಮೈಗಂಟಿರುವ ನಂಜು-ಗಾಯಗಳ ನೆಕ್ಕುತ್ತ
ಉರಿಯ ದ್ವೀಪದಲ್ಲಿ ಜಲವ ಅರಸುತ್ತ

ಮಳೆಯನ್ನು ಗುಣಿಸಿ; ಸಿಡಿಲ ಭೀತಿಯನ್ನು ಕಳೆದು
ಸೆರೆಗೊಡ್ಡಿ ನಿಂತಿದ್ದೇನೆ

ಹೆಪ್ಪುಗಟ್ಟಿದ ಮೋಡಗಳ ಕಡೆದು
ಮಳೆಧಾರೆಯಾಗಿ ಬಂದು ಇಲ್ಲಿಯೇ ನಿಲ್ಲು

ಪರಿಸರವಾದದಲ್ಲಿ ವಿಜ್ಞಾನ ಸಂಪನ್ಮೂಲಗಳ ಹಂಚಿಕೆ ಹಾಗೂ ಬಲಾಢ್ಯರ ಆಯ್ಕೆ

ಪ್ರಜಾಪ್ರಭುತ್ವ ಸರ್ವರಿಗೂ ಕನಿಷ್ಠ ಪ್ರಶ್ನಿಸುವ, ಹೋರಾಡುವ, ಜೀವಿಸುವ ಹಕ್ಕನ್ನು ನೀಡುತ್ತದೆ. 'ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರು, ಆದರೆ ಕೆಲವರು ಹೆಚ್ಚು ಸಮಾನರು' ಎಂಬ ಹಾಸ್ಯ ಮಿಶ್ರಿತ ಅಪವಾದವನ್ನು ಹೊಂದಿದ್ದರೂ ಈ ದೇಶದ ದಲಿತರಿಗೆ, ಬಡವರಿಗೆ, ಅಲ್ಪಸಂಖ್ಯಾತರಿಗೆ, ದುರ್ಬಲರಿಗೆ ಪ್ರಜಾಪ್ರಭುತ್ವ ನೀಡುವ ಭರವಸೆಯೇ ಬಹಳ ದೊಡ್ಡದು. ಈ ನೆಲೆಯಲ್ಲಿಯೇ ನಮ್ಮ ದೇಶದ ಪರಿಸರವಾದ ರೊಮ್ಯಾಂಟಿಕ್ಕಿನ ತೆಕ್ಕೆಯಿಂದ ಜಾರಿ 'ಸಂಪತ್ತಿನ ಸಮಾನ ಹಂಚಿಕೆಯ' ಪ್ರಶ್ನೆಯಾಗಿ ಇಂದು 'ಸರ್ವಭಕ್ಷಕ ವರ್ಗ'ವನ್ನು ಪ್ರಶ್ನಿಸುವ ಸಾಮರ್ಥ್ಯಗಳಿಸಿ ಕೊಂಡಿದೆ.

ಈ ಜಗತ್ತು ಕಂಡ ಅರ್ಥಪೂರ್ಣ ಆಡಳಿತ ವ್ಯವಸ್ಥೆಗಳಲ್ಲಿ ಪ್ರಜಾಪ್ರಭುತ್ವ ಮೊದಲಿನದು. ಆದರೆ ಪ್ರಜಾಪ್ರಭುತ್ವಕ್ಕೂ ಪರಿಸರವಾದಕ್ಕೂ ಇರುವ ಸಂಬಂಧ ವೇನು? ಕುತೂಹಲಕ್ಕಾಗಿ ವಿಶ್ವದ ಪರಿಸರ ಚರಿತ್ರೆಯನ್ನೊಮ್ಮೆ ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿ. ಒಂದೋ, ಪ್ರಜಾಪ್ರಭುತ್ವವಾದಿ ರಾಷ್ಟ್ರಗಳಲ್ಲಿ ಪರಿಸರವಾದದ ದಳಪತಿ ಗಳ ಸಮೃದ್ಧ ಸಂತಾನವನ್ನು ಕಾಣಬಹುದು. ಹಾಗೆಯೇ, ಪ್ರಜಾಪ್ರಭುತ್ವವಿಲ್ಲದ ರಾಷ್ಟ್ರಗಳಲ್ಲಿ ಅಸಂಖ್ಯಾತ ಒತ್ತಡಗಳ ನಡುವೆ ಹುಟ್ಟಿದ ಕೆಲವೇ ಚೈತನ್ಯಗಳು ಪ್ರಜಾತಂತ್ರಕ್ಕಾಗಿ ಹೋರಾಡಿದ್ದನ್ನು ಕಾಣಬಹುದು.

ಮರಗಿಡ-ಪಶುಪಕ್ಷಿಗಳಿಗಾಗಿ ಹೋರಾಡುವ 'ಜನಪ್ರಿಯ ಪರಿಸರವಾದವನ್ನು' ಹೊರತುಪಡಿಸಿ ದೇಶ, ಸಂಸ್ಕೃತಿ, ಜನಾಂಗಗಳ ಸಂರಕ್ಷಣೆಗೆ ನಿಂತ ದೊಡ್ಡ ತಂಡವೇ ಈ ಯಾದಿಯಲ್ಲಿ ಸಿಗುತ್ತದೆ. ಯಾಕೆಂದರೆ ಪ್ರಜಾಪ್ರಭುತ್ವವನ್ನು ಹೊರತುಪಡಿಸಿ ಪರಿಸರವಾದವನ್ನು ವಿಶ್ಲೇಷಿಸುವುದು ಜನಸಮುದಾಯದ ಹಿತದೃಷ್ಟಿಯಿಂದ ಅಪೇಕ್ಷಣೀಯವಲ್ಲ.

○ ಟಿ.ಎಸ್. ವಿವೇಕಾನಂದ

ಎಲ್ಲಿ 'ಪ್ರಭುತ್ವದ' ಆಡಳಿತವಿರುತ್ತದೋ ಅಲ್ಲಿ ಸಮಾನತೆಯ ಮಾತೇ ಹುಟ್ಟುವುದಿಲ್ಲ. ಎಲ್ಲಿ 'ಸಮಾನತೆಯ ಪ್ರಶ್ನೆ' ಹುಟ್ಟುವು ದಿಲ್ಲವೋ ಅಲ್ಲಿ 'ಪ್ರಭುತ್ವಗಳು' ಕೊನೆಗಾಣುವುದಿಲ್ಲ. ಆದರೂ ಇದನ್ನು ಕೊನೆಗಾಣಿಸುವ ಮೂಲಕವೇ ಹುಟ್ಟುವ ಪರಿಸರವಾದ ಮತ್ತೆ ಸಮಾನತೆಯ ಪರವಾಗಿ ಹೋರಾಡುವ ದುರಂತವನ್ನು ಎದುರಿಸಬೇಕಾಗುತ್ತದೆ. ಆದರೆ ಅದರ ನೆಲೆ-ಬೆಲೆಗಳೇ ಬೇರೆಯಾಗಿರುತ್ತವೆ. ಈ ನೆಲೆ-ಬೆಲೆಗಳ ಮೊತ್ತವನ್ನು ನಿಖರವಾಗಿ ನಿರ್ಧರಿಸಲು ಸಾಧ್ಯವಾಗುವುದು ಜನತಂತ್ರವಾದಿ ರಾಷ್ಟ್ರಗಳಲ್ಲಿ ಮಾತ್ರ.

ನಮ್ಮ ರಾಷ್ಟ್ರದ ಸಂದರ್ಭದಲ್ಲಿ ಈ ಸಂಗತಿಯನ್ನು 'ಪ್ರಜಾಪ್ರಭುತ್ವದಲ್ಲಿ ಪರಿಸರವಾದದ ಪ್ರಶ್ನೆ' ಮತ್ತು 'ಪ್ರಭುತ್ವ ಹಾಗೂ ಪರಿಸರವಾದ' ಎಂಬ ಎರಡು ನೆಲೆಗಳಲ್ಲಿ ಪರ್ಯಾಲೋಚಿಸಬೇಕಾಗುತ್ತದೆ. ಈಗ ನಾವೆಲ್ಲಾ ಭಾವಿಸಿರು ವುದು, ಆಲೋಚಿಸುತ್ತಿರುವುದು, ಎದುರಿಸುತ್ತಿರುವುದು 'ಪ್ರಜಾಪ್ರಭುತ್ವದಲ್ಲಿ ಪರಿಸರವಾದದ ಪ್ರಶ್ನೆ' ಎಂದು ಭಾವಿಸಿದ್ದೇವೆ. ಇದಕ್ಕೆ ಬಹುಜನರ ಸಮ್ಮತಿಯೂ ಇದೆ. ಈವರೆಗಿನ ನಮ್ಮ ಹೋರಾಟಗಳು ರೂಪಗೊಂಡಿರುವುದೂ ಇದೇ ನೆಲೆಯಲ್ಲಿ. ಆದರೆ ಇತ್ತೀಚಿನ ಬೆಳವಣಿಗೆಗಳು ಹೇಳುತ್ತಿರುವ ಸತ್ಯಗಳೇ ಬೇರೆ ಇವೆ. ಈ ಸತ್ಯದ ಬೇರುಗಳನ್ನು ಹುಡುಕಲು ನಾವು ಮಹಾತ್ಮ ಗಾಂಧಿಯ ಕೊಲೆ ಹಾಗೂ ನಮ್ಮ ಸಂವಿಧಾನ ಅನುಷ್ಠಾನದ ಸಂದರ್ಭಗಳಲ್ಲಿಗೆ ಹೋಗಬೇಕಾ ಗುತ್ತದೆ. ಅಥವಾ ಕೆಲವು ಜನ, ಗುಂಪು, ಸಂಘಟನೆಗಳ ಮನಃಸ್ಥಿತಿಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳ ಬೇಕಾಗುತ್ತದೆ.

ಪ್ರಜಾಪ್ರಭುತ್ವ ಸರ್ವರಿಗೂ ಕನಿಷ್ಠ ಪ್ರಶ್ನಿಸುವ, ಹೋರಾಡುವ, ಜೀವಿಸುವ ಹಕ್ಕನ್ನು ನೀಡುತ್ತದೆ. 'ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರು, ಆದರೆ ಕೆಲವರು ಹೆಚ್ಚು ಸಮಾನರು' ಎಂಬ ಹಾಸ್ಯ ಮಿಶ್ರಿತ ಅಪವಾದವನ್ನು ಹೊಂದಿದ್ದರೂ ಈ ದೇಶದ ದಲಿತರಿಗೆ, ಬಡವರಿಗೆ, ಅಲ್ಪಸಂಖ್ಯಾತರಿಗೆ, ದುರ್ಬಲರಿಗೆ ಪ್ರಜಾಪ್ರಭುತ್ವ ನೀಡುವ ಭರವಸೆಯೇ ಬಹಳ ದೊಡ್ಡದು. ಈ ನೆಲೆಯಲ್ಲಿಯೇ ನಮ್ಮ ದೇಶದ ಪರಿಸರವಾದ ರೊಮ್ಯಾಂಟಿಕ್ಕಿನ ತೆಕ್ಕೆಯಿಂದ ಜಾರಿ 'ಸಂಪತ್ತಿನ ಸಮಾನ ಹಂಚಿಕೆಯ' ಪ್ರಶ್ನೆಯಾಗಿ ಇಂದು 'ಸರ್ವಭಕ್ಷಕ ವರ್ಗ'ವನ್ನು ಪ್ರಶ್ನಿಸುವ ಸಾಮರ್ಥ್ಯಗಳಿಸಿ ಕೊಂಡಿದೆ. ಜಯಾಪಜಯಗಳು ಎರಡನೇ ಪ್ರಶ್ನೆ. ನಮಗೆ ಇಲ್ಲಿ ದೊರೆತಿರುವ ಕನಿಷ್ಠ ಗ್ಯಾರಂಟಿಯನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಈ ಕನಿಷ್ಠ ಗ್ಯಾರಂಟಿಯ ಮೂಲಕವೇ ಈ ದೇಶದ ನೂರು ಕೋಟಿಯಷ್ಟು ಜನ ಸಮುದಾಯ ಕನಿಷ್ಠ ನೆಮ್ಮದಿಯಿಂದ ಬದುಕಬಹುದಾಗಿದೆ. ಇದಕ್ಕಿರುವ ಕೆಲವು ಅಪವಾದಗಳನ್ನು ನಾವು ಸ್ಪಷ್ಟವಾಗಿ ಗುರುತಿಸಬೇಕು. ಏಕೆಂದರೆ ಈಗ ನಾವು ನಿಜಾರ್ಥದಲ್ಲಿ ಎದುರಿಸುತ್ತಿರುವುದು 'ಪ್ರಭುತ್ವ ಹಾಗೂ ಪರಿಸರವಾದದ' ಪ್ರಶ್ನೆಯನ್ನು. ಈ ಗುರುತುಗಳೇ ನಮ್ಮ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಗುಪ್ತ ಹುನ್ನಾರಗಳ ಚರಿತ್ರೆಗಳಾಗಿವೆ.

ಈ ಹುನ್ನಾರಗಳ ಹಿಂದೆ ನಾವು ಪ್ರಧಾನವಾಗಿ ಮೂಲಭೂತವಾದಿಗಳ ಕೈವಾಡವನ್ನು ಗುರುತಿಸಬಹುದು. ಮೂಲಭೂತವಾದ ಎನ್ನುತ್ತಿದ್ದಂತೆ ನಮ್ಮ ಮುಂದೆ ಬರುವುದು ಧಾರ್ಮಿಕ ಮೂಲಭೂತವಾದ. ಆದರೆ ಈ ಧಾರ್ಮಿಕ

ಮೂಲಭೂತವಾದ ಎಂದೂ ಏಕಾಂಗಿಯಲ್ಲ. ಇದರೊಟ್ಟಿಗೆ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮೂಲಭೂತ ವಾದಗಳು ಸದಾ ತೆಕ್ಕೆ ಹಾಕಿಕೊಂಡಿರುತ್ತವೆ.

ಸ್ವತಂತ್ರಾ ನಂತರದ ಭಾರತದ ಚರಿತ್ರೆಯಲ್ಲಿ ನಾವು ಮೂರು ಸಂಗತಿಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಒಂದು, ಗಾಂಧಿಯ ಹತ್ಯೆ. ಎರಡು ಸಂವಿಧಾನದ ಅನುಷ್ಠಾನ. ಮೂರು, ನೆಹರೂ ಆಡಳಿತ ಶೈಲಿ. ನೆಹರೂ ಆಡಳಿತ ಶೈಲಿ ಮೊದಲಿನೆರಡರ ನಡುವೆ ಕೆಲವೊಮ್ಮೆ ಗುಪ್ತಗಾಮಿನಿಯಾಗಿ, ಕೆಲವೊಮ್ಮೆ ಬಹಿರಂಗವಾಗಿ ಹರಿಯುವ ಧಾರೆಯಾಗಿದೆ. ಇದು ಧನಾತ್ಮಕ, ಋಣಾತ್ಮಕ ಪಾತ್ರಗಳೆರಡನ್ನೂ ವಹಿಸಿದೆ. ಇದರ ದೃಷ್ಟಿಕೋನದ ಬಹಿರಂಗ ಪರಿಣಾಮಗಳಿಗಿಂತ ಅದರ ಕ್ರಿಯೆಗಳಿಂದಾದ ಅನುಷಂಗಿಕ ಪರಿಣಾಮಗಳು ಹೆಚ್ಚು ಅಪಾಯಕಾರಿಯಾಗಿವೆ.

ಈ ಸಂಗತಿಗಳು ಇಲ್ಲಿ ಮುಖ್ಯವಾಗುವುದೇಕೆಂದರೆ ಸ್ವಾತಂತ್ರ್ಯಾ ನಂತರದ ಕ್ಷಣದಲ್ಲಿ ಮೂಲಭೂತವಾದಿಗಳು ಎದುರಿಸಬೇಕಾಗಿ ಬಂದ ಎರಡು ಮುಖ್ಯ ಸವಾಲುಗಳು..., ಗಾಂಧಿ ಹಾಗೂ ಡಾ|| ಅಂಬೇಡ್ಕರ್‌ರ ಸಂವಿಧಾನ. ಈ ಮೂಲಭೂತವಾದಿಗಳಿಗೆ ಗಾಂಧಿಯ ಸಮಾನತೆಯ ಪ್ರಖರ ಚಿಂತನೆಗಳು ಹಾಗೂ ಅಂಬೇಡ್ಕರ್‌ರ ಸಂವಿಧಾನ ಸಮಾನ ಅಪಾಯಕಾರಿಗಳಾಗಿ ಕಂಡಿದ್ದವು. ಅಲ್ಲಿಂದಾಚೆಗೆ ಅವರ ಗುರಿ ಈ ಇಬ್ಬರಲ್ಲೇ ಕೇಂದ್ರೀಕರಣಗೊಂಡಿತು. ಮೊದಲು ಸುಲಭ ಸಾಧ್ಯವಾದ ಗಾಂಧಿಯನ್ನು ಆರಿಸಿಕೊಂಡರು. ಏಕೆಂದರೆ ಅಲಿಖಿತವಾದ, ಲಿಖಿತವಾದರೂ ಕಡ್ಡಾಯವಾಗಿ ಆಚರಣೆಗೆ ತರಲು ಸಾಧ್ಯವಾಗದ ಗಾಂಧಿಯ ತತ್ವಗಳನ್ನು ಅವರ ಕೊಲೆಯೊಂದಿಗೆ ಮೂಲೆಗುಂಪು ಮಾಡಬಹುದೆಂದು ಅವರಿಗೆ ಗೊತ್ತಿತ್ತು. ಆದರೆ ಅವರಿಗೆ ನಿಜವಾದ ಸವಾಲಾಗಿದ್ದು ಸರ್ವರನ್ನೂ ಸಮಾನತೆಯಿಂದ ನೋಡುವ, ಎಲ್ಲರಿಗೂ ಸಮನಾದ ಬದುಕುವ ಹಕ್ಕನ್ನು ಪ್ರತಿಪಾದಿಸಿದ್ದ ಅಂಬೇಡ್ಕರ್‌ರ ಲಿಖಿತ ಸಂವಿಧಾನ ಆಚರಣೆಗೆ ಬಂದಿದ್ದು. ಇದನ್ನು ಎದುರಿಸಲು ಅವರು ದೂರಗಾಮಿ ತಂತ್ರವೊಂದನ್ನು ರೂಪಿಸಿಕೊಂಡರು.

ನಿರಂತರವಾಗಿ, ಸರ್ಕಾರ ಯಾವ ಪಕ್ಷದ್ದಾದರೂ ಸರಿ ಅಲ್ಲಿ ತಮ್ಮ ಪ್ರತಿನಿಧಿತ್ವವಿರುವಂತೆ ಯೋಜಿಸಿಕೊಂಡರು. ಸಂವಿಧಾನ ಪ್ರತಿಪಾದಿಸುವ ಕಾನೂನಿನ ಚೌಕಟ್ಟಿನ ಮೂಲಕವೇ, ಕಾನೂನನ್ನು ದುರುಪಯೋಗಪಡಿಸುತ್ತಾ, ತಮಗೆ ಬೇಕಾದವರಿಗೆ ಮಾತ್ರ ಸಂವಿಧಾನದ ಸವಲತ್ತುಗಳು ದೊರೆಯುವಂತೆ ಮಾಡುತ್ತಾ, ಸಾಮಾಜಿಕ ಅಸಮಾನತೆಯ ಕಂದಕವನ್ನೂ ಪ್ರತಿವರ್ಷವೂ ಅಗಲಗೊಳಿಸುತ್ತಾ ಹೋದರು. ಹೀಗೆ, ಅದೇ ಸಂವಿಧಾನದ ಮೂಲಕವೇ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವುದು ಅವರ ಗುರಿ, ಉದ್ದೇಶ ಹಾಗೂ ಹಿಡನ್ ಅಜೆಂಡಾ. ಇದರ ಫಲಿತಾಂಶವೇ ಕೋಮುವಾದ, ಬಡತನ, ತೀವ್ರ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಅಸಮಾನತೆಯುಳ್ಳ ಇಂದಿನ ಭಾರತ.

* * *

ಇಲ್ಲಿ ಒಂದು ವಿಷಯವನ್ನು ಸ್ಪಷ್ಟಪಡಿಸುವ ಅಗತ್ಯವಿದೆ. ಈ ದೇಶದಲ್ಲಿ ಯಾರಾದರೂ 'ಪರಿಸರ' ಎಂದ ಕೂಡಲೇ, ಎದುರಿಗಿರುವ ವ್ಯಕ್ತಿ ಕೇಳಬೇಕಾದ ಮೊದಲ ಪ್ರಶ್ನೆಯೆಂದರೆ.., ನೀವು 'ಯಾರ ಪರಿಸರ'ದ ಬಗ್ಗೆ ಮಾತಾಡುತ್ತಿದ್ದೀರಿ? ಏಕೆಂದರೆ ಆರಂಭದಿಂದಲೂ ಈ ದೇಶದಲ್ಲಿ ಎರಡು ಪರಿಸರವಾದಗಳಿವೆ. ಒಂದು, 'ಹೇಳುತ್ತಿರುವವರ ಪರಿಸರ ವಾದ', ಎರಡು 'ಕೇಳುತ್ತಿರುವವರ ಪರಿಸರವಾದ'. ಇನ್ನೂ ಬಿಡಿಸಿ ಹೇಳುವುದಾದರೆ, ಅವನ ವರ್ಗದ, ಜಾತಿಯ ಪರಿಸರ ಹಾಗೂ ಆ ಮೂಲಕ ಅದರ ಹಿತಾಸಕ್ತಿ ರಕ್ಷಣೆಯ ಪರಿಸರವಾದವನ್ನು ಮಂಡಿಸುತ್ತಿರುತ್ತಾನೆ. ಈ ದೇಶದಲ್ಲಿ ಈವರೆಗೂ ಆಗುತ್ತಾ ಬಂದಿರುವುದು ಇದೇ. ಹೇಳುವವರು ಒಂದು ಭಾಗ, ಕೇಳುವವರು೯೯ ಭಾಗ.

ಈ ದೇಶದಲ್ಲಿ ಎರಡು ಪರಿಸರವಾದಗಳಿವೆ. ಒಂದು, 'ಹೇಳುತ್ತಿರುವವರ ಪರಿಸರ ವಾದ', ಎರಡು 'ಕೇಳುತ್ತಿರುವವರ ಪರಿಸರವಾದ'. ಇನ್ನೂ ಬಿಡಿಸಿ ಹೇಳುವುದಾದರೆ, ಅವನ ವರ್ಗದ, ಜಾತಿಯ ಪರಿಸರ ಹಾಗೂ ಆ ಮೂಲಕ ಅದರ ಹಿತಾಸಕ್ತಿ ರಕ್ಷಣೆಯ ಪರಿಸರವಾದವನ್ನು ಮಂಡಿಸುತ್ತಿರುತ್ತಾನೆ. ಈ ದೇಶದಲ್ಲಿ ಈವರೆಗೂ ಆಗುತ್ತಾ ಬಂದಿರುವುದು ಇದೇ. ಹೇಳುವವರು ಒಂದು ಭಾಗ, ಕೇಳುವವರು೯೯ ಭಾಗ.

ಸಾಮಾನ್ಯವಾಗಿ 'ಹೇಳುತ್ತಿರುವವರೆಲ್ಲಾ' 'ಅವರ' ಪರಿಸರವಾದವನ್ನೇ ಹೇಳುತ್ತಿರುತ್ತಾರೆ. ಈ 'ಹೇಳುವ ಸಾಮರ್ಥ್ಯ' ಅವರಿಗೆ ಬಂದಿದ್ದೇ ಅವರು ಆ ವರ್ಗದ ಸದಸ್ಯರಾದ್ದರಿಂದ. ಅವರು ಆ ವರ್ಗದ ಸದಸ್ಯರಾದ್ದರಿಂದಲೇ ಪ್ರಭುತ್ವ ಅವರ ಮಾತನ್ನು ಗಂಭೀರವಾಗಿ ಪರಿಗಣಿಸುತ್ತದೆ. ಪಾಲಿಸಿಗಳ ಸೃಷ್ಟಿಯಲ್ಲಿ ಅವರ ಅಭಿಪ್ರಾಯಗಳನ್ನು ಸ್ವೀಕರಿಸುತ್ತದೆ. ಏಕೆಂದರೆ ಈ ಲಕ್ಷಾಂತರ ಜನ ಅವರ 'ಪ್ರಭುತ್ವ ವರ್ಗವನ್ನು' ಪ್ರತಿನಿಧಿಸುವುದಿಲ್ಲ. 'ಅವರಂತೆ' 'ಇವರಿಗೆ' ಇಂಗ್ಲಿಷಿನಲ್ಲಿ ಪ್ರಾಜೆಕ್ಟ್ ರಿಪೋರ್ಟ್‌ಗಳನ್ನು ಬರೆಯಲು ಬರುವುದಿಲ್ಲ. ಅವರಿಗೆ ಗೊತ್ತಿರುವ ವಿಧ್ವಂಸಕ ವಿಜ್ಞಾನ/ತಂತ್ರಜ್ಞಾನದ ವಿಕೃತ 'ಪರಿಭಾಷೆ' ಯಾ 'ವಕಾಬ್ಲರಿ' ಇವರಿಗೆ ಗೊತ್ತಿಲ್ಲ.

ಮೊದಲು ಅವರ 'ವಕಾಬ್ಲರಿ'ಯ ಕೆಲವು ಚಮತ್ಕಾರಿಕ ಪದಗಳನ್ನು ಪಟ್ಟಿ ಮಾಡೋಣ. ಮುಖ್ಯವಾಗಿ 'ಮಲಿನತೆ', ಇದರಲ್ಲಿ ಎಲ್ಲಾ ತರದ ಮಾಲಿನ್ಯಗಳೂ ಬರುತ್ತವೆ. ಈ ಪತ್ತೇದಾರಿಯನ್ನು ನಾವು ಕಾರ್ಬನ್ ಡೈಆಕ್ಸೈಡ್ ಮತ್ತು ಓಜೋನ್‌ನಿಂದ ಆರಂಭಿಸಬಹುದು. ಏಕೆಂದರೆ ಈ ಮೇಲಿನ ಮೂರರಲ್ಲಿ ಇವು ಹೆಚ್ಚು ಅಪಾಯಕಾರಿಯಾದವೆಂದು ಹೇಳಲಾಗಿದೆ. ಹಾಗೂ ಉಳಿದೆರೆಡರ ಅನುಷಂಗಿಕ ಪ್ರಭಾವಗಳನ್ನೂ ಇವು ನಿಯಂತ್ರಿಸುತ್ತವೆ. 'ಸೂರ್ಯನಿಂದ ಹೊಮ್ಮುವ ಅಪಾಯಕಾರಿ ನೇರಳಾತೀತ ಕಿರಣಗಳನ್ನು ಇದು ತಡೆಯುತ್ತದೆ. ಇದರಿಂದ ಭೂಮಿಯ ಜೀವಿಗಳನ್ನು ಚರ್ಮದ ಕ್ಯಾನ್ಸರ್, ಕಣ್ಣಿನ ರೋಗ, ಸಹಜ-ರೋಗ ನಿರೋಧಕ ಶಕ್ತಿಯ ಕ್ಷಯದಿಂದ ರಕ್ಷಿಸುತ್ತದೆ. ಹಾಗೇ ಈ ನೇರಳಾತೀತ ಕಿರಣಗಳು ಅತಿಯಾದರೆ ಸಸ್ಯಗಳ ಎಲೆಗಳ ವಿಸ್ತಾರವನ್ನು ಕುಗ್ಗಿಸುತ್ತವೆ. ಬೀಜಗಳು ಮೊಳಕೆ ಒಡೆಯದಂತೆ ಮಾಡುತ್ತವೆ. ಜೀವಿಗಳ ರಾಸಾಯನಿಕ ಬದಲಾವಣೆ ಮಾಡಿ ಜೀನ್ ವಿಕೃತಿಯಾಗಿ, ವಿಕಾರ ಸಂತಾನಕ್ಕೆ ಕಾರಣವಾಗುತ್ತವೆ, ಇತ್ಯಾದಿ..., ಇತ್ಯಾದಿ...,' ಸರಿ ಒಪ್ಪಿಕೊಳ್ಳೋಣ..., ಈ ವೈಜ್ಞಾನಿಕ ವಿವರಣೆಯನ್ನು ಪ್ರಶ್ನಿಸುವ ತಜ್ಞತೆ ನಮಗಿಲ್ಲ. ಅಂಥಾ ವೈಜ್ಞಾನಿಕ ಜ್ಞಾನವಾಗಲೀ, ಅದನ್ನು ಕ್ರಾಸ್‌ಚೆಕ್ ಮಾಡುವ ಸಾಮರ್ಥ್ಯವಾಗಲೀ ನಮ್ಮಲ್ಲಿಲ್ಲ. ಆದರೆ, ಇದು ಏಕೆ

ಸಂಭವಿಸುತ್ತದೆ? ಮುಖ್ಯವಾಗಿ ಪಳೆಯುಳಿಕೆ ಇಂಧನಗಳ ದಹನದಿಂದ ಬಿಡುಗಡೆಯಾಗುವ ಇಂಗಾಲದ ಡೈ ಆಕ್ಸೈಡ್ ಸೇರಿದಂತೆ ಬ್ರೋಮೈಡ್, ಹಾಲೆನ್, ಮೀಥೇನ್ ಹಾಗೂ ಬಹಳ ಮುಖ್ಯವಾಗಿ ಕ್ಲೋರೊ ಫ್ಲೂರೊ ಕಾರ್ಬನ್ (ಸಿಎಫ್‌ಸಿ)ಗಳು. ಬೇರೆಯವನ್ನೆಲ್ಲಾ ಪಕ್ಕಕ್ಕಿಡಿ, ಏಕೆಂದರೆ ಈ ಸಿಎಫ್‌ಸಿಯ ಒಂದು ಕಣ ಒಂದು ಲಕ್ಷ ಓಜೋನ್ ಕಣಗಳನ್ನು ನಾಶಪಡಿಸುತ್ತದೆ ಎಂದು ತಜ್ಞರು ಹೇಳುತ್ತಾರೆ. ಹಾಗಾದರೆ ಇಂಥಾ ಸಿಎಫ್‌ಸಿಯನ್ನು ಯಾರು ಉತ್ಪಾದಿಸುತ್ತಾರೆ ? ಏಕೆ ಉತ್ಪಾದಿಸುತ್ತಾರೆ ? ಯಾರಿಗಾಗಿ ಉತ್ಪಾದಿಸುತ್ತಾರೆ ? ಇಷ್ಟು ಅಪಾಯಕಾರಿ ಎಂದು ತಿಳಿದಿದ್ದರೂ ಯಾವ ಜೀವದ್ರೋಹಿಗಳು ಇದನ್ನು ಬಳಸುತ್ತಾರೆ ?

೧. ಸಿಎಫ್‌ಸಿಯನ್ನು ಕೆಲವೇ ಕೆಲವು ಮುಂದುವರಿದ ರಾಷ್ಟ್ರಗಳ ಕಂಪನಿಗಳು ಉತ್ಪಾದಿಸುತ್ತವೆ. ೨. ಲಾಭಕ್ಕಾಗಿ ಉತ್ಪಾದಿಸುತ್ತಾರೆ. ೩. ಶ್ರೀಮಂತರಿಗಾಗಿ ಉತ್ಪಾದಿಸುತ್ತಾರೆ. ೪. ಇದರ ಬಳಕೆದಾರರೆಂದರೆ: ವಿಮಾನ, ಏರ್ ಕಂಡೀಶನರ್ ಹಾಗೂ ರೆಫ್ರಿಜರೇಟರ್‌ಗಳು ಮುಖ್ಯವಾದವು.

ಸರಿ ಈ ವಿಮಾನ, ಏಸಿ, ಫ್ರಿಡ್ಜ್‌ಗಳನ್ನು ಬಳಸುವ ಜನ ಯಾರು? ಯಾವ ವರ್ಗದವರು? ಭಾರತೀಯ ಸಂದರ್ಭಕ್ಕೆ ಬಂದಾಗ, ಇನ್ನೆರಡು ಪ್ರಶ್ನೆಗಳು ಸೇರುತ್ತವೆ. ಯಾವ ಜಾತಿಯವರು? ಗ್ರಾಮೀಣರೋ ಇಲ್ಲಾ ನಗರವಾಸಿಗಳೋ? ಎಲ್ಲಕ್ಕಿಂತ ಹೆಚ್ಚಾಗಿ ಇವನ್ನು ಮಾಡಲು ಅನುಮತಿ ಕೊಡುತ್ತಿರುವವರು ಯಾರು ಮತ್ತು ಏಕೆ ?

ಇಡೀ ಭಾರತದ ಒಟ್ಟು ಏಸಿ, ಫ್ರಿಡ್ಜ್‌ಗಳಲ್ಲಿ ಶೇ ೯೯ ಭಾಗ ನಗರ ಪ್ರದೇಶದಲ್ಲೇ ಇವೆ. ಒಂದು ಕೊಠಡಿಗೆ ಏಸಿ ಹಾಕಿಸಲಿಕ್ಕೆ ಕನಿಷ್ಠ ೩೦,೦೦೦ ಹಣವನ್ನು ವೆಚ್ಚಮಾಡಬಲ್ಲ ಆರ್ಥಿಕ ಸಾಮರ್ಥ್ಯ, ಮುಖ್ಯವಾಗಿ ಆ ಸುಖದ ಕಲ್ಪನೆ ಈ ದೇಶದ ಶೇ ೬೦ರಷ್ಟಿರುವ ಬಡಜನಕ್ಕೆ ಬರಲು ಸಾಧ್ಯವೇ ಇಲ್ಲ. ಇನ್ನು ಉಳಿದ ಮಧ್ಯಮ ವರ್ಗದ ಜನಕ್ಕೆ ಸಿಕ್ಕಿದರೆ ಒಂದು ಕೈ ನೋಡುವ ಮನಸ್ಥಿತಿ ಇದ್ದರೂ ಕೈಗೆಟುಕುವುದಿಲ್ಲ. ಇದೇ ಲೆಕ್ಕಾಚಾರವನ್ನು ವಿಶ್ವಕ್ಕೂ ಅನ್ವಯಿಸಬಹುದು.

ಈಗ ಹೇಳಿ, ಈ ಜಗತ್ತಿನ ನಿಜವಾದ ಪರಿಸರ ವಿನಾಶಕರು ಯಾರು ? ಒಟ್ಟು ಶೇಕಡಾ ೯೦ ಭಾಗ ಜನರಂತೂ ಅಲ್ಲ. 'ಅವರು' ಆ ಶೇಕಡಾ ೧೦ ಭಾಗ ಜನ ತಮ್ಮ ಸುಖಕ್ಕೆ, ಹಿತಕ್ಕೆ, ಅಟ್ಟಹಾಸಕ್ಕೆ, ಪ್ರತಿಷ್ಠೆಗೆ ಬಳಸುತ್ತಿರುವ ಕೆಲವು ವಸ್ತುಗಳಿಂದ ಇಡೀ ಜಗತ್ತು ಮರಣಾಂತಿಕ ಅಪಾಯದಲ್ಲಿದೆ. ಇಲ್ಲಿನ ದುರಂತವೆಂದರೆ ಇದೇ ಹತ್ತು ಭಾಗ ಜನರೇ ಪರಿಸರ, ಸಂರಕ್ಷಣೆಯ ಬಗ್ಗೆ ಮಾತನಾಡುತ್ತಿರುವುದು. ಇಡೀ ದೇಶಕ್ಕಾಗುವಷ್ಟು ನಿಯಮಗಳನ್ನು ಮಾಡುತ್ತಿರುವುದು. ಉಳಿದ ೯೦ ಭಾಗ ಜನ ಅದನ್ನು ಅನುಸರಿಸುವಂತೆ ಒತ್ತಾಯಿಸುತ್ತಿರುವುದು. ಸುಖವೆಲ್ಲಾ 'ಅವರಿಗೆ', ಅದರ ವಿನಾಶಗಳೆಲ್ಲಾ 'ಇವರಿಗೆ'. ಆದರೆ ನಮ್ಮ 'ಪರಿಸರ ವ್ಯಾಧಿಗಳು' ಅತ್ತ ಇದಾವುದನ್ನೂ ಹೇಳದೆ, ನಿರಂತರವಾಗಿ ಇದೇ ಶಂಖ, ಜಾಗಟೆಗಳ ಸದ್ದಿನಲ್ಲಿ ಪರಿಸರವಾದವನ್ನು ಹೂತು ಹಾಕಿದ್ದಾರೆ.

ಇಡೀ ಭಾರತದ ಒಟ್ಟು ಏಸಿ, ಫ್ರಿಡ್ಜ್‌ಗಳಲ್ಲಿ ಶೇ ೯೯ ಭಾಗ ನಗರ ಪ್ರದೇಶದಲ್ಲೇ ಇವೆ. ಒಂದು ಕೊಠಡಿಗೆ ಏಸಿ ಹಾಕಿಸಲಿಕ್ಕೆ ಕನಿಷ್ಠ ೩೦,೦೦೦ ಹಣವನ್ನು ವೆಚ್ಚಮಾಡಬಲ್ಲ ಆರ್ಥಿಕ ಸಾಮರ್ಥ್ಯ, ಮುಖ್ಯವಾಗಿ ಆ ಸುಖದ ಕಲ್ಪನೆ ಈ ದೇಶದ ಶೇ ೬೦ ರಷ್ಟಿರುವ ಬಡಜನಕ್ಕೆ ಬರಲು ಸಾಧ್ಯವೇ ಇಲ್ಲ. ಇನ್ನು ಉಳಿದ ಮಧ್ಯಮ ವರ್ಗದ ಜನಕ್ಕೆ ಸಿಕ್ಕಿದರೆ ಒಂದು ಕೈ ನೋಡುವ ಮನಸ್ಥಿತಿ ಇದ್ದರೂ ಕೈಗೆಟುಕುವುದಿಲ್ಲ. ಇದೇ ಲೆಕ್ಕಾಚಾರವನ್ನು ವಿಶ್ವಕ್ಕೂ ಅನ್ವಯಿಸಬಹುದು. ಈಗ ಹೇಳಿ, ಈ ಜಗತ್ತಿನ ನಿಜವಾದ ಪರಿಸರ ವಿನಾಶಕರು ಯಾರು ?

ಇತ್ತ ದೇಶದ ೯೦ ಭಾಗ ಜನ ನಿಸ್ಸಹಾಯಕವಾಗಿ ಕುಳಿತಿದೆ. ಇದರಲ್ಲಿ ಕನಿಷ್ಠ ೩೦ ಭಾಗ ಜನ ಸಮುದಾಯ ಒಂದೊತ್ತಿನ ಗಂಜಿಗೂ ಪರದಾಡುತ್ತಿದೆ. ಉಳಿದಿದ್ದರಲ್ಲಿ ೫೦ ಭಾಗ ಎರಡೊತ್ತಿನ ಕೂಳಿಗಾಗಿ ೧೨-೧೬ ಗಂಟೆ ದೈಹಿಕ ಶ್ರಮವಹಿಸುತ್ತಿದೆ. ಉಳಿದ ಭಾಗದ ಜನ ಈ ನಾಗರಿಕತೆಯ ಕಿಚ್ಚಿನಿಂದ ಎಷ್ಟೋ ಸಾವಿರ ಮೈಲಿಗಳ ದೂರದಲ್ಲಿದ್ದಾರೆ. ಅವರಿಗೆ ಇವ್ಯಾವೂ ಗೊತ್ತಿಲ್ಲ.

ಈ ಓಜೋನಿನ ಬಗ್ಗೆ ಈ ಮೇಲೆ ಹೇಳಿದ ೯೦ ಭಾಗ ಜನಸಮುದಾಯಕ್ಕೆ ಜಾಗೃತಿ ಹುಟ್ಟಿಸಲು, ಈ ದೇಶದ ಪರಿಸರವಾದಿಗಳು ಪ್ರಾಜೆಕ್ಟ್ ರಿಪೋರ್ಟ್‌ಗಳನ್ನು ತಯಾರಿಸಿ, ಶ್ರೀಮಂತ ದೇಶಗಳ ಮುಂದೆ ಇಡುತ್ತಲೇ ಇರುತ್ತಾರೆ. ಆದರೆ ಈ ಜಗತ್ತಿನ ಹಸಿರುಮನೆ ಪರಿಣಾಮಕ್ಕೆ, ಓಜೋನ್ ದುರಂತಕ್ಕೆ, ವಾತಾವರಣದ ಏರು ಪೇರಿಗೆ, ಮಾನ್ಸೂನ್ ಮಾರುತಗಳ ಏರುಪೇರಿಗೆ ಕಾರಣವಾಗಿರುವ, ಅತ್ಯಂತ ಅಪಾಯಕಾರಿಯಾದ ಇಂಗಾಲದ ಡೈಆಕ್ಸೈಡನ್ನು ವಾತಾವರಣಕ್ಕೆ ಕಕ್ಕುತ್ತಿರುವ ದೇಶಗಳಲ್ಲಿ ಅಮೆರಿಕಾ ಅಗ್ರಸ್ಥಾನದಲ್ಲಿದೆ. ಇದು ಪ್ರಶ್ನೆ, ಆದರೂ ಅಮೆರಿಕಾ ಏಕೆ ದುಡ್ಡು ಕೊಡುತ್ತದೆ ?

* * *

ಈ ಜಗತ್ತಿನ ಮೊದಲ ಪರಿಸರ ಸಮಸ್ಯೆ ಆರಂಭವಾಗಿದ್ದು ಎಂದು ? ಈ ಸರಳ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೋದರೆ ನಾವು ಹೋಗಿ ನಿಲ್ಲುವುದು ಮನುಕುಲದ ಮೊದಲ ಯುದ್ಧಕ್ಕೆ. ಆ ಯುದ್ಧಗಳೋ ಎಂಥವೆಂದರೆ, ಮನುಷ್ಯ ಬಲದ ಮೇಲೆ ಆಧಾರಿತವಾದವು. ಬಿಲ್ಲು ಬಾಣ, ಕತ್ತಿ ಗುರಾಣಿಗಳನ್ನು ಬಳಸಬಲ್ಲ ತೋಳ್ಬಲದ ಆಧಾರದಲ್ಲಿ ಅವರ ಸೋಲು ಗೆಲುವುಗಳು ನಿರ್ಧಾರವಾಗುತ್ತಿದ್ದವು. ಹೀಗೆ ಬಿಲ್ಲು ಬಾಣವನ್ನು ಹಿಡಿದು ಮುಖಾಮುಖಿ ನಿಂತಾಗ ಒಬ್ಬ ಶೂದ್ರ ಕರ್ಣ ಹಸ್ತಿನಾವತಿಯ ಮಹಾಕ್ಷತ್ರಿಯ ಅರ್ಜುನನಿಗೆ ಸವಾಲೆಸೆದು ತೊಡೆತಟ್ಟಿ ನಿಲ್ಲಬಲ್ಲವನಾಗಿದ್ದ. ಏಕಲವ್ಯನಂಥ ಒಬ್ಬ ಕಾಡು ಬೇಡರ ಹುಡುಗ ಅರ್ಜುನನ ಧಿಮಾಕನ್ನು ನುಚ್ಚುನೂರು ಮಾಡಬಲ್ಲವನಾಗಿದ್ದ. ಇಲ್ಲಿ ವರ್ಗ, ಜಾತಿಗಳನ್ನು ಮೀರಿ ತೋಳ್ಬಲ, ಅರ್ಜಿತ ಸಾಮರ್ಥ್ಯ ಮುಖ್ಯವಾಗುತ್ತಿದ್ದವು.

ಈ ಲೆಕ್ಕದಲ್ಲೇ ತೆಗೆದುಕೊಂಡರೆ ಕಪ್ಪು ತೊಗಲಿನ ಒಬ್ಬ ನೀಗ್ರೋ, ಒಬ್ಬ ಸೋಮಾಲಿ, ಒಬ್ಬ ಪಿಗ್ಮಿ ಹತ್ತು ಜನ ಬಿಳಿ ತೊಗಲಿನ ಯುರೋಪಿಯನ್ನರನ್ನು ಏಕಕಾಲದಲ್ಲಿ ನಿಭಾಯಿಸಬಲ್ಲರು. ತಮ್ಮ ಪ್ರಾಕೃತ ಆಯುಧಗಳ ಮೂಲಕವೇ ಇದು ಅವರಿಗೆ ಸಾಧ್ಯವಾಗುತ್ತದೆ. ಆದ್ದರಿಂದ ಅಂದಿನ ಯುದ್ಧಗಳು ಪರಸ್ಪರ ಶಕ್ತಿ ಸಾಮರ್ಥ್ಯಗಳನ್ನೇ ಅವಲಂಬಿಸಿದ್ದರಿಂದ ಅಂದು ನಿಜವಾದ ಪರಿಸರ ಸಮಸ್ಯೆ ಆರಂಭವಾಗಿರಲಾರದು. ಏಕೆಂದರೆ ಈ ಮುಖಾಮುಖಿ ಯುದ್ಧಕ್ಕೆ ಅನೇಕ ಮಿತಿಗಳಿದ್ದವು. ಒಬ್ಬ ಮನುಷ್ಯ ಎದುರಾಳಿಯ ತೀಕ್ಷ್ಣ ವಿರೋಧವನ್ನು ಎದುರಿಸುತ್ತಾ ಎಷ್ಟು ತಾನೆ ಹೋರಾಡಬಲ್ಲ?

ಇದೇ ಸಾಪೇಕ್ಷದಲ್ಲಿ ಒಬ್ಬ ದುರ್ಬಲ ಯೂರೋಪಿಯನ್ನನ ಅಥವಾ ಆರ್ಯನ ಕೈಗೆ ಒಂದು ಬಂದೂಕ ಕೊಡಿ, ಅವನೆದುರಿಗೆ ಸಾವಿರ ಮಂದಿ ಅದೇ ಆಫ್ರಿಕನ್ನರು ಅಥವಾ ದಲಿತರು/ಶೂದ್ರರು ಬರಲಿ, ಅವನು ಅವರೆಲ್ಲರನ್ನೂ ಏಕಕಾಲದಲ್ಲಿ ಯಮನಾಲಯಕ್ಕಟ್ಟಬಲ್ಲ. ಇಲ್ಲಿ ಪರಸ್ಪರ ಎಂಬ ಮಾತಿಲ್ಲ, ಎಲ್ಲಾ ಏಕ ಮುಖಿ. ಯಾವನ ಕೈಯಲ್ಲಿ ಬಂದೂಕ ಇರುತ್ತದೋ ಅವನು ಧೀರ, ಶೂರ, ಸಾಹಸಿ. ಬಂದೂಕ ಚಲಾಯಿಸಲು ತೋಳ್ಬಲದ ಅಗತ್ಯವಿಲ್ಲ. ಮುಷ್ಟಿಯ ಚಾಕಚಕ್ಯತೆ ಸಾಕು. ಅನೇಕ ಬಾರಿ ಅದೂ ಬೇಕಾಗುವುದಿಲ್ಲ!

'ನೊ ಮ್ಯಾನ್ಸ್ ಲ್ಯಾಂಡ್' ಎಂಬ ಆಸ್ಕರ್ ಪ್ರಶಸ್ತಿ ವಿಜೇತ ಸಿನೆಮಾದಲ್ಲಿ ಒಂದು ದೃಶ್ಯವಿದೆ. ಫಿರಂಗಿ ದಾಳಿಯಿಂದ ತಪ್ಪಿಸಿಕೊಂಡು ಕಂದಕದೊಳಕ್ಕೆ ಬಿದ್ದ 'ಚೀಕಿ' ಎಂಬಾತ ಅವರನ್ನು ಹುಡುಕಲು ಬಂದಿದ್ದ ಸೈನಿಕರಲ್ಲಿ ಒಬ್ಬನನ್ನು ಕೊಂದು ಹಾಕುತ್ತಾನೆ. ಉಳಿದವನು 'ನಿನೊ'. ಇವರಿಬ್ಬರೂ ಅಡುಗುದಾಣದಲ್ಲಿ ಕುಳಿತಿದ್ದಾಗ ಈ ಜನಾಂಗೀಯ ಕಲಹವನ್ನು ಮೊದಲು ಯಾರು ಆರಂಭಿಸಿದ್ದು ಎಂಬ ವಿಷಯದಲ್ಲಿ ಇಬ್ಬರಿಗೂ ವಾಗ್ವಾದ ಬೀಳುತ್ತದೆ. ಆಗ ಚೀಕಿಯ ಕೈಯಲ್ಲಿ ಮೆಶಿನ್‌ಗನ್ನು ಇರುತ್ತದೆ. ಸ್ವಲ್ಪಹೊತ್ತಿನಲ್ಲಿ ಚರ್ಚೆ ಬಿಸಿಹತ್ತಿ ಸಿಟ್ಟಿಗೆದ್ದ ಚೀಕಿ ಮೆಶಿನ್‌ಗನ್ನನ್ನು ನಿನೊನ ಮುಖಕ್ಕಿಡಿದು ಕೇಳುತ್ತಾನೆ..., 'ಯಾರು ಮೊದಲು ಆರಂಭಿಸಿದ್ದು?' ಬಂದೂಕದ ಮುಖದಲ್ಲಿ ನಿನೊ ತಣ್ಣಗೆ ಒಪ್ಪಿಕೊಳ್ಳುತ್ತಾನೆ, 'ನಾವೇ!'

ಸ್ವಲ್ಪ ಹೊತ್ತಿನಲ್ಲಿ ಪರಿಸ್ಥಿತಿ ಉಲ್ಟಾ ಆಗುತ್ತದೆ. ಮೆಶಿನ್‌ಗನ್ನು ನಿನೊನ ಕೈಗೆ ಬರುತ್ತದೆ. ವಾಗ್ವಾದ ಮತ್ತೆ ಆರಂಭವಾಗುತ್ತದೆ. ಈಗ ನಿನೊ ಚೀಕಿಯ ಮುಖಕ್ಕೆ ಬಂದೂಕ ಹಿಡಿದು ಕೇಳುತ್ತಾನೆ..., 'ಯಾರು ಮೊದಲು ಕಲಹ ಆರಂಭಿಸಿದ್ದು ?' ಚೀಕಿ ತಣ್ಣಗೆ ಹೇಳುತ್ತಾನೆ..., 'ನಾವೇ!'

'ಗರೀಬಿ ಹಠಾವ್' ಆಯಿತೋ ಇಲ್ಲವೋ ತಿಳಿಯದು, ಆದರೆ 'ಗರೀಬರೇ ಹಠಾವ್' ಆಗಿದ್ದಂತೂ ಸತ್ಯ. ಇಷ್ಟು ಹೊತ್ತಿಗಾಗಲೇ ಕೈಗಾರಿಕಾ ಕ್ರಾಂತಿ ಸಂಭವಿಸಿ ಆಗಿತ್ತು. ಉಳಿದದ್ದು ಹಸಿರು ಕ್ರಾಂತಿ, ಕೊನೆಗೆ ಅದೂ ಆಯಿತು. ಕೇಂದ್ರ ಸರ್ಕಾರದ ಉಗ್ರಾಣ ಗಳು ದವಸಧಾನ್ಯಗಳಿಂದ ತುಂಬಿ ತುಳುಕಾಡಿದವು. ಯಾಕೋ ಏನೋ ಗೊತ್ತಿಲ್ಲ, ಬಡವರಂತೂ ಬಡವರಾಗೇ ಉಳಿದಿದ್ದರು.



ಹಾಗಾದರೆ ನಿಜವಾಗಿಯೂ ಕಲಹ ಆರಂಭಿಸಿದ್ದು ಯಾರು?

ಸಿನೆಮಾ ನೋಡುವಾಗ ನಗುಬರುತ್ತದೆ. ಆದರೆ ಈ ದೃಶ್ಯ ಧ್ವನಿಸುವ ದುರಂತ ಇಂದಿನ ಮನುಕುಲದ ದುರಂತವಾಗಿದೆ. ಎಲ್ಲಾ ಜನಾಂಗೀಯ ಹೋರಾಟಗಳ, ಭಯೋತ್ಪಾದನಾ ಗುಂಪುಗಳ, ಕೊಳೆತ ವಸಾಹತುಶಾಹಿ ಮನಸ್ಸುಗಳ ಅಂತರಂಗವನ್ನು ಬಿಚ್ಚಿಡುತ್ತದೆ.

ಇಲ್ಲಿಂದಲೇ ಎಲ್ಲಾ ಸಮಸ್ಯೆಗಳು ಆರಂಭವಾಗುತ್ತವೆ. ಎಲ್ಲಿಂದಲೋ ಬಂದ ಯೂರೋಪಿಯನ್ನರು ಸಾಲುಸಾಲಾಗಿ ರೆಡ್ಇಂಡಿಯನ್ನರ ಹೆಣ ಬೀಳಿಸಿ ಅವರ ನೆಲವನ್ನು ಕಸಿದುಕೊಳ್ಳಬಲ್ಲರು. ಉಳಿದವರನ್ನು ಮುಗಿಸಲು, ಅವರ ಬದುಕಿನ ಮೂಲಧನವಾಗಿದ್ದ ಬಫೆಲೋಗಳನ್ನು ಲಕ್ಷಾಂತರ ಸಂಖ್ಯೆಯಲ್ಲಿ ಹೊಡೆದುರುಳಿಸಬಲ್ಲರು. ಅವರನ್ನು ನಿರ್ನಾಮದ ಅಂಚಿನಲ್ಲಿ ನಿಲ್ಲಿಸಬಲ್ಲರು. ಹಾಗೇ ಈ ದೇಶಕ್ಕೆ ಬದುಕನ್ನು ಅರಸಿ ಬಂದ ಆರ್ಯರು.

ಇದೇ ಬಂದೂಕಗಳೇ ನಮ್ಮ ನಾಡಿನ ಲಕ್ಷಾಂತರ ಹುಲಿ, ಆನೆ, ಜಿಂಕೆ, ಘೇಂಡಾಮೃಗಗಳನ್ನು ಕೊಂದಿದ್ದು. ಈ ಬಂದೂಕವನ್ನು ತೋರಿಸಿಯೇ ನಮ್ಮ ನಾಡನ್ನು ಅವರು ಕೈವಶಮಾಡಿಕೊಂಡಿದ್ದು. ಇದಕ್ಕೆ ಹೆದರಿಯೇ ನಮ್ಮವರು ಅವರ ಗುಲಾಮರಾಗಿದ್ದು. ಈ ಗುಲಾಮಿಕೆಯೇ ನಮ್ಮ ನಾಡಿನ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯಲು ಅವರಿಗೆ ಸಹಕರಿಸಿದ್ದು. ಹೀಗಾಗಿ ತಪ್ಪು ಪರಕೀಯರದ್ದಲ್ಲ, ಬದಲಾಗಿ ಬಂದೂಕದ್ದು ಎನಿಸುವುದಿಲ್ಲವೇ? ಹುಡುಗಾಟವಾಡುತ್ತಾ ಹಾಗೇ ಸ್ವಲ್ಪ ಹಿಂದಕ್ಕೆ ಹೋಗಿ ನೋಡಿ, ಈ ಬಂದೂಕದ ಮೂಲ ವಿಜ್ಞಾನಕ್ಕೆ. ಅಲ್ಲಿಂದ ಈ ವಿಜ್ಞಾನವನ್ನು ಮೂರ್ತರೂಪಕ್ಕಿಳಿಸಿದ ತಂತ್ರಜ್ಞಾನಕ್ಕೆ ಹೋಗಿ ನಿಲ್ಲುತ್ತದೆ. ಹಾಗಾದರೆ ಈ ತಪ್ಪು ಬಂದೂಕದ್ದು ಅಲ್ಲ, ಬದಲಾಗಿ ವಿಜ್ಞಾನ-ತಂತ್ರಜ್ಞಾನದ್ದಿರಬೇಕು! ಹಾಗೇ ಶ್ರೇಷ್ಠತೆಯ ತೀಟೆ ಇತ್ತಿದ ನಪುಂಸಕ ಮನಸ್ಸೊಂದು ತನ್ನ ದುರ್ಬಲತೆಯನ್ನು ಮುಚ್ಚಿಕೊಳ್ಳಲು ಹೂಡಿದ ಸಂಚಿನದ್ದಿರಬೇಕು!.

ಇಂಥಾ ಉದ್ದೇಶದ ಈ ವಿಜ್ಞಾನದ ಸಾಮರ್ಥ್ಯವನ್ನು ಯಾರಾದರೂ ಸರಿ ಒಪ್ಪಲೇಬೇಕು! ಇದೇ ಅಲ್ಲವೇ ಕೈಗಾರಿಕಾ ಕ್ರಾಂತಿ, ಹಸಿರು ಕ್ರಾಂತಿ, ಶಸ್ತ್ರಾಸ್ತ್ರಗಳ ಕ್ರಾಂತಿ, ಕೊನೆಗೆ ಯುದ್ಧಗಳ ಕ್ರಾಂತಿ ಮಾಡಿಸಿದ್ದು. ಈ ದೇಶದಲ್ಲಿ ಬೆಳೆಯುತ್ತಿದ್ದ ಜನಸಂಖ್ಯೆಯೊಂದಿಗೆ ಪೈಪೋಟಿಗಿಳಿದಿದ್ದ ಬಡತನದ ನಿರ್ಮೂಲನಕ್ಕೆ 'ಗರೀಬಿ ಹಠಾವ್' ರೂಪದಲ್ಲಿ ಎದುರಾಳಿಯಾಗಿ ನಿಂತು ಈ ದೇಶವನ್ನು ಉಳಿಸಲು ಯತ್ನಿಸಿದ್ದು. 'ಗರೀಬಿ ಹಠಾವ್' ಆಯಿತೋ ಇಲ್ಲವೋ ತಿಳಿಯದು, ಆದರೆ 'ಗರೀಬರೇ ಹಠಾವ್' ಆಗಿದ್ದಂತೂ ಸತ್ಯ. ಇಷ್ಟು ಹೊತ್ತಿಗಾಗಲೇ ಕೈಗಾರಿಕಾ ಕ್ರಾಂತಿ ಸಂಭವಿಸಿ ಆಗಿತ್ತು. ಉಳಿದದ್ದು ಹಸಿರು ಕ್ರಾಂತಿ, ಕೊನೆಗೆ ಅದೂ ಆಯಿತು. ಕೇಂದ್ರ ಸರ್ಕಾರದ ಉಗ್ರಾಣಗಳು ದವಸಧಾನ್ಯಗಳಿಂದ ತುಂಬಿ ತುಳುಕಾಡಿದವು. ಯಾಕೋ ಏನೋ ಗೊತ್ತಿಲ್ಲ ಬಡವರಂತೂ ಬಡವರಾಗೇ ಉಳಿದಿದ್ದರು. ಹಸಿರು ಕ್ರಾಂತಿಗೆ ಮುಂಚೆ ಒಂದೊತ್ತು ಮಾತ್ರ ಆಹಾರ ಲಭ್ಯವಿದ್ದವರ ಸಂಖ್ಯೆ ಈ ಕ್ರಾಂತಿಯ ನಂತರ ದ್ವಿಗುಣಗೊಂಡಿತ್ತು. ಇದಕ್ಕೆಲ್ಲಾ ನಾವು ವಿಜ್ಞಾನವನ್ನು ದೂಷಿಸುವುದು ಸಾಧ್ಯವೇ?

ಒಂದು ನಿಮಿಷ ಈ ಚರ್ಚೆಯನ್ನು ಪಕ್ಕಕ್ಕಿಡಿ. ಇದು ಸದ್ಯಕ್ಕಂತೂ ಮುಗಿಯುವುದಲ್ಲ. ಈಗ ಈ ಜಗತ್ತನ್ನು ಕಾಡುತ್ತಿರುವ ಮುಖ್ಯ ಪರಿಸರ ಸಮಸ್ಯೆಗಳನ್ನು ಪಟ್ಟಿಮಾಡಿ. ಮೊದಲನೆಯದಾಗಿ, ಜಲಮಾಲಿನ್ಯ, ವಾಯುಮಾಲಿನ್ಯ, ಭೂಮಾಲಿನ್ಯಗಳೆಂದು ರೂಕ್ಷವಾಗಿ ವರ್ಗೀಕರಿಸಿ. ಈಗ ಇವುಗಳ ಮೂಲಗಳನ್ನು ಪರೀಕ್ಷಿಸಿ, ಈ ಎಲ್ಲಾ ಮಾಲಿನ್ಯಗಳಲ್ಲೂ ಕೈಗಾರಿಕಾ ಕ್ರಾಂತಿ, ಹಸಿರುಕ್ರಾಂತಿಯ ಕೈವಾಡವಿರುವುದು ನಮ್ಮ ಗಮನಕ್ಕೆ ಬರುತ್ತದೆ. ಹಾಗಾದರೆ ಈ ಕ್ರಾಂತಿಗಳೇ ನಮ್ಮ ಎಲ್ಲಾ ಪರಿಸರ ಸಮಸ್ಯೆಗಳ ಮೂಲಗಳೇ? ಇಷ್ಟೆಲ್ಲಾ ಆದರೂ ಈ ದೇಶದ ಬಡವರ ಸಂಖ್ಯೆ ಕಡಿಮೆಯಾಗಿದೆಯೇ? ಬಡತನದ ಪ್ರಮಾಣ ಕ್ಷೀಣಿಸಿದೆಯೇ?

ಇದಕ್ಕೆ ಉತ್ತರವಾಗಿ ಶಿವವಿಶ್ವನಾಥನ್‌ರ ಮಾತುಗಳನ್ನು ಗಮನಿಸಿ..., ವೈಜ್ಞಾನಿಕ ಕಾರ್ಯಕ್ರಮದ ರೂಪದಲ್ಲಿ ಕಾಣಿಸಿಕೊಳ್ಳುವ ಆಧುನಿಕತೆಯ ಹಿಂದೆ ಇನ್ನೊಂದು ಮೂಲ ತತ್ವ ಅಡಗಿದೆ ಎನ್ನುತ್ತಾ..., ಬಲಾಢ್ಯರ ಆಯ್ಕೆಯ ವಾದವನ್ನು ಮಂಡಿಸುತ್ತಾರೆ. ಇದಕ್ಕೆ 'ಟ್ರಯೇಜ್' (Triage) ಪದ-ಅರ್ಥದ ಸಮರ್ಥನೆ ನೀಡುತ್ತಾರೆ. ಈ ಟ್ರಯೇಜ್ ಪದಕ್ಕೆ ಸಾಮಾನ್ಯ ಇಂಗ್ಲಿಷ್-ಕನ್ನಡ ನಿಘಂಟಿನಲ್ಲಿ: 'ಕಳಪೆ, ಚೀಕಲು-ಕಾಫಿ ಬೀಜ' ಎನ್ನುವ ಅರ್ಥವಿದೆ. ಇದು ನಿಜ, ಈ ಫ್ರೆಂಚ್ ಮೂಲದ ಪದ ಹತ್ತೊಂಭತ್ತನೆಯ ಶತಮಾನದಲ್ಲಿ ಕಾಫಿ ಬೀಜಗಳ ಆಯ್ಕೆಗೆ ಬಳಸಲಾಗುತ್ತಿತ್ತು.

ಆದರೆ 'ಪರಿಸರ ನಿಘಂಟನ್ನು' ಸಂಪಾದಿಸುವ ಹೊತ್ತಿನಲ್ಲಿ ಈ ಪದವನ್ನು ಪರಿಸರದ ವ್ಯಾಪ್ತಿಯಲ್ಲಿ ಗಮನಿಸಿದಾಗ ನನಗೆ ಆಶ್ಚರ್ಯವಾಯಿತು. ಇದಕ್ಕೂ ಪರಿಸರಕ್ಕೂ ಏನು ಸಂಬಂಧವೆಂದು ಅನ್ವೇಷಿಸುತ್ತಾ ಹೋದ ಹಾಗೆ ಅದು ಈಗ ಬಳಕೆಯಲ್ಲಿರುವ ವ್ಯಾಪ್ತಿ ಉದ್ದೇಶಗಳನ್ನು ನೋಡಿ ಗಾಬರಿಬಿದ್ದೆ. ಪರಿಸರ ನಿಘಂಟಿನಲ್ಲಿ ಇದರ ಅರ್ಥ ಹೀಗಿದೆ: 'ಲಭ್ಯ ವೈದ್ಯಕೀಯ ಸೌಲಭ್ಯ ಮತ್ತು ಸೇವೆಗಳಿಗಿಂತ ಹೆಚ್ಚು ಪ್ರಳಯಕಾರಿ ವಿಧ್ವಂಸಕ ದುರಂತಕ್ಕೆ ಒಳಗಾದ ಜನಗಳಿಗೆ ನೀಡುವ ವೈದ್ಯಕೀಯ ಚಿಕಿತ್ಸೆಯ ಒಂದು ಪದ್ಧತಿ'. ದುರಂತಕ್ಕೆ ಒಳಗಾದವರನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಎ. ಚಿಕಿತ್ಸೆಯ ನಂತರವೂ ಸಾಯುವವರು. ಬಿ. ಚಿಕಿತ್ಸೆಯಿಂದ ಬದುಕುಳಿಯಬಲ್ಲವರು. ಸಿ. ತುರ್ತು ಚಿಕಿತ್ಸೆಯಿಂದ ಚೇತರಿಸಿಕೊಳ್ಳುವವರು. 'ಬಿ', 'ಸಿ' ಮತ್ತು 'ಎ' ಕ್ರಮದಲ್ಲಿ ಚಿಕಿತ್ಸೆಗೆ ಆದ್ಯತೆ ನೀಡಲಾಗುತ್ತದೆ.'

ಶಿವ ವಿಶ್ವನಾಥನ್ ಇದನ್ನು ಹೀಗೆ ವಿಸ್ತರಿಸುತ್ತಾರೆ..., 'ವೈದ್ಯಕೀಯ ಸೌಲಭ್ಯದ ಪೂರೈಕೆಯು ಚಿಕಿತ್ಸೆಯ ಅಗತ್ಯಕ್ಕಿಂತ ತುಂಬಾ ಕಡಿಮೆಯಾಗಿರುವ ಸಂದರ್ಭದಲ್ಲಿ,ಯಾವ ರೋಗಿಗೆ ಮೊದಲು ಚಿಕಿತ್ಸೆ ಒದಗಿಸಬೇಕು ಎಂಬುದನ್ನು ನಿರ್ಧರಿಸುವ ಮಾನದಂಡವಾಗಿ ಇದು ವೈದ್ಯಕೀಯ ನಿಘಂಟಿನಲ್ಲಿ ಸ್ಥಾನ ಪಡೆಯಿತು' ಎಂದು.

ರಿಚರ್ಡ್ ರುಬೆನ್‌ಸ್ಟೀನ್ ತನ್ನ ಒಂದು ಪುಸ್ತಕದಲ್ಲಿ ಈ ಬಗ್ಗೆ ವಿವರಗಳನ್ನು ಕೊಡುತ್ತಾನೆ. 'ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ದುರ್ಲಭವಾಗಿದ್ದ ಪೆನ್ಸಿಲಿನ್ ಔಷಧವನ್ನು ಎಂಥಾ ರೋಗಿಗಳಿಗೆ ಕೊಡಬೇಕು ಎಂದು ನಿರ್ಧರಿಸುವುದಕ್ಕೆ ಈ ತತ್ವ ಸಹಾಯ ಮಾಡಿತು. ಕೆಲವು ಸೈನಿಕರು ಯುದ್ಧರಂಗದಲ್ಲಿ ಗಾಯಗೊಂಡಿದ್ದರು, ಇನ್ನು ಕೆಲವರು ಸೂಳೆಗೇರಿಗಳಿಂದ ರೋಗ ಹತ್ತಿಸಿಕೊಂಡಿದ್ದರು. ಆಗ ನಿರ್ಧರಿಸಿದ್ದು ಹೀಗೆ..., ಯುದ್ಧದ ಗಾಯಾಳುಗಳನ್ನು ಉಳಿಸಿಕೊಳ್ಳಲಾಗದಿದ್ದರೂ ಪರವಾಗಿಲ್ಲ, ಮೊದಲು ಗುಹ್ಯರೋಗಗಳಿಗೇ ಪೆನ್ಸಿಲಿನ್ ಕೊಡಬೇಕು' ಎಂದು.

ಇದನ್ನು ವ್ಯಾಖ್ಯಾನ ಮಾಡುತ್ತಾ ವಿಶ್ವನಾಥನ್ ಹೇಳುತ್ತಾರೆ..., 'ಇದರ ಹಿಂದಿನ ತರ್ಕ ಇಷ್ಟೇ, ಅಂಗವಿಕಲ ರೋಗಿಗಳು ಚಿಕಿತ್ಸೆ ಪಡೆದರೂ ತಕ್ಷಣ ರಣರಂಗಕ್ಕೆ ಹಿಂತಿರುಗುವುದು ಅಸಾಧ್ಯ. ಆದರೆ ಗುಹ್ಯ ರೋಗಗಳಿಗೆ ಪೆನ್ಸಿಲಿನ್ ಕೊಟ್ಟರೆ ಅವರನ್ನು ಗುಣಪಡಿಸಿ ಕೂಡಲೇ ಮುಂಚೂಣಿಗೆ ರವಾನಿಸಬಹುದು.' ಹೀಗೆ ಆರಂಭವಾದ ಈ ಆಯ್ಕೆಯ ತತ್ವವು ಇವತ್ತು ಆಸ್ಪತ್ರೆಗಳ ಗಡಿಯನ್ನು ದಾಟಿ ಸಾಮಾಜಿಕ ರಾಜಕೀಯ ವ್ಯಾಪ್ತಿಯನ್ನು ಗಳಿಸಿಕೊಂಡಿದೆ.

ಈ ಆಯ್ಕೆಯ ಕಲ್ಪನೆಯ ತತ್ವವು ಮತ್ತೊಮ್ಮೆ ಮೇಲೆದ್ದು ಬರುವುದರೊಂದಿಗೆ ಆಧುನಿಕ ತಾತ್ವಿಕ ಯಾತ್ರೆಯ ಒಂದು ಆವರ್ತನೆಯನ್ನು ಪೂರ್ಣಗೊಳಿಸಿದೆ. ಪ್ರಗತಿಯ ಅನ್ಯರನ್ನು ತನ್ನ ವ್ಯಾಪ್ತಿಗೆ ಸೆಳೆದುಕೊಂಡು ಆಧುನಿಕಗೊಳಿಸಲು ಯತ್ನಿಸಿದರೆ ಈ ಆಯ್ಕೆಯ ತತ್ವವು ಹಾಗೆ ಆಧುನಿಕಗೊಳ್ಳದ ಅನ್ಯರನ್ನು ನಿವಾರಿಸಲು ಬಯಸುತ್ತದೆ.

ವಾಸ್ತವಿಕವಾಗಿ ಇಂದಿನ ಸಾಮಾಜಿಕ ಸ್ಥಿತಿಯಲ್ಲಿ ರಣರಂಗದಲ್ಲಿನ ಗಾಯಾಳುಗಳು ಬಹುಕೋಟಿ ಜನಸಾಮಾನ್ಯರಾದರೆ, ಗುಹ್ಯರೋಗಿಗಳ ಸ್ಥಾನವನ್ನು ಈ ಜಗತ್ತಿನ

ಪ್ರಭುತ್ವ ಹಾಗು ಅವರ ಬೆಂಬಲಿಗರಾದ ಶ್ರೀಮಂತರು ಆಕ್ರಮಿಸಿದ್ದಾರೆ.

ಇವೆರಡೂ ಕಲ್ಪನೆಗಳ ಮೂಲ ಸ್ಮೃತಿ; ವಿಜ್ಞಾನ. ಬುಡಕಟ್ಟು ಸಮಾಜಗಳಿಗೆ ಯಾವ ಇತಿಹಾಸವೂ ಇಲ್ಲವೆಂದು ಹಿಂದೊಮ್ಮೆ ವಿಜ್ಞಾನವು ಯೋಚಿಸಿತ್ತು. ಆದರೆ ಇಂದು ವಿಜ್ಞಾನವು ಅಂಥಾ ಸಮಾಜಗಳಿಗೆ ಯಾವುದೇ ಭವಿಷ್ಯಕೂಡ ಇಲ್ಲವೆಂದು ಯೋಚಿಸತೊಡಗಿದೆ. ಆಗ ಬುಡಕಟ್ಟು ಸಮುದಾಯಗಳನ್ನು ದೌರ್ಜನ್ಯದಿಂದ ಆಧುನಿಕತೆಗೆ ಎಳೆದು ತರಲಾಗುತ್ತಿತ್ತು. ಆದರೆ ಈಗ ಅವುಗಳನ್ನು ವಿಜ್ಞಾನಕ್ಕೆ ಅನಪೇಕ್ಷಣೀಯವೆಂದು ಹೊರತಳ್ಳಲಾಗುತ್ತಿದೆ.

ಇಲ್ಲಿ ವಿಜ್ಞಾನದಲ್ಲಿ ಸೋತವರಿಗೆ ಪ್ರಯೋಗ ವಸ್ತುಗಳಾಗುವ ಹೊರತು ಬೇರೆ ಸ್ಥಾನವಿಲ್ಲ. ಇಂಥಾ ಗೆಲುವಿನ ಆಯ್ಕೆಯ ತತ್ವವು ತನ್ನ ಪ್ರಾಥಮಿಕ ರೂಪದಲ್ಲಿ ಹಿಂದೆ ರೂಢಿಯಲ್ಲಿತ್ತು. ಅಂದು ಈ ಆಯ್ಕೆ ತೋಳ್ಬಲಗಳನ್ನು ಆಧರಿಸಿತ್ತು. ಇಂದು ವಿಜ್ಞಾನ ತಂತ್ರಜ್ಞಾನಗಳು ಈ ತೋಳ್ಬಲದ ಸ್ಥಾನವನ್ನು ಆಕ್ರಮಿಸಿವೆ. ವಿಜ್ಞಾನದಲ್ಲಿ ಪ್ರಭುತ್ವ ಸಾಧಿಸಿದವರು ರಾಜ್ಯಪ್ರಭುತ್ವಕ್ಕೆ ಉಪಯುಕ್ತರು. ಇದಿಲ್ಲದ ಯಾರಾದರೂ ಸರಿ ನಿರ್ನಾಮಕ್ಕೆ ಅರ್ಹರಾದವರು. ಈ ತತ್ವ ಮೂಲಭೂತ ನೈಸರ್ಗಿಕ ನಿಯಮದ ಸ್ಪಷ್ಟ ತದ್ವಿರುದ್ಧ ರೂಪ. ಡಾರ್ವಿನ್ನರ 'ಉಳಿವಿಗಾಗಿ ಹೋರಾಟ' ಮತ್ತು ಪ್ರಾಕೃತಿಯ ಆಯ್ಕೆ ಅಥವಾ ಯೋಗ್ಯ ಜೀವಿಯ ಉಳಿವು' ಇಲ್ಲಿ ಉಲ್ಟಾಪಲ್ಟಾ ಆಗುತ್ತದೆ. ವಿಜ್ಞಾನಬಲದಿಂದ ಸುಜ್ಜಿತರಾದ ದುರ್ಬಲ ಜೀವಿಗಳು ನೈಸರ್ಗಿಕವಾಗಿ ಯೋಗ್ಯರಾದ ಜೀವಿಗಳನ್ನು ನಿವಾರಿಸಿ ತಾವು ಬದುಕುಳಿಯಲು ಪ್ರಯತ್ನಿಸುತ್ತಿದ್ದಾರೆ.

ಮೂಲತಃ 'ಅಭಿವೃದ್ಧಿಗೆ' ಆಶ್ರಿತ ಜೀವಿ ಸಮುದಾಯದೊಂದಿಗೆ ಸಾವಯವ ಸಂಬಂಧವಿರಬೇಕಾಗುತ್ತದೆ. ಜೀವಿ ಸಮುದಾಯದ ಮೇಲೆ ವಿಜ್ಞಾನದ ವಾಸ್ತವಿಕ ಪರಿಣಾಮಗಳ ಬಗ್ಗೆ ಆಳವಾದ ನೈತಿಕ ಎಚ್ಚರವಿರಬೇಕಾಗುತ್ತದೆ. ಮನುಷ್ಯ ಜೀವಿಗೆ ಒಂದು ಕೈ, ಒಂದು ಕಾಲು, ಒಂದು ಕಣ್ಣು ಹೇಗೆ ದೈಹಿಕ ಊನವೋ ಹಾಗೆಯೇ ಮೂರು ಕೈ, ಮೂರು ಕಾಲು, ಮೂರು ಕಣ್ಣುಗಳು ಸಹ ಊನವೇ ಆಗಿರುತ್ತದೆ. ಒಂದು ಕಾಲಿನ ಮನುಷ್ಯ ಹೇಗೆ ಅತಂತ್ರನೋ ಹಾಗೇ ಮೂರು ಕಾಲಿನ ಮನುಷ್ಯ ಸಹ ಅತಂತ್ರ ಎಂಬುದನ್ನು ನಮ್ಮ ಅಭಿವೃದ್ಧಿಯ ಮೂಲವಾದ ವಿಜ್ಞಾನ ತಂತ್ರಜ್ಞಾನಗಳು ಅರ್ಥಮಾಡಿಕೊಂಡಿಲ್ಲ.

ಈ ಜಗತ್ತಿನಲ್ಲಿ ವಿಜ್ಞಾನವನ್ನು ಬೆಂಕಿಯಂತೆ ಬಳಸಲಾಗುತ್ತಿದೆ. ಬೆಂಕಿಯನ್ನು ದಲಿತರ ಕೇರಿಗೆ ತಗುಲಿಸಿದರೂ ಅದು ಸುಡುತ್ತದೆ. ಅರಮನೆಗೆ ತಗುಲಿಸಿದರೆ ಅದನ್ನೂ ಸುಡುತ್ತದೆ. ಸಾಪೇಕ್ಷದಲ್ಲಿ ಕಾಲವಿರುತ್ತದೆ. ತುಸು ಬೇಗ, ಸ್ವಲ್ಪ ತಡ ಎಂಬುದನ್ನು ಬಿಟ್ಟರೆ ಬೆಂಕಿಗೆ ಸುಡುವುದೇ ಕೆಲಸ, ಉದ್ದೇಶ, ಅಂತಃಪ್ರಜ್ಞೆಯಾಗಿರುತ್ತದೆ. ಆದರೆ ಬೆಂಕಿಯ ಈ ಅಂತಃಪ್ರಜ್ಞೆಯ ಜೀನ್‌ಗಳನ್ನು ವಿಜ್ಞಾನದ ಆರಾಧಕರು, ಒಡೆಯರು, ಗುತ್ತಿಗೆದಾರರು ಕಸಿಮಾಡಿ ಹಾಕಿದ್ದಾರೆ. ಹಾಗೇ ಅದರ ಕಾರ್ಯ, ಉದ್ದೇಶಗಳನ್ನು ಮಾತ್ರ ಹಾಗೇ ಉಳಿಸಿಕೊಂಡಿದ್ದಾರೆ. ಹಾಗೂ ಅದಕ್ಕೆ ಕೆಲವು ವಿಶಿಷ್ಟವಾದ ಶಿಸ್ತು ಸಂಯಮಗಳನ್ನು ಕಲಿಸಿದ್ದಾರೆ. ನಿರ್ದಿಷ್ಟ ವಾಸನೆಗಳನ್ನು ಅದರ ಮೂಗಿಗೆ ತುರುಕಿದ್ದಾರೆ.

ಹಾಗಾಗಿ ಇಂದಿನ ಹುಚ್ಚು ವಿಜ್ಞಾನದ ಬೆಂಕಿಗೆ ಯಾವಾಗಲೂ ಬಡವರ ಗುಡಿಸಲುಗಳತ್ತಲೇ ಕಣ್ಣು. ಅನೇಕ ದಿನ ಸಂಯಮದಿಂದ ಕಾಯ್ದು ಶಿಸ್ತಿನಿಂದ ಶಾಸನಬದ್ಧವಾಗಿಯೇ ಸುಡುತ್ತಾ ಹೋಗುತ್ತದೆ. ಹಾಗೇಯೇ ತನ್ನ ಸಾಮರ್ಥ್ಯದ ಬಲದಿಂದ ಶ್ವೇತಭವನ, ಸಂಸತ್ ಭವನ ಮುಂತಾದ ಭವನಗಳನ್ನು ಅದು ಬೆಂಕಿ ನಿರೋಧಕವಾಗಿ ಮಾಡಿದೆ. ತನ್ನ ಪ್ರಯೋಗದ ಮರ್ಯಾದೆ ಉಳಿಸಿಕೊಳ್ಳಲು ಸಂಯಮ ಶಿಸ್ತಿನಿಂದ ಅವನ್ನು ಕಾಯುತ್ತಾ, ಕಾಪಾಡುತ್ತಾ ಹೋಗುತ್ತದೆ. ಅವು ಇಂದ್ರಲೋಕಗಳಾದರೆ ನಾವು ಚಂದ್ರಲೋಕಿಗಳು. ಗಾಳಿ ನೀರಿಲ್ಲದ, ರೌದ್ರವ ಬಿಸಿಲು, ಭೀಕರ ಚಳಿಯ ಕೂಪದಲ್ಲಿ ನರಳುವ ನಿತ್ಯ ನಾರಕಿಗಳು.

ಇದು ಹಿನ್ನೆಲೆಯಲ್ಲಿರಲಿ. ಮತ್ತೆ ನಮ್ಮ ದೇಶಕ್ಕೆ ಬರೋಣ...,

* * *

ಇನ್ನೇನು ನಾಳೆಯೋ ನಾಡಿದ್ದೋ 'ಹಸಿರುಮನೆ ಪರಿಣಾಮ' ದಿಂದ ಧ್ರುವ ಪ್ರದೇಶಗಳಲ್ಲಿರುವ ಹಿಮವೆಲ್ಲಾ ಕರಗಿ ಸಮುದ್ರದ ನೀರಿನ ಮಟ್ಟ ಅನೇಕ ಅಡಿಗಳಷ್ಟು ಹೆಚ್ಚಿ ವಿಶ್ವದ ಮುಕ್ಕಾಲು ಭಾಗ ನಾಗರಿಕತೆ ನೀರಲ್ಲಿ ಮುಳುಗಿ ಹೋಗುತ್ತದೆ. ಓಜೋನ್ ಪರದೆಯಲ್ಲಾಗಿರುವ ತೂತಿನಿಂದಾಗಿ ನಾಳೆಯಿಂದ ಈ ಜಗತ್ತಿನಲ್ಲಿ ಹುಟ್ಟುವ ಮಕ್ಕಳೆಲ್ಲಾ ವಿಕಲಾಂಗರಾಗಿ, ಬುದ್ಧಿಮಾಂದ್ಯರಾಗಿ ಹುಟ್ಟುತ್ತಾರೆ. ಈ ಕಾರಣದಿಂದ ಮನುಕುಲವೇ ಆಪತ್ತಿನಲ್ಲಿದೆ. ಇನ್ನೇನು ಈ ವಾರದಲ್ಲಿ ಹುಲಿಗಳಿಂದ ಹಿಡಿದು ಜಗತ್ತಿನ ಸೂಕ್ಷ್ಮಾತಿ ಸೂಕ್ಷ್ಮ ಜೀವಜಂತುಗಳವರೆಗೆ ಎಲ್ಲವೂ ನಾಮಾವಶೇಷವಾಗಿ ವಿಶ್ವದ ಜೀವ ವೈವಿಧ್ಯದಲ್ಲಿ ತೀವ್ರ ಏರುಪೇರುಗಳಾಗಿ ಜೀವಜಾಲವೇ ಕುಸಿದು ಹೋಗುತ್ತದೆ ಎಂಬಂಥ ಭಾರತದ ಪರಿಸರವಾದಿಗಳ ಭಯೋತ್ಪಾದಕ ಮಾತುಗಳನ್ನೆಲ್ಲಾ ಕ್ಷಣಕಾಲ ಪಕ್ಕಕ್ಕಿಡಿ. ಈ ಕ್ಷಣ ಅಂಥದ್ದೇನೂ ಘಟಿಸುವುದಿಲ್ಲ.

ಒಂದು ಪಕ್ಷ ಹೀಗಾಗುವುದಾದರೂ ನಮಗೂ, ಈ ಎಲ್ಲಾ ವಿಪತ್ತುಗಳಿಗೂ ಯಾವ ಬಾದರಾಯಣ ಸಂಬಂಧವೂ ಇಲ್ಲ. ಏಕೆಂದರೆ ಇವುಗಳ ಸೃಷ್ಟಿಕರ್ತರು ನಾವಲ್ಲ. ಆದರೆ ಬಲಿಪಶುಗಳು ಮಾತ್ರ ನಾವೇ. ಹಾಗೆಂದು ಈಗಿಂದೀಗಲೇ ನಿಲ್ಲಿಸಬೇಕೆಂದರೂ ನಮ್ಮಂತಹ ಹುಲುಮಾನವರಿಂದ ಅದು ಸಾಧ್ಯವೂ ಇಲ್ಲ. ಕಾರಣ ಇದರ ನಿಯಮಕರೂ ನಾವಲ್ಲ. ಇದಕ್ಕಾಗಿ ನಾವು ಭಯಪಡುವ ಅಗತ್ಯವೂ ಇಲ್ಲ. ಒಂದು ಪಕ್ಷ ಹೀಗಾಗುವುದೇ ಆದರೆ, ಇವೆಲ್ಲಾ ಘಟಿಸುವ ಎಷ್ಟೋ ವರ್ಷಗಳ ಮುಂಚೆ ನಾವೆಲ್ಲಾ ಹಸಿವಿನಿಂದಲೋ, ರೋಗ ರುಜನಗಳಿಂದಲೋ ಸ್ವರ್ಗಸ್ಥರಾಗಿರುತ್ತೇವೆ. ಹೀಗೆಲ್ಲಾ ಆಗುವುದು ಸ್ವಲ್ಪ ತಡವಾಗುತ್ತದೆಂದು ನೀವು ಭಾವಿಸುವುದಾದರೆ ಇನ್ನೂ ಸಂತೋಷ. ಸದ್ಯಕ್ಕೆ ಭಾರತದಲ್ಲಿ ದಿನದಿಂದ ದಿನಕ್ಕೆ ಉಲ್ಬಣಿಸುತ್ತಿರುವ ಬಡತನ, ಸಂಪನ್ಮೂಲ/ಸವಲತ್ತುಗಳನ್ನು ಬಾಚಿಕೊಳ್ಳುವತ್ತ ಧ್ರುವೀಕರಣಗೊಳ್ಳುತ್ತಿರುವ ಜಾತೀವಾದ, ವರ್ಗ ಅಸಮಾನತೆ, ದುಷ್ಟ ರಾಜಕೀಯ, ಧಾರ್ಮಿಕ ಮೂಲಭೂತವಾದ, ಇದನ್ನೇ ಹಿನ್ನೆಲೆಯಾಗಿಟ್ಟು ಕೊಂಡಿರುವ ಸಶಸ್ತ್ರ ಹಾಗೂ ಮಾನಸಿಕ ಭಯೋತ್ಪಾದನೆಗಳೇ ಈ ದೇಶದ ನೂರು ಕೋಟಿಯನ್ನು ಸಾರಾಸಗಟಾಗಿ ನಾಶ ಮಾಡಲು ಅಗತ್ಯವಾದ ಭೂಮಿಕೆಯನ್ನು ರೂಪಿಸುತ್ತಿವೆ.



ಈ ಜಗತ್ತಿನಲ್ಲಿ ವಿಜ್ಞಾನವನ್ನು ಬೆಂಕಿಯಂತೆ ಬಳಸಲಾಗುತ್ತಿದೆ. ಬೆಂಕಿಯನ್ನು ದಲಿತರ ಕೇರಿಗೆ ತಗುಲಿಸಿದರೂ ಅದು ಸುಡುತ್ತದೆ. ಅರಮನೆಗೆ ತಗುಲಿಸಿದರೆ ಅದನ್ನೂ ಸುಡುತ್ತದೆ. ಸಾಪೇಕ್ಷದಲ್ಲಿ ಕಾಲವಿರುತ್ತದೆ. ತುಸು ಬೇಗ, ಸ್ವಲ್ಪ ತಡ ಎಂಬುದನ್ನು ಬಿಟ್ಟರೆ ಬೆಂಕಿಗೆ ಸುಡುವುದೇ ಕೆಲಸ, ಉದ್ದೇಶ, ಅಂತಃಪ್ರಜ್ಞೆಯಾಗಿರುತ್ತದೆ. ಆದರೆ ಬೆಂಕಿಯ ಈ ಅಂತಃಪ್ರಜ್ಞೆಯ ಜೀನ್‌ಗಳನ್ನು ವಿಜ್ಞಾನದ ಆರಾಧಕರು, ಒಡೆಯರು, ಗುತ್ತಿಗೆದಾರರು ಕಸಿಮಾಡಿ ಹಾಕಿದ್ದಾರೆ.

ಆದರೆ ಇದೇ ಹೊತ್ತಿನಲ್ಲಿ ನಾವು ನಮ್ಮ ಪರಿಸರವಾದಿಗಳ 'ಉದಾತ್ತತೆಯನು' ಮರೆಯಬಾರದು. ಅವರು ಮಾಡಿದ ವೈಜ್ಞಾನಿಕ ವಿಚಾರಗಳ ತುಸು ವೈಭವೀಕರಣವನ್ನು ತಪ್ಪಾಗಿ ವ್ಯಾಖ್ಯಾನ ಮಾಡಿ, ತಪ್ಪೇ ಅಲ್ಲದ ತಪ್ಪುಗಳನ್ನು ತಪ್ಪೆಂದು ಸಾಧಿಸುತ್ತಾ ಹೋಗುವುದು 'ಅಮೆರಿಕಾದ ವಿದೇಶಾಂಗ ನೀತಿಯಷ್ಟೇ ತಪ್ಪಾಗಿ ಬಿಡುತ್ತದೆ.' ಈ ಎಚ್ಚರವೂ ನಮಗಿರಬೇಕು.

ಏಕೆಂದರೆ ಸಾರಾಸಗಟಾಗಿ ಎಲ್ಲಾ ಪರಿಸರ ವಾದಿಗಳೂ ಇದನ್ನೇ ಹೇಳಿಲ್ಲ. ಹಾಗೂ ಬಹುಪಾಲು ಪರಿಸರವಾದಿಗಳು ಈ ಬಗ್ಗೆ ಚಕಾರವೆತ್ತಿಲ್ಲ. ಅನೇಕರಿಗೆ ಇದೆಲ್ಲಾ ಗೊತ್ತೇ ಇಲ್ಲ. ಕೆಲವರಿಗೆ ಗೊತ್ತಿರುವುದು ಒಂದೇ ಒಂದು 'ಮೂಲಭೂತವಾದ' ವಿಷಯ; 'ಗಿಡನೆಡಿ ಗಿಡನೆಡಿ.'

ಹೀಗೆ 'ಗಿಡನೆಡಿ ಗಿಡನೆಡಿ' ಎಂದು ಹೇಳುತ್ತಾ ಪರಿಸರವಾದಿಗಳಾದವರ ಒಂದು ದೊಡ್ಡ ಪರಂಪರೆಯೇ ನಮ್ಮಲ್ಲಿದೆ. ಮನುಷ್ಯ ಪ್ರಾಣಿಗಳಿಂದ ತುಂಬಿ ತುಳುಕುತ್ತಿರುವ ಈ ದೇಶದಲ್ಲಿ ನೀವು ಏನಾಗುವುದೂ ತುಂಬಾ ಕಷ್ಟದ ಕೆಲಸ. ಆದರೆ ಈ ದೇಶದ ದೊಡ್ಡತನವೆಂದರೆ ಪರಿಸರವಾದಿಯಾಗಲು ಇಲ್ಲಿ ಯಾವ ಅಡೆತಡೆ, ನಿರ್ಬಂಧಗಳೂ ಇಲ್ಲ.

ನೀವೊಂದು ಗಿಡನೆಟ್ಟರೆ ಸಾಕು, ಅಥವಾ ಬೀದಿಯಲ್ಲಿ ಸಿಕ್ಕಿದ ಯಾರಿಗಾದರೂ ಒಂದು ಗಿಡನೆಡಿ ಎಂದು ಹೇಳಿದರೆ ಸಾಕು ನೀವು ಪರಿಸರವಾದಿಗಳಾಗಬಹುದು. ಈ ಮೂಲಕ ನೀವು ಎಂಥಾ ಪ್ರಬಲ ವ್ಯಕ್ತಿಯಾಗಬಹುದೆಂದರೆ ನೀವು ಈ ನಾಡಿನ ಕಾಡು, ಪರಿಸರ, ವಿದೇಶಿ ಹಣ, ಸಾಂಸ್ಕೃತಿಕ ರಾಜಕೀಯ ಗಳನ್ನೂ ನಿಯಂತ್ರಿಸಬಹುದು.

ಇರಲಿ, ಈ ಚರ್ಚೆಯಿಂದ ಸ್ವಲ್ಪಹೊತ್ತು ಇವರನ್ನೂ ಪಕ್ಕಕ್ಕಿಡಿ. ಏಕೆಂದರೆ ಮುಖ್ಯ ಸಂಗತಿ ಅದಲ್ಲ, ನಮ್ಮಲ್ಲಿ ಪರಿಸರವಾದ ನಡೆದು ಬಂದ ಹೆಜ್ಜೆ ಗುರುತುಗಳನ್ನು ಹಿಡಿದು ಇವರನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಅಗತ್ಯವಿದೆ.

೬೦-೭೦ರ ದಶಕದ ಸುಮಾರಿನಲ್ಲಿ

'ಸಮುದ್ರವಸನೇ ಪೃಥ್ವೀ ಪರ್ವತಸ್ತನ ಮಂಡಲೇ
ವಿಷ್ಣುಪತ್ನೀ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವಮೇ॥'

ಎಂಬಂಥ ಸನಾತನ ಶ್ಲೋಕ ವಾಚನದಿಂದ ಆರಂಭವಾದ ನಮ್ಮ ಪರಿಸರವಾದ...

'ಏಳುತಾಲೆ ಎದ್ದು ಯಾರ್‍ಯಾರ ನೆನೆಯಾಲಿ
ಎಳ್ಳು ಜೀರಿಗೆ ಬೆಳೆಯೋಳ-ಭೂಮಿತಾಯಿ
ಎದ್ದೊಂದು ಘಳಿಗೆ ನೆನೆಯೋಣ...'

ಎಂಬುದನ್ನು ನೆನಪು ಮಾಡಿಕೊಳ್ಳಲು ಎರಡು ದಶಕ ತೆಗೆದುಕೊಂಡಿತು. ನೆನಪು ಮಾಡಿದ್ದು ಬೇರೆ ಹೋರಾಟಗಾರರಾದರೂ, ಇದನ್ನು ನಮ್ಮ ಪರಿಸರವಾದಿಗಳು 'ಎಳ್ಳು-ಜೀರಿಗೆ ಬೆಳೆಯುವ' ಕ್ರಿಯೆಯನ್ನು ಅಕ್ಷರಸತ್ಯದ ನೆಲೆಯಲ್ಲಿ ಅರ್ಥಮಾಡಿಕೊಂಡು, ದೈವವನ, ಮಂಡಲವನ, ಸೂರ್ಯವನ, ಚಂದ್ರವನಗಳಂಥ ಕೃತಕವನಗಳ ನಿರ್ಮಾಣದಲ್ಲಿ ತೊಡಗಿದರೇ ವಿನಃ, ಎಳ್ಳು-ನೀರಿನ-ತರ್ಪಣ ಸಾವಿನ ಸಂಕೇತವೆಂದಾಗಲೀ, ಹೊಸ ಹುಟ್ಟು ಸಂಭವಿಸಿದಾಗ ಬೀರುವ 'ಜೀರಿಗೆಯಂಥ ಜೀರಿಗೆ' ಹುಟ್ಟಿನ ಸಂಕೇತಗಳಾಗಿ, ಒಟ್ಟಾರೆ ಭೂಮಿ; ಹುಟ್ಟು ಸಾವುಗಳನ್ನು ನಿರಂತರವಾಗಿ ಕೃಷಿಮಾಡುವ ತಾಯಾಗಿ, ಈ ಸೃಷ್ಟಿ ಚಕ್ರದಲ್ಲಿ ಇಡಿಯ ಭೂಮಿಗಿರುವ ಮಹತ್ವವನ್ನು, ಜೀವದ ನಶ್ವರತೆಯನ್ನೂ ಶಿಷ್ಟವಲ್ಲದ ಶೈಲಿಯಲ್ಲಿ ಜನಪದರು ಕಂಡುಕೊಂಡ ಸತ್ಯಗಳನ್ನು ವ್ಯಾಖ್ಯಾನಿಸಲೇ ಇಲ್ಲ. ಆದರೆ ಭಾರತೀಯ ಪರಿಸರವಾದದ ಬೇರುಗಳಿದ್ದುದೇ ಇಲ್ಲಿ, ಪರಿಸರದ ಸ್ಮೃತಿ, ಪರಂಪರೆಯಿಂದ 'ಬಹುಜನ'ರೊಂದಿಗೆ ಬಂದ ಪಾರಂಪರಿಕ ಜ್ಞಾನವಾಗಿತ್ತು.

'ಭೂಮಿತಾಯಿ ಬಸುರಾಗಿ ಹಸಿರುಡಿಗೆ ಉಟ್ಕೊಂಡು
ಮೊಸರು ಅನ್ನಕೆ ಭ್ರಮಿಸಾಳೆ
ಆ ಊರ ಗೌಡನು ಕರಸವನೆ ಹೆಸವಂತರ
ಮಾಡಿಸಾನಾಗ ಮೊಸರನ್ನ-ಹಸಿರು ವನದಾಗೆ ಎರಚಾನೋ...'

ಎಂದು ಜೀವ ಸೃಷ್ಟಿಯ ಸಂಕೇತವಾಗಿ 'ಭೂಮಿಗೆ ಬಸಿರಡಿಗೆ ಮಾಡಿಡುವಂತಹ' ಹೃದಯವಂತ, ಜವಾಬ್ದಾರಿಯುತ ತಂದೆಯ ಸ್ಥಾನವನ್ನು ವಹಿಸುವ ನಮ್ಮ ಅನಕ್ಷರಸ್ಥ ಜನಪದರ ಪುರಾತನ ಕಳಕಳಿ ಇವರ ಕಿವಿಗೆ ಬೀಳಲೇ ಇಲ್ಲ ಏಕೆಂದರೆ ಅದೇ ಜನಪದದಲ್ಲಿ..

'ಬಡವರು ಸತ್ತರೆ ಸುಡಲಿಕ್ಕೆ ಸೌದಿಲ್ಲ
ಒಡಲ ಕಿಚ್ಚಲ್ಲಿ ಹೆಣಬೆಂತೊ-ದೇವರೆ
ಬಡವಂಗೆ ಸಾವ ಕೊಡಬ್ಯಾಡ....'

ಎಂಬಂಥ ಕನಲಿಕೆಗಳೂ ಇವೆ. ಈ ಕನಲಿಕೆಗಳು ಈ ದೇಶದ ನೂರು ಕೋಟಿಯ ನೋವಿನ ಚೀತ್ಕಾರಗಳಾಗಿದ್ದವು.

ಈ ಪರಿಸರವಾದಿಗಳ 'ಹೃದಯವಂತಿಕೆ'ಯನ್ನು ನಾವು ಶ್ಲಾಘಿಸಬೇಕು. ಈ ಚೀತ್ಕಾರದ ಮೂಲಗಳಾದ ಹೃದಯಗಳಲ್ಲಿ ಮೊದಲೇ ನೋವು ಯಾತನೆಗಳು ಮಡುಗಟ್ಟಿವೆ. ಇವರಿಗೆ ಮತ್ತೆ ಮತ್ತೆ ಹೊಸ ನೋವುಗಳನ್ನು ಏಕೆ ಕೊಡಬೇಕೆಂದು ಈ ಜನ ನೂರು ಕೋಟಿ ಜನರ ಮುಂದೆ ವರ್ಣರಂಜಿತ ಪರಿಸರದ ಪರದೆಯೊಂದನ್ನು ಇಳಿಬಿಟ್ಟರು. ಅದರಲ್ಲಿ ಮರಗಿಡಬಳ್ಳಿ, ಪ್ರಾಣಿ ಪಕ್ಷಿಗಳ ಸುಂದರ ಚಿತ್ರಗಳನ್ನು ಬರೆದರು. ಇದಕ್ಕೆ ನೇರವಾಗಿ ವಿದೇಶಿ ಧನಸಹಾಯ ಹಾಗೂ ಗುಪ್ತವಾಗಿ 'ಚಿಲ್ಲರೆ ಶೂನ್ಯಗಳ' ನೆರವನ್ನೂ ಪಡೆದರು.

ಈ ಪರದೆಯ ಹಿಂದೆ ನೂರು ಕೋಟಿಯ ಇಡುಗಂಟು ಇಣುಕಿ ನೋಡಲೂ ಸಾಧ್ಯವಾಗದಂತೆ ಸರ್ಪ ಗಾವಲು ಹಾಕಿದರು. ಅದರ ಹಿಂದಿರುವ ಸಂಪನ್ಮೂಲಗಳ ಹಗಲು ದರೋಡೆ, ಈ ದರೋಡೆಯಲ್ಲಿ ಶಾಮೀಲಾಗಿರುವ ಚಿಲ್ಲರೆ ಶೂನ್ಯಗಳು, ಅವರೊಂದಿಗೆ ತಮ್ಮ ಪಾಲಿಗಾಗಿ ಕಿತ್ತಾಡುತ್ತಿರುವ ಅನೇಕ ಪರಿಸರವಾದಿಗಳಿರುವಂಥಾ ಚಿತ್ರಗಳನ್ನೆಲ್ಲಾ ನೋಡಿ ನಮ್ಮ ಜನಸಾಮಾನ್ಯ ವೃಥಾ ನೊಂದುಕೊಳ್ಳುವುದು ಬೇಡವೆಂಬ ದೊಡ್ಡತನ ಅವರಲ್ಲಿತ್ತು.

ಹಾಗಾಗಿಯೇ ಈ ದೇಶದಲ್ಲಿ ದಾರಿಯಲ್ಲಿ ಸಿಕ್ಕುವ ನೂರು ಕೋಟಿ ಜನಸಮುದಾಯದಲ್ಲಿ ಯಾವುದೇ ವ್ಯಕ್ತಿಯನ್ನು ಸುಮ್ಮನೆ 'ಪರಿಸರ ಎಂದರೇನು ?' ಎಂದು ಕೇಳಿದರೆ ಅವರು ಸರಾಗವಾಗಿ 'ಮರ ಗಿಡ, ಪ್ರಾಣಿ ಪಕ್ಷಿ' ಎನ್ನುತ್ತಾರೆ. ಅವರಿಗೆ ಮೇಲಿನ ಸಂಪನ್ಮೂಲ ಹಾಗೂ ಸಾಂಸ್ಕೃತಿಕ ರಾಜಕೀಯದ ಗಂಧವೂ ತಿಳಿದಿಲ್ಲ. ಆದರೆ ಇಂಥಾ ಜನ ವಿರೋಧಿ ಸಂದೇಶವೊಂದನ್ನು ಇಡಿಯ ದೇಶಕ್ಕೆ ಕೊಟ್ಟವರಾರು ?

ಈ ಪರಿಸರವಾದಿಗಳ 'ಹೃದಯವಂತಿಕೆ' ಯನ್ನು ನಾವು ಶ್ಲಾಘಿಸಬೇಕು. ಈ ಚೀತ್ಕಾರದ ಮೂಲಗಳಾದ ಹೃದಯಗಳಲ್ಲಿ ಮೊದಲೇ ನೋವು ಯಾತನೆಗಳು ಮಡುಗಟ್ಟಿವೆ. ಇವರಿಗೆ ಮತ್ತೆ ಮತ್ತೆ ಹೊಸ ನೋವುಗಳನ್ನು ಏಕೆ ಕೊಡಬೇಕೆಂದು ಈ ಜನ ನೂರು ಕೋಟಿ ಜನರ ಮುಂದೆ ವರ್ಣರಂಜಿತ ಪರಿಸರದ ಪರದೆಯೊಂದನ್ನು ಇಳಿಬಿಟ್ಟರು. ಅದರಲ್ಲಿ ಮರಗಿಡಬಳ್ಳಿ, ಪ್ರಾಣಿ ಪಕ್ಷಿಗಳ ಸುಂದರ ಚಿತ್ರಗಳನ್ನು ಬರೆದರು. ಇದಕ್ಕೆ ನೇರವಾಗಿ ವಿದೇಶಿ ಧನಸಹಾಯ ಹಾಗೂ ಗುಪ್ತವಾಗಿ 'ಚಿಲ್ಲರೆ ಶೂನ್ಯಗಳ' ನೆರವನ್ನೂ ಪಡೆದರು.

ಪರಿಸರವೆಂದರೆ ಮರಗಿಡ, ಪ್ರಾಣಿಪಕ್ಷಿಗಳೆಂದು ಪ್ರತಿಪಾದಿಸುತ್ತಾ ನಿಜವಾದ ಪರಿಸರ ಸಮಸ್ಯೆಯನ್ನು ಜನಸಾಮಾನ್ಯನಿಂದ ಮರೆಮಾಚುತ್ತಾ 'ಸಾಮಾಜಿಕ ನ್ಯಾಯದ' ವಿಷಯವನ್ನು ಅವನಿಂದ ಮುಚ್ಚಿಡುತ್ತಾ..., ಸುಳ್ಳು ಸುಳ್ಳೇ ಪರಿಸರದ ಬಗ್ಗೆ ರಮ್ಯವಾದ ಕತೆಗಳನ್ನು ಹೇಳುತ್ತಾ ಬಂದ ನಮ್ಮ ಉನ್ನತ ವರ್ಗದ, ಪ್ರಜ್ಞಾವಂತ, ವಿದ್ಯಾವಂತ, ಉಚ್ಚ ಕುಲಗಳ ಪರಿಸರವಾದಿಗಳೇ ?!

ಸರ್ದಾರ್ ಸರೋವರದ ಸಮಸ್ಯೆಯನ್ನು ಆದಿವಾಸಿಗಳ ಪುನರ್ವಸತಿಯ ಸಮಸ್ಯೆ ಎಂಬಂತೆಯೂ, ಪಾರ್ವತಿ, ಹಾಜಿಮಾರ ಕೊಲೆಗೂ ಪರಿಸರಕ್ಕೂ ಯಾವ ಸಂಬಂಧವೂ ಇಲ್ಲವೆಂತಲೂ ವರ್ತಿಸುವ ಇಂಟೆಲೆಕ್ಚುಯಲ್ ಅಥವಾ 'ಸರ್ವಭಕ್ಷಕ ವರ್ಗದ' ಪರಿಸರವಾದಿಗಳಿಂದಲೇ. ಅಥವಾ ಭಾರತದಲ್ಲಿ 'ಪರಿಸರವನ್ನು' ಕೇವಲ 'ವಾದ'ವನ್ನಾಗಿ ಮಾಡಿಟ್ಟ ಜನರಿಂದಲೇ !?.

ಭಾರತದಲ್ಲಿ 'ಸಮಾಜವಾದ' ಅಥವಾ 'ಸಮತಾವಾದಗಳು' ಬೇಕಾದರೆ 'ವಾದ' ಗಳಾಗಿ ನಿಲ್ಲಬಹುದೇ ವಿನಃ 'ಪರಿಸರ' ಎಂದೂ 'ವಾದ' ವಾಗಲು ಸಾಧ್ಯವಿಲ್ಲ. ಯಾವುದು ಆಚರಣೆ ಬರದಿದ್ದರೂ ಚಿಂತೆ ಇಲ್ಲವೋ ಅದು 'ವಾದ' ಆಗುತ್ತದೆ. ವಾದ, ತರ್ಕದ ಇನ್ನೊಂದು ರೂಪ. ಬದುಕು ವಾದವೂ ಅಲ್ಲ, ತರ್ಕವೂ ಅಲ್ಲ, ಅದು ಆಚರಣೆ. ಸತ್ಯಾರ್ಥದಲ್ಲಿ 'ಪರಿಸರ' ಎಂದರೆ 'ಬದುಕು'. ಈ ದೇಶದಲ್ಲಿ ಪರಿಸರ ನೂರು ಕೋಟಿಯಷ್ಟು ಅಗಾಧ ಜನ ಸಮುದಾಯದ ಸಾವು-ಬದುಕಿನ ವಾಸ್ತವ. ಇಂಥಲ್ಲಿ ಪರಿಸರ 'ವಾದ' ಆಗಲು ಹೇಗೆ ಸಾಧ್ಯ ? ಇದು ಆಚರಣೆಯಾಗಬೇಕಿತ್ತು ! ಈ ಸಾಂಸ್ಕೃತಿಕ ರಾಜಕೀಯ ಹಾಗೂ ಆತ್ಮವಂಚಕ ಪರಿಸರವಾದವೇ

'...ನಾನು ಮರಗಳನ್ನು ಕಡಿದೇ ಕಡಿಯುತ್ತೇನೆ
ಅದಕ್ಕೂ ಜೀವ ಇದ್ದರೇನಂತೆ ?
ನಾನು ಎಲೆಗಳನ್ನು ತರಿದೇ ತರಿಯುತ್ತೇನೆ
ಅದರಲ್ಲಿ ಸೌಂದರ್ಯ ಇದ್ದರೇನಂತೆ ?
ನಾನು ಕೊಂಬೆಗಳನ್ನು ಕಡಿದೇ ಕಡಿಯುತ್ತೇನೆ
ಅವು ಮರಗಳ ಕೈಕಾಲುಗಳಾದರೇನಂತೆ ?
ಏಕೆಂದರೆ... ನನಗೊಂದು ಗುಡಿಸಲು ಬೇಕು !'

ಎಂದು ನೇರವಾಗಿ 'ಸನಾತನ ಪರಿಸರವಾದಿಗಳ' ಬುಡಕ್ಕೆ ಕೊಡಲಿ ಇಟ್ಟ ಚರಬಂಡರಾಜು ಮತ್ತವನ ನೂರು ಕೋಟಿ ಜನರ ಬದುಕಿನಲ್ಲಿ ನಿತ್ಯ ನರಕ ಸೃಷ್ಟಿಸಿದ್ದು. ಈ ದೇಶದ ಎಲ್ಲಾ ಪರಿಸರ ಚಳವಳಿಗಳನ್ನೂ ದಿಕ್ಕು ತಪ್ಪಿಸಿದ್ದು.

ಈ ಹಿನ್ನೆಲೆಯಲ್ಲಿ ನಮ್ಮ ದೇಶದ ಪರಿಸರವಾದ ತನ್ನ ಶತ್ರುವಿನ ಮೂಲನೆಲೆಯನ್ನು ತಪ್ಪಾಗಿ ಅರ್ಥೈಸಿಕೊಂಡಂತಿದೆ. ನಮ್ಮ ಗ್ರಹಿಕೆಯಲ್ಲಿರುವ 'ಮಾಲಿನ್ಯ ಮೂಲಗಳು' ತೋರಿಕೆಯಾಗಿ ಕಾಣುತ್ತವೆ. ಅದರ ನಿಜ ಮೂಲಕ್ಕೆ ದಾಳಿ ಮಾಡುವುದನ್ನು ಬಿಟ್ಟರೆ ಬೇರಾವುದೇ ಹೋರಾಟಗಾಳಿಯೊಂದಿಗಿನ ಗುದ್ದಾಟವಾಗುವುದೇ ಹೆಚ್ಚು. ಆಯ್ಕೆ ನಮ್ಮದು ! ❑

ವೈದಿಕ ಮತ್ತು ಅವೈದಿಕರಲ್ಲಿ ಲಿಂಗ ಸಂಬಂಧಿ ನೆಲೆಗಳು

○ ಡಾ॥ ಶೈಲಜ ಹಿರೇಮಠ

ಭಾರತದಲ್ಲಿ ಅನೇಕ ಧರ್ಮಗಳು ಪ್ರಚಲಿತದಲ್ಲಿದ್ದರೂ ಹಿಂದೂತ್ವದ ಹೆಸರಿನಲ್ಲಿ ವೈದಿಕತೆಗೆ ಹೆಚ್ಚಿನ ಪ್ರಾಧಾನ್ಯತೆ ಕಲ್ಪಿತವಾಗಿದೆ. ಹಿಂದೂತ್ವ ಪರಿಕಲ್ಪನೆ ಬೆಳೆಯುವ ಮುಂಚೆ ವೈದಿಕತೆಗೆ ಪ್ರಾಮುಖ್ಯತೆ ಇರಲಿಲ್ಲ ಎಂದು ಹೇಳಲಾಗುವುದಿಲ್ಲ. 'ಅದು ತನ್ನೊಳಗೆ ಬೌದ್ಧರು, ಜೈನರು, ವೈಷ್ಣವರು, ಶೈವರು, ಶಾಕ್ತರು ಮುಂತಾದ ವಿಭಿನ್ನ ಪಂಗಡಗಳ ಹರಹನ್ನು ಒಳಗು ಮಾಡಿಕೊಂಡಿದೆ. ಈ ಒಳಗೊಳ್ಳುವಿಕೆ ಕಾಣಿಸಿಕೊಳ್ಳುವಾಗ, ಗರ್ಭಿಣಿಯಾದಾಗ, ಹೆರಿಗೆಯಾದಾಗ ಮೈಲಿಗೆ ಬೇಡವೆಂದರೂ ಅವಳನ್ನು ಸುತ್ತಿಕೊಳ್ಳುತ್ತಿರುತ್ತದೆ. ಋತುಚಕ್ರ, ಗರ್ಭಧರಿಸುವಿಕೆ, ಹೆರಿಗೆ ಇವುಗಳೆಲ್ಲವು ಜೈವಿಕ ಕ್ರಿಯೆಗಳು. ಇಂತಹ ಜೈವಿಕ ಪ್ರಕ್ರಿಯೆಗಳು ಮಹಿಳೆಗೆ ಪರಿಪೂರ್ಣತೆ ಹಾಗೂ ಶಕ್ತಿಯನ್ನು ತುಂಬುವ ಬದಲು ಅಪವಿತ್ರಳನ್ನಾಗಿಸುತ್ತದೆ. ಹೆಣ್ಣಿನ ಜೈವಿಕ ಪ್ರಕ್ರಿಯೆಗಳನ್ನು ನಿರಾಕರಿಸುವ ವೈದಿಕಶಾಹಿಯು ಅವಳಿಗೆ ಇದ್ದ ಜೈವಿಕ ಶಕ್ತಿಯನ್ನು ನಿರಾಕರಿಸುತ್ತದೆ.

ಜೈವಿಕವಾಗಿ ತಿರಸ್ಕಾರಕ್ಕೆ ಒಳಗಾದ ವೈದಿಕ ಮಹಿಳೆಗೆ ಬೌದ್ಧಿಕವಾಗಿ ಹಾಗೂ ಸಾಮಾಜಿಕವಾಗಿ ಅಸ್ತಿತ್ವ ಇದ್ದೀತೆ ಎನ್ನುವುದನ್ನು ವಿಶ್ಲೇಷಿಸಬೇಕಿದೆ. ವಿಶ್ವಾವರ, ಘೋಷಾ, ಅಪಾಲಾ, ಶಶಿಯಾನಿ, ಇಂದ್ರಾಣಿ, ಶಚಿ, ಗಾರ್ಗಿ ಮೊದಲಾದ ಮಹಿಳೆಯರು ಬೌದ್ಧಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಉದಾಹರಣೆಗಳು ಹೆಸರುಗಳಲ್ಲಿ ದೊರೆಯುತ್ತವೆ. ಆದರೆ ಅವರ ಕುರಿತ ವಿವರಣೆ ಹಾಗೂ ಅವರು ಬರೆದ ಋಕ್ಕುಗಳ ಕುರಿತ ವಿಶ್ಲೇಷಣೆ ದೊರೆಯುವುದಿಲ್ಲ. ವೇದಕಾಲದಲ್ಲಿ ಬೆರಳೆಣಿಕೆಯಷ್ಟಾದರೂ ಕಾಣಿಸಿಕೊಳ್ಳುವ ಮಹಿಳಾ ವಿದ್ವಾಂಸರ ಹೆಸರುಗಳು ಋಗ್ವೇದ ಕಾಲಕ್ಕೆ ಸಂಪೂರ್ಣವಾಗಿ ಮಾಯವಾಗುತ್ತವೆ. ಋಗ್ವೇದದಲ್ಲಿನ ಮಾತೊಂದನ್ನು ಗಮನಿಸಬೇಕು: 'ಮಹಿಳೆಗೆ ಬುದ್ಧಿ ಕಡಿಮೆ ಎಂದು ಇಂದ್ರನೆ ಹೇಳಿದ್ದಾನೆ. ಅವಳಿಗೆ ಬೋಧನೆ ಮಾಡಲು ಸಾಧ್ಯವಿಲ್ಲ (ಉದ್ಧೃತ ವೀರಭದ್ರಪ್ಪ ಬಿ.ವಿ. ೨೦೦೩, ಪುಟ ೯೨) ಹೆಣ್ಣಿನ ಬೌದ್ಧಿಕತೆಯನ್ನು ಕನಿಷ್ಟ ಸ್ತರದಲ್ಲಿಟ್ಟು ನೋಡುವ ವೈದಿಕ ದೃಷ್ಟಿಕೋನವು ಮಹಿಳೆಯನ್ನು ಪ್ರಾಣಿಯಂತೆ ಕಂಡ ಸಂಗತಿಯನ್ನು ಬಹಿರಂಗಗೊಳಿಸುತ್ತದೆ. ಚರಿತ್ರೆಯ ಉದ್ದಕ್ಕೂ ಬೌದ್ಧಿಕತೆಯ ಗುತ್ತಿಗೆದಾರರಂತೆ ನಡೆದುಕೊಂಡು ಬಂದಿರುವ ಯಲ್ಲಿ ತಂದೆತನದ ಅಹಂಕಾರ ಮತ್ತು ಮೇಲರಿಮೆಗಳಿವೆ' (ರೋಮಿಲಾ ಥಾಪರ್. ೨೦೦೪, ಪು ೨೩). ಇಂತಹ ವೈದಿಕತೆಯು ಮಹಿಳೆಯನ್ನು ಹೇಗೆ ನಿರ್ವಚಿಸಿದೆ, ಅವೈದಿಕ ಮಹಿಳೆಯರನ್ನು ಹೇಗೆ ಕಂಡಿದೆ ಎನ್ನುವುದನ್ನು ಚರ್ಚಿಸಬೇಕಿದೆ. ವೈದಿಕ ಧರ್ಮದ ತಾತ್ವಿಕ ವಿಚಾರಗಳು ಜಾಗತಿಕ ಮಾರುಕಟ್ಟೆಯನ್ನು ಪ್ರವೇಶಿಸಿವೆಯೆ? ಪ್ರವೇಶಿಸಿದ್ದರೆ ಅವುಗಳು ಮಹಿಳೆಯರ ಕುರಿತು ಯಾವ ತಾರ್ಕಿಕತೆಯನ್ನು ಪುನಾರಚಿಸಲು ಪ್ರಯತ್ನಿಸುತ್ತಿವೆ? ಜಾತಿ ಅಂತರಗಳು ಕಡಿಮೆಯಾಗುತ್ತಿರುವ ಇವತ್ತಿನ ಸಂದರ್ಭದಲ್ಲಿ ಅವೈದಿಕ ಮಹಿಳೆಗೆ ಯಾವ ಮೌಲ್ಯಗಳು ಆದರ್ಶವಾಗಿವೆ? ಅಂತಹುದೇ ಮೌಲ್ಯಗಳನ್ನು ಆದರ್ಶವಾಗಿಟ್ಟುಕೊಳ್ಳಲು ಅವಳಿಗಿರುವ ಸಾಮಾಜಿಕ ಒತ್ತಡಗಳಾವುವು ಎನ್ನುವುದನ್ನು ತಿಳಿದುಕೊಳ್ಳಬೇಕಿದೆ. ಇಂತಹ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುವ ಪ್ರಯತ್ನವನ್ನು ಈ ಪುಟ್ಟ ಲೇಖನದಲ್ಲಿ ಮಾಡಲಾಗಿದೆ.

ವೈದಿಕತೆ : ವೈದಿಕ ಮಹಿಳೆ

ವೈದಿಕರು 'ಮಹಿಳೆಯರು ಸಾಮಾನ್ಯವಾಗಿ ಅಶುಚಿಯಾಗಿರುತ್ತಾರೆ. ಅದರಲ್ಲೂ ಋತುಸ್ರಾವದ ಕಾಲದಲ್ಲಿ, ಗರ್ಭಿಣಿಯರಾಗಿದ್ದಾಗ ಮತ್ತು ಬಾಣಂತಿತನದಲ್ಲಿ ಅವರು ಅಶುದ್ಧರು. ಹೊಕ್ಕಳ ಕೆಳಗೆ ಮಹಿಳೆಯರು ಯಾವಾಗಲೂ ಮೈಲಿಗೆ. ಅಂತಹ ಅಶುದ್ಧ ವ್ಯಕ್ತಿಗಳು ಸತ್ತವರ ಶುದ್ಧಾತ್ಮಗಳಿಗೆ ಅತ್ಯಂತ ಶುದ್ಧ ಮತ್ತು ಪವಿತ್ರವಾದ ತರ್ಪಣವನ್ನರ್ಪಿಸುವ ಕಾರ್ಯನಿರ್ವಹಿಸಲು ಸಂಪೂರ್ಣವಾಗಿ ಅನರ್ಹರಾಗಿರುತ್ತಾರೆ' (ಉದ್ಧೃತ. ವೀರಭದ್ರಪ್ಪ ಬಿ.ವಿ. ೨೦೦೩, ಪುಟ. ೯೩) ಎಂದು ನಂಬಿರುತ್ತಾರೆ. ಸಾಮಾನ್ಯವಾಗಿ ಪುರುಷರಿಗೆ, ಕುಟುಂಬದಲ್ಲಿ ಯಾರಾದರೂ ಮರಣ ಹೊಂದಿದಾಗ ಮಾತ್ರ ಮೈಲಿಗೆ ಬರುತ್ತದೆ. ಆದರೆ ವೈದಿಕ ಮಹಿಳಾ ವಿಷಯದಲ್ಲಿ ಹಾಗಲ್ಲ. ಋತುಮತಿಯಾದಾಗ, ತಿಂಗಳ ಋತುಚಕ್ರ

ವೈದಿಕರು 'ಮಹಿಳೆಯರು ಸಾಮಾನ್ಯವಾಗಿ ಅಶುಚಿಯಾಗಿರುತ್ತಾರೆ. ಅದರಲ್ಲೂ ಋತುಸ್ರಾವದ ಕಾಲದಲ್ಲಿ, ಗರ್ಭಿಣಿಯರಾಗಿದ್ದಾಗ ಮತ್ತು ಬಾಣಂತಿತನದಲ್ಲಿ ಅವರು ಅಶುದ್ಧರು. ಹೊಕ್ಕಳ ಕೆಳಗೆ ಮಹಿಳೆಯರು ಯಾವಾಗಲೂ ಮೈಲಿಗೆ. ಅಂತಹ ಅಶುದ್ಧ ವ್ಯಕ್ತಿಗಳು ಸತ್ತವರ ಶುದ್ಧಾತ್ಮಗಳಿಗೆ ಅತ್ಯಂತ ಶುದ್ಧ ಮತ್ತು ಪವಿತ್ರವಾದ ತರ್ಪಣವನ್ನರ್ಪಿಸುವ ಕಾರ್ಯನಿರ್ವಹಿಸಲು ಸಂಪೂರ್ಣವಾಗಿ ಅನರ್ಹರಾಗಿರುತ್ತಾರೆ' ಎಂದು ನಂಬಿರುತ್ತಾರೆ.

ವೈದಿಕ ಪುರುಷರು, ಶೂದ್ರ ಹಾಗೂ ಪಂಚಮ ಸಮುದಾಯವನ್ನು ಮಾತ್ರ ಜ್ಞಾನ ಜಗತ್ತಿನಿಂದ ದೂರ ಇಡಲಿಲ್ಲ, ತನ್ನ ವರ್ಣದ ಮಹಿಳೆಯರಿಗೂ ಬೌದ್ಧಿಕ ಪ್ರಪಂಚ ಅಪರಿಚಿತವಾಗಿರುವಂತೆ ನೋಡಿಕೊಂಡರು. ವೈದಿಕ ಸಂಸ್ಕೃತಿಯು ಸರಸ್ವತಿಯನ್ನು ವಿದ್ಯಾದೇವತೆಯನ್ನಾಗಿ ಪರಿಗಣಿಸಿದರೂ ಅವಳ ಶ್ರೀರಕ್ಷೆ ವೈದಿಕ ಪುರುಷರ ಜಗತ್ತನ್ನು ಪೋಷಿಸುವುದಕ್ಕೆ ಮಾತ್ರ ಸೀಮಿತಗೊಳಿಸಿಕೊಂಡಿರುತ್ತದೆ.

ವೈದಿಕರು ಹೆಣ್ಣು ಕೂಸಿನ ಜನನವನ್ನು ಅಪ್ರಿಯ ಹಾಗೂ ಪಾಪದ ಸಂಗತಿಯಾಗಿ ಪರಿಗಣಿಸಿದರು. ಅಥರ್ವವೇದದ ಪ್ರಾರ್ಥನೆ ಹೀಗಿದೆ: 'ಓ ಪಿಂಗ, ಬೆಳೆಯುತ್ತಿರುವ ಕೂಸನ್ನು ಸಂರಕ್ಷಿಸು. ಆ ಗಂಡು ಭ್ರೂಣವನ್ನು ದುಷ್ಟ ಭೂತಗಳು ಹೆಣ್ಣಾಗಿ ಮಾರ್ಪಡಿಸದಿರಲಿ' (ಉದೃತ, ವೀರಭದ್ರಪ್ಪ ಬಿ.ವಿ. ೨೦೦೫, ಪುಟ ೯೨) ದುಷ್ಕೃತ್ಯದಿಂದ ಹೆಣ್ಣಿನ ಜನನವಾಗುತ್ತದೆ ಎಂದು ನಂಬುವ ವೈದಿಕ ಧರ್ಮವು ಆಕೆಯ ಜನನ ಹಾಗೂ ಜನ್ಮವನ್ನು ಪಾಪದ ಸಂಗತಿಯಾಗಿಯೇ ಪರಿಗಣಿಸಿದೆ. 'ಶೂದ್ರರು, ನಾಯಿಗಳು ಮತ್ತು ಕಾಗೆಗಳ ಗುಂಪಿಗೆ ಮಹಿಳೆಯರು ಸೇರಿರುತ್ತಾರೆ. ಸುಳ್ಳು, ಪಾಪ ಮತ್ತು ಕತ್ತಲೆ ಅವರಲ್ಲಿ ಮನೆ ಮಾಡಿಕೊಂಡಿರುತ್ತದೆ' (ಉದೃತ, ವೀರಭದ್ರಪ್ಪ ಬಿ.ವಿ. ೨೦೦೫, ಪುಟ೯೨) ಎಂದು ನಂಬುವ ವೈದಿಕ ಧರ್ಮವು ತನ್ನ ಸಮುದಾಯದ ಮಹಿಳೆಯನ್ನು ನಾಯಿ, ಕಾಗೆಗಳಿಗಿಂತಲೂ ಕಡೆಯಾಗಿ ಕಂಡಿವೆ.

ಮಹಿಳೆಯನ್ನು ನಾಯಿ, ಕಾಗೆಗಳ ಜೊತೆ ಇಟ್ಟು ಮಾತನಾಡುವ ವೈದಿಕ ಧರ್ಮವು ಕೊನೇ ಪಕ್ಷ ತನ್ನ ವರ್ಣದ ಮಹಿಳೆಯನ್ನು ಕನಿಷ್ಠ ಸೌಜನ್ಯತೆಯಿಂದ ನಡೆಸಿಕೊಂಡಿಲ್ಲ. ವೈದಿಕ ಮಹಿಳೆಯನ್ನು ಕತ್ತಲೆಯಲ್ಲಿಟ್ಟು ವಿಶ್ಲೇಷಿಸಿದ್ದರಿಂದ ಅವಳು ನರಕದ ಪ್ರತಿರೂಪವಾಗಿ ಕಂಡಿರುವಳು. ವಿಧವೆಯನ್ನು ಮೈಲಿಗೆಯಾಗಿಯೇ ಕಾಣಲಾಗಿದೆ. ಸ್ತ್ರೀಯ ಬದುಕಿನ ಮೂಲಭೂತ ಹಕ್ಕುಗಳನ್ನು ಲಿಂಗ ಕಾರಣದಿಂದಾಗಿಯೇ ಕಿತ್ತುಕೊಂಡಿದೆ. ಜೈವಿಕವಾಗಿ, ಬೌದ್ಧಿಕವಾಗಿ ಹಾಗೂ ಸಾಮಾಜಿಕವಾಗಿ ವೈದಿಕ ಮಹಿಳೆ ಶೂನ್ಯ ನೆಲೆಯಲ್ಲಿಯೇ ಪರಿಗಣಿತವಾಗಿರುವಳು. ವೈದಿಕ ಸಮುದಾಯದೊಳಗಡೆಯೇ ವೈದಿಕ ಮಹಿಳೆ ತೀವ್ರ ಶೋಷಣೆಗೆ ಒಳಗಾಗಿದ್ದಾಳೆ. ವೈದಿಕರಲ್ಲಿನ ಪಿತೃಪ್ರಧಾನ ಮೌಲ್ಯಗಳು ತುಂಬಾ ನಾಜೂಕಾಗಿ ತಮ್ಮ ಸಮುದಾಯದ ಮಹಿಳೆಯರ ಮೇಲೆ ದೌರ್ಜನ್ಯವನ್ನು ಎಸಗುತ್ತಿರುತ್ತವೆ.

ವೈದಿಕತೆ: ಅವೈದಿಕ ಮಹಿಳೆ

ಇಲ್ಲಿ ಎರಡು ಮುಖ್ಯ ಸಂಗತಿಗಳನ್ನು ಚರ್ಚೆಗೆ ಕೈಗೆತ್ತಿಕೊಂಡಿರುವೆ.

೧. ವೈದಿಕ ಧರ್ಮವು ಅವೈದಿಕ ಮಹಿಳೆಯನ್ನು ನಡೆಸಿಕೊಂಡ ರೀತಿಯ ಕುರಿತು. ೨. ವೈದಿಕ ಮೌಲ್ಯಗಳು ಅವೈದಿಕ ಸಮುದಾಯಗಳನ್ನು ಪ್ರಭಾವಿಸಿದ ರೀತಿಯ ಕುರಿತು.

ಮೊದಲನೆಯದಾಗಿ ವೈದಿಕ ಧರ್ಮವು ಚರಿತ್ರೆಯ ಉದ್ದಕ್ಕೂ ಅವೈದಿಕ ಮಹಿಳೆಯನ್ನು ಹೇಗೆ ನಡೆಸಿಕೊಂಡಿದೆ ಎನ್ನುವುದನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ. 'ಋಗ್ವೇದ ಕಾಲದಲ್ಲಿ ದಾಸಿಯರನ್ನು ಉಡುಗೊರೆಯಾಗಿ ಅಥವಾ ಕಾಣಿಕೆಯಾಗಿ ಕೊಡುವ ಪದ್ಧತಿ ಇತ್ತು. ಇತರ ಬುಡಕಟ್ಟಿನ ಅದರಲ್ಲೂ ಆದಿವಾಸಿಗಳ ಗಂಡಸರನ್ನು ದಾಳಿಗಳಲ್ಲಿ ಕೊಂದ ನಂತರ ಅವರ ಮಹಿಳೆಯರನ್ನು ಬಂಧಿಸಿ ದಾಸಿಯರನ್ನಾಗಿ ಬಳಸಲಾಗುತ್ತಿತ್ತು... ರಾಜನು ದಾಸಿಯರನ್ನು ತುಂಬಿದ ರಥಗಳನ್ನು ಬಂಧುಬಾಂಧವರಿಗೆ ಹಾಗೂ ಪುರೋಹಿತರಿಗೆ ಉಡುಗೊರೆಯಾಗಿ ನೀಡುತ್ತಿದ್ದ... ದಾಸಿಯನ್ನು ವಧು ಎಂದು ಕರೆಯಲಾಗುತ್ತಿತ್ತು. ಯಾವ ಮದುವೆಯ ಆಚರಣೆಯೂ ಇಲ್ಲದೆ ಅವಳೊಡನೆ ಸಂಭೋಗ ಸುಖ ಅನುಭವಿಸಬಹುದಾಗಿತ್ತು. ಕೆಲವು ದಾಸಿಯರು ಒಟ್ಟಾಗಿ ಬುಡಕಟ್ಟಿನ ಅಥವಾ ಹಳ್ಳಿಯ ಸಾಮೂಹಿಕ ಒಡೆತನಕ್ಕೆ ಒಳಪಡುತ್ತಿದ್ದರು. ಯಾರು ಬೇಕಾದರೂ ಅವರೊಡನೆ ಲೈಂಗಿಕ ಸಂಬಂಧ ಹೊಂದಬಹುದಾಗಿತ್ತು. ಹೀಗೆ, ಆ ದಾಸಿಯರು ವೇಶ್ಯೆಯರಾಗುತ್ತಿದ್ದರು'. (ಉದೃತ, ವೀರಭದ್ರಪ್ಪ ಬಿ.ವಿ. ೨೦೦೫, ಪುಟ೯೫).

ಹೀಗೆ ವೈದಿಕ ಧರ್ಮವು ತಳಸಮುದಾಯದ ಮಹಿಳೆಯನ್ನು ಅನಾಥಳನ್ನಾಗಿ, ಸರ್ವರ ಉಪಭೋಗದ ವಸ್ತುವನ್ನಾಗಿ ಕಂಡಿದೆ. ಉಳ್ಳವರ ಸೇವೆ ಮಾಡುತ್ತ ಅವರ ಲೈಂಗಿಕ ಬಯಕೆಗಳನ್ನು ಪೂರೈಸಬೇಕಾಗಿದ್ದ ದಾಸಿಯರ ಜೀವನ ಚಿಂತಾಜನಕವಾಗಿತ್ತು. ದಾಸಿಯ ದೇಹದ ಮೇಲೆ ಸಮಾಜದಲ್ಲಿನ ಸರ್ವ ಪುರುಷರು ಒಡೆತನ ಹೊಂದಿದ್ದರು. ಭೋಗ ಮತ್ತು ಉಪಭೋಗದ ನೆಲೆಯಲ್ಲಿ ಬಳಕೆಗೊಂಡ ತಳಸಮುದಾಯದ ಮಹಿಳೆಯು ತನ್ನ ದೇಹದ ಮೇಲೆ ಯಾವ ಒಡೆತನದ ಹಕ್ಕನ್ನು ಉಳಿಸಿಕೊಂಡಿರಲಿಲ್ಲ. ಮೇಲ್ಜಾತಿ ಮತ್ತು ಮೇಲ್ವರ್ಗದವರ ಮನೆಗೆಲಸ ಹಾಗೂ ಜಮೀನು ಕೆಲಸ ಮಾಡುತ್ತ ಒಡೆಯನಿಗೆ ಬೇಕೆನಿಸಿದಾಗ ಲೈಂಗಿಕ ಬಯಕೆಯನ್ನು ಪೂರೈಸಬೇಕಾಗಿದ್ದ ದಾಸಿಯರು ಅತ್ಯಂತ ಹೀನಾಯ ಸ್ಥಿತಿಯಲ್ಲಿ ಬದುಕಿದ್ದರು. ಅವರಿಗೆ ಕುಟುಂಬ ಇರಲಿಲ್ಲ, ಮನೆ ಇರಲಿಲ್ಲ, ಎಲ್ಲೋ ಹುಟ್ಟಿ ಅನಾಥವಾಗಿ ಮತ್ತೆಲ್ಲಿಯೋ ಮಾರಾಟವಾಗುತ್ತಿದ್ದರು.

ಪದೇ ಪದೇ ಮಾರಾಟವಾಗುತ್ತಲೇ ಹೋಗುವ ದಾಸಿಯರಿಗೆ ಕುಟುಂಬ, ಮನೆ, ಮೂಲ ಸ್ಥಳ ಎಲ್ಲಿಂದ ಬರಬೇಕು ? ತಂದೆಯ ಪರಿಚಯವಿಲ್ಲದೆ ಹುಟ್ಟಿ ಬೆಳೆವ ಅವರಿಗೆ ತಾಯಿ, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು ಇದ್ದೂ ಅನಾಥರು. ಏಕೆಂದರೆ ಅವರೂ ಇವರಂತೆಯೆ ಎಲ್ಲಿಯೋ ಮಾರಾಟವಾಗುವರು, ಮತ್ತೆ ಮತ್ತೆ ಮಾರಾಟಕ್ಕೊಳಗಾಗುತ್ತಿರುವರು. ಇಂತಹ ದಾಸಿಯರ ಸ್ಥಿತಿಯನ್ನು ನಿರ್ಲಿಪ್ತವಾಗಿ ಹೇಳುವ ವೈದಿಕತೆಯು ಅವರನ್ನು ಭೋಗ ಮತ್ತು ಉಪಭೋಗಕ್ಕಾಗಿ ಇರುವ ಸಾಕುಪ್ರಾಣಿಗಳಂತೆ ಕಂಡಿರುವರು. ಉಳ್ಳವರ ವೈಭವವನ್ನು ಮತ್ತು ಲಂಪಟತನವನ್ನು ದೃಢೀಕರಿಸುವ ಮಾನದಂಡಗಳಾಗಿ ದಾಸಿಯರು ಬಳಕೆಗೊಂಡಿರುವರು. ದಾಸಿಯರು ಶೋಷಿತ ಸ್ಥಿತಿಯು ಏಕಸ್ವರೂಪವನ್ನು ಒಳಗೊಂಡಿಲ್ಲ ಎನ್ನುವುದು ಉದೃತವಾಗಿ ತೆಗೆದುಕೊಂಡ ಈ ಮೇಲಿನ ಹೇಳಿಕೆಯು ಸ್ಪಷ್ಟಪಡಿಸುತ್ತದೆ.

ವೈದಿಕ ಧರ್ಮವು ತಳಸಮುದಾಯದ ಮಹಿಳೆಯನ್ನು ಅನಾಥಳನ್ನಾಗಿ, ಸರ್ವರ ಉಪಭೋಗದ ವಸ್ತುವನ್ನಾಗಿ ಕಂಡಿದೆ. ಉಳ್ಳವರ ಸೇವೆ ಮಾಡುತ್ತ ಅವರ ಲೈಂಗಿಕ ಬಯಕೆಗಳನ್ನು ಪೂರೈಸಬೇಕಾಗಿದ್ದ ದಾಸಿಯರ ಜೀವನ ಚಿಂತಾಜನಕವಾಗಿತ್ತು.

ದಾಸಿಯರಲ್ಲಿ ಎರಡು ವಿಂಗಡಣೆ ಮಾಡಬಹುದು :

೧. ಮೇಲ್ಜಾತಿ, ಮೇಲ್ವರ್ಗದವರ ಸೇವೆಗೆ ಮೀಸಲಿದ್ದವರು.

೨. ಬುಡಕಟ್ಟು ಅಥವಾ ಹಳ್ಳಿಯ ಸಾಮೂಹಿಕ ಒಡೆತನಕ್ಕೆ ಸೇರಿದವರು. ಈ ಇಬ್ಬರು ದಾಸಿಯರನ್ನು ಶೋಷಿಸಿದ ರಾಜಶಾಹಿ, ಪುರೋಹಿತಶಾಹಿ ಹಾಗೂ ಊಳಿಗಮಾನ್ಯಶಾಹಿಯ ಪಿತೃಪ್ರಧಾನ ಮೌಲ್ಯಗಳು ಭಿನ್ನವಾದುವುಗಳು. ಇವರಲ್ಲಿ ಯಾರ ಸ್ಥಿತಿ ಉತ್ತಮ, ಮತ್ಯಾರ ಸ್ಥಿತಿ ಕನಿಷ್ಠ ಎಂದು ಹೇಳುವುದು ಕಷ್ಟಕರವಾದುದು. ಉಳ್ಳವರ ದಾಸಿಯರು ಉಡುಗೊರೆಯ ರೂಪದಲ್ಲಿ ಒಬ್ಬೊರಿಂದೊಬ್ಬರಿಗೆ, ಒಂದು ಊರಿನಿಂದ ಮತ್ತೊಂದು ಊರಿಗೆ ರವಾನೆಯಾಗುವರು. ಇವರು ಸೇವೆ ಮಾಡುವುದು ಉನ್ನತ ವರ್ಗದ ಮನೆತನಗಳಲ್ಲಿಯಾದರೂ ಆ ಮನೆತನಗಳ ಆರ್ಥಿಕ ಸ್ಥಿತಿಗೂ ದಾಸಿಯರ ಆರ್ಥಿಕ ಸ್ಥಿತಿಗೂ ನೇರವಾಗಿ ಯಾವುದೇ ರೀತಿಯ ಸಂಬಂಧವಿಲ್ಲ.

ಉಳ್ಳವರ ಆಸ್ತಿಯಾಗಿಯೇ ಪರಿಗಣಿತವಾಗಿರುವ ದಾಸಿಯರು ಸ್ವಂತ ಆಸ್ತಿಯನ್ನು ಹೊಂದುವಂತಿರಲಿಲ್ಲ. ದಾಸವರ್ಗಕ್ಕೆ ಸೇರಿದ ಪುರುಷನಿಗೆ ಆಸ್ತಿ ಮಾಡುವ ಹಕ್ಕಿಲ್ಲವೆಂದು ಹೇಳಿದ ಮನು ಧರ್ಮದ ಹೇಳಿಕೆಗಳನ್ನು ಗಮನಿಸಬೇಕು. 'ದೇವರು ಶೂದ್ರನಿಗೆ ಒಂದೇ ಒಂದು ಸೇವಾ ವೃತ್ತಿಯನ್ನು ವಿಧಿಸಿದ್ದಾನೆ... ಶೂದ್ರ ಜೀತಕ್ಕಿರಲಿ ಅಥವಾ ಇಲ್ಲದಿರಲಿ ಅವನನ್ನು ಮೇಲಿನ ಜಾತಿಯವರ ಸೇವಾ ಕಾರ್ಯಕ್ಕೆ ಬಲವಂತವಾಗಿಯಾದರೂ ನೂಕಬೇಕು' (ಮನುಧರ್ಮ, ಉದೃತ, ಅಂಬೇಡ್ಕರ್ ಬಿ.ಆರ್. ೨೦೦೦, ಪುಟ, ೨೬೬-೨೬೭) ಶೂದ್ರ ಪುರುಷನು ಶಾಶ್ವತವಾಗಿ ಗುಲಾಮ ಸ್ಥಿತಿಯಲ್ಲಿರುವುದನ್ನು ಸಮರ್ಥಿಸುವ ಬ್ರಾಹ್ಮಣ್ಯವು ಶೂದ್ರ ಮಹಿಳೆಯು ಅದೇ ಸ್ಥಿತಿಯಲ್ಲಿರುವುದನ್ನು ಸಮರ್ಥಿಸುತ್ತದೆ.

ಹೀಗಾಗಿ ಸ್ವಂತಕ್ಕೆ ಸ್ವಲ್ಪವೂ ಹಣ ಇಟ್ಟುಕೊಳ್ಳದೆ ಸದಾ ಜೀತ ಸ್ಥಿತಿಯಲ್ಲಿರುವ ಈ ಮಹಿಳೆಯರ ಸ್ಥಿತಿ ಉತ್ತಮವಾಗಿತ್ತೇ ಎಂದು ಆಲೋಚಿಸುವುದು ಕೂಡಾ ಹಾಸ್ಯಾಸ್ಪದವಾಗಿ ಕಾಣುತ್ತದೆ.

ಎರಡನೆ ವಿಂಗಡನೆಯಲ್ಲಿ ಬರುವ ಹಳ್ಳಿಯ ಸಾಮೂಹಿಕ ಒಡೆತನಕ್ಕೆ ಒಳಪಟ್ಟ ದಾಸಿಯರು ಪರೋಕ್ಷವಾಗಿ

ಉಳ್ಳವರ ವೈಭವವನ್ನು ಸಾರುವ ಡಂಗುರಗಳಾಗಿರುತ್ತಾರೆ. ಅನ್ನ ವಸ್ತ್ರ ಒಡವೆ, ಮನರಂಜನೆ, ಆಸ್ತಿ ಹೀಗೆ ಸಕಲ ಸೌಲಭ್ಯಗಳ ಜೊತೆಗೆ ಭೋಗ ಜೀವನವನ್ನು ಪುರುಷ ಪ್ರಜೆಗಳಿಗೆ ಕಲ್ಪಿಸುವುದಕ್ಕಾಗಿ ದಾಸಿಯರನ್ನು ಹಳ್ಳಿಯ ಸಾಮೂಹಿಕ ಒಡೆತನಕ್ಕೆ ರಾಜನು ಬಿಡುತ್ತಿದ್ದಿರಬೇಕು. ಹೀಗೆ ಬಿಟ್ಟ ದಾಸಿಯರಿಂದ ತೆರಿಗೆಯನ್ನು ತೆಗೆದುಕೊಂಡು ತನ್ನ ಆರ್ಥಿಕ ಬೊಕ್ಕಸವನ್ನು ತುಂಬಿಸಿಕೊಳ್ಳುತ್ತಿದ್ದನು. ಜಾತಿ ಹಾಗೂ ಲಿಂಗ ಕಾರಣದಿಂದಾಗಿಯೇ ಮೇಲಿನ ಜಾತಿಯವರ ಸೇವಾ ಕಾರ್ಯವನ್ನು ಮಾಡಲೇಬೇಕೆಂಬ ದಾಸಿಯ ಮೇಲಿರುವ ಒತ್ತಡವು ಅವಳ ಮೇಲೆ ನಿರಾತಂಕವಾಗಿ ನಡೆಯುತ್ತಿದ್ದ ದೌರ್ಜನ್ಯವನ್ನು ಹೇಳುತ್ತದೆ.

ವೈದಿಕ ದೇವಾಲಯಗಳಲ್ಲಿ ಪಾತರದವರು ಸಂಗೀತ ಮತ್ತು ನೃತ್ಯ ಸೇವೆ ಸಲ್ಲಿಸಬೇಕು. ಹೀಗೆ ಸೇವೆ ಸಲ್ಲಿಸಿದ ಮಹಿಳೆಯರಿಗೆ ಮೋಕ್ಷ ಸಿಗುವುದು, ಅವರ ಸೇವೆಯಿಂದ ಸಂತೃಪ್ತರಾದ ದೇವರು ಇಡೀ ಸಮುದಾಯಗಳ ಸುಖ ನೆಮ್ಮದಿಯನ್ನು ಕಾಪಾಡುವನು ಎನ್ನುವ 'ಸಮಾಜ ಕಲ್ಯಾಣದ ಹುಸಿ ಕಲ್ಪನೆ'ಯನ್ನು ಸೃಷ್ಟಿಸಿದ ವೈದಿಕ ಧರ್ಮವು ಈ ಸಂಪ್ರದಾಯವನ್ನು ವ್ಯವಸ್ಥಿತವಾಗಿ ಪೋಷಿಸಿಕೊಂಡು ಬಂದಿತು. ಈಗಲೂ ಈ ಸಂಪ್ರದಾಯ ಉತ್ತರ ಕರ್ನಾಟಕದ ಸಿಂಧಗಿ, ತೇರದಾಳ, ನಿಡಸೋಸಿ ಮೊದಲಾದ ಸ್ಥಳಗಳಲ್ಲಿ ಜೀವಂತವಾಗಿದೆ.

ಬಸವಿಯರು ಹನುಮ ಮೂಲದ ಮಾಧ್ವ ಸಂಪ್ರದಾಯವನ್ನು ಜನಪ್ರಿಯಗೊಳಿಸಲು ಹುಟ್ಟಿದವರು. ಮಾಧ್ವರು ತಮ್ಮ ಧರ್ಮ ಪ್ರಚಾರಕ್ಕಾಗಿ ಆಡಳಿತ ವರ್ಗದವರ ಮೂಲಕ ಹಳ್ಳಿಗಳಲ್ಲಿ ಹನುಮ ದೇವಾಲಯಗಳನ್ನು ಕಟ್ಟಿಸಿದರು. ಈ ದೇವಸ್ಥಾನಕ್ಕೆ ಹಾಗೂ ಮಾಧ್ವ ಪರಂಪರೆಗೆ ಪ್ರಚಾರ ತಂದುಕೊಡುವುದಕ್ಕಾಗಿ ಬಸವಿ ಸಂಪ್ರದಾಯವನ್ನು ಸೃಷ್ಟಿಸಿ ಅದಕ್ಕೆ ತಳ ಸಮುದಾಯದ ಮಹಿಳೆಯರನ್ನು ಬಲಿಯಾಗಿಸಿತು. ಪಾತರದವಳು, ಮೇಲ್ಜಾತಿ, ಮೇಲ್ವರ್ಗದ ಪುರುಷರ ಕಾಮವನ್ನು ತಣಿಸಿದರೆ, ಬಸವಿ ತಾನು ನೆಲೆಸಿದ ಊರಿನಲ್ಲಿನ ಎಲ್ಲಾ ಪುರುಷರ ಲೈಂಗಿಕ ಬಯಕೆಯನ್ನು ತೃಪ್ತಿಪಡಿಸಬೇಕಾಯಿತು. ಪಾತರದವರು ಮೇಲ್ಜಾತಿ, ಮೇಲ್ವರ್ಗದವರ ಆಸ್ತಿಯಾಗಿ ಪರಿಗಣಿತವಾದರೆ, ಬಸವಿಯರು ಸಾರ್ವಜನಿಕ ಸ್ವತ್ತಾದರು. ವೈದಿಕ ಧರ್ಮವು ಸೃಷ್ಟಿಸಿದ ಈ ಸಾಂಸ್ಕೃತಿಕ ರಾಜಕಾರಣದ ಪ್ರಭಾವದಿಂದ ಹೊರಬರಲಾಗದೆ ಅನೇಕ ತಳಸಮುದಾಯದ ಮಹಿಳೆಯರು ಇಂದಿಗೂ 'ದೇವರ ಸೇವೆಯ' ಹೆಸರಿನಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಬಲಿಯಾಗುತ್ತಿರುವರು.

ವೈದಿಕ ಧರ್ಮದಲ್ಲಿನ ಪಿತೃಪ್ರಧಾನ ಮೌಲ್ಯಗಳು ಭಾರತದಲ್ಲಿನ ತಳ ಸಮುದಾಯಗಳ ಸಮಗ್ರ ಪ್ರಜ್ಞೆಯನ್ನು ಆವರಿಸಿಕೊಂಡಿದೆಯೆ ಎನ್ನುವುದನ್ನು ಕ್ಷೇತ್ರ ಕಾರ್ಯಾಧ್ಯಯನದ ಮೂಲಕ ವಿಶ್ಲೇಷಿಸುವ ಅಗತ್ಯವಿದೆ. ಈ ಲೇಖನದ ಬರಹ ಹಾಗೂ ವೇಳೆಯ ಮಿತಿಗನುಸರಿಸಿ ಕ್ಷೇತ್ರ ಕಾರ್ಯಾಧ್ಯಯನ ಪ್ರಧಾನವಾದ ಕೆಲವು ಕೃತಿಗಳನ್ನು ಮಾತ್ರ ಗಮನಿಸಲಾಗಿದೆ.



'ಮ್ಯಾಸ ಬೇಡರಲ್ಲಿ ಹೆಣ್ಣು ಗರ್ಭಿಣಿಯಾಗಿ ಮಗುವಿನ ಜನನದವರೆಗೆ ಮೈಲಿಗೆ ಇರುತ್ತದೆ ಎಂಬ ಕಲ್ಪನೆ ಇವರಲ್ಲಿದೆ... ಗೌಳಿಗರಲ್ಲಿ ಹೆರಿಗೆ ನಂತರ ಗರ್ಭಿಣಿ ಮತ್ತು ಮಗುವನ್ನು ಯಾರೂ ಮುಟ್ಟುವಂತಿಲ್ಲ. ಕಾಡು ಕುರುಬರಲ್ಲಿ ಮಗು ಜನಿಸಿದ ಏಳು ಅಥವಾ ಒಂಬತ್ತು ದಿನಗಳವರೆಗೆ ಮೈಲಿಗೆ ಆಚರಿಸುವ ಸಂಪ್ರದಾಯವಿದೆ'. ತಳ ಸಮುದಾಯಗಳು ಹೆಣ್ಣು ಸಂತಾನವನ್ನು ನಿಕೃಷ್ಟವಾಗಿ ಕಂಡದ್ದೇ ಹೆಚ್ಚು. ಗಂಡು ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ಹೇಳಿದ ಲಾಲಿ ಹಾಡುಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಹಸಲರಲ್ಲಿಯಂತೆ ಬಹುಪಾಲು ಬುಡಕಟ್ಟು, ಶೂದ್ರ, ದಲಿತ, ಆದಿವಾಸಿ ಸಮುದಾಯಗಳಲ್ಲಿ ಗಂಡು ಸಂತಾನಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಹೀಗೆ ತಳಸಮುದಾಯಗಳಲ್ಲೂ ಹೆಣ್ಣಿನ ಜನನವನ್ನು ಹಾಗೂ ಜೈವಿಕ ಕ್ರಿಯೆಗಳನ್ನು ಪಿತೃಕೇಂದ್ರಿತ ದೃಷ್ಟಿಕೋನದಿಂದಲೇ ಅರ್ಥೈಸಲಾಗಿದೆ.

ಹಳ್ಳಿ, ಪಟ್ಟಣಗಳಲ್ಲಿರುವವರು ನಾಗರಿಕ ಹಕ್ಕುಗಳನ್ನು ಪಡೆದುಕೊಂಡವರಾಗಿದ್ದು ಅಂಥವರನ್ನು ನಾಗರಿಕರೆಂದು ಗುರುತಿಸುವರು. ಬೆಟ್ಟ ಗುಡ್ಡ ಪ್ರದೇಶಗಳಲ್ಲಿರುವವರನ್ನು 'ನಾಗರಿಕರಲ್ಲದವರು' ವ್ಯಾಖ್ಯಾನಿಸುವುದು ತಪ್ಪಾದರೂ ಆ ಪದವನ್ನು ಬಳಸುವುದು ಅನಿವಾರ್ಯವಾಗಿದೆ. ಇಲ್ಲಿ ನಾಗರಿಕರು ಎನ್ನುವ ಪದವನ್ನು ಆದಿವಾಸಿ, ಬುಡಕಟ್ಟಿನವರಿಗೆ ವಿರೋಧವಾಗಿ ಬಳಸಿಲ್ಲ. ಹೆಚ್ಚು ಸೌಲಭ್ಯವುಳ್ಳ ಪರಿಸರದಲ್ಲಿ ಬದುಕುವವರು ಎನ್ನುವ ಅರ್ಥದಲ್ಲಿ 'ನಾಗರಿಕರು' ಎನ್ನುವ ಪದವನ್ನು ಬಳಸಲಾಗಿದೆ. ನಾಗರಿಕ ಸಮಾಜದಲ್ಲಿ ಬದುಕುವ ಇಲ್ಲವೇ ಸಂಪರ್ಕ ಇಟ್ಟುಕೊಂಡ ಕೆಳಜಾತಿ, ಕೆಳವರ್ಗ, ಆದಿವಾಸಿ, ಬುಡಕಟ್ಟು ಸಮುದಾಯಗಳು ಆಳುವ ವರ್ಗದ ಪಿತೃ ಪ್ರಧಾನ ಮೌಲ್ಯಗಳ ಜೊತೆಗೆ ಸಂಪೂರ್ಣ ರಾಜಿ ಮಾಡಿಕೊಂಡಿದೆಯೇ ಎನ್ನುವುದನ್ನು ತಳಸಮುದಾಯಗಳಲ್ಲಿನ ಮಹಿಳಾ ಕೇಂದ್ರಿತವಾದ ಕೆಲವು ಸಂಪ್ರದಾಯ ಆಚರಣೆಗಳನ್ನಿಟ್ಟುಕೊಂಡು ಚರ್ಚಿಸಲಾಗಿದೆ.

ಹಸಲರು, ಗೌಳಿಗರು, ಸೋಲಿಗರು, ಕಾಡುಕುರುಬರು, ಜೇನು ಕುರುಬರು, ಮ್ಯಾಸಬೇಡರು, ಕಾಡುಗೊಲ್ಲರು, ಮೊದಲಾದ ಸಮುದಾಯಗಳು ಋತುಮತಿಯಾದ ಹೆಣ್ಣನ್ನು ಮೈಲಿಗೆ ಎಂದು ಪರಿಗಣಿಸುತ್ತವೆ. ಇವರಲ್ಲಿ ಮೈನೆರೆದ ಹೆಣ್ಣಿಗಾಗಿ ಮೈಲಿಗೆ ಗುಡಿಸಲುಗಳನ್ನು ಕಟ್ಟುವರು. ಕಾಡು ಕುರುಬರು ಮೈನೆರೆದ ಮೈಲಿಗೆಗೆ ಕನ್ನೆ ಸೂತಕ ಎಂದು ಹೇಳುವರು. (ವಿವರಣೆಗೆ ಗಮನಿಸಿ : ಗಂಗಾಧರ ದೈವಜ್ಞ, ೨೦೦೦, ೪೩-೫೩).

'ಮ್ಯಾಸ ಬೇಡರಲ್ಲಿ ಹೆಣ್ಣು ಗರ್ಭಿಣಿಯಾಗಿ ಮಗುವಿನ ಜನನದವರೆಗೆ ಮೈಲಿಗೆ ಇರುತ್ತದೆ ಎಂಬ ಕಲ್ಪನೆ ಇವರಲ್ಲಿದೆ... ಗೌಳಿಗರಲ್ಲಿ ಹೆರಿಗೆ ನಂತರ ಗರ್ಭಿಣಿ ಮತ್ತು ಮಗುವನ್ನು ಯಾರೂ ಮುಟ್ಟುವಂತಿಲ್ಲ. ಕಾಡು ಕುರುಬರಲ್ಲಿ ಮಗು ಜನಿಸಿದ ಏಳು ಅಥವಾ ಒಂಬತ್ತು ದಿನಗಳವರೆಗೆ ಮೈಲಿಗೆ ಆಚರಿಸುವ ಸಂಪ್ರದಾಯವಿದೆ' (ಗಂಗಾಧರ ದೈವಜ್ಞ, ೨೦೦೦, ೩೧-೩೯). ತಳ ಸಮುದಾಯಗಳು ಹೆಣ್ಣು ಸಂತಾನವನ್ನು ನಿಕೃಷ್ಟವಾಗಿ ಕಂಡದ್ದೇ ಹೆಚ್ಚು. ಗಂಡು ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡು ಹೇಳಿದ ಲಾಲಿ ಹಾಡುಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಹೆಣ್ಣು ಜನನವನ್ನು ಸ್ವಾಗತಿಸಿದ ಉದಾಹರಣೆಗಳು ತೀರ ಅಪರೂಪವಾಗಿ ತ್ರಿಪದಿಗಳಲ್ಲಿ ದೊರೆಯುತ್ತವೆ. ಹಸಲರಲ್ಲಿಯಂತೆ ಬಹುಪಾಲು ಬುಡಕಟ್ಟು, ಶೂದ್ರ, ದಲಿತ, ಆದಿವಾಸಿ ಸಮುದಾಯಗಳಲ್ಲಿ ಗಂಡು ಸಂತಾನಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಹೀಗೆ ತಳಸಮುದಾಯಗಳಲ್ಲೂ ಹೆಣ್ಣಿನ ಜನನವನ್ನು ಹಾಗೂ ಜೈವಿಕ ಕ್ರಿಯೆಗಳನ್ನು ಪಿತೃಕೇಂದ್ರಿತ ದೃಷ್ಟಿಕೋನದಿಂದಲೇ ಅರ್ಥೈಸಲಾಗಿದೆ.

ವೈದಿಕರಲ್ಲಿಯಂತೆ ತಳ ಸಮುದಾಯದಲ್ಲೂ ಮೈನೆರೆಯುವುದು, ಮುಟ್ಟು, ಗರ್ಭಧರಿಸುವುದು, ಹೆರುವುದು ಈ ಎಲ್ಲಾ ನೈಸರ್ಗಿಕ ಪ್ರಕ್ರಿಯೆಗಳನ್ನು ಮೈಲಿಗೆಯಾಗಿಯೆ ಪರಿಗಣಿಸಲಾಗಿದೆ. ಅತ್ಯಂತ ಪ್ರಭಾವಶಾಲಿಯಾದ ವೈದಿಕ ಧರ್ಮವು ಅಧಿಕಾರ ಸ್ಥಾನದಲ್ಲಿದ್ದುದರಿಂದ ಅದು ತನ್ನ ಹಕ್ಕಿನ ವ್ಯಾಪ್ತಿಯೊಳಗೆ ಬರುವ ತಳ ಸಮುದಾಯಗಳ ಸಮಗ್ರ ಪ್ರಜ್ಞೆಯ ಮೇಲೆ ಪ್ರಭಾವ ಬೀರಿರಬೇಕು. ಮನುಷ್ಯರು ಯಾವಾಗಲೂ ಮೇಲ್ಮುಖವಾಗಿ ಚಲಿಸಲು ಬಯಸುವರು. ತಾನೇ ಶ್ರೇಷ್ಠ ಮತ್ತು ಆತ್ಯಂತಿಕ ಎಂದು ಪ್ರತಿಪಾದಿಸುತ್ತ ಬಂದ ವೈದಿಕ ಧರ್ಮದಲ್ಲಿನ ಮೌಲ್ಯಗಳು ತಳಸಮುದಾಯಗಳಿಗೆ ಶ್ರೇಷ್ಠವಾಗಿ ಕಂಡಿರಬೇಕು. ಅವರಂತೆ ತಾವೂ ಆಗಲು ಆಶಿಸಿರಬೇಕು. ಈ ಹಿನ್ನೆಲೆಯಲ್ಲಿ ವೈದಿಕದಲ್ಲಿರುವ ಪುರುಷ ಕೇಂದ್ರಿತವಾದ ಸಂಪ್ರದಾಯ ಆಚರಣೆಗಳನ್ನು ತಳ ಸಮುದಾಯಗಳು ಶ್ರೇಷ್ಠವೆಂದು ಪರಿಗಣಿಸಿ ರೂಢಿಸಿಕೊಂಡಿರಬೇಕು. ಹಾಗಂತ ಅವೈದಿಕರಲ್ಲಿನ ಮೌಲ್ಯಗಳು ಮಹಿಳಾ

ಇಂದಿನ ಆಧುನಿಕ ಸಂದರ್ಭದಲ್ಲಿ ವೈದಿಕ ಪಿತೃ ಪ್ರಧಾನ ಮೌಲ್ಯಗಳು ಪಡೆದುಕೊಂಡ ಸ್ವರೂಪ ಹಾಗೂ ಅವು ತಳ ಸಮುದಾಯದ ಮಹಿಳೆಯ ಮೇಲೆ ಬೀರಿದ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಕೆಲವು ಘಟನೆಗಳನ್ನು ಹಾಗೂ ವಿಷಯಗಳನ್ನು ಆಕರವಾಗಿಟ್ಟುಕೊಂಡು ಅವುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ನಿಷ್ಠವಾಗಿದ್ದವು ಎಂದಾಗಲಿ ಅಥವಾ ಅವುಗಳು ಲಿಂಗ ನಿರಪೇಕ್ಷವಾಗಿದ್ದವು ಎಂದಾಗಲಿ ಹೇಳಲಾಗುವುದಿಲ್ಲ. ಅವೈದಿಕರಲ್ಲಿಯೂ ಪುರುಷ ಪ್ರಧಾನ ಮೌಲ್ಯಗಳಿದ್ದವು. ಈಗಲೂ ಇವೆ. ಅವೈದಿಕರಲ್ಲಿನ ಪುರುಷ ಪ್ರಧಾನ ಮೌಲ್ಯಗಳ ಜೊತೆಗೆ ಪುರೋಹಿತಶಾಹಿಯ ಪಿತೃಪ್ರಧಾನ ಮೌಲ್ಯಗಳು ಸೇರಿಕೊಂಡು, ಅವೈದಿಕ ಮಹಿಳೆಯರ ಸ್ಥಾನಮಾನಗಳನ್ನು ಮತ್ತಷ್ಟೂ ಕನಿಷ್ಠಗೊಳಿಸಿರಬೇಕು.

ವಡ್ಡರಗೆರೆ ತಿಮ್ಮವ್ವ, ಈರೋಬಿ, ನಾಗವ್ವ ಮೊದಲಾದ ನೂರಾರು ಸತಿಗೀತೆಗಳು ಮಹಿಳೆಯರು ಸತಿ ಹೋದ ಸಂಗತಿಯನ್ನು ಹೇಳುತ್ತವೆ. ಮಹಿಳೆಯ ಮೇಲೆ- ಆಕೆ ಅವೈದಿಕ ಮಹಿಳೆಯಾಗಿರಬಹುದು, ವೈದಿಕ ಮಹಿಳೆಯಾಗಿರ ಬಹುದು- ಹೇರಲಾಗಿರುವ ಪಿತೃಪ್ರಧಾನ ಮೌಲ್ಯಗಳ ಒತ್ತಡ ಗಳು ಸ್ತ್ರೀಯರಿಗಿರಬಹುದಾದ ಸಾಮಾನ್ಯ ಅಪೇಕ್ಷೆ ಹಾಗೂ ಕನಸುಗಳನ್ನು ಕೊಲ್ಲುತ್ತವೆ. ಗಂಡನನ್ನು ಕಳೆದುಕೊಂಡ ಹೆಣ್ಣು ಚಿತೆ ಏರಬೇಕು ಇಲ್ಲವೆ ಜೀವನ ಪರ್ಯಂತ ಒಂಟಿಯಾಗಿ ಹಾಗೂ ಅಲಂಕಾರ ವರ್ಜಿತಳಾಗಿ ಬದುಕಬೇಕು.

ವೈಧವ್ಯದ ಹೆಸರಿನಲ್ಲಿ ನಡೆಯುವ ಈ ಆಚರಣೆಗಳು ಮೂಲಭೂತವಾಗಿ ತಳ ಸಮುದಾಯಗಳ ಅಪೇಕ್ಷೆ ಅಲ್ಲ ಎನ್ನುವುದು ನನ್ನ ಊಹೆ. ಸತಿ ಗೀತೆಗಳನ್ನು ಆಕಾರವಾಗಿಟ್ಟು ಕೊಂಡು ಇದನ್ನು ವಿಶ್ಲೇಷಿಸಲಾಗಿದೆ. 'ಬಾಳು ತಪ್ಪಿದೋರಿಲ್ಲವೆ ಬಾಲನಾದರು ಇಲ್ಲವೆ' (ದೇವೇಂದ್ರಕುಮಾರ ಹಕಾರೆ, ೧೯೮೫ ಪುಟ. ೨೪೧) ಎಂದು ಈರೋಬಿಯ ತಂದೆ ಹಾಗೂ ಅಣ್ಣ ಆಕೆಯನ್ನು ವ್ಯಕ್ತಪಡಿಸಿದ ನಿಂಗೇಗೌಡನ ನಿಲುವು ಗಮನಾರ್ಹವಾದುದು. ಕೊಂಡವೇರುವ ನಾಗವ್ವನಿಗೆ ಆಕೆಯ ತಾಯಿ ಹಾಗೂ ಅಕ್ಕ 'ನೂರು ಕೊಟ್ಟೇನು ಇರು ಮಗಳೆ', 'ಹೊನ್ನು ಕೊಟ್ಟೇನು ಇರು ಮಗಳೆ' (ಪರಮಶಿವಯ್ಯ ಜೀ.ಶಂ.(ಸಂ) ೧೯೭೬. ಪು. ೩೫) ಎಂದು ಹೇಳಿ ಆಕೆ ಕಿಚ್ಚಿಗೆ ಹೋಗುವುದನ್ನು ತಡೆಯಲು ಪ್ರಯತ್ನಿಸುತ್ತಾರೆ. 'ಆಕಾಶದುದ್ದಕ ಉರಿ ಏಳತಾವೆ ನಾನ್ಹೆಂಗೆ ಹೋಗಲೊ ಶಿವಶಿವನೆ, ಏ ಶಿವನೆ ಗಂಡನ ಪ್ರಾಣ ತೆಗೆವಯ್ಯಾ' ಎಂದು ಸತಿ ಹೋಗಲಿಕ್ಕೆ ಹಿಂಜರಿದ ತಾಡಿ

ನಾಗಮ್ಮನ ಅಂತರಾತ್ಮದ ಮಾತುಗಳು ವೈಧವ್ಯ ಪದ್ಧತಿಯನ್ನು ಪರೋಕ್ಷವಾಗಿ ತಿರಸ್ಕರಿಸುತ್ತವೆ. ಸತಿಗೀತೆಗಳಲ್ಲಿ ಇಂಥ ಸನ್ನಿವೇಶಗಳು ಹೇರಳವಾಗಿ ದೊರೆಯುತ್ತವೆ.

ಈ ಬಗೆಯ ಪುರುಷ ಧ್ವನಿಗಳು ಹಾಗೂ ಮಹಿಳಾ ಧ್ವನಿಗಳು ತಳಸಮುದಾಯದ ಸಮಾಜದಲ್ಲಿ ವೈಧವ್ಯ ಪದ್ಧತಿ ಮೂಲದಲ್ಲಿ ಇರದೇ ಇರುವ ಸಂಗತಿಯನ್ನು ಧ್ವನಿಸುತ್ತವೆ ಯೇನೋ! ತಳಸಮುದಾಯದಲ್ಲಿ ಮಹಿಳೆಗಿದ್ದ ಮರು ವಿವಾಹದ ಅವಕಾಶವು ವೈದಿಕ ಸಂಸ್ಕೃತಿಯ ಪ್ರಭಾವದಿಂದಾಗಿ ಅದು 'ಕೂಡಿಕೆ'ಯಾಗಿ ಪರಿವರ್ತನೆಗೊಂಡಿರಬೇಕು. ವೈದಿಕರಲ್ಲಿ ವಿಧವೆಗೆ ಕೂಡಿಕೆಯಾಗುವ ಅವಕಾಶ ಇಲ್ಲ ಎನ್ನುವುದನ್ನು ಗಮನಿಸಬೇಕು. ತಳ ಸಮುದಾಯದ ಹೆಣ್ಣಿಗಿದ್ದ ಮರು ವಿವಾಹದ ಅವಕಾಶವು ವೈದಿಕ ಸಂಸ್ಕೃತಿಯ ದಾಳಿಯಿಂದಾಗಿ 'ಕೂಡಿಕೆ'ಯಾಗಿ ವಿಕಾರಗೊಂಡಿರಬೇಕು. ಮೊದಲ ವಿವಾಹದ ಮಹಿಳೆಗಿರುವ ಸಾಮಾಜಿಕ ಹಾಗೂ ಕೌಟುಂಬಿಕ ಸ್ಥಾನಮಾನಗಳು ಕೂಡಿಕೆಯಾದವಳಿಗೆ ದೊರೆಯುವುದಿಲ್ಲ.

ಆದ್ದರಿಂದ ಆಕೆಯು ಸತಿ ಹೋಗಲು, ಇಲ್ಲವೆ, ಜೀವನ ಪರ್ಯಂತ ವಿಧವೆಯಾಗಿಯೇ ಇರಲು ನಿರ್ಧರಿಸುವಳು. ತಳ ಸಮುದಾಯಗಳಲ್ಲೂ ಗಂಡ ಸತ್ತ ಹೆಣ್ಣು ಕುಂಕುಮ, ಹೂ, ಬಳೆ ತೆಗೆದು ಅಲೌಕಿಕ ಬದುಕಿಗೆ ಮುಖ ಮಾಡಿಕೊಂಡು ಬದುಕುವಳು. ಇಂಥವಳನ್ನು 'ನೀತಿವಂಥಳು', 'ಗರತಿ' ಎಂದು ಗುರುತಿಸುವರು. ಈ ಹುಸಿ ಮೌಲ್ಯ ಮಾಪನದಲ್ಲಿ ಹೆಣ್ಣಿನ ಒಳಗುದಿಗಳು ಒಳಗೊಳಗೆ ಕುದ್ದು ಆವಿಯಾಗಿ ಹೋಗಿ ಬಿಡುತ್ತವೆ. ಮಹಿಳೆಯ ಅತ್ಯಂತ ಖಾಸಗಿ ಬದುಕಿನಿಂದ ದೂರ ನಿಂತು ನೋಡಿದಾಗ ಅವಳೊಳಗಿನ ಭಾವನೆಗಳು, ತುಡಿತಗಳು ಅರ್ಥವಾಗುವುದೇ ಇಲ್ಲ. ಪರಕಾಯ ಪ್ರವೇಶ ಮಾಡಿದಾಗ ಮಾತ್ರ ಹೆಣ್ಣಿನ ಒಳಗಿನ ಹೊಯ್ದಾಟಗಳನ್ನು ಅರ್ಥೈಸಲು ಸಾಧ್ಯವಾಗುತ್ತವೆ. ವೈದಿಕ ಧರ್ಮದ ಸಾಂಸ್ಕೃತಿಕ ಪ್ರಭಾವಕ್ಕೆ ಒಳಗಾದ ತಳ ಸಮುದಾಯಗಳು ಅವರು ಕಟ್ಟಿಕೊಟ್ಟ ಮೌಲ್ಯಗಳನ್ನು ತಮಗೆ ತಾವೇ ಆರೋಪಿಸಿಕೊಳ್ಳುತ್ತವೆ, ಅನುಕರಿಸುತ್ತವೆ. ಹೀಗೆ ಆರೋಪಿಸಿಕೊಂಡು ಅನುಸರಿಸುವ ಮೂಲಕ ಅವುಗಳಿಗೆ ಮಾನ್ಯತೆಯನ್ನು ಕಲ್ಪಿಸುತ್ತವೆ.

ಆಧುನಿಕತೆ: ವೈದಿಕತೆ : ಅವೈದಿಕ ಮಹಿಳೆ

ಇಂದಿನ ಆಧುನಿಕ ಸಂದರ್ಭದಲ್ಲಿ ವೈದಿಕ ಪಿತೃ ಪ್ರಧಾನ ಮೌಲ್ಯಗಳು ಪಡೆದುಕೊಂಡ ಸ್ವರೂಪ ಹಾಗೂ ಅವು ತಳ ಸಮುದಾಯದ ಮಹಿಳೆಯ ಮೇಲೆ ಬೀರಿದ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಕೆಲವು ಘಟನೆ ಗಳನ್ನು ಹಾಗೂ ವಿಷಯಗಳನ್ನು ಆಕರವಾಗಿಟ್ಟುಕೊಂಡು ಅವುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಕೆಳವರ್ಗದವರು, ಕೆಳ ಜಾತಿಯವರು, ಆದಿವಾಸಿಗಳು, ಬುಡಕಟ್ಟಿನವರು ಮೊದಲಾ ದವರಿಗೆ ಚರಿತ್ರೆಯ ಉದ್ದಕ್ಕೂ ಕನಸಾಗಿದ್ದ ಶಿಕ್ಷಣ, ನೌಕರಿ, ರಾಜಕೀಯದಂತ ಕ್ಷೇತ್ರಗಳು ಇಂದು ಅವರಿಗೆ ಸುಲಭವಾಗಿ ಕೈಗೆಟುಕುವಂತಾಗಿವೆ. ತಳ ಸಮುದಾಯದ ಪುರುಷರ ಜೊತೆ ಸ್ತ್ರೀಯರೂ ಇತ್ತೀಚೆಗೆ ಶಿಕ್ಷಣ, ನೌಕರಿ ರಾಜಕೀಯದಂತಹ ಕ್ಷೇತ್ರಗಳಿಗೆ ಪ್ರವೇಶಿಸುತ್ತಿದ್ದಾರೆ. ಆದರೆ ಇಂತಹವರ ಸಂಖ್ಯೆ ತಳಸಮುದಾಯದ ಪುರುಷರಿಗೆ ಹೋಲಿಸಿದಾಗ ಬಹಳ ಕಡಿಮೆ. ದೌರ್ಜನ್ಯಕ್ಕೊಳಗಾದ ಸಮುದಾಯಗಳ ಹೊರಗೆ ನಿಂತು ನೋಡಿದಾಗ ಆಧುನಿಕತೆಯು ಅವರ ಬದುಕಿಗೆ ಸಕಾರಾತ್ಮಕವಾಗಿ ಸ್ಪಂದಿಸಿದೆ ಎನಿಸುತ್ತದೆ. ಇದು ಆಧುನಿಕ ಸಾಮಾಜಿಕ ಬದುಕಿನ ವಿಸ್ತರಣೆಯಾಗಿ ಕಾಣಿಸಿಕೊಳ್ಳುತ್ತದೆ.

ಜಾತಿ ಮತ್ತು ಲಿಂಗ ರಾಜಕಾರಣದಿಂದಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತ ಶಿಕ್ಷಣ, ನೌಕರಿ, ರಾಜಕೀಯ ಮೊದಲಾದ ರಂಗಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಮಹಿಳೆ ಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಒಂದು ಘಟನೆಯ ಮೂಲಕ ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

ಹೂವಿನ ಹಡಗಲಿಯ ಪದವಿಪೂರ್ವ ಕಾಲೇಜಿನ ಉಪನ್ಯಾಸಕಿಯಾಗಿ ಆಯ್ಕೆಯಾಗಿದ್ದ ದಲಿತ ಮಹಿಳೆಗೆ ಜಾತಿ ರಾಜಕಾರಣದಿಂದಾಗಿಯೇ ಸುರಕ್ಷಿತವಾದ ಜಾಗದಲ್ಲಿ ಬಾಡಿಗೆ ಮನೆ ಸಿಗಲಿಲ್ಲ. ಗಂಡಸಿಗೆ ಸುರಕ್ಷತೆಯ ಪ್ರಶ್ನೆ ಅಷ್ಟಾಗಿ ಕಾಡುವುದಿಲ್ಲ. ಏಕೆಂದರೆ ಪುರುಷ ಹಿತಾಸಕ್ತಿಗಳನ್ನು ಕೇಂದ್ರ ವಾಗಿಟ್ಟುಕೊಂಡು ಹೆಣೆದ ಮೌಲ್ಯಗಳು ಆತನನ್ನು ಸಂರಕ್ಷಿಸು ತ್ತವೆ. ಶೀಲ, ಪಾವಿತ್ರತೆಯಂತಹ ನೈತಿಕ ಮೌಲ್ಯಗಳು ಪುರುಷ ನಿಗೆ ಅನ್ವಯಿಸುವುದಿಲ್ಲ. ಪಿತೃ ಪ್ರಧಾನ ಮೌಲ್ಯಗಳು ಪುರುಷ ನನ್ನು ಸಾಮಾಜಿಕ ಟೀಕೆ ತಿರಸ್ಕಾರಗಳಿಂದ ಸಂರಕ್ಷಿಸಿದರೆ, ಆತನ ದೈಹಿಕ ರಚನೆಯು ಇಂದ್ರಿಯ ಭೋಗದಿಂದುಂಟಾಗುವ ಪರಿಣಾಮಗಳಿಗೆ ಬಾಧ್ಯಸ್ಥನಾಗದಂತೆ ನೋಡಿಕೊಳ್ಳುತ್ತದೆ. ಹೀಗಾಗಿ ಆತನಿಗೆ ಎಲ್ಲೋ ಒಂದೆಡೆ ಸ್ಥಳ ಸಿಕ್ಕಿದರೆ ಸಾಕು ಅಲ್ಲಿರುತ್ತಾನೆ. ಆದರೆ ಮಹಿಳಾ ಬದುಕಿನ ಸಂದರ್ಭದಲ್ಲಿ ಹಾಗಾಗುವುದಿಲ್ಲ. ಶೀಲ, ಪಾತಿವ್ರತ್ಯ, ಯೋನಿಶುಚಿತ್ವ ದಂತಹ ಮೌಲ್ಯಗಳು ಹೆಂಗಸಿನ ಸುತ್ತ ಹೆಣೆಯಲ್ಪಟ್ಟಿವೆ. ಹೆಣ್ಣು ಪುರುಷ ಪ್ರಧಾನ ಸಮಾಜದಲ್ಲಿ ಗೌರವದಿಂದ ಬದುಕ ಬೇಕಾದರೆ ಈ ಮೌಲ್ಯಗಳನ್ನು ಅವಳು ಪಾಲಿಸಬೇಕು. ಇಲ್ಲದೆ ಹೋದರೆ ನಿತ್ಯ ಅಪಮಾನವನ್ನು ಎದುರಿಸುತ್ತ ಎಲ್ಲರಿಂದ ಲೈಂಗಿಕ ದೌರ್ಜನ್ಯಗಳಿಗೆ ಬಲಿಯಾಗಬೇಕಾಗುತ್ತದೆ.

ಹೆಣ್ಣಿನ ದೈಹಿಕ ಸಂರಚನೆಯು ಭಿನ್ನವಾಗಿದೆ. ವಿವಾಹ ಪೂರ್ವದಲ್ಲಿ ಇಂದ್ರಿಯ ಭೋಗಕ್ಕೆ ಒಳಗಾದರೆ- ಅದು ಸ್ವ ಇಚ್ಛೆಯಿಂದಾಗಿರಬಹುದು, ಪರಿಸ್ಥಿತಿಯ ಒತ್ತಡದಿಂದಾಗಿರ ಬಹುದು- ಅದರಿಂದ ಉಂಟಾಗುವ ಪರಿಣಾಮಗಳಿಗೆ ಅವಳೇ ಹೊಣೆಗಾರಳಾಗಬೇಕಾಗುತ್ತದೆ. ಅದಕ್ಕಾಗಿ ಉದ್ಯೋಗಸ್ಥ ಮಹಿಳೆಗೆ ಸಂಬಂಧಿಗಳಿಲ್ಲದ ದೂರದ ಊರಿನಲ್ಲಿ ಯಾವುದೇ

ಆತಂಕವಿಲ್ಲದೆ ಇರಲು ಸುರಕ್ಷಿತ ತಾಣದ ಅಗತ್ಯವಿದೆ. ಹೆಚ್ಚು ಕಡಿಮೆ ಹದಿನೈದು ದಿನಗಳವರೆಗೆ ಮನೆಗಾಗಿ ಅಲೆದು ಸುಸ್ತಾಗಿ ಸಿಕ್ಕ ನೌಕರಿಯನ್ನು ಬಿಟ್ಟುಬಿಡುವಷ್ಟು ಆಕೆ ಜರ್ಝರಿತವಾಗಿದ್ದಳು. ವಿಷಯ ಗೊತ್ತಾದಾಗ ನಾನು ಬಾಡಿಗೆಗಿದ್ದ ಚಿಕ್ಕ ರೂಮಿನಲ್ಲಿಯೇ ಅವಳನ್ನು ಕರೆದುಕೊಂಡೆ. ನನ್ನ ಜೊತೆ ಇದ್ದು ಸತತ ನಾಲ್ಕು ತಿಂಗಳವರೆಗೆ ಊರೆಲ್ಲಾ ಸುತ್ತಿದರೂ ಅವಳಿಗೆ ಮನೆ ಸಿಕ್ಕಲಿಲ್ಲ. ಜಾತಿ ಕಾರಣದಿಂದಾಗಿಯೇ ಸುಲಭವಾಗಿ ಬಾಡಿಗೆ ಮನೆ ದೊರೆಯುವ ಅವಕಾಶವಿದ್ದ ನಾನೇ ಬೇರೆ ಕಡೆ ಮನೆ ನೋಡಿಕೊಳ್ಳುವುದು ಅನಿವಾರ್ಯವಾಯಿತು.

ಅವಳು ತನ್ನದಲ್ಲದ ಶಿಷ್ಟಭಾಷೆಯನ್ನು ರೂಢಿಸಿಕೊಂಡಿದ್ದಳು. ತನ್ನ ನುಡಿಗಟ್ಟುಗಳಲ್ಲಿ ಮಾತನಾಡಿದರೆ ಕೆಳಜಾತಿಯವರೆಂದು ಗುರುತಿಸುತ್ತಾರೆ ಎನ್ನುವ ಆತಂಕದಲ್ಲಿ ಅವಳು ಸದಾ ಹೊಯ್ದಾಡುತ್ತಿದ್ದಳು. ಜಾತಿ ಗೊತ್ತಾದರೆ ಲೈಂಗಿಕ ಕಿರುಕುಳದಂತಹ ಭೀಕರ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ ಎಂದು ಅಳಲನ್ನು ಬಹಳ ಸೂಕ್ಷ್ಮವಾಗಿ ತೋಡಿಕೊಂಡಿದ್ದಳು. ಮೇಲ್ಜಾತಿಯ ಮಹಿಳೆಯರು ಅನುಸರಿಸುವ ಪುರುಷ ನಿಷ್ಠ ಸಂಪ್ರದಾಯ ಆಚರಣೆಗಳನ್ನು-ವರಮಹಾಲಕ್ಷ್ಮೀ ವ್ರತ, ಗೌರಿ ವ್ರತ-ಅನುಸರಿಸುವ ಮೂಲಕ ತಾನು ತನ್ನ ಜಾತಿಯ ಶಾಪದಿಂದ ಬಿಡಿಸಿಕೊಂಡಿದ್ದೇನೆಂಬ ಭ್ರಮೆಯಲ್ಲಿ ತೇಲಾಡುತ್ತಿದ್ದಳು. ತಾನು ಪರಿಶುದ್ಧಳು ಎಂದು ತೋರಿಸಿಕೊಳ್ಳುವುದಕ್ಕೆ ಕಾಲೇಜು ಬಿಟ್ಟು ಮನೆಗೆ ಸೇರಿದ ನಂತರ ಹೊರಗಡೆ ಕಾಣಿಸಿಕೊಳ್ಳುತ್ತಿರಲಿಲ್ಲ. ಮೇಲ್ಜಾತಿ ಗೃಹಿಣಿಯರಂತೆ ಪೂಜೆ, ವ್ರತ ಎನ್ನುತ್ತ ಸದಾ ಗೃಹ ಬಂಧನದಲ್ಲಿರುತ್ತಿದ್ದಳು.

ಈ ಬಂಧನವನ್ನು ಅವಳು ತನ್ನ ಮೇಲೆ ತಾನೇ ಹೇರಿಕೊಂಡಂತೆ ಮೇಲ್ನೋಟಕ್ಕೆ ಕಾಣಿಸುತ್ತದೆ. ಅವೈದಿಕ ಮಹಿಳೆಯರು ವೈದಿಕವು ನಿರ್ವಚಿಸಿದ 'ಸುಸಂಸ್ಕೃತ ಮಹಿಳೆ' ವ್ಯಾಖ್ಯಾನವನ್ನು ಬಹಳ ನಿಷ್ಠೆಯಿಂದ ಅನುಸರಿಸುತ್ತಾರೆ. ಹೀಗೆ ಅನುಸರಿಸುವುದರಿಂದ ಸಮಾಜದಲ್ಲಿ ಮೇಲ್ಜಾತಿ ಮಹಿಳೆಯರಂತೆ ಸುರಕ್ಷಿತವಾಗಿ, ಗೌರವಯುತವಾಗಿ ಬದುಕಬಹುದು ಎನ್ನುವುದು ಅವರ ಮನದಾಳದ ಆಶಯ. ಹೀಗೆ ಸಾಮಾಜಿಕ ವಲಯದಲ್ಲಿ ದೊರೆಯುವ ಆಕರಗಳು ತೀರ ದುರ್ಬಲವಾದ ಎಳೆಗಳಾಗಿ ಕಾಣಿಸಿಕೊಳ್ಳುತ್ತವೆ. ಇದನ್ನು ನಿರೂಪಿಸಲು ಸಾಕ್ಷ್ಯಾಧಾರಗಳು ದೊರೆಯುವುದಿಲ್ಲ.

ಆದರೆ ಸಂಸ್ಕೃತಿಯ ಆಳದೊಳಗೆ ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ, ಸದ್ದು ಗದ್ದಲವಿಲ್ಲದೆ ಅವೈದಿಕ ಮಹಿಳೆಯರ ಮೇಲೆ ವೈದಿಕ ಮೌಲ್ಯಗಳು ದೌರ್ಜನ್ಯ ನಡೆಸುತ್ತಿರುತ್ತವೆ. ಇಂತಹ ಸಂಗತಿಗಳನ್ನು ಸಾಮಾಜಿಕ ಸಮಸ್ಯೆಗಳನ್ನಾಗಿ ಪರಿಗಣಿಸದೆ ವ್ಯಕ್ತಿಗತ ನೆಲೆಯಲ್ಲಿ ನೋಡಲಾಗುತ್ತದೆ. ಎಲ್ಲಿಯವರೆಗೆ ಈ ಸಮಸ್ಯೆಗಳು ಸಾಮಾಜಿಕ ಸ್ವರೂಪವನ್ನು ಪಡೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ತಳಸಮುದಾಯಗಳ ಮಹಿಳೆಯರ ಮೇಲಿನ ಶೋಷಣೆ ನಿರಾತಂಕವಾಗಿ ಮುಂದುವರೆಯುತ್ತದೆ.

ಸದಾ ಅವಮಾನಕ್ಕೆ ಹಾಗೂ ಕೀಳರಿಮೆಗೆ, ಬಲಿಯಾದ ತಳಸಮುದಾಯದ ಮಹಿಳೆಯರು ವೈದಿಕತೆಯು **ಕಟ್ಟಿಕೊಟ್ಟ** ಮಹಿಳಾ ನಿರ್ವಚನವನ್ನು ಶ್ರೇಷ್ಠತೆಯ ಕಲ್ಪನೆಯಲ್ಲಿ ರೂಢಿಸಿ ಕೊಳ್ಳುತ್ತಾರೆ. ಈ ಬಗೆಯ ಕೀಳರಿಮೆ ದಲಿತ ಪುರುಷನನ್ನು ಕಾಡಿದೆಯೆ ಎನ್ನುವುದನ್ನು ನೋಡುವ ಅಗತ್ಯವಿದೆ. ದಲಿತ ಚಳವಳಿಗೆ ಮುಖಾ-ಮುಖಿಯಾದ ತಳ ಸಮುದಾಯದ ಪುರುಷರಿಗೆ ಸಾಮಾಜಿಕ ಬದ್ಧತೆ, ರಾಜಕೀಯ ತಿಳುವಳಿಕೆ ಇರುತ್ತದೆ. ಹೀಗಾಗಿ ಅವರು ಕೃತಕವಾದ ನಡೆ-ನುಡಿ ಹಾಗೂ ಜೀವನ ವಿಧಾನಗಳನ್ನು ಸಾಮಾನ್ಯವಾಗಿ ರೂಢಿಸಿಕೊಂಡಿರುವುದಿಲ್ಲ. ಪ್ರಜ್ಞಾವಂತ ದಲಿತ ಪುರುಷರು, ತಮ್ಮ ಶೋಷಿತ ಸಾಂಸ್ಕೃತಿಕ ಚಹರೆಯನ್ನು ಪ್ರಶ್ನಿಸುತ್ತಾರೆ. ಆದರೆ ಅವರೆಂದೂ ತಮ್ಮ ಭಾಷೆಯನ್ನು ಹಾಗೂ ಇತರರಿಗೆ ಮಾದರಿಯಾಗುವಂತಹ ಜೀವನ ವಿಧಾನಗಳನ್ನು ಬಿಟ್ಟುಕೊಡುವುದಿಲ್ಲ. ಬದಲು ಅವುಗಳಿಗೆ ಶಕ್ತಿ ತುಂಬುತ್ತಾರೆ. ಇದಕ್ಕೆ ಕಾರಣ ತಳ ಸಮುದಾಯದ ಪುರುಷರು ಸಂಘಟನೆಗಳನ್ನು ಕಟ್ಟಿಕೊಂಡು ಸಮಗ್ರ ಸಾಮಾಜಿಕ ಹಾಗೂ ರಾಜಕೀಯ ಸಂಗತಿಗಳಿಗೆ ಮುಖಾಮುಖಿಯಾಗಿರುವುದು.



ಸಂಸ್ಕೃತಿಯ ಆಳದೊಳಗೆ ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ, ಸದ್ದು ಗದ್ದಲವಿಲ್ಲದೆ ಅವೈದಿಕ ಮಹಿಳೆಯರ ಮೇಲೆ ವೈದಿಕ ಮೌಲ್ಯಗಳು ದೌರ್ಜನ್ಯ ನಡೆಸುತ್ತಿರುತ್ತವೆ. ಇಂತಹ ಸಂಗತಿಗಳನ್ನು ಸಾಮಾಜಿಕ ಸಮಸ್ಯೆಗಳನ್ನಾಗಿ ಪರಿಗಣಿಸದೆ ವ್ಯಕ್ತಿಗತ ನೆಲೆಯಲ್ಲಿ ನೋಡಲಾಗುತ್ತದೆ. ಎಲ್ಲಿಯವರೆಗೆ ಈ ಸಮಸ್ಯೆಗಳು ಸಾಮಾಜಿಕ ಸ್ವರೂಪವನ್ನು ಪಡೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ತಳಸಮುದಾಯಗಳ ಮಹಿಳೆಯರ ಮೇಲಿನ ಶೋಷಣೆ ನಿರಾತಂಕವಾಗಿ ಮುಂದುವರೆಯುತ್ತದೆ.

ಶಿಕ್ಷಣ, ನೌಕರಿ, ರಾಜಕೀಯ ಕ್ಷೇತ್ರಗಳಲ್ಲಿ ಬಹಳ ನಿಧಾನವಾಗಿ ಪ್ರವೇಶಿಸುತ್ತಿರುವ ತಳ ಸಮುದಾಯದ ಸ್ತ್ರೀಯರು ಸಂಖ್ಯಾದೃಷ್ಟಿಯಿಂದ ತೀರ ಕಡಿಮೆ. ಇವರು ಸಂಘಟನೆ ಕಟ್ಟಿಕೊಂಡು ಇಲ್ಲವೆ ಅಸ್ತಿತ್ವದಲ್ಲಿರುವ ಸಂಘಟನೆಗಳೊಂದಿಗೆ ಕೈ ಜೋಡಿಸಿಕೊಂಡು ಸಾಮಾಜಿಕ ಚಳವಳಿಗೆ ಧುಮುಕಿದ್ದು ಬಹಳ ವಿರಳ. ಇದಕ್ಕೆ ಕಾರಣ ಸಂಖ್ಯಾದೃಷ್ಟಿಯಿಂದ ಬಹಳ ಕಡಿಮೆ ಎನ್ನುವ ಭಾವನೆ ಇರಬಹುದು. ಜೊತೆಗೆ ಅನುಸರಿಸಬೇಕಾದ ಹಾಗೂ ಆದರ್ಶವಾಗಿಟ್ಟುಕೊಂಡ ವೈದಿಕ ಪಿತೃಪ್ರಧಾನ ಮೌಲ್ಯಗಳು ಮತ್ತು ಅವರ ಸಮುದಾಯದಲ್ಲಿನ ಪುರುಷ ಪ್ರಧಾನ ಮೌಲ್ಯಗಳು ತಳ ಸಮುದಾಯದ ಮಹಿಳೆಯರು ಸಾಮಾಜಿಕ ಚಹರೆ ಪಡೆಯದಂತೆ ನಿಯಂತ್ರಿಸುತ್ತಿರಬೇಕು.

ಜಾಗತಿಕ ಮಾರುಕಟ್ಟೆ: ವೈದಿಕತೆ: ಮಹಿಳೆ

ಯಾವುದೇ ಧರ್ಮದ ಮೌಲ್ಯಗಳು ಹಳೆಯ ಮಾದರಿಯಲ್ಲಿಯೇ ಉಳಿದುಕೊಂಡರೆ ಅವು ನಾಶವಾಗುತ್ತವೆ. ಚಾರಿತ್ರಿಕದೊತ್ತಡದಲ್ಲಿ ಅವುಗಳು ಆಯಾ ಕಾಲದ ಅಗತ್ಯಗಳಿಗೆ ತಕ್ಕಂತೆ ನವೀಕರಣಗೊಳ್ಳಬೇಕಾಗುತ್ತದೆ. ಜಾಗತಿಕ ಮಾರುಕಟ್ಟೆಯೊಂದಿಗೆ ವೈದಿಕ ಮೌಲ್ಯಗಳು ಇಟ್ಟುಕೊಂಡ ಸಂಬಂಧಗಳು ಮಹಿಳೆಯರ (ವೈದಿಕ-ಅವೈದಿಕ) ಮೇಲೆ ಎಂಥಹ ಪರಿಣಾಮಗಳನ್ನು ಬೀರಿವೆ ಎನ್ನುವುದನ್ನು ತಿಳಿದುಕೊಳ್ಳಲು 'ಸೌಂದರ್ಯ ಕೇಂದ್ರ'ಗಳ ಸಂರಚನೆಯನ್ನು ವಿಶ್ಲೇಷಿಸಲಾಗಿದೆ.

ಇಲ್ಲಿ ಮುಖ್ಯವಾಗಿ ಮೈಬಣ್ಣ ಬದಲಾಯಿಸುವ ಸೌಂದರ್ಯ ಕೇಂದ್ರಗಳ ಪ್ರಕ್ರಿಯೆ ಗಳನ್ನು ಚರ್ಚಿಸಲಾಗಿದೆ. ಸೌಂದರ್ಯ ಕೇಂದ್ರಗಳಲ್ಲಿ ಸಾದಕಪ್ಪು ಹೆಣ್ಣು ಮಕ್ಕಳನ್ನು ಮತ್ತಷ್ಟು ಬಿಳಿಯಾಗಿಸುವರು ಇಲ್ಲವೇ ಕೆಂಪಾಗಿಸುವರು, ಕಪ್ಪು ಸ್ತ್ರೀಯರನ್ನು ಸಾಧ್ಯವಾದಷ್ಟು ಬಿಳಿಯಾಗಿಸುವರು. ಸೌಂದರ್ಯ ಕೇಂದ್ರಗಳಲ್ಲಿ ನಡೆಯುವ ಈ ಪ್ರಕ್ರಿಯೆಯು ವೈದಿಕ ಮಾನದಂಡದ ಸೌಂದರ್ಯ ಪ್ರಜ್ಞೆಯನ್ನು ಹೇಳುತ್ತದೆ. ಅದಕ್ಕೆ ಹೆಚ್ಚಿನ ಪ್ರಚಾರವನ್ನು ನೀಡುತ್ತದೆ. ಇಲ್ಲಿ ಕಪ್ಪು ಮತ್ತು ಬಿಳುಪು ಬಣ್ಣ ಯಾವ ಯಾವ ಜಾತಿಯ ಮಹಿಳೆಯರನ್ನು ಪ್ರತಿನಿಧಿಸುತ್ತದೆ ಎಂದು ಬಿಚ್ಚಿ ಹೇಳಬೇಕಾಗಿಲ್ಲ.

ಹೀಗೆ ವೈದಿಕತೆಯು ತನ್ನ ಮೌಲ್ಯಗಳನ್ನು ರೂಪಾಂತರಗೊಳಿಸಿಕೊಂಡು ಬಂಡವಾಳಶಾಹಿ ಮಾರುಕಟ್ಟೆಯೊಂದಿಗೆ ಕೈ ಜೋಡಿಸಿದೆ. ನೂತನ ಮಾರುಕಟ್ಟೆಯ ಜೊತೆ ಯಾವುದೇ ಮೌಲ್ಯ ಸಂಬಂಧ ಹೊಂದದ ಹೊರತು ಯಾವುದೇ ಧರ್ಮದ ಮೌಲ್ಯಗಳು ನವೀಕರಣ ಹೊಂದುವುದಿಲ್ಲ. ಯಾವುದನ್ನು ಇವತ್ತು ಸೌಂದರ್ಯ ಎಂದು ನಿರ್ವಚಿಸಲಾಗಿದೆಯೋ ಅದು ವೈದಿಕ ಚಿಂತನೆಯಲ್ಲಿ ರೂಪಪಡೆದುಕೊಂಡದ್ದು ಎನ್ನುವುದನ್ನು ಮರೆಯುವಂತಿಲ್ಲ. ಈ ಹಿಂದೆ ಹೆಣ್ಣಿನ ಸೌಂದರ್ಯಕ್ಕೆ ಭಿನ್ನ ನಿರ್ವಚನ ಇತ್ತು ಎಂತಲ್ಲ, ಸೌಂದರ್ಯ ಕೇಂದ್ರಗಳು ನೇರವಾಗಿ ವೈದಿಕ ಸೌಂದರ್ಯ ಪ್ರಜ್ಞೆಯನ್ನು ಪ್ರತಿಪಾದಿಸುತವೆ.

ಭಾರತದಲ್ಲಿ 'ಸೌಂದರ್ಯ ಕೇಂದ್ರ'ಗಳಿಗೆ ಸಿಕ್ಕ ಪ್ರಚಾರ, ಪೋಷಣೆ 'ಸೌಂದರ್ಯ ಸ್ಪರ್ಧೆ'ಗೆ ದೊರೆತಿಲ್ಲ. ಇದಕ್ಕೆ ವಿರೋಧ ಕಂಡು ಬಂದಿರುವುದು ವೈದಿಕ ಪಿತೃ ಪ್ರಧಾನ ಮೌಲ್ಯಗಳನ್ನು ಗಟ್ಟಿಗೊಳಿಸುತ್ತಿರುವ ಪುರುಷ ಸಮಾಜ ಕಾರ್ಯಕರ್ತರಿಂದಲೇ ಎನ್ನುವುದು ಕುತೂಹಲದ ಸಂಗತಿ. ವಿಶ್ವದಾದ್ಯಂತ ಅನೇಕ ಮಹಿಳಾ ಸಂಘಟನೆಗಳು ಸೌಂದರ್ಯ

ಸ್ಪರ್ಧೆಗಳನ್ನು ವಿರೋಧಿಸುತ್ತಿವೆ. ಅದಕ್ಕೆ ಮಹಿಳಾ ಸಂಘಟನೆಗಳು ತಳೆದಿರುವ ಧೋರಣೆಗಳು ಭಿನ್ನವಾಗಿದ್ದು ಅದು ಪ್ರತ್ಯೇಕ ಚರ್ಚೆಯನ್ನು ಬಯಸುತ್ತದೆ. ಸೌಂದರ್ಯ ಸ್ಪರ್ಧೆಯ ಕುರಿತು ಪುರುಷ ಸಮಾಜ ಕಾರ್ಯಕರ್ತರ ವಿರೋಧದ ಧ್ವನಿಯನ್ನು ಪ್ರಧಾನ ಆಕರವಾಗಿಟ್ಟುಕೊಂಡು ಇಲ್ಲಿ ಚರ್ಚೆ ಬೆಳೆಸಲಾಗಿದೆ.

ವೈದಿಕ ಸಂಸ್ಕೃತಿಯಲ್ಲಿ ಬಲವಾಗಿ ನಂಬಿಕೆಯನ್ನಿಟ್ಟುಕೊಂಡವರು ವಿಶ್ವಸುಂದರಿ, ಭುವನಸುಂದರಿ ಮೊದಲಾದ ಸ್ಪರ್ಧೆಗಳಲ್ಲಿ ಮಹಿಳೆಯರು ಕನಿಷ್ಠ ಉಡುಪುಗಳಲ್ಲಿ ಕಾಣಿಸಿಕೊಳ್ಳುವುದನ್ನು ಪ್ರಬಲವಾಗಿ ವಿರೋಧಿಸುವರು. ಹೆಣ್ಣು ತನ್ನ ದೇಹ ಸೌಂದರ್ಯವನ್ನು ಸಾರ್ವಜನಿಕರೆದುರು ತುಂಡು ಬಟ್ಟೆಯಲ್ಲಿ ಪ್ರದರ್ಶಿಸುವುದು ಭಾರತೀಯ ಸಂಸ್ಕೃತಿಯ ಲಕ್ಷಣವಲ್ಲ ಎನ್ನುವುದು ಅವರ ನಿಲುವು. ವೈದಿಕ ಮೌಲ್ಯಗಳು 'ಪರದಾ ಪದ್ಧತಿ'ಯನ್ನು ಹೆಣ್ಣಿನ ಶೀಲರಕ್ಷೆಯಾಗಿ ನಿರ್ವಚಿಸಿವೆ. 'ನಮ್ಮ ಕಾಲ್ದಾಗ ಈಗಿನವರಂಗ ಹೆಣ್ಮಕ್ಕಳು ಸೀರಿ ಉಡ್ತಿದ್ದಿಲ್ಲ ತೆಗಿ. ನಮ್ಮ ಮುಖ, ಕೈಕಾಲು ಯಾರಿಗೂ ಕಾಣ್ತಿದ್ದಿಲ್ಲ. ಸ್ವತಃ ನಿಮ್ಮ ಅಜ್ಜನು ನನ್ನ ಮುಖ ಸರಿಯಾಗಿ ನೋಡಿದ್ದಿಲ್ಲ. ಇನ್ನು ಹೊರಗಿನವರ ಮಾತಂತು ದೂರುಳಿಯಿತು' ಎಂದು ವಿಶಾದದ ನಗೆ ಚೆಲ್ಲಿ ಹೇಳಿದ ನನ್ನ ಅಜ್ಜಿಯ ಮಾತುಗಳು ಪದೇ ಪದೇ ನನ್ನ ಪ್ರಜ್ಞೆಯನ್ನು ಕಾಡುತ್ತಿರುತ್ತವೆ. ಇಂತಹ 'ಪರದಾ' ಸಂಸ್ಕೃತಿಯಲ್ಲಿ ಸ್ತ್ರೀಯು ಕನಿಷ್ಠ ಉಡಿಗೆಯಲ್ಲಿ ಕಾಣಿಸಿಕೊಳ್ಳುವುದು ಸಾಂಸ್ಕೃತಿಕ ಅಪರಾಧವಾಗಿಯೇ ಪರಿಗಣಿತವಾಗುತ್ತದೆ.

ಇವತ್ತಿನ ಭಾರತೀಯ ಸಮಾಜದ ಸುಧಾರಕರು ಸೌಂದರ್ಯ ಸ್ಪರ್ಧೆಯನ್ನು ವಿರೋಧಿಸಲು ಇವಿಷ್ಟೆ ಕಾರಣಗಳಿಲ್ಲ. ನಮ್ಮ ಆಲೋಚನೆಯನ್ನು ಹರಿತಗೊಳಿಸಿದರೆ ಬಹಳ ಸೂಕ್ಷ್ಮವಾದ ಕಾರಣಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ವಿಶ್ವಸುಂದರಿ, ಭುವನಸುಂದರಿ ಸ್ಪರ್ಧೆ ನಡೆಸುವ ಖಾಸಗಿ ಸಂಸ್ಥೆಗಳ ಮಾರುಕಟ್ಟೆಯೊಂದಿಗೆ ನೇರವಾದ ಸಂಬಂಧವನ್ನು ನಮ್ಮವರು ಹೊಂದಿದ್ದರೆ ಖಂಡಿತವಾಗಿ ಅವರು ಅದನ್ನು ವಿರೋಧಿಸುತ್ತಿರಲಿಲ್ಲ. ಅದು ತರುವ ಲಾಭದಲ್ಲಿ ಪಾಲುದಾರಿಕೆ ಇದ್ದಿದ್ದರೆ ಸೌಂದರ್ಯ ಸ್ಪರ್ಧೆಯನ್ನು ಸಮರ್ಥಿಸುತ್ತಿದ್ದರು.

ಜಾಹಿರಾತು ಸಂಸ್ಥೆಗಳು ಹೆಣ್ಣುಮಕ್ಕಳಿಗೆ ಮಾಡೆಲಿಂಗ್ ಮಾಡುವುದನ್ನು ಹೇಳಿಕೊಡುತ್ತವೆ. ವೇದಿಕೆಯ ಮೇಲೆ ಹಾಗೂ ಪರದೆಯ ಮೇಲೆ ಕಾಣಿಸಿಕೊಳ್ಳುವಾಗ ಹೇಗಿರಬೇಕು, ಹೇಗೆ ನಡೆಯಬೇಕು, ಎಷ್ಟು ಮತ್ತು ಹೇಗೆ ನಗಬೇಕು, ಎಷ್ಟು ಗಂಭೀರವಾಗಿರಬೇಕು ಎನ್ನುವುದೆಲ್ಲವನ್ನು ಈ ಜಾಹಿರಾತು ಈ ಸಂಸ್ಥೆಗಳು ಹೇಳಿಕೊಡುತ್ತವೆ. ಪುರುಷ ಮಾಡೆಲಿಂಗ್‌ಗಳಿಗೂ ಜಾಹಿರಾತು ಸಂಸ್ಥೆಗಳು ತರಬೇತಿ ನೀಡುತ್ತವೆ. ಆದರೆ ಅವರಿಗೆ ದೊರೆಯುವ ತರಬೇತಿಯು ಗಂಡಸಿಗೆ ಆರೋಪಿಸಲ್ಪಟ್ಟ ಮೌಲ್ಯಗಳಿಗನುಗುಣವಾಗಿ ಇರುತ್ತದೆ. ವೈದಿಕ ಸಂಸ್ಕೃತಿ ಹೆಣ್ಣು ಹೇಗಿರಬೇಕು, ಹೇಗಿರಬಾರದು, ಹೇಗೆ ಕೂಡಬೇಕು, ಹೇಗೆ ನಡೆಯಬೇಕು, ಎಷ್ಟು ನಗಬೇಕು ಎನ್ನುವ ಕಲ್ಪಿತ ನಡಾವಳಿಗಳನ್ನು ಚರಿತ್ರೆಯ ಉದ್ದಕ್ಕೂ ಕಟ್ಟಿಕೊಟ್ಟಿದೆ. ಚರಿತ್ರೆಯಲ್ಲಿ ನಡೆದು ಬಂದ ಈ ಪ್ರಕ್ರಿಯೆಯು ಆಧುನಿಕ ಮಾರುಕಟ್ಟೆಯೊಂದಿಗೆ ಸಂಬಂಧವಿಟ್ಟುಕೊಂಡು ಹೀಗೆ ರೂಪಾಂತರಗೊಂಡು ಮುಂದುವರಿದಿದೆ.

ಆಧುನಿಕ ಭಾರತದಲ್ಲಿ ಜಾತಿಗಳು, ಲಿಂಗ ಪರಿಕಲ್ಪನೆಗಳು ಮೇಲ್ನೋಟಕ್ಕೆ ಸಡಿಲಗೊಂಡಂತೆ ಕಾಣುತ್ತವೆ. ಅದರಿಂದಾಗಿ, ನಮ್ಮ ಸಮಗ್ರ ಸಾಮಾಜಿಕ ವ್ಯವಸ್ಥೆ ಪರಿವರ್ತನೆಯಾಗಿದೆ ಎಂದು ಅವಸರದ ನಿರ್ಣಯಕ್ಕೆ ಬರಬಾರದು. ವೈದಿಕ ಮೌಲ್ಯಗಳು ಮಹಿಳೆಯರ (ವೈದಿಕ ಮತ್ತು ಅವೈದಿಕ) ಮತ್ತು ತಳಸಮುದಾಯಗಳ ಪುರುಷರ ಮನೋಸ್ಥಿತಿಯನ್ನು ಮತ್ತು ಬೌದ್ಧಿಕ ಪ್ರಜ್ಞೆಯನ್ನು ಇಂದಿಗೂ ಆಳುತ್ತಿವೆ. ಅದು ಪುರೋಹಿತಶಾಹಿ ಅಥವಾ ವೈದಿಕಶಾಹಿ ಎನ್ನುವ ತಾತ್ವಿಕ ಚೌಕಟ್ಟಿನೊಳಗೆ ಮೂಲಭೂತವಾದವನ್ನು ಪ್ರತಿಪಾದಿಸುತ್ತದೆ. ಸಮಾಜ, ಧರ್ಮ, ಜಾತಿ, ವರ್ಗ ಹಾಗೂ ಲಿಂಗ ಪರಿಕಲ್ಪನೆಗಳು ಬದಲಾಗಬಾರದು ಎನ್ನುವುದು ವೈದಿಕದ ಬೀಜ ರೂಪದ ಚಿಂತನೆ. ತನ್ನ ದಾರ್ಶನಿಕತೆ, ತನ್ನ ಲೋಕದೃಷ್ಟಿ ತನ್ನ ಚಿಂತನೆ ಅತ್ಯಂತ ಶ್ರೇಷ್ಠವಾದುದು ಹಾಗೂ ಅತ್ಯಂತಿಕವಾದುದು ಎಂದು ಭಾವಿಸಿರುತ್ತದೆ. ತಾನು ಪ್ರತಿಪಾದಿಸುತ್ತಿರುವ ಚಿಂತನೆಗಳು ಸಾರ್ವಕಾಲಿಕವಾದುವುಗಳು ಹಾಗೂ ಸಾರ್ವತ್ರಿಕವಾದವುಗಳು ಎಂದು ತನಗೆ ತಾನೇ ನಂಬಿರುತ್ತದೆ.

ವೇದಕಾಲದಿಂದ ಹಿಡಿದು ಇಂದಿನ ವಿಜ್ಞಾನ ಹಾಗೂ ತಂತ್ರಜ್ಞಾನದವರೆಗೂ ತಾನು ಪ್ರತಿಪಾದಿಸುತ್ತಿರುವ ಮೌಲ್ಯಗಳು ಅನುಕರಣೀಯವಾದುವುಗಳು ಎಂದು ವಿಶ್ವಾಸ ಇಟ್ಟುಕೊಂಡಿರುತ್ತದೆ. ತಾನು ಕಟ್ಟಿಕೊಟ್ಟ ಮೌಲ್ಯಗಳನ್ನು ಎಲ್ಲರೂ ಅನುಸರಣೆ ಮಾಡಬೇಕೆಂದು ಅಪೇಕ್ಷಿಸುತ್ತದೆ ಕೂಡ. ವೈದಿಕತೆಯು ತಾನು ರೂಪಿಸುತ್ತಿರುವ ಲೋಕದೃಷ್ಟಿಯು ಪ್ರಶ್ನಾತೀತವಾದುದು, ತರ್ಕಾತೀತವಾದುದು ಎಂದುಕೊಂಡಿರುತ್ತದೆ. ಒಪ್ಪಬೇಕು, ನಂಬಬೇಕು, ಅನುಸರಿಸಬೇಕು ಎನ್ನುವ ಖಚಿತ ಧೋರಣೆಯಲ್ಲಿಯೇ ವೈದಿಕದ ತಾತ್ವಿಕತೆಯು ರೂಪುಗೊಂಡಿರುತ್ತದೆ. ವೈದಿಕತೆಯು ನೈತಿಕ ವೇಷದಲ್ಲಿ ಉಪದೇಶವನ್ನು ಮಾಡುತ್ತಿರುತ್ತದೆ, ಕಾನೂನಿನ ವೇಷದಲ್ಲಿ ಆದೇಶವನ್ನು ನೀಡುತ್ತಿರುತ್ತದೆ. ಹೀಗೆ ವರ್ತಿಸುವ ಮೂಲಕವೇ ಅಂದಂದಿನ ಆಳುವ ವರ್ಗದ ವ್ಯವಸ್ಥೆಗಳನ್ನು ಗಟ್ಟಿಗೊಳಿಸುತ್ತಿರುತ್ತದೆ. ಅದು ರಾಜಶಾಹಿ ಇರಬಹುದು, ಸಾಮಂತಶಾಹಿ ಇರಬಹುದು, ಊಳಿಗಮಾನ್ಯ ಶಾಹಿ ಇರಬಹುದು ಅಥವಾ ಇವತ್ತಿನ ಆಧುನಿಕ ಆಡಳಿತಶಾಹಿ ಇರಬಹುದು. ವೈದಿಕತೆಯು ಅಂದಂದಿನ ಆಡಳಿತ ವರ್ಗವನ್ನು ತನ್ನ ಆದೇಶ ಹಾಗೂ ಉಪದೇಶದ ಕಕ್ಷೆಗೆ ಬಾಗಿಸಿಕೊಂಡು ಸ್ವಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುತ್ತಿರುತ್ತದೆ. ಅದು ತನ್ನ ಮೌಲ್ಯ ಕಕ್ಷೆಯಲ್ಲಿ ಬರುವ ಸಂಗತಿಗಳೆಲ್ಲವನ್ನು ಶುದ್ಧೀಕರಿಸುತ್ತದೆ, ಪವಿತ್ರೀಕರಿಸುತ್ತದೆ.

ವೈದಿಕ ಸಂಸ್ಕೃತಿಯಲ್ಲಿ ಬಲವಾಗಿ ನಂಬಿಕೆಯನ್ನಿಟ್ಟುಕೊಂಡವರು ವಿಶ್ವಸುಂದರಿ, ಭುವನಸುಂದರಿ ಮೊದಲಾದ ಸ್ಪರ್ಧೆಗಳಲ್ಲಿ ಮಹಿಳೆಯರು ಕನಿಷ್ಠ ಉಡುಪುಗಳಲ್ಲಿ ಕಾಣಿಸಿಕೊಳ್ಳುವುದನ್ನು ಪ್ರಬಲವಾಗಿ ವಿರೋಧಿಸುವರು.

ವರ್ಣ, ವರ್ಗ ಹಾಗೂ ಲಿಂಗದ ಹಿನ್ನೆಲೆಯಲ್ಲಿ ಶ್ರೇಷ್ಠ-ಕನಿಷ್ಠ, ಮೇಲು-ಕೀಳು, ಮಡಿ-ಮೈಲಿಗೆ ಮೊದಲಾದ ಸಂಗತಿಗಳನ್ನು ಮಂಡಿಸುತ್ತದೆ, ಸಮರ್ಥಿಸುತ್ತದೆ, ಬೆಳೆಸುತ್ತದೆ. ಕಾಲಮಾನಕ್ಕನುಗುಣವಾಗಿ ವೈದಿಕ ಪಿತೃಪ್ರಧಾನ ಮೌಲ್ಯಗಳು ನವೀಕರಣಗೊಳ್ಳುತ್ತ ಹೊಸ ತಂತ್ರಗಾರಿಕೆಯ ಮೂಲಕ ಮಹಿಳಾ ಪ್ರಜ್ಞೆಯನ್ನು ಆಳಲು ಪ್ರಯತ್ನಿಸುತ್ತಲೇ ಇರುತ್ತವೆ.

ಉಲ್ಲೇಖಗಳು

೧. ಗಂಗಾಧರ ದೈವಜ್ಞ, ೨೦೦೦, ಬುಡಕಟ್ಟು ಸಮಾಜ ಹುಟ್ಟು ಸಾವುಗಳ ನಡುವೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಉದ್ಧೃತ, ದೇವೇಂದ್ರ ಕುಮಾರ ಹಕಾರೆ. ೧೯೮೫, ಜಾನಪದ : ಸಾಮಾಜಿಕ ಕಥನಗೀತೆಗಳಲ್ಲಿ ದುಃಖಾಂತ ನಿರೂಪಣೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೩. ಪರಮಶಿವಯ್ಯ ಜಿ.ಶಂ (ಸಂ) ೧೯೯೬, ಜನಪದ ಖಂಡಕಾವ್ಯ, ಚೇತನ ಬುಕ್ ಹೌಸ್, ಮೈಸೂರು.

೪. ಮನು, ಉದ್ಧೃತ. ಅಂಬೇಡ್ಕರ್ ಬಿ.ಆರ್. ೨೦೦೦. ಜಾತಿ ಸತಿ ಮತ್ತು ಮಹಿಳೆ ಜವರಯ್ಯ ಮ.ನ. (ಅನು), ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು

೫. ರೋಮಿಲಾ ಥಾಪರ್. ೨೦೦೪. ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ - ರಾಜಾರಾಮ್ ಹೆಗಡೆ (ಸಂ) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬. ವೀರಭದ್ರಪ್ಪ ಬಿ.ವಿ. ೨೦೦೩, ವೇದಗಳಲ್ಲಿ ಜನಸಾಮಾನ್ಯರು, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು.

ಸುಬೋಧಿ ಮಹಿಳಾ

ವಿವಿದ್ಧೋದ್ದೇಶ ಸಹಕಾರ ಸಂಘ ನಿಯಮಿತ

ವಿದ್ಯಾವಂತ, ಸಮಾಜಸೇವಾ ಮನೋಭಾವವುಳ್ಳ
ಆಡಳಿತ ಮಂಡಳಿಯನ್ನೊಳಗೊಂಡ
ಸಹಕಾರ ಸಂಘಕ್ಕೆ ಇಂದೇ ಸದಸ್ಯರಾಗಿ

ಅಧ್ಯಕ್ಷರು
ವೇದಾವತಿ ಮರಿಸ್ವಾಮಿ

ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿರುವ ಗಣ್ಯವ್ಯಕ್ತಿಗಳು

ಸಂಘದ ಧ್ಯೇಯೋದ್ದೇಶಗಳು

- ಸದಸ್ಯರಲ್ಲಿ ಸ್ವ-ಸಹಾಯ, ಸಹಕಾರ ಮನೋಭಾವನೆಗಳನ್ನು ಪ್ರೋತ್ಸಾಹಿಸುವುದು
- ಸ್ತ್ರೀಶಕ್ತಿ ಯೋಜನೆಯಡಿ ಸ್ವ-ಸಹಾಯ ಗುಂಪು ರಚನೆ
- ಸದಸ್ಯರುಗಳಿಂದ ಠೇವಣಿ ಸಂಗ್ರಹ ಹಾಗೂ ಸಾಲಸೌಲಭ್ಯ ನೀಡುವುದು
- ನಗರ/ಗ್ರಾಮೀಣ ಮಕ್ಕಳಿಗೆ ಶಿಕ್ಷಣ ಸಂಸ್ಥೆಗಳನ್ನು ತೆರೆಯುವುದು.
- ಸದಸ್ಯರೊಡಗೂಡಿ ಗೃಹ ಬಳಕೆ ವಸ್ತುಗಳ ಉತ್ಪಾದನೆ ಮತ್ತು ಅದನ್ನು ಖರೀದಿಸಿ ಮಾರಾಟ ಮಾಡುವುದು
- ಪಶು ಸಂಗೋಪನೆ, ಕೋಳಿ ಸಾಕಾಣಿಕೆ, ತೋಟಗಾರಿಕೆ ಹಾಗೂ ಇನ್ನಿತರ ಗೃಹ ಕೈಗಾರಿಕೆಗಳ ಬಗ್ಗೆ ಯೋಜನೆ ರೂಪಿಸುವುದು ಮತ್ತು ಕಾರ್ಯಗತಗೊಳಿಸುವುದು
- ಮಹಿಳೆಯರ ಅಭಿವೃದ್ಧಿಗಾಗಿ ಕೇಂದ್ರ/ರಾಜ್ಯ ಸರ್ಕಾರಗಳಿಂದ ಯೋಜನೆಗಳ ಸೌಲಭ್ಯಗಳನ್ನು ಪಡೆದುಕೊಳ್ಳುವುದು
- ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸುವುದು
- ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಪ್ರಚಾರಪಡಿಸಿ ಕಾರ್ಯಗತಗೊಳಿಸುವುದು
- ಇತರೆ ಸಂಸ್ಥೆಗಳೊಡನೆ ಪರಸ್ಪರ ಸಹಾಯ ಪದ್ಧತಿಯನ್ನು ಅನುಸರಿಸುವುದು ಹಾಗೂ ಕಾರ್ಯಕ್ರಮ ರೂಪಿಸುವುದು

ಕನಸು ನಿಮ್ಮದು
ನನಸು ನಮ್ಮದು

ಆಡಳಿತ ಮಂಡಳಿ ಸದಸ್ಯರು

ಪ್ರಗತಿಗಾಗಿ ಸೇವೆ, ಸೇವೆಗಾಗಿ ಪ್ರಗತಿ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ದೂರವಾಣಿ : 26703300

ಆಡಳಿತ ಕಛೇರಿ : ಸ್ಫೂರ್ತಿಧಾಮ, ಅಂಜನಾನಗರ, ಮಾಗಡಿ ರಸ್ತೆ, ಬೆಂಗಳೂರು - 91
ಶಾಖಾ ಕಛೇರಿ: ನಂ. 306, 1ನೇ ಮುಖ್ಯರಸ್ತೆ ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 18

ನವೀನ ಆಶ್ರಮ

ಕಾವ್ಯ



ರಾಮಲಿಂಗಪ್ಪ ಟಿ. ಬೇಗೂರು

೧

ಕೆಟ್ಟದ ಬಟ್ಟೆ ತೊಟ್ಟ ಕತ್ತಲು
ಮರಗಟ್ಟಿ ಹೋದಂತೆ ಬತ್ತಲು
ನಿಂತಿವೆ ಆಲಯದ ಬಯಲ ಕಟಕಟೆಯಲ್ಲಿ
ಗಾಂಧಿಯ ಮೂರು ಕೋತಿಗಳ ಪರಿ
ಈ ಅಕ್ಕಲು ಮರಗಳು.

ಸಾಗಿವೆ ನೂರಾರು ಇರುವೆ ಸಾಲು ಮೋಟಾರು ಕಾರು
ವೃಷಭಾವತಿ ಕುಲಕೋಟಿ ಹೆಪ್ಪಾಗಿ
ಮದಗ ನಾಡೊ ವಿಲಯದ ನದಿಗಳು
ಭೂಮಿ ಆಕಾಶದ ತುಂಬ ರೋಡುಗಳು

ಕಾಣೆಯಾಗಿವೆ ಊರಿನ ಕಾಲುದಾರಿಗಳು
ನಡೆದಾಡುವುದೇ ಅಬ್ಬಾ ಅವಮಾನ ಕೀಳು.

೨

ಇಲ್ಲಿ ಆಕಾಶದಾ ಮೊಲೆ ಮೋಡಕ್ಕೆ ಕ್ಯಾನ್ಸರು
ಚಿಂತೆಯಿಲ್ಲ ನಲ್ಲಿ-ಬಾಟಲಿಯಲಿ ಬರುತ್ತೆ ನೀರು.
ಸುಗ್ಗಿ ಕಣ್ಣೀರ ಕುಯಿಲು, ಆರಂಬ ಕಾಲೇಜು ಪಾಲು
ಚಿಂತೆಯಿಲ್ಲ ಕಾಳ ಸಂತೆಯಲಿ ಸಿಗುತ್ತೆ ತರಕಾರಿ ಕಾಳು.
ಹತ್ತು ಕಟ್ಟಿದ ಕಡೆ ಒಂದು ಮುತ್ತು ಕಟ್ಟಿದ ಹಾಗೆ
ಪರದೇಶಿ ಕಂಪನಿಯ ಥಾಲು
ಗೋಲಿಯಿಲ್ಲದ ಒಂಟಿಗೆಜ್ಜೆಯ ಕುಣಿತ
ತಳವಂದಿಗರ ಬಾಳು.
ಅಮ್ಮಾ ತಾಯೀ; ತಪರು ಕಾಯಿ ತಳ್ಳು
ಎಲ್ಲ ದೀಪದ ಹುಳಗಳು.

ಮುಪ್ಪಿನಾ ಮುಂಜಾನೆ ಯೌವನ
ಯೌವನದ ದೆವ್ವ ಮೆಟ್ಟಿಕೊಂಡಿದೆ ಎಲ್ಲೆಡೆ
ಅವರವರಿಗೆ ಅವರವರದೇ ಓಟ ಕಾಟ
ಮುದಿಗಳಿಗೆ ಮುದಿಹೋಮು ಮಕ್ಕಳಿಗೆ ಪ್ಲೇಹೋಮು
ದೀಪದ ಕೆಳಗೇ ಗಾಯದ ಕೀವು ಸ್ಲಮ್ಮು.
ಬರೇ ಬರದು ಜೀವಕ್ಕೆ ಕುತ್ತು ಕ್ಲಿನಿಕ್ಕಿವೆ ಗಾಳಿಗೂ
ಎಲ್ಲವೂ ಕಾಡು ಮೇಡಲ್ಲವೂ ರೆಡಿಮೇಡು
ಒಂದಕ್ಕಿನ್ನೊಂದು ಫ್ರೀ ; ಇದ್ದರೆ ಕಾಸು, ತಲೆಮಾಸು.

೩

ಇರುತ್ತೆ ಪರಿಸರ - ಬಡತನದ ಮೇಲೆ ಭಾಷಣ
'ತಲ್ಲಣಿಸದಿರು ಕಂಡ್ಯ ತಾಳು ಮನವೇ' ಇಲ್ಲಿ
ಕ್ಯಾಮರಾ ಮುಂದೆ ಗಾಯನ.

ಹುಟ್ಟುತ್ತೆ ಮಗು ಆಗುತ್ತೆ ಕೊಲೆ ಸಲೀಸು
ಎಲ್ಲ ಶಸ್ತ್ರಾಸ್ತ್ರದಿಂದಲೆ ಮತ್ತೆ ಬಿಟ್ಟಿಯಲ್ಲ.
ಇವರ ಎದೆ ಮೇಲಿನ ಬೆಣ್ಣೆ ಎಂದೂ ಕರಗುವುದಿಲ್ಲ.

ಮಿಣುಕುತ್ತವೆ ಇಲ್ಲೂ ಆಗೀಗ ಸೋಣಸೋಣ
ಎಣ್ಣೆ ತಳಕಂಡ ಬುಡ್ಡಿಗಳು ನಿದ್ರೆ ಮಿಥುನಗಳು
ವಯೋ-ಮಾನಕ್ಕೆ ತಕ್ಕ ಪ್ರೇಮ, ಪ್ರೀತಿ
ಬಂದಾವೇನೋ ಕಾಣೆ ಇವಕ್ಕೂ ಮಾತ್ರೆ ಒಂದು ದಿನ
ಬಲು ಜೋರಾಗಿದೆ ಏಡ್ಸು ಜಾಗೃತಿ.

೪

ಇದು ವಿರಾಮವಿಲ್ಲದ ನವೀನ ಆಶ್ರಮ
ಹುಲಿ ಹುಲ್ಲೆ ಇಲಿ ಹಾವು ಆನೆ ಆಡುಗಳು
ಒಟ್ಟಿಗೇ ಇದೆ ನಾಮರೂಪವು ಮಾತ್ರ ಬೇರೆ ಬೇರೆ
ಕೆಲವು ಕೀ ಚಾಲಿತ ಕೆಲವು ಸ್ವಯಂ ಚಾಲಿತ

ನಡೆಯುತ್ತದೆ ಮಾಮೂಲು
ರಿಮೋಟಿಗಾಗಿ ಮಠಪತಿಗಳ ಕಿತ್ತಾಟ
ಐದು ವರುಷಕ್ಕೆ ಪರಿಸೆ ಬಾಡಿಟ್ಟಿಗೆ

ಗರ ಗಸ ಗರ ಗಸ
ಸಾಗುತ್ತಿದೆ ಸಂತೆ ಹೀಗೆ
ಇದನ್ನೆ ಜನ ನಗರ ಎನ್ನುವರು
ಅಮ್ಮಮ್ಮೊ ಸಾಲದು ವರ್ಣನೆಗೆ ಒಂದೆ ನಾಲಿಗೆ

ಕಥೆ



ಅನಾಮಧೇಯರಿಬ್ಬರ ಮುಖಾಮುಖಿ

○ ಡಾ॥ ಪ್ರಹ್ಲಾದ ಅಗಸನಕಟ್ಟೆ

ಬಸ್ ಇಳಿದ ಅವನಿಗೆ ಹೆಸರಿಲ್ಲ. ಬ್ಯಾಂಕಿನಲ್ಲಿ ನೌಕರಿ ಮಾಡುತ್ತಿದ್ದ ಅವ ಇತ್ತೀಚೆಗೆ 'ಗೋಲ್ಡನ್ ಶೇಕ್' ಸ್ಕಿಮಿನಲ್ಲಿ ವಿ.ಆರ್.ಎಸ್. ಪಡೆದುಕೊಂಡಿದ್ದ. ಸ್ವಯಂ ನಿವೃತ್ತಿಯಾದಾಗ ಬಂದ ಹಣವನ್ನು ಹೆಚ್ಚಿನ ಬಡ್ಡಿಯಾಸೆಗೆ ಅವ ಮೂರು ನಾಲ್ಕು ಖಾಸಗಿ ಬ್ಯಾಂಕುಗಳಲ್ಲಿ ಎಫ್.ಡಿ. ಇರಿಸಿದ್ದ. ದುರಾದೃಷ್ಟವಶಾತ್ ಅವುಗಳಲ್ಲಿ ಎರಡು ಗೋಚಾಳಿ ವ್ಯವಹಾರಗಳಿಂದ ಅದ್ವಾನವೆದ್ದು ಒಂದು ದಿನ ಬೆಳಗ್ಗೆ ಇದ್ದಕ್ಕಿದ್ದಂತೆ ಕದ ಮುಚ್ಚಿದವು. ಇನ್ನೊಂದೆರಡು ಬ್ಯಾಂಕುಗಳ ಬಡ್ಡಿ ನೆಲಕ್ಕಿಳಿದೂ.. ಇಳಿದೂ ಇವನ ಬಡ್ಡಿ ಆಧಾರಿತ ಬದುಕನ್ನು ಪಾತಾಳಕ್ಕೆ ಇಳಿಸಿದ್ದವು. 'ಗೋಲ್ಡನ್ ಶೇಕ್' ಎಂಬ ಆಕರ್ಷಕ ಪದದ ಹಿಂದಿನ ತಂತ್ರ ಅವನಿಗೆ ಅರಿವಾಗುವ ಹೊತ್ತಿಗೆ ಅವ ಐರನ್ ಶೇಕ್ ಹಿಡಿತಕ್ಕೆ ಸಿಕ್ಕಿ ಬಿದ್ದಿದ್ದ.

ಇಂಥ ಭಯ ವಿಹಲ್ವ ಮನುಷ್ಯ ತನ್ನ ಸೂಟ್‌ಕೇಸ್ ಇಡಕೊಂಡು ಹುಬ್ಬಳ್ಳಿಯ ಹಳೇ ಬಸ್‌ಸ್ಟಾಂಡ್‌ನಲ್ಲಿ ಇಳಿದ. ಮನೆಗೆ ಧಾವಿಸುವ ಪೂರ್ವದಲ್ಲಿ ಜಡಗೊಂಡ ತನ್ನ ಮೈ-ಮನಗಳಲ್ಲಿ ಒಂದು ತತ್ಕಾಲೀನ ಹುಮ್ಮಸ್ಸು ತುಂಬಲು ಬಸವ ವನದ ಹತ್ತಿರದ ಪ್ರಿಯದರ್ಶಿನಿ ಎಂಬ ಹೊಟೇಲು ಹೊಕ್ಕು ಕೂತ. ಆಗಲೆ ಸಂಜೆ ಏಳರ ಕತ್ತಲು ಇನ್ನೂ ಗಾಢವಾಗಹತ್ತಿತ್ತು.

ಅವನು ಕೂತ ಕುರ್ಚಿಯ ನೇರ ಬಸವ ವನ ಎಂಬ ಮುನಿಸಿಪಾಲಿಟಿಯ ಪುಟ್ಟ ಪಾರ್ಕ್. ಪಾರ್ಕಿನ ನಡುವೆ ಪಾರ್ಕನ್ನು ಕಾಯಲು ಕುದುರೆ ಮೇಲೆ ಕೂರಿಸಿದಂತಹ ಬಸವಣ್ಣನ ಮೂರ್ತಿ. ಕುದುರೆ ಕಾಲೆತ್ತಿ ಜಿಗಿಯುವ ಭಂಗಿಯಲ್ಲಿ ನಿಂತಿದೆ.. ಬಸವಣ್ಣ ಅಲ್ಲಿಂದ ಹಾರಿ ಮುಗಿಲಿಗೆ ನೆಗೆವವನಂತೆ ಮುಂಗೈ ಚಾಚಿದ್ದಾನೆ. ಇನ್ನೊಂದು ಕೈಗೆ ತೂಗು ಬಿದ್ದ ಖಡ್ಗ.. ಆ ಮೂರ್ತಿಯ ಎದುರು ರಸ್ತೆಯಲ್ಲಿ ಬಿಟ್ಟು ಬಿಡದೆ ಸಾಗುವ ಬಸ್ಸು, ಲಾರಿ, ಕಾರು, ಆಟೋಗಳ ಕಣ್ಣು ಕುಕ್ಕುವ ಬೆಳಕಲ್ಲಿ ಆ ಮೂರ್ತಿ ಕ್ಷಣಕ್ಕೊಮ್ಮೆ ಹಲವು

ಅವನು ಕೂತ ಕುರ್ಚಿಯ ನೇರ ಬಸವ ವನ ಎಂಬ ಮುನಿಸಿಪಾಲಿಟಿಯ ಪುಟ್ಟ ಪಾರ್ಕ್. ಪಾರ್ಕಿನ ನಡುವೆ ಪಾರ್ಕನ್ನು ಕಾಯಲು ಕುದುರೆ ಮೇಲೆ ಕೂರಿಸಿದಂತಹ ಬಸವಣ್ಣನ ಮೂರ್ತಿ. ಕುದುರೆ ಕಾಲೆತ್ತಿ ಜಿಗಿಯುವ ಭಂಗಿಯಲ್ಲಿ ನಿಂತಿದೆ.. ಬಸವಣ್ಣ ಅಲ್ಲಿಂದ ಹಾರಿ ಮುಗಿಲಿಗೆ ನೆಗೆವವನಂತೆ ಮುಂಗೈ ಚಾಚಿದ್ದಾನೆ. ಇನ್ನೊಂದು ಕೈಗೆ ತೂಗು ಬಿದ್ದ ಖಡ್ಗ.. ಆ ಮೂರ್ತಿಯ ಎದುರು ರಸ್ತೆಯಲ್ಲಿ ಬಿಟ್ಟು ಬಿಡದೆ ಸಾಗುವ ಬಸ್ಸು, ಲಾರಿ, ಕಾರು, ಆಟೋಗಳ ಕಣ್ಣು ಕುಕ್ಕುವ ಬೆಳಕಲ್ಲಿ ಆ ಮೂರ್ತಿ ಕ್ಷಣಕ್ಕೊಮ್ಮೆ ಹಲವು ರೂಪ-ರೇಷೆ-ವಿನ್ಯಾಸಗಳ ಪಡೆದು ಕತ್ತಲ ಕಡಲಲ್ಲಿ ಮುಳುಗಿ ಮರುಕ್ಷಣ ಭಗ್ಗನೆ ಮೇಲೇಳುತ್ತಿತ್ತು.

ರೂಪ–ರೇಷೆ–ವಿನ್ಯಾಸಗಳ ಪಡೆದು ಕತ್ತಲ ಕಡಲಲ್ಲಿ ಮುಳುಗಿ ಮರುಕ್ಷಣ ಭಗ್ಗನೆ ಮೇಲೇಳುತ್ತಿತ್ತು.

ಅವನು ಕೂತ ಆ ಹೊಟೇಲಿನಲ್ಲಿ ಯಾವ ಸಭ್ಯ ಗಿರಾಕಿಗಳೂ ಇರಲಿಲ್ಲ. ಒಂದು ಮೂಲೆಯಲ್ಲಿ ಈ ಸಂಜೆಯ ಗಿರಾಕಿಗೆ ಕಾದು ಕೂತ ಒಬ್ಬ ಹೆಂಗಸು.. ಆ ಹೆಂಗಸಿನ ಮುಖದಲ್ಲೋ ಕಪ್ಪನೆಯ ಒಣಗಿದ ದದ್ದು ಗುಳ್ಳೆಗಳು. ಆಕೆಯ ಕಣ್ಣುಗಳು ಒಳಗೆ ಬಂದವರಲ್ಲಿ ತೃಷೆ ಉಕ್ಕಿಸಲು ಹೋಗಿ ವಿಫಲವಾಗುತ್ತಿದ್ದವು. ಕಳೆದ ಹತ್ತಾರು ವರ್ಷಗಳಿಂದ ಆಕೆ ಅಲ್ಲಿಯೇ ಹೀಗೆಯೆ ಅಲೆದಾಡುತ್ತಿರುವುದನ್ನು ಜನ ನೋಡಿದವರಿದ್ದಾರೆ. ಹಗಲಿನಲ್ಲಿ ಗಾಜಿನ ಮನೆಯ ಮೂಲೆಯಲ್ಲಿ ರಾವಿಕೊಂಡಿರುತ್ತಾಳೆ.. ಒಂದೆರಡು ನಾಯಿಗಳು ಆಕೆಯ ಸುತ್ತಾ ಬಾಲವಾಡಿಸುತ್ತಾ ಕೂತಿರುತ್ತವೆ.. ಆಕೆ ಸಂಜೆಯ ಹೆಣ್ಣಾಗಿ ಈ ಸರ್ಕಲ್‌ಗೆ– ಈ ಹೊಟೆಲ್ಲಿಗೆ ಬರುತ್ತಾಳೆ.. ಕುಡಿದ ಮತ್ತಿನಲ್ಲಿ ಯಾರಾದರೂ ಆಕೆಯನ್ನು ಎಳಕೊಂಡು ಹೋಗುತ್ತಾರೆ.. ಕುಡಿದವರ ತಲೆಯಲ್ಲಿ ಕುಣಿವ ಹೆಂಗಸಿನ ವಿಚಿತ್ರ ಕಲ್ಪನೆ, ಉನ್ಮಾದಗಳಿಗೆ ಈಕೆ ಪ್ರತಿರೂಪವಾಗಿ ಕಾಣುತ್ತಾಳೆ.. ಕುಡಿದವರ ನಿಶೆ ಇಳಿದು.. ಒಳಗಿನ ಕಾವೂ ಸೋರಿ ಬೆಳಗಾದಾಗ ಕಳೆದ ರಾತ್ರಿ ತಾವು ಸಂಗ ಸುಖ ಅನುಭವಿಸಿದವಳ ಮುಖ ನೋಡಿ.. ಅರೆರೆ ಎಂದು ಹೌಹಾರಿ.. ಹುಬ್ಬಳ್ಳಿಯ ಪೇಟೆಯಲ್ಲಿ ದಿಕ್ಕುಪಾಲಾಗಿ ಓಡಿ ಮತ್ತೆ ಎಲ್ಲೋ ಇದನ್ನು ಮರೆಯಲು ಮದಿರೆ ಹೀರುತ್ತಾರೆ... ಇನ್ನೊಂದು ರಾತ್ರಿ.. ಇನ್ನೊಂದು ಗಿರಾಕಿ..

ವಿ.ಆರ್.ಎಸ್. ಎಂಬುದೊಂದನ್ನು ಪಡೆದ ಮೇಲೆ ತನ್ನ ಬದುಕೂ ಆಕೆಯ ಬದುಕಿನಂತಾಗಿದೆಯೇ– ಎಂದೆನಿಸಿ ಅವ ಒಂದು ಕ್ಷಣ ಬೆಚ್ಚಿ 'ಏನು ಬೇಕು' ಎಂಬ ದನಿಗೆ ಎಚ್ಚೆತ್ತು 'ಒಂದು ಚಾ' ಎಂದು ಹೇಳಿ ಇನ್ನೊಂದು ಕಡೆ ಹೊರಳಿದ. ಅಲ್ಲೊಬ್ಬ ಮನುಷ್ಯ.. ಕೊಳಕು ಅಂಗಿ ಕೊಳಕು ಪ್ಯಾಂಟಿನವ.. ತಾನು ಕೂತ ಕುರ್ಚಿಯ ಮುಂಭಾಗಕ್ಕೆ ಬಾಗಿ, ಟೇಬಲ್ ಸಂಧಿಯಲ್ಲಿ ತಲೆಯಿರಿಸಿ ಮಾಸಿದ ನೋಟುಗಳನ್ನು ಎಣಿಸುತ್ತಿದ್ದ. ಕಳ್ಳನೇ, ಭಿಕ್ಷುಕನೇ, ಹಮಾಲಿಯೇ.. ಚಹಾ ಕುಡಿಯುತ್ತ ನೋಟು ಎಣಿಸುವವನನ್ನೇ ಇವ ತದೇಕಚಿತ್ತನಾಗಿ ನೋಡಿದ.

ನೋಟು ಎಣಿಸುತ್ತಿದ್ದವ ಒಮ್ಮೆಗೆ ಸರಕ್ಕನೆ ಇವನ ಕಡೆ ಹೊರಳಿ..

'ಲೈಟು ಏನು ಪೊಕಸ್ ಅದಾವ್ರಿ.. ಕಣ್ಣು ಚುಚ್ಚಕತ್ಯಾವ' ಅಂದು ತನ್ನ ಕಣ್ಣನ್ನು ಒಮ್ಮೆ ಕಿರಿದುಗೊಳಿಸಿ, ಅಗಲಿಸಿದ. ಅವನ ಆ ವಿಚಿತ್ರ ಕಣ್ಣುಗಳನ್ನು ಇವ ನೋಡುತ್ತಲೆ ಬೆಚ್ಚಿ ಬಿದ್ದ. ಅಂಥ ಕಣ್ಣು ಅವು.. ಉಬ್ಬಿದ ರೆಪ್ಪೆಯೊಳಗೆ ಸಿಕ್ಕಿ ಹಾಕಿಕೊಂಡ ಕೆಂಪು ಗೋರಿಯಂತಹ ಕಣ್ಣು.. ಯಾರನ್ನು ನೋಡಬೇಕೆಂದರೂ ತನ್ನ ಗೋಣೆತ್ತಿ – ಕಿಟಕಿಯ ಒಂದು ಕಿರು ರಂಧ್ರದ ಜಾಲರಿಯಿಂದ ನೋಡುವವನಂತೆ ನೋಡುತ್ತಿದ್ದ.

ಅಂಥ ನಿರುಪದ್ರವಿಯ ಮಾತಿಗೆ ಪ್ರತಿಕ್ರಿಯಿಸದೆ ಇರಲಾರದೆ ಇವ–

'ಲೈಟು ಬರೋಬರಿ ಅದಾವಲ್ಲ.. ಎಲ್ಲಿ ಪೊಕಸ್ ಬಂತ್ರಿ ನಿಮಗೆ' ಅಂದ.

'ಹೌದೇನ್ರಿ.. ನನ್ನ ಕಣ್ಣ ಹಂಗದಾವ್ರಿ.. ರಾತ್ರಿ ನಿದ್ದಿನಾಗೂ ಸುಣ್ಣ ಸುರಿದಾಂಗ ಭಗ ಭಗ ಉರಿತಾವ್ರಿ.. ಒಟ್ಟ ಬೆಳಕ ಕಂಡ್ರ ಬೆಂಕಿ ಕಂಡಂಗ ಆಕತ್ರಿ' ಅಂದ. ಅವ ತನ್ನ ಕಣ್ಣಿನ ಸಮಸ್ಯೆಯನ್ನ ಪ್ರಸ್ತಾಪಿಸಿದ ಕೂಡಲೆ ತಾನು ಸ್ವಯಂ ನಿವೃತ್ತಿ ಪಡೆದುಕೊಳ್ಳಲು ಕಾರಣವಾದ ತನ್ನ ದೃಷ್ಟಿದೋಷದ ವಿಷಯವೂ ಇವನಿಗೆ ನೆನಪಾಯ್ತು. ತನ್ನ ಐವ್ವತ್ತನೆ ಇಸವಿಯಲ್ಲಿ ಅನಿವಾರ್ಯವಾಗಿ ಕಂಪ್ಯೂಟರ್ ಕಲಿಯುವ ಒತ್ತಡಕ್ಕೆ ಸಿಲುಕಿದ್ದು.. ಬ್ಯಾಂಕಿನಲ್ಲಿ ಒಂದು ಮುಂಜಾನಿಯಿಂದ – ರಾತ್ರಿ ಎಂಟರವರೆಗೆ ಆ ಕಂಪ್ಯೂಟರ್ ಎಂಬ ಬೆಳಕಿನ ಹೊಳೆಯಪ್ರಭೆ ಎದುರು ನಿತ್ಯ ಕಣ್ಣುಗಳ ತೇಲಿಸಿ, ಆಡಿಸಿ, ಓಡಿಸಿ – ಗೋಣು ಎತ್ತಿ.. ಇಳಿಸಿ.. ರಾತ್ರಿ ಕಣ್ಣುಗಳಿಗೆ ನಿದ್ದೆ ಹತ್ತದೆ, ಕಣ್ಣ ಮುಚ್ಚಿದ್ದರೆ ಮಿಂಚಿನಂತೆ ಬೆಳಕು ರೆಪ್ಪೆಯಿಂದ ಒಳನುಗ್ಗಿದಂತೆ ಆಗಿ ಆಗಿ–

ಡಾಕ್ಟರ ಹತ್ತಿರ ಹೋದರೆ ಏಳು ಸಂಖ್ಯೆ ಗ್ಲಾಸುಗಳ ಬರೆದರು.. ಅಷ್ಟಕ್ಕೂ ಮುಗಿಯದೆ ಮತ್ತೆ ಹೋದರೆ.. ಕಣ್ಣಿಗೆ ಎಣ್ಣೆ ಬಿಟ್ಟು ನೋಡಿದರು.. ಬಿ.ಪಿ. ಟೆಸ್ಟ್ ಮಾಡಿ ನಿಮಗೆ ರಕ್ತದೊತ್ತಡ ಇದೆ ಅಂದರು. ಮೂತ್ರ ಪರೀಕ್ಷಿಸಿ ಶುಗರ್ ಇದೆ ಅಂದರು.. ಸೋಡಾ ಗ್ಲಾಸು ಧರಿಸಿ ಆ ಕಂಪ್ಯೂಟರ್ ಮುಂದೆ ಕುಂತರೆ ಆ ಕಂಪ್ಯೂಟರ್ ಅಂಕಿಗಳು ಗಾಢ ಕತ್ತಲಲ್ಲಿ ಕಣ್ಣ ಮುಚ್ಚಾಲೆಯಾಡುವಂತ ನಕ್ಷತ್ರಗಳಂತೆ ಪಕ್ಕನೆ.. ಮಿನುಗಿ–ಮಾಯವಾಗಿ.. ಎಲ್ಲ ಅಯೋಮಯವಾಗಿ ಕಡೆಗೆ 'ಗೋಲ್ಡನ್ ಶೇಕ್' ಹಿಡಿದು ಗುಡ್‌ಬೈ ಎನ್ನುವ ಸ್ಥಿತಿ ಬಂತು..

ಅದೆಲ್ಲಾ ನೆನಪಾಗಿ ಇವನ ಕಣ್ಣುಗಳೇಕೆ ಹೀಗಾದವು ಎಂದು ಕೇಳುವ ಕುತೂಹಲ ಉಕ್ಕಿ ಇವ 'ನಿಮ್ಮ ಕಣ್ಣಿಗೆ ಏನಾಗೇತ್ರಿ.. ಉಬ್ಬಿಕೊಂಡವಲ್ಲ' ಅಂದ.

ಅವ ಇವನ ಮಾತಿಗೆ ತನ್ನ ಗೋಣೆತ್ತಿ 'ಇದಾs.. ಅದೊಂದು ಕತೆನ್ರಪಾs.. ನಾ ಇಂಡಸ್ಟ್ರಿಯಲ್ ಏರಿಯಾದಾಗಿನ ಒಂದು ವರ್ಕ್‌ಶಾಪ್‌ನಲ್ಲಿ ವೆಲ್ಡಿಂಗ್ ಕೆಲ್ಸ ಮಾಡ್ತಿದ್ನಿ.. ಆ ಕೆಲ್ಸ ಮಾಡೋ ವ್ಯಾಳ್ಯಾದಾಗ ಬರ್‍ತದಲ್ಲ ಬೆಂಕಿ ಕಿಡಿ.. ದಿನಾ ಅದನ್ನ ನೋಡಿ ನೋಡಿ ಹಿಂಗಾಗೆದs ಅಂತಾರಿ.. ಯಾಂವ ಬಲ್ಲ.. ನನ್ನ ನಸೀಬ ಹೇಗಿತ್ತ.. ಪಾಟೀಲ ದವಖಾನಿಯಾಗ ತೋರಿಸಿದ್ನಿ.. ಆ ಕೆ.ಎಂ.ಸಿ. ಯಾಗ ತೋರಿಸಿದ್ನಿ.. ಹಿಂಗ ತೋರಿಸಿದರಾಗ ನನ್ನ ವರ್ಕ್‌ಶಾಪ್ ಬಂದಾಗಿ ಹೊಯ್ತರಾ.. ನಮ್ಮದೊಂದೆ ಅಲ್ರಿ.. ಆ ಏರಿಯಾದಾಗ ಇದ್ದ ಬದ್ದ ಕಂಪನಿಗಳೆಲ್ಲ ಬಂದ್ ಆಗಿ ಹೋದವರಪ್ಪಾs.. ಇನ್ನು ಕೆಲ್ಸ ಹೋದ ಮ್ಯಾಗ ಕಣ್ಣ ಇದ್ದರೇನು.. ಹೋದರೇನೂಂತ ಸುಮ್ಮನಾಗಿ ಬಿಟ್ವೆನ್ರಾಪ..' ಎಂದು ಅವ ಮಾತು ಮುಗಿಸಿದ.

ಹುಬ್ಬಳ್ಳಿ–ಧಾರವಾಡದ ನಡುವೆ ಓಡಾಡುವ ವಾಹನಗಳು ಆ ಹೊಟೇಲ ಮುಂದೆ ಅದೇ ವೇಗ, ಅದೇ ಹುಚ್ಚು ಅದೇ ದಾವಂತದಿಂದ ಬೆಳಕಿನ ಬಾಣಗಳಂತೆ ಓಡುತ್ತಿದ್ದವು. ಈ ಪ್ರಿಯದರ್ಶಿನಿ ಹೊಟೇಲು ಇರುವುದೇ ಅಂಥ ಜಾಗೆಯಲ್ಲಿ.. ಪೂರ್ವಕ್ಕೆ ಜನತಾ ಬಜಾರು, ಕಮರಿ ಪೇಟೆ, ದಾಜಿಖಾನಿ ಪೇಟೆ– ಪಶ್ಚಿಮಕ್ಕೆ ಸಂಜೋತ, ಸುಜಾತ ಸಿನೇಮಾ ಮಂದಿರಗಳು, ಗಾಜಿನ ಮನೆ.. ಇಲ್ಲೆಲ್ಲಾ ಅಲೆದು ಅಲೆದು ಕಂಗಾಲಾದ ಮುದಿ ವೇಶ್ಯೆಯರು, ಭಿಕ್ಷುಕರು, ಪಿಕ್ ಪಾಕೆಟ್‌ದಾರರು.. ಭೀಕರ ಸಿನೇಮಾಗಳ ನೋಡಿ ಕುಂಡೆ–ಮಂಡೆಗಳ ಬಿಸಿ ಮಾಡಿಕೊಂಡ ರಸಿಕರು.. ಬೆವರು ಬಸಿದು ಹೈರಾಣಾದ ಹಮಾಲಿಗಳು – ಎಲ್ಲಾ ಅನಾಮದೇಯ ಅತೃಪ್ತರು, ಹಪಾಪಿಗಳು ಬಂದು ಸೇರುವ ತಂಗುದಾಣ ಈ ಪ್ರಿಯದರ್ಶಿನಿ ಎಂಬ ಅಪ್ರಿಯ ಜಾಗ.

'ವರ್ಕ್‌ಶಾಪ್ ಬಂದಾಯ್ತು ಅಂತಿರಿ– ಈಗೇನು ಮಾಡ್ತಿರಿ' ಅಂದ ಇವ. ತನ್ನ ಪ್ರಶ್ನೆಯನ್ನೆ ಇನ್ನೊಬ್ಬನ ಮುಂದಿರಿಸಿ ಅವನಿಂದ ಉತ್ತರ ಬಯಸುತ್ತಾ ನೋಡೋ ಮನುಷ್ಯ, ತಾನು ವಿ.ಆರ್.ಎಸ್ ಪಡಕೊಂಡಾಗ ಕಂಡ ಕನಸೇನು? ಆರಾಮಾಗಿ ಒತ್ತಡವಿಲ್ಲದೆ ಬೇಕಾದ್ದ ಮಾಡಿ ಉಂಡು–ತಿಂದು ಮಜಾ ಉಡಾಯಿಸಬಹುದೆಂದು ಕಟ್ಟಿಕೊಂಡಿದ್ದ ಕಲ್ಪನೆಗಳೆಲ್ಲ ಹೇಗೆ ಮಂಜಿನಂತೆ ಕರಗುತ್ತಾ ಬಂದವು

'ವರ್ಕ್‌ಶಾಪ್ ಬಂದಾಯ್ತು ಅಂತಿರಿ– ಈಗೇನು ಮಾಡ್ತಿರಿ' ಅಂದ ಇವ.
ತನ್ನ ಪ್ರಶ್ನೆಯನ್ನೆ ಇನ್ನೊಬ್ಬನ ಮುಂದಿರಿಸಿ ಅವನಿಂದ ಉತ್ತರ ಬಯಸುತ್ತಾ ನೋಡೋ ಮನುಷ್ಯ, ತಾನು ವಿ.ಆರ್.ಎಸ್. ಪಡಕೊಂಡಾಗ ಕಂಡ ಕನಸೇನು?



ಈ ಹೊಟೇಲು.. ಲಾಡ್ಜ್.. ಸಿನೇಮಾ ಮಂದಿರಗಳ ಗುಣ ಸ್ವಭಾವಗಳೇ ಹೀಗಿರಬೇಕು.. ಅಗೋಚರ ಅನಾಮಿಕರ ಮಧ್ಯೆ ಎಂಥದ್ದೊ ತಂತು ಬೆಳೆದು ತಮ್ಮವರೆದರೂ ಹೇಳಿಕೊಳ್ಳಲು ಮುಜುಗರ ಪಡುವಂಥ ರಹಸ್ಯಾತಿರಹಸ್ಯಗಳನ್ನು ಸಂಕಟಗಳನ್ನು ಇಂಥಲ್ಲಿ ಹಂಚಿಕೊಂಡು ಬಿಡುತ್ತಾರೆನೋ !

ಕಾಲ ಕಳೆಯುವುದೇ ಕಷ್ಟವಾಗಿ ಕಡೆಗೆ ತಾನೂ ದಿನಪತ್ರಿಕೆಯ 'ಬೇಕಾಗಿದ್ದಾರೆ' ಕಾಲಂನ್ನು ನೋಡಲು ಶುರು ಮಾಡಲಿಲ್ಲವೆ? ಕೂಡಿಟ್ಟ ಕುಡಿಕೆ ಹೊನ್ನು ಕೂತು ಉಂಡರೆ ಕರಗೀತೆಂಬ ಭಯಕ್ಕೆ ಸಿಕ್ಕು ಎಲ್ಲಿಯಾದರೂ ಪಾರ್ಟ್ ಟೈಂ ಸಿಕ್ಕಿತೇ ಎಂದು ಆಫೀಸ್‌ಗಳ ಹುಡುಕಿಕೊಂಡು ಹೋದೆನಲ್ಲವೆ.. ಹೋದಾಗ ಅಲ್ಲಿ ಆದ ಅವಮಾನವೆಂಥಹದ್ದು.. ತನ್ನ ಮಕ್ಕಳಂತಹ ವಯಸ್ಸಿನ ಹುಡುಗರು ಮೇನೆಜರ್.. ಆಫೀಸರ್ಸ್.. ಬಾಸ್‌ಗಳು.. ಅದರಲ್ಲಿ ಒಬ್ಬ 'ಏನ್ರಿ ನಿಮಗೆ ಸರಿಯಾಗಿ ಒಂದು ಲೆಟರ್ ಡ್ರಾಫ್ಟ್ ಮಾಡಕೆ ಬರಲ್ಲ.. ಅದೆಂಗೆ ಇಷ್ಟು ದಿನ ಬ್ಯಾಂಕ್‌ನಲ್ಲಿ ಕೆಲ್ಸ ಮಾಡಿದಿರಿ.. ನಿಮ್ಮ ಇಂಥ ಕೆಲ್ಸ ನೋಡಿಯೇ ನಿಮಗೆ ವಿ.ಆರ್.ಎಸ್. ಕೊಟ್ಟು ಮನಿಗೆ ಕಳ್ಸಿರಬೇಕು..' ಅಂದರೆ ಮತ್ತೊಬ್ಬ.. 'ನೀವು ಬಹಳ ಸ್ಲೋ.. ಒಂದು ದಿನ ಮಾಡೋ ಕೆಲ್ಸ ನಾಕು ದಿನ ಮಾಡ್ತಿರಿ..' ಅಂದ. ಎಂಥೆಂಥ ಕಟು ಅನುಭವಗಳು !

ಅವ ತನ್ನ ಮಾತು ಶುರು ಮಾಡಿದ.. 'ಸರ ಮನೆಯಾಗ ಕುಂತರೆ ಹೆಂಡ್ರು ಸುಮ್ನ ಬಿಟ್ಟರಾ.. ಆಕಿ ಕಾಟ ತಾಳಲಾರದೆ ಅಲ್ಲಿ ಇಲ್ಲಿ ಹಮಾಲಿ ಮಾಡ್ತಿನಿ.. ದಿನಾ ಮನಿಗೆ ಹದಿನೈದೋ.. ಇಪ್ಪತ್ತೋ ಒಯ್ತಿನಿ.. ಹೆಂಡರನ್ನ ಎಲ್ಲಿಡಬೇಕೋ ಅಲ್ಲಿಡಬೇಕು.. ಸಡ್ಲಕೊಟ್ಟುಕೋತ ಬಂದೆ.. ಈಗ ಆ ಬೇವಾರ್ಸಿ ನನ್ನ ಮ್ಯಾಲ ಕೈ ಮಾಡೋ ಹಂಗೆ ಆಗ್ಯಾವಳೆ.. ಅವಳ ಮಾತು ಕೇಳಿ ಆಕಿ ತಮ್ಮಗ ನನ ಮಗಳು ಕೊಟ್ಟೆ.. ನನ್ನ ಕಂಪನಿ ಬಂದಾದಾಗ ನನ್ನ ಕೈಗೆ ಮುವ್ವತ್ತು ಸಾವಿರ ರೂಪಾಯಿ ಬಂದಿದ್ದವು ಸರಾ.. ಅದನ್ನ ಆಕಿ ಕೈಗೆ ಕೊಟಿದ್ನ.. ಆಕಿನೂ.. ಆಕಿ ತಮ್ಮನೂ ಸೇರಿ ಏನ ಮಾಡಿದರೋ.. ಏನೋ ದುಡ್ಡೂ ಹೋದ್ವು.. ಮಗಳು ಮನಿಯಾಗ ಬಂದು ಕುಂತ್ಲು..' ಅವ ಒಂದು ದೊಡ್ಡದಾದ ನಿಟ್ಟುಸಿರು ಬಿಟ್ಟ.

ಅವನು ಬಿಟ್ಟ ನಿಟ್ಟುಸಿರು ಇವನಿಗೆ ಹತ್ತಿಕೊಂಡಿತು...

ಇನ್ನು ತನ್ನ ಜೀವನದಲ್ಲಿ ಕಂಕಣ ಭಾಗ್ಯವೇ ಇಲ್ಲವೇನೋ ಎಂದು ದೀನನಾಗಿ ನಿಲ್ಲುವ ತನ್ನ ಮಗಳ ಮುಖ ತೇಲಿ ಬಂತು.. ಆಕೆಯನ್ನು ನೋಡಲು ಬಂದ ವರಗಳೆಷ್ಟು? ಅವರ ಡಿಮಾಂಡ್‌ಗಳೆಷ್ಟು.. ಮನೆಯೊಂದರಲ್ಲಿ ಮದುವೆಗೆ ಬೆಳೆದು ನಿಂತ ಮಗಳು.. ಓದಿ ಖಾಲಿ ಪೋಲಿಯಾಗಿ ಅಲೆವ ನಿರುದ್ಯೋಗಿ ಮಗ ಇದ್ದರೆ ಯಾವ ಪಾಲಕರ ಕಣ್ಣಿಗೆ ನಿದ್ದೆ ಹತೀತು... ಪ್ರತಿ ಮುಟ್ಟು ಹೆಣ್ಣಿನ ಅಂತರ್ಯದ ಗುಟ್ಟು ಹೇಳುತ್ತದೆಯೆ ? ಮುಟ್ಟಾಗಿ ಆಕೆ ತೊಳೆದು ಹರವಿದ ಆ ರಕ್ತ ಸಿಕ್ತ ಒಳ ಉಡುಪುಗಳ ನೋಡಿದಾಗೆಲ್ಲ ನನಗೆ ಎಷ್ಟು ನೋವಾಗುತ್ತದೆ.. ಎರಡು ದಿನ ರಕ್ತದೊತ್ತಡ ಇರುತ್ತದೆ... ಯಾವನನ್ನಾದರೂ ಪ್ರೀತಿಸಿ ಅವನನ್ನು ಕಟ್ಟಿಕೊಂಡು ಓಡಿ ಹೋದರೂ ನನಗೆ ದುಃಖವಾಗಲಿಕ್ಕಿಲ್ಲ.. ಒಳಗೊಳಗೆ ಒಂದು ಬಗೆಯ ಬಿಡುಗಡೆಯ ಆನಂದ ಜ್ವಲಿಸಬಹುದೇನೋ...

ಹುಬ್ಬಳ್ಳಿಗೆ ರಾತ್ರಿ – ಬಂದರೆ ಅದಕ್ಕೊಂದು ರಂಗು ಏರುತ್ತದೆ.. ನಿತ್ಯ ಕಾಮನ ಹಬ್ಬ.. ಯಾಕೋ ಅವನಿಗೆ ಈ ಹೊಟೇಲಿಂದ ಎದ್ದು ಹೋಗಬೇಕೆನಿಸಲಿಲ್ಲ.. ಸುಖೀ ಮನೆಯೆಂಬುದು ಆ ಮನೆಯಲ್ಲಿ ಕಾಲಕಾಲಕ್ಕೆ ಜರುಗಬಹುದಾದ ಘಟನೆಗಳು ನಿಯತಗತಿಯಲ್ಲಿ ಘಟಿಸುತ್ತಾ ಹೋದರೆ ಅದೊಂದು ಸಂತೃಪ್ತ ಕುಟುಂಬ.. ಇಲ್ಲವಾದರೆ ಮನೆ ಬಂಧಿಖಾನೆ.. ಅಲ್ಲಿ ಬದುಕುವವರು ಪ್ರತಿಯೊಬ್ಬರು.. ಇನ್ನೊಬ್ಬರನ್ನು ಕರ್ತವ್ಯಲೋಪ ಮಾಡಿದವರಂತೆ ಆಪಾದಿಸುತ್ತ ಪಾಪ ಭೀತಿಯಿಂದ ತುಟಿಕಚ್ಚಿಕೊಂಡು ವಿಷಾದ ಮತ್ತು ತಪ್ತತೆಯಲ್ಲಿ ದಿನಗಳ ದೂಡಬೇಕಾಗುತ್ತದೆ... ಎದುರು ಕೂತ ಅವನಿಗೂ.. ತನಗೂ ಏನಿದೆ ಫರಕ್ಕು.. ಅವನ ಕಣ್ಣುಗಳು ಉಬ್ಬಿವೆ.. ನನ್ನ ಕಣ್ಣುಗಳು ಇಂಗಿವೆ... ಅಷ್ಟೇ...

'ನೋಡ್ರಿ ಸಾರ್.. ನನಗೀಗ ಐವತ್ತು ವರ್ಷ.. ಮುದಕನ ಥರ ಕಾಣ್ತೆನಲ್ಲ.. ನನ್ನ ಕಣ್ಣ ಮುಂದೆ ಎಷ್ಟು ಜನ ಸತ್ತರು.. ನನ್ನಪ್ಪ ಸತ್ತ – ನನ್ನ ಕಾಕ ಸತ್ತ.. ಕಾಕಿ ಸತ್ತಳು.. ನಂಗೂ ಒಬ್ಬ ಮಗ ಇದ್ದ.. ಅವ ಸಣ್ಣ ಹುಡುಗನಾಗಿದ್ದಾಗ ಇದೇ ನನ್ನ ತೊಡೆಮ್ಯಾಗ ಹೆತಗಂಡು.. ವಾಂತಿ ಮಾಡಿಕೊಂಡು ಕಣ್ಣು ಮುಚ್ಚಿದ.. ಸರ ನಮ್ದು ದೊಡ್ಡ ಮನೆತನ, ಇಲ್ಲೆ ಜಂಗ್ಲಿಪೇಟೇಯಾಗ ಐದು ಅಂಕಳದ ಮನಿ.. ಮನೆ ಹಿಂದೆ ದೊಡ್ಡ ಹಿತ್ಲು.. ಆ ಹಿತ್ಲಾಗ ದೊಡ್ಡ ಅತ್ತಿ ಹಣ್ಣಿನ ಮರ.. ಆ ಮರದಾಗ ಒಬ್ಬಾಕಿ ದೇವಿ ಅದಾಳಂತ ನಮ್ಮ ಮನೆತನದವರು ನಂಬಿಕೊಂಡು ಪೂಜಿ ಮಾಡಿಕಂಡು ಬಂದಿದ್ದರು.. ಆ ಮರನಾ ನಮ್ಮ ಹಿರಿಯರು ಹಚ್ಚಿ ಬೆಳೆಸಿದ್ದರಂತ.. ಅದರ ಕೆಳಗೊಂದು ಸಣ್ಣ ಗುಡಿನೂ ಇತ್ತು.. ಮಂದಿ ಬೇಡ ಬೇಡಾಂದರೂ ನಮ್ಮಪ್ಪ ಅದನ್ನ ಕಡ್ಸಿದ.. ಅದ್ನ ಕಡಿದ ಹದಿನೈದ ದಿನಕ್ಕೆ ಅವ ಸತ್ತ.. ವರ್ಷ ಅಂಬೋದರೊಳಗ ಮನೆಯಾಗ ಮೂರು ಮಂದಿ ಸತ್ತರು...

ಜಂಗ್ಲಿ ಪೇಟೆಯ ಮನೆಯ ಕಥೆ ಜೊತೆ ಜೊತೆ ಇವನ ವಿಜಯನಗರದ ಮನೆಯ ಕತೆಯೂ ಇವನ ಮನದೊಳಗೆ ಬಿಚ್ಚಿಕೊಳ್ಳತೊಡಗಿತು.. ಮನೆಯ ವಾಸ್ತುವೇ ಸರಿಯಿಲ್ಲವಂತೆ.. ಅದಕ್ಕೆ ಮಗಳಿಗೆ ಮದುವೆಯಾಗಿಲ್ಲವಂತೆ.. ಮಗನಿಗೆ ಕೆಲಸ ಸಿಕ್ಕಿಲ್ಲವಂತೆ.. ಅದೇನೋ ಅಗ್ನಿ, ವಾಯುವ್ಯ, ನೈರುತ್ಯ, ಈಶಾನ್ಯ ಇತ್ಯಾದಿ ಅಷ್ಟ ದಿಕ್ಪಾಲಕರು ವಕ್ರದೃಷ್ಟಿ ಬೀರಿದ್ದಾರಂತೆ.. ಹೆಂಡ್ತಿಯ ಕಾಟ ತಾಳಲಾರದೆ ವಾಸ್ತುಶಿಲ್ಪಿಗಳೆಂಬ ಆಧುನಿಕ ಮಂತ್ರವಾದಿಗಳನ್ನ ಮನೆಗೆ ಕರಕೊಂಡು ಬಂದರೆ.. ಅಡಗಿದ ಬಾಂಬನ್ನು ಪತ್ತೆ ಹಚ್ಚುವ ಪೊಲೀಸ್ ಸ್ಕ್ವಾಡ್‌ಗಳಂತೆ ಅಡುಗೆ ಮನೆ, ಬಚ್ಚಲು ಮನೆ.. ಪಾಯಿಖಾನೆ ಇತ್ಯಾದಿ ನುಗ್ಗಬಾರದ ಜಾಗಗಳಿಗೆಲ್ಲಾ ನುಗ್ಗಿ.. ಕೈಯಲ್ಲಿನ ವಾಸ್ತು ಪಟವನ್ನು ನೆಲದ ಮೇಲೆ ಹರಡಿ... 'ಏನ್ರಿ ಬಚ್ಚಲು ಇರೋ ಕಡೆ ಪೂಜೆ ಮನಿ ಮಾಡಿರಿ.. ಅಡುಗೆ ಮನೆ ಇರೋ ಕಡೆ ಬೆಡ್‌ರೂಂ.. ಮಾಡಿರಿ' ಎಂದೆನ್ನುತ್ತ ಇಡೀ ಮನೆಯೆಂಬ ಮನೆಯನ್ನೆ ಕಿತ್ತಾಕ್ಷವರಂತೆ ಸಲಹೆ ನೀಡುತ್ತಾ..'

ಇರಲಿ ಇದರಾಗ ಒಂದಷ್ಟು ಅಡ್ಜೆಸ್ಟ್ ಮಾಡೋಣ.. ಶಾಂತಿ ಮಾಡಿಸೋಣ..' ಅಂದು ತಾವು ಶಾಂತರಾಗಿ ಮನೆಯಲ್ಲಿ ಅಶಾಂತಿಯ ಅಲೆಗಳ ಎಬ್ಬಿಸಿ ಹೋಗುವವರೇ..

ಅವ ಮತ್ತು ಇವ ಈ ವಿಚಿತ್ರ ಮುಹೂರ್ತದಲ್ಲಿ ಮುಖಾಮುಖಿಯಾಗಿ ಅರ್ಥ ತಾನೇ ಆಗಿರಬೇಕು.. ಪ್ರಿಯದರ್ಶಿನಿ ಹೊಟೇಲಿನವನಿಗೆ ನಿತ್ಯ ಇಂಥ ಅನಾಮಧೇಯರ ಅಸಂಬದ್ಧ ಪ್ರಲಾಪಗಳ ಕೇಳಿ ರೂಢಿಯಾಗಿರಬೇಕು.. ಈ ಹೊಟೇಲು.. ಲಾಡ್ಜ್.. ಸಿನೇಮಾ ಮಂದಿರಗಳ ಗುಣ ಸ್ವಭಾವಗಳೇ ಹೀಗಿರಬೇಕು.. ಅಗೋಚರ ಅನಾಮಿಕರ ಮಧ್ಯೆ ಎಂಥದ್ದೊ ತಂತು ಬೆಳೆದು ತಮ್ಮವರೆದರೂ ಹೇಳಿಕೊಳ್ಳಲು ಮುಜುಗರ ಪಡುವಂಥ ರಹಸ್ಯಾತಿರಹಸ್ಯಗಳನ್ನು ಸಂಕಟಗಳನ್ನು ಇಂಥಲ್ಲಿ ಹಂಚಿಕೊಂಡು ಬಿಡುತ್ತಾರೆನೋ !

"ಸರ್ ನನಗೂ ಜೀವನ ಸಾಕೇಗದs.. ಎಷ್ಟೋ ಸಾರಿ ಆತ್ಮಹತ್ಯೆ ಮಾಡಿಕೋ ಬೇಕು ಅಂದುಕೊಂಡಿದಿನಿ.. ಹಿಂಗಿದ್ದರೂ ವಾರಕ್ಕೊಮ್ಮೆ ಬರ್ತಿನಿ.. ಒಮ್ಮೆ ಬ್ಯಾಸರಾಗಿ 'ಗುರು ಸಿದ್ದೇಶ್ವರ ಸಾಕು ನನ್ನ ಕರ್ಕಂಡು ಬಿಡಪ್ಪ' ಅಂತ ಕೈಮುಗಿದೆ. ರಾತ್ರಿ ಕನಸಿನಾಗ ಸ್ವಾಮಿಗಳು ಬಂದು.. 'ಬ್ಯಾಡ ನಿಂದು ಟೈಮಾಗಿಲ್ಲ.. ಆತ್ಮಹತ್ಯೆ ಮಾಡಿಕೊಂಡರೆ ಸ್ವರ್ಗ ಸಿಗಲ್ಲ ತಾಳಿಕೊಂಡಿರು' ಅಂದರು. ಸೋಮವಾರ ಸತ್ತರೆ ದೇವರ ಬಾಗ್ಲು ಖಿಲ್ಲಾ ಇರ್ತದೆ.. ಬಾಕಿ ದಿನ ಸತ್ತರೆ ಮತ್ತೆ ಹೊಳ್ಳಿ ಬರಬೇಕಾಗ್ತದೆ.. ಆ ದೇವ್ರು ನಾವು ಸತ್ತಾಗ ನಮ್ಮದೊಂದ ಕೂದಲನಾಟೆ ಒಯ್ತಾನ ಪರಿಕ್ಷಾ ಮಾಡಕೆ.. ಅದನ್ನ ಪರಿಕ್ಷಾ ಮಾಡಿ ನಾವು ಮುಂದೆ ಯಾವ ಜನ್ಮಕ ಹೋಗಬೇಕೂಂತ ಹೇಳ್ತಾನೆ.. ಕೇಳ್ತಿದಿರ ಸರ್ ನನ ಮಾತು...

ಅವನ ಮಾತು ಹಾಗೆ ನಿರರ್ಗಳವಾಗಿ ಹರಿಯುತ್ತಿದ್ದರೆ ಇವನ ಮನೋಗತದಲ್ಲಿ ಅದಕ್ಕೆ ಅನುರೂಪವಾದ ಬುದ್ಬುದಗಳೆದ್ದು.. "ನಗರ ಜೀವನ ಬೇಕಾಗಿದೀ ಅಂತಿ.. ಡಿಪ್ರಶನ್ ಅಂತರಲ್ಲ ಅದು ಕುತ್ತಿಗೆ ಮ್ಯಾಗ ಕುಂತು ಮುಳುಗೂ ಮುಳುಗೂ ಅಂತದೆ.. ಕುಂತರೂ, ನಿಂತರೂ, ಉಂಡರೂ, ಅಡ್ಡಾಡಿದರೂ ಎಲ್ಲಿ ಸಮಧಾನಿಲ್ಲ.. ಯಾವುದೋ ಅದೃಶ್ಯ ಸಂಚಿತ ಭೂತ ಬೆನ್ನೇರಿದೆ.. 'ಏನ್ರಿ ನಿದ್ದೆಗಣ್ಣಾಗ ಎದ್ದು ಒಡಾಡ್ತಿರಿ.. ನಿಮಗೇನ ದೆವ್ವ ಬಡಕೊಂಡತಾ..' ಅಂತಾಳೆ ಆಕೆ.. ಏನಾರ ಕಡಿಮೆಯಾಗಬಹುದೂಂತ ಯೋಗಕ್ಲಾಸ್‌ಗೆ ಸೇರಿ ಆಸನ ಹಾಕಿದೆ.. ಉಸಿರ ಬಿಗಿ ಹಿಡಿದು ಪ್ರಾಣಾಯಾಮ ಮಾಡಿದೆ.. ಎಲ್ಲದೂ ಯಾಂತ್ರಿಕ ಅನ್ನಿಸಿ ಬಿಟ್ಟು ಬಿಟ್ಟೆ.. ಏನೋ ನಾಲ್ಕು

ದಿನ ಮೇಲು ಮೇಲಿನ ಸಮಧಾನ.. ಮತ್ತೆ ಯಥಾ ಪ್ರಕಾರ.. ಬರೀ ದುಡ್ಡ ದಂಡ...''

ಇವನ ಆಲೋಚನ ಲಹರಿಯನ್ನ ತುಂಡವರಿಸುವನಂತೆ ಅವ.. ''ಸರ್ ಹೊಸೂರಾಗ ಒಂದು ಪೈಪ್ ಅಂಗಡಿ ಅಯಿತ್ರಾ.. ದಿನಾ ಅಲ್ಲಿಗೆ ಗುಜರಾತಿನಿಂದ ಲೋಡು ಬರ್ತಾವ.. ಅದ್ನ ಅನ್‌ಲೋಡ್ ಮಾಡ್ತಿವಿ.. ನೋಡ್ರಿ ಮುಂಜಾನಿ ಹನ್ನೊಂದಕ್ಕೆ ಅನ್‌ಲೋಡ ಶುರು ಮಾಡಕ್ಕೆ ಹಚ್ಚಿಗೊಂಡಿವಿ.. ಸಂಜಿಕ ಮುಗಿತು.. ನನ ಕೂಡ ಕಂಪನ್ಯಾಗ ಕೆಲ್ಸ ಮಾಡ್ತಿದ್ದ ನಾಲ್ಕೈದು ಮಂದಿ ಹಮಾಲರಾಗ್ಯರ.. ಕಂಪನಿಗಳೆಲ್ಲ ಬಂದ್ ಆಗಿ ಮಂದಿ ಕೈಗೆ ಸಿಕ್ಕ ಕೆಲ್ಸನ ಒಲ್ಲೆ ಅನ್ನದಂಗ ಮಾಡಕಿತ್ಯಾರ.. ದಿನಕ ಹೆಂಗೋ ಐವ್ವತ್ತೋ ಅರವ್ವತ್ತೊ ಸಿಕ್ತಾವ.. ಹಸಿವಾಗಿತ್ತರಾऽ ಏನಾರ ತಿನ್ನಾಣ ಅಂತ ಈ ಹೊಟೇಲಿಗೆ ಬಂದೆ..'' ಅಂದು ಅವ ಮಾತು ಮುಗಿಸಿದ.

ಅವ ಮಾತು ಮುಗಿಸಿದ ಮರುಕ್ಷಣ ಇಡೀ ದಿನ ಇಂಥ ಸಣಕಲ ಮೈಯನ್ನು ಇಟಗೊಂಡು ಇವ ಹೆಂಗ ಹಮಾಲಿ ಕೆಲಸ ಮಾಡುತ್ತಾನೆಂದು ಪರೀಕ್ಷಿಸುವವನಂತೆ ಇವ ಅವನನ್ನು ನಖಶಿಖಾಂತ ಆ ಕತ್ತಲಲ್ಲೂ ಕಣ್ಣ ಹಿಗ್ಗಲಿಸಿ ನೋಡಿದ. ದೂಡಿದರೆ ದೊಪ್ಪನೆ ಮಕಾಡೆ ಬೀಳುವಂತಹ ಪೀಚಲು ಮೈ.. ಆಪ್ ಶರ್ಟಿನಿಂದ ಕೆಳಗೆ ಇಳಿದು ಬಿದ್ದ ಒಣಗಿದ ಜಾಲಿಯ ಕಟ್ಟಿಗೆಯಂತ ಕಪ್ಪು ಕೈ ಮೇಲೆ ಹರಿದ ಕಪ್ಪು ತಂತಿಯಂತಹ ಉಬ್ಬಿದ ನರಗಳು.. ಬಳುಚಿಕೊಂಡ ಉಗುರಿನ ಒಣ ಪಾದಗಳು.. ಕುತ್ತಿಗೆಯಿಂದ ನೆತ್ತಿಗೆ ಜೋಡಿಸಿದಂತ ರುಂಡ.. ಕುತ್ತಿಗೆಯ ಕೆಳಗೆ ಗುಂಡಿ ಬಿದ್ದ ಎದೆ... ಉಗುಳು ನುಂಗುವಾಗೊಮ್ಮೆ ಮೇಲೆ ಹೋಗಿ ಪಟ್ಟನೆ ಕೆಳಗೆ ಇಳಿಯುವಂತಹ ಗೋಲಿಯಂತಹ ಗಂಟಲಿನ ಚಲನೆ.. ಇವನಲ್ಲಿ ಇಡೀ ಹಗಲು ದುಡಿಯುವಂತಹ ದಮ್ಮು ಏನಿದೆಯೋ...

''ಅಲ್ರಿ ನಿವಿಂಗ ಸಣಕಲ ಅದಿರಿ.. ಅದೆಂಗ ಹಮಾಲಿ ಮಾಡ್ತಿರಿ'' ಅಂದ ಇವ.

ಅವ ತನ್ನೊಳಗಿನ ಶಕ್ತಿಯೆಲ್ಲವನ್ನೂ ಬಲ ಮುಂಗೈಗೆ ಸಳೆದು ತನ್ನ ಬಲ ಪ್ರದರ್ಶನವನ್ನ ಮಾಡುವವನಂತೆ ಇವನ ಮುಂದೆ ಚಾಚಿ ಮುಷ್ಠಿ ಮಾಡಿ.. ಅವ ''ನೊಡಾऽರ ನೋಡ್ರಿ ಸರ.. ಇದೊಂದ ಕೈ ನಂದು ಬರೋಬರಿ ಇರಾದು.. ನನ್ನ ಎಡಗೈನಾಗ ಏನೂ ಸಕ್ತಿ ಇಲ್ಲ.. ಆದರ ಒಂದು ನಿರ್ಧಾರ ಮಾಡೇನಿ ಏನೇ ತ್ರಾಸಾದರೂ ಈ ದೇಹದ ಮ್ಯಾಗ ಡಾಕ್ಟರ ಕತ್ತಿ ಬೀಳಬಾರ್ದೂಂತ.. ಅದ್ಕ ಉಂಡ ಮ್ಯಾಗ ತಟ್ಟೆನ ಚನ್ನಾಗಿ ತೊಳ್ಕಂಡು ದಿನಾ ಮುಸುರಿ ನೀರ ಕುಡಿತಿನಿ.. ನಂಗ ಒಬ್ಬ ಸ್ವಾಮೇರ ಹೇಳ್ಯಾऽರ.. 'ಮುಸುರೆ ನೀರಂದ್ರ ಅಮೃತಾಂತ'- ಆದರೂ ದಿನಾ ಸಂಜಿ ಮುಂದ ಹತ್ತ ರೂಪಾಯಿ ಸೆರೆ ಕುಡಿತಿನಿ.. ಸೆರೆ ಕುಡಿದನಂದ್ರ ತಲಿ ತಣ್ಣಗಾಗತ್ತೆ.. ಕಣ್ಣಾಗಿನ ಉರಿ ಒಂದ ತಟಗು ತಂಪಾಗ್ತದ.. ಕಣ್ಣಿಗೆ ನಿದ್ದೆ ಹತ್ತದ.. ಹೆಂಡ್ತಿ ಏನರ ಯಾಕ ಅನ್ನುವಳ್ಳು.. ಈ ಕಿವಿಲಿ ಕೇಳಿ ಆ ಕಿವಿಲಿ ಬಿಟ್ಟು ಮುಸಗಾಕ್ಕಂಡು ಮಕ್ಕಂತಿನಿ.. ನಾ ಆಕಿ ಮುಂದ ಸಾಯಬೇಕೂಂತ ಬಯಸಿನಿ.. ಸತ್ತರ ಒಂದು ಹಿಡಿ ಮಣ್ಣಾದರೂ ಆಕ್ತಾಳೆ..' ಅಂದ ಅವ ಈಗಷ್ಟೇ ತನ್ನ ಎದುರಿನ ಮನುಷ್ಯನ ಕಣ್ಣುಗಳನ್ನು ನೋಡಿದವನಂತೆ.. 'ಯಾಕ್ರಿ ನಿಮ್ಮ ಕಣ್ಣು ಒಳಕ್ಕೆ ಹೋಗಿ ಬಿಟ್ಟಾವऽ.. ಕಣ್ಣ ಗುಡ್ಡಿನ ಕಾಣಿಸವಲ್ಲವು..' ಅಂದು ಅವನೂ ಬೆಚ್ಚಿ ಕುಂತ.

ಹುಬ್ಬಳ್ಳಿಯನ್ನು ಧಗಧಗ ಬೆಳಗುತ್ತಿದ್ದ ಕರೆಂಟ್ ಫಕ್ಕನೆ ಯಾವುದೋ ಕರೆಗೆ ಓಗೊಟ್ಟು ಓಡಿ ಹೋದಂತೆ ಹಾರಿ ಹೋಯಿತು. ಕತ್ತಲ ಸಾಮ್ರಾಜ್ಯದಲ್ಲಿ ಅಲ್ಲಲ್ಲಿ ಕೂತ ಮಂದಿ, ಓಡಾಡುವ ಮಂದಿಯ ಚಹರೆ - ರೂಪಗಳೆಲ್ಲಾ ನಿರ್ನಾಮವಾಗಿ ಅವರೆಲ್ಲಾ ಕತ್ತಲದ ಮೇಣದ ಗೊಂಬೆಗಳಂತೆ ಕಂಡು ಬಂದರು.. ದನಿ, ಶಬ್ದ ಕಂಪನಗಳೆ ಪರಸ್ಪರರನ್ನು ಸಂಪರ್ಕಿಸುವ ಸಾಧನಗಳಾಗಿ ಅವು ಮತ್ತೂ ಜೋರಾದವು. ಬೆಳಕೇ ತಾತ್ಪೂರ್ಕಿಕ ಕತ್ತಲೆಯೇ ಶಾಶ್ವತವೇನೋ ಎನ್ನುವಂಗೆ ಕತ್ತಲು ಗಾಢವಾಯಿತು.. ಪ್ರಿಯದರ್ಶಿನಿ ಹೊಟೇಲ ಮಾಲಿಕ ಬಂದು ಮೇಣದ ಬತ್ತಿ ಹಚ್ಚಿ ತನ್ನ ಗಲ್ಲದ ಮೇಲೆ ಇರಿಸಿ - ಸುತ್ತೂ ನೋಡಿದ.



ಹುಬ್ಬಳ್ಳಿಯನ್ನು ಧಗಧಗ ಬೆಳಗುತ್ತಿದ್ದ ಕರೆಂಟ್ ಫಕ್ಕನೆ ಯಾವುದೋ ಕರೆಗೆ ಓಗೊಟ್ಟು ಓಡಿ ಹೋದಂತೆ ಹಾರಿ ಹೋಯಿತು. ಕತ್ತಲ ಸಾಮ್ರಾಜ್ಯದಲ್ಲಿ ಅಲ್ಲಲ್ಲಿ ಕೂತ ಮಂದಿ, ಓಡಾಡುವ ಮಂದಿಯ ಚಹರೆ - ರೂಪಗಳೆಲ್ಲಾ ನಿರ್ನಾಮವಾಗಿ ಅವರೆಲ್ಲಾ ಕತ್ತಲದ ಮೇಣದ ಗೊಂಬೆಗಳಂತೆ ಕಂಡು ಬಂದರು.. ದನಿ, ಶಬ್ದ, ಕಂಪನಗಳೆ ಪರಸ್ಪರರನ್ನು ಸಂಪರ್ಕಿಸುವ ಸಾಧನಗಳಾಗಿ ಅವು ಮತ್ತೂ ಜೋರಾದವು. ಬೆಳಕೇ ತಾತ್ಪೂರ್ಕಿಕ ಕತ್ತಲೆಯೇ ಶಾಶ್ವತವೇನೋ ಎನ್ನುವಂಗೆ ಕತ್ತಲು ಗಾಢವಾಯಿತು..

ತಾಮ್ರವರ್ಣದ ಮಂದ ಬೆಳಕು ಗಾಳಿಯಂತೆ ಅಲ್ಲಿ ಹರಡಿತು. ಕ್ಲಿನರ್‌ಗಳು ಹೊಟೇಲ್ ಬಂದ್ ಮಾಡುತ್ತೇವೆಂದು ಸೂಚಿಸುವೋಪಾದಿಯಲ್ಲಿ ತಟ್ಟೆ ಲೋಟ ಚಮಚಗಳನ್ನ ಬೊಗುಣಿಗಳಿಗೆ ತುಂಬುತ್ತಾ ದೊಡ್ಡ ಸದ್ದು ಎಬ್ಬಿಸಿದರು. ಕೆಲವಾರು ಅಂಗಡಿಯವರು ಸ್ಟಾರ್ಟ್ ಮಾಡಿದ ಜನರೇಟ್‌ಗಳು ಭಂವ್ ಎಂದು ಒದರತೊಡಗಿದವು..

'ಕಣ್ಣು ಉಬ್ಬಿದರೂ ತ್ರಾಸು, ಕಣ್ಣು ಒಳಗೆ ಹೋದರೂ ತ್ರಾಸು.. ಈಗ ಯಾರ ಕಣ್ಣು ಸಮ ಅದಾವ್ರಿ..' ಅಂದ ಅವ ಸೂಟಕೇಸು ಎತ್ತಿಕೊಂಡ. ಅವನ ಜೊತೆ ಇವನೂ ಮೇಲೆದ್ದು ತನ್ನ ಮಾತಿಗೆ ಒಂದು ಉಪಸಂಹಾರ ಮಾಡುವವನಂತೆ 'ಸರ ನಾನು ಆ ಕಾಲದಾಗ ಪಿ.ಯು.ಸಿ. ಓದಿದವ. ಏನ ಓದಿದರೇನು? ಏನ ಮಾಡಿದರೇನು?.. ಜೀವನದಾಗ ನಾವು ಪಾಪ ಮಾಡಿದಿದ್ದರೂ ಮಂದಿ ಮಾಡೋ ಪಾಪನೂ ನಮಗ ಬಡಕೊಳ್ಳತೈತ್ರಿಯಪ್ಪಾ.. ನೋಡ್ರಿ..

ರಾಮಗಷ್ಟ ವನವಾಸ ಅಂತ ಇತ್ತು.. ಆದರೆ ಅವನ ಕೂಡ ಸೀತೆ, ಲಕ್ಷ್ಮಣ ಕೂಡ ವನವಾಸಕ್ಕೆ ಹೋದರು.. ರಾವಣ ಮಾಡಿದ ತಪ್ಪಿಗೆ ಲಂಕೆನೇ ಸುಟ್ಟು ಹೋಯ್ತು.. ಹಂಗ ಕೆಟ್ಟರ ಕೂಡ ಇದ್ದರ ಅವರ ಕೆಟ್ಟತನನೂ ನಮಗ ಅಂಟಿಕೊಳ್ಳತ್ತದ.. ಬರ್ತಿನ್ರಿಯಪ್ಪಾ.. ನಿಮ್ಮ ತಾವ ಮಾತಾಡಿ ನನ್ನ ಹೊಟ್ಟೆಯಷ್ಟು ಹಗುರಾತು...'' ಎಂದು ಅವನೂ ಹೊರಟ.

ಇಷ್ಟತ್ತೂ ಮಾತಾಡಿದ ತಾವು ಪರಸ್ಪರ ಒಬ್ಬೊಬ್ಬರ ಹೆಸರನ್ನೆ ಕೇಳಿಕೊಳ್ಳಲಿಲ್ಲವಲ್ಲ? ತಮ್ಮ ಹೆಸರೇನೆಂದು ಕೇಳುವ ಆತುರತೆಯಿಂದ ಅವರಿಬ್ಬರೂ ಒಮ್ಮೆಗೆ ಎದುರು ಬದರಾಗಿ ನಿಂತರು.. ಆ ಕತ್ತಲಲ್ಲಿ ಆ ಮುಖಗಳಲ್ಲಿ ಅಂಥವೇ ಕೊಟ್ಯಾಂತರ ಅಗಣಿತ ಅನಾಮಧೇಯ ಮುಖಗಳು ಕ್ಷಣ ಪ್ರತಿಫಲಿಸಿ ಹಂಗೆ ಮಿಂಚಿ ಮಾಯವಾಗಿ ಹೋದವು.. ಹೆಸರಲ್ಲಿ ಏನಿದೆ - ಎಂದು ಅವರಿಬ್ಬರು ಕತ್ತಲಿಗೆ ಬಿದ್ದು ಈಜತೊಡಗಿದರು. ❑

ಭಾರತದ ಒಕ್ಕಲುತನ - ತಿಕ್ಕಲುತನ



ಪ್ರಾಥಮಿಕ ಸೌಲಭ್ಯಗಳ ಕೊರತೆಯ ಮಧ್ಯದಲ್ಲೂ ಭಾರತೀಯ ರೈತ ಮೊದಲು ಉತ್ಪಾದಿಸುತ್ತಿದ್ದುದಕ್ಕಿಂತ ನಾಲ್ಕು ಪಟ್ಟು ಹೆಚ್ಚು ಉತ್ಪಾದಿಸತೊಡಗಿದ್ದಾನೆ. ಆದರೆ ಅವನ ಪರಿಸ್ಥಿತಿಯಲ್ಲಿ ಏನಾದರೂ ಬದಲಾವಣೆ ಕಂಡಿದೆಯೆ ? ಅವನ ಬಡತನ ನಿವಾರಣೆಯಾಗಿಲ್ಲ. ಆಧುನಿಕ ಕೃಷಿ ಪದ್ಧತಿ ಅವಲಂಬಿಸಿದಷ್ಟೂ ಖರ್ಚು ವೆಚ್ಚ ಹೆಚ್ಚುತ್ತದೆ.

○ ಅಲ್ಲಮಪ್ರಭು ಬೆಟ್ಟದೂರು

ಭಾರತ ಬಹು ದೊಡ್ಡ ದೇಶ. ನೂರಕ್ಕೆ ಶೇ. ೭೫ ಜನ ಒಕ್ಕಲಿಗರು. ಇದರಲ್ಲಿ ಭೂಮಿತಿ ಶಾಸನ ಜಾರಿಯಾಗದ ಕಡೆ ಜಮೀನ್ದಾರಿ ಪದ್ಧತಿಯೂ ಮುಂದುವರಿದಿದೆ. ಭೂಮಿತಿ ಶಾಸನ ಜಾರಿಯಾದ ಕಡೆ ಚಿಕ್ಕ ಹಿಡುವಳಿ ಹೊಂದಿದ ಕೃಷಿಕರು ಭಾರೀ ಸಂಖ್ಯೆಯಲ್ಲಿದ್ದಾರೆ. ಅವರ ಸ್ಥಿತಿಗತಿಯೂ ಶೋಚನೀಯವಾಗಿದೆ.

ರೈತರೆಲ್ಲ ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ. ಆ ಗ್ರಾಮಗಳ ಸ್ಥಿತಿ ಹೇಗಿದೆ? ಮುಖ್ಯ ರಸ್ತೆಗಳಿಗೆ ಹೊಂದಿಕೊಂಡ ಗ್ರಾಮಗಳಿಗೆ ರಸ್ತೆ ಸಾರಿಗೆ ಸೌಲಭ್ಯವಿದೆ. ಉಳಿದಂತೆ ಒಳ ಪ್ರದೇಶದಲ್ಲಿರುವ ಗ್ರಾಮಗಳು ಸಾರಿಗೆ ಸೌಲಭ್ಯಗಳನ್ನು ಹೊಂದಿಲ್ಲ. ರಾಯಚೂರು ಜಿಲ್ಲೆಯ ಸಾನಬಾಳ ಎಂಬ ಊರಿಗೆ ಹೋಗಬೇಕಾಗಿತ್ತು. ಆಊರಿಗೆ ಕಚ್ಚಾ ರಸ್ತೆಯೂ ಇಲ್ಲದ್ದರಿಂದ ನಾನು ನನ್ನ ಗೆಳೆಯರು ಜೀಪನ್ನು ಒಂದೆಡೆ ನಿಲ್ಲಿಸಿ ನಡೆದುಕೊಂಡೇ ಸಾನಬಾಳ ತಲುಪಿದೆವು.

ಸ್ವಾತಂತ್ರ್ಯ ಬಂದು ಅರ್ಧ ಶತಮಾನ ಮೀರಿದರೂ ಪ್ರಾಥಮಿಕ ಸೌಲಭ್ಯಗಳನ್ನು ಒದಗಿಸಲಾಗಿಲ್ಲವೆಂಬ ಕಟು ಸತ್ಯ ನಮ್ಮ ಮುಂದಿದೆ. ಬಳಕೆಗಾಗಿ, ಕುಡಿಯಲು ಬಾವಿಗಳಿಂದ ನೀರು ಜಗ್ಗಿ ತರುವ ಪದ್ಧತಿ ಅನೇಕ ಕಡೆ ಮುಂದುವರಿದಿದೆ. ಕೊಳವೆ ಬಾವಿಗಳಿದ್ದರೂ ಕೆಟ್ಟುನಿಂತಿರುತ್ತವೆ. ಅವುಗಳ ತೀವ್ರ ರಿಪೇರಿಯ ವ್ಯವಸ್ಥೆಯಿಲ್ಲ. ನಮ್ಮ ಜನರ ಆರೋಗ್ಯ ಗಟ್ಟಿಯಿರುವುದರಿಂದ ಅಷ್ಟಾಗಿ ದವಾಖಾನೆಗಳನ್ನು ಅವಲಂಬಿಸಿಲ್ಲ. ಹೆಣ್ಣುಮಕ್ಕಳು ನೋವು ಅನುಭವಿಸಿ ಹಡೆಯುವುದು ಮುಂದುವರಿದಿದೆ. ಕೊಪ್ಪಳದಂತಹ ಜಿಲ್ಲಾ ಸ್ಥಳದಲ್ಲಿ ಹತ್ತಾರು ವರ್ಷಗಳಿಂದ ಮಹಿಳಾ ವೈದ್ಯರೇ ಇಲ್ಲ. ಕಕ್ಕಸುಗಳನ್ನು ಕಟ್ಟಿಸಿಕೊಳ್ಳುವ ಸಾಮರ್ಥ್ಯವಿಲ್ಲದ್ದರಿಂದ ಬಯಲು ಕಡೆ, ರಸ್ತೆ ಬದಿಯಲ್ಲಿ ತಂಬಿಗೆ ತೆಗೆದು ಕೊಂಡು ಹೋಗುತ್ತಾರೆ. ದಾರಿಯಲ್ಲಿ ಸಾಗುವವರಿಗೂ ಹಿಂಸೆ, ದಾರಿ ಬದಿಯಲ್ಲಿ ಕಕ್ಕಸಿಗೆ ನಿರುಮ್ಮಳವಾಗಿ ಕುಳಿತುಕೊಳ್ಳದ ಸ್ಥಿತಿ.

ಇಂಥ ಪ್ರಾಥಮಿಕ ಸೌಲಭ್ಯಗಳ ಕೊರತೆಯ ಮಧ್ಯದಲ್ಲೂ ಭಾರತೀಯ ರೈತ ಮೊದಲು ಉತ್ಪಾದಿಸುತ್ತಿದ್ದುದಕ್ಕಿಂತ ನಾಲ್ಕು ಪಟ್ಟು ಹೆಚ್ಚು ಉತ್ಪಾದಿಸತೊಡಗಿದ್ದಾನೆ. ಆದರೆ ಅವನ ಪರಿಸ್ಥಿತಿಯಲ್ಲಿ ಏನಾದರೂ ಬದಲಾವಣೆ ಕಂಡಿದೆಯೆ ? ಅವನ ಬಡತನ ನಿವಾರಣೆಯಾಗಿಲ್ಲ. ಆಧುನಿಕ ಕೃಷಿ ಪದ್ಧತಿ ಅವಲಂಬಿಸಿದಷ್ಟೂ ಖರ್ಚು ವೆಚ್ಚ ಹೆಚ್ಚುತ್ತದೆ.

೧೯೭೫ರಲ್ಲಿ ಅದೇ ಆಗ ನಾನು ಎಂ.ಎ. ಪಾಸು ಮಾಡಿ ಬಂದಿದ್ದೆ. ಇನ್ನೂ ನೌಕರಿ ಸಿಕ್ಕಿರಲಿಲ್ಲ. ನೌಕರಿಗಾಗಿ ಪ್ರಯತ್ನಿಸುತ್ತಲೇ ಒಕ್ಕಲುತನದ ಎಲ್ಲಾ ಚಟುವಟಿಕೆಗಳಲ್ಲಿ ಪಾಲ್ಗೊಂಡೆ. ಆಗ ವರಲಕ್ಷ್ಮಿ ಹತ್ತಿ ಬೀಜಗಳು ಬಂದಿದ್ದವು. ಒಂದು ವರ್ಷ ಒಂದು ಎಕರೆ ವರಲಕ್ಷ್ಮಿ ಹತ್ತಿ ಬೆಳೆಸಿದೆವು. ಆಗ ಒಂದು ಕ್ವಿಂಟಾಲಿಗೆ ೧೦೦೦/- ರೂ. ನಂತೆ ಹತ್ತಿ ಮಾರಾಟವಾಗಿ ಹುರುಪು ಬಂದು ನಮ್ಮ ತಂದೆ ೧೦ ಎಕರೆಗಳಲ್ಲಿ ವರಲಕ್ಷ್ಮಿ ಹತ್ತಿ ಬೆಳೆದರು. ಮನೆ ತುಂಬಾ ಹತ್ತಿ ಒಟ್ಟಿದೆವು. ಗಂಜಿನಲ್ಲಿ ತಂದ ಸಾಲ ತೀರಲಿಲ್ಲ. ಹತ್ತಿಯ ಬೆಲೆ ಭಾರೀ ಪ್ರಮಾಣದಲ್ಲಿ ಇಳಿಮುಖವಾಯ್ತು. ನಾವು ಮೂರು ಜನ ಅಣ್ಣ ತಮ್ಮಂದಿರು ಒಂದೆಡೆ ಕೂತು ನಮ್ಮ ತಂದೆಯವರನ್ನು ಮುಂದೆ ಕುಳ್ಳಿರಿಸಿಕೊಂಡು ದೀರ್ಘವಾಗಿ ಸಮಾಲೋಚನೆ ನಡೆಸಿ ಹತ್ತಿ ಬೆಳೆ ಬೆಳೆಯುವುದನ್ನು ನಿಲ್ಲಿಸಲು ಒತ್ತಾಯಿಸಿದೆವು. ನಮ್ಮಪ್ಪನಿಗೆ ಕನಸುಗಳಿದ್ದುದರಿಂದ ೧೦ ಎಕರೆ ಹಾಕುವಲ್ಲಿ ೫ ಎಕರೆ ಹಾಕಿದ. ಆಗಲೂ ಬೆಲೆ ಕಡಿಮೆಯಾಗಿ ಲುಕ್ಸಾನ ಆದದ್ದರಿಂದ ೨ ಎಕರೆಗೆ ಬಂದ. ಕೊನೆಗೆ ಒಂದು ಎಕರೆಗೆ ಬಂದು ಆಗಲೂ ಲುಕ್ಸಾನ ಆದಾಗ ಹತ್ತಿ ಬೆಳೆಯುವುದನ್ನು ನಿಲ್ಲಿಸಿದ. ನಾವೀಗ ಶೇಂಗಾ, ಸಜ್ಜೆ ಬಿಳಿಜೋಳ, ಹೈಬ್ರಿಡ್ ಜೋಳ, ಸೂರ್ಯಕಾಂತಿ ಬೆಳೆಯುತ್ತೇವೆ. ಪೂರ್ಣ ನೀರಾವರಿ ಇರುವ ಕಡೆ ಭತ್ತ ಬೆಳೆಯುತ್ತೇವೆ.

ಹತ್ತಿಗೆ ಹತ್ತು ಕುತ್ತು, ಹತ್ತಿಗೆ ರೋಗ, ಹುಳಗಳ ಬಾಧೆ ಹೆಚ್ಚು. ಹೀಗಾಗಿ ೮ ದಿನಗಳಿಗೊಮ್ಮೆ ಕಡ್ಡಾಯವಾಗಿ ಔಷಧಿ ಸಿಂಪರಣೆ ಮಾಡಬೇಕು. ರೈತರು ಕೊಳ್ಳುವ ಔಷಧ, ರಸಗೊಬ್ಬರ, ಉಪಕರಣಗಳು ದುಬಾರಿ ಬೆಲೆಗೆ ಸಿಗುತ್ತವೆ. ಆದರೆ ರೈತ ಉತ್ಪಾದಿಸುವ ಮಾಲು ಮಾರಾಟ ಮಾಡುವುದೇ ಸಮಸ್ಯೆ. ಅವನು ಉತ್ಪಾದಿಸಿದ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ದೊರಕುತ್ತಿಲ್ಲ. ರೈತ ಉತ್ಪಾದಿಸಿದ ಹಾಲು ಬಿಸಲೇರಿ ನೀರಿಗಿಂತ ಸೋವಿಯಾಗಿ ಮಾರಾಟವಾಗುತ್ತಿದೆ. ಈ ದೇಶದಲ್ಲಿ ತೋಟಗಳ ಕ್ಷೇತ್ರ ವಿಸ್ತಾರಗೊಂಡಿದ್ದು ಭಾರೀ ಪ್ರಮಾಣದಲ್ಲಿ ಹಣ್ಣು ಹಂಪಲುಗಳು ಉತ್ಪಾದನೆಯಾಗುತ್ತಿವೆ. ಕಾಯಿಪಲ್ಲೆ, ಹೂವು ಮಿತಿಮೀರಿ ಉತ್ಪಾದನೆಯಾಗುತ್ತಿವೆ. ಅವುಗಳಿಗೆ ಯೋಗ್ಯ ಬೆಲೆ ದೊರಕುತ್ತಿಲ್ಲವೆಂದು ರೈತರು ತಮ್ಮ ಉತ್ಪಾದನೆಗಳನ್ನು ರಸ್ತೆಗೆ ಸುರುವಿ ಪ್ರತಿಭಟಿಸಿದ ಮೇಲೂ ಪರಿಸ್ಥಿತಿ ಬದಲಾಗಿದೆಯೆ ?

ಜಾಗತೀಕರಣದಿಂದಾಗಿ ಕೃಷಿವಸ್ತು ಸಹಿತ ಎಲ್ಲಾ ಬಗೆಯ ಸರಕುಗಳು ಹೊರಗಿನಿಂದ ಬರುತ್ತಿವೆ. ಆಸ್ಟ್ರೇಲಿಯಾದ ಸೇಬು ಕೊಪ್ಪಳದಲ್ಲಿ ಸಿಗುತ್ತದೆ. ಸಿಮ್ಲಾದಲ್ಲಿ ಸೇಬು ಬೆಳೆಯುವ ರೈತರು ಪಾಶ್ಚಿಮಾತ್ಯ, ಯೂರೋಪ ರೈತರೊಂದಿಗೆ ಸ್ಪರ್ಧಿಸಿ ವಿದೇಶಗಳಿಗೆ ರಫ್ತು ಮಾಡುವ ಸಾಮರ್ಥ್ಯ ಹೊಂದಿದ್ದಾರೆಯೇ ? ರಫ್ತು ಮಾಡಿದರೂ ನಮ್ಮ ಕೃಷಿ ವಸ್ತುಗಳು ಕಳಪೆಯೆಂದು ಉದ್ದೇಶಪೂರ್ವಕವಾಗಿ ವಾಪಾಸು ಕಳಿಸಿದ ನಿದರ್ಶನಗಳುಂಟು.

ಬೆಂಗಳೂರಿನ ಸುತ್ತುಮುತ್ತು ಬೆಳೆಯುವ ಗುಲಾಬಿಗಳನ್ನು ವಿದೇಶವೊಂದಕ್ಕೆ ರಫ್ತು ಮಾಡಿದಾಗ ನೀವು ಗುಲಾಬಿ ಗಿಡಗಳಿಗೆ ಔಷಧ ಸಿಂಪರಣೆ ಮಾಡಿದ್ದೀರಿ ಅದಕ್ಕಾಗಿ ಕೊಳ್ಳುವುದಿಲ್ಲ ಎಂದು ವಾಪಾಸು ಕಳಿಸಿದ ಪ್ರಸಂಗಗಳುಂಟು. ಇಂಥ ವಿಷಯಗಳನ್ನು ಕುರಿತು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಚರ್ಚಿಸಿ ಕ್ರಮ ಕೈಗೊಳ್ಳಬೇಕು.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕೆಲವು ಕೃಷಿಗೆ ಬಳಸುವ ಔಷಧಗಳನ್ನು ಬ್ಯಾನ್ ಮಾಡಿದ್ದಾರೆ. ಇತ್ತೀಚೆಗೆ ಎಂಡೋಸಲ್ಫಾನ್ ಎಂಬ ಔಷಧಿ ಕೇರಳ ಹಾಗೂ ನಮ್ಮ ಮಲೆನಾಡು, ಕರಾವಳಿ ಪ್ರದೇಶಗಳಲ್ಲಿ ಭಾರೀ ಅನಾಹುತಕ್ಕೆ ಕಾರಣವಾಗಿದೆ. ಅನೇಕರ ಕೈಕಾಲುಗಳು ಊನವಾಗಿವೆ. ಎಂಡೋಸಲ್ಫಾನ್ ಬೆಳೆಗಳಿಗೆ ಸಿಂಪಡಿಸಿದಾಗ ಅದು ಭೂಮಿಯಲ್ಲಿ, ನೀರಲ್ಲಿ ಬೆರೆತು ಏಡಿ, ಮೀನು, ಮುಂತಾದ ಜಲಚರ ಜೀವಿಗಳವರೆಗೆ ಸಾಗಿ ಆ ಜಲಚರ ಜೀವಿಗಳನ್ನು ಆಹಾರವಾಗಿ ಬಳಸಿದವರ ಮೇಲೆ ಘನಘೋರ ಪರಿಣಾಮಗಳುಂಟಾಗಿದೆ. ಹೀಗಾಗಿ ನಾವು ಎಂಥ ಕೃಷಿಯನ್ನು ನಡೆಸಬೇಕು? ಪಾರಂಪರಿಕ ಕೃಷಿನೀತಿಯ ಜೊತೆಗೆ ವೈಜ್ಞಾನಿಕವಾದ ಕೃಷಿ ನೀತಿಯನ್ನು ಹಿತಮಿತವಾಗಿ ಬೆರೆಸಬೇಕು. ನಮ್ಮ ಬಹುಪಾಲು ರೈತರು ನಿರಕ್ಷರರು. ಪಾರಂಪರಿಕ ಕೃಷಿಜ್ಞಾನ ಮಾತ್ರ ಅವರಿಗೆ ಗೊತ್ತಿದೆ, ವೈಜ್ಞಾನಿಕ ಕೃಷಿಜ್ಞಾನವನ್ನು ಪಡೆಯುವ ಸಾಮರ್ಥ್ಯ ಅವರಲ್ಲಿಲ್ಲ.

ನಮ್ಮ ರಾಯಚೂರು ಜಿಲ್ಲೆಯಲ್ಲಿ ಬಿಳಿಜೋಳ ಬೆಳೆಯುವ ಕ್ಷೇತ್ರ ಹೆಚ್ಚಿಗಿದೆ. ಪಂಪಾಸಾಗರದ ನೀರು ಮೊಟ್ಟಮೊದಲಿಗೆ ನಮಗೆ ದೊರೆತಾಗ ಬಿಳಿ ಜೋಳಕ್ಕೆ ತಿಪ್ಪೆ ಗೊಬ್ಬರದ ಜೊತೆಗೆ ರಾಸಾಯನಿಕ ಗೊಬ್ಬರ ಬಿತ್ತಿ ನೀರು ಕಟ್ಟಿ ನಮ್ಮ ಹೊಲದಲ್ಲಿ ಪ್ರಯೋಗ ಮಾಡಿ ತೋರಿಸಿದಾಗ ರೈತರು ಹಾಗೆ ಮಾಡಿದ್ದರಿಂದ ಬಿಳಿ ಜೋಳದ ಇಳುವರಿ ಹೆಚ್ಚಾಯ್ತು. ಬಿಳಿಜೋಳದ ಬೆಳೆಗೆ ನೀರು ಕಟ್ಟಿದರೆ ಹುಳ ಬೀಳುತ್ತವೆಯೆಂಬ ಮೂಢ ನಂಬಿಕೆ ರೈತರಲ್ಲಿ ಇನ್ನೂ ಇದೆ. ಗ್ರಾಮ ಸೇವಕರು, ಕೃಷಿ ಅಧಿಕಾರಿಗಳು ಗ್ರಾಮಗಳಲ್ಲಿ ಕಾಲ ಕಾಲಕ್ಕೆ ಸಂಚರಿಸಿ ಆಧುನಿಕ ಕೃಷಿ ವಿಷಯಗಳನ್ನು ತಿಳಿಸಬೇಕು. ಕೃಷಿ ವಿಶ್ವ ವಿದ್ಯಾಲಯಗಳು ಇತ್ತೀಚೆಗೆ ಕೃಷಿಕರ ಮೇಳ ನಡೆಸಿ ಒಕ್ಕಲುತನ ಅನೇಕ ಹೊಸ ವಿಷಯಗಳನ್ನು, ಹೊಸ ಉಪಕರಣಗಳ ಪ್ರಾತ್ಯಕ್ಷಿಕೆಯನ್ನು ತೋರಿಸುತ್ತಿದ್ದಾರೆ. ನಗರಗಳಿಗೆ ಸಮೀಪ ಇರುವ ರೈತರಿಗೆ ಮಾತ್ರ ಇಂಥ ವಿಷಯಗಳು ಗೊತ್ತಾಗುತ್ತವೆ.

ಪತ್ರಿಕೆಗಳಿಗಿಂತ ಟಿ.ವಿ.ಗಳ ಮೂಲಕ ಆಧುನಿಕ ಕೃಷಿಜ್ಞಾನವನ್ನು ಹರಡುವ ಅಗತ್ಯವಿದೆ. ಬಹುಪಾಲು ರೈತರು ನಿರಕ್ಷರರಾಗಿರುವುದರಿಂದ ದೃಶ್ಯ ಮಾಧ್ಯಮವನ್ನು ಬಳಸುವುದೇ ಸೂಕ್ತ. ಬಂಗಾರ ಮನುಷ್ಯದಂತಹ ಒಂದು ಜನಪ್ರಿಯ ಸಿನೆಮಾ ಕೃಷಿಕ್ಷೇತ್ರದಲ್ಲಿ ಬದಲಾವಣೆಗೆ ಕಾರಣವಾಯ್ತು. ಜನರಿಗೆ ಸಾಂಪ್ರದಾಯಿಕ ಬಾವಿ ತೋಡುವ ಪದ್ಧತಿ ಗೊತ್ತಿತ್ತು. ಬಂಗಾರ ಮನುಷ್ಯದ ಮೂಲಕ ಸಾಮೂಹಿಕ ಕೃಷಿಯ ಪರಿಚಯ, ಬೋರ್‌ವೆಲ್‌ಗಳ ಪರಿಚಯ ಉಂಟಾಗಿ ತಾವು ಅಲ್ಲಿಯ ನಾಯಕನಂತೆ ಬೋರ್ ಹಾಕಿಸಿ ಕೃಷಿಯನ್ನು ಮಾಡಿದವರುಂಟು.

ಭಾರತ ಅಣುಶಕ್ತಿಯನ್ನು ಶಾಂತಿಯುತ ಕಾರ್ಯಗಳಿಗಾಗಿ ಬಳಸುವುದಾಗಿ ಹೇಳುತ್ತಿದ್ದರೂ ರಿಯಾಕ್ಟರ್‌ಗಳಿಗೆ ಯುರೇನಿಯಂ ದೊರಕದಂತೆ ಅಮೇರಿಕ ಕುತಂತ್ರ ಮಾಡುತ್ತದೆ. ಬೇರೆ ರಾಷ್ಟ್ರಗಳನ್ನು ನಿಗ್ರಹಿಸುತ್ತ ತಾನು ಮಾತ್ರ ಅಣುಬಾಂಬುಗಳನ್ನು ಸಿದ್ಧಪಡಿಸುತ್ತದೆ. ನಿಶಸ್ತ್ರೀಕರಣಕ್ಕೆ ಅದು ಮುಂದಾಗುತ್ತಿಲ್ಲ. ತನ್ನಲ್ಲಿ ಅಣುಬಾಂಬುಗಳನ್ನಿಟ್ಟುಕೊಂಡು ಇರಾಕಿನಲ್ಲಿ ಅಣುಬಾಂಬುಗಳಿವೆಯೆಂದು ಅನಗತ್ಯ ದಾಳಿ ಮಾಡಿದ್ದು ಅಮೇರಿಕಾದ ಹುಂಬತನ ತೋರಿಸುತ್ತದೆ.

ಜಾಗತೀಕರಣದ ಹೆಸರಿನಲ್ಲಿ ಅಮೇರಿಕೀಕರಣ ನಡೆದಿದೆ. ಅಮೇರಿಕಾ ಮುಂತಾದ ಶ್ರೀಮಂತ ರಾಷ್ಟ್ರಗಳು ಕೃಷಿಗೆ ತಾವು ಸಬ್ಸಿಡಿ ನೀಡುತ್ತ ನಮ್ಮಂಥ ರಾಷ್ಟ್ರಗಳಿಗೆ ಸಬ್ಸಿಡಿ ನೀಡದಂತೆ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡದಂತೆ ಗ್ಯಾಟ್ ಒಪ್ಪಂದದಡಿಯಲ್ಲಿ ಕಡಿವಾಣ ಹಾಕುತ್ತಿರುವುದು, ದುರ್ಬೋಧೆ ನೀಡುತ್ತಿರುವುದು ಅನೇಕರಿಗೆ ಅರ್ಥವಾಗಿಲ್ಲ. ಅಭಿವೃದ್ಧಿಶೀಲ ರಾಷ್ಟ್ರಗಳು ಕೆರೆ ತೋಡಲು, ರಸ್ತೆ ಮಾಡಲು, ನೀರು ಪೂರೈಸಲು ವರ್ಲ್ಡ್ ಬ್ಯಾಂಕಿನಿಂದ, ಐ.ಎಂ.ಎಫ್. ನಿಂದ, ಶ್ರೀಮಂತ ರಾಷ್ಟ್ರಗಳಿಂದ ಸಾಲ ತರುತ್ತಿರುವುದರಿಂದ ಅವುಗಳ ವಿರುದ್ಧ ಧ್ವನಿಯೆತ್ತಲಾಗುತ್ತಿಲ್ಲ.

ಜಾಗತೀಕರಣವು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಪ್ರಯೋಜನಕಾರಿಯಲ್ಲ. ದೊಡ್ಡ ಉದ್ಯಮಗಳು ಅಂದರೆ ಬಹುರಾಷ್ಟ್ರೀಯ ಕಂಪನಿಗಳ

ಆಗಮನದಿಂದ ಮಧ್ಯಮ ಮತ್ತು ಕಿರುಗಾತ್ರದ ೫೦೦೦ಕ್ಕೂ ಮಿಕ್ಕು ಕಾರ್ಖಾನೆಗಳು ಬಂದಾಗಿವೆ. ಸಕ್ಕರೆ, ಎಣ್ಣೆ ಯಥೇಚ್ಛವಾಗಿದ್ದು ಅದನ್ನು ರಫ್ತು ಮಾಡುವುದರ ಬದಲು ತರಿಸಿಕೊಳ್ಳಲಾಗುತ್ತಿದೆ. ತಾಳೆ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತಿರುವುದರಿಂದ ಎಣ್ಣೆ ಕೈಗಾರಿಕೆ ಮುಚ್ಚುತ್ತಿವೆ, ಎಣ್ಣೆ ಬೆಳೆಗಳಾದ ಸೂರ್ಯಕಾಂತಿ, ಶೇಂಗಾ, ಸಾಸಿವೆ ಬೆಳೆಯಲು ರೈತರು ಹಿಂದೇಟು ಹಾಕುತ್ತಿದ್ದಾರೆ.

ಜಪಾನ್, ಅಮೇರಿಕಾ ಮುಂತಾದ ರಾಷ್ಟ್ರಗಳಲ್ಲಿ ರೈತರಿಗೆ ಭಾರೀ ನೆರವು ಸಿಗುತ್ತಿದೆ. ಭಾರತದಲ್ಲಿ ರಸಗೊಬ್ಬರ ಕೊಳ್ಳಲು ಸಬ್ಸಿಡಿ ನೀಡಲಾಗುತ್ತಿತ್ತು. ಅದೀಗ ನಿಂತಿದೆ. ಕೈಗಾರಿಕೆಗಳಿಗೆ ನೀಡುವ ಸಾಲದ ಬಡ್ಡಿದರವನ್ನು ಕೃಷಿಗೆ ಹಾಕಿದರೆ ಪ್ರಯೋಜನವಿಲ್ಲ. ವಾತಾವರಣದಲ್ಲಿ ಏರುಪೇರು, ರೋಗರುಜಿನಗಳು, ಹುಳುಗಳ ಕಾಟದಿಂದ ನಿರೀಕ್ಷಿಸಿದಂತೆ ರೈತನಿಗೆ ಬೆಳೆ ದಕ್ಕದು. ಬೆಳೆ ಬಂದರೂ ಯೋಗ ಬೆಲೆ ದೊರಕದು. ಸಾಮಾಜಿಕ ಭದ್ರತೆಯಿಲ್ಲದ್ದರಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ರೈತರು, ಕೂಲಿಕಾರರದು ಅಸಂಘಟಿತ ಗುಂಪು. ಇವರು ಸಂಘಟಿತರಾಗಿ ಹೋರಾಡದಿದ್ದರೆ ಇವರ ಸಮಸ್ಯೆಗಳು ಬಗೆಹರಿಯಲಾರವು. ಸಮಸ್ಯೆಗಳು ಬಗೆಹರಿಯದೇ ಭದ್ರತೆ ಒದಗಲಾರದು.

ಸಾಮಾಜಿಕ ಭದ್ರತೆಯಿಲ್ಲದ್ದರಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ರೈತರು, ಕೂಲಿಕಾರರದು ಅಸಂಘಟಿತ ಗುಂಪು. ಇವರು ಸಂಘಟಿತರಾಗಿ ಹೋರಾಡದಿದ್ದರೆ ಇವರ ಸಮಸ್ಯೆಗಳು ಬಗೆಹರಿಯಲಾರವು. ಸಮಸ್ಯೆಗಳು ಬಗೆಹರಿಯದೇ ಭದ್ರತೆ ಒದಗಲಾರದು.

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕೂಡಿ ರೈತರ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸಬೇಕು. ಮೇಲ್ನೋಟಕ್ಕೆ ಕಾಣುವ ರೈತರ ಸಮಸ್ಯೆಗಳನ್ನು ಬಗೆಹರಿಸಿದರೆ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದು ಖಂಡಿತ ನಿಲ್ಲಲಿದೆ. ಆ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು ಇಲ್ಲಿವೆ :

೧. ಬ್ಯಾಂಕ್ ಮತ್ತು ಸಹಕಾರಿ ಬ್ಯಾಂಕುಗಳಲ್ಲಿ ನೀಡುವ ಸಾಲಕ್ಕೆ ಹಾಕುವ ಬಡ್ಡಿ ದರ ತೀರಾ ಕಡಿಮೆಯಿರಬೇಕು (ಪ್ರತಿಶತ ೫ಕ್ಕಿಂತ ಕಡಿಮೆಯಿರಬೇಕು)

೨. ರೈತರು ಬೆಳೆದ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ಸಿಗುವಂತೆ ಮಾಡಬೇಕು. (ಎಲ್ಲಾ ಖರ್ಚು ವೆಚ್ಚ ತೆಗೆದು ಲಾಭಾಂಶವನ್ನು ಸೇರಿಸಬೇಕು)

೩. ವಿಮೆ ಮಾಡಿಸಿದ ಬೆಳೆಗಳು ಹಾಳಾದರೆ ತೀವ್ರ ಪರಿಹಾರ ನೀಡಬೇಕು.

೪. ಗ್ರಾಮೀಣ, ನಗರ ಎಂಬ ತಾರತಮ್ಯವನ್ನು ಸರಕಾರ ಮಾಡಬಾರದು.

೫. ಗ್ರಾಮೀಣ ಭಾಗಕ್ಕೆ ಗುಣಾತ್ಮಕ ವಿದ್ಯುತ್ ಸರಿಯಾಗಿ ಪೂರೈಕೆಯಾಗಬೇಕು. ಅದಕ್ಕೆ ರಿಯಾಯ್ತಿ ದರವಿರಬೇಕು. ಕೃಷಿ ಉದ್ಯಮವಲ್ಲ ಎಂಬ ತಿಳುವಳಿಕೆ ಸರಕಾರಕ್ಕೆ ಬರಬೇಕು.

೬. ರೈತರಿಗೆ ಅಗತ್ಯವಾದ ಬೀಜ, ರಸಗೊಬ್ಬರ, ಔಷಧ, ಉಪಕರಣಗಳನ್ನು ರಿಯಾಯ್ತಿ ದರದಲ್ಲಿ ಆಗ್ರೋ ಕೇಂದ್ರಗಳ ಮೂಲಕ ಸರಕಾರ ಪೂರೈಸಬೇಕು.

೭. ಬರಗಾಲ ಬಂದಾಗ, ರೋಗ, ಮಳೆ ಅಭಾವದಿಂದ ಬೆಳೆ ನಾಶವಾದರೆ ಬೆಳೆಸಾಲ ವಸೂಲಿ ಮುಂದೂಡಿ ಬಡ್ಡಿ ಮಾಫ್ ಮಾಡಬೇಕು.

೮. ರೈತರ ಕೆಲಸಗಳಿಗೆ ಕಛೇರಿಗಳಲ್ಲಿ ಪ್ರಥಮ ಆದ್ಯತೆ ದೊರೆಯಬೇಕು.

೯. ರೈತರಿಗೆ ಸರಕಾರ ಗೌರವದ ಸ್ಥಾನ ನೀಡಬೇಕು.

೧೦. ಆತ್ಮಹತ್ಯೆಗೆ ಒಳಗಾದ ರೈತ ಕುಟುಂಬಕ್ಕೆ ಹಣದ ರೂಪದಲ್ಲಿ ನೆರವು ತೀವ್ರ ಲಭ್ಯವಾಗಬೇಕು.

ರೈತರ ಹೆಸರಿನಲ್ಲಿ ರಾಜಕಾರಣ ಮಾಡುವವರು ರೈತರ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಒಮ್ಮೆಯಾದರೂ ಚಿಂತಿಸಿದ್ದಾರೆಯೇ ? ❑



ಭಾರತೀಯ ದರ್ಶನಗಳಲ್ಲಿ ಕೆಳವರ್ಗದ ಆಶಯಗಳು

ಎಸ್.ಎಸ್. ಹಿರೇಮಠ

ಸುಮಾರು ೪೦ ಸಾವಿರ ವರ್ಷಗಳ ಹಿಂದೆ ವಾನರಾವಸ್ಥೆಯಿಂದ ನರಾವಸ್ಥೆಗೆ ಕಾಲಿಟ್ಟ ಮಾನವ ತನ್ನ ಪರಿಶ್ರಮದಿಂದ ನಾಗರಿಕತೆಯ ಒಂದೊಂದೇ ಮೆಟ್ಟಿಲೇರುತ್ತ ಇಂದಿನ ಸ್ಥಿತಿಗೆ ತಲುಪಿದ್ದಾನೆ. ಭಾಷೆಯನ್ನು ಕಲಿತುದು, ಬೆಂಕಿಯನ್ನು ಬಳಸತೊಡಗಿದ್ದುದು, ಗುಂಪು ಜೀವನ ಕುಲ ಸಮಾಜವಾಗಿ ರೂಪುಗೊಳ್ಳತೊಡಗಿದ್ದುದು ಇವೆಲ್ಲ ಆ ಕಾಲದ ಸಾಧನೆಗಳು.

ಅಂದಿನಿಂದಲೇ ತನ್ನ ಮತ್ತು ಜಗತ್ತಿನ ನಡುವಿನ ಸಂಬಂಧದ ಕುರಿತು; ಸತ್ತ ನಂತರ ಏನಿದೆ ಎಂಬ ಪ್ರಶ್ನೆಯ ಕುರಿತು ಬದುಕಿನ ಅರ್ಥದ ಕುರಿತು ಕುತೂಹಲದಿಂದ ಶೋಧನೆ ಮಾಡುತ್ತಲೇ ಬಂದಿದ್ದಾನೆ. ಇದನ್ನೇ ಕಾಲಾಂತರದಲ್ಲಿ ತತ್ವಶಾಸ್ತ್ರವೆಂದು ಹೇಳಲಾಯಿತು. ನಮ್ಮ ದೇಶದಲ್ಲಿ ಇದಕ್ಕೆ ದರ್ಶನ ಎನ್ನುತ್ತಿದ್ದರು.

ಮತ (ಸೆಕ್ಟ) ಪಂಥಗಳು (ಕಲ್ಟ್) ಶಿಷ್ಟ ಮತ್ತು ಲಿಖಿತ ಪರಂಪರೆಯಾಗಿ ಬೆಳೆದಾಗ ಅವು 'ಧರ್ಮ' ಎಂಬ ಹೆಸರು ಪಡೆದವು. ಇವನ್ನು ಬೆಳೆಸಿದವರು ಮೇಲ್ವರ್ಗದವರಾದುದರಿಂದಲೇ ಅವು ಅಂಥ ಸ್ವರೂಪ ಪಡೆಯಲು ಸಾಧ್ಯವಾಯಿತು. ಮೇಲ್ಜಾತಿ, ಮೇಲ್ವರ್ಣ, ಮೇಲ್ವರ್ಗದವರಿಗೆ ಮಾತ್ರ 'ಧರ್ಮ'ಗಳ ಸಂಬಂಧ ಇರುವುದರ ಗುಟ್ಟನ್ನು ಮರೆಯುವಂತಿಲ್ಲ. ನಮ್ಮಲ್ಲಿ ಧರ್ಮಗಳನ್ನು 'ವೈದಿಕ' ಮತ್ತು 'ಅವೈದಿಕ' ವೆಂದು ಸ್ಥೂಲವಾಗಿ ವಿಭಜಿಸುವ ಕ್ರಮವಿದೆ. ವೈದಿಕ ಧರ್ಮಗಳು ಶೋಷಣೆ ಮಾಡುತ್ತಿದ್ದ ಆಳುವ ವರ್ಗಗಳ ಹಿತವನ್ನು ಎತ್ತಿ ಹಿಡಿದಿವೆ. ಬ್ರಾಹ್ಮಣ, ಕ್ಷತ್ರಿಯರ ನಡುವಿನ ಸಂಘರ್ಷದಲ್ಲಿ ಕ್ಷತ್ರಿಯರು ಅವೈದಿಕ ಧರ್ಮಗಳನ್ನು ಹುಟ್ಟುಹಾಕಿದ್ದಾರೆ. ಇವರು ವೈದಿಕಕ್ಕೆ ಪ್ರತಿಯಾಗಿ ಮತಾಂತರವನ್ನು ಪ್ರತಿಪಾದಿಸಿ, ಸ್ವಲ್ಪಮಟ್ಟಿಗಾದರೂ ಜನಪರ ಕಾಳಜಿಯನ್ನು ತೋರ್ಪಡಿಸಿದರು. ಆದರೆ ಇವೂ ಕೂಡ ಬರಬರುತ್ತ ಆಳುವ ವರ್ಗಗಳ ಕಕ್ಷೆಗೆ ಸೇರಿ ಹೋಗಿ ಅವರನ್ನು ಆಶ್ರಯಿಸಿ ಸಾಂಸ್ಥೀಕರಣಗೊಳ್ಳತಡಗಿದವು. ಶೋಷಕ ವರ್ಗಗಳ ಭಾಗವಾದವು.

ಈ ಮಾತನ್ನು ಕರ್ನಾಟಕದಲ್ಲಿ ೧೨ ಶತಮಾನದಲ್ಲಿ ಶ್ರಮಿಕರ ಚಳವಳಿಯ ಮಧ್ಯೆ ಹುಟ್ಟಿದ್ದ ವೀರಶೈವ ಧರ್ಮಕ್ಕೂ ಅನ್ವಯಿಸಿ ಹೇಳಬಹುದು. ಮತಾಂತರದ ಮೂಲಕ ಶ್ರೇಣೀಕೃತ ಜಾತಿ, ವರ್ಣ ವ್ಯವಸ್ಥೆಗೆ ಇವು ಪೆಟ್ಟುಕೊಟ್ಟು ಸಾಮಾಜಿಕ ಚಲನಶೀಲತೆಗೆ ಕುಮ್ಮಕ್ಕು ಕೊಟ್ಟಿದ್ದು ಇವುಗಳ ಇತ್ಯಾತ್ಮಕ ಅಂಶವೇ.

'ದರ್ಶನ'ಗಳ ಚರ್ಚೆಯ ಸಂದರ್ಭದಲ್ಲಿ 'ಧರ್ಮ'ದ ಕುರಿತು ಈ ಮಾತುಗಳನ್ನು ಇಲ್ಲಿ ಹೇಳುವುದಕ್ಕೆ ಸ್ಪಷ್ಟವಾದ ಕಾರಣವಿದೆ. ಅದೇನೆಂದರೆ - ದರ್ಶನಗಳು ಧರ್ಮಗಳಿಗೆ ಸೇರಿರಬೇಕು ಎಂಬ ಒಂದು ತಪ್ಪು ಗ್ರಹಿಕೆ. ಹಾಗೆ ನೋಡಿದರೆ ದರ್ಶನಗಳಿಗೂ ಧರ್ಮಗಳಿಗೂ ಸಂಬಂಧವಿಲ್ಲ. ಧರ್ಮಗಳು ದರ್ಶನಗಳನ್ನು ತಮ್ಮ ಹಿತಾಸಕ್ತಿಗೆ ಹೊಂದುವಂತೆ ದುರ್ಬಳಕೆ ಮಾಡಿಕೊಂಡವಷ್ಟೇ.

ಧರ್ಮಗಳೇ ಇಲ್ಲದ ತಳಜಾತಿ ವರ್ಗಗಳಲ್ಲಿ 'ದರ್ಶನ'ಗಳಿರಬಲ್ಲವು. ಶಂ.ಬಾ. ಜೋಷಿಯವರು 'ಹಾಲುಮತ ದರ್ಶನ' ಎಂದು ಕುರುಬರಲ್ಲಿರುವ ದಾರ್ಶನಿಕ ವಿಚಾರಗಳ ಶೋಧನೆಗೆ ತುಂಬ ಹಿಂದೆಯೇ ಪ್ರಯತ್ನಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಹೊಲೆಯರ, ಮಾದಿಗರ, ಬೇಡರ ಧರ್ಮಗಳಿಲ್ಲದಿರಬಹುದು, ಆದರೆ ಖಂಡಿತವಾಗಿ ಅವರ ದರ್ಶನಗಳಿವೆ.

ನಮ್ಮ ಸಮಾಜ ಧಾರ್ಮಿಕ ಮೌಲ್ಯಗಳಿಗಲ್ಲ, ದಾರ್ಶನಿಕ ಮೌಲ್ಯಗಳಿಗೆ ಬೆಂಬಲ ಕೊಡಬೇಕಾಗಿದೆ. ಧಾರ್ಮಿಕ ನಂಬಿಕೆಗಳನ್ನು ಕೊಡೆದು ಹಾಕಿ ದಾರ್ಶನಿಕ ನಂಬಿಕೆಗಳನ್ನು ಬೆಳೆಸಿಕೊಳ್ಳಬೇಕಾಗಿದೆ. ಧರ್ಮಗಳು ಒಂದಿಲ್ಲೊಂದು ಬಗೆಯ ಮೌಢ್ಯಗಳ ಆಧಾರದ ಮೇಲೆ ನಿಂತಿವೆ. ಇದಕ್ಕೆ ಪ್ರತಿಯಾಗಿ ದರ್ಶನಗಳು ಚಿಂತನೆಗಳ, ಪ್ರಶ್ನೆಗಳ, ಪರಿಶೋಧನೆಗಳ ಆಧಾರದ ಮೇಲೆ ನಿಂತಿವೆ.

ನಮ್ಮ ಜಾತಿ ಸಂಸ್ಕೃತಿಗಳಲ್ಲಿ ದಾರ್ಶನಿಕ ವಿಚಾರಗಳು ಕಲಬೆರಕೆಯಾಗಿವೆ. ಕೆಲವಕ್ಕೆ ಸ್ಪಷ್ಟ ಆಕಾರವಿದ್ದರೆ, ಕೆಲವಕ್ಕೆ ಹಾಗಿರಲಿಕ್ಕಿಲ್ಲ. ಜಗತ್ತಿನ ಪ್ರಾಚೀನ ನಾಗರಿಕತೆಗಳಂತೆ ನಮ್ಮಲ್ಲೂ ಹಲವು ಬಗೆಯ ದಾರ್ಶನಿಕ ಪಂಥಗಳು ಮೊದಲಿನಿಂದಲೂ ಅಸ್ತಿತ್ವದಲ್ಲಿದ್ದವು. ಅವು ವಿಭಿನ್ನ ಜನ ಸಮೂಹಗಳ ಲೋಕದೃಷ್ಟಿಯನ್ನು ಬಿಂಬಿಸುತ್ತಿದ್ದವು. ಮೊಟ್ಟ ಮೊದಲು ಈ ದೇಶಕ್ಕೆ ವಲಸೆ ಬಂದಿದ್ದ ನಿಗ್ರೋಗಳು ನಂತರದ ಪ್ರೊಟೊ ಆಸ್ಟ್ರಲೈಡರು, ದ್ರಾವಿಡರು, ಆರ್ಯ ವೈದಿಕರು ಇವರೆಲ್ಲರಿಗೂ ಅವರವರದೇ ಆದ ಜಾಗತಿಕ ಕಣ್ಣೋಟಗಳಿದ್ದವು. ಅವು ಅವರವರ ಭೌತಿಕ ಜೀವನದ ಅನುಭವಗಳನ್ನು ಆಧರಿಸಿ ಹುಟ್ಟಿಕೊಂಡಿದ್ದವು.

ಉದಾಹರಣೆಗೆ - ಪಶುಪಾಲಕರಾಗಿದ್ದ ದ್ರಾವಿಡರು ಮತ್ತು ಆರ್ಯ ವೈದಿಕರ 'ದರ್ಶನ'ಗಳು ಅವರ ವಲಸೆಗಾರಿಕೆ, ಪಶುಪಾಲಕ ವೃತ್ತಿಗಳನ್ನು ಆಧರಿಸಿದ್ದರೆ, ಕೃಷಿಕರಾಗಿದ್ದ ಆಸ್ಟ್ರಿಕ್ ಭಾಷಿಕರು (ಪ್ರೊಟೊ ಆಸ್ಟ್ರಲೈಡರು) ಕೃಷಿ ಸಂಸ್ಕೃತಿಗೆ ಹೊಂದುವ 'ದರ್ಶನ'ಗಳನ್ನು ಕಂಡುಕೊಂಡಿದ್ದರು.

ದ್ರಾವಿಡರು ಮತ್ತು ಆಸ್ಟ್ರಿಕ್ ಭಾಷಿಕರ ನಡುವೆ ಹೊಂದಾಣಿಕೆ ಇದ್ದ ಕಾಲದ ಸಂಸ್ಕೃತಿ ಹರಪ್ಪ ಮೊಹೆಂಜೋದಾರೋದಲ್ಲಿದ್ದುದು. ಉತ್ತಮ ನಾಗರಿಕತೆಯ ಅಭಿವೃದ್ಧಿಯನ್ನು ಹೊಂದಿದ್ದ ಅಲ್ಲಿ ದರ್ಶನಗಳೂ ಪ್ರಗತಿ ಸಾಧಿಸಿದ್ದರೆ ಅದು ಸಹಜವೇ. ಪಶುಪಾಲಕ ಆರ್ಯ ವೈದಿಕರು ಭಾರತಕ್ಕೆ ಬಂದಾಗ ತಮಗಿಂತ ತೀರ ಮುಂದುವರೆದಿದ್ದ ಸಿಂಧೂ ನಾಗರಿಕರನ್ನು ಕಂಡರು. ಅವರನ್ನು ಸೋಲಿಸಿ ನೂರಾರು ವರ್ಷಗಳವರೆಗೆ ಹೋರಾಡಿ ತಮ್ಮ ಪ್ರಾಬಲ್ಯವನ್ನು ಪ್ರತಿಷ್ಠಾಪಿಸಿಕೊಂಡರು.

ಈ ಹಂತದಲ್ಲಿ ಅವರ ಸಂಸ್ಕೃತಿ, ಕಲೆ, ದರ್ಶನಗಳ ಬಹುಭಾಗವನ್ನು ತಮ್ಮದನ್ನಾಗಿಸಿಕೊಂಡರು. ಸೋತವರು ವೈದಿಕರ ಸಾಂಸ್ಕೃತಿಕ ದಾಳಿಗೆ ತುತ್ತಾದರು, ಈಗಲೂ ಆಗುತ್ತಲಿದ್ದಾರೆ. ಇದರ ರಾಜಕೀಯ ಪರಿಣಾಮವನ್ನು ಬಿ.ಜೆ.ಪಿಯ ಬೆಳವಣಿಗೆಯಲ್ಲಿ ನೋಡಬಹುದು. ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದ ಸಂದರ್ಭದಲ್ಲಿ ಗಾಂಧೀ ಮೊದಲಾದ ಬೂರ್ಷ್ವಾ ರಾಜಕೀಯ ನೇತಾರರು ಗೀತೆಯಂಥ ಧಾರ್ಮಿಕ ಪಠ್ಯಗಳನ್ನು ವೈದಿಕಶಾಹಿಯ

ಜನವಿರೋಧಿ 'ವೇದಾಂತ'ದಂಥ ದರ್ಶನವನ್ನು ತಮ್ಮ ಹೋರಾಟಕ್ಕೆ ಸ್ಫೂರ್ತಿ ನೀಡಬಲ್ಲ ಆಕರಗಳನ್ನಾಗಿ ಮಾಡಿಕೊಂಡರು.

ಜನಪರವಾಗಿದ್ದ ಬಹುದೊಡ್ಡ ದಾರ್ಶನಿಕ ಪರಂಪರೆ ಈ ದೇಶದಲ್ಲಿದೆ. ಅದನ್ನು ಅವರು ಸಂಪೂರ್ಣವಾಗಿ ಉಪೇಕ್ಷಿಸಿದರು. ಇದರ ದುಷ್ಪರಿಣಾಮಗಳನ್ನೇ ಇಂದು ನಾವು ಅನೇಕ ವಿಧದಲ್ಲಿ ಅನುಭವಿಸುತ್ತಿದ್ದೇವೆ. ಈ ದಾರ್ಶನಿಕ ಪರಂಪರೆ ದುಡಿಯುವ ಅಸಂಖ್ಯ ಜನಕುಲಗಳು ತಮ್ಮ ಅನುಭವದ ಆಧಾರದಲ್ಲಿ ಕಟ್ಟಿಕೊಂಡು ಬಂದಿರುವಂಥದು. ಅದನ್ನು ಸಾಮಾನ್ಯವಾಗಿ 'ತಂತ್ರ' ಎಂದು ಕರೆಯಲಾಗುತ್ತದೆ.

ಖೇದದ ಸಂಗತಿಯೆಂದರೆ 'ತಂತ್ರ'ಗಳು ವೈದಿಕ ವಾಙ್ಮಯಕ್ಕಿಂತ ದೊಡ್ಡ ಪ್ರಮಾಣದಲ್ಲಿದ್ದರೂ ಜನಪ್ರಿಯವಾಗದೇ ಹೋದುದು, ನೇಪಾಳದಂಥ ನೆರೆ ದೇಶಗಳಲ್ಲಿ ಅವು ಉಸಿರು ಹಿಡಿದುಕೊಳ್ಳುವಂತಾದುದು. ನಮ್ಮ ದೇಶದ ಶೇಕಡಾ ತೊಂಬತ್ತಕ್ಕಿಂತ ಹೆಚ್ಚಿನ ದರ್ಶನಗಳು ನಾಸ್ತಿಕವಾಗಿವೆ ಎಂದು ಪ್ರಖ್ಯಾತ ದಾರ್ಶನಿಕ ದೇವಿಪ್ರಸಾದ ಚಟೋಪಾಧ್ಯಾಯ ಹೇಳುವುದು ಆಶ್ಚರ್ಯಕರವೇನಲ್ಲ. ಇವರ ಮಾತಿಗೆ, ಅವು ಅವೈದಿಕವಾಗಿದ್ದವು, ಜಾತ್ಯಾತೀತವಾಗಿದ್ದವೆಂಬ ಅಂಶಗಳನ್ನು ಸೇರಿಸಬೇಕಾಗುತ್ತದೆ. ತಂತ್ರ, ಲೋಕಾಯತ, ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ ಮೊದಲಾದವು ಈ ದರ್ಶನಗಳು. ಧರ್ಮಗಳೂ ಇವುಗಳ ಪ್ರಭಾವಕ್ಕೆ ಒಳಗಾದವು. ಅಷ್ಟೇ ಅಲ್ಲ ಇವುಗಳಿಂದ ಸಾಕಷ್ಟು ವಿಚಾರಗಳನ್ನು ಕದ್ದು ತಮ್ಮ ವರ್ಗ, ಜಾತಿ ಹಿತಕ್ಕೆ ಹೊಂದುವಂತೆ ತಿರುಚಿ ಹಾಕಿ ಬಳಸಿಕೊಂಡದ್ದರಿಂದಲೇ ಅವು 'ಶ್ರೇಷ್ಠ'ವೆಂಬ ಹಣೆಪಟ್ಟಿ ಹಚ್ಚಿಕೊಂಡು ಮೆರೆಯಲು ಸಾಧ್ಯವಾದುದು. ಇದಕ್ಕೆ ಬೇಕಾದಷ್ಟು ನಿದರ್ಶನಗಳನ್ನು ಕೊಡಬಹುದು. ಸಾಂಖ್ಯ, ಯೋಗಗಳ ಅಪರೂಪದ ಚಿಂತನೆಗಳನ್ನು ಬಳಸಿಕೊಳ್ಳಲಾರದ ಒಂದಾದರೂ 'ಧರ್ಮ' ನಮ್ಮಲ್ಲಿದೆಯೇ? ಇಲ್ಲವೇ ಇಲ್ಲ.

ಆದರೆ ಈ ಎಲ್ಲ ವೈದಿಕ, ಅವೈದಿಕ ಧರ್ಮಗಳು ದರ್ಶನಗಳಿಗೆ ತುಂಬ ಅಪಚಾರ ಮಾಡಿವೆ; ಅವಕ್ಕೆ ದ್ರೋಹ ಬಗೆದಿವೆ. ಅವುಗಳ ನಾಸ್ತಿಕ, ಜಾತ್ಯಾತೀತ, ಪ್ರಜಾಸತ್ತೀಯ, ಅವೈದಿಕ ಆಶಯಗಳನ್ನು ಕಿತ್ತು ಹಾಕಿ ಜಾತೀಯ, ಪಂಥೀಯ, ಆಸ್ತಿಕೀಯವಾಗಿ ತಿರುಚಿ ಹಾಕಿವೆ. ವೈದಿಕಕ್ಕೆ ಸಂಪೂರ್ಣ ತದ್ವಿರುದ್ಧವಿದ್ದ 'ತಂತ್ರ'ವನ್ನು 'ವೈದಿಕ ತಂತ್ರ'ವಾಗಿ ಮಾರ್ಪಡಿಸಿದ ನೀಚ ಬುದ್ಧಿ ಇಲ್ಲಿದೆ.

ದೇಶದಲ್ಲೇ ಮೊಟ್ಟಮೊದಲ ಶಾಸ್ತ್ರೀಯ ಸಂಗೀತ ಗ್ರಂಥವನ್ನು ಬರೆದ ಮಾದಿಗ ಕುಲದ ಮತಂಗಮುನಿಯ 'ಬೃಹದ್ದೇಶಿ' ಎಂಬ ಗ್ರಂಥಕ್ಕೆ ಮುನ್ನುಡಿ ಬರೆದಿರುವ ಡಾ.ರಾ. ಸತ್ಯನಾರಾಯಣ ಎನ್ನುವವರ ವಾದಗಳನ್ನು ಇಲ್ಲಿ ನಿದರ್ಶನವಾಗಿ ಹೇಳಬಹುದು. (ನೋಡಿ : ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ೧೯೯೮ರಲ್ಲಿ ಪ್ರಕಟ ಮಾಡಿರುವ 'ಶ್ರೀಮತಂಗಮುನಿ ವಿರಚಿತ ಬೃಹದ್ದೇಶಿ') ನಾಡಿನ ಪ್ರಖ್ಯಾತ ತಂತ್ರಜ್ಞನೆಂದೇ ಪ್ರಚಾರಗಿಟ್ಟಿಸಿದ್ದ ಬ್ರಾಹ್ಮಣ ಸತ್ಯಕಾಮರ ಗ್ರಂಥಗಳನ್ನು ಬೇಕಾದರೆ ಓದಿ ನೋಡಬಹುದು. ಡಾ.ಎಂ. ಚಿದಾನಂದಮೂರ್ತಿ ಮತ್ತು ಹಲವಾರು ವೀರಶೈವ ಮಠಾಧೀಶರು, ಪಂಡಿತರು 'ವೀರಶೈವ'ವನ್ನು ವೈದಿಕಕ್ಕೆ (ಹಿಂದೂ) ಗಂಟು ಹಾಕಲು ಶತಾಯ ಗತಾಯ ಮಾಡುತ್ತಿರುವ ಪ್ರಯತ್ನವನ್ನು ನೋಡಬಹುದು. ಆರ್ಥಿಕ, ಸಾಮಾಜಿಕ ಸಮಾನತೆಗಾಗಿ ಭಾರತದಲ್ಲಿ ನಡೆಯಬೇಕಾಗಿರುವ ವರ್ಗ ಮತ್ತು ಜಾತಿ ಹೋರಾಟಗಳ ತುರ್ತಿನಲ್ಲಿ ನಾವು ವಿರೋಧಿಸಬೇಕಾದ ನೆಲೆಗಳನ್ನು ಸ್ಪಷ್ಟವಾಗಿ ತಿಳಿದಿರಬೇಕಾಗುತ್ತದೆ. ನಮಗೆ ಸ್ನೇಹಿತರಾಗಬಲ್ಲ ಶಕ್ತಿಗಳ ಬಗೆಗೂ ಅರಿವಿರಬೇಕಾಗುತ್ತದೆ.

'ತಂತ್ರ'ಗಳ ಬಗ್ಗೆ ಅಧ್ಯಯನ ಮಾಡಿದ ಆರ್.ಎಸ್.ಶರ್ಮ, ದೇವಿಪ್ರಸಾದ ಚಟೋಪಾಧ್ಯಾಯ ಮೊದಲಾದವರು ಅವು ಅಸ್ಪೃಶ್ಯ ಮತ್ತು ಹಿಂದುಳಿದ ಜಾತಿ ವರ್ಗಗಳ ಸೃಷ್ಟಿ ಎಂಬುದನ್ನು ಖಚಿತಪಡಿಸಿದ್ದಾರೆ. ಲೋಕಾಯತವಂತೂ ಹೇಳಿ ಕೇಳಿ 'ಜನತೆಯ ಮಧ್ಯೆ ಪ್ರಚಾರದಲ್ಲಿದ್ದ ಭೌತವಾದ'ವಾಗಿತ್ತು. ಶ್ರಮಿಕ ಜಾತಿ ಜನ ಸಮೂಹಗಳು ಮಾತ್ರ ಮಾನವೀಯ, ಚಿರಂತನ ಮೌಲ್ಯಗಳ ಪ್ರತಿಪಾದಕರಾಗಿರಬಲ್ಲರು. ಅವರು ತಮ್ಮ ದರ್ಶನಗಳಲ್ಲಿ ಜಾತ್ಯಾತೀತ ಮತ್ತು ಸಮಾನತೆಯ ಆಶಯಗಳನ್ನು ತುಂಬಿಟ್ಟಿದ್ದಾರೆ.

ಪಂಚ ಮಹಾಭೂತ (ನೀರು, ನೆಲ, ಬೆಂಕಿ, ಗಾಳಿ, ಆಕಾಶ), ಪಂಚಜ್ಞಾನೇಂದ್ರಿಯ (ಕಣ್ಣು, ಕಿವಿ, ಮೂಗು, ನಾಲಗೆ, ತ್ವಚೆ), ಪಂಚಕರ್ಮೇಂದ್ರಿಯ (ಕಾಲು, ಕೈ, ಬಾಯಿ, ಗುದ, ಗುಹ್ಯ) ಐದು ತನ್ಮಾತ್ರೆ (ಶಬ್ದ, ಸ್ಪರ್ಶ, ರೂಪ, ರಸ, ಗಂಧ) ಮನಸ್ಸು ಅಹಂಕಾರ, ಬುದ್ಧಿ, ಪ್ರಕೃತಿ ಈ ೨೪ ತತ್ವಗಳೇ ವಿಶ್ವದ ಮೂಲವೆಂದು ಹೇಳುವ ಮೂಲ 'ಸಾಂಖ್ಯ'ದಲ್ಲಿ ದೇವರೇ ಇಲ್ಲ. ಈ ಎಲ್ಲ ತತ್ವಗಳಿಗೆ ಯಾವುದೇ ಜಾತಿ, ವರ್ಗ ಧರ್ಮಗಳ ಲೇಪವಿರಬೇಕಿಲ್ಲ.

ಭೂಮಿ, ನೀರು, ಬೆಂಕಿ, ಗಾಳಿ, ವಿದ್ಯೆ, ಸಂಪತ್ತು ಎಲ್ಲವೂ ಸ್ತ್ರೀ ರೂಪಿ ಎನ್ನುವ ಶಾಕ್ತ ಇಲ್ಲವೆ ತಂತ್ರ ದರ್ಶನ; ದೇಹದಲ್ಲಿರುವ ಕುಂಡಲಿನಿ ಶಕ್ತಿಯನ್ನು ಸಹಸ್ರಾರದಳ ಕಮಲಕ್ಕೆ ಏರಿಸುವ ಯೋಗ ಕ್ರಿಯೆ (ವಾಮ ತತ್ವ) ತನ್ನಲ್ಲಿರುವ ಸ್ತ್ರೀತ್ವವನ್ನು 'ಅರಿತು'ಕೊಳ್ಳುವುದೇ ಆಗಿದೆ ಎನ್ನುತ್ತದೆ. ಸ್ತ್ರೀವಾದೀ ಚಿಂತನೆ, ಹೋರಾಟಗಳು ಪ್ರಬಲವಾಗಿರುವ ಇಂದಿನ ಸಂದರ್ಭದಲ್ಲಿ ಇಂಥ ಪ್ರಾಚೀನ ವಿಚಾರಗಳಿಗೆ ವಿಶೇಷ ಮಹತ್ವ ಪ್ರಾಪ್ತವಾಗುತ್ತದೆ. ಇದೆಲ್ಲವೂ ಕೂಡ ಮಾತೃಪ್ರಧಾನ ಸಮಾಜದಲ್ಲಿ ಮಾತ್ರ ಹುಟ್ಟುವಂಥ ವಿಚಾರ. ಆದಿಮ ಕೃಷಿಕರಲ್ಲಿ ಮಾತ್ರ ಮಾತೃಪ್ರಧಾನ ಸಮಾಜವಿತ್ತು. ಏಕೆಂದರೆ ಬೇಸಾಯವನ್ನು ಕಂಡು ಹಿಡಿದದ್ದೇ ಮಹಿಳೆಯರು. ಮಾತಂಗಿ, ಎಲ್ಲಮ್ಮ (ರೇಣುಕೆ) ಲಜ್ಜಾಗೌರಿ, ದುರಗಮ್ಮ, ಕಾಳಮ್ಮ, ಮಾರೆಮ್ಮ, ಊರಮ್ಮ ಮೊದಲಾಗಿ ನಮ್ಮ ಗ್ರಾಮಗಳಲ್ಲಿರುವ ಅಸಂಖ್ಯ ಸ್ತ್ರೀದೈವ ಪಂಥಗಳು ಇಂದಿಗೂ 'ತಂತ್ರ' ಜೀವಂತವಿರುವುದರ ನಿದರ್ಶನಗಳು. ಇವೆಲ್ಲ ಕೆಳವರ್ಗದ ಆಶಯಗಳಿಂದ ತುಂಬಿ ಹೋಗಿವೆ ಎಂದು ಬೇರೆ ಹೇಳಬೇಕಿಲ್ಲ.

ಪರಲೋಕ, ಸ್ವರ್ಗ, ನರಕ, ದೇವರು, ಆತ್ಮ ಇವೆಲ್ಲವೂ ಸುಳ್ಳು; ಪುರೋಹಿತಶಾಹಿಯ ಕಲ್ಪನೆಗಳು ಎಂದು ಪ್ರತಿಪಾದಿಸುತ್ತ ಬಂದ 'ಲೋಕಾಯತ'ವಂತೂ ಪಕ್ಕಾ ನಾಸ್ತಿಕವಾದವಾಗಿತ್ತು, ಜನತೆಯ ಭೌತವಾದವಾಗಿತ್ತು. ಆ ಕಾಲದ ಇಂಥ ಪ್ರಖರ ವೈಚಾರಿಕತೆಯಿಂದ ವಿಜ್ಞಾನ, ತಂತ್ರಜ್ಞಾನಗಳು ಬೆಳೆಯಲು ಸಾಧ್ಯವಾಯಿತು. ಸಮಾಜದ ಏಳ್ಗೆಗೆ ಇವು ಹೀಗೆ ಕಾರಣವಾದವು. ವೈದ್ಯಶಾಸ್ತ್ರ ಕಾಮಶಾಸ್ತ್ರ ಗಜಶಾಸ್ತ್ರ ಹಯಶಾಸ್ತ್ರ ಸೂಪಶಾಸ್ತ್ರ ವಾಸ್ತುಶಾಸ್ತ್ರಮುಂತಾದ ಹಲವಾರು ವೈಜ್ಞಾನಿಕ ಶಿಸ್ತುಗಳು ಬೆಳೆಯಲು ಭೌತವಾದಿ ದರ್ಶನಗಳ ಪ್ರಭಾವ, ಪ್ರೇರಣೆ ಅಪಾರವಾಗಿತ್ತು.

> **ಕೆಳವರ್ಗದ ಆಶಯಗಳೆಂದರೆ ಧರ್ಮನಿರಪೇಕ್ಷತೆ, ಮಾನವೀಯತೆ, ಸಮಾನತೆಯ ಮೌಲ್ಯಗಳೆಂಬುದನ್ನು ಈವರೆಗಿನ ಚರ್ಚೆಯಿಂದ ಖಚಿತಪಡಿಸಿಕೊಳ್ಳಬಹುದು. ಅವು ಭಾರತೀಯ ದರ್ಶನಗಳ ಜೀವಜೀವಾಳ.**

ಕೆಳಜಾತಿ, ಕೆಳ ವರ್ಗಗಳಿಗೆ ಓದು ಬರಹವನ್ನು ಆಳುವ ವರ್ಗ ಮತ್ತು ವೈದಿಕ ಪುರೋಹಿತಶಾಹಿ ನಿರಾಕರಿಸಿದರೂ ಅವೈದಿಕ ಧರ್ಮಗಳು ಪ್ರೋತ್ಸಾಹ ಕೊಡುತ್ತಲೇ ಬಂದಿವೆ. ಆದರೆ ತಳ ಜಾತಿ ವರ್ಗದ ಜನ ಮತಾಂತರಗೊಂಡಾಗಲಷ್ಟೇ ಓದು ಬರಹಗಳ ಸೌಲಭ್ಯ ಪಡೆಯುತ್ತಿದ್ದರು. ಹಾಗಾಗಿ ಅವರ ಬೌದ್ಧೀಯ, ಜೈನೀಯ, ವೀರಶೈವೀಯ ಆಕೃತಿಗಳು ಮಾತ್ರ ದೊರಕುವಂತಾಗಿವೆಯೇ ಹೊರತು ಅವರ ಮೂಲ ಚಿಂತನೆಗಳಿಲ್ಲ. ಹೀಗಿದ್ದರೂ ತಂತ್ರಗಳಲ್ಲಿ ಅವು ಅಷ್ಟಿಷ್ಟು ಉಳಿದುಕೊಂಡಿವೆ. ಮತಂಗ ತಂತ್ರ, ಶಬರತಂತ್ರ ಮೊದಲಾದವು ಆಂಧ್ರದ ಮಾದಿಗರ, ಬೇಡರ ಸಿದ್ಧಾಂತಗಳೆಂದು ವಿದ್ವಾಂಸರ ಅಭಿಪ್ರಾಯ. ಇಂಥವು ಅಸಂಖ್ಯವಾಗಿವೆ. ಇವು ಬರಹಕ್ಕಿಳಿದಿದ್ದು ಬ್ರಾಹ್ಮಣರಿಂದ ಎನ್ನುತ್ತಾರೆ. ಅವರು ತಮ್ಮ ಹಿತಾಸಕ್ತಿಗಾಗಿ ಸಂಸ್ಕೃತದಲ್ಲಿ ಬರೆದರು. ಕ್ರಿ.ಪೂ. ೬೦೦ ರಿಂದೀಚೆ ಹಾಗೆ ಅವು ಬರಹಕ್ಕಿಳಿದವು. ಆಗಲೇ ದೇಶದ ತುಂಬ ಅಗ್ರಹಾರಗಳು (ಬ್ರಾಹ್ಮಣರಿಗೆ ಪುಕ್ಕಟೆಯಾಗಿ ಕೊಡುತ್ತಿದ್ದ ಗ್ರಾಮಗಳ ಇಡೀ ಹಕ್ಕು) ಮತ್ತು ಅಸ್ಪೃಶ್ಯತೆ ಜತೆಜತೆಯಾಗಿ ಬೆಳೆದವು. ಭೂಮಾಲಿಕರಾಗಿದ್ದ ದಲಿತರು ಭೂಹೀನ ಕೂಲಿಕಾರರಾಗಬೇಕಾಯಿತು.

ಕೆಳವರ್ಗದ ಆಶಯಗಳೆಂದರೆ ಧರ್ಮನಿರಪೇಕ್ಷತೆ, ಮಾನವೀಯತೆ, ಸಮಾನತೆಯ \ ಮೌಲ್ಯಗಳೆಂಬುದನ್ನು ಈವರೆಗಿನ ಚರ್ಚೆಯಿಂದ ಖಚಿತಪಡಿಸಿಕೊಳ್ಳಬಹುದು. ಅವು ಭಾರತೀಯ ದರ್ಶನಗಳ ಜೀವಜೀವಾಳ. ಇಂದಿನ ವೈಜ್ಞಾನಿಕ ಚಿಂತನೆಗಳಿಗೆ ಹೋಲಿಕೆಯಿರುವಂಥ ಹಲವಾರು ಸಂಗತಿಗಳು ನ್ಯಾಯ- ವೈಶೇಷಿಕ ದರ್ಶನಗಳಲ್ಲಿರುವುದನ್ನು ಕಾಣುತ್ತೇವೆ. ಹೀಗೆ ದರ್ಶನಗಳು ವೈಜ್ಞಾನಿಕ ಚಿಂತನೆಗೆ, ತನ್ಮೂಲಕ ಸಾಮಾಜಿಕ ಪ್ರಗತಿಗೆ ಪ್ರೇರಣೆ ನೀಡಿಕೊಂಡು ಬಂದಿವೆ. ಇಂದಿಗೂ ಕೂಡ ಅವುಗಳ ಪ್ರಸ್ತುತತೆ ಇದೆ ಎಂದು ಯೋಚಿಸಬೇಕಾದ ಜರೂರಿದೆ. ಆಧ್ಯಾತ್ಮವಾದಿ ದರ್ಶನಗಳಿಗೆ ವಿರುದ್ಧವಾಗಿ ಈ ಜನಪರ ನಾಸ್ತಿಕ ದರ್ಶನಗಳು ಹೋರಾಟ ಮಾಡುತ್ತಲೇ ಬಂದಿವೆ. 'ವೇದಾಂತ ದರ್ಶನ' ಅವುಗಳ ಪ್ರಧಾನ ವೈರಿಯಾಗಿತ್ತು.

ದುಡಿಯುವ ಕೆಳ ಜಾತಿ ವರ್ಗಗಳ ಜನಕೋಟಿ ತಮ್ಮ ಸಮಾನತೆಗಾಗಿನ ಹೋರಾಟಕ್ಕೆ ತಮ್ಮದೇ ಪರಂಪರೆಯ ಈ ದರ್ಶನಗಳ ಸೈದ್ಧಾಂತಿಕ ನೆರವು ಪಡೆಯಬೇಕಾದ ಅಗತ್ಯ ತುಂಬ ಇದೆ. ❑

ಕಥೆ

ಮುಲ್ಲಾ ಇಸ್ಮಾಯಿಲ್ ಕೊತ್ವಾಲ್

○ ಅಬ್ದುಲ್ ರಶೀದ್

ಈತನ ಹೆಸರು ಮುಲ್ಲಾ ಇಸ್ಮಾಯಿಲ್ ಕೊತ್ವಾಲ್. ಹುಟ್ಟಿದ್ದು ಇಂಗ್ಲೆಂಡಿನ ಬೋಲ್ಟನ್ ಎಂಬ ಪಟ್ಟಣದಲ್ಲಿ. ೧೯೬೦ರ ಆದಿಯಲ್ಲಿ ಬೋಲ್ಟನ್ ನಗರದ ಮೊದಲ ಮಸೀದಿ ಕಟ್ಟಿದ್ದು ಮುಲ್ಲಾ ಇಸ್ಮಾಯಿಲ್‌ನ ಅಪ್ಪ. ಈ ಅಪ್ಪ ಹುಟ್ಟಿದ್ದು ಭಾರತದ ಗುಜರಾತ್ ರಾಜ್ಯದಲ್ಲಿ. ಅಪ್ಪನಿಗೆ ಮಗ ಇಸ್ಮಾಯಿಲ್ ಬಹುದೊಡ್ಡ ಮುಲ್ಲಾ ಆಗಬೇಕೆಂದು ಬಲು ಆಸೆ ಇತ್ತಂತೆ. ಮಗ ಇಸ್ಮಾಯಿಲ್ ಹತ್ತನೆಯ ಎಳೆ ಪ್ರಾಯದಲ್ಲಿಯೇ ಮೂವತ್ತು ಅಧ್ಯಾಯಗಳ ಪವಿತ್ರ ಖುರಾನನ್ನು ಕಂಠಪಾಠ ಮಾಡಿದನಂತೆ. ಹದಿಮೂರರ ಹರೆಯದಲ್ಲಿಯೇ ಲೌಕಿಕ ವಿದ್ಯಾಭ್ಯಾಸದ ಜೊತೆ ಜೊತೆಯಲ್ಲಿಯೇ 'ಹಾಫಿಜ್' ಆಗಿ ಅಪ್ಪನಿಗೆ ಅಚ್ಚರಿ ಮೂಡಿಸಿದನಂತೆ. ಅನಂತರ ಅಪ್ಪ ಇಸ್ಮಾಯಿಲನಿಗೆ ಇಸ್ಲಾಮಿಕ್ ಯುನಿವರ್ಸಿಟಿಯಲ್ಲಿ ಕಲಿಯಲು ಆಜ್ಞಾಪಿಸಲು ಹಾಗೆಯೇ ಮಾಡಿ ೭ ವರ್ಷಗಳ ಕಾಲದ ಲೌಕಿಕ ವಿದ್ಯಾಭ್ಯಾಸದ ಜತೆ ಅರಬಿ ವ್ಯಾಕರಣವನ್ನೂ, ಪವಿತ್ರ ಖುರಾನಿನ ವಿಶ್ಲೇಷಣೆಯನ್ನೂ, ಪವಿತ್ರ ಪ್ರವಾದಿಯವರ ಬೋಧನೆಗಳನ್ನೂ ಇಸ್ಲಾಮ್ ಸಾಹಿತ್ಯ ಚರಿತ್ರೆಯನ್ನೂ ಕರಗತ ಮಾಡಿಕೊಂಡು, ನೇರವಾಗಿ ದಕ್ಷಿಣ ಆಫ್ರಿಕಾದ ಜೊಹಾನ್ ಬರ್ಗ್ ಎಂಬ ಪಟ್ಟಣದ ಇಸ್ಲಾಮಿಕ್ ಯುನಿವರ್ಸಿಟಿಗೆ ಹೋಗಿ ಅಲ್ಲಿ ಆರು ಪ್ರಸಿದ್ಧಿ ಬುಖಾರಿ ಗ್ರಂಥಗಳನ್ನು ಅಭ್ಯಸಿಸಿ 'ಹಾಲಿಂ' ಪದವಿಯನ್ನು ಪಡೆದನಂತೆ. ತದನಂತರ ಅಪ್ಪನಿಗೆ ಮಗ ಇಸ್ಮಾಯಿಲ್ ಮುಫ್ತಿ ಪದವಿಯನ್ನು ಪಡೆಯಲಿ ಎಂಬ ಆಸೆಯ್ಯಾಯಿತಂತೆ. ಆದರಂತೆ ಮಗ ಇಸ್ಮಾಯಿಲ್ ಪಾಕಿಸ್ತಾನಕ್ಕೆ ತೆರಳಿ ವಿಖ್ಯಾತ ಮತ ಪಂಡಿತ ಮುಫ್ತಿ ತಾಕಿ ಉಸ್ಮಾನಿಯವರ ಬಳಿಯಲ್ಲಿ ಇಸ್ಲಾಮಿ ಹಣಕಾಸಿನ ಕುರಿತು ಮೂರು ವರ್ಷಗಳ ಕಾಲ ಕಲಿತು ಮುನ್ನೂರು ಫತ್ವಾಗಳನ್ನು ರಚಿಸಿ ಮುಫ್ತಿ ಆದರಂತೆ. ಈಗ ಧಾರ್ಮಿಕ ಮಹಾಪ್ರಬಂಧವೊಂದನ್ನು ಬರೆದು ಮುಗಿಸುತ್ತಿದ್ದಾರೆ. ವಿಷಯ : ಧಾರ್ಮಿಕ ಪ್ರಾಣಿಹತ್ಯೆ (Islamic salughtering).

ಮುಲ್ಲಾ ಇಸ್ಮಾಯಿಲ್ ಕೊತ್ವಾಲನನ್ನು ನಾನು ಕಂಡಿದ್ದು ಐರ್ಲೆಂಡ್ ದೇಶದ ರಾಜಧಾನಿ ಡಬ್ಲಿನ್ ನಗರದ ಬಹುಮುಖ್ಯ ರಸ್ತೆಯೊಂದರ ಪುಟ್ಟ ಮದ್ರಸಾವೊಂದರಲ್ಲಿ. ಉದ್ದಕರಿ ಗಡ್ಡದ, ದಪ್ಪ ಕನ್ನಡಕದ ಹಿಂದಿರುವ ಯಾವ ಭಾವನೆಯನ್ನೂ ಸೂಸದ ಕಣ್ಣುಗಳ, ಹಾಗೆ ನೋಡಿದರೆ ಹೆಚ್ಚು ಕಡಿಮೆ ನನ್ನ ಹಾಗೇ ಇರುವ ಈತ ಅಲ್ಲಿನ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಧಾರ್ಮಿಕ ಗುರುವಾಗಿದ್ದ ಮತ್ತು ತನ್ನ ಸ್ಥಾನವನ್ನು ಬಹು ಗಂಭೀರವಾಗಿ ತೆಗೆದುಕೊಂಡು ನನ್ನಲ್ಲಿ ಸಣ್ಣಗಿನ ನಗು, ಸಣ್ಣಗಿನ ಗಾಬರಿ ಹಾಗೂ ಬಲು ದೊಡ್ಡ ಭೀತಿಯನ್ನು ಹುಟ್ಟಿಸುವಂತೆ ಮಾತನಾಡುತ್ತಿದ್ದ. ನಾನು ಆತನ ಮಾತುಗಳನ್ನು ಕೇಳುವ ಮೊದಲು ಡಬ್ಲಿನ್‌ನ ಬಲು ಹಳೆಯ ಇಗರ್ಜಿಯೊಳಗೆ ಹೋಗಿ ಬಂದಿದ್ದೆ. ಅದು ನಿಜಕ್ಕೂ ಬಲು ಹಳೆಯ ಇಗರ್ಜಿ. ಬಹುಶಃ ಕ್ರೈಸ್ತಧರ್ಮ ಇಂಗ್ಲೆಂಡ್ ದೇಶದೊಳಕ್ಕೆ ಹೊಕ್ಕುವ ಮೊದಲೇ ನಿರ್ಮಾಣಗೊಂಡ ಮಾತೆ ಮೇರಿಯ ದೇಗುಲ.

ಮುಲ್ಲಾ ಇಸ್ಮಾಯಿಲ್ ಕೊತ್ವಾಲನನ್ನು ನಾನು ಕಂಡಿದ್ದು ಐರ್ಲೆಂಡ್ ದೇಶದ ರಾಜಧಾನಿ ಡಬ್ಲಿನ್ ನಗರದ ಬಹುಮುಖ್ಯ ರಸ್ತೆಯೊಂದರ ಪುಟ್ಟ ಮದ್ರಸಾವೊಂದರಲ್ಲಿ. ಉದ್ದಕರಿ ಗಡ್ಡದ, ದಪ್ಪ ಕನ್ನಡಕದ ಹಿಂದಿರುವ ಯಾವ ಭಾವನೆಯನ್ನೂ ಸೂಸದ ಕಣ್ಣುಗಳ, ಹಾಗೆ ನೋಡಿದರೆ ಹೆಚ್ಚು ಕಡಿಮೆ ನನ್ನ ಹಾಗೇ ಇರುವ ಈತ ಅಲ್ಲಿನ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಧಾರ್ಮಿಕ ಗುರುವಾಗಿದ್ದ.

ಆದಕ್ಕೇ ಐರಿಶ್ ಜನರಿಗೆ ಇಂಗ್ಲಿಷರನ್ನು ಕಂಡರೆ ಒಂಥರಾ ಬಿಗುಮಾನ ಮತ್ತು ತಮ್ಮನ್ನು ನೂರಾರು ವರ್ಷ ಆಳಿದ ಅವರ ಕುರಿತು ಸಾತ್ವಿಕ ಸಿಟ್ಟು. ನಾನು ಈ ಇಗರ್ಜಿಯ ಪಕ್ಕದ ಪಬ್‌ನಲ್ಲಿ ಮಾತನಾಡಿಸಿದ ಮೇರಿ ಫ್ಲಾಯ್ಡ್ ಎಂಬತ್ತೈ ವರ್ಷದ ಐರಿಶ್ ಮುದುಕಿಗೆ ಆ ಸಾತ್ವಿಕ ಸಿಟ್ಟೂ ಇರಲಿಲ್ಲ. ಆಕೆ ಕ್ಯಾಥೊಲಿಕ್. ಆಕೆಯ ತೀರಿಹೋದ ಗಂಡ ಆಂಗ್ಲಿಕನ್. ಎಲ್ಲ ಧರ್ಮಗಳನ್ನೂ ಇತಿಹಾಸದ ಪುಸ್ತಕಗಳನ್ನೂ ಸುಟ್ಟು ಹಾಕಬೇಕೆಂದು ಆಕೆ ತನ್ನ ನಡುಗುವ ಧ್ವನಿಯಲ್ಲಿ ಆವೇಶಭರಿತಳಾಗಿ ನನ್ನೊಡನೆ ವಾದಿಸಿದ್ದಳು. ಇತಿಹಾಸ ಮತ್ತು ಧರ್ಮ ಹೇಗೆ ಐರ್ಲೆಂಡನ್ನು ನೂರಾರು ವರ್ಷ ಜನಾಂಗೀಯ ಕಲಹದಲ್ಲಿ ಮುಳುಗಿಸಿತು ಎನ್ನುತ್ತ ಎನ್ನುತ್ತ ಮಾರ್ಧವವಾಗಿ ಅತ್ತಿದ್ದಳು. ಜೊತೆಗೆ ಅಕ್ಟೋಬರ್ ತಿಂಗಳ ೨೦ನೇ ತೇದಿ ತನ್ನ ಹುಟ್ಟುಹಬ್ಬವೆಂದೂ ತನಗೆ ಭಾರತದಿಂದ ಆ ದಿನದಂದು ಹುಟ್ಟುಹಬ್ಬದ ಶುಭಾಶಯಗಳನ್ನು ದಯವಿಟ್ಟು ದೂರವಾಣಿ ಮೂಲಕ ತಿಳಿಸಬೇಕೆಂದೂ, ತನಗೆ ಗಾಂಧಿಯನ್ನು ಕಂಡರೆ ಬಹಳ ಇಷ್ಟವೆಂದೂ, ಭಾರತದಿಂದ ಬರಲಿರುವ ನನ್ನ ಶುಭಾಶಯಕ್ಕಾಗಿ ಕಾದು ಕುಳಿತಿರುವೆನೆಂದೂ ಹೇಳಿ ಬೊಚ್ಚುಬಾಯಿಯ ತುಂಬ ನಕ್ಕು, ನಡುಗುವ ಕೈಗಳಿಂದ ಕೈ ಕುಲುಕಿ ಬೀಳ್ಕೊಟ್ಟಿದ್ದಳು. ನಾನು ಅವಳಿಗೆ ಟಾಟಾ ಹೇಳಿ ಆಚಾನಕ್ಕಾಗಿ ಮುಲ್ಲಾ ಇಸ್ಮಾಯೀಲನ ಮದರಸಾದೊಳಕ್ಕೆ ಹೊಕ್ಕುಬಿಟ್ಟಿದ್ದೆ.

ಹಾಗೆ ನೋಡಿದರೆ ಮುಲ್ಲಾ ಇಸ್ಮಾಯೀಲನ ಮದರಸಾ ನಾನು ಬಾಲ್ಯದಲ್ಲಿ ಖುರಾನು ಕಲಿತ ಮದರಸಾದಂತೇನೂ ಇರಲಿಲ್ಲ. ಡಬ್ಲಿನ್‌ನ ಆ ಬಲುಮುಖ್ಯ ರಸ್ತೆಯಲ್ಲಿ ಒಂದು ಮಾದಕ ಪಾನೀಯದ ಅಂಗಡಿ ಮತ್ತು ಲೈಂಗಿಕ ಆಟಿಕೆಗಳನ್ನು ಮಾರುವ ಅಂಗಡಿಗಳ ನಡುವೆ ಸ್ವಲ್ಪ ಹಳೆಯದು ಎನ್ನಬಹುದಾದ ಅಟ್ಟಣಿಗೆಯುಳ್ಳ ಕಟ್ಟಡವೊಂದರ ಅದಾಗ ತಾನೇ ನವೀಕರಿಸಲ್ಪಟ್ಟ ಭಾಗವೊಂದರಲ್ಲಿ ಹಸಿರು ಅಕ್ಷರಗಳಲ್ಲಿ ಅರಬಿ ಹಾಗೂ ಆಂಗ್ಲಭಾಷೆಯಲ್ಲಿ ಬರೆಯಲ್ಪಟ್ಟ ಈ ಮದರಸಾದ ಬಾಗಿಲು ಅಸಹಜವಾಗಿ ತೆರೆದುಕೊಂಡಿತು. ಆ ತೆರೆದ ಬಾಗಿಲಿನ ಹಿಂದೆ ಅತ್ಯಾಧುನಿಕ ಉಳಿ ಹಾಗೂ ಗರಗಸಗಳನ್ನು ಹಿಡಿದುಕೊಂಡು ಕೆಂಪು ಮುಖದ ಯುವಕನೊಬ್ಬ ಸದ್ದು ಮಾಡುತ್ತ ಆಚಾರಿ ಕೆಲಸ ಮಾಡುತ್ತಿದ್ದ.

'ಈ ಮದರಸಾದ ಮುಲ್ಲಾ ಎಲ್ಲಿ?' ಎಂದು ನಾನು ಇಂಗ್ಲಿಷ್‌ನಲ್ಲಿ ಕೇಳಿದೆ. ಆತನ ನನ್ನನ್ನು ಸಂಶಯಾಸ್ಪದವಾಗಿ ನೋಡಿ ಮತ್ತೆ ತನ್ನ ಉಳಿ ಸದ್ದನ್ನು ಮುಂದುವರಿಸಿದ. ನಾನು ಸುಮ್ಮನೇ ಮದರಸಾದ ನೆಲದಲ್ಲಿ ಹಾಸಿದ್ದ ರತ್ನಗಂಬಳಿಯಲ್ಲಿ ಕಾಲುಚಾಚಿ ಕುಳಿತು ಚಾವಣಿಯನ್ನು ದಿಟ್ಟಿಸತೊಡಗಿದೆ. ಆತನಿಗೆ ಏನನಿಸಿತೋ 'ಕ್ಷಮಿಸು ಬ್ರದರ್ ಚಾವಣಿ ಸೋರುತ್ತಿದೆ, ಮತ್ತು ಬಾಗಿಲೂ ಮುರಿದಿದೆ ನಾನು ಇದನ್ನೆಲ್ಲಾ ಸರಿ ಮಾಡುತ್ತಿರುವೆ. ಒಂದು ನಿಮಿಷ. ಈ ಮದರಸಾದ ಮುಲ್ಲಾನನ್ನು ಕರೆ ತರುವೆ' ಎಂದು ಎಲ್ಲೋ ಹೊರಟ.

'ಒಂದು ನಿಮಿಷ ಬ್ರದರ್, ನಿನ್ನ ನೋಡಿದರೆ ನೀನು ಐರಿಶ್ ತರಹ ಇಲ್ಲ. ಆದರೆ ನಿನ್ನ ತಲೆಯ ಬಿಳಿ ಟೊಪ್ಪಿ ನೋಡಿದರೆ ನೀನು ಮುಸಲ್ಮಾನನ ಹಾಗೆ ಕಾಣುತ್ತಿರುವೆ. ನೀನು ಯಾವ ದೇಶದವನು ?. ನಾನಾದರೋ ಇಂಡಿಯಾದಿಂದ ಬಂದವನು. ನನ್ನ ಹೆಸರು ಹೀಗೆ' ಎಂದು ಹೇಳಿದೆ.

ಮುಲ್ಲಾ ಇಸ್ಮಾಯಿಲ್ ನನ್ನೊಡನೆ ಮಾತನಾಡುವ ಮೊದಲು ತನ್ನೆರಡೂ ಕೈಗಳಿಂದ ನನ್ನ ಕೈಗಳನ್ನು ಮುಚ್ಚಿ ಕಣ್ಮುಚ್ಚಿ ಪ್ರಾರ್ಥಿಸಿ ಕೈಗಳನ್ನು ಆಕಾಶದೆಡೆಗೆ ಎತ್ತಿ ಕಣ್ಣಿಗೊತ್ತಿಕೊಂಡರು. ನನ್ನೊಡನೆ ಮಾತನಾಡಲು ಅನುವು ಮಾಡಿಕೊಟ್ಟದ್ದಕ್ಕಾಗಿ ಪಡೆದವನಿಗೆ ಕೃತಜ್ಞತೆಗಳನ್ನು ಅರುಹಿದರು.



ಆತನ ಮುಖದಲ್ಲಿ ಉತ್ತರ ಹೇಳಬೇಕೆನ್ನುವ ಯಾವ ಉತ್ಸುಕತೆಯೂ ಇರಲಿಲ್ಲ. 'ನಾನು ಚೆಚೆನ್ಯಾದವನು' ಎಂದಷ್ಟೇ ಹೇಳಿ ಮುಲ್ಲಾನನ್ನು ಕರೆತರಲು ಆತ ಹೋದ.

ಆತ ಹೋದಮೇಲೆ ಬಂದವರೇ ಮುಲ್ಲಾ ಇಸ್ಮಾಯಿಲ್ ಕೊತ್ವಾಲ್ !

ಮುಲ್ಲಾ ಇಸ್ಮಾಯಿಲ್ ನನ್ನೊಡನೆ ಮಾತನಾಡುವ ಮೊದಲು ತನ್ನೆರಡೂ ಕೈಗಳಿಂದ ನನ್ನ ಕೈಗಳನ್ನು ಮುಚ್ಚಿ ಕಣ್ಮುಚ್ಚಿ ಪ್ರಾರ್ಥಿಸಿ ಕೈಗಳನ್ನು ಆಕಾಶದೆಡೆಗೆ ಎತ್ತಿ ಕಣ್ಣಿಗೊತ್ತಿಕೊಂಡರು. ನನ್ನೊಡನೆ ಮಾತನಾಡಲು ಅನುವು ಮಾಡಿಕೊಟ್ಟದ್ದಕ್ಕಾಗಿ ಪಡೆದವನಿಗೆ ಕೃತಜ್ಞತೆಗಳನ್ನು ಅರುಹಿದರು.

'ನಾನೂ ಇನ್ನೂ Islamic slaughtering (ಧಾರ್ಮಿಕ ಪ್ರಾಣಿಹತ್ಯೆ) ಕುರಿತಾದ ಮಹಾಪ್ರಬಂಧವನ್ನು ಬರೆದು ಮುಗಿಸಬೇಕಾಗಿದೆ'. ಹೀಗೆ ಹೇಳುವಾಗ ಮುಲ್ಲಾ ಇಸ್ಮಾಯೀಲರ ಮುಖದಲ್ಲಿ ಸಣ್ಣದಾದ ಶಿಶು ಸಹಜ ನಾಚಿಕೆ ಸುಳಿದುಹೋಯಿತು.

'ಹಾಗೆ ನೋಡಿದರೆ ನನಗೆ ಮುಫ್ತಿ ಪದವಿ ದೊರೆತ ಮೇಲೆ ಎರಡು ಕಡೆಯಿಂದ ಮುಲ್ಲಾ ಕೆಲಸಕ್ಕೆ ಕರೆ ಬಂದಿತ್ತು. ಒಂದು ಅಮೇರಿಕಾದ ವಾಷಿಂಗ್ಟನ್ ಪಟ್ಟಣದಿಂದ ಇನ್ನೊಂದು ಈ ಡಬ್ಲಿನ್ ನಗರದಿಂದ. ನನ್ನ ಅಮ್ಮ ಅಮೇರಿಕಾ ಬಲು ದೂರ. ಲಂಡನ್‌ನಿಂದ ಡಬ್ಲಿನ್ ಬಲು ಹತ್ತಿರ ಎಂದು ಹೇಳಿದರು. ಇಲ್ಲಿಗೆ ಬಂದು ೭ ವರ್ಷವಾಯಿತು.' ಮುಲ್ಲಾ ಇಸ್ಮಾಯಿಲ್ ಮುಂದುವರಿಸಿದರು.

'ನಾನು ಈ ನಗರದ ಎರಡನೇ ಇಮಾಂ. ಈ ನಗರದವರಿಗೆ ನಾನು ಬಲು ಪ್ರಿಯನಾದೆ. ಈಗ ಶುಕ್ರವಾರದ ಜುಮ್ಮಾ ನಮಾಜಿಗೆ ೭೦೦ ಜನ ಸೇರುತ್ತಾರೆ. ೧೦ ವಿವಿಧ ದೇಶಗಳ ಮುಸಲ್ಮಾನರು. ಐರಿಶ್ ಮುಸಲ್ಮಾನರು, ಬೋಸ್ನಿಯಾದ ಮುಸಲ್ಮಾನರು, ನೈಜೀರಿಯಾದ ಮುಸಲ್ಮಾನರು, ಇಂಡಿಯಾದ ಮುಸಲ್ಮಾನರು, ಪಾಕಿಸ್ತಾನದ ಮುಸಲ್ಮಾನರು, ಎಲ್ಲೆಡೆಯ ಮುಸಲ್ಮಾನರು ಒಂದೇ ಸೂರಿನ ಕೆಳಗೆ ಎಷ್ಟೊಂದು ಚಂದ ಭಗವಂತನನ್ನು ಪ್ರಾರ್ಥಿಸುವುದು...' ಹೀಗೆ ಹೇಳುತ್ತ ಹೇಳುತ್ತಾ ಮುಲ್ಲಾ ನಿಧಾನಕ್ಕೆ ಉದ್ವಿಗ್ನರಾಗುತ್ತಿದ್ದರು.

'ಈ ಮದರಸಾದಲ್ಲಿ ವಾರಕ್ಕೆ ಒಬ್ಬರಾದರೂ ಮುಸಲ್ಮಾನರಾಗುತ್ತಾರೆ. ಕಳೆದ ವಾರವಷ್ಟೇ ಐರಿಶ್ ಸಹೋದರಿಯೊಬ್ಬರು ಮುಸಲ್ಮಾನರಾದರು. ಅದರ ಹಿಂದಿನ ವಾರ ಚೈನಾದವರು ಒಬ್ಬರು. ಅದರ ಹಿಂದಿನ ವಾರ ಒಬ್ಬರು ಜರ್ಮನ್ ಇದೆಲ್ಲಾ ಯಾಕೆ ಗೊತ್ತ?' ಮುಲ್ಲಾ ಇಸ್ಮಾಯಿಲ್ ನನ್ನ ಕಡೆ ನೋಡಿದರು.

'ಜಗತ್ತಿನ ಅಶಾಂತಿಗೆಲ್ಲಾ ಪರಿಹಾರ ನಮ್ಮಲ್ಲಿದೆ' ಇಸ್ಮಾಯಿಲ್ ನಕ್ಕರು 'ಹತ್ತು ದಿನಗಳ ಹಿಂದೆ ಏನಾಯ್ತು ಗೊತ್ತಾ?' ಅವರು ಕೇಳಿದರು. ಆಮೇಲೆ ಒಂದು ಉದಾಹರಣೆ ಹೇಳಿದರು.

'ಇಲ್ಲಿ ಒಬ್ಬಳು ಮುಸಲ್ಮಾನ ಹುಡುಗಿ ಶಾಲೆ ಕಲಿಯುತ್ತಿದ್ದಳು. ನಿಮಗೆ ಗೊತ್ತಲ್ಲ, ಶಾಲೆಗೆ ಹೋದರೆ ಮಕ್ಕಳು ಚಿತ್ರ ಬಿಡಿಸಬೇಕಾಗುತ್ತದೆ. ಆದರೆ ನಿಮಗೆ ಗೊತ್ತಲ್ಲಾ, ನಮ್ಮ ಧರ್ಮದ ಪ್ರಕಾರ ಮನುಷ್ಯರ ಚಿತ್ರ ಬಿಡಿಸುವುದು ಪಾಪ. ಪಡೆದವನಿಗಲ್ಲದೆ ಮನುಷ್ಯಾಕಾರವನ್ನು ಉಂಟು ಮಾಡುವ ಅಧಿಕಾರ ಯಾರಿಗೂ ಇಲ್ಲ. ಆದರೆ ಈ ಹುಡುಗಿ ಮನುಷ್ಯ ಮುಖದ ಚಿತ್ರ ಬಿಡಿಸಿಬಿಟ್ಟಳು. ಈ ದೇಶದ ಘನತೆ ಏನು ಗೊತ್ತಾ? ಆ ಹುಡುಗಿಯ ಟೀಚರ್ ಒಬ್ಬರು ಐರಿಶ್ ಕ್ಯಾಥೊಲಿಕ್. ಬಹಳ ಒಳ್ಳೆಯವರು. ಆ ಹುಡುಗಿಗೆ ಬುದ್ಧಿ ಹೇಳಿ ನೋಡಮ್ಮಾ ನಿನ್ನ ಧರ್ಮದ ಪ್ರಕಾರ ನೀನು ಚಿತ್ರ ಬಿಡಿಸಬಾರದು. ಅದು ಅಪರಾಧ. ಹಾಗಾಗಿ ನೀನು ಬಿಡಿಸಿದ ಚಿತ್ರಗಳನ್ನು ಅಳಿಸು ಎಂದು ಅವಳಿಂದ ಅದನ್ನು ತೆಗೆದುಕೊಂಡು ಅಳಿಸಿ ಹಾಕಿದರು. ಇದು ಏನು ಗೊತ್ತಾ. ಇದು ಸಹಬಾಳ್ವೆ. ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಬಾಳುವುದು.'

ಮುಲ್ಲಾ ಇಸ್ಮಾಯಿಲ್ ಮುಂದುವರಿಸುತ್ತಲೇ ಇದ್ದರು. ನನಗೆ ಯಾಕೋ ಬಾಯಿ ಕಹಿಯಾಗಲು ತೊಡಗಿತ್ತು. ಜಗತ್ತಿನ ಪಾಪಗಳನ್ನೆಲ್ಲಾ ಮಾಡಿ ಅದನ್ನೆಲ್ಲಾ ಅಳಿಸಿಹಾಕಲು ಈ ಮಾನವ ಜನ್ಮ ತೀರಾ ಸಣ್ಣದು ಅನಿಸಿತು.

ಮತ್ತೆ ಈ ಮುಲ್ಲಾ ಇಸ್ಮಾಯಿಲ್ ಯಾಕೋ ಸರಿಯಿಲ್ಲ ಎನಿಸಿತು. ಆಗಲೇ ರಾತ್ರಿ ಒಂಬತ್ತಾಗುತ್ತಿತ್ತು. ಆದರೂ ಡಬ್ಲಿನ್‌ನ ಆಕಾಶದಲ್ಲಿ ಸೆಪ್ಟೆಂಬರ್‌ನ ಸೂರ್ಯ ಮೈಬೆಚ್ಚಗೆ ಮಾಡುತ್ತಿದ್ದ. ಒಳಹೊಕ್ಕ ಬಾಗಿಲಿನಿಂದಲೇ ಹಿಂತಿರುಗಿದೆ. ❑

ಕೃಷಿಕ - ಮೇಷ್ಟ್ರುಬ್ಬರ ಹಾಡು-ಪಾಡು

ರೈತ, ಸಾವಯುವ ಕೃಷಿತಜ್ಞ ಎಲ್. ನಾರಾಯಣ ರೆಡ್ಡಿಯವರು ಬೆಂಗಳೂರು ಪೂರ್ವ ತಾಲ್ಲೂಕಿನ ಸೊರಹುಣಸೆ ಗ್ರಾಮದವರು. ಪ್ರಸ್ತುತ ದೊಡ್ಡಬಳ್ಳಾಪುರ ತಾಲ್ಲೂಕಿನ ಮರಳೇನಹಳ್ಳಿಯಲ್ಲಿ ವಾಸಿಸುತ್ತಾ ವ್ಯವಸಾಯ ದಲ್ಲಿ ತೊಡಗಿಸಿಕೊಂಡಿರುವ ಇವರು ಬಿಡುವಿನ ವೇಳೆಯಲ್ಲಿ ಕೃಷಿ ವಿಶ್ವವಿದ್ಯಾಲಯಗಳಲ್ಲಿ, ರಾಷ್ಟ್ರೀಯ ಅಂತರ್ರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ, ಗದ್ದೆ ತೋಟಗಳಲ್ಲಿ ಕೃಷಿ ಪಾಠ ಮಾಡುವ ಮೇಷ್ಟ್ರೂ ಹೌದು. ಸಾಮಾನ್ಯ ರೈತರಿಂದ ಹಿಡಿದು ವಿಜ್ಞಾನಿಗಳವರೆಗೂ ಸಾವಯುವ ಕೃಷಿಯ ಪರವಾಗಿ ಸವಾಲೆಸೆದು ಮಾತನಾಡ ಬಲ್ಲ ಇವರಂತವರು ನೌಕರಶಾಹಿಯ ಜಡತ್ವದಿಂದ ಹೊರಬರಲಾರದ ಕೃಷಿ ಅಧಿಕಾರಿಗಳಿಗೆ; ಕೃಷಿ ಸೇವಾ ಕ್ಷೇತ್ರವನ್ನು ಏಕಸ್ವಾಮ್ಯಗೊಳಿಸಬಯಸುವ ಕಂಪೆನಿಗಳಿಗೆ, ಅವರ ಕೃಪಾಪೋಷಿತ ಸಂಶೋಧಕರಿಗೆ ತಲೆನೋವು.

ಹೊಲದ ಬದುವಲ್ಲಿ ಕುಳಿತು ಇವರೊಂದಿಗೆ ಮಾತಿಗೆ ತೊಡಗಿದೆವೆಂದರೆ ಮನುಷ್ಯ - ಮರ - ಗಿಡ - ಹುಳು- ಹುಲ್ಲು - ಬೇರು - ನೀರು - ಸೂಕ್ಷ್ಮಾಣು ಜೀವಿಗಳ ನಡುವಿನ ಸಾವಯುವ ಸಂಬಂಧಗಳ ಜೀವ ಲೋಕವೊಂದು ತೆರೆದುಕೊಳ್ಳುತ್ತದೆ. ನಾಡು ನೀರಿನ ಬರ ಎದುರಿಸುತ್ತಿರುವ ಈ ದಿನಗಳಲ್ಲಿ ಕಡಿಮೆ ನೀರಿನಲ್ಲಿ ಬೆಳೆಯುವ ಮಡಗಾಸ್ಕರ್ ಭತ್ತದ ಪ್ರಯೋಗ, ಕೀಟನಾಶಕ ಮತ್ತು ಮಣ್ಣಿನ ಚಿಕಿತ್ಸೆಗೆ ಉಪಯೋಗವಾಗುವ ಪಂಚ ಗವ್ಯದ ಬಳಕೆಯನ್ನು ಯಶಸ್ವಿಯಾಗಿ ಮಾಡಿರುವ ಇವರ ಸಾಧನೆಯನ್ನು ಪರಿಗಣಿಸಿ ನಾಡಿನ ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿಗಳನ್ನು ನೀಡಿವೆ. ಕರ್ನಾಟಕ ರಾಜ್ಯ ಸರಕಾರವು ರಾಜ್ಯೋತ್ಸವ ಪ್ರಶಸ್ತಿಯನ್ನು, ಹಂಪಿ ಕನ್ನಡ ವಿಶ್ವ ವಿದ್ಯಾಲಯವು ನಾಡೋಜ ಪ್ರಶಸ್ತಿಯನ್ನೂ ನೀಡಿ ಗೌರವಿಸಿದೆ.

ಜೀವನದಲ್ಲಿ ನೈತಿಕತೆಯ ಬಗ್ಗೆ ಹೆಚ್ಚು ಮಾತ ನಾಡುವ ರೆಡ್ಡಿಯವರ ಪ್ರಕಾರ ವ್ಯಕ್ತಿಗಳ ಜೀವನ ದೃಷ್ಟಿಕೋನ - ಜೀವನ ಶೈಲಿ ಬದಲಾಗದೆ ಜಾಗತೀಕರಣ ವನ್ನು ಎದುರಿಸಲಾಗದು, ವ್ಯವಸ್ಥೆ ಸರಿಹೋಗದು, ಸಮಾಜ ಬದಲಾಗದು. ನಿಸರ್ಗವನ್ನು, ಮನುಷ್ಯ ಸಂಬಂಧಗಳನ್ನು ಭೋಗವಾದಿ ನೆಲೆಯಿಂದಲೇ ನೋಡುವ ಮನಸ್ಸುಗಳಿಗೆ ಇವರ ಮಾತುಗಳು ಹುಚ್ಚು ನುಡಿಗಳಾಗಿ ಕೇಳಿಸಬಹುದು. ಕೃಷಿಯ ಕುರಿತು ದಿನಗಟ್ಟಲೆ ಮಾತನಾಡಬಲ್ಲ ನಾರಾಯಣ ರೆಡ್ಡಿಯವರಿಗೆ ಕೃಷಿ ಸಂಬಂಧಿತ ಇತರ ಕೆಲವು ವಿಚಾರಗಳಲ್ಲಿ ಪ್ರಶ್ನೆಗಳನ್ನು ಕೇಳಿ ಸಂದರ್ಶನ ಮಾಡಲಾಯ್ತು. ಸಾಂಪ್ರದಾಯಿಕ ಕೃಷಿ ಪದ್ಧತಿಯು 'ಪವಿತ್ರ'ವಾಗಿ 'ಕೇಸರಿ' ಅಸ್ತ್ರವಾಗುವ ಈ ಸಂದರ್ಭದಲ್ಲಿ, ರೈತರನ್ನು ಇನ್ನಷ್ಟು ಪರಾವಲಂಬಿಗಳ ನ್ನಾಗಿಸಲಿರುವ ಬಯೋ ಟೆಕ್ನಾಲಜಿಯ ಭರಾಟೆಯ ನಡುವೆ ರೆಡ್ಡಿಯವರ ಮಾತುಗಳು ವಿಚಾರಯೋಗ್ಯ.



ಹೊಲದ ಬದುವಲ್ಲಿ ಕುಳಿತು ಇವರೊಂದಿಗೆ ಮಾತಿಗೆ ತೊಡಗಿದೆವೆಂದರೆ ಮನುಷ್ಯ-ಮರ-ಗಿಡ-ಹುಳು-ಹುಲ್ಲು-ಬೇರು-ನೀರು-ಸೂಕ್ಷ್ಮಾಣು ಜೀವಿಗಳ ನಡುವಿನ ಸಾವಯುವ ಸಂಬಂಧಗಳ ಜೀವಲೋಕವೊಂದು ತೆರೆದುಕೊಳ್ಳುತ್ತದೆ. ನಾಡು ನೀರಿನ ಬರ ಎದುರಿಸುತ್ತಿರುವ ಈ ದಿನಗಳಲ್ಲಿ ಕಡಿಮೆ ನೀರಿನಲ್ಲಿ ಬೆಳೆಯುವ ಮಡಗಾಸ್ಕರ್ ಭತ್ತದ ಪ್ರಯೋಗ, ಕೀಟನಾಶಕ ಮತ್ತು ಮಣ್ಣಿನ ಚಿಕಿತ್ಸೆಗೆ ಉಪಯೋಗವಾಗುವ ಪಂಚ ಗವ್ಯದ ಬಳಕೆಯನ್ನು ಯಶಸ್ವಿಯಾಗಿ ಮಾಡಿರುವ ಇವರ ಸಾಧನೆ ಪ್ರಶಸ್ತಿಗಳನ್ನು ಮೀರಿದ್ದು. ಇವರೊಂದಿಗೆ ಒಂದಿಷ್ಟು ಮಾತುಕತೆ ಸಂವಾದ ಇಲ್ಲಿದೆ.

ಸಂದರ್ಶನ-ನಿರೂಪಣೆ :
ಜನಾರ್ದನ ಕೆಸರಗದ್ದೆ, ಎನ್.ಎಂ.ನಟರಾಜ್ ನಾಗಸಂದ್ರ

ಸಂದರ್ಶನ

◆ **ನೀವು ಸಾವಯುವ ಕೃಷಿ ಆರಂಭಿಸಿದ್ದು ಯಾವಾಗಿನಿಂದ? ಯಾಕೆ?**

● ನಾನು ಸಣ್ಣ ವಯಸ್ಸಿನಿಂಲೇ ಕೃಷಿ ಕೆಲಸ ಮಾಡಲು ಆರಂಭಿಸಿದವನು. ಹೈಬ್ರಿಡ್ ತಳಿ, ರಾಸಾಯನಿಕ ಗಳನ್ನು ಬಳಸಿ ಹೆಚ್ಚು ಇಳುವರಿ ತೆಗೆದು ಪ್ರಶಸ್ತಿ ಪಡೆದಿದ್ದೆ. ಒಮ್ಮೆ ಸತ್ಯಸಾಯಿಬಾಬಾನನ್ನು ನೋಡಲು ಬಂದ ಅಮೆರಿಕದವ ನೊಬ್ಬನನ್ನು ಆಕಸ್ಮಿಕವಾಗಿ ಭೇಟಿಯಾಗಿದ್ದೆ. ಒಂದು ರಾತ್ರಿ ಇಡೀ ನಮ್ಮ ಮನೆಯಲ್ಲಿದ್ದ ಆತ ಸಾವಯುವ ಕೃಷಿಯ ಬಗ್ಗೆ ಹೇಳಿಕೊಟ್ಟ. ಹೆಚ್ಚು ಇಳುವರಿ ಬಂದರೂ ನಾವು ಎಷ್ಟು ಖರ್ಚು ಮಾಡುತ್ತೇವೆ ಎಂಬ ಲೆಕ್ಕಾಚಾರ ಮಾಡಿ ತೋರಿಸಿದ. ಮುಂದೆ ಆತನೇ ಕಳುಹಿಸಿಕೊಟ್ಟ ಪುಸ್ತಕ ಗಳನ್ನು ಓದಿ ನಾನು ಬದಲಾದೆ.

◆ **ಸಾವಯುವ ಕೃಷಿಯಲ್ಲಿ ಸದ್ಯಕ್ಕೆ ಏನೇನು ಬೆಳೆಯುತ್ತಿದ್ದೀರಿ?**

● ಮೊದಲ ಆದ್ಯತೆಯಾಗಿ ಮನೆಗೆ ಬೇಕಾಗುವ ಎಲ್ಲಾ ಬೇಳೆಕಾಳುಗಳನ್ನು ತರಕಾರಿ ಹಣ್ಣುಗಳನ್ನು ಬೆಳೆಯುತ್ತಿದ್ದೇನೆ. ಜೊತೆಗೆ ಸೋಯಾಬೀನ್ ಮತ್ತು ಮಡಗಾಸ್ಕರ್ ವಿಧಾನದಲ್ಲಿ ಭತ್ತ ಬೆಳೆಯುತ್ತಿದ್ದೇನೆ.

◆ ಮಡಗಾಸ್ಕರ್ ಭತ್ತ ಅಂದ್ರೆ?

ಸಾಮಾನ್ಯವಾಗಿ ಭತ್ತದ ಪೈರನ್ನು ಗದ್ದೆಯಲ್ಲಿ ನಾಟಿ ಮಾಡಿ, ನಿರಂತರವಾಗಿ ನೀರು ನಿಲ್ಲಿಸಿ ಬೆಳೆಯುತ್ತಾರೆ. ಆದರೆ ಭತ್ತದ ಬೀಜವನ್ನು ಒಂದೊಂದು ಅಡಿ ಅಂತರದ ಸಾಲಿನಲ್ಲಿ ಬಿತ್ತನೆ ಮಾಡಿ, ತರಕಾರಿ ಬೆಳೆಗಳಿಗೆ ನೀರು ಕಟ್ಟುವ ಹಾಗೆ ನೀರು ಕಟ್ಟಿ ಅಥವ ಹನಿ ನೀರಾವರಿ ಮೂಲಕವೂ ಬೆಳೆಯಬಹುದು. ಇದರಿಂದ ಮೂರನೇ ಎರಡು ಭಾಗ ನೀರು ಉಳಿತಾಯವಾಗುತ್ತದೆ. ಉತ್ತಮ ಇಳುವರಿಯೂ ಬರುತ್ತದೆ. ಮಡಗಾಸ್ಕರ್ ಎನ್ನುವುದು ಒಂದು ಸಣ್ಣ ದ್ವೀಪದ ಹೆಸರು. ಅಲ್ಲೊಮ್ಮೆ ನಿರಂತರ ಬರಗಾಲ ಬಂದಿದ್ದಾಗ ಅಲ್ಲಿನ ಜನ ಕಂಡುಕೊಂಡ ವಿಧಾನ ಇದು.

◆ ನಮ್ಮ ರೈತರಿಗೆ ಮಡಗಾಸ್ಕರ್ ಭತ್ತದ ಪರಿಚಯ ಆಗಿದೆಯೇ?

● ಈ ಬಗ್ಗೆ ಬಹಳಷ್ಟು ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಆದರೆ ಜನರಿಗೆ ಇನ್ನೂ ಇದರ ಪರಿಚಯ ಸರಿಯಾಗಿ ಆದಂತಿಲ್ಲ. ಇದನ್ನು ಪ್ರಚಾರ ಮಾಡಬೇಕಾದವರು, ನಮ್ಮ ಯೋಜನೆಗಳನ್ನು ರೂಪಿಸುವವರು, ಅನುಷ್ಠಾನಕ್ಕೆ ತರುವವರು ಈ ನಿಟ್ಟಿನಲ್ಲಿ ಕೆಲಸ ಮಾಡಬೇಕಾಗಿದೆ.

◆ ಕೃಷಿಗೆ ಪೂರಕವಾದ ಯೋಜನೆಗಳ ಹಿಂದೆ ಎಂತಹ ರಾಜಕಾರಣವಿದೆ?

● ಇಂತಹ ಯೋಜನೆಗಳ ಹಿಂದೆ ಕೆಲವು ಹಿತಾಸಕ್ತಿಗಳು ಕೆಲಸ ಮಾಡುತ್ತವೆ. ಉದಾಹರಣೆಗೆ, 1907ರಲ್ಲಿ ಬ್ರಿಟಿಷ್ ಸರ್ಕಾರ ಇದ್ದಾಗ ಶಾಂಕೆ ಎನ್ನುವ ಸಿವಿಲ್ ಇಂಜಿನಿಯರ್ ಒಬ್ಬರನ್ನು ಭಾರತಕ್ಕೆ ಕರೆಸಿ ಈ ದೇಶಕ್ಕೆ ಎಷ್ಟು ಅಣೆಕಟ್ಟೆಗಳು ಬೇಕು ಎಂದು ಸಲಹೆ ಕೇಳಿದ್ದರು. ನೀರಾವರಿ ಯೋಜನೆಗಳಿಂದ ಆಹಾರ ಉತ್ಪಾದನೆ ಹೆಚ್ಚಾಗಿ ಆ ಮೂಲಕ ರೆವಿನ್ಯೂ ಹೆಚ್ಚು ಬರುತ್ತದೆ ಎಂಬುದು ಬ್ರಿಟಿಷರ ನಂಬಿಕೆ. ಆದರೆ ಆ ಇಂಜಿನಿಯರ್ 'ಈ ದೇಶದ ರೈತರು ಬುದ್ಧಿವಂತರು. ಎಲ್ಲೆಲ್ಲಿ ಕೆರೆ ಕಟ್ಟೆಗಳು ಬೇಕೋ ಅಲ್ಲೆಲ್ಲಾ ಕಟ್ಟಿದ್ದಾರೆ. ಹೊಸದಾಗಿ ಏನು ಕಟ್ಟುವುದು ಬೇಡ. ಇರುವವುಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಿ ಹಾಗೂ ಬೇಕಿದ್ದರೆ ನದಿಗಳಿಗೆ ಅಲ್ಲಲ್ಲಿ ನಾಲ್ಕು ನಾಲ್ಕು ಅಡಿ ಎತ್ತರದ ಬ್ಯಾರೇಜುಗಳನ್ನು, ಅಡ್ಡ ಕಟ್ಟೆಗಳನ್ನು ಕಟ್ಟಿಕೊಳ್ಳಿ' ಎಂದು ವರದಿ ಕೊಟ್ಟರಂತೆ.

ನಮ್ಮ ಈಗಿನ ನಾಯಕರುಗಳೇನೂ ಭಿನ್ನವಾಗಿಲ್ಲ. ಸಾವಿರಾರು ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ಗಳಲ್ಲಿ ನೂರಾರು ಕೋಟಿ ಕಮಿಷನ್ ಬರುತ್ತದೆಂದು ದೊಡ್ಡ ಅಣೆಕಟ್ಟೆಗಳನ್ನು ನಿರ್ಮಿಸಲು ಹೊರಟಿದ್ದಾರೆ. ದೊಡ್ಡ ಡ್ಯಾಮುಗಳನ್ನು ಕಟ್ಟಿ ದೇಶ ಉದ್ಧಾರವಾಗಿಲ್ಲ. ಬೆಳೆಯೇನು ಜಾಸ್ತಿಯಾಗಿಲ್ಲ. ಉದಾಹರಣೆಗೆ ತುಂಗಭದ್ರಾ ಅಣೆಕಟ್ಟೆ ನೋಡಿ, 1968ರಲ್ಲಿ ನೀರು ಬಿಟ್ಟಿರುವುದು. ಆಗಲೆ ಅಲ್ಲಿನ ಬೇಸಾಯದ ಭೂಮಿ ಚೌಳಾಗಿದೆ, ಅಣೆಕಟ್ಟೆಯಲ್ಲೂ ಹೂಳುತುಂಬಿಕೊಂಡಿದೆ. ಈಗ ಮೂರನೇ ಒಂದು ಭಾಗಮಾತ್ರ ನೀರು ನಿಲ್ಲುತ್ತಿರುವುದು. ಕೆಲವೇ ವರ್ಷಗಳಲ್ಲಿ ಅದು ಫುಟ್‌ಬಾಲ್ ಆಟವಾಡುವ ಮೈದಾನವಾಗುತ್ತದೆ. ಮತ್ತೆ ಅದರ ಹೂಳು ತೆಗೆಯಲು ಸಾವಿರಾರು ಕೋಟಿಗಳಿಗೆ ಗುತ್ತಿಗೆ ಕೊಡಬಹುದು. ಕಾಡು ಬೆಳೆಸುವುದರ ಮೂಲಕ ಹೂಳು ಬರುವುದನ್ನು ತಡೆಯುತ್ತಿಲ್ಲ. ಹೀಗಿರುವಾಗ ಅದೇ ನದಿಗೆ ಇನ್ನೊಂದು ಅಣೆಕಟ್ಟು ಕಟ್ಟುತ್ತಾರಂತೆ ಯಾರಿಗಾಗಿ? ಯಾತಕ್ಕಾಗಿ? ರಾಜಕಾರಣಿಗಳಿಗೆ ಅಷ್ಟು ಆಸಕ್ತಿ ಇದ್ದರೆ ನದಿದಡದ ಜನರ ಮನವೊಲಿಸಿ ಬ್ಯಾರೇಜುಗಳನ್ನು ಕಟ್ಟಲಿ.

◆ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಏನನ್ನುತ್ತೀರಿ?

● ಕೃಷ್ಣದೇವರಾಯನ ಕಾಲದಲ್ಲಿ ಇಟ್ಟಿಗೆ ಗಾರೆಯಲ್ಲಿ ಕಟ್ಟಿರುವ ತುಂಗಭದ್ರಾ ನದಿಯ ಅಡ್ಡಗಟ್ಟೆ ಇಂದಿಗೂ ಚೆನ್ನಾಗಿದೆ, 2000 ಎಕರೆಗೆ ನೀರು ಉಣಿಸುತ್ತಿದೆ. ಇವತ್ತಿನ ಕಾಮಗಾರಿಗಳೆಲ್ಲವೂ ಖರ್ಚಿಗೆ ದಾರಿ. ನಾಲೆಗಳು ಬಿರುಕು ಬಿಡುತ್ತಲೇ ಇರುತ್ತವೆ, ಬೆಳೆಗಳು ಕೊಚ್ಚಿಕೊಂಡು ಹೋಗುತ್ತಲೆ ಇರುತ್ತವೆ, ಅಧಿಕಾರಿಗಳ ವೇತನ, ಬೆಳೆ ಪರಿಹಾರ... ಹೀಗೆ ಬೊಕ್ಕಸಕ್ಕೆ ಹೊರೆ ತಪ್ಪಿದ್ದಲ್ಲ.

ಮಡಗಾಸ್ಕರ್ ಬೆಳೆ ಗಮನಿಸಲೆಂದು ನಾನು ಮೂರು ವರ್ಷಗಳಿಂದ ವಿಶ್ವವಿದ್ಯಾಲಯಗಳ ಅಧಿಕಾರಿಗಳನ್ನು ನಮ್ಮ ಹೊಲಕ್ಕೆ ಕರೆಯುತ್ತಲೇ ಇದ್ದೇನೆ. ಅವರು ಬರಲೇ ಇಲ್ಲ. ಒಮ್ಮೆ ಬಂದವರು ಮತ್ತೆ ಬರಲಿಲ್ಲ. ಯಾವ ಹುಡುಕಾಟ ಮಾಡದಿದ್ದರೂ ಅವರಿಗೆ ವೇತನ, ಬಡ್ತಿ ಸಮಯಕ್ಕೆ ಸರಿಯಾಗಿ ದೊರೆಯುತ್ತದೆ. ಅವರಿಗೆ ಇಂಟರ್‌ನೆಟ್ ಇದೆ, ಕಂಪ್ಯೂಟರ್‌ಗಳಿವೆ ಅದರೂ...



◆ ನದಿ ಜೋಡಣೆ ಬಗ್ಗೆ ನಿಮ್ಮ ಅನಿಸಿಕೆ?

● ಇದೆಲ್ಲಾ ಆಗುವಂತಹದಲ್ಲ. ಒಂದು ರಸ್ತೆ ಮಾಡಬೇಕಾದರೆ ಜಮೀನು ಸ್ವಾಧೀನ, ತಡೆ ತಕರಾರು ಎಂದು ಹತ್ತು ವರ್ಷ ಬೇಕಾಗುತ್ತದೆ. ಇನ್ನು ಗಂಗಾ – ಕಾವೇರಿ ಜೋಡಿಸಲು ಎಷ್ಟು ವರ್ಷಗಳು ಬೇಕಾಗಬಹುದು? ಅದಕ್ಕೆ ಬೇಕಾಗುವ ಸಂಪನ್ಮೂಲ ಎಲ್ಲಿಂದ ತರ್ತಾರೆ?

◆ ಅರ್ಕಾವತಿ ನದಿ ಪುನಶ್ಚೇತನಕ್ಕಾಗಿ ನಡೆಯುತ್ತಿರುವ ಪ್ರಯತ್ನಗಳ ಬಗ್ಗೆ ನಿಮ್ಮ ಅಭಿಪ್ರಾಯ ವೇನು?

● ಅರ್ಕಾವತಿ ನದಿಯಲ್ಲಿ ನೀರನ್ನು ಹರಿಸುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ಈ ಭಾಗದ ರೈತರು ಅವರವರ ಹೊಲಗಳಲ್ಲಿ ನೀರು ನಿಲ್ಲಿಸುವುದರ ಮೂಲಕ ಜೋಪು ಹರಿದರೂ ಸಾಕು ಸಂತೋಷವೆ.

◆ ಕಾವೇರಿ ನದಿ ನೀರಿನ ಸಮಸ್ಯೆಯನ್ನು ಹೇಗೆ ಅರ್ಥ ಮಾಡಿಕೊಳ್ಳುವುದು?

● ನಾನು ಕಳೆದ ತಿಂಗಳು ತಮಿಳುನಾಡಿಗೆ ಹೋಗಿದ್ದೆ. ಅಲ್ಲಿ ಭತ್ತದ ಗದ್ದೆಗೆ ಎಂಟು ಅಂಗುಲದಷ್ಟು ನೀರು ನಿಲ್ಲಿಸುತ್ತಾರೆ. ಅಲ್ಲಿನ ಲಾಲ್‌ಗುಡಿ ಎಂಬ ಊರಿನಲ್ಲಿ ಮಂತ್ರಿಗಳೊಬ್ಬರ ಭತ್ತದ ಗದ್ದೆಯಲ್ಲೇ 9 ಇಂಚು ನೀರು ನಿಲ್ಲಿಸಿದ್ದರು. ತಂಜಾವೂರು ಜಿಲ್ಲೆಯ ಭತ್ತದ ಬೆಳೆಗೆ ಅಷ್ಟೊಂದು ನೀರು ಬೇಕೆ? ಈ ರೀತಿ ನೀರಿನ ದುರುಪಯೋಗಮಾಡಬಾರದು. ನಾನು ಅವರಿಗೆ ಹೇಳಿದೆ 'ನಮ್ಮಲ್ಲಿ ಒಂದು ಬೆಳೆಗೆ ನೀರಿಲ್ಲ. ನೀವು ಮೂರು ಬೆಳೆಯನ್ನು ಈ ರೀತಿ ಬೆಳೆಯಲು ಹೊರಟಿದ್ದೀರಲ್ಲ!' ಹೀಗೆ ಹೇಳುವಾಗ ನಾನೊಬ್ಬ ಕನ್ನಡಿಗನಾಗಿ ಮತನಾಡುತ್ತಿಲ್ಲ, ರೈತನಾಗಿ ಮಾತನಾಡುತ್ತಿದ್ದೀನಿ. ಇದು ಕನ್ನಡ ತಮಿಳಿನ ಪ್ರಶ್ನೆಯಲ್ಲ. ನಮ್ಮ ರೈತರು ಮಡ್ಗಾಸ್ಕರ್ ವಿಧಾನದಲ್ಲಿ ಭತ್ತ ಬೆಳೆದರೆ ಒಂದು ವರ್ಷದಲ್ಲಿ ಕಾವೇರಿ ಸಮಸ್ಯೆಯನ್ನು ಹೋಗಲಾಡಿಸಬಹುದು. ಎರಡೂ ಸರ್ಕಾರಗಳು ಇತ್ತ ಯಾಕೆ ಗಮನ ಹರಿಸಬಾರದು?

◆ ಇಂತಹ ವಿಚಾರಗಳಲ್ಲಿ ಸರ್ಕಾರಗಳಿಗೆ ಸಲಹೆ ನೀಡುವ ಅಧಿಕಾರಿಗಳು, ತಂತ್ರಜ್ಞರ ಜವಾಬ್ದಾರಿಗಳಿವೆಯಲ್ಲವೆ?

● ಜವಾಬ್ದಾರಿ ಇದೆ, ಆಸಕ್ತಿ ಇಲ್ಲ. ಮಡಗಾಸ್ಕರ್ ಬೆಳೆ ಗಮನಿಸಲೆಂದು ನಾನು ಮೂರು ವರ್ಷಗಳಿಂದ ವಿಶ್ವವಿದ್ಯಾಲಯಗಳ ಅಧಿಕಾರಿಗಳನ್ನು ನಮ್ಮ ಹೊಲಕ್ಕೆ ಕರೆಯುತ್ತಲೇ ಇದ್ದೇನೆ. ಅವರು ಬರಲೇ ಇಲ್ಲ. ಒಮ್ಮೆ ಬಂದವರು ಮತ್ತೆ ಬರಲಿಲ್ಲ. ಯಾವ ಹುಡುಕಾಟ ಮಾಡದಿದ್ದರೂ ಅವರಿಗೆ ವೇತನ, ಬಡ್ತಿ ಸಮಯಕ್ಕೆ ಸರಿಯಾಗಿ ದೊರೆಯುತ್ತದೆ. ಅವರಿಗೆ ಇಂಟರ್‌ನೆಟ್ ಇದೆ. ಕಂಪ್ಯೂಟರ್‌ಗಳಿವೆ ಅದರೂ ಇವೆಲ್ಲ ಯಾಕೆ ತಿಳಿದು ಕೊಳ್ಳುವುದಿಲ್ಲ? ಕೆಲವು ಅಧಿಕಾರಿಗಳು ಇದೆಲ್ಲಾ ಆಗುವುದಿಲ್ಲ ಎನ್ನುತ್ತಾರೆ. ಅಂಥವರಲ್ಲಿ ಮಡ್ಗಾಸ್ಕರ್

ಪದ್ಧತಿಯನ್ನು ಕೆಲವು ಅಧಿಕಾರಿಗಳು ಪ್ರಚಾರಗೊಳಿಸಿ ಅನುಷ್ಠಾನಕ್ಕೆ ತಂದಿದ್ದಾರೆ. ಹೊಸ ವಿಧಾನಗಳನ್ನು ಹೇಳಿಕೊಡುವಾಗ ತಮ್ಮ ಜವಾಬ್ದಾರಿ ಹೆಚ್ಚಾಗುತ್ತದೆ ಎಂದು ಅಧಿಕಾರಿಗಳು ತಪ್ಪಿಸಿಕೊಳ್ಳುತ್ತಿದ್ದಾರೆ. ಅಧಿಕಾರಿಯಾಗಲಿ, ರೈತನಾಗಲೀ, ಕೂಲಿಯವನಾಗಲೀ ಅವರವರು ತಮ್ಮ ಜವಾಬ್ದಾರಿಯನ್ನ ನಿರ್ವಹಿಸಬೇಕು. ಹೀಗಾಗದಿರುವುದೇ ನಮ್ಮ ದೇಶದ ದೊಡ್ಡ ಸಮಸ್ಯೆ.

◆ ಜ್ಞಾನ, ಮಾಹಿತಿ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳ ಬಗ್ಗೆ ನಿಮ್ಮ ಅಭಿಪ್ರಾಯ?

● ನಾನು ಬೇರೆಯವರು ಮಾಡಿರುವ ಪ್ರಯೋಗಗಳಿಂದ ಕಲಿತಿದ್ದೇನೆ. ಅದರ ಲಾಭಪಡೆದಿದ್ದೇನೆ. ಆದರೆ ನನಗೆ ತಿಳಿದಿರುವ ವಿಚಾರವನ್ನು ಗೌಪ್ಯವಾಗಿ ಇಡಲು ಅಥವಾ ಅದರ ಮೇಲೆ ಹಕ್ಕು ಸ್ಥಾಪಿಸಲು ಬಯಸುವುದಿಲ್ಲ. ಯಾಕೆಂದರೆ ಅದು ನನ್ನದಲ್ಲ. ಜನರಿಂದ ಕಲಿತದ್ದು. ನಾನು ಮಾಡಿರುವ ಪಂಚಗವ್ಯ ಪ್ರಯೋಗ ಯಶಸ್ವಿಯಾಗಿದೆ. ಸಾವಿರಾರು ಜನ ಇದರಿಂದ ಲಾಭ ಪಡೆದಿದ್ದಾರೆ. ಇಲಾಖೆಯವರು , ವಿಜ್ಞಾನಿಗಳು ಇದನ್ನು ಒಪ್ಪುವುದಿಲ್ಲ. ಆದರೆ ನನ್ನ ಸಲಹೆ ಪಡೆದಿರುವ ರೈತರು ಇದರ ಅನುಕೂಲ ಪಡೆದಿದ್ದಾರೆ. ದೊಡ್ಡಬಳ್ಳಾಪುರದ ರೈತರೊಬ್ಬರು ಫಂಗಸ್ ನಿಯಂತ್ರಿಸಲು, ಹುಳಸಾಯಿಸಲು ಅಥವಾ ಮಣ್ಣಿಗೆ ಚಿಕಿತ್ಸೆ ಕೊಡಲು ಯಾವುದೇ ರಾಸಾಯನಿಕ ಬಳಸದೆ, ಪಂಚಗೌವ್ಯ, ಮೀನಿನ ಅಮಿನೋಅಸಿಡ್, ಐಎಂಸೊಲ್ಯೂಷನ್ ಇವಿಷ್ಟನ್ನೇ ಬಳಸಿ ತುಂಬಾ ಚೆನ್ನಾಗಿ ವೆನಿಲ್ಲಾ ಬೆಳೆದಿದ್ದಾರೆ. ಅಧಿಕಾರಿಗಳು, ವಿಜ್ಞಾನಿಗಳು, ತಮಗೆ ಗೊತ್ತಿಲ್ಲದಿದ್ದರು ಕಲಿಯಲು ತಯಾರಿಲ್ಲ. ಆಗೋದಿಲ್ಲ ಎಂದಷ್ಟೇ ಹೇಳಿ ನುಣಿಚಿಕೊಳ್ಳುತ್ತಾರೆ.

◆ ಮೀನಿನ ಅಮಿನೋಆಸಿಡ್ ಅಂದ್ರೆ ಏನು?

● ಮೀನಿನ ಅಂಗಡಿಗಳಲ್ಲಿ ಬಿಸಾಡುವಂತಹ ಮೀನಿನ ಕಸ, ತಲೆ, ಕರುಳು ಇತ್ಯಾದಿ ತಂದು ಅಷ್ಟೇ ತೂಕದಷ್ಟು ಬೆಲ್ಲಹಾಕಿ ಮುಚ್ಚಳವಿರುವ ಪಾತ್ರೆಯಲ್ಲಿ ಹಾಕಿ ಹತ್ತು ದಿನಗಳವರೆಗೆ ಇಟ್ಟರೆ ಅದ್ಭುತವಾದ ಗೊಬ್ಬರ ತಯಾರಾಗುತ್ತದೆ. ಕೊರಿಯಾದಲ್ಲಿ ಇದನ್ನು ಬಹಳಷ್ಟು ಬಳಸುತ್ತಾರೆ.

ಒಂದು ಕಂಪನಿಯವರು ಮುಂದೆ ಬಂದು ಸಾರ್ ಇದನ್ನೆಲ್ಲಾ ಹೇಳಬೇಡಿ ನಾವು ಪೇಟೆಂಟ್ ಮಾಡುತ್ತೇವೆ, ನಿಮಗೆ ಹಣನೀಡುತ್ತೇವೆ ಎಂದರು. ನಾನು, ನನಗೆ ದುಡ್ಡು ಬೇಡ ನನ್ನಲ್ಲೇ ಬೇಕಾದಷ್ಟು ಇದೆ, ಅದಕ್ಕಿಂತಲು ನನಗೆ ಖರ್ಚೇ ಇಲ್ಲ ಎಂದೆ. ನಮ್ಮ ರೈತರಲ್ಲೂ ಕೆಲವರಿದ್ದಾರೆ, ತಮಗೆ ತಿಳಿದಿದ್ದನ್ನು ಇನ್ನೊಬ್ಬರಿಗೆ ಹೇಳುವುದಿಲ್ಲ. ಬೇರೆಯವರು ಚೆನ್ನಾಗಿದ್ದರೆ ನಮಗೆ ಒಳ್ಳೆಯದು. ಯಾಕೆಂದರೆ ಅವರು ಕಳ್ಳತನ ಮಾಡಲ್ಲ, ಗಲಾಟೆಗೆ ಬರುವುದಿಲ್ಲ.

◆ ಸಾವಯವ ಉತ್ಪನ್ನಗಳನ್ನು ರಫ್ತು ಮಾಡುವುದರ ಬಗ್ಗೆ?

● ನಾನು ಅದನ್ನು ವಿರೋಧಿಸುತ್ತೇನೆ. ಮೊದಲು ನಾನು ರಫ್ತಿಗೆ ವಿರೋಧ. ಈ ದೇಶದ ನೀರು ಜನರ ಶ್ರಮ ಇನ್ನಾರದೋ ಸುಖಕ್ಕೆ ಉಪಯೋಗವಾಗುವುದು ಸರಿಯಲ್ಲ. ರಫ್ತು ಯಾಕೆ ಬೇಕು? ವಿದೇಶಿ ವಿನಿಮಯಕ್ಕೆ ಅಂತಾರೆ. ವಿದೇಶಿ ವಿನಿಮಯದಿಂದ ಐಷಾರಾಮಿ ವಸ್ತುಗಳನ್ನು ನಾವು ತರಿಸಬೇಕಿಲ್ಲ. ವಿದೇಶಿ ವಿನಿಮಯಕ್ಕಾಗಿಯೇ ತಂಬಾಕು ಬೆಳೆದರು. ತಂಬಾಕು ಬೆಳೆಗಾಗಿ ಕಾಡುಗಳನ್ನು ಕಡಿದರು. ಮೈಸೂರು, ಕೊಡಗು ಜಿಲ್ಲೆಗಳಲ್ಲಿ ಬಹುಭಾಗ ಕಾಡು ನಾಶವಾಗಿರುವುದು ತಂಬಾಕು ಬೆಳೆಯಿಂದಾಗಿಯೇ.

◆ ನೀವು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಈ ಸಲ ನೂರಕ್ಕೂ ಹೆಚ್ಚು ಜನರಿಗೆ ಪ್ರಶಸ್ತಿ ನೀಡಿದ್ದಾರೆ. ಪ್ರಶಸ್ತಿಗಳಿಗೆ ಬೆಲೆಯಿದೆಯೇ?

● ನನಗೆ ರಾಜ್ಯೋತ್ಸವ ಪ್ರಶಸ್ತಿ ಬಂದಿರುವುದು ಬೇರೆಯವರ ಪ್ರಯತ್ನದಿಂದ, ನಾನು ಅರ್ಜಿ ಹಾಕಿಲ್ಲ. ರಾಜ್ಯೋತ್ಸವ ಪ್ರಶಸ್ತಿಗಳ ಸಂಖ್ಯೆ ನೂರು ಇನ್ನೂರಕ್ಕೆ ಬೆಳೆದಿದೆ, ಮುಂದೆ ನಾನೂರೋ ಐನೂರೋ ಆಗಬಹುದು. ಸಾರಾಯಿ ದೊರೆಗಳಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಟ್ಟರು. ಇದಕ್ಕಿಂತಲೂ ಅವಮಾನ ಏನಿದೆ?

ಇಲ್ಲಿ ನಾನು ಇನ್ನೊಂದು ವಿಚಾರ ಪ್ರಸ್ತಾಪಿಸಬೇಕು. ಕಬ್ಬು ಬೆಳೆ, ಕಬ್ಬಿನ ಕಾರ್ಖಾನೆಗಳು ಇರುವುದು ಸಕ್ಕರೆಗಾಗಿ, ಬೆಲ್ಲಕ್ಕಾಗಿ ಎಂದು ನಾವು ತಪ್ಪು ತಿಳಿದಿದ್ದೇವೆ. ಅವು ಇರುವುದು ಮೊಲ್ಯಾಸಿಸ್‌ಗಾಗಿ. ಮೊಲ್ಯಾಸಿಸ್‌ನಿಂದ ಮದ್ಯ ತಯಾರಿಸುತ್ತಾರೆ. ಅದಕ್ಕಾಗಿಯೇ ಅಣೆಕಟ್ಟುಗಳನ್ನು ಕಟ್ಟಿ ನೀರು ಹರಿಸುತ್ತಾರೆ. ಭೂಗರ್ಭದಿಂದ ಜಲತೆಗೆದು ಭೂಮಿಯನ್ನು ಬರಡು ಮಾಡಿ, ಕಬ್ಬು ಬೆಳೆದು ಸಾರಾಯಿ, ಬ್ರಾಂದಿ, ವಿಸ್ಕಿ ತಯಾರಿಸಿ ಮಾರುತ್ತಾರೆ. ನೀರಿನ ಅಭಾವವಿರುವ ಬಯಲು ಸೀಮೆಯಲ್ಲಿ ಕಬ್ಬು ಬೆಳೆಯುವುದು ಪಾಪದ ಕೆಲಸ. ಇದು ನಿರ್ದಿಷ್ಟ ಬೆಳೆಗಳನ್ನು ಪ್ರೋತ್ಸಾಹಿಸುವ ಹಿಂದಿರುವ ರಾಜಕಾರಣ. ನೀಲಗಿರಿ ಭೂಮಿಗೆ ಗೊಬ್ಬರವಲ್ಲ, ದನಕರುವಿಗೆ ಮೇವಲ್ಲ, ಸೌದೆನೂ ಅಲ್ಲ. ಮಾವಿನ ಮರ ಬೆಳೆಯಬಹುದಿತ್ತು. ಆಲದ ಮರ ಬೆಳೆದರೆ ಬರಗಾಲದಲ್ಲಿ ಮೇವಾದರೂ ಸಿಗುತ್ತಿತ್ತು. ನೀಲಗಿರಿ ಬೆಳೆಯುವಂತೆ ಮಾಡಿ ಜನರನ್ನು ಸೋಮಾರಿಗಳನ್ನಾಗಿ ಮಾಡಿದರು.

◆ ಸರ್ಕಾರ ಒಂದು ಕಡೆ ಸಾವಯವ ಕೃಷಿ ಮಾಡಬೇಕು ಎನ್ನುತ್ತದೆ, ಮತ್ತೊಂದು ಕಡೆ ಬಿ.ಟಿ.ಗೆ ಉತ್ತೇಜನ ನೀಡುತ್ತಿದೆಯಲ್ಲ?

● ಸರ್ಕಾರಕ್ಕೆ ಒಂದು ನೀತಿ ಅನ್ನೊದೇ ಇಲ್ಲ. ರಾಜಕಾರಣಿಗಳು, ಅಧಿಕಾರಿಗಳು ಇವತ್ತು ಸ್ವತಂತ್ರರಲ್ಲ. ಅವರನ್ನು ಬೇರೆ ಹಿತಾಸಕ್ತಿಗಳು ನಿಯಂತ್ರಿಸುತ್ತಿವೆ.

◆ ಬಯೋಟೆಕ್ನಾಲಜಿ ಬಗ್ಗೆ ನಿಮ್ಮ ಅಭಿಪ್ರಾಯವೇನು?

● ಬಯೋಟೆಕ್ನಾಲಜಿ ಬಗ್ಗೆ ನನಗೆ ಹೆಚ್ಚೇನು ತಿಳಿದಿಲ್ಲ. ತಿಳಿಯದೇ ಮಾತನಾಡುವುದು ಸರಿಯಲ್ಲ. ಅದರೂ ನನ್ನ ಗಮನಕ್ಕೆ ಬಂದಿರುವುದನ್ನು ಮಾತ್ರ ಪ್ರಸ್ತಾಪಿಸುತ್ತೇನೆ. ಜನ ಬಯೋಟೆಕ್ನಾಲಜಿಯಿಂದ ಅಭಿವೃದ್ಧಿಪಡಿಸಿರುವ ಗಿಡವೊಂದಕ್ಕೆ ಹತ್ತಾರು ರೂಗಳನ್ನು ನೀಡಿ ಖರೀದಿಸುತ್ತಾರೆ. ಕಂಪನಿ ಪ್ರಕಾರ ಈ ಗಿಡಗಳಿಗೆ ರೋಗ ಬರುವುದಿಲ್ಲ, ಇಳುವರಿ ಹೆಚ್ಚು. ಇದು ಸುಳ್ಳು. ಅವರು ರೈತರಿಗೆ ಕೊಡುವಾಗ ರೋಗ ಇಲ್ಲದೇ ಇರಬಹುದು. ಆದರೆ ಮುಂದೆ ರೋಗಬರುವುದಿಲ್ಲ ಎಂದು ಹೇಳಲಾಗುವುದಿಲ್ಲ. 15 ವರ್ಷಗಳಲ್ಲಿ ರೋಗ ಬರುವುದಿಲ್ಲವೆಂದು ಖಾತರಿ ನೀಡಲು ಯಾವುದಾದರೂ ಕಂಪನಿ ತಯಾರಿದೆಯೇ?

ಬಯೋಟೆಕ್ನಾಲಜಿಯಿಂದ ಕೆಲವೇ ಜಾತಿಯ ತಳಿಯ ಗಿಡಗಳು ಉಳಿದುಕೊಳ್ಳುತ್ತವೆ. ಬಾಳೆಯನ್ನೇ ಉದಾಹರಣೆಗೆ ತೆಗೆದುಕೊಂಡರೆ, ನಮ್ಮಲ್ಲಿ ಸುಮಾರು 40 ರಿಂದ 50 ತಳಿಗಳಿವೆ. ಹೊಸತಂತ್ರಜ್ಞಾನದಿಂದ ಅಂತಹ ತಳಿಗಳು ಕಣ್ಮರೆಯಾಗಲಿವೆ. ಎಲ್ಲಾ ಬೆಳೆಗಳಿಗೂ ಇದು ಅನ್ವಯವಾಗುತ್ತದೆ. ಕಂಪನಿ ಪ್ರಚಾರ ಪಡಿಸಿದ ಒಂದೋ

ನೀರಿನ ಅಭಾವವಿರುವ ಬಯಲು ಸೀಮೆಯಲ್ಲಿ ಕಬ್ಬು ಬೆಳೆಯುವುದು ಪಾಪದ ಕೆಲಸ. ಇದು ನಿರ್ದಿಷ್ಟ ಬೆಳೆಗಳನ್ನು ಪ್ರೋತ್ಸಾಹಿಸುವ ಹಿಂದಿರುವ ರಾಜಕಾರಣ.

ಎರಡೋ ತಳಿಗಳಿಂದ ಒಂದೆರಡು ವರ್ಷ ಹೆಚ್ಚು ಇಳುವರಿ ಬಂದು ಲಾಭ ಬರುತ್ತದೆ. ಮತ್ತೆ ಯಾವುದಾದರೂ ರೋಗ ತಗುಲಿತು ಎಂದರೆ ಸರ್ವನಾಶವೇ ಸರಿ. ಹಸಿರು ಕ್ರಾಂತಿಯಿಂದಲೇ ಇದು ಆರಂಭವಾಗಿದೆ. ನಾನು ಕಂಡಂತೆ ಕಳೆದ 40 ವರ್ಷಗಳಲ್ಲಿ ಸಮಾರು 30 ಜಾತಿಯ ಟೊಮೋಟೋ ಹಣ್ಣಿನ ತಳಿಗಳು ಕಣ್ಮರೆಯಾದವು.

ಪೆರು, ಬೊಲಿವಿಯಾ ಮತ್ತು ಮೆಕ್ಸಿಕೋ ದೇಶಗಳಲ್ಲಿ ಚಿಪ್ಸ್ ಮಾಡಲು ಅನುಕೂಲವಾಗಲೆಂದು ಉದ್ದನೆಯ ಕೊಳವೆ ಆಕಾರದ ಆಲೂಗೆಡ್ಡೆ ತಳಿಯನ್ನು ಅಭಿವೃದ್ಧಿ ಪಡಿಸಲಾಯಿತು. ಮೊದಮೊದಲು ಅಧಿಕ ಬೆಲೆ ನೀಡಿ ಕಂಪನಿಗಳು ಖರೀದಿಸಲು ಆರಂಭಿಸಿದರು. ಎರಡು ವರ್ಷಗಳ ಕಾಲ ರೈತರಿಗೂ ಒಳ್ಳೆಯ ಲಾಭವಾಯಿತು. ಮೂರನೇ ವರ್ಷ ಇಡೀ ಮೆಕ್ಸಿಕೊ ದೇಶದಲ್ಲಿ ಇದೇ ಆಲೂಗಡ್ಡೆಯನ್ನು ಬೆಳೆಯಲಾಯಿತು. ಆದರೆ ಅಲ್ಲಿನ ಕೆಲವು ದೇಶಗಳಲ್ಲಿ ಕಂಪನಿ ನೀಡಿದ್ದ ಆಲೂಗಡ್ಡೆಗೆ ರೋಗತಗುಲಿ ಇಡೀ ದೇಶದಲ್ಲಿನ ಆಲೂಗೆಡ್ಡೆಯ ಬೆಳೆ ಇಲ್ಲವಾಗಿ ರೈತರಿಗೆ ತಿನ್ನಲು ಊಟ ಸಹ ದೊರೆಯದಾಯಿತು. ಆಗ ಮತ್ತೆ ಅಲ್ಲಿನ ರೈತರು ತಾವು ಹಿಂದೆ ಬೆಳೆಯುತ್ತಿದ್ದ ಆಲುಗೆಡ್ಡೆಯ ತಳಿಯನ್ನೇ ಬೇರೆ ದೇಶಗಳಿಂದ ತಂದು ತಮ್ಮಲ್ಲಿ ಆಲುಗೆಡ್ಡೆಯನ್ನು ಬೆಳೆಯುವಷ್ಟರಲ್ಲಿ ನಾಲ್ಕಾರು ವರ್ಷಗಳು ಬಡತನದಲ್ಲಿ ಬಳಲುವಂತಾಯಿತು. ಇದು ಬಯೋಟೆಕ್ನಾಲಜಿಯ ಅಪಾಯ.

ಬಿ.ಟಿ ಹತ್ತಿಯೂ ಅಷ್ಟೇ. ಯಾರೂ ಬೆಳೆಯುತ್ತಿಲ್ಲ. ಅದರಲ್ಲಿ ಬರುವ ನೂಲಾಗಲೀ ಅಥವಾ ಇಳುವರಿಯಾಗಲಿ ಕಂಪನಿಗಳ ಪ್ರಚಾರದಷ್ಟು ಇಲ್ಲ. ಬಿ.ಟಿ ಹತ್ತಿ ನೀಡಿದ ಕಂಪನಿಯ ಏಂಜಟರ್‌ಗಳಿಗೆ ರೈತರು ಹೊಡೆದು ನೂರಾರು ಕಡೆಗಳಲ್ಲಿ ಕೇಸುಗಳು ದಾಖಲಾಗಿವೆ. ಇದನ್ನು ನೋಡಿದರೆ ಮೋಸದ ಅರಿವಾಗುತ್ತದೆ. ಬಯೋಟೆಕ್ನಾಲಜಿಯಾಗಲೀ ಆಧುನಿಕ ತಂತ್ರಜ್ಞಾನವಾಗಲೀ ಬಳಸಬಾರದು ಎಂದಿಲ್ಲ. ಏನೇ ಹೊಸದು ಬಂದರೂ ನಿಧಾನವಾಗಿ ಎಚ್ಚರದಿಂದ ಬಳಸಬೇಕಷ್ಟೆ. ಹೊಸತಳಿಗಳನ್ನ ಬೆಳೆದಾಗಲು ಹಳೆಯದನ್ನ ಸ್ವಲ್ಪ ಉಳಿಸಿಕೊಂಡಿದ್ದರೆ ಆಪತ್ಕಾಲದಲ್ಲಿ ನೆರವಿಗೆ ಬರುವುದು.

◆ **ಬೆಂಗಳೂರು ನಗರ ಬೆಳೆಯುತ್ತಿದೆ. ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ಬೃಹತ್ ಹೆದ್ದಾರಿಗಳು, ಐ.ಟಿ, ಬಿ.ಟಿ ಪಾರ್ಕ್‌ಗಳ ಸ್ಥಾಪನೆಯಾಗುತ್ತಿವೆ. ಸರ್ಕಾರ ನಗರದ ಸುತ್ತಲಿನ ಹಳ್ಳಿಗಳನ್ನು ಸ್ವಾದೀನ ಪಡಿಸಿಕೊಳ್ಳುತ್ತಿದೆ, ಲೇಔಟ್‌ಗಳಿಗೆ, ಹೋಟೆಲ್‌ಗಳಿಗೆ, ಖಾಸಗಿಯವರು ಜಮೀನು ಕೊಂಡುಕೊಳ್ಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಈ ಭಾಗದ ರೈತರು ಕೃಷಿ ಮಾಡಲು ಸಾಧ್ಯವೆ? ಕೃಷಿಯಲ್ಲಿ ಆಸಕ್ತಿ ಉಳಿಯಲು ಸಾಧ್ಯವೆ?**

● ಇದು ದುರದೃಷ್ಟಕರ ಬೆಳವಣಿಗೆ. ಜಮೀನು ಕಳೆದುಕೊಳ್ಳುತ್ತಿರುವವರಲ್ಲಿ ನಾನೂ ಒಬ್ಬ. ವರ್ತೂರಲ್ಲಿ ಇರುವ ನನ್ನ ಜಮೀನನ್ನು ಹೊಸಕೋಟೆ-ಅತ್ತಿಬೆಲೆಯ ಹೊರವರ್ತುಲ ರಸ್ತೆಗಾಗಿ ಸರ್ಕಾರ ಸ್ವಾಧೀನಪಡಿಸಿಕೊಳ್ಳುತ್ತಿದೆ. ಇದರಿಂದ ನನಗೆ ಕೆಲವು ಕೋಟಿ ರೂಪಾಯಿಗಳಷ್ಟು ಹಣ ಬರುತ್ತಿದೆಯಾದರೂ ನಾನು ದುಡ್ಡನ್ನೇ ತಿನ್ನಲು ಸಾಧ್ಯವಿಲ್ಲ. ಆ ಭೂಮಿಯಲ್ಲಿ ನಾನು ಮತ್ತು ನನ್ನ ಕುಟುಂಬದವರು ನೆಟ್ಟು ಬೆಳೆಸಿದ 2000 ವಿವಿಧ ಜಾತಿಯ ಮರಗಳಿವೆ. ಇವು ನನ್ನ ಕಣ್ಣಮುಂದೆಯೇ ಕಡಿದು ಬೀಳುವುದನ್ನು ನೋಡಿ ಸಹಿಸುವುದು ಹೇಗೆ? ನಾನು ಹೀಗೆ ಹೇಳಿದರೆ ಸಂಬಂಧಿಕರು, ಇತರರು ನಿಮಗೆ ಹುಚ್ಚು ಅನ್ನುತಿದ್ದಾರೆ.

ನಮ್ಮಲ್ಲಿ ಜಮೀನು ಮಾರಿಕೊಂಡವರಿಗೆ ಕೋಟಿಗಟ್ಟಲೆ ದುಡ್ಡು ಬಂದಿದೆ. ಚಡ್ಡಿಗೆ ತೇಪೆಹಾಕಿಕೊಂಡು ಓಡಾಡುತ್ತಿದ್ದ ಜನ ಅವರು.

ಕೋಟಿಗೆ ಎಷ್ಟು ಸೊನ್ನೆ ಎಂದು ತಿಳಿದಿಲ್ಲ ಇವರಿಗೆ. ಅಂತಹವರು ಜಮೀನು ಕಳೆದುಕೊಂಡು ಕಾರು, ಬಂಗಲೆ ಕೊಳ್ಳುತ್ತಿದ್ದಾರೆ. ಇಷ್ಟೆಲ್ಲಾ ಇದ್ದಮೇಲೆ ಕುಡಿತ, ಮೋಜು ಇಲ್ಲದಿದ್ದರೆ ಅಂತಸ್ತಿಗೆ ಕಡಿಮೆ ತಾನೆ. ಮುಂದೆ ಐದು ವರ್ಷಗಳಲ್ಲಿ ಇವರು ಭಿಕ್ಷುಕರಾಗುತ್ತಾರೇನೋ ಎನ್ನುವ ಭಯ ನನಗೆ.

ದೇವನಹಳ್ಳಿ ತಾಲ್ಲೂಕು ಕಚೇರಿಗೆ ಹೋದರೆ ಜಮೀನು ವ್ಯವಹಾರ ಮಾಡುವ ಜನರಿಂದ ಗಿಜಿಗುಡುತ್ತಿದೆ. ಇವುಗಳಿಗೆಲ್ಲ ಹೇಗೆ ಸ್ಪಂದಿಸಬೇಕು? ಮುಂದೆ ಇಲ್ಲಿ ಏನಾಗಬಹುದು? ಊಹಿಸುವುದು ಕಷ್ಟವಾಗಿದೆ.

ಬೆಂಗಳೂರು ನಗರದ ಸುತ್ತ ಭೂಮಿಯ ಬಳಕೆ ಹೇಗಿದೆನೋಡಿ! ಸಾಹುಕಾರರು ಭೂಮಿಕೊಂಡುಕೊಂಡು ಬೇಲಿ ಹಾಕಿ ಒಬ್ಬ ಕಾವಲುಗಾರನನ್ನು ಇಟ್ಟು ಹೋಗುತ್ತಿದ್ದಾರೆ. ಭೂಸುಧಾರಣಾ ಕಾನೂನು ಬಂತು. ಈಗ ನೋಡಿ ಸಂಪತ್ತಿರುವವರೆ ಭೂಮಿ ಕೊಂಡುಕೊಳ್ಳುತ್ತಿದ್ದಾರೆ. ಕೆಲವು ಕಡೆಯಂತೂ ರಾಜಕಾರಣಿಗಳ, ಅಧಿಕಾರಿಗಳ ಹಿಂಡು ಊರಿಗೆ ಊರನ್ನೇ ಕೊಂಡುಕೊಂಡು ಬಿಟ್ಟಿದ್ದಾರೆ. ನೂರಾರು ಎಕರೆ ಜಮೀನಿನ ಒಡೆಯರಾಗಿರುವವರಲ್ಲಿ ನಮ್ಮ ಐ.ಎ.ಎಸ್, ಐ.ಎಫ್.ಎಸ್, ಐ.ಪಿ.ಎಸ್ ಅಧಿಕಾರಿಗಳು ಮುಂದಿದ್ದಾರೆ. ನಮ್ಮ ದೇಶದಲ್ಲಿ ಸುಮ್ಮನೆ ಸಮಾಜವಾದ, ಪ್ರಜಾಪ್ರಭುತ್ವ ಅಂತೆಲ್ಲಾ ಮಾತಾಡುತ್ತೀವಿ ಅಷ್ಟೆ. ಹಣಬಲ, ತೋಳ್‌ಬಲವಿದ್ದವರು ಸಂಪತ್ತಿಟ್ಟುಕೊಂಡು ಅಧಿಕಾರ ನಡೆಸುತ್ತಿದ್ದಾರೆ.

◆ **ನೀವು ಬಹಳಷ್ಟು ಊರು, ದೇಶಗಳನ್ನು ಸುತ್ತಿದ್ದೀರಿ. ಜಾಗತೀಕರಣ ಮತ್ತು ನೀವು ಮೇಲೆ ಹೇಳಿರುವಂತ ಅಸಮಾನತೆಯ ವಿರುದ್ಧ ಪ್ರತಿರೋಧವನ್ನು ಗಮನಿಸಿಲ್ವ?**

● ಪ್ರತಿರೋಧವಿದೆ. ಎಲ್ಲಾ ಕಡೆಯೂ ಇದೆ. ಇಂಗ್ಲೆಂಡ್, ಅಮೆರಿಕಾಗಳಲ್ಲೂ ಪ್ರತಿರೋಧವಿದೆ.

ಬಿ.ಟಿ ಹತ್ತಿಯಲ್ಲಿ ಬರುವ ನೂಲಾಗಲೀ ಅಥವಾ ಇಳುವರಿಯಾಗಲಿ ಕಂಪನಿಗಳ ಪ್ರಚಾರದಷ್ಟು ಇಲ್ಲ. ಬಿ.ಟಿ ಹತ್ತಿ ನೀಡಿದ ಕಂಪನಿಯ ಏಂಜಟರ್‌ಗಳಿಗೆ ರೈತರು ಹೊಡೆದು ನೂರಾರು ಕಡೆಗಳಲ್ಲಿ ಕೇಸುಗಳು ದಾಖಲಾಗಿವೆ. ಇದನ್ನು ನೋಡಿದರೆ ಮೋಸದ ಅರಿವಾಗುತ್ತದೆ. ಬಯೋಟೆಕ್ನಾಲಜಿಯಾಗಲೀ ಆಧುನಿಕ ತಂತ್ರಜ್ಞಾನವಾಗಲೀ ಬಳಸಬಾರದು ಎಂದಿಲ್ಲ. ಏನೇ ಹೊಸದು ಬಂದರೂ ನಿಧಾನವಾಗಿ ಎಚ್ಚರದಿಂದ ಬಳಸಬೇಕಷ್ಟೆ. ಹೊಸತಳಿಗಳನ್ನ ಬೆಳೆದಾಗಲು ಹಳೆಯದನ್ನ ಸ್ವಲ್ಪ ಉಳಿಸಿಕೊಂಡಿದ್ದರೆ ಆಪತ್ಕಾಲದಲ್ಲಿ ನೆರವಿಗೆ ಬರುವುದು.



> **ರಾಗಿಮುದ್ದೆ ತಿನ್ನುವವರು ದಡ್ಡರು, ಕೀಳುಜನ, ಪಿಜ್ಜಾ ತಿನ್ನುವವರು ತಿಳುವಳಿಕೆ ಇರುವವರು, ನಾಗರಿಕರು ಅನ್ನಿಸಿಕೊಳ್ಳುವ ಸ್ಥಿತಿ ಇದೆ. ಜಾಗತೀಕರಣದಿಂದ ನಮ್ಮ ಸಂಸ್ಕೃತಿ ಮೇಲೆ ಕೆಟ್ಟ ಪರಿಣಾಮ ವಾಗಿದೆ. ಸಂಸ್ಕೃತಿ ಎಂದರೆ ಜನಿವಾರ ಹಾಕಿಕೊಂಡು, ಜುಟ್ಟು ಬಿಟ್ಟುಕೊಂಡು ಹೋಗುವುದಲ್ಲ. ಆಯಾ ಭೌಗೋಳಿಕ ಪ್ರದೇಶಕ್ಕೆ ಅನುಗುಣವಾಗಿ ಬೆಳೆದು ಬಂದಿರುವ ಆಹಾರ ಪದ್ದತಿ, ಹಬ್ಬ, ಆಚರಣೆಗಳು ಇತ್ಯಾದಿ. ಇವುಗಳ ಮೇಲೂ ಜಾಗತೀಕರಣ ಪ್ರಭಾವ ಬೀರಿದೆ. ಬಟ್ಟೆ ಬರೆಯಿಂದ ಹಿಡಿದು ಅಡುಗೆ ಮನೆಯವರೆಗೂ ಜಾಗತೀಕರಣವಾಗುತ್ತಿದೆ. ಜೀವನ ಶೈಲಿ ಬದಲಾಯಿಸುವುದಷ್ಟೇ ಜಾಗತೀಕರಣಕ್ಕೆ ಮುಖಾಮುಖಿಯಾಗುವ ದಾರಿ.**

ಸಂಘಟನೆಗಳು, ಸಂಸ್ಥೆಗಳು, ವ್ಯಕ್ತಿಗಳು ಈ ನಿಟ್ಟಿನಲ್ಲಿ ಸಕ್ರಿಯವಾಗಿದ್ದಾರೆ. ಆದರೆ ಪ್ರತಿರೋಧ ನಮ್ಮ ಜೀವನ ಶೈಲಿಯನ್ನು ಬದಲಾಯಿಸುವುದರ ಮೂಲಕ ಕೂಡ ಆಗ ಬೇಕಾಗಿದೆ. ಅದರೆ ನಮಗೆ ಮಾದರಿಯಾಗಬೇಕಾದಂತಹ ರಾಜಕಾರಣಿಗಳು, ಮಠಾಧಿಪತಿಗಳು ಕೂಡ ಎಂತಹ ವರಿದ್ದಾರೆ ಎಂದು ನಾವೀಗ ನೋಡುತ್ತಿದ್ದೇವೆ. ಅವರ ದೃಷ್ಟಿಕೋನ ಬದಲಾಗಬೇಕಾಗಿದೆ. ಸುಖ ಅಂದರೆ ಏನು? ನೆಮ್ಮದಿ ಅಂದರೆ ಏನು ಎನ್ನುವುದನ್ನು ಭಿನ್ನವಾಗಿ ನೋಡಬೇಕಾಗಿದೆ.

ಕೆಲವರ ಪ್ರಕಾರ ನನ್ನಲ್ಲಿರುವ ಕಾಸಿಗೆ ನಾನು ಈಗಾಗಲೇ ಕಾರು ಕೊಳ್ಳಬೇಕಿತ್ತು. ರಾಗಿಮುದ್ದೆ ತಿನ್ನುವವರು ದಡ್ಡರು, ಕೀಳುಜನ, ಪಿಜ್ಜಾ ತಿನ್ನುವವರು ತಿಳುವಳಿಕೆ ಇರುವವರು, ನಾಗರಿಕರು ಅನ್ನಿಸಿಕೊಳ್ಳುವ ಸ್ಥಿತಿ ಇದೆ. ಜಾಗತೀಕರಣದಿಂದ ನಮ್ಮ ಸಂಸ್ಕೃತಿ ಮೇಲೆ ಕೆಟ್ಟ ಪರಿಣಾಮವಾಗಿದೆ. ಸಂಸ್ಕೃತಿ ಎಂದರೆ ಜನಿವಾರ ಹಾಕಿ ಕೊಂಡು, ಜುಟ್ಟುಬಿಟ್ಟುಕೊಂಡು ಹೋಗುವುದಲ್ಲ. ಆಯಾ ಭೌಗೋಳಿಕ ಪ್ರದೇಶಕ್ಕೆ ಅನುಗುಣವಾಗಿ ಬೆಳೆದು ಬಂದಿರುವ ಆಹಾರ ಪದ್ಧತಿ, ಹಬ್ಬ, ಆಚರಣೆಗಳು ಇತ್ಯಾದಿ. ಇವುಗಳ ಮೇಲೂ ಜಾಗತೀಕರಣ ಪ್ರಭಾವ ಬೀರಿದೆ. ಬಟ್ಟೆ ಬರೆಯಿಂದ ಹಿಡಿದು ಅಡುಗೆ ಮನೆಯವರೆಗೂ ಜಾಗತೀಕರಣವಾಗುತ್ತಿದೆ. ನಗರದ ಕೆಲವರು ವಾರಗಳಲ್ಲಿ ಎರಡು ದಿನ ಅಡುಗೆ ಮಾಡುವುದನ್ನು ಬಿಟ್ಟಿದ್ದಾರೆ, ಹೊರಗಡೆ ಊಟ ಮಾಡುತ್ತಿದ್ದಾರೆ. ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಭರ್ತಡೇ ಅಚರಣೆ ಮಾಡುವವರಿದ್ದಾರೆ. ಜೀವನ ಶೈಲಿ ಬದಲಾಯಿಸುವುದಷ್ಟೇ ಜಾಗತೀಕರಣಕ್ಕೆ ಮುಖಾಮುಖಿಯಾಗುವ ದಾರಿ.

◆ **ಸಂಸ್ಕೃತಿ, ಸಾವಯುವಕೃಷಿ, ಸ್ವದೇಶಿ, ಸಂಪ್ರದಾಯಗಳ ಬಗ್ಗೆ ಸಂಘ ಪರಿವಾರ ದವರು ಕೂಡ ಮಾತನಾಡುತ್ತಾರಲ್ವ?**

● ನನ್ನ ಪ್ರಕಾರ ಒಳ್ಳೆಕೆಲಸ ಮಾಡುವುದಕ್ಕೆ ಯಾವ ಪರಿವಾರವಾದರೂ ಸರಿಯೇ. ವಿಶ್ವ ಹಿಂದೂ ಪರಿಷತ್ ಅದರೂ ಸರಿ, ಕ್ರಿಶ್ಚಿಯನ್ ಮಿಷನರಿಯಾದರೂ ಸರಿ. ಆದರೆ ಅದರ ಹಿಂದೆ ದುರುದ್ದೇಶ, ಸಂಕುಚಿತ ಭಾವನೆ ಇರಬಾರದು. ಕೆಲವು ಮಠಗಳು ನಾಟಿ ತಳಿಯ ಹಸು ಗಳನ್ನು ಸಾಕುತ್ತಿವೆ. ಇಲ್ಲಿ ಧಾರ್ಮಿಕ ಸಂಕುಚಿತತೆ ಇಲ್ಲದಿದ್ದರೆ ಸಾಕು.

◆ **ಹಿಂದೆ ಭಾರತೀಯ ಜನತಾ ಪಕ್ಷದ ಕಿಸಾನ್ ಸಭಾದಲ್ಲಿ ತಾವು ಪ್ರಾಂತೀಯ ಕಾರ್ಯಾಧ್ಯಾಕ್ಷರಾಗಿ ಇದ್ರಂತೆ?**

● ಹೌದು. ಅವರ ಒತ್ತಾಯದಿಂದ ಪದಾಧಿಕಾರಿ ಯಾಗಿದ್ದೆ. ರೈತರಿಗೆ ಶಿಕ್ಷಣ ನೀಡಲು ನಮ್ಮ ಸಂಘಟನೆ ಯನ್ನು ಬಳಸಿಕೊಳ್ಳಿ ಎಂದು ಹೇಳಿ ನನ್ನನ್ನು ಸೇರಿಸಿ ಕೊಂಡರು. ಆದರೆ ನಾನು ಮೂರೇ ತಿಂಗಳುಗಳಲ್ಲಿ ಆ ಸಂಘಟನೆ ಬಿಟ್ಟು ಹೊರಗೆ ಬರಬೇಕಾಯಿತು. ಗುಟ್ಕಾ ನಿಷೇಧ ವಿಚಾರದಲ್ಲಿ ಚರ್ಚೆ ನಡೆಯುತ್ತಿದ್ದಾಗ ಹೆಚ್ಚು ಅಡಿಕೆ ಬೆಳೆಯುವ ಮಲೆನಾಡಿನ ಕೆಲವು ಸಮುದಾಯದ ನಾಯಕರುಗಳು ನನ್ನ ನಿಲುವನ್ನು ಒಪ್ಪದಿದ್ದಾಗ ಇದು ನನಗೆ ಸೂಕ್ತ ವೇದಿಕೆಯಲ್ಲವೆಂದು ರಾಜೀನಾಮೆ ನೀಡಬೇಕಾಯಿತು.

ಇದೇ ರೀತಿಯ ಅನುಭವ ನನಗೆ ಕಮ್ಯುನಿಸ್ಟ್ ಪಕ್ಷದೊಂದಿಗೂ ಆಗಿತ್ತು. 1957 ರಲ್ಲಿ ನಾನು 22ನೇ ವಯಸ್ಸಿನವನಿದ್ದಾಗ ಪಕ್ಷದ ಜಿಲ್ಲಾ ಕಮಿಟಿಯಲ್ಲಿದ್ದೆ. ಅಲ್ಲಿನ ಕಾರ್ಮಿಕ ನಾಯಕರೊಬ್ಬರು ಭ್ರಷ್ಟಾಚಾರದಲ್ಲಿ ತೊಡಗಿ ದ್ದನ್ನು ಪ್ರತಿಭಟಿಸಿದ್ದಕ್ಕೆ ಪಕ್ಷದಿಂದ ವಿರೋಧ ವ್ಯಕ್ತ ವಾಯಿತು. ಆಗ ನಾನು ಅಲ್ಲಿಂದಲೂ ಹೊರಬರ ಬೇಕಾಯಿತು.

◆ **ನೀವು ಇತರೆ ಯಾವುದಾದರೂ ರೈತ ಸಂಘಟನೆಯಲ್ಲಿ ಗುರುತಿಸಿಕೊಂಡಿದ್ದೀರ?**

● ಇಲ್ಲ. ಆದರೆ ಯಾವುದೇ ವೇದಿಕೆಯವರು ಕರೆದರೆ ರೈತರ ವಿಚಾರಗಳನ್ನು ತಿಳಿಸಲು ಹೋಗುತ್ತೇನೆ. ಸಂಘಟನೆಗಳಲ್ಲಿ ರಾಜಕೀಯ ಇರುವುದರಿಂದಾಗಿ ದೂರ ಇರಲು ಬಯಸುತ್ತೇನೆ. ಜಮೀನಿನಲ್ಲಿ ದುಡಿಯುವುದೇ ನನ್ನ ಮುಖ್ಯಕಾರ್ಯ ಕ್ಷೇತ್ರ.

◆ **ಕರ್ನಾಟಕದ ರೈತ ಚಳುವಳಿಯನ್ನ ನೀವು ಗಮನಿಸುತ್ತ ಇದ್ದೀರ? ಏನು ಅನ್ನಿಸುತ್ತದೆ?**

● ಗಮನಿಸ್ತಾ ಇದ್ದೀನಿ. ಯಾಕೆಂದರೆ ಅದು ನಮ್ಮದೆ ಸಂಘಟನೆ. ಆದರೆ ಕರ್ನಾಟಕದಲ್ಲಿ ಎರಡು ಮೂರು ರೈತ ಸಂಘಟನೆಗಳ ಅಗತ್ಯ ಇರಲಿಲ್ಲ. ನಾಯಕತ್ವ ಮತ್ತು ಪ್ರಚಾರದ ಬಯಕೆಯಿಂದ ನಮ್ಮ ಸಂಘಟನೆಗಳು ಹಾಳಾಗಿವೆ. ಇದು ನನಗೆ ದುಃಖ ನೀಡುವ ವಿಚಾರ.

◆ **ಇತ್ತೀಚೆಗೆ ಕರ್ನಾಟಕದಲ್ಲಿ ರೈತ ಸಂಘಟನೆ ಗಳು ಮತ್ತು ದಲಿತ ಸಂಘಟನೆಗಳು ಸೇರಿ ಪರ್ಯಾಯ ರಾಜಕಾರಣಕ್ಕೊಂದು ವೇದಿಕೆ ಯನ್ನು ರಚಿಸುವ ಪ್ರಯತ್ನಗಳು ನಡೆಯು ತ್ತಿವೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?**

● ರೈತ ಸಂಘಟನೆಯವರು, ದಲಿತ ಸಂಘಟನೆ ಯವರು ಸೇರಲು ಕಾರಣ ಏನು ಅಂತ ನನಗೆ ತಿಳಿದಿಲ್ಲ. ಸೇರಿದರೆ ಒಳ್ಳೆಯದು. ಬಹುಷ: ನಾವು ಒಟ್ಟಾಗಿ ಸೇರಿದರೆ ಸಂಖ್ಯಾಬಲ ಹೆಚ್ಚಾಗುತ್ತದೆ. ಒತ್ತಡ ತರಲು ಸಾಧ್ಯವಾಗು ತ್ತದೆ ಎಂದು ಸೇರಿರಬಹುದು. ಇಂತಹ ಪ್ರಯತ್ನದ ಹಿಂದೆ ಸ್ವಾರ್ಥ ಇಲ್ಲದಿದ್ದರೆ ಒಳ್ಳೆಯದೆ. ಈ ಸಂಘಟನೆಗಳಲ್ಲಿ ಸಾಮೂಹಿಕ ನಾಯಕತ್ವ ಇರಬೇಕು.

◆ **ನೀವು ಕೃಷಿಕಾರ್ಯದ ಜೊತೆಗೆ ಅಲ್ಲಲ್ಲಿ ವಿಶ್ವವಿದ್ಯಾಲಯಗಳಲ್ಲಿ ಕೃಷಿ ಪಾಠವನ್ನೂ ಹೇಳಿಕೊಡುತ್ತೀರಿ. ಇದು ನಿಮಗೆ ತೃಪ್ತಿ ನೀಡಿದೆಯೇ?**

● ನನ್ನ ಜೀವನದ ನೆಮ್ಮದಿ ಎನ್ನುವುದು ಇರುವುದೇ ಇಲ್ಲಿಯೇ. ಧರ್ಮಪುರಿ ಜಿಲ್ಲೆಯ ಬುಡಕಟ್ಟು ಮಹಿಳೆ ಯೊಬ್ಬಳು ನನ್ನ ಮಾತನ್ನು ಕೇಳಿ ಕಡಿಮೆ ನೀರಿನಲ್ಲಿ ಭತ್ತ ಬೆಳೆದು ಆಕೆ ಸಂತೋಷಪಟ್ಟ ಕ್ಷಣ ನನ್ನ ಬದುಕು ಸಾರ್ಥಕ ಎನಿಸಿತು. ಮೋಕ್ಷ ಅನ್ನೊದು ಎಲ್ಲೋ ಯಾವಾಗಲೋ ಎಲ್ಲೋ ಸಿಗುವಂತಾಹದಲ್ಲ. ದುಡಿಯುವಷ್ಟು ಆರೋಗ್ಯ ವಿದೆ. ಉಣ್ಣುವಷ್ಟು, ಮನೆಗೆ ಬಂದವರಿಗೆ ಉಣಬಡಿಸು ವಷ್ಟು ಆಹಾರಧಾನ್ಯವಿದೆ. ಪ್ರೀತಿಯಿಂದ ಕರೆದು ಮಾತನಾಡುವಷ್ಟು ಬಂಧು ವರ್ಗದವರಿದ್ದಾರೆ, ರೈತರಿದ್ದಾರೆ..... ನನಗಿನ್ನೇನು ಬೇಕು? ❑

ಅರಿವೇ ಅಂಬೇಡ್ಕರ



ಕಾವ್ಯ

ಹುಟ್ಟೆಂಬ ಬೇಗೆಯೊಳಗೆ ಮೋಡವಾಗಿ
ಮೂಡಿದೋನು
ಹೊಲಸೆಂಬ ಹಟ್ಟಿ ತುಂಬ ಮಳೆಯಾಗಿ
ಇಳಿದೋನು
ಗುರುವೇ ಅಂಬೇಡ್ಕರ ಅರಿವೇ
ಅಂಬೇಡ್ಕರ ॥

ನೆಲದಿ ಕೊಳೆತ ಶಿರಗಳಲ್ಲಿ
ಮಿಂಚು ಚಿಗುರು ತಂದೋನು
ಪೊರಕೆ ಚರ್ಮ ಕಂಪಿಗೆಯಲ್ಲಿ
ಚಂದನ ಚಂದ ತುಂಬಿದೋನು ॥

ಶಿಲೆಯ ಕಾಲ ಕರಗಿಸಿ ಜಲದ ಕಾಲ ರೂಪಿಸಿ
ಬಯಲ ಬೆರಗ ತೋರಿದೋನು
ಮರದ ಕೊರಳ ಬೀಳಿಸಿ ನುಡಿ ನಾಲಗೆ ಜೋಡಿಸಿ
ಕೋಟಿ ಪದವ ಮೀಟಿದೋನು ॥

ಹಗಲ ಹಕ್ಕಿಯಾಗಿ ಹಾರಿ
ಊರು ಕೇರಿಯನ್ನು ಸೇರಿ ನರನಾಡಿಯೊಳಗೆಲ್ಲ
ಕಿಡಿಯ ಗೂಡ ಕಟ್ಟಿದೋನು
ಗೂಡನು ಸುಡುವ ನೆರಳಿಗೆ ನೊಂದು
ಬುದ್ಧನೂರ ಸೇರಿದೋನು ॥

ಯಾರು ವಿಷವ ಕಾರಿದರೋ ಯಾರು
ಖಡ್ಗವ ಬೀಸಿದರೋ
ನಾವು ನಿಂತ ಧರೆಯ ಮ್ಯಾಲೆ
ಚಿತೆಯೆದ್ದು ಕುಣಿಯುತಿವೆ
ಜೀವ ಬೇರು ತರಗೆಲೆಯಾಗಿ
ಮರಳಿ ಉರಿಗೆ ಬೀಳುತಿವೆ ॥

ಎಚ್ಚರದ ರೆಕ್ಕೆಯ ಬಿಚ್ಚಿ
ನಾವು ದೂರ ಹಾರಬೇಕೋ
ಛಲದ ನಮ್ಮ ಬೆವರಿನ ಗರಿಯ
ಚಿತೆಯ ಮ್ಯಾಲೆ ಸುರಿಯಬೇಕೋ
ಗುರುವೇ ಅಂಬೇಡ್ಕರ ಅರಿವೇ
ಅಂಬೇಡ್ಕರ ॥

○ ಎನ್.ಕೆ. ಹನುಮಂತಯ್ಯ



ಅಕ್ಷರಕ್ಕಿರುವ ಮಾಂತ್ರಿಕತೆ

ಹಸಿವು - ಅಸ್ಪೃಶ್ಯತೆ ಮತ್ತು ಅವಮಾನ ಮನುಷ್ಯನ ಅಂತಃಶಕ್ತಿಯನ್ನು ಉಡುಗಿಸಿ ಅವನನ್ನು ನಿಸ್ತೇಜನನ್ನಾಗಿಸುವ ಸಾಮಾಜಿಕ ದುರಂತಗಳು. ಇಪ್ಪತ್ತೊಂದನೆ ಶತಮಾನದ ವೈಜ್ಞಾನಿಕ ಯುಗದಲ್ಲಿ ಕೂಡ ಭಾರತೀಯ ಸಮಾಜ ಇವುಗಳಿಂದ ಹೊರಬರಲು ಸಾಧ್ಯವಾಗಿಲ್ಲ. ಬಡತನ ಮತ್ತು ಸಾಮಾಜಿಕ ಅಸಮಾನತೆಗಳ ಕಾರಣದಿಂದಲೇ ಭಾರತದಲ್ಲಿ ಪ್ರತಿಭೆಗಳನ್ನು ಗುರುತಿಸಲೂ ಸಾಧ್ಯವಾಗುತ್ತಿಲ್ಲ.

ಹಸಿವು ದಾರುಣವಾದುದಾದರೆ, ಅಸ್ಪೃಶ್ಯತೆ ಅಮಾನವೀಯವಾದುದು. ಅಸ್ಪೃಶ್ಯರಲ್ಲದ ಕೆಲವು ಕೆಳಜಾತಿಗಳ ಅಪಮಾನ ಕೂಡ ಕಡಿಮೆಯಾದದ್ದೇನಲ್ಲ.

ನಮ್ಮ ನಡುವಿನ ಹಲವಾರು ಅಸಮಾನ್ಯ ಪ್ರತಿಭೆಗಳು, ಸಾಹಿತಿ-ಕಲಾವಿದರು- ಮೊದಲ ತಲೆಮಾರಿನ ಶಿಕ್ಷಿತರು ಇಂಥ ಅಸಮಾನತೆಗಳನ್ನು ಉಂಡು ಬೆಳೆದವರೇ ಆಗಿದ್ದಾರೆ. ಇಂಥ ನೋವುಗಳ ಅನುಭವ ಕಥಾನಕಗಳನ್ನು 'ಸಂವಾದ' ವಿಶೇಷಾಂಕಕ್ಕಾಗಿ ಆಹ್ವಾನಿಸಿತ್ತು. ನಮಗೆ ಬಂದ ಅನುಭವಗಳಲ್ಲಿ ಆಯ್ದ ಕೆಲವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

'ಈ ಹೊಟ್ಟೆ ಅನ್ನಾದು ಭಾಳಾ ಕೆಟ್ಟದು ನೋಡ್ರಿ, ಎಂಥಾ ಕೆಟ್ಟ ಕೆಲಸ ಹಚ್ಚಾಕೂ ಹೇಸೂದಿಲ್ಲ ಇದು ಖೋಡಿ' -ನನ್ನ ಹುಟ್ಟಿನ ನೆಲದ, ಬಹುತೇಕ ಕಡುಬಡವರೇ ಇರುವ ಅವರ ಬಾಯಲ್ಲಿ ಸದಾ ಮುಕ್ಕಳಿಸುವ ಕೆಂಡದಂಥಾ ಮಾತು ಇದು. ಹಸಿದ ಹೊಟ್ಟೆಯಲ್ಲಿ ಭುಗಿಲೇಳುವ ಬೆಂಕಿ, ಅದರ ಬಾಧೆಯನ್ನು ಸ್ವತಃ ಅನುಭವಿಸಿದವರಿಗಷ್ಟೇ ಅದು ವೇದ್ಯವಾಗಬಲ್ಲ ಸಂಗತಿ.

ಹೊತ್ತು ಹೊತ್ತಿಗೆ ಹಸಿದು ಅಂಕುಶದಂತೆ ಹಿಂಸಿಸುವ ಈ 'ಹಸಿವು' ಮತ್ತು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲದ ಆ 'ಸಾವು'. ಇವೆರಡನ್ನೂ ನೀಡಿದ ಪ್ರಕೃತಿ ಮನುಷ್ಯನನ್ನು ಒಂದು ಹದ್ದುಬಸ್ತಿನಲ್ಲಿಡುವ ವ್ಯವಸ್ಥೆ ಮಾಡಿದೆ. ಆ ಸಾಮಾಜಿಕ ನ್ಯಾಯವನ್ನೂ ಧಿಕ್ಕರಿಸಿದ ಮನುಷ್ಯ ವಿಪರೀತ ಸ್ವಾರ್ಥಪರ ನಾದಾಗ, ನಾಗರಿಕ ಸಮಾಜದಲ್ಲಿ ಮೇಲು - ಕೀಳು ಉಂಟು ಮಾಡುವ ಮೂಲಕ ಮನುಷ್ಯ ಜಾತಿಯಲ್ಲಿಯೇ ಕೆಲವರಿಗೆ ಹೊಟ್ಟೆಗಿಲ್ಲದೆ ಸಾಯುವಂಥ ದುರವಸ್ಥೆ ಸೃಷ್ಟಿಸಿದ್ದು ಘೋರ ಅನ್ಯಾಯವಲ್ಲವೆ ?

○ ಈರಪ್ಪ ಎಂ. ಕಂಬಳಿ

೧೯೭೨, ೭೩, ೭೪ರ ಸಾಲುಗಳೆಂದರೆ ಹೈದ್ರಾಬಾದ್ ಕರ್ನಾಟಕದಲ್ಲಿ ಭೀಕರ ಬರಗಾಲದ ವರ್ಷಗಳು. ಅವು ನನ್ನ ಹೈಸ್ಕೂಲು ದಿನಗಳು. ಬಹುತೇಕ ಕೃಷಿ ಕಾರ್ಮಿಕರ ಕುಟುಂಬ ಗಳೆಲ್ಲ ಅನ್ನ ಹುಡುಕಿಕೊಂಡು ಆಗಲೇ ಗುಳೆ ಹೋಗಿದ್ದವು. ಹಸುಗೂಸುಗಳೂ, ಹಣ್ಣು ಹಣ್ಣಾದ ಮುದುಕಿಯೂ ಮನೆಯಲ್ಲಿರುವಾಗ ಬಿಟ್ಟು ಎಲ್ಲಿಗೂ ಹೋಗಲಾಗದೆ ಅರೆ ಹೊಟ್ಟೆಯಿಂದ ಇಲ್ಲಾ ಖಾಲಿ ಹೊಟ್ಟೆಯಿಂದ ದಿನ ನೂಕುತ್ತಿದ್ದ ಕುಟುಂಬ ನನ್ನ ಅಪ್ಪನದು. ಒಂದೊಂದಾಗಿ ಎಲ್ಲಾ ಮಾರಿಕೊಂಡು ತಿಂದದ್ದಾಗಿತ್ತು. ಮಣ್ಣಿನ ಹರವಿ, ಕುಂಡಿಗೆ ಡಾಂಬರು ಮೆತ್ತಿದ್ದ ಕಬ್ಬಿಣ ಕೊಡ (ಆಗಿನ್ನೂ ಪ್ಲಾಸ್ಟಿಕ್ ರಾಕ್ಷಸ ಕಾಲಿಕ್ಕಿರಲಿಲ್ಲ), ಈಚಲು ಚಾಪೆ, ಕೌದಿಗಳಷ್ಟೇ ಉಳಿದಿದ್ದವು. ಯಾಕೆಂದರೆ ಅವನ್ನು ಕೊಳ್ಳುವವರು ಯಾರೂ ಇರಲಿಲ್ಲ. ಆಗ ನಮ್ಮ ಶಾಲೆಗಳಲ್ಲಿ ನೀಡುತ್ತಿದ್ದ ಮಿಡ್-ಡೇ ಮೀಲ್ಸ್‌ಗಾಗಿ (ಇಂದಿನ ಅಕ್ಷರ ದಾಸೋಹ - ಬಿಸಿ ಊಟಗಳಿಗೆ ಹೇಗೋ ಹಾಗೆ) ಥೇಟ್ ಹಸಿದ ಹುಲಿಗಳಂತೆ ಕಾದಿರುತ್ತಿದ್ದೆವು. ರವೆಯೊಂದಿಗೆ ಬೆಂದಿರುತ್ತಿದ್ದ ಬಾಲುಳಗಳನ್ನು ಮನಸ್ಸಿನಲ್ಲದೆ ಕೆಳಗೆ ಹಾಕುತ್ತಿದ್ದೆವು. ಐತ್ವಾರ ಬಂದರೆ ಮಧ್ಯಾಹ್ನದ ಊಟಕ್ಕೂ ತತ್ವಾರ ಆಗುತ್ತಿದ್ದರಿಂದಾಗಿ ಶಾಲೆಗಳಿಗೆ ಯಾಕೆ ಸೂಟಿ ಕೊಡುತ್ತಾರೋ ಬದ್ಮಾಶರು ಎಂದು ಶಪಿಸುತ್ತಿದ್ದೆವು.

ತುರ್ತು ಪರಿಸ್ಥಿತಿಯ ಕರಾಳ ದಿನಗಳು ಬೇರೆ. ಒಂದು ದಿನ, ವಠಾರದಲ್ಲಿ ಕಾಲಿಕ್ಕಿದಾಗ ಹೆಂಗಸರ ನಡುವೆ ಗುಸು ಗುಸು ಮಾತುಕತೆ. ಸಾಮೂಹಿಕವಾಗಿ ನೆರವೇರಿಸುತ್ತಿದ್ದ ಗಂಡಸರ ಸಂತಾನಹರಣ ಶಸ್ತ್ರಚಿಕಿತ್ಸಾ ಶಿಬಿರಕ್ಕೆ ಬಲಾತ್ಕಾರ ವಾಗಿ ಜನರನ್ನು ತುಂಬಿಕೊಂಡು ಹೋಗುತ್ತಿದ್ದ ಟ್ರಾಕ್ಟರಿನಲ್ಲಿ

ನನ್ನ ಅಪ್ಪನೂ ಇದ್ದನೆಂದು - ನೋಡಿದವರು ಯಾರೋ ಬಂದು ಸುದ್ದಿ ಮುಟ್ಟಿಸಿದ್ದರು. ಬರಗಾಲ ಬವಣೆಯಿಂದ ಮೊದಲೇ ಬಸವಳಿದ ಜನರನ್ನು ಹಾಗೆ ಜೀಪು-ಟ್ರಾಕ್ಟರುಗಳಲ್ಲಿ ತುಂಬಿಕೊಂಡು ಹೋಗುತ್ತಿರುವುದನ್ನು ಕಂಡರೆ ಆ ದೃಶ್ಯ ನನಗೆ ಕಸಾಯಿ ಖಾನೆಗೆ ಸಾಗಿಸುವ ಜಾನುವಾರುಗಳಂತೆ ತೋರುತ್ತಿತ್ತು.

ಹೆಂಗಸರಂತೆ ಉದ್ದಕ್ಕೆ ಹೊಟ್ಟೆ ಕುಯ್ಯುವುದಿಲ್ಲವೆಂದೂ, ಗಂಡಸರದು ಇರುವೆ ಕಡಿದಷ್ಟು ಸುಲಭವೆಂದು ಭಂಡ ಧೈರ್ಯ ಹೇಳುತ್ತಿದ್ದರಾದರೂ ನನ್ನ ಅವ್ವನಿಗೆ ಗಾಬರಿ. ಒಂದು ಹೋಗಿ ಇನ್ನೊಂದು ಆಗಿಬಿಟ್ಟರೆ ಏನು ಗತಿ ? ಸರಿಯಾದ ಔಷಧೋಪಚಾರವಿಲ್ಲದೆ ಕೆಲವರು ಸತ್ತು ಹೋಗಿದ್ದಾರೆಂದೂ ದುಡಿಯುವ ಗಂಡಸರನೇಕರು ನಿಶ್ಯಕ್ತರಾಗಿದ್ದಾರೆಂದೂ ಕೆಟ್ಟ ಪುಕಾರಗಳು ಬ್ಯಾರೆ ಹರಡಿದ್ದವು. ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡವರಿಗೆ ಸರಕಾರ ಕೊಡುತ್ತಿದ್ದ ಆ ಅರವತ್ತು ರೂಪಾಯಿ ಪ್ರೋತ್ಸಾಹ ಧನದಿಂದ ಸಂಸಾರದ ರಥವನ್ನು ಕೆಲವು ದಿನಗಳಿಗಾದರೂ ಎಳೆಯಬಹುದಲ್ಲವೇ ಅನ್ನವುದು ಅಪ್ಪನ ಲೆಕ್ಕಾಚಾರ. ಇದನ್ನೇ ನಾನು, ಹೊಟ್ಟೆ ಎಂಥೆಂಥಾ ದುಸ್ಸಾಹಸಗಳಿಗೆ ಪ್ರೇರಿಸುತ್ತದಲ್ಲ ಅಂದದ್ದು.

ರಾತ್ರಿ ಬಹಳ ಹೊತ್ತಿನ ನಂತರ ಮನೆಗೆ ಮರಳಿದ ಅಪ್ಪ ಅಡುಗೆ ಮನೆಯ ಏಕಾಂತದಲ್ಲಿ ಅವ್ವನಿಗೆ ನಾನಾ ಬಗೆಯಲ್ಲಿ ಸಮಜಾಯಿಸುತ್ತಿದ್ದ ಮಾತುಗಳು, ಅಂಗಳದಲ್ಲಿ ಮಲಗಿದ್ದ ನನ್ನ ಕಿವಿಯ ಮೇಲೂ ಅಸ್ಪಷ್ಟವಾಗಿ ಬೀಳುತ್ತಿದ್ದವು. ಈ ಹಿರಿಯರ ನಡವಳಿಕೆಯೇ ನನಗೆ ಕೆಲವೊಮ್ಮೆ ವಿಚಿತ್ರವಾಗಿ ತೋರಿದರೂ ಕೆಟ್ಟ ಕುತೂಹಲಿಯಾಗಿ ನಿರುಕಿಸುತ್ತಿದ್ದೆ. ಅವರ ಒಂದೊಂದು ಮಾತುಗಳನ್ನು ನನ್ನ ವಯೋಮಾನಕ್ಕನುಗುಣವಾಗಿ ಅರಗಿಸಿಕೊಳ್ಳಲು ಯತ್ನಿಸುತ್ತಿದ್ದೆ. ಶಿಬಿರದಲ್ಲಿ ನಡೆದುದನ್ನು ಅಪ್ಪ ಕತೆ ಮಾಡಿ ವಿವರಿಸುತ್ತಲೇ ಇದ್ದ:

ಬ್ಯಾರೆ ಬ್ಯಾರೆ ಊರಿಂದ ಗಾಡ್ಯಾಗ ಹಿಂಡ ಹಿಂಡ ಮಂದೀನ ಸಾಲಿಗುಡಿ ಮುಂದ ಇಳಿಸಿ ಸಾಲಾಗಿ ನಿಲ್ಲಿಸುತ್ತಿದ್ದರು. ಹೆಸರು, ವಯಸ್ಸು, ಮಕ್ಕಳು - ಮರಿ ಎಲ್ಲಾ ಕೇಳಿ ಬರಕೊಂಡು ಆದಮ್ಯಾಲೆ ಒಳಗೆ ಕಳಿಸುತ್ತಿದ್ದರು. ಕಿಡಕ್ಯಾಗ ಹಣಕಿದ್ದಕ್ಕ - ಒಂದೊಂದು ಖೋಲ್ಯಾಗ ಇಪ್ಪತ್ತು ಇಪ್ಪತ್ತು ಮಂದೀನ ಹಾಂಗ ಆಪರೇಶನ್ ಮಾಡಿ ಚಾಪಿ - ಜಮಖಾನ್ ಮ್ಯಾಲೆ ಸಾಲಾಗಿ ಮಲಗಿಸಿದ್ರು. 'ಹೊರಳಿ ಹೋಗಿ ಬಿಟ್ಟರ ಹ್ಯಾಂಗ' ಎಂದು ಅರಮನಸು ಆಯ್ತು. ಆದದ್ದಾಗಲಿ ಎಂದು ಯಾಡ ಹೆಜ್ಜೆ ಮುಂದಕ ಇಡೂ ಹೊತ್ತಿಗೆ, ಫಕ್ಕನೇ ನನಗೆ ಪರಿಚಯದ ಖಾನ್ ಕಣ್ಣಿಗೆ ಬಿದ್ದ. ಹಳೆಯ ದೋಸ್ತಿಯಿಂದ ಉರ್ದೂನಲ್ಲಿ ಮಾತನಾಡಿಸಿ, ಆತನನ್ನು ಮೇಲಕ್ಕೆ ತೊಗೊಂಡು ಹೋಗಿ, ಕೆಳಕ್ಕೆ ತಂದು ಮಾಡಿ, ವಿಶ್ವಾಸಕ್ಕೆ ತೆಗೆದುಕೊಂಡು ನನ್ನೊಳಗಿನ ಉಪಾಯವನ್ನು ಸೂಚಿಸಿ, ಸಹಾಯ ಮಾಡುವಂತೆ ಮನವೊಲಿಸಿದೆ.

ಖಾನ್ ಅರೆಮನಸ್ಸಿನಿಂದಲೇ, ಶಸ್ತ್ರ ಚಿಕಿತ್ಸೆ ನಡೆಯುತ್ತಿದ್ದ ಕೋಣೆಯೊಳಗಡೆ ಹೋಗಿ ಬಂದವನೇ ಒಂದಷ್ಟು ಅರಳಿಕ, ಬ್ಯಾಂಡೇಜು ಬಟ್ಟೆಯನ್ನು ತಂದು ಗುಟ್ಟಾಗಿ ಕೈಯಲ್ಲಿ ತುರುಕಿದವನೇ 'ಹುಷಾರ್' ಎಂದು ಹೇಳಿ ಆ ಗದ್ದಲದಲ್ಲಿ ಮರೆಯಾಗಿದ್ದ. ಸಾಲಿಗುಡಿ ಹಿಂದಿನ ನಿರ್ಜನ ಕಳ್ಳಿ ಸಾಲಿಗೆ ಹೋದವನೇ ಕೆರೆದುಕೊಳ್ಳುವುದಕ್ಕೆಂದು ಅವರೇ ಕೊಟ್ಟಿದ್ದ ಅಗ್ಗದ ಬ್ಲೇಡಿನಿಂದ ತುಸು ಗೀರು ಗಾಯ ಮಾಡಿಕೊಂಡು ರಕ್ತ ಒತ್ತಿ ಒಡಿದು, ಖಾನ್ ಕೊಟ್ಟಿದ್ದ ಬ್ಯಾಂಡೇಜು ಬಟ್ಟೆಯನ್ನು ಸುತ್ತಿ

ಹೊಟ್ಟೆಯಲ್ಲಿ ಹೊತ್ತಿ ಉರಿಯುತ್ತಿದ್ದ ಹಸಿವಿನ ಆ ಭಯಂಕರ ಬೆಂಕಿಯನ್ನು ನಂದಿಸಲು ಮನುಷ್ಯ ಯಾವು ಯಾವುದಕ್ಕೋ ಶರಣು ಹೋಗುತ್ತಾನಲ್ಲವೇ ? ನಾನಂತೂ ಹಸಿವಿನ ಬಾಧೆಯನ್ನು ಮರೆಯಲು ಪುಸ್ತಕಗಳ ಮೊರೆ ಹೋಗುತ್ತಿದ್ದೆ.

ಕಟ್ಟಿಕೊಂಡು, ಯಾರಿಗೂ ಅನುಮಾನ ಬರದಂತೆ, ಧೋತರ ಬಿಚ್ಚಿ ಲುಂಗಿಯಂತೆ ಸುತ್ತಿಕೊಂಡು ನಿಧಾನವಾಗಿ ಕುಂಟುತ್ತ ನಡೆದು ಬಂದು, ಸಹಿ ಪಡೆದು ಹಣ ನೀಡುತ್ತಿದ್ದ ಟೇಬಲ್ ಬಳಿ ಬಂದೆ. ನರ್ಸು ಬಾಯಿ ಒಬ್ಬಾಕೆ 'ಮಲಗಿದ್ದಲ್ಲಿಂದ ಎದ್ದು ಬಂದದ್ದ್ಯಾಕೆ' ಎಂದು ಹೊರಹೊರಳಿ ನೋಡಿದಳಾದರೂ 'ಕಾಲುಮಡಿಯಾಕ ಹಿಂದುಗಡೆ ಹೋಗಿದ್ದೆ' ಎಂದು ಉತ್ತರಿಸಿ, ಆ ಭರಾಟೆಯಲ್ಲಿ ಒಡ್ಯಾಡಿಕೊಂಡಿದ್ದ ಸ್ವಯಂ ಸೇವಕರಿಗಾಗಲಿ, ಡಾಕ್ಟರಿಗಾಗಲೀ, ಅಂಕಿ ಅಂಶ ಸಂಗ್ರಹಿಸಿ ದುಡ್ಡು ಹಂಚುವ ತಹಶೀಲ ಕಚೇರಿಯವರಿಗಾಗಲಿ ಒಂಚೂರೂ ಅನುಮಾನ ಬಾರದಂತೆ ನಡೆದುಕೊಂಡು ಅಂತೂ ಆಪರೇಶನ್ ಆದವರ ನಡುವೆ ಹೋಗಿ ಮಲಗಿದ್ದೆ.

ಎಲ್ಲರ ಕಣ್ಣಲ್ಲಿ ಹೇಗೆ ಮಣ್ಣು ಉಗ್ಗಿ ಬಂದನೆನ್ನುವುದನ್ನು ರಾತ್ರಿ ಬಹಳ ಹೊತ್ತಿನವರೆಗೆ ಅಪ್ಪ ಕತೆ ಮಾಡಿ ಹೇಳುತ್ತಲೇ ಇದ್ದ. ನನಗೆ ಅದು ಯಾವಾಗಲೋ ನಿದ್ದೆ ಆವರಿಸಿತ್ತು. ಬೆಳಗೆದ್ದು ನೋಡಲಾಗಿ ಒಲೆಯ ಬೂದಿ ಕಸದ ಜೊತೆಗೆ ರಕ್ತಸಿಕ್ತ ಬ್ಯಾಂಡೇಜು ಬಟ್ಟೆಯೂ ಸೇರಿತ್ತು.

ಅಷ್ಟಕ್ಕೇ ಮುಗಿದಿದ್ದರೆ ಯಾರಿಗೇನೂ ತೊಂದರೆಯಿರಲಿಲ್ಲ. ಅದಾಗಿ ಮರುವರ್ಷವೇ, ಬಹುಶಃ ೧೯೭೩ರಲ್ಲಿ ಸಣ್ಣ ತಮ್ಮನ ಆಗಮನದ ಸೂಚನೆ ಸಿಕ್ಕಾಗ ಮನೆಯಲ್ಲಿ ಮತ್ತೊಮ್ಮೆ ರಾದ್ಧಾಂತ ಶುರುವಾಯಿತು. ಈಗ ಅವ್ವ ಆಡಿಕೊಳ್ಳುವವರ ಬಾಯಿಗೆ ಆಹಾರವಾಗಿದ್ದಳು. 'ಬಾಯಿದ್ದವ ಬರಗಾಲದಲ್ಲೂ ಬದುಕಿ ಬಂದ' ಅನ್ನುವಂತೆ, ಅಪ್ಪ ಶಿಬಿರದಲ್ಲಿ ಎಲ್ಲರನ್ನೂ ಯೇಮಾರಿಸಿ ಬಂದಿದ್ದ ಸುದ್ದಿ ಊರಲ್ಲಿ ನಂತರ ಹರಡಿತ್ತಾದುದರಿಂದಾಗಿ ಯಾರೇನು ಅಷ್ಟಾಗಿ ತಲೆ ಕೆಡಿಸಿಕೊಳ್ಳಲಿಲ್ಲ. ಆದರೆ, ಅಪ್ಪನ ಬಗೆಗೆ ಸ್ವತಃ ದೊಡ್ಡಪ್ಪ



'ಇದೆಂಥಾ ಭಂಡ ಬಾಳು'? ಎಂದು ಜರಿದದ್ದು ನನ್ನ ಮನಸ್ಸಿನಲ್ಲಿನ್ನೂ ಅಚ್ಚಾಗಿ ಉಳಿದಿದೆ.

ಹೊಟ್ಟೆಯಲ್ಲಿ ಹೊತ್ತಿ ಉರಿಯುತ್ತಿದ್ದ ಹಸಿವಿನ ಆ ಭಯಂಕರ ಬೆಂಕಿಯನ್ನು ನಂದಿಸಲು ಮನುಷ್ಯ ಯಾವು ಯಾವುದಕ್ಕೋ ಶರಣು ಹೋಗುತ್ತಾನಲ್ಲವೇ ? ಕೊನೆಯ ದಿನಗಳಲ್ಲಿ ನನ್ನ ಅಪ್ಪ 'ಬೆಳೆಯುವ ನಿನ್ನ ಬಾಲ್ಯದ ದಿನಗಳಲ್ಲಿ ನಿನಗೆ ಸರಿಯಾಗಿ ಹೊಟ್ಟೆಗೆ ಹಾಕಲಿಲ್ಲ ಮಗನೆ' ಎಂದು ಪಶ್ಚಾತ್ತಾಪ ಪಟ್ಟದ್ದಿದೆ.

ನಾನಂತೂ ಹಸಿವಿನ ಬಾಧೆಯನ್ನು ಮರೆಯಲು ಪುಸ್ತಕಗಳ ಮೊರೆ ಹೋಗುತ್ತಿದ್ದೆ. ಕೆಲವೊಮ್ಮೆ ಆ ವಯಸ್ಸಿನಲ್ಲಿ ನನಗೆ ತೋಚಿದಂತೆ ಹಸಿವಿನ ಬಗೆಗೆ ಜಿಜ್ಞಾಸೆ ನಡೆಸುತ್ತಿದ್ದೆ. ಮನಸ್ಸು ರೋಸಿ ಹೋಗಿ, 'ಆ ದೇವರು ಅನ್ನೋ ಸೂಳೇ ಮಗ ಇದ್ದದ್ದೇ ಖರೆ ಆದರೆ, ಈ ಭೂಮಿ ಮ್ಯಾಲಿ ಯಾಕೆ ಇಷ್ಟೊಂದು ತಾರತಮ್ಯ, ನಮಗಷ್ಟೇ ಯಾಕೆ ಈ ಹೊಟ್ಟೆಯ ಹಿಂಸೆ' ಎಂಬಿತ್ಯಾದಿ ಸಾಲುಗಳನ್ನು ಗೀಚಿ ಗೀಚಿ ಎಸೆಯುತ್ತಿದ್ದೆ. ಹೊತ್ತು ಹೊತ್ತಿಗೆ ಹಸಿದು ಕಂಗೆಡಿಸುವ ಈ ಹೊಟ್ಟೆಯೊಂದಿರದಿದ್ದರೆ ಎಷ್ಟೊಂದು ಆರಾಮವಿರಬಹುದಿತ್ತಲ್ಲವೇ, ಅನ್ನುವುದೇ ನನ್ನ ಸದಾ ಕಾಲದ ಆಲೋಚನೆಯಾಗಿರುತ್ತಿತ್ತು. ಅಲ್ಲೇ ಚಕ್ಕಡಿ ಕೆಳಗಿನ ನೆರಳಿಗೆ, ನಾಕೂ ಕಾಲನ್ನು ಚಾಚಿ ನೆಲಕ್ಕೆ ಕತ್ತು ಚೆಲ್ಲಿಕೊಂಡು ನಿರುಮ್ಮಳಾಗಿ ಮಲಗಿದ್ದ ಬೀದಿ ನಾಯಿಯ ನಿಶ್ಚಿಂತತೆ ಕಂಡು ಅಸೂಯೆಯಾಗುತ್ತಿತ್ತು. ತನ್ನ ಹೊಟ್ಟೆಯ ಚಿಂತೆಯ ಲವಲೇಶವೂ ಅದರ ಮುಖಭಾವದಲ್ಲಿಲ್ಲದೇ ಬಿದ್ದುಕೊಂಡಿರುವ ಪರಿ ಪ್ರಪಂಚದಲ್ಲಿಯೇ ಅದು ಪರಮಸುಖಿಯಾಗಿ ತೋರುತ್ತಿತ್ತು ನನಗೆ.

ಬೀದಿ ನಾಯಿಯ ಜೊತೆ ಸಮೀಕರಿಸಿಕೊಂಡದ್ದಕ್ಕೆ ನನಗೇನೂ ಬೇಸರವಿಲ್ಲ. ಮನುಷ್ಯ ಜಾತಿಯಲ್ಲಿಯೇ ಪರಸ್ಪರ ಮುಟ್ಟಿಸಿಕೊಳ್ಳದ ಅದೆಷ್ಟು ದೂರ್ತರಿದ್ದಾರಲ್ಲವೆ ? ಹಾರುವರು ಬಿಡಿ ದೂರದ ನಕ್ಷತ್ರಗಳು ಆಗ ನಮ್ಮ ಪಾಲಿಗೆ. ನಮ್ಮ ನೆರಳನ್ನೂ ಹತ್ತಿರ ಬಿಟ್ಟುಕೊಳ್ಳುತ್ತಿರಲಿಲ್ಲ. ಆದರೆ, ಎರಡನೆಯ ಸ್ಥಾನದಲ್ಲಿ ಬರುವ ಲಿಂಗಾಯತರೆಂದು ಬೀಗುವ ಶೂದ್ರರದೇ ಆದ ಬಹುದೊಡ್ಡ ಸಮುದಾಯದ ಒಕ್ಕಲಿಗರು (ಕೃಷಿಕರು) ಏನು ಕಡಿಮೆ? ಹೊಟ್ಟೆಗಿಲ್ಲದಿದ್ದರೂ ಇಂಥ ಜಾತಿ ಪ್ರತಿಷ್ಠೆಗೇನೂ ಅಭಾವವಿಲ್ಲ ಇವರ ಸಮಾಜದಲ್ಲಿ.

ಬಿಸಿಲಿನ ದಿನಗಳಲ್ಲಿ ಒಮ್ಮೆ ಹೊಲದಲ್ಲಿ ಕೆಲಸ ಮಾಡುತ್ತಿರಬೇಕಾದರೆ ಬಾಯಾರಿಕೆ ತಡೆಯದೆ, ತಾತ್ಕಾಲಿಕವಾಗಿ ತುಸು ಗಂಟಲು ಒದ್ದೆ ಮಾಡಿಕೊಳ್ಳಲು, ದೊಡ್ಡಪ್ಪನ ಸೂಚನೆಯಂತೆ ಅಲ್ಯೂಮಿನಿಯಂ ಸಟ್ಟುಗದಲ್ಲಿ ನೀರು ತರಲು ಪಕ್ಕದ ಹೊಲದ ಬದುವಿನಲ್ಲಿಟ್ಟಿದ್ದ ನೀರು ತುಂಬಿದ್ದ ಮಣ್ಣಿನ ಕೊಡದ ಬಳಿಗೆ ಹೋದೆ. ಸೀದಾ ಕೊಡವನ್ನು ಬಗ್ಗಿಸಿ ನೀರು ತುಂಬಿಸಿಕೊಳ್ಳುತ್ತಿದ್ದಂತೆ - ಅಷ್ಟು ದೂರದಲ್ಲಿ ಕಳೆ ತೆಗೆಯುತ್ತಿದ್ದ ಹುಡುಗಿಯರು ಕಿರುಚಾಡಿಕೊಂಡು ಓಡಿ ಬಂದವರೇ, ಅನಾಹುತವಾದಂತೆ ನಾನು ಮುಟ್ಟಿದ್ದ ಕೊಡವನ್ನು

([illegible])

ವಾರ್ಷಿಕ ವಿಶೇಷಾಂಕ ೨೦೦೫

ಯಾವ ಜಾತಿ ಅಂತ ಕೇಳಲೇ ಇಲ್ಲ...!

○ ಪದ್ಮಾಲಯಾ ನಾಗರಾಜ

ನಮ್ಮ ತಾತ ಮುತ್ತಾತರಿಂದ ಬಳುವಳಿಯಾಗಿ ಬಂದಿರುವ 'ದೇವಸ್ಥಾನ ಗೋಪುರ ಶಿಲ್ಪಗಳ' ರಚನಾ ಕಾಯಕವು ನನ್ನ ಜೀವನ ನಿರ್ವಹಣೆಯಲ್ಲಿ ಮಹತ್ವ ಪಾತ್ರ ವಹಿಸಿದೆಯಾದರೂ ಈ ಕೆಲಸಕ್ಕೆ ಊರೂರು ಅಲೆಯಲೇಬೇಕಾದ ಅನಿವಾರ್ಯತೆಗೆ ನಾನು ಒಗ್ಗಿಕೊಳ್ಳದೇ ಗತ್ಯಂತರವಿಲ್ಲ.

ಇತ್ತೀಚೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂದು ಹಳ್ಳಿಗೆ 'ಗೋಪುರ ನಿರ್ಮಾಣಕ್ಕೆಂದು ನಾಲ್ಕಾರು ಶಿಷ್ಯ ಸಹಾಯಕರೊಂದಿಗೆ ತೆರಳಿದ್ದೆ. ಆ ಊರಿನ ಮಾಜಿ ಛೇರ್ಮನ್ ನಮ್ಮ ತತ್ಕಾಲಿಕ ಯಜಮಾನ! ನಮ್ಮ ಊಟ, ವಸತಿ, ಹಣದ ವ್ಯವಹಾರವೆಲ್ಲಾ ಆತನ ಜವಾಬ್ದಾರಿಯಾಗಿದ್ದರಿಂದ ನಮ್ಮ ಕೆಲಸ ಪೂರ್ಣವಾಗುವವರೆಗೂ ತತ್ಕಾಲಿಕ ಒಡೆಯನಿಗೆ ಬದ್ಧರಾಗಿರಲೇಬೇಕಿತ್ತು.

ಕೆಲಸ ಪ್ರಾರಂಭಗೊಂಡ ದಿನ ಯೋಜನಾ ಪೂರ್ವ ಕಾರ್ಯ ಮುಗಿಸಿ ಊಟಕ್ಕೆ ಅವರ ಮನೆಗೆ ಹೊರಟೆವು. ನಮ್ಮ ಬರುವಿಕೆಗಾಗಿ ನಮ್ಮ ಹಂಗಾಮಿ ನಾಯಕನ ಒಡತಿ ನೀರಿನ ಸಮೇತ ಬಾಗಿಲಲ್ಲಿ ಕಾಯುತ್ತಿದ್ದಳು. ನಾವು ತಲುಪುವಷ್ಟರಲ್ಲಿ, ವಿಶಾಲವಾಗಿ ಕಟ್ಟಿದ ಮನೆಯ ವರಾಂಡದ ಅಪೂರ್ಣ ಗೋಡೆಯ ಕಡೆ ಬೆರಳು ಮಾಡಿ 'ಅವುಗಳನ್ನೆತ್ತಿ... ತೊಳೆದುಕೊಳ್ಳಿ! ಎಂದಳು.

'ಕ್ಷಣ ಕಾಲ ನಮ್ಮ ಆಲೋಚನೆಗಳೇ ಸ್ತಬ್ಧಗೊಂಡಂತಾಯಿತು' ಏಕೆಂದರೆ ಅಲ್ಲಿದ್ದಿದು ಯಾವುದೇ ಲೋಹ ಅಥವಾ ಮಣ್ಣಿನ ತಟ್ಟೆಗಳಾಗಿರಲಿಲ್ಲ. ಅಂಕು ಡೊಂಕಾಗಿ ಕುರೂಪ ಗೊಂಡ, ಜೇಡಗಳು ಮನೆ ಮಾಡಿಕೊಂಡು ದೂಳು ಮುಚ್ಚಿದ ಅಡಿಕೆ ಮರದ ಬೊಡ್ಡೆಗಳು (ಪಾಕುಪಟ್ಟೆ). ನನ್ನ ಬಳಗ ಪ್ರತಿಕ್ರಿಯೆಗಾಗಿ ನನ್ನ ಮುಖ ನೋಡುತ್ತಿದ್ದರು. ನಾನೇ ಅವುಗಳನ್ನೆತ್ತಿಕೊಂಡು ಎಲ್ಲರಿಗೂ ಹಂಚಿದೆ. ಹೌದು..! ನಾನು ಕೂಲಿ! ಇದು ನನ್ನ ವಾಸ್ತವ! ಅಚ್ಚರಿಯೇನೂ ಇಲ್ಲ! ಆದರೂ ನನ್ನ ಮನ ಸುಪ್ತ-ವಿಕ್ಷಿಪ್ತ ಭಾವನೆಗಳಿಗೆ ಸಂಪೂರ್ಣ ಬಲಿಯಾಗಿತ್ತು. 'ಹಸಿವಿನಿಂದ ದುರ್ಬಲಗೊಂಡ ನನ್ನಂತಹ ಅದೆಷ್ಟೋ ಅಸಹಾಯಕ ಸಹೋದರರ ಹೊಟ್ಟೆ ತಣಿಸಿದ ಈ ಪಟ್ಟೆಯಲ್ಲಿ ನಾನೂ ಸರದಿ ಪಡೆದಿರುವುದೊಂದೇ ಸಮಾಧಾನದ ಸಂಗತಿ.

ಆ ಮನೆ ಅನ್ನವನ್ನು ತಿಂದು ಕೊಬ್ಬಿದ ಹತ್ತಾರು ಕೋಳಿಗಳು ಲಗ್ಗೆ ಹಾಕಿದವು. ಅವುಗಳನ್ನು ಓಡಿಸಲೆಂದು 'ಉಸ್..' ಎಂದು ಕೈ ಬೀಸಿದಾಗ ರೆಕ್ಕೆ ಬಡಿದು ಸರಿಯುತ್ತಲೇ ಕಸಕಡ್ಡಿ ನಮ್ಮ ಊಟ ಸೇರುತ್ತಿತ್ತು. ಆ ಮನೆಯಲ್ಲಿನ ಮನುಷ್ಯ ಜೀವಿಗಳೆನಿಸಿಕೊಂಡ ಸುಸಂಸ್ಕೃತರು ನಿರ್ಜೀವ ದೂರ ದರ್ಶನದ ಮುಂದೆ ಜಡಗೊಂಡಿದ್ದವು. ನನ್ನ ಜೀವನದಲ್ಲಿ ಇದುವರೆಗೂ ಯಾರೂ 'ನೀನು ಯಾವ ಜಾತಿ?' ಎಂದು ಕೇಳಲೇ ಇಲ್ಲ. ಆದರೂ ಅವರಿಗೆಲ್ಲಾ ಚೆನ್ನಾಗಿ ಗೊತ್ತಿರುತ್ತಿತ್ತು! ನಾನು ಹೊಲೆಯ!.

ಇಂತಹ ಅದೆಷ್ಟೋ ಸನ್ನಿವೇಶಗಳ ಅನುಭವ ಪಡೆದಿದ್ದ ನಾನು ರಾತ್ರಿ ಮಲಗಲು ತೋಟದ ಪಂಪ್‌ಹೌಸ್‌ನಲ್ಲಿ ಜಾಗ ಕೇಳಿದ್ದೆ. ಏಕೋ...? ಅಲ್ಲಿ ಅವಕಾಶ ನೀಡಲಿಲ್ಲ. ಭತ್ತದ ಕಣದಲ್ಲಿ ನಿಲ್ಲಿಸಿದ್ದ ಎತ್ತಿನ ಗಾಡಿಯಲ್ಲಿ ಮಲಗಲು ಹೇಳಿದರು. ಕ್ಲಿಷ್ಟತೆಗಳನ್ನು ಜೀರ್ಣಿಸಿಕೊಳ್ಳದಿದ್ದರೆ ಬದುಕೇ ಸಮಸ್ಯೆ! ನಿರ್ಧರಿಸಲ್ಪಟ್ಟ ಜಾಗ ಸೇರಿದೆವು. ಸ್ವಲ್ಪ ಹೊತ್ತಿಗೆ ನನ್ನ ಪ್ರಿಯಮಿತ್ರ ಗಜೇಂದ್ರ ಹುಲ್ಲಿನ ಮೇಲೆ ಗಜದಂತಹ ಗೊರಕೆ ಹೊಡೆಯುತ್ತಿದ್ದ. ಆರ್ತನಾದ ಮಾಡುತ್ತಾ ತಂಡೋಪ ತಂಡವಾಗಿ ಬಂದ ಸೊಳ್ಳೆಗಳು ಸುತ್ತುಗಟ್ಟಿದವು. ಪಾಕುಪಟ್ಟೆಯ ಬಿಂಬ ನನ್ನಿಂದ ದೂರ ಸರದೇ ಇಲ್ಲ! ನನ್ನ ತಾತ ಮುತ್ತಾತ ಇದೇ ರೀತಿಯಲ್ಲಿ ಶೋಷಣೆಗೊಳಪಟ್ಟಾಗ ಅವರ ಪರ ಆಸರೆಯೇ ಇಲ್ಲ. ಇದು ಅವರ ಅವಸ್ಥೆ! ಈಗ ನನಗೆ ಸಂವಿಧಾನದ ಆಸರೆ ಇದ್ದರೂ ಅದು ಸಾವಿನಂಚಿನಲ್ಲಿರುವುದೊಂದಾದರೆ! ವಾಸ್ತವ ಜಗತ್ತಿಗೆ ದೂರವಾದ ಮುಂದುವರೆದ ಬಹುಶಃ ಸಹೋದರರಿಗೆ ನನ್ನ ಅವಸ್ಥೆ ಬರೀ ಕುತೂಹಲ, ಮನೋರಂಜಿತ ಕಥೆ ಮಾತ್ರ! ಹೇಗಾದರೂ ಮಾಡಿ ಆಲೋಚನೆಗಳನ್ನು ವಿಷಯಾಂತರ ಮಾಡಲೇಬೇಕೆಂದುಕೊಂಡೆ.

ಡೆಂಗ್ಯೂ ಜ್ವರ...! ಮಲೇರಿಯಾ...! ಆನೆ ಕಾಲು ರೋಗ...! ಇವುಗಳಿಗೆ ಕಾರಣವಾದ ನೆಂಟರಿಷ್ಟರೆಲ್ಲಾ ನನ್ನ ಬಳಿ ನಾದಮಯಗೊಳಿಸುತ್ತಿವೆ. ಡೆಂಗ್ಯೂ ಎಂದರೆ ವಾಂತಿ, ಜ್ವರ, ಕೈಕಾಲು ನಡುಕ, ಕೊನೆಗೆ ಮರ...ಣ. ಆನೆ ಕಾಲೆಂದರೆ ಸಾವಿನ ತುದಿಯವರೆಗೂ ಎಳೆದಾಡುತ್ತಾ ಡಿ.ವಿ.ಜಿ.ಯವರು ಹೇಳುವಂತೆ 'ನಿನ್ನ ಹೆಣವನು ನೀನೇ ಹೊತ್ತು ಸಾಗಿಸ ಬೇಕೋ... ಅಣ್ಣ ಬಾ... ತಮ್ಮ ಬಾ... ಎಂದಳುವು





ದೇಕೋ...' ಇಂತಹ ಆಲೋಚನೆಗಳಿಗೆ ಭಯ ಆಗಿಲ್ಲ. ಮನುಷ್ಯ ಮನುಷ್ಯನ ಮಧ್ಯೆ ಈ ವ್ಯವಹಾರ, ವ್ಯವಸ್ಥೆ ಭಯಾನಕವೇ ಹೊರತು ಈ ರೋಗಗಳು ಭಯಾನಕವೆನಿಸಲಿಲ್ಲ!

ನನ್ನನ್ನು ಪ್ರಾತಃಕಾಲಕ್ಕೆ ಭಯ, ಬೇಸರಗಳು ಸುಪ್ರಭಾತದಂತೆ ಎಚ್ಚರಿಸಿದ್ದವು. ಮಲಗಲು ಸರಿಯಾದ ಸ್ಥಳ ಕೊಡದಿದ್ದರೆ ನಾವೆಲ್ಲಾ ಊರಿಗೆ ಹೋಗುವುದಾಗಿ ಹಂಗಾಮಿ ನಾಯಕನಿಗೆ ಬೆದರಿಕೆ ಹಾಕಿದೆವು. ಇದರ ಪ್ರತಿಫಲವಾಗಿ ಅಂದಿನ ಸಾಯಂಕಾಲವೇ ಜೀತದಾಳನ್ನು ಕರೆದು ಯಾವುದೋ ಹೆಸರನ್ನು ಹೇಳಿ ಅವರ ಮನೆಗೆ ಇವರನ್ನು ಬಿಡೆಂದು ಆಗ್ರಹಿಸಿದ. ಅವನನ್ನು ಹಿಂಬಾಲಿಸಿದಂತೆ ಅವನ ನಡುಗೆ ನಿಧಾನವಾಗ ತೊಡಗಿದಾಗ ನಮಗೆಲ್ಲಾ ಅರ್ಥವಾಗಿತ್ತು. ಅಲ್ಲಿನವು ಬಹುತೇಕ ಅಸ್ವಸ್ಥ ಮನೆಗಳು. ಚಾವಣಿಗಳು ಇರುಕು ಮುರುಕಾಗಿ ಹರಿದ ಪ್ಲಾಸ್ಟಿಕ್ ಹಾಳೆಗಳಿಂದ ಮುಚ್ಚಿದ್ದವು. ನಮ್ಮ ಮನೆಯಲ್ಲಿ ಇಳಿದುಕೊಂಡ ತಕ್ಷಣ ನಮ್ಮವರಿಗೆಲ್ಲಾ ಏನೋ ಸಂತಸ ! ಚಾವಣಿ ಕಾಗೆ ಮೊಗದಂತೆ., ತಿಗಣೆಗಳನ್ನು ಕೊಂದ ರೇಖಾಕೃತಿಗಳು ವಿಭಿನ್ನ ಕೋನಗಳಲ್ಲಿ ರಚಿಸಲ್ಪಟ್ಟಿದ್ದವು. ಕ್ಷಣಾರ್ಧದಲ್ಲಿ ಶುಚಿಗೊಂಡ ನಮ್ಮ ಲಘು ಹಾಸಿಗೆ ನನ್ನನ್ನು ಸ್ವಾಗತಿಸಿತು. ಗಜೇಂದ್ರ ಲಗೇಜ್ ಬ್ಯಾಗ್‌ನಲ್ಲಿದ್ದ ಡಕ್ಕಿ, ಕೊಳಲನ್ನು ತೆಗೆದ. ನಮ್ಮಷ್ಟಕ್ಕೆ ನಾವು ಸ್ವಲ್ಪ ಸಮಯ ಹಾಡಿಕೊಂಡೆವು. ಕೆಲಸದ ಆಯಾಸ ಬೇಗೆ ಮಲಗುವಂತೆ ಮಾಡಿತ್ತು.

ಅತೀ ಸಮೀಪದಿಂದ ಹೆಣ್ಣಿನ ಆರ್ತನಾದ... ಹರಿತವಾದ ರಾಗಬದ್ಧವಾದ... ಭಯವನ್ನುಂಟುಮಾಡುವ ಅಳು.. ಏಕಿರಬಹುದು? ಯಾರು? ಎಂದುಕೊಳ್ಳುವಷ್ಟರಲ್ಲಿ ಮತ್ತೊಂದು ಕಡೆಯಿಂದ ದೊಡ್ಡ ರಣರಂಗ, ಅದು ಕುಡಿದು ಅಮಲಿನಲ್ಲಿದ್ದ ಸತಿಪತಿಗಳ ಜಗಳ, ಅವನಿಗಿಂತ ಆಕೆಯೇ ಹೆಚ್ಚು ಕುಡಿದಿರಬೇಕು. ಮಾತು ಮಿತಿ ಮೀರಿತು. ದುಪ್ಪ್...!!! ಏಟುಗಳ ಶಬ್ದ! ಆಕೆ ಜೋರಾಗಿ ಕಿರುಚಿದಳು ಅಯ್ಯೋ... ಸತ್ತೇ... ನಿನ್ ಕೈ ಮುರಿಯಾ... ಅಳುತ್ತಾ... ಅಳುತ್ತಾ... ಮೌನವಾಯಿತು.

ನನ್ನ ಮಿತ್ರನ ಸಹಿತ ಯಾರಿಗೂ ನಿದ್ದೆ ಹತ್ತಿರಲಿಲ್ಲ! ಇನ್ನೊಂದು ದಿಕ್ಕಿನಿಂದ ಪುಟ್ಟ ಮಗು ಅಳಲಾರಂಭಿಸಿತು... ಅದರೊಂದಿಗೆ ಹೆಣ್ಣಿನ ಧ್ವನಿಯಲ್ಲಿ ಏಯ್... ಸಾಕು... ಬೇಗ ಮಾಡು..!! ಮಗು ಅಳ್ತಾ ಇದೆ... ಬಿಡೋ... ಪಾಪಿ... ನೀನು ನನ್ನ ಗಂಡನೇ ?... ಹಿಟ್ಟಿಲ್ಲ ಬಟ್ಟೆ ಇಲ್ಲ.. ಬಿಡೋ ಲೋಫರ್...!!! ನನ್ನ ಗಜೇಂದ್ರ ದನಿಗೂಡಿಸುತ್ತಾ 'ಏಕೋ ತುಂಬಾ ಭಯವಾಗ್ತಿದೆಯಣ್ಣಾ!'' ಎಂದ. ನನಗಂತೂ ತುಂಬನೇ ಸಮಾಧಾನವಾಗಿತ್ತು. ಏಕೆಂದರೆ ಆ ಸಂದರ್ಭವನ್ನು ಕಾಮಕ್ಕೆ ತಿರುಚುವಷ್ಟು ಕೀಳುಮಟ್ಟಕ್ಕೆ ನನ್ನ ಮಿತ್ರ ಇಳಿದಿರಲಿಲ್ಲ. ನಾನು ನಾಟಕೀಯವಾಗಿ ಈ ಕೆಲಸವೇ ನಮಗೆ ಬೇಡ, ಬೆಳಿಗ್ಗೆ ಹೊರಟು ಹೋಗೋಣ ಮಲಗು ಎಂದೆ.

ಅಪೂರ್ಣಗೊಂಡ ಕೆಲಸ ಬಿಟ್ಟು ಹೊರಟರೆ ಇದುವರೆಗೂ ಆಗಿರುವ ಕೆಲಸದ ದುಡ್ಡು ಬರುವುದು ಸಾಧ್ಯವಿರಲಿಲ್ಲ. ಉತ್ಸಾಹ ಕಳೆದುಕೊಂಡು ಯಾಂತ್ರಿಕ ಶಕ್ತಿಗಳಂತೆ ಕೆಲಸ ಮಾಡಬೇಕಾಯಿತು. ಗುಡಿಯ ಹತ್ತಿರ ಸುಳಿದ ಹಂಗಾಮಿ ನಾಯಕ ನಮ್ಮನ್ನು ನೋಡಿದೊಡನೆ ರಾತ್ರಿ ಚೆನ್ನಾಗಿತ್ತೇ? ಅವನ ಮುಖ ವ್ಯಂಗ್ಯವಾಗಿ ತ್ರಾಸಾರವಾಗಿತ್ತು. ಊ್ಞ..! ಏಕೆ...? ಎಂದೆ. ಏನು ಬೇಕಾದರೂ ಅಲ್ಲಿ ಸಿಗುತ್ತೆ ಬಿಡು ಎಂದು ನಕ್ಕ! ಏನು ಹೇಳಬೇಕೋ ಸರಿಯಾಗಿ ಹೇಳಿ ಎಂದು ಪಟ್ಟು ಹಿಡಿದೆ. 'ಅದೇ... ನಿಮ್ಮ ಮನೆ ಪಕ್ಕದಲ್ಲಿರುವ ಒಂಟಿ ಹೆಂಗಸು, ಅವಳಿಗೆ ೭-೮ ಜನ ಮಕ್ಕಳು, ಅವರಿಗೆಲ್ಲಾ ತಂದೆ ಯಾರು? ಅಂತ ತಾಯಿಗೂ ಗೊತ್ತಿಲ್ಲ!' ಎಂದು ಗೇಲಿ ಮಾಡಿದ.

ನನಗೆ ಆಕೆಯನ್ನು ನೋಡಿ ಮಾತನಾಡಿಸಬೇಕೆನಿಸಿತು. ಮಾತನಾಡಿಸಲು ದಾರಿಯೂ ಇತ್ತು ! ಎಲೆ ಅಡಿಕೆ ಮೆಲ್ಲುವುದರಲ್ಲಿ ಅವಳು ನಿಸ್ಸೀಮಳು. ನಾನೂ ಅಷ್ಟೇ ! ಇದನ್ನೇ ನೆಪಮಾಡಿಕೊಂಡು ಅಕ್ಕಾ... ಸ್ವಲ್ಪ ಸುಣ್ಣ ಬೇಕೆಂದೆ! ಅವಳಲ್ಲಿ ಏನೋ ಸಂತೋಷವುಂಟಾಗಿ ತಡಬಡಿಸುತ್ತಾ ಬನ್ನಿ ಸಾಮಿ... ಎಂದು ಅಂಗಳದಲ್ಲಿ ಕಸಗುಡಿಸಿ ನಾನು ಕೂತುಕೊಳ್ಳಲು ಅನುವು ಮಾಡಿಕೊಟ್ಟಳು... ವಾಯುಚುಂಬಿತ ಗುಪ್ತಾಂಗಗಳನ್ನು ಪ್ರದರ್ಶಿಸುತ್ತಾ ಆಕೆ ಮಕ್ಕಳು ಸುತ್ತಾ ಪ್ರತ್ಯಕ್ಷವಾದವು. ಹನ್ನೆರಡರ ದೊಡ್ಡ ಮಗ 'ಯಾರಮ್ಮಾ ಈ ಅಣ್ಣಾ?' ಎಂದೊಡನೆ 'ದೇವ್ರು ಮಾಡಾsಕ ಬಂದಿರೋ ಸಾಮಿಗಳು...' ಎನ್ನುವಾಗ ನನ್ನನ್ನು ದೇವರೇ ಎಂದು ಭಾವಿಸಿದಂತಿತ್ತು.

ಆ ಮಕ್ಕಳ ಯಾವ ಅಂಗಗಳಿಗೂ ಆರೈಕೆ ಇಲ್ಲ ! ಶಾಲೆಯಂತೂ ಗೊತ್ತಿಲ್ಲ. ಹೌದು!!! ಶಿಕ್ಷಣ ಮಕ್ಕಳ ಜನ್ಮ ಸಿದ್ಧ ಹಕ್ಕೆಂದು ಸಾರುವ ೫೦ ಮೀರಿದ ನಮ್ಮ ಮುದಿ ಸಂವಿಧಾನ ಇಲ್ಲಿ ಬಂಜೆ... ಬರೀ ಬರಡು... ಕೋಟ್ಯಾಂತರ ರೂಪಾಯಿಗಳನ್ನು ದುರುಪಯೋಗ ಮಾಡುವ ಸರ್ವ ಶಿಕ್ಷ ಅಭಿಯಾನದ ಶಾಲಾ ಗೋಡೆಗಳ ಮೇಲೆ ಪೆನ್ಸಿಲ್‌ನ ಎರಡೂ ತುದಿಗಳಲ್ಲಿ ಈ ಮಕ್ಕಳು ಗೊಂಬೆಗಳ ರೂಪದಲ್ಲಿ ನೇತಾಡುತ್ತಿವೆ.

ಅವಳ ಮುಖವನ್ನು ಅತೀ ಸಮೀಪದಿಂದ ನೋಡಹತ್ತಿದೆ. ಕಳಾಹೀನವಾದ ಆ ಸೌಂದರ್ಯದಲ್ಲಿ ಮಾದಕತೆ ಇಲ್ಲ, ಭಾವನೆಗಳಲ್ಲಿ ಕೆಟ್ಟ ದೃಷ್ಟಿ ಇಲ್ಲ. ಭರವಸೆಗಳಂತೂ ಬಾಡಿದ್ದವು. ಉಪಯೋಗಕ್ಕೆ ಬರುವಾಗ ಗೋಮಾತೆ ಎಂದು ಪೂಜಿಸಿ ನಿತ್ರಾಣಗೊಂಡಾಗ ಕಟುಕನಿಗೆ ಮಾರುವಂತೆ ಇವಳೂ ಬಡಕಲು ಹಸುವಿನಂತೆ, ಹಸಿದವರಿಗೆ ಅಲ್ಪ ಬೆಲೆಯಲ್ಲಿ ತಿನ್ನಲು ಮಾತ್ರ... ಎಲ್ಲಾ ಅರ್ಹತೆಗಳನ್ನು ಕಳೆದುಕೊಂಡ ಸಜೀವ ಶವ !!!.

ಪಕ್ಕದ ದಾರಿಯಲ್ಲಿ ಜನರಂತೂ ನನ್ನನ್ನು ವಿಚಿತ್ರವಾಗಿ ನೋಡುತ್ತಾ ಸಾಗುತ್ತಿದ್ದರು. ಅವಳ ಬಾಗಿಲಲ್ಲಿ ಕೂರುವ ಧೈರ್ಯ ಯಾರಿಗೂ ಇಲ್ಲ. ಬಹುಶಃ ಎಲ್ಲರೂ ಅವಳ ಹಿಂಬಾಗಿಲಿನಿಂದ ಬರುವವರೇ.

ಅವಳ ಮುಖವನ್ನು ಅತೀ ಸಮೀಪದಿಂದ ನೋಡಹತ್ತಿದೆ. ಕಳಾಹೀನವಾದ ಆ ಸೌಂದರ್ಯದಲ್ಲಿ ಮಾದಕತೆ ಇಲ್ಲ, ಭಾವನೆಗಳಲ್ಲಿ ಕೆಟ್ಟ ದೃಷ್ಟಿ ಇಲ್ಲ. ಭರವಸೆಗಳಂತೂ ಬಾಡಿದ್ದವು. ಉಪಯೋಗಕ್ಕೆ ಬರುವಾಗ ಗೋಮಾತೆ ಎಂದು ಪೂಜಿಸಿ ನಿತ್ರಾಣಗೊಂಡಾಗ ಕಟುಕನಿಗೆ ಮಾರುವಂತೆ ಇವಳೂ ಬಡಕಲು ಹಸುವಿನಂತೆ, ಹಸಿದವರಿಗೆ ಅಲ್ಪ ಬೆಲೆಯಲ್ಲಿ ತಿನ್ನಲು ಮಾತ್ರ... ಎಲ್ಲಾ ಅರ್ಹತೆಗಳನ್ನು ಕಳೆದುಕೊಂಡ ಸಜೀವ ಶವ !!!.

ನನಗರಿವಿಲ್ಲದಂತೆ ಹೃದಯದ ವೇಗ ಜಾಸ್ತಿಯಾಗಿತ್ತು! ಅತೀವ ದುಃಖ ಕೋಪ ಇಮ್ಮಡಿಸಿತ್ತು.

ಡಾ|| ಬಿ.ಆರ್. ಅಂಬೇಡ್ಕರ್ 'ಸ್ತ್ರೀ ಸಮಾನತೆ' ಕಲ್ಪನೆಯನ್ನು ನಮ್ಮ ಸಂವಿಧಾನಕ್ಕೆ ನೀಡಿದಾಗ ತಿರಸ್ಕರಿಸಲ್ಪಟ್ಟರು. ಎಂದಿಗೂ ವಿವೇಕವನ್ನು ಕಳೆದುಕೊಳ್ಳದ ಆ ಮಹನೀಯ ಈ ಕಾರಣಕ್ಕಾಗಿ ತಮ್ಮ ಪದವಿಯನ್ನೇ ತ್ಯಾಗ ಮಾಡಿದರು. ಅಂದು ಅವರು ಉಳಿಸಿಕೊಂಡ ವಿವೇಕವೇ ಮಹಾನ್ ಶಕ್ತಿಯಾಗಿ ಮುಂದೆ ಅದು ಭಾರತೀಯ ಮಹಿಳಾ ಲೋಕಕ್ಕೆ ಬದುಕಿನ ಸ್ವಾವಲಂಬನಾ ಚೈತನ್ಯ ಒದಗಿಸಿತ್ತು. ಇದರಡಿಯಲ್ಲಿ ತಿಂದು ತೇಗಿದ ಎಷ್ಟು ಮಹಿಳೆಯರಿಗೆ ಆ ಮಹನೀಯನ ಮೇಲೆ ಕೃತಜ್ಞತಾ ಭಾವವಿದೆ? ಅಥವಾ ಆಸರೆಯನ್ನು ಕಳೆದುಕೊಂಡ ಅನಾಮಿಕ ಅಸಂಖ್ಯಾತ ಹೆಂಗಳೆಯರ ಬಗ್ಗೆ ಸೌಜನ್ಯ ಕರುಣೆಗಳಿವೆ? ಇಲ್ಲವೇ ಇಲ್ಲ!!! ಏಕೆಂದರೆ ಈ ಕ್ರೂರ ಮೃಗಗಳು ವಾಸ್ತವ ಪ್ರಪಂಚಕ್ಕೆ ದೂರವಾದ ಸುಸಂಸ್ಕೃತರು!

'ಅಣ್ಣಾ ಕೆಲಸಕ್ಕೆ ಟೈಂ ಆಗಿಲ್ವೇ ? (ಗಜೇಂದ್ರ ಗುಡುಗಿದ) ದಾರಿಯಲ್ಲಿ ನಡೆಯುವಾಗ ಆದಿ ಕವಿ ಶ್ರೀ ಶ್ರೀಯವರ ಒಂದು ಹಾಡನ್ನು ಗೊಣಗುವುದು ಬಿಟ್ಟರೆ ನಾನಿಲ್ಲಿ ಸಂಪೂರ್ಣ ಅಸಹಾಯಕನಾಗಿದ್ದೆ.

> ಕಾರಲಿ ಶಿಕಾರಿ ಹೊರಟ ಹಾಲುಗೆನ್ನೆಯ
> ಹಸಿ ಹಸುಳೆಯೇ। ನಿನ್ನ ಕೆನ್ನೆಗೆ ಗುಲಾಬಿರಂಗು
> ಹೇಗೆ ಬಂದಿತೋ ತಿಳಿಯಿತೇ ?
> ನಿನ್ನ ಮಿಂಚಿದ ಅಂದಗೆತ್ತೆಯರು
> ಉರಿವ ಬಿಸಿಲಲಿ ಉರಿಯುತ್ತಿದ್ದರೆ
> ಅವರ ಅಂದವ ನಿನ್ನ ಕೆನ್ನೆ ಕದ್ದಿತೆಂದು ತಿಳಿದುಕೋ
> ತಂಪು ಗಾಳಿಯ ಮಹಡಿಯಲ್ಲಿ ಮೋದದಿಂದ
> ಮೆರೆಯುವವಳೇ!
> ಮಯ್ಯ ಮುರಿದು ಬೆವರ ಸುರಿಸಿ ಹೊಟ್ಟೆಗಾಗಿ
> ದುಡಿವ ಜನರ ಬೆವರ ಹನಿಗಳ ತಂಪದು
> ಅರಿತುಕೋ...

❑

ಅಕ್ಷರಕ್ಕಿರುವ ಮಾಂತ್ರಿಕತೆ

(೧೨೫ನೇ ಪುಟದಿಂದ)

ದಬದಬನೇ ನೆಲಕ್ಕೆ ಸುರಿದು, ಶಪಿಸುತ್ತಲೇ ದೂರದ ತೋಟದ ಬಾವಿಗೆ ಮತ್ತೇ ತುಂಬಿ ತರಲು ಹೊರಟಿದ್ದರು. ನಾನು ಮಾಡಿದ್ದ ಪ್ರಮಾದವಾದರೂ ಏನೆಂದು ತಿಳಿಯದೇ ಗಾಬರಿಯಾಗಿತ್ತು. ನನ್ನ ದೊಡ್ಡಪ್ಪ 'ಅವರು ಒಕ್ಕಲಿಗರು, ನಮ್ಮ ಕೈಯ ಕೂಳು - ನೀರು ತೆಗೆದುಕೊಳ್ಳುವುದಿಲ್ಲ. ಅವರನ್ನೇ ಕೇಳಿ ಎತ್ತಿ ಹಾಕಿಸಿಕೊಂಡು ಬರಬೇಕಾಗಿತ್ತು' ಎಂದು ನನಗೇ ಬುದ್ಧಿವಾದ ಹೇಳಿದ್ದ. ವಿಶ್ವಮಾನವ ಬಸವಣ್ಣನ ಹೆಸರು ಹೇಳುವ ಈ ಶೂದ್ರ ಸಮುದಾಯವೂ ಈ ತೆರನಾದ ಅಸ್ಪೃಶ್ಯತೆ ಆಚರಿಸುತ್ತಿರುವುದನ್ನು ನೆನೆದು ದಿಗ್ಭ್ರಮೆಯಾಗಿತ್ತು ನನಗೆ!

ಹಾಗೇ ಅನೇಕ ವರ್ಷಗಳು ಉರುಳಿದವು. ಪಡಬಾರದ ಪಡಿಪಾಟಲು ಪಟ್ಟು ಅಂತೂ ಎಂ.ಎ. ಮಾಡಿಕೊಂಡು ತಲೆಯ ತುಂಬ ನೂರೆಂಟು ವಿಚಾರಗಳನ್ನು ಹೊತ್ತು ಊರಿಗೆ ಮರಳಿದ್ದೆ. ಈ ಮೇಲೆ ತಿಳಿಸಿದ ಕೋಮಿನ ಬಾಲ್ಯ ಸ್ನೇಹಿತನೊಬ್ಬ ಮ್ಯಾಟ್ರಿಕ್ ಫೇಲಾಗಿ ಮನೆಯಲ್ಲಿಯೇ ಕುಳಿತಿದ್ದ. ನಾನೊಂದು ಬಾರಿ, ಹಳೆಯ ಸ್ನೇಹದಿಂದ ಆತನ ಮನೆಯ ಕಡೆ ಹೋದಾಗ, ಅವನಪ್ಪ ನನ್ನ ಉತ್ಕರ್ಷವನ್ನು ಸಹಿಸದ್ದಕ್ಕೊ ತನ್ನ ಮಗನು ಓದದೆ ಹಿಂದೆ ಬಿದ್ದದ್ದಕ್ಕೊ ನಮ್ಮಿಬ್ಬರ ಎದುರಲ್ಲೇ 'ಅವನಾವನು, ಒಕ್ಕಾಡು (Use and Through) ಜಾತಿ ಕುರುಬನೇ ಧಾರವಾಡ ಮಟ ಹೋಗಿ ಪಾಸಾಗಿ ಬಂದ. ನಿನಗೇನಾಗೇತಿ ಲೇ ಧಾಡಿ?' ಎಂದಾಗ ನಾನು ಕಕ್ಕಾವಿಕ್ಕಿಯಾಗಿದ್ದೆ. ಕ್ಲಾಸು ತೆಗೆದುಕೊಳ್ಳಬೇಕೆಂದು ನಾನು ತುಟಿ ಸವರಿಕೊಳ್ಳುವ ಹೊತ್ತಿಗೆ ಆತನ ಮಗನೇ ತನ್ನ ಅಪ್ಪನನ್ನು ಗದರಿ ಬಾಯಿ ಮುಚ್ಚಿಸಿ , ಆತನ ಒರಟು ಮಾತಿಗೆ ತಪ್ಪು ತಿಳಿಯಬಾರದೆಂದು ನನ್ನ ಕ್ಷಮೆ ಯಾಚಿಸಿದ್ದ. ನಾನೂ ಭಾಷೆಯನ್ನೇ ಓದಿ ಬಂದವನು. ಅದು ಹೊಗಳಿಕೆಯೋ ಇಲ್ಲಾ ಹೀಯಾಳಿಕೆಯೋ ಒಂದು ಆ ಕ್ಷಣ ತಿಳಿಯಲಿಲ್ಲ. ಆದರೂ ನಿರಕ್ಷರಕುಕ್ಷಿ ಆ ಹುಂಬನ ಮಾತಿನಲ್ಲಿರುವ ಮೇಲ್ಜಾತಿಯವನೆಂಬ ಒಂದೇ ದಾರ್ಷ್ಟ್ಯ ಹೇಗೆ ಇರಿಯುತ್ತದಲ್ಲ ಎಂದು ಚಿಂತಿತನಾಗಿದ್ದೆ.

ಊರ ಮನೆಯವನಾಗಿದ್ದೂ, ಸಮಾಜದಲ್ಲಿ ಮಧ್ಯಮ ಜಾತಿಯವನಾದ ನನ್ನಂಥವರನ್ನೇ ಹೀಗೆ ಉಪಚರಿಸುವವರಾದರೆ ಇನ್ನು ಊರಾಚೆಯ ಹೊಲೆ - ಮಾದಿಗರ ಪಾಡೇನು ? ಈ ದೇಶದಲ್ಲಿ ಮೀಸಲಾತಿ ತಂದದ್ದಕ್ಕಾದರೂ ನಿರ್ಲಕ್ಷಿತ ಜನಕ್ಕೆ ಈಗ ಒಂಚೂರು ಬಾಯಿ ಬಂದಂತಾಗಿದೆ. ಇಲ್ಲದಿದ್ದರೆ ಏನು ಗತಿ ? ಬೇರೆ ಜಾತಿಯವರು ಹಾಳಾಗಲಿ 'ಕೊಡಲಿ ಕಾವು ಕುಲಕ್ಕೇ ಮೃತ್ಯು' ಅನ್ನುವಂತೆ ಕುಲಬಾಂಧವರ ಸಣ್ಣತನ ಕುರಿತ ಒಂದು ಪ್ರಕರಣ ಹೇಳುತ್ತೇನೆ. ಆಗಲೇ ಹೇಳಿದ್ದಂತೆ, ಸತತ ಬರಗಾಲದ ಹೊಡೆತಕ್ಕೆ ಧೂಳಿಪಟವಾಗಿದ್ದ ನಮ್ಮ ಮನೆತನಗಳು ಹಸಿವಿನಿಂದ ತತ್ತರಿಸುತ್ತಿದ್ದಾಗಲೇ, ದೈನೇಸಿ ಪಟ್ಟು ಕಾಲೇಜಿಗೆ ಸೇರಿದ್ದ ದಿನಗಳು ಅವು.

ಸೇವಾದಳದ ಶಿಬಿರದಲ್ಲಿ ಪುಕ್ಕಟೆ ಕೊಟ್ಟಿದ್ದ ಬಿಳಿ ಖಾದಿ ಬಟ್ಟೆಗಳನ್ನೇ ಒಗೆದು ಶುಭ್ರಗೊಳಿಸಿ, ತಂಬಿಗೆಯೊಳಗೆ ಕೆಂಡ ತುಂಬಿ ಇಸ್ತ್ರಿ ಮಾಡಿಕೊಂಡು ತೊಟ್ಟು ಹೊರಬಿದ್ದರೆ - ಸ್ವಜಾತಿ ಬಂಧುಗಳೇ ಸಹಿಸುತ್ತಿರಲಿಲ್ಲ. 'ತಿಂದೇನಂದರ ಮನ್ಯಾಗ ಒಂದ ಒಡಕ ಕಾಳಿಲ್ಲ, ಅಲಲಲಲಾ ಇವನ ದಿರಸು ನೋಡು, ಕರಾಪು ನೋಡು' ಎಂದು ನೇರವಾಗಿ ನನ್ನ ಎದೆಗೆ ನಾಟುವಂತೆಯೇ ಕಟಕಿಯಾಡುತ್ತಿದ್ದರು. ಹೊಲ-ಗಿಲ ಎಂದು ಸ್ಥಿರಾಸ್ತಿಯಿದ್ದರೆ ಮಾತ್ರ ಅವರ ಕಣ್ಣಲ್ಲಿ ನಾವು ಮನುಷ್ಯರಾಗಿ ಕಾಣುತ್ತಿದ್ದೆವು. 'ಹೊಲೆಯರ ಸುಗ್ಗಿ ಒಲೆಯ ಮೇಲೆ' ಅನ್ನುವಂತೆ ದಿನಾ ಮಂದಿ ಹೊಲದಲ್ಲಿ ದುಡಿದು ತಂದು, ರಾತ್ರಿ ಅದನ್ನೇ ಬೇಯಿಸಿಕೊಂಡು ತಿಂದು ಮಲಗುವ ಕೃಷಿ ಕಾರ್ಮಿಕ ಕುಟುಂಬ ನಮ್ಮದಾಗಿತ್ತು. ಆ ಕಾರಣಕ್ಕಾಗಿ ಇಷ್ಟೆಲ್ಲ ಹಂಗಿಸಿಕೊಳ್ಳಬೇಕಾಗಿತ್ತು. ಬಿಳಿ ಬಟ್ಟೆ ತೊಟ್ಟರೂ, ಕೂದಲನ್ನು ನೀರು ಹಾಕಿ ಬಾಚಿದರೂ ಅವರು ಸಹಿಸುತ್ತಿರಲಿಲ್ಲ ಪಾಪಿಗಳು.



ಇಂಥವೇ ಅನುಭವಗಳಿಂದ ಮನಸ್ಸು ರೋಸಿ ರೋಸಿ, ಬಡತನ ನಮ್ಮನ್ನು ಶಾಶ್ವತವಾಗಿ ಕೀಳರಿಮೆಯಿಂದ ನರಳುವ ಹಾಗೆ ಮಾಡಿಬಿಟ್ಟಿತ್ತು. ವಿದ್ಯಾರ್ಥಿ ಜೀವನದಲ್ಲಿ ವೇದಿಕೆಯ ಮೇಲೆ ಹೋಗಿ ಭಾಷಣಕ್ಕಾಗಿ ಮೈಕಿನೆದುರು ನಿಂತರೆ ಸಾಕು ಕುಂಡಿಯ ಮೇಲೆ ಹರಿದಿರುತ್ತಿದ್ದ ಬಿಳಿ ಪೈಜಾಮ, ಹಿಂದೆ ಸಾಲಾಗಿ ಕುರ್ಚಿಗಳಲ್ಲಿ ಕುಳಿತಿರುತ್ತಿದ್ದ ಗಣ್ಯರ ಕಣ್ಣಿಗೆ ಎಲ್ಲಿ ಬಿದ್ದುಬಿಡುತ್ತದೊ ಎಂದು ಶರಟನ್ನು ಕೆಳಗೆ ಎಳೆದುಕೊಳ್ಳುವುದೇ ನನಗೊಂದು ಗೀಳಾಗಿತ್ತು. ಹೊಸ ಪೈಜಾಮವಿದ್ದರೂ ಹಾಗೆ ಶರಟು ಎಳೆದುಕೊಳ್ಳುವುದನ್ನು ನೋಡಿ ಒಮ್ಮೆ ಪ್ರಿನ್ಸಿಪಾಲರೆ ಹತ್ತಿರ ಬಂದು ಗದರಿದ್ದರು. ನಾಚಿಕೆ/ಅವಮಾನಗಳಿಂದ ಮುದುರಿ ಹೋಗಿದ್ದೆ. ಕಾಡಿ ಬೇಡಿ ಸಂತೆಯಲ್ಲಿ ತೆಗೆಸಿಕೊಂಡಿದ್ದ ಹವಾಯಿ ಚಪ್ಪಲಿ ಒಂದೇ ತಿಂಗಳಿನಲ್ಲಿ ಸವೆದು, ಅದಕ್ಕೆ ಹಾಕಿದ್ದ ಸೇಫ್ಟಿ ಪಿನ್ನು ಕಿತ್ತು ಹುಡುಗಿಯರ ಸಮ್ಮುಖದಲ್ಲಿಯೇ ಚಪ್ಪಲಿಗಳು ಕೈಗೆ ಬಂದು ಮಾನ ಕಳೆಯುತ್ತಿದ್ದವು. ಹರಿದ ಅಂಗಿ ಯಾರಿಗೂ ಕಾಣಬಾರದೆಂದು ಮುಚ್ಚಲು ಪ್ರಯತ್ನಿಸಿದಷ್ಟೂ ಅದು ಜನರ ಕಣ್ಣಿಗೆ ಬೀಳುತ್ತದೆ. ನನ್ನಂತಹವರ ಹರಿದ 'ಬಾಳ ಬಟ್ಟೆ'ಯೂ ಹಾಗೆಯೇ ಆಗಿತ್ತು!

ಹೌದು, ಓದುವಾಗಿನ ದಿನಗಳಲ್ಲಿ ಅಕ್ಷರಶಃ ನಾನು ಪುಸ್ತಕದ ಹುಳುವಾಗಿದ್ದೆ. ಅಕ್ಷರ ಪ್ರಪಂಚ ನನ್ನನ್ನು ತಬ್ಬಿ ಕೈಹಿಡಿದು ನಡೆಸಿದ್ದಕ್ಕೆ ಇವತ್ತು ನಾನೂ ಒಬ್ಬ ಗೆಜೆಟೆಡ್ ಅಧಿಕಾರಿಯಾಗಿ ಒಂದು ಕುರ್ಚಿ ಗಳಿಸುವಂತಾದದ್ದು. ತಕ್ಕಮಟ್ಟಿಗೆ ಸುಖ- ಸವಲತ್ತು ಹುಡುಕಿಕೊಂಡು ಬಂದದ್ದು ನಿಜ. ಆದರೆ ನಾಗರಿಕ ಸಮಾಜದಲ್ಲಿ ಏನೆಲ್ಲ ಪ್ರತಿಷ್ಠೆ ಹೊಂದಿದ್ದರೂ ಬಾಲ್ಯದಲ್ಲಿ ಹಿಂಸಿಸಿದ್ದ ಆ ಬಡತನ, ನನ್ನ ಮನಸ್ಸಿನ ಮೇಲೆ ಎಳೆದಿದ್ದ ಬರೆ, ಅದರ ಗಾಯದ ಕಲೆ ಇನ್ನೂ ಪೂರ್ತಿ ಮಾಸಿಲ್ಲವಲ್ಲ!

ಏನೇ ಆದರೂ, ಅದಕ್ಕಿರುವ ಆ ಮಾಂತ್ರಿಕ ಶಕ್ತಿ ಅತ್ಯದ್ಭುತವಾದದ್ದು. ಓದದೇ ಹೋಗಿದ್ದರೆ ಯಾವ ಗಿಡದ ತೊಪ್ಪಲಾಗಿ, ಎಲ್ಲಿಯೋ ಬಿದ್ದಿರುತ್ತಿದ್ದೆ - ಒಕ್ಕಾಡುವವನಾಗಿ. ವಿದ್ಯೆಯಿಂದಾಗಿ ಈಗ ನಾಗರಿಕ ಸಮಾಜದ ಜನ-ಮನದ ಒಳ-ಹೊರಗೆ 'ಹೊಕ್ಕಾಡುವ ಅವಕಾಶ' ದಕ್ಕಿದೆಯೆಂದರೆ ಇದನ್ನು ಅದೃಷ್ಟವೆನ್ನಲಾರೆ, ಪವಾಡವೂ ಅನ್ನಲಾರೆ - ಕೇವಲ ಅಕ್ಷರ ಸಂಸ್ಕಾರದಿಂದ ದಕ್ಕಿದ ಅವಕಾಶ ಎಂದು ಮಾತ್ರ ಎದೆ ತಟ್ಟಿ ಹೇಳಬಲ್ಲೆ.

ಮೀಸಲಾತಿಯಿಂದ ಸಿಕ್ಕಿದ ಸರ್ಕಾರೀ ಸವಲತ್ತನ್ನು ಅನುಭವಿಸುತ್ತಲೇ ನವಬ್ರಾಹ್ಮಣರಂತಾಗಿ ಹೋಗಿ, ಹುಸಿ ಪ್ರತಿಷ್ಠೆಯ ಬೆನ್ನು ಹತ್ತಿದವರಾಗಿ, ಹೋಮ ಹವನಾದಿಗಳನ್ನು ಮಾಡಿಸುವಲ್ಲಿ ಮುಳುಗಿದ ಮೂರ್ಖ ದಲಿತರನ್ನೂ; ಕೆಟ್ಟ ಚಾಳಿಗಳನ್ನೆಲ್ಲ ರೂಢಿಸಿಕೊಂಡವರಾಗಿ ಶ್ವಪಚರಿಗಿಂತ ಕಡೆಯಾಗಿ ನಡೆದುಕೊಳ್ಳುವ ದುಷ್ಟ ಹಾರುವರನ್ನೂ ನಮ್ಮ ನಡುವೆ ಒಟ್ಟಾಗೇ ನೋಡುತ್ತಿದ್ದೇವೆ ಈಗ. ಇದನ್ನೇ 'ಸಂಕ್ರಮಣ ಕಾಲ' ಅನ್ನಬಹುದೇ ಹೇಗೆ? ❑

ಅಕ್ಷರ ಪ್ರಪಂಚ ನನ್ನನ್ನು ತಬ್ಬಿ ಕೈಹಿಡಿದು ನಡೆಸಿದ್ದಕ್ಕೆ ಇವತ್ತು ನಾನೂ ಒಬ್ಬ ಗೆಜೆಟೆಡ್ ಅಧಿಕಾರಿಯಾಗಿ ಒಂದು ಕುರ್ಚಿ ಗಳಿಸುವಂತಾದದ್ದು. ತಕ್ಕಮಟ್ಟಿಗೆ ಸುಖ-ಸವಲತ್ತು ಹುಡುಕಿಕೊಂಡು ಬಂದದ್ದು ನಿಜ. ಆದರೆ ನಾಗರಿಕ ಸಮಾಜದಲ್ಲಿ ಏನೆಲ್ಲ ಪ್ರತಿಷ್ಠೆ ಹೊಂದಿದ್ದರೂ ಬಾಲ್ಯದಲ್ಲಿ ಹಿಂಸಿಸಿದ್ದ ಆ ಬಡತನ, ನನ್ನ ಮನಸ್ಸಿನ ಮೇಲೆ ಎಳೆದಿದ್ದ ಬರೆ, ಅದರ ಗಾಯದ ಕಲೆ ಇನ್ನೂ ಪೂರ್ತಿ ಮಾಸಿಲ್ಲವಲ್ಲ! ಏನೇ ಆದರೂ, ಅದಕ್ಕಿರುವ ಆ ಮಾಂತ್ರಿಕ ಶಕ್ತಿ ಅತ್ಯದ್ಭುತವಾದದ್ದು.

ಆಂತರಿಕವಾಗಿ ಜಾತಿಯ ಒಳಮನಸನ್ನಿಟ್ಟು, ಬಾಹ್ಯವಾಗಿ ಸಾಮಾಜಿಕ ಸಾಮರಸ್ಯದ ಬಗ್ಗೆ ಗೆಳೆತನ ಇತ್ಯಾದಿ ಸಮಾನತೆ ವಿಷಯಗಳನ್ನು ಕುರಿತು ಮಾತಾಡುವ ಜನರು ಇರುವುದರಿಂದಲೇ ಜಾತಿ ನಿಂದನೆ, ಅಸ್ಪೃಶ್ಯತೆಯ ಆಚರಣೆ ಇನ್ನೂ ಜೀವಂತವಾಗಿ ಉಳಿದುಕೊಂಡಿರುವುದು.

○ ನಂಜನಹಳ್ಳಿ ನಾರಾಯಣ

ಜಾತಿ ಕಂದರಗಳ ಸುಳಿಯಲ್ಲಿ...

ಅನುಭವದ ಗೂಡಿನಿಂದ

ನಾನು ಬಿ.ಎ., ಓದುವ ಸಂದರ್ಭದಲ್ಲಿ ನಡೆದ ಒಂದು ಪ್ರಸಂಗ ಮರೆಯದೆ ನನ್ನ ಮನಸ್ಸಿನಲ್ಲಿ ಇನ್ನೂ ಉಳಿದುಕೊಂಡಿದ್ದೆ. ದಸರ ರಜೆಯ ಪ್ರಯುಕ್ತ ಮೈಸೂರಿನಿಂದ ಊರಿಗೆ ಹೊರಟಿದ್ದೆ. ನಮ್ಮೂರಿಗೆ ನಂಜನಗೂಡಿನ ಮುಖಾಂತರವೇ ಹೋಗಬೇಕು. ನಂಜನಗೂಡಿಗೆ ಬಂದು ನಮ್ಮೂರ ಬಸ್ಸಿಗೆ ಕಾಯತ್ತಾ ಕುಳಿತಿದ್ದೆ. ನನ್ನ ಹೈಸ್ಕೂಲಿನ ವಿದ್ಯಾಭ್ಯಾಸದಲ್ಲಿ ಸಹಪಾಠಿಯಾಗಿದ್ದ ಮಿತ್ರನೊಬ್ಬ ಸಿಕ್ಕಿದ. ಅವನು ನಂಜನಗೂಡಿನ ಕಾಲೇಜಿನಲ್ಲಿ ಓದುತ್ತಿದ್ದ.

ಇಬ್ಬರೂ ಪರಸ್ಪರ ಯೋಗಕ್ಷೇಮಗಳ ಬಗ್ಗೆ ಮಾತಾಡಿಕೊಂಡೆವು. 'ನಮ್ಮೂರಿಗೆ ಇನ್ನೂ ಬಸ್ ಬಂದಿಲ್ಲವಲ್ಲ ಏಕೆ?' ಎಂದು ಕೇಳಿದೆ. ಆ ಬಸ್ ಈಗಾಗಲೇ ಹೋಗಿರಬಹುದು. ನಮ್ಮೂರ ಬಸ್ಸುಗಳಿಗೆ ಸಮಯ ಪ್ರಜ್ಞೆಯಾಗಲಿ, ಅದನ್ನು ಪಾಲಿಸಬೇಕೆಂದಾಗಲಿ ನಿಯಮವಿಲ್ಲ. ಜನ ಭರ್ತಿಯಾದರೆ ಸಾಕು ಎಲ್ಲಾ ನಿಯಮಗಳನ್ನು ಮೀರಿ ಕುಡಿದವರಂತೆ ತಾರಾಡುತ್ತಾ ಹೊರಟು ಬಿಡುತ್ತವೆ. ಅವು ಬರುವುದು, ಹೋಗುವುದು ಯಾವುದಕ್ಕೂ ಗ್ಯಾರಂಟಿಯಿಲ್ಲ. ಎಲ್ಲಾ ಖಾಸಗಿ ಬಸ್ಸುಗಳ ಖಾಸಗಿ ವಿಚಾರ ಕೇಳುವವರಾರು ? ಇದೆಲ್ಲ ನಿಮಗೂ ಗೊತ್ತಿರುವಂಥದ್ದೆ ನಾನೇನು ಹೊಸದಾಗಿ ಹೇಳುವ ಅಗತ್ಯವಿಲ್ಲವೆಂದು ಸುದೀರ್ಘ ಭಾಷಣ ಹೊಡೆದ. ಈಗ ನಿನ್ನ ಊರಿಗೆ ಹೋಗಲು ಸಾಧ್ಯವಿಲ್ಲ. ಆದ್ದ ರಿಂದ ನಮ್ಮ ಹಾಸ್ಟಲಿಗೆ ಬಂದು ತಂಗುಬಿಡು; ನಾಳೆ ಹೋದರಾಯ್ತು ಎಂದನು. ನಾನು ಒಂದು ಡೌಟ್ ಹೇಳಿದೆ. ನಾನು ಯಾವ ಜಾತಿ ಎಂದು ನಿನಗೆ ಗೊತ್ತು. ನಿಮ್ಮದು ಲಿಂಗಾಯ್ತರ ಹಾಸ್ಟಲ್. ನಾನು ದಲಿತ ಎಂದು ತಿಳಿದರೆ ತೊಂದರೆಯಾಗುವುದಿಲ್ಲವೆ? ಎಂದೆನು.

'ನೋಡು ಫ್ರೆಂಡ್ ನಿನ್ನ ಜಾತಿ ನಮ್ಮಿಬ್ಬರ ಫ್ರೆಂಡ್ ಶಿಪ್‌ಗೆ ಅಡ್ಡಿಯಾಗಿಲ್ಲ.' ನಾನಂತು ಯಾವ ಜಾತಿ ಭೇದ ಮಾಡುವವನು ಅಲ್ಲ. ನಿನ್ನ ಜಾತಿ ಇಲ್ಲಿಯವರಿಗೆ ಗೊತ್ತಿಲ್ಲ. ನೀನು ಆ ರೀತಿ ಕಾಣುವುದೂ ಇಲ್ಲ. ಸುಮ್ಮನೆ ಇದ್ದುಬಿಡು. ಅದಕ್ಕೆ ತಲೆ ಕೆಡಿಸಿಕೊಳ್ಳಬಾರದು ಎಂದು ಉಪದೇಶ ಮಾಡಿ ಒತ್ತಾಯದಿಂದ ಹಾಸ್ಟಲಿಗೆ ಕರೆದುಕೊಂಡು ಹೋದನು.



ನನಗೆ ಭಯ ಒಳಗಡೆ ಕೊರೆಯತೊಡಗಿತು. ಭಯೋತ್ಪಾದನೆಯ. ಸ್ಥಳದಲ್ಲಿರುವಂತೆ ಭಾಸವಾಗ ತೊಡಗಿತು. ಹೇಗಾದರೂ ನನ್ನ ಜಾತಿ ಗೊತ್ತಾಗಿ ಬಿಟ್ಟರೆ ; ಗತಿ ಏನು? ಈ ಅವಮಾನ ತಡೆಯ ದಾದರು ಹೇಗೆಂದು ಚಿಂತೆ ಕೊರೆಯುತ್ತಿತ್ತು. ಅಷ್ಟರಲ್ಲಿ ಗೆಳೆಯ ಊಟಕ್ಕೆ ಕರೆದಾಗ ಅಳುಕು ಸುರುವಾಯ್ತು. ವಿಧಿಯಿಲ್ಲದೆ ಊಟಕ್ಕೆ ಹೋದೆ. ಹೇಗೊ ಅವರ ಪಂಕ್ತಿಯಲ್ಲಿ ಊಟ ಸುಗಮವಾಗಿ ನಡೆಯಿತು. ಭಯವು ಸ್ವಲ್ಪ ಇಳಿಯಿತು.

ಗೆಳೆಯನ ರೂಂನಲ್ಲಿ ಮಲಗಲು ವ್ಯವಸ್ಥೆ ಮಾಡಲಾಯಿತು. ಅವನ ಬೆಡ್‌ಶೀಟನ್ನು ಒನ್ ಬೈಟ್ ಮಾಡಿಕೊಂಡು ಮಲಗಿದೆ. ನನ್ನ ಪಕ್ಕದಲ್ಲಿ ಅವನ ರೂಂಮೆಟ್ ಮಲಗಿದ. ಈಗಾಗಲೇ ನನ್ನ ಪರಿಚಯ ಅವನಿಗೆ ಮಾಡಲಾಗಿತ್ತು. ಆದರೆ ಜಾತಿಯನ್ನು ಹೇಳಿರಲಿಲ್ಲ. ಹೊಸಬನಾದ ನನ್ನೊಡನೆ ಮಾತಾಡಲು ಅವನಿಗೆ ಕುತೂಹಲ. ಮೈಸೂರಿನ ಮಹಾರಾಜ ಕಾಲೇಜಿನ ಬಗ್ಗೆ ಹಲವಾರು ವಿಷಯ ಮಾತಾಡಿದ. ಆ ಕಾಲೇಜಿನಲ್ಲಿ ಓದುವುದೆಂದರೆ ಒಂದು ಪ್ರತಿಷ್ಠೆ. ನನಗೂ ಅದರಿಂದ ಸಹಜವಾಗಿ ಜಂಭವಿತ್ತು.

ಕುಟುಂಬದ ಎಲ್ಲಾ ಮಾತುಗಳನ್ನು ಆಡುತ್ತಾ ಕಾಲೇಜಿನ ಫೀಜು, ಸ್ಕಾಲರ್‌ಶಿಪ್‌ಗಳಿಗೆ ಅವನ ಮಾತು ತಿರುಗಿತು. ಈಗ ನಾವೆಲ್ಲ ಓದುವುದು ಭಾರಿ ಕಷ್ಟ ಕಾಲೇಜಿನಲ್ಲಿ ಯಾವ ರಿಯಾಯ್ತಿ ಸೌಲಭ್ಯ ಲಭ್ಯವಿರುವುದಿಲ್ಲ. ಇರುವ ಸೌಲಭ್ಯವೆಲ್ಲಾ ಎಸ್ಸಿ ಜಾತಿಯವರಿಗೆ ಸಿಗುತ್ತದೆ. ಕಾಲೇಜಿನಲ್ಲಿ ಫ್ರಿ, ಹಾಗೂ ಸ್ಕಾಲರ್‌ಶಿಪ್ ಎಲ್ಲಾ ಸಿಗುತ್ತದೆ. ಓದಿದ ಮೇಲೆ ಗೌರ್ನಮೆಂಟ್ ಕೆಲಸ ಸುಲಭವಾಗಿ ಸಿಗುತ್ತದೆ. ನಮಗೆ ಏನು ಸಿಗುವುದಿಲ್ಲ. ಸರ್ಕಾರ ಅದರಲ್ಲೂ ಕಾಂಗ್ರೆಸ್ ಅವರಿಗೆ ಎಲ್ಲವನ್ನು ಕೊಡುತ್ತದೆ. ಆದ್ದರಿಂದಲೇ ಎಸ್ಸಿ ನನ್ನ ಮಕ್ಕಳಿಗೆ ಭಾರಿ ಕೊಬ್ಬು ಎಂದು ಉಗಿಯತೊಡಗಿದ. ಅವರಿಗೆ ಮೀಸಲಾತಿ ಇರುವುದರಿಂದ ತಡೆಯಕ್ಕಾಗಲ್ಲ ಎಂದು ಒಂದೇ ಸಮನೆ ಒದರತೊಡಗಿದ.

ನಾನು ಮಾತಾಡುವುದು ಕಡಿಮೆಯಾಯಿತು. ಮನಸ್ಸಿನಲ್ಲಿ ಒಂದು ರೀತಿ ತಳಮಳವುಂಟಾಗತೊಡಗಿತು. ನನ್ನನ್ನು ಕರೆದುಕೊಂಡು ಬಂದಿದ್ದ ಗೆಳೆಯನಿಗೆ ಮಾತೆ ಬಾರದೆ ಸುಮ್ಮನಾಗಿ ಬಿಟ್ಟ. ನಾನು ಮೌನವಾಗಿ ಕುದಿಯತೊಡಗಿದೆ. ಜಾತಿ ಹೇಳದೆ ಫಜೀತಿಗೆ ಗುರಿಯಾಗಿ ಅವನಿಂದ ಬೈಗಳಿಗೆ ಗುರಿಯಾಗಿ ಅವಮಾನದ ಘಟನೆ ಎದುರಿಸಲಾರದೆ ಅಸಹಾಯಕನಾದೆ.

ವ್ಯಕ್ತಿಯನ್ನು ನೋಡಿ ಜಾತಿಯನ್ನು ಹೆಸರಿಸಲು ಸಾಧ್ಯವಿಲ್ಲ. ಅವನ ಮಗ್ಗಲಲ್ಲಿ ಮಲಗಿದ್ದರೂ ನಾನು ಯಾವ ಜಾತಿಗೆ ಸೇರಿದವನು ಎಂಬುದನ್ನು ತಿಳಿಯದೆ ದಲಿತರ ಬಗ್ಗೆ ಹೀನಾಯವಾಗಿ ಮಾತಾಡುವ ಮೂರ್ಖರಿಗೆ ಏನೆಂದು ಕರೆಯಬೇಕು ಎಂಬುದು ನನಗೆ ತಿಳಿಯದೆ ಸುಮ್ಮನಾದೆ. ಆಂತರಿಕವಾಗಿ ಜಾತಿಯ ಒಳಮನಸನ್ನಿಟ್ಟು ಬಾಹ್ಯವಾಗಿ ಸಾಮಾಜಿಕ ಸಾಮರಸ್ಯದ ಬಗ್ಗೆ ಗೆಳೆತನ ಇತ್ಯಾದಿ ಸಮಾನತೆ ವಿಷಯಗಳನ್ನು ಕುರಿತು ಮಾತಾಡುವ ಜನರು ಇರುವುದರಿಂದಲೇ ಜಾತಿ ನಿಂದನೆ, ಅಸ್ಪೃಶ್ಯತೆಯ ಆಚರಣೆ ಇನ್ನೂ ಜೀವಂತವಾಗಿ ಉಳಿದುಕೊಂಡಿರುವುದು. ❑

ಅನುಭವದ ಗೂಡಿನಿಂದ

ಹಸಿವು - ಹಸಿವು - ಹಸಿವು

○ ಡಾ॥ ಸಣ್ಣರಾಮ

ಸ್ವಾತಂತ್ರ್ಯೋತ್ತರ ಆರಂಭದ ದಿನಗಳಲ್ಲಿ ಕರ್ನಾಟಕದ- ಲಂಬಾಣಿ ಜನಾಂಗದ ಸ್ಥಿತಿ-ಗತಿ ಚಿಂತಾಜನಕವಾಗಿತ್ತು. ಮೂಲತಃ ಅಲೆಮಾರಿಗಳಾಗಿದ್ದ ಅವರು ಅಲ್ಲಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ನೆಲೆಯೂರಲು ಪ್ರಯತ್ನಿಸುತ್ತಿದ್ದ ಕಾಲವದು. ತಾವು ವಸತಿ ಮಾಡಿದ ಸುತ್ತಮುತ್ತಲ ಗ್ರಾಮಗಳಲ್ಲಿ ಕೂಲಿಮಾಡುವುದು, ಕಾಡಿನಿಂದ ಸೌದೆಯನ್ನು ತಂದು ತಲೆಯ ಮೇಲೆ ಹೊತ್ತು ಮಾರುವುದು ಅವರ ವೃತ್ತಿಯಾಗಿತ್ತು. ಬಂದ ಅಲ್ಪ ಆದಾಯದಲ್ಲಿ ಅಂಬಲಿಯನ್ನೋ, ಗಂಜಿಯನ್ನೋ ಕುಡಿದು ಜೀವನ ಮಾಡುತ್ತಿದ್ದರು.

ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕಿನ, ಆನವಟ್ಟಿ ಗ್ರಾಮದ ಪಕ್ಕದಲ್ಲಿರುವ ಕೋಟಿಪುರ ಒಂದು ಚಿಕ್ಕ ತಾಂಡ. ಐವತ್ತು ವರ್ಷಗಳ ಹಿಂದೆ ಈ ತಾಂಡದಲ್ಲಿ ನಲವತ್ತು ಕುಟುಂಬಗಳು ವಾಸಿಸುತ್ತಿದ್ದವು. ಗಂಡಸರು ಸುತ್ತಮುತ್ತಲ ಗ್ರಾಮಗಳಲ್ಲಿ ಜೀತನೋ, ಕೂಲಿನೋ ಮಾಡಿದರೆ ಹೆಂಗಸರು ಕಾಡಿನಿಂದ ಸೌದೆಯನ್ನು ತಲೆಮೇಲೆ ಹೊತ್ತು ತಂದು ಆನವಟ್ಟಿಯಲ್ಲಿ ಮಾರುತ್ತಿದ್ದರು. ಬೆರಳೆಣಿಕೆಯಷ್ಟು ಕುಟುಂಬಗಳು ಕೋರಿಗೆ ಜಮೀನನ್ನು ಮಾಡುತ್ತಿದ್ದರು. ಕೃಷಿಯಲ್ಲಿ ಪಳಗಿರದ ಈ ಜನರು ವರ್ಷವೆಲ್ಲಾ ಕಷ್ಟಪಟ್ಟು ದುಡಿದು ಬೆಳೆದಿದ್ದೆಲ್ಲಾ ಭೂ ಮಾಲಿಕರಿಗೆ ಕೊಟ್ಟು ಬರಿಗೈಯಲ್ಲಿ ಬಂದ ಸಂದರ್ಭಗಳೂ ಉಂಟು. ಮತ್ತೆ ಕೆಲವರಿಗೆ ತಿಂಗಳೊಪ್ಪತ್ತಿನ ಗಂಜಿಗೆ ಸಾಕಾಗುವಷ್ಟು ಉಳಿದರೆ ಹೆಚ್ಚು.

ಹೊಳೆಯ ಲಿಂಗೇಶ್ವರನ ಜಾತ್ರೆ ಎಂದರೆ ಕೋಟಿಪುರದ ಹೆಂಗಸರಿಗೆ ಎಲ್ಲಿಲ್ಲದ ಹರ್ಷ. ಹೊಳೆಯ ಲಿಂಗೇಶ್ವರ ಜಾತ್ರೆಯು ಸಂಕ್ರಮಣದಿಂದ ಶಿವಾರಾತ್ರಿಯವರೆಗೂ ಒಂದು ತಿಂಗಳವರೆಗೆ ನಡೆಯುತ್ತಿತ್ತು. ಈ ಜಾತ್ರೆಯು ಕೋಟಿಪುರದಿಂದ ಸುಮಾರು ಆರು ಮೈಲು ದೂರದಲ್ಲಿದೆ. ತಾಂಡದ ಹೆಂಗಸರು ಬೆಳಗಿನ ಐದು ಗಂಟೆಗೆ ಎದ್ದು ಸೌದೆ ಮಾರಲು ಜಾತ್ರೆಗೆ ಹೋದರೆ ಅವರು ಮರಳುತ್ತಿದ್ದುದು ರಾತ್ರಿ ಎಂಟು ಗಂಟೆಗೆ. ದಿನ ನಿತ್ಯ ಮಾರುವುದಕ್ಕಿಂತ ಜಾತ್ರೆಯಲ್ಲಿ ಸ್ವಲ್ಪ ಹೆಚ್ಚು ದುಡ್ಡಿಗೆ ಸೌದೆ ಮಾರುತ್ತಿದ್ದುದೇ ಅವರಿಗೆ ಸಂತೋಷ. ಆದ್ದರಿಂದಲೇ ನಮ್ಮ ತಾಂಡದ ಮಹಿಳೆಯರಿಗೆ ಹೊಳೆಯಲಿಂಗೇಶ್ವರ ಜಾತ್ರೆ ಎಂದರೆ ರೈತರಿಗೆ ಸುಗ್ಗಿಕಾಲವಿದ್ದಂತೆ. ಬೆಳಗಿನ ಜಾವ ಐದುಗಂಟೆಗೆ ಹೋದವರು ಎಂಟುಗಂಟೆ ರಾತ್ರಿ ಹಿಂದುರಿದಾಗ ಮೈ-ಕೈ ತುಂಬಾ ದೂಳು, ಕೊಡಲಿ-ಮಚ್ಚು ತಪ್ಪಿ ಕೈ-ಕಾಲಿಗೆ ಬಿದ್ದು ಆದ ಗಾಯಕ್ಕೆ ಸುಣ್ಣ ಮೆತ್ತಿಕೊಂಡಿರುತ್ತಿದ್ದ ದೃಶ್ಯ ಇಂದು ಕಣ್ಣುಮುಂದೆ ಬಂದಾಗ ಭಯವಾಗುತ್ತದೆ.

ನಮ್ಮದು ಅವಿಭಕ್ತ ಕುಟುಂಬ. ಅತ್ಯಂತ ಬಡಕುಟುಂಬವಾಗಿತ್ತು. ಸಣ್ಣವರು ದೊಡ್ಡವರು ಸೇರಿ ಇಪ್ಪತ್ತೆಂಟು ಜನರು ಇದ್ದೆವು. ನಮ್ಮ ಕುಟುಂಬದಲ್ಲಿ ಎಂಟು-ಹತ್ತು ಜನರು ಸತತವಾಗಿ ಕೂಲಿಮಾಡುತ್ತಿದ್ದರು. ಶನಿವಾರ ಸಂತೆಯ ದಿನ ಅವರಿಗೆ ರಜೆ, ಅನೇಕ ವೇಳೆ ವಾರಕ್ಕೆ ಎಂಟು ದಿನವೂ ದುಡಿಯುತ್ತಿದ್ದಿದ್ದೂ ಉಂಟು. ನಮ್ಮ ಅಪ್ಪ ಆನವಟ್ಟಿಯ ಶ್ರೀಮಂತ ಶೆಟ್ಟರ ಮನೆಯಲ್ಲಿ ಜೀತಕಿದ್ದ. ವರ್ಷಕ್ಕೆ ಮುನ್ನೂರ ಅರವತ್ತು ದಿನವು ಅವನು ದುಡಿಯಬೇಕಾಗಿತ್ತು. ಅನಾರೋಗ್ಯ ಮತ್ತಿತರ ಕಾರಣಗಳಿಂದ ಹೋಗಲಾಗದ ದಿನ ಅವನ ಬದಲು ಕುಟುಂಬದ ಯಾರಾದರೂ ಹೋಗಬೇಕಾಗಿತ್ತು. ಇಷ್ಟೆಲ್ಲಾ ಇದ್ದರೂ ಸುಮಾರು ಇಪ್ಪತ್ತೆಂಟು ವರ್ಷ ಅದೇ ಮನೆಯಲ್ಲಿ ಜೀತ ಮಾಡಿದ ಇತಿಹಾಸ ಅವನದು.

ಕುಟುಂಬದ ಬಹುಪಾಲು ಜನರು ನಿತ್ಯ ದುಡಿದರೂ ತಿನ್ನುವುದಕ್ಕೆ ಹೊಟ್ಟೆತುಂಬ ಸಿಗುತ್ತಿರಲಿಲ್ಲ. ದಿನಕ್ಕೆ ಎರಡೇ ಊಟ. ಬೆಳಗ್ಗೆ ಒಂದೊಂದು ರಾಗಿರೊಟ್ಟಿ, ಒಂದು ಬೊಗಸೆಯಷ್ಟು ರಾಗಿ ಅಂಬುಲಿ. ರಾತ್ರಿಯೂ ಅಷ್ಟೇ. ನನಗೆ ಇವತ್ತಿಗೆ ಆಶ್ಚರ್ಯವಾಗುತ್ತಿರುವ ಒಂದು ಸಂಗತಿಯೆಂದರೆ ನಮ್ಮ ಮನೆಯವರು ಎಂದೂ ತಾವು ಬಡವರು, ನಿರ್ಗತಿಕರೆಂದು ಬಹಿರಂಗವಾಗಿ ಹೇಳಿಕೊಳ್ಳದಿರುವುದು. ಅಷ್ಟೆ ಅಲ್ಲ ಅವರು ತಮಗೆ ತಾವು ಅಂದುಕೊಳ್ಳದಿರುವುದು. ಇದ್ದುದ್ದನ್ನೇ ಮನಃತೃಪ್ತಿಯಿಂದ ಉಂಡು ನೆಮ್ಮದಿಯಿಂದ ಸಂತೋಷದಿಂದ ಇರುತ್ತಿದ್ದರು. ಯಾರಾದರೂ ಅವರ ಬಡಸ್ಥಿತಿಗೆ ಮರುಗಿದರೆ ಅವರಾಡುತ್ತಿದ್ದದ್ದು 'ನಮ್ಮ ರಟ್ಟೆ ಗಟ್ಟಿಯಾಗಿರುವರ‍್ಗೆ ದುಡ್ದಿ ತಿನೇವಿ ಬಿಡಿ ಸಾಮಿ' ಎಂದು. ಆದರೆ ಆ ಬಡತನ ಹೊಡ್ತ ಓದುತ್ತಿದ್ದ ನಮ್ಮಂತ ಹುಡುಗರಿಗೆ ಬೀಳ್ತಾ ಇತ್ತು. ಹೈಸ್ಕೂಲಿಗೆ ಆನವಟ್ಟಿಯ ಶಾಲೆಗೆ ಸೇರಿದಾಗ ನಮ್ಮ ಅಜ್ಜಿ ದಿನವೂ ನನಗೆ ಹತ್ತುಪೈಸೆ ಕೊಡುತ್ತಿದ್ದಳು. ಆ ಹತ್ತು

ಪೈಸೆಗೆ ಒಂದು ಚಾಕಲೇಟು ಕೊಂಡು ಬಾಯೊಳಗಿಟ್ಟು ಕೊಂಡರೆ ಅದೇ ಮಧ್ಯಾಹ್ನದ ಊಟ.

ಬಡತನದ ಬೇಗೆ ಇನ್ನೂ ತೀವ್ರವಾಗಿ ತಟ್ಟಿದ್ದು ನಾನು ಎಸ್.ಎಸ್.ಎಲ್.ಸಿ ಪಾಸಾಗಿ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿಗೆ ಪಿ.ಯು.ಸಿ.ಗೆ ಬಂದು ಸೇರಿದ ಮೇಲೆ. ಶಿವಮೊಗ್ಗದಲ್ಲಿ ಆಗ ಸರ್ಕಾರಿ ಹಾಸ್ಟೇಲುಗಳಿರಲಿಲ್ಲ. ಖಾಸಗಿ ಹಾಸ್ಟೇಲುಗಳಿಗೆ ಹಣಕಟ್ಟಲು ಸಾಧ್ಯವಿರಲಿಲ್ಲ. ಆಗ ನಮ್ಮಪ್ಪನ ಒಂದು ವರ್ಷದ ಜೀತಕ್ಕೆ ನಾಲ್ಕುನೂರು ರೂಪಾಯಿ ಕೊಡುತ್ತಿದ್ದರು. ಅದೇ ವೇಳೆಗೆ ನಮ್ಮ ಕುಟುಂಬದವರು ಒಡೆದು ಬೇರೆ ಬೇರೆಯಾಗಿದ್ದರು. ನಮ್ಮಪ್ಪನ ಜೀತದ ನಾಲ್ಕು ನೂರು ರೂಪಾಯಿ ಮತ್ತು ನಮ್ಮ ಅಮ್ಮನ ಕೂಲಿಯಲ್ಲಿ ನನ್ನ ಓದು, ಉಳಿದ ಇಬ್ಬರು ತಮ್ಮಂದಿರು ಮತ್ತು ಇಬ್ಬರು ತಂಗಿಯರ ಹೊಟ್ಟೆಹೊರೆಯಬೇಕಾಗಿತ್ತು. ಇರುವ ಅಲ್ಪ ಆದಾಯದಲ್ಲಿ ನಮ್ಮಪ್ಪ-ಅಮ್ಮರಿಗೆ ಜನ್ಮಜಾತವಾಗಿ ಅಂಟಿಕೊಂಡು ಬಂದ ಕುಡಿತದ ಚಟವೂ ತೀರಬೇಕಾಗಿತ್ತು.

ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿಗೆ ಪಿ.ಯು.ಸಿ ಓದಲು ಸೇರಿಕೊಂಡ ಮೇಲೆ ನಮ್ಮ ಕಡೆಯವರೇ ಆದ ಮೂವರು ಗೆಳೆಯರೊಂದಿಗೆ ರೂಂ ಮಾಡಿಕೊಂಡಿದ್ದೆ. ಗೆಳೆಯರೂ ಬಡವರೇ. ಆದರೂ ಅವರಿಗೆ ದಿನದ ಖರ್ಚಿಗೆಂದು ಒಂದೆರಡು ರೂಪಾಯಿಯಾದರೂ ಇರುತ್ತಿತ್ತು. ಆದರೆ ನನಗೆ ದಿನಕ್ಕಿರಲಿ ತಿಂಗಳಿಗೆ ಒಂದೆರಡು ರೂಪಾಯಿ ಸಿಗುವುದು ಕಷ್ಟವಾಗಿತ್ತು. ನಾವು ನಾಲ್ವರು ಉಣ್ಣಲು ಪ್ರತಿವಾರಕ್ಕೆ ಒಬ್ಬರು ಹತ್ತು ಕೆ.ಜಿ. ಅಕ್ಕಿಯನ್ನು ಮನೆಯಿಂದ ತರಿಸುತ್ತಿದ್ದೆವು. ಮನೆಯಿಂದ ಬಂದ ಅಕ್ಕಿ ಹತ್ತು ಕೆ.ಜಿ.ಗಿಂತ ಹೆಚ್ಚಿದ್ದರೆ ಹೆಚ್ಚು ಕಡಿಮೆಯಿದ್ದರೆ ಕಡಿಮೆ ತಿನ್ನುತ್ತಿದ್ದೆವು. ನಾಲ್ಕು ಜನರು ಹದಿನೇಳು ಹದಿನೆಂಟು ವರ್ಷದ ತಿಂದುಂಡು ಬೆಳೆಯ ಬೇಕಾದ ಪ್ರಾಯಸ್ಥರು. ಬೆಳಗ್ಗೆ ಅನ್ನ ಮಾಡಿ ಹುಣಸೆಹಣ್ಣಿನ ಹುಳಿ ಒಂದು ನಿರುಳ್ಳಿ ಕೊಚ್ಚಿಹಾಕಿ ಅನ್ನವನ್ನು ಕಿವುಚಿ ಹಿಡಿಗಾತ್ರದ ನಾಲ್ಕು ಉಂಡೆಕಟ್ಟಿ ಒಬ್ಬೊಬ್ಬರು ಒಂದೊಂದು ಉಂಡೆಯನ್ನು ತಿಂದರೆ ಬೆಳಗಿನ ಊಟ ಮುಗಿಯಿತು. ಮತ್ತೆ ರಾತ್ರಿ ಎಂಟುಗಂಟೆಗೆ ಮತ್ತೊಂದು ಅನ್ನದ ಉಂಡೆ ಬಿಟ್ಟರೆ ಮಧ್ಯದಲ್ಲಿ ತಣ್ಣೀರೆ ಗತಿ. ದಿನಕ್ಕೆ ಒಂದೆರಡು ರೂಪಾಯಿ ಖರ್ಚಿಗೆ ಇಟ್ಕೊಂಡಿರುತ್ತಿದ್ದ ಸಹವಾಸಿಗಳು ಕಾಫಿ ಕುಡಿದು ತಿಂಡಿ ತಿಂದು ಲವಲವಿಕೆಯಿಂದಿರುತ್ತಿದ್ದರು. ಆದರೆ ನನ್ನ ಪಾಡು.

ಬೆಳಗ್ಗೆ ಎಂಟುಗಂಟೆಗೆ ತಿಂದ ಅನ್ನದ ಮುದ್ದೆಯಿಂದ ಮಧ್ಯಾಹ್ನದವರೆಗೆ ಹೇಗೋ ಕಾಲ ಹಾಕುತ್ತಿದ್ದೆ. ಮಧ್ಯಾಹ್ನದ ಮೇಲೆ ಅಸಾಧ್ಯ ಹಸಿವಾಗುತ್ತಿತ್ತು. ಕಾಲೇಜಿನಲ್ಲಿ ಕುಳಿತು ಪಾಠ ಕೇಳಲಾಗದೆ ರೂಮಿಗೆ ಬಂದು ಒಂದು ಚಂಬು ನೀರನ್ನು ಗಟಗಟ ಕುಡಿದು ಮುದುಡಿ ಮಲಗಿಬಿಡುತ್ತಿದ್ದೆ. ಹಸಿವಿನ ಬಾಧೆ ತಾಳದೆ ಮನೆಗೆ ಓಡಿಹೋಗಿಬಿಡಬೇಕು ಅನ್ನಿಸುತ್ತಿತ್ತು. ಆದರೆ ಮನೆಗೆ ಹೋದರೆ ಪರಸ್ಥಿತಿ ಇದಕ್ಕಿಂತ ಉತ್ತಮವೇನಲ್ಲ ಎಂಬುವುದು ಗೊತ್ತು. ಕೊನೆಗೆ ಹಸಿವಿನಿಂದ ಸತ್ತರು ಪರವಾಗಿಲ್ಲ ಓದಲೇಬೇಕೆಂದು ದೃಢ ನಿಶ್ಚಯ ಮಾಡಿದೆ.

ಒಂದು ದಿನ. ಅದೊಂದು ದಿನ. ಜೀವನದಲ್ಲಿ ಮರೆಯಲಾಗದ ಅನುಭವ ನೀಡಿದ ದಿನ. ಇಡೀ ಬದುಕಿನ ಮೇಲೆ ಪರಿಣಾಮ ಬೀರಿ ಕಾಠಿಣ್ಯವನ್ನು ಕಳೆದು ಮಾನವೀಯಗೊಳಿಸಿದ ದಿನ. ಅಂದು ಸಂಜೆ ಸಹವಾಸಿ ಗೆಳೆಯ ಮನೆಯಿಂದ ಅಕ್ಕಿ ಬಸ್ಸಿಗೆ ಕಳುಹಿಸಿಕೊಡುವರೆಂದು

ಬೆಳಗ್ಗೆ ಅನ್ನ ಮಾಡಿ ಹುಣಸೆಹಣ್ಣಿನ ಹುಳಿ ಒಂದು ನಿರುಳ್ಳಿ ಕೊಚ್ಚಿಹಾಕಿ ಅನ್ನವನ್ನು ಕಿವುಚಿ ಹಿಡಿಗಾತ್ರದ ನಾಲ್ಕು ಉಂಡೆಕಟ್ಟಿ ಒಬ್ಬೊಬ್ಬರು ಒಂದೊಂದು ಉಂಡೆಯನ್ನು ತಿಂದರೆ ಬೆಳಗಿನ ಊಟ ಮುಗಿಯಿತು. ಮತ್ತೆ ರಾತ್ರಿ ಎಂಟು ಗಂಟೆಗೆ ಮತ್ತೊಂದು ಅನ್ನದ ಉಂಡೆ ಬಿಟ್ಟರೆ ಮಧ್ಯದಲ್ಲಿ ತಣ್ಣೀರೆ ಗತಿ.

ಕಾದು ಕಾದು ಬರಿಗೈಯಲ್ಲಿ ಹಿಂದಿರುಗಿದ. ಹಿಂದೆಂದೂ ಹೀಗಾಗಿರಲಿಲ್ಲ. ರೂಮಿನಲ್ಲಿ ಒಂದು ಅಕ್ಕಿಯ ಕಾಳೂ ಇರಲಿಲ್ಲ. ಗೆಳೆಯ ಅಕ್ಕಿ ತರುತ್ತಾನೆ, ಹಿಡಿಯಷ್ಟಾದರೂ ಹುಣಸೆ ಹಣ್ಣಿನ ರಸದಲ್ಲಿ ಕಿವುಚಿದ ಸಿಗುವುದೆಂದು ಹಾಸಿಗೆಯ ಮೇಲೆ ಮೈತುಂಬ ಬೆಡ್‌ಸಿಟ್ ಹೊಚ್ಚಿಕೊಂಡು ಎರಡು ಕಣ್ಣುಗಳನ್ನು ಬಿಟ್ಕೊಂಡು ಪಿಳಿ ಪಿಳಿ ನೋಡ್ತಾ ಮುದುಡಿ ಮಲಗಿದ್ದ ನಾನು ಗೆಳೆಯನ ಬರಿಗೈ ಕಂಡು ಮುಖದ ಮೇಲೆ ಬೆಡ್‌ಸೀಟ್ ಎಳೆದುಕೊಂಡೆ.

ಗೆಳೆಯರು ಒಬ್ಬೊಬ್ಬರು ಒಂದೊಂದು ನೆಪ ಹೇಳಿ ಜಾರಿಹೋದರು. ಅವರು ಹೋಟೆಲಿಗೆ ತಿನ್ನಲು ಹೋಗಿದ್ದಾರೆಂದು ನನಗೆ ಗೊತ್ತು. ಆದರೆ ನಾನು, ಹೊಟ್ಟೆಯಲ್ಲಿ ತಾಳಲಾರದ ಸಂಕಟ. ಎದ್ದು ಹೊಟ್ಟೆತುಂಬಾ ನೀರು ಕುಡಿದೆ. ತಣ್ಣೀರು ಹೊಟ್ಟೆಯಲ್ಲಿ ಉರಿಯುತ್ತಿರುವ ಬೆಂಕಿಯನ್ನು ಆರಿಸಲಿಲ್ಲ. ಹೊಟ್ಟೆಯ ಬೆಂಕಿಗೆ ನಿದ್ರೆ ಹತ್ತಿರ ಸುಳಿಯಲಿಲ್ಲ. ಇಡೀ ದೇಹದ ಕಣ ಕಣವು ಕೊಚ್ಚಿದಂತೆ ನೋವು. ಬೆಳಗಾಯಿತು, ನನ್ನ ಪಾಲಿಗೆ ಹಗಲಿಗೂ, ಕತ್ತಲಿಗೂ ಏನೂ ವ್ಯತ್ಯಾಸವಿರಲಿಲ್ಲ. ಹಾಸಿಗೆ ಬಿಟ್ಟು ಮೇಲೇಳುವ ಯಾವ ಅಗತ್ಯವು ನನಗೆ ಕಾಣಲಿಲ್ಲ. ಕಾಲೇಜಿಗೆ ಹೋಗುವುದಂತೂ ದೂರದ ಮಾತೇ ಸರಿ. ನನ್ನ ಸಹ ರೂಮುವಾಸಿಗಳು ಅವರವರ ಕೆಲಸದ ಕಡೆಗೆ ಮುಖ ಮಾಡಿದ್ದರು. ಸುಮಾರು ಹನ್ನೊಂದು ಗಂಟೆಯ ಸಮಯ. ಇಡೀ ಕಟ್ಟಡವೇ ನಿಶ್ಶಬ್ದವಾಗಿತ್ತು. ಮೆಲ್ಲನೆದ್ದು ಕುಳಿತೆ. ನೀರು ಕುಡಿಯ ಬೇಕೆನಿಸಿತು. ಎದ್ದು ನಿಲ್ಲುವುದಕ್ಕೆ ಆಗದೆ ತೆವಳುತ್ತ ನೀರಿನ ಕೊಡದವರೆಗೆ ಹೋದೆ. ಚೆಂಬು ತುಂಬ ನೀರು ಕುಡಿದೆ. ಶಕ್ತಿ ಬಂದಂತಾಗಿ ಎದ್ದು ನಿಂತೆ. ಒಂದಕ್ಕೆ ಹೋಗಬೇಕೆನಿಸಿತು. ನಿಧಾನಕ್ಕೆ ಕಕ್ಕಸ್ಸಿನ ಕಡೆಗೆ ಹೆಜ್ಜೆ ಹಾಕಿದೆ. ಕೈಕಾಲು ಥರಥರ ನಡುಗುತ್ತಿದ್ದವು. ಕಕ್ಕಸ್ಸಿನ ಬಾಗಿಲು ತೆಗೆಯಲು ಕೈಚಾಚಿದವನು ಕೆಳಗೆ ನೋಡಿ ಥಟ್ಟನೆ ನಿಂತೆ. ಕಣ್ಣುಜ್ಜಿ ಮತ್ತೆ ನೋಡಿದೆ. ಹೌದು ಅದು ಮತ್ತೇನೂ ಅಲ್ಲ. ಒಂದು ರೂಪಾಯಿಯ



ನೋಟು. ನೀರಿನಲ್ಲಿ ಒದ್ದೆಯಾಗಿ ಬಿದ್ದಿತ್ತು. ಸುತ್ತಲು ನೋಡಿದೆ, ಯಾರೂ ಕಾಣಲಿಲ್ಲ. ಎತ್ತಿಕೊಂಡು ಒಂದು ಪುಸ್ತಕದಲ್ಲಿಟ್ಟೆ. ಸ್ವಲ್ಪ ಹೊತ್ತಿಗೆ ಗರಿ ಗರಿಯಾಯಿತು. ಹೋಟೆಲಿನ ಕಡೆಗೆ ಓಡಿದೆ.

ನನ್ನ ಬದುಕಿನಲ್ಲಿ ನಡೆದ ಮತ್ತೊಂದು ಘಟನೆ. ಸಹ್ಯಾದ್ರಿ ಕಾಲೇಜಿನಲ್ಲಿ ಪಿ.ಯು.ಸಿ ಪಾಸಾದ ಮೇಲೆ ಪದವಿಗೆ ಸೇರಿದೆ. ವಾಸಸ್ಥಳ ರೂಮನ್ನು ಬದಲಾಯಿಸಿದೆ. ವಿದ್ಯಾನಗರದಲ್ಲಿ ಗಣೇಶ ಭವನ ಹೋಟೇಲಿನ ಮೇಲೆ ರೂಮು ಮಾಡಿದೆ. ಆ ರೂಮಿನಲ್ಲಿಯೂ ನಮ್ಮ ಕಡೆಯ ಬಡವನೇ ಆದ ಗೆಳೆಯ ರೂಮುವಾಸಿ ಆದ. ನಮ್ಮಿಬ್ಬರಿಗೆ ಒಂದೇ ಷರಟು, ಪ್ಯಾಂಟು ಎರಡಿದ್ದವು. ಅವನು ಕಾಲೇಜು ಮುಗಿಸಿಕೊಂಡು ಬಂದ ಮೇಲೆ ನಾನು ಕಾಲೇಜಿಗೆ ಹೋಗುತ್ತಿದ್ದೆ. ನಮ್ಮ ವ್ಯವಸ್ಥೆಗೆ ಕಾಲೇಜಿನ ವೇಳಾಪಟ್ಟಿಯು ಸಹಕಾರಿಯಾಗಿತ್ತು. ಅವನು ದ್ವಿತೀಯ ಪದವಿಯಲ್ಲಿ ಓದುತ್ತಿದ್ದರಿಂದ ಅವನಿಗೆ ಬೆಳಗ್ಗೆ ತರಗತಿಗಳು ನಡೆಯುತ್ತಿದ್ದವು. ಮೊದಲನೆ ವರ್ಷದ ಪದವಿಯಲ್ಲಿದ್ದ ನನಗೆ ತರಗತಿ ಮಧ್ಯಾಹ್ನವಿತ್ತು.

ಒಮ್ಮೆ ನನ್ನ ಗೆಳೆಯನ ಕ್ಲಾಸ್‌ಮೆಟ್ಟು ಹಾಸ್ಟೇಲಿನಲ್ಲಿದ್ದವನು ಗೆಳೆಯನೊಂದಿಗೆ ಹರಟೆ ಹೊಡೆದು ಹೋಗಲು ಬಂದಿದ್ದ. ಅದು ಇದು ಮಾತನಾಡಿದ ಮೇಲೆ ಕ್ಲಾಸ್‌ಮೆಟ್ಟು ಹೊರಡಲನುವಾದ. ಅವನು ಸಹಜವಾಗಿ ಬನ್ನಿ ಕಾಫಿ ಕುಡಿಯೋಣವೆಂದು ಕರೆದ. ನಾವಿಬ್ಬರು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ನಾವು ಸುಮ್ಮನಿರುವುದನ್ನು ನೋಡಿ ಅವನು ಪರ್ವಾಗಿಲ್ಲ ಬನ್ನಿ ನಿಮಗೆ ಟೈಂ ವೇಸ್ಟಾಗುತ್ತದೆ ಅಂದ್ರೆ ಕೆಳಗಡೆ ಇದೆಯಲ್ಲ ಅಲ್ಲೇ ಕುಡಿಯೋಣ ಬನ್ನಿ ಎಂದು ಒತ್ತಾಯಿಸಿದ. ಅವನಿಗೆ ನಮ್ಮ ಸಮಸ್ಯೆ ಅದಲ್ಲವೆಂದು ಗೊತ್ತಿಲ್ಲ. ನಮಗೂ ಕಾಫಿ ಕುಡಿಯೋ ಆಸೆ ಆದರೆ ಇಬ್ಬರೂ ಒಮ್ಮಲೆ ಹೋಟೇಲಿಗೆ ಹೋಗುವಂತಿರಲಿಲ್ಲ. ಅವರ ಒತ್ತಾಯವನ್ನು ಮತ್ತೊಮ್ಮೆ ತಿರಸ್ಕರಿಸಿದೆವು. ಆದರೆ ಬಂದ ಅತಿಥಿ ಗೆಳೆಯ ಬಿಡುವಂತೆ ಕಾಣಲಿಲ್ಲ. ಅಸಾಹಯಕನಾಗಿ ಗೆಳೆಯ ನನ್ನ ಕಡೆನೋಡಿದ. ತಕ್ಷಣ ನನಗೆ ಒಂದು ಉಪಾಯ ಹೊಳೆಯಿತು. 'ಕಾಫಿ ಕುಡಿಯಲೇ ಬೇಕೆನ್ನುವುದಾದರೆ ಇಲ್ಲಿಗೆ ತರಲು ಹೇಳಿಬಿಡುತ್ತೇನೆ, ನೀವು ಕುತ್ಕೊಳ್ರಿ' -ಎಂದು ಅವರನ್ನು ಮತ್ತೆ ಕುಳ್ಳಿರಿಸಿದೆ. ಅತಿಥಿ ಗೆಳೆಯ ಕುಳಿತುಕೊಂಡ. ನಾನು ನನ್ನ ರೂಮೆಟ್ ಗೆಳೆಯನ ಕಡೆ ನೋಡಿ 'ಉಸ್' ಎಂದು ಉಸಿರುಬಿಟ್ಟಾಗ ಎದೆಯ ಮೇಲಿನ ಭಾರ ಇಳಿದಂತಾಯಿತು.

ಈ ಎರಡು ದಿನಗಳು ಸದಾ ನನ್ನನ್ನು ಎಚ್ಚರಿಸುತ್ತಾ ಬದುಕಿನ ಮಾರ್ಗವನ್ನು ತೋರುತ್ತಾ ಬಂದಿವೆ. ಬದುಕಿನಲ್ಲಿ ಮರೆಯಲಾಗದ ವೇದನೆಯನ್ನು ಪ್ರಕಟಿಸುವ ಸಂವಾದದ ಕಾರ್ಯ ನಿಜಕ್ಕೂ ಶ್ಲಾಘನೀಯ. ಸಂಕಟ ಪಟ್ಟವರಿಂದ ಸಂಕಟಕ್ಕೆ ಸ್ಪಂದಿಸುವುದು ಸಾಧ್ಯ. ನೊಂದವರ ದನಿಯಾಗಿ ಹೊಮ್ಮಿರುವ ಸಂವಾದ ಚಿರಾಯುವಾಗಲಿ ಎಂಬುದೇ ನನ್ನ ಹಾರೈಕೆ. ❑

ಚಾಪೆಗೆ ಅಂಟಿದ ಅಸ್ಪೃಶ್ಯತೆ

○ ಸುಭಾಷ್ ಮಾಡ್ರಹಳ್ಳಿ



ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಮಾಡ್ರಹಳ್ಳಿಯಲ್ಲಿ ಸುಮಾರು ೨೫೦ ಕುಟುಂಬಗಳಿವೆ. ಲಿಂಗಾಯತ್ತರೆ ಬಹುಸಂಖ್ಯಾತರು, ಪರಿಶಿಷ್ಟ ಜಾತಿ ಸುಮಾರು ೭೦ ಕುಟುಂಬಗಳಿವೆ. ಗಾಣಿಗರು ೨೫, ಕುರುಬರು ೧೦ ಕುಟುಂಬಗಳಿರುವ ಸಣ್ಣ ಗ್ರಾಮ. ಗುಂಡ್ಲುಪೇಟೆ ಮತ್ತು ಮೈಸೂರು ರಾಜ್ಯ ಹೆದ್ದಾರಿಯಲ್ಲಿ ಗುಂಡ್ಲುಪೇಟೆಗೆ ನಾಲ್ಕು ಕಿ.ಮೀ. ಅಂತರದಲ್ಲಿದೆ.

ಪ್ರಾಥಮಿಕ ವಿದ್ಯಾಭ್ಯಾಸ ಸ್ವಗ್ರಾಮದಲ್ಲೆ ಮುಗಿಸಿ, ಗುಂಡ್ಲುಪೇಟೆಯಲ್ಲಿ ೫ನೇ ತರಗತಿಯಿಂದ ಪಿಯುಸಿವರೆಗೂ ವ್ಯಾಸಂಗ ಮಾಡಿದೆ. ಆನಂತರ ಪದವಿ ಮತ್ತು ಭೂಗೋಳ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕ್ರಮವಾಗಿ ಮಹಾರಾಜ ಕಾಲೇಜು ಮತ್ತು ಮಾನಸ ಗಂಗೋತ್ರಿಯಲ್ಲಿ ನಡೆಯಿತು.

ನಮ್ಮದು ಕಡುಬಡತನದ ಕುಟುಂಬ. ಚೆಲುವ ದಾಸಯ್ಯ ಮತ್ತು ಪುಟ್ಟಮಾದಮ್ಮ ದಂಪತಿಗಳಿಗೆ ನಾಲ್ಕು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳು. ನಾನೇ ಕೊನೆಯ ಮಗ. ಆದ್ದರಿಂದಲೋ ಏನೋ ನನಗೆ ಓದುವ ಅವಕಾಶ ದೊರೆಯಿತು. ಇನ್ನುಳಿದ ನನ್ನ ಅಣ್ಣಂದಿರಿಗೆ ಜೀತಗಾರಿಕೆಯಿಂದ ವಿದ್ಯಾಭ್ಯಾಸ ವಂಚಿತರು. ಅವರ ಶ್ರಮ ಮತ್ತು ಅಕ್ಕರೆಯಿಂದ ಓದು ನನಗೆ ಲಭಿಸಿತು.

ನಮ್ಮೂರಿನಲ್ಲಿ ಮಾರಿಗುಡಿ, ಮಹದೇಶ್ವರನ ದೇವಸ್ಥಾನ ಮತ್ತು ಶರಣ ವೀರಬಸಪ್ಪ ದೇವಸ್ಥಾನಗಳಿವೆ. ವರ್ಷಕ್ಕೊಮ್ಮೆ ಮಾರಿಹಬ್ಬ ದೀಪಾವಳಿ ಸಮಯದಲ್ಲಿ ನಡೆಯುತ್ತಿದೆ. ಆ ಸಮಯದಲ್ಲಿ ಮಾತ್ರ ಊರು ಶೃಂಗಾರಗೊಳ್ಳುತ್ತದೆ. ಒಳಚರಂಡಿ ವ್ಯವಸ್ಥೆ ಆಗುವುದಕ್ಕೆ ಮೊದಲು ಬೀದಿಗಳು ಗಬ್ಬು ನಾರುತ್ತಿದ್ದವು. ಕೊಚ್ಚೆ ಗುಂಡಿಗಳಿಂದ ತುಂಬಿ ತುಳುಕುತ್ತಿದ್ದವು. ಸ್ವಚ್ಛ ಮಾಡಿ, ಚಪ್ಪರ ಹಾಕಿ, ಬೀದಿಗುಡಿಸಿ ಎಲ್ಲ ಕೆಲಸಗಳು ದಲಿತರದೆ, ತಮಟೆ ಹೊಡೆಯುವುದು, ಎಲ್ಲವೂ ದಲಿತರೆ ಮಾಡಬೇಕಾಗಿತ್ತು. ಆದರೆ ದೇವಸ್ಥಾನಗಳಿಗೆ ಪ್ರವೇಶ ಮಾತ್ರ ದಲಿತರಿಗೆ ನಿಷೇಧ. ಮೆರವಣಿಗೆ ಹೊರುವ ಆಗಿಲ್ಲ ಹಾಗೂ ದಲಿತರು ಲೋಹದ ತಟ್ಟೆಯಲ್ಲಿ ಪೂಜೆ ಕೊಟ್ಟರೆ ಪೂಜೆ ಮಾಡುತ್ತಿರಲಿಲ್ಲ. ಇವೆಲ್ಲ ನನ್ನ ಮನಸಿನಾಳದಲ್ಲಿ ಚಿಂತೆಗೀಡು ಮಾಡಿದ್ದವು.

ಸವರ್ಣೀಯರ ಯಾರದೇ ಮನೆಯಲ್ಲಿ ಮದುವೆ ನಡೆದರೆ ದಲಿತರು ಚಪ್ಪರ ಹಾಕುವುದು, ಸೌದೆ ಸೀಳುವುದು ಮಾಡಬೇಕಾಗಿತ್ತು. ಚಪ್ಪರ ಹಾಕಿದ ಮೇಲೆ ಚಪ್ಪರದಟ್ಟಿಗೆ ಪ್ರವೇಶ ಕೊಡುತ್ತಿರಲಿಲ್ಲ. ಶ್ರೀಮಂತರ ಮದುವೆಯೆಂದರೆ ಎಲ್ಲರಿಗೂ ಊಟಕ್ಕೆ 'ಹೇಳಿಸುತ್ತಿದ್ದರು. ಇದನ್ನು ಉಲ್ಲಂಘನೆ ಮಾಡುವ ಹಾಗಿಲ್ಲ. ದಂಡ, ಬಹಿಷ್ಕಾರ ಶಿಕ್ಷೆಗಳನ್ನು ತಿರಸ್ಕರಿಸಿದವರಿಗೆ ವಿಧಿಸುತ್ತಿದ್ದರು. ಇಷ್ಟೆಲ್ಲ ತೊಂದರೆ ತಪ್ಪಿಸಿಕೊಳ್ಳಲು ಪಡುತ್ತಿದ್ದ ಪಾಡು ಅಷ್ಟಿಷ್ಟಲ್ಲ. ಮದುವೆ ದಿನ ಬೆಳಿಗ್ಗೆಯಿಂದಲೆ ವಿಶೇಷ ಊಟಕ್ಕೋಸ್ಕರ ಬಕಪಕ್ಷಿಯಂತೆ ಕಾಯುತ್ತಿದ್ದೆವು. ಅವರು ಊಟಕ್ಕೆ ಕರೆಯುವ ಹಾಗಿಲ್ಲ, ನಾವು ಹೋಗುವ ಹಾಗಿಲ್ಲ. ಕಾದು ಕಾದು ಹಸಿದು ಬೆಂಡಾಗುತ್ತಿದ್ದೆವು. ಅವರು ಅವರ ಜಾತಿಯವರಿಗೆಲ್ಲ 'ಊಟ ಬಡಿಸಿ', ನೆಂಟರಿಷ್ಟರೆಲ್ಲರಿಗೂ ಮುಗಿಸಿ, ನಮ್ಮನ್ನು ಊಟಕ್ಕೆ ಕರೆಯುವುದು. ರಾತ್ರಿ ೧೨ ಅಥವಾ ೧ ಗಂಟೆ ಆಗುತ್ತಿತ್ತು. ಅಡುಗೆಯನ್ನು ಕಳೆದ ರಾತ್ರಿಯೇ ಮಾಡುತ್ತಿದ್ದರಿಂದ ಹಳಸಿದ ಅನ್ನ, ಹುಳಿ ಸಾರು ಕೆಟ್ಟಿರುವ ಪಾಯಸವನ್ನು ಊಟ ಮಾಡಿ ಬರುತ್ತಿದ್ದೆವು. ಸಣ್ಣ ಮಕ್ಕಳಾದ ನಾವು ಬಾಲ್ಯದಲ್ಲಿ ಹಸಿವನ್ನು ತಡೆಯಲಾರದೆ ಕದ್ದು ಕೂತು ಊಟ ಮಾಡಲು ಹರಸಾಹಸ ಪಡುತ್ತಿದ್ದೆ. ಓಲಗದವರೊಂದಿಗೆ ಹೋಗುವುದು ಮಾಡುತ್ತಿದ್ದೆ. ಅವರು ಕೂರಲು ಬಿಡುತ್ತಿರಲಿಲ್ಲ. ಆ ಮಾರನೇ ಬೆಳಗ್ಗೆ ಮದುವೆ ಮನೆಯಲ್ಲಿ ತಂಗಳ ಅಡುಗೆಯನ್ನು ತಿಪ್ಪೆಗೆ

ಸವರ್ಣೀಯರ ಯಾರದೇ ಮನೆಯಲ್ಲಿ ಮದುವೆ ನಡೆದರೆ ದಲಿತರು ಚಪ್ಪರ ಹಾಕುವುದು, ಸೌದೆ ಸೀಳುವುದು ಮಾಡಬೇಕಾಗಿತ್ತು. ಚಪ್ಪರ ಹಾಕಿದ ಮೇಲೆ ಚಪ್ಪರದಟ್ಟಿಗೆ ಪ್ರವೇಶ ಕೊಡುತ್ತಿರಲಿಲ್ಲ. ಮದುವೆ ದಿನ ಬೆಳಿಗ್ಗೆಯಿಂದಲೆ ವಿಶೇಷ ಊಟಕ್ಕೋಸ್ಕರ ಬಕಪಕ್ಷಿಯಂತೆ ಕಾಯುತ್ತಿದ್ದೆವು. ಅವರು ಊಟಕ್ಕೆ ಕರೆಯುವ ಹಾಗಿಲ್ಲ, ನಾವು ಹೋಗುವ ಹಾಗಿಲ್ಲ.

ಸುರಿಯುತ್ತಿರಲಿಲ್ಲ. ಬದಲಿಗೆ ದಲಿತರಿಗೆ ಕೊಡುತ್ತಿದ್ದರು. ಬೋಸಿ (ಅಡುಗೆ ಪಾತ್ರೆ), ಟೀಫಾನ್ ಗಿರಿ (ಬಾಕ್ಸ್) ಮತ್ತು ಪುಟ್ಟೆಯಲ್ಲಿ ಇಸಿಕೊಂಡು ಬರುತ್ತಿದ್ದವು. ನಮ್ಮ ಜಾತಿಯ ಜನ ಸಾಲುಗಟ್ಟಿ ಮತ್ತು ಸಿಗದೆ ಹೋಗುವುದೆಂಬ ಅನುಮಾನದಿಂದ ಮೇಲೆ ಬೀಳುತ್ತಿದ್ದರು. ಬರುವಾಗ ಕೊಟ್ಟವನನ್ನ ದೇವರೆಂದು ಎಣ್ಣಿಸುತ್ತಾ ಸಿಕ್ಕಿತಲ್ಲ ಎಂಬ ಆನಂದದಿಂದ ಮನೆ ಸೇರುತ್ತಿದ್ದೆ. ಮನೆಯ ಸ್ಥಿತಿ ನನ್ನ ಹೀಗೆ ಮಾಡಿತು.

ಹೀಗೆಯೆ ಒಂದು ಮದುವೆಯಲ್ಲಿ ಮಳೆ ವಿಪರೀತ ಬಿದ್ದಿತ್ತು. ಬೀದಿಯಲ್ಲಿ ಊಟಕ್ಕೆ ಕೂರಲು ಆಗುತ್ತಿರಲಿಲ್ಲ. ನಮ್ಮ ಬೀದಿಯ ಯಜಮಾನರಿಗೆ ಕುಟುಂಬಕ್ಕೆ ಒಬ್ಬರಂತೆ ಬನ್ನಿ ಎಂದು ಹೇಳಿಸಿದ್ದಾರೆ. ಆದರೆ ಏನು ಮಾಡುವುದು, ಮಕ್ಕಳು ಮರಿಗಳು ಜೊತೆಗೆ ಬಂದಿವೆ. ಇಲ್ಲಿ ಮಕ್ಕಳನ್ನು ಸೇರಿಸುತ್ತಿಲ್ಲ. ಮಳೆಯಾದ್ದರಿಂದ ಕೊಟ್ಟಿಗೆಯಲ್ಲಿ ಕೂರಲು ಅವಕಾಶ ಮಾಡಿದ್ದಾರೆ. ನಾನು ಬಾಲಕನಾದರು ನನ್ನೊಬ್ಬನಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಏಕೆಂದರೆ ನಮ್ಮ ತಾಯಿ ಅವರ ಮನೆಯಲ್ಲಿ ಕೂಲಿ ಕೆಲಸದಾಕೆ. ಕೆಲವರಿಗೆ ಊಟಕ್ಕೆ ಕೂರಲು ಅವಕಾಶ ಕೊಡದೆ ಕಳುಹಿಸಿಯೇ ಬಿಟ್ಟರು. ಆದರೆ ಅಂದು ಖುಷಿಪಟ್ಟೆವು. ಇಂದು ನೆನಸಿಕೊಂಡರೆ ನಮ್ಮನ್ನೆ ಅಣಕಿಸುವಂತಿದೆ.

ನಮ್ಮ ಅಣ್ಣಂದಿರು ಜೀತ ಮಾಡುತ್ತಿದ್ದ ಗೌಡರ ಹಟ್ಟಿಯಲ್ಲಿ ಕೊಟ್ಟಿಗೆಯಲ್ಲಿ ಕುಳಿತು 'ಊಟ ಮಾಡುತ್ತಿದ್ದೆವು' ಅಂತಹ ಸಮಯದಲ್ಲಿ ನನ್ನ ಮನಸ್ಸಿನಲ್ಲಿ ಏನು ಕೋರುತ್ತಿರಲಿಲ್ಲ. ಅದು ಅವರ ಮನೆಯಾದ್ದರಿಂದ ಎಂದು ತಿಳಿದಿದ್ದೆ. ಕೆಲವು ದಿನಗಳಲ್ಲಿ ನಾನು ಕಿರಿಯವನಾಗಿದ್ದರಿಂದ ನನ್ನನ್ನು ಹಿಟ್ಟು ಸಾರು (ಮುದ್ದೆ ಸಾರು) ಇಸಿಕೊಂಡು ಬರಲು ಕಳುಹಿಸುತ್ತಿದ್ದರು. ಒಂದು ಪುಟ್ಟ ಮತ್ತು ಟೀಫಾನ್ ಗಿರೀ ಹಿತ್ತಾಳೆಯದು ತೆಗೆದುಕೊಂಡು ಹೋಗಿ ಮನೆಯ ಒಡತಿಯನ್ನು 'ಅವ್ವೋ...ಅವ್ವೋ...' ಎಂದು ಕೂಗುತ್ತಿದ್ದೆ. ಭೇದವರಿಯದ ನಾನು ಅವರ ಮನೆಯ ಹಜಾರದಲ್ಲಿ ನಿಲ್ಲುತ್ತಿದ್ದೆ. ಇದನ್ನು ಕಂಡು ಮೇಲು ಕೀಳು ಎಂಬುದು ಯಾತಕ್ಕೆ ಆಯಿತು ಎಂದು ನಿಂದಿಸಿ ಬೈದು ಕಳುಹಿಸಿದ ನೆನಪು ಹಸಿರಾಗಿಯೇ ಇದೆ.

ನನ್ನದು ಬಿ.ಎ. ಮುಗಿದಿತ್ತು. ಅರಣ್ಯ ಇಲಾಖೆಯಿಂದ 'ಕಾಡು ಪ್ರಾಣಿಗಳ ಸಮೀಕ್ಷೆ' ಕಾರ್ಯಕ್ಕೆ ಎಂಟು ದಿನದ ಚಾರಣಕ್ಕೆ ಹೋಗಿದ್ದೆ. ಅಲ್ಲಿ ಪಕ್ಕದ ಗ್ರಾಮದ ಲಿಂಗಾಯ್ತ ಕೋಮಿನ ವ್ಯಕ್ತಿ ಜೊತೆ ಗೆಳೆತನವಾಯಿತು. ಗೆಳೆತನ ಜಾತ್ರೆಗೆ ಆಹ್ವಾನಿವಷ್ಟರ ಮಟ್ಟಿಗೆ ಬೆಳೆಯಿತು. ಆಹ್ವಾನದ ಮೇರೆಗೆ ಜಾತ್ರೆಗೆ ನಾನು ಮತ್ತು ಗೆಳೆಯ ಹೋದೆವು. (ದಿ.ಎಂ. ಮೋಹನ್ ಕುಮಾರ್) ಜಾತ್ರೆಯಲ್ಲಿ ಸಂಜೆವರೆಗೂ ಹುಡುಕಾಡಿದರೂ ಆತ ಸಿಗಲಿಲ್ಲ. ಆತನ ಊರು ಇಲ್ಲಿಂದ ೪ ಕಿ.ಮೀ. ಆಗುತ್ತದೆ. ನಾವು ಆತನ ಊರಿಗೆ ದಟ್ಟ ಅರಣ್ಯದಲ್ಲಿ ನಡೆದೆ ಸೇರಿದೆವು. ನಮಗೆ ಬಯಲು ಪ್ರದೇಶವಾದ್ದರಿಂದ ಕಾಡುಪ್ರಾಣಿಗಳ ಬಗ್ಗೆ ಭಯವೇ ಸುಳಿಯಲಿಲ್ಲ. ನಮ್ಮ ಅದೃಷ್ಟವೋ ಏನೋ ಯಾವುದೇ ಕಾಡು ಪ್ರಾಣಿ ದಾಳಿ ಮಾಡಲಿಲ್ಲ. ರಾತ್ರಿ ೮ ಗಂಟೆಗೆ ಆತನ ಮನೆ ಕೇಳಿಕೊಂಡು ಸೇರಿದೆವು. ಆದರೆ ಗೆಳೆಯ ಜಾತ್ರೆಯಲ್ಲಿಯ ನಾಟಕ ನೋಡಲು ಹೋಗಿದ್ದ. ನಾವೇ ಆತನ ತಂದೆಯನ್ನ ಪರಿಚಯ ಮಾಡಿ ಕೊಂಡೆವು. ಹಜಾರದಲ್ಲೇ ಕುರ್ಚಿ ಹಾಕಿ ಕೂರಿಸಿದರು. ಯಜಮಾನನೊಂದಿಗೆ ಕುಳಿತು ಲೋಕಾಭಿರಾಮವಾಗಿ ಮಾತಿಗೆ ಇಳಿದೆವು.

ಹೋಬಳಿ ಕೇಂದ್ರದಲ್ಲಿ ಅಂಧರ ಜಾಗೃತಿ ಸಭೆಗೆ ಅತಿಥಿಯಾಗಿ ಆಹ್ವಾನಿಸಿದ್ದರು. ಅದೇ ಸಭೆಗೆ ಸ್ಥಳೀಯರನ್ನೆ ಮತ್ತೊಬ್ಬ ಹಿರಿಯರನ್ನು ಆಹ್ವಾನಿಸಿದ್ದರು. ಹಿರಿಯರ ಮನೆಗೆ ಕರೆದುಕೊಂಡು ದಲಿತ ಸಾಹಿತಿ, ಮತ್ತು ನನ್ನನ್ನು ಕಳುಹಿಸಿದರು. ಚಾಪೆ ಹಾಕಿ ಹಜಾರದಲ್ಲಿ ಕೂರಿಸಿದರು. ಸಭೆ ಮುಗಿಸಿ ಅದೇ ಮನೆಗೆ ಮತ್ತೆ ಹೋದೆವು. ಚಾಪೆ ಒದ್ದೆಯಾಗಿತ್ತು, ಅದನ್ನೆ ಕೊಟ್ಟರು. ನಾವು ದಲಿತರು ಎಂದು ತಿಳಿದು ಚಾಪೆಯನ್ನು ತೊಳೆದಿದ್ದರು.

ಅವರ ಮನೆಯಲ್ಲಿ ಕಾರ್ತಿಕ ಸೋಮವಾರವಾದ್ದರಿಂದ ವಿಶೇಷ ಪೂಜಾ ಕಾರ್ಯಗಳು ಇದ್ದವು. ಅಲ್ಲಿಗೆ ಕೆಲಸದಾಕೆ ಇರಬೇಕು, ಕುರುಬ ಜನಾಂಗದ ಹೆಂಗಸು ಕೊಟ್ಟಿಗೆಯಲ್ಲಿ ಕೂರಿಸಿ 'ಊಟ' ಮಾಡುತ್ತ ಕುಳಿತಿದ್ದಳು. ಇದನ್ನೆಲ್ಲ ಗಮನಿಸುತ್ತಿದ್ದ ನಮಗೆ ಭಯವೇ ಪ್ರಾರಂಭವಾಯಿತು. ಕುರುಬಗಿತ್ತಿಯನ್ನೇ ಹೊರಗೆ ಕುಳ್ಳಿರಿಸಿರಬೇಕಾದರೆ ನಮ್ಮ ಬಗ್ಗೆ (ಆದಿ ಕರ್ನಾಟಕ) ತಿಳಿದರೆ ಖಂಡಿತವಾಗಿ ರಾದ್ಧಾಂತ ಸುರುವಾಗುತ್ತದೆ ಎಂದು ತಿಳಿದು ಯಜಮಾನನ ಮನಸ್ಸನ್ನ ಬೇರೆಡೆಗೆ ತಂದು, ನಮ್ಮ ಜಾತಿಯ ಬಗ್ಗೆ ಕೇಳದ ಹಾಗೆ ಪ್ರಶ್ನೆಗಳ ಮೇಲೆ ಪ್ರಶ್ನೆ ಹಾಕಿ ವಿಶ್ವಾಸ ಹೆಚ್ಚುವ ರೀತಿ ನಡೆದುಕೊಂಡು ಆತನ ಗಮನವೆಲ್ಲವನ್ನು ಆತನ ಜೀವನದಲ್ಲಿ ನಡೆದಿರುವ ಘಟನೆಗಳನ್ನು ಕೆದಕಿ ಕೇಳುತ್ತಾ ಕುಳಿತೆವು. ಸಮಯ ೧೧ ಗಂಟೆ ಆಗುತ್ತಾ ಬಂತು. ನಮ್ಮ ಸ್ನೇಹಿತ ಬರಲೇ ಇಲ್ಲ. ಕೊನೆಗೆ ಕಾದು ಮನೆಯ ಯಜಮಾನಿ ಅನುಮಾನದಿಂದಲೆ ಹೊರಗೆ ಹಜಾರದಲ್ಲೇ ಚಾಪೆ ಹಾಕಿ ಊಟ ಬಡಿಸಲು ವ್ಯವಸ್ಥೆ ಮಾಡಿದರು. ಆದರೆ ಯಜಮಾನನ ಅಪ್ಪಣೆಯಂತೆ ಮನೆಯ ಒಳಗಡೆ ಬಡಿಸಲು ಹೇಳಿದ.

ಇಷ್ಟೆಲ್ಲ ಏನೂ ತಪ್ಪು ಮಾಡದೆ ಅಪಮಾನಕ್ಕೆ ಒಳಗಾದ ಘಟನೆಗಳಾದರೆ ನಾನು ಕಡುಬಡತನದಲ್ಲಿ ಬೆಳೆದ ದಿನಗಳು ಇನ್ನೂ ಮರೆಯಲಾಗದೆ ಹಾಗೆಯೇ ಉಳಿದಿವೆ. ೧೯೭೫-೮೦ ರ ನಡುವೆ ಬಾಲ್ಯದಲ್ಲಿ ಎಷ್ಟೊ ದಿನಗಳು ಹಸಿದು ಮಲಗಿ ದ್ದೇನೆ. ನಮ್ಮೂರಿನ ಪಕ್ಕದಲ್ಲಿ ನಲ್ಲೂರು ಅಮಾನಿ ಕೆರೆ ಕಾಮಗಾರಿ ನಡೆಯುತ್ತಿತ್ತು. ಅಲ್ಲಿಗೆ ಕೂಲಿಗಾಗಿ ನಮ್ಮ ತಾಯಿ ಮತ್ತು ಅಣ್ಣಂದಿರು ಹೋಗುತ್ತಿದ್ದರು. ಅಲ್ಲಿ ಕೂಲಿಗಾಗಿ ವಾರಕ್ಕೊಮ್ಮೆ ಮುಸಕಿನ ಜೋಳದ ನುಚ್ಚನ್ನು ಕೊಡುತ್ತಿದ್ದರು. ಅದರಲ್ಲೆ ಗಂಜಿ ಕಾಯಿಸಿ ಕುಡಿದು ಮಲಗಿ ಹಬ್ಬದ ದಿನಗಳನ್ನು ಕಳೆದ ನೆನಪು ಇದೆ. ಒಟ್ಟಾರೆ ೫ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ. ವರೆಗೆ ಪ್ರತಿದಿನ ೮ ಕಿ.ಮೀ ನಡೆದು ವಿದ್ಯಾಭ್ಯಾಸ ಮಾಡುತ್ತಿದ್ದೆ. ಇಂತಹ ದಿನಗಳಲ್ಲಿ ಎಂದೂ ಮಧ್ಯಾಹ್ನದ 'ಊಟ' ಮಾಡಿದ ದಿನಗಳು ಬೆರಳೆಣಿಕೆಯಷ್ಟು. ಎಷ್ಟೋ ದಿನಗಳು ಊಟವಿಲ್ಲದೆ ತಲೆಸುತ್ತಿ ಬಿದ್ದಿರುವುದು ಇನ್ನೂ ಹಸಿರಾಗಿಯೇ ಇದೆ.

ತೀರ ಇತ್ತೀಚಿನ ಘಟನೆಯೊಂದು ಮನದಾಳದಲ್ಲಿ ಕಹಿಯಾಗಿಯೇ ಇದೆ. ೧೯೯೯ರ ಚುನಾವಣಾ ಸಂದರ್ಭ. ಚುನಾವಣಾ ಪ್ರಚಾರಕ್ಕಾಗಿ ಒಂದು ಟೆಂಪೋದಲ್ಲಿ ೨೦-೩೦ ಜನ (ಎಲ್ಲ ಜನಾಂಗದವರು ಸೇರಿ) ಪಕ್ಕದ ಗ್ರಾಮಕ್ಕೆ ಹೋದೆವು. ಪ್ರಚಾರ ಕಾರ್ಯ ಮುಗಿದ ಮೇಲೆ 'ಉಪಹಾರದ ವ್ಯವಸ್ಥೆ' ಲಿಂಗಾಯ್ತರ ಮನೆಯಲ್ಲಿ ಇತ್ತು. ಎಲ್ಲ ಸವರ್ಣೀಯರು ಒಳಗೆ ಹೋದರು. ನಾನು ಅವರ ಜೊತೆ ಹೋದೆ. ಗ್ರಾಮದ ಕೆಲವು ಲಿಂಗಾಯ್ತರು ಇದ್ದರು. ಅವರು ಇರಿಸು ಮುರುಸು ಪಟ್ಟರು. ಅದೇ ಮನೆಯ ಕೊಟ್ಟಿಗೆಯಲ್ಲಿ ದಲಿತರಿಗೆ ತಿಂಡಿ ಬಡಿಸುತ್ತಿದ್ದರು.

ಇನ್ನೊಂದು ಘಟನೆ. ಹೋಬಳಿ ಕೇಂದ್ರದಲ್ಲಿ ಅಂಧರ ಜಾಗೃತಿ ಸಭೆಗೆ ಅತಿಥಿಯಾಗಿ ಆಹ್ವಾನಿಸಿದ್ದರು. ಅದೇ ಸಭೆಗೆ ಸ್ಥಳೀಯರನ್ನೆ ಮತ್ತೊಬ್ಬ ಹಿರಿಯರನ್ನು ಆಹ್ವಾನಿಸಿದ್ದರು. ಹಿರಿಯರ ಮನೆಗೆ ಕರೆದುಕೊಂಡು ದಲಿತ ಸಾಹಿತಿ, ಮತ್ತು ನನ್ನನ್ನು ಕಳುಹಿಸಿದರು. ಚಾಪೆ ಹಾಕಿ ಹಜಾರದಲ್ಲಿ ಕೂರಿಸಿದರು. ಸಭೆ ಮುಗಿಸಿ ಅದೇ ಮನೆಗೆ ಮತ್ತೆ ಹೋದೆವು. ಚಾಪೆ ಒದ್ದೆಯಾಗಿತ್ತು, ಅದನ್ನೆ ಕೊಟ್ಟರು. ನಾವು ದಲಿತರು ಎಂದು ತಿಳಿದು ಚಾಪೆಯನ್ನು ತೊಳೆದಿದ್ದರು. ❑

ಮನೆಯೇ ಮಲಿನವಾಯಿತು

ಅನುಭವದ ಗಾಳಿಪಟದ

○ ವಿ. ಬಾಲಕೃಷ್ಣ

ಸಾವಿರಾರು ವರ್ಷಗಳಿಂದ ಹಸಿವಿನಿಂದ ನೊಂದು ಬೆಂಡಾದ ಶೋಷಿತ ಸಂತತಿಯಿಂದ ಬಂದಿದ್ದರಿಂದ ನಾನು ಅದರ ದಾರುಣ್ಯದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ವಿದ್ಯಾರ್ಥಿ ನಿಲಯದಲ್ಲಿ ಬೆಳಗಿನ ತಿಂಡಿ ಇಲ್ಲದೇ ಕಾಲೇಜಿನಿಂದ ೧೨ ಗಂಟೆಗೆ ಬರುವ ಹೊತ್ತಿಗೆ ಕನಿಷ್ಠ ತಿನ್ನಬಹುದಾದ್ದು ಏನು ಸಿಕ್ಕಿದರೂ ತಿಂದು ಬಿಡುವಷ್ಟು ಹಸಿವು. ಇದು ಅಂದಿನ ಬದುಕಿನಲ್ಲಿ ಅನುಭವಿಸಲೇ ಬೇಕಾದ ಅನಿವಾರ್ಯ ಸಂಗತಿಯಾದ್ದರಿಂದ ಇದರಿಂದ ದಿಕ್ಕೆಡಬೇಕಾದ ಅವಶ್ಯಕತೆ ಇರಲಿಲ್ಲ.

ಪ್ರಸ್ತುತ ಸಮಾಜದಲ್ಲಿ ಇಂದು ನಾನು 'ಗೌರವ'ದ ಸಂಕೇತವಾದ ಒಬ್ಬ ಶಿಕ್ಷಕನಾಗಿ ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ನನ್ನ ಹುಟ್ಟು ಮತ್ತು ಜಾತಿ ನನ್ನನ್ನು ಬೆಂಬಿಡದೇ ಹಿಂಬಾಲಿಸುತ್ತಾ ನನ್ನ ಎಲ್ಲಾ ಅರ್ಹತೆಗಳನ್ನು ಅನರ್ಹಗೊಳಿಸಿ ನನ್ನ ಆತ್ಮಗೌರವವನ್ನು ತಲೆತಗ್ಗಿಸುವಂತೆ ಮಾಡಿದೆ.



ಅದೊಂದು ದಿನ !... ನಾನು ಸರ್ಕಾರಿ ಆದೇಶದಂತೆ ಚುನಾವಣೆ ಹಾಗೂ ಶೈಕ್ಷಣಿಕ ಸಮೀಕ್ಷೆಗಾಗಿ ಸವರ್ಣೀಯರ ಕೇರಿಯಲ್ಲಿ ಸಂಚರಿಸತೊಡಗಿದ್ದೆ... ನೆತ್ತಿಯ ಮೇಲೆ ಸುಡುಬಿಸಿಲು! ದಾಹ! ಒಬ್ಬ ಗೌಡತಿಯ ಮನೆ ಬಾಗಿಲಿಗೆ ಹೋದೆನೊ ಇಲ್ಲವೋ ಅನ್ನುವಷ್ಟರಲ್ಲಿ ಬಾಗಿಲಿಗೆ ಅಡ್ಡ ನಿಂತು ವಿವರವನ್ನು ನಾನು ಕೇಳುವ ಮೊದಲೇ ಹೇಳತೊಡಗಿದಳು. 'ಇವನೆಲ್ಲಿ ಮನೆ ಒಳಗೆ ಬಂದು ಬಿಡುವನೋ'! ಎಂಬ ಭಯವೇ ಆಕೆಯ ಮುಖದಲ್ಲಿ ಪ್ರಕಟ ವಾಗುತ್ತಿತ್ತು. ಮನೆಯ ಮೆಟ್ಟಿಲುಗಳ ಮೇಲೆ ಸುಡುಬಿಸಿಲಿನಲ್ಲಿಯೇ ಬರೆಯಲು ಸೂಚಿಸಿದರು. ನಂತರದ ಸರದಿ... ಲಿಂಗಾಯತರ ಮನೆ !

ಆಶ್ಚರ್ಯವೆಂದರೆ ಆ ಮನೆಯ ಯಜಮಾನ ನನ್ನ ವೃತ್ತಿ ಬಂಧು ಹಾಗೂ ಸ್ನೇಹಿತನಾಗಿದ್ದ. ಆತನೇನೋ ಒಳಗೆ ನನ್ನನ್ನು ಕರೆದ... ಒಲ್ಲದ ಮನಸ್ಸಿನಿಂದಲೇ ಹೋಗಿ ಕುಳಿತುಕೊಂಡು ವಿವರ ಪಡೆಯುತ್ತಿದ್ದೆ. ಯಜಮಾನರು ಕಾಫಿ ಕೊಡಲು ಮನೆಯ ಒಡತಿ ಹಾಗೂ ಶಿಕ್ಷಕಿಯೂ ಆಗಿದ್ದ ಆಕೆಗೆ ಆಜ್ಞಾಪಿಸಿದರು. 'ಮನೆಯೇ ಮಲಿನವಾಯಿತೇನೋ ಎಂಬಂತೆ ಆ ಶಿಕ್ಷಕಿ 'ಸಕ್ಕರೆ ಇಲ್ಲಾರಿ ಅದೇಕೆ ಬಡಿದುಕೊಳ್ತೀರಿ' ಎಂದು ಗದರಿಸಿದಾಗ ಆ ಬೈಗಳು ನನ್ನ ಹೃದಯವನ್ನು ವಿಛಿದ್ರಗೊಳಿಸಿದವು.

ಈ ವೃತ್ತಿಗಿಂತಲೂ ನಾನು ಕೂಲಿಯೇ ಆಗಿದ್ದರೆ ಚೆನ್ನಾಗಿರುತ್ತಿತ್ತು ಎಂದು ಅನಿಸದಿರಲಿಲ್ಲ. ಲಿಂಗ+ ಆಯತ = ಲಿಂಗಾಯತ ಆ ಲಿಂಗದ ನಿರ್ಮಾತೃ ಬಸವಣ್ಣ. 'ಚೆನ್ನಯ್ಯನ ಅಂಬಲಿ ಪ್ರಸಾದ ಸವಿದು' ಅಂತರ್ಜಾತಿಯ ವಿವಾಹವನ್ನು ಕಾಯಾ ವಾಚಾ ನೆರವೇರಿಸಿ ಪುರೋಹಿತಶಾಹಿಯ ಬುನಾದಿಯನ್ನು ಕದಲಿಸಿದ ಮಹಾಪುರುಷ.. ಆ ಲಿಂಗಾಯಿತ ಧರ್ಮದ ವಾರಸುದಾರಿಕೆಯನ್ನು ಪಾರಂಪರ್ಯಗತವಾಗಿ ಪಡೆದ ಈ ವ್ಯಕ್ತಿಗಳು ಆ ಮಹನೀಯನ ಸಾಧನೆ ಚಿಂತನೆಗಳನ್ನು ಕೊಂದವರು!!! ನನ್ನನ್ನು ಅವಮಾನಿಸಿ ಕೊಂದಾಗ ದುಃಖಿಸುವ ಅವಶ್ಯಕತೆ ಏಕೆ ಈ ರೀತಿಯಾಗಿ ನನ್ನನ್ನು ನಾನು ಸಮಾಧಾನಪಡಿಸಿಕೊಳ್ಳುವುದನ್ನು ಬಿಟ್ಟರೆ ನನಗೆ ಗತ್ಯಂತರವಿರಲಿಲ್ಲ.

ನಮ್ಮ ಶಾಲೆಯಲ್ಲಿನ ಸಿಬ್ಬಂದಿ ವರ್ಗದಲ್ಲಿ ಎಲ್ಲಾ ಜಾತಿಯ ಶಿಕ್ಷಕರೂ ಇದ್ದಾರೆ. ನಮ್ಮ ಸಹೋದ್ಯೋಗಿ ಶಿಕ್ಷಕರು ಆಹಾರದ ವಿಷಯದಲ್ಲಿ ಇವರು ನಡೆದುಕೊಳ್ಳುವ ರೀತಿ ಜಡ್ಡುಗಟ್ಟಿರುವ ಸಮಾಜಕ್ಕೆ ಪೋಷಣೆಯಾಗಿದೆ. ಸವರ್ಣೀಯರ ಆಹಾರ ನಾವು ತಿನ್ನಬಹುದು ನಾವು ಕೊಟ್ಟದ್ದನ್ನು ಅವರು ತಿನ್ನಲೇ ಬಾರದೆಂಬ ನಿಯಮಕ್ಕೆ ಬದ್ಧರಾಗಿದ್ದಾರೆ. ನೀರು

ಅದೊಂದು ದಿನ !... ನಾನು ಸರ್ಕಾರಿ ಆದೇಶದಂತೆ ಚುನಾವಣೆ ಹಾಗೂ ಶೈಕ್ಷಣಿಕ ಸಮೀಕ್ಷೆಗಾಗಿ ಸವರ್ಣೀಯರ ಕೇರಿಯಲ್ಲಿ ಸಂಚರಿಸತೊಡಗಿದ್ದೆ... ನೆತ್ತಿಯ ಮೇಲೆ ಸುಡುಬಿಸಿಲು! ದಾಹ! ಒಬ್ಬ ಗೌಡತಿಯ ಮನೆ ಬಾಗಿಲಿಗೆ ಹೋದೆನೊ ಇಲ್ಲವೋ ಅನ್ನುವಷ್ಟರಲ್ಲಿ ಬಾಗಿಲಿಗೆ ಅಡ್ಡ ನಿಂತು ವಿವರವನ್ನು ನಾನು ಕೇಳುವ ಮೊದಲೇ ಹೇಳತೊಡಗಿದಳು. 'ಇವನೆಲ್ಲಿ ಮನೆ ಒಳಗೆ ಬಂದು ಬಿಡುವನೋ'! ಎಂಬ ಭಯವೇ ಆಕೆಯ ಮುಖದಲ್ಲಿ ಪ್ರಕಟ ವಾಗುತ್ತಿತ್ತು. ಮನೆಯ ಮೆಟ್ಟಿಲುಗಳ ಮೇಲೆ ಸುಡುಬಿಸಿಲಿನಲ್ಲಿಯೇ ಬರೆಯಲು ಸೂಚಿಸಿದರು.

ಕುಡಿಯುವಾಗ ನಮ್ಮ ಬಾಟಲ್ ಬಗ್ಗೆ ಜಾಗ್ರತೆ... ತಿನ್ನುವಾಗ ನಮ್ಮ ಅನ್ನ ಅವರ ಅನ್ನಕ್ಕೆ ಹಾಸುಹೊಕ್ಕದಂತೆ ಎಚ್ಚರಿಕೆ ಇದು ಶಬ್ದಾತೀತವಾದ ದುಃಖ ನನ್ನ ಹೃದಯವನ್ನು ದುರ್ಬಲಗೊಳಿಸಿದೆ. ನಮ್ಮ ಭಾರತೀಯ 'ಸ್ಮೃತಿ'ಯ ನೇತಾರ ಮನು 'ಶೂದ್ರರ ಅನ್ನವು ವೀರ್ಯ ಅಥವಾ ಮೂತ್ರದಷ್ಟೆ ಹೊಲಸು ಎನ್ನುತ್ತಾನೆ'. ಸಾವಿರಾರು ವರ್ಷಗಳ ಈ ಮನು ಬರೆದ ಶಾಸನವನ್ನು ಅಂದಿನಿಂದ ಇಂದಿನವರೆಗೂ ಜಾತಿವಾದಿ ಸಮಾಜ ಇದನ್ನು ಪಾಲಿಸುತ್ತಿದೆ.

ನಮ್ಮ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಿ ನವ ಸಮಾಜ ನಿರ್ಮಾಣಕ್ಕೆ ಮಕ್ಕಳನ್ನು ಭವ್ಯ ಪ್ರಜೆಗಳನ್ನಾಗಿ ರೂಪಿಸುವ ಈ ಶಿಕ್ಷಕರ ಕೊಳಕು ಮನಸ್ಸಿನ ವರ್ತನೆಯನ್ನು ಪ್ರಶ್ನಿಸಿದಾಗ ಯಾವ ಮೌಲ್ಯದ ಮುಖವನ್ನಿಟ್ಟುಕೊಂಡು ಈ ಶಿಕ್ಷಕರು 'ಗುರು' ಸ್ಥಾನದಲ್ಲಿ ಆಸೀನರಾಗಿದ್ದಾರೆ ?

ಆರ್ಥಿಕವಾಗಿ ಸುಧಾರಿಸಿದರೆ ಜಾತಿಯ ನೋವು ಕಡಿಮೆಯಾಗುತ್ತದೆ ಎನ್ನುವ ಧೋರಣೆ ಹುಸಿಯಾಗಿದೆ. ಉನ್ನತ ಹುದ್ದೆಯಲ್ಲಿದ್ದ ಬಾಬು ಜಗಜೀವನ ರಾಂ ರವರಿಗೂ ಮಾಡಿದ ಅಪಮಾನವನ್ನು ಇತಿಹಾಸವೇ ದಾಖಲಿಸಿದೆ.

...ನನ್ನ ನೆಚ್ಚಿನ ಒಬ್ಬ ವಿದ್ಯಾರ್ಥಿ ಹಾಡುಗಾರಿಕೆಯಲ್ಲಿ ತುಂಬಾ ಪ್ರತಿಭಾವಂತನಾಗಿದ್ದ. ತಾಲ್ಲೂಕು ಮಟ್ಟದ ಒಂದು ಬೃಹತ್‌ವೇದಿಕೆಯಲ್ಲಿ ಅವನನ್ನು ಪರಿಚಯಿಸಬೇಕೆನಿಸಿ ಅವನಿಗೆ ಬೆಳಿಗ್ಗೆ ನಮ್ಮ ಮನೆಯ ಹತ್ತಿರ ಬರಲು ತಿಳಿಸಿದೆ. ನಾನು ಸೂಚಿಸಿದಂತೆ ಅವನು ನಮ್ಮ ಮನೆಗೆ ಬಂದಾಗ ನಾನು ತಿಂಡಿ ತಿನ್ನುತ್ತಿದ್ದೆ. 'ತಿಂಡಿ ತಿಂದೆಯೇನೋ?' ಎಂದೆ. ಆಗ ಅವನು 'ಇಲ್ಲಾ ಸಾರ್' ಎಂದ. ಹಾಗಾದರೆ ತಿನ್ನುಬಾ ! ಎಂದಾಗ ಅವನಲ್ಲಿ ಬದಲಾವಣೆಯಾಗಿ ಬೇಡ ಸಾರ್ ಎಂದವ ಹೋಟೆಲ್‌ನಲ್ಲಿ ತಿನ್ನಲು ಒಪ್ಪಿದಾಗ ಅವನ ಇಂಗಿತ ನನಗೆ ಅರ್ಥವಾಗಿತ್ತು. ಅವನ ಮೇಲೆ ಬೇಜಾರು ಬಿದ್ದರೆ ಏನು ಫಲ? ಗುಣಾತ್ಮಕ ಶಿಕ್ಷಣದ ಬಗ್ಗೆ ಊದುವ ಬರೀ ನೆಪಮಾತ್ರದ ಶಿಕ್ಷಣ ನೀತಿಯು ಇಲ್ಲಿ ದಷ್ಟಪುಷ್ಟವಾಗಲು ಇನ್ನೆಷ್ಟು ವರ್ಷಗಳು ಬೇಕೋ ?

ಇಂತಹ ಅದೆಷ್ಟೋ ಅನುಭವ, ಅವಮಾನದ ಮಧ್ಯೆ ನಗರದಲ್ಲಿ ಬಾಡಿಗೆ ಮನೆ ಹುಡುಕತೊಡಗಿದೆ. ಒಂದು ದಿನ ಮಧ್ಯವರ್ತಿಯ ಸಲಹೆಯಂತೆ ಮನೆ ನೋಡಲು ಹೋದೆ. ಅದು 'ರೆಡ್ಡಿ' ಜಾತಿಯವನ ಯಜಮಾನ್ಯಕ್ಕೆ ಸೇರಿದ್ದಾಗಿದ್ದು ಆತನೂ ಶಿಕ್ಷಕನಾಗಿದ್ದ. ಆ ಮನೆಯ ಒಡತಿ ಮನೆಯನ್ನು ತೋರಿಸುತ್ತಾ.. ಸರ್ಕಾರಿ ನೌಕರರಿಗೆ ಮಾತ್ರ ಬಾಡಿಗೆಗೆ ನೀಡುತ್ತೇವೆಂದರು. ನಾನದಕ್ಕೆ 'ಸತಿಪತಿ ನಾವಿಬ್ಬರೂ ಶಿಕ್ಷಕರೇ' ಎಂದೆ. ಅದಕ್ಕೆ ಒಪ್ಪುತ್ತಾ ನಮ್ಮ ಯಜಮಾನರು ಮನೆಯಲ್ಲಿ ಇಲ್ಲ, ಸ್ವಲ್ಪ ಸಮಯ ಬಿಟ್ಟು ಬನ್ನಿ ಎಂದರು... ನಾನು ಹಾಗೆಯೇ ಮಾಡಿದೆ. ಅವರ ಯಜಮಾನರಿಗೆ ನನ್ನ ಮುಖಪರಿಚಯವಿದ್ದುದರಿಂದ ನನ್ನ ಊರು ಕೇಳಿದರು.

ಬ್ರೋಕರನನ್ನು ಒಳಗೆ ಕರೆದು ಏನು ಮಾತನಾಡಿಕೊಂಡರೋ, ಏನೋ ? ಎಸ್.ಸಿ. ಗಳಿಗೆ ಈ ಮನೆ ಕೊಡುವುದಿಲ್ಲವೆಂದು ಗೊತ್ತಾಯಿತು.

ನಮ್ಮ ದೇಶದಲ್ಲಿ ಉನ್ನತ ಶಿಕ್ಷಣವನ್ನು ಕೊಡುವ ವಿಶ್ವವಿದ್ಯಾಲಯಗಳು ಬೇಕಾದಷ್ಟಿದ್ದರೂ ಕೊಳಕು ಮನಸ್ಸುಗಳನ್ನೊಳಗೊಂಡಿರುವ ಅಲ್ಪಮಾನವರನ್ನು ವಿಶ್ವಮಾನವರನ್ನಾಗಿಸಲು ಏಕೆ ಸಾಧ್ಯವಾಗಲಿಲ್ಲ ! ನನ್ನಂತಹ ಎಷ್ಟೋ ಅನಾಮಿಕ ಶೋಷಿತರಿಗೆ ಇಂತಹ ಜಾತಿ ನಿಂದನೆಗಳು ಸರ್ವೇ



ಸಾಮಾನ್ಯವಾಗಿದ್ದರೂ ಈ ಕ್ರೂರ ರಕ್ಕಸನಿಗೆ (ಜಾತಿ) ಮೂಲವೆಲ್ಲಿ?

ಈ ಹುಡುಕಾಟದಲ್ಲಿ... ಅಂಬೇಡ್ಕರರ ಬರಹಗಳಲ್ಲಿ ತಿಳಿಯಿತು. ಈ ದೇಶದ ಪುರೋಹಿತ ಶಾಹಿಗಳು ಹೇಗೆ ಜಾತಿಯ ಕಂದಕಗಳನ್ನು ಹಂತ ಹಂತವಾಗಿ ಪ್ರಯೋಗಿಸಿದರೆಂದು. ಅಂತರ್‌ಜಾತಿ ವಿವಾಹ ನಿಷೇಧ ಹಾಗೂ ಅಂತರ ಭೋಜನದ ನಿಷೇಧ ಇವೆರಡೇ ಜಾತಿಯ ಸೃಷ್ಟಿಗೆ ಆಧಾರ ಸ್ಥಂಭಗಳು. (ಅಂ.ಬಾ.ಬ ಸಂ ೩, ಬ್ರಾಹ್ಮಣ ದಿಗ್ವಿಜಯ) ಆದಾಗ್ಯೂ ನನಗೆ ಅಂತರ್ಗತವಾಗಿ ಕೊರೆಯುತ್ತಿರುವ ವಿಚಾರವೆಂದರೆ ನಿಜವಾದ ಶತೃ ಯಾರೆಂದು ಗೊತ್ತಿಲ್ಲದಿರುವುದು. ಈ ಪುರೋಹಿತಶಾಹಿಯ ಕುತಂತ್ರಗಳನ್ನರಿಯದ ಶೂದ್ರರು ಕೂಡ ಜಾತಿವಾದಿಗಳಂತೆ ವರ್ತಿಸುತ್ತಿದ್ದಾರೆ.

'ಭಾರತದಲ್ಲಿ ಜಾತಿಗಳು, ಅವುಗಳ ರಚನಾಕ್ರಮ, ಉತ್ಪತ್ತಿ' ಎಂಬ ಪ್ರಬಂಧದಲ್ಲಿ ಸಮಗ್ರವಾಗಿ ಅಂಬೇಡ್ಕರರು ಬ್ರಾಹ್ಮಣರ ಕುತಂತ್ರಗಳನ್ನು ಬೇಧಿಸಿದ್ದಾರೆ. 'ಸ್ವಜಾತಿ ಪದ್ಧತಿ' ಅಥವಾ ಬಾಗಿಲು ಮುಚ್ಚಿದ ವ್ಯವಸ್ಥೆಯ ಹಿಂದೂ ಸಮಾಜದಲ್ಲಿ ರೂಢಿಯ ಶೈಲಿಯಾಗಿತ್ತು. ಅದು ಬ್ರಾಹ್ಮಣ ಶಾಹಿ ಕಾರದಿಂದ ಹುಟ್ಟಿದ ರೂಢಿಯಾಗಿದ್ದುದರಿಂದಗಿ ಅದನ್ನು ಎಲ್ಲಾ ಬ್ರಾಹ್ಮಣೇತರರೂ ಹೃತ್ಪೂರ್ವಕವಾಗಿ ಅನುಕರಿಸಿದರು. ಮುಂದೆ ಅವರುಗಳೇ ಸ್ವಜಾತಿ ಪದ್ಧತಿ ಪಾಲಿಸುವ ಜಾತಿಗಳಾಗಿ, ಅನುಕರಣೀಯ ಜಾತಿ ಬೆನ್ನುಹತ್ತಿ ಜಾತಿಗಳಾಗುವಂತೆ ಮಾಡಿತು (ಅದೇ ಸಂ).

ಅವಮಾನದ ಮಧ್ಯೆ ನಗರದಲ್ಲಿ ಬಾಡಿಗೆ ಮನೆ ಹುಡುಕತೊಡಗಿದೆ. ಒಂದು ದಿನ ಮಧ್ಯವರ್ತಿಯ ಸಲಹೆಯಂತೆ ಮನೆ ನೋಡಲು ಹೋದೆ. ಅದು 'ರೆಡ್ಡಿ' ಜಾತಿಯವನ ಯಜಮಾನ್ಯಕ್ಕೆ ಸೇರಿದ್ದಾಗಿದ್ದು ಆತನೂ ಶಿಕ್ಷಕನಾಗಿದ್ದ. ಆ ಮನೆಯ ಒಡತಿ ಮನೆಯನ್ನು ತೋರಿಸುತ್ತಾ.. ಸರ್ಕಾರಿ ನೌಕರರಿಗೆ ಮಾತ್ರ ಬಾಡಿಗೆಗೆ ನೀಡುತ್ತೇವೆಂದರು. ನಾನದಕ್ಕೆ 'ಸತಿಪತಿ ನಾವಿಬ್ಬರೂ ಶಿಕ್ಷಕರೇ' ಎಂದೆ. ಅದಕ್ಕೆ ಒಪ್ಪುತ್ತಾ ನಮ್ಮ ಯಜಮಾನರು ಮನೆಯಲ್ಲಿ ಇಲ್ಲ, ಸ್ವಲ್ಪ ಸಮಯ ಬಿಟ್ಟು ಬನ್ನಿ ಎಂದರು...

ಇಂತಹ ಜಾತೀಯ ಅಂಟು ಜಾಡ್ಯಗಳು ಕಾಲಾನುಕ್ರಮವಾಗಿ ಆಯಾಯ ಕಾಲಘಟ್ಟದಲ್ಲಿ ವೈದಿಕ ಸಾಹಿತಿಗಳು ತಮ್ಮ ಸಾಹಿತ್ಯದಲ್ಲಿ ಪರಂಪರಾನುಗತವಾಗಿ ರಚಿಸಿಕೊಂಡು ಜಾತಿಯನ್ನು ಸಮರ್ಥಿಸಿಕೊಂಡಿದ್ದಾರೆ.

ನಮ್ಮ ನಾಡಿನ ಸಾಹಿತ್ಯ ದಿಗ್ಗಜರಲ್ಲಿ ಒಬ್ಬರಾದ ಡಿ.ವಿ. ಗುಂಡಪ್ಪನವರು ಪುರುಷ ಸೂಕ್ತ ೧೩.ನೇ ಋಕ್ಕದಲ್ಲಿ ಬರುವ ಹಿಂದೂ ಸಮಾಜದ ಚಾತುರ್ವರ್ಣ ವ್ಯವಸ್ಥೆ ಹಾಗೂ ಜಾತಿಯನ್ನು ಸಮರ್ಥಿಸಿಕೊಳ್ಳುವ ರೀತಿ ನೋಡಿದಾಗ ಪುರೋಹಿತ ಶಾಹಿಯ ವ್ಯಾಪ್ತತೆ ತಿಳಿಯುತ್ತದೆ. 'ಮಾನವ ವರ್ಗದಲ್ಲಿ ಗುಣ - ಕರ್ಮ ಬೇಧಗಳು ಸ್ವಾಭಾವಿಕವಾಗೇ ಬಂದಿರುತ್ತವೆ. ಈ ಬೇಧಗಳನ್ನುಂಟು ಮಾಡಿದ್ದು 'ಪುರುಷ ಸೂಕ್ತವಲ್ಲ' ಅಥವಾ ಯಾವೊಬ್ಬ ಮನುಷ್ಯನೂ ಅಲ್ಲ ಅದು ಪ್ರಕೃತಿ (ಡಿ.ವಿ.ಜಿ. ಕೃತಿ ಶ್ರೇಣಿ ॥) ಇದಕ್ಕೆ ಬಹಳ ಸುಲಭವಾದ ದೃಷ್ಟಾಂತ ನಮ್ಮ ಕೈ ಬೆರಳುಗಳು. ಈ ಐದು ಬೆಟ್ಟುಗಳೂ ಒಂದೇ ಉದ್ದ ಒಂದೇ ದಪ್ಪ ಒಂದೇ ಆಕಾರವಿರುತ್ತವೆಂದು ಭಾವಿಸೋಣ, ಆಗ ಅವು ಒಟ್ಟುಗೂಡುತ್ತಿದ್ದವೆ ? ಅಂತಹ ಕೈಯಿಂದ ಯಾವ ವಸ್ತುವನ್ನಾದರೂ ಹಿಡಿದುಕೊಳ್ಳಲಾದೀತೆ? ಬೆರಳುಗಳಿಗೆ ಅಸಮಾನತೆ ಉಂಟು ಕೈ ಕೆಲಸದ ಸಹಿಷ್ಣುತೆಯಲ್ಲಿ ಆ ಅಸಮಾನತೆಯ ಸಾರ್ಥಕ್ಯ. ಈ ಗುಣಕರ್ಮಗಳ ವಿವಿಧತೆ ಸಮಾಜದ ಯೋಗಕ್ಷೇಮಗಳಿಗೆ ಅವಶ್ಯಕ. ಇದು ಪುರುಷ ಸೂಕ್ತ ಗ್ರಹಿಸಿದೆ ಎಂದು ಚಾರ್ತುವರ್ಣ ಪದ್ಧತಿ ಹಾಗೂ ಜಾತಿಯನ್ನು ಸಮರ್ಥಿಸಿಕೊಳ್ಳುತ್ತಾರೆ.

ಜಾತಿಪದ್ಧತಿ ವಿಷಯದಲ್ಲಿ 'ಅಸೂಯವಿಷ್ಠರಾದ ಮಿಷನರಿಗಳು ಅರ್ಧಂಬರ್ಧ ವೈಜ್ಞಾನಿಕರು ಅಪಕ್ವ ಸುಧಾರಕರೂ ಆಡುವ ಮಾತಿನಿಂದ ನಮ್ಮ ಮನಸ್ಸುಗಳನ್ನು ಅಸ್ತವ್ಯಸ್ತ ಮಾಡಿಕೊಳ್ಳತಕ್ಕದಲ್ಲವೆಂದು ಅನಾಧಿಕಾಲದಿಂದ ಬಂದಿರುವ ಸಂಪ್ರದಾಯವನ್ನು ತೊರೆಯುವುದರಿಂದ ನಮಗೆ ಆಗಬಹುದಾದ ಲಾಭಕ್ಕಿಂತ ನಷ್ಟವೇ ಹೆಚ್ಚೆಂದೂ (ಡಿ.ವಿ.ಜಿ. ಕೃತಿ ಶ್ರೇಣಿ ॥) ತಮ್ಮ ಕೃತಿ ಶ್ರೇಣಿಯಲ್ಲಿ ತಿಳಿಸುತ್ತಾರೆ. ಇಂತಹ ಪದ ಬಳಕೆಯ ವಿತಂಡ ವಾದದಲ್ಲಿಯೆ ಈ ಸಮಾಜವನ್ನು ಕಗ್ಗತ್ತಲೆಯ ಕೂಪದಲ್ಲಿ ಕೂರಿಸಿದರು. ಈ ದಿನ ಜಾತಿಯ ನೋವು ಏನೆಂಬುದು ಮೇಲ್ಜಾತಿಯ ಜನಗಳಿಗೆ ಗೊತ್ತಿಲ್ಲದಿರುವುದೇ ಶೋಚನೀಯ. ಒಬ್ಬ ಬ್ರಾಹ್ಮಣ ರಾಮಕೃಷ್ಣ ಪರಮಹಂಸರನ್ನು, ಒಕ್ಕಲಿಗರ ಕುವೆಂಪು, ಗೋಪಾಲ ಗೌಡರನ್ನು, ಕುರುಬ ಕನಕ ದಾಸರನ್ನು, ಬಲಜಿಗೆ ಕೈವಾರ ತಾತಯ್ಯನವರ ವಿಚಾರಗಳನ್ನು ಮೈಗೂಡಿಸಿಕೊಂಡರೆ ಇವೆಲ್ಲಾ ಭಾವನೆಗಳು ಹಗುರವಾಗುತ್ತಾ ಸತ್ಪಥದ ಆಯ್ಕೆ ಸುಗಮವಾಗಬಹುದೆಂದು ಭಾವಿಸುತ್ತೇನೆ. ❑

ಭರತಖಂಡೇ ಪೃಥ್ವೀಕ್ಷೇತ್ರೇ...

ತಿರುಪತಿಗೆ ಹೋದವರು
ತಿಮ್ಮಪ್ಪನಿಗೂ ಮುಂಚೆ, ಕ್ಷೇತ್ರಾಧಿಪತಿ ಆದಿವರಾಹನ್ನ ನೋಡಬೇಕಂತೆ

ತಿರುಮಲೆಯಾದ ತಿರುಮಲೆಯೆಲ್ಲ
ಆದಿವಾಸಿಗಳದ್ದೇ ಆಗಿದ್ದಾಗ
ಅದೆಲ್ಲಿಂದ ಬಂದನೋ ಈ 'ಯಂಗಟ'
ಬೂಂದೀಕಾಳು ತಿನ್ನಿಸಿ, ತಿನ್ನಿಸೀ ನಾಲಿಗೆಗೇ ಕೋಳ ಸಿಗಿಸಿ
ಅದೆಷ್ಟು ವರ್ಷದ ಭೋಗ್ಯಕ್ಕೆ ಬರೆಸಿಕೊಂಡನೋ ಇಡೀ ಕಾಡನ್ನ
ಈಗ ತನ್ನ ನೆಲದಲ್ಲೇ ಈ ಆದಿವರಾಹ, ಒಂದು ನಮಸ್ಕಾರಕ್ಕೆ ಬೇಡಿಕೋತಾನೆ
ಒಂದು ಮಂಗಳಾರತಿಗೆ ಗೋಗರೀತಾನೆ

ಎಲೆಲಾ ಶ್ರೀನಿವಾಸ...
ಅತ್ತ ಕಟ್ಟಿಕೊಂಡವಳನ್ನೂ ಯಾಮಾರಿಸಿ
ಇತ್ತ ಆಕಾಶರಾಯನಂಥವನಿಗೇ ಪಂಗನಾಮ ಬರೆಸಿ
ಅರೀದ ಅಜ್ಜೀನ ಮುಂದಿಟ್ಟುಕೊಂಡು ತಾವರೆ ಹುವ್ವಿನಂಥ ಬಾಲೇನ ಬಾಚಿಕೊಂಡು
ನಿನ್ನ ಸೋಬನದ ಸಾಲ ಊರ ತಲೆಗೆ
ಆದಿಕನ್ನಡ, ಆದಿತೆಲುಗ, ಆದಿತಮಿಳ ಅಷ್ಟೇಕೆ ಸನಾತನ ಭರತಖಂಡವೇ
ಮೂಗಿಗೆ ಕವಡೆ ಕಟ್ಟಿ
ಏಳುಬೆಟ್ಟ ಹತ್ತಿ ಇಳಿದು
ಗೋವಿಂದಾ ಗೋವಿಂದಾ ಗೋವಿಂದಾ
ತಲೆ ಬೋಳಿಸಿಕೊಳ್ಳುವುದಕ್ಕೆ ಭಾಷಾ ಭೇದವಿಲ್ಲ

ಐನಾತಿಗಳೆಂದರೆ
ಆ ಪ್ರಸಾದದ ಉಸ್ತುವಾರಿಯೋರು
ನಿತ್ಯ ಸೇರು ಸೇರು ತುಪ್ಪ ತಿಂದೂ ತಿಂದು
ಅಂಗಾಲಿಂದ ನೆತ್ತಿಯವರೆಗೆ ಮಿಣ ಮಿಣ ಮಿಂಚಿ
ಬೆನ್ನ ಮೇಲೆ ಕೈಯಿಟ್ಟರೆ ಸರ್‍ರಂತ ಜಾರಿ
ಯಾವ ಪಟ್ಟಿಗೂ ಸಿಗದ ಸುಕುಮಾರ ಜಟ್ಟಿ

ಕಾವ್ಯ

○ ಲಲಿತಾ ಸಿದ್ದಬಸವಯ್ಯ, ಎರಡು ಕವನಗಳು

ಪಾಲಿಸು ಎಮ್ಮನು ಪರಮದಯಾನಿಧಿ

ವಾರ್ಷಿಕ ವಿಶೇಷಾಂಕ ೨೦೦೫



ಇನ್ನೂ ಕಣ್ಬೆಳಕಿರುವಾಗಲೇ ಕಂಬಳಿ ಹಾಸುತ್ತಿದ್ದೋ
ಅದರ ನಾಕ್ಮೂಲೆಗೆ ನಾಕು ಬಾಂದುಕಲ್ಲು ಬೇರೆ
ಮೂರು ಮೀಸೆ ಹುರಿದ ಕಳ್ಳೆಕಾಯಿ ಮುಕ್ಕಿ
ಶೆಟ್ಟರಜ್ಜಿಯ ಪಕೋಡಕೂ ನಾಮವಿಕ್ಕಿ
ಇನ್ನೇನು 'ಆರ್ಮನಿ' ಕೊಂಯೈನ್ನುವ ಹೊತ್ತಿಗೆ
ಸೇರ್ ಗೋರ್ ನಿದ್ದೆ

ಎಚ್ಚರವಾಗುತ್ತಿದ್ದುದು 'ಮಾಭಾರತದ' ನಡುಮಧ್ಯೇವಿನ ಸೀನಿಗೇ
ತೂಲಿಕಾ ತಲ್ಪದ ಮೇಲೆ ಶ್ರೀಕೃಷ್ಣ ಪರಮಾತ್ಮ
ಸಿರದ ಕಡೆ ಸಿಡುಗುಟ್ಟುವ ಕೌರವ
ಪದ್ಮಪಾದಂಗಳ ಬಳಿ ಮಧ್ಯಮ ಪಾಂಡುವ
ಆಗಲೇ ನಮಗೆ ಒಂದಕ್ಕೋ ಎರಡಕ್ಕೋ ತರಾತುರಿ

ಎದ್ದೆದ್ದು ಹಿಂದಿರುವವರಿಗೆ ಅಡ್ಡಗೋಡೆಯಾಗುತ್ತಿದ್ದ
ನಮ್ಮ ನೆತ್ತಿಯ ಮೇಲೆ ಅಂಗೈಯಿಕ್ಕಿ ತುಳಿವವರ ನಡುವೆ
ನಮ್ಮಜ್ಜಿಯ ಸವಿನಯಮನವಿ ಮತ್ತು ಮೇಲು ಶಿಫಾರ್ಸು
'ಕಾಲುಮಡಿಗೋಗ್ತವಂತೆ ಮಗೀಗೊಂದಿಷ್ಟು ತಳ ಬಿಡ್ರಪ್ಪೋ'

ಹೆಂಗಸರ ತೊಡೆ, ಗಂಡಸರ ಮೊಣಕಾಲುಗಳ, ಕಚಕ್ಕನೆ ತುಳಿಯುತ್ತ
ನಿಷ್ಪಕ್ಷಪಾತವಾಗಿ ಉಗಿಸಿಕೊಳ್ಳುತ್ತ, ಎಡವುತ್ತ ಮುಗ್ಗರಿಸುತ್ತ
ಪ್ರೇಕ್ಷಕಾಂಬುಧಿಯನೀಸಿ ಈಚೆ ದಡಕ್ಕೆ ಬೀಳುವ ಹೊತ್ತಿಗೆ
ಬೆನ್ನ ಹಿಂದಿನಿಂದ ಅರ್ಜುನನ ಮಟ್ಟು ತೆರಕೊಳ್ಳುತ್ತಿತ್ತು
ಜೊತೆಗೆ ಅಜ್ಜಿಯ ಎಚ್ಚರ, 'ಅಪ್ಪನ ತಾವುಕ್ಕೇ ಹೋಗ್ರೋ'

ಬೆಳಕರಿಯುವ ತನಕ ಊರಿಗೆ ಊರೇ ಅಲ್ಲಿ
ಬೆಳಿಗ್ಗೆ ಒಡ್ಯಾಣದ ಹರಳು ಸುತ್ತೂರ ಚೆಲ್ಲಿ
ಯಾರ್‍ಯಾರು ಎಲ್ಲೆಲ್ಲಿ
ಅಟ್ಟದ ತುಂಬಾ ಗಳಕಿತ್ತ ಗಾಯ, ತುಂಡುವಡೆದ
ಗಾಂಡೀವ



ಎಂಥದೋ ಪರಿಮಳವೆನ್ನಬಾರದೋ ಏನೋ ಅಂಥಾ
ಪರಿಮಳ
ಊರಿಗೆ ಮುಂಚೆ ನಾವು ಹಿಡಿದಿದ್ದ ಆಯಕಟ್ಟಿನ
ಜಾಗದಲಿ ಹಂದಿಬಳಗ

-೨-
ಈಗ ನೂರು ನೂರು ರೂಪಾಯಿ ಮೀಟಿ
ಥೇಟರಿನ ಮುಂದಿನ ಸಾಲಲ್ಲೇ ಕುಂತು.............
ಯಾವಾಗ ಬೇಕಾದರೂ ಎದ್ದು ನಡೀತೀರಬೋದು
ಬೆಂಗಾವಲಿನ, ಮುಂಗಾವಲಿನ ಎರಡೂ ಕಡೆ
ಟೈಗರುಗಳಿಲ್ಲ
ಆದರೂ
ಹೊರಬಂದಾಗೆಲ್ಲ ರಿಮೋಟಿಲ್ಲದ ಕ್ಯಾಮರಾ ಕಣ್ಣು
ಹುಡುಕುತ್ತವೆ
ಅಪ್ಪ ಅಲ್ಲೆಲ್ಲಾದರೂ ಮರದ ಮರೆಗೆ ನಿಂತಿರಬೋದೇ
ಬೊಗಸೆಯಲ್ಲಿ ಕಿತ್ತಳೀ ತೊಳೆ ಪೆಪ್ಪರಮೆಂಟು
ಇರಬೋದೇ

-೩-
ಸ್ಥಾವರ ರಂಗಮಂದಿರದಲ್ಲಿ
ಜಂಗಮ ವೈಭವವಿರದಿದ್ದರೂ
ಈಗಲೂ ನಡುಮಧ್ಯೇವಿನ ಸೀನು ಮಾತ್ರ ಅದೇ
ಹುಡುಗಿಯರ ಹಿಂದಲೆಯುವ ಕೋಲಾಹಲವೆಲ್ಲ
ಉಡುಗಿದಂತಿರುವ ನಡುಹರೇವಿನ ಅದೇ ಪಾರ್ಥ
ಮಲಗಿರುವ ಕಂತುಪಿತನ ಪದತಲದಲ್ಲಿ ಅದೇ ಮಟ್ಟು

'ಪಾಲಿಸು ಎಮ್ಮನು ಪರಮದಯಾನಿಧಿ
ಸಾರಿಹ ಸಮರದೋಳ್ ಕರಪಿಡಿದು
ಬಂಧುಗಳಿಂದಲೆ ತುಂಬಿರುವಂತಹ
ಇದಿರಂಗಳದಲಿ ತಲೆಕಾಯ್ದು, ತಲೆಕಾಯ್ದು
ತಲೆಕಾಯ್ದೂ....'

ಮಾರುಕಟ್ಟೆ ಮೌಲ್ಯಗಳು ಮತ್ತು ಮಹಿಳೆ

○ ಡಾ|| ಮಲ್ಲಿಕಾ ಘಂಟಿ

ಪ್ರಾಚೀನ ಕಾಲದಿಂದ ಇಂದಿನವರೆಗೂ ಮಾರುಕಟ್ಟೆಗೆ ಒಂದು ಆರೋಗ್ಯಕರವಾದ ನೀತಿಸಂಹಿತೆಯನ್ನು ರೂಪಿಸುವ ವಿವೇಕ ಮತ್ತು ವ್ಯವಧಾನ ಸಾಮುದಾಯಿಕ ಜವಾಬ್ದಾರಿಯಾಗಿ ಯಾವ ಕಾಲದಲ್ಲಿ ಯಾರಲ್ಲಿಯೂ ಕಾಣಿಸಿಕೊಂಡಿಲ್ಲ. ಆರೋಗ್ಯಕರ ಸಮಾಜಕ್ಕೆ ಲಾಭಗಳಿಕೆಯ ವ್ಯವಹಾರಿಕತೆಯನ್ನು ನಿಯಂತ್ರಿಸುವ ಶಕ್ತಿಯಿಲ್ಲದಿದ್ದರೆ ಇಡೀ ವ್ಯವಸ್ಥೆಯೇ ನರಳಬೇಕಾಗುತ್ತದೆ. ಮಾರುಕಟ್ಟೆ ಸಂಸ್ಕೃತಿ ಗಳಿಕೆಯ ತೂಗುಕತ್ತಿಯನ್ನು ನಿರಂತರ ಗ್ರಾಹಕನ ಮೇಲೆ ಬೀಸುತ್ತಿರುತ್ತದೆ. ಇದರಿಂದ ವ್ಯಕ್ತಿ ಸಮಾಜಗಳು ಹಲವಾರು ಅಪಾಯಗಳಿಗೆ ಒಳಗಾಗಬೇಕಾಗುತ್ತದೆ.

ಭಾರತೀಯ ಸಮಾಜದಲ್ಲಿ ಹೆಣ್ಣನ್ನು ವ್ಯಕ್ತಿಯೆಂದು ಪರಿಗಣಿಸಿದ ಉದಾಹರಣೆಗಳಿಲ್ಲ. ಚರಿತ್ರೆಯುದ್ದಕ್ಕೂ ಹೆಣ್ಣನ್ನು ವಸ್ತು ಮುಖೇನವೆ ಗುರುತಿಸುವುದು ಯಾವ ಮಹಾತ್ಮರಿಗೂ ಅಪರಾಧವಾಗಿ ಕಾಣಿಸಿಲ್ಲ. ಗಂಡಸು ಸಂಪಾದಿಸಬಹುದಾದ ನಿರ್ಜೀವ ಭೌತಿಕ ವಸ್ತುವಿನಲ್ಲಿ ಹೆಣ್ಣನ್ನು ಪ್ರಭುತ್ವ ಮತ್ತು ಧರ್ಮ ಸತ್ತೆಗಳು ನಿರ್ಲಜ್ಜವಾಗಿ ಸೇರಿಸಿಕೊಂಡು ಬಂದಿರುವ ಬಗ್ಗೆ ಯಾವ ಸಮಾಜ ಸುಧಾರಕನ ಸಂಕಟಕ್ಕೆ ನಿಲುಕದ ಹಾಗೇ ಉಳಿದಿದೆ.

ಸರಕು ಸಂಸ್ಕೃತಿಯ ವಿಶೇಷತೆ ಮತ್ತು ಹಿತ ಅಡಗಿರುವುದೆ ಹೆಣ್ಣನ್ನು ಬಳಸಿಕೊಳ್ಳುವ ವಿಧಾನದಲ್ಲಿ. ಸಾಮಾಜಿಕವಾಗಿ ಹೆಣ್ಣನ್ನು ಬದುಕಿನುದ್ದಕ್ಕೂ ಅನ್ಯರ ಹಂಗಿನಲ್ಲಿರುವ ಬೆಲೆಯುಳ್ಳ ಪ್ರಾಣಿ, ವಸ್ತುವಾಗಿಸಿರುವ ಸಾಮಾಜಿಕ ಬದುಕಿನ ಸಂರಚನೆಯಲ್ಲಿಯೇ ಅಫೀಮಿನಂತಹ ಧರ್ಮ ಮತ್ತು ಹಿಂಸಾನಂದದ ಪ್ರಭುತ್ವದ ಕ್ರೌರ್ಯ ಗಟ್ಟಿಗೊಂಡಿದೆ. ಇದನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಸ್ತ್ರೀ ಬದುಕಿನ ಸಂಕಥನವನ್ನು ಕಟ್ಟಿಕೊಳ್ಳಲು ಸಾಧ್ಯ. ಮಾರುಕಟ್ಟೆಯಲ್ಲಿ ಮಹಿಳೆ ಕಳೆದುಹೋಗುತ್ತಿರುವ ಸಂಗತಿ ನಮಗೇನು ಹೊಸ ಸಂಗತಿಯಲ್ಲ. ನಮ್ಮ ಪುರಾಣ ಪುಣ್ಯ ಪುರುಷರ ಬೆನ್ನ ಹಿಂದೆ, ಕಣ್ಣ ಮುಂದೆ, ಕಾಲ ಕೆಳಗೆ, ಕಾಲಮೇಲೆ ಹೆಣ್ಣನ್ನು ಇಟ್ಟುಕೊಂಡು ದಮನಿಸಿದ ಸಂಗತಿಗಳು ನಮ್ಮ ಸಾಮಾಜಿಕ ಮೌಲ್ಯಗಳೆಂದು ಧರ್ಮಮುದ್ರೆಯ ಮೂಲಕ ನಿರಂತರ ಭಕ್ತಿಪೂರ್ವಕವಾಗಿ ಪಠಿಸುವ ಪರಿಪಾಠ ಇಂದಿಗೂ ನಿಂತಿಲ್ಲ.

ಮಹಾಭಾರತದಲ್ಲಿ ಧರ್ಮರಾಯ ಕೈಹಿಡಿದ ಹೆಂಡತಿ ದ್ರೌಪದಿಯನ್ನು ಹಿರಿಯರ ಸಮ್ಮುಖದಲ್ಲಿ ಜೂಜಿನಲ್ಲಿ ಪಣಕ್ಕಿಟ್ಟು ಸೋಲುವುದರ ಮೂಲಕ ಧರ್ಮವನ್ನು ಎತ್ತಿ ಹಿಡಿದ ಕಥೆಯನ್ನು ರಸವತ್ತಾಗಿ ಹೇಳುವ ಮುಂದೆ ದ್ರೌಪದಿಯ ಅಸಹಾಯಕತೆ ನೆನಪಾಗುವುದೆಯಿಲ್ಲ. ಸಪ್ತಪದಿ ತುಳಿದು ಸುಖದುಃಖದಲ್ಲಿ ಸಮವಾಗಲೆಂದು ಕೈಹಿಡಿದು ಬಂದ ಹೆಂಡತಿಯನ್ನು ತುಂಬಿದ ಸಭೆಯಲ್ಲಿ ನಿಲ್ಲಿಸಿ ಪಾತಿವ್ರತ್ಯ ಪರೀಕ್ಷಿಸುವ ರಾಮ ಮಹಾತ್ಮನೆಂದು ಕರೆಯಿಸಿಕೊಂಡಿದ್ದರ ಹಿಂದೆ ಸೀತೆಯ ದಯನೀಯತೆ ಮರೆತು ಹೋಗುತ್ತದೆ. ಸತ್ಯಕ್ಕಾಗಿ ಹರಿಶ್ಚಂದ್ರ ಹೆಂಡತಿಯನ್ನು ಮಾರುವಾಗ ಚಂದ್ರಮತಿ ಅನುಭವಿಸಿದ ಸಂಕಟದ ಅರಿವು ಯಾರ ಹೃದಯಕ್ಕೂ ತಟ್ಟುವುದಿಲ್ಲ. ಯಯಾತಿ ಮಹಾರಾಜ ತನ್ನ ಹೆಸರುಳಿಸಿಕೊಳ್ಳುವ ಸಲುವಾಗಿ ದಾನವಾಗಿ ಕುದುರೆ ಕೇಳಿದ ಗಾಲವನಿಗೆ ಹೊಟ್ಟೆಯಲ್ಲಿ ಹುಟ್ಟಿದ ಮಗಳು ಮಾಧವಿಯನ್ನು ದಾನವಾಗಿ ನೀಡಿದ್ದು ಉಳಿದಿರುವುದೇ ಹೊರತು ಮಾಧವಿಯ ಛಿದ್ರಗೊಂಡ ಕನಸುಗಳು ಮರೆತುಹೋಗಿವೆ.

ಗುರುವಿಗೆ ದಕ್ಷಿಣೆ ಕೊಟ್ಟ ಗುರುಭಕ್ತಿಯನ್ನು ಮೆರೆಯುವ ಸಲುವಾಗಿ ಗಾಲವ ರಾಜರಿಂದ ರಾಜರಿಗೆ ಮಾಧವಿಯನ್ನು ಹೆತ್ತುಕೊಡುವ ಯಂತ್ರದಂತೆ ಮಾರಿ ಕುದುರೆ ಪಡೆಯುತ್ತ ಹೋದ ಸಂಗತಿ ನಮಗೆ ಅಮಾನುಷವೆನಿಸಲೇ ಇಲ್ಲ. ಮಹತ್ವಾಕಾಂಕ್ಷೆಯ ಮತ್ತಿನಲ್ಲಿ ಗಂಡಸು ಹೆಣ್ಣನ್ನು ನಿರಂತರ ದಮನಿಸುತ್ತ ಬಂದಿರುವ ಸಂಗತಿ ಸಾಮಾಜಿಕವಾಗಿ ಮೌಲ್ಯೀಕರಣಗೊಂಡಿರುವುದರಿಂದ ಇಂದಿಗೂ ಹೆಣ್ಣನ್ನು ದಾನಮಾಡುವ, ಒತ್ತೆ ಇಡುವ, ಕೈಗಡ ಕೊಡುವುದೆಲ್ಲ ನ್ಯಾಯ ಸಮ್ಮತವಾಗಿಯೇ ಮುಂದುವರಿದಿದೆ. ಇದು ಒಂದರ್ಥದಲ್ಲಿ ಅಂದರೆ ಧಾರ್ಮಿಕ ಪರಿಧಿಯ ಮಾರುಕಟ್ಟೆಯ ಸಂಸ್ಕೃತಿಯನ್ನು ತೋರಿಸುವಂತದ್ದೆ. ಇಂದು ಈ ಧೋರಣೆ ಉದ್ಯಮವಾಗಿ ಬೆಳೆದಿರುವುದರಿಂದ ಎಲ್ಲ ವಸ್ತುವಿನ ಮಾರ್ಕೆಟ್ ಕುದುರಿಸುವ ಪ್ರಬಲ ಸಾಧನವಾಗಿ ಹೆಣ್ಣನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಎಲ್ಲ ಪುರಾಣ ಕಥೆಗಳು ಬರೀ ಹೇಳಲು, ಕೇಳಲು ಇರುವಂತವುಗಳಾಗಿದ್ದರೆ ಸಮಸ್ಯೆಯಿರಲಿಲ್ಲ. ಆದರೆ ಇಂತಹ ಘಟನೆಗಳು ಮತ್ತೆ ಮತ್ತೆ ನಿತ್ಯ ಬದುಕಿನಲ್ಲಿ ಪುನರಾವರ್ತನೆಗೊಳ್ಳುತ್ತಿರುವ ಮತ್ತು ಅದನ್ನು ಸಮುದಾಯಗಳ ಸಂಸ್ಕೃತಿಯ

ಮಹತ್ವಾಕಾಂಕ್ಷೆಯ ಮತ್ತಿನಲ್ಲಿ ಗಂಡಸು ಹೆಣ್ಣನ್ನು ನಿರಂತರ ದಮನಿಸುತ್ತ ಬಂದಿರುವ ಸಂಗತಿ ಸಾಮಾಜಿಕವಾಗಿ ಮೌಲ್ಯೀಕರಣಗೊಂಡಿರುವುದರಿಂದ ಇಂದಿಗೂ ಹೆಣ್ಣನ್ನು ದಾನಮಾಡುವ, ಒತ್ತೆ ಇಡುವ, ಕೈಗಡ ಕೊಡುವುದೆಲ್ಲ ನ್ಯಾಯ ಸಮ್ಮತವಾಗಿಯೇ ಮುಂದುವರಿದಿದೆ. ಇದು ಒಂದರ್ಥದಲ್ಲಿ ಅಂದರೆ ಧಾರ್ಮಿಕ ಪರಿಧಿಯ ಮಾರುಕಟ್ಟೆಯ ಸಂಸ್ಕೃತಿಯನ್ನು ತೋರಿಸುವಂತದ್ದೆ. ಇಂದು ಈ ಧೋರಣೆ ಉದ್ಯಮವಾಗಿ ಬೆಳೆದಿರುವುದರಿಂದ ಎಲ್ಲ ವಸ್ತುವಿನ ಮಾರ್ಕೆಟ್ ಕುದುರಿಸುವ ಪ್ರಬಲ ಸಾಧನವಾಗಿ ಹೆಣ್ಣನ್ನು ಬಳಸಿಕೊಳ್ಳಲಾಗುತ್ತಿದೆ.



ಸಂಗತಿಯಾಗಿಸುತ್ತಿರುವ ಬಗ್ಗೆ ಆತಂಕಪಡುವಂತಾಗಿದೆ. ಮೇಲ್ವರ್ಗ, ಜಾತಿಯಲ್ಲಿ ಯೋನಿ ಶುದ್ಧಿಗಾಗಿ ಹುಟ್ಟಿಕೊಂಡ ಪಾತಿವ್ರತ್ಯದ ಪರಿಕಲ್ಪನೆ ಕ್ರಮೇಣ ಶೂದ್ರ ಮತ್ತು ದುಡಿಯುವ ವರ್ಗದಲ್ಲಿ ಬೇರುಬಿಡುತ್ತಿರುವುದು ಆಘಾತಕಾರಿ ವಿಷಯ ವಾಗಿದೆ. ಮೇಲ್ವರ್ಗ ಜಾತಿಗಳು ಲಾಭದಾಯಕ ನೆಲೆಯಲ್ಲಿ ಅನುಕೂಲಸಿಂಧು ಪ್ರವೃತ್ತಿಯನ್ನು ಎಚ್ಚರವಾಗಿಟ್ಟುಕೊಂಡಿರು ವುದರಿಂದ ಆ ಸಂಸ್ಕೃತಿಯಲ್ಲಿ ಚಲನಶೀಲತೆ ಉಂಟಾಗುವ ಸಾಧ್ಯತೆಗಳು ಕಾಣಿಸಿಕೊಳ್ಳುತ್ತದೆ.

ಆದರೆ ಕೆಳಜಾತಿ, ವರ್ಗಗಳಲ್ಲಿ ಚಾಚಿಕೊಂಡಿರುವ ಸ್ತ್ರೀ ಕಾರಣದ ನಂಬಿಕೆಗಳು ಆಳವಾಗಿ ಬೇರು ಬಿಡುತ್ತ ಸ್ಥಾವರಗೊಂಡು ತಲೆಮಾರಿನಿಂದ ತಲೆಮಾರಿಗೆ ಪಿತ್ರಾರ್ಜಿತ ಆಸ್ತಿಯಂತೆ ರಕ್ಷಿಸಲ್ಪಡುವ ಕಾರಣ ಈ ವರ್ಗದಲ್ಲಿ ಹೆಂಗಸಿನ ಮೇಲಿನ ಕ್ರೌರ್ಯ ಬೀದಿಯಲ್ಲಿ ನಡೆಯುವುದು ಸಹ ಸಹಜವೆನಿಸಿಕೊಳ್ಳುತ್ತಿದ್ದೆ, ಅದು ಆ ವರ್ಗದ ಸಂಸ್ಕೃತಿಯೆಂದು ಕರೆಯಿಸಿಕೊಳ್ಳುತ್ತದೆ. ಹೀಗಾಗಿ ಮೇಲ್ವರ್ಗ, ಮೇಲ್ ಜಾತಿಯ ಯಜಮಾನ ಸಂಸ್ಕೃತಿ ತನ್ನ ಹಿತಕ್ಕಾಗಿ ಬಳಸಿಕೊಂಡು ಎಸೆದ ಸಿಪ್ಪೆಯನ್ನು ಕೆಳವರ್ಗದ ಶೂದ್ರ ಗಂಡಸರು ಅದನ್ನು ಆಸೆಬುರುಕತನದಿಂದ ದವಡೆಗೆ ಹಾಕಿ ನುರಿಸಿ ನುರಿಸಿ ತಿನ್ನುವರು. ಇದರಿಂದ ಮಹಿಳೆ ತನ್ನೆಲ್ಲ ಬದುಕು, ಭಾಗ್ಯವನ್ನು ಗಂಡಸು ಉಗುಳುವ ಎಂಜಲಿನಲ್ಲಿ ಕಾಣುವುದೆಲ್ಲ ಹಣೆಬರಹವೆಂದು ಭೂಮಿ ತೂಕ ಉಳಿಸಿಕೊಂಡಿರುವಳು. ಹೆಣ್ಣಿನ ಮತ್ತು ಬಲಹೀನ ಗಂಡಸರ ದಮನಕ್ಕಾಗಿ ಸಂಸ್ಕೃತಿಯ ಹೆಸರಿನಲ್ಲಿ ಹುಟ್ಟಿರುವ ವಿಷಯವನ್ನೆಲ್ಲ ಹೆಣ್ಣು ಅತ್ಯಂತ ಶ್ರದ್ಧೆಯಿಂದ ಪಾಲಿಸಿಕೊಂಡು ಹೋಗುವ ರೀತಿಯ ಬಗ್ಗೆಯು ವಿಚಾರ ನಡೆಯಬೇಕಾಗಿದೆ.

ಪ್ರಾಚೀನ ಭಾರತದ ಕೌಟುಂಬಿಕ ಮತ್ತು ಸಮಾಜ ದಲ್ಲಿಯು ಹೆಣ್ಣನ್ನು ಗ್ರಾಹಕ ಸಂಸ್ಕೃತಿಯ ಭಾಗವಾಗಿಯೇ ನೋಡಲಾಗಿದೆ. ಕೊಳ್ಳುಬಾಕ ಸಂಸ್ಕೃತಿಯಿಂದ ಶೋಷಣೆ ಗೊಳಪಡುತ್ತಲೇ ಆ ಸಂಸ್ಕೃತಿಯ ರಕ್ಷಕಳಾಗಿಯೂ ಅನಾದಿ ಕಾಲದಿಂದಲೂ ಅದೇ ವ್ಯಕ್ತಿತ್ವವನ್ನು ಉಳಿಸಿಕೊಂಡಿರುವುದೆಲ್ಲ ಸ್ತ್ರೀ ಸಹಜ ಸ್ವಭಾವವೆಂದು ಕರೆದು ಮತ್ತೆ ಮತ್ತೆ ಅದನ್ನು ಸಾಮಾಜಿಕ ಉದಾಸೀನತೆಗೆ ಒಳಪಡಿಸಲಾಗಿದೆ. ಬಂಗಾರದ ಜಿಂಕೆಯನ್ನು ಮುಂದಿಟ್ಟು ಸೀತೆಯನ್ನು ಅಪಹರಿಸಿದ್ದರ ಹಿಂದೆ ರಾವಣನಲ್ಲಿಯೂ ಈ ವ್ಯಾಪಾರಿ ಸಂಸ್ಕೃತಿ ಚಲಾವಣೆ ಗೊಂಡಿದೆ.

ನಮ್ಮ ರಾಜಮಹಾರಾಜರುಗಳೆಲ್ಲ ಯುದ್ಧದಲ್ಲಿ ಗೆದ್ದಾಗ ಮಾಡಿದ ಮೊದಲ ಕೆಲಸ ಅರಮನೆಯ ಹೆಣ್ಣು ಮಕ್ಕಳನ್ನು ಹೊತ್ತೊಯ್ಯದಿರುವುದು ಸಹ ಇದೇ ಧೋರಣೆ ಯಿಂದ. ಶೃಂಗೇರಿಯ ಮಠದಲ್ಲಿ ಶೂದ್ರ ಸ್ತ್ರೀ ಗೋದಾವರಿ ಯನ್ನು ಮಾರಿದ ದಾಖಲೆ ಕಡತಗಳಲ್ಲಿ ಮಿಂಚುತ್ತಿದೆ. ಇಂದಿಗೂ ಗಂಡಸಿನ ಅಹಮ್ಮಿಕೆಗೆ ಪೆಟ್ಟು ಬೀಳುವುದೆಲ್ಲ ಆತನ ಹೇಡಿತನದಲ್ಲಿರುವ ಹೆಂಗಸರನ್ನು ಕುರಿತು ಮಾತನಾಡಿದಾಗ ಮಾತ್ರ.

ನಮ್ಮ ಸುತ್ತಮುತ್ತಲೂ ನಡೆಯುತ್ತಿರುವ ಘಟನೆಗಳಿಗೆ ಒಂದಿಲ್ಲಾ ಒಂದು ರೀತಿಯಲ್ಲಿ ಹೆಣ್ಣನ್ನು ತಳುಕು ಹಾಕಲಾಗಿರು ತ್ತದೆ. ಹೆಣ್ಣನ್ನು ಮಾರುವ, ಕೊಳ್ಳುವ, ಪಣಕ್ಕಿಡುವ, ಕದ್ದು ಪರಾರಿ ಆಗುವ ವಿಷಯಗಳೆಲ್ಲ ಮಾರುಕಟ್ಟೆಯ ಸಂಸ್ಕೃತಿಯ ಇನ್ನೊಂದು ರೂಪ. ಅಷ್ಟೇ ಅಲ್ಲ ಹೆಣ್ಣನ್ನು ನಿರ್ಜೀವ ವಸ್ತುವಾಗಿ ಸಂಬೋಧಿಸುವುದನ್ನು ಕಾಣಬಹುದು.



ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಕಾರಣಗಳಿಂದ ಅಭಿವೃದ್ಧಿಶೀಲ ದೇಶಗಳು ತಮ್ಮ ಬಹುಮುಖಿ ಅಸ್ತಿತ್ವವನ್ನು ಕಳೆದುಕೊಳ್ಳುವ ಅಪಾಯದಲ್ಲಿವೆ. ವ್ಯಾಪಾರೀ ಉದ್ದೇಶದಿಂದ ಬರುವ ವ್ಯಕ್ತಿ-ಸಂಗತಿಗಳೆಲ್ಲ ಬರೀ ಲಾಭದ ಮೇಲೆ ಕಣ್ಣಿಟ್ಟಿರುತ್ತವೆ. ಲಾಭ ಗಳಿಕೆಗಾಗಿ ಜೀವ ವಿರೋಧಿ ತಂತ್ರಗಳನ್ನೆಲ್ಲ ಯಥೇಚ್ಛವಾಗಿಯೇ ಬಳಸುತ್ತವೆ. ವಿಶ್ವವಾಣಿಜ್ಯ ನೀತಿಗೆ ಒಪ್ಪಿಗೆ ನೀಡುವಾಗ ನಮ್ಮ ದೇಶದ ಆರ್ಥಿಕ, ಸಾಮಾಜಿಕ ಹಿನ್ನೆಲೆಯ ಅಸ್ತಿತ್ವಕ್ಕೆ ಧಕ್ಕೆ ಭವಿಷತ್ತಿನಲ್ಲಿ ಬರಬಹುದು ಎಂಬ ಮುಂಜಾಗರೂಕತೆ, ಮುಂದಾಲೋಚನೆಗಳಿಲ್ಲದೆ ವಧಾಸ್ಥಾನಕ್ಕೆ ಬಂದು ನಿಂತಿರುವೆವು. ಬಹುರಾಷ್ಟ್ರೀಯ ಕಂಪನಿಗಳಿಗೆ ರತ್ನಗಂಬಳಿಯನ್ನು ಹಾಸಿ ನಡುಮನೆಗೆ ಕರೆದುಕೊಂಡಿದ್ದೇವೆ. ಹೀಗೆ ಬಂದವರಿಗೆ ನಮ್ಮ ಮನೆಯ ಹೆಂಗಸರಿಂದ ರಾಜೋಪಚಾರ ನೀಡಲು ಭ್ರಮೆ ಮತ್ತು ದುರಾಸೆಯ ಒತ್ತಡಗಳನ್ನು ಹೇರಿದ್ದೇವೆ.

ಇಂದಿಗೂ ಅದು, ಇದು ಎಂದೆ ಕರೆಯಲಾಗುತ್ತದೆ. ಅಷ್ಟೇ ಅಲ್ಲ ಎತ್ತು ಕತ್ತೆಗಳನ್ನು ಓಡಿಸಿಕೊಂಡುಹೋದರು ಎನ್ನುವಂತೆ ಹೆಣ್ಣನ್ನು ಸಹ ಓಡಿಸಿಕೊಂಡು ಹೋಗಲಾಯಿತು ಎಂದು ಕರೆಯುವುದನ್ನೆಲ್ಲ ನೋಡಿದಾಗ ಹೆಣ್ಣಿನ ಇರುವಿಕೆಯನ್ನು ಸಾಂಸ್ಕೃತಿಕವಾಗಿ ಹೇಗಿದೆಯೆಂಬುದನ್ನು ಮತ್ತೆ ಮತ್ತೆ ವೇದಪುರಾಣಗಳನ್ನು ನಿಷೆಗಾಗಿ ಬಳಸಬೇಕಾಗಿಲ್ಲ.

ಇಂದು ಜಾಗತೀಕರಣ, ಖಾಸಗೀಕರಣ, ಉದಾರೀ ಕರಣ ಕಾರಣಗಳಿಂದ ಅಭಿವೃದ್ಧಿಶೀಲ ದೇಶಗಳು ತಮ್ಮ ಬಹುಮುಖಿ ಅಸ್ತಿತ್ವವನ್ನು ಕಳೆದುಕೊಳ್ಳುವ ಅಪಾಯದಲ್ಲಿವೆ. ವ್ಯಾಪಾರೀ ಉದ್ದೇಶದಿಂದ ಬರುವ ವ್ಯಕ್ತಿ-ಸಂಗತಿಗಳೆಲ್ಲ ಬರೀ ಲಾಭದ ಮೇಲೆ ಕಣ್ಣಿಟ್ಟಿರುತ್ತವೆ. ಲಾಭಗಳಿಕೆಗಾಗಿ ಜೀವ ವಿರೋಧಿ ತಂತ್ರಗಳನ್ನೆಲ್ಲ ಯಥೇಚ್ಛವಾಗಿಯೇ ಬಳಸುತ್ತವೆ. ಐವತ್ತು ವರ್ಷದ ಹಿಂದೆ ಭಾರತಕ್ಕೆ ಕಾಲಿಟ್ಟ ಬ್ರಿಟಿಷರ ಕೈಯಲ್ಲಿ ತಕ್ಕಡಿ ಮಾತ್ರವಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕಾಗಿದೆ. ಇಂದು ಮತ್ತೆ ಅದೇ ಅಪಾಯದಲ್ಲಿ ದೇಶ ಸಿಲುಕುತ್ತಿದೆ. ವ್ಯಕ್ತಿ ಹಿತಾಸಕ್ತಿಯ ರಾಜಕಾರಣಕ್ಕೆ ಯಾವುದೇ ತಾತ್ವಿಕ ಬದ್ಧತೆ ಯಿಲ್ಲದೆ ಇರುವುದರಿಂದ ಏನೆಲ್ಲ ಆಪತ್ತುಗಳನ್ನು ಆಹ್ವಾನಿ ಸಿದ್ದೇವೆ. ವಿಶ್ವವಾಣಿಜ್ಯ ನೀತಿಗೆ ಒಪ್ಪಿಗೆ ನೀಡುವಾಗ ನಮ್ಮ ದೇಶದ ಆರ್ಥಿಕ, ಸಾಮಾಜಿಕ ಹಿನ್ನೆಲೆಯ ಅಸ್ತಿತ್ವಕ್ಕೆ ಧಕ್ಕೆ ಭವಿಷತ್ತಿನಲ್ಲಿ ಬರಬಹುದು ಎಂಬ ಮುಂಜಾಗರೂಕತೆ, ಮುಂದಾಲೋಚನೆಗಳಿಲ್ಲದೆ ವಧಾಸ್ಥಾನಕ್ಕೆ ಬಂದು ನಿಂತಿರು ವೆವು. ಬಹುರಾಷ್ಟ್ರೀಯ ಕಂಪನಿಗಳಿಗೆ ರತ್ನಗಂಬಳಿಯನ್ನು ಹಾಸಿ ನಡುಮನೆಗೆ ಕರೆದುಕೊಂಡಿದ್ದೇವೆ. ಹೀಗೆ ಬಂದವರಿಗೆ ನಮ್ಮ ಮನೆಯ ಹೆಂಗಸರಿಂದ ರಾಜೋಪಚಾರ ನೀಡಲು ಭ್ರಮೆ ಮತ್ತು ದುರಾಸೆಯ ಒತ್ತಡಗಳನ್ನು ಹೇರಿದ್ದೇವೆ.

ಈ ಜಾಗತೀಕರಣ ಪ್ರಕ್ರಿಯೆಯಿಂದ ಬಹುಸಂಖ್ಯಾತ ದುಡಿವ ವರ್ಗ ಮತ್ತು ಮಹಿಳೆಯರು ಅಗ್ಗದ ವಸ್ತುಗಳಾಗಿ ಬಳಕೆಗೊಳ್ಳುತ್ತಿರುವ ಶೋಚನೀಯ ವಾತಾವರಣ ದೇಶದುದ್ದಕ್ಕೂ ಕಾಣಿಸುತ್ತಿದೆ. ಧಾರ್ಮಿಕವಾಗಿಯೇ ಹೆಣ್ಣನ್ನು ಭೋಗಪ್ರದ ಜೀವವೆಂದು ಸಾರಿದ್ದಷ್ಟೇ ಅಲ್ಲ ಅದನ್ನು ಸಂಸ್ಕೃತಿ ಯಾಗಿಯು ಬೆಳೆಸಿಕೊಂಡು ಬರುತ್ತಿರುವೆವು. ಈ ಹಳೆಯ ಪುರಾಣ ಮೂಲದ ಸ್ತ್ರೀ ಮಾದರಿಗಳು ಇಂದು ಸಾಣೆ ಹಿಡಿಯಲ್ಪಟ್ಟು ಹೊಸ ರೂಪದಲ್ಲಿ ತಳುಕು ಬಳುಕಿನಿಂದ ನಾವು ಕೊಳ್ಳುವ ವಸ್ತುಗಳಿಗೆ ಕಿರುನಗೆ ಚಿಮ್ಮಲು ನಿಂತಿರುವಳು.

ಬಂಡವಾಳ ಹೂಡುವ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಸ್ವದೇಶಿ ಬಂಡವಾಳಶಾಹಿಗಳು ರಾಷ್ಟ್ರದ ಆರ್ಥಿಕ ಸ್ವಾಯತ್ತತೆ, ಸ್ವಾವಲಂಬನೆಯ ನೆಲೆಗಳನ್ನು ಕ್ರಮೇಣ ನಿಷ್ಕ್ರಿಯ ಗೊಳಿಸುತ್ತಿವೆ. ಇದಕ್ಕಾಗಿ ರಾಜಕೀಯ ಅರಾಜಕತೆಯನ್ನು ಹುಟ್ಟು ಹಾಕುತ್ತದೆ. ಪ್ರಜ್ಞಾವಂತರ ಗಮನ ತನ್ನ ಮೇಲೆ ಬೀಳದಿರುವಂತೆ ಮತೀಯ ಭಯೋತ್ಪಾದಕತೆಯನ್ನು ಪ್ರಚೋದಿಸುತ್ತದೆ. ಜನಸಾಮಾನ್ಯರನ್ನೊಳಗೊಂಡ ಹಾಗೇ ಇಡೀ ಜನಸಮುದಾಯಗಳಲ್ಲಿ ಪರಸ್ಪರ ಸಂದೇಹ, ಅಪನಂಬುಗೆಯನ್ನುಂಟು ಮಾಡಿ ಆಂತರಿಕ ನೆಮ್ಮದಿಯನ್ನು

ತಿಳಿದಿರುತ್ತದೆ. ಹೀಗೆ ತಾನು ಉತ್ಪಾದಿಸಿದ ವಸ್ತುವಿಗೆ ಗ್ರಾಹಕನ ಮನೆಯ ಬಾಗಿಲನ್ನು ತಟ್ಟಲು ಅಗ್ಗದ ಕೂಲಿಯಲ್ಲಿ ಮಹಿಳೆಯರನ್ನು ದುಡಿಸಿಕೊಳ್ಳಲಾಗುತ್ತಿದೆ. ಏಕಕಾಲದಲ್ಲಿ ನಮ್ಮ ಮಹಿಳೆಯರು ಮತ್ತು ನಮ್ಮ ಗಂಡಸರ ಕಿಸೆಯ ಭಾರ ಹಗುರವಾಗುವುದು. ಹೆಣ್ಣಿನ ಸೌಂದರ್ಯ ಬಹುಕಾಲದಿಂದ ಬಲಿಷ್ಟ ಗಂಡಸಿನ ಉಪಭೋಗಕ್ಕಾಗಿ ವೃದ್ಧಿಯಾಗುತ್ತಿತ್ತು.

ನಿಂದ ಬಂದ ಬಿಳಿ ಚರ್ಮದ ಬಣ್ಣ ಜಗತ್ತಿನ ಮೇಲೆ ಅಧಿಪತ್ಯ ಸಾಧಿಸುವ ತನ್ನ ಇರಾದೆಯನ್ನು ಹಲವು ಮೂಲಗಳಿಂದ ಜೀವಂತವಾಗಿಟ್ಟುಕೊಂಡಿದೆ.

ಈ ಪಶ್ಚಿಮಾಂಗನೆ ಪೂರ್ವಾಂಗನೆಯ ಸ್ಥಾನವನ್ನು ಕಬಳಿಸುತ್ತಾ ಆಕೆಯನ್ನು ದಾಸಿಯನ್ನಾಗಿ ಮಾಡಿಕೊಳ್ಳುವ ಎಲ್ಲ ಹುನ್ನಾರಗಳು ಜಾಗತೀಕರಣದ ಹೆಬ್ಬಯಕೆಯಾಗಿದೆ. ಅತ್ಯ



ವಿಶ್ವ ಮಾರುಕಟ್ಟೆಯಲ್ಲಿ ಒಂದು ವಸ್ತುವಿನ ಅಸ್ತಿತ್ವವನ್ನು ಸ್ಥಾಪಿಸಬೇಕಾದರೆ ಹೆಣ್ಣಿನ ಸೌಂದರ್ಯ ದೇಹವೊಂದು ಮುಖ್ಯ ಪಾತ್ರವಹಿಸುತ್ತದೆ. ಏಕಕಾಲದಲ್ಲಿ ಇದರಿಂದ ಎಲ್ಲ ವರ್ಗದ ಮಹಿಳೆಯರಲ್ಲಿ ಕೀಳರಿಮೆ ಮತ್ತು ಸೌಂದರ್ಯದ ಬಗ್ಗೆ ಭಯ ಹುಟ್ಟಿಕೊಳ್ಳುತ್ತದೆ. ದೇಹಮುಖಿ ಬದುಕಿನ ಬಗ್ಗೆ ಭ್ರಮೆಯನ್ನು ಸಮಾಜದಲ್ಲಿ ಆಳವಾಗಿ ಬೆಳೆಸಿದಷ್ಟು ವಸ್ತು ಉಪಭೋಗ ಹೆಚ್ಚಾಗುತ್ತಾ ಹೋಗುವುದು. ಅದಕ್ಕಾಗಿಯೆ ಸೌಂದರ್ಯದ ವ್ಯಾಖ್ಯಾನ ದೇಶಿ ಡಿಕ್ಷನರಿಯಿಂದ ವಿದೇಶಿ ಡಿಕ್ಷನರಿಯಲ್ಲಿ ಸೇರಿಕೊಂಡಿದೆ.

ಕಿತ್ತುಕೊಳ್ಳುತ್ತದೆ. ಇದಕ್ಕೆಲ್ಲ ಸ್ತ್ರೀಯನ್ನು ಒಂದಿಲ್ಲಾ ಒಂದು ರೀತಿಯಲ್ಲಿ ತಳುಕುಹಾಕಿರುತ್ತದೆ.

ಇಲ್ಲಿಯ ಬೌದ್ಧಿಕ ಮತ್ತು ಭೌತಿಕ ಸಂಪತ್ತಿನ ಮೇಲೆ ಆಕ್ರಮಣಕಾರಿ ನೀತಿಯನ್ನು ಹೇರುತ್ತದೆ. ಮಹಿಳೆಯರಲ್ಲಿ ಉಪಭೋಗಪ್ರಧವಾದ ಮನೋವೃತ್ತಿಯನ್ನು ಉದ್ದೀಪಿಸುತ್ತದೆ. ದುಡಿಯುವ ವರ್ಗದ ದುಡಿಯುವ ಅವಕಾಶಗಳನ್ನು ಯಂತ್ರಗಳ ಬಾಯಿಗೆ ಒಡ್ಡುತ್ತದೆ. ಹೀಗೆ ಆರ್ಥಿಕ ಅಸಹಾಯಕತೆಯಿಂದ ಬಳಲುವ ಜನವರ್ಗ ವ್ಯಾಪಾರಿ ತಂತ್ರಗಳಿಗೆ ಹೊಸ ಹೊಸ ರೂಪದಲ್ಲಿ ಬಲಿಯಾಗುತ್ತದೆ.

ಮುಂದುವರೆದ ದೇಶಗಳು ಉತ್ಪಾದಿಸುತ್ತಿರುವ ಕಾಂಡೋಂನಿಂದ ಹಿಡಿದು ಮಕ್ಕಳ ತಿನ್ನುವ ಚಾಕೋಲೇಟ್‌ನವರೆಗೂ ತಮ್ಮ ದೇಶದಲ್ಲಿ ಮಾರುಕಟ್ಟೆ ಕಳೆದುಕೊಂಡಿರುವ ಕಾರಣಕ್ಕಾಗಿ ಜಾಗತಿಕ ಮಾರುಕಟ್ಟೆಯನ್ನು ಮುಕ್ತವಾಗಿಟ್ಟಿದೆ. ಎಲ್ಲ ರೀತಿಯಿಂದಲೂ ಹಸಿದು ಕುಳಿತಿರುವ ಹಿಂದುಳಿದ ದೇಶಗಳು ದಿಢೀರನೆ ಈ ವ್ಯಾಪಾರಿ ಜಾಲಕ್ಕೆ ಬಿದ್ದು ದೇಶಿಯ ಸಾರ್ವಜನಿಕ ಉದ್ಯಮ ವ್ಯವಹಾರಗಳೆಲ್ಲ ಕುಸಿದು ಹೋಗಿವೆ. ಸರಕಾರಿ, ಸಾರ್ವಜನಿಕ ಉದ್ಯಮಗಳೇ, ಕೃತಕ ನಷ್ಟದ ಕಾರಣಕ್ಕಾಗಿ ಶಾಶ್ವತವಾಗಿ ಬೀಗಜಡಿದು ಖಾಸಗಿಯವರ ಕೈಯಲ್ಲಿ ಬೀಗ ನೀಡುತ್ತಿರುವವು. ಇದರಿಂದ ಮಾರುಕಟ್ಟೆಯ ನೀತಿ ಹೇಗೆ ರೂಪಿಸಲ್ಪಡುತ್ತಿದೆಯೆಂದರೆ 'ಅಕ್ಕನನ್ನು ತೆಗೆದುಕೊಂಡರೆ ತಂಗಿ ಫ್ರೀ' ಎಂದು ರಸ್ತೆ ಬದಿಯಲ್ಲಿ ನಿಂತು ಕೂಗಿ ಕೂಗಿ ಕರೆಯುವಂತಾಗಿದೆ.

ಹೀಗೆ ಗ್ರಾಹಕನಲ್ಲಿ ಅಗ್ಗದರ ಮತ್ತು ಫ್ರೀ ಎನ್ನುವದರ ಆಮಿಷ ತೋರಿಸಿ ತನ್ನ ಉತ್ಪಾದನಾ ವಸ್ತುಗಳನ್ನು ಬಳಸುವಂತೆ ಮಾನಸಿಕ ರೋಗಕ್ಕೆ ಒಳಪಡಿಸಿದರೆ ಮುಗಿದೆ ಹೋಯಿತು. ಮಾನಸಿಕವಾಗಿ ಗುಲಾಮನಾದ ಗ್ರಾಹಕನನ್ನು ನಿರಂತರ ಶೋಷಿಸುವ ವಿಧಾನ ಬಂಡವಾಳಿಗರಿಗೆ ಚೆನ್ನಾಗಿ

ಅದಕ್ಕಾಗಿಯೇ ಒಂದು ವರ್ಗದ ಹೆಣ್ಣನ್ನು ಸಿದ್ಧಗೊಳಿಸಲಾಗುತ್ತಿತ್ತು. ಇಂದು ಸಹ ವಿಶ್ವ ಮಾರುಕಟ್ಟೆಯಲ್ಲಿ ಒಂದು ವಸ್ತುವಿನ ಅಸ್ತಿತ್ವವನ್ನು ಸ್ಥಾಪಿಸಬೇಕಾದರೆ ಹೆಣ್ಣಿನ ಸೌಂದರ್ಯ ದೇಹವೊಂದು ಮುಖ್ಯ ಪಾತ್ರವಹಿಸುತ್ತದೆ.

ಏಕಕಾಲದಲ್ಲಿ ಇದರಿಂದ ಎಲ್ಲ ವರ್ಗದ ಮಹಿಳೆಯರಲ್ಲಿ ಕೀಳರಿಮೆ ಮತ್ತು ಸೌಂದರ್ಯದ ಬಗ್ಗೆ ಭಯ ಹುಟ್ಟಿಕೊಳ್ಳುತ್ತದೆ. ದೇಹಮುಖಿ ಬದುಕಿನ ಬಗ್ಗೆ ಭ್ರಮೆಯನ್ನು ಸಮಾಜದಲ್ಲಿ ಆಳವಾಗಿ ಬೆಳೆಸಿದಷ್ಟು ವಸ್ತು ಉಪಭೋಗ ಹೆಚ್ಚಾಗುತ್ತಾ ಹೋಗುವುದು. ಅದಕ್ಕಾಗಿಯೆ ಸೌಂದರ್ಯದ ವ್ಯಾಖ್ಯಾನ ದೇಶಿ ಡಿಕ್ಷನರಿಯಿಂದ ವಿದೇಶಿ ಡಿಕ್ಷನರಿಯಲ್ಲಿ ಸೇರಿಕೊಂಡಿದೆ.

ಈ ಶತಮಾನದ ಅಂತ್ಯದಲ್ಲಿ ವಿಶ್ವಸುಂದರಿಯರ ಸ್ಪರ್ಧೆ ಗಲ್ಲಿ ಗಲ್ಲಿಗಳಲ್ಲಿ ನಡೆಯುತ್ತಿವೆ. ಬಹು ಜನಪ್ರಿಯತೆಯನ್ನು ಗಳಿಸಿಕೊಂಡಿರುವ ವಿಶ್ವಸುಂದರಿ ಸ್ಪರ್ಧೆಯ ಹಿಂದೆ ಬಂಡವಾಳಶಾಹಿಗಳ ಕೈಗಳಿವೆ. ಸಾವಿರಾರು ವರ್ಷಗಳಿಂದ ಪುರಾಣಗಳ ಮೂಲಕ ನಮ್ಮ ನೆತ್ತಿಯ ಮೇಲೆ ಕುಣಿಯುತ್ತಿದ್ದ ಮೇನಕೆ, ತಿಲೋತ್ತಮೆ, ಊರ್ವಶಿಯರು ನಮ್ಮ ಪಾಯಿಖಾನೆಗಳನ್ನು ಬಿಡದ ಹಾಗೆ ಎಲ್ಲೆಂದರಲ್ಲಿ ತಳವೂರಿವರು. ಇಷ್ಟು ಶತಮಾನಗಳಲ್ಲಿ ಹುಟ್ಟಿದ ಸುಂದರಿಯರು ದಿಢೀರನೆ ಈ ಶತಮಾನದ ಅಂಚಿನಲ್ಲಿ ನಮ್ಮಂತಹ ದೇಶದಲ್ಲಿ ದಿಢೀರನೆ ಕಾಣಿಸಿಕೊಂಡಿರುವುದರ ಬಗ್ಗೆ ಆಶ್ಚರ್ಯ ಪಡುವುದೇನೂ ಇಲ್ಲ. ಭುವನ ಸುಂದರಿಯರು, ವಿಶ್ವ ಸುಂದರಿಯರು, ಗಲ್ಲಿ ಗಲ್ಲಿಗಳ ಸುಂದರಿಯರೇ ಮಾರುಕಟ್ಟೆಯ ಬಕಾಸುರನ ಹೊಟ್ಟೆಯಿಂದಲೇ ಉದುರಿದ ಬಿಳಿ ಜಂತುಗಳು. ಈ ಜಂತುಗಳ ಪ್ರಭಾವ ಸಾಂಸ್ಕೃತಿಕವಾಗಿ ವರ್ಣದ ಕೀಳರಿಮೆಯನ್ನು ಹಿಂದುಳಿದ ಎಲ್ಲ ದೇಶಗಳಲ್ಲಿಯೂ ಹುಟ್ಟು ಹಾಕುತ್ತಿದೆ. ಸೂರ್ಯ ಮುಳುಗದ ನಾಡಿ

ಸಂಪ್ರದಾಯಸ್ಥ ಭಾರತೀಯರು ಶಾಲೆ ಕಾಲೇಜುಗಳೇ ಸಾಂಸ್ಕೃತಿಕ ಚಟುವಟಿಕೆಗಳೆಂದರೆ ಸೌಂದರ್ಯ ಸ್ಪರ್ಧೆಗಳು ಎನ್ನುವಂತಹ ವಾತಾವರಣಕ್ಕೆ ಒಗ್ಗಿಕೊಂಡಿರಬೇಕು. ಹಣಗಳಿಸುವ ದಿಢೀರ್ ಮೋಹ ಮನುಷ್ಯನಲ್ಲಿ ಲಾಲಸೆಯನ್ನು ತುಂಬಿ ಕ್ರೌರ್ಯವನ್ನು 'ನಿಸರ್ಗನಿಯಮಕ್ಕೆ' ಹೋಲಿಸುತ್ತಿದೆ. ಇಂತಹ ಸಾಂಸ್ಕೃತಿಕ ಅಪಾಯಗಳ ಒತ್ತಡದಲ್ಲಿ ಸಿಲುಕಿರುವ ಮಧ್ಯಮ ವರ್ಗ ಒಂದು ರೀತಿಯಿಂದ ರೋಗಗ್ರಸ್ಥವಾಗಿದೆ. ದುಡಿಯುವ ವರ್ಗದಲ್ಲಿ ಈ ಸ್ತ್ರೀ ಸಂಬಂಧಿ ಭ್ರಮೆ ಮತ್ತು ಸಮಸ್ಯೆಗಳು ಕ್ರಮೇಣ ಆವರಿಸಿಕೊಳ್ಳುತ್ತಿವೆ.

ಬಹುರಾಷ್ಟ್ರೀಯ ಕಂಪನಿಗಳು ತಯಾರಿಸುವ ವಸ್ತುಗಳ ಬಗ್ಗೆ ಯಾವುದೇ ನಿರ್ಬಂಧವಿಲ್ಲದೆ ಹರಿದು ಬರುವ ಜಾಹಿರಾತಿನ ಆಕರ್ಷಣೆಯಲ್ಲಿ ಮನುಷ್ಯ ತನ್ನ ವಿವೇಕವನ್ನು ಕಳೆದುಕೊಳ್ಳುತ್ತಿರುವನು. ಹಿಂದಿಗಿಂತಲೂ ಇಂದು ಭೋಗಪ್ರದ ವಸ್ತುಗಳ ಮೋಹ ಮತ್ತು ಕೊಳ್ಳುಬಾಕುತನ ಸಾಮಾನ್ಯರಲ್ಲಿ ಪ್ರಭುವಾಗಿ ಬೆಳೆಯುತ್ತಿದೆ. ವಸ್ತು ಮುಖೇನ ದೊರೆಯುವ ಅಲ್ಪ ಸುಖಕ್ಕಾಗಿ ನಿಸರ್ಗ ಮತ್ತು ಮನುಷ್ಯನ



ಬಹು ಜನಪ್ರಿಯತೆಯನ್ನು ಗಳಿಸಿಕೊಂಡಿರುವ ವಿಶ್ವಸುಂದರಿ ಸ್ಪರ್ಧೆಯ ಹಿಂದೆ ಬಂಡವಾಳಶಾಹಿಗಳ ಕೈಗಳಿವೆ.

ಗಂಡಸಿನ ಕ್ರೌರ್ಯ ಮತ್ತು ಯಜಮಾನ ಸಂಸ್ಕೃತಿಯ ಬರ್ಬರತೆಯನ್ನು ಮುಚ್ಚುವ ಸಲುವಾಗಿ ಮಹಿಳೆಯರನ್ನು ಸಂಘಟಿತವಾಗದ ಹಾಗೇ ಸಾಂಸ್ಕೃತಿಕ ವಿರೋಧಾಭಾಸಗಳನ್ನು ಹುಟ್ಟುಹಾಕಲಾಗಿದೆ. ಕುಟುಂಬ ಕಲಹಗಳನ್ನು ಸುಂದರವಾದ ವ್ಯಾಖ್ಯಾನಗಳಿಗೆ ಒಳಪಡಿಸಿ ಅವುಗಳನ್ನು ವೇದಗಳಂತೆ ಜನಮಾನಸದಲ್ಲಿ ಉಳಿಸಿದ್ದೇವೆ. ದ್ವೇಷ, ಅಸೂಯೆ, ಸಹಕರಿಸದಿರುವುದು, ಅಸಹನೆ, ಮುಂತಾದ ಮಾನವ ದೌರ್ಬಲ್ಯಗಳನ್ನು ಲಿಂಗ ನೆಲೆಯಲ್ಲಿ ಆರೋಪಿಸುತ್ತಾ ಬರಲಾಗಿದೆ.

ಒಡನಾಟದಿಂದ ದೊರೆಯುತ್ತಿದ್ದ ದೀರ್ಘ ಪರಿಣಾಮದ ಸಂತೃಪ್ತಿಯಿಂದ ವಂಚಿತನಾಗಿರುವನು. ಮನೆ ಕುಟುಂಬದ ಕಲ್ಪನೆಯೆ ನಾಗರಿಕತೆಯ ದಾಪುಗಾಲಿಗೆ ಸಿಕ್ಕು ನುಚ್ಚು ನೂರಾಗುತ್ತಿವೆ. ಉದ್ಯೋಗ ಅರಸಿ ನಗರಗಳಿಗೆ ವಲಸೆ ಬರುವ ಯುವಕ, ಯುವತಿಯರು ಆಧುನಿಕ ಬದುಕಿನ ಸುಳಿಯಲ್ಲಿ ಸಿಕ್ಕು ಪಾತಾಳಕ್ಕೆ ಇಳಿಯುತ್ತಿರುವರು. ಸಮಾಜ-ಕುಟುಂಬಗಳು ಏಕಕಾಲದಲ್ಲಿ ವ್ಯಕ್ತಿ ಮೇಲಿನ ಹಿಡಿತವನ್ನು ಕಳೆದುಕೊಳ್ಳುತ್ತಿವೆ. ಇದಕ್ಕೆಲ್ಲ ಕಾರಣ ಮಾಧ್ಯಮಗಳಿಂದ ಹರಿದು ಬರುವ ಭ್ರಮೆಗಳು ಮನುಷ್ಯನಲ್ಲಿಯ ಸಾಮಾಜಿಕ ಜವಾಬ್ದಾರಿಯನ್ನು ನಾಶಮಾಡುತ್ತಿರುವ ರೀತಿ ಎನ್ನಬಹುದು.

ಬೆಂಗಳೂರಿನಂತಹ ನಗರಗಳಲ್ಲಿ ಮಧ್ಯಮ ವರ್ಗದ ಜನ ಸಂಪತ್ತಿನ ಗಳಿಕೆಗಾಗಿ ಮನೆಯ ಮಕ್ಕಳನ್ನು ಅನಾರೋಗ್ಯದ ಚಟುವಟಿಕೆಗಳಿಗೆ ಪ್ರೇರೇಪಿಸುತ್ತಿರುವರು. ಸ್ಥಳೀಯ ವಸ್ತುವನ್ನು ಒಳಗೊಂಡ ಹಾಗೇ ವಿದೇಶಿ ಉತ್ಪಾದಿತ ವಸ್ತುಗಳಿಗೆ ಮಹಿಳೆಯರನ್ನು ರೂಪದರ್ಶಿಯರನ್ನಾಗಿ ಬಳಸಿಕೊಳ್ಳುವುದನ್ನು ಹೆಮ್ಮೆಯ ಸಂಗತಿ ಎಂದು ಕಾಣುತ್ತಿರುವೆವು.

ಜಾಹೀರಾತುಗಳಿಗೂ ವಸ್ತುಗಳಿಗೂ ಕಾರ್ಯಕಾರಣ ಸಂಬಂಧವೆಂಬುದೇ ಕಾಣುತ್ತಿಲ್ಲ. ಮನೋವಿಕಾರಕ್ಕೆ ಆಸ್ಪದ ನೀಡುವ, ಸಾಮಾಜಿಕ ಸ್ವಾಸ್ಥ್ಯ ಕೆಡಿಸಬಹುದಾದ ಜಾಹೀರಾತುಗಳ ಮೇಲೆ ಕನಿಷ್ಠ ಪ್ರಮಾಣದ ನಿಯಂತ್ರಣ ಸಮಾಜ ಮತ್ತು ಸರಕಾರಕ್ಕಿಲ್ಲದಾಗಿದೆ. ದುಡಿಯುವ ವರ್ಗದ ಬದುಕಿನ ಸಂದೇಶದ ಮೇಲೆ ಜಾಹೀರಾತುಗಳು ದಾಳಿಗಿಳಿದಿವೆ. ನಮ್ಮ ದೇಶಿ ಪಾರಂಪಾರಿಕ ನಂಬಿಕೆ ಮತ್ತು ಸಂಸ್ಕೃತಿಯನ್ನು ಕ್ರಮೇಣ ವಿನಾಶಗೊಳಿಸುವ ಎಲ್ಲ ಹುನ್ನಾರಗಳು ಈ ಜಾಹೀರಾತುಗಳ ಮೂಲಕ ನಮ್ಮ ಮನೆಮನೆಯ ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತಿರುವುದರ ಕಡೆ ನಮ್ಮ ಗಮನ ಕೇಂದ್ರೀಕರಿಸಬೇಕಾಗಿದೆ. ಉದಾಹರಣೆಗೆ, ನಮ್ಮ ಕೌಟುಂಬಿಕ ಬದುಕಿನ ಸೌಹಾರ್ದ ಸಂಬಂಧದ ಪ್ರತೀಕವಾಗಿದ್ದ ಮನೆಗೆ ಬಂದವರ ಬಾಯಾರಿಕೆ ನೀರುಕೊಡುವ ಸ್ಥಾನದಲ್ಲಿ ಚಹಾ, ಕಾಫಿಗಳು ಹಲವು ವರ್ಷಗಳ ಅಧಿಪತ್ಯ ಸ್ಥಾಪಿಸಿದ್ದವು. ಇಂದು ಅದರ ಸ್ಥಾನದಲ್ಲಿ ಕೊಕೋ ಕೋಲಾ ಮಿಂಚುತ್ತಿದೆ. ಅದು ಹೇಗೆಂದರೆ ನಮ್ಮ ರೂಪದರ್ಶಿಯರನ್ನು ಜನಪ್ರಿಯ ನಟರುಗಳನ್ನು ಬಳಸಿಕೊಂಡು ಮಾಡುತ್ತಿರುವ ಜಾಹೀರಾತು ಇಡೀ ನಮ್ಮ ಕೃಷಿ ಸಂಸ್ಕೃತಿಯನ್ನೇ ನಾಶ ಮಾಡುವಂತಿದೆ. ಹೊಲಕ್ಕೆ ಹೋಗಿ ಬಾಯಾರಿದೆ ಎಂದು ಯಾರಾದರೂ ಕೇಳಿದರೆ ಬಾವಿಯ ನೀರನ್ನು ಸೇದಿ ಬಾಯಾರಿಕೆಯನ್ನು ನೀಗುವ ನಮ್ಮ ಮಾನವ ಸಹಜತೆಯೆ ಮರೆಯಾಗಿ ಅದರ ಸ್ಥಾನದಲ್ಲಿ ಅಮೀರ್‌ಖಾನ್ ರೈತನ ವೇಶದಲ್ಲಿ ಬಂದು

ಬಾವಿಯಿಂದ ಸೇದಿ ನೀರು ಕೇಳಿದ ಬೆಡಗಿಯರಿಗೆ ನೀಡುವುದೇನೆಂದರೆ ಪೆಪ್ಸಿ ಕೊಕೋ ಕೋಲಾದ ಬಾಟಲಿಗಳನ್ನು. ಅಷ್ಟೇ ಅಲ್ಲ, ಆ ಬೆಡಗಿಯರು ನೀರು ಕುಡಿದು ಅಮೀರ್‌ಖಾನ್‌ನನ್ನು ಮುತ್ತಿಕ್ಕಿ ಮೂರ್ಚೆಗೊಳಿಸುವುದು. ಇದು ಏಕಕಾಲದಲ್ಲಿ ನಮ್ಮ ನೆಲದ ಸಂಸ್ಕೃತಿಯನ್ನು ನಮ್ಮ ಮನೆಯ ಹೆಣ್ಣು ಮಕ್ಕಳನ್ನು ಮುಂದಿಟ್ಟೆ ಮಾಡುವುದು. ಹೀಗೆ ಮಾರುಕಟ್ಟೆಯ ಸಂಸ್ಕೃತಿ ತಮ್ಮ ಪಾರಂಪರಿಕ ನಂಬಿಕೆ, ನಡತೆ, ವಿಚಾರಗಳನ್ನು ಕ್ರಮೇಣ ನಾಶಗೊಳಿಸುವುದು. ಇಂತಹದ್ದನ್ನು ದಿನದಿನವು ನೋಡುವ ಮಕ್ಕಳು ಬಾವಿಯಲ್ಲಿ, ತೆಂಗಿನ ಕಾಯಿಗಳಲ್ಲಿ ಬಾಯಾರಿಕೆಗೆ ನೀರಿರುವುದು ಎಂಬುದನ್ನು ಮರೆತು ಬಾಯಾರಿಕೆ ಎಂದರೆ ಕೊಕೋ ಕೋಲಾ, ಪೆಪ್ಸಿ ಎಂದು ಭಾವಿಸುವ ಅಪಾಯಗಳು ನಮ್ಮೆದುರಿಗಿದೆ.

ನಮ್ಮ ಸಾಮಾಜಿಕ ಪಿಡುಗಾದ ವರದಕ್ಷಿಣೆ, ವರೋಪಚಾರಗಳ ಬಗ್ಗೆ ಕಾನೂನುಬದ್ಧವಾಗಿ ತಡೆಯುವ ಕ್ರಮವನ್ನು ಬಿಗಿಗೊಳಿಸುವಷ್ಟರಲ್ಲಿಯೇ ಅದು ನುಣುಚಿಕೊಂಡು ಹೊಸ ರೂಪದಲ್ಲಿ ಯುವಕ ಮನಸ್ಸಿನಲ್ಲಿ ಜಾಗ ಗಿಟ್ಟಿಸಿಕೊಂಡಿದೆ. ಸಾಂಪ್ರದಾಯಿಕವಾಗಿ ಮದುವೆಯಲ್ಲಿ ಸ್ಥಿತಿವಂತರನ್ನು ವರನನ್ನು ಎದುರುಗೊಳ್ಳಲು ಬೀಳ್ಕೊಡಲು ಕುದುರೆ, ಎತ್ತಿನಬಂಡಿ, ಟಾಂಗಾ, ತೆರೆದ ಜೀಪುಗಳನ್ನು ಬಳಸಿ ತಮ್ಮ ಸಂತೋಷ, ಸಂಭ್ರಮ, ಯೋಗ್ಯತೆ, ಅಂತಸ್ತುಗಳ ಪ್ರದರ್ಶಿಸುತ್ತಿದ್ದರು. ಇಂದು ಕುದುರೆ ಗಾಡಿ, ಎತ್ತಿನ ಬಂಡಿಯ ಸ್ಥಾನದಲ್ಲಿ ಹೀರೋ ಹೋಂಡಾ ಒಂದು ಒಕ್ಕರಿಸಿದೆ. ವರನ ಮೆರವಣಿಗೆಯ ಮೂಲಕ ಮೂಡಿಬರುವ ಹೀರೋ ಹೋಂಡಾ ಹಲವಾರು ಆಪತ್ತುಗಳನ್ನು ಉದ್ಯಮ ವರ್ಗದ ಕನ್ಯಾ ಪಿತೃಗಳಿಗೆ ತಂದಿಡುವುದು.

ಗಂಡಸಿನ ಕ್ರೌರ್ಯ ಮತ್ತು ಯಜಮಾನ ಸಂಸ್ಕೃತಿಯ ಬರ್ಬರತೆಯನ್ನು ಮುಚ್ಚುವ ಸಲುವಾಗಿ ಮಹಿಳೆಯರನ್ನು ಸಂಘಟಿತ ವಾಗದ ಹಾಗೇ ಸಾಂಸ್ಕೃತಿಕ ವಿರೋಧಾಭಾಸಗಳನ್ನು ಹುಟ್ಟುಹಾಕಲಾಗಿದೆ. ಕುಟುಂಬ ಕಲಹಗಳನ್ನು ಸುಂದರವಾದ ವ್ಯಾಖ್ಯಾನಗಳಿಗೆ ಒಳಪಡಿಸಿ ಅವುಗಳನ್ನು ವೇದಗಳಂತೆ ಜನಮಾನಸದಲ್ಲಿ ಉಳಿಸಿದ್ದೇವೆ. ದ್ವೇಷ, ಅಸೂಯೆ, ಸಹಕರಿಸದಿರುವುದು, ಅಸಹನೆ, ಮುಂತಾದ ಮಾನವ ದೌರ್ಬಲ್ಯಗಳನ್ನು ಲಿಂಗ ನೆಲೆಯಲ್ಲಿ ಆರೋಪಿಸುತ್ತಾ ಬರಲಾಗಿದೆ. 'ನೂರು ತಲೆ ಕೊಡಬಹುದು ಮೂರು ಜಡೆ ಕೊಡೆವು ಎನ್ನುವುದಾಗಲಿ', 'ಹೆಣ್ಣಿಗೆ ಹೆಣ್ಣೇ ಶತ್ರು ಎನ್ನುವುದೆಲ್ಲ ಗಂಡಸಿನ ಸ್ವಾರ್ಥ ಮೂಲದಿಂದ ಹುಟ್ಟಿದವುಗಳು.

ಇಂತಹ ಊಳಿಗಮಾನ್ಯ ಸಿದ್ಧಾಂತಗಳು ಹೊಸ ಬಣ್ಣದಿಂದ ಹೆಣ್ಣು ಹೆಣ್ಣುಗಳ ಮಧ್ಯೆ ಮತ್ತೆ ಚಲಾವಣೆಗೆ ವಸ್ತುಮುಖೇನ ಗಟ್ಟಿಗೊಳ್ಳುತ್ತಿವೆ. ಪಾತ್ರೆ ತಿಕ್ಕುವ ಒಂದು ಸೋಪು ಈ ಸ್ಥಾಪಿತ ಸಾಂಸ್ಕೃತಿಕ ಮೌಲ್ಯವನ್ನು ಹೇಗೆ ಬಿತ್ತರಿಸುತ್ತದೆ ಎಂದರೆ ಹೊಸದಾಗಿ ಬಂದ ಸೊಸೆ ಪಾತ್ರೆ ತಿಕ್ಕಿದ್ದನ್ನು ಮೂಗು ಮುರಿದು ನೋಡುವ ಅತ್ತೆಯ ಹಾವಭಾವದ ಮೂಲಕ ಅತ್ತೆತನದ ಕ್ರೌರ್ಯವನ್ನು ಮತ್ತೆ ಮತ್ತೆ ಮಹಿಳೆಯರಲ್ಲಿ ಗಟ್ಟಿಗೊಳಿಸುತ್ತೇವೆ. ಕ್ಷಣಾರ್ಧದಲ್ಲಿ ತಣತಣ ಎಂದು ಮಿಂಚುವ ಪಾತ್ರೆಯಲ್ಲಿ ಅತ್ತೆ ತನ್ನ ಮುಖ ನೋಡಿಕೊಂಡು ಬೆರಗುಗೊಳ್ಳುವ ಮುಖ ತೋರಿಸಿ ಸಾಬೂನು ಸೊಸೆಯನ್ನು ಏಕಕಾಲಕ್ಕೆ ಪರದೆಯ ಮೇಲೆ

ತೋರಿಸಲಾಗುತ್ತದೆ. ಅಂದರೆ ಅತ್ತೆಯಂದಿರನ್ನು ಖುಷಿ ಪಡಿಸಬೇಕಾದರೆ ಸೊಸೆಯಂದಿರು ಪಳಪಳ ಹೊಳೆಯುವ ಹಾಗೆ ಪಾತ್ರೆ ತೊಳೆಯಬೇಕು. ಅದು ಇಂತಹದೆ ಲೇಬಲ್ಲಿನ ಸೋಪಿನಿಂದ ಎಂಬ ಸಂದೇಶವನ್ನು ಸೊಸೆಯಾದವರಲ್ಲಿ ತಂದು ಬಿಡುವುದು.

ಲೋಹಿಯಾರಂತಹವರು ಸೌಂದರ್ಯವನ್ನು ಬೆವರಿನ ಸಾಲಿನಲ್ಲಿ ದುಡಿಮೆಯ ಮುಖದಲ್ಲಿ ಕಂಡಿದ್ದರೆ ಇಂದು ಅದರ ಅರ್ಥವೇ ಬೇರೆಯಾಗಿದೆ. ತೆಳ್ಳಗೆ ಬೆಳ್ಳಗೆ ಎತ್ತರವಾಗಿ ಇರುವುದು ಮಾತ್ರ ಸೌಂದರ್ಯವೆಂದು ಭ್ರಮೆಗಳನ್ನು ಹುಟ್ಟಿಸಿದೆ. ತೆಳ್ಳಗಿರಲು ಮಹಿಳೆಯರು, ಯುವತಿಯರು ಪಡುತ್ತಿರುವ ಪಡಿಪಾಟಲು ನೋಡುವಂತಿಲ್ಲ. ಅಂಕಿ ಸಂಖ್ಯೆಗೆ ಮೈ ಒಗ್ಗಿಸಿಕೊಳ್ಳಲು ಹುಡುಗಿಯರು ಹಲವು ಹತ್ತು ಆಪತ್ತುಗಳಿಗೆ ಒಳಗಾಗುತ್ತಿರುವರು. ದುಡಿಮೆ, ಶ್ರಮವೆನ್ನುವುದು ಆರೋಗ್ಯವಂತಿಕೆಯ ಲಕ್ಷಣವೆನ್ನುವುದು ಮರೆಯಾಗುತ್ತಿದೆ. ತಿನ್ನಲು ಕೂಳಿಲ್ಲದೆ ಸಾಯುವವರು ಒಂದು ಕಡೆಯಾದರೆ ತಿಂದರೆ ಸೌಂದರ್ಯ ಹಾಳಾಗುತ್ತಿದೆ ಎಂಬ ಭೀತಿಯಿಂದ ತಿನ್ನದೆ ಸಾಯುವರ ಸಂಖ್ಯೆ ಒಂದು ಕಡೆ ಏರುತ್ತಿದೆ. ಇದಕ್ಕೆಲ್ಲ ಕಾರಣ ಪಾಶ್ಚಿಮಾತ್ಯ ದೇಶಗಳು ಹುಟ್ಟು ಹಾಕಿರುವ ಸೌಂದರ್ಯ ಸ್ಪರ್ಧೆಯ ಫಲಿತಗಳಿವು. ಮೈಯಲ್ಲಿ ರಕ್ತ ಮಾಂಸವಿಲ್ಲದೆ ಬಿಳಿಚಿಕೊಂಡ ದೇಹವನ್ನು ಸುಂದರ ದೇಹವೆಂದು ಕರೆಯುತ್ತಲೇ ಮಹಿಳೆಯರ ಕ್ರಿಯಾಶೀಲತೆಯನ್ನು ಹರಣ ಮಾಡಲಾಗುತ್ತದೆ. ಈ ಸೌಂದರ್ಯ ವೃದ್ಧಿಯಾಗಲು ಇಂತಹ ವಸ್ತುವನ್ನು ಉಪಯೋಗಿಸಿರಿ ಎಂಬ ಜಾಹೀರಾತುಗಳು ನಮ್ಮ ಮಹಿಳೆಯರ ತಲೆಯಲ್ಲಿ ಹೇನುಗಳ ಹಾಗೇ ಹರಿದಾಡುತ್ತವೆ. ಇಂತಹ ವಸ್ತುವಿನ ಸಾಂಸ್ಕೃತಿಕ ಸಂದೇಶ ಯಥಾಸ್ಥಿತಿವಾದವನ್ನು ಮುಂದುವರಿಸಿಕೊಂಡು ಹೋಗಲು ಅನುವು ಮಾಡಿಕೊಡುತ್ತದೆ.

ಒಂದು ಸೌಂದರ್ಯವರ್ಧಕದ ಜಾಹೀರಾತು ಉದ್ಯೋಗಂ ಪುರುಷ ಲಕ್ಷಣಂ ಎಂಬುದನ್ನು ಬದಲಿಸುವ ಹಾಗೇ ಕಾಣಿಸಿಕೊಂಡಿತು ಎಂದು ಮುಗುಳ್ನಗುವಷ್ಟರಲ್ಲಿಯೇ ಬಿಳಿಯ ಬಣ್ಣ ದುತ್ತನೆ ಕಣ್ಣೆದುರಿಗೆ ಬಂದು ನಗುವನ್ನು ತಿಂದು ಹಾಕುತ್ತದೆ. ಒಬ್ಬ ಮಗಳು ಉದ್ಯೋಗ ಮಾಡುವುದು ಸಹ ಮಗ ಮಾಡುವ ಉದ್ಯೋಗಕ್ಕೆ ಸಮ ಎಂಬ ಭಾವನೆ ನಮ್ಮಲ್ಲಿ ಮೂಡುತ್ತಿಲ್ಲ. ತಂದೆಯೊಬ್ಬ ಕಪ್ಪು ಕಾಫಿಗಾಗಿ ದಯನೀಯವಾಗಿ ಕೇಳುವುದು. ಅದಕ್ಕೆ ಮನೆಯೊಡತಿ ಹೀಯಾಳಿಸುವುದು. ಮಗಳು ಕಪ್ಪು ಬಣ್ಣದ ಮುಖ ಹೊತ್ತು ಉದ್ಯೋಗಕ್ಕಾಗಿ ಅಲೆದಾಡುವುದು, ಬಣ್ಣ ಕಾರಣವಾಗಿ ಉದ್ಯೋಗ ದೊರೆಯದೆ ಹೋಗುವುದರಿಂದ ಬದುಕಿನ ಬಗ್ಗೆ ಬೇಸರಪಟ್ಟುಕೊಳ್ಳುವಷ್ಟರಲ್ಲಿಯೇ ನಮ್ಮ ವಿದೇಶಿ ಕಂಪನಿಗಳು ಉತ್ಪಾದಿಸಿದ 'ಫೇರನ್ ಕ್ರೀಮ್' ದೇವರು ಪ್ರತ್ಯಕ್ಷವಾದಂತೆ ಪ್ರತ್ಯಕ್ಷವಾಗಿ ಆ ಯುವತಿಯ ಸಮಸ್ಯೆಗೆ ಪರಿಹಾರ ಸೂಚಿಸುವುದು. ನಂತರ ಯುವತಿ ಆ ಕ್ರೀಮ್‌ಅನ್ನು ಮುಖಕ್ಕೆ ಹಚ್ಚಿಕೊಂಡು ಸಂದರ್ಶನಕ್ಕೆ ಹೋದರೆ ಉದ್ಯೋಗ ಓಡೋಡಿ ಬಂದು ಆಕೆಯನ್ನು ತಬ್ಬಿಕೊಳ್ಳುವುದು. ಕೈತುಂಬ ಸಂಬಳ. ಜಗತ್ತೆಲ್ಲ ಆಕೆಯನ್ನು ಬೆರಗಾಗಿ ನೋಡುವುದು. ಕಪ್ಪು ಕಾಫಿಗಾಗಿ ಬಾಯಿ ತೆರೆದ ತಂದೆಗೆ ಪಂಚತಾರಾ ಹೋಟೆಲಿಗೆ ಕರೆದುಕೊಂಡು ಹೋಗುವ ದೃಶ್ಯ ಎಂತಹ ಭ್ರಮೆಯನ್ನು ಯುವತಿಯರಲ್ಲಿ ತುಂಬುತ್ತವೆ.

ಲೋಹಿಯಾರಂತಹವರು ಸೌಂದರ್ಯವನ್ನು ಬೆವರಿನ ಸಾಲಿನಲ್ಲಿ ದುಡಿಮೆಯ ಮುಖದಲ್ಲಿ ಕಂಡಿದ್ದರೆ ಇಂದು ಅದರ ಅರ್ಥವೇ ಬೇರೆಯಾಗಿದೆ. ತೆಳ್ಳಗೆ ಬೆಳ್ಳಗೆ ಎತ್ತರವಾಗಿ ಇರುವುದು ಮಾತ್ರ ಸೌಂದರ್ಯವೆಂದು ಭ್ರಮೆಗಳನ್ನು ಹುಟ್ಟಿಸಿದೆ. ಅಂಕಿ ಸಂಖ್ಯೆಗೆ ಮೈ ಒಗ್ಗಿಸಿಕೊಳ್ಳಲು ಹುಡುಗಿಯರು ಹಲವು ಹತ್ತು ಆಪತ್ತುಗಳಿಗೆ ಒಳಗಾಗುತ್ತಿರುವರು. ದುಡಿಮೆ, ಶ್ರಮವೆನ್ನುವುದು ಆರೋಗ್ಯವಂತಿಕೆಯ ಲಕ್ಷಣವೆನ್ನುವುದು ಮರೆಯಾಗುತ್ತಿದೆ. ತಿನ್ನಲು ಕೂಳಿಲ್ಲದೆ ಸಾಯುವವರು ಒಂದು ಕಡೆಯಾದರೆ ತಿಂದರೆ ಸೌಂದರ್ಯ ಹಾಳಾಗುತ್ತಿದೆ ಎಂಬ ಭೀತಿಯಿಂದ ತಿನ್ನದೆ ಸಾಯುವರ ಸಂಖ್ಯೆ ಒಂದು ಕಡೆ ಏರುತ್ತಿದೆ. ಇದಕ್ಕೆಲ್ಲ ಕಾರಣ ಪಾಶ್ಚಿಮಾತ್ಯ ದೇಶಗಳು ಹುಟ್ಟು ಹಾಕಿರುವ ಸೌಂದರ್ಯ ಸ್ಪರ್ಧೆಗಳು.

ವಿದ್ಯೆ ಬುದ್ಧಿ ಎನ್ನುವುದು ಇಂದು ಉದ್ಯೋಗದ ಅರ್ಹತೆಗಳಲ್ಲ. ಬಣ್ಣ ಮೈಕಟ್ಟು ಮಾತ್ರ ಉದ್ಯೋಗದ ಬೇಟೆಗೆ ಅತ್ಯಂತ ಸಮರ್ಥ ಅಸ್ತ್ರಗಳು ಎಂಬ ಸಂದೇಶದ ಹಿಂದೆ ಹೆಣ್ಣಿನ ಲೈಂಗಿಕ ಸಂಬಂಧಿ ವಿಷಯವಿದೆ. ಪ್ರತಿಯೊಂದು ಸೋಪಿನ ಹಿಂದೆ ನಗ್ನ ಸುಂದರಿಯ ದೇಹ ದಾರಾಳವಾಗಿ ಪ್ರದರ್ಶಿತವಾಗುತ್ತದೆ. ಗಂಡಸರು ಬಳಸುವ ವಸ್ತುಗಳಿಗೂ ಎಗ್ಗಿಲ್ಲದೆ ತುಂಡು ಉಡುಗೆಯ ಬಿಳಿ ಜಿರಲೆಗಳನ್ನು ಜೋತಾಡಿಸುವುದನ್ನು ನೋಡಬಹುದು. ಸಾರಾಸಗಟಾಗಿ ಇಂದು ನಗರ ಕೇಂದ್ರಿತ ಮಧ್ಯಮ ವರ್ಗ ಹರೆಯದ ಹುಡುಗಿಯರ ಮೇಲೆ ನಿಯಂತ್ರಣವನ್ನು ಕಳೆದುಕೊಂಡಿವೆ.

ಜೊತೆಗೆ ಸರಕಾರಗಳು ಪ್ರವಾಸೋದ್ಯಮವನ್ನು ವಿದೇಶಿ ವಿನಿಯಮದ ಗುಂಗಿನಲ್ಲಿ ಏನಕೇನ ಅಭಿವೃದ್ಧಿ ಗೊಳಿಸಲು ಮುಂದಾಗಿದೆ. ಪ್ರವಾಸವೆಂಬುದು ವಿದೇಶಿಗರಿಗೆ ಸಂಪದ್ಭರಿತ ದೇಶದ ಸಂಸ್ಕೃತಿ, ಪ್ರಕೃತಿ, ನಿಸರ್ಗ ನೋಡುವುದಲ್ಲ. ಎಲ್ಲ ರೀತಿಯಿಂದಲೂ ಅವರಿಗೆ ತೃಪ್ತಿ ನೀಡಬೇಕು ಎಂಬ ಧೋರಣೆಯಿಂದ ಸರಕಾರಿ ಸೂಳೆಗಾರಿಕೆಯನ್ನು ಕಾನೂನು ರೀತಿಯಲ್ಲಿ ನಡೆಸುವ ವ್ಯವಸ್ಥಿತ ಸಂಚು. ನಿರುದ್ಯೋಗದಿಂದ ಬಳಲುತ್ತಿರುವ ಯುವತಿಯರು ಸುಖದ ಭ್ರಮೆಗಳನ್ನು ಹೊತ್ತು ಇಂತಹ ಶೋಷಣೆಯ ಜಾಲಕ್ಕೆ ಬೀಳುವರು.

ಇಂದು ಈ ರೋಗ ಬರೀ ನಗರದಲ್ಲಿಲ್ಲ. ಹಳ್ಳಿಗಳನ್ನು ಹುಡುಕಿಕೊಂಡು ಬಂದಿದೆ. ಉಡಲು ಉಣ್ಣಲು ಒದ್ದಾಡುವ ನಮ್ಮ ಗ್ರಾಮಾಂತರ ಹೆಣ್ಣು ಮಕ್ಕಳಲ್ಲಿಯೂ ಈ ಸೌಂದರ್ಯದ ರೋಗ ಉಲ್ಬಣಗೊಳ್ಳುತ್ತಿದೆ. ನಾಗರಿಕತೆಯ ನಯವಂಚಕತನವನ್ನು ಅರ್ಥಮಾಡಿಕೊಳ್ಳಲು ವಿಫಲರಾದ ನಮ್ಮ ಗ್ರಾಮಾಂತರ ಪ್ರದೇಶದ ಹುಡುಗಿಯರು ಚೇತರಿಸಿಕೊಳ್ಳಲು ಸಾಧ್ಯವಾಗದ ಹೊಡೆತವನ್ನು ತಿನ್ನುತ್ತಿರುವರು. ಹೆಜ್ಜೆಹೆಜ್ಜೆಗೊಂದು ನಾಯಿಕೊಡೆಯಂತೆ ತಲೆ ಎತ್ತಿರುವ ಬ್ಯೂಟಿ ಪಾರ್ಲರ್‌ಗಳು ನಮ್ಮ ಹೆಣ್ಣು ಮಕ್ಕಳ ಮನೆ ಮದ್ದಿನ ಪರಂಪರೆಯನ್ನೆ ನಾಶಗೊಳಿಸುತ್ತಿವೆ. ಸರಕಾರಿ ಸ್ವಾಮ್ಯದಲ್ಲಿರುವ ಬಿಎಸ್‌ಎನ್‌ಎಲ್ ದಂತಹ ಮೊಬೈಲ್ ಸಂಸ್ಥೆ ಸಂದೇಶ ಕಳಿಸಲು ಬಳಸುವ ಹಾದಿ ಶಾಲೆ, ಕಾಲೇಜುಗಳು ಕೇವಲ ಹಾಳೆ ಉಂಡೆಗಳನ್ನು ಹುಡುಗಿಯರ ಮೇಲೆ ಎಸೆಯುವಂತೆ ಪ್ರಚೋದಿಸುತ್ತಿದೆ. ಇಂತಹ ಅಪಾಯಕಾರಿಯಾದ ಸನ್ನಿವೇಶಗಳು ವಾಣಿಜ್ಯ ಸಂಬಂಧಿ ಕಾರಣಗಳಿಂದ ಸೃಷ್ಟಿಯಾಗುತ್ತಿವೆ. ಇವುಗಳನ್ನು ಗಂಭೀರವಾಗಿ ಸರಕಾರ, ಸಮಾಜ ನಿಯಂತ್ರಿಸುವ ಅಗತ್ಯತೆಯಿದೆ. ಅದರ ಕುರಿತು ಸಾರ್ವಜನಿಕ ಅಭಿಪ್ರಾಯ ರೂಪಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ❑



ಕಲಿಕೆ ಮತ್ತು ಅಧಿಕಾರ ಸಂಬಂಧಗಳು

○ ಡಿ. ಡೊಮಿನಿಕ್

ಈ ತಲೆಬರಹವೇ ಕೂದಲು ಸೀಳುವ ಸಂಗತಿಯೆಂದು ಮೂಗು ಮುರಿಯಬೇಕಿಲ್ಲ. ಯಾವುದೇ ಶಿಕ್ಷಣ ಕ್ರಮವೂ ಸಹ ೧. ಇರುವಂತಹ ವ್ಯವಸ್ಥೆಯನ್ನು ಇರುವಂತೆಯೇ ಮುಂದುವರೆಸುತ್ತದೆ. ಅಥವಾ ೨. ಇರುವಂತಹ ವ್ಯವಸ್ಥೆಯನ್ನು ಮುರಿದು ಕಟ್ಟುತ್ತದೆ.

ಈ ಎರಡೂ ನಿಲುವುಗಳಲ್ಲಿ ಮೊದಲನೆಯದ್ದು ಅನುಕೂಲಸ್ಥರ ಮಾರ್ಗೋಪಾಯಗಳಿಗೆ ಸಂಬಂಧಿಸಿದ್ದು. ಎರಡನೆಯದ್ದು ಅನಾನುಕೂಲಸ್ಥರ ಪರಿಸ್ಥಿತಿಗೆ ಸಂಬಂಧಿಸಿದ್ದರೂ ಸಹ ಅದು ಮತ್ತಷ್ಟು ಸಾಧ್ಯತೆಗಳನ್ನು ಸೃಷ್ಟಿಸುವುದರತ್ತ ಚಲನೆಯಲ್ಲಿರುತ್ತದೆ. ಅಂದರೆ ಇಲ್ಲಿ ಅಂತಿಮವಾಗಿ ಜ್ಞಾನ ಎನ್ನುವುದು ಆತ್ಮಸಾಕ್ಷಾತ್ಕಾರಕ್ಕಾಗಿ ಇರದೆ ಅದು ನಿರಂತರವಾದ ಸಾಮಾಜಿಕ ವರ್ತನೆಗಳಿಗೆ ಮಾಹಿತಿಯನ್ನು 'ಸತ್ಯ'ವೆಂಬಂತೆ ಉತ್ಪತ್ತಿಸುತ್ತಿರುತ್ತದೆ. ಅದಕ್ಕಾಗಿ ಎಲ್ಲರಿಂದಲೂ 'ಸಮ್ಮತಿ' ಯನ್ನು ರ್‍ಯಾಂಕ್/ಬಹುಮಾನ ನೀಡುವುದರ ಮೂಲಕ ಪಡೆದುಕೊಳ್ಳುತ್ತದೆ. ಹೀಗೆ ವ್ಯಕ್ತಿ/ಸಮಾಜದ ಸಾಧ್ಯತೆಗಳನ್ನು ನಿಶ್ಚಿತ ಚಟುವಟಿಕೆಗೆ 'ಪ್ರೋಗ್ರಾಮ್ಡ್' ಆಗಿ ಮಾಡಲಾಗುತ್ತದೆ. ಇದನ್ನು ಹೀಗೆ ಹೇಳಿದ್ದಲ್ಲಿ ಏನನ್ನೂ ಹೇಳಿದಂತಾಗುವುದಿಲ್ಲ.

ಇಲ್ಲಿ ಕಣ್ಣಿಗೆ ಗೋಚರಿಸದ 'ಅಧಿಕಾರ-ಸಂಬಂಧ' ಗಳು ಸಾಂಕೇತಿಕವಾಗಿ ಕ್ರಿಯಾಶೀಲವಾಗಿ 'ಅನುಭವ'ಗಳನ್ನು ಒಂದು ಚೌಕಟ್ಟಿಗೆ ಒಳಪಡಿಸಲಾಗುತ್ತದೆ. ಇಲ್ಲಿನ ಸಾಂಕೇತಿಕ ಮೌಲ್ಯವನ್ನು ವಿವರಿಸಲು ಒಂದು ನಿದರ್ಶನವನ್ನು ತೆಗೆದುಕೊಳ್ಳೋಣ. ಜೀವಂತ ದಂತಕಥೆಯಾಗಿರುವ ಮತ್ತು ಅನಾನುಕೂಲಕರ ವ್ಯವಸ್ಥೆಯನ್ನು ಸೃಜನಾತ್ಮಕವಾಗಿ ಬಳಸಿ ಕೊಂಡ 'ದಲಿತ ಕವಿ' ಸಿದ್ದಲಿಂಗಯ್ಯನವರನ್ನು ತೆಗೆದು ಕೊಳ್ಳೋಣ. ಇವರು ಇಡೀ 'ಕನ್ನಡ' ಐಡೆಂಟಿಟಿಗೆ ತಮ್ಮದೇ ಆದ ಕೊಡುಗೆ ನೀಡಿದವರು. ಆದರೂ ಇವರು ಈ ಕನ್ನಡ ಜಗತ್ತಿನಲ್ಲಿ ಕೇವಲ ಒಂದು ಅಸ್ತಿತ್ವದ ಸಂಕೇತವಾಗಿ ಮಾರುಕಟ್ಟೆಯಲ್ಲಿ ಗೋಚರಿಸುತ್ತಾರೆ. ಇವರ ಮಾರುಕಟ್ಟೆಯ ಮೌಲ್ಯವೂ ಸಹ ಕನ್ನಡ ಮಾರುಕಟ್ಟೆಗೆ ಮಾತ್ರ ಸೀಮಿತವಾಗಿ ಬಿಡುತ್ತಾರೆ. ಆದರೆ ಇದಕ್ಕೆ ಅಪವಾದವೆಂಬಂತೆ ಕ್ರಿಕೆಟ್ ತಾರಾಗಣದಲ್ಲಿರುವ 'ಸಚಿನ್' ರಾಷ್ಟ್ರೀಯ ದೇಶಭಕ್ತಿ ಗಡಿಗಳನ್ನು ದಾಟಿ ಅಂತರಾಷ್ಟ್ರೀಯ ಮಾರುಕಟ್ಟೆಯ 'ಸಾಂಕೇತಿಕ ಮೌಲ್ಯ'ವನ್ನು ಕೋಟಿಗಳಲ್ಲಿ ಪಡೆಯುತ್ತಾರೆ. ಇದು ಅಸಾಮಾನ್ಯರ ಸಾಮಾನ್ಯ ಸಂಗತಿಯೆಂದು ಸುಮ್ಮನಿರಬೇಕೆ ? ಅಥವಾ ಇದು ಬ್ರಾಂಡ್ ಹೆಸರೆಂದೂ, ಕಂಪನಿಗಳ ಸಾರ್ವಜನಿಕ ಆಸ್ತಿಯೆಂದು ಸುಮ್ಮನಿರುವುದೆ?

ಶಿಕ್ಷಣದ ಬಗ್ಗೆ ಮಾತನಾಡುವಾಗ ಮೇಲಿನ ಪ್ರಶ್ನೆಗಳಿಗಿಂತ ಆ ಪ್ರಕ್ರಿಯೆಯೊಳಗೆ ಈ 'ಸಾಂಕೇತಿಕ ಮೌಲ್ಯ' ಮಾರುಕಟ್ಟೆ ಪ್ರಣೀತ ನೀತಿಯಲ್ಲೇ ಬರುತ್ತದೆ. ಇಂಥ ಕ್ರಿಯೆಯಲ್ಲಿ ಆಯ್ಕೆಯೂ ಸಹ ಅಂದಂದಿನ ಕ್ಲಾಸ್‌ರೂಂನಲ್ಲೇ ನಡೆದುಬಿಟ್ಟಿರುತ್ತದೆ. ಇದು ಸ್ಪಷ್ಟವಾಗಬೇಕಾದರೆ ಪ್ರಸುತ್ತ ರಾಷ್ಟ್ರೀಯ ಶಿಕ್ಷಣ ನೀತಿಯು ನಿದರ್ಶನಗೊಂಡಿದ್ದು ಕುಮಾರ ಮಂಗಲಂ ಮತ್ತು ಅಂಬಾನಿಯವರಿಂದ. (ಬಿರ್ಲಾ ಮತ್ತು ರಿಲೆಯನ್ಸ್ ಕಂಪನಿ ಮಾಲೀಕರು). ಹಾಗಾಗಿ ಮಾನವ ಸಂಪನ್ಮೂಲ ಅಭಿವೃದ್ಧಿಯೆನ್ನುವುದು ಕಂಪನಿಗಳ ವ್ಯಾಪಾರ ಅಭಿವೃದ್ಧಿಗೆ ಅಗತ್ಯವಾದ ಕೌಶಲ್ಯವನ್ನು ವೃದ್ಧಿಪಡಿಸುವುದೇ ಆಗುತ್ತದೆ. ಆದ್ದರಿಂದ ಪ್ರಸ್ತುತ ಲೇಖನವು ಶಿಕ್ಷಣವೂ ಸಹ ಅಧಿಕಾರ-ಸಂಬಂಧಗಳಲ್ಲೇ ನಡೆದು ಶ್ರೇಣೀಕರಣವನ್ನು ಅಭ್ಯರ್ಥಿಗಳಿಗೆ ಒಂದು ಮೌಲ್ಯವನ್ನಾಗಿ ಕಟ್ಟುತ್ತಿರುತ್ತದೆ. ಈ ಪ್ರಕ್ರಿಯೆಯಲ್ಲಿ ಅಭ್ಯರ್ಥಿಯಿಂದ ಸಮ್ಮತಿಯನ್ನು ಪಡೆಯಲಾಗುತ್ತದೆ ಎನ್ನುವ ಅಂಶವನ್ನು ವಿವರಿಸಿಕೊಳ್ಳಲು ಪ್ರಯತ್ನಿಸುತ್ತದೆ. ಈ ಹಿನ್ನೆಲೆಯಲ್ಲಿ ಶಿಕ್ಷಣ ಬೆಳೆದು ಬಂದ ಪ್ರಕ್ರಿಯೆಯನ್ನು ಗಮನಿಸಬೇಕಾಗುತ್ತದೆ.

ವಸಾಹತುಶಾಹಿ ಮತ್ತು ಶಿಕ್ಷಣ ವ್ಯವಸ್ಥೆ

ಅಕ್ಷರ ಪ್ರಕ್ರಿಯೆಯು ವಸಾಹತುಶಾಹಿ ಸಂದರ್ಭದಲ್ಲಿ ನಡೆದದ್ದು ಅಸಮಾನ ಅಧಿಕಾರ ಸಂಬಂಧಗಳಲ್ಲಿ. ಆದ್ದರಿಂದ 'ಅಕ್ಷರ' ಸ್ವೀಕರಣವು ಸಹ ಯಾವ ಭಾಷೆ 'ಅಧಿಕಾರ' ಸ್ಥಾನವನ್ನು ಅಲಂಕರಿಸುತ್ತದೋ ಅಲ್ಲಿಂದಲೇ ನಿರ್ಧಾರವಾಗುತ್ತಿರುತ್ತದೆ. ಅಂದರೆ ವಸಾಹತುವಿಗೊಳಗಾದ ವ್ಯಕ್ತಿ ಈ ಅಕ್ಷರವನ್ನು ಸ್ವೀಕರಿಸುವಾಗ, ತನ್ನ ಅನುಭವ ಲೋಕದ ಅರ್ಥಗಳನ್ನು ಬದಿಗೆ ಸರಿಸಿ, ಅಕ್ಷರ ಲೋಕದ ಅನುಭವಗಳಿಗೆ

> ಜ್ಞಾನ ಎನ್ನುವುದು ಆತ್ಮಸಾಕ್ಷಾತ್ಕಾರಕ್ಕಾಗಿ ಇರದೆ ಅದು ನಿರಂತರವಾದ ಸಾಮಾಜಿಕ ವರ್ತನೆಗಳಿಗೆ ಮಾಹಿತಿಯನ್ನು 'ಸತ್ಯ'ವೆಂಬಂತೆ ಉತ್ಪತ್ತಿಸುತ್ತಿರುತ್ತದೆ. ಅದಕ್ಕಾಗಿ ಎಲ್ಲರಿಂದಲೂ 'ಸಮ್ಮತಿ' ಯನ್ನು ರ್‍ಯಾಂಕ್/ಬಹುಮಾನ ನೀಡುವುದರ ಮೂಲಕ ಪಡೆದುಕೊಳ್ಳುತ್ತದೆ. ಹೀಗೆ ವ್ಯಕ್ತಿ/ಸಮಾಜದ ಸಾಧ್ಯತೆಗಳನ್ನು ನಿಶ್ಚಿತ ಚಟುವಟಿಕೆಗೆ 'ಪ್ರೋಗ್ರಾಮ್ಡ್' ಆಗಿ ಮಾಡಲಾಗುತ್ತದೆ. ಇಲ್ಲಿ ಕಣ್ಣಿಗೆ ಗೋಚರಿಸದ 'ಅಧಿಕಾರ-ಸಂಬಂಧ' ಗಳು ಸಾಂಕೇತಿಕವಾಗಿ ಕ್ರಿಯಾಶೀಲವಾಗಿ 'ಅನುಭವ'ಗಳನ್ನು ಒಂದು ಚೌಕಟ್ಟಿಗೆ ಒಳಪಡಿಸಲಾಗುತ್ತದೆ.

ಪಲ್ಲಟಗೊಳ್ಳುತ್ತಿರುತ್ತಾನೆ/ಳೆ. ಇದೇ ಪ್ರಕ್ರಿಯೆ ಮುಂದೆ ಆ ಸಾಂಸ್ಕೃತಿಕ ಪರಿಸರದಲ್ಲಿ ನಡೆಯುವ ಎಲ್ಲಾ ಸ್ಥಿತಿ-ಗತಿಗಳಿಗೂ ಕಾರಣೀಭೂತವಾಗಿ ವಾಸ್ತವ ಎನ್ನುವುದು ಸಂಘಟನೆಗೊಳ್ಳುತ್ತದೆ. ಇದು ೧೯ನೇ ಶತಮಾನದಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಒಂದು ಸಾಂಸ್ಥಿಕ ರೂಪ ಪಡೆದದ್ದು ವಸಾಹತು ಜಾರಿಗೊಳಿಸಿದ ಶಿಕ್ಷಣ ಕ್ರಮದಿಂದ.

ಈ ಅಂಶವನ್ನು ಹಲವು ನಿದರ್ಶನಗಳೊಂದಿಗೆ ಸ್ಪಷ್ಟೀಕರಿಸೋಣ. ೧೭೮೦ ಸೆಪ್ಟೆಂಬರ್‌ನಲ್ಲಿ ಒಂದು ಇಸ್ಲಾಮಿಕ್ ತಂಡ ವಾರೆನ್ ಹೇಸ್ಟಿಂಗ್ಸ್‌ನನ್ನು ಭೇಟಿ ಮಾಡಿ, ತಮ್ಮ ಯುವ ವಿದ್ಯಾರ್ಥಿಗಳಿಗಾಗಿ 'ಮದ್ರಸಾ'ವನ್ನು ಮಹಮದೀಯ ಕಾನೂನು ಹಾಗೂ ಇತರ ವಿಜ್ಞಾನಗಳನ್ನು ಕಲಿಯಲು ಸ್ಥಾಪಿಸಬೇಕೆಂದು ಕೋರುತ್ತಾರೆ. ಈ ಭೇಟಿಯ ಸಂದರ್ಭದಲ್ಲಿ ಕಲ್ಕತ್ತಾಗೆ ಒಬ್ಬ ಪ್ರಸಿದ್ಧ ವಿದ್ವಾಂಸ ಮೂಯಿಜ್-ಉದ್-ದೀನ್ ಬಂದಿರುತ್ತಾನೆ. ಈತನನ್ನು ಬ್ರಿಟಿಷ್ ಸರಕಾರ ಆ ಮದ್ರಾಸದ ಉಸ್ತುವಾರಿ ಅಧಿಕಾರಿಯಾಗಿ ನೇಮಿಸಬೇಕೆಂದು ತಂಡ ಕೋರುತ್ತದೆ.

ವಾರೆನ್ ಹೇಸ್ಟಿಂಗ್ಸನು ಕಂಪನಿಯ ಖರ್ಚಿನಿಂದಲೇ ಈ ಮದ್ರಸಾ ನಡೆಯುವಂತೆ ಸಮರ್ಥಿಸಿಕೊಳ್ಳುವಾಗ 'Painted a bleak picture of decaying remains of these schools which could seen in every capital, town and city and Hindustan. The Calcutta Madras Heastings opted, would presever and furterh knowledge, provide training for feature law officers of the company, contribute to the credit of the companies name and help soften the prejudices existed by the growth British dominions'

ಮುಂದೆ ಆ ಮುಯಿಜ್-ಉದ್-ದೀನ್‌ನ ನಿರ್ದೇಶನದಲ್ಲಿ ೪೦ ವಿದ್ಯಾರ್ಥಿಗಳು ಕಲಿಯುವ ಮದ್ರಾಸವೊಂದು ಆರಂಭವಾಗುತ್ತದೆ. ಆದರೆ ಕೆಲವೇ ವರ್ಷಗಳಲ್ಲಿ ಈ ವಿದ್ವಾಂಸ ಹಣವನ್ನು ಪೋಲುಮಾಡುತ್ತಿದ್ದು ಆತ ನೇಮಕಾತಿ ಮತ್ತು ವಿದ್ಯಾರ್ಥಿಗಳ ಮೇಲೆ ನಿಯಂತ್ರಣ ಹೊಂದಿರುವುದಾಗಿ ಆರೋಪ ಬರುತ್ತದೆ. ಆಗ ಮದ್ರಾಸದ ಆಡಳಿತದ ನಿರ್ವಹಣೆಗಾಗಿ ಬ್ರಿಟಿಷ್ ಅಧಿಕಾರಿಗಳ ಒಂದು ಸಮಿತಿಯು ರಚನೆಗೊಂಡು, ಆತನನ್ನು ಕೆಲಸದಿಂದ ತೆಗೆಯುತ್ತಾರೆ, ಮತ್ತು ಆ ಕಾಲೇಜಿನ ವ್ಯವಸ್ಥೆ ಬ್ರಿಟಿಷರಿಂದ ಮರು ಸಂಘಟನೆಗೊಂಡರೂ ಸಹ ಅಧ್ಯಯನಗಳು ಮಾತ್ರ ಇಸ್ಲಾಮಿಕ್ ಆಗಿಯೇ ಉಳಿಯುತ್ತವೆ.

ಇದೇ ತರಹದ ಘಟನೆ ಬನಾರಸಿನ ಸಂಸ್ಕೃತ ಕಾಲೇಜಿನಲ್ಲೂ ನಡೆಯುತ್ತದೆ. ಇದು ಆದದ್ದು ಜೋನಾಥನ್ ಡಂಕನ್ ಎಂಬುವನು ಬನಾರಸಿನ ರೆಸಿಡೆಂಟ್ ಆಗಿದ್ದಾಗ. ಆತನೇ ಕಂಪನಿಯ ಪ್ರತಿನಿಧಿಯಾಗಿದ್ದುಕೊಂಡು, ಆ ಸಂಸ್ಥೆಯಲ್ಲಿ 'ಹಿಂದೂ ಧರ್ಮಶಾಸ್ತ್ರ' ಮತ್ತು ಇತರೆ ಶಿಸ್ತುಗಳನ್ನು ಕಲಿಯಲು ಬೇಕಾದ ಮಾರ್ಗ ಸೂಚಿಗಳನ್ನು ರೂಪಿಸುತ್ತಾನೆ. ಆದರೆ ಹತ್ತು ವರ್ಷಗಳಲ್ಲೇ ಮದ್ರಾಸದಲ್ಲಾದಂತೆ ಆರೋಪಗಳು ಬಂದು, ಬ್ರಿಟಿಷ್ ಅಧಿಕಾರಿಗಳೇ ಅಲ್ಲಿನ ಉಸ್ತುವಾರಿಯನ್ನು ವಹಿಸಿಕೊಳ್ಳುತ್ತಾರೆ.

ಈ ಮೇಲಿನ ಎರಡು ನಿದರ್ಶನಗಳು ಬ್ರಿಟಿಷರಿಗೆ ಸಾಂಕೇತಿಕ ಪ್ರಯೋಗಗಳಾಗಿದ್ದು ಬ್ರಿಟಿಷ್ ಇಂಡಿಯಾದ ಉದ್ದಗಲಕ್ಕೂ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಅನುವು ಮಾಡಿಕೊಟ್ಟವು. ಅವರ ಪ್ರಕಾರ ಶಿಕ್ಷಣವು ಒಂದು ಸಾಂಸ್ಥಿಕ ರೂಪದಲ್ಲಿ ಅಂದರೆ ಭೌತಿಕವಾಗಿ ಒಂದು ಕಟ್ಟಡವಿದ್ದು ವಿದ್ಯಾರ್ಥಿಗಳು ತರಗತಿಗಳಲ್ಲಿ ವಿಭಜನೆಗೊಂಡು, ವಿದ್ಯಾರ್ಥಿಗಳು ಮತ್ತು ಟೀಚರ್ಸ್‌ಗಳ ಮಧ್ಯೆ ಅಂತರವಿರಬೇಕಿತ್ತು. ಅಲ್ಲಿ ಪ್ರೊಫೆಸರ್ಸ್, ಟೀಚರ್ಸ್ ಮತ್ತು ಅಸಿಸ್ಟೆಂಟ್‌ರ ನಡುವಣ ನಿರ್ಧರಿತ ಸ್ಥಾನಮಾನಗಳಿದ್ದು ತರಗತಿಗಳಲ್ಲಿ ವಿಷಯಗಳನ್ನು ನಿರ್ದಿಷ್ಟ ವೇಳೆಯಲ್ಲಿ ಕಲಿಸಬೇಕಾಗಿತ್ತು. ವಿದ್ಯಾರ್ಥಿಗಳೆಷ್ಟು ಜ್ಞಾನವನ್ನು ಪಡೆಯುವುದರಲ್ಲಿ ಪ್ರಗತಿಯನ್ನು ಸಾಧಿಸಿದ್ದಾರೆಂಬುದನ್ನು ಪರೀಕ್ಷೆಗಳ ಮೂಲಕ ನಿರಂತರವಾಗಿ ನೋಡಿಕೊಳ್ಳಬೇಕಿತ್ತು. ನಿರ್ಧರಿತವಾದ ಜ್ಞಾನ ಶಿಸ್ತುಗಳಲ್ಲಿ ಪರಿಣಿತಿಯನ್ನು ಪರೀಕ್ಷೆಗಳ ಮೂಲಕ ಅಳತೆ ಮಾಡಿ ಬಹುಮಾನ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದ್ದು ಹೀಗೆ ವಸಾಹತು ಶಿಕ್ಷಣ 'Regualrity, Uniformity and above all fiscal responsibility' ಯನ್ನು



ಬ್ರಿಟಿಷರ ಪ್ರಕಾರ ಶಿಕ್ಷಣವು ಒಂದು ಸಾಂಸ್ಥಿಕ ರೂಪದಲ್ಲಿ ಅಂದರೆ ಭೌತಿಕವಾಗಿ ಒಂದು ಕಟ್ಟಡವಿದ್ದು, ವಿದ್ಯಾರ್ಥಿಗಳು ತರಗತಿಗಳಲ್ಲಿ ವಿಭಜನೆಗೊಂಡು, ವಿದ್ಯಾರ್ಥಿಗಳು ಮತ್ತು ಟೀಚರ್ಸ್‌ಗಳ ಮಧ್ಯೆ ಅಂತರವಿರಬೇಕಿತ್ತು. ಅಲ್ಲಿ ಪ್ರೊಫೆಸರ್ಸ್, ಟೀಚರ್ಸ್ ಮತ್ತು ಅಸಿಸ್ಟೆಂಟ್‌ರ ನಡುವಣ ನಿರ್ಧರಿತ ಸ್ಥಾನಮಾನಗಳಿದ್ದು, ತರಗತಿಗಳಲ್ಲಿ ವಿಷಯಗಳನ್ನು ನಿರ್ದಿಷ್ಟ ವೇಳೆಯಲ್ಲಿ ಕಲಿಸಬೇಕಾಗಿತ್ತು. ವಿದ್ಯಾರ್ಥಿಗಳೆಷ್ಟು ಜ್ಞಾನವನ್ನು ಪಡೆಯುವುದರಲ್ಲಿ ಪ್ರಗತಿಯನ್ನು ಸಾಧಿಸಿದ್ದಾರೆಂಬುದನ್ನು ಪರೀಕ್ಷೆಗಳ ಮೂಲಕ ನಿರಂತರವಾಗಿ ನೋಡಿಕೊಳ್ಳಬೇಕಿತ್ತು.

ಜಾರಿಗೊಳಿಸಿ, ಯಾವುದನ್ನು ಉಳಿಸಿಕೊಳ್ಳಬೇಕು, ಯಾವುದನ್ನು ಬದಲಿಸಿಕೊಳ್ಳಬೇಕೆಂದು ಬ್ರಿಟಿಷರೇ ನಿರ್ಧರಿಸುವಂತಾದರು.

ಇಲ್ಲಿನ ರಾಜಕಾರಣವೆಂದರೆ ಕಂಪನಿಯ ಪ್ರೆಸ್ಟೀಜ್ ವೃದ್ಧಿಯಾಗುವಂತೆ ಯುರೋಪಿನ ಓರಿಯಂಟಲಿಸ್ಟ್ ವಿದ್ವಾಂಸರ ಮೂಲಕ ಬ್ರಿಟಿಷ್ ಸರಕಾರ ತಾನು ಸ್ಥಳೀಯ ಜ್ಞಾನದ ರಕ್ಷಕ ಮತ್ತು ಪೋಷಕನಾಗಿ, ಒಂದು ಅಗಾಧವಾದ ಮ್ಯೂಸಿಯಂ ಗ್ರಂಥಾಲಯಗಳನ್ನು ಸ್ಥಾಪಿಸಿ, ಆ ಮೂಲಕ ಏನನ್ನು ಉಳಿಸಿಕೊಳ್ಳಬೇಕು ಎಂಬುದನ್ನು ವ್ಯಾಖ್ಯಾನಿಸುತ್ತಾ 'Development of a programme for locating and classifying the specimens to be maintained'. ಲಾರ್ಡ್ ಮಿಂಟೋನ ಉಲ್ಲೇಖಗಳು ಭಾರತೀಯ ವಿಜ್ಞಾನ ಮತ್ತು ಸಾಹಿತ್ಯ ಹೇಗೆ ನಾಶವಾಗುತ್ತಿದೆ ಎಂಬುದನ್ನು ೧೯ನೇ ಶತಮಾನದ ಉದ್ದಕ್ಕೂ ಪ್ರತಿಧ್ವನಿಸುತ್ತಿದ್ದವು, 'It is a common remark that science and literature are in a progressive state of decay among the natives of India. From every inquiry which I have been enable to make on this interesting subject that remark appears to me but too well founded. The number of the learned is not only diminished but the circle of learning even among those who still devote themselves to it appears to be considerable contracted. The abstract sciences are abandoned, polite literature neglected and no branch of learning cultivated but what is connected with peculiar religious doctrines of the people. The immediate consequence of this state of things is the disuse and even actual loss of many valuable books; and it is to be apprehended that unless Government interpose with a posturing and the revival of letters may shortly become hopeless from a want of books or of persons capable of explaining them.'

ಅಂದರೆ ಬ್ರಿಟಿಷ್ ಭಾರತಕ್ಕೆ ಮತ್ತು ಬ್ರಿಟಿಷ್ ಭಾರತದ ಪ್ರಾಂತ್ಯ, ಭಾಷೆ, ಸಂಸ್ಕೃತಿ, ಸಾಹಿತ್ಯಗಳಿಗೆ ಓರಿಯಂಟ್‌ಲಿಸ್ಟರು 'ಸುವರ್ಣಯುಗ'ವನ್ನು ಸಂಘಟಿಸಿ ಅನಂತರದಲ್ಲಿ ವಿದೇಶಿ ದಾಳಿಕೋರರಿಂದ ಅದು ನಾಶಹೊಂದುತ್ತಿದೆ ಎಂದೂ ಅದನ್ನು ವಸಾಹತು ಸರಕಾರ ಸಂರಕ್ಷಿಸುತ್ತಿದೆ ಎಂದೂ, ಶೈಕ್ಷಣಿಕ ಸಂಸ್ಥೆಗಳಲ್ಲಿ ಕಲಿಸಿಕೊಡಲಾಗುತ್ತದೆ. ಇಂತಹ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ನಮಗೆ ಚಾರಿತ್ರಿಕ ಪ್ರಜ್ಞೆಯಿಲ್ಲವೆಂದು, ನಾವೆಲ್ಲ ಕತ್ತಲೆಯ ಯುಗದಲ್ಲಿದ್ದು ನಾಗರಿಕತೆಯಿಂದ ವಂಚಿತರಾಗಿದ್ದೆವು ಎಂಬುದನ್ನು ಒಪ್ಪಿ ಬ್ರಿಟಿಷ್ ಸರಕಾರಕ್ಕೆ ಮಾನ್ಯತೆ ನೀಡಬೇಕಿತ್ತು. ಆ ಮೂಲಕ ಬ್ರಿಟಿಷ್ ವಸಾಹತುಶಾಹಿ ತನ್ನನ್ನು ತಾನೆ ಸಮರ್ಥಿಸಿಕೊಂಡು ನೇಟಿವ್ ಜನಗಳ ಮೇಲೆ ಅಧಿಕಾರವನ್ನು ಚಲಾಯಿಸುವಂತಾಯಿತು.

೧೮೦೦ರಲ್ಲಿ ಲಾರ್ಡ್ ವೆಲ್ಲೆಸ್ಲಿ ಒಬ್ಬ ದಾರ್ಶನಿಕನಂತೆ ಬ್ರಿಟಿಷ್ ಸರಕಾರದಲ್ಲಿ ಶೈಕ್ಷಣಿಕ ಯೋಜನೆಯನ್ನು ಜಾರಿಗೊಳಿಸುತ್ತಾನೆ. ಆತ ಮೊದ ಮೊದಲು ಆಡಳಿತಕ್ಕಾಗಿ

'ಸಿವಿಲ್ ಸರ್ವಿಸ್' ಅಧಿಕಾರಿಗಳಿಗಾಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ತಾವು ಮಾರ್ವಾಡಿ ಉದ್ದೇಶದಿಂದ ವಸಾಹತನ್ನು ಸ್ಥಾಪಿಸಲಿಲ್ಲ. ಬದಲು ಆಧುನಿಕ ನಾಗರಿಕತೆಯನ್ನು ಕಟ್ಟಿಕೊಡಲು ಬಂದಿದ್ದೇವೆಂದು ನಂಬಿಸುತ್ತಾನೆ. ಅನಂತರದಲ್ಲಿ ಇಲ್ಲಿನ ಸ್ಥಳೀಯರು ಸಹ ಈ ಶೈಕ್ಷಣಿಕ ತರಬೇತಿ ಪಡೆದು 'ಸಿವಿಲ್ ಸರ್ವೆಂಟ್ಸ್' ಆಗಬಹುದೆಂದು ಹುಚ್ಚು ಭ್ರಮೆಯನ್ನು ಕಟ್ಟಿ ಕೊಡುತ್ತಾನೆ. ಇಂತಹ ಪ್ರಕ್ರಿಯೆಯಲ್ಲಿ ತೊಡಗಿದವರೆಂದರೆ ಬ್ರಿಟಿಷರೊಡನೆ ಮಿಷನರಿಗಳು ಮತ್ತು ಓರಿಯಂಟಲಿಸ್ಟ್ ವಿದ್ವಾಂಸರು. ಈ ಅಂಶವನ್ನು ಈಗಾಗಲೇ ಗಮನಿಸಿದ್ದೇವೆ.

ಈ ಮೇಲಿನ ರೀತಿಯಲ್ಲಿ 'ಕನ್ನಡ ಭಾಷಾ' ಕ್ಷೇತ್ರದಲ್ಲೂ ನಡೆಯುತ್ತದೆ. 'ನಾಡಿನ ಆಡಳಿತ ವಹಿಸಿಕೊಂಡ ಬ್ರಿಟಿಷರ ದೃಷ್ಟಿಯಲ್ಲಿ ಆಗಿನ ದೇಶಿಯ ಶಿಕ್ಷಣ ಪದ್ಧತಿಯಲ್ಲಿದ್ದ ಮುಖ್ಯ ದೋಷಗಳೆಂದರೆ ಶಿಕ್ಷಣವು ಹೆಚ್ಚು ವ್ಯಾಪಕವಾಗಿರದೆ ಕೆಲವೆ ಜನ ಅದರ ಪ್ರಯೋಜನ ಪಡೆಯುತ್ತಿದ್ದಾರೆಂಬುದು ಒಂದು. ಇನ್ನು ಪ್ರಾಥಮಿಕ ಮಟ್ಟದ ಅಕ್ಷರ-ಲೆಕ್ಕಗಳ ತಿಳುವಳಿಕೆ ಇಲ್ಲವೆ, ಕೆಲವೇ ಕಾವ್ಯ - ಶಾಸ್ತ್ರ ಗ್ರಂಥಗಳ ಪಠಣ ಇಷ್ಟನ್ನು ಬಿಟ್ಟರೆ ಪ್ರಪಂಚದ ಅನೇಕ ಆಗು-ಹೋಗುಗಳ ಉಪಯುಕ್ತ ವಿಷಯಗಳ ಪರಿಜ್ಞಾನವು ಇಲ್ಲದೆ ಹೋದದ್ದು ಎರಡನೆಯ ಕೊರತೆಯಾಗಿ ಕಂಡಿತು' ಎಂದು ಡಾ|| ಶ್ರೀನಿವಾಸ್ ಹಾವನೂರು ಹೇಳುವುದನ್ನು ಗಮನಿಸಬೇಕು.

ಈ ಕೊರತೆಗಳನ್ನು ನೀಗಿಸುವ ಸಲುವಾಗಿ ಕನ್ನಡ ಪ್ರದೇಶಗಳಲ್ಲಿ ಕಾರ್ಯ ಪ್ರವೃತ್ತರಾದ ಮೊದಲಿಗರೆಂದರೆ ಮದ್ರಾಸಿನ ಮನ್ರೋ ಹಾಗೂ ಮುಂಬಾಯಿಯ ಎಲ್ಫಿನ್‌ಸ್ಟನ್. ಇವರಿಬ್ಬರು ಕ್ರಮವಾಗಿ 'ನೇಟಿವ್ ಸ್ಕೂಲ್ ಆ್ಯಂಡ್ ಬುಕ್ ಸೊಸೈಟಿ' ಮತ್ತು 'ಬಾಂಬೆ ಎಜುಕೇಷನಲ್ ಸೊಸೈಟಿ'ಗಳನ್ನು ಆರಂಭಿಸುತ್ತಾರೆ. ಆದರೆ ಸುಮಾರು ಹತ್ತು ವರ್ಷಗಳ ನಂತರ ಧಾರವಾಡ ವಿಭಾಗಕ್ಕೆ ಅಸಿಸ್ಟೆಂಟ್ ಕಲೆಕ್ಟರ್‌ನಾದ ವಾಲ್ಟರ್ ಎಲಿಯೆಟ್, ೧೮೨೬ರಲ್ಲಿ ಧಾರವಾಡದಲ್ಲಿ ಒಂದು ಮರಾಠಿ ಶಾಲೆ ಆರಂಭವಾದಾಗ, 'ಅದು ತಪ್ಪು, ಇಲ್ಲಿನ ಜನರ ಭಾಷೆ ಕನ್ನಡ. ಮಾತೃ ಭಾಷೆಯಲ್ಲಿಯೇ ಶಿಕ್ಷಣ ನಡೆಯಬೇಕಾದದ್ದು ನ್ಯಾಯವಾದದ್ದು' ಎಂದು ವರದಿ ಮಾಡಿದ್ದಲ್ಲದೆ, ಒಂದು ಕನ್ನಡ ಶಾಲೆಯನ್ನು ಆರಂಭಿಸಿದ್ದಲ್ಲದೆ ಮೂರು ವರ್ಷಕಾಲ ತಾನೇ ಅದರ ವೆಚ್ಚವನ್ನು ವಹಿಸುತ್ತಾನೆ.

ಮುಂದೆ ಆತನ ನೇತೃತ್ವದಲ್ಲಿ ಕನ್ನಡ ಪಠ್ಯ ಪುಸ್ತಕಗಳು ರಚನೆಗೊಳ್ಳುತ್ತವೆ. 'ಈಸೋಫನ ನೀತಿ ಕಥೆಗಳು' 'ಗಣಿತ ಪುಸ್ತಕ-ಪೂರ್ಣಾಂಕ' ಮತ್ತು 'ಶಾಲಾ ಪದ್ಧತಿ' ಎಂಬ ಪುಸ್ತಕಗಳು ಬಳ್ಳಾರಿಯ ಮಿಷನ್ ಪ್ರೆಸ್‌ನಲ್ಲಿ ಮುದ್ರಣಗೊಳ್ಳುತ್ತವೆ. 'ಶಾಲಾ ಪದ್ಧತಿ' ಬ್ರಿಟಿಷ್ ಶಿಕ್ಷಣ ವಿಧಾನವನ್ನು ಪರಿಚಯಿಸುವ ಕೈಪಿಡಿಯಾಗಿ ಮರಾಠಿ, ಗುಜರಾತಿ ಭಾಷೆಗಳಿಗೂ ಅನುವಾದಗೊಳ್ಳುತ್ತದೆ. ಅಂದರೆ ವಸಾಹತು ಶಿಕ್ಷಣ ಹೇಗೆ ತನ್ನ ಕಲಿಕಾ ಬೋಧೆಯನ್ನು ಚಲಾವಣೆಗೆ ತಂದೀತೆಂದು ತಿಳಿಯಬಹುದಾಗಿದೆ.

ಮುಂದೆ ೧೮೩೫ರಲ್ಲಿ ಮುಂಬೈ ಸರಕಾರವು 'ಸದರ್ನ್ ಮರಾಠಾ' ಪ್ರದೇಶದ ಜನರ ಭಾಷೆ ಕನ್ನಡವಾದ್ದರಿಂದ ಕನ್ನಡದಲ್ಲಿಯೇ ಆಡಳಿತ ಮತ್ತು ಶಿಕ್ಷಣ ಕಾರ್ಯ ನಡೆಯಬೇಕು ಎಂಬ ನಿರ್ಣಯವನ್ನು ಸ್ವೀಕರಿಸುತ್ತದೆ. ಈ ಕಾರಣದಿಂದ 'ಕನ್ನಡ ಭಾಷೆ' ಎನ್ನುವುದು ಸಂಘಟನೆಗೊಳ್ಳುವುದು. (ಈ ಹಿಂದೆ ಈ ಅಂಶವನ್ನು ಗಮನಿಸಿದ್ದೇವೆ.) ಇದು ಅವರ ಕಂದಾಯ ಮತ್ತು ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಅತ್ಯವಶ್ಯಕವಾಗಿ ಬೇಕಿತ್ತಲ್ಲದೆ, ಕನ್ನಡ ಭಾಷೆ ಮಾತನಾಡುವವರು ಕಂದಾಯವನ್ನು ತಪ್ಪದೆ ಕಂಪನಿಗೆ ನೀಡುವುದನ್ನು ರೂಢಿಸಿಕೊಳ್ಳಬೇಕಿತ್ತು. ಈ ಭೂ ಕರದ ವಿರುದ್ಧ ನಡೆದಿರುವ ಪ್ರತಿಭಟನೆಗಳನ್ನು ಇಲ್ಲಿ ನೆನೆಯಬಹುದು. ಇದನ್ನು ಹೊರತುಪಡಿಸಿ, ಕನ್ನಡ ಉದ್ಧಾರವಾಗಬೇಕೆಂಬ ಉದ್ದೇಶ ಅವರಿಗೇನೂ ಇರಲಿಲ್ಲ.



ಇದೇ ಸಂದರ್ಭದಲ್ಲಿ ಮೈಸೂರಿನಲ್ಲಿ ೧೮೩೩ರಲ್ಲಿ ಇಂಗ್ಲಿಷ್ ಶಾಲೆಯೊಂದನ್ನು ಆರಂಭಿಸಲಾಗುತ್ತದೆ.

ಇದಲ್ಲದೆ ಮಿಷನರಿಗಳು ಬೆಂಗಳೂರಿನಲ್ಲಿ ಅವರ ಮತ ಪ್ರಚಾರಕ್ಕಾಗಿ ಒಂದು ಸೆಮಿನರಿಯನ್ನು ಆರಂಭಿಸುತ್ತಾರೆ. ಅಲ್ಲದೆ ೧೮೩೪ರಲ್ಲಿ ಬೆಂಗಳೂರಿನ ಕಂಟೋನ್‌ಮೆಂಟ್‌ನಲ್ಲಿ ಥಾಮಸ್ ಹಡ್ಸನ್ ಎಂಬ ವೆಸ್ಲಿಯನ್ ಮಿಷನರಿ ಒಂದು ಇಂಗ್ಲಿಷ್ ಶಾಲೆಯನ್ನು ಆರಂಭಿಸುತ್ತಾನೆ. ವರ್ಷಾಂತ್ಯದಲ್ಲಿ ಕಮಿಷನರ್ ಕಬ್ಬನ್‌ನ ಅಧ್ಯಕ್ಷತೆಯಲ್ಲಿ 'ಪಬ್ಲಿಕ್' ಪರೀಕ್ಷೆ ನಡೆಯುತ್ತದೆ. ವಿದ್ಯಾರ್ಥಿಗಳ ಪ್ರಗತಿಯನ್ನು ಕಂಡು ೫೦೦ ರೂಪಾಯಿಗಳನ್ನಿತ್ತನಲ್ಲದೆ, ಕಾರ್ಯ ನಿಮಿತ್ತ ನಗರಕ್ಕೆ ಬಂದಿದ್ದ ಗೌರ್ನರ್ ಜನರಲ್ ಬೆಂಟಿಕ್‌ನಿಂದ ೩೦೦ ರೂ.ಗಳ ದೇಣಿಗೆಯನ್ನು ಕೊಡಿಸುತ್ತಾನೆ. ಹಾಗೆಯೇ ಬಾಸೆಲ್ ಮಿಷನ್ನಿನವರು ೧೮೩೪ರಲ್ಲಿ ಮಂಗಳೂರು, ೧೮೩೭ರಲ್ಲಿ ಧಾರವಾಡಗಳಲ್ಲಿ ಶಾಲೆಗಳನ್ನು ಆರಂಭಿಸುತ್ತಾರೆ. ಹೀಗೆ ಪ್ರಾಥಮಿಕ ಶಾಲೆಗಳು ೧೯ನೇ ಶತಮಾನದ ಮಧ್ಯಭಾಗದ ಹೊತ್ತಿಗೆ ಕನ್ನಡ ಅಕ್ಷರಗಳನ್ನು ಪ್ರಧಾನ ನಗರ-ಪಟ್ಟಣಗಳಲ್ಲಿ ಸಾರ್ವತ್ರಿಕವಾಗಿ ಕಲಿಸಿಕೊಡಲಾಗುತ್ತದೆ. ಅಂದರೆ ಇಲ್ಲಿ 'ಕನ್ನಡ ಲೋಕ'ದ ಅನುಭವವನ್ನು ಕಲಿಸಿದ್ದಾರೆಂದು ಅರ್ಥವಲ್ಲ. ಕನ್ನಡ ಭಾಷೆಯ ಕೃತಿಯೊಂದು, ಅಧಿಕಾರ ಭಾಷೆಯಿಂದ ಬಂದ ಅನುಭವ ಲೋಕವನ್ನೇ ಕಲಿಸಲಾರಂಭಿಸಿ, ತನ್ನ ಅನುಭವ ಲೋಕವನ್ನು ಊನವೆಂಬಂತೆ ಕಾಣತೊಡಗುತ್ತದೆ.

ಇನ್ನು ವಸಾಹತು ಶಿಕ್ಷಣದ ದ್ವಿತೀಯ ಘಟ್ಟವನ್ನು ಗಮನಿಸುವಾಗ ೧೮೫೪-೫೫ರಲ್ಲಿ ಏಕ ರೂಪದ ಶಿಕ್ಷಣ ನೀತಿ ಸಿದ್ಧವಾಗಿ ಅದಕ್ಕೆ ಪ್ರತ್ಯೇಕ ಇಲಾಖೆ ಅಸ್ತಿತ್ವಕ್ಕೆ ಬರುತ್ತದೆ. ಆ ಮೂಲಕ ಸರಕಾರ ಅನುದಾನವನ್ನು ನೀಡತೊಡಗುತ್ತದೆ. ಆದರೆ ಹೀಗೆ ಆರಂಭವಾದ ಶಿಕ್ಷಣ ನೀತಿಗೆ ಪ್ರತಿರೋಧವಿರಲಿಲ್ಲವೆಂದು ಭಾವಿಸಬೇಕಿಲ್ಲ. ೧೯ನೇ ಶತಮಾನದ ಬ್ರಿಟಿಷ್ ಇಂಡಿಯಾ ಅನೇಕ ರೀತಿಯ ಚಳವಳಿ - ಹೋರಾಟಗಳನ್ನು ಕಾಣುತ್ತದೆ. ೧೮೫೭ರಲ್ಲಿ ಆ ಎಲ್ಲಾ ಚಳವಳಿಗಳು ಒಂದಾದಂತೆ ಮೊದಲ ಸ್ವಾತಂತ್ರ್ಯ ಹೋರಾಟವನ್ನು ದೊಡ್ಡದಾಗಿ ಬಿಂಬಿಸಲಾಗಿದೆ.

ಅಲ್ಲದೆ ಈ ಹೋರಾಟವನ್ನೂ ಸಹ ಹತ್ತಿಕ್ಕಿದ ವಸಾಹತುಶಾಹಿ ಅದೇ ವರ್ಷ ಕಲ್ಕತ್ತಾ ಮದ್ರಾಸ್, ಮುಂಬಾಯಿಗಳಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ, ಬ್ರೈನ್-ವಾಷಿಂಗ್ ಕೆಲಸವನ್ನು ತೀವ್ರಗೊಳಿಸುತ್ತದೆ. ೧೮೬೧ರ ವೇಳೆಗೆ ಮೈಸೂರು ಸಂಸ್ಥಾನದಲ್ಲಿ ಮೊಟ್ಟ ಮೊದಲ ಶಿಕ್ಷಕ ತರಬೇತಿ ಕೇಂದ್ರ ಆರಂಭವಾಗುತ್ತದೆ. ಮುಂದೆ ಅವು ನಾಯಿಕೊಡೆಗಳಂತೆ ಬೆಳೆಯುವುದನ್ನು ದೇಶದಲ್ಲೆಲ್ಲಾ ಕಾಣಬಹುದು.

'ಮೈಸೂರು ಶಿಕ್ಷಣಾಭಿವೃದ್ಧಿಯ ಕಾರ್ಯದಲ್ಲಿ ನಡೆದ ಇನ್ನೆರಡು ಮಹತ್ವದ ಘಟನೆಗಳೆಂದರೆ ಕ್ರಿ.ಶ. ೧೮೮೭ರಲ್ಲಿ ಓರಿಯಂಟಲ್ ಲೈಬ್ರರಿ ಮತ್ತು ಕ್ರಿ.ಶ. ೧೮೮೪ರಲ್ಲಿ ಪ್ರಾಚ್ಯವಸ್ತು ಸಂಶೋಧನಾ ಕಾರ್ಯಾಲಯ ಇವುಗಳ ಸ್ಥಾಪನೆ. ಓರಿಯಂಟಲ್ ಲೈಬ್ರರಿಯು ತನ್ನ ಆರಂಭದ ಏಳು ವರ್ಷಗಳಲ್ಲಿಯೇ ೧೩೫೮ ಹಸ್ತಪ್ರತಿಗಳನ್ನು ಮತ್ತು ೧೬೫೩ ಮುದ್ರಿತ ಕನ್ನಡ, ಸಂಸ್ಕೃತ ಕೃತಿಗಳನ್ನು ಕಲೆ ಹಾಕಿದುದಿದೆ.

ಪ್ರಾಚ್ಯ ವಾಙ್ಮಯದ ನಿಧಿಕ್ಷೇಪದಂತಿದ್ದ ಈ ಲೈಬ್ರರಿಯು ಕ್ರಿ.ಶ. ೧೮೯೧ರಿಂದ ಕೊಳ್ಳುವ ಸೌಕರ್ಯವಿದ್ದುದರಿಂದ ವಾಙ್ಮಯದ ಕುರಿತಾದ ಸಂಶೋಧನೆಗೆ ನೆರವು ಸಂದಿತು' ಎಂದು ಶ್ರೀನಿವಾಸ್ ಹಾವನೂರು ಹೇಳುತ್ತಾರೆ. ಆದರೆ, ಅಂತಹ ಹೊಗಳುವ ಮಹತ್ವ ನನಗೇನು ಕಾಣಿಸುವುದಿಲ್ಲ. ಮುಂದೆ ಅವರೇ ಗುರುತಿಸುವಂತೆ 'ಪಠ್ಯ ಪುಸ್ತಕಗಳು ಸರಕಾರಿ ಡಿಪೋಗಳ ಮೂಲಕ ಮಾರಾಟವಾಗುತ್ತಿದ್ದವು. ಕ್ರಿ.ಶ. ೧೮೬೪-೬೫ರಲ್ಲಿ ಇವುಗಳ ಮಾರಾಟ

'ಇವಾನ್ ಇಲ್ಲಿಚ್' ಎನ್ನುವ ವಿದ್ವಾಂಸನ ಪ್ರಕಾರ ಶಿಕ್ಷಣವೆನ್ನುವುದು ಕೌಶಲ್ಯವನ್ನು ಕಲಿಸುವುದು ಮತ್ತು ಅಂಥ ಕೌಶಲ್ಯಗಳಲ್ಲಿ ಒಂದನ್ನು ನಿರ್ದಿಷ್ಟವಾಗಿ ಅಭ್ಯಾಸಿಸಿ ಪರಿಣತಿಯನ್ನು ಗಳಿಸುವುದು.



FREEDOM SONG: In Digantar schools, children of different classes learn together

ಸಂಖ್ಯೆಯು ೫೨೦೦ ಪ್ರತಿಗಳದ್ದಾದರೆ, ಎರಡೇ ವರ್ಷಗಳ ಅಂತರದಲ್ಲಿ ಎಂದರೆ ಕ್ರಿ.ಶ. ೧೮೬೭-೬೮ರಲ್ಲಿ ಸುಮಾರು ೨೭ ಸಾವಿರ ಕನ್ನಡ ಪಠ್ಯಗಳು ವಿಕ್ರಯವಾದುವೆಂಬುದು ಶಿಕ್ಷಣ ಪ್ರಸಾರ ಅದೆಷ್ಟು ಭರದಿಂದ ಸಾಗಿದ್ದಿತೆಂಬುದನ್ನು ಕಂಡುಕೊಳ್ಳಬಹುದು' ಎನ್ನುವ ಶ್ರೀನಿವಾಸ್ ಹಾವನೂರರು ಒಂದೇ ಉಸಿರಿಗೆ 'ಇಂತು ನವೋದಯ ಕಾಲದಲ್ಲಿ ಶಿಕ್ಷಣವು ವ್ಯಾಪಕವಾಗುತ್ತ ನಡೆದಂತೆಯಲ್ಲ, ಸಾಹಿತ್ಯ ಕೃಷಿಯೂ ಹೆಚ್ಚಾಯಿತು. ಕನ್ನಡ ಅಧ್ಯಯನದ ಮೂಲಕ ಕನ್ನಡ ನುಡಿ, ನಾಡುಗಳ ಬಗ್ಗೆ ಅಭಿಮಾನವು ಬೆಳೆದು ಇಪ್ಪತ್ತನೆಯ ಶತಮಾನದಲ್ಲಿ ಕಂಡು ಬರುವ ವಿಕಾಸಕ್ಕೆ ಮಾರ್ಗವನ್ನು ಸಿದ್ಧಗೊಳಿಸಿತು' ಎನ್ನುತ್ತಾರೆ. ಈ ಸಂಭ್ರಮದೊಳಗಿನ ಹುನ್ನಾರಗಳೇನು ಎಂಬುದು ಇಲ್ಲಿ ವಿಸ್ತರಿಸಬೇಕಿಲ್ಲ.

ಆದರೆ, ಈ ಮೂಲಕ ವಸಾಹತು ಶಿಕ್ಷಣ 'ಕನ್ನಡ ನೇಟಿವ್' ಜನರನ್ನು ನಿಯಂತ್ರಿಸುವ ತಂತ್ರಗಳನ್ನು ರೂಪಿಸಿ ಕೊಡುತ್ತದೆ. ಅಲ್ಲಿ ತನ್ನದಲ್ಲದ ಮತ್ತೊಂದನ್ನು ಪ್ರತಿನಿಧಿಸಲು ಕೆಲವು ನಿರ್ದಿಷ್ಟ ವಿಧಾನಗಳನ್ನು ಅನುಸರಿಸಲಾಗುತ್ತದೆ. ಆ ವಿಧಾನಗಳೇ ಕನ್ನಡ ಜಗತ್ತು ಪಡೆಯುವ ಸ್ವರೂಪವನ್ನು ತೀರ್ಮಾನಿಸುತ್ತವೆ. ಆದ್ದರಿಂದಲೇ ಅಂದಿನ ಮಾನವ ಶಾಸ್ತ್ರ ಮತ್ತು ಸಾಹಿತ್ಯ ಸೆಕ್ಯೂಲರ್ ಆದ ಉದಾರವಾದಿ ಕನ್ನಡ ವ್ಯಕ್ತಿತ್ವವನ್ನು ವಸಾಹತುದಾರರ ಇಷ್ಟಕ್ಕೆ ಅನುಗುಣವಾಗಿ ರೂಪಿಸುತ್ತದೆ. ಎಡ್ವರ್ಡ್ ಸೈಯದ್ ಹೇಳುವಂತೆ ಇಲ್ಲಿ ಪ್ರಜೆಗಳು ಅಥವಾ ಪ್ರತಿನಿಧಿಗಳು ಚರಿತ್ರೆಯೇ ಇಲ್ಲದ ಒಂದು ಅಸ್ತಿತ್ವವನ್ನು ಪಡೆದುಕೊಳ್ಳುತ್ತಾರೆ. ಇಂಥ ಪ್ರತಿನಿಧೀಕರಣಗಳನ್ನೇ ಕ್ರಮೇಣ ವಾಸ್ತವವೆಂದು ನಂಬಿಸಲಾಗುತ್ತದೆ. ಇವು ವಸಾಹತಿನೊಳಗೆ ನಡೆಯುವ ಘಟನೆಗಳ ಮೇಲೆ ಪ್ರಭಾವ ಬೀರುತ್ತವೆ.

ಹೀಗೆ ಸುಸಂಯೋಜಿತವಾದ ಹಾಗೂ ಪಾರದರ್ಶಕವಾದ ಪಠ್ಯಗಳನ್ನು ವಸ್ತು ನಿಷ್ಠಗೊಳಿಸುವುದರ ಮೂಲಕ ಮಾನವ ಶಾಸ್ತ್ರ ಮತ್ತು ಸಾಹಿತ್ಯ ಎಂಪಿರಿಕಲ್ ಆದ ಜ್ಞಾನ ಮೀಮಾಂಸೆಯ ವಿಧಾನಗಳನ್ನು ಸೃಷ್ಟಿಸುತ್ತವೆ. ಅವು ವಸಾಹತೀಕರಣಕ್ಕೆ ಒಳಗಾದ ಸಂಸ್ಕೃತಿಗಳನ್ನು 'ಅವುಗಳ ಯೋಗ್ಯತೆ ಇಷ್ಟೇ ಎನ್ನುವಂತೆ ಬೆಲೆ ಕಟ್ಟಿ ನಿರ್ಧರಿಸುತ್ತವೆ. ಅಂದರೆ ಕನ್ನಡ ಸಂಸ್ಕೃತಿಯ ಮೂಲ ರೂಪವು ಈ ಶಿಸ್ತುಗಳ ಮೂಲಕ ಹೊಸ ಅಸ್ತಿತ್ವವನ್ನು ಪಡೆದುಕೊಳ್ಳುತ್ತದೆ. ಇಲ್ಲಿ ಜನಗಳ ಬದುಕು ಅಚಾರಿತ್ರಿಕವಾಗಿಸುವ ಕೆಲಸ ನಡೆದು, ಅವರು ಶಾಶ್ವತವಾಗಿ ಬದಲಾಗದ ಗುಣ ಲಕ್ಷಣಗಳ ಶ್ರೇಣೀಕರಣದಲ್ಲಿ ಸ್ಥಿರೀಕರಣಕ್ಕೊಳಪಡುತ್ತಾರೆ. ಈ ಗುಣ-ಲಕ್ಷಣಗಳನ್ನು ಇಲ್ಲಿನ ನೇಟಿವ್ ಪಠ್ಯಗಳಿಂದಲೇ ಆಯ್ದುಕೊಳ್ಳಲಾಗುತ್ತದೆ. ಹೀಗೆ ಸಮುದಾಯಗಳು, ವ್ಯಕ್ತಿಗಳು ತಮ್ಮ ಕತೃತ್ವವನ್ನು ಕಳೆದುಕೊಳ್ಳುವ ಭೀತಿಯನ್ನು ಎದುರಿಸಬೇಕಾಗುತ್ತದೆ ಮತ್ತು ಕಳೆದುಕೊಳ್ಳುತ್ತಾರೆ.

೧೭೯೭ರಷ್ಟು ಹಿಂದೆಯೇ ಅನೇಕ ವರ್ಷಗಳ ಕಾಲ ಕಂಪನಿಯ ನಿರ್ದೇಶಕ ಮಂಡಳಿಯ ಸದಸ್ಯನೂ, ಅಧ್ಯಕ್ಷನೂ ಆದ ಚಾರ್ಲ್ಸ್ ಗ್ರಾಂಟ್ ಈ ಮಂಡಲಿಯ ಮುಂದೆ, ಭಾರತದಲ್ಲಿ ಇಂಗ್ಲಿಷ್ ಶಿಕ್ಷಣದ ಅಗತ್ಯವನ್ನು 'ಗ್ರೇಟ್ ಬ್ರಿಟನ್ನಿನ ಏಷ್ಯಾಟಿಕ್ ವಸಾಹತುಗಳ ಸಾಮಾಜಿಕ ಸ್ಥಿತಿ-ಗತಿ, ಅದರಲ್ಲೂ ಅವರ ನೈತಿಕತೆ ಹಾಗೂ ಅದನ್ನು ಉತ್ತಮ ಪಡಿಸುವುದರ ಬಗ್ಗೆ' ಎನ್ನುವ ಪುಸ್ತಕದಲ್ಲಿ ಹೇಳುವ ಮಾತು ೧೯ನೇ ಶತಮಾನದ ಕೊನೆಯ ಹೊತ್ತಿಗೆ ನಿಜವಾಗುತ್ತವೆ, 'ಬ್ರಿಟಿಷ್ ವಾಣಿಜ್ಯೋತ್ಪನ್ನಗಳನ್ನು ಭಾರತದಲ್ಲಿ ಮಾರಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಜನರ ಅಭಿರುಚಿಗಳನ್ನು 'ಆ ವಸ್ತುಗಳನ್ನು ಉಪಯೋಗಿಸುವಂತೆ ತಿದ್ದಲು' ಸಾಧ್ಯವಾಗಿರಲಿಲ್ಲ.

ಅದೂ ಅಲ್ಲದೆ ಅವರ ಹತ್ತಿರ ಆ ವಸ್ತುಗಳನ್ನು ಕೊಳ್ಳಲು ಬೇಕಾದ ಸಂಪನ್ಮೂಲಗಳೂ ಇರಲಿಲ್ಲ. ಇಂಗ್ಲಿಷ್ ಶಿಕ್ಷಣವು ಭಾರತೀಯರಲ್ಲಿ ಶೋಧಕ ಬುದ್ಧಿಯನ್ನು ಹುಟ್ಟಿಸುತ್ತದೆ. ಅವರು ತಮ್ಮ ದೇಶದಲ್ಲಿ ಪ್ರಗತಿಪರ ಚಟುವಟಿಕೆಗಳನ್ನು ಪ್ರಾರಂಭಿಸುತ್ತಾರೆ. ಅದೂ ಅಲ್ಲದೆ, 'ಉತ್ತಮವಾದ ಯುರೋಪಿಯನ್ ಪುಸ್ತಕಗಳ ಒಂದು ಚಿಕ್ಕ ಸಂಗ್ರಹವು ಒಟ್ಟು ಭಾರತ ಹಾಗೂ ಅರೇಬಿಯಾಗಳ ಸಮಗ್ರ ಸಾಹಿತ್ಯಕ್ಕಿಂತ ಶ್ರೇಷ್ಠವಾದುದು.' ಈ ಮಾತನ್ನು ಅಲ್ಲಗಳೆಯುವ ಒಬ್ಬನೇ ಒಬ್ಬ ಓರಿಯಂಟಲಿಸ್ಟನನ್ನು ನಾನು ನೋಡಲಿಲ್ಲ' ಎನ್ನುತ್ತಾನೆ.

ಆದ್ದರಿಂದ, ಆಂಗ್ಲೀಕೃತನಾದ ಭಾರತೀಯನು ಇಂಗ್ಲಿಷ್‌ಗಿಂತ ಭಿನ್ನವಾದ ಕನ್ನಡ ಭಾಷೆಯನ್ನು ಮಾತನಾಡುತ್ತಿದ್ದರೂ, ತನ್ನ ಗತಕಾಲದ ಬಗೆಗಿನ ತಿಳುವಳಿಕೆಯನ್ನು ಇಂಗ್ಲಿಷ್‌ನಲ್ಲಿರುವ ಕೃತಿಗಳಿಂದಲೇ ಪಡೆದುಕೊಳ್ಳಬಯಸುವುದು. ಇದೇ ಇಂಗ್ಲಿಷ್ ಶಿಕ್ಷಣದ ಸಾಂಕೇತಿಕ ಶಕ್ತಿ. ತಮಗೆ ಇಂಗ್ಲಿಷ್ ಶಿಕ್ಷಣ ಬೇಕು ಎಂದು ವಸಾಹತು ಜನ ಕೇಳುವುದು ಕೇವಲ ತಮ್ಮ ಹಿಂದುಳಿದಿರುವಿಕೆಯನ್ನು ಗುರುತಿಸಲು ಅಲ್ಲ ಅಥವಾ ಅದು ಕೇವಲ ರಾಜಕೀಯ ಅಗತ್ಯವೂ ಆಗಿರುವುದಿಲ್ಲ. ಅದು ಅನೇಕ ಚಾರಿತ್ರಿಕ ಸಂಗತಿಗಳ ಪರಸ್ಪರ ಹೆಣಿಗೆಯ ಮೂಲಕ ಮೂಡಿಬಂದ ಸಂಕೀರ್ಣ ಅವಶ್ಯಕತೆ, ಈ ಅವಶ್ಯಕತೆ ಆದದ್ದು ವಸಾಹತು ಶಿಕ್ಷಣದಿಂದಲೇ ಎನ್ನುವ ತೇಜಸ್ವಿನಿ ನಿರಂಜನರವರ ಮಾತನ್ನು ಯೋಚಿಸಬೇಕಾಗುತ್ತದೆ.

ಹಾಗಾದರೆ ಶಿಕ್ಷಣ ಎನ್ನುವುದು ಏನು ?

'ಇವಾನ್ ಇಲ್ಲಿಚ್' ಎನ್ನುವ ವಿದ್ವಾಂಸನ ಪ್ರಕಾರ ಶಿಕ್ಷಣವೆನ್ನುವುದು ೧. ಕೌಶಲ್ಯವನ್ನು ಕಲಿಸುವುದು ಮತ್ತು ೨. ಅಂಥ ಕೌಶಲ್ಯಗಳಲ್ಲಿ ಒಂದನ್ನು ನಿರ್ದಿಷ್ಟವಾಗಿ ಅಭ್ಯಾಸಿಸಿ ಪರಿಣತಿಯನ್ನು ಗಳಿಸುವುದು.

ಇಂಥ ಗುರಿಗಳನ್ನಿಟ್ಟುಕೊಂಡ ಶಿಕ್ಷಣ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವವರು ತಮ್ಮ ಅನುಭವಗಳಿಗೆ ವಿಮೋಚನಾ ಚೌಕಟ್ಟೊಂದನ್ನು ರೂಪಿಸಿಕೊಳ್ಳುವುದು ಅಗತ್ಯ. ಅಂದರೆ ತಕ್ಷಣದ 'ಕಾಲ' ಮತ್ತು ಪರಿಸ್ಥಿತಿಗಳನ್ನು ಮೀರುವ ಮತ್ತು ಹೊಸತನ್ನು ಹುಡುಕುವ ವಿಧಾನವಾಗಿ ಕಲಿಯುವ ಕ್ರಮ ಹೊಂದಿರಬೇಕಾಗುತ್ತದೆ. ಇವಾನ್ ಇಲ್ಲಿಚ್‌ನ ಪ್ರಕಾರ ಪ್ರಸ್ತುತ ಶಿಕ್ಷಣ ವ್ಯವಸ್ಥೆ ಮೇಲಿನ ಗುರಿಗಳನ್ನು ಪೂರೈಸುತ್ತಿಲ್ಲ. ಏಕೆಂದರೆ ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯಲ್ಲಿ ನುರಿತ ಶಿಕ್ಷಕರನ್ನು ವೇತನದ ಮೇರೆಗೆ ನೇಮಿಸುವಾಗ, ಅವರು ಉದ್ಯೋಗದಾತನ ಧ್ಯೇಯಗಳಿಗಷ್ಟೇ ಬದ್ಧರಾಗಿರುತ್ತಾರಲ್ಲದೆ ಪಾಲ್ಗೊಳ್ಳುವವರ ಹಿತಾಸಕ್ತಿಗಳಿಗೇನೂ ಅಲ್ಲ. ಅಂತಿಮವಾಗಿ ಅವರು ಅಧಿಕಾರ ರೂಢ ಮಾದರಿಗಳಾಗಿರುವುದರಿಂದ ಅವರ ಪಾಠ-ಪ್ರವಚನಗಳೂ ಸಹ ಅಧಿಕಾರಸ್ಥ ಮಾದರಿಗಳನ್ನೇ ಪ್ರತಿನಿಧಿಸಿ, ಅವರ ಮಾಹಿತಿಯನ್ನು ಜ್ಞಾನವನ್ನಾಗಿ ಕಟ್ಟಿಕೊಡಲಾರಂಭಿಸುತ್ತದೆ. ಇಂಥ ಜ್ಞಾನವೇ ಇಂದು ಅಧಿಕೃತವಾಗಿ ಮಾನ್ಯಗೊಂಡಿರುವುದು.

ಅಂದರೆ, ಈ ಮೇಲೆ ವಿವರಿಸಿದ ಇವಾನ್ ಇಲ್ಲಿಚ್ ವಿಚಾರಧಾರೆಯಲ್ಲಿ ಕೌಶಲ್ಯ ಕಲಿಸಬೇಕಾದವರು ನುರಿತ ಶಿಕ್ಷಕರು ಅಲ್ಲ. ಬದಲಾಗಿ ಆ ಕೌಶಲ್ಯಗಳನ್ನು ಬಳಸುವವರು ಅಷ್ಟೆ. ಅದಕ್ಕೊಂದು ನಿದರ್ಶನವನ್ನು ಅವರು ನೀಡುತ್ತಾರೆ. ನ್ಯೂಯಾರ್ಕ್‌ನ ಸ್ಪಾನಿಷ್ ಭಾಷೆ ಮಾತನಾಡುವ, ಪ್ರೌಢಶಾಲೆಯಲ್ಲೇ ಬಿಟ್ಟಂತಹ ಯುವಜನರನ್ನು ಆರಿಸಿಕೊಂಡು ಅವರಿಗೆ ಒಂದು ವಾರಗಳ ಕಾಲ ಭಾಷಾ ವಿಜ್ಞಾನದಲ್ಲಿ ಕಲಿಸುವ ವಿಧಾನಗಳ ಬಗ್ಗೆ ತರಬೇತಿಯನ್ನು ನೀಡಲಾಗುತ್ತದೆ. ಅವರು ಮುಂದೆ ಕೇವಲ ಆರುತಿಂಗಳಲ್ಲಿ ಶಾಲಾ ಶಿಕ್ಷಕರು, ಸಮಾಜ ಕಾರ್ಯಕರ್ತರು ಹಾಗೂ ಮಂತ್ರಿಗಳಿಗೆ ಸ್ಪಾನಿಷ್ ಭಾಷೆಯನ್ನು ಅದ್ಭುತವಾಗಿ ಕಲಿಸಿಬಿಡುತ್ತಾರೆ. ಆದರೆ ಇಂಥ

ವ್ಯಕ್ತಿಗಳನ್ನು ವರ್ತಮಾನದ ನಮ್ಮ ವ್ಯವಸ್ಥೆ ನಂಬುವುದಿಲ್ಲ. ಇಂಥವರನ್ನ ಪ್ರಮಾಣೀಕೃತ ವೃತ್ತಿಪರರೆಂದು ಭಾವಿಸುವುದಿಲ್ಲ.

ಆದ್ದರಿಂದ ಇವಾನ್ ಇಲ್ಲಿಚ್‌ರ ಪ್ರಕಾರ ಶಿಕ್ಷಣ ವ್ಯವಸ್ಥೆಯು ದಬ್ಬಾಳಿಕೆಯನ್ನು ಹೇರುವ ಸಾಂಸ್ಥಿಕ ಕೇಂದ್ರಗಳಾಗುತ್ತವೆ. ಅವು ಅಭ್ಯರ್ಥಿಗಳಲ್ಲಿ ಸೃಜನಶೀಲತೆಯನ್ನು, ಕಲ್ಪನೆಯನ್ನು ಕೊಲ್ಲುತ್ತವೆ ಮತ್ತು ವ್ಯವಸ್ಥೆಗೆ ಆತುಕೊಳ್ಳುವಂತೆ ತರಬೇತಿ ನೀಡಲಾಗುತ್ತದೆ. ಆದ್ದರಿಂದ ಅಭ್ಯರ್ಥಿ ತಾನು ಏನು ಕಲಿಯುತ್ತಾನೋ/ಳೋ ಹಾಗೂ ಹೇಗೆ ಕಲಿಯುತ್ತಾನೋ/ಳೋ ಎಂಬುದರ ಮೇಲೆ ನಿಯಂತ್ರಣವಿರುವುದಿಲ್ಲ. ಇಲ್ಲಿ ಎಲ್ಲವೂ ನೌಕರಶಾಹಿ ಅಧಿಕಾರ ವ್ಯವಸ್ಥೆಯಲ್ಲಿರುವುದರಿಂದ ವ್ಯಕ್ತಿ ನಿಮಿತ್ತ ಮಾತ್ರ. ಆದ್ದರಿಂದ ಟೀಚಿಂಗ್ ಅನ್ನು ಆಧರಿಸಿದ ಕಲಿಕೆ ಕಲಿಕೆಯಾಗಿರುವುದಿಲ್ಲ. ಆದರೂ ಶಾಲೆಯೊಂದು ಅರ್ಹತಾ ಸರ್ಟಿಫಿಕೇಟ್ ನೀಡುವ ಸ್ಥಾನದಲ್ಲಿರುವುದರಿಂದ ಅಭ್ಯರ್ಥಿಗಳು ಆ ಶಾಲೆಯ ನಿಯಮಾವಳಿಗಳಿಗೆ ಬದ್ಧತೆಯನ್ನು ವ್ಯಕ್ತಪಡಿಸಬೇಕಾಗುತ್ತದೆ. ಅಂದರೆ ಅಭ್ಯರ್ಥಿ ಕಲಿಕೆಯ ಬದಲು ಆ ಶಾಲಾಚೌಕಟ್ಟಿಗೆ ಪಳಗಿದ ವ್ಯಕ್ತಿಯನ್ನಾಗಿ ಬದಲಾಯಿಸಲಾಗುತ್ತದೆ. ಇವಾನ್ ಇಲ್ಲಿಚ್‌ನ ಪ್ರಕಾರ ಇವತ್ತಿನ ಶಿಕ್ಷಣ ನಗರ ಕೇಂದ್ರಿತ ಕೈಗಾರಿಕಾ ವ್ಯವಸ್ಥೆಗಷ್ಟೆ ಸೀಮಿತವಾಗಿದೆ.

ಅಲ್ಲದೆ ಇವತ್ತಿನ ಶಾಲೆಯಲ್ಲಿನ ಅಧಿಕಾರ ಸಂಬಂಧಗಳು ಮಧ್ಯಮ ವರ್ಗದ ನೈತಿಕ ಪ್ರಜ್ಞೆಯಿಂದ ಕೂಡಿರುತ್ತದೆ. ಇದು ಅಂತಿಮವಾಗಿ ವಿಧೇಯತೆ ಮತ್ತು ನಿಷ್ಠೆಯನ್ನಷ್ಟೆ ಬಯಸುತ್ತದೆ. ಇಲ್ಲಿನ ಸ್ವಾತಂತ್ರ್ಯದ ಕಲ್ಪನೆಯೆಂದರೆ ಯಜಮಾನ್ಯಕ್ಕೆ ಅಧೀನರಾಗುವುದು ಎಂಬ ವ್ಯಾಖ್ಯಾನವಷ್ಟೆ. ಇಲ್ಲಿನ ನೈತಿಕ ಮೌಲ್ಯಕ್ಕೆ ಪೂರಕವಾಗಿ ವಿದ್ಯಾರ್ಥಿ ಗುಣಾತ್ಮಕವಾಗಿ ವರ್ತಿಸಬೇಕಾಗುತ್ತದೆ. ಅದಕ್ಕೆ ಅಗತ್ಯವಾದ ವೇಷಭೂಷಣಗಳನ್ನು ಧರಿಸಬೇಕಾಗುತ್ತದೆ. ಚಡ್ಡಿ ಹರಿದುಕೊಂಡು ಅಥವಾ ರವಿಕೆ ತೆಪೆ ಹಚ್ಚಿಕೊಂಡು ಶಾಲೆಗೆ ಹೋಗಲಾಗದು. ಅದು ಅವಮಾನದ, ಅಧಿಕಾರಹೀನ ಸ್ಥಿತಿಯಾಗಿ, ಕೊನೆಗೆ ಕೀಳರಿಮೆಯಿಂದ ಶಾಲೆ ಬಿಡಬೇಕಾಗುತ್ತದೆ.

ಹೀಗೆ ಶಾಲೆ ಎಂದರೆ ಹಿಂಸೆಯ ತಾಣವಾಗಿ ಮಾರ್ಪಡುತ್ತದೆ. ಇಂಥ ಹಿಂಸೆಯನ್ನು ಮರೆಮಾಚಲು ರಾಷ್ಟ್ರೀಕೃತ ಗಣೇಶ-ಗೌರಿ ಹಬ್ಬ, ರಾಷ್ಟ್ರನಾಯಕರ ದಿನಾಚರಣೆ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳನ್ನು ಆಚರಿಸಲಾಗುತ್ತದೆ. ಈ ಮೂಲಕ ತರಗತಿಯಲ್ಲಿರುವ ಬಲಾತ್ಕಾರ ಮತ್ತು ಅಧಿಕಾರವನ್ನು ಸಮರ್ಥಿಸಿಕೊಳ್ಳಲಾಗುತ್ತದೆ. ಇಲ್ಲಿ ಅಧಿಕಾರ ಎನ್ನುವುದು ಎರಡು ರೀತಿಯಲ್ಲಿರುತ್ತದೆ. ೧. ನೇರ ಶಕ್ತಿ ಪ್ರದರ್ಶನ ೨. ಪರೋಕ್ಷವಾದ ಅಧಿಕಾರ ಚಲಾಯಿಸುವಿಕೆ. ಮೊದಲನೆಯದರಲ್ಲಿ ಅಧಿಕಾರ ಸ್ಥಾನದಲ್ಲಿರುವ ವ್ಯಕ್ತಿ ಅಧೀನ ವ್ಯಕ್ತಿಗೆ ನೇರವಾಗಿ, 'ನೀನು ಇದು ಮಾಡಬೇಕು' ಎಂದು ಆಜ್ಞಾಪಿಸುತ್ತಾನೆ/ಳೆ. ಅದನ್ನು ಮಾಡದಿದ್ದಲ್ಲಿ ಶಿಕ್ಷೆ ಇದ್ದದ್ದೆ. ಎರಡನೆಯದರಲ್ಲಿ 'ಬಲಾತ್ಕಾರ' ಎನ್ನುವುದು ಮರೆಯಲ್ಲಿರುತ್ತದೆ. ಇಲ್ಲಿ ಎಲ್ಲವೂ ಸಮ್ಮತಿಯನ್ನು ಪಡೆಯುವುದರ ಮೂಲಕ ನಡೆಯುತ್ತಿರುತ್ತದೆ. ಆಗಾಗಿ, 'ನೀನು ಇದನ್ನು ಮಾಡುತ್ತಿ ಎಂದು ನನಗೆ ಗೊತ್ತು, ಮಾಡುತ್ತಿ ತಾನೇ?' ಎಂಬಂತಹ ಉಲ್ಲೇಖಗಳು ಉದುರುತ್ತಿರುತ್ತವೆ. ಇಲ್ಲಿ ಮಾಡಿಲ್ಲವಾದರೆ ಟೀಚರ್ ಅಥವಾ ಪೋಷಕರ ಮುಖದಲ್ಲಿ ಬೇಜಾರು/ಅಸಮ್ಮತಿ ಇದ್ದು ನೀನು 'ಅಡ್ಜಸ್ಟ್' ಆಗಿಲ್ಲವೆಂಬ ಅರ್ಥವನ್ನು ವ್ಯಕ್ತಪಡಿಸಲಾಗುತ್ತದೆ.

ಇಲ್ಲಿ ಭೌತಿಕ ಹಿಂಸೆಯ ಬದಲು 'ಸೈಕಲಾಜಿಕಲ್' ಕುತಂತ್ರ ಅಡಗಿರುತ್ತದೆ. ಇದು ಅಂದಿನ ಕೈಗಾರಿಕಾ ಸಮಾಜದ ಅವಶ್ಯಕತೆಗನುಗುಣವಾಗಿ ಬಂದದ್ದು. ಬಂಡವಾಳ/ಸಂಪತ್ತು ಒಬ್ಬರಲ್ಲಿ ಕ್ರೋಢೀಕರಣಗೊಂಡಂತೆ ದೊಡ್ಡ ದೊಡ್ಡ ಕೈಗಾರಿಕಾ ವಾಣಿಜ್ಯ ಸಂಕೀರ್ಣಗಳು ತಲೆಯೆತ್ತಿ ಅಲ್ಲಿ ಎಲ್ಲಾ ಮೇಲಿನಿಂದ ಕೆಳಕ್ಕೆ ಶ್ರೇಣೀಕೃತವಾಗಿ ವ್ಯವಸ್ಥೆಗೊಂಡಿರುತ್ತದೆ. ಇಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಉತ್ಪಾದನಾ ಜಗತ್ತಿನಲ್ಲಿ ತನ್ನ ನಿಗದಿತ ಕಾರ್ಯವನ್ನು ಮಾಡುವ ಮೂಲಕ ತನ್ನ ತೃಪ್ತಿಯನ್ನು ಪಡೆಯುತ್ತಾನೆ/ಳೆ. ಇದೊಂದು ಯಾಂತ್ರಿಕ ವ್ಯಕ್ತಿತ್ವ. ಆದರೆ ಮಾರುಕಟ್ಟೆಯ ಗ್ರಾಹಕ ಜಗತ್ತಿನಲ್ಲಿ ವ್ಯಕ್ತಿ ತನ್ನ ಯಾಂತ್ರಿಕ ವ್ಯಕ್ತಿತ್ವದಲ್ಲಿ ಅಲ್ಪ ಬದಲಾವಣೆ ಕಂಡು, ಪದಾರ್ಥ ಆಯ್ಕೆಯಲ್ಲಿ 'ಸ್ವಾತಂತ್ರ್ಯ' ಇದೆಯೆಂದು ಭಾವಿಸಿ, ಆಯ್ಕೆ ಮಾಡುತ್ತಿರುತ್ತಾನೆ/ಳೆ.

ಇಲ್ಲಿ ಮಾಧ್ಯಮಗಳ ಮೂಲಕ ಒಂದು ಶಕ್ತಿಯುತವಾದ ಸೂಚನೆಯನ್ನು ನೀಡಲಾಗುತ್ತದೆ. ಆ ಮೂಲಕ ಹೊಸ ಪದಾರ್ಥವನ್ನು ಕೊಳ್ಳುವಂತೆ ವ್ಯಕ್ತಿಯ ಜೀರ್ಣಶಕ್ತಿಯನ್ನು ತೀವ್ರಗೊಳಿಸಲಾಗುತ್ತದೆ. ಹೀಗೆ ತೀವ್ರಗೊಂಡ ಜೀರ್ಣಶಕ್ತಿ ಅಂತಿಮವಾಗಿ ಬಂಡವಾಳಗಾರನ ಲಾಭವನ್ನು ಹೆಚ್ಚಿಸುವಲ್ಲಿ ತನ್ನ ಪೂರ್ಣತೆಯನ್ನು ಪಡೆಯುತ್ತದೆ.

ಅಂದರೆ ನಮ್ಮ ಆರ್ಥಿಕ ವ್ಯವಸ್ಥೆ ಅಥವಾ ಸಾಂಸ್ಕೃತಿಕ ಜಗತ್ತು ಸೃಷ್ಟಿಸುವ ವ್ಯಕ್ತಿತ್ವ ಅದರ ಅಗತ್ಯಗಳಿಗೆ ಪೂರಕವಾಗಿರಬೇಕಾಗುತ್ತದೆ. ಇಲ್ಲಿ ಸಹಕಾರ ಅಥವಾ ಸಮ್ಮತಿ ಅಂತಿಮ ಮೌಲ್ಯವಾಗುತ್ತದೆ. ವ್ಯಕ್ತಿಯ ಅಭಿರುಚಿಗಳು ಗುಣಾತ್ಮಕವಾಗಿ ಶ್ರೇಷ್ಠತೆಗೆ ಒಳಗಾಗುತ್ತವೆ. ಅಂದರೆ ನಮ್ಮ ಸಮಾಜದಲ್ಲಿ ವ್ಯಕ್ತಿ ತಾನು ಸ್ವತಂತ್ರ ಎಂಬ ಭಾವನೆಯನ್ನು ಹೊಂದಿದ್ದು, ಆತ/ಆಕೆಯಿಂದ ನಿರೀಕ್ಷಿತ ಕೆಲಸಗಳು ಮಾತ್ರ ನಡೆಯುತ್ತಲೇ ಇರಬೇಕು. ಇಲ್ಲಿ ಘರ್ಷಣೆಗಳು ಅಥವಾ ಭಿನ್ನಾಭಿಪ್ರಾಯಗಳನ್ನು 'ಸಮಾಜ ವಿರೋಧಿ' ಎಂಬಂತೆ ಬಿಂಬಿಸಲಾಗುತ್ತದೆ. ಇವತ್ತಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ಜವಾಬ್ದಾರರು.. ಆದರೆ ಮಾರುಕಟ್ಟೆಯ ಆಚೆನ ನಿಯಮಗಳಿಗೆ 'ಸಮ್ಮತಿ'ಯನ್ನಂತೂ ನೀಡಲೇಬೇಕಾಗುತ್ತದೆ.

ಇವಾನ್ ಇಲ್ಲಿಚ್‌ರ ಪ್ರಕಾರ ಶಿಕ್ಷಣ ವ್ಯವಸ್ಥೆಯು ದಬ್ಬಾಳಿಕೆಯನ್ನು ಹೇರುವ ಸಾಂಸ್ಥಿಕ ಕೇಂದ್ರಗಳಾಗುತ್ತವೆ. ಅವು ಅಭ್ಯರ್ಥಿಗಳಲ್ಲಿ ಸೃಜನಶೀಲತೆಯನ್ನು, ಕಲ್ಪನೆಯನ್ನು ಕೊಲ್ಲುತ್ತವೆ ಮತ್ತು ವ್ಯವಸ್ಥೆಗೆ ಆತುಕೊಳ್ಳುವಂತೆ ತರಬೇತಿ ನೀಡಲಾಗುತ್ತದೆ.

ಈ ಮೇಲಿನದ್ದನ್ನು ಯಶಸ್ವಿಯಾಗಿ ಕಲಿಸಿಕೊಡುವುದನ್ನೇ ಪ್ರಗತಿಪರ ಶಿಕ್ಷಣವೆಂದು ಕರೆಯಲಾಗುತ್ತದೆ. ಇಲ್ಲಿ ಮಾತ್ರೆಯನ್ನು ನುಂಗಲೇಬೇಕಾಗುತ್ತದೆ. ಆದರೆ ಆ ಮಾತ್ರೆಗೆ ಸಿಹಿಲೇಪವನ್ನು ಹಚ್ಚಲಾಗಿರುತ್ತದೆಯಷ್ಟೆ. ಹೀಗೆ 'ಅಧಿಕಾರ' ಇಲ್ಲದಿದ್ದರೆ ಕಲಿಯುವಿಕೆ ಸಾಧ್ಯವಿಲ್ಲವೆಂಬ ಸಂಗತಿಯನ್ನು ಪೋಷಕರು ಮತ್ತು ಟೀಚರ್ಸ್ ಒಪ್ಪಿಕೊಂಡುಬಿಟ್ಟಿದ್ದಾರೆ.

ಆದರೆ ಶಿಕ್ಷಣ ತಪ್ಪಿತಸ್ಥ ಭಾವನೆಯನ್ನು ಹುಟ್ಟುಹಾಕದೆ ಅಧಿಕಾರ ಶಕ್ತಿಯನ್ನು ಒಪ್ಪಿಸಲಾಗುವುದಿಲ್ಲ. ಇದನ್ನು 'ಮಾನವ ಸಂಪನ್ಮೂಲ ಅಭಿವೃದ್ಧಿ' ನಿರ್ವಹಣೆಯೆಂದು ಬೇರೆ ಮಸಾಲೆ ಹಚ್ಚಲಾಗುತ್ತದೆ.

ಭಾರತದಲ್ಲಿ ಇಲ್ಲಿಯವರೆಗೆ ಆಗಿರುವ ಬದಲಾವಣೆಯೆಂದರೆ ಶಿಕ್ಷಣದಲ್ಲಿ ಕಲಿಯುವಿಕೆಯ ಸಂಗತಿಗಳನ್ನು ನಿರ್ಧರಿಸಿರುವುದು. ಕುಲೀನ ಜಾತಿ/ವರ್ಗಗಳ ಮೌಲ್ಯಗಳೇ ಶ್ರೇಷ್ಠವೆಂಬಂತಹ ಸಾಂಸ್ಕೃತಿಕ ಉತ್ಪಾದನೆಯಲ್ಲಿ ಇಲ್ಲಿನ ಎಲ್ಲಾ ಶಿಕ್ಷಣ ಸಂಸ್ಥೆಗಳು ಮಾಡುತ್ತಲೇ ಬಂದಿವೆ. ಇದು ಅಂತಿಮವಾಗಿ ಸಾಂಸ್ಕೃತಿಕ/ಸಾಮಾಜಿಕ ಬಂಡವಾಳವಷ್ಟೆ. ಇಲ್ಲಿ ಯಾರು ಅಧಿಕಾರ ಅಥವಾ ಉನ್ನತ ಸ್ಥಾನದಲ್ಲಿರುತ್ತಾರೋ ಅವರು ನೀಡುವ ಮಾಹಿತಿಯೇ ಜ್ಞಾನವಾಗುತ್ತದೆ. ಇಂತಹ ಜ್ಞಾನವೇ 'ಗುರು'ವಾಗಿ ಸಾಂಸ್ಥಿಕ ರೂಪದಲ್ಲಿ 'ಪಠ್ಯ'ವಾಗುತ್ತದೆ. ಇದು 'ಪಿಯರೆ ಬೋರ್ದೆ' ಎನ್ನುವ ವಿದ್ವಾಂಸನ ಪ್ರಕಾರ 'ನಿಧಾನವಾಗಿ ವ್ಯಕ್ತಿಯನ್ನು ಮೂಲೆಗುಂಪಾಗಿಸುತ್ತದೆ. ಆದ್ದರಿಂದಲೇ ಅಲ್ಲವೇ ಇನ್ನೂ ಈ ದೇಶದಲ್ಲಿ ಅನಕ್ಷರತೆ ತಾಂಡವವಾಡುತ್ತಿರುವುದು. ಇದು ಎಷ್ಟು ತೀವ್ರವಾಗಿರುತ್ತದೆ ಎಂದರೆ 'ಪರೀಕ್ಷೆ' ಒಪ್ಪಿತ ಸತ್ಯ. ಅದರಲ್ಲಿ ನಪಾಸಾದರೆ ಹೊಣೆ ತನ್ನದೇ ಎಂದು ಭಾವಿಸಿ ವ್ಯಕ್ತಿ 'ಆತ್ಮಹತ್ಯೆ' ಮಾಡಿಕೊಳ್ಳುವ ಹಂತಕ್ಕೂ ತಲುಪುತ್ತದೆ. ಇಂತಹ ಪ್ರಕ್ರಿಯೆಯಲ್ಲಿ ಈ ಹಿಂದೆ ಹೇಳಿದಂತೆ ಅವಕಾಶಗಳು ಅಸಮಾನವಾಗಿಯೇ ಹಂಚಿಕೆಯಾಗುತ್ತಿರುತ್ತದೆಯಾದರೂ ಅವಕಾಶಗಳು ಎಲ್ಲರಿಗೂ ಮುಕ್ತವಾಗಿರುತ್ತವೆ ಎಂಬ ಸಂಗತಿಯನ್ನು 'ಶಿಕ್ಷಣ' ವ್ಯವಸ್ಥೆ ಸಾರುತ್ತಿರುತ್ತದೆ.

ಮೇಲಿನ ವಿವರಗಳೆಲ್ಲ ನಾನೇನು ಮುಕ್ತವಾಗಿದ್ದುಕೊಂಡು ಅಭಿಪ್ರಾಯಗಳನ್ನು ವ್ಯಕ್ತಪಡಿಸಿಲ್ಲ. ಅಲ್ಲಿ ತೀವ್ರವಾದ ನಿಲುವುಗಳು ಪ್ರಭಾವ ಬೀರಿವೆ. ಆದ್ದರಿಂದ ಲಿಬರಲ್ ವ್ಯಕ್ತಿತ್ವದಿಂದ ನಾನು ಮುಕ್ತನೇನು ಅಲ್ಲ. ಭಿನ್ನಾಭಿಪ್ರಾಯಗಳನ್ನು ಅನಿವಾರ್ಯವಾಗಿಯಾದರೂ ಒಪ್ಪಿಕೊಳ್ಳಲೇಬೇಕಾಗುತ್ತದೆ. ❑

ಅಂಬೇಡ್ಕರ್ ಮತ್ತು ರಾಷ್ಟ್ರೀಯತೆ : ವರ್ತಮಾನದ ಕೆಲವು ಸಂಧಿಗ್ಧಗಳು

○ ಬಿ.ಯು. ಸುಮಾ

ಸಂಸ್ಕೃತಿ ಎನ್ನುವುದು ಅವ್ಯಾಹತವಾಗಿರುವುದು. ಅದು ಭೌಗೋಳಿಕ ಸ್ಥಳ ಮತ್ತು ಕಾಲದ ಮಿತಿಯನ್ನು ಉಲ್ಲಂಘಿಸಿ ಆವರಿಸಿಕೊಳ್ಳುವಂಥದ್ದು. ರಾಷ್ಟ್ರೀಯತೆ ಎನ್ನುವುದು, ಸಮಾಜದ ಬೆಳವಣಿಗೆಯ ಒಂದು ನಿರ್ದಿಷ್ಟ ಕಾಲಘಟ್ಟದ ಉತ್ಪನ್ನ. ಅದರ ರಾಜಕೀಯ ಮತ್ತು ಆರ್ಥಿಕ ದೃಷ್ಟಿಕೋನಗಳು ಆಯಾ ಕಾಲಘಟ್ಟದಲ್ಲಿ ನಿರ್ದಿಷ್ಟವಾದ ಆಕೃತಿಯನ್ನು ಪಡೆದುಕೊಳ್ಳುವ ಮೂಲಕ, ಗತಕಾಲದ ಸಮಾಜೋ-ಆರ್ಥಿಕ ವ್ಯವಸ್ಥೆಯಿಂದ ಬೇರ್ಪಡುವ ವಿಧಾನವನ್ನು ವ್ಯಾಖ್ಯಾನಿಸುತ್ತದೆ. ಹಿಂದುತ್ವ ಪುನರುಜ್ಜೀವಿಸಲು ಯತ್ನಿಸುತ್ತಿರುವ ತ್ರೇತಾಯುಗದ ರೀತಿಯ ಸಂಸ್ಕೃತಿಯನ್ನು ಈ ಜನಜೀವನದ ಮೇಲೆ ಹೇರಿದರೆ, ಈಗಾಗಲೇ ನಮ್ಮನ್ನು ಸುತ್ತಿಕೊಂಡಿರುವ ಸಮಸ್ಯೆಗಳು ಮತ್ತಷ್ಟು ಕಲಸು-ಮೇಲೋಗರಾಗುತ್ತವೆ.

ಕಳೆದ ವರ್ಷದ ಆರಂಭದಲ್ಲಿ ನಡೆದ ಚುನಾವಣೆಯನ್ನು ಮತ್ತೊಮ್ಮೆ ಜ್ಞಾಪಿಸಿಕೊಂಡರೆ, ನನಗೆ ತಟ್ಟನೆ ಎರಡು ಸಂಗತಿಗಳು ಜ್ಞಾಪಕಕ್ಕೆ ಬರುತ್ತವೆ : ಮೊದಲನೆಯದು - ಎಲ್ಲಾ ನೈತಿಕತೆಯನ್ನು ಗಾಳಿಗೆ ತೂರಿದ ಬಿಜೆಪಿಯ ಅಬ್ಬರದ ಸ್ಲೋಗನ್‌ಗಳು.

ಎರಡನೆಯದು - ಬಲಗಡೆಗೆ ಅಂಬೇಡ್ಕರ್, ಎಡಗಡೆಗೆ ಗಾಂಧೀಜಿಯ ಚಿತ್ರ ಇದ್ದ ಬಿಜೆಪಿಯ ಬ್ಯಾನರ್‌ಗಳು. ಈ ಎರಡೂ ಸಂಗತಿಗಳು, ಈ ದೇಶದ ಮೇಲುವರ್ಗ ನಮ್ಮ ಮೇಲೆ ಹೇರಲು ಯತ್ನಿಸುತ್ತಿರುವ ರಾಷ್ಟ್ರೀಯತೆಯ ಪರಿಕಲ್ಪನೆಗೆ ಒಂದು ಉಪೋದ್ಘಾತವಾಗಿ ನಿಲ್ಲುತ್ತವೆ. ಮೊದಲನೆಯದು, ಇಡೀ ಚರಿತ್ರೆಯ ಚಲನೆಯ ಪ್ರಕ್ರಿಯೆಯನ್ನು ಹಸಿ ಸುಳ್ಳುಗಳ ಮೂಲಕ ನಿಯಂತ್ರಿಸುತ್ತಲೇ, ಎನ್.ಆರ್.ಐ ಮತ್ತು ಎಂ.ಎನ್.ಸಿ. ಗಳಿಗೆ ಬೇಕಾದಂಥ ರಾಷ್ಟ್ರೀಯತೆಯ ಸೃಷ್ಟಿಗೆ ಹಾಕಿದ ತಳಪಾಯವಾದರೆ, ಎರಡನೆಯದು ಚರಿತ್ರೆಯನ್ನು ತಿರುಚುವ ಮೂಲಕ, ಬಹುಮುಖಿಯಾದ ರಾಷ್ಟ್ರೀಯತೆಯ ಚಿಂತನೆಗಳ ವಾಗ್ವಾದವನ್ನೇ ನಾಶ ಮಾಡುವ ಪ್ರಯತ್ನ.

ಇತ್ತ ಅಂಬೇಡ್ಕರ್‌ರ ಸಿದ್ಧಾಂತಗಳನ್ನು ಲೇವಡಿ ಮಾಡುತ್ತಾ, ಅತ್ತ ಗಾಂಧೀಜಿಯ ದರ್ಶನಗಳಿಗೂ ಅಪಚಾರ ಎಸಗುತ್ತಾ, ಈ ಶತಮಾನದ ಇಬ್ಬರು ಮಹಾನ್ ನಾಯಕರು ಕಟ್ಟಲೆತ್ನಿಸಿದ 'ರಾಷ್ಟ್ರ'ವನ್ನು ಯಾವುದೇ ತಪ್ಪಿತಸ್ಥ ಮನೋಭಾವವಿಲ್ಲದೆ ಬಿಜೆಪಿ ಕೊಲುದಾಣ ಮತ್ತು ಬಲಿಪೀಠವಾಗಿಸುತ್ತಿದೆ. ಇದರಿಂದ ಸೃಷ್ಟಿಯಾದ ಆತಂಕ ಯಾವುದೇ ಸಮಯದಲ್ಲಿ ಅನಾಹುತವಾಗಿ, ಅರಾಜಕತೆಯಾಗಿ ಪರಿಣಮಿಸಬಹುದು. ಆದ್ದರಿಂದ ಬಿಜೆಪಿ ಸೃಷ್ಟಿಸುತ್ತಿರುವ ಮಿಥ್‌ಗಳನ್ನು ಒಡೆಯಲೇಬೇಕಾದದ್ದು ಅಗತ್ಯವೂ ಹೌದು; ಅನಿವಾರ್ಯವೂ ಹೌದು. ಈ ನಿಟ್ಟಿನಲ್ಲಿ ಡಾ॥ ಆನಂದ್ ತೇಳ್‌ತುಂಬ್ಡೆ 'Ambedkar on Muslims' ಕೃತಿಯಲ್ಲಿ, ಅಂಬೇಡ್ಕರ್ ಸುತ್ತ ಬಿಜೆಪಿ ಸೃಷ್ಟಿಸಿದ ಹಲವಾರು ಮಿಥ್‌ಗಳನ್ನು ಪ್ರಶ್ನಿಸುತ್ತಾರೆ. ಇದರಲ್ಲಿ, ತಾವು ಕಟ್ಟಲೆತ್ನಿಸಿದ ರಾಷ್ಟ್ರೀಯತೆಯ ಪರಿಕಲ್ಪನೆಗೆ ಅಂಬೇಡ್ಕರ್ ಕೂಡ ಬೆಂಬಲಿಸಿದ್ದರು ಎನ್ನುವ ಬಿಜೆಪಿಯ ಮಿಥ್ ಅನ್ನು ಪ್ರಸ್ತುತ ಲೇಖನ ಒಡೆಯಲೆತ್ನಿಸುತ್ತದೆ.

* * *

ನಮಗೆಲ್ಲಾ ತಿಳಿದಿರುವಂತೆ ಸಾಂಸ್ಕೃತಿಕ ರಾಷ್ಟ್ರೀಯತೆ ಎನ್ನುವುದು ಬ್ರಾಹ್ಮಣೀಯ ರಾಷ್ಟ್ರೀಯತೆಯನ್ನು ಸೂಚಿಸಲು ಬಳಕೆಯಾಗುತ್ತಿರುವ ಒಂದು ಸೌಮ್ಯೋಕ್ತಿ. ಇದೂ ಕೂಡ, ಹಿಂದುತ್ವದ ನುಡಿಗಟ್ಟಿನ ಇತರ ಯಾವುದೇ ಪರಿಭಾಷೆಯಂತೆ, ಅದರ ಪರಿಕಲ್ಪನೆಯಲ್ಲೇ ಯಾಜಮಾನ್ಯತೆಯನ್ನು ಅಡಗಿಸಿಕೊಂಡಿರುವುದರೊಂದಿಗೆ, ಅದರ ಅರ್ಥ ಕೂಡ ಸಂಪೂರ್ಣವಾಗಿ ವಿವರಣೆಗೆ ಸಿಗದಂತೆ ನುಣುಚಿಕೊಳ್ಳುತ್ತದೆ. ಈಗಾಗಲೇ ಸ್ಥಾಪಿತವಾಗಿರುವ 'ಸಂಸ್ಕೃತಿ' ಮತ್ತು 'ರಾಷ್ಟ್ರೀಯತೆ'ಯ ಪರಿಕಲ್ಪನೆಯನ್ನು ಸ್ವಲ್ಪ ಕೆದಕುವ ಪ್ರಯತ್ನ ಮಾಡಿದರೆ, ಈ ಎರಡೂ ಪರಿಭಾಷೆಯು ಸಹ ಪ್ರಯೋಗ ಅನೇಕ ಸಮಸ್ಯೆಗಳನ್ನು ಒಡ್ಡುತ್ತದೆ. ನಮಗೆ ತಿಳಿದಿರುವಂತೆ, ಸಂಸ್ಕೃತಿ ಎನ್ನುವುದು ಒಂದು ಜೀವನ ವಿಧಾನ; ಹಾಗೂ ಇದು ರಾಜಕೀಯ ಮತ್ತು ಅರ್ಥಶಾಸ್ತ್ರಕ್ಕಿಂತ ವಿಭಿನ್ನವಾದುದು.

ರೂಪಕಾತ್ಮಕವಾಗಿ ಹೇಳುವುದಾದರೆ, ಅದು ಎಂದೂ ಬತ್ತದ ನದಿಯ ನಿರಂತರ ಪ್ರವಾಹದಂತೆ. ಅದರ ಏರಿಳಿತಗಳಲ್ಲಿ ಅನೇಕ ಘಟನೆಗಳನ್ನು, ಸಂಗತಿಗಳನ್ನು ಮೈಗೂಡಿಸಿಕೊಳ್ಳುತ್ತಾ, ಅವ್ಯಾಹತವಾಗಿ ಹರಿಯುತ್ತದೆ. ಆದ್ದರಿಂದ ಸಂಸ್ಕೃತಿ ಎನ್ನುವುದು ಅವ್ಯಾಹತವಾಗಿರುವುದು. ಅದು ಭೌಗೋಳಿಕ ಸ್ಥಳ ಮತ್ತು ಕಾಲದ ಮಿತಿಯನ್ನು ಉಲ್ಲಂಘಿಸಿ ಆವರಿಸಿಕೊಳ್ಳುವಂಥದ್ದು. ರಾಷ್ಟ್ರೀಯತೆ ಎನ್ನುವುದು, ಸಮಾಜದ ಬೆಳವಣಿಗೆಯ ಒಂದು ನಿರ್ದಿಷ್ಟ ಕಾಲಘಟ್ಟದ ಉತ್ಪನ್ನ. ಅದರ ರಾಜಕೀಯ ಮತ್ತು ಆರ್ಥಿಕ ದೃಷ್ಟಿಕೋನಗಳು ಆಯಾ ಕಾಲಘಟ್ಟದಲ್ಲಿ ನಿರ್ದಿಷ್ಟವಾದ ಆಕೃತಿಯನ್ನು ಪಡೆದುಕೊಳ್ಳುವ ಮೂಲಕ, ಗತಕಾಲದ ಸಮಾಜೋ-ಆರ್ಥಿಕ ವ್ಯವಸ್ಥೆಯಿಂದ ಬೇರ್ಪಡುವ ವಿಧಾನವನ್ನು ವ್ಯಾಖ್ಯಾನಿಸುತ್ತದೆ. ಹಿಂದುತ್ವ ಪುನರುಜ್ಜೀವಿಸಲು ಯತ್ನಿಸುತ್ತಿರುವ ತ್ರೇತಾಯುಗದ ರೀತಿಯ ಸಂಸ್ಕೃತಿಯನ್ನು ಈ ಜನಜೀವನದ ಮೇಲೆ ಹೇರಿದರೆ, ಈಗಾಗಲೇ ನಮ್ಮನ್ನು ಸುತ್ತಿಕೊಂಡಿರುವ ಸಮಸ್ಯೆಗಳು ಮತ್ತಷ್ಟು ಕಲಸು-ಮೇಲೋಗರಾಗುತ್ತವೆ.

ಸಂಘ ಪರಿವಾರದ ಶಬ್ದಕೋಶದ ವಿಷಯಕ್ಕೆ ಬಂದರೆ, ಇಂಥ ಸಮಸ್ಯಾತ್ಮಕವಾದ ಪ್ರಯೋಗಗಳೆಲ್ಲಾ ತೀರಾ ಸಾಮಾನ್ಯವಾದ ಸಂಗತಿಗಳು. ಅಥವಾ ಅದರ ಲಕ್ಷಣವೇ ಇಂಥದ್ದು. ಆದ್ದರಿಂದ, ಅವರೇ ಕೊಡುವ ವಿವರಣೆಯಿಂದಲೇ, ನಾವು ಇಂಥ ಸಂಗತಿಗಳನ್ನು ಅರ್ಥಮಾಡಿಕೊಳ್ಳಬೇಕು. ಹಿಂದೂತ್ವದ 'ಸಾಂಸ್ಕೃತಿಕ ರಾಷ್ಟ್ರೀಯತೆ'ಯ ಪರಿಕಲ್ಪನೆಯ

ಎದುರಿಗೆ ಅಂಬೇಡ್ಕರರ ಪರಿಕಲ್ಪನೆ ಏನೆಂಬುದನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಹಿಂದುತ್ವದ ಪರಿಭಾಷೆ ಖಚಿತವಾಗಿ ಯಾವ ಅರ್ಥವನ್ನು ನೀಡುತ್ತದೆ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಬೇಕಾಗುತ್ತದೆ.

ಬಿಜೆಪಿಯ ಮ್ಯಾನಿಫೆಸ್ಟೊದಲ್ಲಿ 'ಸಾಂಸ್ಕೃತಿಕ ರಾಷ್ಟ್ರೀಯತೆ'ಯ ಮುಖ್ಯಾಂಶವನ್ನು 'ಒಂದು ರಾಷ್ಟ್ರ, ಒಂದು ಜನತೆ, ಒಂದು ಸಂಸ್ಕೃತಿ' ಎಂದು ವ್ಯಾಖ್ಯಾನಿಸಲಾಗಿದೆ. 'ನಮ್ಮ ರಾಷ್ಟ್ರೀಯತೆಯ ಪರಿಕಲ್ಪನೆ, ಕೇವಲ ಭಾರತದ ಭೌಗೋಳಿಕ ಅಥವಾ ರಾಜಕೀಯ ಐಡೆಂಟಿಟಿಯಿಂದಾಗಿ ರೂಪುಗೊಂಡಿರುವುದಲ್ಲ; ಅದು ನಮ್ಮ ಕಾಲಾತೀತ ಸಾಂಸ್ಕೃತಿಕ ಪರಂಪರೆಯನ್ನು ಸೂಚಿಸುತ್ತದೆ.' -ಎಂದು ಬಿಜೆಪಿಯ ಚುನಾವಣಾ ಮ್ಯಾನಿಫೆಸ್ಟೊ ಹೇಳುತ್ತದೆ. ಮುಂದೆ, 'ಈ ಸಾಂಸ್ಕೃತಿಕ ಪರಂಪರೆ, ಯಾವುದು ಎಲ್ಲಾ ಪ್ರದೇಶದ, ಎಲ್ಲಾ ಧರ್ಮದ ಮತ್ತು ಎಲ್ಲಾ ಭಾಷೆಗಳ ಕೇಂದ್ರವಾಗಿದೆಯೋ, ಅದು ಈ ನಾಗರಿಕತೆಯ ಐಡೆಂಟಿಟಿಯಾಗಿದೆ; ಹಾಗೂ ಹಿಂದುತ್ವದ ಹೃದಯವಾಗಿರುವ ಭಾರತದ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ಒಳಗೊಳ್ಳುತ್ತದೆ.' ಎಂದು ಮುಂದುವರೆಯುತ್ತದೆ.

ಅವರ ಪ್ರಕಾರ, 'ಸನಾತನ ಧರ್ಮ'ದ ಪರ್ಯಾಯ ಪದವೇ ಭಾರತೀಯ ರಾಷ್ಟ್ರೀಯತೆ ಬಿಜೆಪಿ, ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ಏಕೀಕರಣದ ಕಲ್ಪನೆಯಾಗಿ ಭಾವಿಸುತ್ತದೆ. ಅಲ್ಲದೆ, ರಾಮಜನ್ಮಭೂಮಿ ಚಳವಳಿಯ ಸಂದರ್ಭದಲ್ಲಿ ಅಪಾರ ಹೆಮ್ಮೆಯಿಂದ ಇದನ್ನು ಪ್ರಾಯೋಗಿಕವಾಗಿ ಅನ್ವಯಿಸಲು ಯತ್ನಿಸಿತು. 'ಇಂಥ ಏಕೀಕರಣದ ಕಲ್ಪನೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದರಿಂದಲೇ ಬಿಜೆಪಿ, ರಾಮಜನ್ಮಭೂಮಿ ಚಳವಳಿಯಲ್ಲಿ ತನ್ನ ಕೈಗೂಡಿಸಿದ್ದು. ಸ್ವಾತಂತ್ರ್ಯೋತ್ತರ ಭಾರತದ ಅತ್ಯಂತ ದೊಡ್ಡ ಚಳವಳಿಯಾದ ಇದು, ದಿಕ್ಕೆಟ್ಟ ಭಾರತದ ರಾಜಕಾರಣವನ್ನು ನಿರ್ದಿಷ್ಟ ದಿಕ್ಕಿನತ್ತ ತಿರುಗಿಸಿದ್ದಲ್ಲದೆ, ಸಾಂಸ್ಕೃತಿಕ ರಾಜಕಾರಣದ ಬುನಾದಿಯನ್ನು ಬಲಗೊಳಿಸಿತು', ಎಂಬುದು ಸಂಘ ಪರಿವಾರದ ಅಭಿಪ್ರಾಯ. ಇದಕ್ಕೆ ಬೆಂಬಲವನ್ನು ನೀಡುವಂತೆ 'ರಾಮ, ಭಾರತೀಯ ಪ್ರಜ್ಞೆಯ ಆಳದಲ್ಲಿ ಜೀವಂತವಾಗಿದ್ದಾನೆ.' ಎಂದು ಬಿಜೆಪಿ ಹೇಳುತ್ತದೆ.

ಇಂಥ ಸಾಂಸ್ಕೃತಿಕ ರಾಷ್ಟ್ರೀಯತೆಯ ಬಗ್ಗೆ ಡಾ|| ಅಂಬೇಡ್ಕರ್ ಏನು ಹೇಳಬಹುದು? ಈ ಸಂರಚನೆಯನ್ನು, 'ಭಾರತ ಹಲವು ರಾಷ್ಟ್ರಗಳ, ಹಲವು ಸಂಸ್ಕೃತಿಗಳ ಕೂಟ' ಎಂದು ವಾದಿಸಿದ ಅಂಬೇಡ್ಕರ್ ತಾತ್ವಿಕತೆಗೆ ವಿರುದ್ಧವಾದುದು ಎಂದು ಒಂದೇ ವಾಕ್ಯದಲ್ಲಿ ಹೇಳಬಹುದು. ಈ ದೇಶದ ಸಂಪ್ರದಾಯಸ್ಥ ಬ್ರಾಹ್ಮಣತ್ವದ ಸಂಚು, ಇಂಥ ಸಂಸ್ಕೃತಿಗೆ ಛದ್ಮವೇಷವನ್ನು ತೊಡಿಸಿ, 'ಜಗತ್ತಿನ ಏಕೈಕ ಮಹಾನ್ ಸಾಂಸ್ಕೃತಿಕ ಪರಂಪರೆ' ಎಂದು ಗುಣಗಾನ ಮಾಡುತ್ತದೆ. ಉದಾಹರಣೆಗೆ, ಸಾಂಸ್ಕೃತಿಕ ರಾಷ್ಟ್ರೀಯತೆಯ ಮೂಲತತ್ವವನ್ನು ಒಳಗೊಂಡಿದೆ ಎನ್ನಲಾಗುವ 'ಒಂದು ರಾಷ್ಟ್ರ, ಒಂದು ಜನತೆ, ಒಂದು ಸಂಸ್ಕೃತಿ' ಎನ್ನುವ ಮಾತನ್ನೇ ತೆಗೆದುಕೊಳ್ಳೋಣ. ಎಲ್ಲಾ ರೀತಿಯಲ್ಲೂ ಇದು, 'Ein Volk, ein Reich, ein Fuehrer' ಎಂದು ನ್ಯಾಜಿಜಂ ಅನ್ನು ಪ್ರತಿಪಾದಿಸಿದ ಹಿಟ್ಲರ್‌ನ ಸ್ಲೋಗನ್‌ನಂತೆಯೇ ಧ್ವನಿಸುತ್ತದೆ. ಪಾಕಿಸ್ತಾನಕ್ಕೆ ಪರ್ಯಾಯವಾಗಿ, ಈ ಚಿಂತನೆಯನ್ನು ಪ್ರತಿಪಾದಿಸಿದ ಸಾವರ್ಕರ್ ಅವರನ್ನು ಅಂಬೇಡ್ಕರ್ ವಿಶೇಷವಾಗಿ ವಿಡಂಬನೆಗೆ ಒಳಪಡಿಸುತ್ತಾರೆ. ಹಿಂದು ಮಹಾಸಭಾದ ದೃಷ್ಟಿಯಲ್ಲಿ ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತರಿಗೆ ಯಾವುದೇ ವ್ಯತ್ಯಾಸವಿಲ್ಲ. ಅದು ಹಿಂದೂವಿಗೆ ದೊರಕದ ಯಾವುದೇ ಸೌಲಭ್ಯವನ್ನು ಬೇರೆ ಯಾರಿಗೂ ಕೊಡಲು ಇಚ್ಛಿಸುವುದಿಲ್ಲ. ಚರಿತ್ರೆಯ ಪಥದಲ್ಲಿ ಇದೇ ರೀತಿಯ ತೀರ್ಮಾನಗಳನ್ನು ತೆಗೆದುಕೊಂಡ ಆಸ್ಟ್ರಿಯಾ ಮತ್ತು ಟರ್ಕಿ ದೇಶಗಳ ಗತಿ ಏನಾಯಿತೆಂಬುದನ್ನು ಅಂಬೇಡ್ಕರ್ ನೆನಪಿಸಲು ಯತ್ನಿಸುತ್ತಾರೆ. ಇಂಥ ಸಾಮ್ರಾಜ್ಯಶಾಹಿ ಮನೋವೃತ್ತಿ ಈ ದೇಶಕ್ಕೆ ದೊಡ್ಡ ಗಂಡಾಂತರವನ್ನು ತಂದೊಡ್ಡುತ್ತದೆ'[೧] ಎಂದು ಮೊದಲೇ ಎಚ್ಚರಿಸಿದ್ದರು.



ಬಿಜೆಪಿಯ ಸಾಂಸ್ಕೃತಿಕ ರಾಷ್ಟ್ರೀಯತೆಯ ಸಂಕಥನ, 'ಭಾರತೀಯ ಪ್ರಜ್ಞೆಯ ಆಳದಲ್ಲಿ ರಾಮ ಜೀವಂತವಾಗಿದ್ದಾನೆ' ಎಂದು ಹೇಳುತ್ತದೆ. ಆದರೆ, 'Riddles of Hinduism'ನಲ್ಲಿ ಅಂಬೇಡ್ಕರ್ ರಾಮ ಮತ್ತು ಕೃಷ್ಣನ ಒಗಟುಗಳ ಬಗ್ಗೆ ಬರೆಯುತ್ತಾರೆ. ಈ ಕೃತಿಯನ್ನು ಎರಡು ಕಾರಣಗಳಿಗಾಗಿ ರಚಿಸುತ್ತಿರುವುದಾಗಿ ಅವರು ಹೇಳುತ್ತಾರೆ... 'ಮೊದಲನೆಯದಾಗಿ, ಹಿಂದೂ ಧರ್ಮ ಸನಾತನವಾದದ್ದಲ್ಲ ಎಂದು ನಾನು ಜನರಿಗೆ ಮನದಟ್ಟು ಮಾಡಿಕೊಡಬೇಕು. ಎರಡನೆಯದಾಗಿ, ಬ್ರಾಹ್ಮಣರ ಹುನ್ನಾರುಗಳತ್ತ ಜನತೆಯ ಗಮನ ಸೆಳೆದು, ಅದು ಅವರನ್ನು ಹೇಗೆ ದಾರಿತಪ್ಪಿಸಿದೆ ಎನ್ನುವುದನ್ನು ಕುರಿತು ಅವರೇ ಯೋಚಿಸುವಂತೆ ಮಾಡುವುದು.'[೨]

ಬಿಜೆಪಿಯ ಸಾಂಸ್ಕೃತಿಕ ರಾಷ್ಟ್ರೀಯತೆಯ ಸಂಕಥನ, 'ಭಾರತೀಯ ಪ್ರಜ್ಞೆಯ ಆಳದಲ್ಲಿ ರಾಮ ಜೀವಂತವಾಗಿದ್ದಾನೆ' ಎಂದು ಹೇಳುತ್ತದೆ. ಆದರೆ, 'Riddles of Hinduism'ನಲ್ಲಿ ಅಂಬೇಡ್ಕರ್ ರಾಮ ಮತ್ತು ಕೃಷ್ಣನ ಒಗಟುಗಳ ಬಗ್ಗೆ ಬರೆಯುತ್ತಾರೆ. ಈ ಕೃತಿಯನ್ನು ಎರಡು ಕಾರಣಗಳಿಗಾಗಿ ರಚಿಸುತ್ತಿರುವುದಾಗಿ ಅವರು ಹೇಳುತ್ತಾರೆ... 'ಮೊದಲನೆಯದಾಗಿ, ಹಿಂದೂ ಧರ್ಮ ಸನಾತನವಾದದ್ದಲ್ಲ ಎಂದು ನಾನು ಜನರಿಗೆ ಮನದಟ್ಟು ಮಾಡಿಕೊಡಬೇಕು. ಎರಡನೆಯದಾಗಿ, ಬ್ರಾಹ್ಮಣರ ಹುನ್ನಾರುಗಳತ್ತ ಜನತೆಯ ಗಮನ ಸೆಳೆದು, ಅದು ಅವರನ್ನು ಹೇಗೆ ದಾರಿತಪ್ಪಿಸಿದೆ ಎನ್ನುವುದನ್ನು ಕುರಿತು ಅವರೇ ಯೋಚಿಸುವಂತೆ ಮಾಡುವುದು.'

ಜಾತಿಯ ಚೌಕಟ್ಟುಗಳನ್ನು ದಾಟುವ ಅಪರಾಧ ಮಾಡಿದ ಶಂಬುಕ ಎನ್ನುವ ಶೂದ್ರನನ್ನು ರಾಮ ಹತ್ಯೆ ಮಾಡುತ್ತಾನೆ. ಇಂಥ ರಾಮ ಭಾರತದ ಮನಸಾಕ್ಷಿ! ಇಂಥ ಅನೈತಿಕ, ಚಾರಿತ್ರ್ಯಹೀನ, ಅನ್ಯಾಯ ಮತ್ತು ಜಾತೀಯತೆಯ ಪರವಾಗಿರುವ ವ್ಯಕ್ತಿಯನ್ನು ನಾಯಕನನ್ನಾಗಿ ಚಿತ್ರಿಸಲು ವಾಲ್ಮೀಕಿ ರಾಮಾಯಣವನ್ನು ರಚಿಸಿದರೆ...? ಎಂದು ಡಾ|| ಅಂಬೇಡ್ಕರ್ ಬೆರಗನ್ನು ವ್ಯಕ್ತಪಡಿಸುತ್ತಾರೆ. ಹಿಂದುತ್ವದ ಐಡಿಯಾಲಜಿಸ್ಟ್‌ಗಳ ವಾದದೊಂದಿಗೆ ತಾಳೆಯಾಗದ ಅನೇಕ ಕಥನಗಳು ಡಾ|| ಅಂಬೇಡ್ಕರ್‌ರ ಈ ಕೃತಿಯಲ್ಲಿವೆ.

ರಾಜಕೀಯವಾಗಿ ಅಪಾಯಕಾರಿ ಎಂದು ತಿಳಿದಿದ್ದರೂ, ಹಿಂದುತ್ವದ ಶಕ್ತಿಗಳು, ಈ ಕೃತಿಯನ್ನು ಬಹಿಷ್ಕರಿಸುವಂತೆ ಅದರ ವಿರುದ್ಧ ಕತ್ತಿ ಮಸೆದಿದ್ದವು. ರಾಮಜನ್ಮಭೂಮಿ ಚಳವಳಿಯನ್ನು 'ಸಾಂಸ್ಕೃತಿಕ ರಾಷ್ಟ್ರೀಯತೆಯ ಬುನಾದಿಯನ್ನು ಬಲಪಡಿಸಿದ' ಚಳವಳಿ ಎಂದು ಸಂಘ ಪರಿವಾರ ಅಪಾರ ಹೆಮ್ಮೆಯಿಂದ ವರ್ಣಿಸುತ್ತದೆ. ಆದರೆ ವಾಸ್ತವವಾಗಿ ಇದು, ಭಾರತೀಯರಲ್ಲಿ ಅಂತರ್ಗತವಾಗಿರುವ ಒಳ್ಳೆಯತನದ ಬಗ್ಗೆ ಇದ್ದ ನಂಬಿಕೆಯನ್ನು ನಾಶಪಡಿಸಿದ, ಸಾವಿರಾರು ಬದುಕುಗಳ ಕಗ್ಗೊಲೆಗೆ ಕಾರಣವಾದ ಚಳವಳಿ. ಕ್ರೌರ್ಯವನ್ನೇ ತನ್ನ ಒಡಲಲ್ಲಿ ಇಟ್ಟುಕೊಂಡಿರುವ, ಇಂಥ ರಾಷ್ಟ್ರೀಯತೆಯನ್ನು ಅಂಬೇಡ್ಕರ್ ಬೆಂಬಲಿಸುತ್ತಾರೆ ಎಂಬುದನ್ನು ನಾವು ಕಲ್ಪಿಸಿಕೊಳ್ಳುವುದಾದರೂ ಸಾಧ್ಯವೇ ? ಈ ಚಳವಳಿ ಸಂವಿಧಾನಾತ್ಮಕವಾದ ಉದಾರವಾದ ಮತ್ತು ಜಾತ್ಯಾತೀತತೆಯ ನೇಯ್ಗೆಯನ್ನೇ ಶಿಥಿಲಗೊಳಿಸಿದೆ. ಅದೆಷ್ಟು ಶ್ರಮದಿಂದ ಅಂಬೇಡ್ಕರ್ ಮತ್ತಿತರರು ಇದನ್ನು ಕಟ್ಟಿದ್ದರು ಎಂಬುದನ್ನು ಒಮ್ಮೆ ಜ್ಞಾಪಿಸಿಕೊಂಡರೆ...? ಆದರೂ ಇಂಥ ನೀಚ ಕೃತ್ಯದ ಬೆಂಬಲಿಗ ಎಂದು ಅಂಬೇಡ್ಕರ್‌ರನ್ನು ಚಿತ್ರಿಸಲಾಗುತ್ತಿದೆ. ಅವರ ಸನಾತನ ಧರ್ಮ ಮತ್ತು ಸನಾತನ ಸಂಸ್ಕೃತಿಯನ್ನು ಅಂಬೇಡ್ಕರ್ ಸಾರಸಗಟಾಗಿ ತಿರಸ್ಕರಿಸಿದ್ದರು ಎಂಬ ಸಂಗತಿ ಅವರಿಗೆ ತಿಳಿದಿಲ್ಲವೇ? ಉಡುಗೆ ತೊಡಿಗೆಯಲ್ಲಿ ಜೀವನ ಶೈಲಿಯಲ್ಲಿ ಆಂಗಿಕ ಭಾಷೆಯಲ್ಲಿ ಆಧುನಿಕ ವೈಚಾರಿಕತೆಯನ್ನೇ ಮೈಗೂಡಿಸಿಕೊಂಡಿದ್ದ ಅಂಬೇಡ್ಕರ್, 'ಸನಾತನ' ಎಂಬ ಚೌಕಟ್ಟಿಗೆ ಒಳಪಡಿಸಬಹುದಾದ ಎಲ್ಲದರ ವಿರುದ್ಧ ಕಲ್ಲುಬಂಡೆಯಂತೆ ನಿಂತವರು.

ಸನಾತನ ಸಂಪತ್ತು ಎಂದು ಪರಿಗಣಿಸಲಾಗಿರುವ ವೇದಗಳನ್ನು ಸಾಂಸ್ಕೃತಿಕ ರಾಷ್ಟ್ರೀಯತೆಯ ಹೃದಯ ಎಂದು ಹೇಳಲಾಗುತ್ತಿದೆ. ಈಗಲೂ ಅತ್ಯಂತ ಪ್ರಸ್ತುತವಾಗಿರುವ, ಎಲ್ಲಾ ಜ್ಞಾನಗಳನ್ನು ಒಳಗೊಂಡಿರುವ, ವಿಶ್ವದ ಬಹು ಪುರಾತನ ಕೃತಿಗಳು ಇವು; ಹಾಗೂ ಇದರ ಅಧಿಕೃತ ವಾರಸುದಾರರು ತಾವೇ ಎಂದು ವೇದಗಳನ್ನು ಕುರಿತು

ಹಿಂದುತ್ವದ ಪ್ರತಿಪಾದಕರು ವಾದಿಸುತ್ತಾರೆ. ಈ ವಾದ ಎಷ್ಟೋ ಸಲ ನಗೆಪಾಟಲಿಗೆ ಒಳಗಾಗಿದೆ. ಹಾಗೆ ನೋಡಿದರೆ, ಸಂಘ ಪರಿವಾರ ಯಾವಾಗ ತಾನೇ ವೈಚಾರಿಕತೆಯನ್ನು ಪ್ರದರ್ಶಿಸಿದೆ? ಅಥವಾ ತಾರ್ಕಿಕವಾಗಿ ವರ್ತಿಸಿದೆ? ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿರುವ ವೇದಿಕ್ ಮ್ಯಾಥ್‌ಮೆಟಿಕ್ಸ್ ಬಗೆಗಿನ ಹುಚ್ಚು ಕೂಡ ಇಂಥದ್ದೇ.

ಸಾಂಸ್ಕೃತಿಕ ರಾಷ್ಟ್ರೀಯತೆಯ ಪೂಜನೀಯವಾದ ಇಂಥ ಸಂಪತ್ತಿನ ಬಗ್ಗೆ ಡಾ|| ಅಂಬೇಡ್ಕರ್ ಏನು ಹೇಳುತ್ತಿದ್ದರು? ಇದೇ 'Riddles of Hinduism' ಕೃತಿಯಲ್ಲಿ 'ವೇದಗಳ ಬಗ್ಗೆ ಅಸ್ಖಲಿತವಾದಂಥ ಅಭಿಪ್ರಾಯವನ್ನು ಜನತೆಯಲ್ಲಿ ಹರಡಿರುವ ಬ್ರಾಹ್ಮಣರಿಗೆ, ಪರಿಹಾಸ್ಯಕರವಾದ ತಾತ್ವಿಕತೆಯನ್ನು ಹರಡಿದ್ದೇವೆ ಎಂಬ ಅರಿವೇ ಇಲ್ಲ. ಹಿಂದೂ ಬೌದ್ಧಿಕತೆ ಮತ್ತು ನಾಗರಿಕತೆ ನಿಂತ ನೀರಾಗಿ ಕೊಳೆಯುತ್ತಿದ್ದರೆ, ಭಾರತ ಅಭಿವೃದ್ಧಿಯಾಗದೆ ಹಿಂದುಳಿದಿದ್ದರೆ, ಅದಕ್ಕೆ ಕಾರಣ ಇಂಥ ಅಭಿಪ್ರಾಯಗಳೇ. ಈ ಅಸ್ಖಲಿತ ತಾತ್ವಿಕತೆಯನ್ನು ಅದರ ಬೇರು ಕಾಂಡಗಳ ಸಮೇತ ನಿರ್ನಾಮ ಮಾಡಬೇಕು. ವೇದಗಳು ನಿಷ್ಪ್ರಯೋಜಕ ರಚನೆಗಳು ಅವುಗಳನ್ನು ಪೂಜನೀಯ ಅಥವ ಅಸ್ಖಲಿತ ಎಂದು ಕರೆಯುವುದಕ್ಕೆ ಯಾವ ಕಾರಣವೂ ಇಲ್ಲ. ವೇದಗಳ ನಂತರ ಬಂದ ಪುರುಷಸೂಕ್ತದ ಹಸ್ತಕ್ಷೇಪದಿಂದಾಗಿ ಬ್ರಾಹ್ಮಣ್ಯವು ಅವುಗಳಲ್ಲಿ ಪಾವಿತ್ರ್ಯ ಮತ್ತು ಅಸ್ಖಲಿತತೆಯನ್ನು ತುಂಬಿದೆ. ಇದರಿಂದಾಗಿ ವೇದಗಳು ಈ ಭೂಮಿಯ ದೈವಗಳಾಗಿವೆ.'[೩]

ರಾಷ್ಟ್ರೀಯತೆಗೆ ಸಂಬಂಧಿಸಿದಂತೆ ಡಾ|| ಅಂಬೇಡ್ಕರ್ ರಾಷ್ಟ್ರ, ರಾಷ್ಟ್ರತ್ವ ಮತ್ತು ರಾಷ್ಟ್ರೀಯತೆಯನ್ನು ಸಾಂಸ್ಥಿಕ ಮನೋಭಾವ ಮತ್ತು ಮನಶ್ಶಾಸ್ತ್ರೀಯ ಅನುಭವದ ಪರಿಭಾಷೆಯಲ್ಲಿ ವ್ಯಾಖ್ಯಾನಿಸುತ್ತಾರೆ. ಅಂಬೇಡ್ಕರ್‌ರ ಪ್ರಕಾರ, ಈ ಪರಿಕಲ್ಪನೆಗಳು ರೂಪುಗೊಳ್ಳುವುದಕ್ಕೆ ಅನೇಕ ಅಂಶಗಳು ಕಾರಣವಾಗಿರುತ್ತವೆ. 'ಸಂಸ್ಕೃತಿ' ಎನ್ನುವುದು ಕೂಡ ಇಂಥ ಒಂದು ಅಂಶ. ಅವರ ಖ್ಯಾತ ಪ್ರಬಂಧ 'Castes in India' ದಲ್ಲಿ ಭಾರತದ ಸಾಂಸ್ಕೃತಿಕ ಐಕ್ಯತೆಯ ಬಗ್ಗೆ ವಿವರವಾದ ವಿವರಣೆಯನ್ನು ನೀಡುತ್ತಾರೆ. 'ಭಾರತದ ಸಾಂಸ್ಕೃತಿಕ ಐಕ್ಯತೆಯ ವಿಷಯಕ್ಕೆ ಬಂದಾಗ, ಅದಕ್ಕೆ ಸಾಟಿಯಾಗಬಲ್ಲ ಮತ್ತೊಂದು ರಾಷ್ಟ್ರ ಇಲ್ಲ. ಭೌಗೋಳಿಕ ಐಕ್ಯತೆಯ ಆಚೆಗೆ, ಅತ್ಯಂತ ಆಳವಾದ, ಮೂಲಭೂತವಾದ ಒಂದು ಐಕ್ಯತೆ ಭಾರತದಲ್ಲಿದೆ. ಇದು ನಿಸ್ಸಂದೇಹವಾಗಿ, ಈ ನಾಡನ್ನು ಒಂದು ತುದಿಯಿಂದ ಇನ್ನೊಂದು ತುದಿಯವರೆಗೆ ಆವರಿಸಿದೆ.' ಆದರೆ, ಈ ಮಾತನ್ನು ಹೇಳಿದ ತಕ್ಷಣವೇ, ಮೇಲ್ನೋಟಕ್ಕೆ 'ಹೋಮೋಜೀನಿಯಸ್' ಆಗಿ ಕಾಣುವ ಈ ಐಕ್ಯತೆಯಲ್ಲಿ ಜಾತಿಯ ಅಸ್ತಿತ್ವ ಉಂಟುಮಾಡಿರುವ ಸಮಸ್ಯೆಯತ್ತ ನಮ್ಮ ಗಮನ ಸೆಳೆಯುತ್ತಾರೆ. 'ಜಾತಿ ಎನ್ನುವುದು ಈಗಾಗಲೇ ಹೋಮೋಜೀನಿಯಸ್ ಆಗಿರುವ ಘಟಕದ ಒಂದು ಭಾಗ'...[೪] ಭಾರತದ ಈ ಸಾಂಸ್ಕೃತಿಕ ಐಕ್ಯತೆ ಅಥವ 'ಹೋಮೋಜೀನಿಯಿಟಿ' ಜಾತೀಯತೆಯ ಭಾವನೆಯಿಂದ ತನ್ನಷ್ಟಕ್ಕೆ ತಾನೇ ಛಿದ್ರವಾಗಿ, ಅದರ ಅರ್ಥವಂತಿಕೆಯನ್ನು ಕಳೆದುಕೊಂಡುಬಿಡುತ್ತದೆ. ಆ ಮೂಲಕ ರಾಷ್ಟ್ರ ಎನ್ನುವ psychological ಆದ ಭಾವನೆ ಕೂಡ ಕಮರಿ ಹೋಗುತ್ತದೆ.

ಅವರ 'Annihilation of castes' ನಲ್ಲಿ ಸಮಾಜವನ್ನು ರೂಪಿಸುವ ಅಗತ್ಯತೆಗಳನ್ನು ಅನ್ವೇಷಿಸುತ್ತಾ, 'ಪರಸ್ಪರರು ಸಂಪರ್ಕದಲ್ಲಿರುವುದೇ' (communication ಎನ್ನುವ ಅರ್ಥದಲ್ಲಿ) ಅತ್ಯಂತ ಮುಖ್ಯವಾದ ಅಗತ್ಯ ಎನ್ನುತ್ತಾರೆ. ಸಮಾಜವನ್ನು ರೂಪಿಸುವ ಅಗತ್ಯ ಅಂಶಗಳಲ್ಲಿ ಅಂಬೇಡ್ಕರ್ ಸಂಸ್ಕೃತಿಯನ್ನು ಸ್ಪಷ್ಟವಾಗಿ ನಿರಾಕರಿಸುತ್ತಾರೆ ಎಂಬುದು ಮುಖ್ಯವಾದ ಸಂಗತಿ. 'ವ್ಯಕ್ತಿಯೊಬ್ಬ ಸಮಾಜದಿಂದ ದೂರ ಉಳಿದರೆ, ಅವನು ಆ ಸಮಾಜಕ್ಕೆ



ರಾಷ್ಟ್ರೀಯತೆಗೆ ಸಂಬಂಧಿಸಿದಂತೆ ಡಾ|| ಅಂಬೇಡ್ಕರ್ ರಾಷ್ಟ್ರ, ರಾಷ್ಟ್ರತ್ವ ಮತ್ತು ರಾಷ್ಟ್ರೀಯತೆಯನ್ನು ಸಾಂಸ್ಥಿಕ ಮನೋಭಾವ ಮತ್ತು ಮನಶ್ಶಾಸ್ತ್ರೀಯ ಅನುಭವದ ಪರಿಭಾಷೆಯಲ್ಲಿ ವ್ಯಾಖ್ಯಾನಿಸುತ್ತಾರೆ. ಅಂಬೇಡ್ಕರ್‌ರ ಪ್ರಕಾರ, ಈ ಪರಿಕಲ್ಪನೆಗಳು ರೂಪುಗೊಳ್ಳುವುದಕ್ಕೆ ಅನೇಕ ಅಂಶಗಳು ಕಾರಣವಾಗಿರುತ್ತವೆ. 'ಸಂಸ್ಕೃತಿ' ಎನ್ನುವುದು ಕೂಡ ಇಂಥ ಒಂದು ಅಂಶ. ಅವರ ಖ್ಯಾತ ಪ್ರಬಂಧ 'Castes in India' ದಲ್ಲಿ ಭಾರತದ ಸಾಂಸ್ಕೃತಿಕ ಐಕ್ಯತೆಯ ಬಗ್ಗೆ ವಿವರವಾದ ವಿವರಣೆಯನ್ನು ನೀಡುತ್ತಾರೆ.

ಸೇರಿದವನಾಗಿಬಿಡುತ್ತಾನೆ. ಹಾಗೆಯೇ, ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಶೂದ್ರರು ಕೂಡ ಹಿಂದೂ ಸಮಾಜಕ್ಕೆ ಅನ್ಯರಾಗಿಯೇ ಉಳಿದುಬಿಡುತ್ತಾರೆ. ನಂಬಿಕೆ, ಆಲೋಚನೆ, ಸಂಪ್ರದಾಯ, ಪದ್ಧತಿಗಳಲ್ಲಿ ಏಕರೂಪತೆ ಇದ್ದ ಮಾತ್ರಕ್ಕೆ ಸಮಾಜವು ವ್ಯಕ್ತಿಗಳನ್ನು ತನ್ನವರನ್ನಾಗಿಸಿಕೊಳ್ಳುವುದಿಲ್ಲ. ಏಕೆಂದರೆ, ಎಷ್ಟೋ ಸಲ ನಂಬಿಕೆ, ಆಲೋಚನೆ, ಸಂಪ್ರದಾಯ, ಪದ್ಧತಿಗಳು ಒಂದು ಗುಂಪಿನಿಂದ ಇನ್ನೊಂದು ಗುಂಪಿಗೆ ವರ್ಗಾಯಿಸಲ್ಪಡುವುದರಿಂದ ಅದರಲ್ಲಿ ಏಕರೂಪತೆ ಕಾಣುತ್ತದೆ. ಹಂಚಿಕೆಯ ಮೂಲಕ ಸಂಸ್ಕೃತಿ ವಿಸ್ತರಿಸುತ್ತದೆ ; ಆದ್ದರಿಂದಲೇ, ಒಟ್ಟಾಗಿ ಜೀವಿಸದಿದ್ದರೂ ಅನೇಕ ಪ್ರಾಚೀನ ಬುಡಕಟ್ಟುಗಳ ನಂಬಿಕೆ, ಆಲೋಚನೆ, ಸಂಪ್ರದಾಯ, ಪದ್ಧತಿಗಳಲ್ಲಿ ಏಕರೂಪತೆ ಕಂಡುಬರುತ್ತದೆ. ಆದರೆ, ಈ ಏಕರೂಪತೆ ಇದ್ದುದ್ದರಿಂದಲೇ ಈ ಪ್ರಾಚೀನ ಬುಡಕಟ್ಟುಗಳು ಒಂದು ಸಮಾಜ ಆಗಿತ್ತು ಎಂದು ಯಾರೂ ಹೇಳುವುದಿಲ್ಲ. ಏಕೆಂದರೆ, ಕೆಲವು ಸಂಗತಿಗಳಲ್ಲಿನ ಸಾಮ್ಯತೆಯಿಂದ ಮಾತ್ರ ಸಮಾಜ ಆಗುವುದಿಲ್ಲ'[೫] ಎಂದು castes of India ದಲ್ಲಿ ಅಂಬೇಡ್ಕರ್ ಬರೆಯುತ್ತಾರೆ.

ಯಾವುದರಿಂದ ಸಮಾಜ ರೂಪುಗೊಳ್ಳುತ್ತದೆ ಎಂಬ ಪ್ರಶ್ನೆಗೆ ಉತ್ತರಿಸುತ್ತಾ, 'ಭಾರತದಲ್ಲಿ ಸಾಂಸ್ಕೃತಿಕ ಸಾಮ್ಯತೆ ಇದ್ದರೂ, ಭಾರತೀಯ ಸಮಾಜದ ಅಭಿವೃದ್ಧಿಗೆ ಜಾತಿ ಒಂದು ಗೋಡೆಯಾಗಿದೆ' ಎಂದು ಹೇಳುತ್ತಾರೆ. ಇಲ್ಲಿ 'ಸಮಾಜ' ಎಂಬ ಪದವನ್ನು ರಾಷ್ಟ್ರ ಎಂಬ ಅರ್ಥಕ್ಕೆ ಸಮಾನಾಂತರವಾಗಿ ಬಳಸಲಾಗಿದೆ. ಅವರು ಬರೆಯುತ್ತಾರೆ, 'ಆದರೆ ಕೆಲವು ಸಂಗತಿಗಳಲ್ಲಿರುವ ಸಾಮ್ಯತೆಗೂ, ಸಮಾನ ರೀತಿಯ ವಸ್ತುಗಳನ್ನು ಹೊಂದುವುದಕ್ಕೂ ಸಂಪೂರ್ಣ ವ್ಯತ್ಯಾಸವಿದೆ. ಹಾಗೂ ಸಾಮಾನ್ಯ ಸಂಗತಿಗಳನ್ನು ಹೊಂದುವ ಒಂದೇ ದಾರಿ ಎಂದರೆ, ಪರಸ್ಪರರ ಜೊತೆ ಸಂಪರ್ಕದಲ್ಲಿರುವುದು. ಕೇವಲ ಕ್ರಿಯೆಗಳಲ್ಲಿನ ಸಾಮ್ಯತೆಯು ಸಮಾಜ ಎಂಬ ಅರ್ಥದಲ್ಲಿ ಪರಸ್ಪರರನ್ನು ಬಂಧಿಸುವುದಿಲ್ಲ.

ಹಿಂದೂಗಳಲ್ಲಿ ವಿವಿಧ ಜಾತಿಗಳು ಆಚರಿಸುವ ಹಬ್ಬಗಳು ಒಂದೇ ರೀತಿಯಾಗಿರುತ್ತವೆ ಎಂಬುದರಿಂದ ಈ ಸಂಗತಿಯನ್ನು ನಿರೂಪಿಸಬಹುದು. ಒಂದೇ ರೀತಿ ಹಬ್ಬಗಳನ್ನು ಆಚರಿಸುವ ಸಂಗತಿಯು ಭಾರತೀಯರನ್ನು ಪರಿಪೂರ್ಣವಾದ ಐಕ್ಯತೆಯಿಂದ ಬಂಧಿಸುವುದು ಸಾಧ್ಯವಾಗಿಲ್ಲ. ಭಾವನೆಗಳನ್ನು ಹಂಚಿಕೊಳ್ಳುವುದು ಮುಖ್ಯವೇ ಹೊರತು ಕೇವಲ ಕ್ರಿಯೆಗಳನ್ನಲ್ಲ. ಸಾಮಾಜಿಕ ಕ್ರಿಯೆಯಲ್ಲಿ ಭಾಗವಹಿಸುವುದನ್ನು ಜಾತಿ ವ್ಯವಸ್ಥೆ ನಿರ್ಬಂಧಿಸುತ್ತದೆ. ಆ ಮೂಲಕ ಹಿಂದೂಗಳನ್ನು ಒಂದು ಐಕ್ಯತೆಯಲ್ಲಿ ಸಮಾಜವಾಗುವ ಸಾಧ್ಯತೆಗಳನ್ನು ನಿರ್ಬಂಧಿಸುತ್ತದೆ.'[೬]

ಪ್ರೊ|| ರಾಧಾಕೃಷ್ಣನ್ ಅವರು, 'The Hindu view of life' ಎಂಬ ಕೃತಿಯಲ್ಲಿ ಪರಕೀಯರ ಆಕ್ರಮಣ ಮತ್ತು ಪರಧರ್ಮಗಳ ದಬ್ಬಾಳಿಕೆಯ ನಂತರವೂ, ಕಳೆದ ೪೦೦೦ ವರ್ಷಗಳಿಂದ ಹಿಂದೂ ನಾಗರಿಕತೆ, ಅನೂನವಾಗಿ ಅಸ್ತಿತ್ವದಲ್ಲಿದೆ ಎಂದು ಹೆಮ್ಮೆಯಿಂದ ಹೇಳುತ್ತಾರೆ. ಈ ಹೆಮ್ಮೆಯನ್ನು ಡಾ|| ಅಂಬೇಡ್ಕರ್ ವಿಡಂಬನೆಗೆ ಒಳಪಡಿಸುತ್ತಾರೆ. 'ಅಸ್ತಿತ್ವದಲ್ಲಿದೆ ಎನ್ನುವ ಸಂಗತಿಯು ಸ್ವಸ್ಥವಾಗಿ ಅಸ್ತಿತ್ವದಲ್ಲಿದೆ ಎನ್ನುವುದಕ್ಕೆ ಪುರಾವೆ ಅಲ್ಲ? ಹಿಂದೂ ಸಂಸ್ಕೃತಿಯನ್ನು ಅತ್ಯಂತ ಪ್ರಾಚೀನವಾದುದು ಎಂದು ವೈಭವೀಕರಿಸುವ, ಅದರ ಪರಿಧಿಯೊಳಗೆ ಅಂಬೇಡ್ಕರ್‌ರನ್ನೂ

ಸೆಳೆದುಕೊಳ್ಳಲು ಯತ್ನಿಸುತ್ತಿರುವ ಹಿಂದುತ್ವವಾದಿಗಳಿಗೆ ಹಿಂದುತ್ವದ ಬಗ್ಗೆ ಅಂಬೇಡ್ಕರ್‌ರ ಅಭಿಪ್ರಾಯಗಳು, ತಮಗೆ ನೀಡುತ್ತಿರುವ ಛಡಿ ಏಟುಗಳು ಎಂದು ಅರ್ಥವಾಗುತ್ತಿಲ್ಲ.

'ತಾನು ಮತ್ತು ತನ್ನ ಜನಾಂಗ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿರುವುದರ ಬಗ್ಗೆ ಹೆಮ್ಮೆ ತಳೆಯುವುದರಿಂದ ಏನೂ ಪ್ರಯೋಜನವಿಲ್ಲ. ಅವರು ಗಣನೆಗೆ ತೆಗೆದುಕೊಳ್ಳಬೇಕಾದ ಅಂಶ ಏನೆಂದರೆ, ಈ ರೀತಿಯ ಅಸ್ತಿತ್ವದ ಗುಣಮಟ್ಟ ಎಂಥದ್ದು ಎಂದು. ಹಾಗೆ ಮಾಡಿದರೆ, ಅವರಿಗೆ ಆ ಕ್ಷಣವೇ ಆ ಹೆಮ್ಮೆ ಇಲ್ಲವಾಗುತ್ತದೆ. ನಿಜ ಹೇಳಬೇಕೆಂದರೆ, ಒಬ್ಬ ಹಿಂದೂವಿನ ಬದುಕು, ನಿರಂತರವಾದ ಸೋಲಿನ ಬದುಕು; ಅವಿನಾಶಿ ಯಾಗಿ ಅವನಿಗೆ ಕಾಣುತ್ತಿರುವ ಈ ಬದುಕು, ವಾಸ್ತವವಾಗಿ ನಿರಂತರವಾಗಿ ಅಳಿದುಹೋಗುತ್ತಿರುವ ಬದುಕು. ಸತ್ಯವನ್ನು ಒಪ್ಪಿಕೊಳ್ಳಲು ಯಾವ ಹಿಂದೂ ಹಿಂಜರಿಯುವುದಿಲ್ಲವೋ, ಆತ ಇಂಥ ಅಸ್ತಿತ್ವದ ಬಗ್ಗೆ ನಿಸ್ಸಂದೇಹವಾಗಿ ಅವಮಾನವನ್ನು ಅನುಭವಿಸುತ್ತಾನೆ.'[೭]

'Castes in India'ದ ಆರಂಭದಲ್ಲಿ, ಭಾರತದಲ್ಲಿ ಸಾಮಾನ್ಯ ಸಂಸ್ಕೃತಿ ಇರುವುದನ್ನು ಗುರುತಿಸಿದರೂ, ನಂತರ ಆ ಹೇಳಿಕೆಯನ್ನು ಚರ್ಚೆಗೆ ಒಳಪಡಿಸುತ್ತಾರೆ. 'ಚಾರಿತ್ರಿಕವಾಗಿ ತಮ್ಮದೇ ಆದ ವಿಶಿಷ್ಟ ಸಂಸ್ಕೃತಿ ಇರುವ ಮೂರು ಭಾರತಗಳಿವೆ. ಅವುಗಳನ್ನು ಬ್ರಾಹ್ಮಣೀಯ ಭಾರತ, ಬೌದ್ಧ ಭಾರತ ಮತ್ತು ಹಿಂದೂ ಭಾರತ ಎಂದು ಗುರುತಿಸಬಹುದು. ಎರಡನೆಯ ದಾಗಿ, ಮುಸ್ಲಿಮರ ಆಕ್ರಮಣಕ್ಕೆ ಮುನ್ನ ಭಾರತದ ಚರಿತ್ರೆ ಎನ್ನುವುದು, ಬ್ರಾಹ್ಮಣತ್ವ ಮತ್ತು ಬೌದ್ಧತ್ವದ ನಡುವಿನ ಮಾರಕ ಸಂಘರ್ಷದ ಚರಿತ್ರೆಯಾಗಿತ್ತು. ಈ ಎರಡು ಅಂಶಗಳನ್ನು ಗುರುತಿಸದ ಯಾರೂ, ಭಾರತದ ನಿಜವಾದ ಚರಿತ್ರೆಯನ್ನು ಬರೆಯಲಾರರು.'[೮]

ಭಾರತೀಯ ಸಂಸ್ಕೃತಿ ಎನ್ನುವುದೇನೂ ಇಲ್ಲ; ಭಾರತೀಯರಿಗೆ ವಿವಿಧ ಸಂಸ್ಕೃತಿಗಳಿವೆ ಎಂಬ ಅಂಬೇಡ್ಕರ್‌ರ ಈ ವಾದವನ್ನು ನಾವೂ ಮುಂದುವರೆಸಬಹುದು. ಅನೇಕ ಧಾರ್ಮಿಕ ಸಮುದಾಯ ಮತ್ತು ಜಾತೀಯ ಸಮುದಾಯಗಳಲ್ಲಿನ ಈ ಬಾಹ್ಯ ಸಾಮಾನ್ಯತೆಯನ್ನು ಆಂತರಿಕ ಸಾಮಾನ್ಯತೆ ಎಂದು ಭಾಷಾಂತರಿಸಲು ಸಾಧ್ಯವಿಲ್ಲ. ಈ ಸಾಮಾನ್ಯತೆ, ಕೇವಲ ಹಿಂದೂ ಸಂಸ್ಕೃತಿಯ ಯಾಜಮಾನ್ಯದ ಪ್ರಭಾವವನ್ನಷ್ಟೇ ಸೂಚಿಸುತ್ತದೆ. ಅದರ ಮೇಲ್ಪದರನ್ನು ಕೆರೆದು ತೆಗೆದರೆ, ವಿವಿಧ ವಿರೋಧಾತ್ಮಕವಾದ ಸಾಂಸ್ಕೃತಿಕ ಪದರುಗಳನ್ನು ನಾವು ಸುಲಭವಾಗಿ ಗುರುತಿಸಬಹುದು. ಕೊನೆಪಕ್ಷ ಎಲ್ಲಾ ದಲಿತ ಮತ್ತು ಕೆಳವರ್ಗದ ಜಾತಿಯ ಮಟ್ಟಿಗಂತೂ ಇದು ನಿಜ.

ಹಿಂದುತ್ವದ ಸೈನ್ಯ ಪ್ರಚುರ ಪಡಿಸುತ್ತಿರುವ ಭಾರತದ ಸಾಂಸ್ಕೃತಿಕ ರಾಷ್ಟ್ರೀಯತೆಯ ಪರಿಕಲ್ಪನೆಯಲ್ಲಿ ಡಾ॥ ಅಂಬೇಡ್ಕರ್‌ಗೆ ನಂಬಿಕೆ ಇತ್ತೇ? ಎನ್ನುವ ಪ್ರಶ್ನೆಗೆ ಉತ್ತರ ಈ ಹೊತ್ತಿಗೆ ಎಲ್ಲರಿಗೂ ಸ್ಪಷ್ಟವಾಗಿರಬೇಕು. ರಾಷ್ಟ್ರದ ಕಲ್ಪನೆಯನ್ನು ರೂಪಿಸುವುದಕ್ಕೆ ಸಂಸ್ಕೃತಿ ಒಂದು ಮುಖ್ಯ ಆಧಾರವಾಗಬೇಕು ಎಂಬ ಸಂಗತಿಯನ್ನು ಅಂಬೇಡ್ಕರ್ ನಿಷ್ಠುರವಾಗಿ ಖಂಡಿಸುತ್ತಿದ್ದರು. ಭಾರತದ ಸಾಂಸ್ಕೃತಿಕ ಸಾಮಾನ್ಯತೆಗೆ ಸಮ್ಮತಿ ದೊರಕಿತು ಎಂದಿಟ್ಟುಕೊಳ್ಳೋಣ, ಆ ಸ್ವರೂಪದ ಭಾರತವನ್ನು ಡಾ॥ ಅಂಬೇಡ್ಕರ್ 'ರಾಷ್ಟ್ರ' ಎಂದು ಪರಿಗಣಿಸುತ್ತಿರಲಿಲ್ಲ.

ಹಿಂದೂ ಸಂಸ್ಕೃತಿಯನ್ನು ಅತ್ಯಂತ ಪ್ರಾಚೀನವಾದುದು ಎಂದು ವೈಭವೀಕರಿಸುವ, ಅದರ ಪರಿಧಿಯೊಳಗೆ ಅಂಬೇಡ್ಕರ್‌ರನ್ನೂ ಸೆಳೆದುಕೊಳ್ಳಲು ಯತ್ನಿಸುತ್ತಿರುವ ಹಿಂದುತ್ವವಾದಿಗಳಿಗೆ ಹಿಂದುತ್ವದ ಬಗ್ಗೆ ಅಂಬೇಡ್ಕರ್‌ರ ಅಭಿಪ್ರಾಯಗಳು, ತಮಗೆ ನೀಡುತ್ತಿರುವ ಛಡಿ ಏಟುಗಳು ಎಂದು ಅರ್ಥವಾಗುತ್ತಿಲ್ಲ. ತಾನು ಮತ್ತು ತನ್ನ ಜನಾಂಗ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿರುವುದರ ಬಗ್ಗೆ ಹೆಮ್ಮೆ ತಳೆಯುವುದರಿಂದ ಏನೂ ಪ್ರಯೋಜನವಿಲ್ಲ.

ಅಂಬೇಡ್ಕರ್ ಕಾಲದ ಸಂಪ್ರದಾಯಸ್ಥ ಹಿಂದೂಗಳು ಮತ್ತು ನಮ್ಮ ಕಾಲದ ಹಿಂದುತ್ವದ ಶಕ್ತಿಗಳು – ಇವೆರಡು ಬೇರೆ ಅಲ್ಲ – ಇವುಗಳನ್ನು ಉಲ್ಲೇಖಿಸಿ, 'ಭಾರತವನ್ನು ರಾಷ್ಟ್ರ ಎಂದು ಪರಿಗಣಿಸುವುದು, ವಾಸ್ತವವಾಗಿ ಒಂದು ಭ್ರಮೆಯನ್ನು ಅತ್ಯಂತ ಪ್ರೀತಿಯಿಂದ ಆರಾಧಿಸುವುದು' ಎಂದು ಅಂಬೇಡ್ಕರ್ ವ್ಯಂಗ್ಯವಾಡುತ್ತಿದ್ದರು. ಈ ಜನರು, ಭಾರತದಲ್ಲಿ ಅಸ್ತಿತ್ವ ದಲ್ಲಿರುವ ಜಾತಿಗಳನ್ನು ನಿರ್ಲಕ್ಷಿಸಿ, ತಮ್ಮ ಮನಸ್ಸಿನಲ್ಲಿರುವ ಇಂಥ ಒಂದು ಭ್ರಮೆಯನ್ನು ಅತ್ಯಂತ ಪ್ರೀತಿಯಿಂದ ಸಲಹುತ್ತಿದ್ದಾರೆ. ಅಂಬೇಡ್ಕರರ ಈ ಅಭಿಪ್ರಾಯ ಇಡಿಯಾಗಿ ನಮ್ಮ ಕಾಲದ ಹಿಂದುತ್ವದ ಶಕ್ತಿಗಳಿಗೂ ಅನ್ವಯಿಸುತ್ತದೆ. 'ಆದರೆ ನಾವು ಈ ಮಾತನ್ನು ಸಂಪ್ರದಾಯಸ್ಥ ಹಿಂದೂಗಳಿಗೆ ಮಾತ್ರ ಅನ್ವಯಿಸಬೇಕಾಗಿಲ್ಲ.

ಜಾತಿವ್ಯವಸ್ಥೆ ರಾಷ್ಟ್ರೀಯತೆಯ ಮನೋಭಾವನೆಗೆ ತೊಡಕನ್ನು ಉಂಟು ಮಾಡುತ್ತದೆ ಎಂಬುದನ್ನು ಖಡಾಖಂಡಿತವಾಗಿ ನಿರಾಕರಿಸುವ ಅನೇಕ ಭಾರತೀಯ ರಾಜಕಾರಣಿಗಳು ಮತ್ತು ಇತಿಹಾಸಜ್ಞರು ನಮ್ಮ ನಡುವೆ ಇದ್ದಾರೆ. ಅವರು, ಭಾರತ ಒಂದು ರಾಷ್ಟ್ರ ಎಂದು ಭಾವಿಸಿದ್ದಾರೆ. ಯಾರಾದರೂ, ಭಾರತೀಯ ರಾಷ್ಟ್ರದ ಬದಲು ಭಾರತದ ಜನರ ಬಗ್ಗೆ ಮಾತನಾಡಿದರೆ, ಅವರಿಗೆ ಅಪಾರವಾದ ಸಿಟ್ಟು ಬರುತ್ತದೆ. ಬಹಳಷ್ಟು ಮಂದಿ ರಾಜಕಾರಣಿಗಳು ಮತ್ತು ಇತಿಹಾಸಜ್ಞರು ಬ್ರಾಹ್ಮಣರೇ ಆಗಿರುವುದರಿಂದ, ಅವರ ಪೂರ್ವಜರ ದುಷ್ಕೃತ್ಯಗಳನ್ನು ಸ್ವತಃ ಅವರೇ ಬಯಲಿಗೆಳೆದು ತಪ್ಪೊಪ್ಪಿಕೊಳ್ಳುತ್ತಾರೆ ಎಂದು ನಿರೀಕ್ಷಿಸುವುದು ಸಾಧ್ಯವಿಲ್ಲ. ಆದ್ದರಿಂದ ಅವರ ಈ ಮನೋಭಾವನೆ ನಮಗೆ ಅರ್ಥವಾಗುತ್ತದೆ.

ಭಾರತ ಒಂದು ರಾಷ್ಟ್ರವೇ ಎಂಬ ಪ್ರಶ್ನೆಯನ್ನು ಯಾರಿಗಾದರೂ ಹಾಕಿ, ಎಲ್ಲರೂ ಒಂದೇ ರಾಗದಲ್ಲಿ 'ಹೌದು' ಎಂದು ಉತ್ತರಿಸುತ್ತಾರೆ. ಅದಕ್ಕೆ ಕಾರಣಗಳನ್ನು ಕೇಳಿ, 'ಭಾರತ ಒಂದು ರಾಷ್ಟ್ರ ಏಕೆಂದರೆ, ಅದಕ್ಕೆ ಭೌಗೋಳಿಕವಾದ ಐಕ್ಯತೆ ಇದೆ, ಹಾಗೂ, ಮೂಲಭೂತವಾಗಿ ಸಾಂಸ್ಕೃತಿಕ ಐಕ್ಯತೆ ಇದೆ' ಎಂದು ಹೇಳುತ್ತಾರೆ. ಒಂದು ವಾದವಾಗಿ ಇದನ್ನೆಲ್ಲಾ ಒಪ್ಪಬಹುದು. ಆದರೂ ಇದರ ಮೂಲಕ ಒಂದು ಸಂಗತಿ ಯನ್ನು ಊಹಿಸಬಹುದು – ಭಾರತ ಒಂದು ರಾಷ್ಟ್ರ ಎನ್ನುವುದು ಮನಸ್ಸಿನಲ್ಲಿ ಸ್ಥಿರವಾಗಿ ನಿಂತಿರುವ ಒಂದು ಭ್ರಮೆ. ಏಕೆಂದರೆ, 'ರಾಷ್ಟ್ರ' ಎನ್ನುವುದರ ಅರ್ಥವಾದರೂ ಏನು ? ಅದಕ್ಕೆ ಎಷ್ಟೇ ಭೌಗೋಳಿಕ ಐಕ್ಯತೆ ಇರಲಿ, ಕೇವಲ ಪ್ರಾಕೃತಿಕ ಅರ್ಥದಲ್ಲಿ ದೇಶ ರಾಷ್ಟ್ರವಾಗುವುದಿಲ್ಲ. ಸಮಾನ ಭಾಷೆ, ಧರ್ಮ ಅಥವಾ ಜನಾಂಗದಿಂದ ಪ್ರಾಪ್ತವಾದ ಸಮಾನ ಸಂಸ್ಕೃತಿಯ ಸಂಯೋಗ ಕೂಡ ರಾಷ್ಟ್ರವಲ್ಲ.'[೯]

ಸಾಂಸ್ಕೃತಿಕ ರಾಷ್ಟ್ರೀಯತೆಯ ಈ ಪ್ರಶ್ನೆಗೆ ಉತ್ತರ ಇನ್ನಷ್ಟು ಸ್ಪಷ್ಟಗೊಳಿಸಲು ಯತ್ನಿಸುತ್ತಾ... 'ಭಾರತದಲ್ಲಿ ಭೌಗೋಳಿಕ ಐಕ್ಯತೆ ಇದ್ದರೂ, ಒಂದಾಗಿ ಬದುಕುವ ಹಂಬಲ ಇಲ್ಲಿನ ಜನಗಳಿಗಿಲ್ಲ. ಭೌಗೋಳಿಕ ಐಕ್ಯತೆ ಇಲ್ಲದಿರುವ ಸಂದರ್ಭದಲ್ಲೂ, ಒಂದಾಗಿ ಬದುಕುವ ಹಂಬಲ ಅತೀವವಾಗಿರಬಹುದು. ಹಾಗೆಯೇ ಸಾಂಸ್ಕೃತಿಕ ಐಕ್ಯತೆ ಇದ್ದರೂ, ಒಂದಾಗಿ ಬದುಕುವ ಹಂಬಲ ಇಲ್ಲದಿರಬಹುದು. ಆರ್ಥಿಕ ಸಂಘರ್ಷ ಮತ್ತು ವರ್ಗ ವಿಭಜನೆಗಳಿದ್ದಾಗಲೂ, ಐಕ್ಯತೆ ಇರುವ ಸಾಧ್ಯತೆಗಳಿವೆ. ವಸ್ತುಸ್ಥಿತಿ ಏನೆಂದರೆ, ರಾಷ್ಟ್ರೀಯತೆ ಎಂದರೆ, ಅದು ಭೌಗೋಳಿಕ ವಿವರ, ಅಥವ ಸಾಂಸ್ಕೃತಿಕ ಸಂಗತಿಗಳಿಗೆ ಅಥವ ಇನ್ನಾವುದಕ್ಕೊ ಸಂಬಂಧಿಸಿದ ವಿಷಯ ಮಾತ್ರ ಅಲ್ಲ...'[೧೦]

ಕೊನೆಯದಾಗಿ, ಜಾತೀಯ ಹಿಂದೂಗಳು ಅನುಸರಿ ಸುವ ಸಂಸ್ಕೃತಿಯನ್ನೇ ಅನುಸರಿಸುತ್ತಿರುವ ಅಸ್ಪೃಶ್ಯರ ಬದುಕಿನ ಸ್ಥಿತಿಯನ್ನು ವಿವರಿಸುತ್ತಾ, ಮೇಲೆ ಚರ್ಚಿಸಿದ ಯಾವ ಸಂಗತಿಗಳೂ, ಅವರನ್ನು ಜಾತೀಯ ಹಿಂದೂಗಳೊಂದಿಗೆ ಸಾಮುದಾಯಿಕ ಬದುಕನ್ನು ನೆಮ್ಮದಿಯಾಗಿ ನಡೆಸುವಲ್ಲಿ ಸಹಾಯ ಮಾಡಿಲ್ಲ. ವಾಸ್ತವವಾಗಿ ಭಾರತದ ಎಷ್ಟೋ ಕಡೆ, ಜಾತೀಯ ಹಿಂದೂಗಳ ಮತ್ತು ಅಸ್ಪೃಶ್ಯರ ನಡುವೆ ಮಾತು-ಕತೆ ಕೂಡ ಸಾಧ್ಯವಾಗುವುದಿಲ್ಲ. ಇಂಥ ಸಂದರ್ಭ

ದಲ್ಲಿ ಸಂಘ ಪರಿವಾರದ ಮಾತುಗಳೆಲ್ಲಾ ಅವರ ಸ್ವಾರ್ಥಾಧರಿತ ಸಾಮಾಜಿಕ ವಿನ್ಯಾಸಗಳನ್ನು ಮಾತ್ರ ಈಡೇರಿಸಬಲ್ಲವು.

ನಾಗರಿಕ ಹಿಂದೂ ಸಮಾಜದ ನಡುವೆ, ಅಪರಾಧಿ ಬುಡಕಟ್ಟುಗಳಂತೆ ಬದುಕುವ ಅಸ್ಪೃಶ್ಯರೂ ಒಂದು ಸ್ವಲ್ಪ ಸಂಸ್ಕಾರ ಮತ್ತು ನೈತಿಕತೆಯನ್ನು ಹೊಂದಿದ್ದಾರೆ. ಇವು ಅವರನ್ನು ಆದಿಮ ಬುಡಕಟ್ಟುಗಳು ಮತ್ತು ಅಪರಾಧಿ ಜನಾಂಗಗಳಿಂದ ಬೇರ್ಪಡಿಸುತ್ತವೆ. ಅಸ್ಪೃಶ್ಯರೂ ಹಿಂದೂ ಸಮಾಜದ ಸಂಸ್ಕೃತಿಯನ್ನೇ ಹೊಂದಿದ್ದಾರೆ. ಅವರು ಆಚರಿಸುವ ಧಾರ್ಮಿಕ ಕ್ರಿಯೆಗಳನ್ನೇ ಇವರೂ ಆಚರಿಸುತ್ತಾರೆ. ಹಿಂದೂಗಳಿಗೆ ಯಾವುದು ಪವಿತ್ರವೋ, ಅಸ್ಪೃಶ್ಯರಿಗೆ ಕೂಡ ಅವೇ ಸಂಗತಿಗಳು ಪವಿತ್ರವಾಗುತ್ತವೆ; ಹಿಂದೂಗಳು ಆಚರಿಸುವ ಹಬ್ಬಗಳನ್ನೇ ಇವರೂ ಆಚರಿಸುತ್ತಾರೆ. ಆದರೆ ಇದರಿಂದ ಇವರಿಗೇನೂ ಪ್ರಯೋಜನವಾಗಿಲ್ಲ. ಬದಲಿಗೆ, ಇವರು ಪ್ರತ್ಯೇಕಿಸಲ್ಪಟ್ಟಿದ್ದಾರೆ. ಏಕೆಂದರೆ, ಇವರ ದೈಹಿಕ ಸಂಪರ್ಕವು ಹಿಂದೂಗಳನ್ನು ಅಪವಿತ್ರಗೊಳಿಸುತ್ತದೆ! ಆದ್ದರಿಂದ ಕೆಲವು ಸ್ವಾರ್ಥ, ಹೀನಕಾರ್ಯಗಳನ್ನು ಮಾಡುವ ಸಂದರ್ಭ ಬಿಟ್ಟರೆ, ಉಳಿದ ಎಲ್ಲಾ ಸಮಯದಲ್ಲಿ ಹಿಂದೂಗಳೊಂದಿಗೆ ಇವರಿಗೆ ಸಾಮಾಜಿಕ ಸಂಪರ್ಕ ನಿಷೇಧಿಸಲ್ಪಟ್ಟಿದೆ. ಅಸ್ಪೃಶ್ಯರು, ಗ್ರಾಮದಲ್ಲಿ ಎಲ್ಲರೊಂದಿಗೆ ಎಂದೂ ಬದುಕಿಲ್ಲ. ಇವರು, ಗ್ರಾಮದ ಹೊರವಲಯದಲ್ಲಿ ಪ್ರತ್ಯೇಕವಾಗಿ ಬದುಕುತ್ತಾರೆ. ಪ್ರತಿಯೊಂದು ಗ್ರಾಮಕ್ಕೂ ಹರಿಜನ ಕೇರಿ ಇದ್ದೇ ಇರುತ್ತದೆ. ಅವು ಗ್ರಾಮಕ್ಕೆ ಸಂಬಂಧಿಸಿದ್ದರೂ, ಗ್ರಾಮದ ಭಾಗವಾಗಿರುವುದಿಲ್ಲ. ಇಷ್ಟೆಲ್ಲಾ ಇದ್ದರೂ, ದಾಸ್ಯ ವೃತ್ತಿಗೆ ತಕ್ಕಂಥ ಸಾಮಾಜಿಕ ನಿಯಮಗಳನ್ನು ಇವರು ಪಾಲಿಸಬೇಕು.'[೧೧]

ವಾಸ್ತವಿಕವಾಗಿ, ಭಾರತದ ಪ್ರಾಚೀನ ಪರಂಪರೆಯಿಂದ ಪ್ರೇರೇಪಿತವಾದ ಸಾಂಸ್ಕೃತಿಕ ರಾಷ್ಟ್ರೀಯತೆಯ ಪರಿಕಲ್ಪನೆಯೇ ಲೋಪಯುಕ್ತವಾದುದು.

ಡಾ॥ಅಂಬೇಡ್ಕರ್‌ರ ವಾದವನ್ನು ಮುಂದುವರೆಸುತ್ತಾ, ಈ ರಚನೆಯಲ್ಲಿ 'ಭಾರತ' ಮತ್ತು 'ಭಾರತೀಯ' ಎಂಬುದರ ಅರ್ಥ ಏನೆಂದು ಯಾರಾದರೂ ಪ್ರಶ್ನಿಸಿದರೆ, ಅಲ್ಲಿ ನಿಸ್ಸಂದೇಹವಾಗಿ ಈ ಪ್ರಶ್ನೆ ಅತ್ಯಂತ ನ್ಯಾಯವಾದುದು. ರಾಷ್ಟ್ರವೊಂದರ ಸಾಂಸ್ಕೃತಿಕ ಮೂಲಗಳು ಒಂದು ನಿರ್ದಿಷ್ಟ ಭೌಗೋಳಿಕ ಚೌಕಟ್ಟಿನಲ್ಲಿ ಇರುವುದಿಲ್ಲ. ವಾಸ್ತವವಾಗಿ ಯಾವುದೇ ಕಾಲದ ಚರಿತ್ರೆಯನ್ನು ತೆಗೆದುಕೊಂಡರೂ, ವಿಶ್ವದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಜನಸಮುದಾಯಗಳು ವಲಸೆ ಹೋಗುವುದು ಅತ್ಯಂತ ಸಾಮಾನ್ಯವಾದ ಸಂಗತಿ. ಆಧುನಿಕ ಪ್ರಪಂಚಕ್ಕೆ ಕಾಲಿಟ್ಟಿರುವ ಯಾವುದೇ ರಾಷ್ಟ್ರ, ಈ ಅರ್ಥದಲ್ಲಿ ಪ್ರತ್ಯೇಕತೆಯನ್ನು ಸಾಧಿಸುವುದು ಸಾಧ್ಯವಿಲ್ಲ. ಹಾಗೆಯೇ ವರ್ತಮಾನ ಸಾಂಸ್ಕೃತಿಕ ಅಂಶಗಳು, ಅದರ ಶುದ್ಧ ರೂಪದಲ್ಲಿ ದೇಸಿಯಾದದ್ದು ಇದೇ ಮಣ್ಣಿನಲ್ಲಿ ಮೈ ತಾಳಿದಂಥವು ಎಂದು ವಾದಿಸುವುದೂ ತರವಲ್ಲ. ಸಂಘ ಪರಿವಾರ, ಭಾರತೀಯ ಸಾಂಸ್ಕೃತಿಕ ರಾಷ್ಟ್ರೀಯತೆಗೆ ಮೂಲಾಧಾರವಾಗಿ ಪ್ರತ್ಯೇಕಿತ ಭಾರತೀಯ ಸಂಸ್ಕೃತಿಯ ವಿನ್ಯಾಸಗಳನ್ನು ಮುಂದಿಡುತ್ತಿರುವ ಈ ಸಂದರ್ಭದಲ್ಲಿ 'ಅತ್ಯಂತ ವಿಶಿಷ್ಟ ರೂಪದ ಭಾರತೀಯತೆ' ಎಂದರೇನು ಎನ್ನುವುದನ್ನು ಅವರು ಸ್ವಲ್ಪ ವಿವರಿಸಬೇಕು.

ನಾವು ನಮ್ಮ ಸಾಂಸ್ಕೃತಿಕ ಸಂಪನ್ಮೂಲಗಳತ್ತ ಒಂದು ತೀಕ್ಷ್ಣ ನೋಟವನ್ನು ಬೀರಿದರೆ ಪರಕೀಯ ಸಂಸ್ಕೃತಿಗಳು ನಮ್ಮ ಕಣ್ಣಿಗೆ ಬೀಳುತ್ತವೆ. ನಮ್ಮ ಕಲಾರೂಪಗಳು, ಅಕಾಡೆಮಿಗಳು ನೃತ್ಯ ಪ್ರಕಾರಗಳು, ಆಹಾರ ಪದ್ಧತಿ, ಸಂಗೀತ, ಭಾಷೆ, ಉಡುಗೆ, ತೊಡಿಗೆ, ಶಿಲ್ಪಶಾಸ್ತ್ರ... ಎಲ್ಲವೂ ಅನ್ಯ ದೇಶೀಯ ಪ್ರಭಾವವನ್ನು ಮೈಗೂಡಿಸಿಕೊಂಡಿವೆ ಎನ್ನುವುದು ತಿಳಿಯುತ್ತದೆ. ಅಸ್ಸಿರಿಯನ್, ಗ್ರೀಕ್, ರೋಮನ್, ಪರ್ಷಿಯನ್, ಮಿಡಲ್ ಈಸ್ಟ್‌ನ ಶಕರು, ಚೀನಿಯರು, ಟರ್ಕಿಗಳು, ಕುಶಾನರು, ಗುರ್ಜರಿಗಳು, ಆಫ್ಘಾನ್, ಅರಬ್ಬರು ಮತ್ತು ಕೊನೆಯದಾಗಿ ಮುಸ್ಲಿಮರು - ಎಲ್ಲರೂ ಚರಿತ್ರೆಯ ಸಾಂಸ್ಕೃತಿಕ ನೇಯ್ಗೆಯಲ್ಲಿ ಬೇರ್ಪಡಿಸಲಾರದಂತೆ ಬೆಸೆದುಕೊಂಡುಬಿಟ್ಟಿದ್ದಾರೆ; ಅವರ ಕಾಣಿಕೆಯಿಲ್ಲದೆ ಭಾರತೀಯ ಸಂಸ್ಕೃತಿಯನ್ನು ಕಲ್ಪಿಸಿಕೊಳ್ಳುವುದೂ ಸಾಧ್ಯವಿಲ್ಲ. ಈ ಕಾಲಾತೀತವಾದ ಸಾಂಸ್ಕೃತಿಕ ಪರಂಪರೆಯನ್ನು 'ತಮ್ಮ' ಸನಾತನ ಧರ್ಮ ಎಂದು ಸಂಘ ಪರಿವಾರ ಗುತ್ತಿಗೆ ಹಿಡಿಯಲು ಯತ್ನಿಸುತ್ತಿದೆ. ಈ ಕಾರ್ಯವನ್ನು ಈಡೇರಿಸಿಕೊಳ್ಳಲು, ಅತ್ಯಂತ ವಿಶಿಷ್ಟ ಭಾರತೀಯತ್ವವನ್ನು ಜಗತ್ತಿಗೆ 'ಕಾಣಿಸಲು', ಅವರು 'ತೋರುತ್ತಿರುವ' ಸಾಂಸ್ಕೃತಿಕ ರಾಷ್ಟ್ರೀಯತೆಯ ಮಾದರಿಗಳು ಎಲ್ಲಾ ರೀತಿಯಿಂದಲೂ ಅಸಮರ್ಥನೀಯವಾಗಿ ಬಿಡುತ್ತವೆ.

ಅಸ್ಪೃಶ್ಯರೂ ಹಿಂದೂ ಸಮಾಜದ ಸಂಸ್ಕೃತಿಯನ್ನೇ ಹೊಂದಿದ್ದಾರೆ. ಅವರು ಆಚರಿಸುವ ಧಾರ್ಮಿಕ ಕ್ರಿಯೆಗಳನ್ನೇ ಇವರೂ ಆಚರಿಸುತ್ತಾರೆ. ಹಿಂದೂಗಳಿಗೆ ಯಾವುದು ಪವಿತ್ರವೋ, ಅಸ್ಪೃಶ್ಯರಿಗೆ ಕೂಡ ಅವೇ ಸಂಗತಿಗಳು ಪವಿತ್ರವಾಗುತ್ತವೆ; ಹಿಂದೂಗಳು ಆಚರಿಸುವ ಹಬ್ಬಗಳನ್ನೇ ಇವರೂ ಆಚರಿಸುತ್ತಾರೆ. ಆದರೆ ಇದರಿಂದ ಇವರಿಗೇನೂ ಪ್ರಯೋಜನವಾಗಿಲ್ಲ. ಬದಲಿಗೆ, ಇವರು ಪ್ರತ್ಯೇಕಿಸಲ್ಪಟ್ಟಿದ್ದಾರೆ. ಏಕೆಂದರೆ, ಇವರ ದೈಹಿಕ ಸಂಪರ್ಕವು ಹಿಂದೂಗಳನ್ನು ಅಪವಿತ್ರಗೊಳಿಸುತ್ತದೆ ! ಆದ್ದರಿಂದ ಕೆಲವು ಸ್ವಾರ್ಥ, ಹೀನಕಾರ್ಯ ಗಳನ್ನು ಮಾಡುವ ಸಂದರ್ಭ ಬಿಟ್ಟರೆ, ಉಳಿದ ಎಲ್ಲಾ ಸಮಯದಲ್ಲಿ ಹಿಂದೂಗಳೊಂದಿಗೆ ಇವರಿಗೆ ಸಾಮಾಜಿಕ ಸಂಪರ್ಕ ನಿಷೇಧಿಸಲ್ಪಟ್ಟಿದೆ.

ಇಡೀ ವಾದವನ್ನು ಸಾರಾಂಶೀಕರಿಸಿ ಹೇಳುವುದಾದರೆ, ಒಂದು ಸಾಂಸ್ಕೃತಿಕ ರಾಷ್ಟ್ರೀಯತೆಯ ರಚನೆಯನ್ನು ಕೂಡ ಡಾ॥ ಅಂಬೇಡ್ಕರ್ ಅತ್ಯಂತ ನಿಷ್ಠುರವಾಗಿ ವಿರೋಧಿಸುತ್ತಿದ್ದರು. ಇನ್ನು ಅದರ ಪ್ರಾಯೋಗಿಕ ವಿಧಾನದ ಮಾತನ್ನಂತೂ ಕೇಳುವುದೇ ಬೇಡ. ಸನಾತನ ಧರ್ಮವನ್ನು ಆಧರಿಸಿದ, ಭಾರತೀಯರಿಗೇ ವಿಶಿಷ್ಟವಾದ ಒಂದು ಸಂಸ್ಕೃತಿ ಇದೆ ಎನ್ನುವ ಸಂಘ ಪರಿವಾರದ ಅತಿರೇಕದ ವಾದವನ್ನು ಸಾರಸಗಟಾಗಿ ನಿರಾಕರಿಸುತ್ತಿದ್ದರು. ತಮ್ಮದೇ ಭೌಗೋಳಿಕ ವಲಯದಲ್ಲಿ ರೂಪುಗೊಂಡ ಧರ್ಮ ಮತ್ತು ಆಚರಣೆಗಳನ್ನು 'ಅನ್ಯ' ಎನ್ನುವ ಹಾಗೆ ನಡೆಸಿಕೊಳ್ಳುವ ಇಂಥ ಸಾಂಸ್ಕೃತಿಕ ರಾಷ್ಟ್ರೀಯತೆ ಒಂದು ಫ್ಯಾಸಿಸ್ಟ್ ಐಡಿಯಾಲಜಿಯ ಹೊರತು ಬೇರೇನೂ ಆಗಿರುವ ಸಾಧ್ಯತೆ ಇಲ್ಲವಾದ್ದರಿಂದ, ಅಂಬೇಡ್ಕರ್ ಇದನ್ನು ಹೇಗೆ ತಾನೇ ಒಪ್ಪಲು ಸಾಧ್ಯ ?

ಭಾರತದಲ್ಲಿ ಸಾಂಸ್ಕೃತಿಕ ಸಾಮಾನ್ಯತೆಯನ್ನು ಕಂಡ ಅಂಬೇಡ್ಕರ್, ನಂತರ ಚರ್ಚೆಯ ಒಂದು ಹಂತದಲ್ಲಿ ಚರಿತ್ರೆಯ ಒಡಲಲ್ಲಿ ಅನೇಕ ಭಾರತಗಳನ್ನು ಕಂಡರು ಎನ್ನುವುದು ನಮಗೆಲ್ಲಾ ಈಗ ಸ್ಪಷ್ಟವಾಗಿದೆ. ಹಾಗೆಯೇ, ಧರ್ಮ, ಸಂಸ್ಕೃತಿ... ಇತ್ಯಾದಿಗಳನ್ನು ಆಧರಿಸಿ ರೂಪುಗೊಂಡ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಕೂಡ ಅವರು ವಿರೋಧಿಸುತ್ತಿದ್ದರು. ಅಂಬೇಡ್ಕರ್‌ರ ದೃಷ್ಟಿಯಲ್ಲಿ ಜನಸಾಮಾನ್ಯರಲ್ಲಿ ಆತ್ಮವಿಶ್ವಾಸವನ್ನು ತರುವ ಒಂದು ಮುಖ್ಯ ಅಂಶ, ಸಮಾನ ಹಂಚಿಕೆಯುಳ್ಳ ಆಧುನಿಕ ಸಮಾಜೋ-ಆರ್ಥಿಕ ವ್ಯವಸ್ಥೆಯಾಗಿತ್ತು. ಆ ಮೂಲಕ ಸಾಮುದಾಯಿಕ ಭಾವನೆಗಳು ವಿಸ್ತರಿಸುವ ಸಾಧ್ಯತೆಯ ಬಗ್ಗೆ ಅವರು ಅಪಾರವಾದ ನಿರೀಕ್ಷೆಯನ್ನು ಇಟ್ಟುಕೊಂಡಿದ್ದರು. ಇನ್ನು ಸಂಘ ಪರಿವಾರದ ಅಮಾನವೀಯ ಕಾರ್ಯಾಚರಣೆಯ ವಿಧಾನ ಏನಿದೆ, ಅದು, ಅಂಬೇಡ್ಕರ್ ಯಾವ ಮೌಲ್ಯಗಳನ್ನು ಸಂಕೇತಿಸುತ್ತಿದ್ದರೊ, ಅದಕ್ಕೆ ಸಂಪೂರ್ಣ ವಿರುದ್ಧವಾದುದು.

ಅಡಿ ಟಿಪ್ಪಣಿಗಳು:

1. Pakisthan or Partition of India
2. Riddles of Hinduism
3. Riddles of Hinduism
4. Castes in India
5. Castes in India
6. Annihilation of caste
7. Annihilation of caste
8. Revolution and counter Revolution in Ancient India
9. Revolution and counter Revolution in Ancient India
10. Revolution and counter Revolution in Ancient India
11. Essays on Untouchables and Untouchability

ಕಾವ್ಯ

ತೆಂಗು ಚಾಮರ ಬೀಸುತ್ತಿದೆ

ನನ್ನ ನರ ನಾಡಿಗಳಲ್ಲಿ
ಹಳ್ಳ, ಹೊಳೆ ಹರಿಯುತ್ತಿದೆ
ಕಾದ ಬಾಣಲೆ ಬದುಕಲ್ಲಿ
ತೆಂಗು ಚಾಮರ ಬೀಸುತ್ತಿದೆ

ಧೂಳು, ಹೊಗೆ ಆಕಾಶದಲ್ಲಿ
ನಕ್ಷತ್ರ ಮಿನುಗುತ್ತದೆ
ಅಬ್ಬರದ ಸಂಗೀತದುಬ್ಬರದಲ್ಲಿ
ಪಿಸುಮಾತು ಕೇಳುತ್ತದೆ

ಕಾಲಿಗಂಟಿದ್ದ ಮಣ್ಣು
ಚರ್ಮಕ್ಕೆ ಮೆತ್ತಿದೆ
ಕೈಗೆ ಹತ್ತಿದ ಸೊಗಡು
ತೊಳೆದರೂ ಉಳಿದಿದೆ

ಗೂಡು ಬಿಟ್ಟರೂ ಹಕ್ಕಿ
ಮರಳುತ್ತದೆ ಮನೆಗೆ
ಪಶ್ಚಿಮದ ಗಾಳಿ ಬೀಸಿದರೂ
ಬೇರು ಅಲುಗಾಡದಿದೆ

○ ಎಂ.ಆರ್. ಕಮಲ

ಕಳವು



○ ಡಾ|| ಕೆ.ವೈ. ನಾರಾಯಣಸ್ವಾಮಿ

ಕಳವು ಮೊದಲಗೊಂಡು

ಯಾವೊತ್ನಂಗೆ ಸೂರಿಣ್ಣು ಪೂರ್ವದ ಬಾಕ್ಲು ತಕ್ಕೊಂಡು ಹೊರ್ಗೆ ಬಂದ್ನು ಆಗ ಭೂಮಿಯ ಮೇಲೆ ಕೌರು ಕೌರ್ನೆ ಬೆಳಕು ಹರಿತಾ ಬಂತು. ಸಕಲ ಜೀವ ಜಂತುಗಳು ಇನ್ನೂ ನಿದ್ದೆಯ ಮಂಪರಿನಲ್ಲಿದ್ದವು. ಬೆಳಕು ನೆಲ ಮುಟ್ಟಿದ್ರು ಇನ್ನೂ ತೂಕಡ್ಕೆಯಲ್ಲಿರೊ ಜೀವಗಳ್ನ ಎಚ್ಚರಿಸ್ಲು ಎಂಬಂತೆ ಭೂಮ್ತಾಯಿ ಮೊಗ್ಗಲು ತಿರುಗಿದ್ಲು. ಅಂತರ್ಗಂಗೆ ಬೆಟ್ಟದ ಮೇಲಿಂದ ಕೆಳಕ್ಕಿಳಿದ ಬೆಳಕು ಬೆಟ್ಟದ ಬುಡದಾಗಿರೊ ಬನಹಳ್ಳಿನ ತಾಕ್ತಿದ್ದಂಗೆ ಊರಿನಲ್ಲಿ ಜೀವ ಮೂಡಿ ಮಾಮೂಲಿನಂಗೆ ಕೆಲಸಗಳು ಸುರ್ವಾದವು. ಅಸ್ಹೊತ್ತಿಗೆ ಸರಿಯಾಗಿ ಬೆಟ್ಟದ ಮೇಲಿನ ತೇರಹಳ್ಳೀಲ್ಲಿ ರಾತ್ರಿ ನಡ್ದಂಥ ಸೂರಸೇನ ಚರಿತೆ ನಾಟ್ಕ ನೋಡಾಕ ಹೋಗಿದ್ದ ಖಯಾಶ್‌ದಾರ್ರ ಗುಂಪೊಂದು ರಗ್ಗುಗಳ್ನ ಒದ್ಕೊಂಡೇ ಬೆಳಕು ಹರಿಯೋದ್ರೊಳಗೆ ಊರು ಸೇರ್ಬೇಕು ಅಂತ ಅವಸ್ರದಾಗ ದಂಡ್ನೋರಂಗೆ ರಪರಪ ಅಂತ ಕಾಲು ಹಾಕ್ತ ಇದ್ರು.

ರಾತ್ರಿ ನಾಟ್ಕದಾಗ ಕೃಷ್ಣಗಿರಿಯಿಂದ ಬಂದಿದ್ದ ತಮಿಳು ಹುಡುಗೀರು ಮಾಡಿದ್ದ ಲೇಡಿ ಪಾರ್ಟುಗಳು ಅವ್ರ ಅಂದ ಚೆಂದಗಳು ಇವ್ರ ಮನಸ್ನಾಗ ಮುಳ್ಳಾಗಿ ಕುಚ್ಕೊಂಡಿದ್ದವು. ತಮ್ಮೂರ್ನಾಗ ಈ ಸಾರಿನಾದ್ರು ನಾಟ್ಕ ಮಾಡಿ ಆ ಚಿನಾಲಿ ಹುಡುಗೀರ್ನೇ ಕರ್ಸಿ ಅವ್ರ ಮೈ-ಕೈ ಮುಟ್ಟುವಂತ ಪುಣ್ಯ ಪಡ್ಕಂಬೇಕು ಅನ್ನೋ ಉಮೇದು ಎಲ್ಲರನ್ನೂ ಬಲವಾಗೀನೆ ಬಾದಸ್ತಾಯಿತ್ತು. ಆ ಗುಂಪ್ನಲ್ಲಿ ಮಿಡ್ಲಿಸ್ಕೂಲ್ ಒದ್ತಾ ಇದ್ದ ಮೂಲ್ಮನೆ ಮಂಜೇಗೌಡ್ನ ವಂಸ್ದ ವಾರ್ಸದಾರ್ನಾದ ಆನಂದ್ನು ಅಂಥಾದ್ದೆಲ್ಲ ಯೇಚ್ನೆ ಮಾಡಾಕ ಇನ್ನೂ ಚಿಕ್ಕವು. ಅವ್ನಕ ನಾಟ್ಕದಾಗ ಪಾತ್ರದಾರಿಯೊಬ್ನು ಮೇಲಿಂದ ಸೊಯ್ಯನೆ ಕೆಳಕ್ಕೆ ಇಳಿದಿದ್ದು ಪೈಟಿಂಗ್ ಮಾಡೊವಾಗ ಕತ್ತಿಗಳು ತಗುಲಿದ್ರೆ ಫಳಾರ್ ಅಂತ ಕಣ್ಣು ಕುಕ್ಕಿದ್ದು ಮನ್ಸನಾಗ ಬದ್ರವಾಗಿ ಕುಂತಿದ್ವು. ಇಂಗೆ ನಾಟ್ಕದ ಗಂಪು ತಮ್ತಮ್ಮದೆ ದ್ಯಾನಗಳಲ್ಲಿ ಮುಳ್ಗುತಾ ತೇಲ್ತಾ ಊರು ಮುಟ್ಟುವಷ್ಟರಲ್ಲಿ ಪೂರ ಬೆಳಕಾಗಿತ್ತು.

ಊರ ಬಾಕ್ಲಕ ಹತ್ತಿರಾನೆ ಇದ್ದ ತನ್ನ ಮನೆಯತ್ತ ಆನಂದ್ನು ಹೋದ್ನು.

ದಿನಾಗ್ಲು ಊರಾಗ್ನೋರು ಕೋಳಿ ಕೂಗೋದ್ರಿಂದ ಏಳ್ತಿದ್ರೆ ಮೂಲ್ಮನೆಯವ್ರು ಮಾತ್ರ ಮನೆ ಯಜಮಾನ್ನನ್ನ ಪೀಡ್ಸುತ್ತಿರೊ ಗೂರ್ಲು ಕೆಮ್ಮುಗಳ್ನಿಂದ ನಿದ್ರೆಗೆಟ್ಟು ವೊತ್ತಿಗೆ ಮುಂಚೇನೆ ಏಳುತ್ತಿದ್ರು. ಮನೆ ಬಾಕ್ಲಕ ಬಂದ ಆನಂದನ್ನ ಗಳಿಗೆ ದಿಗ್ಲು ಆಯ್ತು. ಕಿವಿಗೊಟ್ಟು ಆಲಿಸಿದ್ರೆ ಒಳಗಿನಿಂದ ಯಾವುದೇ ಉಸಿರಿಲ್ಲ. ಪಾಟಿ ಏನಾದ್ರು ಗೊಟಕ್ ಅಂದ್ಲ ಅಂತ ಅನ್ನಿಸಿ ಬಾಕ್ಲು ತಟ್ಟಾಕಂತ ಕೈಹಾಕಿದ್ರೆ ಬಾಕ್ಲು ತಾನೆ ತಕ್ಕಮತು. ದಿಗ್ಲು ದಿಗ್ಲಾಗೆ ಒಳಕ್ಕೆ ಬಂದವ್ನಕ ಅಪರೂಪ್ಕ ಸೌಂಡು ಮಾಡ್ದೆ ಏರಿಳಿಯುತ್ತಿರೊ ಪಾಟ್ಯಮ್ಮನ ಎದೆ ಕಂಡ ಮ್ಯಾಲೆ ಧೈರ್ಯ ಬಂತು. ಮೂಲೆ ನಾಗ ಇರೊ ಗೊಂದಿಯಲ್ಲಿ ಆನಂದ್ನ ತಾಯಿ ನಿದ್ರೆಯಲ್ಲಿದ್ಲು.

ರಾತ್ರಿ ನಾಟ್ಕದಾಗ ಕೃಷ್ಣಗಿರಿಯಿಂದ ಬಂದಿದ್ದ ತಮಿಳು ಹುಡುಗೀರು ಮಾಡಿದ್ದ ಲೇಡಿ ಪಾರ್ಟುಗಳು ಅವ್ರ ಅಂದ ಚೆಂದಗಳು ಇವ್ರ ಮನಸ್ನಾಗ ಮುಳ್ಳಾಗಿ ಕುಚ್ಕೊಂಡಿದ್ದವು. ತಮ್ಮೂರ್ನಾಗ ಈ ಸಾರಿನಾದ್ರು ನಾಟ್ಕ ಮಾಡಿ ಆ ಚಿನಾಲಿ ಹುಡುಗೀರ್ನೇ ಕರ್ಸಿ ಅವ್ರ ಮೈ-ಕೈ ಮುಟ್ಟುವಂತ ಪುಣ್ಯ ಪಡ್ಕಂಬೇಕು ಅನ್ನೋ ಉಮೇದು ಎಲ್ಲರನ್ನೂ ಬಲವಾಗೀನೆ ಬಾದಸ್ತಾಯಿತ್ತು. ಆ ಗುಂಪ್ನಲ್ಲಿ ಮಿಡ್ಲಿಸ್ಕೂಲ್ ಒದ್ತಾ ಇದ್ದ ಮೂಲ್ಮನೆ ಮಂಜೇಗೌಡ್ನ ವಂಸ್ದ ವಾರ್ಸದಾರ್ನಾದ ಆನಂದ್ನು ಅಂಥಾದ್ದೆಲ್ಲ ಯೇಚ್ನೆ ಮಾಡಾಕ ಇನ್ನೂ ಚಿಕ್ಕವು.

ನಡುಮನೆಯಾಗಿದ್ದ ಪಿತ್ರಾರ್ಜಿತ ಆಸ್ತಿ ಕಬ್ಬಿಣ ಪೆಟ್ಟಿಗೆಯ ಮೊಗ್ಗಲ್ನಾಗ ಆನಂದ್ನ ಚಿಕ್ಕಮ್ಮನು ಮುದುರ್ಕೊಂಡು ಮಲಗಿದ್ಲು. 'ಅಮ್ಮೋವ್ ಅಮ್ಮೋವ್' ಅಂತ ಕಾಟಾಚಾರ್ಕ ಎರ್ಡು ಸಾರಿ ಅಂದವ್ನೆ ಒಲೆಮುಂದೆ ಜಾಗ ಮಾಡ್ಕಂಡು ತಾನು ಕೊಕ್ಕು ಮುರ್ಕೊಂಡ್ನು.

ನಿದ್ದೆಯ ಮಂಪರಿನಾಗ ಇದ್ದ ಮುದ್ಕಿಯನ್ನ ಆಕೆಯ ಗೂರ್ಲು ಯಾವೊತ್ನಂಗೆ ಮೆಲುಕುವಕ್ಕೆ ತಂತು. ಎದ್ದವಳೇ ವಾಡಿಕೆಯಂತೆ ತನ್ನ ಮಂಜುಮಂಜಾದ ಕಣ್ಣಿಂದ ಪಡಸಾಲೆಯಲ್ಲಿ ಕರಿ ಯೆಮ್ಮೆನ ಕಟ್ಟೋ ಕಂಬ್ದ ಕಡೆ ದಿಟ್ಟಿಸಿದ್ಲು. ವಪ್ಪಾರದ ಬೆನ್ನು ಸರಕ್ಕೆ ಊರ್ಕೊಟ್ಟಿರೊ ಕಂಬ್ಕೇನೆ ಎಮ್ಮೇನ ಕಟ್ಟುತ್ತಿದ್ರು. ದಿನಾಲೂ ಎದ್ದು ಯೆಮ್ಮೆ ಮಕ ನೋಡೊದು ಮುದ್ಕಿಗೆ ವಾಡಿಕೆಯಾಗಿತ್ತು. ಯಾಕೋ ಇವೊತ್ತು ನೋಡಿದಸ್ಟು ಕಂಬ ಬರೀದೆ ನಿಂತಂಗೆ ಕಂಡುಬರ್ಲು ಯೆಮ್ಮೇನ ಆಗ್ಲೇ ಆಚೆಕ್ಕ ಕಟ್ಟಿರಬೌದ ? ಅಥ್ವ ನನ್ನ ಕಣ್ಣೇ ಬತ್ತಾ ಬತ್ತಾ ಮಂಜಾಗಿ ಹೋದ್ವೇನೊ ದರಿದ್ರದವು ಅನ್ಕಂಡು ಇನ್ನಸ್ಟು ನಿಗಾ ಕೊಟ್ಟು ಕಂಬ್ದ ಕಡ್ಗೆ ನೋಡಿದ್ಲು. ಆಗ್ಲೂ ಕಂಬವು ಬರೀದೆ ಕಂಡು ಬರ್ಲು, ಮನ್ಸು ಅಳಕ್ ಅಂದು ತನ್ನ ಸಕ್ತಿನೆಲ್ಲಾ ಕೂಡಾಕಿ ಇನ್ನೂ ಮೆದ್ಲದೇ ಮಲಗಿರೊ ತನ್ನ ಮಕ್ಕಳ ಮ್ಯಾಲೆ ಕೂಗು ಹಾಕಿದ್ಲು. 'ಅಮ್ಮಯ್ಯ ಈ ಕರ್ರಿ ಮಂಚ್ನಾಗ ಯಾರು ಇಸ್ಪೊತ್ತ ತುಂಬಿದ ಯೆಮ್ಮೇನಾ ಆಚೆಕ್ಕ ಕಟ್ಟಿದೊರು ?' ಆಕೆಯ ಗೂರ್ಲು ಶಬ್ದಗಳೊಂದಿಗೆ ಬಂದ ಈ ಮಾತುಗಳು ನಿಧಾನವಾಗಿ ಮನೆಯನ್ನು ತುಂಬಿಕೊಂಡವು.

ಇತ್ತ ನಿದ್ರಾದೇವಿಯ ಕುಂಚ್ಗೆಗಳನ್ನ ಎಣ್ಕೆ ಮಾಡ್ಕೊಂಡಿದ್ದ ದೊಡ್ಡ ಮಗಳು ರಂಗಮ್ಮನ್ಗೆ ಮತ್ತು ಯಾವುದೊ ಸ್ವಪ್ನದಾಗ ಇದ್ದ ಚಿಕ್ಕ ಮಗಳು ರತ್ನಮ್ಮನ ಕಿವಿಗಳಿಗೆ ಮುದ್ಕಿ ಆಡಿದ್ದ ಮಾತುಗಳು ಬಂದು ಬಿದ್ದು ಗಭೀರ್ನೆ ಮೆಲುಕ್ವಾಕ ಬಂದ್ರು. ತಡಬಡ್ಸಿ ಎದ್ದ ರಂಗಮ್ಮನಿಗೆ ಗೋಡೆನಾಗ ತಗಲು ಹಾಕಿರೊ ದೇವರ ಪಟವು ಕಾಣಿಸ್ತೆ ಒಲೆಯ ಆನ ಮಲ್ಕಂಡಿದ್ದ ಆನಂದ್ನು ಕಂಡುಬಂದ್ನು 'ಎಯ್ ಮೂದೇವಿ ಯೆಮ್ಮೇನ ನೀನು ಕಟ್ಟೀದೆನೊ' ಅಂದ್ಲು. ರಾತ್ರಿಯೆಲ್ಲಾ ನಿದ್ದೆ ಕೆಟ್ಟಿದ್ದ ಆನಂದ್ನು ಆವಾಗ ತಾನೆ ನಿದ್ದೆಗೆ ಮುಗ್ರಸ್ತಾ ಇದ್ದೋನು 'ಇಲ್ಲ ಹೋಗಮ್ಮೊ?' ಅಂತಂದ. ಮುಗ್ಗಲು ತಿರ್ಗಿಕೊಂಡ್ನು. ಆಗ ಏನೋ ತೋಚಿದ್ವಳಂಗೆ ರಂಗಮ್ಮನು ರಾತ್ರ ನಾಟ್ಕ ನೋಡಾಕ ಅಂತ ಹೋದೊನು ? ಎಸ್ಪೊತ್ತಕ ಬಂದ್ನು ಅನ್ಕಂಡು 'ಯಾರೋ ನಿನ್ನ ಬಾಕ್ಲು ತಗದಿದ್ದು?' ಅಂಥ ಗಾಬ್ರಿಯಿಂದ್ಲೇ ಕೇಳಿದ್ಲು. 'ಬಾಕ್ಲುಕ ರಾತ್ರಿ ತಾಳ ಹಾಕಿದ್ರ?' ಅಂಥ ಅವನಂಗೆ ಅಂತಿರುವಾಗ್ಲೆ, ಮನೆಯಾಗಿನ ಕಡುಕು ಮೂಲೆನಾಗ ಗ್ವಾಡೆ ಮೇಲಿನ್ದು ಲೊಚಗುಟ್ಟಿತ್ತು. ರಂಗಮ್ಮನು ಏನೋ ಕೇಡು ಎಣ್ಸಿದವಳೆ ಒಂದೇ ಜಂಗ್ನಾಗ ಪಡಸಾಲೆ ಕಂಬ್ದ ಹತ್ರ ಇದ್ಲು. ಅಕ್ಕನು ಅತ್ತ ಮಗ್ನ ಇಚಾರ್ಣೆ ಮಾಡ್ತಿರುವಾಗ್ಲೆ ರತ್ನಮ್ಮನು ಹಟ್ಟಿಗೆ ಓಡಿದ್ಲು.

ರಾತ್ರಿ ತುಂಬಾ ಹೊತ್ತು ಪಕ್ಕದ ಮನೆಯ ಚಿನ್ನಮ್ಮನು, ಪುಟ್ಟಮ್ಮನ ಜತೆ ಆ ಮಾತು ಈ ಮಾತು ಅಂತ ಎಲೆ ಅಡಿಕೆ ಅಗ್ಕಂಡು ರಂಗಮ್ಮನು ಹಟ್ಟಿನಾಗೆ ಕುಂತಿದ್ಲು. ಎರ್ಡು ಮೂರು ಸರ್ತಿ ದೀಪ ಆರಿಸು ಕಣ್ಣು ಚುಚ್ತಾದೆ ಅಂತ ತಾಯಿ ಗದ್ರಿಸ್ಕೊಂಡ ಮ್ಯಾಲೆ ಇದೊಂದು ರಾವ್ಡಿ ಅಂತ ಎದ್ದಿದ್ಲು. ಆಮ್ಯಾಲೆ ಯೆಮ್ಮೆಕ ಮುಸ್ರಾವು ಮಾಡಿ ಒಂದಿಡಿ ಮೇವು ಹಾಕಿ ಈ ಈತ್ನಗಾದ್ರು ಹೆಣ್ಣಗರು ಹಾಕೇ ತಾಯಿ ಅಂತ ಬೇಡ್ಕಂಡು ಬಾಕ್ಲು ಬದ್ರ ಮಾಡಿ ಬಿದ್ಕಂಡಿದ್ಲು. ಅವು ಎಲ್ಲಾನು ರಂಗಮ್ಮನ ಗೆಪ್ತಿಗೆ ಬಂದ್ವು. ಎಮ್ಮೆ ಕಣ್ಣಿ ಬಿಚ್ಚಕಂಡು ಆಚೆಕ್ಯ ಹೋಗಿರಬೌದ? ಆದ್ರೆ ಆಕಿರೋ ಬಾಕ್ಲು ತಕ್ಕಂಡು ಯೆಮ್ಮೆ ಎಂಗೋತದೆ. ಯಾಕೋ ಮನ್ಸನಾಗ ದಿಗ್ಲು ತುಂಬಿಕ್ಕಂತು. ತಲೆತಲಾಂತ್ರದಿಂದ ಈ ಮನ್ತೆನಕ ಆಸ್ರೆ ಆಗಿದ್ದ ಎಮ್ಮೆ ಜಾತಿ ಅದು ಅಂಥ ದುಕ್ಕ ಒತ್ತರಿಸ್ಕಂಡು ಬಂತು. ಇಂಥ ಅವೇಳೆನಾಗು ಇದ್ಯಾವುದರ ತಲೆ ಬುಡ ತಿಳೀದೆ ಬೆಪ್ಪನಂಗೆ ನಿಂತಿರುವ ಮಗ್ನಮ್ಯಾಲೆ ಯಾಕೊ ಏನೊ ಎಲ್ಲಿಲ್ಲದ ಕ್ವಾಪ ಬಂತು. 'ಅಂಗ್ಯಾಕೋ ಗಾವು ಬಡ್ದೊನಂಗೆ ನಿಂತಿದ್ದೀಯ ?

ನನ್ನ ಹೊಟ್ಟೆ ಉರಿಸಾಕ? ಕತ್ತರಿಸ್ಕೊಂಡು ಹೋಗಿ ಊರ ಸುತ್ತ-ಮುತ್ತ ಇರೋ ತ್ವಾಟ ತಡಿಕೆನಾಗ ನೋಡೋಗು' ಅಂಥ ಗದ್ರಿಸ್ಕಂಡ್ಲು. ಆನಂದ್ನು ದುಸರಾ ಮಾತಿಲ್ದೆ ಜಾಗ ಖಾಲಿ ಮಾಡಿದ್ನು. ಅತ್ತ ಮುದುಕಿಗೆ ಕುಂತ ಕಡೇನೆ ಗಾಬ್ರಿ ಹೆಚ್ಚಾಗ್ತಿದ್ದಂತೆ ಕೆಮ್ಮು ಕೂಡ ಜಾಸ್ತಿಯಾಗಿ ಸುಮಾರು ವೊತ್ನಿಂದ್ಲು ಏನೊ ಹೇಳ್ಬೇಕು ಅಂಥ ಯತ್ನಿಸ್ತಾ ಆಗ್ದೆ ಆ ಪರಮಾತ್ಮ ಆ ಪರಂದಾಮ್ಮ ಅನ್ನೋ ಶಬ್ದಗಳ್ನ ಹೆಂಗೆಂಗೊ ಹೊರ್ಡುಸ್ತಾ ಒದ್ದಾಡುತ್ತಿದ್ಲು. ಬೀದಿನಾಗ ಚಿಕ್ಕ ಮಗ್ಲು ರತ್ನಮ್ಮನು ಕಸ ಆಕಾಕ ಬರೊರ್ನ ಬಯ್ಲು ಕಡೆ ಹೋಗೋರ್ನ ಅಡ್ಡಾಕಿ ಕಟ್ಟಿ ಹಾಕಿದ್ದ ಕಂಬ್ದಾಗನಿಂಕ ಎಮ್ಮೆ ಕಾಣೆಯಾಗಿರುವ ಸಂಗ್ತಿನಾ ದುಕ್ಕಾಗ ಹೇಳಿಕೊಂಡು ನಿಮ್ಕಣ್ಣಿಗೇನಾದ್ರೂ ಬಿತ್ತ ಅಂಥ ಆಲಾಪಿಸಿದ್ಲು.

ಬನಹಳ್ಳಿನಾಗ ಯಾವೊತ್ನಂಗೆ ಬೆಳಕಾಗಿದ್ರು ವತೀನೆ ವಕ್ರಸ್ಕೊಂಡಿರೋ ಕಳುವಿನ ಸಂಗ್ತಿಗಳಿಗೆ ಅನ್ಸೊವಸ್ಥಲ್ಲಿ ಊರ್ನ ಅನಾಮತ್ತಾಗಿ ಆವರಿಸ್ಕಂಡಿತು. ಕಕ್ಕಲಾತಿ ಇದ್ದೋರು ಮೂಲ್ಮೆನೆ ತಾವ ಪರ್ಸ್ಲೆಯಂಗೆಜಮಾಯ್ಸಿ ತೊಡಗಿದ್ರು. ದೊಡ್ಡೋರು ಪಡಸಾಲೆ, ದಾಲ್ಬಂದ್ರ, ಬಾಕ್ಲುಗಳ್ನ ನಿಗಾ ಇಟ್ಟು ನೋಡ್ತಿದ್ದಂಗೆ ವಯಸ್ಸಿನ ಹುಡುಗ್ರು ಮೂರ್ನಾಲ್ಕು ಗುಂಪು ಮಾಡ್ಕಂಡು ಊರು ದಿಕ್ಕಗಳ್ನ ಶೋದ್ನೆ ಮಾಡಾಕಂತ ಹೋದ್ರು. ನೆಲ್ದಮ್ಯಾಲೆ ಮಂಚು ಬಿದ್ದಾದೆ ಕಾಲಿನ ಗೊರ್ಸು ಗುರುತು ಹಿಡ್ಕಂಡು ಹೋಗ್ರಿ ಅಂತ ಹಿರೀಕರು ಅನುಭವ್ದ ಮಾತ್ನ ಹೇಳಿದ್ರು. ಆಗ ತಾನೆ ಅಲ್ಲಿಗೆ ಬಂದ ಸಾತ್ವಿಕ ಸಾಕಪ್ಪನು, ಇವೊತ್ತು ಯಾಕೋ ಇನ್ನೂ ಬಂಗಿಸೊಪ್ಪಿನ ದಮ್ಮೆಳೆದು ದೇವರ ಪಾದ್ಗಾ ತೇಲಾಡೋದು ಬಿಟ್ಟು ಬಂದಿದ್ದನು. ಬಂದೊನೇ ಕಳುವಿನ ವಿಚಾರ್ದಾಗ ತಾನು ಸಾಯ ಮಾಡ್ಬೇಕು ಅನ್ನೋ ಬುದ್ದಿ ಹುಟ್ಟಿ 'ನೋಡ್ರಪ್ಪ ಬರೀ ತಡ್ಕಿಂಡ್ ಪುಡ್ಕಿಂಡಿದ್ರೆ ಆಗ್ಲದು ಮ್ಯಾಲ್ನೂರ ಕುಂಟಿ ಆಯ್ನೋರ್ನ ಕರೆಬುಡ್ಸಿ ಈಳ್ಯಶಕುನ ಕೇಳಾನ ಮೊದ್ಲು ಇದು ಕಳ್ತನಾನೋ ಇಲ್ಲಾ ತಪ್ಸಿಕಂಡಿರೋದೊ ತಿಳಿದೋಯ್ತದ' ಅಂತ ವ್ಯಾಳಕ ತಕ್ಕ ಮಾತಂದ್ನು. ಅಂಗೇ ಮಾಡಾನ ಅನ್ನುತ್ತಿದ್ದಂಗೆ ಮಾರ್ಯಮ್ಮನ ಪೂಜಾರಿ ಗೋಪಾಲ್ನ ಅತ್ತ ಓಡಿಸಿದ್ರು.

ಇಷ್ಟೆಲ್ಲಾ ಮನೆ ಮುಂದೆ ಆಗ್ತಿದ್ರು ರಂಗಮ್ಮನಿಗೆ ಪ್ರಾಣ ಅನ್ನೋದು ಗಾಳ್ಕ ಬಿದ್ದ ಗಿರ್ಲನಂಗೆ ಒದ್ದಾಡುತ್ತಿತ್ತು. ಇಂಗೆ ಊರ ಜನ್ರು ಮೂಲ್ಮನೆ ಮುಂದೆ ಜಾತ್ರೆಯಂಗೆ ನೆರದಿರೊವಾಗ ಲೇಟ್ ಮಂಜೇಗೌಡ್ನ ರಕ್ತ ಸಂಬಂಧಿನೂ, ಊರ ಗೌಡ್ನು ಆದ ನೀಲಕಂಠೇ ಗೌಡ್ನು ಮನೆಯ ವಪ್ಪಾರದಲ್ಲಿ ಕುಂತು ಚವರಿಕ್ಕ ಕೈಯಾಗೆ ತಲೆಕೊಟ್ಟಿದ್ನು. ಅವ್ನು ಚವರ ಮಾಡ್ಕೊಂಡೇ ಕಳ್ತನದ ವಿಷ್ಯ ಹೇಳಿದ್ರೆ ಗೌಡ್ನು ಗಳ್ಗಿಗೊಂದವರ್ತಿ 'ಹಾಂ.. ಹೂಂ' ಅನ್ತಿದ್ನು.

ಇತ್ತು ವೊತ್ತು ಹೋಗ್ತಿದ್ದಂಗೆ ಎಮ್ಮೆ ಊರ ಫಲದಾಗೆಲ್ಲೋ ಇರಬೌದು ಅನ್ನೋ ಇಸ್ವಾಸ ಯಾಕೋ ಕಮ್ಮಿ ಆಗ್ತ ಬಂತು. ಬ್ಯಾರ ಬ್ಯಾರೆ ದಿಕ್ಕಗಳಾಗ ಶೋದ್ನೆಗೆ ಹೋಗಿದ್ದ ಹುಡುಗ್ರು ಜೋಲು ಮೋರೆ ಹಾಕ್ಕೊಂಡೆ ಬರಿಗೈಯಾಗ ಬರ್ತಿದ್ರು. ಆನಂದ್ನು ಕೂಡ ಹರಳೆಣ್ಣೆ

ಎಮ್ಮೆ ಕಣ್ಣಿ ಬಿಚ್ಚಕಂಡು ಆಚೆಕ್ಯ ಹೋಗಿರಬೌದ? ಆದ್ರೆ ಆಕಿರೋ ಬಾಕ್ಲು ತಕ್ಕಂಡು ಯೆಮ್ಮೆ ಎಂಗೋತದೆ. ಯಾಕೋ ಮನ್ಸನಾಗ ದಿಗ್ಲು ತುಂಬಿಕ್ಕಂತು. ತಲೆತಲಾಂತ್ರದಿಂದ ಈ ಮನ್ತೆನಕ ಆಸ್ರೆ ಆಗಿದ್ದ ಎಮ್ಮೆ ಜಾತಿ ಅದು ಅಂಥ ದುಕ್ಕ ಒತ್ತರಿಸ್ಕಂಡು ಬಂತು. ಇಂಥ ಅವೇಳೆನಾಗು ಇದ್ಯಾವುದರ ತಲೆ ಬುಡ ತಿಳೀದೆ ಬೆಪ್ಪನಂಗೆ ನಿಂತಿರುವ ಮಗ್ನಮ್ಯಾಲೆ ಯಾಕೊ ಏನೊ ಎಲ್ಲಿಲ್ಲದ ಕ್ವಾಪ ಬಂತು. 'ಅಂಗ್ಯಾಕೋ ಗಾವು ಬಡ್ದೊನಂಗೆ ನಿಂತಿದ್ದೀಯ ?



ಕುಡ್ಡೊದನಂಗೆ ಉಸ್ ಅಂಥ ಬಂದು ಪಾಟ್ಯಮ್ಮನ ತಾವ ಕುಂತ್ಳು. ಊರಿನ ಯಾವೊತ್ತಿನ ಕೆಲ್ಸಗಳು ನಿಂತು ನಿಂತು ನಡೀತಿದ್ವು. ಆ ಗಳಿಗೇನಾಗ ಏನಾಯ್ತೋ ಏನೋ ರಂಗಮ್ಮನು ಮೈಮ್ಯಾಲೆ ಬಂದೊಳಂಗೆ ತನ್ನ ಎಲ್ಲಾ ಸೈರ್ಣೆಯನ್ನ ಕಳಕೊಂಡು ಬಾಯಿಗೆ ಬಂದ್ದಂಗೆ ಶಾಪಗಳ್ನ ಸುರು ಮಾಡಿದ್ಳು. ಅಕ್ಕನ ಆವೇಶಾನ ನೋಡಿ ಉದ್ರೇಕಗೊಂಡ ರತ್ನಮ್ಮು ಬೀದಿಗಿಳಿದು ಅಕ್ಕನ ಬೈಗಳಿಗೆ ತಕ್ಕಂಗೆ ಮಣ್ಣನ್ನ ದಿಕ್ಕ ದಿಕ್ಕಗಳ್ಕ ತೂರ ತೊಡಗಿದ್ಳು. ಅಕ್ಕ ತಂಗೀರ ಈ ಹೊಸ ಯಾಸದಿಂದ ಊರ ಜನ್ರುಗಳಿಗೆ ಅವಾಕ್ ಆದ್ರು. ಮಣ್ಣು ಮತ್ತು ಬೈಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿನೆ ಹಿರೀಕ್ರು ಜಾಗ ಖಾಲಿ ಮಾಡತೊಡಗಿದ್ರು.
ಅರ್ತಿ ನೋಡೊರಂಗೆ ಹೈಕಳ್ಳು ಬೆರಗಿನಿಂದ ಹತ್ತಿರ್ಕೆ ಬಂದ್ರು.

ಎಮ್ಮೆ ಪುರಾಣ

ಇಷ್ಟಾಗುವಷ್ಟರಲ್ಲಿ ಸೂರಿಣ್ಣು ನಾಲ್ಕು ಬಾರು ಮೇಲ್ಕೆ ಏರಿದ್ನು ಹೂಬಿಸ್ಲು ಬಲೀತ್ತಿದ್ದಂಗೆ ಯಜಮಾನ್ಯಮ್ಮನ ಸ್ವರಾಳವನ್ನು ಅಮುಕ್ಕಿ ಹಿಡ್ಕಂಡಿದ್ದ ಕಫದ ಬಿಗಿವು ರವಸ್ಟು ಬಿಟ್ಟಂಗೆ ಅನ್ನಿಸಿತ್ತು. ಮಾತ್ಗೆ ಹಸಿದಿದ್ವಳಂಗೆ ಮುದುಕಿ ತನ್ನ ಬಲಿಮಿನೆಲ್ಲಾ ಒಟ್ಟು ಗೂಡಿಸ್ಕಂಡು ಕ್ಯಾಕಿರಿಸಿ ಗಂಟ್ಲನ್ನ ಸರಾಡಿ ಕೊಳ್ಳುತ್ತಿರುವ ಗಳಿಗೆಯಲ್ಲೆ 'ಏನೇರಂಗಿ ಘಾತ ಆತಲ್ಲೇ' ಅನ್ನುವ ಕರುಳು ಕತ್ತರಿಸುವಂತ ಅಪ್ಯಾಕಾರ್ನ ಮಾತ್ನಲ್ಲಿ ಆಡುತ್ತಾ ಅಟ್ಟಿಗೆ ಸಂತ್ಯೆಮ್ಮನೆಂಬೋಳು ಸುಂಟ್ರಗಾಳಿಯಂಗೆ ಬಂದ್ಳು.

ನೆನ್ನೆ ರಾತ್ರಿನಾಗ ತೇರಹಳ್ಳಿ ನಾಟ್ಕದಾಗ ವಡೆ ಬೊಂಡ ಅಂಗಡಿ ಹಾಕಿದ್ದ ಈ ಹೆಂಗಸ್ಕ ಯಾವಾಗ್ಲೂ ಊರ ಉಸಾಬ್ರಿ ರವಸ್ಟು ಜಾಸ್ತೀನೆ. ವತೀನೆ ಕೂಡ ಜೋರು ಯಾಪಾರ ಮಾಡ್ಕಿಂಡು ಹೊರಡೋವಸ್ಟೊತ್ತಿಗೆ ತಡವಾಗಿತ್ತು. ಊರ್ಕ ಮುಟ್ಟುವ ಮುಂಚೇನೆ ದಾರ್ಯಗ ಯೆಮ್ಮನ ಸೋದ್ನೆ ಮಾಡ್ಕಿಂಡು ಬಂದೋರಿಂದ ಸುದ್ದಿ ತಿಳ್ಕಿಂಡು, ಗಾಬ್ರಿ ಬಿದ್ದು ಮೂರೇ ಜಂಗ್ನಾಗ ಮೂಲ್ಮನೆ ಹಟ್ಕಿ ಬಂದಿದ್ಳು.

ಸಂತ್ಯಮ್ಮನ ಪ್ರವೇಶದಿಂದಾಗಿ ಬಿಸಿ ಆರುತ್ತಿದ್ದ ಹಟ್ಟಿನಾಗ ಮತ್ತೆ ಕಾವೇರಿತು. ಆಪತ್ತಿನಲ್ಲಿರೋ ಎಲ್ಲರನೂ ಸಂತೈಸುವ ತನ್ನ ಯಾವೋತ್ತಿನ ರೂಡಿಯಂಗೆ ರಂಗಮ್ಮನ ಗಲ್ಲ ಹಿಡ್ಕಿಂಡು 'ಸಾಮಾದಾನ ಮಾಡ್ಕಿಳೆ ಹೋಗಿರೋದು ಪುಟಗೋಸಿ ಎಮ್ಮನೆ ಹೊರ್ತು ನಿನ್ನ ಭಾಗ್ಯವೇನಲ್ಲ' ಅಂತ ಆಡೋ ಅವಸರದಾಗ ಬಾಯ್ತಪ್ಪಿ ಪುಟಗೋಸಿ ಅಂದಿದ್ಳು. ಆಕೆ ಆಡಿದ ಮಾತು ಮುದುಕಿ ಕಿವ್ಯಾಗ ಕಾದಸೀಸ್ದಂಗೆ ಬಿತ್ತು. ಅಲ್ಲಿಗಂಟ ದಿಸ್ಟಿ ಬೊಂಬೆ ಅಂಗೆ ಮಿಸ್ಕದೆ ಕುಂತ್ತಿದ, ಮುದುಕಿಯ್ನ ಸಂತ್ಯಮ್ಮನು ಅಂದ ಪುಟಗೋಸಿ ಯೆಮ್ಮೆ ಎಂಬ ಶಬ್ದವು ಬಲವಾಗಿ ರೇಗಿಸ್ತು. ತನ್ನ ಮೈಯಾಗಿರೋ ಸಕ್ತಿನೆಲ್ಲಾ ಮಾತ್ಗೆ ಹಿಂಡ್ಕಿಂಡ್ವಳಂಗೆ ಗುಡಿಗಿದ್ಳು 'ಲೇ ಯಾವೊಳೆ ಅವುಳು ಲೌಡಿ ನನ್ನಾತ್ತಯಂತ ಎಮ್ಮನಾ ಪುಟಗೋಸಿ ಅಂದದ್ದು. ಅದು ನಮ್ಮ ಮನೆದ್ಯಾವ್ರೆ ಸುಪನಾತಿ' ಮುಂದಿನ ಮಾತ್ಗಳು ಕಫದಾಗ ಹೂತು ಹೋದ್ವು. ಸಂತ್ಯಮ್ಮನು ಬಂದ ಮೇಲೆ ಬೈಗಳ್ನ ನಿಲ್ಲಿಸಿದ್ದ ಅಕ್ಕತಂಗಿಯೋರು ತಾಯಿ ಎನು ಹೇಳಾಕ ಯತ್ನ ಮಾಡ್ತವಳೆ ಅನ್ನೊದನ್ನ ಆಕೆಯ ಮಕದಾಗ ಮಡುಗಟ್ಟಿರೋ ಸುಕ್ಕಗಳ್ನ ನೋಡಿ ತಿಳ್ಕಂಡು ತಾವು ಹಿಮ್ಮೇಳವಾಗಿ ನಿಂತ್ರು. ಜನ್ರು ಕೂಡ ಬೈಗ್ಳು ಮತ್ತು ಮಣ್ಣು ತೂರಾಟದಿಂದ ಸದ್ಯ ಪಾರದ್ವಲ್ಲ ಅನ್ಕಂಡು ನಿರುಂಬಳರಾದ್ರು. ಮುಂದೇನು ಅಂತ ಅವಾಗ ಅವ್ರ ಕಣ್ಣು ಕಿವಿಗಳು ಕೇಳ್ತಿದ್ದವು.

ಮುದ್ಕಮ್ಮನು ಮತ್ತೆ ಹೊಟ್ಯಾಗ್ನಿಂದ ಸ್ವರ ತೆಗೆದು 'ಅಲ್ಲಾಲೇ ಅದು ಯಲ್ಲರ ಮನ್ಯಾಗಿನ ಮೂರುಕಾಸಿನ ಎಮ್ಮೆ ಆಗಿದ್ರೆ ನಾವು ಕೂಡ ಬಾದೆ ಬೀಳ್ತಿರಲಿಲ್ಲಿ ಅದು ವಂಸಕ್ಕೆ ಆಗಿ ಬಂದ ಜೀವ, ಅಂತ ತಾಯಿ, ಇವೊತ್ತು ಯವೋನೊ ಕಟುಕ್ನ ಪಾಲಾಯ್ತಲ್ಲೇ ಅವ್ನ ಕೈಕ ಎಳೆನಾಗ್ರ ಕಡಿಯಾ' ತುಳಿಕಿದ ಕಣ್ಣೀರ್ನ ಸುಕ್ಕಗಳಾಗ ಇಮ್ರಾಕೂ ಬಿಡ್ದೆ ಕೊಂಗ್ನಾಗ ವರ್ಸಕಂಡ್ಳು,



'ಈ ಕರಿ ಯೆಮ್ಮೆಯ ವಂಸ ನಮ್ಮ ಮನೆತನ್ಕ ಕಾಲು ಇಕ್ಕಿದ್ದು ಪುಟ್ಟ ಪೂರ್ವತ್ರದಲ್ಲಿ, ಆವಾಗ ಈ ಊರು ಕೂಡ ಬೆಟ್ಟದ ಮ್ಯಾಲೆನೆ ಇತ್ತಂತೆ, ಒಂದು ಸಾರಿ ಕೌರವ್ರು ನೋಮ್ಲಬ್ಬ ಮಾಡ್ಬೇಕು ಅಂಥ ಕೆರ್ಗಳಾಗ ಇರೋ ಬಂಕ ಮಣ್ಣನೆಲ್ಲಾ ಕೂಡಾಕಿ ದೊಡ್ಡ ಆನೆ ಮಾಡಿದ್ರಂತೆ.

ಒತ್ತರ್ಸಿಕಂಡು ಬರೋ ದುಕ್ಕದಾಗ ಮಾತುಗಳು ಒರಳಾಡ್ತಿದ್ವು. ಮನೆ ಯಜಮಾನಿ ತನ್ನ ಮಾತಗಳ್ನ ಅಪಾರ್ಥ ಮಾಡ್ಕಂಡು ತನ್ನನ್ನ ಇಂಗೆ ದಂಡಸೋದು ನೋಡಿ ದಂಗು ಬಡ್ದು ಹೋದ ಸಂತ್ಯಮ್ಮನು, ಮುಂದೇನು ಮಾತ್ತಾಡ್ಕ ಧೈರ್ಯ ಒಗ್ಗದೇ ಎಲೆ ಅಡಿಕೆ ಚೆಂಚೀನಾ ಬಿಚ್ಚಿದ್ಳು. ಜನ್ರು ಕಿಮಕ್ ಅನ್ನದೆ ಮಾತ್ಗೆ ಮತಿ ಕೊಟ್ರು.

'ಈ ಕರಿ ಯೆಮ್ಮೆಯ ವಂಸ ನಮ್ಮ ಮನೆತನ್ಕ ಕಾಲು ಇಕ್ಕಿದ್ದು ಪುಟ್ಟ ಪೂರ್ವತ್ರದಲ್ಲಿ, ಆವಾಗ ಈ ಊರು ಕೂಡ ಬೆಟ್ಟದ ಮ್ಯಾಲೆನೆ ಇತ್ತಂತೆ, ಒಂದು ಸಾರಿ ಕೌರವ್ರು ನೋಮ್ಲಬ್ಬ ಮಾಡ್ಬೇಕು ಅಂಥ ಕೆರ್ಗಳಾಗ ಇರೋ ಬಂಕ ಮಣ್ಣನೆಲ್ಲಾ ಕೂಡಾಕಿ ದೊಡ್ಡ ಆನೆ ಮಾಡಿದ್ರಂತೆ. ಅದ್ರಮ್ಯಾಲೆ ಗೌರಮ್ಮನ ಮಡ್ಗಿ ಐಭೋಗ್ದಾಗೆ ಬೇಕಾದಂಗೆ ಪೂಜೆ ಮಾಡಿದ್ರಂತೆ. ಆ ಅರ್ತಿ ಐಭೋಗಾನ ನೋಡಿ ಕುಂತ್ಯಮ್ಮನ್ಕ ಎಲ್ಲಿಲ್ದ ದುಕ್ಕ ಆಯ್ತಂತೆ. ಈ ಪುಣ್ಯೇವು ನನ್ಕಿಲ್ಲ ಅಂತ ಕಣ್ಣಾಗ ನೀರು ಹಾಕ್ದಿಲ್ಲಂತೆ ಅವಾಗ ಅವಾಗ ಆಯಮ್ಮನ ಮಕ್ಕಳು ಪಾಂಡ್ವರು ದಾಯದಿಗಳು ಮಣ್ಣಿನಾಗ ಆನೆ ಮಾಡಿ ಪೂಜೆ ಮಾಡ್ಯವ್ರೆ, ನಾವು ದೇವ್ಲೋಕದಾಗಿನ ಆನೆ ತಂದ್ದು ನಿನ್ನ ಕೈಯಾಗ ಪೂಜೆ ಮಾಡುಸ್ತೀವಿ ಅಂತ ಸಮಾದಾನ ಮಾಡಿದ್ರಂತೆ, ಸರಿ ಅಂಗೇನೆ ಬೀಮನ್ನ ದೇವಲೋಕಾನ ಆನೆ ತಕ್ಕಂಬಾ ಅಂತ ಕಳ್ಸಿಕೊಟ್ರಂತೆ' ಈ ಮತ್ತೆ ಹೊಕ್ಕಳು ಬಳ್ಳಿಯಾಗ್ನಿಂಕ ದಮ್ಮು ಒತ್ತರ್ಸಿಕಂಡು ಬಂದು ಮುದುಕಿಯ ಮಾತುಗಳು ತುಂಡಾದ್ವು.

ಇನ್ನ ತಾಯಿ ಸುಮಾರು ಹೊತ್ತು ಮಾತ್ನಾಡಕ್ಕಾಗಲ್ಲ ಅಂತ ರಂಗಮ್ಮನು ತಾನೇ ಕತೇನಾ ಮುಂದುವರ್ಸಿದ್ಳು. 'ಸರಿ ಅತ್ತ ಬೀಮ್ನು ಕಣ್ಣಮುಚ್ಚಿ ಕಣ್ಣತೆರೆಯೋದ್ರೊಳಗೆ ದೇವಲೋಕ್ಕ ಬಂದ್ನಂತೆ. ಆದ್ರೆ ಅಲ್ಲಿ ಬಾಕ್ಲಾಗ ಕಾವ್ಲು ಇದ್ದ ಆಳುಗಳು ನರಮನ್ಸರ್ನ ವಳಕ್ಕೆ ಬುಡಾಲ್ಲ ಅಂತ ಅಡ್ಡಾಕಿದ್ರಂತೆ. ಬೀಮ್ನು ದಮದೈಕ್ಲು ಬಿದ್ರು ಬಿಲ್‌ಕುಲ್ ಆಗಲ್ಲಾಂದ್ರಂತೆ. ಸರಿ ಇವ್ರಕ ಇಂಗೆ ಮಾಡಿದ್ರೆ ಆಗಲ್ಲ ಅಂತ ಬೀಮ್ನು ದೇವೋಲೋಕ್ದ ಹಿತ್ಲಕ ಬಂದ್ನಂತೆ. ಆಳುಗಳ್ನ ಕಣ್ತಪ್ಪಿಸಿ ವಳಕ್ಕೆ ನುಗ್ಗಿಬಿಟ್ನಂತೆ. ಅಲ್ಲಿಕ್ಯ ಬಂದೋನೆ ಆರು ನೋಡಿದ್ರೆ ಆನೆಗಳು, ಯೆಮ್ಮೆಗಳು, ಹಸುಗಳು ಹಿಂಗೆ ಸಕಲಸಬ್ಬಂಡಾರು ಜಾತಿಯ ಜೀವಗಳು ಮ್ಯೆಯ್ಕಂಡು ಇದ್ವಂತೆ. ಆತ್ರಾತ್ರವಾಗಿ ಹೋದವನೆ ಅಲ್ಲಿ ಮೆಯ್ತಾ ಇದ್ದ ದೊಡ್ಡ ಕರಿಯೆಮ್ಮನ ಆನೆ ಅನ್ಕಂಡು ಅಲ್ಕನೆ ಅದ್ನ ಕದ್ಕಂಡು ಬೂಲೋಕ ಬಂದ್ನಂತೆ.' ಒಂದೇ ಉಸ್ರಿನಾಗ ಮಾತ್ತಾಡ್ತಿದ್ದ ರಂಗಮ್ಮನು 'ಅಲ್ಲೇ ನಮ್ಮೋ' ಅಂತ ತಾನು ಹೇಳ್ತಿರೋದು ಸರೀನಾ ಅನ್ನೋದನ್ನ ಖಾತ್ರಿ ಪಡಿಸ್ಕಳೊವಂಗೆ ಅಂದ್ಳು. ಸುತ್ತಾ ಇದ್ದ ಜನ್ಗಳು ಇಂಗೆಕತೆನಾಗ ಕರ್ಗತ್ತಾ ಇರೋವಾಗ, ಕಿವಿಗಳು ಕತೆ ಕೇಳತ್ತಿದ್ರೆ, ಬಾಯ್ಗಳು ಎಲೆ ಅಡಿಕೇನ ಜಗಿತಾ ಇದ್ವು.

ಅಲ್ಲೀಗಂಟ ಸುದಾರ್ಸಿಕೊಂಡಿದ್ದ ಮುದುಕಿ ಮುಂದಿನ ಕತ್ಗೆ ತಾನೇ ಬಾಯ್ಹಾಕಿದ್ಳು. 'ಅಮ್ಯಾಲೆ ಬೀಮನು ದೇವ್ಲೋಕ್ದಾಗ್ನಿಂಕ ತಂದಿರೋ ಆನೆಗಾತ್ರದ ಯೆಮ್ಮನ ನೋಡಿ ಅಣ್ತಮನೋರು ಗೊಳ್ ಅಂದ್ರಂತೆ. ಆವಾಗ ಅವ್ರಣ್ಣು 'ಲೇ ತಿಂಡಿಪೋತ ಇದು ಯೇನ ಇದು ಆನೆ ತಕ್ಕಂಬಾರೋ ಅಂದ್ರೆ ಎಮ್ಮೆ ತಂದಿದ್ದಿಯಲ್ಲೊ' ಅಂತ ಬೈದ್ನಂತೆ. ಒಂದು ಸಾರಿ ಬೀಮ್ನು ಯೆಮ್ಮೆತಟ್ಟು ಆರು ನೋಡಿ 'ಅರೆರೆ ಎಂಥ ಪರಪಾಟು ಆಗೋಯ್ತು' ಅಂಥ ಕೈ ಕೈ ಹಿಸ್ಕಂಡ್ನಂತೆ. ಆವಾಗ ತಮ್ಮನೋರು ಯಾರಾದ್ರು ಜನ ನೋಡಿದ್ರೆ ಮಾನ ಮುಕ್ಕಾತದೆ ಬಿರ್ರನೆ ಇದ್ನ ಬಿಟ್ಟು ಬಿಟ್ಟು ಆನೆ ತಕ್ಕಂಬರೋಗು ಅಂದ್ರಂತೆ. ಊರ ಆಚ್ಯಕ ಬಂದೋನೆ ಯೆಲ್ಲಾ ಇದ್ರನಿಂಕನೆ ಅಂಥ ಯೆಮ್ಮೆ ಮ್ಯಾಲೆ ಯಲ್ಲಿದ್ದ ಕ್ವಾಪ ತಕ್ಕಂಡು ಜಾಡ್ಸಿ ಒದ್ದುಬ್ಟ್ನಂತೆ. ಆವಾಗ ಅದು ಬಂದು ಈ ಅಂತರ್ಗಂಗೆ ಬೆಟ್ಟದಾಗ ಬಿತ್ತಂತೆ, ಅಲ್ಲಿ ಜೀವಗಳ್ನ ಮೇಯ್ಸಕಂಡಿದ್ದ ನಮ್ಮ ಪೂರ್ವಿಕನ್ಯಾರೋ ಈ ಬರ್ಜರಿ ಯೆಮ್ಮೇನ ನೋಡಿ!



ಅಸ್ಟರಲ್ಲಿ ಅಲ್ಲಿಗ್ಗೆ ಊರಿನ ನ್ಯಾಯ ಪಂಚಾಯ್ತಿ ಕಾಯಂಮೆಂಬ್ರು ಆದ ಐಡ್ಯದೋನು ಗನ ಗಂಬೀರವಾಗಿ ಬಂದ್ನು. ನ್ಯಾಯ ಯಾವುದಾದ್ರುವೆ ಸರಿ ಐಡ್ಯದೋನು ಪುಡ್ಕನೆ ಕೇಳೋ ತಲ್ಕಿಂದ್ರ ಪ್ರಸ್ನೆಗ್ಳ ನಿಜಾವನಿಜಗಳು ಬಟ್ಟಬಯಲು ಆಗೋವು. ಐಡ್ಯದೋನು ಬಂದೋನೆ ಅಯ್ನೋರ ಪಕ್ಕದಾಗ ಜಗುಲಿ ಮ್ಯಾಲೆ ಕುಂತ್ನು. ಇನ್ನೂ ಉಳಿದ ಊರಿನ ದೊಡ್ಡ ಮನ್ಸುರು ಬಂದ್ರು.

ಯಾರ್‍ದೊ ತಪ್ಪಿಸ್ಕಂಡು ಬಂದು ಬುಟ್ಟಾದೆ ಅಂತ ಹಿಡಿದು ಕಟ್ಟಿ ಹಾಕಿದ್ನಂತೆ. ಸನ್ಯಾಗ ಆದ್ರು ಯಾರು ಬರದಿದ್ನು ನೋಡಿ ಮನೆಗೆ ಹಿಡ್ಕಂಡು ಬಂದ್ನಂತೆ. ಅಂಗೆ ಬಂದಿದ್ದು ಆ ತಾಯಿ ನಮ್ಮ ಮನ್ಗೆ'. ಅಂದವಳೆ ಸಂತ್ಯೋಮ್ಮನ ಕಡೆ ಒಂದು ಸರ್ತಿ ನೋಡಿ ಅವಳ ಮನಸ್ಕ ನಾಟ್ಯಾದೋ ಇಲ್ಲೋ ಅನ್ನೋ ಅನುಮಾನ ಬಂದು 'ಲೇ ಯಾರೇ ಸಂತ್ಯೋಳು ಅವೊತ್ತು ಆ ಜೀವ ಲಚ್ಚಿಮಿ ದೇವಿಯಂಗೆ ಕಾಲ್ಕಿದ್ದೆ ಈ ಮನೆನಾಗ ಬಂಗಾರ್‍ದ ಹೊಗೆ ಏಳ್ತೆ. ಆ ಒಂದೆಮ್ಮೆ ಒಂದೊಡ್ಡ ಮಂದೆ ಆಗಿದ್ವು. ನಾವು ಚಿಕ್ಕೋರು ಆಗಿದ್ದಾಗ ಎಳನಾಗ್ರ ರ್‍ವಾಗ ಬಂದು ಮಂದೆ ಮಂದೇನೆ ವೋಗಿಬಿಟ್ವು. ಅದ್ರ ವಂಸಕ್ಕೆಲ್ಲಾ ಈ ಯೆಮ್ಮೆ ಒಂದೇ ಉಳ್ಕಂಡಿತ್ತು. ಅಂಥಾಜೀವ್ನ ಇವೊತ್ತು ಯಾವೋನೊ ನುಂಗಿ ನೀರು ಕುಡ್ಕಂಡನಲ್ಲೇ ಅವನ ವಂಸ ಕತ್ತರ್‍ಸಿಕೊಂಡು ಹೋಗ, ಅವ್ನ ಕೈಗೆ ಕಾಳಿಂಗ ಕಡಿಯಾ' ಅಂತ ಶ್ಯಾಪ ಹಾಕಿದ್ಲು. ಸುತ್ತ ಕುಂತು ಎಮ್ಮೆ ಪುರಾಣ ಕೇಳ್ತಿದೋರ ಮಕದಾಗ ಬೆರಗು ತಾಂಡ್ವಾಡುತ್ತಿತ್ತು.

ಆ ಯೆಮ್ಮೆ ಮೊಸರು, ಮಜ್ಜಿಗೆ, ತುಪ್ಪಗಳ್ನ ಒಂದೊಂದೇ ಹೆಸರೇಳ್ಕಿಂಡು ಅವುಗಳ ರುಚಿ, ಗಮಲುಗಳು ಈ ಲೋಕದಾಗ್ನುವು ಅಲ್ಲಾ ಅನ್ನೋದ್ನ ಅಲ್ಲಿ ಕುಂತಿರೋರ್‍ಗೆ ಮನದಟ್ಟು ಮಾಡಿಸ್ಬೇಕು ಅನ್ನೋ ಹಠದಾಗ ತಾಯಿ ತಪ್ಪಿದ್ರೆ ದೊಡ್ಡೋಳು, ಅವಳ ತಪ್ಪಿದ್ರೆ ಚಿಕ್ಕೋಳು ಹಿಂಗೆ ಎಳೆದೆಳೆದು ಮಾತ್ನಾಡಿ ಸುಸ್ತಾದ್ರು. ಯೆಮ್ಮೆ ಬಗ್ಗೆ ಯಾಕ ಈ ಎಂಗಸ್ರು ಎಷ್ಟು ಬಡ್ಕಂತಾರೋ ಅನ್ಕೋತಾ ಇದ್ದ ಜನರಿಗೂ, ಈವಾಗ ತುಂಬಾನೆ ಬೇಜಾರು ಆಗಾಕ ಸುರುವಾಯ್ತು. ಕೆಲವ್ರು ನಿಟ್ಟುಸಿರು ಬಿಟ್ರೆ ಇನ್ಕೆಲವ್ರು ಲೊಚಗುಟಿದ್ರು. ದುಃಖ ತಡಿಲಾರ್‍ದೆ ರಂಗಮ್ಮನು ತಿರ್‍ಗಿ ಬೈಗಳ ಮಾಭಾರತನ ಸುರು ಮಾಡಿದ್ಲು.

ಎಲೆ ಶಕುನ

ಬೈಗುಳದ ಉಗುಳು ಮತ್ತು ಮಣ್ಣು ತೂರಾಟ ಮತ್ತೆ ಸ್ವಲ್ಪ ಹೊತ್ತು ಪೈಪೋಟಿಯಿಂದ ನಡೆದವು. ಇನ್ನೂ ಅದು ಹಂಗೇನೆ ಎಸ್ಟೊತ್ತು ಮುಂದುವರಿಯೋದೊ ಏನೊ ಅಷ್ಟರಾಗ ಬಲಮಂದಿ ಓಣಿಯಾಗ್ನಿಂಕ ಮೇಲೂರ ಕುಂಟೈನೋರು ಕಾಲು ಸಮ ಇಲ್ದ ಕಾರ್‍ಣ ವಾಲ್ತಾ ಏಳ್ತಾ ಬರ್‍ತಿದ್ರು. ಕುಂಟೈನೋರ್‍ದು ವಾಮಚಾರ್‍ದಾಗ ಎತ್ತಿದ ಕೈ. ಮಾಟ ಮದ್ದೀಡು ಗಾವು ಮುಂತಾದವುಗಳ್ನ ಪ್ರಯೋಗ ಮಾಡೋದ್ರಿಂದ ಜನರಿಗೆ ಅವರ್‍ನ ಕಂಡ್ರೆ ಭಕ್ತಿಗಿಂತ ಭಯಾನೆ ಜಾಸ್ತಿ. ಕಳ್ತನದ ಇಚಾರ್‍ದಾಗ ಇವ್ರು ಇಳ್ಯಾ ಶಕುನ ಮಾಡಿ ನಡೆದಿದ್ದನ್ನ ನಡೆದಂಗೆ ಹೇಳ್ತಾರೆ ಅನ್ನೋ ಪುಕಾರು ಜನಗಳಾಗಿತ್ತು. ಅಯ್ನೋರು ಬಂದ ಮ್ಯಾಲೆ ರಂಗಮ್ಮಕ ಏಳಾನೆ ಬಲಬಂದಂಗಾಯ್ತು. ಊರ ನ್ಯಾಯಸ್ತರ್‍ನ ಕರೆ ಬುಡಾಕ ಅಂತ ಮಗ್ನ ಅತ್ತ ಸಾಗಾಕಿದ್ಲು. ಅಯ್ನೋರು ತಮ್ಮ ಮಕಾನ ವರಸ್ಕೊಂಡು 'ನೀನ್ಕೇನು ದಿಗಿಲು ಬ್ಯಾಡ ನಾನು ಈಳ್ಯ ಸಾಸ್ತ್ರದಾಗ ಎಂತೆಂತಾ ಕೇಸಗಳ್ನೊ ಹಿಡ್ಕೊಟ್ಟಿದ್ದೀನಿ' ಅಂಥ ಬರವಸೇನ ಹುಟ್ಟಿಸಾಕ ಯತ್ನಮಾಡ್ತಿರುವಾಗ್ಲೇ, ಒಂದು ದಮ್ಮು ವಡ್ದು ಖುಷಿಯಾಗಿದ್ದ ಸಾಕಪ್ಪನು ಹೌದೌದು ಅಂತ ತಲೆಯಾಡಿಸಿದ್ನು. ಅಲ್ಲಿದ್ದ ದೊಡ್ಡೋರ್‍ಕ ಅಯ್ನೋರ ಹೇಳ್ವಂಥ ಮಾತ್ನಿ ಮ್ಯಾಲೆ ನಿಗಾ ಇದ್ರೆ ಮುಸ್ರೇನ ಮುತ್ತಿಕಂಡಿರೋ ಇಬ್ಬೆಗ್ಳಂಗೆ ಸುತ್ತುವರ್‍ಕಂಡಿದ್ದ ಹೈಕಳು ಮಾತ್ರ ಅಯ್ನೋರ ಮಾಸ್ಲು ಬ್ಯಾಗಿನ ಮ್ಯಾಲೆ ಕಣ್ಣಾಕಿದ್ರು. ಅದ್ರಾಗೆನೋ ಅಂಜ್ನಕೊಪ್ಪು ಮಾಯ್ಲ ಮಾರಾಕಿತರ್‍ದ ಅದ್ದಾನೋ ಇದ್ದು ಅದ್ರಾಗ ನೋಡಿದ್ರೆ ಕಳ್ತಾನ ಆಗಿರೋ ಎಮ್ಮೆ, ಕಳವು ಮಾಡಿರೋ ಕಳ್ಳನು ಎಲ್ರೂನೂ ಸಿಕ್ಕೇಬಿಡ್ತಾರೆ ಅಂತ ತಮ್ಮ ಪಂಚೇಂದ್ರಿಯಗಳ್ನ ಕಣ್ಣಿನಾಗೆ ಐಕ್ಯ ಮಾಡ್ಕಿಂಡು ನೋಡ್ತಿದ್ರು.

ಅಸ್ಟರಲ್ಲಿ ಅಲ್ಲಿಗ್ಗೆ ಊರಿನ ನ್ಯಾಯ ಪಂಚಾಯ್ತಿ ಕಾಯಂಮೆಂಬ್ರು ಆದ ಐಡ್ಯದೋನು ಗನ ಗಂಬೀರವಾಗಿ ಬಂದ್ನು. ನ್ಯಾಯ ಯಾವುದಾದ್ರುವೆ ಸರಿ ಐಡ್ಯದೋನು ಪುಡ್ಕನೆ ಕೇಳೋ ತಲ್ಕಿಂದ್ರ ಪ್ರಸ್ನೆಗ್ಳ ನಿಜಾವನಿಜಗಳು ಬಟ್ಟಬಯಲು ಆಗೋವು. ಐಡ್ಯದೋನು ಬಂದೋನೆ ಅಯ್ನೋರ ಪಕ್ಕದಾಗ ಜಗುಲಿ ಮ್ಯಾಲೆ ಕುಂತ್ನು. ಇನ್ನೂ ಉಳಿದ ಊರಿನ ದೊಡ್ಡ ಮನ್ಸುರು ಬಂದ್ರು. ಅಯ್ನೋರು ಪೂಜ್ಯಕ ರಡಿ ಮಾಡ್ರಮ್ಮೆ ಅಂದ್ರು. ರಾವು ಕಾಲಬಂದು ಬುಡ್ತಾದೆ ಅನ್ನುತ್ತಿದ್ದಂಗೆ ಅಕ್ಕತಂಗಿ ಇಬ್ಬರು ಬಿರ್ ಬಿರ್‍ನೆ ಓಡಾಡಿ ಬಂದು ದೊಡ್ಡ ಕಂಚಿನ ತಣಿಗೆ, ಕಂಚಿನ ಚೆಂಬು, ಪೂಜಾ ಸಾಮಗ್ರಿ, ತೆಂಗಿನಕಾಯಿ ತಂದು ಇಟ್ರು. ಅಯ್ನೋರು ಯೆಲ್ಲವನ್ನು ದಿಟ್ಟಿಸಿನೋಡಿ ಉಬ್ಬುಗಂಟ್ಕಿದ್ರು. ಅವರ್‍ನ ಚೆನ್ನಾಗಿ ಓದಿಕಂಡಿದ್ದ ಸಾಕಪ್ಪನು 'ಒಂದು ಸೇರು ಅಕ್ಕಿ ತರ್‍ರಮ್ಮ ಒಂದು ಸೇರು' ಅಂದ್ನು. ಒಂದು ಸೇರು ಅಂತ ಇವ್ನ ಯಾಕ್ ಒತ್ತಿ ಒತ್ತಿ ಯೇಳ್ತಾನೊ ಅಂತ ಅಯ್ನೋರು ಗೊಣಗಿಕೊಂಡ್ರೂ ಜನಗಳು ಮಾತ್ರ ಯಾವುದೋ ಮಂತ್ರ ಜಪಿಸ್ತಾ ಅವ್ರೆ ಅಂತ ಇನ್ನೂ ಸೂಕ್ಷ್ಮ ಆದ್ರು.

ಅಕ್ಕಿ ಬಂತು ಆದ್ರೂ ಪೂಜೆ ಸುರುವಾಗ್ಲಿಲ್ಲ. ಅಯ್ನೋರು ಒಂದ್ಸಾರಿ ಆರು ನೋಡಿದ್ರು, ಬಂಗಿಯ ಉಯ್ಯಾಲೆನಾಗ ಜೀಕ್ತ ಇದ್ದ ಸಾಕಪ್ಪನ ಜೀವಕ ಅವ್ರ ಸೌಗೆ ನಾಟ್ಲಿಲ್ಲ. ಮಂತ್ರದಂಗೈ ಅವ್ನ ಬೈಕೊಂಡು ವಿಧಿ ಇಲ್ದೆ 'ಎಲೆ ಯಡಿಕೆ ಮ್ಯಾಲೆ ದಕ್ಷಿಣೆ ಇಡ್ರಮ್ಮ ಪೂಜೆನಾಗ ಲೋಪ ಆಗಬಾರ್‍ದು' ಅಂತ ಲೋಪಾನ ಆಡಿ ತೋರ್‍ಸಿದ್ರು. ಅದೇ ವ್ಯಾಳನಾಗ ಎಲ್ಲಿ ಅಬ್ಯಾಸದಂಗೆ ಎಂಟಾಣಿನೊ ನಾಲ್ಕಾಣಿನೊ ಇಟ್ಬುಡುತಾರೊ ಅನ್ನುವ ಬಲವಾದ ಗುಮಾನಿ ಬಂದು, 'ಒಂದತ್ತು ರೂಪಾಯ್ನ ಇಡ್ರಿ ಸಾಕು ಹಿ.. ಹಿ...' ಅಂತ ಮಕ್ದಾಗಿನ ಗಂಟ್ಗಳ್ನ ಬಿಚ್ಕಂಡು ನಗೆಯಾದ್ರು. 'ಅತ್ತು ರೂಪಾಯ್ನ!' ರಂಗಮ್ಮನೆದೆ ದಸಕ್ ಅಂತು. ಜನ್ರಿಗೂ ಐನೋರ್‍ದು ರವಸ್ಟು ಗಾತ್ಕನೇ ಅಂತ ಅನಿಸ್ತು. ಮನೆಯೊಳ್ಗೆ ವೋದ ರಂಗಮ್ಮನು ಪೂರ್ವಕಾಲದ ಕಬ್ಬಿಣ ಪೆಟ್ಗೇನ ತೆಗ್ದು ಇದ್ದ ಬದ್ದ ಚಿಲ್ರೇನ್ನೆಲ್ಲಾ ಕೂಡಿಸಿದ್ರು ಬರೀ ಆರೇ ರುಪಾಯಾಗಿ ದಿಕ್ಕು ತೋಚ್ದೆ ಬೀತಿಗೆ ಬಿದ್ಲು. ಅಕ್ಕನು ಸರ್‍ರನ ಬರದಿರೋದ್ನ ನೋಡಿ ಒಳಕ್ಕೆ ಬಂದ ರತ್ನಮ್ಮನಿಗೆ ಇಂಗಿಂಗೆ ಅಂದ್ಲು. 'ಯಂಟ್ರಾಣ್ ಸ್ವಾಮಿ ಹುಂಡ್ಗೇನಾಗಿರೋ ಮೊಕ್ಕಬಡಿ ದುಡ್ನ ಎತ್ತಿಕ್ಯ ಒಂದ್ಕೆರಡು ಆಮ್ಯಾಲೆ ಆಕಾನ' ಅಂದ್ಲು ರಂಗಮ್ಮನ್ಕ ವೋದ ಜೀವ ಬಂದಂಗಾಯ್ತು. ಸರೀಕರ ಮುಂದೆ ಅತ್ತು ರೂಪಾಯ್ಕ ಒಗೆಯಿಲ್ಲದೋಳು ಅನ್ನೊ ಅಪ್ವಾದ ತಪ್ಪಿದ್ಕೆ ಮನೆ ದ್ಯಾವರಿಗೆ ಸಾವಿರ ಸಾರಿ ಮೊಕ್ಕೆ ದಕ್ಷಣೆ ತಂದು ಪೂಜಕ್ಯ ಇಟ್ಲು ತಡವಾಗೋಯ್ತು ಅಂತ್ಲೆ ಅಯ್ನೋರು ಅಂತು ಶಾಸ್ತ್ರ ಸುರು ಮಾಡಿದ್ರು ಅಸ್ಟರಲ್ಲಿ ಊರಾಗೊಂದು ನರಪಿಕ್ಕೆ ಇಲ್ದಂಗೆ ಮ್ಹೊಲ್ಮನೆ ತಾವ ಜನ್ರು ದಂಡುಕಟ್ಟಿದಂಗೆ ನಿಂತಿದ್ರು.

ಅಯ್ನೋರು ಅಕ್ಕೀನ ಹರಡಿ ಅದರ್‍ಮೇಲೆ ಚಕ್ರ ಬರೆದ್ರು. ಮೇಲೆ ಕಂಚಿನ ತಣಿಗೆ ಇಟ್ರು, ಅದ್ಕೆ ನೀರ್‍ನ ತುಂಬ್ಸಿ ಏನೇನೊ ಮಂತ್ರ ಎಳ್ಕಂಡು ತೆಂಗಿನಕಾಯ್ನ ಒಡೆದ್ರು. ಆಮ್ಯಾಲೆ ಒಂದು ಈಳ್ಯದ ಎಲೆ ತಕ್ಕೊಂಡು ಅದರ ಮ್ಯಾಲೆ ಗಡ್ಡೆ ಕರ್ಪೂರಾನ ಅಂಟಿಸಿಟ್ಟು ತಣಿಗೇನಾಗ ತೆಪ್ಪದಂಗೆ ತೇಲಿ ಬಿಟ್ರು. ಮುಂದೆ ನಡೆಯೋದೆಲ್ಲಾ ದೇವ್ರ ಮಯ್ಮೆಯಿಂದ್ಲೆ ಅನ್ನೊಂಗೆ ಗಳಿಗೆ ದ್ಯಾನಸ್ಥರಾದ್ರು. ಜನಗಳು ಉಸಿರು ಬಿಗಿ ಇಡ್ಕಂಡು ನೋಡ್ತಿದಂತೆ ದಂಗಾದ್ರು. ತಣಿಗೆಯ ನೀರಿನ ಮ್ಯಾಲೆ ಎಲೆ ತೆಪ್ಪದಂಗೆ ಮುಂದ್ಮುಂದಕ್ಕೆ ಹೋಗ್ತಾ ಇತ್ತು. ಅವಾಗ ಅಯ್ನೋರು ಕಣ್ಣಬಿಟ್ರು ಅದ್ರ ಅರ್ಥಾನ ಒಡ್ಡಿಕ್ಕೆ ಹೇಳ್ಕಾ ತೊಡಗಿದ್ರು.

ಮೊದಲ್ನೇ ಮಾತಾಗಿ 'ಸವರಾತ್ರಿನಾಗ ಮನ್ಯಕ ಅಸ್ತಬಂದ್ನೆ ಮಾಡಿ ಕಳ್ತಾನ ಮಾಡವ್ರೆ. ಊರು ವಾಡೆ ಚೆನ್ನಾಗಿ ಗೊತ್ತಿರೋನೆ ಮಾಡಿರೊ ಕೆಲ್ಸ ಇದು' ಅಂದ್ರು. ಆ ಮಾತಿಗೆ

ಅಕ್ಕ ತಂಗಿಯೋರು ಹೌದ್ವದು ಅಂತ ತಲೆಯಾಡ್ಸಿ ಯಂಥ ನಿದ್ಯಾಗಿದ್ರು ಕಡ್ಡಿ ಸರ್ಕ್ ಅಂದ್ರೆ ನಮ್ಮ ಗ್ನೆಪ್ತಿಗೆ ಬರೋದು ಅಂತಾದ್ರಾಗ ರಾತ್ರಿ ಮನೆ ಬಾಕ್ಲು ತೆಗ್ದು ಯೆಮ್ಮೆ ಒಡದ್ರು ಎಚ್ಚರಾಗ್ಲಿಲ್ಲ ಅಂದ್ರೆ ಇದು ಮಾಟ್ದ ಮಯ್ಮೇನೇ ಇರಬೇಕು ಅಂದ್ಕಂಡ್ರು. 'ಮನೆ ವಳ್ಕೆ ಬಂದೋನು ಒಬ್ಬನೆ ಆದ್ರು ಊರಾಚೆ ಇನ್ನೊಬ್ಬು ಇದ್ದು ಮಾಲ್ಯ ಸಾಗಾಕ್ವನೆ' ಅಂತ ತಮ್ಮ ಎರಡ್ನೇ ಮಾತಾಗಂದ್ರು. ಈ ಮಾತು ಜನ್ರ ಕಿವಿಯಾಗ ಬಿಳ್ತಿದಂಗೆ ಎಲ್ರ ಮನಸ್ನಾಗು ಯಾಕೊ ಪಟ್ಲನೆ ಕಳ್ನು ಅನ್ನೋ ಸಂಗ್ತಿ ದಿಟವಾಯ್ತು. 'ಉತ್ತರ ದಿಕ್ಕಾಗ ಮೂರು ಮೈಲಿ ಮುಂದ್ಹೋಗಿ ತಿರ್ಗಿಂಡು ಪಶ್ಚಿಮ ದಿಕ್ನಾಗ ಐದು ಮೈಲಿ ಸಾಗ್ಯವ್ರೆ ಅಂದವ್ರೆ ಅಯ್ನೋರು ಹಿಂದು ಮುಂದು ಯೋಚ್ನೆ ಮಾಡ್ದೆ 'ಈಗ ವೊಂಟ್ರು ಬೈಲ್ ನರಸಾಪುರ್ತಾವ ಹಿಡ್ದಾಕಾಬೌದು' ಅಂದ್ಬುಟ್ರು. ಪೂಜೆ-ಪುನಸ್ಕಾರಗಳಾಗ ಯಾವಾಗ್ಲು ಗುಮಾನಿ ಇಟ್ಕಂಡಿರೊ ಐಡ್ಯದೋನು 'ಅಲ್ಲಾ ಸ್ವಾಮಿ ಆಡು ಅಗಲ್ನಾಗೆ ಕಳ್ಳರು ಮಾಲ್ನ ವೊಡ್ದಾರ?' ಅಂತ ಕೊಚೆನ್ ಮಾಡಿದ್ನು. ಅಯ್ನೋರ್ಕ ತಮ್ಮ ಆತ್ರದ ಮಾತು ಅರಿವಾಗಿ 'ಅದು ನಿಜವೆ ಶಾಸ್ತ್ರದಾಗ ವೋಗಿರೊ ದಾರಿ ಯೇಳಬೌದೆ ವೊರ್ತು ಟೆಂಕಿ ನಿಂತಿರೋ ಜಾಗ ಯೇಳ್ಕ ಬಾರ್ದ' ಅಂದ್ಬುಟ್ರು. 'ಜಾಸ್ತಿ ಮಾತ್ನಾಡಿದ್ರೆ ಐಡ್ಯದೋನು ಅಡ್ಡ ಬಾಯಾಕಿ ಮಾನ ಕಳೆದಾನು ಅನ್ನೋ ದಿಗ್ಲು ಅತ್ತಕಂಡು ಬ್ಯಾಗ್ನಿ ಜಾಗ ಕಾಲಿ ಮಾಡಾಕ ಅವಸ್ರ ಮಾಡಿದ್ರು. ಆದ್ರೆ ಇನ್ನು ಸುತ್ತಾ ಇರೋ ಕರ್ಪೂರದ ತೆಪ್ಪ ಅಯ್ನೋರ ಆತ್ರಾನ ತಡ್ದು ಆಕಿತ್ತು.

ರಂಗಮ್ನುಕ ತನ್ನ ಯೆಮ್ಮೆ ಕಳ್ತನ ಆಗ್ಯಾದೆ ಅನ್ನೋದು ದಿಟವಾಗಿ ಎಲ್ಲಿಲ್ದ ದುಕ್ಕ ವತ್ತರ್ಸಿಕಂಡು ಬಂತು. ಅತ್ತ ಅಯ್ನೋರು ಕರ್ಪೂರ ಆರಿದ್ದೆ ತಡ ಎಡೆ ಕೆಡ್ಸಿ ಅವಸ್ರ ಅವಸ್ರವಾಗಿ ಸಾಸ್ತ್ರಕ ಇಟ್ಟಿದ್ದ ಪದಾರ್ಥಗಳ್ನ ತಮ್ಮ ಬ್ಯಾಗಿನಲ್ಲಿ ಸೇರಿಸ್ತಾ ಮರತ್ವರಂಗೆ ಕಂಚು ಚೆಂಬ್ನು ತುರುಕೋದ್ನ ನೋಡ್ದ ಸಾಕಪ್ನು 'ಸ್ವಾಮೇ ಅದು ತೆಂಕಾಯಲ್ಲ ಚೆಂಬು' ಅಂದ್ಬುಟ್ನು. 'ಅರೆರೆ ಎಂಥ ಕೆಲ್ಸ ಆಗೋದು ಒಳ್ಳೆದು ಮಾಡ್ದೆ ಯತ್ನದೋ ಗ್ಯಾನದಾಗ' ಅಂತ ಅಯ್ನೋರು ಮಾತ್ಗೆ ಅಂದ್ರು ಸಾಕಪ್ಪನ ಮ್ಯಾಲೆ ಒಳಗೊಳಗೆ ಸಿಡಿಮಿಡಿಗೊಂಡ್ರು. 'ರಂಗಮ್ಮಾ ದೇವ್ರು ನಿನ್ನ ಬಾಗ್ದಾಗ ಅವ್ನೆ, ಯೆಮ್ಮೆ ಖಂಡಿತ ಪತ್ತ ಬೀಳ್ತಾದೆ.' ಅಂತ ತನಗೆ ಇಸ್ವಾಸ ಇಲ್ಲದಿರೊ ದನಿಯಾಗ ವಾಗ್ದಾನ ಕೊಟ್ಟು ಊರುದಾರಿ ಇಡ್ದುನು. ಬ್ಯಾಗ್ನ ವೊತ್ಕಂಡಿದ್ದ ಸಾಕಪ್ಪನು ಅಯ್ನೋರತಾವ ಬಟ್ಟೆಸಾರಾಯ್ಕ ಒಂದ್ರುಪಾಯಿ ಸಂಪಾದ್ಸೇಕು ಅಂತ ಯೇಚ್ನೆ ಮಾಡ್ಕಂಡು ಅವರ್ನ ಹಿಂದಾಡಿವೋದ್ನು.

ಅಯ್ನೋರು ಅತ್ತ ವೋದ ಮ್ಯಾಲೆ ಊರು ಪಂಚಾಯ್ತಿದಾರ್ರು, ನಡ್ದದನ್ನೆಲ್ಲಾ ತೂಕ ಮಾಡಿ ನೆನ್ನೆ ಊರ ಫಲ್ದಾಗ ಪಟ್ಲನು ತಿರ್ಗ್ತಾಯಿದ್ನು. ಇದು ಅವ್ನದೇ ಕಸಬ್ಬು ಅಂತ ತೀರ್ಮಾನ್ಕ ಬಂದ್ರು. ಇವ್ನ ಇಂಗೆ ಬುಟ್ರೆ ಊರಾಗ ಆರಂಬಮಾಡಾಕ ಒಂದ್ಗೊಡ್ಡು ಉಳಿಯಾಂಗಿಲ್ಲ ಅಂತ ದಿಗ್ಲು ಬಿದ್ದು 'ನೋಡ್ರೊ ನೋಡ್ರೊ ಅವ್ನು ಯತ್ತಾನ ಜಾಗಬಿಡಾಕ್ಮುಂದೆ, ಯಲ್ಲೆ ಇದ್ರು ಪತ್ತೆ ಮಾಡಿ ಇಡ್ಕಂಡು ಬಂದು ಚಾವುಡಿಕ ಕಟ್ಬರೊ' ಅಂತ ನ್ಯಾಯಸ್ತರು ಅಂದ್ರು. ವೋದ ವಾರವಸ್ಟೇ ಪಟ್ಲನ ಜತೆಗೆ ಕಳ್ಳಬಟ್ಟಿ ಇಚಾರ್ದಾಗ ಜಗಳ ಮಾಡ್ಕಂಡಿದ್ದ ಪೆರುಮಾಳಪ್ಪನ ಮಗ್ನು ಪಟ್ಲನ ಹಿಡಿಯೇ ಕೆಲ್ಸಕ್ಕೆ ತಾನೆ ಮುಂದಾಳಾದ್ನು. ಅವ್ನ ಜತ್ಗೆ ಇನ್ನೊಂದಸ್ಟು ಫಟಿಂಗರ್ನ ಊರ್ನೋರು ಕಳಿಸಿಕೊಟ್ರು. ಇಂಗೆ ಅತ್ತ ದೊಡ್ಡೋರು ರಾತ್ರಿಕ ಇಚಾರ್ಣೆ ಮಾಡಾನ ಅಂತ ಗಡುವು ಕಟ್ಬುತ್ತಿದ್ರೆ, ಇತ್ತ ಊರ ಐಕಳ ಕಣ್ಣಾಗಿನ್ನೂ ತೆಪ್ಪದ ಎಲೆ ಗಿರ್ರನೆ ತಿರ್ಗ್ತಲೇ ಇತ್ತು.

ದೀಪ್ದ ನೆರಳು

ವೊತ್ತು ನೆತ್ತಿಗೆ ಬಂದಂತೆ ಇಡೀ ಊರ್ಗೆ ಊರೇ ಎಮ್ಮೆ ಕಳ್ತನದ ಚಿಂತೆನಾಗ ಮುಣಗಿತ್ತು. ಜನ್ರ ಕುಂತ ಕಡೆನೆಲ್ಲಾ ಅದೇ ಸಂಗ್ತಿನಾ ನಮ್ರು ಹಾಕ್ತ ಇದ್ರು. ಅಂಥ ವಿಪತ್ನಾಗ ಕೂಡ ಮೂಲ್ಮನೆಯೊರ್ನಾಗ್ಲಿ ಊರಿನೋರ್ನಾಗ್ಲಿ ಯಾವುದೇ ಸಂದುಕಟ್ಟನಾಗ ಗ್ನೆಪ್ತಿಗೆ ಬರ್ದೆ ಹೋದ್ವನು ಒಬ್ನು ಊರ ಬಾಕ್ಲಾಗ ಬಂದು ನಿಂತ್ನು. ಊರಾಗಿನ ಒಂದಿಡಿ ಹಿರೀಕರು ಮಾತ್ರ ಅವ್ನನ ಪುಟ್ಟೇಗೌಡ ಅಂತ ಕರೆಯೋರು. ಆದ್ರೆ ಸುತ್ತಮುತ್ತಲ ಪಾಳ್ಯಪಟ್ಟೇ ಅವ್ನ ಪೂಟ್ ಲಾಯರು ಅಂತ್ಲೇ ಕೂಗೋರು. ಅದ್ಕ ತಕ್ಕಂಗೆ ಓಟ್ಲು ಲೀಸ್ಟನಾಗ ಪುಟ್ಟೇಗೌಡ ಉರುಪ್ ಪೂಟ್ ಲಾಯರ್ ಅಂತ್ಲೇ ಅವನ ಹೆಸರು ನಮೂದು ಆಗಿರೋದು. ದಿಕ್ಕು ಮುಕ್ಕು ಇಲ್ದೆ ಬಿಸ್ಲಿಕ ಬೆಂದು ಮಳೆಕೆ ನೆಂದು ಲಂಗು ಲಗಾಮಿಲ್ದೆ ಬೆಳೆದೋನು ಪೂಟ್ ಲಾಯ್ರು. ರಾಜಕೀಯ ಪುಡಾರಿಗಳ್ತಾವ ನ್ಯಾಸ್ತ ಇಟ್ಕಂಡು ಸುಳ್ಳು ಕೇಸು ಆಕ್ಸೋದ್ರಲ್ಲಿ ಮೂಗರ್ಜಿ ಬರೆಯೋದ್ರಲ್ಲಿ ಅರ್ಥಂಬರ್ಥ 'ಲಾ' ಪಾಯಿಂಟಗಳ್ನ ಹಾಕಿ ಜನಗಳ್ನ ಬೆದ್ರಸೋದ್ರಲ್ಲಿ ತನ್ಗೆ ಬಂದಿರೋ ಅಡ್ಡ ಹೆಸ್ರನ ಹತ್ತೂಜನ ಒಪ್ಪುವಂಗೆ ನಿಲ್ಸಕಂಡಿದ್ದ.

ಊರ್ಕ ಅವೇಳೆನಾಗ ಬಂದಿದ್ದ ಅವ್ನ ಅವ್ತಾರ ನೋಡಿದ್ರೆ ರಾತ್ರಿ ಕಣ್ಣು ಮ್ಯಾಲೆ ರೆಪ್ಪೆ ಹಾಕೋದ್ನಂಗೆ ಕಾಣ್ತಿದ್ದ. ನಾಟ್ಕ ಗೀಟ್ಕ ಅಂದ್ರೆ ಏಳು ಖಂಡ್ಗ ಉಚ್ಚು. ನೆನ್ನೇನು ಅಸ್ಟೇ ತೇರಹಳ್ಳಿಯೋರು ಯಾರು ಕರೀದಿದ್ರೂ ತಾನೆ ಹೋಗಿ ನಾಟ್ಕದಾಗ ಯಾಜ್ಮಾನ್ಕೆ ನಡಿಸಿದ್ದ. ಮುಂಗೋಳಿ ಕೂಗೊ ವೊತ್ಕ ನಾಟ್ಕ ಮುಗ್ದು ಮಂಗಳಾರ್ತಿ ಆದ ಮ್ಯಾಲೆ, ಅಲ್ಲೇ ನಾಟ್ಕದ ಡೇರಾದ ಮೊಡಕ್ನಾಗ ಬಿದ್ದುಕಂಡು ನಿದ್ದೆ ವೋಗಿದ್ನು. ವೊತ್ತು ಹತ್ತು ಬಾರು ಮೇಲ್ಕೆ ಬಂದು ಸೂರಿಣ್ಣು ಬಲ್ತು ಬಿಸ್ಲು ಮೈ ಕೈಕ ಚುರ್ಕು ಮುಟ್ಟಿಸಿದ್ದ ಮ್ಯಾಲೆ ಕಣ್ಣು ಬುಟ್ರೆ, ಡೇರಾನ ಯಾವಾಗ್ಲೊ ಬಿಚ್ಕಂಡು ಹೋಗಿ ಬಿಟ್ಟಿದ್ರು. ಅರೆರೆ ಎಸ್ಟೊತ್ತು ಆಗಿಬುಡ್ತು ಅಂಥ ಎದ್ದವ್ನ ಕಿವಿಗೆ ಬನಹಳ್ಳಿನಾಗ ಯೆಮ್ಮೆ ಕಳುವಾದ ಸುದ್ದಿ ಬಿತ್ತು.



ಊರ್ಗೆ ಬಂದೋನೇ ಗತ್ತನಾಗ ಮೂಲ್ಮನೆ ತಾವ್ಕ ಬಂದ್ನು. ಹಟ್ಟಿನಾಗ ಬೆಳಗ್ನಿಂದ ಗಿಜಗುಡುತ್ತಿದ್ದ ಜನಗಳು ಕರಗಿ ಎಲ್ಲೊ ಒಂದಸ್ಟು ಮಾತ್ರ ಇದ್ರು. ಮುದುಕಿ ಮಾತ್ನಾಡಕ್ಕಾಗ್ದೆ ಒದ್ದಾಡುತ್ತಿದ್ಲು. ರತ್ನಮ್ಮ ಎಮ್ಮೆ ಗೊತ್ನ ನೋಡ್ಕಂಡು ಸೋಕಸ್ತಿದ್ಲು.

ಊರ್ಗೆ ಬಂದೋನೇ ಗತ್ತನಾಗ ಮೂಲ್ಮನೆ ತಾವ್ಕ ಬಂದ್ನು. ಹಟ್ಟಿನಾಗ ಬೆಳಗ್ನಿಂದ ಗಿಜಗುಡುತ್ತಿದ್ದ ಜನಗಳು ಕರಗಿ ಎಲ್ಲೊ ಒಂದಸ್ಟು ಮಾತ್ರ ಇದ್ರು. ಮುದುಕಿ ಮಾತ್ನಾಡಕ್ಕಾಗ್ದೆ ಒದ್ದಾಡುತ್ತಿದ್ಲು. ರತ್ನಮ್ಮ ಎಮ್ಮೆ ಗೊತ್ನ ನೋಡ್ಕಂಡು ಸೋಕಸ್ತಿದ್ಲು. ಬಾಕ್ಲ ದಾಲ್ಬಂದ್ರ ತಾವ ಕುಂತಿದ್ದ ರಂಗಮ್ಮನ ಸುತ್ತ ಕುಂತ್ಕಂಡಿರೋ ಯಂಗಸ್ರು, ಆಯಮ್ಮನ ನೋವ್ನ ತಮ್ಮ ಕಣ್ಣಗಳಾಗ ತುಳ್ಕುಸಾಕ ಯಥಾಸಕ್ತಿ ಯತ್ನ ಮಾಡ್ತಿದ್ದರು. ರಂಗಮ್ಮನು ತನ್ನ ಹೀನಾಯವಾದ ಅಣೆಬರವನ್ನ ನಿಂದಿಸ್ಕಂತ್ತಿದ್ಲು. ಮಗ್ನು ಊರ ಬಾಕ್ಲತಾವ ಇರೊ ಊವರ್ಸಿ ಮರದ ಬುಡ್ದಾಗ ವಗ್ಯೆರೆ ಹುಡುಗ್ರ ಜತೆಗೆನೊ ಮಾತುಕತೆ ಆಡುತ್ತಿದ್ನು. ಅಲ್ಲಿಗೆ ಬಿಟ್ಟ ಬಾಣದಂಗೆ ಬಂದ ಪುಟ್ ಲಾಯರ್ ಜಬರ್ದಸ್ತಾಗಿ 'ಇದು ಹೆಂಗಾಯ್ತ' ಎಂದ್ನು. ಅವ್ನ ಮಾತ್ಗೆ ಯಾರು ಯಾಕೊ ಕಿಮಕ್ ಅನ್ನಿಲ್ಲ. ಅವ್ನ ಹೆಂಡ್ತಿಯಾದ ರಂಗಮ್ಮನು ಕೂಡ ಕ್ಯಾರೆ ಮಾಡ್ಲಿಲ್ಲ. ಎಲ್ರೂ ಗಪ್ ಚಿಪ್ ಆಗಿದ್ದು ನೋಡಿ ಪೂಟ್ ಲಾಯರ್ ಗೆ ಅವಮಾನ ಅನ್ನಿಸಿ ಕ್ವಾಪ ಅನ್ನೋದು ಬಿರ್ನೆ ಬಂತು. 'ಯಾರ್ ಮೈ ಮೇಲೆನಾದ್ರು ಕಿಂಚಿತ್ ಗ್ಯಾನ ಇದ್ರೆ ತಾನೆ ? ಮನೆ ಗಂಡಸ್ನು ಬಂದು ಕೇಳ್ತದ್ರೆ ಯೇನು ನಡೀತು ಅಂತ ಬಾಯಿಬಿಡ್ತೊವೇಸ್ಟುನದಿರ್ ಬ್ಯಾಡ ಈ ಮುಂಡಿಗಳ್ಕ ಇವನ್ಮನ್ ಜಾತಿನೇ...' ಅಂದ್ನು. ಆ ಮಾತು ಮುಗಿಯೋದ್ರೊಳಗೆ 'ಎಯ್ ಆನಂದಾ ಬಂದ ದಾರಿ ಹಿಡ್ಕಂಡು ಮರ್ಯಾದಿನಾಗ ಹೋಗ್ತಾನೊ ಇಲ್ಲೊ ಕೇಳೋ? ಮನೆ ಗಂಡ್ಸಂತೆ ಗಂಡ್ಸು ಇವೊತ್ತು ಮನೆ ಮಠ್ದಮ್ಯಾಲೆ ಇದ್ಕಿದ್ದಂಗೆ ಅಪ್ಯಕಾರ ಗುದ್ಕಿಂಡು ಬಂದ್ಬುಡ್ತೇನೊ ಇವ್ ಸೂಲ್ಲಾರ' ರಂಗಮ್ಮನು ಹೊಟ್ಟೆ ಉರುದೋಗಿ ರೇಗಿದ್ಲು. ಅಸ್ಟರಲ್ಲಿ ರತ್ನಮ್ಮನು ಪೊರ್ಕೆ ಕೈಯಾಗಿಡ್ಕಂಡು ಬಾಕ್ಲಾಗ ಕಾಣ್ಸಿಕೊಂಡ್ಲು. ಇಲ್ಲೀಗಂಟ ಯಾವೊತ್ತು ಕೂಡ ಗಂಡ್ನಕ ಇಂಗೆ ಮಂಗಳಾರ್ತಿ ಮಾಡ್ದಿದ್ದ ರಂಗಮ್ಮನ ತನ್ನ ಇವೊತ್ನ ಕಸ್ಟಕ ಇವ್ನೆ ಕಾರ್ಣ ಅನ್ನೋ ದುಕ್ದಾಗ ಸೈರಣೆ ಕಳ್ಕಂಡಿದ್ಲು.

ಊರ ಜನಗಳ ಮುಂದೆ ಇಂಗೆ ಮಾನ ಮುಕ್ಕಾಗಬೌದು ಅನ್ನೋ ಯೋಚ್ನೆ ಮಾಡ್ದೇನೆ, ಹಿಂದು ಮುಂದುನೋಡ್ದೆ ದುಡ್ಕಿದ್ನು. ನಾದ್ನಿ ಬಾಕ್ಲಾಗ ಪೊರ್ಕೆ ತೋರ್ಸಿದ್ಕಿಂತ್ಲೂ ಗಾಸಿ ಉಂಟು ಮಾಡಿದ್ದು ಕಟ್ಕಂಡೆಂಡ್ತಿ ಬಾಯಿಂದ ಬಂದ 'ಗಂಡ್ಸಂತೆ ಗಂಡ್ಸು' ಅನ್ನೋವಂಥ ವಾಕ್ಯ ನ್ಯಾರವಾಗಿ ಮರ್ಮಕ ನಾಟ್ಕಂಡಿತ್ತು. ಉಕ್ಕಿ ಬರ್ತಿರೋ ರುದ್ರ ಕ್ವಾಪನ ಹದ್ದುಬಸ್ತನಾಗ ಮಡಗ್ಲು ಒದ್ದಾಡ್ತಾ ನೆಲ್ಕ ಬಿದ್ರು ಮೀಸೆ ಮಣ್ಣಾಗದ ಜಟ್ಟಿತರ ಈ ಲೌಡಿಗಳ್ಕ ಆಗಬೌದು ನೀವೆ ನೋಡಿದ್ರಲ್ಲ ಇಂಥ ರಾಕಾಸಿಗಳ್ತಾವ ವೊತ್ತು ಬರೋದುಂಟ? ಮೊರ್ಲಾಗ ಕಟ್ಟಿಕಂಡಿರೊ ಪಾಪ ಎಲ್ಲೊಯ್ತದೆ' ಅನ್ನುತ್ತಾ ಯಾವುದೊ ಮಾತು ನಾಲ್ಗೆಯಿಂದ ನುಗ್ಕಂಡು ಬರ್ತಾಯಿದ್ರು, ಆಡಿದ್ರೆಲ್ಲಿ ನನ್ನ ಮಾನಾನೇ ಮುಕ್ಕಾಯ್ತದೆ ಅನ್ನೋ ದಿಗ್ಲನಾಗ, ಇಸ್ಟಂಗೆ ಮಾತುಗಳ್ನ ನುಂಗ್ಕಂಡು ಜಾಗ ಖಾಲಿ ಮಾಡಿದ್ನು.

ನೆತ್ತಿ ಮ್ಯಾಲೆ ಉರಿಯೋ ಸೂರಿಣ್ಣು ಪಿತ್ತಾ ಕರಗೋವಂಗೆ ಸುಡ್ತಿದ್ದು. ಅವನು ಅತ್‌ವೋದಮ್ಯಾಲೆ ಯಾಕೊ ರಂಗಮ್ಮನ್ಕ ದುಕ್ಕ ಒತ್ತರಿಸ್ಕಂಡು ಬಂತು ಕಣ್ಣೀರು ಹಾಕ್ಬಾರ್ದು ಅಂತ ಏನೆಲ್ಲ ಯತ್ನ ಮಾಡಿದ್ರೂ ತಡಿಯಾಕ ಆಗ್ಲಿಲ್ಲ.

ರಂಗಮ್ಮು ರತ್ನಮ್ಮು ಇನ್ನು ನ್ಯಾದ್ರು ಮಕ್ಕಳಾಗಿದ್ದಾಗ್ಲೆ ಅವರಪ್ಪು ಸತ್ತು ಮನ್ಕೆ ಗಂಡು ದಿಕ್ಕಿಲ್ದಂಗಾಗಿತ್ತು. ಆಯ್ಕಟ್ಟಿನ ಪೂರ್ವಿಕರ ಆಸ್ತಿಯೇನೋ ಮಾಮೇರಿ ಇತ್ತು. ಆವಾಗ್ಲೆ ದಾಯಾದಿ ನೀಲಕಂಟೇಗೌಡ್ನ ಕೆಟ್ಟಕಣ್ಣು ಆಸ್ತಿ ಮ್ಯಾಲೆ ಬಿದ್ದಿತ್ತು. ರಂಗಮ್ಮ ತಾಯಿ ತಿಮ್ಮಮ್ಮಣ್ಣಿ ಗಟ್ಟಿಗ್ತಿಯಾದ್ರು, ನಾಜೋಕಿನ ಹೆಂಗ್ಸಲ್ಲ. ಬಿನ್ನಾಣದ ಮಾತುಗಳ್ನ ಬಿರ್‍ನೆ ಬೆರಗಾಗ್ತಿದ್ಲು. ಅವಳ್ನ ಅಮಾಯಕಳ್ನ ಮಾಡಿ ಆಸ್ತಿ ವಡಿದುಬಿಡಬೇಕು ಅಂತ ಗೌಡ್ನು ಯೇಚ್ನೆ ಮಾಡಿದ್ನು. ಆದ್ರೆ ಮಂಜೇಗೌಡ್ನ ನ್ಯಾಸ್ತಗಾರ್‍ರಾದ ಶ್ಯಾನಬೋಗ್ರು ಸುಬ್ಬಣ್ಣೋರ್ಕ ಯೆಂಗೋ ಈ ಕುತಂತ್ರ ಪತ್ತೆ ಬಿದ್ದು ತಕ್ಷಣಾನೆ ತಿಮ್ಮಮ್ಮಣ್ಣಿನ ಕರೆಬಿಟ್ಕಂಡು ಉಷಾರು ಏಳಿಕಳ್ಸಿದ್ರು. ಅಂಗಾಗಿ ಮೂಲ್ಮನೆ ಆಸ್ತಿ ಇನ್ನೂ ಗೌಡ್ನ ಕೈವಶವಾಗ್ದೆ ಉಳ್ಕಂಡು ಬಂದಿತ್ತು. ತನ್ನ ಮಕ್ಳು ಬೆಳ್ದು ಕೈಯಿಗೆ ಬಂದ ಮ್ಯಾಲೆ, ಯಾರ್‍ನಾದ್ರೂ ಒಳ್ಳೆ ವಂಶಸ್ಥನ್ನ ಮನೆ ಆಳೀತನಕ್ಕೆ ತಂದಿಟ್ಕಂಡು ಈ ಮನ್ಯಾಗೆ ದೀಪ ಮಡಗ್ಬೇಕು ಅಂತ ತಿಮ್ಮಮ್ಮಣ್ಣಿ ಅಗಲು ರಾತ್ರಿ ತಪಸು ಮಾಡ್ತಿದ್ಲು.

ಇಂಗೇ ಕಾಲಾನೂ ಸರೀತು. ರಂಗಮ್ಮು ವಯಸ್ಸಗ ಬಂದ್ಲು. ತಿಮ್ಮಮ್ಮಣ್ಣಿ ತನಗೆ ಬೇಕಾದೋರ್‍ಗೆ ಮಗ್ಳಗೊಂದು ಗಂಡು ಪತ್ತೆ ಮಾಡೋವಂಗೆ ಕೇಳ್ಕಂಡವ್ಳೆ ಅನ್ನೊ ಸುದ್ದಿ ನೀಲಕಂಟೇಗೌಡ್ನ ಕಿವ್ಯಾಗ ಬಿದ್ದು ಚುರುಕಾದ್ನು. ಯಾರಾದ್ರೂ ವಳ್ಳೆ ಉಡುಗ್ನು ಆ ಮನಿಕ ಅಳಿಯಾನಾಗಿ ಬಂದ್ರೆ ಕೆಲ್ಸ ಕೆಟ್ಟೋಯ್ತದೆ ಅಂತ ಅನ್ಕಂಡು ತಾನೇ ತಿಮ್ಮಮ್ಮಣ್ಣಿನ ಮನೆಗೆ ಕರೆಬುಡ್ಸಕಂಡು 'ನಮ್ಮನೆ ಮಕ್ಳು ಬ್ಯಾರೆ ಅಲ್ಲ ನಿಮ್ಮನೆ ಮಕ್ಳು ಬ್ಯಾರೆ ಅಲ್ಲ' ನಾನೇ ರಂಗಮ್ಮನ್ಕ ಗಂಡು ವುಡ್ಕಿ ಲಗ್ನ ಮಾಡ್ತಿನಿ ಅಂತ ಮಾಯ್ದ ಮಾತೇಳಿ ನಂಬಿಸಿದ್ನು. ವುಟ್ಟಿದಾಗ್ನಿಂಕ ಕಣ್ಣೀರಾಗೆ ಕೈ ತೊಳ್ದಿದ್ದ ರಂಗಮ್ಮುನ್ನ ಮದ್ವೆ ಆದ ಮ್ಯಾಲೆ ನಸೀಬು ಸರಿವೋಗ್ಬವುದು ಅಂತ ಒಂದು ಆಸೆ ಇತ್ತು. ಮದ್ವೆ ಮಾತು ಗ್ನಿಪ್ತಿಗೆ ಬಂದ್ರ ಸಾಕು ರಂಗಮ್ಮನ ಒಟ್ಟಾಗ ಏಳುಬಂಡಿ ಕಿಚ್ಚು ಬಿದ್ದಂಗಾತದೆ. ಮೂಗ ಜೀವದಂತ ತಾಯಿ ತಿಮ್ಮಮ್ಮನ್ಕ ಮಾತ್ನಾಗ ಮಂಕು ಬೂದಿ ಎರಚಿ ರಾತ್ರೋ ರಾತ್ರಿ ಅಂತರ್‍ಗಂಗೆ ಬೆಟ್ಟದಾಗ ದಿಕ್ಕು ಮುಕ್ಕಿಲ್ದ ತಿರಬೋಕಿ ಪೂಟ್ ಲಾಯರ್‍ನ ಕೈಯಾಗ ತಾಳಿ ಕಟ್ಸಿದ್ನು.

ಗೌಡ್ನಕ ಆಸ್ತಿ ಮ್ಯಾಲೆ ಕಣ್ಣದೆ ಅನ್ನೋ ಸಂಗ್ತಿ ರಂಗಮ್ಮುನ್ಕ ತಿಳ್ದಿತ್ತಾದ್ರು ಇಂಗೆ ನಡುನೀರ್‍ನಗ ಕತ್‌ಕೊಯ್ಯುವಸ್ಟು ವೈಯಾಗ ನೆತ್ತರಿಲ್ಲೋನು ಅನ್ನೊದು ಗೊತ್ತಿರ್‍ಲಿಲ್ಲ. ಆ ರಾತ್ರಿ ಲಗ್ನ ಪೀಟ್ದ ಮ್ಯಾಲೆ ಪೂಟ್ ಲಾಯ್ರೇ ಗಂಡು ಅಂತ ಗೊತ್ತಾಗಿದ್ದೇ ಶಿವಗಂಗೆ ದೇವಸ್ಥಾನದಿಂದ ಕತ್ಲನಾಗೆ ಓಡೋಗಿದ್ಲು. ಆದ್ರೆ ಆ ರಾಕಸ್ನು ಬಿಟ್ನಾನ, ಗಳಿಗೆನಾಗ ಇಡ್ಕಂಬಂದು ಕಟ್ಟೋ ತಾಳಿ ಅಂತ ನೆತ್ತಿ ಮ್ಯಾಲೆ ಬಂಡೆ ಎಳೆದಿದ್ನು. ಅವತ್ತೇ ಪ್ರಾಣ ತಕ್ಕಂಬೇಕು ಅಂತ ರಂಗಮ್ಮನ್ಕ ಅನ್ಸಿಬಿಟ್ಟಿತ್ತು. ಆದ್ರೆ ರಾತ್ರಿ ಪೂರ ತಾಯಿ ತಿಮ್ಮಮ್ಮಣ್ಣಿ ತಂಗಿ, ರತ್ನಮ್ಮು ತಮ್ಮ ಕಣ್ಣುಗಳಾಗ ದೀಪ ಉರ್ಸಿದ್ರು. ಆಸ್ತಿ ಮ್ಯಾಲಿನ ಬ್ರಾಂತಿಗಾಗಿ ಪ್ರಾಣ ತೆಗೆಯೋದಿಕ್ಕಿಂತ ದೊಡ್ಡ ಅನಾವುತಾನ ಕಾಸಸ್ಟು ಕರುಣಿಲ್ದಿರೋ ಗೌಡ್ನು ಮಾಡಿದ್ನು. ಆ ರಾತ್ರಿ ತನ್ಗೆ ಯೆಸ್ಟು ಸಾಧ್ಯನೊ ಅಸ್ಟು ಅತ್ತ ಮ್ಯಾಲೆ ಇನ್ನೂ ಅಳಾಕ ವೋದ್ರೆ ಕಣ್ಣಾಗ ನೀರೆ ಬಂದಿರ್‍ಲಿಲ್ಲ. ಇಂಗೆ ಕಣ್ಣಾಗ ನೀರು ಇಮ್ರುತಾ ಇದ್ದಂಗೆ ಮನಸ್ಸು ಗಟ್ಟಿ ಬದ್ರಾಗಿತ್ತು. ಇದೇನು ದೇವ್ರ ಕೊಟ್ಟ ಶಾಪ ಅಲ್ಲ ಅಂತ ತೀರ್ಮಾನಿಸ್ಕಂಡು ಕೈ ತೋರಿಸಿದ ಬೆರಳ್ನಾಗೆ ಕಣ್ಣು ಚುಚ್ಬೇಕು ಅಂತ ಮನಸ್ಸು ಮಾಡಿದ್ಲು. ಪೂಟ್ ಲಾಯರ್‍ನ ನಾಮರ್ದ ಮಾಡಿ ಅವನ್ನ ಅಡ್ಡ ಇಕ್ಕಂಡು ಆಸ್ತಿ ವಡಿಬೇಕು ಅಂತ ದಾಯಾದಿಗ್ಳು ತಂತ್ರ ಮಾಡವ ಅನ್ನೋದು ರಂಗಮ್ಮನ ಅಂತರಾತ್ಮಕ್ಕೆ ಒಳ್ದಿದ್ದೇ ಅದ್ಯಾವ ದೈವದ ಬಲವೋ ಏನೋ ರಂಗಮ್ಮನ ಎದೆಯಾಗ ಒಂದು ಗಟ್ಟಿ ಆಟವು ವುಟ್ಕಂತು. ಪೂಟ್ ಲಾಯರ್‍ನೆ ಗಂಡ್ನು ಅಂತ ವಪ್ಗೊಂಡು, ಅವನ ಸಂಸಾರ ಮಾಡಿ, ಅವ್ನ ವಂಪು ವಕ್ರಗಳ್ನೆಲ್ಲಾ ನ್ಯಾರ ಮಾಡಿ ಆ ದ್ರೋಹಿಗಳ್ಕ ತಲೆಮ್ಯಾಲೆ ಒಡದಂಗೆ ಬದುಕ್ಬೇಕು ಅಂತ ಅಂದ್ಕಂಡ್ಲು. ಪೂಟ್ ಲಾಯರ್‍ನ ಮನೆಕ್ಯ ಕರೇ ಬುಡ್ಸಿ ತನ್ನ ದಾರಿಗೂ ತಂದ್ಕಂಡಿದ್ಲು.

ಊರಿಗೆ ಊರೇ ರಂಗಮ್ಮನ ಸಂಸಾರ ನೋಡಿ ಬೆರಗಾಗಿದ್ರೆ, ಗೌಡ್ನು ಮಾತ್ರ ಮೊದ್ಲಕೆ ಮೋಸಾಯ್ತಲ್ಲ ಅಂತ ವೊಟ್ಟೆ ಉರ್‍ಕಂತಿದ್ನು.

ಊರಿಗೆ ಊರೇ ರಂಗಮ್ಮನ ಸಂಸಾರ ನೋಡಿ ಬೆರಗಾಗಿದ್ರೆ, ಗೌಡ್ನು ಮಾತ್ರ ಮೊದ್ಲಕೆ ಮೋಸಾಯ್ತಲ್ಲ ಅಂತ ವೊಟ್ಟೆ ಉರ್‍ಕಂತಿದ್ನು. ಪೂಟ್ ಲಾಯರ್ನು ಯೆಂಡ್ತಿಗೆ ಮಾತು ಕೊಟ್ಟಂಗೇ ತನ್ನ ಕಾಲಗಳಾಗ್ನಿ ಚಕ್ರಾನ ಮುರ್‍ಕಂಡು ಇದ್ದುಬುಟ್ನು. ರಂಗಮ್ಮನ್ಕ ಅವನ್ದು ರವಸ್ಟು ಮಾತು ಜಾಸ್ತಿ ಅನ್ನಿದ್ರು ಉಳಿದಂಗೆ ಐಬೇನು ಕಂಡಿರ್‍ಲಿಲ್ಲ. ಮಾತ್ನಂಗೆನೆ ಆಸ್ಗೆನಾಗೂ ಅವ್ನು ಗಟ್ಟಿಗನಾಗೇ ಇದ್ನು. ಆದ್ರೆ ಮದುವ್ಯಾಗಿ ವರ್ಸಗಳು ಕಳುದ್ರೂ ತಿಂಗ್ಳೂ ತಿಂಗ್ಳು ಮೈಯಾಗ್ನಿಂಕ ಅರದೋಗೋ ಜೀವದ್ರವಾನ ಕಂಡು ಒಳಗೊಳಗೆ ದಿಗಿಲುಬಿದ್ಲು. ತಿಮ್ಮಮ್ಮಣ್ಣಿ ಕಂಡ ಕಂಡ ದೇವರ್‍ಗೆಲ್ಲಾ ಮಕ್ಕುಬಡಿ ಮಾಡ್ಕಂಡು ಮನ್ನೊಂದು ಮೊಳಕೆ ಆದ್ರೆ ಸಾಕು ಅಂತ ಕೊರಗ್ತಿದ್ಲು. ತಂಗಿ ರತ್ನಮ್ಮನಾದ್ರೆ ಅಕ್ಕನ ಮದ್ವ್ಯಾಗ ನಡೆದ ದಗ–ಮೋಸಾನ್ನೋಡಿ ರೋಸೋಗಿ ಬಿಲ್ ಕುಲ್ ಈ ಜನುಮ್ಕ ಮದ್ವೆ ಬ್ಯಾಡ ಅಂತಂದ್ಲು.

ರಂಗಮ್ಮುನ್ಕ ಈಗ್ಲು ಚೆನ್ನಾಗಿ ಗೆಪ್ತಿ ಅದೆ. ಮಕ್ಕಳ ಮಾತು ಬಂದಾಗೆಲ್ಲ ಗಂಡ್ನ ಮನಸ್ಸು ಯಾಕೋ ಉಳ್ಳಗಾಗೋದನ್ನ, ಮಕಕೊಟ್ಟು ಮಾತಾಡ್ದೆ ಇರೋದನ್ನ ಕಂಡಿದ್ಲು. ಜನ ಕೂಡ ಹಿಂದ್ನಿಂದ ಬಂಜೆ ಅಂದ ಮಾತ್ನೂ ಸೈತ ಸೈರಣೆಗೆ ತಕ್ಕಂಡ್ಲು. ಆದ್ರೆ ಅಂತ ದಿನಗಳಲ್ಲೆ ಇರಬೌದ ರತ್ನಮ್ಮನ್ನ ನೀಲಕಂಟೇ ಗೌಡ್ನ ಸೊಸೆಗಳ್ಕ ಕಸ ತಳ್ಳೊ ಇಚಾರದಾಗ ತಗ್ರಾಲು ಬಂದು ಊರ ಜನರ ಮುಂದೇನೆ 'ಮನ್ಯಾಗೆ ಒಂದು ಮೋಸುವುಟ್ಟದ್ರೆ ಇವ್ರ ದವಲತ್ತು ಇನ್ನೆಸ್ಟಿರೋದೊ ? ಸುಳಿಯಾರ್‍ದ ವಂಸ' ಅಂತ ಶಾಪ್ನೆ ಆಕಿದ್ರು. ಆ ಮಾತಿಗೆ ರಂಗಮ್ಮ ಗರ್ಬಾನೇ ಕತ್ತರಿಸ್ದಂಗಾಗಿತ್ತು. ಮುಂದೆ ಏನಾಯ್ತೊ ಏನೋ ರಂಗಮ್ಮು ತಾನು ತಾಯಾಗ್ಲೇಬೇಕು ಅನ್ನೊ ಅಟಕ್ ಬಂದ್ಲು. ಅಂದ್ಕಂಡಂಗೇನೆ ವರ್ಸ ತುಂಬೋದ್ರೊಳ್ಗೆ ತಾಯೀನೂ ಆದ್ಲು.

ಯಂಡ್ರು ಬಸ್ರಿ ಅಂತ ಗೊತ್ತಾಗಿದ್ದೇ ಪೂಟ್ ಲಾಯರ್ ಮನ್ಸು ಮುರದೋಗಿತ್ತು. ಮಗುವಾಗಿ ಅದು ದೊಡ್ಡೂ ಆದಂಗೆ ಪೂಟ್ ಲಾಯ್ರು ವೊದಲ್ನಂಗಾದ್ನು. ಅವುನ್ನ ಕೈಯಾಗೆ ಇಟ್ಕಂಬೇಕು ಅಂತ ರಂಗಮ್ಮು ತಾನು ಕಲ್ತ ಇದ್ದೆನೆಲ್ಲ ಕರ್ಚು ಮಾಡಿದ್ರೂ ಕಾಡಿ ಆಕ್ಕಳ್ಳೊ ಯೆತ್ನನ್ನ ಎಸ್ಟಂಥಾ ಪಳಗಾಸಾಯ್ತದೆ. ಸರಿ ಅಣೆಬರ ಇದ್ದಂಗಾಗ್ಲಿ ಅಂಥ ಆಮ್ಯಾಲೆ ಕ್ಯಾರೆ ಅನ್ದೇ ಬಿಟ್ಟಬಿಟ್ಟಿದ್ಲು. ಮನೆ ಸೂತ್ರಾನ ಕೈಯಾಗ ತಕ್ಕಂಡು, ಮಗ್ನ ಬದುಕ್ನ ನ್ಯಾರ ಮಾಡ್ಬೇಕು ಅಂತ ಅಗಲು ರಾತ್ರಿ ದುಡೀತಿದ್ಲು. ಪೂಟ್‌ಲಾಯ್ರು ಕೈಬಿಟ್ಟು ವೋದ್ರು, ರಂಗಮ್ಮನ್ಕ ಮನೆ ದ್ಯಾವ್ರಂತ ಕರಿಯಮ್ಮೆ ಆಸ್ರೆ ಇದ್ದೇ ಇತ್ತು. ಅದು ಒಂದು ಸಾರಿ ಈದ್ರೆ ಮೂರು ವರ್ಸ ಕರೆಯೋದು. ಅದ್ರ ಆಲು ತುಪ್ದಾಗೆ ಬರೋ ದುಡ್ನಾಗೆ ಸಂಸಾರ ನೀಗೋದು. ಯೆಮ್ಮೆಗ್ನೆಪ್ತಿಗೆ ಬಂದು ರಂಗಮ್ಮನ ವೊಟ್ಟೆ ಗಭೀರ್ ಅಂತು. 'ಯಾವಾನೊ ಬಾಯ್ಗಿಕ್ಕಂಡ್ಲಲ್ಲಪ್ಪ ಅವ್ನ ಸುಳಿಯಾರ, ನನ್ನ ವೊಟ್ಟೆ ಉರಿದ್ದಂಗೆ ಅವ್ನೊಟ್ಟೆ ಉರಿದೋಗ.' ಅನ್ನೋ ಬೈಗಳು ಅವಳ್ನ ಗುಬ್ರಾಕ್ಕಂಡಿರೊ ಗ್ನೆಪ್ತಿಗಳ್ನಿಂದ ಬಿಡಿಸಿದ್ವು.

ಅತ್ತ ಯೆಂಡ್ತಿ ಕಯ್ಯಾಗ ಉಗಸ್ಗಂಡು ಒಳಗೊಳಗೆ ಕುದಿತಾ ಇದ್ದ ಪೂಟ ಲಾಯರ್ಕ ಏನೇನೋ ಸಂಗ್ತಿಗಳು ನಸರು ಜೇನ್ನಂಗೆ ಮುತ್ಕಂಡಿದ್ವು. ಆ ಚಿಂತೆನಾಗೆ ಕಾಲಾಕ್ತಾಯಿದ್ದ ಪೂಟ್‌ಲಾಯರ್‍ನ, ನೀಲಕಂಟೆಗೌಡ್ನ ಆಳುಮಗ್ನ ಬಂದು ಕರದ್ನು. ಅವತ್ತು ಇಂಗೇನೆ ಗೌಡ್ನು ಮನೆಕ್ಯ ಕರೆಬುಟ್ಟು ಮದ್ವೆ ಆಗಂದ್ನು.

ಆದ್ರೆ ಅವತ್ತು ರಾತ್ರಿ ಶಿವಗಂಗೆ ಬೆಟ್ಟದಾಗ ರಂಗಮ್ಮುನು ಬಿಲ್ ಕುಲ್ ಮದ್ವೆ ಆಗಲ್ಲಾಂತ ರಂಪಾಟ ಮಾಡಿದ್ದು, ಕತ್ಲನಾಗ ಓಡೋಗಿದ್ದು ನೋಡಿ ಬೆದರೋಗಿದ್ದ. ಆದ್ರೆ ಆ ಗೌಡ್ನು ಬಿಡಬೇಕಲ್ಲ. ಗಳಿಗೇನಾಗ ಅವಳ್ನ ಇಡ್ಕಂಬಂದು ಕಟ್ಟೊ ತಾಳಿ ಅಂದ. ವೈ ಮಾಲೆ ಸ್ವಾದಿನ ಇಲ್ದೊನಂಗೆ ಇವ್ನು ತಾಳಿ ಕಟ್ಬಟ್ಟು ದಿಗಿಲಿ ಬಿದ್ದು ರಾತ್ರೋ ರಾತ್ರಿನೆ ಕೋಲಾರಕ್ಕೆ ವೋಡೋಗಿದ್ನು. ಮುಂದೆ ಮೂರ್‍ನಾಲ್ಕು ದಿನ ಊರ್‍ತಟ್ಟು ನಾಡಿರ್‍ಲಿಲ್ಲ. ರಂಗಮ್ಮು ಏನಾದ್ರೂ ಕೆರೆ ಬಾವಿ ನೋಡ್ಕಂಡ್ರೆ ನನ್ನ ಜೈಲೇ ಗತಿ ಅನ್ನೊ ಬೀತಿನಾಗ ಅಗಲು ರಾತ್ರಿ ಸಿಕ್ಕಿದ ಪಿಚ್ಚರ್‍ಗಳ್ನ ನೋಡ್ದ. ಅಲ್ಲಿಯೂ ಮುತ್ಕಂಡಿರೋ ಬಯಗಳ್ನ ಗೆಲ್ಲಾಕಾಗ್ದೆ ಅದ್ಯಾವ ಬಲದಾಗೋ ಊರಿಗೆ ಬಂದಿದ್ದ. ಅಂಗೆ ಬಂದವ್ನೆ ಲೋಕಾನೆ ಉಲ್ಟಾ ಆಗಿತ್ತು. ಬಯಗಳ್ಕೆ ರೆಕ್ಕೆ ಬಂದು ಎಗರಿವೋಗಿದ್ವು. ರಂಗಮ್ಮು ಮನೆಕ್ಕ ಕರೆಬುಟ್ಟು ಆಲ್ನಾಗೆ ಬಾಸೆ ತಕ್ಕಂಡಿದ್ಲು. ಅವ್ಳು ಏಳಿದ್ದಕ್ಕೆಲ್ಲ ಇವ್ನು ನಿರ್ವಂಚನೆಯಿಂದ ಊ ಅಂದಿದ್ದ. ಆಮೇಲೆ ಪೂಟ್ ಲಾಯರ್‍ನ ವಕ್ರಗಳ್ನೆಲ್ಲ ರಂಗಮ್ಮು ಪ್ರೀತಿ ದಬ್ಬೆಗಳ್ನಿಂದ ಕಟ್ಟಿ ನ್ಯಾರ ಮಾಡಿದ್ಲು.

ಅವಾಗ್ಲೆ ನಿಜಕ್ಕೂ ತಾನೂ ಒಬ್ಬ ನರಮನಸ್ಸು ಅಂತ ಅನ್ಸಿದ್ದು. ಆದ್ರೆ ಅಂತವಳೇನಾ ಇಂಥ ಕೆಲ್ಸ ಮಾಡಿದ್ದು? ಮನೆಕೊಂದು ಮೊಳಕೆ ಬೇಕು ಅಂತ ಹೆಂಡ್ತಿ ಬರ್‍ಲೊವಾಗೆಲ್ಲಾ

ಮನಸ್ಕ ಮುಳ್ಳು ಕುಚ್ಚಂಗಾಗೋದು. ಪೂಟ ಲಾಯ್ರುಕ ಎಲ್ಲಿಲ್ಲದ ರೋಸ ಬಂತು. ಪಾಲಾತ್ಮರ್ರೂಗ್ಗಿ ತಿಳೀದಂಗೆ ಕಾಪಾಡ್ಕಂಡಿರೋ ಗುಟ್ನ ಯಸ್ಟೋಸಾರಿ ಯೇಳ್ಬುಡನಾ ಅಂತ ಅನ್ನೋದು. ಯೇಳ್ಬಿಟ್ರೆ ಯಲ್ಲಿ ಸಂಸಾರ ಯಕ್ಕುಟ್ಕಂಡು ವೋತದೋ ಅನ್ನೊ ದಿಗ್ಲು ಗಂಟ್ಲನ ಅಂಗೇ ಅದುಮಿ ಬಿಡೋದು. ಅಂಗೆ ನೋಡಿದ್ರೆ ಅವ್ನು ಹೆಂಡ್ತಿ ಅತ್ರ ಏನೊ ಮುಚ್ಚಿಟ್ಕಂಡಿರಲಿಲ್ಲ. ಯಾವ್ದೋ ಪರ್ಸಿಗೆ ಬಂದಿದ್ದ ನಯ್ಯಾಂಡಿ ಡ್ಯಾನ್ಸ್ ನೋಳ ಮ್ಯಾಲೆ ಮನ್ಸು ಬಿದ್ದು ಹಿಂದಾಡಿ ಸೇಲಂಗೆ ಹೋಗಿ ಒದೆ ತಿಂದು ಬಂದಿದ್ದ ಸಂಗ್ತಿನೂ ಯೆಂಡ್ತಿಗೆ ಹೇಳಿಬಿಟ್ಟಿದ್ದ. ಆದ್ರೆ ಒಂದು ಕೆಟ್ಟ ಗ್ನಾಪಕನ ಮಾತ್ರ ಮನಸ್ನಾಗ ಹೂತು ಹಾಕಿದ್ದ. ಆದ್ರೆ ಇವೊತ್ತು ಯಾಕೋ ತಳ್ದಾಗನಿಂಕ ತೇಲ್ಕಂಡು ಬರೊ ಹೆಣದಂಗೆ ಆ ಗ್ನೆಪ್ತಿನೇ ಬೇಡಾಂದ್ರು ಬರ್‍ತಾನೆ ಇತ್ತು.

ಹತ್ತು ಹದಿನೈದು ವರ್ಸದ ಮಾತು – ಇಂದ್ರಾಗಾಂದಿ ದೇಸ್ದಾಗ ತುರ್ತು ಪರಿಸ್ತಿತಿನಾ ಆಕಿದ್ರು. ಜನ್ಸಂಖ್ಯೆ ಕಮ್ಮಿ ಮಾಡ್ಬೇಕು ಅಂತ ಒಬ್ಬೊಬ್ಬ ಸರ್ಕಾರಿ ಅಧಿಕಾರೀನು ಇಷ್ಟಿಷ್ಟು ಜನಗಳ್ನ ಒಪ್ಪಿಸಿ ಆಪರೇಶನ್ ಮಾಡ್ಸಬೇಕು ಅಂಥ ಆರ್ಡರು ಮಾಡಿದ್ದ್ರಂತೆ, ಆ ಅಧಿಕಾರಿಗಳು ಬ್ಯಾಟೆಗಾರ್‍ರಂಗೆ ಜೀಪು ಕಾರಗಳ್ನಾಗ ಊರೂರು ತಿರ್‍ಗ್ಗೋರು. ಕೈಕ ಸಿಕ್ಕಿದ ಗಂಡಸ್ರನ್ನ ಇಂದ್ಮುಂದು ಯೋಚ್ನೆ ಮಾಡ್ದೆ ಹಿಡ್ಕಂಡೋಡಿ ನರ ಕತ್ತರಿಸಿಬುಡೋರು. ಅಂತ ಒಂದು ಕೆಟ್ಟ ದಿನ್ದಾಗ ಹೊಸಕೋಟೆ ತಾವ ಯಾವ್ದೊ ಮದುವ್ಗೆ ವೋಗಿದ್ದ ಪೂಟ ಲಾಯ್ರು ಮದ್ಯಾನ್ದ ಬಿಸ್ಲು ಅಂಥ ಬಸ್ ಸ್ಟಾಂಡಾಗ ಬಿದ್ಕಂಡಿದ್ನು. ಯಾವುದೋ ಜೀಪು ಬಂತು ಅಂಥ ಜನ್ರು ಚೆಲ್ಲಾಪಿಲ್ಲಿಯಾಗಿ ವೋಡೋಗಿದ್ರು. ಮದ್ವೆ ಆಗ್ದೋರ್ಕ ನರ ಕತ್ರಸಲ್ಲ ಅನ್ನೋ ನಂಬ್ಕೆನಾಗ ಯಾಮಾರಿಕೊಂಡಿದ್ದ ಪೂಟ್ ಲಾಯ್ರನ ಕಬ್ಬಕ್ಕನೆ ಮಿಸ್ಕದಂಗೆ ಅದುಮ್ಕಿಂಡಿದ್ರು. ಉಸ್ರು ಎತ್ತಾಕು ಬಿಡ್ದಂಗೆ ಯಾವ್ದೋ ಆಸ್ಪತ್ರೆಕ್ಯ ಯಳ್ಕಂಡು ವೋಗಿ ನರ ಕತ್ತರ್‍ಸಿ ಬುಟ್ಟಿದ್ರು. ಆ ಸಂಗ್ತಿ ಗ್ನಿಪ್ತಿಗೆ ಬಂದಂಗೆ ಪೂಟ್ ಲಾಯ್ರುನು ಕ್ವಾಪ್ದಾಗ ಕಟಕಟಾಂಥ ಹಲ್ಲು ಕಚ್ಚಿದ್ನು. ಈ ಇಶ್ಯಾನ ಯಾರ್ರೂಕ್ಕ ಯೇಳಾಕ್ಕಾಗ್ದೆ ಮರೆಯಾಕ್ಕಾಗ್ದೆ ಒಂದಸ್ಟು ದಿನ ತನ್ನೊಳಗೆ ತಾನೆ ಕುಮ್ಲಿದ್ನು.

ಈ ಇಶ್ಯಾನ ಎಂಡ್ತಿಗೇಳೋದ್ಕಿಂತ ಪ್ರಾಣ ಕಳ್ಕೋಳೋದೇ ಮೇಲು ಅಂತ ಅನ್ಸಿ ಬುಟ್ಟು ಯೇನ್ ಮಾಡಾಕ ತೋಚ್ದೆ ಸುಮ್ಮನಾಗಿದ್ನು. ಆದ್ರೆ ಯೆಂಡ್ರು ಬಸರಾದ್ಮೇಲೆ ತಪ್ಪು ನನ್ದೇ ಅಂತ ಸಮಾದಾನ ಮಾಡ್ಕಳಿಕೆ ಯತ್ನಿಸಿ ಸೋತೋದ್ನು. ಎಸ್ಟೋಸಾರಿ ಯೆಂಡ್ತಿನಾ ನಿಲಾಕಿ ಇದು ಯೆಂಗೆ ಅಂತ ಕೇಳ್ಬೇಕು ಅಂದ್ಕಂಡಾಗ್ಯಲ್ಲ ಅವಳ ಕಣ್ಣಾಗಿನ ನಿಜಾಯ್ತಿ ಮುಂದೆ ಅವ್ನ ಮಾತುಗಳು ಗಂಟ್ಲಾಗೆ ಉರ್‍ಲು ಅಕ್ಕಂಬುಡೋವು. ಬರ್‍ತಾ ಬರ್‍ತಾ ಯೆಂಡ್ರು ಮ್ಯಾಗ, ಅವ್ಳ ವೊಟ್ಯಾಗ ಬೆಳಿತಿರೋ ಪಿಂಡ್ದ ಮ್ಯಾಲೆ ಕ್ವಾಪ ಬೆಳಸ್ಕಂಡ್ನು. ಯಾವತ್ತಿನ ಕೆಲ್ಸ ಕಾರ್‍ಯದಾಗೆ ನಿಗಾ ಕಳ್ಕಂಡ್ನು. ಯೆಂಡ್ತಿ ಮೊದ್ಲನಂಗೆ ಸಲ್ಗೆ ತೋರ್‍ಸಿದ್ರೆ ಕ್ಯಾಕರ್‍ಸಿಕಂಡು ದೂರ



ಪಟ್ಲನು ಹುಟ್ಟಿದಾಗ್ನಿಂದ ಅದ್ಯಾವ ಮಾಯ್ದಾಗೊ ಏನೊ ನೋಡಿದ್ ಪದಾರ್ಥನ ಮಂಗಮಾಯ ಮಾಡೊ ಇದ್ಯಾನ ಕರಗತ ಮಾಡ್ಕಂಡಿದ್ದ. ಅಂಗಾಗಿ ಊರಿನ ಪರ್ಮನೆಂಟು ಕಳ್ಳನಾಗಿದ್ದ. ತ್ವಾಟ ತೊಡಿಕೆಯಲ್ಲಿನ ತೆಂಗು, ಬಾಳೆ, ಹಣ್ಣು ಹಂಪ್ಲು ಚನೆಕೆ, ಗುದ್ದಲಿಗಳಿಂದ ಮೊದಲ್ಗೊಂಡು ಚೆಂಬು, ಬಿಂದಿಗೆ, ನೊಗ, ನೇಗಿಲುಗಳವರೆಗೆ ಜನ ಯಾಮಾರಿದ್ರೆ ಸಾಕು ಮುಲಾಜಿಲ್ಲದೆ ಕದ್ಕಂಡು ಮಟ್ಮಾಯ ಆಗ್ತಿದ್ದ.

ವೋದ್ನು. ಅಂತ ಒಂದು ಕೆಟ್ಟ ಗಳಿಗೆನಾಗ ರಂಗಮ್ಮನು ಪ್ರೀತಿ ದಬ್ಬೆಗಳಾಗ ಬಿಗಿದಿದ್ದ ಕಟ್ಟುಗಳೆಲ್ಲ ಪಟ್ಟಂತ ಕಿತ್ತೋಗಿ ಮೊದಲ್ನಂಗೆ ವಕ್ರವಾಗಿದ್ನು. ತನಗಾಗಿರೊ ದುಕ್ಕಾನ, ಅನ್ಯಾನ್ನ ಮರೀಬೇಕಂತ ಯಾವೊತ್ತಿನ ರಾಜಕೀಯ ಪುಡಾರಿಕಿನಾಗೆ ಬಿದ್ನು. ಅದ್ಕೆ ತಕ್ಕಂಗೆ ಯೆಂಡ್ತಿನೂ ಅನಾದರಣೆ ಮಾಡಿದ್ನು. ಏನಾದ್ರು ಮಾಡಿ ಅವಳ್ಗೆ ತಕ್ಕ ಬುದ್ದಿ ಕಲಿಸ್ಬೇಕು ಅವ್ಳು ಗರ್ವಾನ ಅಣಗಸ್ಬೇಕು ಅನ್ನೋ ಯೋಚ್ನೆಗಳು ಇವ್ನ ಮನಸ್ನಾಗ ಮನೆ ಮಾಡ್ಕಂಡ್ವು. ಅದೇನೊ ಯಂಡ್ತಿ ಯೊಚ್ನೆ ಬಂದಾಗೆಲ್ಲ ಆ ಕರಿಯೆಮ್ಮೆನೂ ಇವ್ನಕ ಗ್ನೆಪ್ತಿಗೆ ಬರೋದು. ಅವಾಗೆಲ್ಲ ಅದು ಮೂಕ ಜೀವ ಅನ್ನೋದು ಮರ್‍ತು, ಅದ್ರ ಮ್ಯಾಲೂ ಕ್ವಾಪ ಅನ್ನೋದು ಆಲುಕ್ದಂಗೆ ಉಕ್ಕೋದು. ಇಂಗೇ ಯೋಚ್ನೆಗಳಾಗೆ ತೇಲ್ತಾ ಮುಳುಗ್ತಾ ಇದ್ದ ಪೂಟ್ ಲಾಯರ್‍ನ ಗೌಡ್ರ ಆಳುಮಗ್ನು ಇನ್ನೊಂದ್ಸರ್ತಿ ಬಂದು ಕರೆದ್ನು.

ಕಳುವಿನ ಇಚಾರ್‍ಣೆ

ಎಮ್ಮೆ ಕಳುವಾದ ದಿನದ ರಾತ್ರಿ ಅನ್ನೋದು ಬಲು ಬೇಗ ಬಂತು. ಎಮ್ಮೇನ ಪತ್ತೆ ಮಾಡಾಕ ಹೋಗಿದ್ದವರು ಬರಿಗೈಯಲ್ಲೆ ಬಂದಿದ್ದು ಊರ್‍ನವರ್‍ಗೆ ಆಗ್ಲೆ ಗೊತ್ತಿತ್ತು. ಇಡೀ ಊರು ಪಟ್ಲಾನೇ ಎಮ್ಮೇನೇ ಕಳ್ತನ ಮಾಡಿರಬೌದು ಅನ್ನೊ ಭ್ರಾಂತಿನಾಗಿದ್ರು.

ಅವನು ಸಿಕ್ಕಿದ್ರೆ ಎಲ್ಲಾ ಗೊತ್ತಾಯ್ತದೆ. ಅಂತ ಕಾತರದಿಂದ ಕಾಯ್ತ ಇದ್ರು. ಪಟ್ಲನ ಪತ್ತೆ ಮಾಡ್ಕಂಡು ಬರಾಕ ಹೋಗಿದ್ದ ಪೆರುಮಾಳಪ್ಪನ ಮಗ್ನು ಮತ್ತು ಅವನ ಜತೇರು ಇನ್ನೂ ಬರ್‍ದೆ ಇದ್ದದ್ದು ಊರ್‍ನವರಿಗೆ ಯೋಚ್ನೆಗೆ ಹಚ್ಚಿತ್ತು.

ಪಟ್ಲನು ಹುಟ್ಟಿದಾಗ್ನಿಂದ ಅದ್ಯಾವ ಮಾಯ್ದಾಗೊ ಏನೊ ನೋಡಿದ್ ಪದಾರ್ಥನ ಮಂಗಮಾಯ ಮಾಡೊ ಇದ್ಯಾನ ಕರಗತ ಮಾಡ್ಕಂಡಿದ್ದ. ಅಂಗಾಗಿ ಊರಿನ ಪರ್ಮನೆಂಟು ಕಳ್ಳನಾಗಿದ್ದ. ತ್ವಾಟ ತೊಡಿಕೆಯಲ್ಲಿನ ತೆಂಗು, ಬಾಳೆ, ಹಣ್ಣು ಹಂಪ್ಲು ಚನೆಕೆ, ಗುದ್ದಲಿಗಳಿಂದ ಮೊದಲ್ಗೊಂಡು ಚೆಂಬು, ಬಿಂದಿಗೆ, ನೊಗ, ನೇಗಿಲುಗಳವರೆಗೆ ಜನ ಯಾಮಾರಿದ್ರೆ ಸಾಕು ಮುಲಾಜಿಲ್ಲದೆ ಕದ್ಕಂಡು ಮಟ್ಮಾಯ ಆಗ್ತಿದ್ದ. ಕಳ್ತನ ಮಾಡ್ದ ಮೇಲೆ ಸುಮಾರು ದಿನ ಊರು ಫಲದಿಂದ ನಾಪತ್ತೆಯಾಗ್ತಿದ್ದ. ಜನರು ಆ ಇಚಾರ ಮರೆಯೊ ವೊತ್ತಿಗೆ ಸರಿಯಾಗಿ ಊರಿಗೆ ಮತ್ತೆ ಬರ್‍ತಿದ್ದ. ಅವನನ್ನ ದಂಡ್ಸಿ ಪೋಲಿಸ್ನೋರು, ನ್ಯಾಯ ಮಾಡಿ ಸಿಕ್ಷೆ ಕೊಟ್ಟು ಪಂಚಾಯ್ತಿದಾರು ಸುಸ್ತು ಬಿದ್ದು ಹೋಗಿದ್ರು.

ಊರಿನಲ್ಲಿ ಒಂದು ಕಡೆ ಇಟ್ಟ ವಸ್ತು ಅಕಸ್ಮಾತಾಗಿ ಸ್ಥಳ ಬದಲಾಗಿದ್ರೆ ಹಿಂದು ಮುಂದು ನೋಡ್ದೆ ಇದು ಪಟ್ಲನ ಕೆಲ್ಸನೇ ಅಂತ ಜನ ಅನುಮಾನಿಸುವಸ್ಟರ ಮಟ್ಟಿಗೆ ಪಟ್ಲನು ಮತ್ತು ಅವನ ಕೈ ಕಸುಬು ಜನರ ಮನಸ್ಸಿನಾಗ ನಿಂತು ಹೋಗಿದ್ವು. ಪಟ್ಲನು ಊರ ಸುತ್ತ ಸುಳಿಯೋದ್ನ ನೋಡಿ ಹೆಂಗು ದೂರು ಅವನ ಮ್ಯಾಲೆ ಅನ್ನೊ ನಂಬಿಕೆಯಾಗ ಕೈಗೆ ಸಿಕ್ಕದ್ನ ಲಪಾಟಾಯ್ಸಿ ಬುಟ್ಟು ಊರು ಮುಂದೆ ಸತ್ಯ ಅರ್‍ಚಿಂದ್ರನ ಪಾರ್ಟು ಮಾಡೋರು ಊರಾಗಿದ್ರು.

ಬನಹಳ್ಳಿ ಮಟ್ಟಿಗೆ ಊರು ವುಟ್ಟಿದ ಕಾಲ್ನಿಂದ ಇದೇ ಮೊದಲು ಬಾರ್‍ಗೆ ಯೆಮ್ಮೆಯಂಥ ಮೂಕಜೀವದ ಕಳ್ತನ ಆಗಿತ್ತು. ಆದ್ರಿಂದಲ್ಲೆ ಊರ್‍ಗೆ ಊರೇ ಇದ್ನ ಇಂಗೆ ಬುಟ್ರೆ ನಾಳೆ ನಮ್ದು ಕಳುವಾಗಬೌದು ಅನ್ನೊ ಎಚ್ಚರದಾಗ ಈ ವೊತ್ತಿನ

ನ್ಯಾಯದಾಗ ಹೆಚ್ಚಿನ ಮುತುವರ್ಜಿನವಯ್ಸಿದ್ರು. ರಾತ್ರಿ ನ್ಯಾಯ ಮನ್ಕೊಂದಾಳು ಬರಬೇಕು ಅಂತ ಸಾಯಂಕಾಲ ಸಾಟ್ಸಿದ್ರು ಕತ್ತಲಾಗಿ ರಾತ್ರಿ ಬಲೀತಿದ್ರು ಪಟ್ಲನ ಸುಳಿವಿಲ್ಲದೆ ಜನ ನ್ಯಾಯ ಆಯ್ತದೆ ಇಲ್ಲೊ ಅನ್ನೊ ಗೊಂದಲದಲ್ಲಿದ್ರು. ಇದಕ್ಕಿದ್ದಂಗೆ ಇಟ್ಟೊತ್ತು ರಾತ್ರಿನಾಗ ಪಟ್ಲನ ಹಿಡ್ಕಂಡು ಬಂದವ್ರಂತೆ ಅನ್ನೊ ಸುದ್ದಿ ಊರು ತುಂಬ ಕಿಚ್ಚಂಗೆ ಬಗ್ಗ್ ಬಂತು. ಗಂಡಸ್ರು, ಹೈಕಳು ಎಲ್ರೂ ಚಾವಡಿತಾವ್ಕ ನುಗ್ಗಿದ್ರು. ಯಾಸದ ಉಲಿನಾ ಪಟ್ಟು ಆಕೆ ಕಟ್ಟಿರೋವಂಗೆ ಪಟ್ಲನ ಇಡಿದು ಕಟ್ಟಿದ್ರು. ಊರು ಕಾಡು ತಿರಿಗಿ ಹಿಡಿದ ಕತೆಯನ್ನ ಪೆರುಮಾಳಪ್ಪನ ಮಗ್ನು ವೀರ ಯೋದ್ನಂಗೆ ರಸ ಕಟ್ಟಿ ಹೇಳ್ತಿದ್ದನು. ಇದೆಲ್ಲಾ ಮಾಮೂಲು ಅನ್ನೊ ದಾಟೀಲಿ ಜನಗಳ್ನ ಪಟ್ಲನು ಅಮಾಯಕನಾಗಿ ನೋಡ್ತಾ ನಿಂತಿದ್ದನು.

ಹೊತ್ತು ಸರ್ದಂಗೆ ಜನ ಹಿಟ್ಟು ಗಿಟ್ಟು ತಿಂದು ಚಾವಡಿ ತಾವ ಜಮಾಯ್ಸಿದ್ರು. ಪೂಟ್‌ಲಾಯರ್ರು ಮದ್ಯಾನ ಮನೆಕ್ಯ ಬಂದಾಗ್ನಿಂದ ಏನೋ ಗುಟ್ಟಾಗಿ ಮೀಟಿಂಗ್ ಮಾಡ್ಕಿಂಡಿದ್ದ ನೀಲಕಂಠೇಗೌಡ್ನು ಉಂಡು ಕುದ್ದು ಪೂಟ್‌ಲಾಯರಿನ ಹಿಂದ್ಗಿಂಡು ಚಾವುಡಿಗೆ ಬಂದ್ನು. ಪೂಟ್‌ಲಾಯರ್ ಮೋಟು ಬೀಡಿಗಳ್ನ ಯಾವೊತ್ನಂಗೆ ಜಾಯಿಂಟ್ ಮಾಡಿ ಸುಖವಾಗಿ ದಮ್ಮ ಎಳೀತ ನ್ಯಾಯಸ್ತರ ಮದ್ಯ ಜಾಗ ಮಾಡ್ಕಂಡು ಕುಂತ್ಕಂಡ್ನು. ಐಡ್ಯದೋನು ಪಟ್ಲನಿಂದ ಬಾಯಿ ಬಿಡಸೋದು ಎಂಗೆ ಅಂತ ಪ್ಲಾನು ಆಕ್ತ ಚಿಂತಾಕ್ರಾಂತನಾಗಿದ್ನು. ಅಸ್ಟರಲ್ಲಿ ಕಾವಲೋರ ತಿಮ್ಮರಾಯ್ನು ಒಂದು ವರೆ ಹುಣ್ಸೆ ಬರ್ಲು ತಕ್ಕೊಂಬಂದು ಹಾಕಿದ್ನು. ಆ ಹುಣಸೆ ಬರ್ಲು ನೋಡ್ದ ಎಸ್ಟೋ ಜನರಿಗೆ ಯಾಕೋ ಇದ್ದಕ್ಕಿದಂಗೆ ಗುಂಡ್ಗೆ ಅಳುಕ್ ಅಂತು.

ಇಂಗೆ ಇಡೀ ಊರೇ ಚಾವುಡಿ ತಾವ ಸೇರಿದ್ದು ನ್ಯಾಯ ಇಚಾರ್ಣೆ ಇನ್ನೇನು ಸುರುವಾಗ್ಬೇಕು ಅನ್ನೋವಸ್ಟರಲ್ಲಿ ರಂಗಮ್ಮನು ರುದ್ರ ಕಾಳಿಯಂಗೆ ನುಗ್ಗಿ ಪಟ್ಲನ ಜುಟ್ಟು ಹಿಡಿದು ಅಲ್ಲಾಡಿಸ್ತಾ 'ನನ್ನೆದೆ ಮ್ಯಾಲೆ ಯಾಕೋ ಕಲ್ಲು ಆಕ್ದೆ ನಾನು ಏನ್ ದ್ರೋಹ ಮಾಡಿದ್ನೊ ನಿಂಕೆ' ಅಂತ ಬಾಯ್ಗೆ ಬಂದಂಗೆ ಬಯ್ಯದ್ಲು. 'ಈ ಊರಾಗ ನನ್ನ ಎಮ್ಮೆನ ನಿನ್ನ ಕಣ್ಣು ಕುಕ್ಕಿದ್ದು.' ಅಂತ ಕುಸಿದ್ಲು. ರಂಗಮ್ಮನ ಕಡೇ ಮಾತು ನ್ಯಾಯಸ್ತರಿಗೆ ಎಲ್ಲೋ ಕುಟುಕಿದಂಗಾಗಿ, ರಂಗಮ್ಮನ ಸುಮ್ಮನಿರುವಂತೆ ಗದ್ರಿಸ್ಕೊಂಡ್ರು. ತಾಯಿ ಜತೆ ಬಂದಿದ್ದ ಆನಂದ್ನು ಇದೊಂದು ಅರ್ತವಾಗ್ದೆ ಪಟ್ಲನ ಬಗ್ಗೆ ಕನಿಕರ ಪಡ್ತಿದ್ನು. ಅವನ ಕೈ ಆಸರೆ ತಕ್ಕಂಡು ರಂಗಮ್ಮನು ಯಂಗಸ್ರು ಇದ್ದ ಕಡೆ ಹೋಗಿ ಕುಂತ್ಕಂಡ್ಲು. ರಂಗಮ್ಮನ್ನ ಯಾತ್ನೆ ನೋಡಿ ಪಟ್ಲನಿಗೆ ಕರುಳು ಚುರುಕ್ ಅಂತು. ಮನಸ್ಸು ತಡಿಲಾರ್ದೆ ನಾನು ಕದ್ದಿಲ್ಲಕ್ಕೊ ಅಂದ ಅವ್ನ ಶಬ್ದವು ಚಾವಡಿಯ ಗಲಾಟೆನಾಗೆಲ್ಲೊ ಕಳದೊಯ್ತು.

ಮೂಲೆನ ಎಮ್ಮೆಯ ಕಳುವಿನಿಂದ ನೀಲಕಂಟಗೌಡ್ರಕ ಸಂತೋಸ ಆಯ್ತೊ ದುಕ್ಕ ಆಯ್ತೋ ಅಂಥ ಖಚಿತವಾಗಿ ಹೇಳ್ಲಿಕ್ಕೆ ಬರ್ದಂತ ಮನಸ್ಥಿತಿನಾಗಿದ್ರು. ಕಳುವಾದ ಕರಿಯೆಮ್ಮೆ ಇಚಾರ್ಣೆಗಿಂತ ತಮ್ಮ ದೊಡ್ಡಿನಾಗ ಇಂಥಾದ್ದು ಆಗಬಾರ್ದು ಅನ್ನೋ ಯೇಚ್ನೆ ಯಿಟ್ಕಂಡು ನ್ಯಾಯ್ಕ ಬಂದಿದ್ರು. ಅಂಗೆ ನೋಡಿದ್ರೆ ಐಡ್ಯದೋನ್ನ ಬುಟ್ಟು ಉಳಿದ ನ್ಯಾಯಸ್ತರ್‍ಯಾರಿಗೂ ರಂಗಮ್ಮನ ಎಮ್ಮೆನ ಪತ್ತೆ ಮಾಡ್ಬೇಕು ಅನ್ನೋ ಇರಾದೆ ಇದ್ದಂಗೆ ಕಾಣ್ಸಿಲ್ಲ. ಆದ್ರೆ ಪಟ್ಲನ ಇಚಾರ್ಣೆ ಮಾಡಿ ಶಿಕ್ಷೆ ಕೊಡೊದಿಕ್ಕೆ ಒಂಟಿಕಾಲ್ನಾಗ ನಿಂತಿದ್ರು.

'ನನ್ನ ಯೆಮ್ಮೆ ಕದ್ದವ್ರ ವಂಸ ನಿರ್ವಂಸ ಆಗ್ಲಿ' ಅಂತ ಶಪಿಸಿ ಬೀದಿನಾಗ ಕೈಗೆ ಸಿಕ್ಕಿದಸ್ಟು ಮಣ್ಣನ್ನ ಬಾಚಿ ತೂರ್‍ಬಿಟ್ಟು ಮಗ್ನು ಆನಂದ್ನ ಕರ್‍ಕೊಂಡು ವೊರಟೇ ವೋದ್ಲು.

'ಹೂಂ.... ಸುರು ಮಾಡ್ರಿಪ್ಪೊ' ...ಅಂತ ಯಾರೋ ಜನಗಳ ಗುಂಪ್ನಿಂದ ಅಂದ್ರು.

'ಲೇ ಪಟ್ಲ ಇದುದ್ದನ್ನ ಇದ್ದಂಗೆ ಯೇಳಿಬುಡು' ಅಂತ ಗೌಡ್ರು ಯಾವೊತ್ನಂಗೆ ಕೇಳಿದ್ರು. 'ಯಾರ್‍ಕ ಮಾರಿದ್ದಿಯಲೇ ಒಳ್ಳೆ ಮಾತ್ನಾಗ ಹೇಳಿಬುಡು' ಅಂತ ಊರಿನ ಏಕಮೇವ ಲಿಂಗವಂತ್ರಾದ ಚನ್ನಬಸಣ್ಣೋರು ಅಂದ್ರು.

'ನೀನ್ ಜತ್ಗೆ ಇದ್ದೋರು ಯಾರು? ಇನ್ನಾರೊ ದಬಾಯ್ಸಿದ್ರು.'

ಪಟ್ಲನು ತೊದಲ್ಕಿಂಡು 'ನಮ್ಮಪ್ಪಾಣೆ ಆ ಗೋಪಾಲಸ್ವಾಮಿ ಆಣೆ ನಾನು ಯೆಮ್ಮೆ ಹೊಡದಿಲ್ಲಪ್ಪೊ' ಅಂದ್ನು. 'ನೆನ್ನ ರಾತ್ರಿ ಎಲ್ಲಿದ್ದೆ' ಅಂತ ಐಡ್ಯದೋನು ಪಾಯಿಂಟು ಹಾಕಿದ್ನು.

ರಾತ್ರಿ ಪೂರ ತೇರಹಳ್ಳಿ ನಾಟ್ಕದಾಗ ಇದ್ನಿ ಅಂದ ಪಟ್ಲನು ನಿಜವನ್ನೆ ಹೇಳಿದ್ದ. ರಾತ್ರಿ ನಾಟ್ಕ ನೋಡ್ ನೋಡ್ತಾನೇ ಪಕ್ಕದಾಗ ತೂಗುಸ್ತಾ ಇದವನ್ನು ವಾಚ್ನ ಎಗರಿಸ್ದಿದ್ದ ಎನ್ನುವುದು ಬ್ಯಾರೆ ಮಾತು. ನ್ಯಾಯಸ್ತರ್‍ಕ ಅವನ ಮಾತಿನ ಮ್ಯಾಲೆ ನಂಬಿಕೆ ಬರಲಿಲ್ಲ. ಐಡ್ಯದೋನು ಕ್ರಾಸ್ ಕೊಚ್ಚಿನ್ ಕೇಳೋದಿಕ್ಕೆ ಸಿದ್ದವಾಗ್ತಿರುವಾಗ್ಲೆ ಅತ್ತ ಹುಡುಗ್ರು ಗುಂಪಾಗೇನೊ ಗಲಾಟೆಯಾಗಿ ಅತ್ತ ನೋಡಿದ ಪೂಟ್ ಲಾಯ್ರುಕ ಅಲ್ಲಿ ಆನಂದ್ನು ಕಂಡು ಬಂದ್ನು. ಯಾಕೋ ತಾಳ್ಮೆ ಕಳ್ಕೊಂಡೊನಂಗೆ ಎಯ್ ಮಾತ್ಗಳನಿಂಕ ಏನು ಪ್ರಯೋಜ್ನ ಇಕ್ಕೊ ನಾಲ್ಕು ಅಂಥ ಅಂದಿದ್ದೆ ತಡ ಅದಕ್ಕಾಗಿನೇ ಕಾದಿದ್ದ ಪೆರುಮಾಳಪ್ಪನ ಮಗ್ನು ತನ್ನ ಹಿಂದಿನ ದ್ವೇಶ ತೀರಿಸ್ಕೊಳ್ಳೋನಂಗೆ ಹುಣ್ಸೆ ಬರ್ಲು ತಕ್ಕಂಡು ಪಟ್ಲನ ಚಟೀರ್ ಚಟೀರ್ ಅಂತ ಬಡಿಯ್ಕಾ ತೊಡಗಿದ್ನು. ಆ ಏಟುಗಳ್ಕ ಅಂತಿಂಥವ್ರು ಆಗಿದ್ರೆ ಯಾವಾಗ್ಲೋ ಶಿವ ಅಂದ್ಬುಡೋರು. ಪಟ್ಲನಂದಾದ್ರು ಸೀಸದಂತ ಮೈಯಿ ಕಲ್ಲಿನಂತ ಗುಂಡಿಗೆ ಅಂಥವ್ನು ಕೂಡ ನಾನ್ ಕದ್ದಿಲ್ಲಪ್ಪೊ ನಾನ್ ಕದ್ದಿಲಣೋ ಅಂಥ ಕೇಳೋರ್‍ಕ ಕರಳು ಕತ್ತರ್‍ಸುವಂಗೆ ದೈನೇಸಿಯಾಗಿ ಕಿರುಚ್ತಿದ್ದ. ನ್ಯಾಯಸ್ತರಲ್ಲಿ ಕನಿಕರ ಈಗ ಹುಟ್ಟಬೌದು ಆಗ ಹುಟ್ಟಬೌದು ಅಂತ ಎದ್ರು ನೋಡ್ತಿದ್ದ. ಆ ಕರಕೋಟ್ಲಾನ ನೋಡಿ ತಡಿಲಾರ್ದೆ ಒಂದಸ್ಟು ಅದ್ರು ಗುಂಡಿಗೆ ಜನ ಜಾಗ ಖಾಲಿ ಮಾಡಿದ್ರು. ಪೆರುಮಾಳಪ್ಪನ ಮಗ್ನು ಕೈಸೋತು ಮ್ಯಾಲೆ ಹುಣ್ಸೆ ಬರ್ಲು ಕೋಲ್ಕಾರು ಗಿಡ್ನು ಕೈಕ ಬಂತು. ಅವ್ನು ಕೂಡ ಸುಸ್ತಾಗಿ ಉಸ್ರು ಬಿಟ್ಕಂಡು ಕಂತ್ನು. ಪಟ್ಲನ ಮೈಯಿಂದ ಅಲ್ಲಲ್ಲಿ ಚರ್ಮ ಅರ್ದು ರಕ್ತ ತೊಟ್ಟಿಕ್ತ ಇತ್ತು. ನ್ಯಾಯಸ್ತರು ಮುಂದೇನು ಮಾಡ್ಬೇಕು ಅಂತ ತಬ್ಬಿಬ್ಬು ಆಗಿದ್ರು.

ಆಗ ಐಡ್ಯದೊನ್ನ ಇದ್ದಿದ್ದಂಗೆ ಏನೋ ಹೊಳೆದೋನಂಗೆ ಚಕ್ಕನೆ ಎದ್ದು ಬಂದವ್ನೆ ಪಟ್ಲನ ಮೈ ಮ್ಯಾಲೆ ಇದ್ದ ಏಕ ಮಾತ್ರ ಬಟ್ಟೆಯಾದ ಚಡ್ಡಿಗೆ ಕೈಹಾದ್ನು. ಐಡ್ಯದೋನ ಉದ್ದೇಶದ ಗುರುತ್ತು ಅತ್ತದ ಜನ್ರು ಇವನ್ಯಾಕ ಇಂಥ ಅಲ್ಪ ಕೆಲಸ್ಕ ಕೈ ಹಾಕ್ದ ಅಂತ ಮುಜುಗರ ಪಟ್ಕಂಡ್ತಿರಬೇಕಾದ್ರೆ ಐಡ್ಯದೊನ ಕೈಕೆ ಪಟ್ಲನ ಚಡ್ಡಿನಾಗ ಮಡುಕ್ಲು ಆಗಿರೋ ನೂರು ರುಪಾಯ್ನ ನೋಟೊಂದು ಸಿಕ್ಕೇಬಿಡ್ತು. ಇದೇ ಕಳ್ತನಕ್ಕೆ ಸಾಕ್ಷಿ ಅನ್ನೋತರ ಹುರುಪ್ನಲ್ಲಿ ತನ್ನ ಸೋದ್ನೆಗೆ ತಾನೇ ಹಿಗ್ಗುತ್ತಾ 'ಈ ತಿರುಬೋಕಿಗೆ ಇಸ್ಟೊಂದು ದುಡ್ಡು ಎಂಗೆ ಬಂತು ಇಚಾರ ಮಾಡ್ರೆಪ್ಪ ಆಗ ಯಲ್ಲಾ ಗೋತ್ತಾಯ್ತದೆ' ಅಂತ ನ್ಯಾಯಸ್ತರ ಮುಂದೆ ಪಟ್ಲನ ರಕ್ತ ಮೆತ್ತಿಕೊಂಡಿರೋ ಆ ನೋಟ್ನ ಇಟ್ನು. ಎಲ್ರೂ ಲ್ಯಾಟೀನ್ನ ಮೊಬ್ಬುಗತ್ತಲ್ಲಿ ಸ್ಪಷ್ಟವಾಗಿ ಕಾಣ್ದಿರೊ ನೋಟ್ನ ಪರೀಕ್ಷೆ ಮಾಡ್ದೋರಂಗೆ ಕೈಯಾಗ ಎತ್ತಿಕ್ಕಂಡು ದಿಟ್ಟಿಸುತ್ತಿದ್ರು. ಅಂಗೇ ನೋಟ್ನ ಮುಟ್ಟಿದೋರ ಕೈಗೆ ಆ ನೋಟ್ನಾಗೆ ಇದ್ದ ರಕ್ತವು ಮತ್ತಿಕ್ಕಂಡಿದ್ದು ಮಾತ್ರ ಅವ್ರ ಗಮನ್ಕ ಬರ್ಲಿಲ್ಲ. ನಿಜಕ್ಕೂ ಆ ನೋಟು ಪಟ್ಲನು ರಾತ್ರಿ ಹೊಡ್ದಿದ್ದ ವಾಚ್ನ ಮಾರಿದ್ರಿಂದ ಬಂದಿದ್ದು. ಯೆಸ್ಟು ಹೊಡೆದ್ರು ಪಟ್ಲನು ಮಾತ್ರ ಕಳ್ಳನು ನಾನಲ್ಲ ಅನ್ನೋದು ಕೇಳಿ ಕೇಳಿ ರಂಗಮ್ಮನು ಯಾಕೋ ಈ ಇಚಾರ್ಣೆಯಿಂದ ನನ್ನ ವೋದೆಮ್ಮೆ ಮತ್ತೆ ಪತ್ತೆ ಆಗಲ್ಲ ಅಂತ ಅನ್ನಿಸಿಬುಡ್ತು. ಅಲ್ಲದೆ ಪಟ್ಲನ್ಕ ಕೊಡ್ತಿರೊ ಕೋಲೆನ ನೋಡಿ ರೋಸಿ ಹೋಗಿ 'ನನ್ನ ಯೆಮ್ಮೆ ಕದ್ದವ್ರ ವಂಸ ನಿರ್ವಂಸ ಆಗ್ಲಿ' ಅಂತ ಶಪಿಸಿ ಬೀದಿನಾಗ ಕೈಗೆ ಸಿಕ್ಕಿದಸ್ಟು ಮಣ್ಣನ್ನ ಬಾಚಿ ತೂರ್‍ಬಿಟ್ಟು ಮಗ್ನು ಆನಂದ್ನ ಕರ್‍ಕೊಂಡು ವೊರಟೇ ವೋದ್ಲು. ರಂಗಮ್ಮನು ಇಂಗೆ ಇದ್ದಕ್ಕಿಂಗೆ ಊರು ನ್ಯಾಯಸ್ತರಾಗ ಇಚಾರ್ಣೆನಾಗ ವಿಸ್ವಾಸ ಕಳ್ಕಂಡಿದ್ದು ನೋಡಿ ಪಂಚಾಯಿತ್ನೇ ದಿಕ್ಕು ತಪ್ಪಿದಂಗೆ ಆಯ್ತು.

ರಂಗಮ್ಮನು ಹಿಂದೇನೆ ಒಂದಸ್ಟು ಜನಾನು ಹೊಂಟೋಗಿದ್ರಿಂದ ನ್ಯಾಯಸ್ತರ್‍ಕ ಒಳಗೊಳ್ಗೆ ಅವಮಾನ ಆದಂಗಾಯ್ತು. ಒಬ್ಬರ ಮಕ ಒಬ್ಬರು ನೋಡ್ತಾ ಕುಂತ ನ್ಯಾಯಸ್ತರ ಮದ್ಯ ಪೂಟ್ ಲಾಯ್ರು ಮತ್ತೆರಡು ಬೀಡಿಮೋಟುಗಳ್ನ ಜಾಯಿಂಟು ಮಾಡ್ಕೊಂಡೇ 'ಆ ಯೆಂಗಸ್ರು ಮುಂಡ್ಯಕ ಏನ್ ತಿಳಿತ್ತಾತು ನೀವ್ ಅವ್ನ ಬಾಯಿ ಬಿಡ್ಸುತ್ತಿರೋ ಇಲ್ಲ ನಾನು ಪೋಲಿಸ್ ಕಂಪ್ಲೀಟು ಕೊಡ್ಲೊ' ಅಂತ ಅಂದ್ನು. ಮತ್ತೆ ಇನ್ಯಾರೋ ಬರ್ಲು ತಕ್ಕಂಡ್ರು ಪಟ್ಲನ ಮೈನಿಂದ ಮತ್ತೆ ರಕ್ತ ತೊಟ್ಟಿಕ್ಕೋದಿಕ್ಕೆ ಸುರುವಾಯ್ತು. ಆದ್ರೆ ಪಟ್ಲನು ಮಾತ್ರ ರವಸ್ಟೂ ಜಗ್ದೇ ಯೆಮ್ಮೇ ಕಳ್ಳನು ನಾನಲ್ಲ ಕಳ್ಳನು ನಾನಲ್ಲ ಅನ್ನೋ ಶಬ್ದಾನ ಏಟ್ ಏಟ್ಗೂ ಮಂತ್ರದಂಗೆ ಅನ್ನುತ್ತಲೇ ಇದ್ನು. ಅವ್ನ ಬಾಯಿ ವಾಕ್ಯವಾಗಿ ಬರ್‍ತಿದ್ದ ಕಳ್ಳ ನಾನಲ್ಲ ಅನ್ನೋ ಶಬ್ದವು ಕತ್ತಲಲ್ಲಿ ಕಾಟೇರಿಯಂಗೆ ಬೆಳ್ದು ಇಡೀ ಪಂಚಾಯಿತ್ನ ಚಾವುಡಿನ, ಊರ್‍ನ ನುಂಗ್ಕೊಂಡು ಇನ್ನೂ ದೊಡ್ಡದಾಗಿ ಬಾಯಿ ತಕ್ಕಂಡು ಗ್ರಾಮ, ಪಟ್ನ ದೇಸಾನೇ ನುಂಗೊವಂಗೆ ಮುಂದ್ಕೊಯ್ತು. ಅಸ್ಟೊತ್ಕ ಸವರಾತ್ರಿ ಆಯ್ತು ಅಂತ ಪಂಚಾಯ್ತೀನು ವಾಯ್ದೆ ಬಿತ್ತು.



❑

ಮುಸ್ಲಿಂ ಮಹಿಳೆಯ ಪಾತ್ರ ಬದಲಾಗುತ್ತಿದೆಯೇ?

ಮುಸ್ಲಿಂ ಜಗತ್ತಿನಲ್ಲಿ ನಡೆಯುತ್ತಿರುವ ಯುದ್ಧಗಳು ಆಂತರಿಕ ಕಿತ್ತಾಟಗಳು, ಬದುಕಿಗಾಗಿ ಹೋರಾಟಗಳು, ಅಮಾನುಷ ದಮನ ಮತ್ತು ಹಿಂಸಾಚಾರಗಳಲ್ಲಿ ಪ್ರೀತಿ ಪಾತ್ರರನ್ನು ಕಳೆದುಕೊಂಡು, ಅಂಗವಿಕಲರಾಗಿ, ನಿರಾಶ್ರಿತರಾಗಿ ಬದುಕುತ್ತಿರುವ ಮಹಿಳೆಯರಿದ್ದಾರೆ, ಮಕ್ಕಳಿದ್ದಾರೆ. ಯುದ್ಧಗಳು ತಮ್ಮ ಜೊತೆಗೆಯೇ ಹೊತ್ತು ತರುವ ಅತ್ಯಾಚಾರ, ಅಪಮಾನ, ಹಿಂಸೆ, ನಿರಂತರ ಹಸಿವು, ಬಡತನ, ನೈಸರ್ಗಿಕ ಅಸಮತೋಲನಗಳಿಗೆ ಹೆಚ್ಚಾಗಿ ಬಲಿಯಾಗುವವರು ಮಹಿಳೆ ಮತ್ತು ಮಕ್ಕಳೇ ಆಗಿದ್ದಾರೆ. ಜಗತ್ತಿನ ಅನಕ್ಷರಸ್ಥರಲ್ಲಿ ಬಹುದೊಡ್ಡ ಪಾಲು ಅನಕ್ಷರಸ್ಥರು ಮುಸ್ಲಿಂ ಮಹಿಳೆಯರೇ ಆಗಿದ್ದಾರೆ.

○ ಕೆ. ಷರೀಫಾ

ಇಂದು ನಾವು ಕಾಣುತ್ತಿರುವ ಮುಸ್ಲಿಂ ಮಹಿಳಾ ಜಗತ್ತು ಅವಳ ಸ್ಥಾನ-ಮಾನ, ಹಕ್ಕು-ಜವಾಬ್ದಾರಿಗಳು ಮೊದಲಿನಿಂದಲೂ ಹೀಗೆಯೇ ಇರಲಿಲ್ಲ. ಅದು ಅನೇಕ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳ ಪರಿಣಾಮ. ಇಸ್ಲಾಂ ಸಮಾಜದ ಮಹಿಳೆ ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಬದಲಾವಣೆ ಹೊಂದುವಾಗ ಅನೇಕ ಘರ್ಷಣೆಗಳೂ, ತಿಕ್ಕಾಟಗಳೂ ನಡೆಯುತ್ತವೆ. ಹಳೆಯದರ ಹೊಟ್ಟೆ ಸೀಳಿಕೊಂಡೇ ಹೊಸದರ ಜನ್ಮವಾಗುತ್ತದೆ. ಅನೇಕ ಹೋರಾಟಗಳೂ, ಸಂಘರ್ಷಗಳ ಪರಿಣಾಮವೇ ಇಂದಿನ ಮುಸ್ಲಿಂ ಮಹಿಳೆಯಾಗಿದ್ದಾಳೆ. ಅವಳ ಪಾತ್ರ ಕಾಲದಿಂದ ಕಾಲಕ್ಕೆ ಬದಲಾಗುತ್ತಲೇ ಬಂದಿದೆ.

ಮಹಿಳೆಯರ ಕುರಿತು ಚಿಂತಿಸುವಾಗ ನಾವು ಮುಸ್ಲಿಂ ಮಹಿಳೆಯರ ಬಗ್ಗೆ ವಿಶೇಷ ಗಮನ ಕೊಡುವುದು ಅವಶ್ಯಕವಾಗುತ್ತದೆ. ಏಕೆಂದರೆ ಅಸಮಾನತೆಯೊಂದೇ ಅವಳ ಬದುಕಿನಲ್ಲಿ ಸಮಾನವಾಗಿರುವ ಅಂಶವಾಗಿದೆ. ಜಗತ್ತಿನಲ್ಲಿ ಒಂದು ಶತಕೋಟಿಗೂ ಹೆಚ್ಚು ಮುಸ್ಲಿಮರಿದ್ದಾರೆ. ಅದರಲ್ಲಿ ಅರ್ಧ ಶತಕೋಟಿಯಷ್ಟು ಮಹಿಳೆಯರಿದ್ದಾರೆ. ಮಹಮ್ಮದ್ ಪೈಗಂಬರರ ಕಾಲಕ್ಕೆ ಹೆಣ್ಣುಮಗುವನ್ನು ಜೀವಂತ ಹುಗಿಯುತ್ತಿದ್ದರು. ಆದರೆ ಪೈಗಂಬರರು ಅದನ್ನು ತಪ್ಪಿಸಿದರು. ಇಂದಿಗೂ ಮುಸ್ಲಿಂ ಮಹಿಳೆಯರ ಮೇಲೆ ಕುಟುಂಬದ ಚೌಕಟ್ಟಿನ ಒಳ-ಹೊರಗೂ ಶೋಷಣೆ ನಡೆಯುತ್ತಲೇ ಇದೆ. ಅದಕ್ಕಾಗಿ ಪ್ರಭುತ್ವವು ವರ್ಗ ಶೋಷಣೆಯ ಸಾಧನವಾದರೆ ಕುಟುಂಬವು ಸ್ತ್ರೀಯನ್ನು ಶೋಷಿಸಲು ಪುರುಷನ ಸಾಧನವಾಯಿತು.

ಮುಸ್ಲಿಂ ಜಗತ್ತಿನಲ್ಲಿ ನಡೆಯುತ್ತಿರುವ ಯುದ್ಧಗಳು ಆಂತರಿಕ ಕಿತ್ತಾಟಗಳು, ಬದುಕಿಗಾಗಿ ಹೋರಾಟಗಳು, ಅಮಾನುಷ ದಮನ ಮತ್ತು ಹಿಂಸಾಚಾರಗಳಲ್ಲಿ ಪ್ರೀತಿ ಪಾತ್ರರನ್ನು ಕಳೆದುಕೊಂಡು, ಅಂಗವಿಕಲರಾಗಿ, ನಿರಾಶ್ರಿತರಾಗಿ ಬದುಕುತ್ತಿರುವ ಮಹಿಳೆಯರಿದ್ದಾರೆ, ಮಕ್ಕಳಿದ್ದಾರೆ. ಯುದ್ಧಗಳು ತಮ್ಮ ಜೊತೆಗೆಯೇ ಹೊತ್ತು ತರುವ ಅತ್ಯಾಚಾರ, ಅಪಮಾನ, ಹಿಂಸೆ, ನಿರಂತರ ಹಸಿವು, ಬಡತನ, ನೈಸರ್ಗಿಕ ಅಸಮತೋಲನಗಳಿಗೆ ಹೆಚ್ಚಾಗಿ ಬಲಿಯಾಗುವವರು ಮಹಿಳೆ ಮತ್ತು ಮಕ್ಕಳೇ ಆಗಿದ್ದಾರೆ. ಜಗತ್ತಿನ ಅನಕ್ಷರಸ್ಥರಲ್ಲಿ ಬಹುದೊಡ್ಡ ಪಾಲು ಅನಕ್ಷರಸ್ಥರು ಮುಸ್ಲಿಂ ಮಹಿಳೆಯರೇ ಆಗಿದ್ದಾರೆ.

ಧಾರ್ಮಿಕ ನಿರ್ಬಂಧಗಳೂ, ನಿಷೇಧಗಳ ನಡುವೆ ಉಸಿರುಗಟ್ಟುವ ವಾತಾವರಣದಲ್ಲಿ ಮುಸ್ಲಿಂ ಮಹಿಳೆ ರೋಸಿ ಹೋಗಿದ್ದಾಳೆ. ಅವಳೀಗ ಖುರಾನಿನ ಪ್ರಕಾರವೇ ತಮಗೆ ಸಿಗಬೇಕಾದ ಆಸ್ತಿಯ ಪಾಲನ್ನು ಧಾರ್ಮಿಕ ಸಮಾನತೆಯ ಹಕ್ಕನ್ನು ಕೇಳುವಂತಾಗಿದ್ದಾಳೆ. ಸಮಾಜದಲ್ಲಿ ಗೌರವದ ಬದುಕನ್ನು ಕೇಳುತ್ತಿದ್ದಾಳೆ. ಕುರಾನನ್ನು ಸರಿಯಾಗಿ ಅರ್ಥೈಸಲು ಮುಲ್ಲಾಗಳಿಗೆ ಕೇಳುತ್ತಿದ್ದಾರೆ. ಅವಳು ಕೇಳುವ ಅಧಿಕಾರ ಮತ್ತು ಹಕ್ಕುಗಳು ಧರ್ಮಸಮ್ಮತವಾಗಿರುವುದರಿಂದ ಮುಲ್ಲಾಗಳಿಗೂ ತಿರಸ್ಕರಿಸಲು ಸಾಧ್ಯವಾಗುತ್ತಿಲ್ಲ. ಇಂತಹ ಸಂದಿಗ್ಧದಲ್ಲಿ ಭಾರತದ ಮುಸ್ಲಿಂ ಜನಾಂಗವಿದೆ.

ವಿಶ್ವದ ಎಲ್ಲಾ ಮುಸ್ಲಿಂ ಮಹಿಳೆಯರ ಸಮಸ್ಯೆಗಳು ಒಂದೇ ತೆರನಾಗಿಲ್ಲ, ಅವು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಭಿನ್ನವಾಗಿದೆ. ಭಾರತೀಯ ಮುಸ್ಲಿಂ ಮಹಿಳೆ

ಶರಿಯಾ ಕುರಾನನ್ನು ಸರಿಯಾಗಿ ಅರ್ಥೈಸುವುದನ್ನು ಹಕ್ಕುಗಳನ್ನು, ರಾಜಕೀಯ ಮೀಸಲಾತಿಯನ್ನು ಕೇಳುತ್ತಿರುವ ಸಂದರ್ಭದಲ್ಲಿ ಆಫ್ಘಾನಿಸ್ತಾನ, ಇರಾಕ್, ಇರಾನ್ನಿನ ಮಹಿಳೆಯರು ಬದುಕಿಗಾಗ ತಮ್ಮ ನೆಲದ ಮೇಲೆ ಇತರರ ದಾಳಿಯಿಂದ ತತ್ತರಿಸಿದ್ದಾರೆ. ಯುದ್ಧಗಳು ಅವರ ಬದುಕನ್ನು ನುಂಗಿ ಹಾಕುತ್ತಿದ್ದಾರೆ. ಪಾಕಿಸ್ತಾನಿ ಮಹಿಳೆಯರು ಮರ್ಯಾದಾ ಹತ್ಯೆ, ಆ್ಯಸಿಡ್ ಪ್ರಕರಣಗಳನ್ನು ವಿರೋಧಿಸುತ್ತಿದ್ದಾರೆ. ಈ ಜನಾಂಗದ ಮಹಿಳೆಯರ ಸಮಸ್ಯೆಗಳು, ನೋವುಗಳು ದೇಶದಿಂದ ದೇಶಕ್ಕೆ ಭಿನ್ನವಾಗಿದೆ.

ಆಫ್ಘಾನಿಸ್ತಾನಿ ಮಹಿಳೆಗೆ ಉಸಿರುಗಟ್ಟುವ ವಾತಾವರಣವಿದೆ. ಬುರ್ಖಾ ಹಾಕದೇ ಹೊರಗೆ ಹೋಗುವಂತಿಲ್ಲ. ಶಾಲೆ ಕಲಿಯುವಂತಿಲ್ಲ. ನೌಕರಿ ಮಾಡುವಂತಿಲ್ಲ. ಪುರುಷರ ಜೊತೆ ಮಾತಾಡುವಂತಿಲ್ಲ. ಅಲ್ಲಿಯ ನ್ಯಾಯಾಲಯ ಇನ್ನೂ ತಾಲಿಬಾನಿ ಶೈಲಿಯಲ್ಲೇ ಇದೆ. ಅವರು ಮನೆಯಲ್ಲಿದ್ದೇ ಪರೀಕ್ಷೆ ಕಟ್ಟಬಹುದಾದರೂ ಶಾಲೆಯಿಂದ ಕಿತ್ತು ಹಾಕಲ್ಪಟ್ಟಿದ್ದಾರೆ. ಮುಕ್ತವಾಗಿ ಬೆರೆಯುವಂತಿಲ್ಲ. ಟಿ.ವಿ. ಯಲ್ಲಿ ವಾರ್ತೆ ಓದುವಂತಿಲ್ಲ- ಇಲ್ಲ... ಇಲ್ಲ... ಇಲ್ಲ.... ಎಂಬ ನಿರಂತರ ನಿಷೇಧಗಳ ಮಧ್ಯೆ ಉಸಿರುಗಟ್ಟಿಸುವ ಬದುಕು ಅವಳದು.

ಇಸ್ಲಾಮಿಕ್ ರಾಷ್ಟ್ರದ ಮಹಿಳೆಯರು

ಈಜಿಪ್ಟ್, ಟರ್ಕಿ, ಸಿರಿಯಾ, ಮಲೇಷಿಯಾ, ಟುನಿಷಿಯಾ, ಇರಾನ್, ಇರಾಕ್, ಆಫ್ಘಾನಿಸ್ತಾನ, ಪಾಕಿಸ್ತಾನ, ಮೊರೊಕ್ಕೊ, ಅರೇಬಿಯಾ, ಸಿಂಗಾಪೂರ್, ಸೂಡಾನ್, ಜೋರ್ಡಾನ್, ಬಾಂಗ್ಲಾದೇಶಗಳು ಮುಸ್ಲಿಂ ರಾಷ್ಟ್ರಗಳಾಗಿರಬಹುದು. ಆದರೆ ಆ ದೇಶಗಳಲ್ಲಿನ ಬಹುಪಾಲು ಮುಸ್ಲಿಂ ಮಹಿಳೆಯರು ಶೂದ್ರರೇ ಆಗಿದ್ದಾರೆ. ಆದರೆ ಧರ್ಮಶಾಸ್ತ್ರದ ಪ್ರಕಾರ ಅವರು ಹಕ್ಕು ಮತ್ತು ಗೌರವಗಳನ್ನು ಪಡೆದವರಾಗಿದ್ದರೂ ವಾಸ್ತವದಲ್ಲಿ ಏನಾಗಿದೆ? ಹಾಗಾದರೆ ಮುಸ್ಲಿಂ ಧರ್ಮ ಪುರುಷ ಪಕ್ಷಪಾತಿಯಾಗಿದೆಯೇ ?

ಇಸ್ಲಾಂ ಧರ್ಮಕ್ಕೆ ಗಂಡಾಂತರವಿದೆಯೆ ? ಇಸ್ಲಾಂನ ಶರಿಯತ್ತು ಜಡವಾಗಿದೆಯೆ ? ಎಂದು ಪ್ರಶ್ನಿಸಿದರೆ ಅದಕ್ಕೆಲ್ಲ ಒಂದೇ ಉತ್ತರ 'ಇಲ್ಲ' ಎಂಬುದು. ನಿಜವಾದ ಇಸ್ಲಾಂ ಸ್ತ್ರೀಪರವಾಗಿದೆ. ಉನ್ನತ ಮಾನವೀಯ ಗುಣಗಳನ್ನು ಒಳಗೊಂಡಿದೆ. ಪೈಗಂಬರರ ಕಾಲದಲ್ಲಿ ಮುಸ್ಲಿಂ ಮಹಿಳೆಯರ ಘನತೆಗಾಗಿ ಸಾಕಷ್ಟು ಪ್ರಯತ್ನಗಳನ್ನು ನಡೆಸಿ, ಮಹಿಳೆಯರಿಗೆ ಘನತೆ, ಗೌರವಗಳನ್ನು ನೀಡಿದರು. ಆದರೂ ಇಸ್ಲಾಂ ರಾಷ್ಟ್ರಗಳಲ್ಲಿರುವಂತೆ ಇತರ ರಾಷ್ಟ್ರಗಳ ಮಹಿಳೆಯರೂ ಸಹ ಒಂದಿಲ್ಲೊಂದು ರೀತಿಯ ನರಕಯಾತನೆಗಳನ್ನು ಅನುಭವಿಸುತ್ತಿದ್ದಾರೆ.

ಆಫ್ಘಾನಿಸ್ತಾನಿ ಮಹಿಳೆಗೆ ಉಸಿರುಗಟ್ಟುವ ವಾತಾವರಣವಿದೆ. ಬುರ್ಖಾ ಹಾಕದೇ ಹೊರಗೆ ಹೋಗುವಂತಿಲ್ಲ, ಶಾಲೆ ಕಲಿಯುವಂತಿಲ್ಲ, ನೌಕರಿ ಮಾಡುವಂತಿಲ್ಲ, ಪುರುಷರ ಜೊತೆ ಮಾತಾಡುವಂತಿಲ್ಲ, ತಾಲಿಬಾನಿಗಳ ಅಧಿಕಾರ ಹೋಗಿ ಅಮೇರಿಕ ಮಿತ್ರಬಣ ಅಧಿಕಾರಕ್ಕೆ ಬಂದರೂ ಸಹ ಅವಳ ಸ್ವಾತಂತ್ರ್ಯದ ಉಸಿರಾಡಬಹುದೆಂಬ ನಿರೀಕ್ಷೆಯೂ ಹುಸಿಯಾಗಿದೆ. ಅಲ್ಲಿಯೂ ನ್ಯಾಯಾಲಯ ಇನ್ನೂ ತಾಲಿಬಾನಿ ಶೈಲಿಯಲ್ಲೇ ಇದೆ. ಮಹಿಳೆಯರಿಗೆ ಶರಿಯಾ ಕಾನೂನಿನ ರೀತಿಯಲ್ಲೇ ಇಂದಿಗೂ ಶಿಕ್ಷೆ ಕಾದಿದೆ. ೧೯೭೦ರಲ್ಲಿ ಮದುವೆಯಾದ ನಂತರ ಹೆಣ್ಣು ಶಾಲೆಗೆ ಹೋಗುವಂತಿಲ್ಲ ಎಂಬ ಕಾನೂನು ಜಾರಿಗೊಳಿಸಿತ್ತು. ಈ ಕಾನೂನು ಚಲಾವಣೆಯಲ್ಲಿರಲಿಲ್ಲವಾದರೂ ಅಮೇರಿಕಾ ಮಿತ್ರ ಪಡೆಯ ಸರ್ಕಾರ ಈಗ ಅದನ್ನು ಪುನಃ ಜಾರಿಗೊಳಿಸಿದೆ. ಏಕೆಂದರೆ ಮದುವೆಯಾದ ಹುಡುಗಿಯರು ಮದುವೆಯಾಗದ ಹುಡುಗಿಯರಿಗೆ ಲೈಂಗಿಕ ವಿಷಯಗಳನ್ನು ಕಲಿಸಬಹುದೆಂಬ ಭಯವಿದೆಯಂತೆ. ಅವರು ಮನೆಯಲ್ಲಿದ್ದೇ ಪರೀಕ್ಷೆ ಕಟ್ಟಬಹುದಾದರೂ ಶಾಲೆಯಿಂದ ಕಿತ್ತು ಹಾಕಲ್ಪಟ್ಟಿದ್ದಾರೆ. ಮುಕ್ತವಾಗಿ ಬೆರೆಯುವಂತಿಲ್ಲ, ಬುರ್ಖಾ ಹಾಕದೆ ಹೊರಬರುವಂತಿಲ್ಲ, ಸಾರ್ವಜನಿಕವಾಗಿ ಹಾಡುವಂತಿಲ್ಲ, ಪುರುಷರಿಗೆ ಶಿಕ್ಷಕಿಯಾಗುವಂತಿಲ್ಲ, ಟಿ.ವಿ. ಯಲ್ಲಿ ವಾರ್ತೆ ಓದುವಂತಿಲ್ಲ- ಇಲ್ಲ... ಇಲ್ಲ... ಇಲ್ಲ.... ಎಂಬ ನಿರಂತರ ನಿಷೇಧಗಳ ಮಧ್ಯೆ ಉಸಿರುಗಟ್ಟಿಸುವ ಬದುಕು ಅವಳದು.

ಆಫ್ಘಾನಿಸ್ತಾನ ೨೪ ವರ್ಷದ ತರುಣಿ, ಶಾಲಾ ಶಿಕ್ಷಕಿ ಸೂಫ್‌ಮೈ ತನ್ನ ಬದುಕೊಂದು 'ಜೀವಂತ ಸಮಾಧಿ' ಎಂದು ಕರೆಯುತ್ತಾಳೆ. ನಾಲ್ಕು ವರ್ಷಗಳ ಹಿಂದೆ ಬಾಂಬ್‌ಸ್ಫೋಟವೊಂದರಲ್ಲಿ ಬಲಗೈ, ಬಲಗಾಲು ಕಳೆದುಕೊಂಡ ಅವಳಿಗೆ ತಾಲಿಬಾನ್ ರಾಜ್ಯದಲ್ಲಿ ಕೃತಕ ಕಾಲುಗಳು ಲಭ್ಯವಿಲ್ಲ, ಬುರ್ಖಾಧರಿಸದೇ ಹೊರಗೆ ಹೋಗುವಂತಿಲ್ಲ. ಉಸಿರು ಕಟ್ಟುವ ವಾತಾವರಣದಲ್ಲಿ ಬದುಕುವುದಕ್ಕಿಂತ ನಾನೇಕೆ ಸಾಯಲಿಲ್ಲ? ಎಂದು ಸಾವನ್ನು ನಿರೀಕ್ಷಿಸುತ್ತಿದ್ದಾಳೆ.

ಇರಾನ್‌ನ ಸರ್ಕಾರ ಕೂಡ ಮಹಿಳೆಯ ಮೇಲೆ ಶೋಷಣೆ, ದಬ್ಬಾಳಿಕೆ ನಡೆಸಿದೆ. ಖುಮೇನಿಯನ್ನು ವಿರೋಧಿಸಿದ ಗುಂಪಿನ ಸಾವಿರಾರು ಜನ ಕನ್ಯೆಯರನ್ನು ಅದು ಗಲ್ಲಿಗೇರಿಸಿತು. ಆದರೆ ಗಲ್ಲಿಗೇರಿಸುವುದಕ್ಕೆ ಮುನ್ನ ಕಾರಾಗೃಹದಲ್ಲಿ ಅವರ ಕನ್ಯತ್ವವನ್ನು ಕಸಿಯಲಾಯಿತು. ಅದಕ್ಕೆ ಅವರು ಸಮರ್ಥಿಸಿಕೊಳ್ಳುವ ರೀತಿ ಮಾನವೀಯತೆಯ ಹೆಸರಿಗೆ ಕಳಂಕವಾಗಿದೆ. 'ಕನ್ಯೆಯರಾಗೇ ಅವರನ್ನು ಗಲ್ಲಿಗೇರಿಸಿದರೆ ಅವರು ಸ್ವರ್ಗಕ್ಕೆ ಹೋಗುತ್ತಾರೆ. ಆದ್ದರಿಂದ ಅವರಿಗೆ ಸ್ವರ್ಗದಲ್ಲಿಯೂ ಜಾಗ ಸಿಗಬಾರದೆಂದು ಅವರ ಶೀಲವನ್ನು ಕೆಡಿಸಿ ಗಲ್ಲಿಗೇರಿಸಿದ್ದೇವೆ' ಎಂದು ಅವರು ಸಮರ್ಥಿಸಿಕೊಂಡರು. ಹೀಗೆ ಹೃದಯ ಖಂಡಿಸುವ ಸ್ಥಿತಿಯಲ್ಲಿ ಇರಾನಿನ ಮಹಿಳೆ ಬದುಕುತ್ತಿದ್ದಾಳೆ.

ಖುಮೇನಿ ಸರ್ಕಾರ ಬುರ್ಖಾ ಕಡ್ಡಾಯಗೊಳಿಸಿದಾಗ ಇರಾನಿನ ಇಸ್ಲಾಂ ಮೂಲಭೂತವಾದಿಗಳ ವಿರುದ್ಧ ಮುಸ್ಲಿಂ ಮಹಿಳೆಯರು ಹೋರಾಟ ನಡೆಸಿದರು. ಸುಮಾರು ೫೦,೦೦೦ ಜನ ಮಹಿಳೆಯರು ತೆಹರಾನಿನ ಬೀದಿ ಬೀದಿಗಳಲ್ಲಿ ಖುಮೇನಿಯ ಕರಾಳ ಶಾಸನದ ವಿರುದ್ಧ ಧ್ವನಿಯೆತ್ತಿದರು. ಆಗ ಆಯಾತುಲ್ಲಾ ಖುಮೇನಿ ತನ್ನ ಶಾಸನವನ್ನು ಹಿಂತೆಗೆದುಕೊಳ್ಳಬೇಕಾಯಿತು. ಕಠೋರ ನಿರ್ಬಂಧಗಳನ್ನು ಜಾರಿಗೊಳಿಸಿದ್ದರ ಪರಿಣಾಮ ಉನ್ನತ ಹುದ್ದೆಗಳನ್ನು ಮಹಿಳೆಯರು ಕಳೆದುಕೊಳ್ಳುವಂತಾಯಿತು. ಅಲ್ಲಿಯ ಮಹಿಳೆ ತನ್ನ ಸ್ಥಿತಿ ಉತ್ತಮಪಡಿಸಿಕೊಳ್ಳಲು ಸಮರೋಪಾದಿಯಲ್ಲಿ ಅಲ್ಲದಿದ್ದರೂ ಕ್ಷೀಣವಾದ ಧ್ವನಿ ಎತ್ತುತ್ತಿದ್ದಾಳೆ. ಮಹಿಳಾ ಸಂಘ, ಸಂಸ್ಥೆಗಳನ್ನು ಕಟ್ಟಿಕೊಳ್ಳುತ್ತಿದ್ದಾಳೆ. ಶಿರಿನ್ ಇಬಾದಿಯಂತಹ ದಿಟ್ಟ ಮಹಿಳೆಯರು - ಮಹಿಳೆಯ ಮತ್ತು ಮಕ್ಕಳ ಮಾನವೀಯ ಹಕ್ಕುಗಳಿಗಾಗಿ ಹೋರಾಡುತ್ತ ನೋಬೆಲ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

೧೯೨೦ರಲ್ಲಿ ಟರ್ಕಿಯಲ್ಲಿ ಮುಸ್ತಫಾ ಕಮಲ್ ಅತಾಯರ್ ಪ್ರಾರಂಭಿಸಿದ ರಾಷ್ಟ್ರೀಯ ಹೋರಾಟ ಇಸ್ಲಾಂ ಧರ್ಮಾಧಿಪತ್ಯವನ್ನು ತಿರಸ್ಕರಿಸಿತು. ಒಟ್ಟಮನ್ ಸ್ಯಾಲಿ ಪೇಟ್‌ನನ್ನು ಧಾರ್ಮಿಕ ನಾಯಕತ್ವದಿಂದ ತೊಲಗಿಸಿತ್ತು. ಟರ್ಕಿಯಲ್ಲಿ ಅನೇಕ ಆಂತರಿಕ ಬದಲಾವಣೆಗಳಾದವು. ಮಹಿಳೆಯರು ಘೋಷಾ ಪದ್ಧತಿಯನ್ನು ತೊರೆದರು. ಬಹುಪತ್ನಿತ್ವವನ್ನು ತಿರಸ್ಕರಿಸಿದರು. ೧೯೩೪ರಲ್ಲಿ ಮತದಾನದ ಹಕ್ಕನ್ನು ಪಡೆದುಕೊಂಡರು. ಟರ್ಕಿಯ ಮುಸ್ಲಿಂ ಮಹಿಳೆ ತನ್ನೆಲ್ಲ ಬಂಧನದ ಶೃಂಖಲೆಗಳನ್ನು ಕಳಚಿಟ್ಟು ಹೊಸ ಚೈತನ್ಯ ಪಡೆದಳು. ಇದಕ್ಕೆ ಅಲ್ಲಿಯ ರಾಜಕೀಯ ಇಚ್ಛಾಶಕ್ತಿಗಳು ಮಹತ್ವದ ಪರಿಣಾಮ ಬೀರಿದವು. ಅದಕ್ಕೆ ಸ್ತ್ರೀಯರ ನಿರ್ಬಂಧ ಸಡಿಲಿಸುವುದಕ್ಕೆ ಮೊದಲು ರಾಜಕೀಯಕ್ಕೆ ಇಚ್ಛಾಶಕ್ತಿ ಇರಬೇಕಾದುದು ಅವಶ್ಯಕ.

ಅರಬ್ ದೇಶದ ಮಹಿಳೆಯರು ತಮ್ಮ ರಾಷ್ಟ್ರೀಯ ಚಳವಳಿಗಳಲ್ಲಿ ಭಾಗವಹಿಸಿದ್ದರಿಂದಲೇ ಅವರಿಗೆ ೧೯೨೯ರಲ್ಲಿ ಪ್ಯಾಲಸ್ಟೇನ್‌ನಲ್ಲಿ ಪ್ರಥಮ ಮಹಿಳಾ ಸಮಾವೇಶವನ್ನು ನಡೆಸಲು ಸಾಧ್ಯವಾಯಿತು. ಪ್ಯಾಲಸ್ತೇನಿನಲ್ಲಿ ಇಸ್ರೇಲ್‌ನ ರಚನೆಯಾಗಿ ತೀವ್ರ ಹೋರಾಟಗಳು ಈಗಲೂ ನಡೆಯುತ್ತಿರುವುದರ ಪರಿಣಾಮ ಮಹಿಳಾ ಚಳವಳಿಗಳಿಗೆ ಹಿನ್ನಡೆಯುಂಟಾಗಿದೆ. ಅವರ ಪ್ರಗತಿಯ ಪ್ರಯತ್ನಗಳನ್ನು ಯುದ್ಧಗಳು, ಹಿಂಸೆಗಳು ನುಂಗಿಹಾಕಿವೆ. ಪ್ರಗತಿಯ ಪ್ರಯತ್ನಗಳು ನಿಷ್ಫಲಗೊಂಡವು. ತಮ್ಮದೇ ದೇಶದಲ್ಲಿ ತಮ್ಮ ಅಸ್ತಿತ್ವಕ್ಕಾಗಿ ಆ ಮಹಿಳೆ ದಿನವೂ ಆತಂಕದಲ್ಲಿದ್ದಾಳೆ. ಭೂಪಟದಿಂದ ತನ್ನ ರಾಷ್ಟ್ರದ ನಿಶಾನೆಯನ್ನೇ ಕಳೆದುಕೊಳ್ಳುವ ಭೀತಿಯಲ್ಲಿದ್ದಾಳೆ. ಸಾಮ್ರಾಜ್ಯಶಾಹಿ ದರೋಡೆಕೋರ ರಾಷ್ಟ್ರವಾದ ಅಮೆರಿಕಾ ಇಸ್ರೇಲನ್ನು ಹುಟ್ಟುಹಾಕಿ ತನ್ನ ಬೆರಳ ಮೇಲೆ ಕುಣಿಸುತ್ತಿದ್ದಾರೆ. ೧೯೪೭ರಲ್ಲಿ ಭಾರತ ಪಾಕಿಸ್ತಾನವನ್ನು ಇಬ್ಭಾಗವಾಗಿಸಿ ನಿರಂತರ ತಿಕ್ಕಾಟಗಳಿಗೆ ಕಾರಣವಾಗಿರುವಂತೆ.

ಅಲ್ಜೀರಿಯಾದ ಮಹಿಳೆಯರು ಫ್ರೆಂಚ್ ವಸಾಹತುವಾದವನ್ನು ವಿರೋಧಿಸಿದರು. ಆದರೂ ವಸಾಹತುಗಳು ಕೆಲವೊಮ್ಮೆ ಪೂರಕ ಕೆಲಸಗಳನ್ನೂ ಮಾಡುತ್ತದೆ. ಭಾರತದಲ್ಲಿ ವಿಧವಾ ವಿವಾಹ, ಆಸ್ತಿ ಹಕ್ಕು, ಸತಿಪದ್ಧತಿ ನಿಷೇಧ ಕಾನೂನು ರಚಿಸಿದಂತೆ. ಫ್ರೆಂಚ್ ವಸಾಹತು ಅಲ್ಜೀರಿಯಾದ ಮಹಿಳೆಗೆ ಶಾಪದಂತಿದ್ದ ಬುರ್ಖಾ, ಬಹುಪತ್ನಿತ್ವ, ಬಾಲ್ಯವಿವಾಹಗಳಿಗೆ ನಿಷೇಧ ಕಾನೂನು ಜಾರಿಗೊಳಿಸಿ ಮಹಿಳೆಯರ ಶಿಕ್ಷಣಕ್ಕಾಗಿ ಶಾಲೆಗಳನ್ನು ತೆರೆಯಿತು. ಆದರೆ ಅಲ್ಜೀರಿಯಾದ ಪುರುಷರ ಅಹಮಿಕೆ ತಮ್ಮ ಹೆಣ್ಣುಮಕ್ಕಳನ್ನು ಅಡಿಗೆ ಮನೆಗೂ ತಾವು ರಾಜಕೀಯಕ್ಕೂ ಸೀಮಿತವಾದರು. ತಮ್ಮ ಹೆಣ್ಣುಗಳ ಮೇಲೆ ಅಧಿಪತ್ಯ ಸಾಧಿಸಿದರು. ಮತ್ತೆ ಅಲ್ಲಿಯ ಮಹಿಳೆ ನಿಶೇಧಗಳ ಮಧ್ಯ ಬದುಕುವುದು ಅನಿವಾರ್ಯವಾಯಿತು. ಅಲ್ಜೀರಿಯಾದ ಮಹಿಳೆ ವಿಯೆಟ್ನಾಂ ಮಹಿಳೆಯರಂತೆ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡುತ್ತಲೇ ತನ್ನ ಸ್ವಾತಂತ್ರ್ಯವನ್ನು ಹುಡುಕಿಕೊಳ್ಳಲಿಲ್ಲ.

ಮಹಿಳೆಯರ ಮೇಲೆ ಹೆಚ್ಚು ಹೆಚ್ಚು ವ್ರತ ನಿಯಮ, ಧಾರ್ಮಿಕ ಕಟ್ಟಳೆ, ಉಡುಪು ಸಂಹಿತೆಗಳನ್ನು ಹೇರುತ್ತಾರೆ.

ಈಜಿಪ್ಟ್‌ನ ಮುಸ್ಲಿಂ ಮಹಿಳೆಯರು ಅಲ್ಲಿ ತಮ್ಮ ಪತಿಯೇನಾದರೂ ತಲಾಖ್ ನೀಡಿದರೆ ಅವನು ಜೀವನಾಂಶವನ್ನು ಕೊಡಬೇಕೆಂಬ ಕಾನೂನು ಜಾರಿಯಾಗುವಂತೆ ಮಾಡಿದ್ದಾರೆ. ಟುನಿಷಿಯಾದ ಮಹಿಳೆ ಬಹುಪತ್ನಿತ್ವವನ್ನು ಕಾನೂನು ಬಾಹಿರವಾಗಿ ಮಾಡುವ ಶಾಸನ ಮಾಡಿಸಿಕೊಂಡಿದ್ದಾರೆ. ಸಿರಿಯಾದ ಮಹಿಳೆ 'ಬಹುಪತ್ನಿತ್ವ ಏಕೆ ಅವಶ್ಯಕವಾಗಿದೆ' ಎಂದು ಗಂಡ ವಿವರಣೆ ನೀಡಿ ಸರ್ಕಾರಕ್ಕೆ ಮನವರಿಕೆ ಮಾಡಿಸಿದ ನಂತರವೇ ೨ನೇ ಮದುವೆಗೆ ಅನುವು ಮಾಡಿಕೊಡುತ್ತಾಳೆ. ತಲಾಖ್ ನೀಡಿದ ಗಂಡ ಜೀವನಾಂಶವನ್ನು ಕೊಡಬೇಕೆಂಬ ನಿರ್ಬಂಧ ವಿಧಿಸಿದ್ದಾಳೆ. ಪಾಕಿಸ್ತಾನ ಮಹಿಳೆ–ಗಂಡ ಮರುಮದುವೆಯಾಗಬೇಕಾದರೆ ಮಂಡಳಿಯ (ಇದಕ್ಕಾಗಿ ಮಂಡಳಿಯೊಂದನ್ನು ರಚಿಸಿಕೊಂಡಿದ್ದಾರೆ) ಅನುಮತಿ ಪಡೆದು ಸಮಸ್ಯೆ ತೀರ ಉಲ್ಬಣಗೊಂಡಿದ್ದರಷ್ಟೇ ತಲಾಖ್ ನೀಡಲು ಸಮಿತಿಯು ಅನುಮತಿ ನೀಡುತ್ತದೆ. ಆದರೂ ತಲಾಖ್ ನೀಡುವುದು ಸುಲಭವಲ್ಲ. ಇರಾನ್‌ನ ಮಹಿಳೆಯ ಜೀವನಾಂಶ ಕೇಳುವ ಹಕ್ಕನ್ನು ಇಟ್ಟುಕೊಂಡಿದ್ದಾಳೆ. ಇರಾಕ್‌ನ ಮಹಿಳೆಯರು ಬೆನ್ನಿಗೆ ಕೂಸು ಕಟ್ಟಿಕೊಂಡು ಜೀವ ಉಳಿಸಿಕೊಳ್ಳಬೇಕಾದರೆ ಕೈಯಲ್ಲಿ ಕೋವಿ ಹಿಡಿಯುವ ಅನಿವಾರ್ಯತೆಯಿದೆ.

ಪಾಕಿಸ್ತಾನದ ಸಿಂಧ್ ಪ್ರಾಂತವೊಂದರಲ್ಲೇ ೧೯೯೭ರಲ್ಲಿ ಮರ್ಯಾದಾ ಹತ್ಯೆಗಳು ೩೦೦ ನಡೆದರೆ ೧೯೯೮-೯೯ರಲ್ಲಿ ೮೫೦ ಜನ ಮಹಿಳೆಯರು ಹತ್ಯೆಗೀಡಾಗಿದ್ದಾರೆ. ಪಾಕಿಸ್ತಾನದಲ್ಲಿ ಮನೆಯೊಳಗಿನ ಹಿಂಸೆ ಸಾಮಾನ್ಯವಾಗುತ್ತಿದೆ. ಇಲ್ಲಿಯ ಸ್ತ್ರೀಯರನ್ನು ಮಟ್ಟ ಹಾಕಲು ಆ್ಯಸಿಡ್ ಸುಲಭ ಅಸ್ತ್ರವಾಗುತ್ತಿದೆ. ೧೯೯೧ರಲ್ಲಿ 'ಮೈ ಫ್ಯೂಡಲ್ ಲಾರ್ಡ್' ಎಂಬ ಆತ್ಮ ಚರಿತ್ರೆಯಲ್ಲಿ ತಹ್ಮೀನಾ ತನ್ನ ಪತಿ ಮುಸ್ತಫಾನಿಂದ ಅನುಭವಿಸಿದ ನರಕ ಯಾತನೆಯನ್ನು ಅದರಲ್ಲಿ ದಾಖಲಿಸಿದ್ದಾರೆ. ಈ ಪುಸ್ತಕ ೩೭ ಭಾಷೆಗಳಿಗೆ ಅನುವಾದಗೊಂಡು ತಹ್ಮೀನಾರಿಗೆ ಹಣವನ್ನು ಪ್ರಸಿದ್ಧಿಯನ್ನು ದೊರಕಿಸಿಕೊಟ್ಟಿತು. ಆದರೆ ಇದರಿಂದ ಗಂಡನ ಮನೆಯಿಂದ ದೂರವಾಗಿದ್ದು ಅವರನ್ನು ತವರು ಮನೆಯವರೂ ದೂರವಿಟ್ಟರು. ಇದೇ ತಹ್ಮಿನಾ ದುರಾನಿಯವರು ಆಸಿಡ್ ದಾಳಿಯನ್ನು ಗಂಡನಾದ ಬಿಲಾಲ್‌ನಿಂದ ಅನುಭವಿಸುತ್ತಿರುವ ಪಾಕಿಸ್ತಾನದ ಫಖ್ರಾ ಅವರನ್ನು ಪತಿಯ ಮನೆಯ ಹಿಂಸೆಯಿಂದ ಹೊರತಂದು ಆಶ್ರಯ ನೀಡಿ ಮಿಲಾನ್ ಮೂಲದ ಕಂಪನಿಯೊಂದರ ಸಹಾಯದಿಂದ ಇಟಲಿಯಲ್ಲಿ ಶಸ್ತ್ರಚಿಕಿತ್ಸೆ ನಡೆಸಲು ವ್ಯವಸ್ಥೆ ಮಾಡಿದ್ದಾರೆ. ಪುರುಷರು ಮಹಿಳೆಯರ ಮೇಲೆ ನಡೆಸುತ್ತಿರುವ ಈ ಹಿಂಸೆಯಿಂದ ಮುಸ್ಲಿಂ ಲೋಕ ನಾಚಿಕೆಯಿಂದ ತಲೆ ತಗ್ಗಿಸಬೇಕಾಗಿದೆ.

ಇಷ್ಟೆಲ್ಲಾ ಹಿಂಸೆಯನ್ನು ಎದುರಿಸಿ ಒಳ್ಳೆಯ ವ್ಯವಸ್ಥೆಗಾಗಿ ಹೋರಾಟ ನಡೆಸುತ್ತಿರುವ ತಹ್ಮಿನಾ ದುರಾನಿ, ಹೀನಾ ಜಿಲಾನಿ, ಅಸ್ಮಾ ಜಹಾಂಗೀರ್, ತಾಹಿರಾ ಮಜರ್ ಆಲಿಯಂತಹ ಮಹಿಳೆಯರು ಆಶಾಕಿರಣವಾಗಿದ್ದಾರೆ. ಕರಾಚಿಯಲ್ಲಿ ಮಹಿಳೆಯರಿಂದಲೇ ನಡೆಸಲ್ಪಡುವ 'ದಿ ಹೆರಾಲ್ಡ್' ಎಂಬ ಪತ್ರಿಕೆಯಿದೆ. ಆಫ್ಘನ್ ಮಹಿಳೆಯ ಹಕ್ಕುಗಳಿಗಾಗಿ ಹೋರಾಡುತ್ತಿರುವ 'ರಾವಾ' ಇದೆ. ಪ್ರಾಣದ ಹಂಗು ತೊರೆದು ಹೋರಾಡಿದ 'ಮೀನಾ' ಅವರಿಗೆ ಇಸ್ಲಾಂ ಮೂಲಭೂತವಾದಿಗಳು ಕೊಂದು ಹಾಕಿದರೂ ಬೆದರದೇ ಹೋರಾಟ ಮುಂದುವರಿಸಿದ ಸಬೀನಾ ಕಬೀರ್‌ರಂತಹ ಮಹಿಳೆಯರು ಪ್ರಜಾಸತ್ತಾತ್ಮಕ ವ್ಯವಸ್ಥೆಯೊಂದರ ಸ್ಥಾಪನೆಗಾಗಿ ಪಾಕಿಸ್ತಾನದಲ್ಲಿರುವ ನಿರಾಶ್ರಿತರ ತಾಣಗಳಲ್ಲಿ ಆಪತ್ತುಗಳನ್ನು ಎದುರಿಸಿ ಹೋರಾಡುತ್ತಿದ್ದಾರೆ. ಮೂಲಭೂತವಾದಿಗಳು ತಮ್ಮ ಹೆಣ್ಣು ಮಕ್ಕಳು ಈ ಹೋರಾಟಗಾರ್ತಿಯರೊಂದಿಗೆ ಮಾತಾಡದಂತೆ, ಬೆರೆಯದಂತೆ ಮಾಡುತ್ತಿರುವುದಷ್ಟೇ ಅಲ್ಲ, ಈ ಹೋರಾಟಗಾರ್ತಿಯರು ಇಸ್ಲಾಂ ವಿರೋಧಿಗಳು. ಅವರು ನಡತೆಗೆಟ್ಟವರೆಂಬಂತೆ ಪ್ರಚಾರವನ್ನೂ ವ್ಯವಸ್ಥಿತವಾಗಿ ಅವರು ಮಾಡುತ್ತಿದ್ದಾರೆ.

ಮುಸ್ಲಿಂ ಮಹಿಳೆಗೆ ಉಡುಪು ಸಂಹಿತೆ

ಸರ್ವಾಧಿಕಾರಿ ಸಿದ್ಧಾಂತವಾದ ಕೋಮುವಾದಿ ಸಿದ್ಧಾಂತವು ನಿರಂಕುಶ ರಾಜಕೀಯ ರಚನೆಯಾಗಿದೆ. ತಮ್ಮ ಅನಾರೋಗ್ಯಪೂರ್ಣ ವಿಚಾರಗಳಿಂದ ಮಾನವನ ಯೋಚನಾ ಲಹರಿಯ ದಿಕ್ಕನ್ನೇ ಹಾಳು ಮಾಡಿ, ರೋಗಗ್ರಸ್ಥ ಸಮಾಜದ ನಿರ್ಮಿತಿಗೆ ಕಾರಣರಾಗುತ್ತಾರೆ. ಜನರಲ್ಲಿನ ಪ್ರಜಾಸತ್ತಾತ್ಮಕವಾದ ನೆಲೆಗಳನ್ನು ನಾಶ ಮಾಡುತ್ತದೆ. ಸಹಬಾಳ್ವೆಗೆ ಕಿಚ್ಚು ಹಚ್ಚುತ್ತದೆ. ಮಹಿಳೆಯರ ಮೇಲೆ ಹೆಚ್ಚು ಹೆಚ್ಚು ವ್ರತ ನಿಯಮ, ಧಾರ್ಮಿಕ ಕಟ್ಟಳೆ, ಉಡುಪು ಸಂಹಿತೆಗಳನ್ನು ಹೇರುತ್ತಾರೆ. ಭಾರತದಲ್ಲಿ ಬಹುಸಂಖ್ಯಾತರು ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಮಹಿಳೆಯರಿಗೆ ಉಡುಪು

ಸಂಹಿತೆಯನ್ನು ಹೇರಿದರೆ, ನಾವೇನು ಅವರಿಗಿಂತ ಕಡಿಮೆಯಿಲ್ಲ ಎಂದು ಅಲ್ಪಸಂಖ್ಯಾತರು ತಮ್ಮ ಅಸ್ತಿತ್ವ ಪ್ರತ್ಯೇಕತೆಯ ಸಾಂಸ್ಕೃತಿಕ ಸಂಕೇತಗಳನ್ನು ಉಳಿಸಿಕೊಳ್ಳುವ ಹುನ್ನಾರಕ್ಕೆ ಪೂರಕವಾಗಿ ಉಡುಪು ಸಂಹಿತೆಯನ್ನು ಜಾರಿಗೊಳಿಸುತ್ತಾರೆ. ಆದರೆ ಆಫ್ಘಾನಿಸ್ತಾನದ ಮೇಲೆ ಯುದ್ಧದ ಕರಿಮೋಡಗಳು ಆವರಿಸಿದ್ದಾಗ ಭಾರತದ ಕಾಶ್ಮೀರದ ಕಣಿವೆಗಳಲ್ಲಿ ಮುಸ್ಲಿಂ ಮಹಿಳೆಗೆ ಬುರ್ಖಾ ಕಡ್ಡಾಯವಾಗುತ್ತದೆ. 'ಲಷ್ಕರ್-ಎ-ಜಬ್ಬರ್' ಎಂಬ ಸಂಘಟನೆ ಕಾಶ್ಮೀರದ ಮುಸ್ಲಿಂ ಮಹಿಳೆಯರಿಗೆ ಬುರ್ಖಾ ಕಡ್ಡಾಯವೆಂದು ಘೋಷಿಸಿದಾಗ, ಭಾರತೀಯ ತಾಲಿಬಾನಿಗಳ ನಿಷೇಧಗಳಿಗೆ ಮಹಿಳೆಯರು ಬೆಚ್ಚಿಬೀಳುವಂತಾಯಿತು. ಬುರ್ಖಾ ಧರಿಸದವರ ಮುಖದ ಮೇಲೆ ಆ್ಯಸಿಡ್ ಎರಚಲಾಯಿತು. ಬುರ್ಖಾ ಮಾರಾಟಕ್ಕೆ ವ್ಯವಸ್ಥಿತ ಸಂಚು ನಡೆಸಲಾಯಿತು. ಆಗ ಬುರ್ಖಾ ಬೆಲೆಗಳು ದಿಢೀರ್ ಹೆಚ್ಚಾಯಿತು. ಇನ್ನಿಲ್ಲದಂತೆ ಬೇಡಿಕೆ ಸೃಷ್ಟಿಯಾಯಿತು. ಬುರ್ಖಾ ಖರೀದಿಸಲು ಅಂಗಡಿಗಳ ಮುಂದೆ ಹೆಣ್ಣುಗಳು ಸಾಲುಸಾಲು ನಿಂತರು. ವಸ್ತ್ರ ಸಂಹಿತೆಯಿಂದಾಗಿ ಭಯಗೊಂಡಿದ್ದ ಮುಸ್ಲಿಂ ಮಹಿಳೆಯ ಭಾವನೆಗಳನ್ನು ಅವರು ಲಾಭ ಗಳಿಕೆಗಾಗಿ ಬಳಸಿಕೊಂಡರು.

ಆದರೆ ಮಾಧ್ಯಮಗಳು ಈ ವಿಷಯವನ್ನು ಅತಿರಂಜನೀಯವಾಗಿ ಟೈಂಪಾಸ್ ವಿಷಯವಾಗಿ ಪ್ರಕಟಿಸಿತು. ಆದರೆ ಮುಸ್ಲಿಂ ಮಹಿಳೆಗೆ ಬೆಂಬಲವಾಗಿ ನಿಂತು ಪ್ರಶ್ನಿಸುವ ಧೈರ್ಯ ನೀಡುವ ಕೆಲಸ ಅವು ಮಾಡಲಿಲ್ಲ. ಇಂತಹ ಸಂದರ್ಭಗಳಲ್ಲಿ ಮಾಧ್ಯಮಗಳೂ ಸಹ ತಮ್ಮ ಎಡಬಿಡಂಗಿತನವನ್ನು ಬದಿಗೊತ್ತಿ ಸಾಮಾಜಿಕ ಬದ್ಧತೆ ತೋರಬೇಕಿದೆ. ಅವಳ ಹೋರಾಟಕ್ಕೆ ಬೆಂಬಲವಾಗಿ ಅಭಿವೃದ್ಧಿ ಕಾರ್ಯಗಳಿಗೆ ಪೂರಕವಾಗಬೇಕಿದೆ. ಜನರ ಮಹಿಳೆಯರ ಹಕ್ಕುಗಳ ರಕ್ಷಣೆ ಸರ್ಕಾರದ್ದಾಗಬೇಕಿದೆ. ಆದರೆ ತನ್ನ ನೆಲದ ಜನರ ರಕ್ಷಣೆ ಅದರ ಹೊಣೆ ಇದ್ದರೂ ಸಹ ಇಂತಹ ವಿಷಯಗಳಲ್ಲಿ ಮೌನ ವಹಿಸುವುದು ಏನನ್ನು ಸೂಚಿಸುತ್ತದೆ.

ಈ ಮೂಲಭೂತವಾದಿಗಳು ಇಂತಹ ಸಂಹಿತೆಗಳನ್ನು ಜಾರಿಗೊಳಿಸುವುದರ ಮೂಲಕ ಮಹಿಳೆಯರ ಮಧ್ಯದ ಒಗ್ಗಟ್ಟನ್ನು ಒಡೆದು, ಅವರ ಚಲನಶೀಲತೆ ಮತ್ತು ಅಭಿವೃದ್ಧಿಯನ್ನು ನಿಯಂತ್ರಿಸುತ್ತಾರೆ. ಧಾರ್ಮಿಕ ಮೂಲಭೂತವಾದಿಗಳು ಧರ್ಮ, ಸಂಸ್ಕೃತಿಯ ಹೆಸರಿನಲ್ಲಿ, ಕೌಟುಂಬಿಕ ಮೌಲ್ಯಗಳ ಹೆಸರಿನಲ್ಲಿ ಆಕ್ರಮಣಕಾರ ಭಯೋತ್ಪಾದನೆಯನ್ನು ರಾಜಕೀಯದ ಮರೆಯಿಂದ ಸ್ತ್ರೀ ಹಕ್ಕುಗಳ ಮೇಲೆ ದಾಳಿ ನಡೆಸುತ್ತಾರೆ. ಜನರನ್ನು ಸಾಂಸ್ಕೃತಿಕವಾಗಿ ಭಾವನಾತ್ಮಕವಾಗಿ ಉದ್ರೇಕಿಸಿ, ಅದನ್ನು ಓಟುಗಳಾಗಿ ಮಾರ್ಪಡಿಸುವ ರಾಜಕೀಯ ಹುನ್ನಾರಗಳನ್ನು ಅಲ್ಲಗಳೆಯುವಂತಿಲ್ಲ.

ಭಾರತೀಯ ಮುಸ್ಲಿಂ ಮಹಿಳೆಯರು

ಪ್ಯಾಲೆಸ್ತೇನಿಯನ್ ಮಹಿಳೆ ಇಸ್ರೇಲಿ ಸೈನಿಕರ ದೌರ್ಜನ್ಯದ ವಿರುದ್ಧ, ಇರಾಕ್, ಅಫ್ಘಾನಿಸ್ತಾನದ ಮಹಿಳೆ ಅಮೇರಿಕದ ವಿರುದ್ಧ ಹೋರಾಟ ನಡೆಸಿದ್ದಾರೆ. ಪಾಕಿಸ್ತಾನಿ ಮಹಿಳೆಯರು ತಮ್ಮವರ ಮತಾಂಧ ನಡವಳಿಕೆಗಳ ವಿರುದ್ಧ ಮರ್ಯಾದಾ ಹತ್ಯೆಗಳ, ಆ್ಯಸಿಡ್ ಎರಚುವವರ ವಿರುದ್ಧ ಸಮರ ಸಾರಿದ್ದರೆ, ಅಫ್ಘನ್ನಿನ ಮಹಿಳೆ ತನ್ನ ಮುಖದ ಮೇಲಿನ ಕವಚ ತುಸುವೇ ಪಕ್ಕಕ್ಕೆ ಸರಿಸಿ ಶುದ್ಧ ಕಣ್ಣುಗಳಿಂದ ಬೆಳಕು ಕಾಣಲು ಬಯಸಿದ್ದಾಳೆ. ಭಾರತೀಯ ಮುಸ್ಲಿಂ ಮಹಿಳೆ ತಮ್ಮ ಹಕ್ಕುಗಳನ್ನು ಕೇಳುತ್ತಿದ್ದಾರೆ. ತಲಾಖ್ ನೀಡುವ ಅಭದ್ರ ಬದುಕಿನ ವಿರುದ್ಧ ಸಮರ ಸಾರಿದ್ದಾರೆ. ಬಹುಪತ್ನಿತ್ವವನ್ನು ಪ್ರಶ್ನಿಸುತ್ತಿದ್ದಾಳೆ. ಕ್ಷುಲ್ಲಕ ಕಾರಣಗಳಿಗಾಗಿ ತಲಾಖ್ ನೀಡುವ ಪತಿಗೆ ಸವಾಲೆಸೆಯುತ್ತಿದ್ದಾರೆ. ತಲಾಖ್‌ನ ಇದ್ದತ್ ಅವಧಿಯಲ್ಲಿ(೩ ತಿಂಗಳು) ನಿರ್ವಹಣಾ ವೆಚ್ಚ ಕೇಳುತ್ತಿದ್ದಾರೆ. ಮಕ್ಕಳ ನಿರ್ವಹಣೆಯ ಜವಾಬ್ದಾರಿ ಗಂಡನಿಗೂ ಹೊರಿಸುತ್ತಿದ್ದಾರೆ. ವಿಚ್ಛೇದಿತ ಪತ್ನಿಗೆ ನಿರ್ವಹಣಾ ವೆಚ್ಚ ಮಕ್ಕಳ ಖರ್ಚು ನೀಡಲು ಕೇಳುತ್ತಿದ್ದಾರೆ. ಮುಲ್ಲಾಗಳು ಮನಬಂದಂತೆ ಅರ್ಥೈಸುತ್ತಿದ್ದ ಶರಿಯಾವನ್ನು ಸರಿಯಾಗಿ ಅರ್ಥೈಸಲು ಕೇಳುತ್ತಿದ್ದಾರೆ. ಕುರಾನ್ ಬೋಧಿಸಿದ ಸಮಾನತೆಯನ್ನು ಕೇಳುತ್ತಿದ್ದಾರೆ. ಮಹಿಳೆಯರ ಹಕ್ಕು ಮತ್ತು ಪುರುಷರ ಕರ್ತವ್ಯದ ಬಗ್ಗೆ ಇಸ್ಲಾಂ ಲೋಕದ ಕಣ್ಣು ತೆರೆಸುತ್ತಿದ್ದಾರೆ. ತಮ್ಮ ಪುರುಷರಲ್ಲಿ ಅರಿವು ಮೂಡಿಸಲು ಮುಸ್ಲಿಂ ಮಹಿಳೆಯರು ಮುಲ್ಲಾಗಳ ಮೂಲಕ ಪುರುಷ ಪ್ರಪಂಚದ ಮನವೊಲಿಸುತ್ತಿದ್ದಾರೆ.

ಭಾರತದಲ್ಲಿ ೧೮೫೭ರಷ್ಟು ಹಿಂದೆಯೇ ಕೊನೆಯ ಮೊಘಲ್ ದೊರೆಯ ರಾಣಿ-ಬೇಗಂ ಜೀನತ್ ಮಹಲ್ ಕೆಂಪುಕೋಟೆಯಿಂದ ಹೊರಬಂದು ಬ್ರಿಟಿಷರ ವಿರುದ್ಧ ಹೋರಾಡಲು ಪ್ರೇರೇಪಿಸಿದ್ದಳು. ಲಕ್ನೋದ ನವಾಬ್ ವಾಜಿದ್ ಅಲಿ ಸಾಹ್‌ರ ಪತ್ನಿ ಬೇಗಂ ಹಝ್ರುತ್ ಮಹಲ್

ಕೂಡ ಒಬ್ಬ ಧೀರ ಮಹಿಳೆ. ಲೋಲುಪ ನವಾಬ್‌ನ ದೌರ್ಬಲ್ಯಗಳನ್ನು ಬಳಸಿ ಕೊಂಡು ಲಾರ್ಡ್. ಡಾಲ್ ಹೌಸಿಯು ಗವರ್ನರ್ ಜನರಲ್ ಆಗಿ ಲಕ್ನೋದ ಆಡಳಿತ ವಹಿಸಿಕೊಳ್ಳಲು ಹವಣಿಸುತ್ತಿದ್ದಾಗ ಬೇಗಂ ಹಝ್ರುತ್ ಮಹಲ್ ಆಡಳಿತದ ಜವಾಬ್ದಾರಿಯನ್ನೂ ವಹಿಸಿಕೊಂಡಳು. ರಣರಂಗಕ್ಕೂ ಧುಮುಕಿದಳು. ಬೇಗಂ ಹಜ್ರತ್ ಮಹಲ್ ಬ್ರಿಟೀಷರ ಕೈವಶವಾಗದ ಅವಳು ೧೮೭೪ರಲ್ಲಿ ಕಠ್ಮಂಡುವಿನಲ್ಲಿ ಅಂತ್ಯವಾದಳು. ಸ್ವಾತಂತ್ರ ಹೋರಾಟದಲ್ಲಿ ಮುಝಾಫರ್ ನಗರದ ರಹೀಮ್ ಬೇಗಂ, ಹಬೀಬಾ ಬೇಗಂ, ಥಾನದ ಅಝುಘ್‌ಹರೀಬೇಗಂ ಮುಂತಾದ ಮಹಿಳೆಯರು ಧುಮುಕಿದರು. ರಹೀಮಾ ಬೇಗಂರಿಗೆ ಬ್ರಿಟೀಷರು ನೇಣುಗಂಬಕ್ಕೇರಿಸಿದರು. ಅಝುಘ್ ಹರಿಬೇಗಂಗೆ ಜೀವಂತ ಸುಡಲಾಯಿತು. ಹಬೀಬಾ ಬೇಗಂರನ್ನು ನೇಣುಗಂಬಕ್ಕೇರಿಸಲಾಯಿತು.

> ಬಹುಮುಖಿ ಸಂಸ್ಕೃತಿಯೊಂದಿಗೆ ಮುಖಾಮುಖಿಯಾಗುತ್ತಾ ಇಲ್ಲಿಯವರೆಗೆ ಬಂದ ಭಾರತೀಯ ಮುಸ್ಲಿಂ ಮಹಿಳೆಯ ಹಾದಿ ಹೂವಿನ ಹಾಸಿಗೆಯಲ್ಲಿ ಅನೇಕ ಕಷ್ಟಗಳನ್ನು ಎದುರಿಸಿ ನಿಂತಿದ್ದಾಳೆ.

ಭಾರತದ ಮುಸ್ಲಿಂ ಮಹಿಳೆ ರಾಷ್ಟ್ರದ ಸ್ವಾತಂತ್ರ್ಯದೊಂದಿಗೆ ತನ್ನ ಸ್ವಾತಂತ್ರ್ಯವನ್ನೂ ಗಳಿಸಿಕೊಂಡಳು. ಬಹುಮುಖಿ ಸಂಸ್ಕೃತಿಯೊಂದಿಗೆ ಮುಖಾಮುಖಿಯಾಗುತ್ತಾ ಇಲ್ಲಿಯವರೆಗೆ ಬಂದ ಭಾರತೀಯ ಮುಸ್ಲಿಂ ಮಹಿಳೆಯ ಹಾದಿ ಹೂವಿನ ಹಾಸಿಗೆಯಲ್ಲಿ ಅನೇಕ ಕಷ್ಟಗಳನ್ನು ಎದುರಿಸಿ ನಿಂತಿದ್ದಾಳೆ.

ಈಗ ಹರಡುತ್ತಿರುವ ಕೋಮುವಾದದ ಬಲೆಗೆ ಅವಳು ಸಿಲುಕಿದ್ದಾಳೆ. ಇದು ಅವಳ ಬದುಕನ್ನು ದುರ್ಬಲಗೊಳಿಸುತ್ತಿದೆ. ಅವಳ ಬದುಕನ್ನು ದುರ್ಬಲಗೊಳಿಸುವಲ್ಲಿ ರಾಜಕೀಯವೂ ಮಹತ್ತರ ಪಾತ್ರವಹಿಸಿದೆ. ಒಂದು ಕಡೆ ಹರಡುತ್ತಿರುವ ಕೋಮುವಾದ. ಇದರಿಂದ ಹೆಣ್ಣು ಮಕ್ಕಳ ಮೇಲೆ ಹೇರುತ್ತಿರುವ ನಿರ್ಬಂಧಗಳಿವೆ.

ಮುಸ್ಲಿಂ ಪರ್ಸನಲ್ ಲಾ ಎಂದರೆ ಮಹಿಳೆಯರ ವಿರುದ್ಧ ಬಹುಪತ್ನಿತ್ವಕ್ಕಾಗಿ ಬಳಸುವ ಒಂದು ಅಸ್ತ್ರವೆಂದು ಭಾವಿಸಿದ್ದಾರೆ. ಬಹುಪತ್ನಿತ್ವ ನಿಷೇಧ ಕಾನೂನು ಜಾರಿಯಾದರೆ ಶರಿಯತ್‌ಗೆ ಅಪಚಾರ ಮಾಡಿದಂತಲ್ಲ. ಮಹಮ್ಮದರು ತಲಾಕನ್ನು ಎಂದೂ ಸಮರ್ಥಿಸಿಕೊಳ್ಳಲಿಲ್ಲ. 'ತಲಾಖ್' ಅಲ್ಲಾಹ್‌ನಿಗೆ ಪ್ರಿಯವಾದುದಲ್ಲ ಎಂದು ನುಡಿದಿದ್ದಾರೆ. ಶಾಬಾನು ಪ್ರಕರಣದಲ್ಲಿ ಜೀವನಾಂಶ ಕೇಳಿದರೆ - ಇಸ್ಲಾಂ ಧರ್ಮಕ್ಕೆ ಆಪತ್ತು ಬಂದೊದಗಿದಂತೆ - ಮೂಲಭೂತವಾದಿಗಳು ಕಿರುಚಿದರು. ಆದರೆ ಇಸ್ಲಾಂ ಹುಟ್ಟಿದ್ದು ಗುಲಾಮರಿಗೆ, ಮಹಿಳೆ ಮತ್ತು ಮಕ್ಕಳಿಗೆ ನ್ಯಾಯ, ಸಮಾನತೆ ದೊರಕಿಸಲು. ಧರ್ಮದ ಹೆಸರಿನಲ್ಲಿ ಅನೇಕ ವಿಕೃತಿಗಳನ್ನು ನಡೆಸುವ ಜನರೂ ನಮ್ಮ ಮಧ್ಯ ಬದುಕಿದ್ದಾರೆ.

ಇಸ್ಲಾಂ ಧರ್ಮ ಎಂದೂ ಮಹಿಳೆಯನ್ನು ಕ್ರೂರವಾಗಿ ಕಂಡಿದ್ದಿಲ್ಲ. ಆದರೆ ಶರಿಯತ್‌ನ್ನು, ಅದರ ತಿರುಳನ್ನು ಸರಿಯಾಗಿ ಅರ್ಥೈಸುವುದು ಅವಶ್ಯಕ. ಆ ಮಹಾ ಮಾನವತಾವಾದಿ ಪೈಗಂಬರರೂ ಯಾವತ್ತೂ ಬಹುಪತ್ನಿತ್ವವನ್ನು ತಲಾಖನ್ನು ಬೆಂಬಲಿಸುವುದಿಲ್ಲ. ಭಾರತದಲ್ಲಿ ಶಾಬಾನು ಪ್ರಕರಣದ ನಂತರ ಬದಲಾವಣೆಯ ಗಾಳಿ ಬೀಸಿದೆ. ನ್ಯಾಯಕ್ಕಾಗಿ ಮುಸ್ಲಿಂ ಮಹಿಳೆಯರು ಧ್ವನಿ ಎತ್ತುತ್ತಿದ್ದಾರೆ. ೧೯೮೭ರಲ್ಲಿ ಎ.ಐ.ಡಿ.ಎಂ.ಕೆ ಪಕ್ಷದ ರಾಜ್ಯಸಭಾ ಸದಸ್ಯೆ ನೂರ್ ಜಹಾನ್ ರಜಾಕ್ ಇವರು ರಾಜ್ಯಸಭೆಯಲ್ಲಿ ಮುಸ್ಲಿಂ ಬಹುಪತ್ನಿತ್ವ ಮತ್ತು ಬಾಯಿ ಮಾತಿನ ತಲಾಖ್ ನಿಯಮ ಬದಲಾಯಿಸುವಂತೆ ಧ್ವನಿಯೆತ್ತಿದ್ದಾರೆ. ಉತ್ತರ ಪ್ರದೇಶದ ಮುಸ್ಲಿಂ ಸಂಘಟನೆ ೧೯೯೩ರಲ್ಲಿ ಒಂದು ಫತ್ವಾ ಹೊರಡಿಸಿ (ಧಾರ್ಮಿಕ ಆಜ್ಞೆ) ಒಂದೇ ಬಾರಿ ಮೂರು ತಲಾಖ್ ಎಂದು ಹೇಳುವುದನ್ನು ವಿರೋಧಿಸಿದೆ. ಇದನ್ನು ದೆಹಲಿಯ ಮುಸ್ಲಿಂ

ಮಹಿಳಾ ಸಂಘಟನೆಯು ಹುನ್ನಾ ಸುಭಾನಿಯವರು ಸ್ವಾಗತಿಸಿದರು. ಅವರು ಮುಸ್ಲಿಂ ಪರ್ಸನಲ್ ಲಾ ಬೋರ್ಡ್ ಈ ಫತ್ವಾವನ್ನು ಜಾರಿಗೊಳಿಸದಿದ್ದಲ್ಲಿ ಇಡೀ ದೇಶದಲ್ಲಿ ಪ್ರಬಲ ಮಹಿಳಾ ಚಳವಳಿ ಆರಂಭಿಸುವುದಾಗಿ ಹೇಳಿದ್ದಾರೆ.

ಭಾರತದ ಒಟ್ಟಾರೆ ಮಹಿಳಾ ಹೋರಾಟಗಳು ವರದಕ್ಷಿಣೆ, ಆ್ಯಸಿಡ್ ಘಟನೆಗಳನ್ನು ತಮ್ಮ ಹೋರಾಟಕ್ಕೆ ವಿಷಯಗಳಾಗಿ ತೆಗೆದುಕೊಳ್ಳುತ್ತಾರೆಯೇ ಹೊರತು ಮುಸ್ಲಿಂ ಮಹಿಳೆಯ ತಲಾಖ್, ಬಹುಪತ್ನಿತ್ವದಂತಹ ವಿಷಯಗಳನ್ನು ಮುಸ್ಲಿಮೇತರ ಮಹಿಳಾ ಸಂಘಟನೆಗಳು, ಮುಸ್ಲಿಮರ ವೈಯಕ್ತಿಕ ವಿಷಯ ಬಿಡು, ಅದು ತಮಗೇಕೆ ಎಂಬ ದಿವ್ಯ ನಿರ್ಲಕ್ಷಿತ ಧೋರಣೆಯನ್ನು ತಮ್ಮದಾಗಿಸಿಕೊಳ್ಳುತ್ತವೆ. ಅದರಲ್ಲೂ ಕಾಶ್ಮೀರಿ ಮುಸ್ಲಿಂ ಮಹಿಳೆಯರ ಸಮಸ್ಯೆಗಳನ್ನು ಒಟ್ಟಾರೆ ಮಹಿಳಾ ಸಮಸ್ಯೆಗಳಲ್ಲಿ ಪರಿಗಣಿಸಲಾಗುತ್ತಿಲ್ಲ. ಕಾಶ್ಮೀರ ಭಾರತದಿಂದ ಹೊರಗಿದೆಯೇ ? ಇಲ್ಲವೆಂದಾದರೆ ಕಾಶ್ಮೀರಿ ಮಹಿಳೆಯರ ಸಮಸ್ಯೆಗಳು ಒಟ್ಟು ಮಹಿಳಾ ಹೋರಾಟದ ಒಂದು ಭಾಗವಾಗಿದ್ದಾರೆ. ಗುಜರಾತಿನ ಮುಸ್ಲಿಂ ಮಹಿಳೆಯರ ಮೇಲೆ ಕೋಮುವಾದಿಗಳು ದೌರ್ಜನ್ಯ ನಡೆಸಿದಾಗ ದೇಶದ ಮೂಲೆ ಮೂಲೆಗಳಿಂದ ಮಹಿಳೆಯರು ಪ್ರತಿಭಟಿಸಿದ್ದಾರೆ. ಆದರೆ ಕಾಶ್ಮೀರಿ ಮಹಿಳೆಯರ ಧ್ವನಿ ಏಕೆ ಬರಲಿಲ್ಲ? ಅದೇ ರೀತಿ ಕಾಶ್ಮೀರಿ ಮುಸ್ಲಿಂ ಮಹಿಳೆ ಸಂಕಷ್ಟಕ್ಕೆ ಸಿಲುಕಿದಾಗ ರಾಷ್ಟ್ರದ ಮೂಲೆ ಮೂಲೆಗಳಿಂದ ಮಹಿಳಾ ಧ್ವನಿ ಏಕೆ ಬರುತ್ತಿಲ್ಲವೆಂಬುದಕ್ಕೆ ಕಾಲವೇ ಉತ್ತರಿಸಬೇಕು.

ಕಾಶ್ಮೀರಿ ಮುಸ್ಲಿಂ ಮಹಿಳೆಯರು

ಭಾರತದಲ್ಲಿ ೧೯೭೫ರಿಂದೀಚೆಗೆ ಮಹಿಳಾ ಚಳವಳಿಗಳು ಗಮನಾರ್ಹ ಚಟುವಟಿಕೆಗಳಲ್ಲಿ ತೊಡಗಿವೆ. ದೇಶದ ಹಲವಾರು ಸಮಸ್ಯೆಗಳನ್ನು ಎತ್ತಿಕೊಂಡು ಮಹಿಳಾ ಹೋರಾಟಗಳಾಗಿವೆ. ಆದರೆ ಕಾಶ್ಮೀರಿ ಮಹಿಳೆಯರ ಸಮಸ್ಯೆಗಳಿಗೆ ಈ ಹೋರಾಟಗಳು ಅಷ್ಟೊಂದು ಸ್ಪಂದಿಸಿಲ್ಲ.

ಕಾಶ್ಮೀರದಲ್ಲಿ ಇದ್ದಕ್ಕಿದ್ದಂತೆ ರಾತ್ರೋ ರಾತ್ರಿ ಅವರ ಗಂಡಸರು ಮನೆಯಿಂದ ಮಾಯವಾಗುತ್ತಾರೆ. ಗಂಡನನ್ನೋ, ಮಗನನ್ನೋ, ತಂದೆಯನ್ನೋ ಕಳೆದುಕೊಂಡ ಮಹಿಳೆಯರು ಆಕಾಶ ಬಿರಿಯುವಂತೆ ರೋದಿಸುತ್ತಾರೆ. ೧೯೮೭ರಿಂದೀಚೆಗೆ ಕಾಶ್ಮೀರದ ಸ್ಥಿತಿ ಹದಗೆಟ್ಟಿದೆ. ಸೈನ್ಯದ ಬಿಡಾರವಾಗಿದೆ. ಸಾಮಾನ್ಯರ ಬದುಕು ದುರ್ಭರವಾಗುತ್ತಿದೆ.

ಕಾಶ್ಮೀರದ ಪರ್ವಿನಾ ಹದಿನಾಲ್ಕು ವರ್ಷಗಳ ಹಿಂದೆ ತನ್ನ ಮಗನನ್ನು ಕಳೆದುಕೊಂಡಿದ್ದಳು. ಕಾಶ್ಮೀರದ ೪೦೦೦ ಮನೆಗಳಲ್ಲಿ ಇಂತಹ ಮನೆಯ ಗಂಡಸರನ್ನು ಕಳೆದುಕೊಂಡಿರುವ ಮಹಿಳೆಯರಿದ್ದಾರೆ. ಪರ್ವಿನಾ ತನ್ನ ಮಗನಿಗಾಗಿ ಪ್ರತಿ ಜೈಲಿಗೆ ಹೋಗಿ ಹುಡುಕಿದಳು. ಎಲ್ಲೂ ಮಗನ ಕಾಣದೆ ದುಃಖಿತಳಾಗಿದ್ದಾರೆ. 'ಮಿಸ್ಸಿಂಗ್ ಪರ್ಸನ್ಸ್ ಅಸೋಸಿಯೇಶನ್' ಕಾಶ್ಮೀರದ ಸಂಘಟನೆಗೆ ಪರ್ವಿನಾಳೇ ನೇತಾರಳು. ಅವಳೀಗ ಸರ್ಕಾರದ ವಿರುದ್ಧ ಸಮರ ಹೂಡಿದ್ದಾಳೆ. ಸರ್ಕಾರ ಒಂದು ಲಕ್ಷ ಪರಿಹಾರ ಕೊಡಲು

ಕಾಶ್ಮೀರದಲ್ಲಿ ಇದ್ದಕ್ಕಿದ್ದಂತೆ ರಾತ್ರೋ ರಾತ್ರಿ ಅವರ ಗಂಡಸರು ಮನೆಯಿಂದ ಮಾಯವಾಗುತ್ತಾರೆ. ಗಂಡನನ್ನೋ, ಮಗನನ್ನೋ, ತಂದೆಯನ್ನೋ ಕಳೆದುಕೊಂಡ ಮಹಿಳೆಯರು ಆಕಾಶ ಬಿರಿಯುವಂತೆ ರೋದಿಸುತ್ತಾರೆ. ೧೯೮೭ರಿಂದೀಚೆಗೆ ಕಾಶ್ಮೀರದ ಸ್ಥಿತಿ ಹದಗೆಟ್ಟಿದೆ. ಸೈನ್ಯದ ಬಿಡಾರವಾಗಿದೆ. ಸಾಮಾನ್ಯರ ಬದುಕು ದುರ್ಭರವಾಗುತ್ತಿದೆ.

ಮುಂದಾದರೂ ಒಪ್ಪದ ಪರ್ವಿನಾ 'ನನಗೆ ಹಣ ಬೇಡ, ಮಗ ಬೇಕು, ಅವನು ಸತ್ತಿದ್ದರೆ ಅವನ ಹೆಣವನ್ನಾದರೂ ಕೊಡಿ ಎಂದು ಸರ್ಕಾರಕ್ಕೆ ಸವಾಲು ಹಾಕಿ ನಿಂತಿದ್ದಾಳೆ. ಪರ್ವಿನಾಳಂತೆ ಸಾರಾಳೂ ಸಹ ತನ್ನ ಪತಿಯನ್ನು ಕಳೆದುಕೊಂಡಿದ್ದಾಳೆ. ಜೈಲು ಜೈಲು ಸುತ್ತಿದರೂ ಗಂಡನ ಸುಳಿವಿಲ್ಲ, ಮಕ್ಕಳು 'ಅಪ್ಪ ಯಾವಾಗ ಬರುತ್ತಾರಮ್ಮ' ಎಂದು ಕೇಳುವ ಎರಡು ಮಕ್ಕಳಿಗೆ ಅವಳ ಕಣ್ಣೀರೆ ಉತ್ತರವಾಗಿದೆ. ಸಾರಾ ೧೨ ವರ್ಷ ಪತಿಯ ಆಗಮನಕ್ಕಾಗಿ ಕಾದು ಈಗ ಗಂಡನ ತಮ್ಮನಿಗೇ ವಿವಾಹವಾದಳು. ಕಾಶ್ಮೀರಿ ಸಮಾಜದಲ್ಲಿ 'ಮೈದುನ' ನೊಂದಿಗೆ ವಿವಾಹಕ್ಕೆ ಅವಕಾಶವಿದೆ.

ಹಮೀದಾಳ ಗಂಡನದೂ ಇದೆ ಇತಿಹಾಸ. ಹಮೀದಾ ನ್ಯಾಯಾಲಯಕ್ಕೆ ಅರ್ಜಿ ಹಾಕಿ ತನ್ನ ವಿವಾಹವನ್ನು ರದ್ದುಪಡಿಸುವಂತೆ ಕೋರಿದ್ದಾಳೆ. 'ಮುಸ್ಲಿಂ ವಿವಾಹ ಕಾಯ್ದೆಯ ಪ್ರಕಾರ ಸತತವಾಗಿ ಗಂಡ ನಾಲ್ಕು ವರ್ಷಗಳವರೆಗೆ ಪತ್ತೆಯಾಗದಿದ್ದಲ್ಲಿ ಆ ವಿವಾಹ ತನಗೆ ತಾನೇ ಮುರಿದು ಬೀಳುತ್ತದೆ. ಇಲ್ಲಿ ಗಂಡಸರಿಗೆ ಇದ್ದಕ್ಕಿದ್ದಂತೆ ತಲೆಕೆಟ್ಟವರಂತೆ ರಾತ್ರೋರಾತ್ರಿ ಗಡಿ ದಾಟುತ್ತಾರೆ. ಹೊಣೆಗೇಡಿಗಳು ಪತ್ನಿ ಮಕ್ಕಳು ಅಷ್ಟೇ ಏಕೆ ಗರ್ಭಿಣಿ ಹೆಂಡಂದಿರನ್ನು, ರೋಗಗ್ರಸ್ಥ ತಂದೆ ತಾಯಿಗಳನ್ನು ಬಿಟ್ಟು ನಾಪತ್ತೆಯಾಗುತ್ತಾರೆ. ಕಾಶ್ಮೀರದಲ್ಲಿ ಮರುವಿವಾಹ, ವಿಧವಾ ವಿವಾಹಗಳಿಗೆ ಯಾವುದೇ ಅಡ್ಡಿಯಿಲ್ಲವಾದರೂ, ಅವರು ಹೊರಗಿನವರನ್ನು ವಿವಾಹವಾದರೆ ಮಾತ್ರ ರಾಜ್ಯದಲ್ಲಿರುವ ಆಸ್ತಿ ಮೇಲಿನ ಹಕ್ಕು ಕಳೆದುಕೊಳ್ಳುವಂತೆ ಮಾಡುವ ವಿವಾದಾತ್ಮಕ ಮಸೂದೆಯೊಂದು ಅಲ್ಲಿನ ವಿಧಾನ ಸಭೆಯಲ್ಲಿ ಅಕ್ಟೋಬರ್ ೨೭, ೨೦೦೪ ರಂದು ಸೋಲು ಅನುಭವಿಸಿದೆ. ಮಸೂದೆ ಪಾಸು ಮಾಡಲು ಬೇಕಾದ ಬಹುಮತವನ್ನು ಅದು ಗಳಿಸದೇ ಇರುವುದರಿಂದ - ಆಧುನಿಕ ಭಾರತದಲ್ಲಿ ಮುಸ್ಲಿಂ ಮಹಿಳೆಯರ ಆಸ್ತಿಯ ಹಕ್ಕನ್ನು ಕಸಿಯುವ ವ್ಯವಸ್ಥಿತವಾದ ಕ್ರಮವೊಂದು ಕುಸಿದಂತಾಗಿದೆ. ಮಹಿಳೆಗೆ ಕುತ್ತು ತಗುಲದಂತೆ ಪಾರಾಗಿದ್ದಾಳೆ.

ಮುಸ್ಲಿಂ ಮಹಿಳೆ ಮತ್ತು ಕೋಮುವಾದ

ಯಾವುದೇ ಕೋಮುವಾದವಿರಲಿ ಅದು ಆಯಾ ಧರ್ಮಗಳು ಚಲನಶೀಲತೆಯನ್ನು ಕಳೆದುಕೊಂಡು ಜಡ ಧರ್ಮವಾದುದರ ಪರಿಣಾಮವಾಗುತ್ತದೆ. ಎಲ್ಲ ಧರ್ಮಗಳ ಅಮಾಯಕರು ಇದಕ್ಕೆ ಬಲಿಯಾಗುತ್ತಾರೆ. ಹಿಂದೂ ಮತಾಂಧ ಸನಾತನವಾದಿಗಳು, ಮುಸ್ಲಿಂ ಕೋಮುವಾದಿಗಳು, ಪ್ರತ್ಯೇಕತಾವಾದಿಗಳು, ಭಾಷಾ ದ್ವೇಷಿಗಳು, ಪ್ರಾಂತೀಯತೆಯನ್ನು ಬೆಂಬಲಿಸುವವರು, ಹೊರದೇಶದ ದಲ್ಲಾಳಿಗಳು ದಿವಾಳಿಕೋರ ಬುದ್ಧಿಜೀವಿಗಳು, ಸಾಮ್ರಾಜ್ಯಶಾಹಿಯನ್ನು ಬೆಂಬಲಿಸುವವರು ನಮ್ಮ ಮಧ್ಯ ಇದ್ದಾರೆ.

ಭಾರತದಲ್ಲಿ ಕೋಮುವಾದ ಸೃಷ್ಟಿಸಿದ ಶ್ರೇಯಸ್ಸು ಬ್ರಿಟೀಷರಿಗೆ ಸಲ್ಲುತ್ತದೆ. ಹಿಂದೂ ಮುಸ್ಲಿಂ ಏಕತೆಯ ಸಂಕೇತವಾಗಿದ್ದ ಬಹದ್ದೂರ್ ಷಾ ಜಫರ್‌ರನ್ನು, ಗಾಂಧೀಜಿಯವರನ್ನು ಕೊಂದರು. ಒಬ್ಬರು ಇನ್ನೊಬ್ಬರನ್ನು ಸಂಶಯದಿಂದ ನೋಡುವಂತೆ ಮಾಡಿದರು. ಒಬ್ಬರನ್ನೊಬ್ಬರು ಕೊಲ್ಲುವಂತೆ ಮಾಡಿದರು. ಎರಡು ಕಡೆಯ ಕೋಮು ಸನ್ನಿ ಏರಿದ ಜನರು ಮಾನವೀಯತೆಯನ್ನೇ ಮರೆತು ಒಂದು ಧರ್ಮದ ಮಹಿಳೆಯರ ಮೇಲೆ ಅತ್ಯಾಚಾರ, ಅಪಮಾನ, ದೌರ್ಜನ್ಯ ಎಸಗುವುದರ ಮೂಲಕ ಇನ್ನೊಂದು ಧರ್ಮ ಸೇಡು ತೀರಿಸಿಕೊಳ್ಳುವ ಮನೋಭಾವದಿಂದ ಎರಡೂ ಕೋಮಿನ ಮಹಿಳೆಯರು ಬಲಿಪಶುವಾಗುತ್ತಿದ್ದಾರೆ. ಸೇಡಿಗೆ ಮಹಿಳೆ ಬಲಿಪಶುವಾಗುತ್ತಿದ್ದಾಳೆ. ಭಾರತದಲ್ಲಿ ಕೋಮುವಾದಿ ಇತಿಹಾಸ ತುಂಬ ಹಳೆಯದು. ಇತಿಹಾಸ ಎಂದೂ ಕೇಳರಿಯದಷ್ಟು ಕೋಮುಗಲಭೆ ನಡೆದದ್ದು ಗಾಂಧಿ ಹುಟ್ಟಿದ ನಾಡಿನಲ್ಲಿ ಕೋಮುವಾದಿ ಪಕ್ಷದ ನರೇಂದ್ರ ಮೋದಿ ಆಡಳಿತದ ಗುಜರಾತಿನಲ್ಲಿ. ಪಾತಕಿಗಳ ಹಿಂದೆ ನಿಂತು ಸರ್ಕಾರವೇ ನಡೆಸಿದ ಜನಾಂಗೀಯ ದ್ವೇಷದ ಈ ಹಿಂಸಾಕಾಂಡ ಅಲ್ಪಸಂಖ್ಯಾತರನ್ನೇ ಗುರಿಯಾಗಿಟ್ಟುಕೊಂಡಿತು. ಮಹಿಳೆಯರ ಮೇಲೆ ಹಲ್ಲೆ, ಅತ್ಯಾಚಾರ ನಡೆಸಿತಲ್ಲದೆ ಬಸುರಿ ಹೆಂಗಸಿನ ಗರ್ಭದಿಂದ ಶಿಶುವನ್ನು ಹೊರತೆಗೆದು ತ್ರಿಶೂಲಕ್ಕೆ ಸಿಕ್ಕಿಸಿ ಕುಣಿದು, ಬೆಂಕಿಗೆ ತಳ್ಳುವಷ್ಟು ರಾಕ್ಷಸೀಯ ಕೃತ್ಯ ಎಸಗಿದರು.

ಕೋಮುವಾದಿ, ಮತೀಯ ಗಲಭೆಗಳಲ್ಲಿ ಬಡ ಮುಸ್ಲಿಮರೇ ಹೆಚ್ಚಾಗಿ ಸಾವು ನೋವು ಅನುಭವಿಸುತ್ತಾರೆ. ಮಹಿಳೆ ಮತ್ತು ಮಕ್ಕಳು ಹೆಚ್ಚಿನ ಹಿಂಸೆ ಅನುಭವಿಸಬೇಕಾಗುತ್ತದೆ. ಒಂದು ಕೋಮುವಾದ ಇನ್ನೊಂದು ಕೋಮಿನ ಒಳಗಡೆ ಆಂತರಿಕ ನಿರ್ಬಂಧಗಳನ್ನು ಮಹಿಳೆಯರ

ಮೇಲೆ ಹೇರುವವರ ಮೂಲಕ ಸ್ತ್ರೀಯರ ಅಭಿವೃದ್ಧಿ, ಪ್ರಗತಿಗೆ ಮಾರಕವಾಗುತ್ತದೆ. ಮುಸ್ಲಿಮರಿಗೆ ಕೊಲ್ಲುವುದಾದರೆ ಮೊದಲು ನನಗೆ ಕೊಂದು, ನಂತರ ಅವರಿಗೆ ಕೊಲ್ಲಿರಿ ಎಂದು ಹೇಳಿ, ಸೌಹಾರ್ದ, ಸಹಬಾಳ್ವೆಗೆ ನಾಂದಿ ಹಾಕುವ, ಬಲರಾಜ ಸಾಹ್ನಿ, ಗಾಂಧೀಯಂತಹ, ಜೆ.ಪಿ.ಯಂತಹ ವ್ಯಕ್ತಿತ್ವಗಳು ಸಮಾಜದಿಂದ ಮೂಡಿ ಬರಬೇಕಾಗಿದೆ. ಇಲ್ಲವಾದರೆ ಕೋಮುವಾದದಡಿಯಲ್ಲಿ ಮುಸ್ಲಿಂ ಮಹಿಳೆಯ ಹಕ್ಕುಗಳು ಅಷ್ಟೇ ಏಕೆ ಬದುಕುವ ಹಕ್ಕನ್ನೂ ಇದು ಕಿತ್ತುಕೊಳ್ಳುತ್ತದೆ. ಒತ್ತಾಯದ ವಸ್ತ್ರಸಂಹಿತೆ ಜಾರಿಗೊಳಿಸುತ್ತದೆ. ಸಾರ್ವಜನಿಕ ರಂಗಗಳಿಂದ, ಅಧಿಕಾರದ ಕೇಂದ್ರಗಳಿಂದ ದೂರವಿಡುತ್ತದೆ. ಧರ್ಮದ ಆಧಾರದ ಮೇಲೆ ಎರಡು ತುಂಡಾದ ದೇಶವೊಂದರಲ್ಲಿ ಉಳಿದಿರುವ ಮುಸ್ಲಿಂ ಜನಾಂಗ ತಾವು ಮಾಡದೇ ಇರುವ ತಪ್ಪಿಗಾಗಿ ಶಿಕ್ಷೆ ಅನುಭವಿಸುತ್ತಿದ್ದಾರೆ. ಭಾರತದಲ್ಲಿರುವುದಾದರೆ ಮುಸ್ಲಿಮರು (ಕೇಸರಿಕರಣ) ಭಾರತೀಕರಣಗೊಳ್ಳಬೇಕೆಂಬ ರ್‍ಯಾಗಿಂಗ್ ಮಾದರಿಗಳಿವೆ. ಮಂದಿರ ಮಸೀದಿಗಳು ಸೌಹಾರ್ದತೆಯನ್ನು ಹಾಳು ಮಾಡಲು ನೆಪಗಳಾಗುತ್ತವೆ. ಭಾರತೀಯ ಮುಸ್ಲಿಂ ಮಹಿಳೆ ಕೋಮುವಾದದಡಿಯಲ್ಲಿ ನಲುಗಿದಂತೆ ವಿಶ್ವದ ಯಾವ ಮೂಲೆಯಲ್ಲೂ ಇರಲಿಕ್ಕಿಲ್ಲ.

ನಫೀಸಾ ಫಜಲ್‌ನಂತರ ಆವಾಂತರಕಾರಿ ಮಾಜಿ ಮಂತ್ರಿಣಿಯ ಕುಡಿತ, ಕುಣಿತವನ್ನು ತುಟಿ ಬಿಚ್ಚದೇ ಸಹಿಸುವ ಇಸ್ಲಾಂ ಇನ್ನೊಂದು ಕಡೆ ಮಸೀದಿಗಳಲ್ಲಿ ಪ್ರಾರ್ಥನೆಗಾಗಿ ಮಹಿಳೆಯರಿಗೂ ಅವಕಾಶ ಕೇಳಿದ್ದಕ್ಕೆ ಬಾನು ಮುಷ್ತಾಕ್‌ರಂತಹವರಿಗೆ ಮುಸ್ಲಿಂ ಜಮಾತ ಬಹಿಷ್ಕಾರ ಹಾಕಿತು. ಸಾರಾರವರು ಹಲ್ಲೆಗೊಳಗಾದರು. ಸಿನಿಮಾ ನೋಡುವುದು, ಬಿಡುವುದು ತನ್ನ ವೈಯಕ್ತಿಕ ಹಕ್ಕು ಎಂದು ಹೋರಾಡಿದ ನಜಿಮಾ ಭಾಂಗಿ ಮೂಲಭೂತವಾದಿಗಳಿಂದ ಹಲ್ಲೆಗೊಳಗಾದಳು. ಹೊರಗಡೆ ಹಿಂದೂ ಮೂಲಭೂತವಾದಿಗಳಿಂದ ಮತ್ತು ಧರ್ಮದ ಒಳಗೆ ಮುಸ್ಲಿಂ ಮೂಲಭೂತವಾದಿಗಳಿಂದ ಮುಸ್ಲಿಂ ಮಹಿಳೆ ನೊಂದಿದ್ದಾಳೆ.

ಹಿಂದೂ ಕೋಮುವಾದಿಗಳು ದೀಪಾ ಮೆಹ್ತಾರವರ 'ಫೈರ್', 'ವಾಟರ್' ನಂತಹ ಸ್ತ್ರೀಪರ ಸಿನಿಮಾಗಳನ್ನು ನಿಷೇಧಿಸಿತು. ಎಂ.ಎಫ್. ಹುಸೇನರ ಕಲಾಕೃತಿಗಳನ್ನು ಧ್ವಂಸಗೊಳಿಸುವ ನೀಚತನಕ್ಕಿಳಿಯಿತು. ಇಂತಹ ಮೂಲಭೂತವಾದಿಗಳ ಹಿಟ್ಲರ್‌ಶಾಹಿ ನಡವಳಿಕೆಗಳು ಮುಸ್ಲಿಂ ಮಹಿಳೆಯನ್ನು ಸದಾ ಆತಂಕಕ್ಕೀಡು ಮಾಡಿವೆ. ಮುಸ್ಲಿಮರ ರಾಷ್ಟ್ರೀಯತೆಯನ್ನು ಸಂಶಯದಿಂದ ನೋಡುವುದಾಗಲಿ, ಮುಖ್ಯವಾಹಿನಿಗೆ ಸೇರಲು ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ನಿರಾಕರಿಸುವ ಸಾಂಸ್ಕೃತಿಕ ಗೂಂಡಾಗಿರಿಯಿದೆ. ಭಾರತೀಯ ಮುಸ್ಲಿಂ ಮಹಿಳೆ ಇಂತಹ ಕಂದಾಚಾರಗಳಿಂದ ಮುಕ್ತವಾಗಲು, ಸೌಹಾರ್ದತೆಯನ್ನು ಕಾಪಾಡಿಕೊಂಡು - ಮಹಿಳೆಯರ ಬಂಧನ ಕಳಚಿ ಅವಳಲ್ಲಿ ಹೊಸ ಚೈತನ್ಯ ತುಂಬುವ ಇಚ್ಛಾಶಕ್ತಿ ರಾಜಕೀಯಕ್ಕೆ ಅವಶ್ಯವಾಗಿ ಬೇಕಾಗಿದೆ.

ಭಾರತೀಯ ಮುಸ್ಲಿಂ ಮಹಿಳಾ ಸಮಾಜ, ಬಡತನ, ಅನಕ್ಷರತೆ, ಸಾಮಾಜಿಕ ಹಿಂದುಳಿಯುವಿಕೆ, ಮೂಢ ನಂಬಿಕೆಯಲ್ಲಿ ಬಳಲುತ್ತಿದೆ. ಅವರ ಬದುಕಿನ ಹಕ್ಕನ್ನು ಕಿತ್ತುಕೊಳ್ಳುತ್ತಿರುವ ಕೋಮುವಾದಿ ಜನಾಂಗೀಯ ದ್ವೇಷಗಳಿವೆ. ಈ ಸಂದರ್ಭದಲ್ಲಿ ನಜ್ಮಾ ಹೆಪ್ತುಲ್ಲಾರಂತಹ ಪ್ರಜ್ಞಾವಂತ ಮುಸ್ಲಿಂ ಮಹಿಳೆಯರು ತಮ್ಮ ವೈಯಕ್ತಿಕ ರಾಜಕೀಯ

ಸಮುದಾಯದ ಒಳಗಿನ ಶೋಷಣೆಯ ವಿರುದ್ಧ ಧ್ವನಿಯೆತ್ತುತ್ತಿದ್ದಾರೆ. ಹೊರಗಿನ ದಮನದ ವಿರುದ್ಧ ಹೋರಾಟ ನಡೆಸಿದ್ದಾರೆ.

ಲಾಭಕ್ಕಾಗಿ ಮುಸ್ಲಿಂ ಜನಾಂಗದ ಮಹಿಳೆಯರನ್ನು ಕೋಮುಜ್ವಾಲೆಯಲ್ಲಿ ಸುಟ್ಟುಹಾಕುವಂತಹ ಕೋಮುವಾದಿ ಪಕ್ಷಗಳಿಗೆ ಸೇರುತ್ತಾರೆ. ಇಲ್ಲಿ ನಜ್ಮಾರವರು ಮುಸ್ಲಿಂ ಸಮಾಜದ ಮೇಲ್ವರ್ಗ - ಕೆಳವರ್ಗದ ಮುಸ್ಲಿಂ ಮಹಿಳೆಗಿರುವ ಬದ್ಧತೆಯನ್ನು ಹೊಂದಲಾರಳು ಎಂಬುದನ್ನು ಸಾಬೀತುಪಡಿಸಿದ್ದಾರೆ. ಸಮಯಸಾಧಕತನ ಹಾಗೂ ತಮ್ಮ ವರ್ಗ ಗುಣವನ್ನು ಅವರು ತೋರಿದ್ದಾರೆ.

ಭಾರತೀಯ ಮುಸ್ಲಿಂ ಮಹಿಳೆ ಅನೇಕ ಸಮಸ್ಯೆಗಳ ಮಧ್ಯೆಯೂ ಗಮನಾರ್ಹ ಪ್ರಗತಿಯನ್ನು ಸಾಧಿಸಿದ್ದಾಳೆ.

ಈಗ ಮುಸ್ಲಿಂ ಮಹಿಳೆ ಖುರಾನ್ ತನಗೆ ಕೊಡಮಾಡಿರುವ ಹಕ್ಕು, ಬಾಧ್ಯತೆಗಳಿಗೆ ಸರಿಯಾದ ವ್ಯಾಖ್ಯಾನ - ಅರ್ಥ ವಿವರಣೆ ಬಯಸಿದ್ದಾಳೆ. ಆಸ್ತಿಯ ಪಾಲು ಕೇಳುತ್ತಿದ್ದಾಳೆ. ಖುರಾನ್ ಎಂದೂ ಸ್ತ್ರೀವಿರೋಧಿಯಲ್ಲ - ಪುರುಷ ಲೋಕ ತನ್ನ ಮೂಗಿನ ನೇರಕ್ಕೆ ಬಹುಪತ್ನಿತ್ವ, ತಲಾಖ್‌ಗಳನ್ನು ಮತ್ತು ಜೀವನಾಂಶಗಳ ವಿರುದ್ಧ ಹೋರಾಟಕ್ಕಿಳಿದಿದ್ದಾಳೆ.

ಗುರುತರವಾದ ಶಕ್ತಿಕೇಂದ್ರಗಳನ್ನು ವಹಿಸಿಕೊಂಡಿದ್ದಾಳೆ. ಶಮೀಮ್ ಬಾನು ಡಿ.ಸಿ.ಯಾಗಿ, ಫಾತಿಮಾ ಬೀವಿ ಸುಪ್ರೀಂ ಕೋರ್ಟ್ ನ್ಯಾಯಾಧೀಶೆ, ರಾಜ್ಯಪಾಲೆಯಾಗಿ, ಇತ್ತೀಚೆಗೆ ಸ್ಥಾಪಿತ ಬಿಜಾಪುರದ ಮಹಿಳಾ ವಿಶ್ವವಿದ್ಯಾಲಯಕೆ ಉಪಕುಲಪತಿ ಅಖ್ತರ್‌ಬೇಗಂ ರವರು, ೨೦೦೧ರಲ್ಲಿ ನಡೆದ ಐ.ಎ.ಎಸ್. ಪರೀಕ್ಷೆಯಲ್ಲಿ ೨ನೇ ರ್‍ಯಾಂಕ್ ಪಡೆದ ಶಹ್ಲಾ ನಿಗಾರ್‌ರಂತರ ಹೊಸ ಹೊಸ ಸಾಧನೆಗಳು, ಮಾದರಿಗಳು ನಮ್ಮ ಮುಂದಿವೆ.

ಹಿಂದೆ ಮನೆಗೆಲಸ, ಗಂಡ ಮಕ್ಕಳ ಆರೈಕೆಯಲ್ಲಿ ಮುಳುಗಿರುತ್ತಿದ್ದ ತಾಯಿಗೆ ಮಕ್ಕಳು ಹೇಳುತ್ತಿದ್ದಾರೆ. 'ಚಿಕ್ಕ ಪುಟ್ಟ ಖರ್ಚುಗಳಿಗೂ ಅಪ್ಪನನ್ನು ಅವಲಂಬಿಸುವುದನ್ನು ಬಿಟ್ಟು ಕೆಲಸ ಮಾಡು, ಮನೆಕೆಲಸಕ್ಕೆ ಗೌರವವಿಲ್ಲ' ಎನ್ನುವಂತಾಗಿದೆ. ನಾನೇ ಮಗಳಿಗೆ ಅಡುಗೆ ಮನೆಯ ಸಹಾಯಕ್ಕೇನಾದರೂ ಕರೆದರೆ 'ಅಮ್ಮಿ ನಾನೊಬ್ಬಳೇ ಸಹಾಯ ಮಾಡಲಾರೆ, ತಮ್ಮನಿಗೂ ಮನೆಗೆಲಸದ ಸಮಾನ ಹಂಚಿಕೆ ಮಾಡು ಅವನೇನು ಮೇಲಿಂದ ಉದುರಿ ಬಿದ್ದಿಲ್ಲ' ಎಂದು ಹಠ ಮಾಡುತ್ತಾಳೆ.

ಹೀಗೆ ಸಮಾಜದಲ್ಲಿ ಮುಸ್ಲಿಂ ಮಹಿಳೆಯರಲ್ಲಿ ತಣ್ಣಗೆ ಆಗುತ್ತಿರುವ ಬದಲಾವಣೆಗಳಿವೆ. ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ನೆಲೆಯಲ್ಲಿ ಪ್ರತಿಷ್ಠಾಪಿತವಾಗುತ್ತಿರುವ ಮಹಿಳಾ ಹಕ್ಕುಗಳಿವೆ. ಸಮುದಾಯದ ಒಳಗಿನ ಶೋಷಣೆಯ ವಿರುದ್ಧ ಧ್ವನಿಯೆತ್ತುತ್ತಿದ್ದಾರೆ. ಹೊರಗಿನ ದಮನದ ವಿರುದ್ಧ ಹೋರಾಟ ನಡೆಸಿದ್ದಾರೆ. ಜೊತೆಗೆ ಅವರು ಕರ್ತವ್ಯಗಳನ್ನು ನಿಭಾಯಿಸುತ್ತಾ ಹಕ್ಕೊತ್ತಾಯದ ಹೋರಾಟ ನಡೆಸಿದರಾದರೆ ಬಹಳ ಮಹತ್ವದ ಸಂಗತಿಯಾಗುತ್ತದೆ.

ಭಾರತೀಯ ಮುಸ್ಲಿಂ ಮಹಿಳೆಯ ಗುರುತರ ಶಕ್ತಿಕೇಂದ್ರಗಳನ್ನು ನಿರ್ವಹಿಸುತ್ತಾ, ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರಾಗಿ, ಶಿಕ್ಷಕಿಯರಾಗಿ, ಸ್ವಸಹಾಯ ಗುಂಪಿನ ಸದಸ್ಯೆಯರಾಗಿ, ನಗರಸಭೆ, ಗ್ರಾಮಪಂಚಾಯ್ತಿಯಿಂದ ಜಿಲ್ಲಾ ಪಂಚಾಯ್ತಿಯವರೆಗೆ ಅನೇಕ ಹುದ್ದೆಗಳನ್ನು ವಹಿಸಿಕೊಂಡಿದ್ದಾರೆ. ಆಂಧ್ರದ ಫಾತಿಮಾಬೀವಿ ಗ್ರಾಮಪಂಚಾಯ್ತಿ ಅಧ್ಯಕ್ಷೆಯಾಗಿ ಸಾಧಿಸಿದ ಸಾಧನೆಗೆ ವಿಶ್ವ ಮಟ್ಟದಲ್ಲಿ ಗುರುತಿಸಲಾಗಿದೆ.

ಈಗ ಮುಸ್ಲಿಂ ಮಹಿಳೆ ಖುರಾನ್ ತನಗೆ ಕೊಡಮಾಡಿರುವ ಹಕ್ಕು, ಬಾಧ್ಯತೆಗಳಿಗೆ ಸರಿಯಾದ ವ್ಯಾಖ್ಯಾನ - ಅರ್ಥ ವಿವರಣೆ ಬಯಸಿದ್ದಾಳೆ. ಆಸ್ತಿಯ ಪಾಲು ಕೇಳುತ್ತಿದ್ದಾಳೆ. ಖುರಾನ್ ಎಂದೂ ಸ್ತ್ರೀವಿರೋಧಿಯಲ್ಲ - ಪುರುಷ ಲೋಕ ತನ್ನ ಮೂಗಿನ ನೇರಕ್ಕೆ ಬಹುಪತ್ನಿತ್ವ, ತಲಾಖ್‌ಗಳನ್ನು ಮತ್ತು ಜೀವನಾಂಶಗಳ ವಿರುದ್ಧ ಹೋರಾಟಕ್ಕಿಳಿದಿದ್ದಾಳೆ. ನಿರ್ವಹಣಾ ವೆಚ್ಚ ವಿಚ್ಛೇದಿತ ಪತಿಯಿಂದ ಕೇಳುತ್ತಿದ್ದಾಳೆ. ಮನಬಂದಂತೆ ವರ್ತಿಸುವ ಮುಲ್ಲಾಗಳಿಗೆ ಕಡಿವಾಣ ಹಾಕುತ್ತಿದ್ದಾಳೆ. ತಣ್ಣನೆಯ ಬದಲಾವಣೆಯ ಗಾಳಿಯನ್ನು ಬಯಸಿದ್ದಾಳೆ. ❑



ಅವ್ವಯ್ಯನ ಹಂಡೇವು

ಕಥೆ

○ ಬಿ.ಟಿ. ಜಾಹ್ನವಿ

ಹುಣಸೆಹಣ್ಣು, ಉಪ್ಪು, ಇಟ್ಟಿಗೆ ಪುಡಿ ಸೇರಿಸಿ, ನಾರಿನಿಂದ ಉಜ್ಜಿ ಉಜ್ಜಿ ತಿಕ್ಕಿ, ತೊಳೆದಿಟ್ಟ ನಿಗಿನಿಗಿ ಹೊಳೆಯುವ ತಾಮ್ರದ ಹಂಡೇವು ಆ ಮನೆಗೇ ಒಂದು ಕಳೆ. ಅದರೊಳಗೆ ತಣ್ಣಗೆ ತುಂಬಿರುವುದು ಜನುಮಕ್ಕೆ ತಂಪು ಕೊಡುವ ಜೀವಜಲ. ಎಂದೂ ಖಾಲಿಯಾಗದ ದೊಡ್ಡ ಹಂಡೇವು ಶಿವಮ್ಮನಿಗೆ ತವರಿನಿಂದ ಸಿಕ್ಕ ಅಮೂಲ್ಯ ಆಸ್ತಿ. ಹೆತ್ತ ಮಕ್ಕಳನ್ನು ಜೋಪಾನ ಮಾಡುವಂತೆ ಆ ಹಂಡೆಯನ್ನು ಜೋಪಾನ ಮಾಡುತ್ತಾಳೆ. ಅದರ ಮೇಲೆ ಒಂದು ಕಲೆಯಾಗಲಿ, ರವಷ್ಟು ದೂಳಾಗಲಿ ಇರಲು ಬಿಡುತ್ತಿರ್ಲಿಲ್ಲ.

ತನ್ನ ಬಾಲ್ಯ, ಯೌವನ, ತನ್ನ ತವರೇ ಅದರಲ್ಲಿ ತುಂಬಿಕೊಂಡಿದ್ದು ಶಿವನ ಪಾದ ಸೇರಿರುವ ಅಪ್ಪಯ್ಯ, ಅವ್ವಯ್ಯನ ಜೀವ ಅದರಲ್ಲಿ ಮಿಡುಕುತ್ತಿದೆ ಎಂದೇ ಅವಳ ಭಾವನೆ. ಅದರೊಳಗಿಂದು ನೀರು ತುಂಬಿಕೊಳ್ಳುವಾಗೊಮ್ಮೆ ತನ್ನ ತವರಿನ ಒಂದೊಂದು ಸ್ಥಿತಿಯನ್ನು ಮೊಗೆಮೊಗೆದು ಹೊರಚೆಲ್ಲುತ್ತಿದ್ದಳು. ಈ ಹಂಡೇವು ಇವಳ ಪಾಲಿಗೆ ಬಂದದ್ದೇ ಒಂದು ಮನಕಲಕುವ ಕಥೆ.

ಮುತ್ತೇನಟ್ಟಿಯ ಭರಮಪ್ಪ ಮತ್ತು ಗೌರಮ್ಮನ ಏಕೈಕ ಕುಡಿ ಶಿವಮ್ಮ. ಅವಳ ಹಿಂದೆ ಹುಟ್ಟಿದ ಮೂವರು ಕಾಲರಾದಿಂದ ತೀರಿ ಹೋಗಿ ಉಳಿದವಳೊಬ್ಬಳೇ ಶಿವಮ್ಮ ಅಂತೆಯೇ ತಂದೆ ತಾಯಿಯ ಕಣ್ಮಣಿ. ಅವಳೇನೇ ಆಸೆಪಟ್ಟರೂ ಅದನ್ನು ತಂದುಕೊಡಲು ಜೀವ ತೇಯುವ ಭರಮಪ್ಪ ಗೌಡರ ಮನೆಯಲ್ಲಿ, ಹೊಲದಲ್ಲಿ ಕೂಲಿ ಮಾಡುತ್ತಿದ್ದ. ದಿನವೂ ಹೊಲಕ್ಕೆ ಶಿವಮ್ಮನೇ ಬುತ್ತಿ ತರುತ್ತಿದ್ದಳು. ಅಪ್ಪಯ್ಯ ಬುತ್ತಿ ತೆಗೆದು ಉಣ್ಣುವ ಶಿವಮ್ಮ ಹಳ್ಳದಲ್ಲಿ ಸಾಕಾಗುವ ತನಕ ಈಜಾಡಿ, ಪಕ್ಕದ ಕಲ್ಲು ಬಂಡೆಯ ಮೇಲೆ ಕುಂತು ಬಟ್ಟೆ ಆರಿಸಿಕೊಳ್ಳುವ ಹೊತ್ತಿಗೆ ಸರಿಯಾಗಿ ಭರಮಪ್ಪನ ತಮ್ಮನ ಮಗ ಗರುಡ ಅಲ್ಲಿಗೆ ದನ ಬಿಟ್ಟುಕೊಂಡು ಬರುತ್ತಿದ್ದ. ಬಂದವನೇ ಬಂಡೆಯೇರಿ ತನ್ನ ಬುತ್ತಿ ಗಂಟು ಬಿಚ್ಚುತ್ತಿದ್ದ.

ರಾಗಿ ಮುದ್ದೆ, ಕೆಂಪಿಂಡಿ, ಬೇಯಿಸಿದ ತತ್ತಿ ಇಬ್ಬರೂ ಹಂಡಿ ಉಂಡ ಮೇಲೆ ಶುರುವಾಗುತ್ತಿತ್ತು ಆಟ, ಕಿತ್ತಾಟ. ಆನೆಕಲ್ಲು, ಚೌಕಾಬಾರ ಆಡುತಾಡುತ್ತಾ ಕಿತ್ತಾಟ ಶುರುವಾಗುತ್ತಿತ್ತು. ಮೋಸದಿಂದಾದರೂ ಸೈ ಶಿವಮ್ಮನೇ ಗೆಲ್ಲಬೇಕು. ಗರುಡ ಎಷ್ಟು ಹೊಡೆದಾಡುದ್ರೂ ಈ ಮೋಸಗಾತಿಯನ್ನು ಸೋಲಿಸಲು ಸಾಧ್ಯವಿಲ್ಲ ಎಂಬ ಸತ್ಯ ತಿಳಿದಿದ್ದು ನೀನು ಗೆದ್ದುದ್ದೇನು ಲೆಕ್ಕಕ್ಕಿಲ್ಲ ವೋಗೇ..' ಅಂದು ಮತ್ತೆ ದನ ಹೊಡೆದುಕೊಂಡು ಹಟ್ಟಿಯತ್ತ ಹೊರಡುತ್ತಿದ್ದ. ಅವನ ಹಣೆಚುಕ್ಕಿ ಎಮ್ಮೆ ಗಂಗಿಯ ಮೇಲೆ ಕೂತು ಶಿವಮ್ಮನ ಸವಾರಿಯೂ ಮನೆಕಡೀಗೆ ಹೊರಡುತ್ತಿತ್ತು. ಇದು ನಿತ್ಯದ ಸಂಗತಿ.

ಗರುಡ ದನ ಬಿಟ್ಟುಕೊಂಡು ಬರದೇ ಇದ್ದ ಒಂದು ದಿವಸ ಶಿವಮ್ಮ ಹಟ ಮಾಡಿ 'ಅಪ್ಪಯ್ಯ ಗೌಡ್ರು ಮನೆತಾವ್ಕೆ

ಎಂದೂ ಖಾಲಿಯಾಗದ ದೊಡ್ಡ ಹಂಡೇವು ಶಿವಮ್ಮನಿಗೆ ತವರಿನಿಂದ ಸಿಕ್ಕ ಅಮೂಲ್ಯ ಆಸ್ತಿ. ಹೆತ್ತ ಮಕ್ಕಳನ್ನು ಜೋಪಾನ ಮಾಡುವಂತೆ ಆ ಹಂಡೆಯನ್ನು ಜೋಪಾನ ಮಾಡುತ್ತಾಳೆ. ಅದರ ಮೇಲೆ ಒಂದು ಕಲೆಯಾಗಲಿ, ರವಷ್ಟು ದೂಳಾಗಲಿ ಇರಲು ಬಿಡುತ್ತಿರ್ಲಿಲ್ಲ.

ನಾನೂ ಬತ್ತೀನಿ..' ಎಂದು ಹಿಂದೇನೆ ಹೊರಟಳು. ಗೌಡರ ಮನೆ ಹಿತ್ತಲಲ್ಲಿ ಗೌರಿಯ ದೂರದ ಸಂಬಂಧಿ ನಿಂಗಿ ಪಾತ್ರೆ ಪಡುಗಗಳ ರಾಶಿ ಮುಂದೆ ಕೂತಿದ್ದಳು. ಅವನ್ನೆಲ್ಲಾ ತಿಕ್ಕುತ್ತಾ ತೊಳೆಯುತ್ತಾ ಆಗ ತಾನೇ ತಾಮ್ರದ ಹಂಡೇವನ್ನು ತಿಕ್ಕಿ, ತೊಳೆದು ಬಿಸಿಲಿಗೆ ಒಣಗಲು ದಬಾಕಿದ್ದಳು. ಆ ಹಂಡೇವಿನ ಬಣ್ಣ, ಹೊಳಪು ಆಟವಾಡಿಕೊಂಡಿದ್ದ ಶಿವಮ್ಮನನ್ನು ಗಾಢವಾಗಿ ಸೆಳೆದು, ಆಕೆ ಓಡಿದವಳೇ ತನ್ನ ಪುಟ್ಟ ಕೈಗಳೆರಡನ್ನೂ ಚಾಚಿ, ಹಂಡೇವನ್ನು ಬಾಚಿಕೊಂಡಳು. ತನ್ನ ತೆಕ್ಕೆಗದು ನಿಲುಕುತ್ತಿರಲಿಲ್ಲ. ಆದರೂ ಬಿಡದೆ ಪ್ರಯತ್ನ ಮಾಡುತ್ತಲೇ ಇದ್ದು, ಇದನ್ನು ಕಂಡದ್ದೇ ನಿಂಗಿ ಬೊಬ್ಬೆಯಿಟ್ಟಳು. ಅದನ್ನು ಕೇಳಿ ಧಾವಿಸಿದ ಗೌಡ್ತಿ ದೊಡ್ಡ ರಂಪವೇ ಮಾಡಿದಳು.

'ಲೇ ಭರುಮ, ನಿನ್ ಮಗ್ಳು ಮುಟ್ಟಿದ ಆ ಹಂಡೇವು ನಮ್ಮನಿ ವಳಾಕೆ ಬರಂಗಿಲ್ಲಯಿನ್ನ ನೋಡು ನಿನದುನ್ನಾ ವೈಯ್ಯಿ. ಪುಗುಸಟ್ಟೆ ಅಲ್ಲಲ್ಲೇ ಅದುಕ್ಕೆ ಇನ್ನೂರು ರುಪೈ ಆಕ್ಕತಿ. ಯಂಗೆ ಮಾಡ್ತಿ ನೋಡು ರುಪೈ ಕ್ವಡು ಇಲ್ಲ ಆ ದುಡ್ಡು ತೀರಗಂಟ ಮನ್ಯಾಗೆ ಜೀತ ಮಾಡು..' ಎಂದು ಗೌಡ್ತಿ ತಾಕೀತಾಯಿತು. ಇನ್ನೂರು ರುಪೈ ಹೊಂಚಲಾರದವ ಜೀತಕ್ಕೆ ಒಪ್ಪಿಕೊಂಡ. ಅಪ್ಪಿಗೆ ಬಲು ಸಂತೋಷವಾಗಿತ್ತು. ಮಗಳು ಆಸೆಪಟ್ಟ ಹಂಡೇವು ಸಿಕ್ಕಿದ್ದು ನಿಧಿ ಸಿಕ್ಕಂಗಾಗಿತ್ತು.

ಅದಕ್ಕೋಸುಗ ಏನು ಮಾಡಲೂ ಅವ ಸಿದ್ಧನಿದ್ದ. ಮುಖ ಬತ್ತಿಸಿ ನಿಂತಿದ್ದ ಹೆಂಡತಿ, ಮಗಳಿಗೆ ತಾನೇ ಸಮಾಧಾನ ಹೇಳಿದ. 'ಮಗ ಆಸೆಪಟ್ಟುದ್ದು ಸಿಕ್ಕಿ ಬಿಡುತಲ್ಲ ಬಿಡಮ್ಮಿ... ನನಿಗೇನು ಈ ಗೌಡ್ರು ಮನಿ ಬದ್ಕು ವಸ್ದಲ್ಲ... ನಮ್ಮಿಂದೆಲ್ಲನ ಮಗೀನಾಸೆ ತೀರಸ್ಕಾಗಿತ್ತಾ... ಯಂಗೋ ಯಾವ್ದೋ ರೂಪ್ದಾಗೆ ಆ ದ್ಯಾವ್ರ ಕ್ವಟ್ಟದನೆ... ಮಗ ಆಸೆಪಟ್ಟಿರದನು ಅದ್ನೂ ಮಗೀನಂಗೆ ಜ್ವಾಪನ ಮಾಡ್ಬಕು....

ಅಂದು ಹೀಗೆ ಹೇಳಿಹೋಗಿದ್ದ ಭರಮಪ್ಪ ಮತ್ತೆ ಮನೆಗೆ ಹಿಂದಿರುಗಿದ್ದು ಹೆಣವಾಗಿ. ಹುಣಸೆ ಮರದಲ್ಲಿ ಚಿಗುರು ಕೀಳಲಿಕ್ಕೆ ಹತ್ತಿದ್ದವ ಅದೇಗೋ ಆಯತಪ್ಪಿ ಕೆಳಕ್ಕೆ ಬಿದ್ದಿದ್ದ. ಬೀಳುವಾಗ ಮರದ ಕೆಳಗಿದ್ದ ಸೈಜುಗಲ್ಲಿಗೆ ಅವನ ತಲೆ ಬಿದ್ದು ಸ್ಥಳದಲ್ಲೇ ಪ್ರಾಣಬಿಟ್ಟಿದ್ದ. ಹಂಡೇವಿಗೋಸ್ಕರ ಪ್ರಾಣ ತೆತ್ತ ಅಪ್ಪಯ್ಯನ ಆತ್ಮವೂ ಆ ಹಂಡೇವಿನಲ್ಲಿ ಲೀನವಾಗಿದೆ ಎಂದುಕೊಂಡೇ ಅದನ್ನ ಬಲು ಪ್ರೇಮದಿಂದ ಜತನದಿಂದ ಕಾಪಾಡುತ್ತಿದ್ದಳು ಶಿವಮ್ಮ. ಅಪ್ಪಯ್ಯನ ನೆನಪಾಗಿ ಎದೆ ಭಾರವಾದಾಗಲೆಲ್ಲಾ ಹಂಡೇವನ್ನು ಬಾಚಿ ತಬ್ಬಿ ಕೆನ್ನೆಯೂರಿ ಕಣ್ಣೀರಿಡುತ್ತಿದ್ದಳು.

ಭರಮಪ್ಪ ತೀರಿದ ಆರೇ ತಿಂಗಳಿಗೆ ಗೌರಮ್ಮನೂ ಕಣ್ಮುಚ್ಚಿದಾಗ ಒಂಟಿಯಾದಳು ಶಿವಮ್ಮ. ಆದರೆ ಗರುಡ ಅವಳ ಕೈಬಿಡಲಿಲ್ಲ. ಅವನು ಶಿವಮ್ಮನ ಜವಾಬ್ದಾರಿ ಹೊತ್ತುಕೊಂಡ. ತನ್ನ ದೂರದ ನೆಂಟರೊಬ್ಬರ ಮಗನಿಗೆ ಶಿವಮ್ಮನನ್ನು ಕೊಟ್ಟು ಲಗ್ನವೂ ಮಾಡಿದ. ಹುಡುಗ ಕೂಲಿ ಮಾಡಿದರೂ ಇರಲು ಸ್ವಂತ ಮನೆಯಿತ್ತು. ಶಿವಮ್ಮನ ಗಂಡ ಬಸಪ್ಪ ಬಲು ಶೋಕಿ ಮನುಷ್ಯ. ಮೈಬಗ್ಗಿಸಿ ದುಡಿಯುವುದೂ ಅವನಿಂದಾಗುತ್ತಿರಲಿಲ್ಲ. ಅವನ ಶೋಕಿಯೆಂದರೆ ಹೆಣ್ಣುಗಳು. ಸದಾ ಕೂಲಿಗೆ ಬರುವ ಹೆಣ್ಣುಗಳನ್ನು ತನ್ನತ್ತ ಒಲಿಸಿಕೊಳ್ಳುವ ಹುನ್ನಾರ. ತನ್ನ ಬುದ್ಧಿ ಶಕ್ತಿ ಸಮಯವನ್ನೆಲ್ಲ ಅದಕ್ಕೆ ಕಳೆಯುತ್ತಿದ್ದ. ಮೊದಲೇ ಮೆತ್ತನೆಯ ಶಿವಮ್ಮ ಗಂಡನ ಈ ಸ್ವಭಾವ ತಿಳಿದು ಕಂಗೆಟ್ಟಳು.

'ಲೇ ಭರುಮ, ನಿನ್ ಮಗ್ಳು ಮುಟ್ಟಿದ ಆ ಹಂಡೇವು ನಮ್ಮನಿ ವಳಾಕೆ ಬರಂಗಿಲ್ಲಯಿನ್ನ ನೋಡು ನಿನದುನ್ನಾ ವೈಯ್ಯಿ. ಪುಗುಸಟ್ಟೆ ಅಲ್ಲಲ್ಲೇ ಅದುಕ್ಕೆ ಇನ್ನೂರು ರುಪೈ ಆಕ್ಕತಿ. ಯಂಗೆ ಮಾಡ್ತಿ ನೋಡು ರುಪೈ ಕ್ವಡು ಇಲ್ಲ ಆ ದುಡ್ಡು ತೀರಗಂಟ ಮನ್ಯಾಗೆ ಜೀತ ಮಾಡು..' ಎಂದು ಗೌಡ್ತಿ ತಾಕೀತಾಯಿತು.

ಅದರ ಜೊತೆ ಇಬ್ಬರು ಮಕ್ಕಳು ಬೇರೆ.

ಮೊದಲನೆಯವ ಸಂಜೀವ ಅವನ ಹಿಂದೆ ಗಂಗಮ್ಮ. ಸಂಜೀವ ಬೇರೆಲ್ಲ ಮಕ್ಕಳಂತಿರಲಿಲ್ಲ. ವಯಸ್ಸಿಗೆ ಮೀರಿದ ಗಾಂಭೀರ್ಯ, ಬುದ್ಧಿವಂತಿಕೆ. ಓರಗೆಯ ಹುಡುಗರೆಲ್ಲ ಆಡುತ್ತಿದ್ದರೆ ಇವ ಪಾಟಿ ಚೀಲ ಹಿಡಿದು ಕೂರುತ್ತಿದ್ದ. ಇದನ್ನು ಗಮನಿಸಿದ ಶಿವಮ್ಮ ಅವನನ್ನು ಶಾಲೆಗೆ ಸೇರಿಸಿದ್ದಳು. ಅಲ್ಲಿ ಹೊಟ್ಟೆಪ್ಪನಳ್ಳಿ ಸಿದ್ದಪ್ಪ ಎಂಬ ಮಾಸ್ತರು. ಅವರ ಕಣ್ಣಿಗೆ ಆ ಹುಡುಗ ಬಿದ್ದು, ಅವನ ಭವ್ಯ ಭವಿಷ್ಯವನ್ನು ಅವರು ಅಂದೇ ಕಂಡಂತೆ ಶಿವಮ್ಮನನ್ನು ಕರೆಸಿ ಯಾವ ಕಾರಣಕ್ಕೂ ಇವನ ಓದು ಬಿಡಿಸಬೇಡ. ಮುಂದೆ ಇವನೊಬ್ಬ ದೊಡ್ಡ ವ್ಯಕ್ತಿಯಾಗುತ್ತಾನೆ ಎಂದರು. ಅಂದೇ ಶಿವಮ್ಮ ಮನದಲ್ಲೇ ನಿರ್ಧರಿಸಿದಳು. ಜೀವನದಲ್ಲಿ ಯಾವುದಕ್ಕೂ ಹೆದರಿ ಕುಗ್ಗಬಾರದು. ಏನೇ ಆಗಲಿ ನಾನೇ ದುಡಿದು ಮಗನನ್ನು ವಿದ್ಯಾವಂತನನ್ನಾಗಿ ಮಾಡಬೇಕೆಂದು ನಿರ್ಧರಿಸಿದಳು.

ತನ್ನ ಬಳಿಯೇ ಇದ್ದರೆ ಗಂಡನ ದೆಸೆಯಿಂದಾಗಿ ಮಗನ ಓದಿಗೆ ತೊಂದರೆಯಾಗಬಹುದೆಂದು ಭಾವಿಸಿ ಗರುಡನನ್ನು ಕರೆಸಿಕೊಂಡು, ತಾನು ಹೇಗಾದರೂ ದುಡ್ಡನ್ನು ಹೊಂಚಿ ಕಳುಹಿಸುವುದಾಗಿಯೂ, ಮಗನನ್ನು ಒಳ್ಳೆಯ ಶಾಲೆಗೆ ಸೇರಿಸಬೇಕೆಂದು ಬೇಡಿಕೊಂಡಳು. ಅವಳಾಸೆಯಂತೆಯೇ ಗರುಡ ಸಂಜೀವನನ್ನು ಕರೆದುಕೊಂಡು ಹೋದ. ಶಿವಮ್ಮ ಹಗಲೆನ್ನದೆ, ರಾತ್ರಿಯೆನ್ನದೆ ದುಡಿದಳು. ಊರಿನಲ್ಲಿ ಯಾರೇ, ಏನೇ ಕೆಲಸಕ್ಕೆ ಕರೆದರೂ ಧಾವಿಸಿ ನಾಲ್ಕು ಕಾಸು ಸಂಪಾದಿಸುತ್ತಿದ್ದಳು.

ಈ ಮಧ್ಯೆ ಗಂಡನಿಗೆ ಕುಡಿತದ ಚಟವೂ ಸೇರಿ ದಿನವೂ ಈಕೆಯನ್ನು ದುಡ್ಡಿಗಾಗಿ ಪೀಡಿಸತೊಡಗಿದ. ಒಂದು ಮಾತೂ ಎದುರಾಡದೆ, ಮಗಳೆದುರು ರಂಪ ಮಾಡಬಾರದೆಂದು ತನ್ನ ಕೈಲಾದಷ್ಟು ಕೊಟ್ಟು ಕಳಿಸುತ್ತಿದ್ದಳು. ಇಲ್ಲವೆಂದರೆ ಅವನೂ ಸುಮ್ಮನಾಗುತ್ತಿರಲಿಲ್ಲ. 'ಆಟು ದೊಡ್ ಹಂಡೇವು ನಮಗ್ಯಾತ್ಕೆ.. ಅದುನ್ನ ಮಾರು..' ಎಂದು ಪೀಡಿಸುತ್ತಿದ್ದ. ಅದನ್ನ ತಪ್ಪಿಸಲು ಶಿವಮ್ಮ ತಾನು ಉಪವಾಸವಿದ್ದು ಅವನಿಗೆ ದುಡ್ಡು ಕೊಡುತ್ತಿದ್ದಳು. ಬರೀ ನೀರು ಕುಡಿದೇ ಕಳೆದ ದಿನಗಳೆಷ್ಟೋ ಅವಳ ಲೆಕ್ಕಕ್ಕೆ.

ಈ ಮಧ್ಯೆ ಮುತ್ತೇನಟ್ಟಿಯಾಗಿದ್ದ ಮಗನಿಗೆ ಆವಾಗವಾಗ ತಂಬಿಟ್ಟುಂಡೆ, ರೊಟ್ಟಿ ಕುಟ್ಟಿದ ಖಾರದಿಂಡಿ ಕೊಟ್ಟು ಬರುತಿದ್ದಳು. ಗಾಣದೆತ್ತಿನ ದುಡಿತ ಅವಳ ಮನಸ್ಸು ಸಹಿಸಿಕೊಂಡರೂ ದೇಹ ಸೋತು ಒಂದು ವಾರ ಮೇಲೇಳದಂತೆ ಮಲಗಿಬಿಟ್ಟಳೊಮ್ಮೆ. ಗಂಡನೇನು ಕ್ಯಾರೆ ಅನ್ನಲಿಲ್ಲ. ಮಗಳು ಹೇಗೋ ಹಾಗೆ ಕೂಲಿ ಮಾಡಿ ದುಡ್ಡು ತಂದರೂ ಅದು ಯಾವುದಕ್ಕೂ ಸಾಕಾಗುತ್ತಿರಲಿಲ್ಲ. ದುಡ್ಡಿಗೆ ಸದಾ ಪೀಡಿಸುವ ಗಂಡ. ತಾನು ಹೀಗೆ ಮಲಗಿದರೆ ಆಗದೆಂದು ರೋಸಿ ಎದ್ದು 'ವತಾರ್ಕೆ ಕೂಲಿ ವೋಗಿ ದುಡ್ಡು ತರ್ತೀನಿ ಇವತ್ತೊಂದಿನ ತಡ್ಕ ಮಾರಾಯ...' ಎಂದು ಎಷ್ಟು ಪರಿಪರಿಯಾಗಿ ಹೇಳಿದರೂ ಕೇಳದೆ ಮೂಲೆಯಲ್ಲಿದ್ದ ಹಂಡೆಯ ನೀರೆಲ್ಲಾ ಬಗ್ಗಿಸಿ ಅದನ್ನೆತ್ತಿಕೊಂಡು ಹೊರಟೇಬಿಟ್ಟ.

ಅದೆಲ್ಲಿತ್ತೋ ರೋಷ ಶಿವಮ್ಮ ಒಮ್ಮೆ ಜೋರಾಗಿ 'ಏಯ್..' ಎಂದು ಅಬ್ಬರಿಸಿದವಳೆ ನೆರಕೆಯಲ್ಲಿದ್ದ ಮಚ್ಚು ಎತ್ತಿಕೊಂಡು ಓಡಿ ಅವನ ದಾರಿಗಡ್ಡ ನಿಂತಳು. ಬಸಪ್ಪ ಬೆದರಿ ಹಿಮ್ಮೆಟ್ಟಿ ನಿಂತ. ಹೆಂಡತಿಯ ಈ ರೂಪ ಅವನಿಗೆ ಹೊಸದು. ಸದಾ ಸೌಮ್ಯಮೂರ್ತಿ, ಎಂದೂ ದನಿಯೇರಿಸಿ ಯಾರಿಗೂ ಮಾತಾಡಿದವಳಲ್ಲ, ಇಂದು ರಣಚಂಡಿಯಂತೆ ಉರಿಗಣ್ಣು ಬಿಡುತ್ತಾ 'ನೀನೇನ ಒಂದೆಜ್ಜೆ ಮುಂದುಕ್ಕಿಟ್ಟರ ಸಿಗ್ದು ಹಾಕ್ಬಿಡ್ತಿನಿ.. ಆ ಹಂಡೇವ್ನ ಕೈನಾಗೆ ಮುಟ್ಟೋ ಯೋಗ್ಯತೆನೂ ನಿನಗಿಲ್ಲ.. ಅಂತಾದ್ರಗುಟ್ಟಿ ಮೈಲ್ಗೆ ಮಾಡ್ಬಿಟ್ಯಲ್ಲೊ ಚಂಡಾಳ.. ಮರ್ವಾದೆಗೆ ಅದೆಲ್ಲಿತ್ತೋ, ಯಂಗಿತ್ತೊ ಹಂಗಿಟ್ಟೊ ಸರೋತು ಇಲ್ದಿದ್ರೇ...' ಎಂದು ಕಟಕಟನೆ ಹಲ್ಲು ಕಡಿದಳು.

ಮೊದಲೇ ಹುಷಾರಿಲ್ಲದೆ ಕಪ್ಪಿಟ್ಟ ಮುಖ, ಕೆದರಿದ ಕೂದಲು, ನಡುಗುವ ಶರೀರ, ಕಣ್ಣಲ್ಲಿ ಆಕ್ರೋಶ ವಿಕಾರವಾಗಿ ಕಾಣುತ್ತಿತ್ತು. ತುಟಿಪಿಟಿಕನ್ನದೆ ಹಿಂದಕ್ಕೋಡಿದವನೆ ಹಂಡೇವೆಲ್ಲಿತ್ತೋ ಅಲ್ಲಿಟ್ಟು ಹೊರಬಂದರೂ ಶಿವಮ್ಮ ಶಾಂತಳಾಗದೆ ಅದೇ ಭಂಗಿಯಲ್ಲಿ ಅವನತ್ತ ಕೆಕ್ಕರಿಸಿಕೊಂಡು ನೋಡುತ್ತಿದ್ದಳು. ನೋಟ ಎದುರಿಸಲಾರದವನಂತೆ ಪಕ್ಕಕ್ಕೆ ಸರಿಯುತ್ತಾ ಸರಿಯುತ್ತಾ ಹಾಗೆಯೇ ಹೋಗಿಬಿಟ್ಟ ಬಸವ ಮತ್ತೆಂದೂ ಶಿವಮ್ಮನ ಕಣ್ಣಿಗೆ ಬೀಳಲೇ ಇಲ್ಲ. ಆಕೆ ಪರಿತಪಿಸಲೂ ಇಲ್ಲ. ಋಣ ತೀರಿತೆಂದು ತಣ್ಣಗಿದ್ದುಬಿಟ್ಟಳು. ಎಲ್ಲವನ್ನೂ ಗಮನಿಸಿದ್ದ ಮಗಳೊಮ್ಮೆ ಕೇಳಿದಳು 'ಅವ್ವಯ್ಯ ಆ ಹಂಡೇವ್ನಾಗೆ ಅಂತಾದೇನೈತಿ..?' ಮಗಳನ್ನು ಮೆಲ್ಲಗೆ ತಬ್ಬಿ ಎದೆಗೊತ್ತಿಕೊಂಡು 'ಗಂಗವ್ವ ನಾನ್ನಿನ್ನ ಅವಚ್ಕೆಂಡಿದಿನಲ್ಲ ಹಂಗೆ ಒಂದಪ ಆ ಹಂಡೇವ್ನ ಅವುಚ್ಕೆ ನೀನೆಂಗೆ ಉಸುರಾಡ್ತಿಯೋ ಹಂಗದೂ ಉಸುರಾಡ್ತೈತೆ. ನಿನ್ನೆದೆಯಂಗೆ ಡಬಡಬ ಬಡ್ಕಂತತೋ ಹಂಗದೂ ಡಬಡಬ ಅನ್ನೈತಿ. ನಾನು ನಿನ್ನ ತಲೀಮ್ಯಾಗೆ ಕೈಯಿಟ್ಟು ಆಶೀರ್ವಾದ ಮಾಡಂಗೆ ಅದೂ ಆಶೀರ್ವಾದ ಮಾಡ್ತೈತೆ. ಕಣ್ಣೀರಾಕಿದ್ರೆ ಕಣ್ಣೊರ್ಸಿ

'ಗಂಗವ್ವ ನಾನ್ನಿನ್ನ ಅವಚ್ಚೆಂಡಿದಿನಲ್ಲ ಹಂಗೆ ಒಂದಪ ಆ ಹಂಡೇವ್ನ ಅವುಚ್ಕೆ ನೀನೆಂಗೆ ಉಸುರಾಡ್ತಿಯೋ ಹಂಗದೂ ಉಸುರಾಡ್ತೈತೆ.



ಸಮಾಧಾನ ಮಾಡ್ತೈತೆ...' ಎಂದು ಪರವಶತೆಯಿಂದ ಹೇಳುತ್ತಿದ್ದವಳ ತೆಕ್ಕೆಯಿಂದ ಬಿಡಿಸಿಕೊಂಡು ಗಂಗವ್ವ 'ಹೇ ಬಿಢವ್ವ ನೀನೊಳ್ಳೆ ಮಕ್ಳಂಗೆ ಮಾತಾಡ್ತಿಯಲ್ಲಾ... ಯೇಳ್ಮ್ಯಾಕೆ ಉಂಡು ಮಕ್ಕಳಂತೆ...' ಎಂದುಬಿಟ್ಟಾಗ ಭರಿಸಲಾರದ ನೋವೊಂದು ಅವಳ ತುಂಬಿ ಇಡಿಯಾಗಿ ಅಲ್ಲಾಡಿಸಿ ಆಕೆಯನ್ನೆತ್ತಿ ಬಿಸಾಡಿದಂತಾಯ್ತು.

ಅಂದು ಒಂದು ಹನಿ ನೀರೂ ಆಕೆಯ ಗಂಟಲಲ್ಲಿಳಿಯಲಿಲ್ಲ. ಅವಳ ಭಾವನೆ ಯಾರಿಗೂ ಅರ್ಥವಾಗೇ ಇರಲಿಲ್ಲ. ಹಾಗಾಗಿಯೇ ಮಗಳನ್ನು ಧಾರೆ ಎರೆದು ಕಳುಹಿಸಿಕೊಡುವಾಗ ಹಂಡೆಯ ವಿಷಯವನ್ನೇ ಎತ್ತಲಿಲ್ಲ. ತನ್ನ ನಂತರ ತನ್ನ ಮಗಳಿಗೇ ಅದನ್ನು ಕೊಡಬೇಕು. ನನ್ನಂತೆಯೇ ಆಕೆಯೂ ಅದನ್ನು ಜೋಪಾನ ಮಾಡಬೇಕೆಂಬ ಆಸೆಯಂದೇ ಬತ್ತಿ ಹೋಗಿತ್ತು. ಅಂದೆಲ್ಲಾ ಕೂತು ಯೋಚಿಸಿದಾಗಲೂ ಅವಳಿಗೊಂದು ರೀತಿಯ ಸಮಾಧಾನವೇ. ಕಾರಣ ಆ ಹಂಡೇವನ್ನ ಬಿಟ್ಟು ಬದುಕುವ ಶಕ್ತಿ ಎಲ್ಲಿಯದು ಆಕೆಗೆ.

ಅವಳು ಲಗ್ನವಾದ ಕ್ಷಣದಿಂದ ಬದುಕಲ್ಲಿ ತುಂಬಿಕೊಂಡಿದ್ದ ಒಂಟಿತನಕ್ಕೇ ಬದುಕಲು ನಡೆಸಿದ ಹೋರಾಟಕ್ಕೆ ಒಗ್ಗಿಕೊಳ್ಳಲು, ಅದನ್ನು ನೀಗಿಕೊಂಡು ಬದುಕಲು ಬೇಕಾದ ಮನೋಸ್ಥೈರ್ಯ, ಆತ್ಮವಿಶ್ವಾಸ ಹಂಡೇವಿನೊಳಗೆ ಮಿಡುಕುತ್ತಿರುವ ಅಪ್ಪಯ್ಯ, ಅವ್ವಯ್ಯನ ಉಸಿರೇ ಕಾರಣವಾಗಿತ್ತು. ಮಗಳನ್ನು ಗಂಡನ ಮನೆಗೆ ಕಳುಹುವಾಗಲೂ ಆಕೆಯ ಮುಖದಲ್ಲಿ ತನ್ನ ಕರ್ತವ್ಯ ಪೂರೈಸಿದ ಧನ್ಯತೆ ಇತ್ತೆ ಹೊರತು ಅಗಲಿಕೆಯ ನೋವಾಗಲಿ, ದುಃಖವಾಗಲಿ ಕಿಂಚಿತ್ತೂ ಇರಲಿಲ್ಲ. ಅಂತೆಯೇ ಮಗ ಓದು ಮುಗಿಸಿ, ನೌಕರಿ ಹಿಡಿದು, ಪಟ್ಟಣ ಸೇರಿ ಕೊನೆಗೆ ಪಟ್ಟಣದ ಓದಿದ ಹುಡುಗಿಯನ್ನು ಲಗ್ನವಾಗಿ ಮಾವನ ಮನೆ ಅಳಿಯನಾಗಿ ಹೋದಾಗಲೂ ಅದೇ ಭಾವನೆಯಿತ್ತು.

'ನೀನೆಲ್ಲಿರ್ತಿಯೋ ಅಲ್ಲೇ ಹೊಂದ್ಕಂಡು, ಅವ್ರೇ ಯಲ್ಲಾ ಅಂದ್ಗಂಡು ಇರಪ್ಪ..' ಅಂತ ತುಂಬು ಮನಸ್ಸಿಂದ ಹರಸಿದಾಗ ಮಗ ಒಂದು ರೀತಿಯ ತಪ್ಪಿತಸ್ಥ ಭಾವನೆಯಿಂದ ಕುಗ್ಗಿ ನುಡಿದಿದ್ದ. 'ನೀನೂ ಅಲ್ಲೇ ಬಂದ್ಬಿಡವ್ವ, ಎಲ್ಲರೂ ಒಟ್ಟಾರಿಗೋಣ...' ಅಂತ. ಆದ್ರೆ ಪಕ್ಕದಲ್ಲಿದ್ದ ಹೆಂಡತಿ ಸುಮ್ಮನೆ ತಲೆಯಾಡಿಸಿ ನಕ್ಕಿದ್ದಳಷ್ಟೇ. ಆ ನಗುವಿಗೆ ತಾನೂ ನಗೆ ಸೇರಿಸಿ, ಅವಳ ತಲೆ ಸವರಿ 'ಸುಖವಾಗಿರ್ರಿ...' ಎಂದಿದ್ದಳಷ್ಟೇ ಶಿವಮ್ಮ. 'ಇನ್ಮೇಲೆ ಕೂಲಿಗೀಲಿ ಅಂತೆಲ್ಲೂ ಹೋಗ್ಬ್ಯಾಡ... ನಾನು ತಿಂಗ್ಳಾ ನಿನಗೆ ದುಡ್ಡು ಕಳುಸ್ತೀನಿ..' ಅಂದು ಹೋದ ಮಗ ಹಾಗೇ ನಡೆದುಕೊಂಡಿದ್ದ. ಆದರೆ ಶಿವಮ್ಮನದೇನೂ ಖರ್ಚಿರಲಿಲ್ಲ. ಅದೂ ಅಲ್ದೆ ಮುತ್ತೇನಟ್ಟಿಯಿಂದ ಗರುಡನೂ ಬಂದು ಶಿವಮ್ಮನ ಜೋತೇಲಿ ನೆಲಸಿದ್ದ. ಎಷ್ಟು ಹೇಳಿದರೂ ಕೇಳದ ಮಗ ಹಣ ಕಳಿಸುತ್ತಲೇ ಇದ್ದ. ಅದು ಹಾಗೇ ಶಿವಮ್ಮನ ಸ್ವಾರೆಯ ತಳ ಸೇರುತ್ತಿತ್ತು. ಎಲ್ಲಾ ಸುಖಾಂತ ಎಂದುಕೊಂಡು ನೆಮ್ಮದಿಯ ಉಸಿರುಬಿಟ್ಟು ಈಗಷ್ಟೇ ಆಕೆ ಸ್ವಲ್ಪ ತಣ್ಣಗಿದ್ದಳೇನೋ ಶುರುವಾಯಿತು ಹೊಟ್ಟೆನೋವು.

ಅದೆಂತಹ ಹೊಟ್ಟೆನೋವೆಂದರೆ ಯಾವ ಮದ್ದಿಗೂ ಶಮನವಾಗದಂತದ್ದು. ತೀರಾ ಹಣ್ಣಾದಳು ಶಿವಮ್ಮ. ರಾತ್ರೋರಾತ್ರಿ ಮಗ, ಮಗಳು ತಮ್ಮ ಸಂಸಾರ ಸಮೇತ ಬಂದರು. ಶಿವಮ್ಮನನ್ನು ನಗರಕ್ಕೆ ಕರೆದೊಯ್ಯುವ ಎಲ್ಲಾ ತಯಾರಿಗಳೂ ನಡೆದವು. ಸಂಜೀವ ಕಾರು ಮಾಡಿದ್ದ. ಮರುದಿನ ಬೆಳಗ್ಗೆಯೇ ಹೊರಡುವುದೆಂದು ತೀರ್ಮಾನವಾಯ್ತು. ಪಡಸಾಲೆಯಲ್ಲಿ ನೋವಿನಿಂದ ಸುಸ್ತಾದ ಶಿವಮ್ಮ ಮಲಗಿ ಕಣ್ಮುಚ್ಚಿದ್ದಳು. ಅಂಗಳದಲ್ಲಿ ಕೂತು ಸಂಜೀವ, ಅವನ ಹೆಂಡತಿ, ಗಂಗವ್ವ ಅವಳ ಗಂಡ ಮಾತಾಡುತ್ತಿದ್ದರು. ಆ ಮಾತು ಶಿವಮ್ಮನ ಖಾಯಿಲೆಯಿಂದ ಶುರುವಾಗಿ ಹಾಗೇ ಸಾಗುತ್ತಾ ಮೂಲೆಯಲ್ಲಿ ಥಳಥಳ ಹೊಳೆಯುತ್ತಿದ್ದ ಹಂಡೇವಿನತ್ತ ಬಂದಿತು.

ಮೊದಲ ಬಾರಿ ಅದನ್ನ ಕಂಡಾಗಿನಿಂದಲೂ ಅದರ ಮೇಲೆ ತನಗೆ ಕಣ್ಣಿರುವುದಾಗಿಯೂ ಮನೆಯಲ್ಲಿ ಆಂಟಿಕ್ಸ್ ಜೊತೇಲಿ ಶೋಪೀಸಾಗಿಡಲು ತುಂಬಾ ಚೆನ್ನಾಗಿರುವುದೆಂದೂ ಸಂಜೀವನ ಹೆಂಡತಿ ಶುರು ಮಾಡಿದಳು. ಆದರೆ ಒಡನೆ ಸಂಜೀವ, ಗಂಗವ್ವ ಇಬ್ಬರೂ ಆಕೇನ ತಡೆದು ಅದರ ಬಗ್ಗೆ ಮಾತನಾಡದೇ ಇರುವುದೇ ಒಳ್ಳೆಯದೆಂದು ಎಷ್ಟು ಹೇಳಿದರೂ ಆಕೆ ವಾದಿಸುತ್ತಲೇ ಹೋದಳು. ಆಕೆಗಿನ್ನದರ ಉಪಯೋಗ ಆತ್ತೆಗೆಲ್ಲಿದೆ. ಸುಮ್ನೆ ಇಲ್ಲಿ ವೇಸ್ಟು ಅಲ್ಲಾದರೆ ನಾಲ್ಕು ಜನ ನೋಡಿ ತಮ್ಮನ್ನ ಪ್ರಶಂಸಿಸುತ್ತಾರೆಂಬ ಅನಿಸಿಕೆ.

ಗಂಗವ್ವನೂ ಅತ್ತಿಗೆಯ ಮಾತನ್ನೇ ಒಪ್ಪಿಕೊಂಡಳು. 'ಹೂಂ ನಣ್ಣ ಈಗಿನ್ಯಾರು ಅದರಲ್ಲಿ ನೀರು ತುಂಬಿಟ್ಗಂಡು ಕುಡಿತಾರೇಳು ಅವ್ವಯ್ಯಗಂತು ಮಾಡಕ್ಬ್ಯಾರೆ ಕೆಲ್ಸಯಿರ್ಲಿಲ್ಲ ದಿನಾ ಅದುನ್ನ ತಿಕ್ಕೆಂಡು ಕುಂತಿರ್ತಿದ್ಲು... ಹೌದತ್ಗಿ ಅದನ್ನು ದಿನಾ ತಿಕ್ಕಿದರಷ್ಟೇ ಫಳಫಳ ಅಂತ ಕಾಣೋದು. ನೀವದನ್ನೆಲ್ಲಾ ಮಾಡ್ತೀರಾ..?' ಅಂತ ಕೇಳಿದಳು.

'ಅಯ್ಯಪ್ಪ ಅದೆಲ್ಲ ನನ್ಕೈಲಿ ಸಾಧ್ಯವೇ ಇಲ್ಲ. ಅದಕ್ಕೇ ಒಂದು ಉಪಾಯ ಮಾಡಿದ್ದೀನಿ. ಅದರ್ಮೇಲೆ ಪೇಂಟ್ ಮಾಡಿಸಿದ್ರೆ ಹೇಗೆ...?' ಎಂದಳು ಅತ್ತಿಗೆ. 'ಒಳ್ಳೆ ಉಪಾಯ ಅತ್ಗೆ ತುಂಬಾ ಚೆನ್ನಾಗಿರುತ್ತೆ. ನಿಮ್ಮ ಹಾಲ್‌ನಲ್ಲಿಟ್ರೆ ಮನೇಗೆ ಒಂದು ಕಳೆ ಬರುತ್ತೆ...' ಗಂಗವ್ವನೂ ಅಷ್ಟೇ ಹುರುಪಿನಿಂದ ಹೇಳಿದಳು. ಆದರೆ ಸಂಜೀವ ಒಪ್ಪಲಿಲ್ಲ. 'ನೋಡು ಅವ್ವಯ್ಯ ಆ ಹಂಡೇವ್ನ ಕೊಡೋಕೆ ಸುತರಾಂ ಒಪ್ಪೋಲ್ಲ. ಆಕೆಗದು ತುಂಬಾ ಪ್ರೆಷಿಯಸ್...' ಎಂದವನ ಮಾತಿಗೆ ಹೆಂಡತಿ ಕೆರಳಿಯೇ ಬಿಟ್ಟಳು. 'ನೋಡಿ, after all ಆ ಹಳೇದೊಂದು ಹಂಡೆಗೆ ಇಷ್ಟೆಲ್ಲಾ ರಂಪನಾ...? ಎಷ್ಟು ಪ್ರೆಷಿಯಸ್ ಅದು.. ಹಾಂ..? ನಿಮ್ಮಮ್ಮ ಏನೂ ಪುಕ್ಕಟ್ಟೆ ಕೊಡೋದು ಬ್ಯಾಡ. ಅಲ್ರೀ ತಿಂಗ್ಳಾ ನೀವು ಕಳಿಸ್ತಿರ್ಲಿಲ್ವಾ ದುಡ್ಡು.. ಅದಕ್ಕಿಂತಲೂ ಹೆಚ್ಚು ಬೆಲೆಬಾಳುತ್ತಾ ಆ ಹಂಡೆ...? ಅವಳ ದನಿಯೇರಿದ್ದು ಗಮನಿಸಿ ಸಂಜೀವ ತಡೆದ' ಆಯ್ತು ಮಾರಾಯ್ತಿ ನಿನಗೆ ಆ ಹಂಡೆ ತಾನೇ ಬೇಕು. ಗರುಡ ಮಾಮಂಗೆ ಹೇಳಿದ್ರೆ ನಾಳೆ ಕಾರಿನ ಟಾಪ್ ಮೇಲೆ ಕಟ್ತಾನೇಳು. ಅದೇನಾದ್ರೂ ಆಗ್ಲಿ ತಗೊಂಡೇ ಹೋಗೋಣ. ಈಗ ನಡೀರಿ ಮಲ್ಗಿ ಬೆಳಗ್ಗೆ ಬೇಗ ಏಳ್ಬೇಕು...' ಎಂದು ಎಲ್ಲರನ್ನೂ ಎಬ್ಬಿಸಿಕೊಂಡು ಹೊರಟ.

ಬೆಳಗ್ಗೆ ಇವರೆಲ್ಲ ಎದ್ದು ಬಂದಾಗ ಶಿವಮ್ಮನ ಹಾಸಿಗೆ ಖಾಲಿಯಾಗಿತ್ತು. ಕಾರು ಬಂದು ನಿಂತಿತ್ತು. ಗಾಬರಿಯಿಂದ ಹುಡುಕಿದಾಗ ಶಿವಮ್ಮ ಅಡುಗೆ ಮನೆಯಲ್ಲಿ ಹಂಡೇವನ್ನ ತಬ್ಬಿ ಅದಕ್ಕೇ ಕೆನೆಯೂರಿ ಕೂತಿದ್ದಳು. ಅವಳ ಪಕ್ಕದಲ್ಲೇ ಕಪ್ಪನೆಯ ಸ್ವಾರೆ ಇತ್ತು. ಸಂಜೀವ ಅವ್ವನನ್ನು ಎಬ್ಬಿಸಲು ಹೋದರೆ ಆಕೆ ನಿಶ್ಚಲವಾಗಿದ್ದಳು. ಶಾಂತವಾಗಿದ್ದಳು. ಎಲ್ಲಾ ಬಾಧೆಗಳಿಂದಲೂ, ಬಂಧನಗಳಿಂದಲೂ ಮುಕ್ತವಾಗಿದ್ದಳು. ಮುಖದಲ್ಲಿ ಮಗುವಿನ ಕಳೆಯಿತ್ತು. ಅವಳ ಪಕ್ಕದಲ್ಲೇ ಇದ್ದ ಸ್ವಾರೆಯಲ್ಲಿ ನೋಟುಗಳಿದ್ದವು. ಜೊತೆಗೆ ಕೆಲವು ಪತ್ರಗಳು. ಸಂಜೀವ ಪ್ರತಿತಿಂಗಳು ಅವ್ವನಿಗೆ ಕಳುಹಿಸುತ್ತಿದ್ದ ದುಡ್ಡು ಬರೆಯುತ್ತಿದ್ದ ಪತ್ರಗಳು ಅಲ್ಲಿದ್ದವು.

ಗರುಡ ಹೇಳಿದ. 'ಸಂಜೀವ ನೀನು ಕಳಿಸಿದ ದುಡ್ನಾಗೆ ಒಂದು ಪೈಸನೂ ಅಕ್ಕಯ್ಯ ಬಳಸ್ಕಂಡಿಲ್ಲ. ನೀನೆಂಗೆಂಗೆ ಕಳುಸ್ತಿದ್ಯೋ ಹಂಗಂಗೆ ಇದ್ರಾಗೆ ಇಟ್ಟಿದ್ಲು. ನಾನು ಸತ್ತ ದಿನ ಅವ್ನಿಗೇ ಯಲ್ಲಾ ಕ್ವಡು ಅಂದಿದ್ಲು. ಮತ್ತೆ ಅವ್ಳ ದಿವುಸಕ್ಕೆ ಕರ್ಮಕ್ಕೆ ಅಂತೂ ವಂದಷ್ಟು ದುಡ್ಡು ಇಟ್ಟಳ್' ಎಂದವನೇ ಮತ್ತೊಂದು ಸ್ವಾರೆಯಲ್ಲಿನ ಬಟ್ಟೆಯ ಗಂಟು ಬಿಚ್ಚಿ ತೋರಿಸಿದ. ಅಲ್ಲಿದ್ದವರೆಲ್ಲ ಅಳಲೂ ಬಾರದಷ್ಟು ಆಘಾತಗೊಂಡಿದ್ದರು. ಮುಖಗಳೆಲ್ಲಾ ಕಪ್ಪಿಟ್ಟು ಹೋಗಿದ್ದವು. ರಾತ್ರಿ ತಾವಾಡಿದ ಮಾತುಗಳೆಲ್ಲಾ ಅವ್ವನ ಕಿವಿಗೆ ಬಿದ್ದಿವೆ ಎಂಬುದಕ್ಕೆ ಅವೆಲ್ಲಾ ಸಾಕ್ಷಿಯಾಗಿದ್ದವು. ಸಂಜೀವನಿಗೆ ಅಸಹ್ಯವಾಗತೊಡಗಿತು.

ಇನ್ನೆಂದೂ ನಾನು ನನ್ನ ಮುಖವನ್ನು ನೋಡಿಕೊಳ್ಳಲಾರೆ ಎನಿಸಿತು. ಅಂಗೈಗಳಿಂದ ಮುಖ ಮುಚ್ಚಿಕೊಂಡು 'ಅವ್ವಾ..' ಎಂದು ಕೂಗುತ್ತಾ ಹೊರಗೋಡಿದ. ಏಳುತ್ತಾ ಬೀಳುತ್ತಾ ಗೊತ್ತುಗುರಿಯಿಲ್ಲದೆ ಓಡಿಯೇ ಓಡಿದ...

ಜೆನ್ ಹಾಯ್ಕು ಪದ್ಧತಿ



ಕೊಂಚ ನಿದ್ದೆ ಮಾಡಿ
ಎಚ್ಚರ ಆಗೋದರ ಒಳಗೆ
ವಸಂತ ಕಾಲಾನೇ
ಮಾಯ ಆಗೋಯ್ತಲ್ರೀ !
-ಬುಸೋನ್



ಪ್ರಶ್ನೆ ಸ್ಫಟಿಕ ಸ್ಪಷ್ಟ
ಉತ್ತರ ಕತ್ತಲಿನಷ್ಟು ಆಳ
ಅಣುಕ್ಷಣವೆಲ್ಲ ವಾಸ್ತವ
ಬೆಟ್ಟದ ಬೆಳಗನ್ನ ಸೀಳಿಟ್ಟ
ಹಕ್ಕಿ ಕೂಗು : ಅಲ್ನೋಡು
ಧ್ಯಾನದಲ್ಲಿರುವ ಕಲ್ಲಲ್ಲಿ
ಕುಂತವನೆ ಪುರಾತನ ಗುರು
-ಸೊದೊ



ಹೂ ದಳ ಚೆಲ್ಲುತ್ತಿರೋ
ಈ ಬೆಟ್ಟದ ಕಣಿವೆ
ಸಾಲು ಸಾಲು ಮೋಡಗಳನ್ನೇ
ನುಂಗಿ ಹಾಕ್ತಿದೆಯಲ್ಲಾ
-ಬುಸೋನ್



ಯಾತರ ಅಂಗಿನೋ ಕಣ್ರೀ ಇದು
ಇದರಲ್ಲಿರೋ ಒಂದೇ ಒಂದ್
ಹೊಲಿಗೆ ಕೂಡ ನನ್ನದಲ್ಲ
-ಲೇಡಿ ಸೊನೊಜೊ

ಎಲ್ಸಿ ನಾಗರಾಜ್



ಅತ್ತ ಹೋಗ್ತದೆ
ಇತ್ತ ಹೋಗ್ತದೆ
ಒಂದೇ ಒಂದು ಹೆಜ್ಜೆ ಗುರುತುಳಿಸುತ್ತಿಲ್ಲ
ಈ ನೀರು ಗೋಳಿಗೆ ಮಾರ್ಗದರ್ಶಿ ಸೈತಾ ಬೇಕಾಗಿಲ್ಲ
-ಡೊಜೆನ್





ದಕ್ಷತೆ ಮತ್ತು ಮೀಸಲಾತಿ

○ ಡಾ|| ಜಿ. ಪಾಂಡುನಾಯಕ್

ಮೀಸಲಾತಿಯಿಂದ ದಕ್ಷತೆ ಕಡಿಮೆಯಾಗುತ್ತದೆಂಬ ವಾದ ಮತ್ತು ಶಾಲಾ ಕಾಲೇಜುಗಳಲ್ಲಿ ಪಡೆದ ಅಂಕಗಳು ದಕ್ಷತೆಯ ಸಾಕ್ಷಿ ಕಲ್ಲೆನ್ನುವ ಸವರ್ಣೀಯರ ವಾದಕ್ಕೆ ವೈಜ್ಞಾನಿಕ ಪುರಾವೆಗಳಿಲ್ಲ. ಆದರೆ ದಕ್ಷತೆಗೂ ಮತ್ತು ಶಾಲಾ ಕಾಲೇಜುಗಳಲ್ಲಿ ಪಡೆದ ಅಂಕಗಳಿಗೂ ಮಹತ್ತರವಾದ ಸಂಬಂಧವಿಲ್ಲವೆಂಬುದಕ್ಕೆ ಬಹಳಷ್ಟು ವೈಜ್ಞಾನಿಕ ಪುರಾವೆಗಳಿವೆ.

ಮೀಸಲಾತಿ ನೀತಿಯಲ್ಲಿ ನೌಕರಿ ಪಡೆದು ಮೀಸಲಾತಿ ನೀತಿಯಡಿಯಲ್ಲಿ ಬಡ್ತಿ ಪಡೆದ ದಲಿತ ವರ್ಗದ ಬ್ಯಾಂಕ್ ಅಧಿಕಾರಿಗಳಿಗೆ ಶಾಖಾ ಮುಖ್ಯಸ್ಥರ ಹುದ್ದೆ ನೀಡಿದಾಗ ಸವರ್ಣೀಯರಿಗಿಂತ ಉತ್ತಮವಾಗಿ ಕಾರ್ಯ ನಿರ್ವಹಿಸಿರುವ ಸತ್ಯಾಂಶ ಈ ಸಂಶೋಧನಾಧಾರಿತ ಲೇಖನದಿಂದ ತಿಳಿದುಬರುತ್ತದೆ.

ಆಡಳಿತದಲ್ಲಿ ದಕ್ಷತೆ ಮತ್ತು ಉದ್ಯೋಗಾವಕಾಶಗಳಲ್ಲಿ ಮೀಸಲಾತಿ, ಇವೆರಡರಲ್ಲಿ ಏನಾದರೂ ಸಂಬಂಧವಿದೆಯೇ? ಹೌದೆನ್ನುತ್ತಾರೆ ಭಾರತದ ಖಾಸಗಿ ಕೈಗಾರಿಕೋದ್ಯಮಿಗಳು. ಇತ್ತೀಚಿನ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದರೆ ದೀನ ದಲಿತರಿಗೆ ಖಾಸಗಿ ಉದ್ಯಮಗಳಲ್ಲಿಯೂ ಸಹ ಮೀಸಲಾತಿ ದೊರಕಿಸಿ ಕೊಡುವುದಾಗಿ ಭರವಸೆ ನೀಡಿತ್ತು. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ರಚಿತವಾದ ನಂತರವೂ ಸಹ ಪ್ರಧಾನಮಂತ್ರಿ ಮನಮೋಹನ್ ಸಿಂಗ್, ಮಂತ್ರಿಗಳಾದ ರಾಂ ವಿಲಾಸ್ ಪಾಸ್ವಾನ್, ಮೀರಾ ಕುಮಾರ್ ಮತ್ತಿತರರು ಖಾಸಗಿ ಕ್ಷೇತ್ರದಲ್ಲಿ ಉದ್ಯೋಗ ಮೀಸಲಾತಿ ಜಾರಿಮಾಡಲು ಶೀಘ್ರದಲ್ಲೇ ಕಾಯಿದೆಯೊಂದನ್ನು ತರುವುದಾಗಿ ಭರವಸೆ ಇತ್ತರು. ಇದನ್ನು ತಿಳಿದ ಖಾಸಗಿ ಕೈಗಾರಿಕೋದ್ಯಮಿಗಳು ಸರ್ಕಾರದ ಮೇಲೆ ಒತ್ತಡ ಹೇರಿದ ಪರಿಣಾಮವಾಗಿ ಕೇಂದ್ರ ಸರ್ಕಾರ ತನ್ನ ನಿರ್ಧಾರಿತ ಮಸೂದೆಯನ್ನು ಕೈಬಿಟ್ಟಿದೆ. ಖಾಸಗಿ ಸಂಸ್ಥೆಗಳ ವಾದವೇನೆಂದರೆ 'ನೌಕರಿಯಲ್ಲಿ ಮೀಸಲಾತಿ ನೀಡುವುದರಿಂದ ಸ್ಪರ್ಧಾತ್ಮಕತೆ ಮತ್ತು ದಕ್ಷತೆ ಕಡಿಮೆಯಾಗುತ್ತದೆ. ದಕ್ಷತೆ ಕಡಿಮೆಯಾದರೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತೀಯ ಉದ್ಯಮಗಳು ಸ್ಪರ್ಧಾತ್ಮಕವಾಗಿ ವ್ಯವಹಾರ ಮಾಡಲು ಸಾಧ್ಯವಿಲ್ಲ ಎಂಬುದು.'

ಆದರೆ ಮೀಸಲಾತಿಯಿಂದ ದಕ್ಷತೆ ಕಡಿಮೆಯಾಗುತ್ತಿದೆ ಎಂಬ ವಾದಕ್ಕೆ ವೈಜ್ಞಾನಿಕ ಅಥವಾ ಸಂಶೋಧನಾ ಸಾಕ್ಷಿಗಳಿವೆಯೇ ? ಈ ವಾದದಲ್ಲಿ ಸತ್ಯಾಂಶವಿದ್ದರೆ ಮೀಸಲಾತಿಯನ್ನ ಮೂಲಭೂತವಾಗಿ ಜಾರಿ ಮಾಡಿರುವ ಅಮೆರಿಕ ರಾಷ್ಟ್ರ ವಿಶ್ವದಲ್ಲಿಯೇ ಅತ್ಯಂತ ಸ್ಪರ್ಧಾತ್ಮಕ ರಾಷ್ಟ್ರವಾಗಲು ಸಾಧ್ಯವಾಗುತ್ತಿತ್ತು. ಈ ವಿಚಾರಕ್ಕೆ ಸಂಬಂಧ ಪಟ್ಟಂತೆ ಕಳೆದ ವರ್ಷ ನನ್ನ ಡಾಕ್ಟರೇಟ್ ಪದವಿಗಾಗಿ ನಡೆಸಿದ ಸಂಶೋಧನೆಯಿಂದ ಕೆಲವು ಮುಖ್ಯ ವಿಚಾರಗಳು ಬೆಳಕಿಗೆ ಬಂದಿವೆ. ನನ್ನ ಸಂಶೋಧನೆಯು ರಾಷ್ಟ್ರೀಕೃತ ಬ್ಯಾಂಕೊಂದರ ಮಾನವ ಸಂಪನ್ಮೂಲ ಅಭಿವೃದ್ಧಿ ನೀತಿಯನ್ನು ಕುರಿತ ವಿಶ್ಲೇಷಣೆ ಈ ಬ್ಯಾಂಕು ಭಾರತದ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ನಾಲ್ಕನೇ ಅತಿ ದೊಡ್ಡದು. ಉದ್ಯೋಗದಲ್ಲಿ ಮೀಸಲಾತಿ ನೀತಿಯನ್ನು ಪಾಲಿಸುತ್ತಾ ಬಂದಿದೆ. ದೀನದಲಿತರು ಮುಖ್ಯ ಪ್ರಬಂಧಕರ ಹುದ್ದೆಯವರೆಗೆ ಬಡ್ತಿ ಪಡೆದಿರುವುದುಂಟು ಈ ಬ್ಯಾಂಕಿನಲ್ಲಿ. ಆದರೆ ದುರಾದೃಷ್ಟವಶಾತ್ ಬಹಳಷ್ಟು ಮಂದಿ ದಲಿತ ನೌಕರರು ಬ್ಯಾಂಕಿನ ಕೆಳಸ್ತರದಲ್ಲಿ ಕೆಲಸ ಮಾಡು ತ್ತಿದ್ದಾರೆ. ಬಡ್ತಿ ಪಡೆದಿರುವ ದಲಿತ ಅಧಿಕಾರಿಗಳಲ್ಲಿ ಕೆಲವೇ ಮಂದಿ ಮಹತ್ತರವಾದ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದು ಉಳಿದವರೆಲ್ಲಾ ಗುರುತಿಸಿಕೊಳ್ಳಲಾಗದ ಆಫೀಸ್ ಮ್ಯಾನೇಜರ್ ಹುದ್ದೆಗಳಲ್ಲಿ ಕಾಲ ಕಳೆಯತೊಡಗಿದ್ದಾರೆ.

ಬ್ಯಾಂಕುಗಳಲ್ಲಿ ಗುರುತಿಸಿಕೊಳ್ಳಬಹುದಾದ ಮಹತ್ವದ ಹುದ್ದೆಗಳಲ್ಲೊಂದು ಬ್ಯಾಂಕ್ ಶಾಖೆಯ ಮುಖ್ಯಸ್ಥರ ಪದವಿ. ಆದರೆ ದಲಿತ ಅಧಿಕಾರಿಗಳು ಈ ಸ್ಥಾನ ಪಡೆಯುವುದು ತೀರಾ ವಿರಳ. ಈ ಬ್ಯಾಂಕು ಕರ್ನಾಟಕ ರಾಜ್ಯದಲ್ಲಿ ಸುಮಾರು ೫೦ ವರ್ಷಗಳಿಂದ ಶಾಖೆಗಳನ್ನು ತೆರೆದಿದೆ. ಆದರಲ್ಲಿ ನಷ್ಟ ಅನುಭವಿಸುತ್ತಿರುವ ಗ್ರಾಮೀಣ ಶಾಖೆಗಳಲ್ಲಿ ಕಡ್ಡಾಯ ಗ್ರಾಮೀಣ ಸೇವೆ ಮುಗಿಸಲು ಮ್ಯಾನೇಜರ್‌ಗಳಾಗಿ ಹೋಗಿರುವ ಕೆಲ ದಲಿತ ಅಧಿಕಾರಿಗಳನ್ನು ಬಿಟ್ಟರೆ, ೨೦೦೧ನೇ ವರ್ಷದವರೆವಿಗೆ ಕೇವಲ ಒಬ್ಬ ದಲಿತ ಅಧಿಕಾರಿಯನ್ನು

ಇತ್ತೀಚಿನ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದರೆ ದೀನ ದಲಿತರಿಗೆ ಖಾಸಗಿ ಉದ್ಯಮಗಳಲ್ಲಿಯೂ ಸಹ ಮೀಸಲಾತಿ ದೊರಕಿಸಿ ಕೊಡುವುದಾಗಿ ಭರವಸೆ ನೀಡಿತ್ತು. ಇದನ್ನು ತಿಳಿದ ಖಾಸಗಿ ಕೈಗಾರಿಕೋದ್ಯಮಿಗಳು ಸರ್ಕಾರದ ಮೇಲೆ ಒತ್ತಡ ಹೇರಿದ ಪರಿಣಾಮವಾಗಿ ಕೇಂದ್ರ ಸರ್ಕಾರ ತನ್ನ ನಿರ್ಧಾರಿತ ಮಸೂದೆಯನ್ನು ಕೈಬಿಟ್ಟಿದೆ. ಖಾಸಗಿ ಸಂಸ್ಥೆಗಳ ವಾದವೇನೆಂದರೆ 'ನೌಕರಿಯಲ್ಲಿ ಮೀಸಲಾತಿ ನೀಡುವುದರಿಂದ ಸ್ಪರ್ಧಾತ್ಮಕತೆ ಮತ್ತು ದಕ್ಷತೆ ಕಡಿಮೆಯಾಗುತ್ತದೆ. ದಕ್ಷತೆ ಕಡಿಮೆಯಾದರೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರತೀಯ ಉದ್ಯಮಗಳು ಸ್ಪರ್ಧಾತ್ಮಕವಾಗಿ ವ್ಯವಹಾರ ಮಾಡಲು ಸಾಧ್ಯವಿಲ್ಲ ಎಂಬುದು.'

ಪಟ್ಟಿ ಸಂಖ್ಯೆ ೧
ಕರ್ನಾಟಕ ಕ್ಷೇತ್ರದ ಒಟ್ಟಾರೆ ಅಂಕಿ ಅಂಶಗಳು

ವಿವರ	ದಲಿತ ಅಧಿಕಾರಿಗಳು ಶಾಖಾ ಮುಖ್ಯಸ್ಥರಾಗುವ ಮೊದಲು		ದಲಿತ ಅಧಿಕಾರಿಗಳು ಶಾಖಾ ಮುಖ್ಯಸ್ಥರಾದ ನಂತರ	
	೨೦೦೦ನೇ ವರ್ಷ	೨೦೦೧ನೇ ವರ್ಷ	೨೦೦೨ನೇ ವರ್ಷ	೨೦೦೩ನೇ ವರ್ಷ
ಠೇವಣಿಸುವುದು	೫೦೯.೮೧	೫೪೭.೨೬	೬೪೮.೪೭	೭೭೩.೯೪
ಸಾಲ ಹಂಚಿಕೆ	೪೦೦.೭೨	೪೯೯.೪೯	೭೨೩.೪೦	೬೮೩.೯೭
ಒಟ್ಟು ಸಾಲದಲ್ಲಿ ವಸೂಲಿ ಮಾಡಲಾಗದ ಸಾಲ	೩೧.೭೪	೨೩.೫೮	೯.೯೬	೧೦.೧೨
ಲಾಭ	೧೬.೮೧	೨೨.೨೫	೨೪.೩೧	೨೯.೭೪

(ಕೋಟಿ ರೂ. ಗಳಲ್ಲಿ) (ಮೂಲ : ಬ್ಯಾಂಕಿನ ಕ್ಷೇತ್ರೀಯ ಕಾರ್ಯಾಲಯ, ಬೆಂಗಳೂರು)

ಶಾಖಾ ಪ್ರಬಂಧಕನಾಗಿ ನೇಮಕ ಮಾಡಲಾಗಿತ್ತು. ಈ ಒಬ್ಬ ವ್ಯಕ್ತಿ ಬುದ್ಧಿವಂತನೆಂಬ ಕಾರಣಕ್ಕಾಗಿ ಅಲ್ಲ. ಬದಲಿಗೆ ಸವರ್ಣೀಯರ ನಾಯಕತ್ವವುಳ್ಳ ಅಧಿಕಾರಿಗಳ ಸಂಘದ ಅಧ್ಯಕ್ಷರೊಡನೆ ಉತ್ತಮ ಸಂಬಂಧವಿದ್ದ ಕಾರಣಕ್ಕಾಗಿ.

ಮಾರ್ಚ್ ೨೦೦೧ ರಂದು ಬ್ಯಾಂಕ್ ಸೇವೆಯಿಂದ ಸ್ವೇಚ್ಛಾ ನಿವೃತ್ತಿ ಪಡೆದ ಸುಮಾರು ೧೫೦ ನೌಕರರಲ್ಲಿ ೮ ಮಂದಿ ಸವರ್ಣೀಯರ ಶಾಖಾ ಮುಖ್ಯಸ್ಥರು ಸಹ ಇದ್ದರು. ಹೀಗಾಗಿ ಈ ೮ ಹುದ್ದೆಗಳನ್ನು ತುಂಬುವ ಸಲುವಾಗಿ ಕರ್ನಾಟಕ ಕ್ಷೇತ್ರದಲ್ಲಿರುವ ಎಲ್ಲಾ ಅಧಿಕಾರಿಗಳ ಅರ್ಹತೆ ಮತ್ತು ದಕ್ಷತೆಗಳ ಬಗ್ಗೆ ದೀರ್ಘ ಚರ್ಚೆ ನಡೆಸಲಾಯಿತು. ಬ್ಯಾಂಕಿನ ನೀತಿ ನಿಯಮಗಳ ಪ್ರಕಾರ ಯಾವುದೇ ಅಧಿಕಾರಿಯನ್ನು ಶಾಖಾ ಮುಖ್ಯಾಧಿಕಾರಿಯನ್ನಾಗಿ ನೇಮಕ ಮಾಡಬೇಕಾದರೆ ೨೦ ಅಂಶಗಳುಳ್ಳ ಅರ್ಜಿಯೊಂದನ್ನು ಕ್ಷೇತ್ರೀಯ ಕಾರ್ಯಾಲಯದ ಮುಖ್ಯಸ್ಥರು ಸಹಿ ಮಾಡಿ ವಲಯದ ಅಧಿಕಾರಿಗಳಿಗೆ ಕಳುಹಿಸಿಕೊಡಬೇಕಾಗುತ್ತದೆ. ಅಲ್ಲಿಂದ ಅನುಮತಿ ಸಿಕ್ಕ ನಂತರ ಶಾಖಾ ಮುಖ್ಯಸ್ಥರಾಗಿ ಆಯ್ಕೆಯಾಗುವ ಅಧಿಕಾರಿ ಪದಸ್ವೀಕಾರ ಮಾಡುತ್ತಾರೆ. ಈ ೮ ಶಾಖಾ ಮುಖ್ಯಸ್ಥರ ಹುದ್ದೆಗಳನ್ನು ತುಂಬಲು ಸವರ್ಣೀಯರಲ್ಲಿ ಸೂಕ್ತ ಅಧಿಕಾರಿಗಳು ಸಿಗಲಿಲ್ಲ ಮತ್ತು ಸಿಕ್ಕವರು ಈ ಜವಾಬ್ದಾರಿಯುತ ಹುದ್ದೆಗಳನ್ನು ಸ್ವೀಕರಿಸಲು ಸಿದ್ಧರಿರಲಿಲ್ಲ.

ಆದ್ದರಿಂದ ಈ ಹುದ್ದೆಗಳಿಗೆ ದಕ್ಷ ದಲಿತ ಅಧಿಕಾರಿಗಳನ್ನೇಕೆ ಪರಿಗಣಿಸಬಾರದೆಂಬ ಮಾನವ ಸಂಪನ್ಮೂಲ ಪ್ರಬಂಧಕರ ಸಲಹೆಯನ್ನು ಕ್ಷೇತ್ರಾಧಿಕಾರಿಯವರು ಸ್ವೀಕರಿಸಿ, ರಾಜ್ಯದಲ್ಲಿದ್ದ ಒಟ್ಟು ೩೪ ಶಾಖೆಗಳ ಪೈಕಿ ೮ ರಲ್ಲಿ ಪರಿಶಿಷ್ಟ ಜಾತಿಯ ಅಧಿಕಾರಿಗಳನ್ನು ಶಾಖಾ ಮುಖ್ಯಸ್ಥರಾಗಿ ನೇಮಕ ಮಾಡಿದರು. ಈ ೮ ಮಂದಿಯೂ ಸಹ ಮೀಸಲಾತಿ ಆಧಾರದ ಮೇಲೆ ಸಡಿಲಿತ ಆಯ್ಕೆ ನಿರ್ಧಾರಣಾ ಮಾನದಂಡದಡಿಯಲ್ಲಿ ಕೆಲಸಕ್ಕೆ ಸೇರಿದವರು. ಅವರು ಬಡ್ತಿ ಪಡೆದಿದ್ದು ಸಹ ಸಡಿಲಿಕೆ ಆಧಾರದ ಮೀಸಲಾತಿ ನೀತಿಯಡಿಯಲ್ಲಿ. ಆದ್ದರಿಂದ ಅವರು ದಕ್ಷತೆಯಿಂದ ಶಾಖಾ ಮುಖ್ಯಸ್ಥರ ಹುದ್ದೆಯನ್ನು ನಿರ್ವಹಿಸಬಲ್ಲರೋ ಅಥವಾ ಇಲ್ಲವೋ ಎಂಬ ಬಗ್ಗೆ ಬ್ಯಾಂಕಿಗೆ ಯಾವುದೇ ಪೂರ್ವ ಮಾಹಿತಿ ಇರಲಿಲ್ಲ. ಅದೃಷ್ಟವಶಾತ್ ಮಾನವ ಸಂಪನ್ಮೂಲ ಪ್ರಬಂಧಕರು ಮತ್ತು ಕ್ಷೇತ್ರ ಪ್ರಬಂಧಕರಿಬ್ಬರೂ ಸಹ ಮಾನವರೆಲ್ಲಾ ಸಮಾನರೆಂಬ ಮನೋಭಾವವುಳ್ಳವರಾದ್ದರಿಂದ ಈ ೮ ಮಂದಿ ಪರಿಶಿಷ್ಟರು ಶಾಖಾ ಪ್ರಬಂಧಕರಾಗಲು ಸಾಧ್ಯವಾಯಿತು.

> **ದಲಿತ ಅಧಿಕಾರಿಗಳು ಶಾಖಾ ಮುಖ್ಯಸ್ಥರಾದ ನಂತರ ಕರ್ನಾಟಕ ಕ್ಷೇತ್ರದ ಬ್ಯಾಂಕಿನ ವಹಿವಾಟು ಕಡಿಮೆಯಾಗಿಲ್ಲ. ಬದಲಿಗೆ ಗಣನೀಯವಾಗಿ ಹೆಚ್ಚಿದೆ ಎಂಬ ವಿಚಾರ ಈ ಅಂಕಿ ಅಂಶಗಳಿಂದ ತಿಳಿದುಕೊಳ್ಳಬಹುದಾಗಿದೆ.**

ಪರಿಣಾಮವೇನಾಯಿತೆಂಬುದು ಕುತೂಹಲಕಾರಿ ವಿಚಾರ ಮತ್ತು ದಲಿತ ವಿರೋಧಿಗಳು ನಾಚಿಕೆ ಪಡುವಂತಹ ಸಂಗತಿಯೇ ಹೌದು. ಎರಡು ವರ್ಷಗಳ ನಂತರ ಕರ್ನಾಟಕ ಕ್ಷೇತ್ರದಲ್ಲಿನ ಶಾಖೆಗಳ ವ್ಯವಹಾರಿಕ ವಹಿವಾಟನ್ನು ವಿಶ್ಲೇಷಿಸಲಾಯಿತು. ಕರ್ನಾಟಕ ಕ್ಷೇತ್ರವು ಎರಡು ವರ್ಷವೂ ಸತತವಾಗಿ ಮಹತ್ತರವಾದ ಕಾರ್ಯ ನಿರ್ವಹಿಸಿ ಹಿಂದೆಂದೂ ಸಾಧಿಸದ ಪ್ರಗತಿ ಸಾಧಿಸಿತು. ಈ ಪ್ರಗತಿಯು ಬ್ಯಾಂಕಿನ ಕೇಂದ್ರ ಕಛೇರಿಯವರವರೆಗೆ ಮಹತ್ತರ ಸುದ್ದಿಯಾಯಿತು. ಆದರೆ ಈ ಪ್ರಗತಿಯಲ್ಲಿ ಭಾಗಿಗಳಾದ ದಲಿತ ಶಾಖಾ ಮುಖ್ಯಸ್ಥರಿಗೆ ಯಾವುದೇ ಸನ್ಮಾನ ಸಿಗಲಿಲ್ಲ. ಈ ಎರಡು ವರ್ಷಗಳಲ್ಲಿ ಕರ್ನಾಟಕ ಕ್ಷೇತ್ರದ ಒಟ್ಟಾರೆ ಪ್ರಗತಿಯ ಅಂಕಿ ಅಂಶಗಳನ್ನು ಪಟ್ಟಿ ಸಂಖ್ಯೆ ೧ ರಲ್ಲಿ ತೋರಿಸಲಾಗಿದೆ.

ದಲಿತ ಅಧಿಕಾರಿಗಳು ಶಾಖಾ ಮುಖ್ಯಸ್ಥರಾದ ನಂತರ ಕರ್ನಾಟಕ ಕ್ಷೇತ್ರದ ಬ್ಯಾಂಕಿನ ವಹಿವಾಟು ಕಡಿಮೆಯಾಗಿಲ್ಲ, ಬದಲಿಗೆ ಗಣನೀಯವಾಗಿ ಹೆಚ್ಚಿದೆ ಎಂಬ ವಿಚಾರ ಈ ಅಂಕಿ ಅಂಶಗಳಿಂದ ತಿಳಿದುಕೊಳ್ಳಬಹುದಾಗಿದೆ. ಆದರೆ ಕರ್ನಾಟಕ ಕ್ಷೇತ್ರದ ೩೪ ಶಾಖೆಗಳಲ್ಲಿ ಕೇವಲ ೮ ಶಾಖೆಗಳು ದಲಿತರ ಕೈಯಲ್ಲಿದ್ದವು. ಈ ಎಂಟು ಮಂದಿಯಿಂದ ಕ್ಷೇತ್ರದ ಪ್ರಗತಿಯಾಗದಿರಬಹುದು ಅಥವಾ ಇನ್ನುಳಿದ ೨೪ ಸವರ್ಣೀಯ ಶಾಖಾ ಮುಖ್ಯಸ್ಥರ ಶ್ರಮದ ಫಲವಾಗಿ ಪ್ರಗತಿಯಾಗಿರಬಹುದೆಂಬ ಶಂಕೆ ಸಹಜವಾಗಿಯೇ ಓದುಗರಲ್ಲಿ ಬರಬಹುದು. ಈ ಸಂಶಯವನ್ನು ದೂರ ಮಾಡಲು ನಾವು ದಲಿತ ಶಾಖಾ ಪ್ರಬಂಧಕರಿದ್ದ ೮ ಶಾಖೆಗಳ ಅಂಕಿ ಅಂಶಗಳನ್ನಷ್ಟೆ ವಿಶ್ಲೇಷಣೆ ಮಾಡಿದಾಗ ಸತ್ಯಾಂಶ ಕಾಣಸಿಗುತ್ತದೆ. ದಲಿತ ಶಾಖಾ ಪ್ರಬಂಧಕರ ವ್ಯವಹಾರ ವಹಿವಾಟಿನ ಅಂಕಿ ಅಂಶಗಳನ್ನು ಪಟ್ಟಿ ಸಂಖ್ಯೆ ೨ರಲ್ಲಿ ತೋರಿಸಲಾಗಿದೆ.

ಪಟ್ಟಿ ಸಂಖ್ಯೆ ೨ರಲ್ಲಿ ಕೊಟ್ಟಿರುವ ಅಂಕಿ ಅಂಶಗಳಲ್ಲಿ ೨೦೦೦ ಮತ್ತು ೨೦೦೧ ವರ್ಷದ ಅಂಕಿ ಅಂಶಗಳು ಸವರ್ಣೀಯರು ಶಾಖಾ ಪ್ರಬಂಧಕರಾಗಿದ್ದಾಗ ನಡೆಸಿರುವ ವಹಿವಾಟು. ೨೦೦೨ ಮತ್ತು ೨೦೦೩ನೇ ವರ್ಷದ ಅಂಕಿ ಅಂಶಗಳು ಪರಿಶಿಷ್ಟ ಜಾತಿಯ ಅಧಿಕಾರಿಗಳು ಶಾಖಾ

ಪಟ್ಟಿ ಸಂಖ್ಯೆ ೨
ದಲಿತ ಶಾಖಾ ಮುಖ್ಯಸ್ಥರಿದ್ದ ೮ ಶಾಖೆಗಳ ಅಂಕಿ ಅಂಶಗಳು

ವಿವರಣೆ	ದಲಿತ ಅಧಿಕಾರಿಗಳು ಶಾಖಾ ಮುಖ್ಯಸ್ಥರಾಗುವ ಮೊದಲು		ದಲಿತ ಅಧಿಕಾರಿಗಳು ಶಾಖಾ ಮುಖ್ಯಸ್ಥರಾದ ನಂತರ	
	೨೦೦೦ನೇ ವರ್ಷ	೨೦೦೧ನೇ ವರ್ಷ	೨೦೦೨ನೇ ವರ್ಷ	೨೦೦೩ನೇ ವರ್ಷ
ಠೇವಣಿ ಸಂಗ್ರಹ	೪೭.೯೧	೫೪.೮೯	೭೨.೦೨	೮೯.೯೨
ಸಾಲ ಹಂಚಿಕೆ	೨೩.೫೪	೩೧.೯೮	೪೭.೦೦	೫೬.೨೪
ಒಟ್ಟು ಸಾಲದಲ್ಲಿ ವಸೂಲಿ ಮಾಡಲಾಗದ ಸಾಲ(ಶೇ)	೧೬.೬	೧೨.೮	೭.೭	೬.೭
ಲಾಭ	೦.೫೧	೧.೦೬	೧.೩೭	೧.೬೬

(ಕೋಟಿ ರೂ. ಗಳಲ್ಲಿ) (ಮೂಲ : ಬ್ಯಾಂಕಿನ ಕ್ಷೇತ್ರೀಯ ಕಾರ್ಯಾಲಯ, ಬೆಂಗಳೂರು)



ಪ್ರಬಂಧಕರಾಗಿ ಮಾಡಿರುವ ವ್ಯಾಪಾರ ವಹಿವಾಟನ್ನು ತೋರಿಸುತ್ತದೆ. ಈ ಅಂಕಿ ಅಂಶದಿಂದ ತಿಳಿದು ಬರುವ ಮುಖ್ಯ ಸಂಗತಿಯೆಂದರೆ ಮೀಸಲಾತಿ ಆಧಾರದ ಮೇಲೆ ನೌಕರಿಗೆ ಸೇರುವ ದಲಿತರು ಕಾರ್ಯನಿರ್ವಹಣೆಯಲ್ಲಿ ಸವರ್ಣೀಯರಿಗಿಂತ ಉತ್ತಮರು, ದಕ್ಷರು, ಸಾಧಕರು ಮತ್ತು ಪ್ರಾಮಾಣಿಕರು ಎಂಬ ಸತ್ಯಾಂಶ.

ಇಂದು ದಲಿತರಲ್ಲಿ ಪ್ರತಿಭೆ ಅಥವಾ ದಕ್ಷತೆಯ ಕೊರತೆಯಿಲ್ಲ. ಆದರೆ ಅವರು ಅವಕಾಶಗಳಿಂದ ವಂಚಿತ ರಾಗಿದ್ದಾರೆ. ಅವಕಾಶ ಒದಗಿಸಿಕೊಟ್ಟರೆ ದಲಿತರು ಇತರರಿ ಗಿಂತ ಉತ್ತಮವಾಗಿ ಕಾರ್ಯ ನಿರ್ವಹಿಸಬಲ್ಲರೆಂಬ ಸತ್ಯ ಈ ಕಿರು ಸಂಶೋಧನೆಯಿಂದ ತಿಳಿದು ಬರುತ್ತದೆ. ಹಾಗಾದರೆ ಈ ದಕ್ಷ ಮತ್ತು ಪ್ರಾಮಾಣಿಕ ದಲಿತ ಅಧಿಕಾರಿಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳಾಗಲಿ ಅಥವಾ ಇತರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾಗಲಿ ಏಕೆ ಸದುಪಯೋಗ ಪಡಿಸಿಕೊಳ್ಳುತ್ತಿಲ್ಲವೆಂಬ ಪ್ರಶ್ನೆ ಮೂಡುತ್ತದೆ. ಈ ಅವ್ಯವಸ್ಥೆಯ ಕಾರಣಗಳು ಕೆಳಕಂಡಂತಿವೆ.

೧. ಈ ಸರ್ಕಾರಿ ಸ್ವಾಮ್ಯ ಸಂಸ್ಥೆಗಳಲ್ಲಿ ಸವರ್ಣೀಯ ಮುಖಂಡತ್ವದ ಕಾರ್ಮಿಕರ ಮತ್ತು ಅಧಿಕಾರಿಗಳ ಸಂಘಗಳು ಪ್ರಬಲವಾಗಿವೆ. ಈ ಸಂಘಗಳಲ್ಲಿ ದಲಿತ ನೌಕರರು ಸಹ ಸದಸ್ಯರಾಗಿದ್ದಾರೆ. ಆದರೆ ಉತ್ತಮ ಸವಲತ್ತುಗಳು ಅಥವಾ ಉತ್ತಮ ಹುದ್ದೆಗಳು ಸವರ್ಣೀಯರಿಗೆ ಮಾತ್ರ ಸೇರುವಂತೆ ಈ ಸಂಘಗಳು ಬ್ಯಾಂಕಿನ ಮೇಲಧಿಕಾರಿಗಳಿಗೆ ಒತ್ತಡ ಹೇರುತ್ತವೆ.

೨. ಹೆಚ್ಚುಕಮ್ಮಿ ಶೇ ೧೦೦ ರಷ್ಟು ಮೇಲಧಿಕಾರಿಗಳು ಇಂದಿಗೂ ಸವರ್ಣೀಯರು. ಈ ಸಂಘಗಳಲ್ಲಿಯೇ ಬೆಳೆದು ಬಂದ ಈ ಅಧಿಕಾರಿಗಳು ನಮ್ಮ ಕುಲಬಾಂಧವರ ಕಲ್ಯಾಣಕ್ಕೆ ಆದ್ಯತೆ ನೀಡುತ್ತಾರೆ ಹೊರತು ಸಂಸ್ಥೆಯ ಪ್ರಗತಿಗಾಗಿಯಲ್ಲ



ಅಮೇರಿಕ ದೇಶದಲ್ಲಿ ಕಳೆದ ನೂರು ವರ್ಷಗಳಿಂದ 'ಸಮಾನ ಉದ್ಯೋಗ ಅವಕಾಶ' ಎಂಬ ನೀತಿ ಜಾರಿಯಲ್ಲಿದೆ. ಸರ್ಕಾರಿಯಾಗಲಿ ಅಥವಾ ಖಾಸಗಿಯಾಗಲಿ, ೧೫ ಕ್ಕಿಂತ ಹೆಚ್ಚು ಮಂದಿ ನೌಕರರನ್ನಿಡುವ ಎಲ್ಲಾ ಸಂಸ್ಥೆಗಳು ಈ ನೀತಿಯಡಿಯಲ್ಲಿ ಬರುತ್ತವೆ. ಈ ನಿಯಮಗಳನ್ನು ಉಲ್ಲಂಘಿಸಿದವರಿಗೆ ಜೈಲು ಶಿಕ್ಷೆಯ ಜೊತೆಗೆ ಲಕ್ಷಾಂತರ ಡಾಲರ್‌ನ ದಂಡ ತೆರಬೇಕಾಗುತ್ತದೆ. 'ಸಮಾನ ಅವಕಾಶ ನೀತಿ'ಯನ್ನು ಮೀಸಲಾತಿ ನೀತಿ ಎಂದು ಹೇಳಲಾಗ ದಿದ್ದರೂ ಸಹ ಭಾರತದ ಮೀಸಲಾತಿಯಿಂದಾಗುವ ಅನುಕೂಲಗಳ ೧೦೦ ಪಟ್ಟು ಹೆಚ್ಚು ಅನುಕೂಲಗಳು ಅಮೇರಿಕಾದ ನೀತಿಯಿಂದಾಗುತ್ತದೆ. ತಪ್ಪಿತಸ್ತರಿಗೆ ಶಿಕ್ಷೆ ಮತ್ತು ದಂಡ ವಿಧಿಸುವುದರಿಂದ ನೀತಿ ನಿಯಮಗಳನ್ನು ಉಲ್ಲಂಘಿಸುವ ಪ್ರಯತ್ನ ಯಾರು ಮಾಡುವುದಿಲ್ಲ. ಮೀಸಲಾತಿಯನ್ನು ವಿರೋಧಿಸುವ ಭಾರತದ ಇನ್‌ಫೋಸಿಸ್ ಮತ್ತು ವಿಪ್ರೊಗಳು ಸಹ ಅಮೇರಿಕದ ನೀತಿಯನ್ನು ಉಲ್ಲಂಘಿಸುವ ಪ್ರಯತ್ನ ತಂತಮ್ಮ ಅಮೇರಿಕ ಕಛೇರಿಗಳಲ್ಲಿ ಮಾಡಿಲ್ಲ. ಸತ್ಯಾಂಶ ಹೀಗಿರುವಾಗ ಭಾರತದ ಖಾಸಗಿ ಕ್ಷೇತ್ರದಲ್ಲಿಯಷ್ಟೇ ಈ ನಯವಂಚಕತನ ಯಾಕೆ ?

ದಲಿತ ವರ್ಗದ ನೌಕರರ ವೃದ್ಧಿ ಅವರ ಕೆಲಸವೇ ಅಲ್ಲವೆಂಬಂತೆ ವರ್ತಿಸುತ್ತಾರೆ.

೩. ಮೀಸಲಾತಿಗೆ ಸಂಬಂಧಪಟ್ಟ ಸರ್ಕಾರಿ ಆದೇಶಗಳು ಕೇವಲ ಕೆಳ ಸ್ಥರದ ಹುದ್ದೆಗಳಿಗೆ ಮಾತ್ರ ಅನ್ವಯಿಸುತ್ತದೆ. ಹಾಗಾಗಿ ಮೇಲ್ ಸ್ತರದ ಹುದ್ದೆಗಳು ಇಂದಿಗೂ ಸವರ್ಣೀಯರ ಏಕಸ್ವಾಮ್ಯವಾಗಿದೆ.

ಅಮೇರಿಕ ದೇಶದಲ್ಲಿ ಕಳೆದ ನೂರು ವರ್ಷಗಳಿಂದ 'ಸಮಾನ ಉದ್ಯೋಗ ಅವಕಾಶ' ಎಂಬ ನೀತಿ ಜಾರಿಯಲ್ಲಿದೆ. ಸರ್ಕಾರಿಯಾಗಲಿ ಅಥವಾ ಖಾಸಗಿಯಾಗಲಿ, ೧೫ ಕ್ಕಿಂತ ಹೆಚ್ಚು ಮಂದಿ ನೌಕರರನ್ನಿಡುವ ಎಲ್ಲಾ ಸಂಸ್ಥೆಗಳು ಈ ನೀತಿಯಡಿಯಲ್ಲಿ ಬರುತ್ತವೆ. ಈ ನೀತಿಯ ಪ್ರಕಾರ ಧರ್ಮ, ವಂಶ, ಭಾಷೆ, ಲಿಂಗ, ರಾಷ್ಟ್ರೀಯತೆ, ವರ್ಣ, ವಯಸ್ಸು ಇವೇ ಮೊದಲಾದ ಅಂಶಗಳ ಆಧಾರದ ಮೇಲೆ ಯಾವುದೇ ವ್ಯಕ್ತಿಗೆ ಉದ್ಯೋಗವಕಾಶಗಳಿಂದ ದೂರ ಇಡುವಂತಿಲ್ಲ. ಎಲ್ಲರಿಗೂ ಸಮಾನ ಅವಕಾಶ ನೀಡುವಂತಹ ಆಯ್ಕೆ ನೀತಿಯನ್ನು ರೂಪಿಸಿ ಜಾರಿಗೆ ತರುವುದು ಮಾಲಿಕನ ಆದ್ಯ ಕರ್ತವ್ಯ. ಈ ನಿಯಮಗಳನ್ನು ಉಲ್ಲಂಘಿಸಿದವರಿಗೆ ಜೈಲು ಶಿಕ್ಷೆಯ ಜೊತೆಗೆ ಲಕ್ಷಾಂತರ ಡಾಲರ್‌ನ ದಂಡ ತೆರಬೇಕಾಗುತ್ತದೆ. 'ಸಮಾನ ಅವಕಾಶ ನೀತಿ'ಯನ್ನು ಮೀಸಲಾತಿ ನೀತಿ ಎಂದು ಹೇಳಲಾಗದಿದ್ದರೂ ಸಹ ಭಾರತದ ಮೀಸಲಾತಿಯಿಂದಾಗುವ ಅನುಕೂಲಗಳ ೧೦೦ ಪಟ್ಟು ಹೆಚ್ಚು ಅನುಕೂಲಗಳು ಅಮೇರಿಕಾದ ನೀತಿಯಿಂದಾಗುತ್ತದೆ. ತಪ್ಪಿತಸ್ತರಿಗೆ ಶಿಕ್ಷೆ ಮತ್ತು ದಂಡ ವಿಧಿಸುವುದರಿಂದ ನೀತಿ ನಿಯಮಗಳನ್ನು ಉಲ್ಲಂಘಿಸುವ ಪ್ರಯತ್ನ ಯಾರು ಮಾಡುವುದಿಲ್ಲ. ಮೀಸಲಾತಿಯನ್ನು ವಿರೋಧಿಸುವ ಭಾರತದ ಇನ್‌ಫೋಸಿಸ್ ಮತ್ತು ವಿಪ್ರೊಗಳು ಸಹ ಅಮೇರಿಕದ ನೀತಿಯನ್ನು ಉಲ್ಲಂಘಿಸುವ ಪ್ರಯತ್ನ ತಂತಮ್ಮ ಅಮೇರಿಕ ಕಛೇರಿಗಳಲ್ಲಿ ಮಾಡಿಲ್ಲ. ಸತ್ಯಾಂಶ ಹೀಗಿರುವಾಗ ಭಾರತದ ಖಾಸಗಿ ಕ್ಷೇತ್ರದಲ್ಲಿಯಷ್ಟೇ ಈ ನಯವಂಚಕತನ ಯಾಕೆ. ಕಾರಣಗಳು ಹಲವಾರು. ಆದರೆ ಮುಖ್ಯವಾದುವುಗಳೆಂದರೆ,

ಭಾರತೀಯ ಖಾಸಗಿ ಕ್ಷೇತ್ರ ಸವರ್ಣೀಯರ ಕುಟುಂಬಗಳ ಹಿಡಿತದಲ್ಲಿದೆ. ರಿಲಯನ್ಸ್ (ಅಂಬಾನಿ) ಬಿರ್ಲಾ (ಬಿರ್ಲಾ) ಟಾಟಾ (ಟಾಟಾ) ಹೀಗೆ ಎಲ್ಲಾ ಖಾಸಗಿ ಉದ್ಯಮಗಳು ಈ ಸವರ್ಣೀಯರ ಕೈಯಲ್ಲಿದೆ. ದಕ್ಷತೆ ಮತ್ತು ಪ್ರತಿಭೆ ಇರಲಿ ಅಥವಾ ಇಲ್ಲದಿರಲಿ, ತಂದೆ ಸತ್ತ ಮೇಲೆ ಮಗ ಅಧಿಪತಿಯಾಗುವುದು ಈ ಉದ್ಯಮಿ ಕುಟುಂಬಗಳ ಲಕ್ಷಣ. ಹೀಗಿರುವಾಗ ದಲಿತರ ದಕ್ಷತೆಯ ಬಗ್ಗೆ ಮಾತಾಡುವ ಅಧಿಕಾರ ಇವರಿಗೆಲ್ಲಿದೆ.

ಭಾರತೀಯರಲ್ಲಿ ಶ್ರೀಮಂತಿಕೆ ಹೆಚ್ಚಾದಂತೆಲ್ಲಾ ಧಾರ್ಮಿಕ ನಂಬಿಕೆ ಹೆಚ್ಚಾಗತೊಡಗುತ್ತದೆ. ಧರ್ಮವೇ ದಾರಿದೀಪವೆನ್ನುವ ಈ ಉದ್ಯಮಿಗಳು ಮನಸ್ಮೃತಿ ಮತ್ತು ಗೀತಾಸಾರವನ್ನು ಗ್ರಹಿಸಿ ದಲಿತರನ್ನು ಕೀಳಾಗಿ ಕಾಣುವುದರಲ್ಲಿ ಸಂಶಯವಿಲ್ಲ.

ಮೀಸಲಾತಿ ಆಮಿಷ ತೋರಿಸಿ ಅಧಿಕಾರಕ್ಕೆ ಬರುವ ರಾಜಕೀಯ ಪಕ್ಷಗಳು ಚುನಾವಣೆಯ ನಂತರ ದಲಿತರನ್ನು ಮರೆಯುತ್ತವೆ. ಹಾಗೆಯೇ ದಲಿತರಾದ ನಮ್ಮಲ್ಲಿ ಹೋರಾಡಿದ ಒಗ್ಗಟ್ಟು ಸತ್ಯಾಂಶ ಹುಡುಕುವ ಚಾತುರ್ಯ ಅಥವಾ ನ್ಯಾಯ ಬದ್ಧ ಹಕ್ಕುಗಳಿಗಾಗಿ ಚಳವಳಿ ನಡೆಸುವ ಲಕ್ಷಣಗಳು



ಬಹಳಷ್ಟು ಇಲಾಖೆಗಳು ಮತ್ತು ಸಂಸ್ಥೆಗಳು ಪ್ರತಿಭೆ ಮತ್ತು ದಕ್ಷತೆಯನ್ನು ಅಳೆಯಲು ಶಾಲಾ ಕಾಲೇಜುಗಳಲ್ಲಿ ಪಡೆದಿರುವ ಅಂಕಗಳನ್ನು ಆಧಾರವಾಗಿಟ್ಟುಕೊಳ್ಳುತ್ತಿವೆ. ಆದರೆ ಶಾಲಾ ಕಾಲೇಜುಗಳ ಅಂಶಗಳು ಪ್ರತಿಯೊಬ್ಬ ವ್ಯಕ್ತಿಯಲ್ಲಿ ದಕ್ಷತೆ ಮತ್ತು ಪ್ರತಿಭೆಯನ್ನು ಗುರುತಿಸಲು ಸಾಧ್ಯವಿಲ್ಲವೆಂಬುದು ವಿಶ್ವಾದ್ಯಂತ ನಡೆಸಿರುವ ನೂರಾರು ಸಂಶೋಧನೆಗಳಿಂದ ತಿಳಿದುಬಂದಿವೆ. ನಮ್ಮ ದೇಶದಲ್ಲಿ ಹೆಚ್ಚು ಅಂಕಗಳನ್ನು ಗಳಿಸಲು ಪ್ರತ್ಯೇಕ ಕಾರಣಗಳಿವೆ. ಓದು ಬರಹವನ್ನೇ ಮೂಲ ವೃತ್ತಿಯಾ ಗಿಸಿಕೊಂಡಿರುವ ಕೆಲ ಸವರ್ಣೀಯರ ಮಕ್ಕಳಿಗೆ ಓದು ಬರಹ ಚಟುವಟಿಕೆಗಳಲ್ಲಿ ತೊಡಗಲು ಉತ್ತಮ ವಾತಾವರಣ ಸೃಷ್ಟಿಯಾಗಿ ಅವರು ಹೆಚ್ಚು ಅಂಕಗಳನ್ನು ಗಳಿಸುವುದು ಸಹಜ. ಆದರೆ ದುಡಿಮೆಯೇ ದೇವರೆನ್ನುವ ಶೂದ್ರರ ಮಕ್ಕಳು ದಕ್ಷತೆ ಮತ್ತು ಪ್ರತಿಭೆಗಳಲ್ಲಿ ಸಹಜವಾಗಿಯೇ ಉತ್ತಮರಿದ್ದರೂ ಸಹ ಅವರೆಲ್ಲರಿಗೂ ಪ್ರಾರಂಭದಿಂದ ಓದು ಬರಹದಲ್ಲಿ ಮಹಾನ್ ವ್ಯಕ್ತಿಗಳಾಗಲು ಸಾಧ್ಯವಾಗುವುದಿಲ್ಲ.

ಸಾಕಷ್ಟು ಮಟ್ಟಿಗೆ ಕಂಡುಬರುತ್ತಿಲ್ಲ. ಹೀಗಾಗಿ ನಾವುಗಳು ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣದಿಂದ ಭಾರತಕ್ಕಾಗಿರುವ ಮಹತ್ತರವಾದ ಪ್ರಗತಿಯ ಫಲಗಳಿಂದ ಸಂಪೂರ್ಣವಾಗಿ ವಂಚಿತರಾಗಿದ್ದೇವೆ. ಇನ್‌ಫೋಸಿಸ್, ಆರೆಕಲ್, ಮೈಂಡ್ ಟ್ರೀ ಇತ್ಯಾದಿ ಸಂಸ್ಥೆಗಳಲ್ಲಿ ನೌಕರಿ ಪಡೆದಿರುವ ದಲಿತರು ಇತರರಷ್ಟೇ ದಕ್ಷರು. ಆದರೆ ತಾವು ದಲಿತರೆಂಬ ಸತ್ಯವೇನಾದರೂ ಸಹೋದ್ಯೋಗಿಗಳಿಗೆ ತಿಳಿದರೆ ಕ್ಷಣಮಾತ್ರದಲ್ಲಿ ತಮ್ಮ ದಕ್ಷತೆ ಕಳೆದುಕೊಂಡು ಅಸಮರ್ಥರೆನಿಸಿ ಕೆಲಸವನ್ನೇ ಕಳೆದುಕೊಳ್ಳುತ್ತಾರೆ.

ಪ್ರತಿಭೆ, ದಕ್ಷತೆ ಮತ್ತು ಪ್ರಾಮಾಣಿಕತೆಯ ಮಾನದಂಡಗಳು

ಬಹಳಷ್ಟು ಇಲಾಖೆಗಳು ಮತ್ತು ಸಂಸ್ಥೆಗಳು ಪ್ರತಿಭೆ ಮತ್ತು ದಕ್ಷತೆಯನ್ನು ಅಳೆಯಲು ಶಾಲಾ ಕಾಲೇಜುಗಳಲ್ಲಿ ಪಡೆದಿರುವ ಅಂಕಗಳನ್ನು ಆಧಾರವಾಗಿಟ್ಟುಕೊಳ್ಳುತ್ತಿವೆ. ಆದರೆ ಶಾಲಾ ಕಾಲೇಜುಗಳ ಅಂಶಗಳು ಪ್ರತಿಯೊಬ್ಬ ವ್ಯಕ್ತಿಯಲ್ಲಿ ದಕ್ಷತೆ ಮತ್ತು ಪ್ರತಿಭೆಯನ್ನು ಗುರುತಿಸಲು ಸಾಧ್ಯವಿಲ್ಲವೆಂಬುದು ವಿಶ್ವಾದ್ಯಂತ ನಡೆಸಿರುವ ನೂರಾರು ಸಂಶೋಧನೆಗಳಿಂದ ತಿಳಿದುಬಂದಿವೆ. ಭಾರತದಲ್ಲಿರುವ ಪ್ರಮುಖ ಸಂಸ್ಥೆಗಳಾದ ಐಐಟಿಗಳಾಗಲಿ, ಐಐಎಂಗಳಾಗಲಿ ಶಾಲಾ ಕಾಲೇಜುಗಳಲ್ಲಿ ಪಡೆದ ಅಂಕಗಳಿಗೆ ಹೆಚ್ಚು ಮನ್ನಣೆ ನೀಡುತ್ತವೆ. ನಮ್ಮ ದೇಶದಲ್ಲಿ ಹೆಚ್ಚು ಅಂಕಗಳನ್ನು ಗಳಿಸಲು ಪ್ರತ್ಯೇಕ ಕಾರಣಗಳಿವೆ. ಓದು ಬರಹವನ್ನೇ ಮೂಲ ವೃತ್ತಿಯಾಗಿಸಿಕೊಂಡಿರುವ ಕೆಲ ಸವರ್ಣೀಯರ ಮಕ್ಕಳಿಗೆ ಓದು ಬರಹ ಚಟುವಟಿಕೆಗಳಲ್ಲಿ ತೊಡಗಲು ಉತ್ತಮ ವಾತಾವರಣ ಸೃಷ್ಟಿಯಾಗಿ ಅವರು ಹೆಚ್ಚು ಅಂಕಗಳನ್ನು ಗಳಿಸುವುದು ಸಹಜ.

ಆದರೆ ದುಡಿಮೆಯೇ ದೇವರೆನ್ನುವ ಶೂದ್ರರ ಮಕ್ಕಳು ದಕ್ಷತೆ ಮತ್ತು ಪ್ರತಿಭೆಗಳಲ್ಲಿ ಸಹಜವಾಗಿಯೇ ಉತ್ತಮರಿದ್ದರೂ ಸಹ ಅವರೆಲ್ಲರಿಗೂ ಪ್ರಾರಂಭದಿಂದ ಓದು ಬರಹದಲ್ಲಿ ಮಹಾನ್ ವ್ಯಕ್ತಿಗಳಾಗಲು ಸಾಧ್ಯವಾಗುವುದಿಲ್ಲ. ಹೀಗಾಗಿ ಎಲ್ಲಿಯವರೆವಿಗೆ ಶಾಲಾಕಾಲೇಜುಗಳ ಅಂಕಪಟ್ಟಿಗಳು ದಕ್ಷತೆ ಮತ್ತು ಪ್ರತಿಭೆಯನ್ನು ನಿರ್ಧರಿಸುವ ಮಾನದಂಡಗಳಾಗುತ್ತವೆಯೋ ಅಲ್ಲಿಯವರೆವಿಗೆ ದಲಿತರು ದಕ್ಷರೆನಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಕೆಲವೊಮ್ಮೆ ಉತ್ತಮ ಅಂಕಗಳನ್ನು ಪಡೆದಿರುವ ದಲಿತ ಜನರುಂಟು. ಆದರೆ ಅಂತಾರಾಷ್ಟ್ರೀಯ ಗುಣಮಟ್ಟದ

ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ ಸಾಮಾಜಿಕ ಚಳವಳಿಗಳಿಂದ ನಿಲ್ಲಿಸಲಾಗದ ಪ್ರಕ್ರಿಯೆಗಳು ಈ ಪ್ರಕ್ರಿಯೆಯಲ್ಲಿರುವ ಪ್ರಮಾದಗಳನ್ನು ಚರ್ಚಿಸಿ ಕಾಲಹರಣ ಮಾಡುವ ಬದಲು ಭಾರತೀಯರಾದ ನಮ್ಮ ಮುಂದೆ ಒದಗಿ ಬರುತ್ತಿರುವ ಅತ್ಯಮೂಲ್ಯ ಅವಕಾಶಗಳನ್ನು ಬಳಸಿಕೊಂಡು ಪ್ರಗತಿ ಸಾಧಿಸುವುದು ನಮ್ಮ ಗುರಿಯಾಗಬೇಕು.

ಸಂಘ-ಸಂಸ್ಥೆ ಉದ್ಯಮಗಳೊಡನೆ ಸಂಪರ್ಕ ಕಲ್ಪಿಸಿ ನೌಕರಿ ಗಳಿಸಲು ಅವರಲ್ಲಿ ಸೂಕ್ತ ಮಟ್ಟದ ಇಂಗ್ಲಿಷ್ ಅಥವಾ ಬೇರ್ಯಾವುದೇ ಅಂತಾರಾಷ್ಟ್ರೀಯ ಭಾಷೆಯ ಪರಿಜ್ಞಾನವಿಲ್ಲ. ಇಂದಿಗೂ ಬಹಳಷ್ಟು ದಲಿತರು ಮೂಲತಃ ಗ್ರಾಮವಾಸಿಗರು ಮತ್ತು ಬಡವರು. ಆದ್ದರಿಂದ ಎಲ್ಲಿಯವರೆವಿಗೆ ದಲಿತರ ಶಿಕ್ಷಣ ಭಾಷೆ ಇಂಗ್ಲಿಷ್ ಆಗುವುದಿಲ್ಲವೋ ಅಲ್ಲಿಯವರೆವಿಗೆ ಹಿಂದುಳಿದಿರುವಿಕೆ ನಿರುದ್ಯೋಗ ಮತ್ತು ಕೀಳರಿಮೆ ದಲಿತರೊಡನೆ ಜೊತೆಗೂಡಿರುತ್ತದೆ.

ಬದಲಾದ ಪರಿಸ್ಥಿತಿ ಮತ್ತು ಅತ್ಯಮೂಲ್ಯ ಅವಕಾಶಗಳು

ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ ಸಾಮಾಜಿಕ ಚಳವಳಿಗಳಿಂದ ನಿಲ್ಲಿಸಲಾಗದ ಪ್ರಕ್ರಿಯೆಗಳು ಈ ಪ್ರಕ್ರಿಯೆಯಲ್ಲಿರುವ ಪ್ರಮಾದಗಳನ್ನು ಚರ್ಚಿಸಿ ಕಾಲಹರಣ ಮಾಡುವ ಬದಲು ಭಾರತೀಯರಾದ ನಮ್ಮ ಮುಂದೆ ಒದಗಿ ಬರುತ್ತಿರುವ ಅತ್ಯಮೂಲ್ಯ ಅವಕಾಶಗಳನ್ನು ಬಳಸಿಕೊಂಡು ಪ್ರಗತಿ ಸಾಧಿಸುವುದು ನಮ್ಮ ಗುರಿಯಾಗಬೇಕು.

ಸರ್ಕಾರಿ ಸ್ವಾಮ್ಯದ ವ್ಯಾಮೋಹ ನಮ್ಮಲ್ಲಿ ಕಡಿಮೆಯಾಗಿ ಖಾಸಗಿ ಕ್ಷೇತ್ರದಲ್ಲಿ ಯಶಸ್ವಿಯಾಗಲು ಬೇಕಾದ ಕೌಶಲ್ಯಗಳ ಬಗ್ಗೆ ಅರಿವು ಮತ್ತು ಕಾರ್ಯಶೀಲತೆ ಹೆಚ್ಚಬೇಕು.

ವ್ಯವಸಾಯ ವೃತ್ತಿಯಲ್ಲಿ ತಂದೆ ಕನ್ನಡ ಭಾಷೆಯೇ ತಾಯಿ ಎಂಬ ಭಾವನೆಗಳಿಂದ ಹೊರಬಂದು ನ್ಯಾಯಬದ್ಧವಾಗಿ ಶ್ರೀಮಂತರಾಗಲು ತೆರೆಯಲಾಗಿರುವ ಹೊಸ ಮಾರ್ಗಗಳನ್ನು ಹುಡುಕಬೇಕು.

ಆರ್ಥಿಕವಾಗಿ ಅನುಕೂಲರಾಗಿರುವ ದಲಿತರು ತಮ್ಮ ಮಕ್ಕಳನ್ನೂ ಸಹ ಪರರ ಸೇವೆಗಿಳಿಸುವ ಬದಲು ಸ್ವ ಉದ್ಯಮಗಳನ್ನು ಪ್ರಾರಂಭಿಸಲು ಪ್ರಯತ್ನಿಸಬೇಕು.

ಸತ್ಯ ನಾರಾಯಣ ಪೂಜೆ, ಹೋಮ ಯಜ್ಞಗಳಂತಹ ಆಡಂಬರದ ಖರ್ಚು ಕಡಿಮೆ ಮಾಡಿ ಸಮುದಾಯ ಸೇವೆಗೆ ಒತ್ತು ಕೊಡಬೇಕು. ಪ್ರತಿಯೊಂದು ದಲಿತ ಸಮಸ್ಯೆಗೂ ಸರ್ಕಾರದಿಂದಲೇ ಪರಿಹಾರ ಕಾಣುವ ಪ್ರಯತ್ನಗಳು ಕಡಿಮೆಯಾಗಿ ಸ್ವಸಹಾಯ ಮತ್ತು ಪರಸ್ಪರ ಸಹಾಯ ಹೆಚ್ಚಾಗಬೇಕು.

ಸವರ್ಣೀಯರಲ್ಲಿ ಉತ್ತಮರನ್ನು ಗುರುತಿಸಿಕೊಂಡು ಅವರ ಸಹಾಯ/ಮಾರ್ಗದರ್ಶನಗಳನ್ನು ನಮ್ಮ ಏಳಿಗೆಗೆ ಸದುಪಯೋಗಪಡಿಸಿಕೊಳ್ಳಬೇಕು.

ನಾವು ಅಸಮರ್ಥರು ಅಥವಾ ಅದಕ್ಷರೆಂಬ ಕೀಳರಿಮೆಯನ್ನು ಹೊಡೆದೋಡಿಸಿ ಗುಲಾಮಗಿರಿಯಲ್ಲಿರುವ ನಮ್ಮ ಪ್ರತಿಭೆಗೆ ವೃದ್ಧಿಸುವ ಸ್ವಾತಂತ್ರ್ಯ ಕೊಡಬೇಕು.

ದುಶ್ಚಟಗಳು ಕಡಿಮೆಯಾಗಲಿ, ಆರೋಗ್ಯ ಮತ್ತು ಆಯಸ್ಸು ಹೆಚ್ಚಲಿ, ದಲಿತ ಮಕ್ಕಳೆಲ್ಲಾ ವಿಶ್ವಾದ್ಯಂತ ಕೊಂಡಾಡುವ ಮಹಾನ್ ವ್ಯಕ್ತಿಗಳಾಗಲಿ. ಬಾಬಾ ಸಾಹೇಬರ ಕನಸು ನನಸಾಗಲಿ. ❑

ರಂಗಭೂಮಿ ಹಿನ್ನೆಲೆಯಲ್ಲಿ ತಳ ಸಮುದಾಯಗಳ ಸಂವೇದನೆ

○ ಇಕ್ಬಾಲ್ ಅಹಮದ್ ಅವರ ಕೆಲವು ಟಿಪ್ಪಣಿಗಳು

ರಂಗಭೂಮಿಯಲ್ಲಿ ಜಾತಿ ವರ್ಗ ಭೇದ ಇಲ್ಲ ಹೆಣ್ಣು ಗಂಡು ಅನ್ನುವ ಭೇದ ಭಾವ ಇಲ್ಲ ರಂಗಭೂಮಿಯವರೇ ಒಂದು ಬೇರೆ ಜಾತಿ. ಇಲ್ಲಿ ಯಾರು ಬೇಕಾದರೂ ಬರಬಹುದು. ಯಾವ ಪಾತ್ರ ಬೇಕಾದರೂ ಮಾಡಬಹುದು. ಸಾಮಾನ್ಯವಾಗಿ ಜನ ಇಲ್ಲಿಗೆ ಬರುವುದೇ ಭಿನ್ನ ಬದುಕನ್ನು ಬದುಕಲು. ಮೇಲು ವರ್ಗದವರು ಕೆಳವರ್ಗದವರ, ಕೆಳವರ್ಗದವರು ಮೇಲುವರ್ಗದವರ ಪಾತ್ರ ಮಾಡಲು ಬಯಸುತ್ತಾರೆ. ಅವರ ಬದುಕಿನ ವೃತ್ತಿಗೆ ವಿರುದ್ಧವಾದ ಪಾತ್ರಗಳನ್ನು ಮಾಡಲು ಬಯಸುತ್ತಾರೆ. ಆದರೆ ಸಮಾಜದಲ್ಲಿ ಜಾತಿಪದ್ಧತಿ ಇದೆ, ಅದನ್ನು ರಂಗಭೂಮಿಯಲ್ಲಿ ಉಳಿಸಲು ಯತ್ನಿಸಿದವರು ಅವಮಾನಿತರಾಗುತ್ತಾರೆ. ಕಲೆ ಇರುವುದೇ ಜಾತಿಪದ್ಧತಿಯನ್ನು ವಿರೋಧಿಸುವುದಕ್ಕೆ. ಎಲ್ಲಾ ಕಲೆಗಳು progressive ideology ಹೊಂದೇ ಇರುತ್ತವೆ. ಕಲೆಗೆ ಜಾತಿ, ಧರ್ಮಗಳೇ ಮೊದಲ ವೈರಿ. ರಂಗಭೂಮಿಯಲ್ಲಿ ನಟರ ಅಭಿನಯವೇ ಮುಖ್ಯವಾದದ್ದು.

ಅಭಿನಯ ರಂಗಭೂಮಿಯ ಮೂಲ ಬಂಡವಾಳ

ಅಭಿನಯ ಒಂದು ಸತ್ಯದ ಅನ್ವೇಷಣೆ, ಹಿಂದೆ ನಡೆದುದ್ದರ ಮುಂದೆ ನಡೆಯಬಹುದಾದ ವರ್ತನೆಗಳನ್ನು present action ನಲ್ಲಿ (ವರ್ತಮಾನದ ಕ್ರಿಯೆಯಾಗಿಸುವುದೇ) ಹಿಡಿದಿಡುವುದೇ ಅಭಿನಯ. ಅಭಿನಯಿಸುವಾಗ ಸತ್ಯದ ದರ್ಶನ ನಟನಲ್ಲಿ ನಡೆಯುತ್ತಿದ್ದಲ್ಲಿ ಮಾತ್ರ ಪ್ರೇಕ್ಷಕ ಮಂತ್ರಮುಗ್ಧನಾಗಿರಲು ಸಾಧ್ಯ. ಇಲ್ಲವಾದರೆ ಅವನು ಬಾಯಿ ತೆರೆದು ಆಕಳಿಸಲು ಪ್ರಾರಂಭಿಸುತ್ತಾನೆ. ಅಭಿನಯಿಸುವುದು ಮತ್ತು ಪ್ರೇಕ್ಷಕನಾಗಿ ನೋಡುವುದು ಎರಡೂ ಜೀವಂತ ಕ್ರಿಯೆಗಳಾಗಿದ್ದರಿಂದ ಇಬ್ಬರಲ್ಲಿಯೂ ಸತ್ಯದ ಘಟನೆಗಳ ಸರಮಾಲೆಗಳೇ ತಾಕಲಾಡಲು ಪ್ರಾರಂಭಿಸಿರುತ್ತವೆ.

ಪಾತ್ರಗಳಲ್ಲಿ ಉಚ್ಚ ನೀಚ ಎಂದು ವಿಭಾಗಿಸುವ ಕಲ್ಪನೆ ತಪ್ಪು. ಉದಾಹರಣೆಗೆ ಕೀಚಕ ಪ್ರಸಂಗದಲ್ಲಿ ಕೀಚಕನೇ ಹೀರೋ. ಭಸ್ಮಾಸುರ ಪ್ರಸಂಗದಲ್ಲಿ ಭಸ್ಮಾಸುರನೇ ಹೀರೋ. ಹೀಗಾಗಿ ಪ್ರತಿಯೊಂದು ಪಾತ್ರಕ್ಕೂ ನ್ಯಾಯ ದೊರಕಿಸಿಕೊಡಲು ಪಾತ್ರಧಾರಿ ಪ್ರಯತ್ನಿಸಬೇಕಾಗುತ್ತದೆ.

ರಂಗಭೂಮಿಯಲ್ಲಿ ಅಭಿನಯಿಸುವವರೆಲ್ಲರೂ ಒಂದು ರೀತಿಯಲ್ಲಿ ಶೂದ್ರರೇ. ಇದರಿಂದಾಗಿ ಅವರಿಗೆ ಸಾಮಾಜಿಕ ಗೌರವವೂ ಕಡಿಮೆ. ಆದರೆ ಇತ್ತೀಚೆಗಷ್ಟೇ ಸ್ವಲ್ಪ ಸಾಮಾಜಿಕ ಮನ್ನಣೆ ದೊರೆಯುತ್ತಿದೆ. ಈ ಬೆಳವಣಿಗೆಯನ್ನು ಮೇಲುವರ್ಗದವರು ಮಾಧ್ಯಮವನ್ನು ತಮ್ಮದಾಗಿಸಿಕೊಳ್ಳುವ ಪ್ರಯತ್ನ ನಡೆಸುತ್ತಿದ್ದಾರೆ.

ರಂಗಭೂಮಿಗಿರುವ ಸಾಮಾಜಿಕ ಮನ್ನಣೆ ಮತ್ತು ಗೌರವ

ರಂಗಭೂಮಿಗೆ ಇನ್ನೂ ಪೂರ್ಣ ಸಾಮಾಜಿಕ ಮನ್ನಣೆ ಸಿಕ್ಕಿಲ್ಲ, ನಾಟಕದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ 'ಅದ್ಯಾಕ್ ನಾಟಕ ಆಡಿ ಹಾಳಾಗ್ತೀಯ' ಅಂತ ಜನ ಅಂತಾರೆ. ಅದೇ ಸಿನಿಮಾದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ 'ನನಗೊಂದು ಪಾತ್ರ ಕೊಡಿಸು' ಅಂತ ಹಿಂದೆ ಬೀಳುತ್ತಾರೆ. ರಂಗಭೂಮಿಗೆ ಸಾಮಾಜಿಕ ಮನ್ನಣೆ, ಗೌರವ ಹೆಚ್ಚು ದೊರಕಬೇಕಾಗಿದೆ. ಶಾಲಾ ಕಾಲೇಜುಗಳಲ್ಲಿ ರಂಗಭೂಮಿ compulsory ಮಾಡಬೇಕಾಗಿದೆ.

ಇಂದಿನ ಶಿಕ್ಷಣ ಸಿಮೆಂಟ್ ಗೋಡೆಗಳ ಮಧ್ಯೆ ಕಂಪ್ಯೂಟರ್ ಇಂಜಿನಿಯರ್, ಡಾಕ್ಟರ್‌ಗಳನ್ನ ತಯಾರಿಸುವ ಕಾರ್ಖಾನೆಯಾಗಿದೆ. ಅವರೆಲ್ಲಾ ಅಮೇರಿಕಾಕ್ಕೆ ರಫ್ತಾಗುತ್ತಿದ್ದಾರೆ. ಪ್ರಸುತ್ತ ಶಿಕ್ಷಣ ವ್ಯವಸ್ಥೆಯೇ ಇಂದಿನ ಭ್ರಷ್ಟ ಸಮಾಜಕ್ಕೆ ಕಾರಣವೆನ್ನಬಹುದು. ಆದಕಾರಣ ನಮ್ಮ ದೇಶದ ಸಂಸ್ಕೃತಿಯೊಟ್ಟಿಗೆ ಈ ಎಲ್ಲಾ ವಿದ್ಯೆಯನ್ನು ಪಡೆದರೆ ದೇಶದ ಏಳಿಗೆ ಸಾಧ್ಯವಾಗುತ್ತದೆ. ಹೀಗೆ ಸುಲಭವಾಗಿ ದೇಶದ ಸಂಸ್ಕೃತಿಯನ್ನು ಒಳಗೊಂಡಿರುವಂತಹ ಕಲೆಯೆಂದರೆ ರಂಗಭೂಮಿಯೇ ಎನ್ನಬಹುದು. ಚಿತ್ರಕಲೆ, ಸಂಗೀತ, ನೃತ್ಯ, ಸಾಹಿತ್ಯ ಎಲ್ಲಾ ಕಲೆಗಳನ್ನು ಒಳಗೊಂಡು ನಾಟಕ ಕಲೆಯಾಗಿದೆ.

ಟಿ.ವಿ. ಸಿನೆಮಾಗಳ ಅಭಿನಯ

ಸಾಮಾನ್ಯ ಪ್ರೇಕ್ಷಕರು ಟಿ.ವಿ. ಸಿನೆಮಾಗಳ ಅಭಿನಯವೇ ಶ್ರೇಷ್ಠವಾದುದು ಎಂಬ ಭ್ರಮೆಯಲ್ಲಿ ಮುಳುಗಿದ್ದಾರೆ. ಈ ಮಾಧ್ಯಮಗಳಲ್ಲಿ ಹಣ ಮತ್ತು ಹೆಸರು ಎರಡು ಸಿಗುತ್ತದೆ ಎಂದಾಕ್ಷಣ ಮೇಲು ವರ್ಗದವರು ಮೊದಲು ಸೇರಿಕೊಂಡು ತಮ್ಮ ಜಾಣತನ ತೋರಿಸಲು ಪ್ರಾರಂಭಿಸಿದ್ದಾರೆ. ಓದಿನ ಜ್ಞಾನದಿಂದ ಅಭಿನಯಿಸುವುದು ಸಾಧ್ಯವಿಲ್ಲ. ಆದರೆ ಇಂದು ಈ ಮಾಧ್ಯಮಗಳಲ್ಲಿ ಅವರೇ ಹೆಚ್ಚು ತುಂಬಿಬಿಟ್ಟಿದ್ದಾರೆ. ನಟರು ಮಾಧ್ಯಮದ ಸಲಕರಣೆಗಳಾಗಿ ಬಿಟ್ಟಿದ್ದಾರೆ. ನಿಜವಾದ ಅನುಭವದಿಂದ ಬರಬೇಕಾದ ನಟನೆ ಈ ಮಾಧ್ಯಮದವರಿಗೆ ಬೇಕಾಗಿಲ್ಲ, ಕೆಳವರ್ಗದ ಅನುಭವದಿಂದ ಬಂದ ಅಭಿನಯ ಈ ಮಾಧ್ಯಮದವರಿಗೆ ಬೇಕಾಗಿಲ್ಲ. ಅವರ ತಂತ್ರಗಳಿಗೆ ಸುಲಭವಾಗಿ ದಕ್ಕುವ ಜಾಣತನದ ಅಭಿನಯ ಬೇಕಾಗಿದೆ.

ಶಾಸ್ತ್ರೀಯ ನೃತ್ಯಗಳು ಏಕೆ ಹಣವಂತರ ಕಲೆಯಾಗಿದೆ ?

ಈ ನೃತ್ಯಗಳು ಮೊದಲು ಜಾನಪದ ನೃತ್ಯಗಳೇ ಆಗಿದ್ದವು. ಜಾನಪದ ಕಲೆಗಳಲ್ಲಿ ಅವರ ಬದುಕಿನ ಅನುಭವಗಳು ನೇರವಾಗಿ ಬಿಂಬಿಸುತ್ತವೆ. ವೇದ, ಗ್ರಂಥಗಳನ್ನು ಓದಿ ಮೆದುಳು ಭಾರವಾದವರಿಗೆ ನೇರ ಬದುಕಿನ ಅನುಭವಗಳನ್ನು ಪ್ರೇಕ್ಷಕರಲ್ಲಿ ತಲುಪಿಸಲು ಸಾಧ್ಯವಿಲ್ಲ. ಮೇಲುವರ್ಗ ಅನುಭವಗಳಿಲ್ಲದ - ಬುದ್ಧಿ ಪೂರ್ವಕ ಬದುಕಿಂದ ಬದುಕುವ ಜನ ಅವರಿಂದ ಅಭಿನಯ ಸಾಧ್ಯವಿಲ್ಲ. ದೇವಸ್ಥಾನಗಳಲ್ಲಿ ನೃತ್ಯಕ್ಕಾಗಿ ದೇವರ ಆರಾಧನೆಗಾಗಿ ಈ ಹೆಣ್ಣು ಮಕ್ಕಳನ್ನು ಕುಣಿಸುತ್ತಿದ್ದರು. ಮೇಲುವರ್ಗದ ದೇವಸ್ಥಾನದ ಪುರುಷರು ದೇವರ ಹೆಸರಿನಲ್ಲಿ ಅವರನ್ನು ಭೋಗಿಸುತ್ತಿದ್ದರು. ಹೀಗೆ ಆರಾಧನೆಗೆ ನರ್ತಿಸುವಾಗ ಜಾನಪದ ನೃತ್ಯದಿಂದ ಬಿಡಿಸಿ ಅವುಗಳಿಗೆ ಹಸ್ತಮುದ್ರಿಕೆಗಳನ್ನು ಅಳವಡಿಸಿದರು. ಮುಂದೆ ಈ ತಂತ್ರಗಾರಿಕೆಯ ಅಭಿನಯ ಮೇಲುವರ್ಗದ ಹೆಣ್ಣು ಮಕ್ಕಳಿಗೆ ಹೇಳಿಕೊಡಲು ಸುಲಭವಾಯಿತು. ಅದೊಂದು ಬೂರ್ಜ್ವಾ ಕಲೆಯಾಗಿ ಮುಂದುವರೆಯಿತು. ತಂತ್ರಗಾರಿಕೆಯ ನೃತ್ಯ ಹೆಚ್ಚು ಪ್ರಚಾರವಾಯಿತು. ಮೇಲುವರ್ಗದ ಹಣವಂತರ ಕಲೆಯಾಗಿ ಮಾರ್ಪಟ್ಟಿತು. ಉದಾ : ಭರತನಾಟ್ಯ, ಕೂಚುಪುಡಿ, ಕಥಕ್ಕಳಿ, ಕಥಕ್ ಇತ್ಯಾದಿ.



ಜಾಗತೀಕರಣದ ಸಂದರ್ಭದಲ್ಲಿ ಕಲೆಯ ಸ್ಥಾನ

ಯಾವುದೇ ಜ್ಞಾನ ಹೊಸದಾಗಿ ಬರುತ್ತಿದ್ದಲ್ಲಿ ಅದನ್ನು ಸ್ವಾಗತಿಸಬೇಕಾಗುತ್ತದೆ. ಮತ್ತು ಅದನ್ನು ನಮ್ಮ ಮೂಲ ಜ್ಞಾನದೊಟ್ಟಿಗೆ ಸೇರಿಸಿಕೊಂಡು ಹೇಗೆ ನಮ್ಮದನ್ನು ಬೆಳೆಸಬೇಕಾಗಿದೆ ಎಂಬುದನ್ನು ನೋಡಬೇಕಾಗಿದೆ. ಈ ದೇಶದ ಬಹು ಸಂಖ್ಯಾತರು ಕೆಳವರ್ಗದವರೇ ಆಗಿದ್ದು ಅವರ ಮೂಲ ಸ್ವಾತಂತ್ರ್ಯ ಸಾಂಸ್ಕೃತಿಕವಲಯದಲ್ಲಿ ಇದ್ದುದರಿಂದ ಅವರ ಏಕತೆಯ ಶಕ್ತಿ ಇಲ್ಲಿಂದಲೆ ಪಡೆಯಬೇಕಾಗಿದೆ. ಎಲೆಕ್ಟ್ರಾನಿಕ್ ಸೌಲಭ್ಯ, ಕಂಪ್ಯೂಟರೀಕರಣಗಳನ್ನು ಅಳವಡಿಸಿ ಅವರ ಸಾಂಸ್ಕೃತಿಕ ಜಗತ್ತಿನ ಇನ್ನೊಂದು ದಿಕ್ಕಿಗೆ ತರಬೇಕಾಗಿದೆ. ಆಗ ಅದು ಉಳಿದ ದೇಶಗಳೊಟ್ಟಿಗೆ ಸರಿಸಮನಾಗಿ ನಿಲ್ಲುತ್ತದೆ.

ನಾಟಕಕಾರರ ಬರವಣಿಗೆಗೆ

ಟಿ.ಪಿ. ಕೈಲಾಸಂ ಉಳಿದ ನಾಟಕಕಾರರಿಗೆ ಹೋಲಿಸಿದರೆ ಭಿನ್ನ ನಾಟಕಕಾರರಾಗುತ್ತಾರೆ. ಇವರದು ವರ್ಣ ರಂಜಿತ ಬದುಕು. ಇದಕ್ಕೆ ಕಾರಣ ಅವರು ಸ್ವತಃ ಕುಟುಂಬದಿಂದ ದೂರವಾಗಿದ್ದು ಅಥವಾ ಮೋಸ ಹೋದದ್ದು ಎನ್ನಬಹುದು. ಅವರ ವೈವಾಹಿಕ ಬದುಕು ಸುಖವಾಗಿರಲಿಲ್ಲ. ಹೆತ್ತವರು ಅವರಿಗೆ ಸಖ್ಯವಾಗಿರಲಿಲ್ಲ. ಇದಕ್ಕೆ ಕೈಲಾಸಂ ಅವರ ವ್ಯಕ್ತಿತ್ವ ಕಾರಣವೋ ಅವರ ಕುಟುಂಬದ ಪರಿಸರ ಕಾರಣವೊ ಅಥವಾ ಸಾಮಾಜಿಕ ವ್ಯವಸ್ಥೆ ಕಾರಣವೊ ನಿಖರವಾಗಿ ಹೇಳಲಾಗುವುದಿಲ್ಲ. ಅಂತು ಕೈಲಾಸಂ ಟಿಪಿಕಲ್ ಆದದ್ದು ಸತ್ಯ. ತಮ್ಮ ಉನ್ನತ ಜಾತಿಯನ್ನು ಮಣ್ಣು ಪಾಲು ಮಾಡಿ ಮರುಹುಟ್ಟು ಪಡೆದು ಟಿಪಿಕಲ್ ಕೈಲಾಸಂ ಆದರು. ಈಗ ಅವರು ಈ ಭೂಮಿಯ ಎಲ್ಲಾ ಜನಾಂಗ, ವಿವಿಧ ಭಾಷೆ ಸಂಸ್ಕೃತಿಯನ್ನು ತನ್ನ ಕುಟುಂಬದ್ದು ಎಂದು ತಿಳಿಯುತ್ತಾರೆ. ಹೀಗಾಗಿ ಅವರು ಬರೆದ ಪೋಲಿ ಕಿಟ್ಟಿ ಎಲ್ಲಾ ಭಾಷೆಗಳನ್ನು ಸೇರಿಸಿ ಒಂದು ಹೊಸ ಮಿಶ್ರಣವನ್ನ ತಯಾರಿಸಿದ್ದರಾದರೂ ಅದು ಕನ್ನಡವೆ. ಇಂಗ್ಲಿಷ್, ತಮಿಳು, ತೆಲುಗು, ಉರ್ದು ಹೀಗೆ ಹತ್ತು ಹಲವು ಭಾಷೆ ಒಳಗೊಂಡಿದ್ದರೂ ಇವೆಲ್ಲ ಭಾಷೆ ಕನ್ನಡದ್ದೇ ಎನ್ನುತ್ತಾರೆ.

ಸಾಹಿತಿಗಳು ಕೈಲಾಸಂ ಬರೆದದ್ದು ಸಾಹಿತ್ಯವೇ ಅಲ್ಲಾ ಅಂದಾಗ ಕೈಲಾಸಂ ಹೇಳಿದ್ದು ಹೀಗೆ. 'ನಾನು ಸಾಹಿತ್ಯಕ್ಕಾಗಿ ನಾಟಕ ಬರೆಯುವುದಿಲ್ಲ ಪ್ರೇಕ್ಷಕರಿಗಾಗಿ ಬರೆಯುತ್ತೇನೆ' ಎಂದಿದ್ದರು. ಕೈಲಾಸಂ ಸೃಷ್ಟಿಸಿದ ಪೋಲಿಕಿಟ್ಟಿ ಸ್ವತಃ ತಮ್ಮನ್ನೇ ಸೃಷ್ಟಿಸಿಕೊಂಡಂತಿದೆ. ಕಿಟ್ಟಿ ಹುಟ್ಟಿನಲ್ಲಿ ಬ್ರಾಹ್ಮಣನಾಗಿದ್ದರೂ ಬೆಳೆದದ್ದು ಮುಸಲ್ಮಾನರ ಕೇರಿಯಲ್ಲಿ. ಕುಸ್ತಿ ಆಡುವುದು, ಪಾರಿವಾಳ ಹಾರಿಸೋದು 'ಕಸರತ್ತು ಘಟಿಕ ಕಬಿನಹಿ ಹಡಿಯ ಅಭಿತಕ್ ಪೆಹಲ್ವಾನ್ ಕಬಿನಹಿ ಹಬಿಯ' ಎಂಬ ಅವರ ಹಾಡೇ ಹೇಳುತ್ತದೆ. ಕಸರತ್ತು ಮಾಡುವವರು ಗೆಲ್ಲುವ ಕುಸ್ತಿಪಟು ಎಂದು. ತಲೆ ಮತ್ತು ದೇಹ ಎರಡೂ ಸರಿಯಾಗಿ ಕೆಲಸ ಮಾಡಿದರೆ ಮಾತ್ರ ಆರೋಗ್ಯಕಾರಿ ಜನಪರ ಕೆಲಸ ಮಾಡಲು ಸಾಧ್ಯ ಎಂಬುದು ಅವರ ನಂಬಿಕೆ.

ನಮ್ಮಲ್ಲಿರುವ ಕಿಡಿಗೇಡಿತನದಿಂದ ಕ್ರಿಯಾಶೀಲತೆ ಕಂಡುಕೊಳ್ಳಬಹುದು. ನಮ್ಮ ನೆಲದ ಸಂಸ್ಕೃತಿಯ ಸಾಕ್ಷಾತ್ಕಾರವೇ ಪೋಲಿಕಿಟ್ಟಿ ಪಾತ್ರದ ಹುಟ್ಟು. ಇವನೊಬ್ಬ ಸೂಪರ್ ಮ್ಯಾನ್ ಇದ್ದ ಹಾಗೆ ಇವನು ಎಂತಹ ಸ್ಥಿತಿಯಲ್ಲೂ ನುಗ್ಗಿ ಕಷ್ಟದಲ್ಲಿದ್ದವರನು ಬಚಾಯಿಸ್ತಾನೆ, ತನ್ನಲ್ಲಿರುವ ಅಸಾಧ್ಯ ಜಾಣತನದಿಂದ ಮತ್ತು ಧೀಶಕ್ತಿಯಿಂದ ವ್ಯವಸ್ಥೆಯಲ್ಲಿರುವ ಕುಂದುಕೊರತೆಗಳನ್ನು ನಿವಾರಿಸಬಲ್ಲಂತಹವನು. ನಮ್ಮದು ವಿವಿಧ ಜಾತಿ, ಜನಾಂಗಗಳ, ವಿವಿಧ ಭಾಷೆಗಳ ದೇಶ ಇಂತಹ ಸಂಸ್ಕೃತಿಯಲ್ಲಿ ಎಂತಹ ವ್ಯಕ್ತಿತ್ವ ಪಡೆಯಲು ಪೋಲಿಕಿಟ್ಟಿ ಅಲ್ಲದೆ ಬೇರೆ ಏನು ಸಾಧ್ಯ. ಒಂದು ರೀತಿಯಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ ತಂದುಕೊಟ್ಟವರಲ್ಲಿ ಇಂತಹ ಕಿಡಿಗೇಡಿಗಳ ಕೈವಾಡ ಬಹಳ ಇದೆ.

ಕನ್ನೇಶ್ವರರಾಮ, ಸಂಗೊಳ್ಳಿರಾಯಣ್ಣನಂತಹವರು ಈ ದೇಶದ ವಿವಿಧೆಡೆಗಳಲ್ಲಿ ಹುಟ್ಟುತ್ತಲೇ ಇರುತ್ತಾರೆ. ಬ್ರಿಟೀಷರು ನಮ್ಮನ್ನು ಆಳಲು ಯೋಗ್ಯರು. ಅವರು ಶಕ್ತಿಶಾಲಿಗಳು, ಬುದ್ಧಿವಂತರು, ಬಿಳಿಯ ಬಣ್ಣದವರು ಅಂತ ಏನೆಲ್ಲ ನಾವು ನಮ್ಮನ್ನೇ ಕುಬ್ಜರನ್ನಾಗಿ ಮಾಡಿಕೊಂಡು ಬಿಟ್ಟಿದ್ದೆವು. ಎಂದು ಈ ಪುಂಡರು ಬ್ರಿಟೀಷರಿಗೆ ಚಳ್ಳೆಹಣ್ಣು ತಿನಿಸಲು ಪ್ರಾರಂಭಿಸಿದರೂ ಅಂದಿನಿಂದಲೇ ತಿಳಿಯಿತು ಇವರೂ ಮನುಷ್ಯ ದೌರ್ಬಲ್ಯ ಹೊಂದಿದವರು ಎಂದು. ಜನಸಾಮಾನ್ಯರು ನಿರ್ಭೀತಿಯಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಲು ಪ್ರಾರಂಭಿಸಿಬಿಟ್ಟರು. ಇದನ್ನು ಯಾಕೆ ಹೇಳಿದೆ ಅಂದರೆ ನಮ್ಮ ನೆಲದ ಜ್ಞಾನ ಪಾಶ್ಚಾತ್ಯ ಜ್ಞಾನದ ಎದುರು ಕಿಡಿಗೇಡಿತನವೆನ್ನುವ ವರ್ಗ ಇಂದಿಗೂ ಇದೆ. ಪಾಶ್ಚಾತ್ಯ ನೆಲದ ಸೂಪರ್ ಮ್ಯಾನ್, ಸ್ಪೈಡರ್ ಮ್ಯಾನ್ ಇದ್ದಂತೆ ನಮ್ಮ ನೆಲದ ಪೋಲಿ ಕಿಟ್ಟಿ ನಮ್ಮ ನೆಲದ ಜ್ಞಾನದ ಸಾಕ್ಷಾತ್ಕಾರ.

ಭಾರತೀಯರಿಗೆ ರಾಮಾಯಣ, ಮಹಾಭಾರತದಂತಹ ಪುರಾಣಗಳೇ ಅಳತೆಗೋಲಾಗಿಬಿಟ್ಟಿವೆ. ಈ ಪುರಾಣಗಳಲ್ಲಿ ವರ್ಗ, ಜಾತಿ, ಧರ್ಮ ಎಲ್ಲಾ ಇವೆ. ಆದರೆ ಇಂತಹ ಗ್ರಂಥಗಳನ್ನು ನಿರ್ಮಿಸಿ ದೇವರ ಮನಸ್ಥಿತಿ ಎಂತಹದ್ದು ಎಂಬುದನ್ನು ಯೋಚಿಸಬೇಕಾಗಿದೆ. ಈ ಗ್ರಂಥಗಳ ಮೌಲ್ಯಗಳನ್ನು ಎಲ್ಲಾ ದಿಕ್ಕಿನಲ್ಲಿ ಚರ್ಚಿಸಿ ವಿಮರ್ಶಿಸುತ್ತಲೇ ಇದ್ದಾರೆ. ಚಿತ್ರಕಲೆ, ನಾಟಕ, ಸಿನಿಮಾಗಳಲ್ಲಿ ಇಂದಿಗೂ ಇವೇ ಮೂಲಗಳಾಗಿಬಿಟ್ಟಿವೆ. ಒಂದು ಕಾಲದಲ್ಲಿ ಕಲೆಯ ಬೆಳವಣಿಗೆಗೆ ಕಾರಣವಾಗಿದ್ದ ಈ ಮಹಾಪುರಾಣಗಳೇ ಇಂದಿನ ಬೆಳವಣಿಗೆಗೆ ಕಂಟಕವಾಗಿವೆ. ನಮ್ಮ ಆಲೋಚನೆಗಳಿಗೆ ಕಡಿವಾಣವಾಗಿಬಿಟ್ಟಿವೆ. ದೃಶ್ಯಮಾಧ್ಯಮದಲ್ಲಿ ರವಿವರ್ಮನಂತಹ ಕಲಾವಿದ ಶಾಪವಾಗಿಬಿಟ್ಟಿದ್ದಾನೆ. ಇಂದಿಗೂ ನಾವು ಸಿನಿಮಾದಲ್ಲಿಯಾಗಲಿ ನಾಟಕದಲ್ಲಿಯಾಗಲಿ ಸತ್ಯ ಮೇವ ಜಯತೆಯಿಂದಲೇ ಕೊನೆಮಾಡುತ್ತೇವೆ. ಈಗಿನ ಹೊಸ ಬದುಕಿನ ಕತೆಯೂ ನಾವು ಇದೇ ರೀತಿಯಲ್ಲಿ ಮುಕ್ತಾಯ ಮಾಡಲು ಇಚ್ಛಿಸುತ್ತದೆ.

ನಾವು ಇಂದು ಟಿ.ವಿ., ಕಂಪ್ಯೂಟರ್, ವಾಷಿಂಗ್ ಮಿಷನ್ ಮನೆಗೆ ತಂದು ಎಲೆಕ್ಟ್ರಾನಿಕ್ ಪರಿಕರಗಳಿಗೆ ಧೂಳು ಅಲರ್ಜಿ ಆದರು ಅವುಗಳಿಗೆ ಕುಂಕುಮ ವಿಭೂತಿ ಬಳಿದು ತೆಂಗಿನಕಾಯಿ ಒಡೆದು ನೀರು ಚಿಮುಕಿಸಿ ಇನಾಗರೇಟ್ ಮಾಡುತ್ತೇವೆ. ಇವತ್ತಿನ ನಮ್ಮ ಭಾಷೆಯ ಪ್ರಮುಖ ನಾಟಕಕಾರರಂತಹ ಗಿರೀಶ್ ಕಾರ್ನಾಡ್, ಕಂಬಾರರಂತಹವರೂ ವಸ್ತುವನ್ನ ಪುರಾಣದ ಇಲ್ಲಿ ಇತಿಹಾಸದ ಮಿಥ್‌ಗಳನ್ನು ಆಧರಿಸಿ ಬರೆಯುತ್ತಾರೆ. ನಿಜ ಹೇಳಬೇಕೆಂದರೆ ಜಾಗತಿಕ ಜಗತ್ತಿನಲ್ಲಿ ನಮ್ಮ ಬದುಕಿಗೆ ಈ ಪುರಾಣ ವಸ್ತುಗಳು ಯಾವ ಸಂಬಂಧವು ಇಲ್ಲ. ಬದಲಿಗೆ ವೈರುಧ್ಯಗಳನ್ನೇ ಹೆಚ್ಚು ಸೃಷ್ಟಿಸುತ್ತಿವೆ. ಆದ್ದರಿಂದಲೇ ನಮ್ಮ ಕ್ರಿಯಾಶೀಲತೆ ನೇರ ಬದುಕಿಗೆ ಸಹಾಯವಾಗದೇ ಇರಲು ಕಾರಣ ಎನ್ನಬಹುದು. ಆದರೆ ಬದುಕಿನ ಸತ್ಯಕ್ಕೆ ಹಲವು ಮುಖಗಳಿವೆ. ಇದಂ ಇತ್ಥಂ ಅಂತ ಇಲ್ಲ. ಝೆನ್ ಫಿಲಾಸಫಿಯಂತಹ ನಿರಂತರ ತತ್ವದ ಅನ್ವೇಷಣೆ ನಮ್ಮಲ್ಲಿ ಇಲ್ಲ. ಎಲ್ಲವೂ ಸಿದ್ಧ ಸತ್ಯ ಒಂದಿದೆ ಎಂಬಂತೆ ಈ ರಾಮಾಯಣ ಮಹಾಭಾರತದಂತಹ ಕಥಾ ವಸ್ತುಗಳನ್ನು ಆಧರಿಸಿಬಿಟ್ಟಿವೆ. ಬರಹಗಾರರು, ಕಲಾವಿದರು ಹೊಸ ಸತ್ಯದ ಮುಖ ಕಂಡುಕೊಳ್ಳವಲ್ಲಿ ತೊಡಗುತ್ತಿಲ್ಲ.

ಜಾಗತಿಕ ಜಗತ್ತಿನಲ್ಲಿ ನಮ್ಮ ಬದುಕಿಗೆ ಪುರಾಣ ವಸ್ತುಗಳ ಯಾವ ಸಂಬಂಧವು ಇಲ್ಲ. ಬದಲಿಗೆ ವೈರುಧ್ಯಗಳನ್ನೇ ಹೆಚ್ಚು ಸೃಷ್ಟಿಸುತ್ತಿವೆ. ಆದ್ದರಿಂದಲೇ ನಮ್ಮ ಕ್ರಿಯಾಶೀಲತೆ ನೇರ ಬದುಕಿಗೆ ಸಹಾಯವಾಗದೇ ಇರಲು ಕಾರಣ ಎನ್ನಬಹುದು. ಆದರೆ ಬದುಕಿನ ಸತ್ಯಕ್ಕೆ ಹಲವು ಮುಖಗಳಿವೆ. ಇದಂ ಇತ್ಥಂ ಅಂತ ಇಲ್ಲ. ಝೆನ್ ಫಿಲಾಸಫಿಯಂತಹ ನಿರಂತರ ತತ್ವದ ಅನ್ವೇಷಣೆ ನಮ್ಮಲ್ಲಿ ಇಲ್ಲ. ಎಲ್ಲವೂ ಸಿದ್ಧ ಸತ್ಯ ಒಂದಿದೆ ಎಂಬಂತೆ ಈ ರಾಮಾಯಣ ಮಹಾಭಾರತದಂತಹ ಕಥಾ ವಸ್ತುಗಳನ್ನು ಆಧರಿಸಿಬಿಟ್ಟಿವೆ. ಬರಹಗಾರರು, ಕಲಾವಿದರು ಹೊಸ ಸತ್ಯದ ಮುಖ ಕಂಡುಕೊಳ್ಳವಲ್ಲಿ ತೊಡಗುತ್ತಿಲ್ಲ.

ಇಂದಿನ ಬದುಕಿನಲ್ಲಿ ರಾವಣ, ದುಷ್ಯಾಸನ ಯಾರು ಎಂದು ಕಂಡುಹಿಡಿಯಲು ರಾಮಾಯಣ, ಮಹಾಭಾರತ ನಮಗೆ ಅಳತೆಗೋಲು ಆಗಬೇಕಿಲ್ಲ. ಹಾಗೇನಾದರು ಇಟ್ಟುಕೊಂಡರೆ ನಿಜವಾದ ವಿಲನ್ ಯಾರು ಎಂಬುದು ತಿಳಿಯುವುದಿಲ್ಲ.

ಕೆಳವರ್ಗದವರಲ್ಲಿ ಜೀವಂತವಾಗಿರುವ ಜಾನಪದ ಕಲಾ ಪ್ರಕಾರಗಳು, ಅಲ್ಪಸಂಖ್ಯಾತರ ನೋವುನಲಿವುಗಳು, ಬುಡಕಟ್ಟು ಜನಾಂಗದ ನಂಬಿಕೆಗಳಿಗೆ ಇಂದಿನ ಮಾಡ್ರನ್ ಬದುಕಿನ ಶೈಲಿ ಹೊಂದಿಸಿಕೊಳ್ಳುವುದರಲ್ಲಿ ಯಾವ ತೊಡಕೂ ಕಂಡುಬರುತ್ತಿಲ್ಲ. ಬದಲಿಗೆ ಪೌರೋಹಿತ್ಯಶಾಹಿಗಳ ನುಸುಳುವಿಕೆ ಇದಕ್ಕೊಂದು ಅಡ್ಡಗಾಲಾಗಿದೆ. ಜಗತ್ತಿನ ಯಾವುದೇ ಪಾಪ್ ಸಂಗೀತ ಹೆಸರಾಗಿರೋದು ಈ ಕೆಳವರ್ಗದವರ ಜಾನಪದ ಜ್ಞಾನದಿಂದಲೆ. ಇವತ್ತಿನ ಡಿಜಿಟಲ್ ಯುಗದಲ್ಲಿ ಜಾನಪದ ಕಲೆಯನ್ನು ಹಿಡಿದಿಟ್ಟರೆ ಅದು ಜಗತ್ತಿನ ಯಾವ ಸಂಗೀತಕ್ಕೂ ಕಡಿಮೆ ಎನ್ನಿಸುವುದಿಲ್ಲ. ಹೀಗೆ ರಂಗಸಜ್ಜಿಕೆ, ಧ್ವನಿವರ್ಧಕ, ಬೆಳಕಿನ ವ್ಯವಸ್ಥೆ ಎಲ್ಲವೂ ನಮ್ಮ ಇಂದಿನ ಮಾಡ್ರನ್ ಪರಿಸರಕ್ಕೆ ಹೊಂದಿಸಬಹುದು. ಆದರೆ ಇಲ್ಲಿ ಪುರೋಹಿತಶಾಹಿ ವರ್ಗ ತಲೆಹಾಕಬಾರದು. ಆಗ ಮಾತ್ರ ಇಂದಿನ ಮಾಡ್ರನ್ ಬದುಕಿನಲ್ಲಿ ಎಲ್ಲಾ ಸುಖಗಳು ಈ ಜನಾಂಗ ಪಡೆಯಬಹುದು. ಹೀಗೆ ಹಳತು ಮತ್ತು ಹೊಸತರ ಸಮ್ಮಿಲನವಾಗಬೇಕಿದೆ. ಕಲೆಯಲ್ಲಿ ವೈಭವೀಕರಿಸುವ (ಡೆಕೊರೆಟ್) ಗುಣ ರಾಮಾಯಣ, ಮಹಾಭಾರತದಿಂದಲೆ ಬಂದಿರೋದು ಅನ್ನಬಹುದು. ಉದಾಹರಣೆಗೆ ರವಿವರ್ಮನ ಕಲೆ. ಹೀಗೆ ಮೋಸ ಮಾಡುವ ಗುಣ ಬೇಡ. ಸುಂದರ ಅಂದರೆ ಡೆಕೊರೆಟ್ ಮಾಡುವುದು ಎಂದುಕೊಂಡಿದ್ದೇವೆ. ಪ್ರದರ್ಶನ ಕಲೆಗಳಲ್ಲಿ ಆರ್ಥಿಕ ಸ್ಥಿತಿ ಚೆನ್ನಾಗಿದ್ದರೆ ಡೆಕೊರೆಟ್ ಮಾಡಲು ಸಾಧ್ಯ. ಆದರೆ ಬಡತನದ ಸೌಂದರ್ಯಕ್ಕೆ ಆರ್ಥಿಕ ಸ್ಥಿತಿ ಚೆನ್ನಾಗಿರಲೇಬೇಕೆಂದೇನಿಲ್ಲ. ಆಲೋಚನೆಯ ಸಿರಿತನ ಇದ್ದರೆ ಸಾಕು. ❑

ದಲಿತ ಸಾಂಸ್ಕೃತಿಕ ಚಳವಳಿಯ ವಸಾಹತೀಕರಣ

ಮಹಾರಾಷ್ಟ್ರದ ಅಧಿಪತ್ಯವಾದಿ ರಾಜಕೀಯವು ದಲಿತ ಸಾಂಸ್ಕೃತಿಕ ಚಳವಳಿಯನ್ನು ನುಂಗಿ ಹಾಕಲು ಪ್ರಯತ್ನ ಮಾಡಿತು. ಹಲವಾರು ಪ್ರದೇಶಗಳಿಂದ ದಲಿತ ಸಾಂಸ್ಕೃತಿಕ ಚಳವಳಿಯು ಕಣ್ಮರೆಯಾಗುವುದಕ್ಕೆ ಈ ಅಧಿಪತ್ಯವಾದಿ ರಾಜಕಾರಣವು ಮುಖ್ಯ ಕಾರಣವಾಗಿದೆ. ಈ ಹಿಂದೆ ಹಳ್ಳಿಗಳಲ್ಲಿದ್ದ ಭಜನಾ ಮಂಡಳಿಗಳು ಬುದ್ಧ ಮತ್ತು ಅಂಬೇಡ್ಕರ್ ಕುರಿತ ಹಾಡುಗಳನ್ನು ಹಾಡುತ್ತಿದ್ದವು. ಆದರೆ, ಪ್ರಭುತ್ವದ ಸಂಪನ್ಮೂಲಗಳನ್ನು ಅವಿರತವಾಗಿ ಬಳಸಿಕೊಂಡ ರಾಜಕೀಯ ಪಕ್ಷಗಳು ಇಂದು ದಲಿತ ಸಾಂಸ್ಕೃತಿಕ ಕಾರ್ಯಕರ್ತರನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿವೆ.

ಮಹಾರಾಷ್ಟ್ರದವರು ದಲಿತ ಚಳವಳಿ ಮತ್ತು ದಲಿತ ಸಾಹಿತ್ಯಗಳ ವಿಷಯದಲ್ಲಿ ನಮಗಿಂತ ಹಿರೀಕರು. ಕರ್ನಾಟಕದ ದಲಿತ ಚಳವಳಿಯ ಹಿಂದೆ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳ ದಲಿತ ಚಳವಳಿಗಳ ಪ್ರೇರಣೆ ಕೆಲಮಟ್ಟಿಗಾದರೂ ಇತ್ತು. ಇಂದು ಅಲ್ಲಿ ಸಾಂಸ್ಕೃತಿಕ ಚಳವಳಿಯ ಪರಿಸ್ಥಿತಿ ಏನಾಗಿದೆ ಹಾಗೂ ಅದಕ್ಕೆ ಕಾರಣಗಳೇನು ಎಂಬ ಬಗ್ಗೆ ಹಲವಾರು ಆತ್ಮಾವಲೋಕನಗಳು ನಡೆಯುತ್ತಿವೆ. ಅಂತಹ ಒಂದು ಅಧ್ಯಯನದ ಕೆಲವು ಮುಖ್ಯಾಂಶಗಳನ್ನು ನಮ್ಮೆಲ್ಲರ ಪರಿಶೀಲನೆಗಾಗಿ ಇಲ್ಲಿ ಉಲ್ಲೇಖಿಸುತ್ತಿದ್ದೇನೆ.

* * *

ದಲಿತ ಸಾಹಿತ್ಯ ಚಳವಳಿಯು ಮಹಾರಾಷ್ಟ್ರದ ಸಾಹಿತ್ಯ ಲೋಕದಲ್ಲಿ ಅತ್ಯಂತ ತಲಸ್ಪರ್ಶಿಯಾದ ಪಲ್ಲಟಗಳನ್ನು ಉಂಟು ಮಾಡುತ್ತಿದೆ. ನಗರ ಹಾಗೂ ಪಟ್ಟಣ ಕೇಂದ್ರಿತವಾದ ದಲಿತ ಸಾಹಿತ್ಯ ಚಳವಳಿಯ ಈ ರೀತಿ ಉತ್ಕರ್ಷದಲ್ಲಿರುವಾಗಲೇ ಅಲ್ಲಿನ ಕಲಾಪಥಕ್ ಧಾರೆಯು (ಕಲಾಮಂಡಳಿಗಳು) ತೀವ್ರವಾಗಿ ಹಿನ್ನಡೆಗೆ ಗುರಿಯಾಗಿದೆ.

ಕಲಾಪಥಕ್ ಧಾರೆಯ ಈ ಹಿನ್ನಡೆಯನ್ನು ಅರ್ಥ ಮಾಡಿಕೊಳ್ಳಲು ನಾವು ಹಲವಾರು ಆಯಾಮಗಳ ಪರಿಶೀಲನೆಯನ್ನು ಮಾಡಬೇಕಾಗುತ್ತದೆ. ಆದರೆ, ಅದನ್ನು ತಕ್ಷಣದಲ್ಲಿ ಅರ್ಥಮಾಡಿಕೊಳ್ಳಲು ನಾವು ಸೂಚಿಸಬಹುದಾದ ಕಾರಣವೊಂದಿದೆ. ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷದ ರಾಜಕಾರಣಕ್ಕೆ ದಲಿತ ರಾಜಕೀಯವು ಅಧೀನ ಪಾತ್ರವನ್ನು

ಡಾ॥ ಬಂಜಗೆರೆ ಜಯಪ್ರಕಾಶ

ನಿರ್ವಹಿಸಲು ಆರಂಭಿಸಿದ ಅವಧಿಗೂ ದಲಿತ ಸಾಂಸ್ಕೃತಿಕ ಚಳವಳಿ ಹಿನ್ನಡೆ ಅನುಭವಿಸಿ, ಅಧೀನ ಪಾತ್ರ ವಹಿಸಲು ಆರಂಭಿಸಿದ ಅವಧಿಗೂ ತಾಳೆ ಹೊಂದುತ್ತದೆ. ೧೯೭೦ರ ದಶಕದ ನಂತರ ದಲಿತ ಸಾಂಸ್ಕೃತಿಕ ಚಳವಳಿಯನ್ನು ಪ್ರಭುತ್ವವು ಹೆಚ್ಚು ಕಮ್ಮಿ ತನ್ನ ಕೈವಶ ಮಾಡಿಕೊಂಡಿದೆ.

ಇಂದಿನ ಕಲಾಪಥಕ್ ಧಾರೆಯು ಸರ್ಕಾರೀ ಪ್ರಾಯೋಜಿತ ಕುಟುಂಬ ಕಲ್ಯಾಣ ಹಾಗೂ ಮದ್ಯಪಾನ ನಿಷೇಧದಂತಹ ಕಲ್ಯಾಣ ಕಾರ್ಯಕ್ರಮಗಳ ವಸ್ತುಗಳ ಸುತ್ತ ಸುತ್ತುತ್ತಿದೆ.

ತುಳಸೀರಾಮ್ ಡೋಂಗ್ರೆಯಂತಹ ತಳಸ್ತರದ ಹಲವಾರು ಬೀದಿ ಬರಹಗಾರರು, ಸಾಂಸ್ಕೃತಿಕ ಕಾರ್ಯಕರ್ತರು ಕಾಂಗ್ರೆಸ್ ರಾಜಕೀಯವನ್ನು ಹಾಗೂ ಪ್ರಭುತ್ವವನ್ನು ತಮ್ಮ ಹಾಡುಗಳಲ್ಲಿ ಕಟುವಾಗಿ ಟೀಕಿಸುತ್ತಿದ್ದವರಾಗಿದ್ದರು. ಆದರೆ, ಕ್ರಮೇಣ ಅವರೆಲ್ಲಾ ಈಗ ಸರ್ಕಾರಕ್ಕೋಸ್ಕರವಾಗಿ ಕುಟುಂಬ ಯೋಜನೆ ಹಾಗೂ ಮದ್ಯಪಾನ ನಿಷೇಧದ ಹಾಡುಗಳನ್ನು ಬರೆಯುತ್ತಿದ್ದಾರೆ.

ಸಾಮಾನ್ಯವಾಗಿ ಸರ್ಕಾರೀ ಅನುದಾನದಿಂದ ನಡೆಯುವ ಬಹುಪಾಲು ಕಲಾಪಥಕ ಕಾರ್ಯಕ್ರಮಗಳಲ್ಲಿ ಸರ್ಕಾರೀ ಕಾರ್ಯಕ್ರಮಗಳಿಗೆ ಜನ ಮನ್ನಣೆ ತಂದುಕೊಡುವಂತಹ ಹಾಡುಗಳನ್ನೇ ದಲಿತ ಕಲಾವಿದರು ಹಾಡುತ್ತಾರೆ. ಕಾರ್ಯಕ್ರಮದ ಮೊದಲಿಗೋ ಅಥವಾ ಕೊನೆಗೋ ಒಂದು ಸ್ವಲ್ಪ ಸಮಯವನ್ನು ಅಂಬೇಡ್ಕರ್ ಹಾಗೂ ಬುದ್ಧನನ್ನು ಕುರಿತ ಹಾಡುಗಳಿಗಾಗಿ ಮೀಸಲಿಡುತ್ತಾರೆ. ಈ ಹಾಡುಗಳನ್ನು ಹಾಡುವುದಕ್ಕೆ ಮುಖ್ಯ ಕಾರಣ ಯಾವುದೆಂದರೆ ದಲಿತ ಕಲಾವಿದರಿಗೆ ಕಾಡುವ ಸುಪ್ತ ಪಾಪಪ್ರಜ್ಞೆಯ ಪ್ರೇರಣೆ. ಸರ್ಕಾರವೂ ಕೂಡ ಈ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಯಾಕೆಂದರೆ, ದಲಿತ

ಮಹಾರಾಷ್ಟ್ರ ಅನುಭವ ಅವಲೋಕನ

ಸಂಸ್ಕೃತಿಯ ಪ್ರತೀಕಗಳಾದ ಬುದ್ಧ ಹಾಗೂ ಅಂಬೇಡ್ಕರ್ ಕೂಡ ಈ ಮುಖಾಂತರವಾಗಿ ಸರ್ಕಾರಕ್ಕೆ ಜನಮನ್ನಣೆಯನ್ನು ಪಡೆದುಕೊಳ್ಳುವುದಕ್ಕೆ ನೆರವು ನೀಡುತ್ತವೆ.

ಸರ್ಕಾರವು ಭಂಬಾರಿ ಎಂಬ ಗ್ರಾಮದಲ್ಲಿ ೧೯೬೭ ರಲ್ಲಿ ಕಲಾಪಥಕ ಸಾಂಸ್ಕೃತಿಕ ಸ್ಪರ್ಧೆಯೊಂದನ್ನು ಏರ್ಪಡಿಸಿತ್ತು. ಸಮಾಜ ಕಲ್ಯಾಣ ಇಲಾಖೆ ಸಂಘಟಿಸಿದ್ದ ಆ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಕುರಿತ ಹಾಡನ್ನು ಹಾಡಲು ಇಲಾಖೆ ಅನುಮತಿ ನೀಡಿರಲಿಲ್ಲ. ಇದೇ ದಲಿತ ಸಾಂಸ್ಕೃತಿಕ ಕಾರ್ಯಕರ್ತರು ಅಂದು ಆ ನಿಷೇಧದ ವಿರುದ್ಧ ಪ್ರತಿಭಟನೆ ನಡೆಸಿ ತಮ್ಮ ಹಕ್ಕು ಪಡೆದಿದ್ದರು ಎಂಬುದನ್ನು ನೆನೆದುಕೊಂಡರೆ ಇಂದಿನ ಪರಿಸ್ಥಿತಿ ವಿಪರ್ಯಾಸಕರ ಎಂಬಂತೆ ಕಾಣುತ್ತದೆ.

ಪ್ರಭುತ್ವದ ವತಿಯಿಂದ ಚಾಲ್ತಿಯಲ್ಲಿದ್ದ ಇಂತಹ ಸಾಂಸ್ಕೃತಿಕ ವಿಧಿ ನಿಷೇಧಗಳ ಬಗ್ಗೆ ತೀವ್ರ ವಿರೋಧ ಹೊಂದಿದ್ದ ಈ ಸಾಂಸ್ಕೃತಿಕ ಕಾರ್ಯಕರ್ತರು ಇಂದು ಯಾವುದೇ ತಕರಾರುಗಳಿಲ್ಲದೆ, ಅದೇ ಸರ್ಕಾರಕ್ಕೋಸ್ಕರ

ವಾಗಿ ಹಾಡ ತೊಡಗಿದ್ದಾರೆ. ಕಾಂಗ್ರೆಸ್ ಪಕ್ಷದೊಳಗಿನ ಉದಾರವಾದಿ ರಾಜಕಾರಣಿಗಳು ಹಿಂದಿನ ದಲಿತ ಎದುರಾಳಿಗಳನ್ನು ತಮ್ಮ ಮಿತ್ರಪಡೆಯನ್ನಾಗಿಸಿಕೊಳ್ಳುವಲ್ಲಿ ಯಶಸ್ಸು ಕಂಡಿದ್ದಾರೆ. ಇದನ್ನು ಸರ್ಕಾರೀ ಪ್ರಾಯೋಜನೆಗಳ ಸ್ವದ್ಬಳಕೆ ಅಥವಾ ದುರ್ಬಳಕೆಯ ಮೂಲಕ ಅವರು ಸಾಧಿಸಿದ್ದಾರೆ.

* * *

ಮಹಾರಾಷ್ಟ್ರದ ಅಧಿಪತ್ಯವಾದಿ ರಾಜಕೀಯವು ದಲಿತ ಸಾಂಸ್ಕೃತಿಕ ಚಳವಳಿಯನ್ನು ನುಂಗಿ ಹಾಕಲು ಪ್ರಯತ್ನ ಮಾಡಿತು. ಹಲವಾರು ಪ್ರದೇಶಗಳಿಂದ ದಲಿತ ಸಾಂಸ್ಕೃತಿಕ ಚಳವಳಿಯು ಕಣ್ಮರೆಯಾಗುವುದಕ್ಕೆ ಈ ಅಧಿಪತ್ಯವಾದಿ ರಾಜಕಾರಣವು ಮುಖ್ಯ ಕಾರಣವಾಗಿದೆ. ಈ ಹಿಂದೆ ಹಳ್ಳಿಗಳಲ್ಲಿದ್ದ ಭಜನಾ ಮಂಡಳಿಗಳು ಬುದ್ಧ ಮತ್ತು ಅಂಬೇಡ್ಕರ್ ಕುರಿತ ಹಾಡುಗಳನ್ನು ಹಾಡುತ್ತಿದ್ದವು. ಆದರೆ, ಪ್ರಭುತ್ವದ ಸಂಪನ್ಮೂಲಗಳನ್ನು ಅವಿರತವಾಗಿ ಬಳಸಿಕೊಂಡ ರಾಜಕೀಯ ಪಕ್ಷಗಳು ಇಂದು ದಲಿತ ಸಾಂಸ್ಕೃತಿಕ ಕಾರ್ಯಕರ್ತರನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿವೆ.

ಈ ದಿಸೆಯಲ್ಲಿ ಕೇವಲ ಕಾಂಗ್ರೆಸ್ ಪಕ್ಷ ಮಾತ್ರ ತನ್ನ ರಾಜಕೀಯ ಉದ್ದೇಶಗಳಿಗಾಗಿ ದಲಿತ ಸಾಂಸ್ಕೃತಿಕ ಚಟುವಟಿಕೆಗಳನ್ನು ಬಳಸಿಕೊಂಡಿಲ್ಲ, ರಾಜ್ಯಾದ್ಯಂತ ರೈತರನ್ನು ಸಂಘಟಿಸುವ ಸಲುವಾಗಿ ಶೇತ್ಕರಿ ಸಂಘಟನೆಯೂ ಕೂಡ ಈ ಜನಪ್ರಿಯ ಸಂಗೀತ ಕಲಾ ಪ್ರಕಾರವನ್ನು ಬಳಸಿಕೊಂಡಿತು.

* * *

ಅಕೋಟ್ ತಾಲ್ಲೂಕಿನ ಲೋಹರಿ ಕರ್ದ್ ಪ್ರದೇಶದ ದಲಿತರು ಇಂದು ಅತ್ಯಾಧುನಿಕ ಸಂಗೀತ ವಾದ್ಯಗಳನ್ನು ಕೊಂಡುಕೊಂಡು ಮತ್ತೊಂದು ಪರಿಶಿಷ್ಟ ಜಾತಿಯಾದ ಮತಂಗರ ಜೊತೆ ಸ್ಪರ್ಧೆಗಿಳಿದಿದ್ದಾರೆ. ಮೇಲ್ಜಾತಿಯವರ ಮದುವೆಗಳಲ್ಲಿ ಹಾಡುವುದು ತಮ್ಮ ಏಕಸ್ವಾಮ್ಯ ಹಕ್ಕೆಂದೇ ಈವರೆಗೆ ಮತಂಗರು ಭಾವಿಸಿದ್ದರು.

ಈ ಆಧುನಿಕ ಸಂಗೀತ ವಾದ್ಯಗಳನ್ನು ಬುದ್ಧ ಹಾಗೂ ಅಂಬೇಡ್ಕರ್‌ರವರ ಜಯಂತಿಗಳನ್ನು ಆಚರಿಸುವಾಗಲೂ ದಲಿತ ಯುವಕರು ಬಳಸಿಕೊಳ್ಳುತ್ತಾರೆಂಬುದಕ್ಕೆ ಯಾವುದೇ ಅನುಮಾನವಿಲ್ಲ. ಹಾಗಿದ್ದಾಗಲೂ ಸಂಗೀತ ಗೋಷ್ಠಿಗಳನ್ನು ನಡೆಸಲು ಹೋಗುವ ದಲಿತರು ತಮ್ಮ ಮೂಲ ಸಾಂಸ್ಕೃತಿಕ ಕಾಳಜಿಗಳಿಂದ ದೂರವಾಗಬೇಕಾಗಿ ಬರುತ್ತಿದೆ ಎಂಬುದೂ ಕೂಡ ವಾಸ್ತವ. ಈ ಸಂಗೀತ ಗೋಷ್ಠಿಗಳನ್ನು ಏರ್ಪಡಿಸುವ ಮೇಲ್ಜಾತಿಯವರು ಅಪೇಕ್ಷಿಸುವ ರೀತಿಯಲ್ಲೇ ಈ ಕಲಾ ತಂಡಗಳು ಸಂಗೀತ ನುಡಿಸಬೇಕಾಗಿ ಬರುತ್ತದೆ. ಅವರ ಮದುವೆ ಸಮಾರಂಭಗಳಲ್ಲಿ ಅಂಬೇಡ್ಕರ್ ಕುರಿತ ಹಾಡುಗಳನ್ನು ಇವರು ಖಂಡಿತವಾಗಿ ಹಾಡಲು ಸಾಧ್ಯವಿಲ್ಲ.

ಕಲಾ ತಂಡಗಳು ಅಭ್ಯಾಸ ಮಾಡಿಕೊಳ್ಳುತ್ತಿರುವ ವೃತ್ತಿಪರತೆಯೆಂಬುದು ದಲಿತ ಕಲಾ ತಂಡಗಳ ಸ್ವಾಯತ್ತತೆ ಹಾಗೂ ಪ್ರಮಾಣೀಕೃತತೆಯನ್ನು ಹಾನಿಗೊಳಪಡಿಸುತ್ತಾ ಇದೆ.

ದಲಿತ ಸಂಗೀತ ಪರಂಪರೆಯೊಳಕ್ಕೆ ನುಸುಳುತ್ತಿರುವ ವೃತ್ತಿಪರತೆ ಒಂದು ಕಡೆ, ಮತ್ತೊಂದು ಕಡೆ ತೀವ್ರಗೊಳ್ಳುತ್ತಲೇ ಇರುವ ಅವರ ಆರ್ಥಿಕ ಸಂಕಷ್ಟಗಳು ಜನಪ್ರಿಯ ಕಲಾಪಥಕ್ ತಂಡಗಳ ಅವನತಿಗೆ ನೇರ ಕಾರಣವಾಗಿವೆ. ದಲಿತ ಕಲಾ ತಂಡಗಳು ಸ್ವಯಂ ಇಚ್ಛೆಯಿಂದ ಈ ವೃತ್ತಿಪರ ಸಂಗೀತ ಗೋಷ್ಠಿಗಳ ಹಾದಿಯನ್ನು ಆರಿಸಿಕೊಂಡಿಲ್ಲ. ತಮ್ಮ ಬಡತನವನ್ನು ನೀಗಿಸುವ ಹೆಚ್ಚುವರಿ ಅವಕಾಶಗಳ ಹುಡುಕಾಟದ ಅಂಗವಾಗಿ ಅವರು ಈ ವೃತ್ತಿ ಸಂಗೀತ ಗೋಷ್ಠಿಗಳ ಹಾದಿ ಹಿಡಿದಿದ್ದಾರೆ ಎನ್ನಬಹುದು.

ಕಡುಬಡತನದ ಕಾರಣದಿಂದಾಗಿ ಹಲವಾರು ಕಲಾವಿದರು ತಮ್ಮ ಜಿಲ್ಲೆಯಿಂದ ಬೇರೆ ಜಿಲ್ಲೆಗಳಿಗೆ ವಲಸೆ ಹೋಗಿದ್ದಾರೆ. , ಇದು ಅಲ್ಲಿನ ಕಲಾಪಥಕ ತಂಡಗಳ ವಿಘಟನೆಗೆ ಹಾದಿ ಮಾಡಿದೆ.

ದಲಿತ ಕಲಾವಿದರಲ್ಲಿ ಬಹುಪಾಲು ಜನರು ಭೂರಹಿತ ಕಾರ್ಮಿಕರಾಗಿದ್ದು ಸ್ವಂತ ಭೂಮಿಯೂ ಇರದ ಅವರಿಗೆ ಮಾಮೂಲಿ ಉದ್ಯೋಗಾವಕಾಶಗಳ ಖಾತರಿಯೂ ಇಲ್ಲ. ಹಾಗಾಗಿ ಕಲಾ ಪ್ರದರ್ಶನಕ್ಕೆ ಅಗತ್ಯವಾದಷ್ಟು ಕಾಲಾವಕಾಶವನ್ನು ಮೀಸಲಿಡುವುದು ಅವರಿಗೆ ದುಸ್ತರದ ಕೆಲಸ. ಕಲಾಪಥಕದಂತಹ ಪ್ರಕಾರಗಳು ಹೆಚ್ಚು ಪರಿಶ್ರಮದ ಪೂರ್ವ ತಯಾರಿ ಹಾಗೂ ರಂಗ ಪ್ರದರ್ಶನ ಕಾಲಾವಧಿ ಬೇಡುವುದರಿಂದ ಅಂತಹ ಪ್ರಕಾರಗಳನ್ನು ಕೈಬಿಡಬೇಕಾದ ಒತ್ತಡಕ್ಕೆ ಅವರು ಗುರಿಯಾಗಿದ್ದಾರೆ.

ದಲಿತ ಸಮುದಾಯದೊಳಗೆ ಕಲಾಪಥಕ ಪ್ರಕಾರವು ಹಿನ್ನೆಡೆ ಅನುಭವಿಸಲು ದಲಿತ ರಾಜಕೀಯ ನಾಯಕರ ಕುಟಿಲ ನಿರ್ಲಕ್ಷ್ಯವೂ ಕೂಡ ಕಾರಣವಾಗಿದೆ. ದಲಿತ ಜನ ಸಮೂಹಗಳ ಜಾಗೃತಿ ನಿರ್ಮಾಣದಲ್ಲಿ ಅಂಬೇಡ್ಕರ್ ಕಾಲಘಟ್ಟದಿಂದಲೂ ಅತ್ಯಂತ ಮಹತ್ವದ ಪಾತ್ರ ನಿರ್ವಹಿಸಿದ ಸಾಂಸ್ಕೃತಿಕ ಕಾರ್ಯಕರ್ತರ ಮಹತ್ವವನ್ನು ಅಂಬೇಡ್ಕರ್ ನಂತರದ ದಲಿತ ರಾಜಕೀಯ ನಾಯಕರು ಸೂಕ್ತವಾಗಿ ಪರಿಗಣನೆಗೆ ತೆಗೆದುಕೊಳ್ಳಲಿಲ್ಲ.

ಒಬ್ಬ ದಲಿತ ಶಾಹಿರ್‌ನ ರಾಜಕೀಯ ಪ್ರಾಮುಖ್ಯವು ಹತ್ತು ರಾಜಕೀಯ ನಾಯಕರ ಪ್ರಾಮುಖ್ಯತೆಗೆ ಸಮಾನವಾದುದಾಗಿದೆ ಎಂದು ಅಂಬೇಡ್ಕರ್‌ರವರು ಹೇಳಿದ್ದರು.

ತಮ್ಮ ಸಾಂಸ್ಕೃತಿಕ ಅಭಿರುಚಿಗಳಲ್ಲಿ ತೀವ್ರತರ ಪಲ್ಲಟಗಳಿಗೊಳಗಾಗಿರುವ ದಲಿತ ಯುವಕರ ಅಗತ್ಯಗಳನ್ನು ಇಂದು ಈ ವಿಡಿಯೋ ಪಾರ್ಲರ್‌ಗಳು ಪೂರೈಸುತ್ತಿವೆ. ಯಾವುದೇ ಸಾಂಸ್ಕೃತಿಕ ಧಾರೆಯನ್ನು ತಿರುವು ಮುರುವುಗೊಳಿಸಲು ಅಗತ್ಯವಾದಷ್ಟು ಸಾಮರ್ಥ್ಯ, ಉತ್ಸಾಹ ಹಾಗೂ ತಾಳ್ಮೆಯನ್ನು ಈ ದಲಿತ ಯುವಕರು ಹೊಂದಿಲ್ಲ. ಯಾಕೆಂದರೆ ಬೆಳಿಗ್ಗೆಯಿಂದ ಮಧ್ಯರಾತ್ರಿಯವರೆಗೆ ಅವರೆಲ್ಲ ಈ ವಿಡಿಯೋಗಳು ತೋರಿಸುವ ಹಿಂದಿ ಮಸಾಲಾ ಸಿನಿಮಾಗಳನ್ನು ನೋಡುವುದರಲ್ಲೇ ಮಗ್ನರಾಗಿರುತ್ತಾರೆ.

ಅಂಬೇಡ್ಕರ್ ನಂತರದ ದಲಿತ ರಾಜಕೀಯ ನಾಯಕರು ಸಾಂಸ್ಕೃತಿಕ ಕಾರ್ಯಕರ್ತರ ಬಗ್ಗೆ ತೋರಿಸಿದ ನಿರ್ಲಕ್ಷ್ಯವೆಂತಹುದು ಎಂಬುದನ್ನು ಸಾಂಸ್ಕೃತಿಕ ಕಾರ್ಯಕರ್ತರಲ್ಲಿ ಪ್ರಮುಖರಾದ ಹರಿಭಾವು ಶಂಸ್ಕರ್ ಅವರ ಅನುಭವ ಸೂಚಿಸುತ್ತದೆ.' ನಾನು ಆರ್.ಪಿ.ಐ. ಗಾಗಿ ಹಾಡುತ್ತಿದ್ದೆ, ಆದರೆ, ಅದರ ನಾಯಕರು ನಾನು ಉಂಡೆನೋ, ಬಿಟ್ಟೆನೋ ಎಂದೂ ಕೂಡ ವಿಚಾರಿಸಿಕೊಳ್ಳುತ್ತಿರಲಿಲ್ಲ. ಎಷ್ಟೋ ಸಲ ನನ್ನ ಇಡೀ ತಂಡ ಹಸಿವೆ ನೀಗಿಸಿಕೊಳ್ಳಲಿಕ್ಕಾಗಿ 'ಊಂಬರ್' ಕಾಡು ಹಣ್ಣುಗಳನ್ನು ತಿಂದು ಕಾಲ ಹಾಕಬೇಕಾಗಿ ಬರುತ್ತಿತ್ತು. ಅಂತಹ ಸನ್ನಿವೇಶಗಳಲ್ಲಿ ಈ ರಾಜಕೀಯ ನಾಯಕರು ಮಾತ್ರ ಪೊಗದಸ್ತಾದ ಊಟ ಮಾಡುವುದರಲ್ಲಿ ಮಗ್ನರಾಗಿರುತ್ತಿದ್ದರೆಂಬುದೇ ವಿಪರ್ಯಾಸ.' ಇದು ಇವರೊಬ್ಬರ ಅನುಭವವಲ್ಲ.

ವಾಮನ ಕರ್ಡಕ್ ೧೯೫೯-೬೪ರ ದಲಿತ ಭೂಗ್ರಹಣ ಹೋರಾಟದಿಂದ ಹಿಡಿದು ಹಲವಾರು ಹೋರಾಟಗಳಲ್ಲಿ ದಲಿತ ಜನ ಸಮೂಹಗಳನ್ನು ಜಾಗೃತಗೊಳಿಸುವ ಕೆಲಸವನ್ನು ನಿರ್ವಹಿಸಿದ ಅತ್ಯಂತ ಜನಪ್ರಿಯ ಶಾಹಿರ್. ಆಗ ದಲಿತರ ಮನೆ ಮಾತಾಗಿದ್ದ ವಾಮನ ಹೇಳುವ ಪ್ರಕಾರ 'ನನ್ನ ಹಾಡುಗಳಿಗೆ ಮೊದಲು ನಾನು ಪ್ರಜಾಪ್ರಭುತ್ವವನ್ನು ಕುರಿತಂತೆ ಕೆಲವು ವ್ಯಾಖ್ಯಾನಗಳನ್ನು ಬೇರೆ ಬೇರೆ ಬಗೆಯಲ್ಲಿ ಮಂಡಿಸುತ್ತಿದ್ದೆ. ಆದರೆ, ನಾನು ಬುದ್ಧಿಜೀವಿ ವ್ಯಾಪ್ತಿ ಗಳಿಸಿಕೊಳ್ಳುವುದನ್ನು ಸ್ಥಳೀಯ ದಲಿತ ನಾಯಕರು ಬಯಸುತ್ತಿರಲಿಲ್ಲ. ಯಾಕೆಂದರೆ ಅವರ ಶ್ರೋತೃಗಳನ್ನು ನಾನು ಸೆಳೆದುಕೊಂಡುಬಿಡುತ್ತೇನೆಂಬ ಭಯ ಅವರನ್ನು ಕಾಡುತ್ತಿತ್ತು. ದಲಿತ ರಾಜಕೀಯ ನಾಯಕರು ರುಚಿಕಟ್ಟಾದ ಊಟ ಸವಿಯುತ್ತಿದ್ದಾಗ ಸಾಂಸ್ಕೃತಿಕ ಕಾರ್ಯಕರ್ತರು ಹಸಿದಿದ್ದಾರೆಯೇ ಎಂಬುದನ್ನೂ ಕೂಡ ಅವರು ಪರಿಗಣಿಸುತ್ತಿರಲಿಲ್ಲ.'

ದಲಿತರ ಚೈತನ್ಯದ ಕಿಡಿಗಳನ್ನು ತಮ್ಮಪಕ್ಷಕ್ಕೆ ತಾವು ಕಾಪಾಡಬಲ್ಲೆವೆಂದು ಭಾವಿಸಿಕೊಂಡಿದ್ದ ರಾಜಕೀಯ ನಾಯಕರು ಅದರಲ್ಲಿ ವಿಫಲರಾಗಿದ್ದಾರೆ. ಒಂದು ಕಡೆಯಿಂದ ಪ್ರಭುತ್ವ, ಮತ್ತೊಂದು ಕಡೆಯಿಂದ ಹಿಂದುತ್ವದ ಶಕ್ತಿಗಳು ದಲಿತ ಜನ ಸಮೂಹಗಳನ್ನು ಸುಳ್ಳುಗಳ ಪ್ರವಾಹದಲ್ಲಿ ತೇಲಿಸಬಲ್ಲವರಾಗಿದ್ದಾರೆ ಎಂಬುದೇ ಇವರ ವೈಫಲ್ಯಕ್ಕೆ ಒಂದು ನಿದರ್ಶನವಾಗಿದೆ.

ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಕಡೆಗಣಿಸಿದ ದಲಿತ ರಾಜಕೀಯ ನಾಯಕರೇ ಇಂದಿನ ದುಃಸ್ಥಿತಿಗೆ ಹೊಣೆಗಾರರಾಗಿದ್ದಾರೆ.

ಅದರಂತೆಯೇ ದಲಿತ ರಾಜಕಾರಣಿಗಳ ಇಂತಹ ವಿನಾಶಕಾರಿ ರಾಜಕೀಯದ ಎದುರು ದಲಿತ ಸಾಂಸ್ಕೃತಿಕ ಕಾರ್ಯಕರ್ತರೂ ಕೂಡ ಕೇವಲ ಪ್ರತಿಕ್ರಿಯಾದಾರರಾಗಿ ಮಾತ್ರ ಉಳಿದುಬಿಟ್ಟರೆಂಬುದೂ ನಿಜ. ಪರ್ಯಾಯವಾಗಿ ಒಂದು ಅಧಿಕೃತ ರಾಜಕೀಯ ಮಾದರಿಯೊಂದನ್ನು ಮುಂದಿಟ್ಟು ಅವರು ಕ್ರಿಯಾಶೀಲರಾಗಲಿಲ್ಲ. ಉದಾರವಾದಿ

ರಾಜಕೀಯ ಪರಿಧಿಗಳ ಮಿತಿಗಳೊಳಗೆ ವಾಸ್ತವವಾಗಿ ಅವರು ದಲಿತ ರಾಜಕೀಯವನ್ನು ವಿಮರ್ಶಿಸಿದರು ಅಷ್ಟೆ. ಆ ಸಮಯದಲ್ಲಿ ಅವರ ಜೊತೆ ಜೊತೆಗೇ ಕ್ರಿಯಾಶೀಲವಾಗಿದ್ದ ತೀವ್ರಗಾಮಿ ರಾಜಕೀಯ ಶಕ್ತಿಗಳ ಸಹಾಯ ಅಥವಾ ಸಹಯೋಗವನ್ನು ಪಡೆದುಕೊಳ್ಳಲು ಅವರು ಪ್ರಯತ್ನಿಸಲಿಲ್ಲ.

* * *

ದಲಿತ ರಾಜಕೀಯಕ್ಕೆ ಒಂದು ಸುಸಂಘಟಿತ ಸಾಂಸ್ಕೃತಿಕ ಪ್ರತಿಕ್ರಿಯೆಯನ್ನೊದಗಿಸುವುದರಲ್ಲಿ ಕಂಡು ಬಂದ ವಿಫಲತೆಯೇ ಮಹಾರಾಷ್ಟ್ರದಲ್ಲಿ ಕಂಡುಬರುತ್ತಿರುವ ಸಾರ್ವತ್ರಿಕ ದಲಿತ ಚಳವಳಿಯ ಇಳಿಮುಖತೆಗೆ ಒಂದು ಕಾರಣವೆಂದು ನಾವು ಭಾವಿಸಬಹುದು. ಯಾವುದೇ ಒಂದು ಸಂವೇದನಾಶೀಲ ಕ್ರಿಯಾತ್ಮಕ ಸಾಂಸ್ಕೃತಿಕ ಚಳವಳಿಗೆ, ಸಮರ್ಥ ರಾಜಕೀಯ ಚಳವಳಿಯೊಂದು ಅಗತ್ಯ ಪೂರ್ವಾವಶ್ಯಕತೆಯಾಗಿದೆ ಎನ್ನಲಾಗುತ್ತದೆ. ಅದೇ ವಿಧಾನದಲ್ಲಿ ಅಕೋಟದ ಈ ಪ್ರದೇಶಗಳಲ್ಲಿ ಕಂಡುಬರುತ್ತಿರುವ ಕಲಾಪಥಕ ಚಳವಳಿಯ ಹಿನ್ನಡೆಯು ಸುಸಂಘಟಿತ ದಲಿತ ಚಳವಳಿಯ ಕೊರತೆಯಿಂದಾಗಿ ಉಂಟಾದದ್ದು ಎಂದು ನಾವು ಅರ್ಥಮಾಡಿಕೊಳ್ಳಬಹುದಾಗಿದೆ.

ಈಗಿಲ್ಲಿ ಸುಸಂಘಟಿತ ಚಳವಳಿಯೊಂದರ ಬದಲಿಗೆ ನಾವು ಕಾಣುತ್ತಿರುವುದೇನೆಂದರೆ, ಅಧಿಕಾರದ ಚೂರುಪಾರುಗಳನ್ನು ಪಡೆದುಕೊಳ್ಳುವುದಕ್ಕಾಗಿ ದಲಿತ ಅಧಿಕಾರದ ದಲ್ಲಾಳಿಗಳು ನಡೆಸುತ್ತಿರುವ ಸಂಘಟಿತ ಪ್ರಯತ್ನಗಳು. ಇದಕ್ಕೆ ಪೂರಕವಾಗಿ ಅಧಿಕಾರಸ್ಥ ರಾಜಕೀಯವು ಈ ದಲ್ಲಾಳಿಗಳನ್ನು ತನ್ನ ರಾಜಕೀಯಕ್ಕಾಗಿ ದಾಳಗಳನ್ನಾಗಿ ಬಳಸಿಕೊಳ್ಳುತ್ತಿದೆ.

* * *

ಇಂದು ಮಹಾರಾಷ್ಟ್ರದಲ್ಲಿ ಪ್ರಾಮಾಣೀಕೃತ ದಲಿತ ಸಾಂಸ್ಕೃತಿಕ ಚಳವಳಿಯ ಅವನತಿಗೆ ಮತ್ತೊಂದು ಮುಖ್ಯ ಕಾರಣವೆಂದು ಸಿನಿಮಾ ಹಾಗೂ ವಿಡಿಯೋ ಸಂಸ್ಕೃತಿಯ ವ್ಯಾಪಕತೆಯನ್ನು ಸೂಚಿಸಬಹುದಾಗಿದೆ. ದಲಿತರ ಸಾಂಸ್ಕೃತಿಕ ಜೀವನಕ್ಕೂ ಈ ಸಿನಿಮಾ ಹಾಗೂ ವಿಡಿಯೋಗಳಿಗೂ ಬಹಳಷ್ಟು ಅಂತರವಿದೆ. ಆದರೆ, ಅವೀಗ ಬಹುಪಾಲು ಎಲ್ಲಾ ಹಳ್ಳಿಗಳನ್ನೂ ವ್ಯಾಪಿಸಿಕೊಂಡಿದ್ದು ಇವುಗಳಿಂದಾಗಿ ದಲಿತರು ತಮ್ಮ ಸಾಂಸ್ಕೃತಿಕ ಚಟುವಟಿಕೆಗಳಿಂದ ದೂರವಾಗ ತೊಡಗಿದ್ದಾರೆ.

ತಮ್ಮ ಸಾಂಸ್ಕೃತಿಕ ಅಭಿರುಚಿಗಳಲ್ಲಿ ತೀವ್ರತರ ಪಲ್ಲಟಗಳಿಗೊಳಗಾಗಿರುವ ದಲಿತ ಯುವಕರ ಅಗತ್ಯಗಳನ್ನು ಇಂದು ಈ ವಿಡಿಯೋ ಪಾರ್ಲರ್‌ಗಳು ಪೂರೈಸುತ್ತಿವೆ. ಯಾವುದೇ ಸಾಂಸ್ಕೃತಿಕ ಧಾರೆಯನ್ನು ತಿರುವು ಮುರುವುಗೊಳಿಸಲು ಅಗತ್ಯವಾದಷ್ಟು ಸಾಮರ್ಥ್ಯ, ಉತ್ಸಾಹ ಹಾಗೂ ತಾಳ್ಮೆಯನ್ನು ಈ ದಲಿತ ಯುವಕರು ಹೊಂದಿಲ್ಲ. ಯಾಕೆಂದರೆ ಬೆಳಿಗ್ಗೆಯಿಂದ ಮಧ್ಯರಾತ್ರಿಯವರೆಗೆ ಅವರೆಲ್ಲ ಈ ವಿಡಿಯೋಗಳು ತೋರಿಸುವ ಹಿಂದಿ ಮಸಾಲಾ ಸಿನಿಮಾಗಳನ್ನು ನೋಡುವುದರಲ್ಲೇ ಮಗ್ನರಾಗಿರುತ್ತಾರೆ.

ಅಂಬೇಡ್ಕರ್ ವಿಷಯ ಕೇಂದ್ರಿತ ದಲಿತ ಜನಪ್ರಿಯ ಸಂಗೀತವು ಇಂದು ಹೆಚ್ಚಿನ ಆಕರ್ಷಣೆಗಳನ್ನು ಉಳಿಸಿಕೊಂಡಿಲ್ಲ. ಆ ಹಾಡುಗಳನ್ನು ಹಾಡಲು ಬಳಕೆಯಾಗುತ್ತಿದ್ದ ಹಾರ್ಮೋನಿಯಂ ಮತ್ತು ತಬಲಾಗಳನ್ನು ಚರಿತ್ರೆಯೆಂಬ ಕಸದ ಬುಟ್ಟಿಗೆ ಈ ದಲಿತ ಯುವಕರು ಎಸೆದಿದ್ದಾರೆ ಎಂದು ಇತ್ತೀಚಿನ ಡೋಂಗ್ರೆಯವರ ಹಾಡೊಂದು ಸೂಕ್ತವಾಗಿ ವ್ಯಂಗ್ಯವಾಡಿದೆ.

* * *

ಸಾಂಸ್ಕೃತಿಕ ಚಳವಳಿಯ ಅವನತಿಗೆ ಮತ್ತೊಂದು ಅಂಶವನ್ನು ಕೂಡ ನಾವು ಕಾರಣವಾಗಿ ಸೂಚಿಸಬಹುದಾಗಿದೆ.

ನಗರ ಕೇಂದ್ರಿತವಾದ ದಲಿತ ಬರಹಗಾರರು ನಾಟಕ, ಕವಿತೆ ಹಾಗೂ ಹಾಡುಗಳನ್ನು ಸಾಮಾನ್ಯ ದಲಿತ ಜನಸಮೂಹಗಳಿಗೆ ಅಪರಿಚಿತವಾದ ಸಾಂಸ್ಕೃತಿಕ ನುಡಿಗಟ್ಟುಗಳಲ್ಲಿ ಬರೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ದೀನಬಂಧು ವಿನಂತಹ ಈ ನಗರ ಕೇಂದ್ರಿತ ಬರಹಗಾರರು ಹಿಂದೊಮ್ಮೆ ಜನಸಮೂಹಗಳ ಭಾಷೆಯಲ್ಲೇ ಬರೆಯುತ್ತಿದ್ದವರಾಗಿದ್ದರು. ಆದರೆ, ಇಂದು ಅಂಬೇಡ್ಕರ್ ವಿರೋಧಿಗಳನ್ನು ಸರಿಯಾಗಿ ಎದುರಿಸಬೇಕೆಂಬ ಹೆಸರಿನಲ್ಲಿ ಶೈಕ್ಷಣಿಕ ಭಾಷೆಯನ್ನು ಬಳಸಿಕೊಂಡು ಬರೆಯುತ್ತಿದ್ದಾರೆ.

ದಲಿತ ಬೀದಿ ಬರಹಗಾರರ ಆಶೋತ್ತರಗಳೊಂದಿಗೆ ಸಮರ್ಪಕವಾಗಿ ಬೆಸೆದುಕೊಂಡು ಬರೆಯದಿದ್ದರೆ, ಈ ಬಗೆಯ ಶೈಕ್ಷಣಿಕ ಮಾರ್ಗದ ಪ್ರೇರಣೆಯು ತಳ ಸಮುದಾಯಗಳ ಕಾಳಜಿಗಳಿಂದ ಬರಹಗಾರರನ್ನು ವಿಮುಖಗೊಳಿಸಿಬಿಡುವ ಅಪಾಯ ಇದೆಯೆಂಬುದನ್ನು ನಾವು ಮರೆಯಬಾರದು.

* * *

ಈ ಹಿಂದೆ ಕಲಾಪಥಕ ಧಾರೆಯ ಕೇಂದ್ರಸ್ಥಾನದಲ್ಲಿ ಬೌದ್ಧ ಆಶಯಗಳ ವಸ್ತು ಇರುತ್ತಿತ್ತು. ಪ್ರತಿದಿನದ ಬೌದ್ಧ ಚಟುವಟಿಕೆಗಳಾದ ಬುದ್ಧ ವಂದನಾ ಹಾಗೂ ಪ್ರವಚನ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ದಲಿತ ಪುರುಷರು ಅತ್ಯಾಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದರು. ಆದರೆ, ಇಂದು ದಿನನಿತ್ಯದ ಬೌದ್ಧ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ದಲಿತ ಪುರುಷರ ಸಂಖ್ಯೆ ದಿನದಿಂದ ದಿನಕ್ಕೆ ಒಂದೇ ಸಮನೆ ಕಡಿಮೆಯಾಗುತ್ತಿದೆ. ಆದರೆ, ಧರ್ಮಚಕ್ರ ಪರಿವರ್ತನಾ ದಿನದಂದು ನಾಗಪುರಕ್ಕೆ ಭೇಟಿ ನೀಡುವುದನ್ನು ಮಾತ್ರ ಇವರು ಉಳಿಸಿಕೊಂಡಿದ್ದಾರೆ.

ಬುದ್ಧನ ಧಮ್ಮವನ್ನು ತೊರೆಯುತ್ತಿರುವ ಇಂತಹ ದಲಿತರ ಕೈಗೆ ಬುದ್ಧ ಧರ್ಮವನ್ನು ಕೊಟ್ಟಿದ್ದಕ್ಕಾಗಿ ಅಂಬೇಡ್ಕರ್‌ರವರು ಬದುಕಿದ್ದರೆ ಇಂದು ಬಹಳ ಪಶ್ಚಾತ್ತಾಪ ಪಡುತ್ತಿದ್ದರು ಎಂದು ದಲಿತ ಬೀದಿ ಬರಹಗಾರ ಗುಣರತ್ನ ತಾಯಡೆ ತಮ್ಮ ಹಾಡೊಂದರಲ್ಲಿ ವ್ಯಂಗ್ಯವಾಡಿದ್ದಾರೆ.

ವಿಡಿಯೋ ಸಂಸ್ಕೃತಿಯೆಂಬುದು ದಲಿತರ ಸಾಂಸ್ಕೃತಿಕ ರೂಢಿಗಳಿಗೆ ಬಹಳ ದೊಡ್ಡ ಹಾನಿಯನ್ನುಂಟು ಮಾಡಿದೆ ಎಂಬುದನ್ನು ನಾವು ಈಗಾಗಲೇ ನೋಡಿದ್ದೇವೆ.

* * *

ಪುರುಷರು ಹಾಗೂ ಮಹಿಳಾ ಕಲಾವಿದರು ಅಳವಡಿಸಿಕೊಂಡಿರುವ ಹಿಂದಿ ಸಿನಿಮಾ ಶೈಲಿಯ ಬಗ್ಗೆ ಹಲವಾರು ಕಡೆಗಳಲ್ಲಿನ ನಗರವಾಸಿ ವಿದ್ಯಾವಂತರು ಹಾಗೂ ಮುಖ್ಯ ಧಾರೆಯ ಪ್ರತಿಷ್ಠಿತ ದಲಿತ ಬರಹಗಾರರು ಅಸಮಾಧಾನಗೊಂಡಿದ್ದಾರೆ ಎಂಬುದರಲ್ಲಿ ಅನುಮಾನವಿಲ್ಲ. ಹಿಂದಿ ಸಿನಿಮಾ ಶೈಲಿ ಹಾಗೂ ದಲಿತೇತರ ಸಾಂಸ್ಕೃತಿಕ ಪರಂಪರೆಯ ಅಂಶಗಳನ್ನು ಅಳವಡಿಸಿಕೊಂಡಿರುವ ಮೌಖಿಕ ಪರಂಪರೆಯ ದಲಿತ ಬೀದಿ ಬರಹಗಾರರ ಸಾಂಸ್ಕೃತಿಕ ಕಾರ್ಯಕ್ರಮಗಳು ಅಶ್ಲೀಲತೆ ಹಾಗೂ ಅಸಭ್ಯತೆಯಿಂದ ಕೂಡಿವೆ ಎಂದು ಮುಖ್ಯ ಧಾರೆಯ ಪುರುಷ ಮತ್ತು ಮಹಿಳಾ ಬರಹಗಾರರು ಖಂಡಿಸುತ್ತಿದ್ದಾರೆ. ವೈದಿಕ ಪರಂಪರೆಗೆ ಸಂಪೂರ್ಣವಾಗಿ

ಪ್ರತಿಷ್ಠಿತ ಸಾಹಿತ್ಯ ಪರಿಕಲ್ಪನೆಯೆಂಬುದೇ ದಲಿತ ಲೋಕದೊಳಗಿನ ಸಾಂಸ್ಕೃತಿಕ ವೈರುದ್ಧ್ಯಾತ್ಮಕ ಪರಿಸ್ಥಿತಿಯೊಂದನ್ನು ಸೂಚಿಸುತ್ತಿದೆ. ತಮಗೆ ತಾವೇ ಈ ಪ್ರತಿಷ್ಠಿತ ಸ್ಥಾನವನ್ನು ಆರೋಪಿಸಿಕೊಂಡಿರುವ ದಲಿತ ಲೇಖಕರು ತಮ್ಮ ಸ್ವಂತ ಸಾಹಿತ್ಯ ನಿರ್ಮಿತಿಗೆ ಸಾಂಕೇತಿಕವಾಗಿ ಉನ್ನತ ಸ್ಥಾನ ಕೊಟ್ಟುಕೊಂಡು ಆ ಮೂಲಕ ತಮ್ಮನ್ನು ತಾವು ಇತರ ಸಾಮಾನ್ಯ ಸಾಕ್ಷರ ದಲಿತರಿಂದ ಪ್ರತ್ಯೇಕಗೊಳಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.

ಸವಲತ್ತುಳ್ಳ ಪ್ರತಿಷ್ಠಿತ ದಲಿತ ಬರಹಗಾರ ವರ್ಗವು ನಗರವಾಸಿ ಖಾಯಂ ಓದುಗರೊಂದಿಗೆ ಹಾಗೂ ಮೌಖಿಕ ಪಂಥದ ದಲಿತ ಬೀದಿ ಬರಹಗಾರರೊಂದಿಗೆ ಏರ್ಪಡಿಸಿಕೊಂಡಿರುವ ಸಾಂಸ್ಕೃತಿಕ ವಾಗ್ವಾದವನ್ನು ಗಮನಿಸಿದರೆ, ದಲಿತ ಸಾಹಿತ್ಯವು ಒಂದು ಬಗೆಯ ಇಕ್ಕಟ್ಟಿನೊಳಗೆ ಸಿಲುಕಿಕೊಂಡಿದೆಯೇನೋ ಎಂದು ಭಾಸ ವಾಗುತ್ತದೆ. ಈ ಇಕ್ಕಟ್ಟಿಗಾಗಿ ನಾವು ಯಾರನ್ನು ದೂರಬೇಕು. ಈ ಬಿಕ್ಕಟ್ಟಿಗೆ ಪ್ರತಿಷ್ಠಿತ ದಲಿತ ಬರಹಗಾರರೇ ಮುಖ್ಯ ಹೊಣೆಗಾರರೆಂದು ನಾವು ಹೇಳಬಹುದಾಗಿದೆ. ದಲಿತ ಚಳವಳಿಗೆ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ನಾಯಕತ್ವ ನೀಡುತ್ತೇವೆಂದು ಪ್ರತಿಪಾದಿಸಿದ ಭರವಸೆಯನ್ನು ಉಳಿಸಿಕೊಳ್ಳಲು ಇವರಿಗೆ ಸಾಧ್ಯವಾಗಲಿಲ್ಲ.

ಶರಣಾಗತಿಯಾಗಿರುವ ಒಂದು ವಿಧಾನ ಎಂಬಂತೆ ಈ ತಳಸ್ತರದ ಸಾಹಿತ್ಯ ರಚನೆಯನ್ನು ಮುಖ್ಯಧಾರೆಯ ದಲಿತ ಬರಹಗಾರರು ಪರಿಗಣಿಸಿದ್ದಾರೆ.

ಈ ಬಗೆಯಲ್ಲಿ ತಳಸ್ತರ ಪ್ರೇರಿತವಾದ ಸಾಂಸ್ಕೃತಿಕ ಕ್ರಿಯಾಶೀಲತೆಯೊಂದು ಕಾರ್ಯಾಚರಣೆಯಲ್ಲಿದೆ ಎಂಬುದನ್ನೇ ಮುಖ್ಯಧಾರೆಯ ಕೆಲವು ದಲಿತ ಬರಹಗಾರರು ಪರಿಗಣಿಸುವುದಿಲ್ಲ.

ಮುಖ್ಯ ಧಾರೆಯ ಮರಾಠೀ ಸಾಹಿತ್ಯದ ಸಾಹಿತ್ಯ ನ್ಯಾಯಾಲಯದಿಂದ ಮಾನ್ಯಗೊಳ್ಳಬಹುದಾದ ಸಮರ್ಥ ಸಾಹಿತ್ಯ ಪ್ರಕಾರಗಳನ್ನು ನಿರ್ಮಿಸುವುದರಲ್ಲಿ ತಾವು ನಿಮಗ್ನರಾಗಿಬಿಟ್ಟಿರುವುದರಿಂದ ತಳಸ್ತರದ ಸಾಹಿತ್ಯಾಭಿವ್ಯಕ್ತಿಯನ್ನು ಗಮನಿಸಲು ಬಿಡುವಿಲ್ಲದಂತಾಗಿದೆ ಎಂಬಂತಹ ಸಮರ್ಥನೆಯನ್ನು ಅವರು ಕೊಟ್ಟುಕೊಳ್ಳುತ್ತಾರೆ.

ಮುಖ್ಯ ಧಾರೆಯ ಮರಾಠೀ ಸಾಹಿತ್ಯ ನ್ಯಾಯಾಲಯದ ಮುಂದೆ ಸೂಕ್ತನ್ಯಾಯಕ್ಕಾಗಿ ತಮ್ಮ ಸಾಹಿತ್ಯ ಮೊಕದ್ದಮೆಯನ್ನು ಹೂಡಿರುವ ನಗರವಾಸಿ ದಲಿತ ಬರಹಗಾರರು ಅದೇ ಸಮಯದಲ್ಲಿ ತಮ್ಮದೇ ಸ್ವಂತ ಜನರ ತಳಸ್ತರ ಸಾಹಿತ್ಯ ಸೃಷ್ಟಿಯನ್ನು ಗುರುತಿಸುವುದಕ್ಕೆ ಮಾತ್ರ ಸಿದ್ಧರಾಗಿಲ್ಲ.

ಅರ್ಜುನ ಡಾಂಗ್ಳೆ, ಬಾಲಚಂದ್ರ ನೇಮಾಡೆ ಮತ್ತು ಬಾಬೂರಾವ್ ಬಾಗುಲ್ ಮುಂತಾದ ಕೆಲವು ಸಂವೇದನಾಶೀಲ ವಸ್ತುನಿಷ್ಠ ಬರಹಗಾರರು ಮಾತ್ರ ಇಂದಿನ ದಲಿತ ಸಾಹಿತ್ಯವು ಸಾಮಾನ್ಯ ದಲಿತ ಸಮುದಾಯಗಳನ್ನು ಮುಟ್ಟುವುದರಲ್ಲಿ ವಿಫಲವಾಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ.

* * *

ಸಮಸ್ಯೆಗಳನ್ನು ಐತಿಹಾಸಿಕವಾಗಿ ನೋಡುವ ಪ್ರವೃತ್ತಿಯುಳ್ಳವರೆಲ್ಲ ಒಟ್ಟಾರೆಯಾಗಿ ಒಂದು ಅಂಶದ ಬಗ್ಗೆ ಸಹಮತ ಹೊಂದಿದ್ದಾರೆ. ೧೯೭೦ರ ಆರಂಭಿಕ ದೆಸೆಯ ದಲಿತ ಸಾಹಿತ್ಯವು ದಲಿತರಿಗೊಂದು ಪ್ರತ್ಯೇಕ ಸಾಹಿತ್ಯಕ ಅಸ್ತಿತ್ವವನ್ನು ಹಾಗೂ ಅವರಿಗೊಂದು ಪ್ರಾಮಾಣೀಕೃತ ದನಿಯನ್ನು ಒದಗಿಸಿದ ಚಾರಿತ್ರಿಕ ಪಾತ್ರವನ್ನು ನಿರ್ವಹಿಸಿತು. ಅದಿಲ್ಲವಾಗಿದ್ದರೆ, ಅಧಿಕೃತ ಮರಾಠೀ ಸಾಹಿತ್ಯ ರಂಗದಲ್ಲಿ ಇವರೆಲ್ಲ ಕೇವಲ ಅತಿಥಿ ನಟರಾಗಿ ಕಣ್ಮರೆಯಾಗಿ ಹೋಗುತ್ತಿದ್ದರು.

ಮೇಲ್ಜಾತಿ ಅಧಿಪತ್ಯದ ಸಾಹಿತ್ಯಕ ವಲಯಗಳು ನಿರ್ಮಿಸಿದ್ದ ಸಾಂಸ್ಕೃತಿಕ ಶ್ರೇಣೀಕರಣವನ್ನು ಅಲ್ಲಗಳೆಯುವ ಗುರಿಹೊಂದಿದ್ದ ಈ ದಲಿತ ನಿರ್ಮಾಣದ ಪ್ರಯತ್ನಗಳನ್ನು ನಾವು ಸಮರ್ಥಿಸಬೇಕು ಹಾಗೂ ಬೆಂಬಲಿಸಬೇಕಾಗಿದೆ.

ಹೊಸ ರೂಪಕಗಳು, ಪರಿವರ್ತನಾಶೀಲ ಸಾಧ್ಯತೆಗಳನ್ನುಳ್ಳ ಹೊಸ ಸೃಜನಶೀಲ ಸಾಹಿತ್ಯ ಪ್ರಕಾರಗಳು ಇದರಿಂದ ನಿರ್ಮಿತಗೊಂಡು ಒಟ್ಟಾರೆ ಮರಾಠೀ ಸಾಹಿತ್ಯದ ಸತ್ವವೇ ಹೊಸ ಕಸುವು ಪಡೆದುಕೊಂಡಿತು. ಮುಖ್ಯ ಧಾರೆಯ ಮರಾಠೀ ಸಾಹಿತ್ಯವೂ ಕೂಡ ದಲಿತ ಸಾಹಿತ್ಯದಿಂದ ಇದನ್ನೇ ಅಪೇಕ್ಷಿಸಿತ್ತು.

೧೯೭೦ರ ಆರಂಭದಲ್ಲಿ ಕಾಣಿಸಿಕೊಂಡ ದಲಿತ ಸಾಹಿತ್ಯವು ದಲಿತ ಸಾಂಸ್ಕೃತಿಕ ಚಳವಳಿಗೆ ಒಂದು ಕ್ರಾಂತಿಕಾರಿ ಪರ್ಯಾಯವನ್ನು ನಿರ್ಮಿಸಿಕೊಟ್ಟಿತ್ತು ಎಂಬ ಮಹತ್ವದ ಕಾರಣಕ್ಕಾಗಿಯೂ ಅದು ಸ್ವಾಗತಾರ್ಹವಾದುದಾಗಿತ್ತು. ಯಾಕೆಂದರೆ ಆಗ ದಲಿತ ಸಾಂಸ್ಕೃತಿಕ ಚಳವಳಿಯೆಂಬುದು ಇತರ ಎಲ್ಲಾ ಕಡೆಗಳಂತೆಯೇ ಮಹಾರಾಷ್ಟ್ರದಲ್ಲೂ ವಸಾಹತೀಕರಣಕ್ಕೆ ಗುರಿಯಾಗಿತ್ತು. ದಲಿತ ಸಾಂಸ್ಕೃತಿಕ ಚಳವಳಿಯನ್ನು ಕಬಳಿಸಿ ಹಾಕುವ ಪ್ರಭುತ್ವದ ಹುನ್ನಾರಗಳ ವಿರುದ್ಧ ದಲಿತ ಸಾಹಿತ್ಯವು ಅತ್ಯುತ್ತಮ ಸಾಮರ್ಥ್ಯ ಹಾಗೂ ಎದೆಗಾರಿಕೆಯನ್ನು ಪರಿಣಾಮಕಾರಿಯಾಗಿ ಪ್ರದರ್ಶಿಸಿತು.

ಈ ಬಗೆಯಲ್ಲಿ ದಲಿತ ಸಾಂಸ್ಕೃತಿಕ ಚಳವಳಿಗೆ ಒಂದು ತೀವ್ರಗಾಮಿ ಸನ್ನಿವೇಶ ನಿರ್ಮಾಣ ಮಾಡುವ ಭರವಸೆಯನ್ನು ದಲಿತ ಸಾಹಿತ್ಯವು ಉಂಟುಮಾಡಿತಲ್ಲದೆ, ಅಂತಹುದೊಂದು ಅವಕಾಶವನ್ನೂ ನಿರ್ಮಾಣ ಮಾಡಿತು. ಕೇವಲ ಸಾಂಸ್ಕೃತಿಕ ಚಳವಳಿಗೆ ಮಾತ್ರವಲ್ಲದೆ, ದಲಿತರ ಒಟ್ಟಾರೆ ರಾಜಕೀಯ ಚಳವಳಿಗೂ ಒಂದು ಐತಿಹಾಸಿಕ ನೇತೃತ್ವವನ್ನು ಈ ದಲಿತ ಸಾಹಿತ್ಯ ಚಳವಳಿಯು ಒದಗಿಸಬಲ್ಲುದಾಗಿದೆ ಎಂಬುದಾಗಿ ಹಲವರು ಇದನ್ನು ಪ್ರಶಂಸಿಸಿದರು.

ದಲಿತ ರಾಜಕೀಯ ಚಳವಳಿಗೂ ಐತಿಹಾಸಿಕ ನಾಯಕತ್ವವನ್ನು ಒದಗಿಸುವಲ್ಲಿ ದಲಿತ ಸಾಹಿತ್ಯ ಚಳವಳಿಯು ಸಮರ್ಥವಾಗಿದೆಯೇ ಎಂಬ ಪ್ರಶ್ನೆಗೆ ಖಚಿತ ಉತ್ತರವನ್ನು ನೀಡಲು ಇನ್ನೂ ಯಾರಿಗೂ ಸಾಧ್ಯವಾಗಿಲ್ಲ. ಪ್ರಸ್ತುತದಲ್ಲಿ ದಲಿತ ಚಳವಳಿಯು ಒಂದು ಬಗೆಯ ಸ್ಥಗಿತ್ವದ ಬಿಕ್ಕಟ್ಟಿಗೆ ಸಿಲುಕಿದೆ. ಆದೇ ಸಮಯದಲ್ಲಿ ಸಾಮಾನ್ಯ ದಲಿತ ಜನ ಸಮೂಹಗಳಿಗೆ ಎಟುಕುವಂತಹ ಪರಿಸ್ಥಿತಿಯಲ್ಲಿ ದಲಿತ ಸಾಹಿತ್ಯ ನಿರ್ಮಿತಿಗಳು ಇಲ್ಲ. ಆದ್ದರಿಂದ ಮೇಲ್ಕಂಡ ಪ್ರತಿಪಾದನೆಯು ಎಷ್ಟರಮಟ್ಟಿಗೆ ನಿಜ ಎಂಬ ಗಂಭೀರ ಅನುಮಾನಗಳು ಹುಟ್ಟಿಕೊಳ್ಳುತ್ತವೆ.

ಪರ್ಯಾಯ ವ್ಯಕ್ತಿತ್ವ ನಿರ್ಮಾಣ ಹಾಗೂ ವಿಮೋಚನಾವಾದಿ ಸಂವೇದನೆಗಳನ್ನು ಮಹಾರಾಷ್ಟ್ರದ ದಲಿತರಲ್ಲಿ ನಿರ್ಮಿಸುವ ಗುರಿ ಹೊಂದಿದ್ದ ದಲಿತ ಸಾಹಿತ್ಯದ ಯೋಜನೆಗಳ ಗತಿ ಈಗ ಏನಾಗಿದೆ ಎಂಬ ಪ್ರಶ್ನೆಯನ್ನು ನಾವಿಂದು ಕೇಳಿಕೊಳ್ಳಬೇಕಾಗಿದೆ.

* * *

ತಾವು ಈ ಮೊದಲು ವಿರೋಧಿಸಿ ಹೋರಾಡಿದ ಸಾಂಸ್ಕೃತಿಕ ಶ್ರೇಣೀಕರಣಕ್ಕೆ ಸಮಾನವಾದಂತಹ ಸಾಂಸ್ಕೃತಿಕ ಶ್ರೇಣೀಕರಣಗಳನ್ನು ದಲಿತ ದಲಿತರ ನಡುವೆಯೇ ಜಾರಿಗೊಳಿಸಲು ಪ್ರತಿಷ್ಠಿತ ದಲಿತ ಸಾಹಿತಿಗಳು ಯಾಕೆ ಪ್ರಯತ್ನಿಸುತ್ತಿದ್ದಾರೆ? ಹಿಂದಿ ಸಿನಿಮಾ ಅಥವಾ ಭಕ್ತಿಪಂಥದ ಪ್ರಕಾರಗಳನ್ನು ಬಳಸಿಕೊಳ್ಳುತ್ತಿರುವ ದಲಿತ ಬೀದಿ ಬರಹಗಾರರ ಬಗ್ಗೆ ಇವರು ಯಾಕೆ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ.

ದಲಿತ ಸಾಹಿತ್ಯದ ಮೌಖಿಕ ಧಾರೆಯನ್ನು ಅವಹೇಳನ ಕ್ಕೀಡುಮಾಡುತ್ತಿರುವ ಈ ಪ್ರತಿಷ್ಠಿತ ದಲಿತ ಬರಹಗಾರರು ಆ ಮುಖಾಂತರವಾಗಿ ತಾವು ರಚಿಸಿದ ಸಾಹಿತ್ಯ ಮಾತ್ರವೇ ಪ್ರಾಮಾಣೀಕೃತ ಹಾಗೂ ಮೌಲ್ಯಯುತ ಸಾಹಿತ್ಯ ನಿರ್ಮಿತಿ ಎಂಬುದನ್ನು ಪ್ರತಿಪಾದಿಸುತ್ತಿರುವಂತಿದ್ದಾರೆ.

ಜೊತೆಗೆ ಅಕ್ಷರ ಸಂಸ್ಕೃತಿಯನ್ನು ಮೌಖಿಕ ಪರಂಪರೆಗಿಂತ ಹೆಚ್ಚು ಮಹತ್ವದ್ದೆಂಬಂತೆ ಪ್ರತಿಪಾದಿಸುವ ಮುಖಾಂತರ ಈ ತಥಾಕಥಿತ ಶುದ್ಧ ದಲಿತ ಸಾಹಿತ್ಯವನ್ನು ಯಾವುದೇ ರೀತಿಯಲ್ಲಿ ಪಡೆದುಕೊಳ್ಳಲು ಸಾಮಾನ್ಯ ದಲಿತ ಜನಸಮೂಹಗಳು ಅರ್ಹರಾಗಿಲ್ಲ ಎಂಬುದನ್ನು ಸೂಚಿಸಿದಂತಾಗುತ್ತದೆ.

ಈ ಬಗೆಯ ಪ್ರತಿಷ್ಠಿತ ಸಾಹಿತ್ಯ ಪರಿಕಲ್ಪನೆಯೆಂಬುದೇ ದಲಿತ ಲೋಕದೊಳಗಿನ ಸಾಂಸ್ಕೃತಿಕ ವೈರುದ್ಧ್ಯಾತ್ಮಕ ಪರಿಸ್ಥಿತಿಯೊಂದನ್ನು ಸೂಚಿಸುತ್ತಿದೆ.

ತಮಗೆ ತಾವೇ ಈ ಪ್ರತಿಷ್ಠಿತ ಸ್ಥಾನವನ್ನು ಆರೋಪಿಸಿಕೊಂಡಿರುವ ದಲಿತ ಲೇಖಕರು ತಮ್ಮ ಸ್ವಂತ ಸಾಹಿತ್ಯ ನಿರ್ಮಿತಿಗೆ ಸಾಂಕೇತಿಕವಾಗಿ ಉನ್ನತ ಸ್ಥಾನ ಕೊಟ್ಟುಕೊಂಡು ಆ ಮೂಲಕ ತಮ್ಮನ್ನು ತಾವು ಇತರ ಸಾಮಾನ್ಯ ಸಾಕ್ಷರ ದಲಿತರಿಂದ ಪ್ರತ್ಯೇಕಗೊಳಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.

ಇವರ ಸಾಹಿತ್ಯ ನಿರ್ಮಿತಿಯು ಹೆಚ್ಚು ಮೌಲ್ಯಯುತವಾದುದೋ ಅಲ್ಲವೋ ಎಂಬುದು ಬೇರೆ ಪ್ರಶ್ನೆ. ಆದರೆ ಅದು ಜನಸಮೂಹಗಳ ಕೈಗೆ ಎಟುಕುವಂತಿಲ್ಲ. ಯಾಕೆಂದರೆ ಈ ಮೌಲ್ಯಯುತ ಸಾಹಿತ್ಯವನ್ನು ಮೆಚ್ಚಿಕೊಳ್ಳಲು ಅಥವಾ

೧೯೭೦ರ ಆರಂಭದಲ್ಲಿ ಕಾಣಿಸಿಕೊಂಡ ದಲಿತ ಸಾಹಿತ್ಯವು ದಲಿತ ಸಾಂಸ್ಕೃತಿಕ ಚಳವಳಿಗೆ ಒಂದು ಕ್ರಾಂತಿಕಾರಿ ಪರ್ಯಾಯವನ್ನು ನಿರ್ಮಿಸಿಕೊಟ್ಟಿತು ಎಂಬ ಮಹತ್ವದ ಕಾರಣಕ್ಕಾಗಿಯೂ ಅದು ಸ್ವಾಗತಾರ್ಹವಾದುದಾಗಿತ್ತು.

ಟೀಕಿಸಲು ಅಗತ್ಯವಾದ ಸಾಕ್ಷರ ತರಬೇತಿ ಹಾಗೂ ಸಾಂಸ್ಕೃತಿಕ ಬಂಡವಾಳ ಅವರಲ್ಲಿಲ್ಲ. ಈ ವಿಭಾಗದವರು ಮುಂದಿಡುತ್ತಿರುವ ಪ್ರತಿಷ್ಠಿತ ಸಾಹಿತ್ಯದ ಪ್ರತಿಪಾದನೆಗಳೆಂಬವು ಇತರೆ ದಲಿತ ಬೀದಿ ಬರಹಗಾರರು ಹಾಗೂ ಸಾಂಸ್ಕೃತಿಕ ಕಾರ್ಯಕರ್ತರಿಂದ ಅವರನ್ನು ಪ್ರತ್ಯೇಕಿಸುತ್ತವೆ. ಅದಕ್ಕಾಗಿ ಅವರು ಪರಿಹಾಸ್ಯಗೈಯ್ಯುವ ತಂತ್ರಗಾರಿಕೆಯನ್ನು ಬಳಸುತ್ತಿದ್ದಾರೆ. ಜನಪ್ರಿಯ ದಲಿತ ಸಾಹಿತ್ಯ ಪಂಥಗಳು ಸೃಷ್ಟಿಸಿದ ಸಾಂಕೇತಿಕ ಪ್ರಕಾರಗಳನ್ನು ಕಸದ ಕುಪ್ಪೆ, ನಾಜೂಕು ರಹಿತ, ಅಶ್ಲೀಲ, ಅಪ್ರಬುದ್ಧ ಹಾಗೂ ಸಂಸ್ಕರಣರಹಿತ ಮುಂತಾಗಿ ಅವಹೇಳನಗೈಯ್ಯುವುದೂ ಕೂಡ ಈ ತಂತ್ರಗಾರಿಕೆಯ ಭಾಗವೇ ಆಗಿದೆ.

ಜನಪ್ರಿಯ ದಲಿತ ಸಾಹಿತ್ಯ ಪ್ರಕಾರವೊಂದನ್ನು ಈ ರೀತಿ ಅವಹೇಳನಗೈಯ್ಯುವುದು ಯಾವ ಮೂಲದಿಂದ ಚಿಗುರೊಡೆಯುತ್ತಿದೆ?

ಇದನ್ನು ಪರಿಶೀಲಿಸಲು ನಾವು ಈ ಕೆಳಕಂಡ ಪರಿಸ್ಥಿತಿಯನ್ನು ಗಮನಿಸಬಹುದಾಗಿದೆ.

ಮುಖ್ಯಧಾರೆಯ ದಲಿತ ಸಾಹಿತ್ಯಕ್ಕಿದ್ದ ಮಧ್ಯಮ ವರ್ಗದ ಓದುಗರು/ಪ್ರೇಕ್ಷಕರು ಕಡಿಮೆಯಾಗುತ್ತಾ ಬರುತ್ತಿದ್ದಾರೆ. ಈ ವರ್ಗದವರ ಮೆಚ್ಚುಗೆಯು ಹೆಚ್ಚಳಗೊಳ್ಳದಿರಲಿಕ್ಕೆ ಈ ಸಾಹಿತ್ಯವು 'ಪುನರಾವರ್ತಿತ' ಎಂಬಂತಾಗಿ ಒಂದು ಬಗೆಯ ಸ್ಥಾಗಿತ್ಯವನ್ನು ಎದುರಿಸುತ್ತಿರುವುದು ಒಂದು ಅಂಶಿಕ ಕಾರಣವಾಗಿದೆ.

'ತಾವು ಹೇಗೆ ದಲಿತರಾದೆವು' ಎಂಬ ಪರಿಕಲ್ಪನೆಯನ್ನು ಚಿತ್ರಿಸುತ್ತಾ ಹೊರಟ ಮುಖ್ಯ ಧಾರೆಯ ದಲಿತ ಸಾಹಿತಿಗಳು ಅಲ್ಲಿಂದ ಮುಂದಕ್ಕೆ ದಲಿತ ಸಾಹಿತ್ಯ ನಿರ್ಮಿತಿಯನ್ನು ಮತ್ತಷ್ಟು ಮೇಲೆತ್ತರಿಸಿ, ಕಡೆಯ ಪಕ್ಷ ನಗರವಾಸಿ ಪ್ರೇಕ್ಷಕರನ್ನಾದರೂ ಅಧಿಪತ್ಯ ವಿರೋಧೀ ಉದ್ದೇಶಗಳಿಗೆ ಪ್ರತಿಕ್ರಿಯಿಸುವಂತೆ ಮಾಡಲಿಕ್ಕಾಗಿ ಹೊಸ ಸಾಂಸ್ಕೃತಿಕ ಸಂಪನ್ಮೂಲಗಳ ಮುಖಾಂತರ ಸಾಹಿತ್ಯದ ನೆಲೆಯನ್ನು ರೂಪಾಂತರಗೊಳಿಸುವ ನಿಟ್ಟಿನಲ್ಲಿ ಅವರು ಸಫಲರಾಗಿಲ್ಲ. ಈ ಮಿತಿಯನ್ನು ಮೀರಿದವರೂ ಕೂಡಾ ಕೆಲವರಿದ್ದಾರೆ ಎಂಬುದೂ ನಿಜ.

ಒಂದು ಕಡೆ ಕಡಿತಗೊಳ್ಳುತ್ತಿರುವ ದಲಿತೇತರ ಮಧ್ಯಮ ವರ್ಗದ ಬೆಂಬಲ ಹಾಗೂ ಇನ್ನೊಂದು ಕಡೆ ದಲಿತ ಸಮುದಾಯದೊಳಗಿನಿಂದಲೇ ಒದಗಿಬರಬೇಕಾಗಿದ್ದ ಬೆಂಬಲ ಪರಿಸ್ಥಿತಿಯ ಕೊರತೆ ಇವುಗಳ ಹಿನ್ನೆಲೆಯಲ್ಲಿ ದಲಿತ ಬೀದಿ ಬರಹಗಾರರನ್ನು ಕುರಿತ ಅವಹೇಳನವೆನ್ನುವುದು ಚಿಗುರೊಡೆಯುತ್ತಿದೆ.

ವಾರ್ಷಿಕವಾಗಿ ನಡೆಯುವ ದಲಿತ ಸಾಹಿತ್ಯ ಸಮಾವೇಶಗಳಲ್ಲಿ ಕ್ರಿಯಾವಿಧಿಯೆಂಬಂತೆ ನೆರೆಯುವ ನಿಗದಿತ ಪ್ರೇಕ್ಷಕರು ನೀಡುವ 'ಮಾಮೂಲಿ' ಸಾಹಿತ್ಯ ಸ್ಪಂದನಗಳ ರೀತಿಯೂ ಕೂಡ ಇವರ ಸಾಹಿತ್ಯ ಸ್ಥಗಿತತೆಗೆ ಒಂದು ಸಾಕ್ಷಿಯಂತಾಗಿದೆ.

* * *

ಮುಖ್ಯಧಾರೆಯ ದಲಿತ ಬರಹಗಾರರಿಗೆ ಆಧುನಿಕತೆಯ ಬಗ್ಗೆ ಇರುವ ವಿಮರ್ಶಾರಹಿತವಾದ ಅಥವಾ ಕುರುಡಾದ ಒಲವೆಂಬುದು ದಲಿತ ಸಮುದಾಯದೊಳಗೇ ಏರ್ಪಟ್ಟಿರುವ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಪ್ರಜ್ಞೆಯ ಅಜಗಜಾಂತರ ಪರಿಸ್ಥಿತಿಗೆ ಕಾರಣವಾಗಿರುವ ಮತ್ತೊಂದು ಅಂಶವಾಗಿದೆ.

'ತಾವು ಹೇಗೆ ದಲಿತರಾದೆವು' ಎಂಬ ಪರಿಕಲ್ಪನೆಯನ್ನು ಚಿತ್ರಿಸುತ್ತಾ ಹೊರಟ ಮುಖ್ಯ ಧಾರೆಯ ದಲಿತ ಸಾಹಿತಿಗಳು ಅಲ್ಲಿಂದ ಮುಂದಕ್ಕೆ ದಲಿತ ಸಾಹಿತ್ಯ ನಿರ್ಮಿತಿಯನ್ನು ಮತ್ತಷ್ಟು ಮೇಲೆತ್ತರಿಸಿ, ಕಡೆಯ ಪಕ್ಷ ನಗರವಾಸಿ ಪ್ರೇಕ್ಷಕರನ್ನಾದರೂ ಅಧಿಪತ್ಯ ವಿರೋಧೀ ಉದ್ದೇಶಗಳಿಗೆ ಪ್ರತಿಕ್ರಿಯಿಸುವಂತೆ ಮಾಡಲಿಕ್ಕಾಗಿ ಹೊಸ ಸಾಂಸ್ಕೃತಿಕ ಸಂಪನ್ಮೂಲಗಳ ಮುಖಾಂತರ ಸಾಹಿತ್ಯದ ನೆಲೆಯನ್ನು ರೂಪಾಂತರಗೊಳಿಸುವ ನಿಟ್ಟಿನಲ್ಲಿ ಅವರು ಸಫಲರಾಗಿಲ್ಲ.

ಆಧುನಿಕತೆಯ ಮಹತ್ವಾಕಾಂಕ್ಷೆ ಹೊಂದಿರುವ ದಲಿತ ಲೇಖಕರು ತಮ್ಮ ಪ್ರತೀ ಸಾಹಿತ್ಯ ಸೃಷ್ಟಿಯನ್ನು ತಮ್ಮನ್ನು ತಾವು ಸಾರ್ಥಕಗೊಳಿಸುತ್ತಿರುವ ಒಂದು ರೀತಿಯೆಂಬಂತೆ ಪರಿಗಣಿಸುತ್ತಾರೆ. ಅದಕ್ಕಾಗಿ ಅವರು ಅತ್ಯಂತ ಆತಂಕಿತದಿಂದ ಪ್ರತಿ ಸಾಹಿತ್ಯ ಕ್ರಿಯೆಯನ್ನು ಒಂದು ಐತಿಹಾಸಿಕ ದಿಗ್ವಿಜಯವೇನೋ ಎಂಬಂತೆ ಭಾವಿಸುವಂತಾಗಿದ್ದಾರೆ.

ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ಈ ಆಧುನಿಕತಾವಾದಿ ಪರಿಗಣನೆಯೆಂಬುದು ಅದರ ತಾತ್ವಿಕ ನೆಲೆಯಲ್ಲಿ ಅಕ್ಷರ ಪರಂಪರೆಯೊಂದೇ ಶುದ್ಧರೂಪದ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಪ್ರಕಾರಗಳನ್ನು ನಿರ್ಮಿಸಬಲ್ಲದೆಂದು ಭ್ರಮಿಸುತ್ತದೆ. ಆದ್ದರಿಂದಲೇ ದಲಿತರ ಸಾಂಸ್ಕೃತಿಕ ಪ್ರಜ್ಞೆಯ ಅಸ್ತಿತ್ವದ ಬಗ್ಗೆ ಯಾವುದೇ ಗತಿತಾರ್ಕಿಕ ಪರಿಗಣನೆಯನ್ನೂ ಇಡದೆ, ಅದನ್ನು ಏಕಪಕ್ಷೀಯವಾಗಿ ಗ್ರಹಿಸಿ ದೈನಿಕ ಚಟುವಟಿಕೆಗಳಿಗೆ ಅಗತ್ಯವಾದ ಅನುಕ್ಷಣ ಸಾಂಸ್ಕೃತಿಕ ಕ್ರಿಯೆಗಳನ್ನು ಅಲ್ಪವೆಂಬಂತೆ ಉದಾಸೀನ ಮಾಡುತ್ತದೆ.

ದಲಿತ ಬೀದಿ ಬರಹಗಾರರು ದಲಿತೇತರ ಸಾಹಿತ್ಯಕ ಪರಂಪರೆಗಳೊಂದಿಗೆ ಸಾಹಿತ್ಯಕವಾಗಿ ಮತ್ತು ಸಾಂಸ್ಕೃತಿಕವಾಗಿ ಏಕತ್ರಗೊಳ್ಳುವ ದೋಷವನ್ನು ಹೊಂದಿರುವುದರಿಂದಲೇ ಅವಹೇಳನಕ್ಕೀಡಾಗುತ್ತಿದ್ದಾರೆ ಎಂದು ಈ ಆಧುನಿಕತೆಯ ತರ್ಕವು ಪ್ರತಿಪಾದಿಸುತ್ತದೆ. ಈ ಪ್ರತಿಪಾದನೆಯು ತಮ್ಮ ಆಧುನಿಕತಾವಾದಿ ಒಲವನ್ನು ಎತ್ತಿ ಹಿಡಿಯುವ ಮತ್ತೊಂದು ತರ್ಕ ಮಾತ್ರವಾಗಿದೆ.

ಸವಲತ್ತುಳ್ಳ ಪ್ರತಿಷ್ಠಿತ ದಲಿತ ಬರಹಗಾರ ವರ್ಗವು ನಗರವಾಸಿ ಖಾಯಂ ಓದುಗರೊಂದಿಗೆ ಹಾಗೂ ಮೌಖಿಕ ಪಂಥದ ದಲಿತ ಬೀದಿ ಬರಹಗಾರರೊಂದಿಗೆ ಏರ್ಪಡಿಸಿ ಕೊಂಡಿರುವ ಸಾಂಸ್ಕೃತಿಕ ವಾಗ್ವಾದವನ್ನು ಗಮನಿಸಿದರೆ, ದಲಿತ ಸಾಹಿತ್ಯವು ಒಂದು ಬಗೆಯ ಇಕ್ಕಟ್ಟಿನೊಳಗೆ ಸಿಲುಕಿಕೊಂಡಿದೆಯೇನೋ ಎಂದು ಭಾಸವಾಗುತ್ತದೆ. ಈ ಇಕ್ಕಟ್ಟಿಗಾಗಿ ನಾವು ಯಾರನ್ನು ದೂರಬೇಕು. ಈ ಬಿಕ್ಕಟ್ಟಿಗೆ ಪ್ರತಿಷ್ಠಿತ ದಲಿತ ಬರಹಗಾರರೇ ಮುಖ್ಯ ಹೊಣೆಗಾರರೆಂದು ನಾವು ಹೇಳಬಹುದಾಗಿದೆ.

ದಲಿತ ಚಳವಳಿಗೆ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ನಾಯಕತ್ವ ನೀಡುತ್ತೇವೆಂದು ಪ್ರತಿಪಾದಿಸಿದ ಭರವಸೆಯನ್ನು ಉಳಿಸಿಕೊಳ್ಳಲು ಇವರಿಗೆ ಸಾಧ್ಯವಾಗಲಿಲ್ಲ.

ಇದಕ್ಕೆ ಮುಖ್ಯ ಕಾರಣವೇನೆಂದರೆ, ಮಹಾರಾಷ್ಟ್ರದೊಳಗಿನ ದಲಿತ ಸಾಹಿತ್ಯ ಪ್ರಕ್ರಿಯೆಯ ಮೇಲೆ ಸಾಂಸ್ಕೃತಿಕ ಶ್ರೇಣೀಕರಣವೊಂದರ ಮುಖಾಂತರ ಸಾಮಾಜಿಕ ನಿಯಂತ್ರಣವೊಂದು ಇಂದು ಚಾಲ್ತಿಯಲ್ಲಿರುವುದಕ್ಕೆ ಈ ಬಗೆಯ ಬರಹಗಾರರೇ ಕಾರಣಕರ್ತರಾಗಿದ್ದಾರೆ.

ಅತ್ಯಂತ ಅಮೂರ್ತವಾದ ಸಾಹಿತ್ಯ ಪ್ರಕಾರಗಳನ್ನು ಅಳವಡಿಸಿಕೊಳ್ಳುವ ಮುಖಾಂತರ ಆ ಬಗೆಯ ಪ್ರಕಾರಗಳಲ್ಲಿ ಸಾಕಷ್ಟು ತರಬೇತಿ ಇಲ್ಲದ ದಲಿತ ಜನ ಸಮೂಹಗಳನ್ನು ಅದರೊಳಕ್ಕೆ ಪ್ರವೇಶಿಸಲು ಅನರ್ಹರನ್ನಾಗಿಸಿದವರು ಇವರೇ. ಅದು ಅಭಿರುಚಿಯ ದೃಷ್ಟಿಯಿಂದ ಎಷ್ಟೇ ಉನ್ನತವಾದುದಾಗಿದ್ದಾಗಲೂ ಅಂತಹ ಅಮೂರ್ತ ಭಾಷೆಯನ್ನು ಅರ್ಥ ಮಾಡಿಕೊಳ್ಳುವುದು ದಲಿತರ ಸಾಂಸ್ಕೃತಿಕ ಹಿನ್ನೆಲೆಗೆ ಕಷ್ಟಕರವಾದುದಾಗಿದೆ.



ನಾರಾಯಣ ಗುರು

ಈ ಅಭಿಪ್ರಾಯಗಳನ್ನು ನಾನು ಮಂಡಿಸುವ ಮುಖಾಂತರ ಕರ್ನಾಟಕದ ದಲಿತ ಸಾಂಸ್ಕೃತಿಕ ಚಳವಳಿಯೂ ಇದೇ ಬಗೆಯ ಕಾರಣಗಳಿಂದ ಬಿಕ್ಕಟ್ಟಿಗೆ ಗುರಿಯಾಗಿದೆ ಎಂದು ಸಾಧಿಸಲು ಪ್ರಯತ್ನಿಸುತ್ತಿಲ್ಲ. ಅಲ್ಲಿಗೂ ಇಲ್ಲಿಗೂ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಸಾಕಷ್ಟು ಅಂತರಗಳಿರಬಹುದು. ಆದರೆ ಕೆಲವಾದರೂ ಸಾಮ್ಯತೆಗಳನ್ನು ಗುರುತಿಸಿಕೊಳ್ಳ ಬಲ್ಲೆವಾದರೆ ಅದು ಆತ್ಮಾವಲೋಕನಕ್ಕೆ ನೆರವಾಗುತ್ತದೆ. ಮಹಾರಾಷ್ಟ್ರದವರನ್ನು ನಾನು ದಲಿತ ಚಳವಳಿಯ ಕೆಲವು ವಿಷಯಗಳಲ್ಲಿ ಹಿರೀಕರು ಎಂದೆ. 'ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ' ಎಂಬ ನಾಣ್ಣುಡಿಯಂತೆ ನಮ್ಮನ್ನು ಆ ಬಗೆಯ ರೋಗಾಣುಗಳು ಕಾಡದಿರುವಂತೆ ಮಾಡಿಕೊಂಡು ಮುಂದಿನ ಹಾದಿಯ ಬಗ್ಗೆ ಖಚಿತಗೊಳ್ಳಬೇಕಾಗಿರುವುದು ಇವೊತ್ತಿನ ನಮ್ಮ ಸಂದರ್ಭದ ಅವಶ್ಯಕತೆಯಾಗಿದೆ.

ಹಾಗೆ ನೋಡಿದರೆ, ದಲಿತ ಆತ್ಮಕಥೆಗಳು ಜನಪ್ರಿಯ ದಲಿತ ಬದುಕನ್ನು ಅದರ ಎಲ್ಲಾ ಶ್ರೀಮಂತಿಕೆಯೊಂದಿಗೆ ಹಾಗೂ ನಿರ್ದಿಷ್ಟತೆಯೊಂದಿಗೆ ಕಡೆದಿಡುವ ಮೂಲಕ, ದಲಿತ ಗತಕಾಲದ ಜೊತೆಗೆ ಒಂದು ಮಾನವೀಯ ಸಾಂಸ್ಕೃತಿಕ ಸಾತತ್ಯವನ್ನು ಏರ್ಪಡಿಸಿಕೊಂಡಿವೆ. ಹಾಗಿದ್ದಾಗಲೂ ಪ್ರಧಾನವಾಗಿ ಮೌಖಿಕ ಪರಂಪರೆಯಲ್ಲಿರುವ ವಿಶಾಲ ದಲಿತ ಜನಸಮೂಹಗಳಿಗೆ ಅವು ಕೂಡ ತಲುಪಲಿಲ್ಲ.

ದಲಿತ ಬೀದಿ ಬರಹಗಾರರು ಈ ಸಾಹಿತ್ಯ ಕೃತಿಗಳೊಳಗಿನ ಸಾಮಾಜಿಕ ಸಂದೇಶವನ್ನು ಓದಿಕೊಂಡು ಅದನ್ನು ಸರಳವಾದ ಭಾಷೆ ಹಾಗೂ ಸಾಹಿತ್ಯ ಶೈಲಿಯ ಮುಖಾಂತರ ಜನರಿಗೆ ತಲುಪಿಸಬಲ್ಲ ಸಾಮರ್ಥ್ಯ ಹೊಂದಿದವರಾಗಿದ್ದರು. ಆದರೆ, ಅವರೂ ಕೂಡ ಲಿಖಿತ ದಲಿತ ಸಾಹಿತ್ಯದಿಂದ ಸಾಕಷ್ಟು ನಿರಾಶೆ ಎದುರಿಸುತ್ತಿದ್ದಾರೆ. ಯಾಕೆಂದರೆ ಪ್ರತಿಷ್ಠಿತ ದಲಿತ ಬರಹಗಾರರು ತೀವ್ರತರವಾದ ಬೌದ್ಧಿಕ ಸ್ಥಗಿತತೆಗೆ ಗುರಿಯಾಗಿದ್ದು ಬೌದ್ಧಿಕತೆಯ ತೀವ್ರ ಹಸಿವೆಯಲ್ಲಿರುವ ದಲಿತ ಜನಸಮೂಹಗಳ ಮುಖಕ್ಕೆ ಮತ್ತೆ ಮತ್ತೆ ಅದೇ ಪುನರಾವರ್ತಿತ ಸರಕನ್ನು 'ಪ್ರಾದ್ಯುಯ್ ಸೂರ್ಯ' ಅಥವಾ 'ಕ್ರಾಂತಿ ಸೂರ್ಯ' ಎಂಬಂತಹ ಹೊಸ ಹೆಸರುಗಳೊಂದಿಗೆ ಎಸೆಯುತ್ತಿದ್ದಾರೆ.

ದಲಿತ ಸಮುದಾಯದ ನಡುವೆ ತಮ್ಮ ಸಾಮಾಜಿಕ ನಿಯಂತ್ರಣ ಹಾಗೂ ಪ್ರತಿಷ್ಠೆಯನ್ನು ಕಾಪಾಡಿಕೊಳ್ಳಲಿಕ್ಕಾಗಿ ಪ್ರತಿಷ್ಠಿತ ದಲಿತ ಬರಹಗಾರರು 'ವ್ಯಾಖ್ಯಾನಾತ್ಮಕ ಅಧಿಪತ್ಯ' ಎಂಬ ಮತ್ತೊಂದು ತಂತ್ರವನ್ನು ಬಳಸುತ್ತಿದ್ದಾರೆ. ಅದೇನೆಂದರೆ, ಪ್ರತಿ ದಲಿತ ಲೇಖಕನೂ ತಮ್ಮದೇ ಖಾಸಗಿ ಸಾಹಿತ್ಯ ಕೂಟವೊಂದನ್ನು ಏರ್ಪಡಿಸಿಕೊಂಡಿದ್ದು, ತಮ್ಮ ತಮ್ಮ ಸಾಹಿತ್ಯ ರಚನೆಗಳ ಗುಣಮಟ್ಟ ಏನೇ ಆಗಿದ್ದಾಗಲೂ ಪರಸ್ಪರ ಹೊಗಳಿಕೊಳ್ಳುವ ಏರ್ಪಾಡು ಮಾಡಿಕೊಂಡಿದ್ದಾರೆ. ಒಂದು ಸಣ್ಣ ಗುಂಪಿನ ನಿಯಂತ್ರಣಕ್ಕೆ ಈ ಅಘೋಷಿತ ಸಾಹಿತ್ಯ ಕೂಟವು ಒಳಪಟ್ಟಿರುತ್ತದೆ. ಅದರ ಆಗಮನ ಮತ್ತು ನಿರ್ಗಮನ ನೀತಿನಿಯಮಾವಳಿಯನ್ನು ಆ ಸಣ್ಣ ಗುಂಪೇ ನಿರೂಪಿಸುತ್ತದೆ.

ಈ ಸಣ್ಣ ಗುಂಪು ಕೆಲವೊಮ್ಮೆ ದಲಿತ ಬೀದಿ ಬರಹಗಾರರಿಗೂ ಕೆಲವು ಅವಕಾಶ ಕಲ್ಪಿಸಿ, ಅವರ ಕೆಲವು ಕೃತಿಗಳನ್ನು ಪ್ರಕಟಿಸಿ, ತಮ್ಮ ನಿಯತಕಾಲಿಕೆಗಳಲ್ಲಿ ಅವರ ಕವಿತೆಗಳನ್ನು ಪ್ರಕಟಿಸಿ ಅಥವಾ ಅವರನ್ನು ವಾರ್ಷಿಕ ಸಾಹಿತ್ಯ ಸಮಾವೇಶಕ್ಕೆ ಆಹ್ವಾನಿಸಿ, ತಮ್ಮ ಗುಂಪುಗಾರಿಕೆಯ ಚಟುವಟಿಕೆಗೆ ಒಂದು ಸಾರ್ವಜನಿಕ ಮುಖ ಬರುವಂತೆ ಮಾಡಬಲ್ಲಷ್ಟು ಚಾಣಾಕ್ಷತೆ ಹೊಂದಿರುತ್ತದೆ.

ಈ ಬಗೆಯಲ್ಲಿ ಒಳಪ್ರವೇಶ ಪಡೆದ ಹೊಸಬರು ಈ ವಲಯದ ನಿರೀಕ್ಷೆ ಹಾಗೂ ನೀತಿಗನುಸಾರವಾಗಿ ಬರೆದು ಅವರ ಅಭಿರುಚಿ, ಅಪೇಕ್ಷೆಗಳು ಈಡೇರುವಂತೆ ನೋಡಿಕೊಳ್ಳುವ ಕರ್ತವ್ಯಕ್ಕೆ ಗುರಿಯಾಗುತ್ತಾರೆ. ತನ್ನ ಸಾಹಿತ್ಯ ಪ್ರತಿಭೆಯ ಚೈತನ್ಯವನ್ನು ಆ ಹೊಸಬನೆಂಬುವವನು ದಲಿತ ಸಾಹಿತ್ಯ ಕ್ಷೇತ್ರದ ಈ ಗುಣಮಟ್ಟ ನಿಯಂತ್ರಕರು ಮಾನ್ಯ ಮಾಡುವ ರೀತಿಯಲ್ಲಿ ತಿದ್ದಿ ತೀಡಿಕೊಳ್ಳಬೇಕಾಗುತ್ತದೆ.

ದಲಿತ ಸಾಹಿತ್ಯ ಕ್ಷೇತ್ರದ ಸಂರಚನೆಯಲ್ಲಿ ಅಧಿಕಾರ ಹಾಗೂ ಪ್ರತಿಷ್ಠೆಗಳನ್ನು ಹೊಂದಿರುವ ಇಂತಹವರ ಕಡೆಗೆ ಸಾಹಿತ್ಯಕ ಮನ್ನಣೆ ಪಡೆಯಬಯಸುವ ಬೀದಿ ಬರಹಗಾರ ಸಾಮಾನ್ಯವಾಗಿ ಆಕರ್ಷಿತನಾಗುತ್ತಾನೆ. ಈ ದೌರ್ಬಲ್ಯವನ್ನು ಬಳಸಿಕೊಂಡು ದಲಿತ ಸಾಹಿತ್ಯದ ಕೋಟೆಗಳು ತಮ್ಮ ನಿಯಮಾವಳಿಯನ್ನು ಅವನ ಮೇಲೆ ಹೇರುತ್ತವೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ಯುವ ದಲಿತ ಬರಹಗಾರರ ಮೇಲೆ ತಮ್ಮ ಸಾಹಿತ್ಯಕ ಪಾಳೇಪಟ್ಟಿನ ಮಾನದಂಡಗಳನ್ನು ಇವು ಹೇರುತ್ತವೆ. ಅದರ ಪರಿಣಾಮವಾಗಿ ಈ ಹೊಸ ಬರಹಗಾರ ಅಥವಾ ಸಾಂಸ್ಕೃತಿಕ ಕಾರ್ಯಕರ್ತ ಈ ಸಾಂಸ್ಕೃತಿಕ 'ಝೂರ್' ಗಳ ಸಾಹಿತ್ಯಾಸ್ಥಾನಕ್ಕೆ ಸಮ್ಮತವಾಗುವ ರೀತಿಯಲ್ಲಿ ತನ್ನ ಸಾಹಿತ್ಯಕ ಪ್ರತಿಭೆಯನ್ನು 'ರಿಪೇರಿ' ಮಾಡಿಕೊಳ್ಳಬೇಕಾಗುತ್ತದೆ.

ದಲಿತ ನಿರ್ಲಕ್ಷಿತ ಸಮೂಹಗಳ ಪರವಾಗಿ ದನಿಯೆತ್ತಿದ ಹೊಸಪ್ರತಿಭೆಯೊಂದು ಬ್ರಾಹ್ಮಣಶಾಹಿ ವಿಧಿಸುವ ಸಾಮಾಜಿಕ ನಿಯಂತ್ರಣವನ್ನು ಹೋಲುವ ಮತ್ತೊಂದು ಶ್ರೇಣೀಕರಣ ಮಾನದಂಡಕ್ಕೆ ತಲೆಬಾಗುವಂತೆ ಈ ಸಾಂಸ್ಕೃತಿಕ 'ಝೂರ್'ಗಳು ಒಂದು ರೀತಿಯಲ್ಲಿ ಪರೋಕ್ಷ ಒತ್ತಡಗಳನ್ನು ನಿರ್ಮಿಸುತ್ತಿದ್ದಾರೆ.

* * *

ಮಹಾರಾಷ್ಟ್ರದ ದಲಿತ ಸಂಸ್ಕೃತಿ ಚಿಂತಕರಲ್ಲಿ ಖ್ಯಾತರಾಗಿರುವ ಗೋಪಾಲ ಗುರು ತಮ್ಮ 'ದಲಿತ್ ಕಲ್ಚರಲ್ ಮೂವ್‌ಮೆಂಟ್ ಅಂಡ್ ಡೈಯಲೆಕ್ಟ್ಸ್ ಆಫ್ ದಲಿತ್ ಪಾಲಿಟಿಕ್ಸ್ ಇನ್ ಮಹಾರಾಷ್ಟ್ರ' ಎಂಬ ಕೃತಿಯಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳ ಸ್ಥೂಲ ಸಾರಾಂಶವಿದು.

ಈ ಅಭಿಪ್ರಾಯಗಳನ್ನು ನಾನು ಮಂಡಿಸುವ ಮುಖಾಂತರ ಕರ್ನಾಟಕದ ದಲಿತ ಸಾಂಸ್ಕೃತಿಕ ಚಳವಳಿಯೂ ಇದೇ ಬಗೆಯ ಕಾರಣಗಳಿಂದ ಬಿಕ್ಕಟ್ಟಿಗೆ ಗುರಿಯಾಗಿದೆ ಎಂದು ಸಾಧಿಸಲು ಪ್ರಯತ್ನಿಸುತ್ತಿಲ್ಲ. ಅಲ್ಲಿಗೂ ಇಲ್ಲಿಗೂ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಸಾಕಷ್ಟು ಅಂತರಗಳಿರಬಹುದು. ಆದರೆ ಕೆಲವಾದರೂ ಸಾಮ್ಯತೆಗಳನ್ನು ಗುರುತಿಸಿಕೊಳ್ಳ ಬಲ್ಲೆವಾದರೆ ಅದು ಆತ್ಮಾವಲೋಕನಕ್ಕೆ ನೆರವಾಗುತ್ತದೆ.

ಮಹಾರಾಷ್ಟ್ರದವರನ್ನು ನಾನು ದಲಿತ ಚಳವಳಿಯ ಕೆಲವು ವಿಷಯಗಳಲ್ಲಿ ಹಿರೀಕರು ಎಂದೆ. 'ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ' ಎಂಬ ನಾಣ್ಣುಡಿಯಂತೆ ನಮ್ಮನ್ನು ಆ ಬಗೆಯ ರೋಗಾಣುಗಳು ಕಾಡದಿರುವಂತೆ ಮಾಡಿಕೊಂಡು ಮುಂದಿನ ಹಾದಿಯ ಬಗ್ಗೆ ಖಚಿತಗೊಳ್ಳಬೇಕಾಗಿರುವುದು ಇವೊತ್ತಿನ ನಮ್ಮ ಸಂದರ್ಭದ ಅವಶ್ಯಕತೆಯಾಗಿದೆ. ❑

ಕಥೆ

ರಶೀದ ಮಗಳ ಮದುವೆಗೆ ಹೋಗಲಿಲ್ಲ...!



ರಶೀದ್‌ಖಾನ್ ನಡುಮದ್ಯಾಹ್ನದ ಬಿಸಿಲಲ್ಲಿ ನಡೆದುಬಂದು ಪಡಸಾಲೆಯ ಕತ್ತಲೆಗೆ ಕಣ್ಣು ಹೊಂದಿಸಿಕೊಳ್ಳುತ್ತಾ ಆರಾಮ ಕುರ್ಚಿ ಹುಡುಕಿ ಕುಳಿತುಕೊಂಡರು. ''ಸುನೇs..'' ಎಂಬ ಅವರ ಇಶಾರೆ ಕೇಳಿಸಿಕೊಂಡು ಫಾತಿಮಾ ಒಳಮನೆಯಿಂದ ಬರುವ ಹೊತ್ತಿಗೆ ನಡುಮನೆಯ ಬೆಳಕಿಗೆ ಹೊಂದಿಕೊಂಡ ಕಣ್ಣಿಗೆ ಅಲ್ಲೇ ಮೇಜಿನ ಮೇಲಿದ್ದ ಮದುವೆಯ ಆಹ್ವಾನ ಪತ್ರಿಕೆ ಗೋಚರಿಸಿತು. ಅಲ್ಲಾಹುವಿನ ಕೃಪಾದಿಂದಾಗಿ ಎಂದು ನಮೂದಿಸಿಕೊಂಡು ತಮ್ಮ ಮನೆಗೆ ಬರುವ ಹಲವಾರು

○ ಆನಂದ್ ಋಗ್ವೇದಿ

ಆಹ್ವಾನ ಪತ್ರಿಕೆಯಂತಲ್ಲದ ಈ ಪತ್ರಿಕೆ ನಾಲ್ಕೂ ಮೂಲೆಗೆ ಎಣ್ಣೆಕುಂಕುಮ ಹಚ್ಚಿಕೊಂಡದ್ದು ತಟ್ಟನೇ ಗಮನ ಸೆಳೆಯಿತು. ಕೈಗೆತ್ತಿಕೊಂಡು ಕನ್ನಡಕಕ್ಕಾಗಿ ಹುಡುಕಿದರು ರಶೀದ್ ಖಾನ್.

''ನಮ್ಮ ಆಯೇಶಾದ್ದು ಮದುವೆ. ಜಯಂತಣ್ಣ ಕಾರ್ಡ್ ಕಳಿಸಿದಾರೆ. ಬೆಳಗ್ಗೆ ರೇಣುಕಾ ಬೀದಿ ಫೋನ್ ಮಾಡಿದ್ರು. ಕರೆಯೋದಕ್ಕೆ ಬರಲಿಕ್ಕಾಗಿಲ್ಲ ರಶೀದ ತಪ್ಪು ತಿಳಿಯೋದು ಬೇಡ. ಮದುವೆಗೆ ನಾಲ್ಕು ದಿನ ಜಲ್ದಿ ಬರ್ರಿ ಅಂತ'' ರಶೀದ್ ಓದುವ ಮೊದಲೇ ಫಾತಿಮಾ ಒಳಗಿನಿಂದ ಬಂದವಳು ವರದಿ ಹೇಳಿದ್ದಳು. ಒಂದು ಕ್ಷಣ ರಶೀದ್ ಮುಖದಲ್ಲಿ ಮಿಂಚೊಂದು ಸುಳಿದುಹೋಯ್ತು.. ತಟ್ಟನೇ ದುಗುಡವೊಂದು ಒಂದು ಮುಖದಲ್ಲಿ ಕೂತುಕೊಂಡಿತು. ರಶೀದ್ ಕಣ್ಣು ಕಿರಿದುಗೊಳಿಸಿ ಕನ್ನಡಕದೊಳಗಿಂದ ದೃಷ್ಟಿ ತೂರಿ ಓದತೊಡಗಿದರು..

'... ಕಾರ್ತಿಕದ ಶುದ್ಧ ಸಪ್ತಮಿಯಂದು ಶ್ರೀಮತಿ ಮತ್ತು ಶ್ರೀ ಜಯಂತರವರ ಮಗಳು ಯಶಸ್ವಿನಿ ಹಾಗೂ ಶ್ರೀಮತಿ ಶ್ರೀ ರಾಮಸ್ವಾಮಿ ಇವರ ಸುಪುತ್ರ ದಿವಾಕರ ಇವರ ವಿವಾಹವನ್ನು...'

ಕಾರ್ಡ್ ಕೆಳಗಿರಿಸಿ ರಶೀದ್ ಹೆಂಡತಿಯ ಮುಖ ನೋಡಿದರು. ಆಕೆಯ ಮುಖದಲ್ಲಿ ಇನ್ನೂ ಅದೇ ಸಂಭ್ರಮ ತೇಲುತ್ತಿತ್ತು. ರಶೀದ್ ಮಾತ್ರ ಒಂದು ಕ್ಷಣ ನಿಟ್ಟುಸಿರಿಟ್ಟು. 'ಅಂತೂ ಜಯಂತ ಮಗಳ ಮದುವೆ ಎಬ್ಬಿಸಿಬಿಟ್ಟ' ಎಂದರು.

ಈ ಮಾತಿ ಗಾಗಿಯೇ ಕಾದುಕೊಂಡಿದ್ದಂತೆ ಫಾತಿಮಾ..

'ಎಲ್ಲಾ ಆ ಅಲ್ಲಾಹ್ ದಯಾ.. ಅಲ್ರೀ ನಮ್ ಆಯಿಶಾ ಇಷ್ಟು ಬೇಗ ದೊಡ್ಡಾಕಿ ಆಗಿಬಿಡ್ತಾಳ ಅಂತನಾ ಅನ್ನಿಸಿರ್ಲಿಲ್ಲ, ಅಜೀಬ್ ಅನ್ನಿಸ್ತದ ಅಲ್ಲ.. ಇನ್ನೂ ಮೊನ್ನೆ ಮೊನ್ನೆ ನಮ್ ತೊಡೀಮ್ಯಾಲೆ ಸೂಸೂ ಮಾಡ್ತಿದ್ದ ಕೂಸು ಇಷ್ಟು ಜಲ್ದಿ ಶಾದಿ ಆಗ್ತದಾಳ ಅಂತಂದ್ರ, ನಂಬಲಿಕ್ಕೇ ಆಗುವಲ್ಲು ನಾವೂ ಜರಾಜಲ್ದೀನೇ ಮದುವಿಗೆ ಹೋಗೋಣ ರೀ...

ಫಾತಿಮಾಳ ಮಾತಿನಲ್ಲಿ ಸಡಗರ ಸಂಭ್ರಮಿಸುತ್ತಿತ್ತು. ಆಕೆ ಕಣ್ಣರಳಿಸಿಕೊಂಡು ಪ್ರಶ್ನೆ ಕೇಳಿದರೆ ರಶೀದ್ ಮಾತ್ರ ಸುಮ್ಮನೇ ಹೂಂ ಗುಟ್ಟಿದರು.

'.... ಜಯಂತ ನನಗೊಂದು ಮಾತು ಹೇಳಬೇಕಿತ್ತು. ಆತ ಯಶಸ್ವಿನಿಗೆ ಮದುವೆ ಮಾಡ್ತಿದ್ದೀನಿ ಅಂತ ಒಂದ್ಸಲಾನೂ ಬಾಯಿಬಿಟ್ಟು ಹೇಳಿದ್ದಿಲ್ಲ. ಯಾವಾಗಲಾದ್ರೂ ಕೇಳಿದ್ರೆ ..ಇನ್ನೇನು ಅವಸರ ಮಾರಾಯ, ಇರೋಳು ಒಬ್ಳು, ಸ್ವಲ್ಪದಿನಾ ಮನೇಲೇ ಇರ್ಲಿ ಬಿಡು. ಈಗ ಬಿ.ಬಿ.ಎಂ. ಮಾಡ್ತದಾಳ, ಮುಂದೆ ಎಂ.ಬಿ.ಎ ಮಾಡ್ಬೇಕಂತ. ಮಾಡ್ಲಿ ತಗಾ.. ಆಮ್ಯಾಲೆ ನಾವಿಬ್ರೂ ಸೇರಿ ಛಂದದ ಹುಡುಗನ್ನ ಹುಡುಕಿದರೆ ಆಯಿತಿಲ್ಲೋ ಎಂದು ತೇಲಿಸಿಬಿಡುತ್ತಿದ್ದ. ಆದ್ರೆ ಈಗ ದಿಢೀರೆಂದು ಯಾವ ಸುದ್ದಿಯೂ ಇಲ್ಲದೇ ಸೀದಾ ಪತ್ರ ಕಳಿಸಿದಾನೆ. ಏನು ಆಯಿಶಾ ಆತನೊಬ್ಬನ ಮಗಳಾ ?..'' ರಶೀದ್ ನಿಸೂರಾಗಿ ಛಾವಣಿ ದಿಟ್ಟಿಸುತ್ತಾ ಯೋಚಿಸತೊಡಗಿದರು.

ಇಂತಹುದೊಂದು ಬೇಸರ ರಶೀದ್‌ರ ಮುಖದಲ್ಲಿ ಕಂಡು ಫಾತಿಮಾಗೆ ನಿಜಕ್ಕೂ ಬೇಸರವೇ ಆಯ್ತು. ಆಕೆ ಸಡಗರದಿಂದ ತನ್ನ ಬಟ್ಟೆಬರೆ ಜೋಡಿಸುತ್ತಾ ರಶೀದ್‌ರ ಕಿವಿಗೆ ಕೇಳುವಂತೆ ಈ ವಸ್ತ್ರಛಲೋ ಇರ್ತದ, ಈ ಸರಾ ಇಟ್ಕೋಳ್ಳೋಣು ಎಂದೆಲ್ಲಾ ಪ್ರಶ್ನಿಸಿಕೊಳ್ಳುತ್ತಿದ್ದವಳು ತಟ್ಟನೇ ಕೈಕಟ್ಟಿದವಳಂತಾದಳು. ಆ ಇಬ್ಬರೂ ದಂಪತಿಗಳು ಬೇರೆಯದೇ ಆಹ್ವಾನಕ್ಕಾಗಿ, ಕರೆಗಾಗಿ ಕಾಯುತ್ತಿರುವವರಂತೆ, ಕಾತರಿಸುತ್ತಿರುವಂತೆ ಇರುವಾಗಲೇ ರಾತ್ರಿಗಳು ಕಳೆದು ಹಗಲು ಉರುಳಿ ಹೋದವು.

ಮೊದಲು ಹೀಗಿರಲಿಲ್ಲ, ರಶೀದ್ ಒಂದರೆಕ್ಷಣ ಬೇಸರವಾದರೆ ಜಯಂತನಿಗೆ ಅದು ಗೊತ್ತಾಗಿಬಿಡೋದು.

ರಶೀದ್ ಓದುವ ಮೊದಲೇ ಫಾತಿಮಾ ಒಳಗಿನಿಂದ ಬಂದವಳು ವರದಿ ಹೇಳಿದ್ದಳು. ಒಂದು ಕ್ಷಣ ರಶೀದ್ ಮುಖದಲ್ಲಿ ಮಿಂಚೊಂದು ಸುಳಿದುಹೋಯ್ತು.. ತಟ್ಟನೇ ದುಗುಡವೊಂದು ಒಂದು ಮುಖದಲ್ಲಿ ಕೂತುಕೊಂಡಿತು. ರಶೀದ್ ಕಣ್ಣು ಕಿರಿದುಗೊಳಿಸಿ ಕನ್ನಡಕದೊಳಗಿಂದ ದೃಷ್ಟಿ ತೂರಿ ಓದತೊಡಗಿದರು..

ರಶೀದ ಗೋಲಿಯಲ್ಲಿ ಸೋತಾಗ, ಆತನ ಬುಗುರಿಗೆ ಗೆಳೆಯರೆಲ್ಲಾ ಸೇರಿ ಪಿಟ್ಟು ಹೊಡೆದು ಚಚ್ಚಿದಾಗ, ಆತನ ಪ್ರೀತಿಯ ಅಜ್ಜಿ ತೀರಿಹೋದಾಗ ಜಯಂತ ಧಾವಿಸಿ ಬಂದುಬಿಡುತ್ತಿದ್ದ. ರಶೀದನ ಮುಖದಲ್ಲಿ ಬೇಸರವೊಂದು ಸುಳಿದಾಡಿದರೆ, ನಿರಾಸೆ ಚಾಪೆ ಹಾಸಿ ಕೂತರೆ, ಹತಾಶೆ ಕಣ್ಣಲ್ಲಿ ಇಣುಕಿದರೆ ಜಯಂತನಿಗೆ ತಳಮಳ.

'ಅದೇನು ಆಗ್ಯಾದೆ ಅಂತ ಹೀಗೆ ತಲೀಮ್ಯಾಲೆ ಕೈಹೊತ್ತು ಕೂತೀಯಲೇ ? ಏನು, ನಾನಿಲ್ಲೇನು? ಗೋಲಿ ಸೋತ್ರೆ ಏನು ರಾಜ್ಯ ಸೋತಂಗಾತ ? ಒಂದ್ಸಲ ಸೋತ್ರೆ ಮತ್ತೊಂದ್ಸಲ ಗೆದ್ದೇ ಗೆಲ್ತೀವಪ್ಪ. ಅದಕ್ಕ ಹಿಂಗ ನಿಸೂರಾಗಿ ಕೂತ್ರ ಏನನ್ನಬೇಕು?' ಎಂದು ಜಯಂತ ಗದರಿಕೆಯ ದನಿಯಲ್ಲಿ ಬೆನ್ನ ಸವರಿ ಮಾತಾಡಿದನೆಂದರೆ, ರಶೀದ ಮತ್ತೆ ಚಿಗರೆಯಂತೆ ಚಿಗಿತು ಬಿಡುತ್ತಿದ್ದ. ರಶೀದನೆಂದರೆ ಜಯಂತನ ಅಮ್ಮನಿಗೂ ಇಮ್ಮಡಿ ಅಕ್ಕರೆ. ತಾಯಿ ಇಲ್ಲದ ಈ ಕೂಸು ಒಂಥರಾ ತನ್ನ ಪ್ರೀತಿಗಾಗಿಯೇ ಕಾದು ನಿಂತಂತೆ ಕಂಡು ಅವರು ಅಕ್ಕರೆಯನ್ನ ಸುರಿಸಿಬಿಡುತ್ತಿದ್ದರು. ರಶೀದ್‌ನ ಅಪ್ಪ ಮುಜೀಬ್ ಈ ನೆರೆಮನೆಯ ತೊಡೆಯಲ್ಲಿ ಮಗನನ್ನ ಇಟ್ಟು ತನ್ನ ಪಾಡಿಗೆ ತಾನು ಖಾಲಿಚೀಲ ವ್ಯಾಪಾರಕ್ಕೆ ಹೋಗಿ ಬಿಡುತ್ತಿದ್ದ.

ರಶೀದನ ಅಜ್ಜಿ ಮೊಮ್ಮಗನಿಗೆ ತಿನ್ನಲು ಒಂಚೂರು ಬೇಯಿಸಿ ತನ್ನ ನಮಾಜು, ನೇಮಗಳ ನಡುವೆ ಮೊಮ್ಮಗನ್ನ ಕೂರಿಸಿಕೊಂಡು ಕುರಾನ್ ಓದಿಸುತ್ತಿದ್ದಳು. ಈತ ಕುರಾನ್ ಓದುವಷ್ಟು ಹೊತ್ತು ಜಗಲಿಯಲ್ಲಿ ಕಾಯುತ್ತಾ – ಕಾಲುಸುಟ್ಟ ಬೆಕ್ಕಿನ ಚಡಪಡಿಕೆಯಲ್ಲಿ – ಜಯಂತ ಕೂತಿರುತ್ತಿದ್ದ.. ರಶೀದನ ಅಜ್ಜಿಗ 'ಈ ರಶೀದ್ ಕಾಫಿರ್ ಮಂದೀ ಜೊತೆ ಬೆರ್ತು ನಮ್ ರಿವಾಜನ್ನ ಎಲ್ಲಿ ಕಲಿಯೋದಿಲ್ಲವೋ' ಅಂತ ಆತಂಕ ಬಂದು ಮಗನ ಬಳಿ 'ರಶೀದನ್ನ ಮದ್ರಸಾಕ್ಕ ಕಳಿಸಬಾರ್ದ?..' ಎಂದು ತಾಕೀತ್ ಮಾಡುತ್ತಿದ್ದಳು. ಮುಜೀಬ ಅಮ್ಮನ ಮಾತು ಕೇಳಿ.. 'ಉಮ್ಮ.. ಆ ಮದ್ರಸದಾಗ ಕಲ್ತು ಈತನೇನು ಉಲೇಮಾ ಆಗಬೇಕ್ಯಾಗದೇನು? ಕನ್ನಡ ಶಾಲಿಯೊಳಗ ನಾಕಕ್ಷರ ಕಲಿತ್ರ ನಾಳೆ ನನ್ನ ಲೆಕ್ಕಪತ್ರ ನೋಡಕ್ಕಾರ ಬರ್ತದ. ರಿವಾಜಿಗೇನು ನೀನು ಕುರಾನ್ ಕಲಿಸ್ತಿದ್ದೀಯಲ್ಲ. ಅವ ನನ್ನ ಜೋಡಿ ನಮಾಜಕ್ಕ ಬರ್ತಾನ... ಸಾಕು ಬಿಡು'

ರಶೀದನ ಅಜ್ಜಿ ಮಗನ ಮಾತಿಗೆ ಸಿಡಿಮಿಡಿ ಮಾಡುತ್ತಾ 'ಈ ಮೊಮ್ಮಗನನ್ನ ಕಾಪಾಡು ರಹ್ಮಾನ್..' ಅಂತ ಆ ಪರಮದಯಾಮಯ ದೇವರಲ್ಲಿ ಬೇಡಿಕೆ ಇಡುತ್ತಿದ್ದಳು. ಆಕೆಗೆ ತನ್ನ ಮೊಮ್ಮಗ ಫಾಸಿಕ್ ಆಗದೇ ಮುತ್ತಕೀ ಆಗಲಿ ಎಂಬ ಆಸೆ ಫಲಿಸುವವರೆಗೆ ನೋಡಲು ಆಯುಸ್ಸೇ ಇರಲಿಲ್ಲ. ಅಜ್ಜಿ ತೀರಿಹೋದ ದಿನ ರಶೀದನಿಗೆ ಅಳುವುದೂ ಆಗದಂತ ದುಃಖ,–ಎದೆಯಲ್ಲಿ ಹೆಪ್ಪುಗಟ್ಟಿಕೊಂಡು ಬಿಕ್ಕಳಿಸಿ ಬಿಟ್ಟಿದ್ದ. ಆ ಹೊತ್ತು ಆತನ ಕೈ ಹಿಡಿದದ್ದು ಜಯಂತ, ಮಡಿಲಾಗಿದ್ದು ಆತನ ಅಮ್ಮ.

ಜಯಂತ, ರಶೀದ ಕನ್ನಡ ಶಾಲೆಯಲ್ಲಿ ಕಲಿಯುವಾಗಲೇ ಇವರ ಬಾಜೂಕ್ಕ ಬಂದು ಮನೆಮಾಡಿದ್ದು ರೇಣುಕಾ. ಲಂಗ ಪೋಲಕ ಹಾಕಿಕೊಂಡು ನಿರಿಗೆ ಚಿಮ್ಮುತ್ತಾ ಓಡುತ್ತಾ ನಡೆಯುತ್ತಿದ್ದ ಈ ಪೋರಿ ಎಂದರೆ ಇವರಿಬ್ಬರಿಗೂ ಬೆರಗು. ಆಗಷ್ಟೇ ಏಳನೇ ಇಯತ್ತೆಯಲ್ಲಿದ್ದ ಇಬ್ಬರಿಗೂ ಆಕೆಯ ಸ್ನೇಹ ಮಾಡಿಕೊಳ್ಳೋ ಉಮೇದು ಬೇರೆ. ತಮ್ಮದೇ ಶಾಲೆಯಲ್ಲಿ ಆರನೇ ತರಗತಿ ಓದುವ ಆಕೆಯ ಮೇಲೆ ಗೆಳೆತನದ ಬಲೆ ಬೀಸಲು ಇಬ್ಬರೂ ತಂತ್ರ ಹೂಡುತ್ತಿದ್ದರು. ಇದೊಂದು ಸಮಸ್ಯೆ ಎಂದರೆ ಇವರಿಬ್ಬರಿಗೂ ಸಹಾಯ ಮಾಡೋ ತಂಗಿಯರಿಲ್ಲದ್ದು. ಆದರೂ ಅದೊಂದು ದಿನ ಶಾಲೆಯ ಉಪ್ಪಿಟ್ಟು ಹಾಕುವಾಗ ಧೈರ್ಯಮಾಡಿ ಮಾತಾಡಿಸಿದ್ದು ರಶೀದನೇ, ಸದಾ ನಗುವ, ಮೃದುವಾಗಿ ಮಾತಾಡುವ, ತಾನಾಗಿ ಮಾತಾಡಿಸಿದರೆ ನಾಚಿ ನೀರೊಡೆದು ಮುದುಡುವ ಜಯಂತನಿಗಿಂತ ಕೈಹಿಡಿದು ಧೈರ್ಯ ತುಂಬುವ, ಸದಾ ಬೆನ್ನಿಗೆ ಬರುವ ರಶೀದನೇ ಆಪ್ತನಾಗಿ ಬಿಟ್ಟ ರೇಣುಕಾಳಿಗೆ.

ಹಾಗೆಂದೇ ಆಕೆಯ ಮೇಲೆ ಅಧಿಕಾರವೊಂದು ಸಿಕ್ಕುಬಿಟ್ಟಿತ್ತು ರಶೀದನಿಗೆ. ಅವರು ಹೈಸ್ಕೂಲ್ ದಾಟಿ ಕಾಲೇಜಿಗೆ ಬಂದಾಗಲೂ ರಸ್ತೆಯಲ್ಲಿ ಯಾರಾದರೂ ಕೊಂಕು ಆಡಿದರೆ, ಆಕೆಗೆ ಕಣ್ಣು ಮಿಟುಕಿಸಿ ಕಿಚಾಯಿಸಿದರೆ ರಶೀದನ ಮುಷ್ಠಿ ಬಿಗಿದುಕೊಳ್ಳುತ್ತಿದ್ದವು.

'ನಮ್ ಲಿಂಗಾಯ್ತರ ಹುಡುಗಿಗೆ ಈ ಸಾಬಂದೇನು ದೇಖರಿಕೆ' ಎಂದೊಂದು ಕುಹಕದ ಮಾತು ಕೇಳಿದ್ದ ಸಂಜೆ ಮಾತ್ರ ರಶೀದ ಕುದ್ದು ಹೋಗಿದ್ದ. ಜಯಂತ ಎಷ್ಟು ಬೇಡ ಎಂದರೂ ಹೋಗಿ ಆ ಮಾತಾಡಿದ್ದ ಬಾಯಿಂದ ಒಂದೆರಡು ಹಲ್ಲು ಉದುರಿಸಿ ತಂದಿದ್ದ!



'ನಮ್ ಲಿಂಗಾಯ್ತರ ಹುಡುಗಿಗೆ ಈ ಸಾಬಂದೇನು ದೇಖರಿಕೆ' ಎಂದೊಂದು ಕುಹಕದ ಮಾತು ಕೇಳಿದ್ದ ಸಂಜೆ ಮಾತ್ರ ರಶೀದ ಕುದ್ದು ಹೋಗಿದ್ದ. ಜಯಂತ ಎಷ್ಟು ಬೇಡ ಎಂದರೂ ಹೋಗಿ ಆ ಮಾತಾಡಿದ್ದ ಬಾಯಿಂದ ಒಂದೆರಡು ಹಲ್ಲು ಉದುರಿಸಿ ತಂದಿದ್ದ! ರೇಣುಕಾ ಗಾಬರಿಯಾಗಿ 'ಹಂಗ್ಯಾಕೆ ಮಾಡಿದೆ ರಶೀದ?' ಅಂದಾಗ ಆತ ಅದೇ ಆವೇಗದಲ್ಲಿ ಹೇಳಿದ್ದ. 'ನಿನ್ನ ಲಿಂಗಾಯ್ತರೋಳು ಅಂತ ಗುರುತಿಸಿಕೊಂಡ ಅವ ನನ್ನ ಸಾಬ ಅಂತ ಪ್ರತ್ಯೇಕ ಮಾಡಿ ಮಾತಾಡಿದ್ದ. ಅದಕ್ಕ ನಾನು ಆತನ ಬಾಯಿಂದ ಈ ಹಲ್ಲು ಕಿತ್ಕೊಂಡು ಬಂದೆ' ರೇಣು, ಜಯಂತ ಮಾತಾಡಲೇ ಇಲ್ಲ.

ಬೆಳಗಿನಿಂದ ಸಂಜೆಯವರೆಗೆ ಅರಳೀಮರದ ಕೇರಿಯಿಂದ ಕಾಲೇಜಿಗೆ, ಸಂಜೆ ಲೈಬ್ರರಿಗೆ, ಕಾರ-ಮರಡಕ್ಕಿ ಹೋಟೆಲ್‌ಗೆ ಹೀಗೆ ಎಲ್ಲಿಗೆ ಸವಾರಿ ನಡೆದರೂ ಅವರು ಮೂವರೂ ಜೊತೆಯಲ್ಲೇ ಇರುತ್ತಿದ್ದರು. ರೇಣುಕಾಳಿಗೆ ಅವರಿಬ್ಬರೆಂದರೆ ಬೆಚ್ಚನೆಯ ರಕ್ಷೆ ಇದ್ದಂತೆ, ಅದರಲ್ಲೂ ರಶೀದನೆಂದರೆ ಶ್ರೀರಕ್ಷೆ. ಆತನಿಗೂ ಅವಳೆಂದರೆ ಅದೇನೋ ಮಮಕಾರ. ಜಯಂತನಿಗೆ ಮಾತ್ರ ಎಂತಹದೋ ಆವೇಗ. ತಡೆಯಲಾರ ಆದರೆ ರಶೀದನೆದುರು ಹೇಳಲಾರ! ಅವನ ಈ ತಳಮಳ, ಚಡಪಡಿಕೆ ರಶೀದನಿಗೆ ಅರ್ಥವಾಗದಂತಹದ್ದೇನೂ ಆಗಿರಲಿಲ್ಲ. ಚಿಕ್ಕಂದಿನಿಂದ ಬಲ್ಲ ಅವನಿಗೆ ಈ ತಳಮಳಗಳ ಕಾರಣದ ಬಗ್ಗೆಯೂ ಒಂದು ಊಹೆ ಇತ್ತು. ಒಂದು ಸಂಜೆ ರೇಣು ಬಂದಿಲ್ಲದ ಹೊತ್ತು ರಶೀದ ಕೆಣಕಿದ. 'ಯಾಕೋ ಜಯಂತ, ರೇಣು ಬಂದಿಲ್ಲ ಅಂತ ನೀನೂ ಮನಸನ್ನಾ ಆಕಿ ಹಿಂದಾ ಬಿಟ್ಟು ಹಿಂಗ ಜೋತಾಡಿಕೊಂಡು ಬರ್ತಿ. ಆಕಿ ನಮಗಿಂತ ಮುಂದಾನs ಲೈಬ್ರರಿಗೆ ಬರ್ತೀನಿ ಅಂದಾಳ.. ಬಾ..' ಅಂದಿದ್ದೇ ಜಯಂತನಲ್ಲಿ ಹೊಸ ಹುರುಪೊಂದು ಗರಿಗೆದರಿ ನಡಿಗೆಯಲ್ಲಿ ಬಿರುಸು ತುಂಬಿಕೊಂಡಿತ್ತು. ರಶೀದನ ಕಣ್ಣಲ್ಲಿ ಮಾತ್ರ ತುಂಟ ನಗುವೊಂದು ಅರಳಿತ್ತು.

ರಶೀದನದು ಮತ್ತೆ ರಾಯಭಾರದ ಕೆಲಸ. ಮೊದಲು ಜಯಂತನ ಪ್ರೇಮವನ್ನ ರೇಣುಕಾಗೆ ಒಯ್ದು ಮೆಚ್ಚಿಸಿದ್ದಾಯ್ತು. ಅದು ನಿರೀಕ್ಷಿತ ಎಂಬಂತೆ ಕೇಳಿ ಮುಂದೇನು ಎಂದು ಆಕೆ ರಶೀದನನ್ನೇ ನೋಡಿದಳು. ರಶೀದ ಸುಮ್ಮನೇ ಆಕೆಯ ತಲೆಸವರಿ 'ಒಪ್ಕೋ ಮಾರಾಯ್ತಿ, ನಮ್ಮ ಜಯಂತನಿಗಿಂತ ಛಂದದ ಗಂಡ ಬೇಕ ನಿಂಗೆ?' ಅಂದವ ಆಕೆಯ ರೆಪ್ಪೆಮುಚ್ಚಿದ ಕಣ್ಣ ಮೌನ ಸಮ್ಮತಿ ಪಡೆದುಕೊಂಡ. ಆದರೆ ಅದೊಂದು ಸಹಜ ಸಮ್ಮತ ಆಗಿರಲಿಲ್ಲ. ಅರಳೀಮರದ ಕೇರಿಗೆ ಜಯಂತನೆಂಬ ಮರಾಠಿ ದರ್ಜೇರ ಹುಡುಗನಿಗೆ, ರೇಣು ಎಂಬ ಲಿಂಗಾಯ್ತರ ಹುಡುಗೀನ ಕೊಟ್ಟು ಮದುವೆ ಮಾಡೋದು ಅಂದ್ರೆ ರಶೀದ ಕನಸು ಕಂಡಂತೆ ಸುಸೂತ್ರ ಏನೂ ಇರಲಿಲ್ಲ.



ರಶೀದ ಮಗಳ ಮದುವೆಗೆ ಹೋಗಲಿಲ್ಲ..!

ಆಗೆಲ್ಲ ಜಯಂತನ ಅಮ್ಮ ರೇಣುಕಾಳ ಅಪ್ಪ ರಶೀದನ ಮೇಲೆ ಮುನಿಸಿಕೊಂಡಿದ್ದರು. ಜಯಂತನ ಕಾಕ ಒಬ್ಬ ಅಪಸ್ವರ ಎತ್ತಿ 'ಈ ಔರಂಗಜೇಬ ಯಾಕ ನಮ್ ಶಿವಾಜಿಗೆ ಲಗ್ನ ಮಾಡಿಸ್ತಾನಂತ' ಎಂದು ಬಿಟ್ಟಿದ್ದ. ಆಗ ಕೆರಳಿದ್ದು ಜಯಂತ, ರೇಣು ಇಬ್ಬರೇ. ರಶೀದ ತಾನು ಪ್ರೀತಿಸುವ, ತನ್ನ ಮೇಲೆ ಅಕ್ಕರೆ ತೋರುವ ಈ ಮಂದಿ ಈ ಲಗ್ನಕ್ಕೆ ಒಪ್ಪದೇ ತನ್ನನ್ನ ಅವಮಾನಿಸಿದ್ದನ್ನಾ ಕಂಡು ಮಂಕಾಗಿ ಹೋಗಿದ್ದ.

'ಅವ ಏನು ಔರಂಗಜೇಬ ಅಲ್ಲ ತನೀ ಕಾಕ. ಅವ ನಮ್ಮ ರಶೀದ. ಈಗ ನಾನೇ ಸೀದಾ ಮಾತಾಡ್ತೀನಿ. ನಾನು, ರೇಣು ಒಬ್ಬರನ್ನೊಬ್ಬರು ಒಪ್ಪಿಕೊಂಡಿದೀವಿ. ರಶೀದ ನಮ್ ಜೊತೇಲೇ ಬೆಳೆದು ಬಂದಾನ. ಅವ ರೇಣುಕಾಳ ಅಣ್ಣ ಇದ್ದಾನ. ನೀವು ಒಪ್ಪದೆ ಇದ್ದರೆ ನಮ್ ಮದುವಿ ಅವ ನಿಂತು ಮಾಡ್ತಾನ. ಇದು ಆಖೈರು ತೀರ್ಮಾನ ನೋಡ್ರಿ..' ಎಂದು ಮೊದಲ ಬಾರಿಗೆ ಜಯಂತ ದೊಡ್ಡದಾಗಿ ದನಿ ತೆಗೆದು ಮಾತಾಡಿ ಎಲ್ಲರ ಬಾಯಿ ಮುಚ್ಚಿಸಿದವನೇ, ಮದುವೆ ಒಂದು ಸಮಸ್ಯೆಯೇ ಅಲ್ಲ ಅಂತ ರೇಣುಗೆ ಮನವರಿಕೆ ಮಾಡಿಕೊಟ್ಟು ಧಾರವಾಡಕ್ಕೆ ಎಂ.ಎ ಓದಲು ಹೊರಟುಹೋದ. ಡಿಗ್ರಿ ಮುಗಿಸಿ ಮನೆಯಲ್ಲೇ ಉಳಿದು ಅಪ್ಪನ ಖಾಲಿಚೀಲ ಅಂಗಡಿಗೆ ನಿಂತ ರಶೀದನೇ ಊರಲ್ಲಿದ್ದು ರೇಣುಗೆ ಜೊತೆಯಾಗಿ, ನೆರಳಾಗಿ ನಿಂತುಕೊಂಡವ.

ಅವರಿಬ್ಬರ ಜೊತೆಯಲ್ಲೆ ಅದೆಷ್ಟು ಮಾತುಗಳೋ ಊರು ಆಡಿಕೊಂಡದ್ದು, ಅರಳೀಮರದ ಕೇರಿ ಮರ್ಮರ ಮೊರೆದದ್ದು, ಬೀದಿಯ ಜಗುಲಿಗಳು ಕಿಸಿಕಿಸಿ ನಕ್ಕದ್ದು. ಆ ದಿನಗಳಲ್ಲಿ ಜಯಂತನ ಅಮ್ಮನೂ ರಶೀದನನ್ನ ಮಾತಾಡಿಸುತ್ತಿರಲಿಲ್ಲ. ಜಯಂತ ಧಾರವಾಡದ ಹಾಸ್ಟೆಲ್‌ನಲ್ಲಿದ್ದವ ಎರಡು ವರ್ಷ ಊರಿಗೆ ಬರಲೇ ಇಲ್ಲ. ಮಗ ಹೀಗೆ ಸೆಟಗೊಂಡದ್ದು ಜಲಜಾಬಾಯಿಗೆ ಸೈರಿಕೆಯಾಗಲಿಲ್ಲ. ಹೆತ್ತ ಕರುಳು ವಿಲವಿಲ ಎಂದು ತಡೆಯಲಾಗದೇ ಒಂದು ಮುಂಜಾನೆ ರಶೀದನ ಮನೆ ಮುಂದೆ ಬಂದು ನಿಂತರು.

'ರಶೀದಾ..' ಎಂಬ ಅಮ್ಮನ ಧ್ವನಿ ಕೇಳಿ ರಶೀದ ಓಡೋಡಿ ಬಂದು ನಿಂತ. ಕಣ್ಣಲ್ಲಿ ನೀರಾಡುತ್ತಿದ್ದ ಅಮ್ಮನನ್ನ ಕಂಡು ಕೈಹಿಡಿದು ಒಳಗೆ ಕರೆದೊಯ್ದು ಅಪ್ಪಿ ತಲೆನೇವರಿಸಿದ. ಎರಡುವರ್ಷದ ಬಿಗುಮಾನ, ದುಮ್ಮಾನ ಎಲ್ಲಾ ಕಟ್ಟೆಯೊಡೆದಂತೆ ರಶೀದನ ಎದೆಯಲ್ಲಿ ಬಿಕ್ಕಿಬಿಕ್ಕಿ ಅತ್ತುಬಿಟ್ಟರು ಜಲಜಾಬಾಯಿ.

'ಅಮ್ಮ ನೀವೇನೂ ಫಿಕರ್ ಮಾಡಬೇಡ್ರಿ. ನಾನದೀನಿ. ಅವ ಜಯಂತ ನಿಮ್ಮ ಮೇಲೆ ಏನು ಮುನಿಸಿಕೊಂಡಿಲ್ಲ, ಅವಂಗೆ, ನಂಗೆ ನೀವು ಬೇಕು. ಹಾಗೆ ನಮ್ ರೇಣುಕಾಗೂ ನೀವು ಬೇಕು. ನೀವು ಒಂದ್ಸಲ ಹೂಂ ಅನ್ನಿ ಸಾಕು. ಈ ನಿಮ್ಮ ಮಗ ನಿಂತು ಅವರಿಬ್ಬರ ಲಗ್ನ ಮಾಡ್ಸಿ ನಿಮ್ಮ ಕೈಲಿ ಅಕ್ಕಿ ಕಾಳು ಹಾಕುಸ್ತೀನಿ. ಅಮ್ಮ ನೀವು ಮಾತ್ರ ನಾನು ಬದುಕಿರಾತಂಕ ಹಿಂಗ ಅಳಬೇಡ್ರಿ..'

ಜಲಜಾಬಾಯಿ ಬಿಕ್ಕಳಿಸುತ್ತಲೇ ರಶೀದನ ತಲೆಸವರಿ 'ಹ್ಞೂಂ.. ರಶೀದ್' ಎಂದರು.

ಜಯಂತ, ರೇಣುಕಾರ ಲಗ್ನ ಆದ್ದು, ಜಲಜಾಬಾಯಿ ಸೊಸೆಯನ್ನ ಮನೆ,- ಮನಸ್ಸಿಗೆ ತುಂಬಿಸಿಕೊಂಡಿದ್ದು, ಜಯಂತನ ಅಪ್ಪ ಹಾವು ಕಡಿದು ಸತ್ತದ್ದು, ಆತನ ಕಾಕ ಆಸ್ತಿಗಾಗಿ ಕೋರ್ಟ್ ಹತ್ತಿದ್ದು, ಜಯಂತ ಹಿಸ್ಟರಿ ಲೆಕ್ಚರರ್ ಆಗಿ ಧಾರವಾಡದಲ್ಲಿ ಕೆಲಸಕ್ಕೆ ಸೇರಿ ಅಮ್ಮನ್ನ ಕರೆದುಕೊಂಡು ಹೋಗಿ ನೆಲೆ ನಿಂತದ್ದು, ರಶೀದ ಮಾತ್ರ ಈ ಪೊಳಲೆಂಬ ಊರಿನ ಅರಳೀಮರದ ಕೇರಿಯಲ್ಲಿ ಉಳಿದು ಖಾಲಿ ಚೀಲದ ಅಂಗಡಿಯನ್ನ ದೊಡ್ಡದಾಗಿ ಮಾಡಿದ್ದು ಎಲ್ಲಾ ಈಗ ಆಗಿಹೋದ ಕತೆ.

ರಶೀದನಿಗೆ ಫಾತಿಮಾಳನ್ನು ಹುಡುಕಿದ್ದೇ ಜಯಂತ. ಆತನೊಂದಿಗೆ ಕೆಲಸ ಮಾಡುತ್ತಿದ್ದ ಉರ್ದು ಲೆಕ್ಚರರ್ ರೆಹಮಾನ್ ಸಾಹೇಬ್‌ರ ಮಗಳನ್ನ ಆತನೇ ರಶೀದನಿಗೆ ತೋರಿಸಿ, ಮುತುವರ್ಜಿಯಿಂದ ಮದುವಿ ಮಾಡಿಸಿದ್ದ. ತಂದೆಯ ಮನೆಗೆ ಬಂದರೆ ಜಯಂತನ ಮನೆಯಲ್ಲಿ ಫಾತಿಮಾ ಎರಡುದಿನ ಉಳಿದುಹೋಗುತ್ತಿದ್ದಳು. ಹಾಗೇ ಕೋರ್ಟ್ ಕೆಲಸ, ರಜೆ ಅಂತಾದರೆ ಜಯಂತ ರೇಣುಕಾರೂ ರಶೀದನ ಮನೆಯಲ್ಲೇ ಮೊಕ್ಕಾಂ ಹೂಡುತ್ತಿದ್ದರು. ಆ ಎರಡೂ ದಂಪತಿಗಳಿಗೆ ಇದ್ದ ಒಂದೇ ಕೊರತೆ ಎಂದರೆ – ಮಕ್ಕಳದು. ಜಯಂತ ಮದುವೆಯಾಗಿ ಐದುವರ್ಷ ಆದರೂ, ರಶೀದನ ಲಗ್ನಾಗಿ ವರ್ಷ ಎರಡಾದರೂ ಎರಡೂ ಮನೆಯಲ್ಲಿ ಮಗುವಿನ ಸುಳಿವೇ ಇರಲಿಲ್ಲ. ಅದೆಷ್ಟು ಹರಕೆ ಹೊತ್ತರೋ ರೇಣುಕಾ, ಫಾತಿಮಾ ಇಬ್ಬರೂ. ಅವರು ಸುತ್ತದ ಅರಳೀಮರ, ಭೇಟಿ ನೀಡದ ದರ್ಗಾ, ಕಟ್ಟದ ಮುಡಿಪು – ಇಲ್ಲವೇ ಇಲ್ಲ ಎನ್ನುವಷ್ಟು. ಫಾತಿಮಾ ಪ್ರತಿದಿನ ಮುಂಜಾನೆ ಕುರಾನ್ ಪಠಿಸಿ ಬೇಡಿಕೊಂಡಿದ್ದಳು 'ಯಾ.. ಪರ್ವರ್ದಿಗಾರ್ ನಿನ್ನ ಕರುಣಾ ಬೀರಿ ನಮಗೊಂದು ಮಗುಕೊಡು. ನಮಗಿಲ್ಲವಾದರೆ ಆ ಮಗೂನ ರೇಣುಕಾಗಾದರೂ ಕೊಡು.' ಈ ಹಂಬಲಿಕೆ, ಅವಲತ್ತುಗಳಿಗೆ ಅದ್ಯಾವ ದೇವರು ಕಣ್ಣು ತೆರೆದನೋ, ಆಗ ಹುಟ್ಟಿದ್ದು ಯಶಸ್ವಿನಿ. ಹೆಣ್ಣಾಯ್ತು ಅಂತ ನಾಲ್ಕಾರು ಜನ ಮೂಗು ಮುರಿದರೂ ಆ ಮಗು ಪಡೆಯಲು ಪಟ್ಟ ತ್ರಾಸು, ಇಟ್ಟ ಬೇಡಿಕೆ – ಹರಕೆಗಳಿಂದಾಗಿ ಆ ನಾಲ್ವರೂ ಅದನ್ನ ದೇವರ ಪ್ರಸಾದ ಎಂದೇ ಕಣ್ಣಿಗೊತ್ತಿಕೊಂಡರು. ಫಾತಿಮಾಗೆ ಶಾಶ್ವತವಾಗಿ ಮಕ್ಕಳಾಗೋದಿಲ್ಲ ಅಂತ ಡಾಕ್ಟರ್ ಹೇಳಿದಾಗ ರಶೀದನಿಗೆ ಮುಗಿಲು ಕತ್ತರಿಸಿ ತಲೇಮೇಲೆ ಬಿದ್ದರೂ, ರಶೀದ ದಂಪತಿಗಳು ನೋವು ನುಂಗಿ ಯಶಸ್ವಿನಿಯ ನಗೆಯಲ್ಲಿ ಬದುಕ ಕಂಡುಕೊಂಡಿದ್ದರು. ಹಾಗೆಂದೇ ಜಯಂತ, ರೇಣು ಮಗಳನ್ನ ಫಾತಿಮಾಳ ಮಡಿಲು ತುಂಬಿ ಇದು ನಿನ್ನದೂ ಮಗು ಎಂದೇ ಹೇಳಿಬಿಟ್ಟರು.

ಅರಳೀಮರದ ಕೇರಿ ಅಚ್ಚರಿಪಡುವಂತೆ ಜಯಂತನ ಮಗಳಿಗೆ ರಶೀದನ ಮನೆಯಲ್ಲಿ 'ಆಯಿಶಾ' ಎಂದು ಮತ್ತೊಂದು ನಾಮಕರಣವೂ ಆಯ್ತು. ಪೊಳಲಿನ ಉಲೇಮಾ, ಮುತುವಲ್ಲಿಗಳು ಬಂದು ರಶೀದನ ಮಗಳಿಗೆ ಹರಸಿಹೋಗಿದ್ದರು.

ಇಂತಹ ವಸಂತದ ಕೋಗಿಲೆ ಗಾನದಲ್ಲಿ ಅಪಸ್ವರ, ಅಪಶೃತಿ ಮೂಡಿದ್ದು ರಶೀದ್ ದಂಪತಿಗಳು ಹಜ್ ಯಾತ್ರೆಗೆ ಹೊರಟಾಗ. ರಿಟೈರ್ ಆದ ರೆಹಮಾನ್ ಸಾಹೇಬರು

ಜಯಂತ, ರೇಣುಕಾರ ಲಗ್ನ ಆದ್ದು, ಜಲಜಾಬಾಯಿ ಸೊಸೆಯನ್ನ ಮನೆ,- ಮನಸ್ಸಿಗೆ ತುಂಬಿಸಿಕೊಂಡಿದ್ದು, ಜಯಂತನ ಅಪ್ಪ ಹಾವು ಕಡಿದು ಸತ್ತದ್ದು, ಆತನ ಕಾಕ ಆಸ್ತಿಗಾಗಿ ಕೋರ್ಟ್ ಹತ್ತಿದ್ದು, ಜಯಂತ ಹಿಸ್ಟರಿ ಲೆಕ್ಚರರ್ ಆಗಿ ಧಾರವಾಡದಲ್ಲಿ ಕೆಲಸಕ್ಕೆ ಸೇರಿ ಅಮ್ಮನ್ನ ಕರೆದುಕೊಂಡು ಹೋಗಿ ನೆಲೆ ನಿಂತದ್ದು, ರಶೀದ ಮಾತ್ರ ಈ ಪೊಳಲೆಂಬ ಊರಿನ ಅರಳೀಮರದ ಕೇರಿಯಲ್ಲಿ ಉಳಿದು ಖಾಲಿ ಚೀಲದ ಅಂಗಡಿಯನ್ನ ದೊಡ್ಡದಾಗಿ ಮಾಡಿದ್ದು ಎಲ್ಲಾ ಈಗ ಆಗಿಹೋದ ಕತೆ.

ಹಜ್ ಯಾತ್ರೆಗೆ ಹೊರಟವರು ಮಗಳು, ಅಳಿಯನ್ನ ಆಹ್ವಾನಿಸಿದ್ದರು. ಗನ್ನಿ ವ್ಯಾಪಾರ ಚೆನ್ನಾಗಿ ನಡೆಯುತ್ತಿದ್ದ ರಶೀದನಿಗೂ ಅದೊಂದು ದೊಡ್ಡ ಖರ್ಚಿನ ಬಾಬ್ತೇನೂ ಆಗಿರಲಿಲ್ಲ. ಆದರೂ ವಕ್ಫ್ ಮಂಡಳಿಯಿಂದ ಅವರು ಯಾತ್ರೆಗಾಗಿ ಸಬ್ಸಿಡಿ ಪಡೆದುಕೊಂಡರು ಅನ್ನೋದು ಜಯಂತನಿಗೆ ಸೈರಿಕೆಯಾಗಿರಲಿಲ್ಲ. ಅದರ ಕಿರಿಕಿರಿಯ ಜೊತೆಗೇ ಹಜ್‌ನಿಂದ ಬಂದ ನಂತರ ರಶೀದ ಶ್ರದ್ಧೆಯಿಂದ ಗಡ್ಡ ಬಿಟ್ಟದ್ದು ಜಯಂತನಲ್ಲಿ ಎಂತಹದೋ ತಳಮಳ ಹುಟ್ಟುಹಾಕಿತ್ತು.

'ಅದೇನೋ ರಶೀದ. ಸರ್ಕಾರದ ರೊಕ್ಕದಲ್ಲಿ ಹಜ್ ಯಾತ್ರೆಗೆ ಹೋಗಿಬಂದ ಕೂಡಲೇ ಪಕ್ಕಾ ಮುಸಲ್ಮಾನ ಆಗಿಬಿಟ್ಟಿದ್ದೀ..' ಎಂದು ಒಂದೆರಡು ಸಲ ಜಯಂತ ತನ್ನ ಅಸಮಧಾನ ಹೇಳಿಕೊಂಡಿದ್ದ. ರಶೀದ್ ನಕ್ಕು ಸುಮ್ಮನಾಗಿದ್ದ.

ಅಂಬೆಗಾಲಿಕ್ಕುತ್ತಿದ್ದ ಮಗಳು ನಡೆಯುವ ಹೊತ್ತಿಗೆ ಅವರ ನಡುವೆಯೂ ಬಹಳಷ್ಟು ವಿದ್ಯಮಾನಗಳು ನಡೆದುಹೋಗಿದ್ದವು. ಜಯಂತ ಕಾಲೇಜಿನಲ್ಲಿ ಹಿಸ್ಟರಿ ಬೋಧಿಸುತ್ತಲೇ ಒಂದು ಭಾವುಕ ನೆಲಗೆ ಪಕ್ಕಾಗಿ ಹೋಗಿದ್ದ. ತನ್ನೂರಲ್ಲಿ ನಡೆದ ಶಿವಾಜಿಯ ಜಯಂತ್ಯುತ್ಸವಕ್ಕೆ ಅತಿಥಿಯಾಗಿ ಹೋಗಿ ಬಂದಾಗಿನಿಂದ ಆತನಿಗೆ ತನ್ನ ಧರ್ಮದ ಸ್ವಾಭಿಮಾನ, ತನ್ನ ಪಂಗಡದ ಐತಿಹಾಸಿಕ ಧ್ಯೇಯ, ಕಠೋರತೆ ಕುರಿತು ವ್ಯಾಮೋಹವೊಂದು ಹೊಕ್ಕಿಬಿಟ್ಟಿತ್ತು. ಅದೇನು ಆಕಸ್ಮಿಕವೋ, ತನ್ನ ಹೆಸರನ್ನ ಜಯಂತರಾವ್ ಶಿಂಧೆ ಅಂತ ಬದಲಾಯಿಸಿಕೊಂಡ.

ಈತನ ಮಾತುಗಾರಿಕೆ, ಇತಿಹಾಸವನ್ನ ಅಂಕಿ ಅಂಶಗಳೊಂದಿಗೆ ಕರಾರುವಕ್ಕಾಗಿ ಮಂಡಿಸುವ ಈತನ ವಿದ್ವತ್, ಶಿವಾಜಿಯ ಧರ್ಮ ಸಂಗ್ರಾಮ ಕುರಿತು ಈತ ನೀಡುವ ಉಪನ್ಯಾಸ ಮಾಲಿಕೆಗಳಿಂದಾಗಿ ಒಂದು ಸಂಘಟನೆ ಜಯಂತನ ಹಿಂಬಾಲಕರಾಗಿ, ಒತ್ತಾಸೆಯಾಗಿ ನಿಂತುಕೊಂಡಿತು. ಅದೆಲ್ಲ ಪೊಳಲೆಂಬ ಊರ ಅರಳೀಮರದ ಕೇರಿಗೂ ವ್ಯಾಪಿಸುವಂತಾಗಿದ್ದು ಒಂದು ದಿನ.

ರಶೀದ ಹಜ್ ಯಾತ್ರೆಗೆ ಹೋಗಿಬಂದ ದಿನಗಳಲ್ಲೇ ಪೊಳಲಿನ ಮುಸಲ್ಮಾನರೆಲ್ಲ ಆತನಿಗೊಂದು ಸತ್ಕಾರ ಇಟ್ಟುಕೊಂಡರು. ಸತ್ಕಾರದ ಖುಷಿಯಲ್ಲಿ ತನ್ನನ್ನ ಗಣ್ಯ ಎಂದು ಪರಿಗಣಿಸಿದ ಹಿನ್ನೆಲೆಯಲ್ಲಿ ಗನ್ನಿ ವ್ಯಾಪಾರದಿಂದ ಬಂದ ಹೇರಳ ಸಂಪತ್ತಿನ ವಿಶ್ವಾಸದಲ್ಲಿ ಕಂಠ ತುಂಬಿ ರಶೀದ ಊರಿನ ಹಳೆಯ ಮಸೀದಿಯನ್ನು ಹೊಸದಾಗಿ ಮತ್ತು ತುಸು ದೊಡ್ಡದಾಗಿ ಕಟ್ಟಿಸಲು ಒಪ್ಪಿಕೊಂಡ. ಹಾಗೆಯೇ ಆತನ ಅಜ್ಜಿ ಹೆಸರಲ್ಲಿ ಮದ್ರಸಾಕ್ಕೂ ದಾನ ಮಾಡುವುದಾಗಿ ಹೇಳಿದ. ಆ ಊರ ಅಷ್ಟೇನೂ ಸ್ಥಿತಿವಂತರಲ್ಲದ ಮುಸಲ್ಮಾನ ಬಂಧುಗಳೆಲ್ಲ ರಶೀದ್ ಖಾನ್ ಸಾಹೇಬರಿಗೆ ಜಯಕಾರ ಹೇಳಿದರು. ರಶೀದನಿಗೆ 'ಇದೆಲ್ಲ ನನ್ನದೇನೂ ಅಲ್ಲ, ಪವಿತ್ರ ಕುರಾನ್‌ನಲ್ಲಿ ಹೇಳಿರುವಂತೆ ನಮಾಜ ಏರ್ಪಡಿಸುವುದು, ದಾನ ಮಾಡುವುದು ನನ್ನ ಧರ್ಮ' ಎಂಬ ವಿನಯ. ಆತನ ಆಸೆಯಂತೆ ಮಸೀದಿ ಪುನರುಜ್ಜೀವಗೊಳಿಸಲು ಪ್ರಾರಂಭಿಸಿದ್ದೆ ಕೆಡವಿದ ಮಸೀದಿಯ ಆಳ ಪಾಯದಲ್ಲಿ ಒಂದು ನಕ್ಷತ್ರಾಕಾರದ ಕಲ್ಲಿನ ಅಡಿಪಾಯ, ಒಂದೆರಡು ಕೆತ್ತನೆಯ ಕಂಬ ಗೋಚರವಾಗಿಬಿಟ್ಟವು. ಪೊಳಲಿನ ಇಡೀ ಜನಸಮುದಾಯ ಉಸಿರು ನಿಂತಂತೆ ಅಚ್ಚರಿಗೊಂಡು ಎದ್ದು ನಿಂತಿತು.

ಆ ಜಾಗದ ಪುರಾತನತೆ, ಐತಿಹಾಸಿಕ ಹಿನ್ನೆಲೆಯನ್ನು ಅರಿಯಲು ಊರು ಕಾತರಿಸಿದಾಗ ಬಂದುದು ಧಾರವಾಡದ ಇತಿಹಾಸ ಪ್ರಾಧ್ಯಾಪಕ, ಊರವನೇ ಆದ ಜಯಂತ. ಜಯಂತನ ದೃಷ್ಟಿಯಲ್ಲಿ ರಶೀದ ಬೇರೆಯೇ ಆಗಿ ಗೋಚರವಾಗಿದ್ದ. 'ಹಾಂ.. ಇದೇ ತ್ರೈಲೋಕೇಶ್ವರ ದೇವಾಲಯ. ಈ ಊರ ದೇವರೆಂದೇ ಒಂದು ಕಾಲದಲ್ಲಿ ಪೂಜೆಗೊಂಡು ಆ ನಂತರದ ಒಂದು ಕಾಲದ ದಾಳಿಯಲ್ಲಿ ಮಣ್ಣಾಗ್ಗಿ ಹೋದ ದೇವಾಲಯ ಇದೇ. ಹತ್ತನೇ ಶತಮಾನದ ಆದಿಯಲ್ಲಿ ಗಂಡಾರಾಧಿತ್ಯ ಕಟ್ಟಿದ ಈ ಪೊಳಲೆಯ ಪುರದಲ್ಲಿ ಈ ದೇವಾಲಯ ಕಟ್ಟಿಸಿದ್ದು ಆತನ ಮಗ ತ್ರಿಲೋಕನಾಥ. ಚಾಲುಕ್ಯರ ವಿರುದ್ಧ ಹೋರಾಟ ಮಾಡಿ ಮಾಂಡಲೀಕನಿಂದ ಸ್ವತಂತ್ರ ರಾಜನಾದ ಆ ವಿಜಯದ ನೆನಪಿಗೆ ಆತ ತನ್ನ ಹೆಸರಿನ ಈ ಈಶ್ವರ ದೇವಾಲಯ ಕಟ್ಟಿದ್ದು ಇತಿಹಾಸದಲ್ಲಿದೆ. ನಾನೂ ಈ ಊರಲ್ಲಿ ಹುಟ್ಟಿ ಬೆಳೆದರೂ ಇತಿಹಾಸ ಓದಿದಾಗ ಈ ದೇವಾಲಯ ಎಲ್ಲಿದೆ ಎಂದು ಅಚ್ಚರಿಗೊಂಡಿದ್ದೆ. ಇದೋ ಸಿಕ್ಕಿದೆ ನೋಡಿ. ಈ ಊರ ಆದಿದೈವ ತ್ರೈಲೋಕೇಶ್ವರನೇ..' ಎಂದು ಜಯಂತ ಪರಿಶೀಲಿಸಿ ಹೇಳಿದ್ದೇ ಇಡೀ ಊರು ರಶೀದನ ಎದುರು ಎದ್ದು ನಿಂತಿತು.

ರಶೀದ ಹೇಳಿದ– 'ನೋಡ್ರಿ ನಾನೂ ಈ ಊರವನೇ. ನನ್ನ ತಂದೆ, ತಾತ, ಮುತ್ತಾತ ಎಲ್ಲಾ ಇಲ್ಲಿ ಈ ಮಸೀದಿಯಲ್ಲೇ ನಮಾಜ್ ಮಾಡಿಕೊಂಡು ಬಂದವರು. ಇದು ತ್ರೈಲೋಕೇಶ್ವರ ದೇವಾಲಯವೇ ಇದ್ದಿರಬಹುದು. ಜಯಂತ ಹೇಳ್ತಿದ್ದಾನೆ ಅಂದ ಮೇಲೆ ಅದರ ಐತಿಹಾಸಿಕ ಮಹತ್ವ ನಿಜಕ್ಕೂ ದೊಡ್ಡದಿದೆ. ಈ ದೇವಾಲಯ ಯಾವಾಗ ನಾಶವಾಯ್ತು ಈ ಮಸೀದಿ ಯಾವಾಗ ಯಾರು ಕಟ್ಟಿದರು ಅಂತ ಚರ್ಚೆ ಬೇಡ. ಇಲ್ಲಿ ಇನ್ನೂ ಅಗೆದು ಬೇರೆ ಪಳೆಯುಳಿಕೆ ಸಿಗುತ್ತಾ ನೋಡೋಣ. ಸಿಕ್ಕದ್ದನ್ನೆಲ್ಲಾ ಸೇರಿಸಿ ಮತ್ತೆ ಗುಡಿ ಕಟ್ಟೋಣು. ಆದರೆ ಈ ಜಾಗ ಸರ್ಕಾರಿ ದಾಖಲಾತಿಯಲ್ಲಿ ಮಸೀದಿಯದು ಅಂತ ಇದೆ. ಇದನ್ನ ಬಿಟ್ಟುಕೊಟ್ಟರೆ ಇಲ್ಲಿ ಮಸೀದಿ, ಒಂದು ಪ್ರಶಸ್ತ ಜಾಗದಲ್ಲಿ ಗುಡಿ ಎರಡು ಕಟ್ಟೋಣ. ಏನಂತೀರಿ ?'

ಈ ಪ್ರಸ್ತಾಪವನ್ನು ಮೊದಲು ಧಿಕ್ಕರಿಸಿದ್ದು ಜಯಂತನೇ.

ಅಂದು ರಾತ್ರಿ ರಶೀದನ ಮನೆಯಲ್ಲಿ ಊಟ ಮಾಡಿ ಹರಟಲು ಕೂತಾಗ ಜಯಂತ ಮತ್ತೆ ಅದೇ ಮಾತನ್ನ ಒತ್ತಾಸೆಯಿಂದ ಹೇಳಿದ.

'ಆ ಜಾಗ ಚಾರಿತ್ರಿಕ ಮಹತ್ವದ್ದು ರಶೀದ. ಅಲ್ಲಿ ಗುಡಿ ಕಟ್ಟುವಾಗ ಆಗ ಕಾಶ್ಮೀರದಿಂದ ಬಂದಿದ್ದ ಲಕುಲೀಶ ಪಂಡಿತರ ನೇತೃತ್ವದಲ್ಲಿ ಹೋಮ–ಹವನ ಎಲ್ಲಾ ನಡೆದು ನಂತರ ವಿಗ್ರಹ ಪ್ರತಿಷ್ಠಾಪನೆ ಆಗಿರ್ತದೆ. ಆ ಜಾಗ ಬದಲಾಯಿಸಿ ಗುಡಿ ಕಟ್ಟೋದು ಇತಿಹಾಸಕ್ಕೆ ಅಪಚಾರ. ಅಷ್ಟೇ ಅಲ್ಲ ಈ ಊರ ಅಷ್ಟು ಹಿಂದೂಗಳ ನಂಬಿಕೆಗೆ ವಿರುದ್ಧ'. 'ಇರಬಹುದು ಜಯಂತ. ಹತ್ತನೇ ಶತಮಾನದಲ್ಲಿ ನಡೆದಿರಬಹುದಾದ ಹೋಮದ ನೆನಪಿನ ಭಾವುಕತೆಯಂತೆಯೇ, ನನ್ನ ಅಪ್ಪಾ ಅಜ್ಜ ಎಲ್ಲಾ ನಮಾಜ್ ಮಾಡಿದ, ಈ ಊರ ಮುಸಲ್ಮಾನರಲ್ಲಿ ಅಲ್ಲಾಹ್‌ನ ಇಬಾದತ್ ನಡೆದ ಜಾಗ ಅಂತ ಒಂದು ಭಾವುಕತೆ ಇದೆ ಅಲ್ಲವೇ ? ಈಗ ನಿನ್ನ ವಾದ ಆ ಗುಡಿ ಬೀಳಿಸಿ

ಅಂಬೆಗಾಲಿಕ್ಕುತ್ತಿದ್ದ ಮಗಳು ನಡೆಯುವ ಹೊತ್ತಿಗೆ ಅವರ ನಡುವೆಯೂ ಬಹಳಷ್ಟು ವಿದ್ಯಮಾನಗಳು ನಡೆದುಹೋಗಿದ್ದವು. ಜಯಂತ ಕಾಲೇಜಿನಲ್ಲಿ ಹಿಸ್ಟರಿ ಬೋಧಿಸುತ್ತಲೇ ಒಂದು ಭಾವುಕ ನೆಲಗೆ ಪಕ್ಕಾಗಿ ಹೋಗಿದ್ದ. ತನ್ನೂರಲ್ಲಿ ನಡೆದ ಶಿವಾಜಿಯ ಜಯಂತ್ಯುತ್ಸವಕ್ಕೆ ಅತಿಥಿಯಾಗಿ ಹೋಗಿ ಬಂದಾಗಿನಿಂದ ಆತನಿಗೆ ತನ್ನ ಧರ್ಮದ ಸ್ವಾಭಿಮಾನ, ತನ್ನ ಪಂಗಡದ ಐತಿಹಾಸಿಕ ಧ್ಯೇಯ, ಕಠೋರತೆ ಕುರಿತು ವ್ಯಾಮೋಹವೊಂದು ಹೊಕ್ಕಿಬಿಟ್ಟಿತ್ತು. ಅದೇನು ಆಕಸ್ಮಿಕವೋ, ತನ್ನ ಹೆಸರನ್ನ ಜಯಂತರಾವ್ ಶಿಂಧೆ ಅಂತ ಬದಲಾಯಿಸಿಕೊಂಡ.

ಮಸೀದಿ ಕಟ್ಟಲಾಗಿದೆ ಎಂಬಂತೆ ಇದೆಯಲ್ಲ ..ಅದರ ಪರಿಣಾಮ ಏನಾಗ್ತದೆ ಅಂತ ಯೋಚಿಸಿದ್ದೀಯಾ ಮಾರಾಯ?..'

'ಸತ್ಯಕ್ಕೆ ಪರಿಣಾಮಗಳ ಭಯ ಇರೋದಿಲ್ಲೋ ರಶೀದ. ಅಲ್ಲಿ ಗುಡಿ ಇದ್ದದ್ದನ್ನಾ ಬಹುಮನಿ ಕಾಲದಲ್ಲೋ, ಮೊಘಲ್ ಕಾಲದಲ್ಲೋ ಒಡೆದೇ ಮಸೀದಿ ಕಟ್ಟಿರ್ತಾರೆ. ಈ ಸತ್ಯ ಕೂಡಾ ಕಾರ್ಬನ್ ಡೇಟಿಂಗ್‌ನಂತಹ ಪುರಾತತ್ವ ಸಂಶೋಧನೆ ವಿಧಾನದಿಂದ ತಿಳೀತದೆ ಬಿಡು..'

'ಗುಡೀ ನಂತರ ಮಸೀದಿ ಕಟ್ಟಲಾಗಿದೆ ಅಂತ ವೈಜ್ಞಾನಿಕ ಆಧಾರ ನಾನು ಬೇಕು ಅಂತಿಲ್ಲ ಮಾರಾಯ. ಅದು ಸತ್ಯವೇ ಇರಬಹುದು. ಆದರೆ ಗುಡೀ ಕೆಡವಿ ಮಸೀದಿ ಕಟ್ಟಿದಾರೆ ಅನ್ನೋದು ಸತ್ಯ ಅಂತ ಹೇಗಂತಿ ? ತನ್ನೊಳಗೆ ಶಿಥಿಲವಾಗದೇ ಯಾವುದನ್ನೇ ಆದರೂ ಕೆಡವೋದು ಕಷ್ಟ ಅಂತ ನಿಂಗೂ ಗೊತ್ತಲ್ಲ. ಹಾಗೆ ಹೇಳೋದಾದರೆ ನಮ್ಮೆಲ್ಲರ ಮನೆ, ಮಠ, ಮಸೀದಿ, ಗುಡಿಗಳ ಆಳದಲ್ಲಿ ಹಾಗೆ ಶಿಥಿಲವಾಗಿ ಅಳಿಸಿಹೋದ ಅದೆಷ್ಟೋ ಇಮಾರತ್‌ಗಳ ನಿಶಾನಿ ಇರಬಹುದು. ಈ ನೆಲ ಸಾವಿರಾರು ವರ್ಷದಿಂದ ಇದೆ ಮಾರಾಯ. ಗುಡಿ, ಮಸೀದಿ ಈವತ್ತಿನವು, ಈ ಹೊತ್ತಿನವು ಅಷ್ಟೇ. ನಾವು ವಯಸ್ಸು ಕಂಡು ಹಿಡಿಯೋದು ಬೇಡ..'

'ಹೀಗೆಂದರೆ ಇತಿಹಾಸವನ್ನ ನಿರಾಕರಿಸಿದಂತೆ ಆಗ್ತದೆ ರಶೀದ. ತರ್ಕ ಏನೇ ಇರಲಿ ಐತಿಹಾಸಿಕ ಸತ್ಯ ಅಂತೇನಿದೆ ಅದು ಮುಖ್ಯ. ಅಲ್ಲಿ ಗುಡಿ ಇತ್ತು ಅನ್ನೋದು ತರ್ಕ ಅಲ್ಲ, ಸತ್ಯ. ಮಸೀದಿ ಆನಂತರದ್ದು ಅನ್ನೋದೂ ತರ್ಕಾತೀತ ಸತ್ಯ. ನೀವು ಸತ್ಯವನ್ನ ಒಪ್ಪಿಕೊಳ್ಳೋದು ಕಲೀಬೇಕಷ್ಟೇ..' ಎಂದ ಜಯಂತ ಫರ್ಮಾನಿನ ಧ್ವನಿಯಲ್ಲಿ.

'ಯಾ ಅಲ್ಲಾಹ್... ಇದೇನು ನಡೀತಿದೆ ತಂದೆ. ನಾನು ಈ ಜಯಂತನಿಗೆ ಹೇಗೆ ಸಮಾಧಾನ ಹೇಳಲಿ, ಮನವರಿಕೆ ಮಾಡಿಕೊಡಲಿ ?' ಎಂದು ರಶೀದ ನಿಸೂರಾಗಿ ಕೂತು ಬೇಡಿಕೊಂಡ.

ಪೊಳಲಿನಲ್ಲಿ ಜಯಂತನ ಭಾಷಣದ ನಂತರ ಉದ್ವಿಗ್ನತೆ ಮನೆ ಮಾಡಿತ್ತು. ರಶೀದನೊಂದಿಗಿನ ಚರ್ಚೆಯ ನಂತರ ಜಯಂತ ಪೊಳಲಿನ ತ್ರೈಲೋಕೇಶ್ವರ ದೇವಸ್ಥಾನದ ಕುರಿತು ಲೇಖನವೊಂದ ಪತ್ರಿಕೆಯಲ್ಲಿ ಪ್ರಕಟಿಸಿದ. ವಿಷಯ ಹರಡುತ್ತಿರುವ ಹಿನ್ನೆಲೆಯಲ್ಲಿ, ಸಂಕೀರ್ಣವಾಗುವ ಭಯದಲ್ಲಿ ರಶೀದನೇ ಉಲೇಮಾರನ್ನ, ಮೌಲ್ವಿಯವರನ್ನ ಕರೆದುಕೊಂಡು ಹೋಗಿ ಅರಳೀಮರದ ಕೇರಿಯ ಬೇರೆ ಹಿರಿಯರೊಂದಿಗೆ ಮಾತಾಡಿ ಈ ಜಾಗ ಬಿಟ್ಟುಕೊಟ್ಟು ಅವರು ಕೊಡುವ ಬೇರೆ ಜಾಗದಲ್ಲಿ ಮಸೀದಿ ಕಟ್ಟುವ ಪ್ರಸ್ತಾಪ ಇರಿಸಿದ. ಪರಸ್ಪರ ಆರೋಪ, ಪ್ರತ್ಯಾರೋಪದ ನಡುವೆ ಈ ಪ್ರಸ್ತಾಪ ಮರೆತುಹೋಗಿ, ಅದೊಂದು ವಿವಾದ ಹಾಗೇ ನೆನಗುದಿಗೆ ಬಿತ್ತು. ರಶೀದನನ್ನೇ ಮುಂದಿಟ್ಟುಕೊಂಡು ಪೊಳಲು ಸುತ್ತಮುತ್ತಲಿನ ಊರ ಮುಸಲ್ಮಾನರೆಲ್ಲ ತಮ್ಮ ಮಸೀದಿಗಾಗಿ ಒತ್ತಾಯಿಸತೊಡಗಿದರು.

ಜಯಂತ ತ್ರೈಲೋಕೇಶ್ವರ ದೇವಾಲಯದ ಪ್ರಚಾರ, ಐತಿಹಾಸಿಕ ಮಹತ್ವದ ಬಗ್ಗೆ ಬರೆದು, ಮಾತಾಡಿ ಗಮನಸೆಳೆದು ಹಲವಾರು ಸಂಘಟನೆಗಳು ಅದರಲ್ಲಿ ಭಾಗಿಯಾಗುವಂತೆ ಪ್ರೇರೇಪಿಸಿದ್ದ. ಅದೊಂದು ಕಾರಣವೇ ಆಯಿಶಾಳನ್ನ ಅವಳ ಮತ್ತೊಬ್ಬ ತಾಯಿ ಫಾತಿಮಾ, ರಶೀದ್ ಕಾಕ ಹಂಬಲಿಸಿಯೂ ಭೇಟಿಯಾಗದಂತೆ ಮಾಡಿಬಿಟ್ಟತ್ತು.

ನಾಳೆ ಈ ಹೊತ್ತಿಗೆ ಮದುವೆ ಮುಹೂರ್ತ ಎಂಬ ಹೊತ್ತಿನಲ್ಲೇ ರಶೀದರ ಮನೆಯ ಫೋನ್ ಮೊಳಗಿತು. ಯಶಸ್ವಿನಿ ಗಂಟಲುಬ್ಬಿ ಮಾತಾಡುತ್ತಿದ್ದಳು.

'ಆಯಿ, ನೀವೇನೂ ನನ್ನ ಲಗ್ನಕ್ಕೂ ಬರೋದಿಲ್ಲೇನು? ಆ ಊರ ಜಗಳ ಹಾಳು ಬೀಳ್ಲಿ, ಅದಕ್ಕೂ ನನ್ನ ಲಗ್ನಕ್ಕೂ ಏನು ಸಂಬಂಧ ಅದಾ ಹೇಳ್ರಿ? ರಶೀದ್ ಕಾಕ ಮುನಿಸಿಕೊಂಡಾರಂತ. ನನ್ನ ಅಪ್ಪ ಅವರಿಗೆ ಬೇಜಾರು ಮಾಡ್ಯಾರಂತ ಈ ಮಗಳ ಮದುವೆಗೆ ಅವರು ಬರದಿದ್ರೆ ನನಗೆ ಬೇಸರ ಆಗಂಗಿಲ್ಲೇನು?' ಎಂದವಳೇ ಬಿಕ್ಕಳಿಸಿ ಅತ್ತಿದ್ದಳು. ಫಾತಿಮಾಗೂ ಅಳು ತಡೆಯಲಾಗಲಿಲ್ಲ. ಫೋನಿನಲ್ಲೇ ಏನೋ ಸಂತೈಸಲು ಹೋದ ಫಾತಿಮಾಗೆ ಆ ಶಕ್ತಿಯೇ ಉಳಿದಿರಲಿಲ್ಲ. ಬೇಡ ಬೇಡ ಅಂತಲೇ ಫೋನ್ ಕೈಗೆತ್ತಿಕೊಂಡ ರಶೀದ್‌ರಿಗೂ ಮಾತು ಗಂಟಲಲ್ಲಿ ಸಿಕ್ಕಿಕೊಂಡವು.

ಜಯಂತನ ಒಂದೇ ಒಂದು ಕರೆಗಾಗಿ ರಶೀದ ಕಾದು ನಿಂತಿದ್ದ. ಜಯಂತ ಬಂದೇ ಬಿಡುವ 'ಲೋ ರಶೀದ ಇದೇನು ಒಣ ಮುನಿಸಲೇ ನಿನ್ದು. ಬಾರೋ ಮುಕ್ಕ ..ನೀನಿಲ್ದೆ ನನ್ನ ಮಗಳ ಮದುವೆ ನಡೀತದೇನೋ?..' ಅಂತ ಕೈಹಿಡಿದು ಕರೆದೊಯ್ದಂತೆ ಭ್ರಮಿಸಿ ರಶೀದ ಚಡಪಡಿಸಿದ. ಫಾತಿಮಾಳೂ ತನ್ನ ವಸ್ತ್ರ ಒಡವೆ ತುಂಬಿಕೊಂಡ ಪೆಟ್ಟಿಗೆ ಪಕ್ಕದಲ್ಲಿಟ್ಟುಕೊಂಡೇ ತೂಕಡಿಸಿದಳು, ದುಃಖಿಸಿದಳು, ಉಗ್ಗಡಿಸಿದಳು.

ಮದುವೆಯ ದಿನ ಮುಹೂರ್ತದ ಸಮಯ ಹತ್ತಿರವಾದಂತೆ ಫಾತಿಮಾ 'ಆಯಿಶಾಽ..' ಅಂತಂದು ಒರಲಿ ಮೂರ್ಛೆ ಹೋದಳು. ರಶೀದರಿಗೆ ಕೈಕಾಲಿನ ಶಕ್ತಿಯೇ ಉಡುಗಿಹೋದಂತಾಯ್ತು. ಫಾತಿಮಾಳನ್ನ ಸಾವರಿಸಿ ತಮ್ಮನ್ನ ತಾವೇ ನಿಯಂತ್ರಿಸಿಕೊಳ್ಳುವಲ್ಲಿ ಹೈರಾಣಾಗಿ ಹೋದರು. ಅದೊಂದು ಇಡೀ ದಿನ ರಾತ್ರಿ ಕಣ್ಣು ಮುಚ್ಚದಂತೆ, ನೀರೂ ಕುಡಿಯದಂತೆ ಕೂತ ಅವರಿಬ್ಬರು ಬೆಳಗಿನ ಹೊತ್ತಿಗೆ ನಿತ್ರಾಣರಾಗಿ ಹೋಗಿದ್ದರು. ಅವರ ಬಳಲಿದ ಮನಸ್ಸಿನ ತುಂಬಾ ಮಗಳು ಆಯಿಶಾ ತುಂಬಿಕೊಂಡಿದ್ದಳು. ಊರು, ಮನೆ, ಗುಡಿ, ಮಸೀದಿ, ಜಗಳ, ತರ್ಕ ಎಲ್ಲಾ ಮರೆತುಹೋದ ಆ ಹೊತ್ತು ರಶೀದ್ ಹದೀಸ್ ಒಂದನ್ನಾ ಹೇಳಿಕೊಂಡು ಬೊಗಸೆಯೊಡ್ಡಿ ಪ್ರಾರ್ಥಿಸಿದರು.

'ಬಾರಕಲ್ಲಾಹು ಲಕ್ ವಬಾರಕಲ್ಲಾಹು ಅಲೈಕ ವಜಯನ

ಬೈನಕುಮಾ ಅಲಾ ಖೈರಿನ್..

(ಅಲ್ಲಾಹನು ನಿನಗೆ ಸಮೃದ್ಧಿ ನೀಡಲಿ, ನಿನ್ನಿಂದಾಗಿ ಸಮೃದ್ಧಿ ನೀಡಲಿ ಮತ್ತು ನಿಮ್ಮಿಬ್ಬರನು ಒಳಿತಿನಲ್ಲಿ ಜೋಡಿಸಲಿ.)

❑

'ಆಯಿ, ನೀವೇನೂ ನನ್ನ ಲಗ್ನಕ್ಕೂ ಬರೋದಿಲ್ಲೇನು? ಆ ಊರ ಜಗಳ ಹಾಳು ಬೀಳ್ಲಿ. ಅದಕ್ಕೂ ನನ್ನ ಲಗ್ನಕ್ಕೂ ಏನು ಸಂಬಂಧ ಅದಾ ಹೇಳ್ರಿ? ರಶೀದ್ ಕಾಕ ಮುನಿಸಿಕೊಂಡಾರಂತ. ನನ್ನ ಅಪ್ಪ ಅವರಿಗೆ ಬೇಜಾರು ಮಾಡ್ಯಾರಂತ ಈ ಮಗಳ ಮದುವೆಗೆ ಅವರು ಬರದಿದ್ರೆ ನನಗೆ ಬೇಸರ ಆಗಂಗಿಲ್ಲೇನು?' ಎಂದವಳೇ ಬಿಕ್ಕಳಿಸಿ ಅತ್ತಿದ್ದಳು. ಫಾತಿಮಾಗೂ ಅಳು ತಡೆಯಲಾಗಲಿಲ್ಲ.



ನಾಯಿ ಮನೆಯಾಕೆ





ನಾಯಿ ಮನೆಯಾಕೆ
ಎಷ್ಟು ಸುಂದರ ದುಃಸ್ವಪ್ನದೊಳಗು
ಕೋಮಲ ಚಿರತೆ ಬೆರಳು ॥
ತೀಡಿದ ಕೋನ ಶೇಪ್
ಚೆಂದುಟಿಯ ಹಾಸಿಗೆಯ ಸಿಕ್ಕು
ಗೂಬೆ ಗಾಂಭಿರ್ಯ,
ಮುಖ ಬಿಲ್ಲೆ ತಾಂಬೂಲ
ಗಣಕಯಂತ್ರಕ್ಕೆ ಯಾಕೆ ಮಂತ್ರ
॥ ನಾಯಿ ಮನೆಯಾಕೆ ॥

ಹೊಳೆವ ಮಹಲಿನ
ಅಮಲ ಕಂಪು,
ಮುಗಿಲು ಬಾಚುವ ಹಕ್ಕಿದೂಳಿಗೆ,
ಜೇಡ ಬೆಚ್ಚಿತು
ಜಳಕ ಜಪ ಮಾಲೆ
ಜಕ್ಕಿಣಿಯ ಹಬ್ಬದುಡಿಗೆ
ಬೆಚ್ಚನೆ ಮಲಗು ಚಿರತೆ ಬೆರಳ ಕಾಳಿಗೆ
॥ ನಾಯಿ ಮನೆಯಾಕೆ ॥

ಅಭದ್ರತೆಯ ಆಹಾಕಾರ
ಮುಗ್ಗುವ ಪೀಳಿಗೆ
ಪ್ರಜಾಪ್ರಭುತ್ವದ ಕನಸೇ ಕಮಾಲು

ಈ ಕಡಲ ಮಡಿಲಿಗೆ
ಅಂತಸ್ತುಗಳ ಹಯಗಳ ತೊಗಲು ಸೀಮೆ
ಲಲಿತ ಕಲೆಯ ಹೆಣ್ಣು
ಬೊಗಸೆ ಕಣ್ಣಿನ ಕಾಯಿಲೆ
ಇಂದ್ರಲೋಕ, ಚಂದ್ರಲೋಕ
ಎಲ್ಲಾ ಕೀಲು ಕುದುರೆ
॥ ನಾಯಿ ಮನೆಯಾಕೆ ॥

○ ತಾಜುಮಾ ಇಕ್ಬಾಲ್ ಎರಡು ಕವನಗಳು

ಧ್ವಜಕಂಬ

ಧ್ವಜಕಂಬದಡಿಯಲ್ಲಿ
ತಲೆ ಬಾಣಗಳ ನೆನೆದರೆ
ಮರಳಿ ಬರುವ ಚಿತ್ರಾನು - ಚಿತ್ರಗಳು
ಸಾಕು, ನೆಲವನ್ನಪ್ಪಿ
ಸಾಗುತ್ತಿರುವ ಅಮ್ಮಂದಿರ
ಸೆರಗಿನ ಒಳ ದಾಟಿರುವ
ಕಂಬನಿಯ ಸಾಲಿನಲ್ಲಿ
ತೂಗಿ ಬಿಡುವುದೇ ನಿನ್ನ
ನೆಣ ಚಂಡಿ ನಾಲಿಗೆಯ ತೆವಲು

ಹಸಿದ ಕಂದಮ್ಮಗಳ
ಕವಳದ ತಟ್ಟೆಯಲ್ಲಿ
ನಿನ್ನ ತ್ರಿಶೂಲ ನಾಲಿಗೆಯ
ಹೊಟ್ಟೆ ತೇಗುವುದು
ಚಿತ್ತ ಕದಡಿರುವ ಭಿತ್ತಿ - ಪತ್ರ

ಒಡೆಯನಣತಿಗೆ ಸೂರು
ಮಾರುಗಳು ಚಿಮ್ಮಿ
ನರಿಯ ಮೆದುಳಿಗೆ
ಮಕಮಲ್ಲದಿರುಸು

ಹಾಲಹಲದ ನಂತರ ಮೌನ
ತೆರಳುವುದು ತಟಸ್ಥ ಮನಸ್ಸಿಗೆ
ಮೆಲ್ಲ ಎಚ್ಚರಿಸುವುದು
ಗಾಂಧಿ ನೆರಳು.
ಒಣಗಿರುವ ನಿನ್ನ ಬುಡ
ಸುಡುಗಾಡ ಪಾಡು
ಧರೆಗೆ ಒಪ್ಪುವ ದೀಪಗಳ ಸಾಲು
ತರುಲತೆಯ ವನದಲ್ಲಿ
ಹಿರಿಯರ ಕನಸುಗಳೇ ಮೇಲು
ಎಂದಿರುವ ರಾಮನಪ್ಪಿರುವ ನಾಡು



ಕೃಷ್ಣ ಮಾಸಡಿ

ಅದಮ್ಯ ಕನಸುಗಳಿಲ್ಲದೆ ಸಿನಿಮಾ...

ಕಾರ್ಖಾನೆಯೊಳಗಿಂದ ಹೊರಬಂದ ವ್ಯಕ್ತಿಯೊಬ್ಬನಿಗೆ ಬಾಗಿಲಲ್ಲಿ ನಿಂತ ಒಬ್ಬ ಅವನ ಬಳಿ ಸಾಗಿ ' ನೀನು ನನ್ನ ಅನ್ನ ಕಸಿದುಕೊಂಡಿದ್ದೀಯ... ಇದುವರೆಗೂ ನಾನು ಮಾಡುತ್ತಿದ್ದ ಕೆಲಸ ನಿನಗೆ ಕೊಟ್ಟಿದ್ದಾರೆ....' ಎಂದು ಹೇಳುವ ದೃಶ್ಯ ಅಡೂರ್‌ರ 'ಸ್ವಯಂವರಂ' ಎಂಬ ಮಲೆಯಾಳಿ ಚಿತ್ರದಲ್ಲಿ ಬರುತ್ತದೆ. ಅದುವರೆಗೂ ಆ ಕೆಲಸ ಮಾಡುತ್ತಿದ್ದ ವ್ಯಕ್ತಿ ಕೆಲಸ ಕಳೆದುಕೊಂಡು ಕಾರ್ಖಾನೆ ಗೇಟ್ ಬಳಿ ಬಂದು ಹೇಳುವ ನಟನೆಯನ್ನು ಗೋಪಿ ಮಾಡಿದ್ದು ನನಗಿನ್ನು ನೆನಪಿದೆ.

ಬಂಗಾಳಿ ಮತ್ತು ಮಲೆಯಾಳಿ ಚಿತ್ರಗಳು ನಮ್ಮ ದೇಶದಲ್ಲಿ ಹೊಸ ಸಂವೇದನೆಗಳನ್ನು ಹೆಚ್ಚು ಪ್ರಚುರ ಪಡಿಸಿದವುಗಳಾಗಿದ್ದು ಈಗಲೂ ಆ ನಿಟ್ಟಿನಲ್ಲಿ ಚಿತ್ರಗಳನ್ನು ಅವರು ತೆಗೆಯುತ್ತಿದ್ದಾರೆ. ಅಂದರೆ ಸಿದ್ದ ಫಾರ್ಮುಲಾಗಳಿಗೆ ಜೋತು ಬೀಳದೆ ವಿಭಿನ್ನವಾಗಿ ಯೋಚಿಸಲು ಹಚ್ಚುವಂತೆ ವೈಚಾರಿಕ ಮತ್ತು ಜನಪರ ಕಾಳಜಿಗಳನ್ನು ಹೊಂದಿದ ವಸ್ತುಗಳನ್ನು ಅವರು ಆರಿಸಿಕೊಳ್ಳುವುದು ಕಂಡು ಬರುತ್ತದೆ. ಅಲ್ಲಿ ಆ ತರಹದ ಚಿತ್ರಗಳಿಗೆ ಒಂದು ರೀತಿಯ ಮಾರುಕಟ್ಟೆಯೂ ಒದಗಿರುವುದು ಕಾರಣವಾಗಿದೆ. ಅಲ್ಲಿಯ ಜನ ಮತ್ತು ಚಿತ್ರರಂಗಗಳೆರೆಡು ಮತ್ತು ಸರ್ಕಾರಗಳೂ ಸಹ ಈ ತರಹದ ಚಿತ್ರಗಳಿಗೆ ಅತ್ಯಂತ ಪ್ರೋತ್ಸಾಹ ಕೊಡುತ್ತಾ ಬಂದಿರುವುದೂ ಮತ್ತೆ ಮತ್ತೆ ಆ ತರಹದ ಚಿತ್ರಗಳು ಅಲ್ಲಿ ಮೂಡಿ ಬರಲು ಕಾರಣ. ಒಂದು ಸಿದ್ದ ಮಾದರಿಯ ಸಿನಿಮಾ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುವಂತೆಯೇ ಒಂದು ವಿಭಿನ್ನ ವಸ್ತು ಹೊಂದಿದ ಚಿತ್ರವೂ ಚಿತ್ರಮಂದಿರಗಳಲ್ಲಿ ಬಿಡುಗಡೆ ಹೊಂದುತ್ತದೆ. ಹಾಗೇಯೇ ಹಣವನ್ನು ಗಳಿಸುತ್ತದೆ. ಕೇರಳದ ಚಿತ್ರಮಂದಿರಗಳು ಶೇಕಡಾವಾರು ಹಂಚಿಕೆಗೆ ಒಳಪಟ್ಟಿರುತ್ತವೆ. ಅಂದರೆ ಒಂದು ಚಿತ್ರ ಕೇವಲ ೧೦೦ ರೂಪಾಯಿ ಗಳಿಸಿದರೂ ನಿರ್ಮಾಪಕನಿಗೆ ೫೦ ರೂಪಾಯಿಗಳಾದರೂ ಕೈ ಸೇರುತ್ತವೆ. ಆ ರೀತಿಯ ಹೊಂದಾಣಿಕೆ ಕರ್ನಾಟಕದಲ್ಲಿ ಈಗ ಮುಚ್ಚಿ ಪೋಲಿಸ್ ಸ್ಟೇಷನ್ ಆಗಿರುವ ಪುಟ್ಟಣ್ಣ ಚಿತ್ರಮಂದಿರದಲ್ಲಿ ಮಾತ್ರ ಇತ್ತು.

ಈಗ ತಾನೆ ಕನ್ನಡ ಚಿತ್ರರಂಗದ ಉಳಿವಿಗೆ ನಡೆದ ಹೋರಾಟ ನೆನೆಸಿಕೊಂಡು ಮೇಲಿನ ಮಾತುಗಳನ್ನು ಹೇಳುತ್ತಿದ್ದೇನೆ. ಹಾಗೆ ನೋಡಿದರೆ ಕರ್ನಾಟಕ ಸರ್ಕಾರಗಳು ಸಬ್ಸಿಡಿ ಮುಂತಾದ ರೂಪದಲ್ಲಿ ಸಿನಿಮಾಗಳಿಗೆ ಅಪರಿಮಿತ ಸಹಾಯ ಮಾಡುತ್ತಲೇ ಬಂದಿದೆ. ಈಗ ಹಿಂದೆಂದಿಗಿಂತಲೂ ಕನ್ನಡ ಚಿತ್ರಗಳಿಗೆ ಕುತ್ತು ಬಂದಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅದರ ಮೂಲ ಹಿಡಿದು ಹೊರಟರೆ ಭಾಷೆಯನ್ನು ವ್ಯವಸ್ಥಿತವಾಗಿ ತುಳಿದವರು ಮತ್ತು ತುಳಿಯುತ್ತಿರುವವರು ಗೋಚರಿಸುತ್ತಾರೆ. ಅದು ಸರ್ಕಾರ ಇರಬಹುದು ಅಥವಾ ಚಿತ್ರರಂಗದವರು ಇರಬಹುದು ಅಥವಾ ಹುಸಿ ಕನ್ನಡಪರ ಹೊರಾಟಗಾರರೇ ಇರಬಹುದು. ಒಟ್ಟಾರೆ ಇವರೆಲ್ಲರ ಇಬ್ಬಂದಿತನದಿಂದಾಗಿ ಕನ್ನಡ ಚಿತ್ರರಂಗ ನಶಿಸಿ ಹೋಗುತ್ತಿದೆ.

ಈಗ ಹಿಂದೆಂದಿಗಿಂತಲೂ ಕನ್ನಡ ಚಿತ್ರಗಳಿಗೆ ಕುತ್ತು ಬಂದಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅದರ ಮೂಲ ಹಿಡಿದು ಹೊರಟರೆ ಭಾಷೆಯನ್ನು ವ್ಯವಸ್ಥಿತವಾಗಿ ತುಳಿದವರು ಮತ್ತು ತುಳಿಯುತ್ತಿರುವವರು ಗೋಚರಿಸುತ್ತಾರೆ. ಅದು ಸರ್ಕಾರ ಇರಬಹುದು ಅಥವಾ ಚಿತ್ರರಂಗದವರು ಇರಬಹುದು ಅಥವಾ ಹುಸಿ ಕನ್ನಡಪರ ಹೊರಾಟಗಾರರೇ ಇರಬಹುದು. ಒಟ್ಟಾರೆ ಇವರೆಲ್ಲರ ಇಬ್ಬಂದಿತನದಿಂದಾಗಿ ಕನ್ನಡ ಚಿತ್ರರಂಗ ನಶಿಸಿ ಹೋಗುತ್ತಿದೆ.

ಮೇಲೆ ಮೇಲೆ ಜನಪ್ರಿಯವಾಗಿ ಭಾಷೆ ಮುಂತಾಗಿ ಹೇಳುತ್ತಾ ಬರುವ ಸರ್ಕಾರ ಅಧಿಕಾರಿಗಳ ನಿಯಂತ್ರಣದಲ್ಲಿದ್ದು ಈಗಲೂ ರಾಜ್ಯದ ಭಾಷೆಗೆ ಯಾವುದೋ ಅಮೇರಿಕದ ಮೈಕ್ರೊ ಸಾಫ್ಟ್‌ನ್ನು ದುಡ್ಡುಕೊಟ್ಟು ಅವರಿಗೆ ಗೊತ್ತಿರದ ನಮ್ಮ ಕನ್ನಡ ನಮಗೆ ಹೇಳಿಕೊಡಿ ಎಂದು ಬೇಡಿಕೊಳ್ಳುತ್ತಿದೆ. ಇಂಥವರಿಂದ ನೆಲ, ಜಲ, ಭಾಷೆ ಹೇಗೆ ಉಳಿಯಲು ಸಾಧ್ಯ? ಅದರಲ್ಲೂ ಸಿನಿಮಾದಲ್ಲಂತೂ ಹಣವೇ ತುಂಬಿರುವಾಗ ಕನ್ನಡ ಪರವಾಗಿ ಅದೂ ಸರ್ಕಾರ ನಡೆಸುವ ಮತ್ತು ಅಂದರೆ ರಾಜಕಾರಣಿಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುವ ಅಧಿಕಾರಿಗಳು ಕನ್ನಡ ಚಿತ್ರರಂಗಕ್ಕೆ ಸ್ಪಂದಿಸುತ್ತಾರೆನ್ನುವುದು ಕನಸಿನ ಮಾತೆ ಸರಿ.

ಎರಡನೆಯದು ನಮ್ಮ ಕನ್ನಡಪರ ಹೋರಾಟಗಾರರೂ ಮತ್ತು ಹಾಗೆಂದು ತೋರಿಸಿಕೊಳ್ಳುವವರು ವ್ಯಾಪಾರಸ್ಥ ರಾಜಕಾರಣಿಗಳಾಗಿರುವುದರಿಂದ ಅಲ್ಲದೆ ಅಧಿಕಾರ ದೊರಕಿದ ಕೂಡಲೇ ಅವರುಗಳೂ ಸಹ ಈ ಅಧಿಕಾರಿಗಳ ಕೈಗೊಂಬೆಯಾಗುವುದನ್ನು ನಾವು ಇದುವರೆಗೂ ಕಾಣುತ್ತಾ ಬಂದಿದ್ದೇವೆ.

ಮೂರನೆಯದು ಈಗಿನ ನಮ್ಮ ಕನ್ನಡ ಚಿತ್ರರಂಗ ಎಷ್ಟು ಕನ್ನಡತನ ಉಳಿಸಿಕೊಂಡಿದೆ? ಎಂಬುದನ್ನು ನೋಡಿದಾಗ ತೀವ್ರ ನಿರಾಸೆ ಮತ್ತು ಬೇಸರ ಉಂಟಾಗುತ್ತದೆ. ಈಗ ಬರುತ್ತಿರುವ ಕನ್ನಡ ಚಿತ್ರಗಳ ಹೆಸರುಗಳನ್ನು ನೋಡಿದರೆ ತಿಂದಿದ್ದು ವಾಂತಿ ಆಗುತ್ತದೆ. ಪೋಲೀಸ್ ಡಾಗ್, ಪೋಲೀಸ್ ಶೂ... ಕಿಚ್ಚ–ಕೊಚ್ಚ... ಕಳ್ಳನನ್ನಮಗ.. ಅಥವಾ ಇನ್ನೇನೋ... ಅವುಗಳು ಕನ್ನಡ ಹೆಸರಿನಲ್ಲಿದ್ದು ಕೆಳಗೆ ಆ ಹೆಸರಿಗೆ ಸಂಬಂಧವಿರದ ಇಂಗ್ಲೀಷ್ ಹೆಸರನ್ನು ಕೊಟ್ಟಿರುತ್ತಾರೆ. ಇದು ಕೇವಲ ಥರ್ಡ್‌ಕ್ಲಾಸ್ ಚಿತ್ರಗಳ ಅಥವಾ ನಟನಟಿಯರಿಗೆ ಮಾತ್ರ ಸೀಮಿತವಾಗಿ ಉಳಿದಿಲ್ಲ. ಅದು ರಾಜ್‌ಕುಮಾರ್ ಮಕ್ಕಳು ನಟಿಸಿರುವ ಚಿತ್ರಗಳಿಗೂ ಅನ್ವಯವಾಗುತ್ತದೆ. ನಿಜವಾದ ಕನ್ನಡತನ ಬಯಸುವವರು ಯಾಕೆ ಈ ಸಿನಿಮಾದವರಿಂದ ದೂರ ಉಳಿದರು ಅಂತ ಹಿಂದಿರುಗಿ ನೋಡಿದರೆ ಈ ಸಿನಿಮಾದವರು ಸಿನಿಮಾ ಹೇಗಾದರೂ ಮಾಡಿರಲಿ ಆದರೆ ಅವರುಗಳು ಧ್ವನಿಸುವ ಹೇಳುತ್ತಿರುವ ಕನ್ನಡ ಹೆಸರುಗಳು ಖಂಡಿತ ಭಾಷೆಗೆ ಹೆಸರು ತರುವಂತಹವುಗಳಲ್ಲ. ಅಲ್ಲದೆ ಎಲ್ಲರಿಗಿಂತಲೂ ಈ ಇಂಗ್ಲೀಷ್ ಹುಚ್ಚನ್ನು ಈ ಸಿನಿಮಾಗಳು ಏಡ್ಸ್ ತರಹ ಹಬ್ಬಿಸಿರುವದರಿಂದಲೇ ಹಳ್ಳಿಹಳ್ಳಿಗಳಲ್ಲಿ ಈ ಆಂಟಿ ಅಂಕಲ್ ಮಮ್ಮಿ ಡ್ಯಾಡಿಗಳು ಬರಲು ಹೆಚ್ಚಿನ ಕಾರಣಗಳಲ್ಲಿ ಒಂದು ಎಂದು ನನ್ನ ಭಾವನೆ.

ಒಂದು ಕಾಲದಲ್ಲಿ ಕನ್ನಡ ಚಿತ್ರಗಳು ಮದ್ರಾಸಿನಲ್ಲಿ ತಯಾರಾಗುತ್ತಿದ್ದವು. ಆಗ ಅವುಗಳು ನಿಜಕ್ಕೂ ಅಲ್ಪಸ್ವಲ್ಪ ಕನ್ನಡತನವನ್ನು ಮತ್ತು ನಮ್ಮಲ್ಲಿರುವ ಸಾಹಿತ್ಯ ಸಂಸ್ಕೃತಿಯನ್ನು ಹೇಳುತ್ತಿದ್ದವು. ಉದಾಹರಣೆಗೆ ಹಳೆಯ ಚಿತ್ರಗಳ ಕಡೆ ಒಮ್ಮೆ ನೋಡಿದರೆ ತಿಳಿಯುತ್ತದೆ. ರಣಧೀರ ಕಂಠೀರವ, ಭಕ್ತ ಕನಕದಾಸ, ಕೃಷ್ಣದೇವರಾಯ ಅಥವಾ ಸ್ಕೂಲ್ ಮಾಸ್ಟರ್, ನಾಂದಿ, ಮಿಸ್ ಲೀಲಾವತಿ, ಹೀಗೆ ಹೇಳುತ್ತಾ ಹೋಗಬಹುದು. ಪುಟ್ಟಣ್ಣನವರು ಕಾದಂಬರಿಗಳನ್ನು ಚಿತ್ರ ಮಾಡುವುದರೊಂದಿಗೆ ಮತ್ತು ಆ ಚಿತ್ರಗಳು ಯಶಸ್ಸನ್ನು ಕಾಣುವುದರೊಂದಿಗೆ ಹೊಸದೊಂದು ಪರಂಪರೆ ಹುಟ್ಟುಹಾಕಿದರು. ನಿಧಾನಕ್ಕೆ ಕನ್ನಡ ಚಿತ್ರರಂಗ ಬೆಂಗಳೂರಿಗೆ ವರ್ಗವಾಯಿತು. ಬೆಂಗಳೂರಿಗೆ ಬಂದ ನಂತರ ಕನ್ನಡದ ಇತಿಹಾಸವಿರುವ ಒಂದೇ ಒಂದು ಚಿತ್ರ ತಯಾರಾಗಿಲ್ಲದಿರುವುದು ಎಂತಹ ದುರಂತ ನೋಡಿ.

ಬಂದ ಚಿತ್ರಗಳು ರವಿಚಂದ್ರನ್‌ನ ರೀಮೇಕುಗಳು ಉಪೇಂದ್ರ, ಜಗ್ಗೇಶ್, ಶಿವರಾಜ್‌ಕುಮಾರ್ ಚಿತ್ರಗಳ ಜೊತೆಗೆ ವಿಷ್ಣು, ಅಂಬರೀಷ್, ಪ್ರಭಾಕರ್, ಅನಂತನಾಗ್‌ರ ಚಿತ್ರಗಳೂ ಸೇರಿವೆ. ಅವುಗಳಲ್ಲಿ ಕೇವಲ ಕೆಲವು ಮಾತ್ರ ಬೆರಳಣಿಕೆಯಲ್ಲಿ

ಒಂದು ಕಾಲದಲ್ಲಿ ಕನ್ನಡ ಚಿತ್ರಗಳು ಮದ್ರಾಸಿನಲ್ಲಿ ತಯಾರಾಗುತ್ತಿದ್ದವು. ಆಗ ಅವುಗಳು ನಿಜಕ್ಕೂ ಅಲ್ಪಸ್ವಲ್ಪ ಕನ್ನಡತನವನ್ನು ಮತ್ತು ನಮ್ಮಲ್ಲಿರುವ ಸಾಹಿತ್ಯ ಸಂಸ್ಕೃತಿಯನ್ನು ಹೇಳುತ್ತಿದ್ದವು.

ಉತ್ತಮ ಮಟ್ಟದವಾಗಿದ್ದವು. ಬರುಬರುತ್ತಾ ಚಿತ್ರದ ಹಾಡುಗಳು ನಿಂತಿದ್ದು ಕೂತಿದ್ದು ಹೇಳುತ್ತಿದ್ದವುಗಳು ಈಗ ' ಬಂದವಳೋ ಡೌವ್‌ಗಳೂ...ಕೆಂಚಾಲೋ... ಮಂಚಾಲೋ..' ಅಂತ ಬರುತ್ತಿವೆ. ಇದು ಯಾವ ಉಪೇಂದ್ರನ ಹಾಡೋ ಏನು ಕತೆಯೋ ಒಟ್ಟಾರೆ ಕನ್ನಡದ ಸೊಗಸು ಇವರುಗಳಿಂದ ನಾಶವಾಯಿತು. ವಿಜಯಭಾಸ್ಕರ್, ಜಿ.ಕೆ.ವೆಂಕಟೇಶ್ ಜಾಗಕ್ಕೆ 'ನಿಧಾನಕ್ಕೆ ಎತ್ತು ..ಒತ್ತು' ಎಂದು ಹೇಳುತ್ತಾ ಹಂಸಲೇಖ ಬಂದರು. ಈಗ ಅವರ ಜಾಗಕ್ಕೆ ಕೆಂಚಲೋ..ಮಂಚಲೋ ಬಂದಿದ್ದಾರೆ. ಸಹಜವಾಗಿ ಇವರು ಪ್ರತಿನಿಧಿಸುವ ಭಾಷೆ ಕನ್ನಡವೇ ಎಂಬ ಅನುಮಾನ ಪ್ರಜ್ಞಾವಂತರಲ್ಲಿ ಮೂಡಿ ಇವರ ಕನ್ನಡ ಚಳುವಳಿಗೆ ಬೆಂಬಲ ಸೂಚಿಸಿಲ್ಲವೆಂದು ಕಾಣಿಸುತ್ತದೆ.

ಕನ್ನಡ ಭಾಷೆಯನ್ನು ಈಗ ಉಪಯೋಗಿಸುವ ಈ ಸಿನಿಮಾದವರಷ್ಟು ಕೆಟ್ಟದಾಗಿ ತೀರ ಕೀಳಕಾಗಿ ಬೇರೆ ಯಾವುದೇ ಮಾಧ್ಯಮದವರು ಉಪಯೋಗಿಸುತ್ತಿಲ್ಲ. ಒಂದು ಕಾಲದಲ್ಲಿ ರಾಜ್‌ಕುಮಾರ್ ಚಿತ್ರಗಳು ಮತ್ತು ಸಿನಿಮಾ ಸಾಹಿತ್ಯ ರಚಿಸುತ್ತಿದ್ದ ಕುರಾಸೀ, ಹುಣಸೂರು, ಜಿ.ವಿ.ಅಯ್ಯರ್ ಮತ್ತು ಅವರು ಬಳಕೆಗೆ ತಂದ ಎಲ್ಲ ಸೊಗಡನ್ನು ಸೊಗಸನ್ನೂ ಈಗಿನ ಚಿತ್ರಗಳು ತೊಳೆದು ಹಾಕಿವೆ. ಕೊನೆಯ ಪಕ್ಷ ಈಗ ಚಳುವಳಿಯಲ್ಲಿ ನಿರತವಾಗಿರುವವರು ಶೆಕಡಾವಾರು ಪದ್ಧತಿಗೆ ಗಂಟುಬಿದ್ದಿರಬೇಕಿತ್ತು. ಅದರಿಂದ ಉತ್ತಮ ಚಿತ್ರಗಳಾದರು ತಯಾರಾಗಿ ಚೇತರಿಸಿಕೊಳ್ಳುತ್ತಿದ್ದವು. ಅದು ಬಿಟ್ಟು ಕೆಲವರ ವೈಯಕ್ತಿಕ ತೀಟೆಗೆ ಭಾಷೆಯೆಂಬ ಗುರಾಣಿ ಹಿಡಿದು ಹೊರಟಿದ್ದು ಮಾತ್ರ ಜನವಿರೋಧಿ ನಿಲುವು.

ಇನ್ನು ನಮ್ಮ ಚಿತ್ರಗಳು ಸಾಮಾಜಿಕ ಕಾಳಜಿಗಳಿಗೆ ಮತ್ತು ಜನ ಸಮುದಾಯಗಳಿಗೆ ಎಷ್ಟು ಸ್ಪಂದಿಸಿವೆ ಎಂದು ನೋಡಬಹುದು. ಹಾಗೆ ನೋಡಿದರೆ ಜಾಗತಿಕವಾಗಿ ಚಲನಚಿತ್ರಗಳು ಜನಪರವಾಗಿ ಮತ್ತು ಬದುಕಿಗೆ ಸ್ಪಂದಿಸಿರುವುದು ಬಹಳ ಕಡಿಮೆ ಪ್ರಮಾಣವೆಂದು ಹೇಳಬಹುದು. ಚಿತ್ರ ಮೊದಲು ಆವಿಷ್ಕಾರವಾದಾಗ ಬಂದ ಮೊದಲ ಚಿತ್ರಗಳೇ ವಾಸ್ತವ ಬದುಕನ್ನು ಹಿಡಿದಿಡಲು ಯತ್ನಿಸುತ್ತಿದ್ದವು. ಈಗಲೂ ಮೂಕಿ ಯುಗದಲ್ಲಿ ತಯಾರಾದ ರಷ್ಯಾದ ಐಸೆನ್‌ಸ್ಟೀನ್ ಚಿತ್ರಗಳು, ಅಮೇರಿಕದ ಗ್ರಿಫಿತ್, ಆಗಿನ ಸಮಕಾಲಿನ ಜರ್ಮನ್, ಫ್ರೆಂಚ್ ತಯಾರಕರಲ್ಲಿ ನಿಜ ಬದುಕನ್ನು ಮತ್ತು ಸಾಹಿತ್ಯವನ್ನು ಹಿಡಿದಿಡುವ ಮತ್ತು ಹಿಡಿದಿಟ್ಟಿರುವದನ್ನು ನಾವು ಕಾಣುತ್ತೇವೆ. ನಿಧನಿಧಾಕ್ಕೆ ಸಿನಿಮಾದ ತಾಂತ್ರಿಕತೆ ಬೆಳೆದಂತೆ ಚಾರ್ಲಿ ಚಾಪ್ಲೀನ್, ಬಸ್ಟರ್ ಕೀಟನ್‌ರು ನಗೆಯ ಮುಖಾಂತರ ವಾಸ್ತವದ ಕತೆಗಳನ್ನು ಹೇಳುತ್ತಾ ಬರುತ್ತಾರೆ.

ಸಿನಿಮಾಗಳಿಗೆ ಮಾತು ಬಂದ ನಂತರವಂತೂ ಎಲ್ಲಾ ತರಹದ ಸಾಹಿತ್ಯ ಸಂಸ್ಕೃತಿಯ ಜೊತೆಗೆ ಜನರ ಕನಸುಗಳನ್ನು ಈ ತಯಾರಕರು ಹೇಳತೊಡಗುತ್ತಾರೆ. ಎರಡನೆಯ ಮಹಾಯುದ್ಧದ ಸಮಯದಲ್ಲಿಯಂತೂ ಈ ಬದುಕಿನ ಕಟು ವಾಸ್ತವಗಳನ್ನು ಹೊಸ ಹೊಸ ಪ್ರಯೋಗಗಳ ಮುಖಾಂತರ ಅನೇಕರು ಶ್ರೇಷ್ಟಚಿತ್ರಗಳನ್ನು ತಯಾರಿಸಿದ್ದಾರೆ. ಅವರಲ್ಲಿ ಮೊದಲು ಎದ್ದು ನಿಲ್ಲುವವರು ಇಟಲಿ ದೇಶದವರು. ಅಲ್ಲಿ ವಿಸ್ಕೊಂಟಿಂದ ಹಿಡಿದು ಡಿಸಿಕಾ, ಫೆಲಿನಿಯವರೆಗೆ ತಳಸಮುದಾಯದ ಜನರ ದುಃಖದುಮ್ಮಾನಗಳನ್ನು ಅತ್ಯಂತ ಶ್ರೇಷ್ಟಮಟ್ಟದಲ್ಲಿ ನಿರೂಪಿಸಿದರು. ನಂತರ ಫ್ರೆಂಚ್ ಚಿತ್ರ ತಯಾರಕರು ಹೀಗೆಯೇ ಸಾಗುತ್ತದೆ.

ಹೊಸಹೊಸ ಆವಿಷ್ಕಾರಗಳಿಂದ ತಾಂತ್ರಿಕ ಅಳವಡಿಕೆಗಳಿಂದ ಸಿನಿಮಾಗಳು ಬೆಳೆದು ನಿಂತವು. ಆಗಲೇ ನೋಡಿ ಈ ಸಿನಿಮಾಗಳು ಕನಸುಗಳನ್ನು ಮತ್ತು ಕಾಮೋತ್ತೇಜಕ ಗುಣಗಳನ್ನು ಅಳವಡಿಸಿಕೊಂಡಿದ್ದು. ಅದರಲ್ಲೂ ಹಾಲಿವುಡ್ ಎಂಬ ಅಮೇರಿಕದ ಚಿತ್ರಗಳು ಜನರಿಗೆ ಕನಸುಗಳನ್ನು ಮತ್ತು ಕಾಮದ ಸ್ವರೂಪಕ್ಕೆ ಅಂದರೆ ಸುಂದರವಾಗಿರುವುದರ ಕಲ್ಪನೆಗೆ ಒತ್ತುಕೊಟ್ಟು ಜನ ಭ್ರಮೆಗಳ ದಾಸರಾಗುವಂತೆ ಮಾಡಿದವು. ಅಂದರೆ ಸಿನಿಮಾಗಳ ಹುಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ, ಇತಿಹಾಸ–ಬದುಕು, ಮುಂತಾಗಿ ಇವುಗಳೊಂದಿಗೆ ಸಹಜವಾಗಿ ಇರುತ್ತಿದ್ದ ಅಷ್ಟು ದೊಡ್ಡ ಪ್ರಮಾಣದಲ್ಲಿ ಕಾಣದಿದ್ದ ಕನಸು–ಕಾಮಗಳ ಅಂಶಗಳು ಅದು ಬೆಳೆದಂತೆ ಆವರಿಸಿಕೊಂಡುಬಿಟ್ಟಿತು.

ಇದು ಬರುಬರುತ್ತಾ ಕೇವಲ ಹಣ ಹಾಕುವುದು ಮತ್ತು ಲಾಭ ಮಾಡಿಕೊಳ್ಳುವುದು ಎಂಬ ಹಂತಕ್ಕೆ ಬಂದ ಮೇಲಂತೂ ಎಲ್ಲ ದೇಶದವರೂ ಹಾಲಿವುಡ್ ದಾರಿಯನ್ನೇ ಹಿಡಿದರು.

ಅಲ್ಲಿದ್ದುಕೊಂಡೇ ಅನೇಕ ಶ್ರೇಷ್ಟ ಚಿತ್ರಗಳನ್ನು ಕೊಟ್ಟ ಡೇವಿಡ್ ಲೀನ್, ಕಾಪ್ರ, ಡಿಮಿಲೆ ಮುಂತಾದರು ಇದ್ದಾರೆ. ಆದರೆ ಅವರುಗಳು ಕೇವಲ ಸಂಖ್ಯೆಯಲ್ಲಿ ಕಡಿಮೆ. ಅದು ನಮ್ಮ ದೇಶಕ್ಕೂ ಹಾಗೆಯೇ ಬಂತು.

ಮೊದಲು ರವಿವರ್ಮನ ಚಿತ್ರಗಳಿಗೆ ನಡೆದಾಡುವ ರೂಪ ಕೊಟ್ಟ ನಮ್ಮವರು ಅವುಗಳು ಹಾಡುವಂತೆ ಮಾಡಿದರು. ಪುರಾಣ ಪಾತ್ರಗಳನ್ನು ಜನ ನೋಡಿ ಬೆಕ್ಕಸ ಬೆರಗಾದರು. ಕ್ರಮೇಣ ನಮ್ಮ\ ತಯಾರಕರು ಹಾಡು ನೃತ್ಯಗಳನ್ನು ಅಳವಡಿಸಿ ಜನರನ್ನು ರಂಜಿಸಿದರು. ಅಷ್ಟೇ.... ಅಲ್ಲಿಂದ ಇಲ್ಲಿಯವರೆಗೆ ಸಿನಿಮಾಗಳೆಂದರೆ ಜನರನ್ನು ರಂಜಿಸುವುದು ಎಂಬ ಕಲ್ಪನೆಯೊಂದೇ ನಮ್ಮ ದೇಶದಲ್ಲಿ ಉಳಿದುಕೊಂಡು ಬಿಟ್ಟಿದೆ. ಮೊದಲು ಉತ್ತಮವಾಗಿರುದನ್ನು ವಿಶಿಷ್ಟವಾಗಿ ಮತ್ತು ವಿನೂತನವಾಗಿ ಹೇಳಲು ಬಿಮಲ್ ರಾಯ್, ಗುರುದತ್ ತರಹದವರು ಹೆಣಗಾಡಿದರು.



ಅಲ್ಲದೆ ಅವರು ನಮ್ಮ ದೇಶದ ಅತ್ಯುತ್ತಮವೆಂದು ಹೆಸರಿಸಬಹುದಾದ ಚಿತ್ರಗಳನ್ನು ಮಾಡಿದರು. ನಂತರ ಸತ್ಯಜಿತ್ ರೇ ಯಾವೊಂದು ಸಿದ್ದ ಮಾದರಿಗೆ ಜೋತು ಬೀಳದೆ ಚಿತ್ರ ನಿರ್ಮಿಸಿ ನಮ್ಮ ದೇಶದ ಗೌರವ ಕಾಪಾಡಿದರು.

ಚಿತ್ರ ಮೊದಲು ಆವಿಷ್ಕಾರವಾದಾಗ ಬಂದ ಮೊದಲ ಚಿತ್ರಗಳೇ ವಾಸ್ತವ ಬದುಕನ್ನು ಹಿಡಿದಿಡಲು ಯತ್ನಿಸುತ್ತಿದ್ದವು.

ವಾರ್ಷಿಕ ವಿಶೇಷಾಂಕ ೨೦೦೫



ನನಗೆ ತಿಳಿದಂತೆ ಮಲೆಯಾಳಿ ಮತ್ತು ಬಂಗಾಳಿ ಚಿತ್ರಗಳ ಜೊತೆಗೆ ನಮ್ಮ ಕಾಸರವಳ್ಳಿ ಚಿತ್ರಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಇರುವಂತಹವುಗಳು. ಸಿನಿಮಾಗಳ ಹೊಸ ಸಾಧ್ಯತೆಗಳನ್ನು ಸದಾ ಹುಡುಕುತ್ತಿರುವ ಇರಾನ್, ಚೀನಾ ದೇಶದವರ ಚಿತ್ರಗಳ ಜೋತೆಗೆ ಕಾಸರವಳ್ಳಿಯವರ ದ್ವೀಪ ಅಥವಾ ತಾಯಿಸಾಹೇಬ ಸ್ಪರ್ಧಿಸಿ ಗೆಲ್ಲುವ ಮಟ್ಟದಲ್ಲಿವೆ.

ಈ ಗುಂಪಿನಲ್ಲಿ ಕೆಲವು ಉತ್ತಮ ಚಿತ್ರಗಳನ್ನು ಕೊಟ್ಟ ರಾಜ್‌ಕಪೂರ್‌ರನ್ನು ಮರೆಯುವಂತಿಲ್ಲ. ಜಾಗ್ತೆರಹೋ ಅಂತ ಚಿತ್ರಕೊಟ್ಟ ಅವರು ಬಾಬ್ಬಿ ಎಂಬ ಕನಸು ಮತ್ತು ಕಾಮೋತ್ತೇಜನದ ಚಿತ್ರಕೊಡಲು ಶುರುಮಾಡಿದರು. ಈಗ ಹಿಂದಿ ಸಿನಿಮಾ ಯಾವ ಮಟ್ಟಕ್ಕೆ ಇಳಿದಿದೆ ಎಂದು ನೆನಸಿಕೊಳ್ಳಲು ಹೇಸಿಗೆ ಆಗುತ್ತದೆ. ನನಗೆ ತಿಳಿದಂತೆ ಮಲೆಯಾಳಿ ಮತ್ತು ಬಂಗಾಳಿ ಚಿತ್ರಗಳ ಜೊತೆಗೆ ನಮ್ಮ ಕಾಸರವಳ್ಳಿ ಚಿತ್ರಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಇರುವಂತಹವುಗಳು. ಸಿನಿಮಾಗಳ ಹೊಸ ಸಾಧ್ಯತೆಗಳನ್ನು ಸದಾ ಹುಡುಕುತ್ತಿರುವ ಇರಾನ್, ಚೀನಾ ದೇಶದವರ ಚಿತ್ರಗಳ ಜೋತೆಗೆ ಕಾಸರವಳ್ಳಿಯವರ ದ್ವೀಪ ಅಥವಾ ತಾಯಿಸಾಹೇಬ ಸ್ಪರ್ಧಿಸಿ ಗೆಲ್ಲುವ ಮಟ್ಟದಲ್ಲಿವೆ.

ಈ ಲೇಖನ ಬರೆಯಲು ನನಗೆ ಇಂದೂಧರ ಸೂಚಿಸಿದ್ದು ಚಲನಚಿತ್ರಗಳಲ್ಲಿ ತಳಸಮುದಾಯದ ಸಂವೇದನೆ ಕುರಿತು ಅಂತ. ಆದರೆ ನಾನು ನೋಡಿರುವ ಕನ್ನಡ ಚಿತ್ರಗಳು ನಿಜಕ್ಕೂ ಇಟಲಿಯ ಅಥವಾ ಬಿಮಲ್‌ರಾಯ್‌ರ ದೋ ಭಿಗಾ ಜಮೀನ್ ರ ಚಿತ್ರಗಳ ಮಟ್ಟಿಗೂ ಬಂದಿಲ್ಲದಿರುವುದರಿಂದ ಆ ವಿಷಯವನ್ನು ಅಲ್ಲಿಯೇ ಬಿಟ್ಟು ಈಗ ನಮ್ಮ ಕನ್ನಡ ಚಿತ್ರರಂಗ ಎದುರಿಸುತ್ತಿರುವ ಸಮಸ್ಯೆ ಬಗ್ಗೆ ಬರೆಯತೊಡಗಿದೆ. ಅವರುಗಳ ಬಗ್ಗೆ ಯೋಚಿಸುತ್ತಿದ್ದಂತೆ ತೀರಾ ನಿರಾಶೆ ಮತ್ತು ಸುಸ್ತು ಆಗತೊಡಗಿತು. ಎಲ್ಲರೂ ಕನಸು ಮತ್ತು ಕಾಮವನ್ನು ಜನರಿಗೆ ತುಂಬುವವರೇ ಆಗಿರುದರಿಂದ ಅವರ ವೈಯಕ್ತಿಕ ನೆಲೆಗೆ ಸಿನಿಮಾಗಳನ್ನು ದುರ್ಬಳಕೆ ಮಾಡುವವರ ಬಗ್ಗೆ ಬರೆಯದಿರುವುದೇ ಒಳಿತು ಅನ್ನಿಸಿದ್ದು ನಿಜ.

ಉತ್ತರ ಭಾರತಕ್ಕಿಂತಲೂ ನಮ್ಮ ದಕ್ಷಿಣ ಭಾರತದಲ್ಲಿ ಈ ಕನಸುಗಳಿಗೆ ಜನ ಜೋತು ಬಿದ್ದಿರುವುದನ್ನು ನಾವು ಕಾಣುತ್ತೇವೆ. ನೀವು ಯಾವುದಾದರೂ ಎಮ್‌ಜಿಆರ್ ಚಿತ್ರಗಳನ್ನು ನೋಡಿ. ಆ ಚಿತ್ರಗಳಲ್ಲಿ ಕಡ್ಡಾಯವಾಗಿ ಅವನು ಟೇಬಲ್ ಮೇಲೆ ಕುಳಿತು ಬಗೆ ಬಗೆಯ ಭಕ್ಷ್ಯಗಳೊಂದಿಗೆ ಕುಳಿತು ಊಟ ಮಾಡುವ ದೃಶ್ಯ ಇರುತ್ತಿದ್ದವು. ಜೊತೆಗೆ ಅವನು ನೂರಾರು ಜನರೊಂದಿಗೆ ಹೊಡೆದಾಡಿ ಗೆದ್ದು ಬಡಬಗ್ಗರಿಗೆ ದಾನ ಮಾಡುವ ದೃಶ್ಯಗಳೂ ಇರುತ್ತಿದ್ದವು. ಊಟ ತೊರೆದು ರಕ್ತ ಕೊಟ್ಟು ಹಣ ಪಡೆದು ಆ ಹಣ ಕೊಟ್ಟು ಅವನ ಚಿತ್ರಗಳನ್ನು ಜನ ನೋಡಲು ಬರುತ್ತಿದ್ದರು. ಹಸಿವಿನಿಂದ ಕೂಡಿದ ಅವರಿಗೆ ಸಿನಿಮಾಗಳಲ್ಲಿ ಶ್ರೀಮಂತರ ಊಟದ ನೋಟವಿರುತ್ತಿತ್ತು. ಕನಸುಗಳು ಹೇಗೆ ವಾಸ್ತವವಾಗುತ್ತವೆ ಅಂದರೆ ಅವನಿಗೆ ಭಾರತರತ್ನ ಪ್ರಶಸ್ತಿ ಕೊಡಲ್ಪಟ್ಟಿತು. ಅವನು ಮುಖ್ಯಮಂತ್ರಿ ಆದ. ಅವನು ಸತ್ತಿದ್ದರೂ ಅವನ ಹೆಣವನ್ನಿಟ್ಟುಕೊಂಡು ಅನೇಕ ತಿಂಗಳು ರಾಜ್ಯವಾಳಿದರು. ಹೋಗಲಿ ಅವನು ಸತ್ತು ಹೋಗಿದ್ದರು ಅವನು ಮದುವೆಯಾಗದೆ ಇಟ್ಟುಕೊಂಡ ಒಬ್ಬಳು ನಟಿ ಜಯಲಲಿತ ಅವನ ವಾರಸುದಾರಳಂತೆ ಈಗ ಒಂದು ರಾಜ್ಯ ಆಳುತ್ತಿದ್ದಾಳೆ.

ಮೇಲಿನ ಎಲ್ಲವೂ ಸಿನಿಮಾಗಳ ಮುಖಾಂತರ ಅವರು ಜನರ ಮೇಲೆ ಪ್ರಯೋಗಿಸಿ ಪಡೆದುಕೊಂಡವುಗಳು ಅಂತ ಬೇರೆ ಹೇಳಬೇಕಿಲ್ಲ. ಇದು ಕೇವಲ ನಮ್ಮ ದೇಶದ ಅಥವಾ ರಾಜ್ಯದ ಪ್ರಶ್ನೆ ಅಲ್ಲ. ಈ ರೀತಿ ಎಲ್ಲಾ ಕಡೆಯೂ ನಡೆದಿದೆ. ಹಣಹಾಕಿ ಹಣಬಾಚುವದಕ್ಕಷ್ಟೆ ಇದು ಮೊದಲು ನಿಂತಿದ್ದು ಕಾಲ ಕ್ರಮೇಣ ಇವುಗಳು ಬೀರುವ ಪ್ರಭಾವಗಳ ಇತರೆಗಳ ಕಡೆ ಅವರು ತಿರುಗಿದ್ದರಿಂದಲೇ ರಾಜಕೀಯ ಮತ್ತು ಸಾಂಸ್ಕೃತಿಕ ದಬ್ಬಾಳಿಕೆಯನ್ನು ದೃಶ್ಯ ಮಾಧ್ಯಮದ ಮುಖಾಂತರ ಹೇರಲು ಕಾರಣವಾಯಿತು. ಆಳುವ ಅಧಿಕಾರದ ತೀಟೆಗೆ ಬಿದ್ದವರು ಈಗಲೂ ಸಿನಿಮಾವನ್ನು ಅವರ ಮೊದಲ ಏಣಿಯನ್ನಾಗಿ ಉಪಯೋಗಿಸುವುದನ್ನು ನಾವು ಈಗಲೂ ಕಾಣುತ್ತೇವೆ.

ಭಾರತದಂತಹ ದೇಶದ ಯುವ ಜನರು ಅಮೇರಿಕದ ಹಂದಿಯ ತಿನಿಸಿಗೆ ಮತ್ತು ಅವರುಗಳು ಮಾತನಾಡುವ 'ಶಿಟ್...ಫಕ್...' ಇತ್ಯಾದಿಗಳ ಅನುಕರಣೆಗೆ ಈ ಮಾಧ್ಯಮ ಪ್ರಬಲ ಕಾರಣಗಳಲ್ಲಿ ಒಂದು. ' ಸಲಾಂ ಬಾಂಬೆ ' ಎಂಬ ಚಿತ್ರದಲ್ಲಿ ಚಿಕ್ಕ ಹುಡಗರು ನಟಿ ಶ್ರೀದೇವಿ ಚಿತ್ರ ನೋಡಿ ಉಚ್ಚೆ ಹೊಯ್ಯುವುದು ಮತ್ತು ಹಸ್ತಮೈಥುನ ಮಾಡಿಕೊಳ್ಳುವುದನ್ನು ತೋರಿಸಲಾಗಿದೆ. ಸಿನಿಮಾಗಳಲ್ಲಿ ಮೊದಲು ನಗ್ನವಾಗಿ ನಟಿಸಲು ನಟಿಯರು ಬೇರೆ ಇರುತ್ತಿದ್ದರು.

ನಮ್ಮ ಕನ್ನಡ ಚಿತ್ರಗಳನ್ನು ನೋಡಿದರೆ ಭಾರತಿ, ಲೀಲಾವತಿಯವರು ನಾಯಕಿರಾಗಿಯೂ ನಗ್ನವಾಗಿ ಕುಣಿಯಲು ಜ್ಯೋತಿಲಕ್ಷ್ಮಿಯ ತರಹದವರು ಇರುತ್ತಿದ್ದರು. ಈಗ ನಟಿಯರೇ ಎಲ್ಲದೂ ಮಾಡುವುದರಿಂದ ಅವರ ಕಾಮದ ಪಾತ್ರಗಳು ಹೆಚ್ಚಿ ನಟನೆ ಗೌಣವಾಗಿದೆ. ಭ್ರಮೆಯ ಅವಾಸ್ತವದ ಚಿತ್ರಣಗಳು ಮತ್ತು ಕಾಮದ ವೈಭವೀಕರಣಗಳು ಎದ್ದುಕಂಡು ಒಳ್ಳೆಯ ಸಿನಿಮಾಗಳನ್ನು ಹುಡುಕುವುದೇ ದುಸ್ತರವಾಗಿದೆ. ಬೇರೆ ರಾಜ್ಯಗಳಲ್ಲಿ ಇರುವಷ್ಟು ಸಿನಿಮಾಗಳ ಅಂಧಾನುಕರಣೆ ನಮ್ಮ ರಾಜ್ಯದಲ್ಲಿ ಕಡಿಮೆ ಎಂದೇ ಹೇಳಬೇಕು. ಅದರೂ ಅವುಗಳು ಧ್ವನಿಸುವ ಅರ್ಥಗಳ ಅನಾಹುತಗಳು ಮಾತ್ರ ಯಾವುದೇ ಅಣುಬಾಂಬ್ ವಿಷಾನಿಲಗಳನ್ನು ಮೀರಿಸುವಂತಹದ್ದು.

ಸಿನಿಮಾಗಳು ಆವಿಷ್ಕಾರಗೊಂಡು ಟಿವಿಗಳು, ಕಂಪ್ಯೂಟರ್‌ಗಳು ಬಂದು ಜನ ಇನ್ನಷ್ಟು ದೃಶ್ಯ ಮಾಧ್ಯಮಗಳಿಲ್ಲದೆ ಬದುಕಲಾರದ ಸ್ಥಿತಿಗೆ ತಂದು ನಿಲ್ಲಿಸಿವೆ. ಎಂತಹ ವಾತ್ಸಾಯನನ್ನು ಮೀರಿಸಿ ತೋರಿಸುವ ಚಲನೆಗಳ ಕುಣಿತ ಕ್ಕಾಗಿಯೇ ಈ ಟಿವಿಗಳ "ವಿ" ಮತ್ತು "ಎಂ"ಟಿವಿಗಳು ಹುಟ್ಟಿಕೊಂಡಿವೆ.

ಅದರಲ್ಲೂ ನಮ್ಮ ದೇಶದಲ್ಲಿ ಸೆನ್ಸಾರ್ ಎಂಬ ಒಂದು ಮಂಡಳಿ ಇರುವುದರಿಂದ ಅಲ್ಲದೆ ಅದು ಸರ್ಕಾರಿ ಹಿಡಿತದಲ್ಲಿರುವುದರಿಂದ ಅಲ್ಲಿ ಲಂಚ ಹೆಚ್ಚು ತಾಂಡವವಾಡುತ್ತಿದೆ. ಅಲ್ಲಿಂದ ಕಾಮಕ್ಕೆ ಸಂಬಂಧಿಸಿದ ದೃಶ್ಯಗಳು ಎಡೆತಡೆಯಿಲ್ಲದೆ ವಿಕಾರವಾಗಿ ಹೊರಬರುತ್ತವೆ. ಹಸಿವು, ಸೂರುಗಳಿಲ್ಲದ ನಮಗೆ ಅವುಗಳನ್ನು ಭ್ರಮೆಯ ಮೂಲಕ ಅವುಗಳು ಕಟ್ಟಿಕೊಡುವುದರೊಂದಿಗೆ ಈ ಕಾಮದ ಉತ್ತೇಜಕಗಳು ಎಲ್ಲರನ್ನು ಸೆಳೆಯುತ್ತವೆ. ಸಿನಿಮಾಗಳು ಆವಿಷ್ಕಾರಗೊಂಡು ಟಿವಿಗಳು, ಕಂಪ್ಯೂಟರ್‌ಗಳು ಬಂದು ಜನ ಇನ್ನಷ್ಟು ದೃಶ್ಯ ಮಾಧ್ಯಮಗಳಿಲ್ಲದೆ ಬದುಕಲಾರದ ಸ್ಥಿತಿಗೆ ತಂದು ನಿಲ್ಲಿಸಿವೆ. ಎಂತಹ ವಾತ್ಸಾಯನನ್ನು ಮೀರಿಸಿ ತೋರಿಸುವ ಚಲನೆಗಳ ಕುಣಿತಕ್ಕಾಗಿಯೇ ಈ ಟಿವಿಗಳ ವಿ. ಮತ್ತು ಎಂಟಿವಿಗಳು ಹುಟ್ಟಿಕೊಂಡಿವೆ. ಮೆಲ್ಲಗಡೆ ಗೌರಮ್ಮನ ತರಹ ಕಾಣಿಸಿಕೊಳ್ಳಲು ಇಷ್ಟಪಡುವ ಇಂತಿಷ್ಟು ಬಿಟ್ಟು ಸಭ್ಯತೆ ಮೀರಬಾರದೆಂದು ಸೆನ್ಸಾರ್ ತಂದುಕೊಂಡ ನಾವು ಎಷ್ಟೊಂದು ವಿಕೃತವಾಗಿ ಸಿನಿಮಾಗಳಲ್ಲಿ ಕುಣಿಯುತ್ತಿದ್ದೇವೆ ಎಂದು ನೋಡಿದಾಗ ಹೇಸಿಗೆ ಹುಟ್ಟುತ್ತದೆ. ಬಹುಷ್ಯ ಬಿಚ್ಚಿ ತೋರಿಸದೆ ಕಾಮದ ಪ್ರಚೋದನೆ ಮಾಡಬೇಕಾಗಿ ಬಂದ ಸಿನಿಮಾದವರು ಕಂಡುಕೊಂಡ ಹೊಸ ರೂಪವೇ ಈ ವಿಕೃತ ಕುಣಿತಗಳು ಅಂತ ಕಾಣಿಸುತ್ತದೆ. ಈಗೀಗಲಂತೂ ಕೇವಲ ಐಶ್ವರ್ಯರೈ ತರಹದ ಹೆಣ್ಣುಗಳಲ್ಲದೆ ಗಂಡಸರೂ ಬಟ್ಟೆ ಬಿಚ್ಚಿ ಕಾಮೋದ್ರೇಕಕ್ಕೆ ಯತ್ನಿಸುವುದನ್ನು ನಾವು ಕಾಣುತ್ತಿದ್ದೇವೆ. ಈ ಸಲ್ಮಾನ್‌ಖಾನ್ ಎಂಬ ನಟ ಅಂಗಿ ತೊಟ್ಟಿರುವುದನ್ನು ನೋಡಿಯೇ ಇಲ್ಲ.

ನಮ್ಮ ಕನ್ನಡ ಚಿತ್ರರಂಗ 'ಬೇಡರ ಕಣ್ಣಪ್ಪ' ನಿಂದ ಈಗಿನ 'ಗುನ್ನ'ದವರೆಗೆ ಬೆಳೆದ ಪರಿಯಿಂದಲೇ ಅದು ಸಾಗುತ್ತಿರುವ ದಾರಿ ಎದುರಿಗೆ ಕಾಣಿಸುತ್ತದೆ. ಅದಮ್ಯ ಕನಸುಗಳಿಲ್ಲದೆ ಸಿನಿಮಾಗಳನ್ನು ತಯಾರಿಸಲು ಆಗುವುದಿಲ್ಲ. ತಾನು ಕನಸಿದ್ದನ್ನು ದೃಶ್ಯಗಳ ಮುಖಾಂತರ ತೆಗೆದು ಜೋಡಿಸುತ್ತಾ ಅದಕ್ಕೊಂದು ರೂಪ ಕೊಡುವುದರ ಹಿಂದೆ ತಯಾರಕನ ಶ್ರಮ ಇರುತ್ತದೆ. ಆದರೆ ನಮ್ಮಲ್ಲಿ ಕೆಲವರನ್ನು ಬಿಟ್ಟರೆ ಈ ಶ್ರಮದ ಹಿಂದಿನ ಉದ್ದೇಶವನ್ನು ಸರಿಯಾಗಿ ಉಪಯೋಗಿಸುವವರು ಸದ್ಯಕ್ಕೆ ನನಗೆ ಕಾಣುತ್ತಿಲ್ಲ. ಬೇರೆಡೆ ಬಂದ ಹಳಸಲುಗಳ ಕೊಳಕು ಅನುಕರಣೆಗಳು ಒಂದು ಕಡೆ ಕಂಡುಬಂದರೆ ಇನ್ನೊಂದು ಕಡೆ ಉತ್ತೇಜಕಕ್ಕಾಗಿ ಏನೇನೋ ಊಹಿಸಲು ಹೌಹಾರುವ ವಿಕೃತಗಳ ಸರಮಾಲೆಗಳೇ ಈಗಿನ ನಮ್ಮ ಕನ್ನಡ ಚಿತ್ರರಂಗದಲ್ಲಿ ಕಂಡು ಬರುತ್ತಿವೆ. ಇಂತವರಿಂದ ನಮ್ಮ ಬದುಕು- ಬರಹಗಳ, ನಮ್ಮ ನಾಡು ನುಡಿಗಳ ಏಳಿಗೆ ಮತ್ತು ಉಳಿವು ಆಗುತ್ತದೆಯೆಂದು ನಂಬುವುದು ಕೇವಲ ಕನಸಿನ ಭ್ರಮೆ ಮಾತ್ರ. ❑

ಮುಟ್ಟಾಟ

○ ಡಾ॥ ಸಬಿಹಾ

ಸಂಬಂಧಗಳೂ ಮುಟ್ಟಾಟವಾಡುತ್ತವೆ
ಹೀಗೆ ಬಂದು ಇನ್ನೇನು ಸಿಕ್ಕೇಬಿಟ್ಟು
ಅರಿತೇಬಿಟ್ಟೆ ಎನ್ನುವಷ್ಟರಲಿ
ದೂರ ದೂರ ಸಾಗುವುವು
ಅದೋ ದೂರ ಬಹುದೂರ
ಮುಟ್ಟಲಾರೆ ಹಿಡಿಯಲಾರೆ ಎಂದೇ
ತೋರಿದವು ಅರಿವಿಗೇ ಬರದಂತೆ
ಬಳಿಸಾರಿ ತೆಕ್ಕೆಗೆ ಬಿದ್ದಿರುತ್ತವೆ ॥ ಸಂಬಂಧಗಳೂ..

ಆಡುತ್ತ ಆಡುತ್ತ ಮಧ್ಯೆ
ಹಿಡಿವವರು ಓಡುವವರು ಯಾರೆಂದು
ಅವರಿವರಿಗೂ ತಿಳಿಯದೆ ತಬ್ಬಿಬ್ಬಾಗಿ
ಹಿಡಿತಕೆ ಸಿಗಬಾರದು
ಹಿಡಿಸಿಕೊಳಲೂ ಬಾರದೆಂದು
ಓಡಿ ದಣಿದವರು
ದಾರಿಯಲಿ ಏಕಾಂಗಿಯಾದವರು
ಮತ್ತೆಲ್ಲೊ ದಾರಿಮಧ್ಯೆ ಭೇಟಿ ॥ ಸಂಬಂಧಗಳೂ...

ಚೈನಾಟದ್ದು ಮಗದೊಂದು ನೋಟ
ಔಟಾಗದೆ ತಪ್ಪಿಸಿಕೊಳ್ಳಲು
ಬೇಕು ಇವರಿಗೆ ಇನ್ನೊಬ್ಬರ ಸಹಾಯ
ವೈರಿಯ ವೈರಿ ಗೆಳೆಯನೆಂಬಂತೆ
ಜೀವ ಉಳಿಸಿಕೊಳಲು ಯಾರೂ ಆದೀತು
ಇದ ಅರಿಯದೇ ನಂಟ ನಂಬಿದರೆ
ಕೊಡಬೇಕು ಸುಂಕ ಕುತ್ತಿಗೆಮಟ್ಟ ॥ ಸಂಬಂಧಗಳೂ...

ಮುಟ್ಟಾಟದ ನಿಯಮವೇ ಇಷ್ಟು
ಸೋತವ ಒಬ್ಬರನಾದರೂ
ಸೋಲಿಸಬೇಕು ಇಲ್ಲವೇ
ತಾನೇ ತಾನೇ ಬೆನ್ನು ಬಾಗಿಸಬೇಕು
ಇದ ತಪ್ಪಿಸಲು ಒಬ್ಬರನಾದರೂ
ಬಕರಾ ಮಾಡಬೇಕು
ಸಂಬಂಧ ಹಳಸುವಂತೆ
ಮಾಡಬೇಕು ಬೆಸೆಯುವಂತೆಯೂ ॥ ಸಂಬಂಧಗಳೂ...

ಸಂಬಂಧಗಳದೂ ಎಂಥ ಮುಟ್ಟಾಟ
ಹತ್ತು ನೂರು ಎಣಿಸುವಷ್ಟರಲಿ
ಸುತ್ತಮುತ್ತಲಿನ ನೂರಾರು ಬಂಧಗಳು
ನುಚ್ಚುನೂರು ದಿಕ್ಕಾಪಾಲು
ಕಣ್ಣು ಕೊನೆಗೂ ತೆರೆದಾಗ

ಕಳೆದ ಸಂಬಂಧದ ಒಂದೊಂದೇ
ಎಳೆಯ ಹುಡುಕುತ್ತ ಹೆಣೆಯುತ್ತ
ಹಾಕಬೇಕು ತರತರದ ಕಸೂತಿ
ಕಲಾತ್ಮಕತೆ ಕೌದಿಗೂ ಪ್ರಾಪ್ತಿ ॥ ಸಂಬಂಧಗಳೂ . . .

ಶಾಸನಗಳಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ

ಶಾಸನಗಳ ಸಾಂಸ್ಕೃತಿಕ ಅಧ್ಯಯನದ ಮತ್ತು ವ್ಯಾಖ್ಯಾನ ಹಲವು ಬಗೆಗಳಲ್ಲಿ ನಮ್ಮಲ್ಲಿ ನಡೆದಿದೆ. ಕರ್ನಾಟಕ ಸಂಸ್ಕೃತಿಯ ಹಲವು ಮುಖಗಳ ಅಧ್ಯಯನಕ್ಕೆ ಇದು ಪ್ರೇರಣೆ ನೀಡಿದೆ. ಶಾಸನಗಳ ಬಹುಮುಖಿ ದಾಖಲೆ, ಖಚಿತವಾದ ವಿವರಗಳು ಒಟ್ಟು ಸಂಸ್ಕೃತಿಯ ಪುನಾರಚನೆಗೆ ಬೆಂಬಲ ನೀಡಿದೆ. ಆದರೆ, ದುರದೃಷ್ಟವಶಾತ್ ಅಸ್ಪೃಶ್ಯತೆಯ ವಿವರಗಳನ್ನು ನೇರವಾಗಿ ದಾಖಲಿಸುವ ಶಾಸನಗಳು ಕೈ ಬೆರಳೆಣಿಕೆಯಷ್ಟು. ಶಾಸನಗಳಲ್ಲಿ ಬಹುಪಾಲು ಬ್ರಾಹ್ಮಣರ ಬದುಕನ್ನು ಚಿತ್ರಿಸಿರುವಷ್ಟು ಅಸ್ಪೃಶ್ಯರ ವಿವರಗಳು ಒಂದು. ಚಮಚದಷ್ಟು ಅಂದಿನ ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಬದುಕು ಕೇವಲ ಮೇಲ್ವರ್ಣ ಅಥವಾ ಮೇಲ್ವರ್ಗದವರ ಪಾಲಾಗಿತ್ತೆಂಬುದನ್ನು ನಾವು ಮರೆತು ನಡೆಯುವಂತಿಲ್ಲ. ಒಂದು ವೀರಗಲ್ಲೋ ಒಂದು ದೇವಾಯಲವೊ ಒಂದು ಮಂಟಪವೊ ಒಂದು ಬಸದಿಯೊ ಹೀಗೆ ಏನೇ ನಿರ್ಮಾಣ ಮಾಡಲಿ ಅದರ ಹಿಂದೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಪ್ರಬಲವಾದ ಹಿಡಿತ ಇತ್ತು. ಒಟ್ಟು ಸಾಂಸ್ಕೃತಿಕ ಬದುಕನ್ನು ನಿಯಂತ್ರಣ ಮಾಡುತ್ತಿದ್ದವರು ಸಮಾಜದ ಮೇಲುವರ್ಣದವರೇ. ಈ ಅಂಶ ಕರ್ನಾಟಕಕ್ಕೆ ಮಾತ್ರವಲ್ಲ, ಒಟ್ಟು ಸಮಗ್ರವಾಗಿ ಭಾರತಕ್ಕೆ ಸಂಬಂಧಿಸಿದ್ದು.

ಅಸ್ಪೃಶ್ಯತೆಯ ಬಗೆಗೆ ಕನ್ನಡದಲ್ಲಿ ಬಂದಿರುವ ಬರವಣಿಗೆಗಳು ತೀರ ಪ್ರಾಥಮಿಕ ಹಂತದವು. ಸಾಹಿತ್ಯ ಮತ್ತು ಶಾಸನಗಳನ್ನು ಅಧಿಕರಿಸಿಕೊಂಡು ನಡೆದಿರುವ ಅಧ್ಯಯನಕ್ಕೆ ಎಂ. ಚಿದಾನಂದಮೂರ್ತಿ ಅವರದೇ ಮೊದಲ ಹಾಗೂ ಕೊನೆಯ ಮಾತು.[1] ಅವರ ಅಧ್ಯಯನದಲ್ಲಿ ಸಾಹಿತ್ಯಕ್ಕೆ ಮೀಸಲಾಗಿರುವಷ್ಟು ಶಾಸನಕ್ಕೆ ಮೀಸಲಾಗಿಲ್ಲ. ಇದಕ್ಕೆ ಅವರು ಕೊಟ್ಟಿರುವ ಕಾರಣ 'ಶಾಸನಗಳಲ್ಲಿ ಅಸ್ಪೃಶ್ಯರ ಬಗೆಗಿನ ಸಾಮಗ್ರಿ ತೀರ ಬಡಕಲು' ಎಂಬುದು.

ಈ ಮಾತು ಶಾಸನಗಳ ವಿಷಯದಲ್ಲಿ ಸತ್ಯವೆಂಬುದೇನೊ ಸರಿ. ಆದರೆ, ಆಗ ನಮ್ಮ 'ಅಧ್ಯಯನ ಪದ್ಧತಿ' ಯನ್ನು ವಿರುದ್ಧ ದಿಕ್ಕಿನಿಂದ ನೋಡಬೇಕಾಗುತ್ತದೆ. ಅಥವಾ ಸಿಗುವ ಸಾಮಗ್ರಿಯಿಂದ ಸಿಗದಿರುವ ಸಾಮಗ್ರಿಯತ್ತ ಕಣ್ಣು ಹಾಯಿಸ ಬೇಕಾಗುತ್ತದೆ. ಸದ್ಯದ ಲೇಖನದಲ್ಲಿ ಇಂಥ ಮಾದರಿಯನ್ನು ಅನುಸರಿಸಲಾಗಿದೆ. ಈ ಬಗೆಯ ಅಧ್ಯಯನ ಶುರು ಮಾಡುವ ಮೊದಲು 'ಅಸ್ಪೃಶ್ಯತೆ'ಯ ಪರಿಕಲ್ಪನೆಯನ್ನು ಒಟ್ಟು 'ಸ್ಮೃತಿ ಭಾರತ'ದ ನೆಲೆಯಲ್ಲೂ ಅದನ್ನು ವಿವರಿಸಿಕೊಳ್ಳುತ್ತ 'ಕರ್ನಾಟಕ'ದ ನೆಲೆಗೂ ತಂದು ನೋಡುವ ಪ್ರಯತ್ನ ಮಾಡಬೇಕಾಗಿದೆ.

ಅಸ್ಪೃಶ್ಯತೆಯ ನೆಲೆಯನ್ನು ಹುಡುಕುವವರು ಮೊದಲು ಪ್ರವೇಶಿಸುವುದು ವೇದಗಳನ್ನು ತಾನೆ ? ವೇದಗಳಲ್ಲಿ ಕಂಡು ಬರುವಂಥ ವರ್ಣವ್ಯವಸ್ಥೆಯೇ ಮುಂದೆ ಜಾತಿಗಳಿಗೆ ಎಡೆಮಾಡಿಕೊಟ್ಟಿತೆಂದು ಸಾಮಾನ್ಯವಾಗಿ ಎಲ್ಲ ವಿದ್ವಾಂಸರ ನಂಬಿಕೆಯಾಗಿದೆ. ಋಗ್ವೇದದ ಕೊನೆಯ ಮಂಡಲದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳ ಪ್ರಸ್ತಾಪವಿದೆ. ಮುಂದಿನ ವಾಙ್ಮಯದಲ್ಲಿ ಬ್ರಾಹ್ಮಣ ಕ್ಷತ್ರಿಯಾದಿಗಳು ಸಾಂಪ್ರದಾಯಿಕ 'ವರ್ಣ' ಗಳೆಂದು ಭಾವಿತವಾದರೂ ಋಗ್ವೇದದಲ್ಲಿ 'ವರ್ಣ' ಎನ್ನುವ ಮಾತು ನಾಲ್ಕು ಗುಂಪುಗಳಿಗೆ ಅನ್ವಯವಾಗುವಂತೆ ಬಳಕೆಯಾಗಿಲ್ಲ. ಬ್ರಾಹ್ಮಣ (ಕವಿ, ಪುರೋಹಿತ, ವಿದ್ವಾಂಸ) ಕ್ಷತ್ರಿಯ (ಆಳುವಾತ) ವೈಶ್ಯ (ವ್ಯವಸಾಯ, ವ್ಯಾಪಾರ) ಶೂದ್ರ (ಸೇವಾಕಾರ್ಯ ಮಾಡುವವನು). ಋಗ್ವೇದದ ಆರಂಭಕ್ಕೆ ಇದೂ ಸಹ ಇರಲಿಲ್ಲ.



ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ

ಅಸ್ಪೃಶ್ಯತೆಯ ಬಗೆಗೆ ಕನ್ನಡದಲ್ಲಿ ಬಂದಿರುವ ಬರವಣಿಗೆಗಳು ತೀರ ಪ್ರಾಥಮಿಕ ಹಂತದವು. ಸಾಹಿತ್ಯ ಮತ್ತು ಶಾಸನ ಗಳನ್ನು ಅಧಿಕರಿಸಿಕೊಂಡು ನಡೆದಿರುವ ಅಧ್ಯಯನಕ್ಕೆ ಎಂ. ಚಿದಾನಂದಮೂರ್ತಿ ಅವರದೇ ಮೊದಲ ಹಾಗೂ ಕೊನೆಯ ಮಾತು.[1] ಅವರ ಅಧ್ಯಯನದಲ್ಲಿ ಸಾಹಿತ್ಯಕ್ಕೆ ಮೀಸಲಾಗಿರುವಷ್ಟು ಶಾಸನಕ್ಕೆ ಮೀಸಲಾಗಿಲ್ಲ. ಇದಕ್ಕೆ ಅವರು ಕೊಟ್ಟಿರುವ ಕಾರಣ 'ಶಾಸನಗಳಲ್ಲಿ ಅಸ್ಪೃಶ್ಯರ ಬಗೆಗಿನ ಸಾಮಗ್ರಿ ತೀರ ಬಡಕಲು' ಎಂಬುದು.

ಕಾರುರಹಂ, ತಾತೋಭಿಷಕ್, ಉಪಲ ಪ್ರಕ್ಷಣೀ ನನಾ
ನಾನಾದಿಯೋ ವಸೂಯ ವೋನುಗಾ ಇವ
ತತ್ಥಿಮೇಂದ್ರಾಯೋಂದೋ ಪರಿಸ್ರವ [೩]

ನಮ್ಮ ಸಾಂಸ್ಕೃತಿಕ ಅಧ್ಯಯನದಲ್ಲಿ ಶೂದ್ರ ಸಂಸ್ಕೃತಿಯನ್ನು ಕುರಿತ ಅಧ್ಯಯನ ನೆಲೆಗಳಿಗೂ ಅಸ್ಪೃಶ್ಯ ಸಂಸ್ಕೃತಿ ಕುರಿತ ಅಧ್ಯಯನದ ಇಂದಿನ ಒಟ್ಟು ಸಂದರ್ಭದಲ್ಲಿ ಶೂದ್ರ ಸಂಸ್ಕೃತಿಯ ಕಡೆ ಇರುವ ಒತ್ತು ಅಸ್ಪೃಶ್ಯ ಸಂಸ್ಕೃತಿ ಕಡೆ ಇಲ್ಲ. ಇದಕ್ಕೆ ಕಾರಣ 'ಶೂದ್ರ' ಎಂಬುದೇ ಉಳಿದೆಲ್ಲ ಪರಿಕಲ್ಪನೆಗಳ ಜತೆ ಐಕ್ಯಗೊಳಿಸುವ ಪ್ರಯತ್ನ.

ನಾನು ಕವಿ, ನನ್ನ ತಂದೆ ವೈದ್ಯ, ನನ್ನ ತಾಯಿ ಕಾಳುಗಳನ್ನು ಕಲ್ಲಿನಲ್ಲಿ ಬೀಸುವವಳು. ಒಂದೇ ಕುಟುಂಬಕ್ಕೆ ಸೇರಿದ ನಾವು ಬೇರೆ ಬೇರೆ ಕಸುಬುಗಳನ್ನು ಮಾಡುತ್ತ ಹಸುಗಳು ಹುಲ್ಲುಗಾವಲಿನಲ್ಲಿ ಆಹಾರವನ್ನು ಪಡೆಯುವ ಹಾಗೆ ಐಶ್ವರ್ಯ ಮತ್ತು ನೆಮ್ಮದಿಗಳನ್ನು ಪಡೆದಿದ್ದೇವೆ.

ಯಾರು ಬೇಕಾದರೂ ಯಾವ ವೃತ್ತಿಯನ್ನಾದರೂ ಮಾಡಬಹುದಿತ್ತು, ಇಂಥದೇ ವೃತ್ತಿಮಾಡಬೇಕೆಂಬ ನಿಯಮ ಇರಲಿಲ್ಲ. ಇನ್ನು ಸಮುದಾಯದಲ್ಲಿ ಅಥವಾ ಗಣಗಳ ವ್ಯವಸ್ಥೆಯಲ್ಲಿ ಬದುಕಿದ್ದ ಸಮಾಜ ವೃತ್ತಿಗಳಾಗಿ ಬಳಕೆಯಾಗಿರಲಿಲ್ಲ ಅಥವಾ ರೂಪು ಪಡೆದಿರಲಿಲ್ಲವೆಂದು ಸಹಜವಾಗಿ ಹೇಳಬಹುದು. ಋಗ್ವೇದದ ಕೊನೆಕೊನೆಗೆ ವೃತ್ತಿಯಾಗಿ ಪರಿಣಮಿಸುತ್ತದೆ. ಇದು ಹೆಚ್ಚು ರುಜುವಾತಾಗುತ್ತದೆ. ಏಕೆಂದರೆ: ಮುಂದಿನ ಆರಣ್ಯಕ ಮತ್ತು ಬ್ರಾಹ್ಮಣ ಗ್ರಂಥಗಳಲ್ಲಿ ವೃತ್ತಿಕೇಂದ್ರಿತ ನೆಲೆಗೆ ಬರುತ್ತದೆ. ಶತಪಥ ಬ್ರಾಹ್ಮಣ್ಯದಲ್ಲಿ ನಾಲ್ಕು ವರ್ಣಗಳ ಬಗ್ಗೆ ಪ್ರಸ್ತಾಪ ಮಾಡುತ್ತ 'ನಾಲ್ಕು ವರ್ಣಗಳವರ ಸಮಾಧಿಗಳು ಬೇರೆ ಬೇರೆ ಗಾತ್ರದವರಾಗಿರಬೇಕೆಂದೂ ಅವರ ಸಂಬೋಧನಾ ವಿಧಾನಗಳೂ ಬೇರೆಯೆಂದೂ ಹೇಳಿದೆ. ಇವರಲ್ಲಿ ಬ್ರಾಹ್ಮಣ ಶ್ರೇಷ್ಠ ರಾಜ ಆಳುವುದು ಬ್ರಾಹ್ಮಣ ಕೊಟ್ಟ ಅಧಿಕಾರದಿಂದ.[೪] ಯಜುರ್ವೇದದಲ್ಲೂ ಬ್ರಾಹ್ಮಣನ ಹಿರಿಮೆ ಮತ್ತು ಪ್ರಭುತ್ವ ಸ್ಪಷ್ಟವಾಗಿ ಸ್ಥಾಪಿತವಾಗುತ್ತದೆ. ನ್ಯಾಯ ನೀಡುವವನು ಬ್ರಾಹ್ಮಣನೇ ಆಗುತ್ತಾನೆ. ರಾಜ ಆಳಬೇಕಾದರೆ, ಬ್ರಾಹ್ಮಣಕೊಟ್ಟ ಅಧಿಕಾರದಿಂದ ಆಳಬೇಕು. ಬ್ರಾಹ್ಮಣ ಅಬ್ರಾಹ್ಮಣರಿಗೆ ಜಗಳವುಂಟಾದಾಗ ನ್ಯಾಯ (ಯಾರ ಕಡೆಯೆಂದರೆ) ಬ್ರಾಹ್ಮಣನ ಕಡೆಯೇ.[೫] 'ಶತಪಥ ಬ್ರಾಹ್ಮಣ'ದ ಪ್ರಕಾರ ಶೂದ್ರ ಹೆಣ್ಣು ಇರುವುದು ಭೋಗಕ್ಕಾಗಿಯೇ ಹೊರತು ಅವಳಿಂದ ಏನೂ ಉದಾತ್ತ ಕಾರ್ಯ ಸಾಧ್ಯವಿಲ್ಲ.

ಒಟ್ಟು ವರ್ಣದ ತಾರತಮ್ಯ ಸುಮಾರು ಕ್ರಿ.ಪೂ. ೬೦೦ರ ಹೊತ್ತಿಗೆ, ಚೆನ್ನಾಗಿ ಸ್ಥಾಪಿತವಾಗಿತ್ತು. ಒಟ್ಟು ಸಮಾಜದ ಘಟಕದಲ್ಲಿ 'ಶೂದ್ರ'ನಿಗೂ ಅಲ್ಪಸ್ವಲ್ಪ ಬಳಕೆಯಿತ್ತು. ಆರಂಭದಲ್ಲಿ ಅವರೊಡನೆ ಸಹಭೋಜನ ಮತ್ತು ಸಹ ಮಿಶ್ರಣ ಇದ್ದುದನ್ನು ಅಲ್ಲಗಳೆಯುವಂತಿಲ್ಲ. ಋಗ್ವೇದದಲ್ಲಿ 'ಜಾತಿ' ಶಬ್ದವಿಲ್ಲ ನಿಜ. ಆದರೆ, ಯಾಸ್ಕನಿರುಕ್ತದಲ್ಲಿದೆ. ಅಲ್ಲಿಂದ ಮುಂದೆ ಮಹಾವ್ಯಾಕರಣಕಾರ 'ಪಾಣಿನಿ'ಯಲ್ಲಿದೆ. ಈಚಿನ ಸ್ಮೃತಿಗ್ರಂಥಗಳಲ್ಲಿ ಜಾತಿ ಮತ್ತು ವರ್ಣಗಳ ಪ್ರಸ್ತಾಪವಿದೆ. ಜಾತಿಗೂ ವರ್ಣಕ್ಕೂ ಅಲ್ಪಸ್ವಲ್ಪ ಗೊಂದಲ ಇದ್ದೇ ಇದೆ. ವರ್ಣಗಳು ನಾಲ್ಕೇ ಆದರೂ ಒಂದೊಂದು ವರ್ಣದಲ್ಲೂ ಬೇರೆ ಬೇರೆ ವೃತ್ತಿಗಳು ಬೆಳೆದಂತೆ ಅನೇಕ ಜಾತಿಗಳು ಮೈದಾಳಿರಬೇಕೆಂದು ಊಹಿಸುವುದಕ್ಕೆ ಅನೇಕ ಅವಕಾಶವಿದೆ. 'ಸ್ಮೃತಿಯೋಲಿವಿನ್ನಾ' ಎಂಬ ಮಾತು ಅನೇಕ ಕಡೆ ಕೇಳಿಬರುತ್ತದೆ. ಸ್ಮೃತಿಗಳಲ್ಲಿ ಭಿನ್ನತೆ ಇರುವುದನ್ನು ನಾವು ಮರೆಯುವಂತಿಲ್ಲ. ಪ್ರಾಚೀನ ಸ್ಮೃತಿಗಳಿಗೂ ಅರ್ವಾಚೀನ ಸ್ಮೃತಿಗಳಿಗೂ ಭಿನ್ನ ಬಗೆಯ ಚರ್ಚೆಗಳಿವೆ. ಕೆಲವು ವರ್ಣಗಳನ್ನು ಐಕ್ಯಗೊಳಿಸುವ ಪ್ರಯತ್ನ ಮಾಡುತ್ತವೆ. ಮತ್ತಷ್ಟು ಸ್ಥಿತಿಗಳು ಅವುಗಳ ಅಂತರವನ್ನು ಮತ್ತಷ್ಟು ಹೆಚ್ಚು ಮಾಡುತ್ತವೆ. ಬ್ರಾಹ್ಮಣನಿಂದ ಹಿಡಿದು ಶೂದ್ರನವರೆಗಿನ ಚರ್ಚೆ ಮಾತ್ರ ನಾವು ಸ್ಮೃತಿಗಳಲ್ಲಿ ಕಾಣುತ್ತೇವೆ. ಪ್ರಧಾನ ಸ್ಮೃತಿಗ್ರಂಥಗಳಲ್ಲಿ ಶೂದ್ರನ ಜತೆ, ಅನೇಕ ಬಗೆಯ ಗುಂಪುಗಳನ್ನು ಕಾಣುತ್ತೇವೆ. ಈ ಗುಂಪುಗಳು ಬೇರೆಬೇರೆ ವರ್ಣಗಳಿಂದ ಉತ್ಪನ್ನವಾದ ಚಿಕ್ಕ ಚಿಕ್ಕ ಘಟಕಗಳೇ ಆಗಿವೆ. ಆ ಘಟಕಗಳು ಸಂಕೀರ್ಣವಾಗಿವೆ ಕೂಡ.

ನಾಲ್ಕು ವರ್ಣಗಳ ಮಿಶ್ರಣದಿಂದ ಹುಟ್ಟಿದ ಗುಂಪುಗಳನ್ನು ಬೇರೆ ಬೇರೆ ಹೆಸರಿನಲ್ಲಿ ಇಡುವುದನ್ನೂ ಹೀಗೆ ಪಟ್ಟಿಮಾಡಬಹುದು;

ಕರಣ	-	ಶೂದ್ರಸ್ತ್ರೀ	-	ವೈಶ್ಯ
ಅಂಬಿಷ್ಠ	-	ವೈಶ್ಯಸ್ತ್ರೀ	-	ಬ್ರಾಹ್ಮಣ
ಉಗ್ರ	-	ಶೂದ್ರಸ್ತ್ರೀ	-	ಕ್ಷತ್ರಿಯ
ಮಾಗಧ	-	ಕ್ಷತ್ರಿಯಸ್ತ್ರೀ	-	ವೈಶ್ಯ
ಮಹಿಷ್ಯ	-	ವೈಶ್ಯಸ್ತ್ರೀ	-	ಕ್ಷತ್ರಿಯ
ಕ್ಷತ್ತಾ	-	ಕ್ಷತ್ರಿಯಸ್ತ್ರೀ	-	ವೈಶ್ಯ
ಸೂತ	-	ಬ್ರಾಹ್ಮಣಸ್ತ್ರೀ	-	ಕ್ಷತ್ರಿಯ
ವೈದೇಹಕ	-	ಬ್ರಾಹ್ಮಣಸ್ತ್ರೀ	-	ವೈಶ್ಯ
ರಥಕಾರ	-	ಕರಣಸ್ತ್ರೀ	-	ವೈಶ್ಯ
ಚಂಡಾಲ	-	ಬ್ರಾಹ್ಮಣಸ್ತ್ರೀ	-	ಶೂದ್ರ [೬]

ವರ್ಣ ಮತ್ತು ಜಾತಿಗಳ ಚಾರಿತ್ರಿಕ ಪರಿಕಲ್ಪನೆಯನ್ನು ಕುರಿತು ಇಲ್ಲಿ ತುಸು ವಿವರಿಸಿದ್ದಾಗಿದೆ. ಮುಂದೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಜಾತಿಗಳಾದ ಮೇಲೆ ಶೂದ್ರರು ಬಂದರು. ಸಮಾಜದ ಒಟ್ಟು ಕಟ್ಟಡದಲ್ಲಿ ಬಾಗಿಲು ಮತ್ತು ಕಿಟಕಿ ಸೂರುಗಳಾಗಿ ಇರುವವರು ಶೂದ್ರರೇ. ಶೂದ್ರರು ಮೇಲಿನ ಮೂರು ಜಾತಿ (ವರ್ಣ)ಗಳ ಮನೆಯಲ್ಲಿ ಗೆಯ್ಮೆ ಪರಿಚರ್ಯೆ, ವೃತ್ತಿ ಮಾಡಿಕೊಂಡಿದ್ದರು. ಇವರಿಗಿಂತ ಕೆಳಗಿನವರು ಯಾರೆಂದರೆ ಅಸ್ಪೃಶ್ಯರೇ. ಅಸ್ಪೃಶ್ಯರು ಮತ್ತು ಶೂದ್ರರಿಗೂ ತಾತ್ವಿಕವಾಗಿ ಭಿನ್ನತೆಯುಂಟು.[೭] ಶೂದ್ರರಿಗೆ ಸಮಾಜದಲ್ಲಿ ನಿಷ್ಕೃಷ್ಟ ಸ್ಥಿತಿ ಕೊನೆ ಕೊನೆಯವರೆಗೆ ಇರಲಿಲ್ಲ. ಅಸ್ಪೃಶ್ಯರು ಶೂದ್ರರಿಗಿಂತ ಕೆಳಗಿನವರು. ಅವರನ್ನು ಚಾಂಡಾಲರೆಂದು ಸ್ಮೃತಿ ಹೆಸರಿಸುತ್ತದೆ. ಬ್ರಾಹ್ಮಣಸ್ತ್ರೀ ಮತ್ತು ಶೂದ್ರ ಗಂಡಸಿನಲ್ಲಿ ಹುಟ್ಟುವ ಚಂಡಾಲರು ಇಡಿ ಸಮಾಜದ ಒಟ್ಟು ಘಟಕದಿಂದ ಹೊರಕ್ಕೆ ಬಾಗಿದವರು. ಚಾಂಡಾಲರ ಸಂತತಿ ನಾಯಿ ಹಂದಿಗಳಂತೆ ತುಚ್ಛವಾದದ್ದೆಂದು ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿದೆ. ಒಟ್ಟು ಇವರು ನಿಷ್ಕೃಷ್ಟರಾದ ಜನ. ಇವರು ಊರ ಹೊರಗಡೆ ಇದ್ದು ಬದುಕಿದವರು. ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಇವರೆಲ್ಲ (ಮಾದಿಗ ಮತ್ತು ಹೊಲೆಯ) ಅಸ್ಪೃಶ್ಯರೇ. ಚಂಡಾಲ (ಹೊಲೆಯ) ಪ್ರಭೇದಗಳನ್ನು ಅಮರಸಿಂಹ ಹೀಗೆ ನೀಡುತ್ತಾನೆ.

ಚಾಂಡಾಲ, ಪ್ಲವಗ, ಮಾತಂಗ, ದಿವಾಕೀರ್ತಿ, ಜನಂಗಮಾಃ!
ನಿಷಾದ, ಶ್ವಪಚ, ಅಂತೇವಾಸಿ, ಚಾಂಡಾಲ ಪುಲ್ಕಸಾಃ!! [೮]

ಅಂದರೆ ಚಂಡಾಲ, ಪ್ಲವ, ಮಾತಂಗ, ದಿವಾಕೀರ್ತಿ, ಜನಂಗಮ, ನಿಷಾಧ, ಶ್ವಪಚ, ಅಂತೇವಾಸಿ ಮತ್ತು ಪುಲ್ಕಸ ಇವರೆಲ್ಲ ಅಸ್ಪೃಶ್ಯರು. ಇಲ್ಲಿಯ ಒಂದೊಂದು ಪದಗಳಿಗೂ ಸಾಂಪ್ರದಾಯಿಕ ವಿವರಣೆ ಇದ್ದರೂ ಅದು ಹೆಚ್ಚು ಉಪಯೋಗಕ್ಕೆ ಬರಲಾರದು.

ಹೀಗಾಗಿ, ನಮ್ಮ ಸಾಂಸ್ಕೃತಿಕ ಅಧ್ಯಯನದಲ್ಲಿ ಶೂದ್ರ ಸಂಸ್ಕೃತಿಯನ್ನು ಕುರಿತ ಅಧ್ಯಯನ ನೆಲೆಗಳಿಗೂ ಅಸ್ಪೃಶ್ಯ ಸಂಸ್ಕೃತಿ ಕುರಿತ ಅಧ್ಯಯನದ ಇಂದಿನ ಒಟ್ಟು ಸಂದರ್ಭದಲ್ಲಿ ಶೂದ್ರ ಸಂಸ್ಕೃತಿಯ ಕಡೆ ಇರುವ ಒತ್ತು ಅಸ್ಪೃಶ್ಯ ಸಂಸ್ಕೃತಿ ಕಡೆ ಇಲ್ಲ. ಇದಕ್ಕೆ ಕಾರಣ 'ಶೂದ್ರ' ಎಂಬುದೇ ಉಳಿದೆಲ್ಲ ಪರಿಕಲ್ಪನೆಗಳ ಜತೆ ಐಕ್ಯಗೊಳಿಸುವ ಪ್ರಯತ್ನ. ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಕುರಿತ ನಮ್ಮ ಅಧ್ಯಯನದಲ್ಲಿ ಈ ಭಾಗಗಳು ಸಮರ್ಪಕವಾದ ನಿರ್ವಚನಗಳಿಗೆ ದಾರಿ ಮಾಡಿಕೊಟ್ಟಿಲ್ಲವೆಂಬುದು ನನ್ನ ಗ್ರಹಿಕೆ. ಶೂದ್ರ ಪರಿಕಲ್ಪನೆ ವರ್ಣಗಳ ಸಾಹಚರ್ಯದಲ್ಲಿ ಐಕ್ಯಗೊಳ್ಳುತ್ತಿದ್ದರೆ 'ಅಸ್ಪೃಶ್ಯ' ಕಲ್ಪನೆ ಈ ನಾಲ್ಕು ವರ್ಣ ಘಟಕಗಳ ಆಚೆ ನೆಲೆ ನಿಂತಿದೆ.[೯] ಅಸ್ಪೃಶ್ಯನ ಒಟ್ಟು ಬದುಕು ಊರಿನ ಜತೆ ಸಂಬಂಧವಿಲ್ಲ. ಅವನು ಇಡಿ ಊರಿನಿಂದ ಬಾಹಿರ. ಅವನಿಗೊಂದು ಸೂರಿಲ್ಲ, ನೀರಿಲ್ಲ. ಅವನು ವಾಸ ಮಾಡುವುದೂ ಗುಡ್ಡಗಳಲ್ಲಿ, ಊರ ಹೊರಗಡೆ ಮಾತ್ರ ಮಲ-ಮೂತ್ರಗಳಿಗಿಂತ \ ಕಡೆಯಾಗಿ ಅವನು



ಬ್ರಾಹ್ಮಣ, ಕ್ಷತ್ರಿಯ ಪರವಾದ ಶಾಸನಗಳನ್ನು ಅಧ್ಯಯನ ಮಾಡಿದರೆ, ಆ ಶಾಸನಗಳು ಅಸ್ಪೃಶ್ಯರನ್ನು ಹುಟ್ಟು ಪೂರ ಮೌನದಲ್ಲಿ ನಿಲ್ಲಿಸುತ್ತವೆ. ಶೂದ್ರನ ಪ್ರಸ್ತಾಪ ಅಷ್ಟಿಷ್ಟು ಬರಬಹು ದಾದರೂ ಪವಿತ್ರವಾದ ಸಂದರ್ಭದಲ್ಲಿ ಅಸ್ಪೃಶ್ಯನ ನೆನೆಹು ಬಾಹಿರ.

ಬದುಕಬೇಕಾಗಿತ್ತು. ಶೂದ್ರರು ಅವರ ಕಣ್ಣಿನಲ್ಲಿ ಮಹಾನುಭಾವರೇ. ನಾಲ್ಕು ವರ್ಣದವರು ಇವರನ್ನು ಮುಟ್ಟಿಸಿಕೊಳ್ಳುವುದರಲ್ಲಿ ಒಂದು ಹರಿದಾರಿ ದೂರ. ಬಹಳ ಸೂಕ್ಷ್ಮವಾಗಿ ಈ ಸಂಗತಿಗಳನ್ನು ಶಾಸನಗಳು ಹೇಳುತ್ತವೆ.

ಬ್ರಾಹ್ಮಣ ತನ್ನ ಇಡಿ ದೈನಂದಿನ ಬದುಕಿನಲ್ಲಿ ಕ್ಷತ್ರಿಯನ ಜತೆ, ವೈಶ್ಯನ ಜತೆ ಮತ್ತು ಶೂದ್ರನ ಜತೆ ಇದ್ದ ಸಂಪರ್ಕ ಮತ್ತು ಸಾಮೀಪ್ಯ ಅಸ್ಪೃಶ್ಯನಿಗೆ ಇರಲಿಲ್ಲ. ದೇವಾಲಯಕ್ಕೆ ಕ್ಷತ್ರಿಯ ವೈಶ್ಯ ಹೋಗಬಹುದಿತ್ತು. ಶೂದ್ರನೋ ಗುಡಿಯ ಹೊರಗಡೆಯಾದರೂ ನೆಲೆ ನಿಂತುಕೊಳ್ಳಬಹುದಿತ್ತು. ಅಸ್ಪೃಶ್ಯ ಅಲ್ಲಿಗೆ ಬರುವುದಿರಲಿ ನೆನೆಸಿಕೊಳ್ಳುವುದೇ ದುರ್ಲಭ. ಉಚ್ಚಕುಲದವರು ಮುಟ್ಟುವ ಪದಾರ್ಥಗಳನ್ನು ಅವನು ಮುಟ್ಟುವಂತಿರಲಿಲ್ಲ; ಬ್ರಾಹ್ಮಣ, ಕ್ಷತ್ರಿಯ, ವೈಶ್ಯಾದಿಗಳು ಮುಟ್ಟುವ ನೀರನ್ನು ಅಸ್ಪೃಶ್ಯನು ಮುಟ್ಟುವಂತಿರಲಿಲ್ಲ. ಇದರಿಂದ ಯಾವುದು ಪವಿತ್ರವಾಗುತ್ತಿತ್ತೊ ಅದನ್ನು ಮುಟ್ಟಲು, ನೆನಸಲೂ ಕೂಡ ಸಾಧ್ಯವಿರಲಿಲ್ಲ. ಈ ಅಂಶವನ್ನು ನಮಗೆ ಶಾಸನಗಳು ಸಾಕಷ್ಟು ಸೂಕ್ಷ್ಮವಾಗಿಯೇ ವ್ಯಂಜಿಸುತ್ತವೆ.

ಬ್ರಾಹ್ಮಣ, ಕ್ಷತ್ರಿಯ ಪರವಾದ ಶಾಸನಗಳನ್ನು ಅಧ್ಯಯನ ಮಾಡಿದರೆ, ಆ ಶಾಸನಗಳು ಅಸ್ಪೃಶ್ಯರನ್ನು ಹುಟ್ಟು ಪೂರ ಮೌನದಲ್ಲಿ ನಿಲ್ಲಿಸುತ್ತವೆ. ಶೂದ್ರನ ಪ್ರಸ್ತಾಪ ಅಷ್ಟಿಷ್ಟು ಬರಬಹುದಾದರೂ ಪವಿತ್ರವಾದ ಸಂದರ್ಭದಲ್ಲಿ ಅಸ್ಪೃಶ್ಯನ ನೆನೆಹು ಬಾಹಿರ. ಶ್ರಾದ್ಧ ತಿಥಿ, ಅತಿಥಿ ಸತ್ಕಾರ, ವ್ರತ ಇಂಥ ಮನೆಯ ಆಚರಣೆಗಳ ಸಂದರ್ಭದಲ್ಲಿರಲಿ; ದೇವಾಲಯ ಪೂಜೋತ್ಸವ, ಮೆರವಣಿಗೆ, ಸಾಮೂಹಿಕ ಭಾಗವಹಿಸುವಿಕೆ, ಇವುಗಳಲ್ಲಿ ಶೂದ್ರನಿಗೆ ಕವಡೆಯಷ್ಟಾದರೂ ಬೆಲೆಯಿತ್ತು. ಅವನು ಬೇರೆಲ್ಲ 'ಪರಿಚರ್ಯೆ' ಯಲ್ಲಿರುತ್ತಿದ್ದ.[೧೦] ಆದರೆ, ಅಸ್ಪೃಶ್ಯ ಇಲ್ಲೆಲ್ಲ ಮೌನವಾಗಿರುತ್ತಿದ್ದ. ಅವರ ಬದುಕು ಹಂದಿ ಮತ್ತು ನಾಯಿಗಳಿಗಿಂತ ಕಡೆಯದು. ಈ ಮಾತು ಕೇವಲ ಕರ್ನಾಟಕಕ್ಕೆ ಮಾತ್ರ ಸಂಬಂಧಿಸಿದ್ದಲ್ಲ ಒಟ್ಟು ಭಾರತದ್ದೇ ಆಗಿತ್ತು. ಭಾರತದ ಮುಖ್ಯ ರಾಜ್ಯಗಳನ್ನು ಬಿಟ್ಟರೆ ಉಳಿದ ರಾಜ್ಯಗಳಾಗುವ ನೆಲೆಯಲ್ಲಿ ಇದ್ದ; ವಾತಾವರಣದಲ್ಲಿದ್ದ ಜನರ ಒಟ್ಟು ದುರ್ಗತಿಯನ್ನು ಇದು ಸೂಚಿಸುತ್ತದೆ. ಅವರ ಪರಿಸ್ಥಿತಿ ಎಂಥದ್ದಿರಬೇಕೆಂಬುದನ್ನು ಚೆನ್ನಾಗಿ ನೀವು ಊಹಿಸಬಹುದು.

ಅಸ್ಪೃಶ್ಯರ ಬಗೆಗಿನ ಉಲ್ಲೇಖ ಕರ್ನಾಟಕದ ಸಂದರ್ಭದ ಮಧ್ಯಕಾಲೀನ ಸಂದರ್ಭದಲ್ಲಿ ಮಾತ್ರ ಮೈದೋರುತ್ತಿದೆ. ಅವರ ಒಟ್ಟು ಜೀವನ ರೀತಿ ಸ್ಪಷ್ಟವಾಗದೆ ಹೋದರೂ ಉಳಿದವರ ಜೀವನ ರೀತಿಯ ಕಡೆಯಿಂದ ಈ ಮುಗ್ಧನನ್ನು ನಾವು ಕಾಣಬಹುದು. ಈ ಮುಗ್ಧನನ್ನು ಸಾಂಸ್ಕೃತಿಕವಾಗಿ ಕಡೆಗಾಣಿಸಲಾಗಿತ್ತು. ಇವನ ಬದುಕು ಈ ಶತಮಾನದ ಮೊದಲೆರಡು ದಶಕಗಳವರೆಗೆ ಎಂಥ ಪರಿಸ್ಥಿತಿಯಲಲ್ಲಿತ್ತು ಎಂಬುದು ಹಲವು ಆಕರಗಳಿಂದ ತಿಳಿದು ಬರುತ್ತದೆ.[೧೧] ಅಸ್ಪೃಶ್ಯರ ಹೀನಾಯ ಬದುಕನ್ನು ಮೊದಲು ಕಣ್ತೆರೆದು ನೋಡಲು ಶುರುವಾದದ್ದೂ ಈ ಸಮಯಾವಸರದಲ್ಲಿಯೇ ಬ್ರಿಟಿಷರು ಭಾರತಕ್ಕೆ ಬಂದ ಮೇಲೂ ಇಲ್ಲಿಯ ಜನಪದ ಸಾಹಿತ್ಯದ ಬಗೆಗೆ ಮೊದಲು ಕಣ್ತೆರೆದ ಮೇಲು ಈ ಜನರ ಭಗ್ನ ಬದುಕು ಹಾಗೇ ಇತ್ತು. ಶೂದ್ರನೇ ಶತಶತಮಾನಗಳ ಕಾಲ ಮೂರು ವರ್ಣದವರ ದಮನಕ್ಕೆ, ಆಕ್ರಮಣಕ್ಕೆ ಈಡಾಗುತ್ತ ಬಂದಿದ್ದ ಅವನು ಸಮಾಜದ ಒಟ್ಟು ಘಟಕದ ಒಂದು ನೆಲೆಯಲ್ಲಿದ್ದು ತುಳಿತಕ್ಕೆ ಈಡಾದದ್ದೇನೊ ಸರಿ. ಆದರೆ, ನಾಲ್ಕು ವರ್ಣಕ್ಕೂ ಬಾಹಿರವಾಗಿ ಬದುಕಿದವನ ದುರ್ದಮ್ಯ ಬದುಕು ಎಂಥದ್ದು? ಇತಿಹಾಸದಲ್ಲಿ ಇಂಥಲ್ಲಿ ಮೌನ ವಹಿಸಿದೆ.[೧೨] ಈಗ ಸಿಗುವ ಕೆಲವು ಆಧಾರಗಳನ್ನು ಗಮನಿಸಿದರೆ, ಇನ್ನೂ ಹಿಂದುಹಿಂದಕ್ಕೆ ಹೋದ ಹಾಗೆ ಭಯಾನಕವಾಗುತ್ತದೆ. ನಮ್ಮ ಅಕ್ಷರಗಳು ಮೂಕವಾಗುತ್ತವೆ.[೧೩] ಚರಿತ್ರೆ ಇಂಥವರ ಬಗ್ಗೆ ಮೌನವಹಿಸಿದೆ ಎಂದು ಹೇಳಿದ್ದು ಈ ಕಾರಣದಿಂದಲೇ.

ಆಲ್ಬೆರೂನಿ ಎಂಬುವನು ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಬಂದಿದ್ದ. ಅವನು ಯಾವ ಜಾತಿಗೂ ಸೇರದ ಎರಡು ಗುಂಪುಗಳ ಹೆಸರನ್ನೂ ಹೇಳಿದ್ದಾನೆ. ಅಂತ್ಯಜರು–ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಆದ ಮೇಲೆ ಐದನೆಯ ಗುಂಪಿನವರು. ಇವರು ಮೇದರು, ಬೆಸ್ತರು ಮತ್ತು ಬೇಡರು. ಆರನೆಯ ಗುಂಪಿನವರು ಬೇರೆ ಇದ್ದಾರೆ. ಅವರು ದೊಂಬ, ಚಂಡಾಲ, ಇವರು ಊರನ್ನು ಶುದ್ಧಿಗೊಳಿಸಿಕೊಂಡು ಇರಬೇಕಾಗಿತ್ತು. ಚಂಡಾಲರು ಮತ್ತು ದೊಂಬರು ಊರನ್ನು ಪ್ರವೇಶ ಮಾಡುವಾಗ ತಾವು ಬರುತ್ತಿದ್ದೇವೆ–ಎನ್ನುವುದಕ್ಕೆ ಕೋಲು ಕುಟ್ಟಿ ಹೇಳುವುದೋ ಅಥವಾ ಸದ್ದು ಮಾಡಬೇಕಾಗಿತ್ತು. ಇದನ್ನು 'ಕಂಕರಿಗೋಲು' 'ಸಂಬಳಿಗೋಲು' ಎಂದು ಕರೆಯುತ್ತಾರೆ. ಈ ವಿಷಯದ ಬಗ್ಗೆ ಫಾಹಿಯಾನ್ ಕೂಡ ಹೇಳುತ್ತಾನೆ. ಕಟುಕ, ಬೆಸ್ತ, ಡೊಂಬ, ಜಲಗಾರ, ಇವರ ವಾಸವೆಲ್ಲ ಊರ ಹೊರಗೆ ಎಂದೂ ಮತ್ತು ಅವರು ವಾಸಿಸುವ ಜಾಗಗಳಿಗೆ ಗುರುತು ಮಾಡಿರುತ್ತಿದ್ದರೆಂದೂ ಹ್ಯೂಯೆನ್‌ತ್ಸಾಂಗ್ ಹೇಳುತ್ತಾನೆ. ಅವರು ಊರಲ್ಲಿ ಓಡಾಡುವಾಗ ರಸ್ತೆಯ ಎಡಪಕ್ಕದಲ್ಲೇ ಹೋಗಬೇಕಾಗಿತ್ತು ಎಂಬ ಸಂಗತಿಯನ್ನು ಅವನು ಹೇಳಿದ್ದಾನೆ. ಶಾಸ್ತ್ರದ ಪ್ರಕಾರ ಎಡ ಅಸ್ಪೃಶ್ಯ, ಬಲ ಸ್ಪೃಶ್ಯ. ಈ ಸಂಕೇತಗಳನ್ನು ಗ್ರಹಿಸಿಕೊಂಡರೆ ಅವರ ಒಟ್ಟು ಬದುಕಿನ ಹೀನತೆಗಳು ಎದ್ದೆದ್ದು

ಕಾಣುತ್ತದೆ. ಈ ಪರಿಸ್ಥಿತಿಯನ್ನು ಕೇವಲ ಕರ್ನಾಟಕಕ್ಕೆ ಮಾತ್ರ ಅನ್ವಯಿಸುವುದಲ್ಲ; ಇದು ಭಾರತಕ್ಕೆ ಅನ್ವಯಿಸುತ್ತದೆ. ಒಟ್ಟು ಸಮುದಾಯವನ್ನು ನಾಲ್ಕಾಗಿ ವಿಂಗಡಿಸಿದ್ದು ಮಾತ್ರವಲ್ಲ ಅದರಲ್ಲಿ ಅಸಮಾನತೆಯ ಅನುಶ್ರೇಣಿಗಳನ್ನಾಗಿ ಮಾಡಿ; ಮುಟ್ಟಿದರೆ ಮೈಲಿಗೆ ಆಗುವಂತಹ ಸು. ೪೫೦ ಜಾತಿಗಳಾಗಿ ಮಾಡಿದ್ದು - ನಾವು ಕಾಣುತ್ತಿರುವ ಐತಿಹಾಸಿಕ ಸಂಗತಿಯೇ ಆಗಿದೆ.

ಈ ಮೊದಲೆ ತಿಳಿಸಿದಂತೆ ಶಾಸನಗಳು ಪ್ರಾಚೀನ ಕರ್ನಾಟಕ ತಿಳಿಯಲು ಸಾಧನವಾಗಿದೆ ನಿಜ. ಆದರೆ, ಅಸ್ಪೃಶ್ಯರ ಬದುಕನ್ನೂ ಅರಿಯಲು ಇವು ಸುತಾರಾಂ ನೆರವಾಗಿಲ್ಲ. ಅಸ್ಪೃಶ್ಯರು ದಾನ ಕೊಡುವಷ್ಟು ಶ್ರೀಮಂತರಲ್ಲವಲ್ಲ. ದಾನ ತೆಗೆದುಕೊಳ್ಳುವುದಕ್ಕಂತೂ ಮೊದಲೆ ಅರ್ಹತೆ ಇಲ್ಲ. ನಮ್ಮ ಶಾಸನಗಳೆಲ್ಲ ದಾನಶಾಸನಗಳೇ (ಬಹುತೇಕ) ಆಗಿವೆ. ಅಷ್ಟು ಶ್ರೀಮಂತರಲ್ಲದ ಜೇಡ, ಮೇದ, ಗಾಣಿಗ, ಕಲ್ಕುಟಿಗ, ತಂಬುಲಿಗರಂಥ ಶೂದ್ರರು ದೇವಾಲಯಕ್ಕೆ ತಮ್ಮ ಜಾತಿಯ ಕಾಣಿಕೆಯನ್ನೂ ವರ್ಷದ ನಿಬಂಧನೆಯನ್ನೊ ಕೊಡಲು ಮಾತುಕೊಡುತ್ತಿದ್ದರು. ಆದರೆ, ಇವರಿಗಿಂತ ಭಿನ್ನರಾದ ಅಸ್ಪೃಶ್ಯರು ಏನು ಕೊಡಬಹುದು ? ಆದರೆ, ಒಂದೇ ಒಂದು ಶಾಸನದಲ್ಲಿ ಮಾದಿಗ ಜಾತಿಯ ವ್ಯಕ್ತಿ ಗೋಗಳನ್ನು ಕೊಟ್ಟಾಗ ಅದನ್ನು ತೆಗೆದುಕೊಂಡ ತಾಳಗುಂದದ ಬ್ರಾಹ್ಮಣರು ಅವನನ್ನು ಹರಸಿದ ಸಂಗತಿ ಬಂದಿದೆ. ಇದು ಸೊರಬ ತಾಲೂಕಿನ 'ಹುನವಳ್ಳಿ' ಗ್ರಾಮದ ಕಲ್ಲೇಶ್ವರದ ದೇವಾಲಯದ ಮುಂದಿರುವ ಕಲ್ಲು. ಇದು ಕ್ರಿ.ಶ. ೯೬೪ರ ಶಾಸನ. ಪೂರ್ಣ ಪಾಠ ಹೀಗಿದೆ:

ಸ್ವಸ್ತಿ ಸಕವರ್ಷಂ ಮೆಣ್ಬು ನೊಱಡೆತ್ತಾಱನೆಯ
ರಕ್ತಾಕ್ಷಿ ಎಂಬ್ಬ ಸಮ್ವಂಚ್ಚರಂ ಪ್ರವರ್ತಿಸುತ್ತಿರೆ
ಬಿಟ್ಟಿಗನಾಮ್ಗೀವುಣ್ಡಗೆಯ್ಯುತ್ತಿರೆ ಹುನವ
ಳ್ಳಿಯ ಮಾದಗರ ಕಮ್ಮಯ್ಯನ ಮಗಂ ನವನ್ನ
ಗಾವುಣ್ಡಗೆಯ್ಯೆ ಆತನ ತಮ್ಮಂ ನಾಣ್ನೆಯಂ ಗೋಸಾಸವಿವಿ
ತಾಣಗುನ್ದೂರ ಮಹಾಜನಂ ಪರಸಿದರ್
ಅರಿವತ್ತು ಕಟ್ಟದ ಕೆಱೆ ಮಂಗಳಂ.

ಶಾಸನಗಳು ಪ್ರಾಚೀನ ಕರ್ನಾಟಕ ತಿಳಿಯಲು ಸಾಧನವಾಗಿದೆ ನಿಜ. ಆದರೆ, ಅಸ್ಪೃಶ್ಯರ ಬದುಕನ್ನೂ ಅರಿಯಲು ಇವು ಸುತಾರಾಂ ನೆರವಾಗಿಲ್ಲ. ಅಸ್ಪೃಶ್ಯರು ದಾನ ಕೊಡುವಷ್ಟು ಶ್ರೀಮಂತರಲ್ಲವಲ್ಲ. ದಾನ ತೆಗೆದುಕೊಳ್ಳುವುದಕ್ಕಂತೂ ಮೊದಲೆ ಅರ್ಹತೆ ಇಲ್ಲ. ನಮ್ಮ ಶಾಸನಗಳೆಲ್ಲ ದಾನಶಾಸನಗಳೇ (ಬಹುತೇಕ) ಆಗಿವೆ.

ಅರಿವರ್ಮನ ತಮ್ಮ ನಾಣೆಯ ಎಂಬುವನು 'ಮಹಾಜನಂ' ಗಳಿಗೆ ಕೊಟ್ಟ. ಅವನು ಕೊಟ್ಟದ್ದು 'ಗೋಸಾಸವಿಟ್ಟಿ' ಗೋವುಗಳನ್ನು ಮಾದರಿಗ[೧೪] ಕರ್ಮಯ್ಯನ ಮಗನ ತಮ್ಮ ನಾಣ ಎಂಬುವನು.[೧೫] 'ಮಾದಗರ್' ಎಂಬುದು ಮಾದಿಗ ಜಾತಿ ಅಲ್ಲದೆ ಬೇರೆ ಅರ್ಥ ಬರುವವರೆಗೆ ಇದನ್ನು ಒಪ್ಪಿಕೊಳ್ಳಬಹುದು. ಮೇಲೆ ಹೇಳಿದ್ದು 'ದಾನಶಾಸನ' ವಾದರೆ ರಣಮಂಡೆ ಅಂಗ ಎಂಬ ಹೆಸರಿನ ಹೊಲೆಯ ತನ್ನ ಯಜಮಾನ ಜುದ್ದಮಲ್ಲನ ಪರವಾಗಿ ಹೋರಾಡಿ ಸತ್ತ ವಿಷಯದ ಶಾಸನ ಹೀಗಿದೆ:

> **ಸ್ವಸ್ತಿಶ್ರೀ ಧರೆಗೀಸನಾ ಕಾಳೆಗದುಳ್**
> **ಜುದ್ದಮಲ್ಲನಾ ಆಳು ರಣಮಂಡೆ ಅಂಗು**
> **ಪೆಸಾರೆ ಪೊಲೆಗನ್ ಸ್ವಸ್ತಿಶ್ರೀ ರಣಕೇಸರ**
> **ಉದಯ ಪುರಮಾನ್ ಪೊಗುತಿಪ್ಪಲ್ಲಿ ಎಟಿದು**
> **ಸ್ವರ್ಗಾಲಯಕ್ಕೇಟಿದೊನ್**[೧೬]

ರಣಮಂಡೆ ಅಂಗು ಒಬ್ಬ ಹೊಲೆಯ (ಪೊಲೆಯನ್)[೧೭] ಅವನ ಯಜಮಾಜುದ್ದಮಲ್ಲ. ದಾನಶಾಸನ ಬಂದಿದ್ದರೆ, ತನ್ನ ಒಡೆಯ ಜತೆ ಯುದ್ಧಕ್ಕೆ ಹೋಗಿ ಮಡಿದ ವಿಷಯ ಒಂದು ಕಡೆ ಮಾತ್ರ ಬಂದಿದೆ. ಈಗ ಪ್ರಸ್ತಾಪಿಸುವ ಶಾಸನ 'ತುಱಗೋಳ್'ಗೆ ಸಂಬಂಧಿಸಿದ್ದು. ಅಸ್ಪೃಶ್ಯರ ಉಲ್ಲೇಖನಗಳು ಕೊನೆಪಕ್ಷ ವೀರಗಲ್ಲುಗಳಲ್ಲಿ ಹೆಚ್ಚಾಗಿ ಬರಬಹುದಿತ್ತು. ಆದರೆ, ಅಲ್ಲೂ ಅಪರೂಪವಾಗಿಯೇ ಬಂದಿದೆ. ಪುಲವಳ್ಳಿಯ ಗಾಯಿಗನಾದ ಮಾದಗರ ಅರಿವರ್ಮ ಎಂಬಾತ ಕಳ್ಳರು ತನ್ನ ಊರಿನ ದನಗಳನ್ನು ಅಪಹರಿಸಿದಾಗ ಹೋರಾಡಿ ಸಾಯುತ್ತಾನೆ.

> **ರಿಷಮೆಂಟನೂಱತೊಂಭತ್ತನೆಯ ಪ್ರಭವ ಸಂವತ್ಸರದ**
> **ಚೈತ್ರ ಶುದ್ಧ ಪುಣ್ಣಮೆಮಾದಿತ್ಯವಾರವು ಸಂಕ್ರಾತ್ರಿಯಂದು ಪುನುವಾ**
> **ಲವಳ್ಳಿಯ ಗಾಯಿಗಂ ಮಾದಗರರಿವರ್ಮ್ಮ ತುಱುಗೊಳೊ**
> **ಟ್ಸತ್ತಂ ಬಟ್ಟಗನನೆರ್ಪೆರ್ಗ್ಗಡೆ ದಾಸೆಯ್ಯನ ಮಗಂ ಗಂಭೀಮಯ್ಯಂ**
> **ಬರೆದ ಕನ್ನಯ್ಯಂ ಕಲ್ಲಱಿಸಿದ**[೧೮]

ಇದು ಅದೇ ಊರಿನ ಕ್ರಿ.ಶ. ೯೮೦ನೆಯ ಶಾಸನ. ಅರಿವರ್ಮ ಗೋಗ್ರಹಣದಲ್ಲಿ ಸತ್ತಾಗ ಅವನಿಗಾಗಿ ಕನ್ನಯ್ಯ ವೀರಗಲ್ಲನ್ನು ನಿಲ್ಲಿಸುತ್ತಾನೆ. ಪೆರ್ಗಡೆಯಂತಹ ಅಧಿಕಾರಿಯ ಮಗ ಈ ವೀರಗಲ್ಲಿನ ಪಾಠವನ್ನು ಬರೆದಿರಬೇಕಾದರೆ ಮಾದಿಗರ ಜಾತಿಯವನಾದರೂ ಒಬ್ಬ ಪ್ರಭಾವಶಾಲಿ ವ್ಯಕ್ತಿಯಾಗಿರಬೇಕು. ಇದನ್ನು ಬಿಟ್ಟರೆ ಮತ್ತೊಂದು ಅಸ್ಪೃಶ್ಯರಿಗೆ ಸೇರಿದ ವೀರಗಲ್ಲು ಸಿಗುವುದಿಲ್ಲ. ಡಾ॥ ಎಂ. ಚಿದಾನಂದಮೂರ್ತಿಯವರು ಸರಿಯಾಗಿ ಉದ್ಗಾರ ಎತ್ತಿರುವಂತೆ 'ಬದುಕಿನಲ್ಲಿ ಎಂತೋ ಸಾವಿನಲ್ಲೂ ಅವರ ಉಲ್ಲೇಖಗಳ ಅಭಾವವೇ ಅವರ ಸಾಮಾಜಿಕ ಸ್ಥಾನಮಾನದ ಬಗ್ಗೆ ಬಹಳವನ್ನು ತಿಳಿಸುತ್ತದೆ'[೧೯] ಇದು ಸರಿಯಾದ ವ್ಯಾಖ್ಯಾನವೆಂದು ನನಗೂ ಅನ್ನಿಸಿದೆ.

ನಾವು ಹಿಂದೆ ಚರ್ಚಿಸಿದಂತೆ ಹೊಲೆ ಮಾದಿಗರ ಅಥವಾ ಅಸ್ಪೃಶ್ಯರ ಮನೆಗಳು ಊರ ಹೊರಗಡೆ ಇದ್ದುವು. ಹೊರಗಡೆ ಎಂಬ ಮಾತೇ ಅವರನ್ನೂ ಬಹಿರ್ದೆಸೆಗೆ ಹೋಗುವ ಜಾಗದಲ್ಲಿ ಇಟ್ಟಿದ್ದೇವೆ ಎಂಬ ಅರ್ಥ ಪ್ರಾಪ್ತವಾಗಿದೆ. ಮೇಲುಜಾತಿಯವರಿಗೆ ಕೊಟ್ಟ ದತ್ತಿಗಳ ಮೇರೆಗಳನ್ನು ಹೇಳುವಾಗಲೊ ಬೇರೆ ಪ್ರಸಂಗಗಳಲ್ಲೊ ಅಸ್ಪೃಶ್ಯರ ಮನೆಗಳು ಊರ 'ಹೊರಗಡೆ' ಇದ್ದುವು.[೨೦] ನಾವು ಇವತ್ತು 'ಸ್ಲಂ'ನಲ್ಲಿ ಇರುವ ಜನ ಎಂದು ಕರೆಯುತ್ತೇವೆ. ಹಿಂದೆಯೂ ಜೌಗು ಪ್ರದೇಶದಲ್ಲಿ, ಯಾರು ಬದುಕಲಾರದ ಎಡೆಯಲಿ ಅವರು ಬದುಕಬೇಕಿತ್ತು. ಕಾಸರಗೋಡು ತಾಲ್ಲೂಕಿನ ತಳಂಗೆರೆ ಎಂಬ ಊರಿನಲ್ಲಿರುವ ಒಂದು ಶಾಸನವು ಊರ ತುದಿಯ ತೊರೆಯ ದಡದ ಬಳಿ ಹೊಲೆಯರ ಕೇರಿಯಿತ್ತೆಂದು ಹೇಳುತ್ತದೆ. ಆ ಭಾಗ ಹೀಗಿದೆ:

ಹೊಲೆ ಮಾದಿಗರ ಅಥವಾ ಅಸ್ಪೃಶ್ಯರ ಮನೆಗಳು ಊರ ಹೊರಗಡೆ ಇದ್ದುವು. ಹೊರಗಡೆ ಎಂಬ ಮಾತೇ ಅವರನ್ನೂ ಬಹಿರ್ದೆಸೆಗೆ ಹೋಗುವ ಜಾಗದಲ್ಲಿ ಇಟ್ಟಿದ್ದೇವೆ ಎಂಬ ಅರ್ಥ ಪ್ರಾಪ್ತವಾಗಿದೆ. ಮೇಲುಜಾತಿಯವರಿಗೆ ಕೊಟ್ಟ ದತ್ತಿಗಳ ಮೇರೆ ಗಳನ್ನು ಹೇಳುವಾಗಲೊ ಬೇರೆ ಪ್ರಸಂಗಗಳಲ್ಲೊ ಅಸ್ಪೃಶ್ಯರ ಮನೆಗಳು ಊರ 'ಹೊರಗಡೆ' ಇದ್ದುವು.[೨೦] ನಾವು ಇವತ್ತು 'ಸ್ಲಂ'ನಲ್ಲಿ ಇರುವ ಜನ ಎಂದು ಕರೆಯುತ್ತೇವೆ. ಹಿಂದೆಯೂ ಜೌಗು ಪ್ರದೇಶದಲ್ಲಿ, ಯಾರು ಬದುಕಲಾರದ ಎಡೆಯಲಿ ಅವರು ಬದುಕಬೇಕಿತ್ತು. ಕಾಸರಗೋಡು ತಾಲ್ಲೂಕಿನ ತಳಂಗೆರೆ ಎಂಬ ಊರಿನಲ್ಲಿರುವ ಒಂದು ಶಾಸನವು ಊರ ತುದಿಯ ತೊರೆಯ ದಡದ ಬಳಿ ಹೊಲೆಯರ ಕೇರಿಯಿತ್ತೆಂದು ಹೇಳುತ್ತದೆ.



> **'ಊರ ಕಡೆಯ ತೊಱೆಯ ತಡಿಯ ಕಱೆಯ ಕಲ್ಲ**
> **ಮೋಟದಿಂ ಪುತ್ತೂರ್ತ ಸಾಹೊಲೆಯರಿಪ್ಪ ಕೇರಿಯೊವವಿ**
> **ನೀರ ಭೂಮಿಯಂ! ಸಾರ ಭೂರುಹಂಗಳೋಳಿಯೊಳಗೆ**
> **ನೆಱೆಯ ಕೆಱೆಯನಂ! ಭೋರುಹಾಕ್ತಿ ತನ್ನ ಧನದಿನೊಪ್ಪೆ**
> **ಮಾಡಿಸಿಟ್ಟುದಂ'**[೨೧]

ಹೊಲೆಯರು ಬೇರೆಯವರ ಜಾಗದಲ್ಲಿ ಹೋಗುವಂತಿಲ್ಲ; ಅವರ ನೀರನ್ನು ಮುಟ್ಟುವಂತಿಲ್ಲ. ಹೊಲೆಯರಿಗಾಗಿಯೇ ಮೀಸಲಿಟ್ಟಿದ್ದ ನೀರನ್ನು ಅವರು ಸ್ನಾನಕ್ಕೆ ಕುಡಿಯುವುದಕ್ಕೆ, ಶೌಚಕ್ಕೆ ಬಳಸಬೇಕಿತ್ತು. ಸೀಮೆಯನ್ನು ಗುರುತಿಸುವಾಗ ನೀರಿನ ಗುಂಡಿಯ ಬಗ್ಗೆ ಹೇಳಿದೆ.[೨೨] ಇನ್ನೊಂದು ಶಾಸನ ೧೨೦೨ರದ್ದು. ಒಂದು ಮತ್ತರು ಹಕ್ಕಲನ್ನು ನಗರ ಜಿನಾಲಯಕ್ಕೆ ಬಿಟ್ಟಿದ್ದನ್ನು ಹೇಳುವಾಗ ಹೊಲಗೇರಿಯ ಪ್ರಸ್ತಾಪ ಬಂದಿದೆ.[೨೩]

> **ಮಣಿಗುಂಡಗೆಯ ಸಂಕ್ರಾಂತಿ ಕೂಡಿದ**
> **ಪುಣ್ಯತಿಥಿಯೊಳು ಮಣಿಗುಂಡಗೆಯ**
> **ಏಕಭೋಗದ ಪ್ರಭು ಕಾಣೂರ (ಚೌಡ) ಗೌಂಡ**
> **ಮುಗಿಲೊಳಗಣ ಜೋಗವಟ್ಟಿಗೆಯ**
> **ನಗರ ಜಿನಾಲಯಕ್ಕೆ ತಮ್ಮ ಕೆಯ್ಯೊಳಗೆ**
> **ಮೂಡಣ ತೆಂಕಣ ಗೋಟನೊಳು ಒಂದು**
> **ಮತ್ತರು ಹಕ್ಕಲಂ ಬಿಟ್ಟರು ಆ ಕೆಯ್ಯ**
> **ಮೇಱೆಂತೆಂದೊಡಂ**
> **ಊರಿಂ ತೆಂಕ ಮುಂದಾಗಿ ನೀರುಸಾಗರಕ್ಕೆ**
> **ಹೋದ ಓಣಿಯಿಂ, ಪಡುವಲು ಹೊಲಗೇರಿಯಿಂ,**
> **ಪಡುವ ಮುಖವಾಗಿ ಕಣಗಿ (ಲ್ಲೊಳ) ಹಳ್ಳಿಗೆ**
> **ಹೋದ ಓಣಿಯಿಂ,...'**

ಹಿಂದೆಲ್ಲ ತಿಳಿದಂತೆ, ದೇವಾಲಯಗಳಿಗೊ ಬ್ರಾಹ್ಮಣರಿಗೊ ರಾಜನಿಗೊ ದಾನಶಾಸನವನ್ನೂ ಬಿಡುವಾಗ ಇದನ್ನು ಹಾಳು ಮಾಡಿದವನು ರೌರವ ನರಕಕ್ಕೆ ಹೋಗುತ್ತಾನೆ. ಸಾವಿರಾರು ಹಸುಗಳನ್ನು ಕೊಂದ ಪಾಪಕ್ಕೆ ತುತ್ತಾಗುತ್ತಾನೆ. ಕಾಶಿಯಲ್ಲಿ ಬ್ರಾಹ್ಮಣರನ್ನು ಕೊಲೆ ಮಾಡಿದ ಪಾಪಕ್ಕೆ ಗುರಿಯಾಗುತ್ತಾನೆ -ಎಂಬ 'ಶಾಪಾಶಯ'ದ ಭಾಗದಲ್ಲಿ ಅಪರೂಪವಾಗಿ ಹೊಲೆ ಮಾದಿಗರ ಪ್ರಸ್ತಾಪ ಆಗಿದೆ. ದಾನವನ್ನು ಅಪಹರಣ ಮಾಡುವುದು ತನ್ನ ಹೆಂಡತಿಯನ್ನು ಹೊಲೆಯರಿಗೆ ಮಾದಿಗರಿಗೆ ಕೊಟ್ಟಿದ್ದಕ್ಕೆ ಸಮ.

> **'...ಯಿದಕ್ಕೆ ತಪ್ಪಿದನು...**
> **ಅವನ ಹೆಂಡತಿಯನು ಹೊಲೆಮಾದಿಗರಿಗೆ ಕೊಟ್ಟ...'**[೨೪]
> **ಇದೇ ರೀತಿ. ಆನೇಕಲ್ ತಾಲ್ಲೂಕಿನ ಶಾಸನವೊಂದರಲ್ಲಿ**
> **'...ಯಿದಕ್ಕೆ ತಪ್ಪಿದರೆ**
> **ಬಲಗೆಯಡಗೆ (ಗೈ)ಯವನ**
> **ಯಂಜಲಿಗೆ ಆಶೆ ಮಾಡಿದಾಗ'**[೨೫]

ಇದು ಹದಿನೇಳನೆಯ ಶತಮಾನದ್ದು. ಇಲ್ಲೆಲ್ಲ ಶಾಪಕ್ಕೆ ಹೊಲೆ-ಮಾದಿಗರನ್ನು ಬಳಸಿಕೊಳ್ಳುವಂತೆ ಬೈಗುಳಕ್ಕೆ ಉಪಯೋಗಿಸಿದ್ದಿದೆ. ಸಾಮಾಜಿಕ ಹಾಗೂ ಸಾಂಸ್ಕೃತಿಕದ

ತೊತ್ತುಗಳನ್ನು ಮಾರಿದ, ಕ್ರಯಚೀಟುಗಳಿಗೆ ಬರೆಸಿಕೊಟ್ಟದ್ದೇನೊ ಈಚಿನ ತಾಮ್ರ ಮತ್ತು ಕಡತಗಳಲ್ಲಿ ದೊರಕುತ್ತಿದೆ. ಇಂಥವು ಕೇವಲ ವಾಗ್ರೂಪದಲ್ಲಿ ಸಹಸ್ರಾರು ವರ್ಷಗಳಿಂದ ಆಗಿಬಂದುದನ್ನು ಚರಿತ್ರೆ ಬರೆದಿಟ್ಟಿಲ್ಲ. ಬರೆದಿರುವುದು ಕಡಿಮೆಯಾದರೂ ಬರೆಯದಿರುವ ಚರಿತ್ರೆಯ ಮೌನ ತುಂಬ ಅಸಹನೀಯವಾಗಿದೆ.

ಪರಮ ದಾಸ್ಯದ ನೆಲೆಯನ್ನು ಸೂಚಿಸುವ ಇಂಥ ಮಾತುಗಳು ಚರಿತ್ರೆಯ ಕೆಟ್ಟ ಗಳಿಗೆಗಳಲ್ಲಿ ಕೀಳುಮನಸ್ಸಿನ ಅಭಿವ್ಯಕ್ತಿಗಳಾಗಿ ಮೂಡಿ ಬಂದಿವೆ.

ಹೊಲೆಯರು ಅಥವಾ ಒಟ್ಟು ಅಸ್ಪೃಶ್ಯರು ಸಾಮಾಜಿಕವಾಗಿ ಎಷ್ಟು ಹೀನದೆಸೆಯಲ್ಲಿದ್ದರೆಂಬುದನ್ನು ಕಂಡಿದ್ದೇವಷ್ಟೆ ಅವರು ನಾಯಿ ಹಂದಿಗಳಿಗಿಂತ ಕಡೆ ಎಂಬುದನ್ನು ಚರಿತ್ರೆ ತಿಳಿಸಿಕೊಡುತ್ತದೆ. ಇಂಥವರು ಜೀತದಾಳುಗಳಾಗಿಯೂ ಇರುತ್ತಿದ್ದರು. ಇವರನ್ನು 'ಆಳ್ಮಕ್ಕಳು' ಎಂಬ ಮಾತಿನಲ್ಲಿ ಅಭಿವ್ಯಕ್ತಗೊಂಡಿದೆ. ಯಜಮಾನನ ಲೈಂಗಿಕ ಸ್ವಾತಂತ್ರ್ಯವನ್ನು ಮತ್ತು ಅಲ್ಲಿ ದುಡಿಯುತ್ತಿದ್ದ ಹೊಲವೆ ಮತ್ತು ಮಾದಿಗಿತ್ತಿಯರನ್ನು ಅವರು ಬಳಸಿಕೊಂಡದ್ದನ್ನು ಸಾಂಕೇತಿಕವಾಗಿ 'ಆಳ್ಮಕ್ಕಳು' ಎಂಬ ಪದ ಸೂಚ್ಯವಾಗಿ ಹೇಳುತ್ತಿದೆ. ಇವರು ವಂಶಪಾರಂಪರ್ಯವಾಗಿ ಯಜಮಾನನಿಗೆ ಸೇರಿದವರು. ಇವರು ಅವನ ಆಸ್ತಿಯಂತೆ ಎತ್ತು ಕುದುರೆಗಳಂತೆ ಮಾರಾಟ ಮಾಡಲೂಬಹುದು. ಇಂಥ ಮೂರು ಶಾಸನಗಳನ್ನೂ ಈಗ ನೋಡಬಹುದು. ಕುಣಿಗಲು ತಾಲೂಕಿನ ಕೊತ್ತಗೆರೆ ಹೋಬಳಿ ಅಶ್ವತ್ಥಕಟ್ಟೆ ಬಳಿ ಇರುವ ದಾನಶಾಸನ ಹೀಗಿದೆ:

> **'ಹಿರಿಯೂರ ಬಾಳವಾಟಿ ಹೊರುವಾಟಿ ತೋಟ, ಎಮ್ಮೆ ಎತ್ತು ಪಶು ತೊತ್ತು ಕಟ್ಟಿನ ಬಂಡಿ ಬೆಳ್ದಂಡಿವಹಣ ಅಸಗ, ಕಂಮಾರ, ಬಡಗಿ, ಅಗಸ್ಯಾಲಿ ಕುಂಬಾರ ನಾವಿದ ಅಂಗಡಿಗಾಣ ಜಾಡಸಾಲಿ ತಿಪ್ಪೆ ಸುಂಕ ಹೊಱೆಗಳಂ ಬನ್ಧ ಮಾಱುವ ಯಂಣೆ, ತುಪ್ಪ ಉಪ್ಪು, ಹೊಲೆ, ವೊಗ್ಗವೊಳವಂ.[೨೬]**

ಮತ್ತೊಂದು ಶಾಸನ : ಶಾಸನದ ಭಾಗ ಹೀಗಿದೆ : ಇದು ಬೌರಿಂಗ್‌ಪೇಟೆಯ ಮರಗಲ್ಲು ಗ್ರಾಮದ ಶಾಸನ:

> **'ಸಡುದರಿಸಿನವೊಳಗಾದವರುಂ.. ಕೊತ್ತು ಯೆತ್ತು ತೊತ್ತು ಕುದುರೆ ಕೊಂಡರೂ ಮಾಱಿದಡೂ ಸರ್ವಮಾಂನ್ಯ ಕಬ್ಬಿಣಕೆಲಸ ಮರಕೆಲಸ ಅಕ್ಕಸಾಲಿ ಅಸಗ ನಾವಿಂದ ಹೊಲೆಯನು ಇಂತಿವರು ಸರ್ವಮಾಂನ್ಯ ಸಲಿಸುವರು'[೨೭]**

ಮೂರನೆಯದು 'ತಾಮ್ರಶಾಸನ' ಇದು ಒಂದು ರೀತಿಯಲ್ಲಿ ಕ್ರಯಪತ್ರ ಇದ್ದ ಹಾಗೆ : ಸಾಗರ ತಾಲ್ಲೂಕಿನ ಹುಲಿಮನೆಯಲ್ಲಿರುವ ಶಾಸನದ ಭಾಗ ಹೀಗಿದೆ.[೨೮]

................................ಹುಲಿಮನೆ ಕಾಳಿ

ಸುಬ್ರಣ್ಣನವರ ಮಗ ಶೇಷಯ್ಯನವರಿಗೆ ವೇದಮೂರ್ತಿಗಳಾದ ಯಿಕ್ಕೇರಿ ಶೇಷಾಚಾರ್ಯ್ಯರ ಮಗ ಭೀಮಾಚಾರ್ಯನು ಬರೆಸಿಕೊಟ್ಟ ಹೊಲೆಯಾಳು ಹೆಂಣಾಳು ಕ್ರಯಚೀಟಿನ ಕ್ರಮವೆಂತೆಂದರೆ; ನಾನು ನಂನ ಅವಸರ ನಿಮಿತ್ತವಾಗಿ ನಂನ ಹೊಲೆಯಾಳು ಕಂನನ ಹೆಂಡತಿ ಚಉಡಿಯೆಂಬ ಹುಡುಗಿಯನ್ನೂ ನಿಮಗೆ ಕ್ರಯಕ್ಕೆ ಕೊಟ್ಟೆನಾಗಿ ಯೀ ಹೆಂಣ ಆಳಿಗೆ ಬುದ್ಧಿವಂತರು ಕಂಡು ಕಟ್ಟಿದ ಕ್ರಯ ಗ ಅಕ್ಷರದಲು ಮೂರುವರೆಹಂನ ತೆಗೆದುಕೊಂಡು ಯೀ ಹೆಂಣಾಳ ಹುಡುಗಿಯನ್ನು ನಿಮಗೆ ಕ್ರಯಮೂಲಕ್ಕೆ ಕೊಟ್ಟೆವಾಗಿ ಯೀ ಹೆಂಣಿಗೆ ಅದಿ 'ದಯ ಅಡ್ಡಿ ಸಡ್ಡಿಯೇನು ಉಂಟಾದಂನ್ನೂ ನಾನೇ ನೋಡಿಕೊಂಡೇನುಯೆಂದು ಬರೆಸಿಕೊಟ್ಟ ಕ್ರಯ ಚೀಟು.[೨೯]

ತೊತ್ತುಗಳನ್ನು ಮಾರಿದ, ಕ್ರಯಚೀಟುಗಳಿಗೆ ಬರೆಸಿಕೊಟ್ಟದ್ದೇನೊ ಈಚಿನ ತಾಮ್ರ ಮತ್ತು ಕಡತಗಳಲ್ಲಿ ದೊರಕುತ್ತಿದೆ. ಇಂಥವು ಕೇವಲ



ವಾಗ್ರೂಪದಲ್ಲಿ ಸಹಸ್ರಾರು ವರ್ಷಗಳಿಂದ ಆಗಿ ಬಂದುದನ್ನು ಚರಿತ್ರೆ ಬರೆದಿಟ್ಟಿಲ್ಲ. ಬರೆದಿರುವುದು ಕಡಿಮೆಯಾದರೂ ಬರೆಯದಿರುವ ಚರಿತ್ರೆಯ ಮೌನ ತುಂಬ ಅಸಹನೀಯವಾಗಿದೆ.

ಈ ರೀತಿ ತೊತ್ತು ಮತ್ತು ಕ್ರಯಕ್ಕೆ ಹೋಗುವವರು ಅಸ್ಪೃಶ್ಯರೇ ಆಗುತ್ತಿದ್ದರು. ಎಂ. ಚಿದಾನಂದಮೂರ್ತಿ ಅವರು ಹೀಗೆ ಹೇಳುತ್ತಾರೆ:

> **'ತೊತ್ತುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದ ಅಸ್ಪೃಶ್ಯರು ಮಾತ್ರ ನಿಶ್ಚಿತವಾಗಿಯೂ ಮಾರಾಟದ ವಸ್ತುಗಳು ಆಗಿದ್ದರು. ತಮಗೆ ಒಬ್ಬ ಹೊಲೆಯ ತೊತ್ತು ಬೇಡವಾಗಿದ್ದರೆ ಅಂಥವನನ್ನು ಮಾರಾಟಮಾಡಿ ಕ್ರಯಪತ್ರ ಬರೆದು ಕೊಡುತ್ತಿದ್ದರು.[೩೦]**

ಅಸ್ಪೃಶ್ಯರ ಬಗೆಗೆ ಇಲ್ಲಿಯ ಚಿತ್ರ ತುಂಬ ಅಸ್ಪಷ್ಟ ಹಾಗೂ ಸ್ಥೂಲವಾದದ್ದು ಮಾತ್ರ. ಸಿಗುವ ಚಿತ್ರಗಳನ್ನು ನೋಡಿದರೆ; ಅಸ್ಪೃಶ್ಯರ ಬದುಕು ಹೀನಾಯವಾಗಿತ್ತು ಮಾತ್ರವಲ್ಲ ದರ್ಧರವಾಗಿತ್ತು.

ಅಸ್ಪೃಶ್ಯರ ಬದುಕು ಈ ಶತಮಾನದ ಮೊದಲ ದಶಕದವರೆಗೆ ಒಂದೇ ರೀತಿಯಲ್ಲಿತ್ತು. ಅವರು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಧಾರ್ಮಿಕವಾಗಿ ಹಿಂದುಳಿದಿದ್ದರು. ಅವರು 'ಮನುಷ್ಯ'ರೆಂಬ ಕಲ್ಪನೆಯೇ ಚರಿತ್ರೆಯಲ್ಲಿ ಬಂದಿರಲಿಲ್ಲ. ಸಾಹಿತ್ಯ ಕೃತಿಯಲ್ಲಿ ದೊರಕುವ ಚಿತ್ರಗಳೂ ಕೂಡ ಸ್ವಲ್ಪ ಸ್ಥೂಲವೇ. ಅಲ್ಲಿಯ ವಿವರಗಳು ಹೆಚ್ಚು ಶೂದ್ರ ಸಂಸ್ಕೃತಿಗೆ[೩೧] ಸೇರಿದವೇ ಹೊರತು; ಚಂಡಾಲ, ಪಂಚಮ, ಹೊಲೆಯ, ಮಾದಿಗ, ಕೊರಮ, ಬೇಡ, ಬೆಸ್ತ ಹೀಗೆ ಹಲವು ಹತ್ತೊಂದು ಬಗೆಯ ಅಸ್ಪೃಶ್ಯ ಸಂಸ್ಕೃತಿಯವರು ಚರಿತ್ರೆಗೆ ಹೊರತಾದವರು. 'ಅಸ್ಪೃಶ್ಯರ ಪರಿಕಲ್ಪನೆ' ಯನ್ನು ಶಾಸನದ ಮಟ್ಟಿಗೆ ಗುರುತಿಸಿಕೊಳ್ಳುವುದು ತುಸು ಕಷ್ಟವೇ ಆದರೂ ದೊರಕುವ ಸ್ವಲ್ಪ ಸಾಮಗ್ರಿಯನ್ನೂ ವಿವರವಾಗಿ ನೋಡಿದರೆ ಪ್ರಾಚೀನ ಕರ್ನಾಟಕ, ಮಧ್ಯ ಕರ್ನಾಟಕಗಳಲ್ಲಿ ಅವರು ಒಂದೇ ಬಗೆಯಾಗಿ ಇದ್ದಾರೆ. ಈ ಸಂಗತಿ ಕರ್ನಾಟಕಕ್ಕೆ ಅನ್ವಯವಾಗುವಂತೆ, ಭಾರತಕ್ಕೂ ಅನ್ವಯವಾಗುತ್ತದೆಂದು ಹಿಂದೆ ಹೇಳಿದ್ದಾಗಿದೆ. ಸ್ವಾತಂತ್ರ್ಯ ಬಂದು ನಾಲ್ವತ್ತು ವರ್ಷ ಕಳೆದರೂ ಗ್ರಾಮ, ಕುಗ್ರಾಮ, ತಾಂಡಗಳಲ್ಲಿ ಅಸ್ಪೃಶ್ಯರ ಬದುಕು ಪ್ರಾಚೀನ ಕರ್ನಾಟಕದ ಅಸ್ಪೃಶ್ಯರ ಬದುಕಿನ ಮೂಲ ಮಾದರಿಯನ್ನು ಪ್ರತಿನಿಧಿಸುವಂತೆಯೇ ಇದೆ. ರಾಜರ, ಬ್ರಾಹ್ಮಣರ, ಕ್ಷತ್ರಿಯರ ಹಾಗೂ ವೈಶ್ಯರ ಬದುಕನ್ನು ಸೂಚಿಸುವ ಶಾಸನಗಳು ಈಗಲೂ ಅಸ್ಪೃಶ್ಯರ ಬದುಕನ್ನು ಬಾಳೆಂದು ನೋಡಿಯೇ ಇಲ್ಲವೆಂಬುದನ್ನು ಪರ್ಯಾಯವಾಗಿ ಸೂಚಿಸುತ್ತದೆಂದು ಹೇಳಿದರೆ ಸ್ವಲ್ಪವೂ ಉತ್ಪ್ರೇಕ್ಷೆ ಮಾಡಿ ಹೇಳಿದಂತೆ ಆಗುವುದಿಲ್ಲ.

ಒಟ್ಟು ಅಧ್ಯಯನದಲ್ಲಿ, ಶ್ರುತಿ, ಸ್ಮೃತಿಗಳು ಅಸ್ಪೃಶ್ಯ ಮತ್ತು ವರ್ಣಗಳ ಬಗೆಗಿನ ಪರಿಕಲ್ಪನೆಯನ್ನು ಖಚಿತಪಡಿಸಿಕೊಂಡು-ಇವುಗಳ ಹಿನ್ನೆಲೆಯಲ್ಲಿ 'ಅಸ್ಪೃಶ್ಯ ಪರಿಕಲ್ಪನೆ' ಯನ್ನು ಖಚಿತಗೊಳಿಸಿಕೊಳ್ಳಲಾಗಿದೆ. ಹೀಗಾಗಿ ಶೂದ್ರ ಮತ್ತು ಅಸ್ಪೃಶ್ಯ ಎಂಬುದು ತಾತ್ವಿಕವಾಗಿ ಮಾತ್ರವಲ್ಲ; ಸಾಮಾಜಿಕವಾಗಿ ಬೇರೆ ಬೇರೆಯೆಂದು ಸೂಚಿಸುತ್ತ ಪ್ರಸ್ತುತ ಅಧ್ಯಯನವನ್ನು ನೋಡಲಾಗಿದೆ.

ಅಸ್ಪೃಶ್ಯರ ಬದುಕು ಈ ಶತಮಾನದ ಮೊದಲ ದಶಕದವರೆಗೆ ಒಂದೇ ರೀತಿಯಲ್ಲಿತ್ತು. ಅವರು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಧಾರ್ಮಿಕವಾಗಿ ಹಿಂದುಳಿದಿದ್ದರು. ಅವರು 'ಮನುಷ್ಯ'ರೆಂಬ ಕಲ್ಪನೆಯೇ ಚರಿತ್ರೆಯಲ್ಲಿ ಬಂದಿರಲಿಲ್ಲ. ಸಾಹಿತ್ಯ ಕೃತಿಯಲ್ಲಿ ದೊರಕುವ ಚಿತ್ರಗಳೂ ಕೂಡ ಸ್ವಲ್ಪ ಸ್ಥೂಲವೇ. 'ಅಸ್ಪೃಶ್ಯರ ಪರಿಕಲ್ಪನೆ' ಯನ್ನು ಶಾಸನದ ಮಟ್ಟಿಗೆ ಗುರುತಿಸಿಕೊಳ್ಳುವುದು ತುಸು ಕಷ್ಟವೇ ಆದರೂ ದೊರಕುವ ಸ್ವಲ್ಪ ಸಾಮಗ್ರಿಯನ್ನೂ ವಿವರವಾಗಿ ನೋಡಿದರೆ ಪ್ರಾಚೀನ ಕರ್ನಾಟಕ, ಮಧ್ಯ ಕರ್ನಾಟಕಗಳಲ್ಲಿ ಅವರು ಒಂದೇ ಬಗೆಯಾಗಿ ಇದ್ದಾರೆ.

ಅಡಿ ಟಿಪ್ಪಣಿಗಳು

೧. 'ಕನ್ನಡಿಗರ ಬದುಕಿನ ವಿವಿಧ ಮುಖಗಳನ್ನು ಸವಿಸ್ತಾರವಾಗಿ ಬಿಚ್ಚಿ ತೋರಿಸುವ ಶಾಸನಗಳಲ್ಲಿ ಅಸ್ಪೃಶ್ಯರ ಬಗೆಗಿನ ಸಾಮಗ್ರಿ ತೀರ ಬಡುಕಲೆಂದರೆ ಅದು ತಪ್ಪಾಗದು. ಇಲ್ಲವೇ ಇಲ್ಲವೆಂದರೂ ಸರಿಯೇ. ದಾನ, ದೇವಾಲಯ ನಿರ್ಮಾಣ, ಕ್ಷಾತ್ರ, ತೇಜಸ್ಸು ಕೀರ್ತಿ, ಪ್ರಶಸ್ತಿ ಸಾಮಾಜಿಕ ಕಾರ್ಯ, ಈ ಸಮಾಜೋ-ಸಾಂಸ್ಕೃತಿಕ ಚಟುವಟಿಕೆಗಳೆಲ್ಲ ಮೇಲ್ಜಾತಿಯ ವರಿಗೆ ಮೀಸಲಾಗಿರುವಾಗ, ಮತ್ತು ಅಂತಹ ಸಂಗತಿಗಳನ್ನೇ ಶಾಸನಗಳ ಒಳಗೊಂಡಿರುವಾಗ ಅಸ್ಪೃಶ್ಯರ ನೇರವಾದ ಉಲ್ಲೇಖಗಳನ್ನು ಶಾಸನಗಳಲ್ಲಿ ನಿರೀಕ್ಷಿಸುವಂತಿಲ್ಲ. ಅವರ ಉಲ್ಲೇಖಗಳ ಅಭಾವವೇ ಅವರ ಸಾಮಾಜಿಕ ಸ್ಥಿತಿಗತಿಗಳಿಗೆ ಮೌನವಕ್ತಾರನಂತಿದೆ.' (ಚಿದಾನಂದ ಮೂರ್ತಿ ಎಂ. ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ಪು. ೪ ೧೯೮೫)

೨. ಇಲ್ಲಿನ ಅಧ್ಯಯನ, ಅವರ ಒಟ್ಟು ಮಾತನ್ನು ಬಳಸಿಕೊಂಡು ನಡೆದಿದ್ದರೂ 'ನಿಷೇಧಾತ್ಮಕ ಅರ್ಥಗ್ರಹಣ ಪದ್ಧತಿ'ಯನ್ನು ಅನುಸರಿಸಿ ಕೊಂಡು ನಡೆಯಲಾಗಿದೆ. ಸಿಗುವ ಆಧಾರಕ್ಕಿಂತ, ಸಿಗದಿರುವ ಸಂಗತಿ ಗಳನ್ನು ಬ್ರಾಹ್ಮಣ ಕೇಂದ್ರಿತ ನೆಲೆಯಿಂದ ಲಭ್ಯವಾಗುವ ಆಶಯವನ್ನು ಹಮ್ಮಿಕೊಳ್ಳಲಾಗಿದೆ. ಹೀಗಾಗಿ, 'ಅಸ್ಪೃಶ್ಯತೆ'ಯ ಪರಿಕಲ್ಪನೆಯನ್ನು 'ನೆಗೆಟಿವ್' ಮೆಥಡಾಲಜಿಯ ಪರಿಕಲ್ಪನೆಯಲ್ಲಿ ನೋಡುವ ಸಾಹಸ ಮಾಡಲಾಗಿದೆ.

೩. ಋಗ್ವೇದ ಸಂಹಿತಾ IX-೧೧೨ ; ಸಂ. ಸಿ.ಜಿ. ಕಾಶೀಕರ್, ಎನ್.ಎಸ್. ಸೋನಟಕ್ಕೆ; ವೈದಿಕ ಸಂಶೋಧನ ಮಂಡಲ ಪೂನಾ ೧೯೫೧

೪. ಮೇಲಿನದೇ, ಪುಟ: ೬.

೫. ಶೂದ್ರಃ ಕಾಲೇನ ಶುದ್ಧ್ಯೇತ ಗೋಬ್ರಾಹ್ಮಣ ಹಿತೇರತಃ!
ದಾನ್ಯೈಃ ನಾಪ್ಯುಪದಾಸ್ಯರ್ನಾ ದ್ವಿಜ ಶುಶ್ರೂಷಯಾತಥಾ!!

ಅಂಗಿರಸ ಸ್ಮೃತಿ ಶೂದ್ರನು, ಶುದ್ಧನಾಗಬೇಕಾದರೆ ಆವನು ಬ್ರಾಹ್ಮಣರ ಸೇವೆ ಮಾಡಬೇಕು. ದುಡಿದಿದ್ದನ್ನು ದಾನ ಮಾಡಬೇಕು. ಇತರ ವರ್ಣದವರು ಇವನಿಂದ ದಾನತೆಗೆದುಕೊಳ್ಳುವ ಹಾಗಿಲ್ಲ. ತನಗಿಲ್ಲವಾದಾಗ ಉಪವಾಸವಿರಬೇಕು. ಮುಂದಿನ ಸ್ಮೃತಿಗಳಲ್ಲಿ ಶೂದ್ರನು ಯಾವ ನೆಲೆಗೆ ಇಳಿಯುತ್ತಾನೆಂಬುದಕ್ಕೆ ಅಂಗಿರಸ ಸ್ಮೃತಿಯನ್ನು ಉದಾಹರಿಸಬೇಕಾಯಿತು. ಮನು ಕೂಡ ಅನೇಕ ಕಡೆ ದ್ವೈಮುಖೀಭಾವದ ನೆಲೆಯಲ್ಲಿ ಓಡಾಡುತ್ತಾನೆ. ಅವನ ಮಾತೊಂದು ಹೀಗಿದೆ.

ಶೂದ್ರೋSಪಿ ಬ್ರಾಹ್ಮತಾಮೇತಿ ಬ್ರಾಹ್ಮಣಶ್ಚೇತಿ ಶೂದ್ರತಾಂ!
ಕ್ಷತ್ರಿಯ ಜ್ಞಾತಮೇವಂ ತು ವಿದ್ಯಾದ್ವೈ ಶ್ಯಾಸ್ತಥೈವ ಚ॥

'ಶೂದ್ರ ಒಂದು ಪಕ್ಷ ಬ್ರಾಹ್ಮಣನಾಗುತ್ತಾನೆ. ಬ್ರಾಹ್ಮಣನೂ ಕೂಡ ಶೂದ್ರನಾಗುತ್ತಾನೆ. ಕ್ಷತ್ರಿಯನೂ ವೈಶ್ಯನೂ ಕೂಡ ಈ ಪರಿವರ್ತನೆಯನ್ನು ಹೊಂದುವರು' ಉದ್ಧೃತ 'ಮನುಸ್ಮೃತಿ' ಚಕ್ರಕೋಡಿ ಈಶ್ವರಶಾಸ್ತ್ರಿ, ಸಮಾಜ ಪುಸ್ತಕಾಲಯ, ಧಾರವಾಡ ಇಲ್ಲಿ ಉಚ್ಚ ನೀಚ ಜಾತಿಗಳಿಗೆ ಬದಲಾಗಬಹುದೆಂದು ಉದಾರವಾದ ನಾಟಕೀಯತೆ ಇದರ ಹಿಂದಿನ ಹಾಗೂ ಮುಂದಿನ ಮಾತುಗಳಲ್ಲಿ ವ್ಯಕ್ತವಾಗಿದೆ.

೬. ಎಂ.ಜಿ. ನಂಜುಂಡಾರಾಧ್ಯ 'ಹಿಂದೂಧರ್ಮ ಮತ್ತು ಅಸ್ಪೃಶ್ಯತೆ' ಪುಟ ೩೦ (೧೯೮೨) ವರ್ಣ ಸಾಂಕರ್ಯಕ್ಕೆ ಸೇರಿದವರು. ಇವರೆಲ್ಲ ಸಂಕರಜಾತಿಗೆ ಸೇರಿದವರೇ. ಮೇಲೆ ನೀಡಿರುವ ಪಟ್ಟಿಯಲ್ಲಿ 'ಚಂಡಾಲ' ನನ್ನು ಹೊರತುಪಡಿಸಿದರೆ. ಪುರುಷರೆಲ್ಲ ಮೇಲಿನ ಮೂರು ವರ್ಣಕ್ಕೆ ಸೇರಿದವರೇ. ಅವರು ಕೂಡಿರುವ ಸ್ತ್ರೀಯರಲ್ಲಿ ಕರಣದ ಶೂದ್ರ ಹೆಂಗಸು ಮತ್ತು ಉಗ್ರದ ಶೂದ್ರಸ್ತ್ರೀ ಹೊರತುಪಡಿಸಿದರೆ ಉಳಿದವರೆಲ್ಲ ಉಚ್ಚ ಕುಲದವರೇ. ಹೀಗಾಗಿ, ಇವರೆಲ್ಲ ಒಂದು ಹಿನ್ನೆಲೆಯಲ್ಲಿ ಶೂದ್ರರೇ. ತೀರ ಸಮಾಜದಿಂದ ಬಾಹಿರರಲ್ಲ. ಸಮಾಜದಲ್ಲಿ ಹೀನವೃತ್ತಿಗಳಲ್ಲಿದ್ದವರೇ. ಇವರ ಬದುಕು ಅಸ್ಪೃಶ್ಯರಿಗಿಂತ ಕಡೆಯಲ್ಲ. ಆದರೆ, ಚಂಡಾಲ ಇದಕ್ಕಿಂತ ಭಿನ್ನ.

೭. ಈ ಮಾತನ್ನು ನಾವು 'ಆಪಸ್ತಂಭ ಧರ್ಮ ಸೂತ್ರ'ದ ಹಿನ್ನೆಲೆಯಲ್ಲಿ ವಿವರಿಸಿಕೊಳ್ಳಬಹುದು. ಶೂದ್ರ, ವೈಶ್ಯ, ಕ್ಷತ್ರಿಯ, ಬ್ರಾಹ್ಮಣನೂ ಆಗಬಹುದು. 'ಧರ್ಮಚರ್ಯನ್ಯೋ ಜಘನ್ಯೋ ವರ್ಣ : ಪೂರ್ವಂ ಪೂರ್ವಂ ವರ್ಣಮಾಪದ್ಯತೇ' ಎಂಬ ಮಾತಿನಲ್ಲಿ ಇದು ನಿಲುಗಡೆಯಾಗಿದೆ. ಶೂದ್ರನಿಗೆ ವೇದ ಓದಿದ್ದನ್ನೂ ಬಿಟ್ಟರೆ ಪುರಾಣ ಕಾವ್ಯ, ಇತಿಹಾಸ ಓದುವುದಕ್ಕೆ ಅವಕಾಶವಿತ್ತು.

೮. ಅಮರಸಿಂಹ 'ಅಮರಕೋಶ' ಶೂದ್ರವರ್ಗ : ಸಂ : ಎನ್ ರಂಗನಾಥಶರ್ಮ ಕಾವ್ಯಾಲಯ ಪ್ರಕಾಶಕರು ಮೈಸೂರು, ೧೯೭೫.

೯. ಈ ಮಾದರಿ ಹಿಂದೆಯೂ ಆಗಿದೆ. ಮನು ತನ್ನ 'ಮನುಸ್ಮೃತಿ'ಯಲ್ಲಿ ಹೀಗೆನ್ನುತ್ತಾನೆ.

ಶೂದ್ರೋSಪಿ ಬ್ರಾಹ್ಮತಾಮೇತಿ ಬ್ರಾಹ್ಮಣಶ್ಚೇತಿ ಶೂದ್ರಾತಾಂ
ಕ್ಷತ್ರಿಯಜ್ಞಾತಮೇವಂ ತು ವಿದ್ಯಾದ್ವೈಶ್ಯಾಸ್ತಥೈವ ಚ

೧೦. ಭಗವದ್ಗೀತೆ ಶೂದ್ರನನ್ನು ಕುರಿತು ಹೇಳುವಾಗ 'ಪರ್ಮಾತ್ಮಕಂ ಕರ್ಮ ಶೂದ್ರಾಸ್ಯಾSಪಿ ಸ್ವಭಾವಜಂ' ಶೂದ್ರರ ಸಹಜ ಸ್ವಭಾವ ಏನಪ್ಪ ಅಂದರೆ ಅವರು ಉಳಿದ ವರ್ಣದವರನ್ನು ಪರಿಚರ್ಯೆ ಮಾಡುವುದೇ.

೧೧. ಅಸ್ಪೃಶ್ಯ ಎಂಬುದಕ್ಕೆ ಸಂಸ್ಕೃತ ಕೋಶಗಳು ಕೊಡುವ ನಿರ್ವಚನ ತುಂಬ ಗಮನಾರ್ಹವಾದುದು 'ನ ಸ್ಪಷ್ಟು ಮರ್ಹಃಸ್ಪೃಶಾ, ಮಲ ಮೂತ್ರ ಪುರೀಷಾಸ್ಥಿರ್ನಿರ್ಗತಂ ಹ್ಯಾಶುಚಿ ಸ್ಮೃತಮ್' ಸ್ಪರ್ಶಕ್ಕೆ ಅರ್ಹರಲ್ಲದವರು ಅಸ್ಪೃಶ್ಯರು. ಹೇಲು, ಉಚ್ಚೆಗಳು ಸ್ಪೃಶ್ಯಕ್ಕೆ ಹೇಗೆ ಅಯೋಗ್ಯವೋ ಅಷ್ಟರ ಮಟ್ಟಿಗೆ ಅವರು ಅಸ್ಪೃಶ್ಯರು. ಮುಂದುವರೆದು ಹೇಳುತ್ತ; 'ಅಸ್ಪೃಶ್ಯ ಸ್ಪರ್ಶನೇಚ್ಛೈವ ಸದ್ಯಃಸ್ನಾನಂ ಸಮಾಚರೇತ್' ಒಂದು ಪಕ್ಷ ಅಸ್ಪೃಶ್ಯನನ್ನು ಮುಟ್ಟಿದ್ದಾದರೆ, ತಕ್ಷಣವೇ (ಪಂಚಗವ್ಯ ತೆಗೆದುಕೊಂಡು) ವಿಧಿ ಪೂರ್ವಕವಾಗಿ ಶುದ್ಧನಾಗಬೇಕು. ನೋಡಿ : ಸಂಸ್ಕೃತ ಕನ್ನಡ ಶಬ್ದಕೋಶ (ಪ್ರಥಮ ಭಾಗ) ಚಕ್ರವರ್ತಿ ಶ್ರೀನಿವಾಸಗೋಪಾಲಚಾರ್ಯ ಪುಟ: ೨೭೨ (೧೯೬೧)

೧೨. ಈ ಬಗೆಗಿನ ಅಧ್ಯಯನಕ್ಕೆ ಈ ಶತಮಾನದ ಮೊದಲವರೆಗೂ ಚರಿತ್ರಕಾರರೂ, ಪ್ರಾಕ್‌ಶಾಸ್ತ್ರಜ್ಞರೂ ಕೂಡ ಮೂಕವಾಗಿದದ್ದು ಅರ್ಥಪೂರ್ಣವಾಗಿದೆ.

೧೩. ಪ್ರಕಟವಾಗಿರುವ ಒಟ್ಟು ಶಾಸನ ಸಂಪುಟಗಳನ್ನು ನೋಡಿದರೆ ಹೆಚ್ಚು ಕಡಿಮೆ ಒಂದೇ ದನಿ ಪ್ರಧಾನವಾಗಿ ಕಾಣಬರುತ್ತದೆ. ಯಾವುದೇ ಊರಿನ ಹೊರಗಡೆ ಬೇಲಿಯ ಸಮೀಪ ಅಥವಾ ಊರಿನ ಗಡಿಗೆ ಹೊಂದಿಕೊಂಡಂತೆ ಇವರು ಗುಡಿಸಲು ಹಾಕಿಕೊಂಡು ವಾಸವಾಗಿರುತ್ತಿದ್ದರು. ಸೀಮೆಯ ಉಲ್ಲೇಖ ಕೊಡುವಾಗ ಶಾಸನಗಳಲ್ಲಿ ಅಸ್ಪೃಶ್ಯರು (ಹೊಲೆಯ-ಮಾದಿಗರು) ಕಾಣಬರುತ್ತಾರೆ.

ವಿವರಗಳಿಗೆ ನೋಡಿ :

BKI	I.	1.50.	1050 AB
E.C.	VII	SK	118, 1054 AD
E.C.	VII	SK	185
E.C.	VI	Ka	99
E.C.	III	St	34
E.C.	VI	Mg	22
E.I.	VI(Page)		166, 793 AD.

ಕೇವಲ ಉಲ್ಲೇಖವಾಗಿ ಮಾತ್ರ ಇಲ್ಲಿ ಕಾಣಸಿಗುತ್ತಾರೆ.

೧೪. ಮಾದೇಗ-ಮಾದಿಗ ಎರಡು ರೂಪವೂ ಬಳಕೆಯಲ್ಲಿದೆ. (ಮಾದೇಗಿತ್ತಿ-ಮಾದಿಗಿತ್ತಿ ಸ್ತ್ರೀಲಿಂಗ ರೂಪವನ್ನು ಗಮನಿಸಬಹುದು) ತುಳು: ಮಾದಿಗೆ, ತೆಲುಗು; ಮಾದಿಗ. ಮಾದಿಗ ಶಬ್ದವು ಸಂಸ್ಕೃತದ 'ಮಾತಂಗ' ಎಂಬುದರಿಂದ ಬಂದಿದೆಯೆಂದು ಕೆಲ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೆ, ದ್ರಾವಿಡ ಪದವಾದ ಇದು ಸಂಸ್ಕೃತಕ್ಕೆ ಹೋಗಿರಬೇಕೆಂದು ಅಭಿಪ್ರಾಯವೂ ಉಂಟು. (ಪುಟ:೩೨೦) ಮಾರಮ್ಮನ ಜಾತ್ರೆಯಲ್ಲಿ ಕೋಣವನ್ನೂ ಬಲಿಕೊಟ್ಟಾಗ ಮಾಂಸದ ಕೊನೆ ಪಾಲು ಮಾದಿಗರದಾಗುತ್ತಿತ್ತು.

೧೫. E.cam, Viii, Sorab, 532, 964 AD. ಇಲ್ಲಿ ಬರುವ 'ನಾಣ' ಎಂಬ ಹೆಸರೂ ಕೂಡ ಅಸ್ಪೃಶ್ಯನದೇ ಎಂಬ ಸಂಶಯ ಇದ್ದೇ ಇದೆ.

೧೬. ತುಳುನಾಡಿನ ಶಾಸನಗಳು (ಸಂ.೧) ಸಂ. ಕೆ.ವಿ. ರಮೇಶ, ಎಂ.ಜೆ. ಶರ್ಮ, ಮೈಸೂರು ಪುಟ : ೧೮, ೧೯೭೮.

೧೭. ಹೊಲೆಯ ಇದು ಹಳಗನ್ನಡದಲ್ಲಿ ಸಾಮಾನ್ಯವಾಗಿ ಪೊಲೆಯ ಎಂದೇ ಬಳಕೆಗೊಂಡಿದೆ. ತಮಿಳಿನಲ್ಲಿ ಪುಲೈಯನ್, ಮಲೆಯಾಳಂನಲ್ಲಿ ಪುಲಯನ್ ಈ ಎಲ್ಲ ಶಬ್ದಗಳ ಮೂಲ 'ಪೊಲ್ಲ್' (ಪೊಲ್) ಎಂಬುದೇ ಆಗಿದೆ. ಪೊಲೆ ಎಂದರೆ ಅಶುದ್ಧ ಕೊಳಕು ಎಂದು ಅರ್ಥ. ಪೊಲಸು, ಹೊಲಸು ಎಂಬಲ್ಲಿಯೂ ಅದೇ ಭಾವವಿದೆ. ಪೊಲತಿ (ಸ್ತ್ರೀಲಿಂಗ)

೧೮. Ep. carn viii, sorab 531 ಇಲ್ಲಿ ಇನ್ನೊಂದು ಸಂಗತಿಯನ್ನೂ ಕರ್ನಾಟಕಕ್ಕೆ ಸಂಬಂಧಿಸಿದಂತೆ ಯೋಚಿಸಿರಬೇಕು. ಬ್ರಹ್ಮಶಿವನ ಸಮಯ ಪರೀಕ್ಷೆ ಇದು ಹನೆರಡನೆಯ ಶತಮಾನದ್ದು. ಇವನು ಶೂದ್ರ ಮತ್ತು ಅಸ್ಪೃಶ್ಯರ ನಡುವೆ ಹೆಚ್ಚು ವ್ಯತ್ಯಾಸ ಮಾಡಿಲ್ಲ.

ಒಕ್ಕಲಿಗನಕ್ಕೆ ಪಂಚಮ
ನಕ್ಕಮವೇದಮನೆ ಕೇಳಲಾಗದೆಂದೂಳ್ವರ್
ತಕ್ಕರನರಿದುಂ ವೇದ
ಕೊಕ್ಕಲಿಗಂ ಭಕ್ತಿ ಮಾಳ್ಪುದಾವುದು ದುಃಖಂ

೧೯. ನೋಡಿ ಡಾ!! ಎಂ. ಚಿದಾನಂದಮೂರ್ತಿ, ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ ಪುಟ: ೩೫.

೨೦. 'ಪೊಲಗೆ ಚಂಡ ಅಲಯರ್' ನೋಡಿ (BKI. I ii 201, c. 1125 AD) ಮತ್ತು 'ನೀರು ಸಾಗರಕ್ಕೆ ಹೋದದ ಓಣಿಯಿಂ ಪಡುವಲು ಹೊಲಗೇರಿಯಿಂ ಪಡು ಮುಖ್ಯವಾಗಿ' (Karn Om V-70. P. 261, 1221 AD)

೨೧. Ep. Ondica, Vol. 29, P. 203. ಇದು ಹತ್ತನೆಯ ಶತಮಾನದ ಶಾಸನ.

೨೨. ಬೊಂಬಾಯಿ ಕರ್ನಾಟಕ ಶಾಸನಗಳು ೧೯೩೭ ಸಿಂದಗಿ ೩೯.೦೭

೨೩. Karnataka Incription's vol v ed: B.R. Gopal, Kannada research institute Dharwar. 1969. page; 261. ಇವತ್ತು ನಾವು ಹಳ್ಳಿಯಲ್ಲಿ ಹೊಲಗೇರಿ, ಮಾದಿಗರಕೇರಿ ಎಂಬ ಮಾತುಗಳು ಸ್ಮೃತಿಕೋಶದಲ್ಲಿ ಜೀವಂತವಾಗಿ ಹೇಗೋ ಉಳಿದುಕೊಂಡು ಬಂದಿವೆ. ಕೊರಗರಕೇರಿ, ಕೊರವರಕೇರಿ, ಎಂಬುದೂ ಉಂಟು. ಈ ಕೇರಿಗಳಲ್ಲಿ ಬದುಕಿದ್ದವರ ಒಟ್ಟು ಬದುಕು, ಬವಣೆ, ದುಃಖ, ದುಮ್ಮಾನಗಳು ನಮಗೆ ತಿಳಿದಿಲ್ಲವಾದರೂ ಈ ಶತಮಾನದ ಮೊದಲೆರಡು ದಶಕಗಳ ತನಕ ಅವರಿದ್ದ ಸ್ಥಿತಿಯು ಸಾವಿರ ವರ್ಷದ ಸ್ಥಿತಿ ಹೇಗಿತ್ತೋ ಹಾಗೆ ಇತ್ತೆಂದು ಕಾಣುತ್ತದೆ.

೨೪. EP. Carn (ಮೈಸೂರು ಮುದ್ರಣ) iv. ಪಿರಿಯಾ ಪಟ್ಟಣ, ೯೯. ಸು. ೧೭ನೇ ಶತಮಾನದ್ದಿರಬೇಕು.

೨೫. EP. Carna (ರೈಸ್ ಅವರ ಮುದ್ರಣ) Vol ix, 71-6. ಇಲ್ಲಿ ಬರುವ ಎಡಗೈ ಬಲಗೈ ಎಂಬುದು ಅನುಕ್ರಮವಾಗಿ ಮಾದಿಗ ಮತ್ತು ಹೊಲೆಯ ಎಂಬುದಕ್ಕೆ ಸಂವಾದಿ ಪದಗಳೇ ಆಗಿವೆ. ದಕ್ಷಿಣ ಕರ್ನಾಟಕದಲ್ಲಿ ಈ 'ಪದ'ಗಳು ಬಹುಮುಖ್ಯವಾಗಿ ಬಳಕೆಗೊಂಡಿವೆ. ಹೊಲೆ ಮಾದಿಗರಲ್ಲಿ ಇಂದಿಗೂ ಹೊಲೆಯರು ಉತ್ತಮರು; ಮಾದಿಗರು ಅವರಿಗಿಂತ ಕಡಿಮೆ ಎಂಬ ನಂಬಿಕೆ ಇದೆ. ಇವರಲ್ಲಿ ಕೊಳುಲ ಕೊಡುಗೆಗಳು ಇಲ್ಲ. ಮಾದಿಗರು ಹೊಲೆಯರಲ್ಲಿ ನೀರು ನೀಡಿ ತೆಗೆದುಕೊಳ್ಳಬಹುದು, ಆದರೆ ಸಂಬಂಧ ಮಾತ್ರ ಬೆಳೆಸುವಂತಿಲ್ಲ.

೨೬. Ep. carn, XII, ಪುಟ: ೮೫-೮೭.

೨೭. Ep. carn, X, (ರೈಸ್ ಮುದ್ರಣ) 72, 1430 AD.

೨೮. ಕೆಳದಿ ಅರಸರ ಶಾಸನ ಸಂಪುಟ, ಸಂ. ಕೆಳದಿ ವೆಂಕಟೇಶ ಜೋಯಿಸ, ಪುಟ: ೪೫೯, ಡಂಬಳ, (೧೯೯೧)

೨೯. ಹೊಲೆಯರ ಮಾರಾಟದ ಕ್ರಯಪತ್ರಗಳನ್ನೂ ವಿವರವಾಗಿ ನೋಡಬಯಸುವವರು ಚಿದಾನಂದಮೂರ್ತಿಯವರ ಪುಸ್ತಕವನ್ನು ಗಮನಿಸಬೇಕು. (ಮ.ಕ. ಸಾಹಿತ್ಯ ಮತ್ತು ಅಸ್ಪೃಶ್ಯತೆ. ಪು. ೧೮೦, ೧೮೨) ಚೆಂನ ಎಂಬಾತನ ಹೆಂಡತಿ ಮುಂದೆ ವಿಧವೆಯಾದ ಇವಳನ್ನು ಆಕ್ರಮವಾಗಿ ಇಟ್ಟುಕೊಂಡಿದ್ದರಿಂದ ದುರ್ಗಾಭಟ್ಟ ಸುಬ್ಬಣ್ಣಯ್ಯನಿಗೆ ಮಾರುವ ಸಂಗತಿ ತಿಮ್ಮ ಎಂಬ ಮೇದರ ಜಾತಿಗೆ ಸೇರಿದ ಹೊಲೆಯಾಳುವನ್ನು ಗುಡಿಸಲು ಸರಕಿನ ಸಮೇತ ಕ್ರಯಕ್ಕೆ ತೆಗೆದುಕೊಳ್ಳಲಾಗುತ್ತದೆ. ಇನ್ನೊಂದು ಚೌಡನ ಮಗ ಮಗಳು ಇಬ್ಬರನ್ನು ೧೪ ವರಹಗಳಿಗೆ ಮಾರಲಾಗಿರುವುದು. ಇವೆಲ್ಲ ದೊರಕಿರುವುದು ಶೃಂಗೇರಿ ಮಠದಲ್ಲಿ. ಹೊಲೆಯ ಗುಲಾಮರ ಮಾರಾಟಕ್ಕೆ ಸಂಬಂಧಿಸಿದ ಸಂಗತಿಗಳಿಗೆ ವಿ.ಕೆ. ಶಾಸ್ತ್ರೀ, 'ಶೃಂಗೇರಿ ಧರ್ಮ ಸಂಸ್ಥಾನ' ೧೯೮೨ರ ಗ್ರಂಥವನ್ನು ನೋಡಬೇಕು. ಹಿಂದಿನ ಶಾಸನಗಳಲ್ಲಿ 'ತೊತ್ತು'ಗಳನ್ನು ಮಾರುತ್ತಿದ್ದುದರ ಮತ್ತೊಂದು ರೂಪ ಇಂಥ ಕ್ರಯ ಪತ್ರಗಳಲ್ಲಿ ಮೂಡಿ ಬಂದಿದೆ.

೩೦. ಪಗರಣ ಮತ್ತು ಇತರ ಸಂಪ್ರಬಂಧಗಳು, ಪುಟ: ೧೯೪, ಮೈಸೂರು ೧೯೬೪.

೩೧. ನಮ್ಮ ಹಿಂದುಳಿದ ವರ್ಗಗಳೆಂಬ ಅಧ್ಯಯನದ ಆಧುನಿಕ ಪರಿಕಲ್ಪನೆಯನ್ನು ಇನ್ನಷ್ಟು ಸಾಂಸ್ಕೃತಿಕವಾಗಿ ನೋಡಬೇಕಾದ ಅಗತ್ಯ ಇದೆ. ಶೂದ್ರ ಜನಾಂಗ ಹೀನತಕ್ಕೆ ಒಳಗಾದರೂ ಉದ್ದಕ್ಕೂ ಸೆಟೆದುಕೊಂಡು ಇತರ ಮೇಲು ವರ್ಣದವರ ಜತೆ ಎಲ್ಲ ರೀತಿಯಿಂದ ಎದುರಿಸಿಯೂ ಸಾಂಸ್ಕೃತಿಕವಾಗಿ ಪ್ರಬಲರಾಗಿಯೂ ಅವರೊಡನೆ ಬದುಕಿದ್ದಾರೆ. ಆದರೆ, ಅಸ್ಪೃಶ್ಯರು ಶೂದ್ರಾತಿಶೂದ್ರ ನೆಲೆಯ ಆಚೆಗೆ ನಿಲ್ಲುವರೇಜ ಹಿನ್ನೆಲೆಯಲ್ಲಿ ಇನ್ನಷ್ಟು ಅಧ್ಯಯನಗಳು ನಡೆಯಬೇಕಾಗಿದೆ.

ಗವೀಮಠದ ಪವಾಡ



ಕಥೆ

ಅರ್ಚಕ ಗೋವಿಂದನೇನೊ ಒಳ್ಳೆಯವನೇ. ಉತ್ತಮ ಮನೆತನ, ಬಂಧುಗಳು, ತಕ್ಕಷ್ಟು ವಿದ್ಯೆ ಬೇರೆ. ಆದರೆ, ಮನೆತನದಿಂದ ಬಂದ ವೈದಿಕ ವೃತ್ತಿಯಿಂದಷ್ಟೇ ಅವನಿಗೆ ತೃಪ್ತಿಯಿಲ್ಲ. ಮಂತ್ರ-ತಂತ್ರ ವಿದ್ಯೆ, ಪವಾಡಗಳನ್ನು ಕಲಿಯಬೇಕೆಂದು ಬಹಳ ಆಸೆ. ಹಾಗೆ ಕಲಿತ ವಿದ್ಯೆಯಿಂದ ಹೆಸರು ಪಡೆದರೆ ನಾನೂ ಏನಾದರೂ ಸಾಧಿಸಿದಂತಾಗುತ್ತದೆ. ತನ್ನ ವೃತ್ತಿಗೂ ಒಂದು ಕಳೆ ಬರುತ್ತದೆ ಎಂಬ ನಂಬಿಕೆ. ಅದೇ ಹುಚ್ಚಲ್ಲಿ ಭತಗುಣಿಯ ಗವಿ ಮಠದ ಪವಾಡ ಸ್ವಾಮಿಗಳ ಬಳಿಗೆ ಹೋದ

ಪವಾಡ ಸ್ವಾಮಿಗಳೆಂದರೆ ಆ ಭಾಗದ ಅಪರೋಕ್ಷ ಜ್ಞಾನಿಗಳು; ಮಹಾ ಪವಾಡ ಪುರುಷರು ಎಂದು ಹೆಸರುವಾಸಿಯಾದವರು. ಮೃತ್ತಿಕೆಯಿಂದ ಫಲ-ಮಂತ್ರಾಕ್ಷತೆಯನ್ನೂ; ತೀರ್ಥದಿಂದ ಪ್ರಸಾದವನ್ನೂ; ಅಂಗೈಯಿಂದ ದೇವರ ಮೂರ್ತಿಗಳನ್ನು ಅವರು ಸೃಷ್ಟಿಸಿ ನೂರಾರು ಭಕ್ತರಿಗೆ ನೀಡಿದ್ದನ್ನು ಜನ ಕಂಡವರಿದ್ದಾರೆ. ಇಂತಹ ಗುರು ತನಗೂ ಒಲಿದರೆ, ನಾನೂ ಸಮಾಜದಲ್ಲಿ ದೊಡ್ಡ ರಖಮಿನ ಚೀಜು ಆಗಬಹುದು ಎಂಬ ಮಹದಾಸೆಯಲ್ಲಿ ಒಂದು ನಸುಕಿನಲ್ಲಿ ಅರ್ಚಕ ಗೋವಿಂದ ಗವೀಮಠವನ್ನು ತಲುಪಿದ. ಸ್ವಾಮಿಗಳು ಆಗ ಜಳಕ ಮುಗಿಸಿ ಅಧ್ಯಯನದಲ್ಲಿದ್ದರು. ಅರ್ಚಕ ಗೋವಿಂದ ಅವರ ಮುಂದೆ ಹೋಗಿ ಶಿರಸಾಷ್ಟಾಂಗ ಪ್ರಣಾಮಗೈದ. ಸ್ವಾಮಿಗಳು ನಸು ನಗುತ್ತಲೇ ಆದರದಿಂದ ಬರಮಾಡಿಕೊಂಡರು. ಉಪಹಾರವಾಗುವವರೆಗೂ ಬಂದ ಕಾರಣವನ್ನು ತಿಳಿಸುವುದು ಬೇಡ ಎಂದು ತಿಳಿಸಿದರು. ಮಠದ ಉಪಹಾರವೆಂದರೆ ಅಳ್ಳಿಟ್ಟು- ಮಜ್ಜಿಗೆ, ಆಮೇಲೆ ಹೊಟ್ಟೆಗೆ ಶಮನ ನೀಡುವ ಬಿಸಿ ನೀರು. ಉಪಹಾರದ ಅನಂತರ ಗೋವಿಂದ ಬಂದ ಕಾರಣವನ್ನು ತಿಳಿಸಿ 'ನನಗೆ ತಂತ್ರಾಚಾರ, ಮಂಡಲ ವಿದ್ಯೆ; ಪವಾಡಗಳನ್ನು ಕಲಿಸಿಕೊಡಿ' ಎಂದು ಅಂಗಲಾಚಿದ.

'ನೀವು ಬಹಳ ಒಳ್ಳೆಯ ಅರ್ಚಕರು-ವೈದಿಕರು ಎಂದು ಹೆಸರು ಮಾಡಿದ್ದೀರೆಂದು ಕೇಳಿ ಬಲ್ಲೆ. ಆದರೆ, ನಾನು ನನ್ನೆಲ್ಲ ಜ್ಞಾನವನ್ನು ನಿಮಗೆ ನೀಡಿದ ಮೇಲೆ ಎಷ್ಟೋ ಪಂಡಿತರು ಮಾಡುವಂತೆ, ವಿನಯ, ಸಮಾಜಕ್ಕೆ ಒಳಿತಾಗುವಂತೆ ಕೆಲಸ ಮಾಡುವ ಸೇವಾ ಮನೋಭಾವವನ್ನು ನೀವು ತೋರಿಸದೇ ಹೋಗಬಹುದೆಂಬ ಆತಂಕ ನನಗೆ' ಎಂದು ಅನುಮಾನವನ್ನು ವ್ಯಕ್ತಪಡಿಸಿದರು ಪವಾಡ ಸ್ವಾಮಿಗಳು.

ಅದಕ್ಕೆ ಅರ್ಚಕ ಗೋವಿಂದ, 'ಇಲ್ಲ ಮಹಾಸ್ವಾಮಿ, ಹಾಗೆ ಯಾವತ್ತೂ ಮಾಡಲು ಸಾಧ್ಯವೇ ಇಲ್ಲ. ನೀವು ಎಂಥ ಅಪರಾತ್ರಿಯಲ್ಲಿ ಕರೆದರೂ, ಗುರು ಸೇವೆಯೆಂದು ಓಡಿ ಬರುತ್ತೇನೆ. ನನ್ನ ಸ್ವಾರ್ಥಕ್ಕಾಗಿ ಎಂದೂ ನೀವು ಕಲಿಸಿದ ವಿದ್ಯೆಯನ್ನು ಬಳಸುವುದಿಲ್ಲ' ಎಂದು ಆಣೆಭಾಷೆ ಮಾಡಿದ.

ಇರಲಿ, ಇರಲಿ ಎಂದು ಕಣ್ಸನ್ನೆ ಮಾಡುತ್ತ ಪವಾಡ ಸ್ವಾಮಿಗಳು ಅರ್ಚಕರ ಕೈ ಹಿಡಿದುಕೊಂಡು ಮಠದ ಸೋಪಾನವನ್ನು ಇಳಿದು ಹೋದರು. ಹೋಗುವ ಮೊದಲು ಅಡುಗೆಯವನಿಗೆ 'ರಾತ್ರಿಯೂಟಕ್ಕೆ ಹುಗ್ಗಿಯನ್ನು ಸಿದ್ಧಪಡಿಸಬೇಕು. ಆದರೆ ನಾನು ಹೇಳುವವರೆಗೂ ಒಲೆಗೆ ಬೆಂಕಿ ಹಾಕಿ ಅಡುಗೆ ಮಾಡುವುದು ಬೇಡ' ಎಂದು ಕೈ ಸನ್ನೆ ಮಾಡಿ ಅಣತಿ ನೀಡಿದರು. ಅನಂತರ ನಿಧಾನಕ್ಕೆ ನಡೆಯತೊಡಗಿದಂತೆ ಅರ್ಚಕ ಗೋವಿಂದ ಅವರನ್ನು ಹಿಂಬಾಲಿಸಿದ.

ಪಾವಟಿಗೆಗಳನ್ನು ಇಳಿದು ಹೋದಂತೆ ಎದುರಾದದ್ದು ಗುಹೆಯಂಥ ಕೋಣೆ. ಅಲ್ಲಿ ಪುಸ್ತಕಗಳ ರಾಶಿಯೇ ಇತ್ತು. ಗುಹೆಯ ತುಂಬ ಪುಸ್ತಕಗಳ; ದಶಾಂಗದ ಮಿಶ್ರಣಗಳ ವಾಸನೆ. ಅಲ್ಲಿದ್ದ ಮಂದ ನಂದಾದೀಪ ಕಣ್ಣಿಗೆ ಕತ್ತಲೆಯನ್ನು ಹೊಂದಿಸಿ ಕೊಡುತ್ತಲೇ, ಇದು ಗುಹೆಯಲ್ಲ ಅತಿ ದೊಡ್ಡ ಕೋಣೆ ಎಂದು ಅರಿವಿಗೆ ಬಂತು. ಎಷ್ಟೋ ಹೊತ್ತು ಕಳೆದಂತೆ

'ನೀವು ಬಹಳ ಒಳ್ಳೆಯ ಅರ್ಚಕರು-ವೈದಿಕರು ಎಂದು ಹೆಸರು ಮಾಡಿದ್ದೀರೆಂದು ಕೇಳಿ ಬಲ್ಲೆ. ಆದರೆ, ನಾನು ನನ್ನೆಲ್ಲ ಜ್ಞಾನವನ್ನು ನಿಮಗೆ ನೀಡಿದ ಮೇಲೆ ಎಷ್ಟೋ ಪಂಡಿತರು ಮಾಡುವಂತೆ, ವಿನಯ, ಸಮಾಜಕ್ಕೆ ಒಳಿತಾಗುವಂತೆ ಕೆಲಸ ಮಾಡುವ ಸೇವಾ ಮನೋಭಾವವನ್ನು ನೀವು ತೋರಿಸದೇ ಹೋಗಬಹುದೆಂಬ ಆತಂಕ ನನಗೆ' ಎಂದು ಅನುಮಾನವನ್ನು ವ್ಯಕ್ತಪಡಿಸಿದರು ಪವಾಡ ಸ್ವಾಮಿಗಳು.

○ ಕೇಶವ ಮಳಗಿ

'ನಿಮ್ಮನ್ನು ಈ ಪ್ರಾಂತ್ಯದ ಧರ್ಮಾಧ್ಯಕ್ಷರನ್ನಾಗಿ ನಿಯಮಿಸಲಾಗಿದೆ. ನಿಮ್ಮ ಈಗಿನ ಪದವಿಗೆ ಉತ್ತರಾಧಿಕಾರಿಯನ್ನು ಸೂಚಿಸಿ' ಎಂದು ಹೇಳಿದ. ವಿಷಯ ತಿಳಿದ ಪವಾಡ ಸ್ವಾಮಿಗಳು, 'ಧರ್ಮಾಧಿಕಾರಿಗಳೇ, ನೀವು ಈ ಹಿಂದೆ ಮಾತು ಕೊಟ್ಟಂತೆ, ಈ ಪದವಿಯನ್ನು ನನ್ನ ಮಗನಿಗೆ ನೀಡಿ' ಎಂದು ಬೇಡಿಕೊಂಡರು.

ಭಾಸವಾಯಿತು. ಪುಸ್ತಕಗಳ ಸಾಲುಗಳನ್ನು ಹಾಯುತ್ತ ಹಾಯುತ್ತ ಹೋದಂತೆ ಮೂಲೆಯಲ್ಲಿ ಯಾರೋ ಇಬ್ಬರು ನಿಂತಂತೆ ಮಸುಕು ಮಸುಕಾಗಿ ಕಂಡಿತು.

ನೋಡಿದರೆ–ವೆಂಕ ಮತ್ತು ನಾಣಿ ಕಂಡರು. ಅರ್ಚಕ ಗೋವಿಂದನಿಗೆ ಅವರನ್ನು ಕಂಡದ್ದೇ ಆಶ್ಚರ್ಯ, ಸಂತೋಷ ಎರಡೂ ಒಟ್ಟಿಗೆ ಆದವು. ಅವರು ಅವನ ಚಿಕ್ಕಪ್ಪನ ಕುರಿತು ಸುದ್ದಿಯೊಂದನ್ನು ತಂದಿದ್ದರು. ಅರ್ಚಕ ಗೋವಿಂದನ ಚಿಕ್ಕಪ್ಪ ಶ್ರೀಮಠದ ಧರ್ಮಾಧಿಕಾರಿಗಳಾಗಿದ್ದವರು. ಸಾಕಷ್ಟು ನಾಮ–ಧನ ಬಲವನ್ನು ಹೊಂದಿದ್ದರು. ಧರ್ಮಾಧಿಕಾರಿಗಳು ತುಂಬ ಅಸ್ವಸ್ಥರಾಗಿದ್ದರು. ಕೊನೆಯ ಕ್ಷಣಗಳನ್ನು ಎಣಿಸುತ್ತಿದ್ದ ಅವರು ಅಂತಿಮ ದರ್ಶನ ಪಡೆಯಬೇಕೆಂದಿದ್ದರೆ ತಕ್ಷಣ ಹೊರಟು ಬಾ, ಎಂಬ ಸಂದೇಶವನ್ನು ಸೋದರನ ಪುತ್ರನಿಗೆ ಸುದ್ದಿ ಕಳುಹಿಸಿದ್ದರು. ಚಿಕ್ಕಪ್ಪನ ಅಸ್ವಾಸ್ಥ್ಯ ಸುದ್ದಿ ಗೋವಿಂದನ ಸ್ವಾಸ್ಥ್ಯವನ್ನು ಕೆಡಿಸಿತು. ಮೊದಲನೆಯದ್ದು ತನ್ನ ಚಿಕ್ಕಪ್ಪ ಮರಣಶಯ್ಯೆಯಲ್ಲಿದ್ದಾರೆ ಎಂಬ ಕಾರಣಕ್ಕಾಗಿದ್ದರೆ, ಇನ್ನೊಂದು ತಾನು ಪವಾಡ ವಿದ್ಯೆ ಕಲಿಯುವ ಅವಕಾಶ ತಪ್ಪಿಹೋಗುತ್ತದೆ ಎಂಬುದಕ್ಕಾಗಿತ್ತು. ಕೊನೆಗೆ, ಬಹಳ ವಿಚಾರ ಮಾಡಿ, ಅಳೆದು–ತೂಗಿ, ತಾನೀಗ ಬರಲಾಗುವುದಿಲ್ಲ ನನ್ನ ಅನಿವಾರ್ಯತೆಗೆ ಕ್ಷಮಿಸಿ– ಎಂದು ಪತ್ರವನ್ನು ಅರ್ಚಕ ಗೋವಿಂದ ಬರೆದು ಕಳುಹಿಸಿದ.

ಒಂದು ವಾರ ಕಳೆಯಿತು. ಶೋಕದ ಮುಖ ಹೊತ್ತು ಸಂದೇಶಕರು ಮತ್ತೆ ಬಂದರು. ಧರ್ಮಾಧಿಕಾರಿಗಳು ಇಹಲೋಕವನ್ನು ತ್ಯಜಿಸಿದರೆಂದೂ ನಿಮ್ಮನ್ನು ಧರ್ಮಾಧಿಕಾರಿಗಳಾಗಿ ಆಯ್ಕೆ ಮಾಡಲಾಗಿದೆಯೆಂದೂ ಸುದ್ದಿ ತಿಳಿಸಿ, ಕೃಪಾಶೀರ್ವಾದ ಬೇಡಲೆಂಬಂತೆ ಗೋವಿಂದನ ಪಾದಗಳಿಗೆ ನಮಸ್ಕರಿಸಿದರು.

ಇದನ್ನೆಲ್ಲ ಗಮನಿಸುತ್ತಿದ್ದ ಪವಾಡ ಸ್ವಾಮಿಗಳು, 'ನಮ್ಮ ಮಠದಲ್ಲಿ ತಾವಿರುವಾಗಲೇ ಇಂಥ ಸುದ್ದಿ ಬಂದಿರುವುದು ಬಹಳ ಸಂತೋಷ' ಎಂದು ಖುಷಿಯನ್ನು ವ್ಯಕ್ತಪಡಿಸಿದರು. ನೀವು ಒಂದು ಸ್ಥಾನ ಪಡೆದಿರುವುದರಿಂದ ನನಗೂ ಅದರಿಂದ ಉಪಕಾರವಾಗುವಂತೆ ನಡೆದುಕೊಳ್ಳಿ ಎಂಬಂತೆ– 'ಈಗ ತೆರವಾಗಿರುವ ಅರ್ಚಕ ಸ್ಥಾನಕ್ಕೆ, ದಯವಿಟ್ಟು ನನ್ನ ಮಗನನ್ನು ಆಯ್ಕೆ ಮಾಡಿ' ಎಂದು ಅರ್ಚಕ ಗೋವಿಂದನನ್ನು ಬೇಡಿಕೊಂಡರು.

ಆಗಿನ್ನೂ ಧರ್ಮಾಧಿಕಾರಿಯಾಗಿ ಆಯ್ಕೆಯಾಗಿದ್ದ ಗೋವಿಂದ, ಕೊಂಚ ಯೋಚಿಸಿ, 'ಆ ಸ್ಥಾನವನ್ನು ನನ್ನ ಸೋದರನಿಗೆ ಕೊಡಬೇಕೆಂದು ಇದೀಗ ನನಗೆ ಅಂತಃಪ್ರೇರಣೆಯಾಗಿದೆ. ಮತ್ತೊಂದು ಅವಕಾಶ ಸಿಕ್ಕಾಗ ನಿಮ್ಮ ಮಗನಿಗೆ ಸೂಕ್ತ ಸ್ಥಾನ ಕೊಡುವೆ. ಆದರೆ ಅದಕ್ಕಾಗಿ ನೀವು ನನ್ನೊಂದಿಗೆ ಉಜ್ಜಯಿನಿ ನಗರಕ್ಕೆ ಬರಬೇಕಾಗುವುದು' ಎಂದು ನುಡಿದ.

ಅದಕ್ಕೆ ಒಪ್ಪಿದ ಪವಾಡ ಸ್ವಾಮಿಗಳು ತಮ್ಮ ಮಗನನ್ನು ಕರೆದುಕೊಂಡು ಗೋವಿಂದನೊಂದಿಗೆ ಉಜ್ಜಯಿನಿ ನಗರಕ್ಕೆ ಹೊರಟರು. ಹೊಸದಾಗಿ ಧರ್ಮಾಧಿಕಾರಿಯಾಗಿದ್ದ ಗೋವಿಂದನಿಗೆ ಭರ್ಜರಿ ಸನ್ಮಾನ ಮಾಡಲಾಯಿತು.

ಆರು ತಿಂಗಳು ಕಳೆಯಿತು.

ಒಂದು ದಿನ ವ್ಯಕ್ತಿಯೊಬ್ಬ ಧಾವಂತದಲ್ಲಿ ಬಂದ. 'ನಿಮ್ಮನ್ನು ಈ ಪ್ರಾಂತ್ಯದ ಧರ್ಮಾಧ್ಯಕ್ಷರನ್ನಾಗಿ ನಿಯಮಿಸಲಾಗಿದೆ. ನಿಮ್ಮ ಈಗಿನ ಪದವಿಗೆ ಉತ್ತರಾಧಿಕಾರಿಯನ್ನು ಸೂಚಿಸಿ' ಎಂದು ಹೇಳಿದ. ವಿಷಯ ತಿಳಿದ ಪವಾಡ ಸ್ವಾಮಿಗಳು, 'ಧರ್ಮಾಧಿಕಾರಿಗಳೇ, ನೀವು ಈ ಹಿಂದೆ ಮಾತು ಕೊಟ್ಟಂತೆ, ಈ ಪದವಿಯನ್ನು ನನ್ನ ಮಗನಿಗೆ ನೀಡಿ' ಎಂದು ಬೇಡಿಕೊಂಡರು.

ಆದರೆ, ಧರ್ಮಾಧ್ಯಕ್ಷರಾಗಿ ಆಯ್ಕೆಯಾಗಿದ್ದ ಗೋವಿಂದ



ಪ್ರಭುಗಳು, 'ಈ ಹುದ್ದೆಯನ್ನು ನನ್ನ ತಂದೆಯ ಕಿರಿಯ ತಮ್ಮ ಅಂದರೆ, ಚಿಕ್ಕಪ್ಪನಿಗೆ ಕೊಡಲು ತೀರ್ಮಾನಿಸಲಾಗಿದೆ. ಆ ಮೂಲಕ ನಮ್ಮ ಇನ್ನೊಬ್ಬ ಚಿಕ್ಕಪ್ಪನವರ ಆತ್ಮಕ್ಕೆ ಶಾಂತಿ ಲಭಿಸಲಿ ಎಂಬುದು ನಮ್ಮ ಅಂಬೋಣ. ನಿಮ್ಮ ಮಗನಿಗೆ ಒಳ್ಳೆಯ ಹುದ್ದೆ ಬೇಕಿದ್ದರೆ, ನಮ್ಮೊಂದಿಗೆ ಕಾಶಿಗೆ ಆಗಮಿಸಬೇಕಾಗಬಹುದು' ಎಂದರು. ಸರಿ ಎಂದು ಪವಾಡ ಸ್ವಾಮಿಗಳು ತಮ್ಮ ಮಗನನ್ನು ಕರೆದುಕೊಂಡು ಗೋವಿಂದ ಪ್ರಭುವಿನೊಂದಿಗೆ ಕಾಶಿಗೆ ಹೊರಟರು.

ಅಲ್ಲಿ ಸಭೆ, ಪ್ರವಚನ, ವಿದ್ವತ್‌ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಜತೆಗೆ, ಹೊಸದಾಗಿ ಧರ್ಮಾಧ್ಯಕ್ಷರಾಗಿದ್ದ ಗೋವಿಂದ ಪ್ರಭುಗಳಿಗೆ ಸನ್ಮಾನವೂ ನಡೆಯಿತು.

* * *

ಎರಡು ವರ್ಷ ಕಳೆದವು.

ಒಮ್ಮೆ ಮಹಾಪ್ರಧಾನ ಗುರುಗಳ ಸಂದೇಶಕರು ಬಂದು 'ಗೋವಿಂದ ಪ್ರಭುಗಳೇ, ನಿಮ್ಮನ್ನು ಮಹಾಪ್ರಧಾನ ಗುರುಗಳ ಆಪ್ತ ದಿವಾನರನ್ನಾಗಿ ಆಯ್ಕೆ ಮಾಡಲಾಗಿದೆ. ನಿಮ್ಮ ಈಗಿನ ಹುದ್ದೆಗೆ ಉತ್ತರಾಧಿಕಾರಿಗಳನ್ನು ಸೂಚಿಸಲು ಕೋರಲಾಗಿದೆ' ಎಂದರು. ಪವಾಡ ಸ್ವಾಮಿಗಳಿಗೆ ಈ ವಿಷಯ ತಿಳಿದು, ಗೋವಿಂದ ಪ್ರಭುವಿನ ಬಳಿ ಬಂದರು. ಹಳೆಯ ಆಣೆ–ಭಾಷೆಯನ್ನು ನೆನಪಿಸಿ, ಈಗ ನೀವು ತೆರವು ಮಾಡುವ ಹುದ್ದೆಗೆ ನನ್ನ ಮಗನನ್ನು ನಿಯಮಿಸಿ' ಎಂದು ಕೇಳಿಕೊಂಡರು.

ಆದರೆ, ಮಹಾಪ್ರಧಾನ ಗುರುಗಳ ಆಪ್ತ ದಿವಾನರಾಗಿ ಅಧಿಕಾರ ಸ್ವೀಕರಿಸಲಿದ್ದ ಗೋವಿಂದ ಪ್ರಭುಗಳು, 'ಈ ಹುದ್ದೆಯನ್ನು ನನ್ನ ತಾಯಿಯ ಅಣ್ಣ, ಅಂದರೆ, ನಮ್ಮ ಸೋದರ ಮಾವನಿಗೆ ನೀಡಲು ನಿರ್ಧರಿಸಿದ್ದೇನೆ. ನಿಮ್ಮ ಮಗನಿಗೆ ಉಚಿತ ಸ್ಥಾನಮಾನ ಬೇಕಿದ್ದರೆ, ನಮ್ಮೊಂದಿಗೆ ಹರಿದ್ವಾರಕ್ಕೆ ಬನ್ನಿ' ಎಂದರು. ಪವಾಡ ಸ್ವಾಮಿಗಳು ಆರಂಭದಲ್ಲಿ ಪ್ರತಿಭಟಿಸಿದರೂ, ಸಲಹೆಯನ್ನು ಒಪ್ಪದೇ ಬೇರೆ ದಾರಿ ಕಾಣದೆ ಮಗನನ್ನು ಕರೆದುಕೊಂಡು ಹರಿದ್ವಾರಕ್ಕೆ ಹೊರಟರು.

ಅಲ್ಲಿ ಮತ್ತೆ ಪ್ರವಚನ, ಸನ್ಮಾನ, ಅಂಬಾರಿ ಮೆರವಣಿಗೆ, ಪಲ್ಲಕ್ಕಿ ಉತ್ಸವಗಳು ನಡೆದವು.

* * *

ನಾಲ್ಕು ವರ್ಷ ಗತಿಸಿದವು. ವಯಸ್ಸಿನ ಭಾರದಿಂದ ಮಹಾಪ್ರಧಾನ ಗುರುಗಳು ತೀರಿಕೊಂಡರು. ಧಾರ್ಮಿಕ ವಿಧಿ– ನಿಯಮ ಹಾಗೂ ಸತ್‌ಸಂಪ್ರದಾಯವನ್ನು ಪಾಲಿಸಿಕೊಂಡು ಹೋಗುವ ನಿಟ್ಟಿನಲ್ಲಿ ಆಪ್ತ ದಿವಾನರಾಗಿದ್ದ ಗೋವಿಂದ ಪ್ರಭುಗಳನ್ನೇ ಮಹಾಪ್ರಧಾನ ಗುರುಗಳನ್ನಾಗಿ ಘೋಷಣೆ ಮಾಡಲಾಯಿತು. ಇದನ್ನು ತಿಳಿದ ಪವಾಡ ಸ್ವಾಮಿ, ಮಹಾಪ್ರಧಾನ ಗುರುಗಳ ಬಳಿ ಬಂದು, ಶಿರಸಾಷ್ಟಾಂಗ

ನಮಸ್ಕಾರ ಮಾಡಿದರು. ಅವರ ಪಾದದ ಬಳಿ ಕುಳಿತು ತಮ್ಮ ಹಳೆಯ ಬೇಡಿಕೆಯನ್ನು ಮುಂದಿಟ್ಟು ತೆರವಾದ ಸ್ಥಾನವನ್ನು ತಮ್ಮ ಮಗನಿಗೆ ದಯಪಾಲಿಸುವಂತೆ ಕೇಳಿಕೊಂಡರು.

ಅದಾಗ ಜಗದ್ಗುರುಗಳಾಗಿ ಅಧಿಕಾರ ಸ್ವೀಕರಿಸಿದ್ದ ಗೋವಿಂದ ಮಹಾಪ್ರಭುಗಳು ಭಯಂಕರ ಕುಪಿತರಾದರು. ರೋಷದಿಂದ ಪವಾಡ ಸ್ವಾಮಿಗಳಿಗೆ ನುಡಿದರು- 'ನಾವೂ ನಿಮ್ಮ ಬೇಡಿಕೆಗಳನ್ನು ಕೇಳಿ, ಕೇಳಿ ಬೇಸತ್ತಿದ್ದೇವೆ. ನೀವು ಹೀಗೆಯೇ ನಮ್ಮನ್ನು ಸತಾಯಿಸುತ್ತಿದ್ದರೆ, ನಿಮಗೆ ತುರಂಗವಾಸದ ಸವಿಯನ್ನು ತೋರಿಸಬೇಕಾಗುತ್ತದೆ. ಮಠದ ಉಗ್ರಾಣದ ಪಾರುಪತ್ಯಗಾರರಾಗಲೂ ಯೋಗ್ಯತೆಯಿಲ್ಲದ; ಧರ್ಮ-ಕರ್ಮ ತಿಳಿಯದ ಮೂಢರಿಗೆ ಸೆರೆವಾಸವೇ ಸರಿಯಾದ ಮದ್ದು ಎಂದು ಕಾಣುತ್ತದೆ! ನೀವೀಗ ಗವೀಮಠದಲ್ಲಿ ಪವಾಡಗಳನ್ನು; ಮಾಂತ್ರಿಕ ಮಹಾವಿದ್ಯೆಯನ್ನು ಕಲಿಸುವ ಗುರುವಾಗಿ ಉಳಿದಿಲ್ಲವೆಂದು ನಮಗೆ ತಿಳಿದಿದೆ.'

ಬಡಪಾಯಿ ಪವಾಡ ಸ್ವಾಮಿಗಳಿಗೆ ಈಗ ಉಳಿದಿದ್ದು ಬಂದ ದಾರಿಗೆ ಸುಂಕವಿಲ್ಲ ಎಂದು ಗವೀಮಠಕ್ಕೆ ತೆರಳುವುದು. ಬಲು ದೂರದ ಹಾದಿ. ಏನು ಮಾಡುವುದು ? ಹೀಗಾಗಿ, ಅವರು ಗೋವಿಂದ ಮಹಾಪ್ರಭುಗಳಿಗೆ, 'ಆಯಿತು, ಮಹಾ ಜಗದ್ಗುರುಗಳೇ. ನಾನು ಮರಳಿ ನಮ್ಮೂರಿಗೆ ತೆರಳುವೆ. ಪ್ರಯಾಣಕ್ಕೆ, ಹಸಿವು-ನೀರಡಿಕೆಗೆ, ಆಸರೆಯಾಗಿ ಒಂದಿಷ್ಟು ದಾರಿಬುತ್ತಿಯ ಗಂಟಿನ ವ್ಯವಸ್ಥೆ ಮಾಡಿಕೊಟ್ಟರೆ ಉಪಕಾರವಾಗುತ್ತದೆ.'

ಪವಾಡ ಸ್ವಾಮಿಯ ಈ ಬೇಡಿಕೆ ಆಸೆಬುರುಕತನದ ಪರಮಾವಧಿ ಎಂದು ಅನ್ನಿಸಿ, ಇನ್ನಷ್ಟು ಕೆಂಡಾಮಂಡಲ ಕೋಪಕ್ಕೆ ಒಳಗಾದ ಗೋವಿಂದ ಮಹಾಪ್ರಭುಗಳು, 'ಇಲ್ಲ ಸಾಧ್ಯವೇ ಇಲ್ಲ. ಹಾಗೇ ಹಿಡಿ ಊಟವೂ ಇಲ್ಲದೇ ಇಲ್ಲಿಂದ ತೊಲಗಿ. ನಿಮ್ಮಿಂದಾಗಿ ನಮಗೆ ತಲೆ ರೋಸಿದೆ. ಒಳ್ಳೆಯ ಹಾಡಾಯಿತು ನಿಮ್ಮದು. ರಿಪಿಯಂತೆ ಬೆನ್ನುಹತ್ತಿ ನಮ್ಮ ಜೀವನವನ್ನೇ ನರಕವಾಗಿಸಿದ್ದೀರಿ. ಮನುಷ್ಯರ ಆಸೆಬುರುಕತನಕ್ಕೂ ಒಂದು ಮಿತಿಯೆನ್ನುವುದು ಇರುತ್ತದೆ. ನೀವು ಹಪಾಪಿಯಂತಾಗಿದ್ದೀರಿ' ಎಂದು ಕಿರುಚಿದರು! ಆಗ ಪವಾಡ ಸ್ವಾಮಿಗಳು ತಮ್ಮ ಮುಖದ ಚಹರೆಯನ್ನು ತುಸು ತುಸುವೇ ವಿಚಿತ್ರವಾಗಿ ಬದಲಾಯಿಸಿ, ಅತಿ ಗಡುಸಾದ ಧ್ವನಿಯಲ್ಲಿ- 'ಹಾಗಾದರೆ, ಈ ರಾತ್ರಿ, ನಮ್ಮ ಅಡುಗೆ ಸಿಬ್ಬಂದಿ ಬೇಯಿಸಿದ ಗವೀಮಠದ ಒಣ ಹುಗ್ಗಿಯೇ ನನಗೆ ಗತಿ ಎಂದ ಹಾಗಾಯಿತು' ಎಂದು ಒಸಡಿಯನ್ನು ಸೊಟ್ಟ ಮಾಡಿ ಕುಹಕದಿಂದ ನುಡಿದರು. ಅನಂತರ, ಅಡುಗೆಯವನನ್ನು ಕರೆದು 'ಸರಿಯಪ್ಪ ಇನ್ನೇನು ಮಾಡೋದು ಒಣ ಹುಗ್ಗಿ



ಯನ್ನೇ ಬೇಯಿಸು. ರಾತ್ರಿಯೂಟ ತಯಾರು ಮಾಡುವ ಕೆಲಸ ನಿನಗೆ ತಪ್ಪಲಿಲ್ಲ' ಎಂದರು.

ತಕ್ಷಣವೇ ಗೋವಿಂದನಿಗೆ ತಾನಿನ್ನೂ ಗವೀಮಠದ ಸೋಪಾನದ ಕೆಳಗಿರುವ ಗುಹೆಯಲ್ಲಿರುವ; ಸ್ವಾಮಿಗಳ ಬಳಿಗೆ ಪವಾಡ ವಿದ್ಯೆ ಕಲಿಯಲು ಬಂದಿರುವ ಸಾಮಾನ್ಯ ಅರ್ಚಕ ಗೋವಿಂದ ಎಂದು ಹೊಳೆದು ಹೋಯಿತು! ನಾಚಿಕೆಯಲ್ಲಿ ಮುಖದ ಬಣ್ಣವೇ ಬದಲಾಗಿ ಮಾತುಗಳೇ ಹೊರಡಲಿಲ್ಲ. ಕೈಕಾಲು ಸೇದಿ ಹೋದಂತಾದವು. ಹಾಗಾದರೆ ಇಲ್ಲಿಯವರೆಗೂ ನಡೆದದ್ದೇನು ?

ಪವಾಡ ಸ್ವಾಮಿಗಳು ತೀರ ಮೆತ್ತಗಿನ ಧ್ವನಿಯಲ್ಲಿ ಆತನಿಗೆ ನುಡಿದರು. 'ವಿದ್ಯೆ ಕಲಿಯುವ ಮೊದಲು ಬೇಕಾಗುವ ವಿನಯ, ವಿದ್ಯೆ ಕಲಿತಾದ ಮೇಲೆ ಯಾವುದೇ ಸ್ವಜನ ಪಕ್ಷಪಾತಕ್ಕೆ ಒಳಗಾಗದಂತೆ ಅದನ್ನು ಉಪಯೋಗಿಸುವ ಪರಿಪೂರ್ಣತೆ, ನಿನ್ನ ನಿಷ್ಠೆ ಕಲಿಕೆಯ ಸಾಮರ್ಥ್ಯಗಳನ್ನು ಪರೀಕ್ಷಿಸಲು ಇಷ್ಟು ಸಾಕು. ಈ ಪರೀಕ್ಷೆಯಲ್ಲಿ ಗೆಲ್ಲುತ್ತೀಯೋ ಇಲ್ಲವೋ ಎಂದು ನೋಡಲು ಈ ಗುಹೆಯಲ್ಲಿ ನೀನು ಈವರೆಗೆ ಅನುಭವಿಸಿದ್ದನ್ನು ನಾನೇ ಸೃಷ್ಟಿಸಿದ್ದು. ಅಂದರೆ ನೀನು ಅನುಭವಿಸಿದ್ದೆಲ್ಲ ಕೇವಲ ಕನಸು ಅಥವ ಭ್ರಮೆಯಾಗಿತ್ತು. ಬೇಕಾದರೆ ಇದನ್ನು ಪವಾಡ ಎಂದು ತಿಳಿದುಕೋ. ಹಾಗೆ ನೋಡಿದರೆ ನನಗೆ ಯಾವ ಪವಾಡಗಳನ್ನೂ ಮಾಡಲು ಬರದು. ಜನ ಹುಚ್ಚರು. ಏನೋ ನೋಡುತ್ತಾರೆ. ಏನೋ ಭ್ರಮಿಸುತ್ತಾರೆ. ಆಮೇಲೆ ಅವರು ಪವಾಡ ಮಾಡಿದರು ಅಂದುಕೊಳ್ಳುತ್ತಾರೆ.

ತಮಗೆ ಏನು ಬೇಕೋ ಅದನ್ನು ಕಂಡುಕೊಳ್ಳೋಕೆ ಅವರಿಗೆ ಯಾರಾದರೂ ಬೇಕು. ಇಲ್ಲದಿದ್ದರೆ, ಮನಸ್ಸಿಗೆ ನೆಮ್ಮದಿ-ಜೀವನಕ್ಕೆ ಸಮಾಧಾನ ಅಂತ ಒಂದು ಬೇಕಲ್ಲ, ಅದು ಸಿಗುವುದಿಲ್ಲ. ಮನುಷ್ಯ ತನ್ನ ಸುತ್ತಮುತ್ತ ನೋಡಿ, ತನಗೆ ತಾನೇ ಕಲಿಯೋದೇ ಶ್ರೇಷ್ಠ ಅನ್ನುವವನು ನಾನು. ಮೇಲಾಗಿ, ಸನ್ಯಾಸಿಯಾದ ನನಗೆಲ್ಲಿಯ ಮಗ? ಇಲ್ಲದೆ ಇರುವ ಮಗನಿಗೇಕೆ ಅಧಿಕಾರ, ಸ್ಥಾನಮಾನ? ಅದನ್ನ ತಿಳಿದುಕೊಳ್ಳೋಕೂ ನೀನು ಪ್ರಯತ್ನಿಸಲಿಲ್ಲ. ನಿನ್ನಂಥ ಸ್ವಾರ್ಥಿಗೆ ನಮ್ಮ ಮಠದಲ್ಲಿ ಊಟ ನೀಡುವುದು ಕೂಡ ನಿಷಿದ್ಧ. ಹೋಗಿ ಬಾ. ಬೆಳಿಗ್ಗೆ ತಿಂದ ಅಳ್ಳಿಟ್ಟು-ಮಜ್ಜಿಗೆಯೇ ಸಾಕು ನಿನಗೆ, ಎಂದು ಹೇಳಿ, ಬಾಗಿಲವರೆಗೂ ಹೋಗಿ, ಪ್ರಯಾಣ ಸುಖಕರವಾಗಿರಲಿ ಎಂದು ಹಾರೈಸಿ, ಗೋವಿಂದನನ್ನು ಬೀಳ್ಕೊಟ್ಟರು. ಒಳಗೆ ಬರುತ್ತಲೇ ಇಬ್ಬರ ಹುಗ್ಗಿಯನ್ನೂ ನಾನೇ ತಿನ್ನಬೇಕಾಗುತ್ತದೆ. ಹ್ಞುಂ ಇರಲಿ, ಇದು ಕೂಡ ಪ್ರಕೃತಿಯ ಇಚ್ಛೆಯೇ ಇರಬೇಕು, ಮೂಢಮತಿಗಳಿಗೆ ಹೊಟ್ಟೆಯದೇ ಚಿಂತೆ, ಎಂದು ನಸು ನಕ್ಕು, ಅಧ್ಯಯನಕ್ಕೆ ಕೂರಲು ಸೋಪಾನದ ಮೆಟ್ಟಲುಗಳನ್ನು ಹತ್ತತೊಡಗಿದರು.

*

*

ಅರ್ಜೆಂಟೈನ ದೇಶದ ಸ್ಪಾನಿಶ್ ಲೇಖಕ ಹೊರ್ಹೆ ಲೂಯಿ ಬೋರ್ಹೆಸ್ ಬರೆದ ಕಥೆಯ ದೇಸೀ ರೂಪಾಂತರ. ❑

ಬಡಪಾಯಿ ಪವಾಡ ಸ್ವಾಮಿಗಳಿಗೆ ಈಗ ಉಳಿದಿದ್ದು, ಬಂದ ದಾರಿಗೆ ಸುಂಕವಿಲ್ಲ ಎಂದು ಗವೀಮಠಕ್ಕೆ ತೆರಳುವುದು. ಬಲು ದೂರದ ಹಾದಿ. ಏನು ಮಾಡುವುದು ? ಹೀಗಾಗಿ, ಅವರು ಗೋವಿಂದ ಮಹಾಪ್ರಭುಗಳಿಗೆ, 'ಆಯಿತು, ಮಹಾ ಜಗದ್ಗುರುಗಳೇ. ನಾನು ಮರಳಿ ನಮ್ಮೂರಿಗೆ ತೆರಳುವೆ. ಪ್ರಯಾಣಕ್ಕೆ, ಹಸಿವು-ನೀರಡಿಕೆಗೆ, ಆಸರೆಯಾಗಿ ಒಂದಿಷ್ಟು ದಾರಿಬುತ್ತಿಯ ಗಂಟಿನ ವ್ಯವಸ್ಥೆ ಮಾಡಿಕೊಟ್ಟರೆ ಉಪಕಾರವಾಗುತ್ತದೆ.' ಪವಾಡ ಸ್ವಾಮಿಯ ಈ ಬೇಡಿಕೆ ಆಸೆಬುರುಕತನದ ಪರಮಾವಧಿ ಎಂದು ಅನ್ನಿಸಿ, ಇನ್ನಷ್ಟು ಕೆಂಡಾಮಂಡಲ ಕೋಪಕ್ಕೆ ಒಳಗಾದ ಗೋವಿಂದ ಮಹಾಪ್ರಭುಗಳು, 'ಇಲ್ಲ ಸಾಧ್ಯವೇ ಇಲ್ಲ. ಹಾಗೇ ಹಿಡಿ ಊಟವೂ ಇಲ್ಲದೇ ಇಲ್ಲಿಂದ ತೊಲಗಿ. ನಿಮ್ಮಿಂದಾಗಿ ನಮಗೆ ತಲೆ ರೋಸಿದೆ. ಒಳ್ಳೆಯ ಹಾಡಾಯಿತು ನಿಮ್ಮದು.

ಕಪ್ಪು ಕಣ್ಣಿನ ಹುಡುಗಿ

ಹೇಗೆ ಹೇಳಲಿ ಗೆಳತಿ
ಎದೆಯೊಳಗೆ ಅಡಗಿ ಹೊರಬರಲಾರದೆ
ಅಳುವ ಮಾತುಗಳನ್ನು
ನಂತರ ತಳೆವ ಮೌನಗಳನ್ನು
ನಿನಗೆ ಹೇಗೆ ಹೇಳಲಿ ಗೆಳತಿ.

ನಾನು ನಾನಾಗಿಲ್ಲದಿದ್ದರೆ ಹೇಳಬಹುದಿತ್ತು
ನಿನ್ನ ಮರುಮಾತಿಗೆ.
ನಿನ್ನ ಸಂದೇಶಕ್ಕೆ ಕಾಯಬಹುದಿತ್ತು
ಆದರೆ ಇಲ್ಲಿ ನಾನು ನಾನಾಗಿಯೇ ಇದ್ದೇನೆ.

ತುಟಿಯವರೆಗೂ ಬಂದು
ಹೇಳಲಾಗದೆ ಅಲ್ಲೇ ಉಳಿದು ಹೋದ
ಮಾತುಗಳು ಬೆವರುತ್ತಿರುತ್ತವೆ
ನಂತರ ಹೇಳೋಣವೆಂದರೆ ಹೊಳೆಯುವುದಿಲ್ಲ
ಹೊಳೆದಾಗ ನೀನು ಸಿಗುವುದೇ ಇಲ್ಲ
ಯಾರ ಜಪ್ತಿಗೂ ಸಿಗದ ನವಿಲಂತೆ
ಎಲ್ಲೋ ದೂರದಲ್ಲಿ ಹಾರಾಡುತ್ತಿರುತ್ತಿಯಾ
ಬೇರೊಂದು ನವಿಲಿಗೆ, ಹುಡುಕುತ್ತಿರುತ್ತಿಯಾ ;

ನಿನಗಾದರೂ ಹೇಗೆ ತಾನೆ ಕೇಳುತ್ತದೆ ಹೇಳು,
ಕುಲುಮೆಯಲ್ಲಿ ಹದವಾಗಿ ಕಾದು, ಕರಗಿ
ಮಾತು, ಮಾತು ಜೋಡಿಸಿ
ಸುತ್ತಿಗೆಯ ಏಟಿಗೆ ಕೊನೆಗೆ ಆಕಾರ ಪಡೆದ ಮಾತು
ತಣ್ಣೀರಲ್ಲಿ ಮುಳುಗಿದಾಗ
'ಸುಯ್ಯೆಂದು' ಗಾಳಿಗೆ ಲೀನವಾಗುವ ಸದ್ದು

ನನ್ನೊಳಗಿನ ಮೌನಗಳು
ಹೇಗೆ ತಾನೇ ಅರಳುತ್ತವೆ ಹೇಳು ?
ಅರ್ಥ ಹುಡುಕುವಲ್ಲಿ ಸೋತು,
ತೆಕ್ಕೆಗೊದಗದೆ ಕನಸುಗಳಡಿಯಲ್ಲಿ ಬಚ್ಚಿಟ್ಟುಕೊಂಡಾಗ
ನಿನಗಾದರೂ ಹೇಗೆ ತಾನೇ ಕಾಣಲಾದೀತು ?
ನನ್ನೊಳಗಿನ ಕತ್ತಲ ಬುಡದ ಒಂದಿಷ್ಟು ಬೆಳಕು

ನನ್ನಲ್ಲಿ ಅಳಿದುಳಿದ ಮೌನಗಳಿಗೆ
ಮತ್ತೆ ಮಾತು ಕಟ್ಟುತ್ತೇನೆ
ಹೊಸ ಹುರುಪಿನೊಂದಿಗೆ ನಿನ್ನೊಂದಿಗೆ
ಹೇಳಲು ಬರುತ್ತೇನೆ
ನೀನು ತುಟಿಗೆ ಬೆರಳನ್ನು ಒತ್ತಿಟ್ಟು
'ಈ ದಿನವೆಲ್ಲಾ ಮೌನ ಮಾತಿನೊಂದಿಗೆ ಕಳೆಯೋಣ'
ಎನ್ನುತ್ತೀಯಾ !



ತೆರೆಯದ ತುಟಿಯಂಚಲಿ
ಮಾತು ಹಾಗೆ ನಿಂತಿರುತ್ತದೆ
ಬರ ಬರುತ್ತಾ ಹಾಗೆ ಸೋರಿ ಹೋಗುತ್ತದೆ

ಒಮ್ಮೊಮ್ಮೆ
'ಸದಾ ಕುಡಿದ ಸ್ಥಿತಿಯಲ್ಲಿರು'
'ಏನನ್ನು ?'
ಏನನ್ನಾದರೂ, ವೈನ್, ಕಾವ್ಯ, ಸಜ್ಜನಿಕೆ, ಋಜತ್ವ
ಯಾವುದಾದರೂ ಸರಿ' -
ಎಂದು ಬಾದಿಲೇರ್ ಹೇಳಿದನೆಂದು ಹೇಳುತ್ತಿಯಾ !

ಮತ್ತೆ ಮತ್ತೆ
'ಬಾ ಇಲ್ಲಿಂದ ದೂರಕ್ಕೆ ಹೋಗೋಣ
ಯಾರ ಜಪ್ತಿಗೂ ಸಿಗದ ನವಿಲಂತೆ ಹಾರಾಡೋಣ'
ಎನ್ನುತ್ತಿಯಾ.

ಒಮ್ಮೊಮ್ಮೆ
ನನ್ನ ಇಡೀ ದೇಹವನ್ನು ಒಂದೆಡೆ
ಹಿಡಿದು ಕೂರಿಸುತ್ತೀಯಾ,
ನನ್ನೊಳಗಿನ ಮಾತುಗಳಿಗೆ ಆಕಾರ ಕೊಟ್ಟಾಗ
ಅವುಗಳನ್ನು ಅರಳದೆ ಹೊಸಕಿ ಹಾಕುತ್ತೀಯಾ
ಕೊನೆಗೆ ಅವು ಅರಳುವುದೇ ಇಲ್ಲ

ನಿನಗೆ ಗೊತ್ತಿಲ್ಲ ಹುಡುಗಿ
ಮೌನಗಳು ಮಾತುಗಳಾದಾಗ,
ಅವು ಹುಚ್ಚೆದ್ದು ಕುಣಿದು ಹೊರಬರುವಾಗ
ನಾನು ನಾನಾಗಿ ಇರುವುದಿಲ್ಲ
ನಿನ್ನನ್ನು ಹುಡುಕುತ್ತಿರುತ್ತೇನೆ..

ನೀನು ಎದುರಾಗುತ್ತಿಯಾ
ನಾನಾದರೂ ಹೇಗೆ ತಾನೇ ಹೇಳಲಿ ಗೆಳತಿ ?
ನಿನ್ನ ಎದೆಯೊಳಗೆ ಬೇರೊಂದು ನೆನಪಿರುವಾಗ
ನನ್ನಲ್ಲಿ ರಾಜಿಯಾಗದೆ ಉಳಿದ ಮಾತುಗಳನ್ನು
ಸೋರಿ ಹೋಗದೆ ತಳಕಚ್ಚಿ ಕುಳಿತ ನೆನಪುಗಳನ್ನು

ಹೇಗೆ ಹೇಳಲಿ ಗೆಳತಿ
ಎದೆಯೊಳಗೆ ದಿಕ್ಕುಗಾಣದೆ ಅಲೆವ
ಮಾತುಗಳನ್ನು ......

○ ಲಕ್ಕೂರು ಸಿ. ಆನಂದ

ಅಂಗವಿಕಲರಿಗೆ ಅವಕಾಶ ನೀಡಿ, ಅದ್ಭುತ ಸಾಧನೆ ನೋಡಿ.

ಅಂಗವಿಕಲತೆ ದೌರ್ಬಲ್ಯದ ಸಂಕೇತವಲ್ಲ. ಬದಲಾಗಿ ಅದು ಅಂಗವಿಕಲ ಬಂಧುಗಳಲ್ಲಿ ಮನೋಸ್ಥೈರ್ಯ ಹೆಚ್ಚಿಸಿ ಸಾಧನೆಗೆ ಹೆಚ್ಚಿನ ಛಲ ಮೂಡಿಸುವುದು. ಅವರ ಗಮನಾರ್ಹ ಸಾಧನೆಗೆ ಪ್ರೇರಣೆಯಾಗಲೆಂದೇ ಪ್ರತಿವರ್ಷ ಡಿಸೆಂಬರ್ ೩ ರಂದು ವಿಶ್ವಾದ್ಯಂತ ಅಂಗವಿಕಲರ ದಿನವನ್ನಾಗಿ ಆಚರಿಸಲಾಗುತ್ತಿದೆ.

ಅಂಗವಿಕಲರಿಗಾಗಿ ಅವಕಾಶಗಳು

ರಾಜ್ಯ ಸರ್ಕಾರ ಅಂಗವಿಕಲರ ಕಲ್ಯಾಣಕ್ಕಾಗಿ ರೂಪಿಸಿರುವ ಯೋಜನೆಗಳು :

★ ಶ್ರವಣ ಮತ್ತು ದೃಷ್ಟಿದೋಷವುಳ್ಳವರಿಗಾಗಿ ವಿಶೇಷ ಶಾಲೆಗಳನ್ನು ನಡೆಸಲು ಉತ್ತೇಜನ.

★ ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ

★ ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ

★ ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗೆ ಶ್ರವ್ಯ ಗ್ರಂಥಾಲಯದ ಅನುಕೂಲ

★ 'ಆಧಾರ' ಯೋಜನೆ ಅಡಿಯಲ್ಲಿ ಸ್ವಯಂ ಉದ್ಯೋಗಕ್ಕಾಗಿ ಅವಕಾಶ

★ ಸ್ವಯಂ ಉದ್ಯೋಗ ಯೋಜನೆ ಅಡಿಯಲ್ಲಿ ಉಚಿತ ದೂರವಾಣಿ ಬೂತ್ ಸೌಲಭ್ಯ

★ ಸ್ವಯಂ ಉದ್ಯೋಗ ಅಥವಾ ಆದಾಯ ತರುವ ಉದ್ಯೋಗಗಳಿಗಾಗಿ ಸಾಲ ಸೌಕರ್ಯ

★ ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮೆ ಯೋಜನೆ

★ ಮಾಸಿಕ ನಿರ್ವಹಣೆ ಭತ್ಯೆಯ ನೀಡಿಕೆ

★ ಅಂಗವಿಕಲರಿಗೆ ಶೇ ೫ ರಷ್ಟು ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ

★ ಸಾಧನ ಸಲಕರಣೆಗಳ ಹಾಗೂ ತ್ರಿಚಕ್ರವಾಹನಗಳ ಉಚಿತ ಪೂರೈಕೆ

★ ಅಂಗವಿಕಲರಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್

ಕರ್ನಾಟಕ ವಾರ್ತೆ

ಕಡಲ ತೀರದ ಊರುಗಳಲ್ಲಿ ಮನೆ/ ನಿವೇಶನ ಕೊಳ್ಳುವಿರಾ?

ಇದೋ, ಇಲ್ಲಿದೆ ಕರ್ನಾಟಕ ಗೃಹ ಮಂಡಳಿಯ ಕೊಡುಗೆ –ಕೈಗೆಟಕುವ ದರದಲ್ಲಿ

ಕರ್ನಾಟಕ ಗೃಹ ಮಂಡಳಿಯು ಮಂಗಳೂರು ಪಟ್ಟಣ (ದಕ್ಷಿಣ ಕನ್ನಡ ಜಿಲ್ಲೆ) ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೈಗೊಂಡಿರುವ ವಸತಿ ಯೋಜನೆಗಳು ಗುಣಮಟ್ಟ ಹಾಗೂ ಮಿತವ್ಯಯವನ್ನು ಕಾಯ್ದುಕೊಂಡಿದ್ದು, ವಾಸ್ತುವನ್ನು ಆಧರಿಸಿವೆ. ಕಡಲ ಕಿನಾರೆಯ ಸೊಬಗನ್ನು ಸದಾ ಸವಿಯುತ್ತಾ ಜೀವಿಸಲು ಇದೊಂದು ಸುವರ್ಣಾವಕಾಶ! ತ್ವರೆ ಮಾಡಿ, ನಿಮ್ಮ ವಸತಿ/ನಿವೇಶನಗಳನ್ನು ಇಂದೇ ಕಾದಿರಿಸಿರಿ.

ಮಂಗಳೂರು ಪಟ್ಟಣ : ★ ಕಂಕನಾಡಿ ★ ಪದವು (ಶಕ್ತಿನಗರ) ★ ಕುಂಜತ್ ಬೈಲ್ ★ ಉಲ್ಲಾಳ ಸೋಮೇಶ್ವರ್ ★ ತಿರುವೈಲ್
ಉಡುಪಿ ಜಿಲ್ಲೆ : ★ ಹೆಬ್ರಿ ★ ಶಿವಳ್ಳಿ ★ ಕುಂಭಾಶಿ



ಸೌಲಭ್ಯಗಳು : ಯೋಜನಾ ಬದ್ಧ ನಿವೇಶನಗಳು, ಡಾಂಬರು ಹಾಕಿದ ವಿಶಾಲವಾದ ರಸ್ತೆಗಳು, ಉತ್ತಮ ಒಳಚರಂಡಿ ವ್ಯವಸ್ಥೆ, ವಿದ್ಯುಚ್ಛಕ್ತಿ ಸರಬರಾಜು, ನಿರಂತರ ನೀರು ಸರಬರಾಜು, ಹಾಲಿನ ಬೂತು ಮತ್ತು ಅಂಗಡಿಗಳು, ಸಾರ್ವಜನಿಕ ಸೌಲಭ್ಯಗಳಿಗಾಗಿ ನಿವೇಶನಗಳು ಮೀಸಲು.

ಮನೆ/ ನಿವೇಶನಗಳ ವಿವರಗಳು

	ನಿವೇಶನಗಳು	ಮನೆಗಳು
ದಕ್ಷಿಣ ಕನ್ನಡ	401	268
ಉಡುಪಿ	67	15

1. ಅರ್ಜಿಗಳು

ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ಗೃಹ ಮಂಡಳಿ, ಮಂಗಳೂರು ಹಾಗೂ ಗೃಹ ಆಯುಕ್ತರು, ಕ.ಗೃ.ಮಂ. ಕಾವೇರಿ ಭವನ, ಬೆಂಗಳೂರು ಈ ಕಛೇರಿಗಳಲ್ಲಿ ಉಚಿತವಾಗಿ ನೀಡಲಾಗುವುದು.

2. ಅರ್ಜಿಯೊಂದಿಗೆ ಸಲ್ಲಿಸಬೇಕಾದ ನೊಂದಣಿ ಶುಲ್ಕ

(1) ಎಲ್.ಐ.ಜಿ : ರೂ. 550/-
(2) ಎಂ.ಐ.ಜಿ : ರೂ. 1050/-
(3) ಹೆಚ್.ಐ.ಜಿ : ರೂ. 1550/-

3. ಅರ್ಜಿಯೊಂದಿಗೆ ಪಾವತಿಸಬೇಕಾದ ಪ್ರಾರಂಭಿಕ ಮೊತ್ತ

ಕ್ರ.ಸಂ.	ವರ್ಗ	ನಿವೇಶನಗಳಿಗೆ	ಮನೆಗಳಿಗೆ
1.	ಎಲ್.ಐ.ಜಿ	ರೂ. 10,000/-	ರೂ. 20,000/-
2.	ಎಂ.ಐ.ಜಿ	ರೂ. 15,000/-	ರೂ. 30,000/-
3.	ಹೆಚ್.ಐ.ಜಿ	ರೂ. 20,000/-	ರೂ. 40,000/-

4. ಹಂಚಿಕೆ

ಮೊದಲು ಬಂದ ಅರ್ಜಿಗಳಿಗೆ ಆದ್ಯತೆಯ ಮೇರೆಗೆ ಗೃಹ ಮಂಡಳಿಯ ನಿಯಮಗಳಿಗನುಸಾರವಾಗಿ ಹಂಚಿಕೆ ಮಾಡಲಾಗುವುದು. ಹಣವನ್ನು ಗೃಹ ಆಯುಕ್ತರವರ ಹೆಸರಿಗೆ ಬರೆದ ಡಿಮಾಂಡ್ ಡ್ರಾಫ್ಟ್ ಚಲನ್ ಮೂಲಕ ಪಾವತಿಸಿ ಅರ್ಜಿಗಳನ್ನು ಸ್ಥಾನಿಕ ಗೃಹ ಮಂಡಳಿ ಕಛೇರಿ/ಕೇಂದ್ರ ಕಛೇರಿ ಅಥವಾ ಕ್ಯಾನ್ ಬ್ಯಾಂಕ್ ಕಂಪ್ಯೂಟರ್ ಸರ್ವೀಸಸ್ ಲಿಮಿಟೆಡ್, ಹೋಟೆಲ್ ಬ್ರಾಡ್‌ವೇ ಕಾಂಪ್ಲೆಕ್ಸ್, ಕೆಂಪೇಗೌಡ ರಸ್ತೆ ಬೆಂಗಳೂರು ಇಲ್ಲಿ ಸಲ್ಲಿಸಬಹುದು.

ವಿವರಗಳಿಗೆ ಸಂಪರ್ಕಿಸಿ :

★ ಉಪ ಪ್ರಧಾನ ವ್ಯವಸ್ಥಾಪಕರು, ಕ.ಗೃ.ಮಂ. ಕೇಂದ್ರ ಕಛೇರಿ, ಬೆಂಗಳೂರು (ಫೋನ್ : 2273511-16 Extn : 326)
★ ಸಹಾಯಕ ಪ್ರಧಾನ ವ್ಯವಸ್ಥಾಪಕರು, ಸಮನ್ವಯ ಕಛೇರಿ, ಕ.ಗೃ.ಮಂ, ಮಂಗಳೂರು (ಫೋನ್ : 0824-2481480 ಮತ್ತು 2482534)
★ ವ್ಯವಸ್ಥಾಪಕರು, ಜಿಲ್ಲಾ ಯೋಜನಾ ಕಛೇರಿ, ಕ.ಗೃ.ಮಂ. ಮಂಗಳೂರು (ಫೋನ್ : 0824-2481480)

ಕರ್ನಾಟಕ
ಗೃಹ ಮಂಡಳಿ
ಸಮುದಾಯ ನಿರ್ಮಾಣದತ್ತ

ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009 ಫೋನ್ : 2273511-16
ಇ-ಮೇಲ್ : Khbhc@mantraonline.com
ವೆಬ್ ಸೈಟ್ : www.karnatakahousing.org

ESTD: 1964 **Telephone : 23341972, 23442648, 23449450**

THE JANATHA CO-OPERATIVE BANK LTD.,

17th Cross, 8th Main, Malleswaram, Bangalore - 55

RATE OF INTEREST ON TERM DEPOSITS
(W. E. F. 01-06-2004)

30 DAYS TO 90 DAYS	4.5%
91 DAYS TO 180 DAYS	5.0%
181 DAYS TO 365 DAYS	6.0%
366 DAYS TO 2 YEARS	7.0%
ABOVE 2 YEARS UPTO 3 YEARS	8.0%
ABOVE 3 YEARS UPTO 5 YEARS	7.5%
S.B. ACCOUNTS	3.5%

FINANCIAL POSITION OF THE BANK (31-12-2004)
(Rs. in lakhs)

PAID UP SHARE CAPITAL	492.00
RESERVE & OTHER FUNDS	835.00
TOTAL DEPOSITS	9700.00
LOANS & ADVANCES	6500.00
WORKING CAPITAL	11150.00

SENIOR CITIZENS WILL GET 0.5% EXTRA INTEREST ON THEIR DEPOSITS

BOARD OF DIRECTORS : **SRIUTHS 1] M. Jayaramegowda,** President **2] A. Govinda,** Vice-President **3] Rudre Gowda,** Director **4] B.H. Narasimaiah,** Director **5] K. Puttaswamy,** Director **6] L. Gangadhar,** Director **7] M.S. Vijayasarathy,** Director **8] B.K. Sathyanarayana,** Director **9] C.G. Vijayakumar,** Director **10] I. Narayana Reddy,** Director **11] K.M. Shivanna,** Director **12] Dr. A. Kalappa,** Director **13] S.N. Latha,** Director **14] C.A. Krishnamurthy,** Invitees **15] D. Devaraj,** Invitees

G. NAGARAJA, C.E.O

ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಸಮರ್ಥ ವಿಶ್ಲೇಷಣೆಗಾಗಿ
ವಿಚಾರಶೂನ್ಯವಾಗುತ್ತಿರುವ ಸಮಾಜದ ಜಾಗೃತಿಗಾಗಿ
ಎಲ್ಲ ಜನವರ್ಗಗಳ ಅಭಿವ್ಯಕ್ತಿ ವೇದಿಕೆಯಾಗಿ

ಚಂದಾ ವಿವರ

ಬಿಡಿ ಪ್ರತಿ ರೂ. 20/-

	1 ವರ್ಷಕ್ಕೆ	3 ವರ್ಷಕ್ಕೆ	5 ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ	ರೂ. 100/-	ರೂ. 300/-	ರೂ. 500/-
ನೌಕರರು ಮತ್ತು ವೃತ್ತಿಪರರಿಗೆ	ರೂ. 200/-	ರೂ. 500/-	ರೂ. 800/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ. 240/-	ರೂ. 600/-	ರೂ. 1000/-

'ಸಂವಾದ' ಮಾಸಪತ್ರಿಕೆ, ಸ್ಫೂರ್ತಿಧಾಮ, ಅಂಜನಾನಗರ, ವಿಶ್ವನೀಡಂ ಅಂಚೆ, ಬೆಂಗಳೂರು - 560 091
ದೂರವಾಣಿ : 23287943, 9448048306 ಇ-ಮೇಲ್ : samvaada@yahoo.co.in

ನವಕರ್ನಾಟಕ ಪ್ರಕಾಶನದ ವಿಚಾರ ಸಾಹಿತ್ಯ

ಫಲಜ್ಯೋತಿಷ ನಂಬುವಿರಾ ? (2ನೇ ಮುದ್ರಣ)
ಡಾ|| ಎಸ್. ಬಾಲಚಂದ್ರರಾವ್ **40.00**
(ಕನ್ನಡ ಸಾಹಿತ್ಯ ಪರಿಷತ್ತಿನ 'ಡಾ|| ಎಚ್. ಎನ್. ದತ್ತಿನಿಧಿ' ಪ್ರಶಸ್ತಿ 2001)

ಸಂಪ್ರದಾಯ, ವಿಜ್ಞಾನ ಮತ್ತು ಸಮಾಜ (5ನೇ ಮುದ್ರಣ)
ಡಾ|| ಎಸ್. ಬಾಲಚಂದ್ರರಾವ್ **28.00**
(ಕನ್ನಡ ಸಾಹಿತ್ಯ ಪರಿಷತ್ತಿನ 'ಡಾ|| ಎಚ್. ಎನ್. ದತ್ತಿನಿಧಿ' ಪ್ರಶಸ್ತಿ 1988-89)

ವೈಜ್ಞಾನಿಕತೆ *ಪ್ರೊ|| ಜಿ. ಆರ್. ಲಕ್ಷಣ ರಾವ್* **28.00**

ವೈಜ್ಞಾನಿಕ ಮನೋಧರ್ಮ (6ನೇ ಮು.) *ಜಿ. ಟಿ. ನಾರಾಯಣ ರಾವ್* **80.00**
(ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪುರಸ್ಕಾರ 1990)
(ಕನ್ನಡ ಸಾಹಿತ್ಯ ಪರಿಷತ್ತಿನ 'ಡಾ|| ಎಚ್. ಎನ್. ದತ್ತಿನಿಧಿ' ಪ್ರಶಸ್ತಿ 1992)

ಸಾಮಾನ್ಯ ಘಟನೆಗಳ ವೈಜ್ಞಾನಿಕ ವಿಶ್ಲೇಷಣೆ (4ನೇ ಮುದ್ರಣ)
ವೆಂಕಟಯ್ಯ ಅಪ್ಪಗೆರೆ **28.00**

ದೇವರು, ದೆವ್ವ, ವಿಜ್ಞಾನ *ಡಾ|| ಅಬ್ರಹಾಂ ಟಿ. ಕೋವೂರ್*
(9ನೇ ಮುದ್ರಣ) *(ಸಂ.: ಪುರುಷೋತ್ತಮ ಬಿಳಿಮಲೆ)* **65.00**

ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ (2ನೇ ಮು.)
ಭಗವತ್ ಶರಣ ಉಪಾಧ್ಯಾಯ (ಅನು : ಪ್ರಧಾನ್ ಗುರುದತ್ತ) **120.00**

ಪ್ರಾಚೀನ ಭಾರತದಲ್ಲಿ ಅಂಧಶ್ರದ್ಧೆಗೆ ಎದುರಾಗಿ ವಿಜ್ಞಾನ (2ನೇ ಮು.)
ಎಸ್. ಜಿ. ಸರ್ದೇಸಾಯಿ (ಅನು : ಕೆ. ಎಲ್. ಗೋಪಾಲಕೃಷ್ಣ ರಾವ್) **18.00**

ಪ್ರಾಚೀನ ಭಾರತದಲ್ಲಿ ದಾರ್ಶನಿಕ ಸಂಘರ್ಷ ಮತ್ತು ಅದರ ಮಹತ್ವ
ಎಸ್. ಜಿ. ಸರ್ದೇಸಾಯಿ (ಅನು : ಕೆ. ಎಲ್. ಗೋಪಾಲಕೃಷ್ಣ ರಾವ್) **30.00**

ಮಾರ್ಕ್ಸ್‌ವಾದ ಮತ್ತು ಭಗವದ್ಗೀತೆ (3ನೇ ಮುದ್ರಣ)
ಎಸ್. ಜಿ. ಸರ್ದೇಸಾಯಿ, ದಿಲೀಪ್ ಬೋಸ್
(ಅನು : ಎಸ್. ಆರ್. ಭಟ್) **35.00**

ಭಗವದ್ಗೀತೆ : ಅಪರಾಧ ಮತ್ತು ಶಿಕ್ಷೆ (3ನೇ ಮುದ್ರಣ)
ಆರ್. ಡಿ. ಹೆಗಡೆ, ಆಲ್ಮನೆ **35.00**

ಭಗವದ್ಗೀತೆ. ಒಂದು ವೈಚಾರಿಕ ಒಳನೋಟ
(2ನೇ ಮುದ್ರಣ) *ಪ್ರೊ|| ಬಿ. ವಿ. ವೀರಭದ್ರಪ್ಪ* **50.00**
(ಕನ್ನಡ ಸಾಹಿತ್ಯ ಪರಿಷತ್ತಿನ 'ಡಾ|| ಎಚ್. ಎನ್. ದತ್ತಿನಿಧಿ' ಪ್ರಶಸ್ತಿ 1997)

ಧರ್ಮ ಮತ್ತು ವೈಚಾರಿಕತೆ (2ನೇ ಮುದ್ರಣ)
ಪ್ರೊ|| ಬಿ. ವಿ. ವೀರಭದ್ರಪ್ಪ **25.00**

ವಾಸ್ತು ಎಷ್ಟು ವಾಸ್ತವ ? (4ನೇ ಮುದ್ರಣ) *ಪ್ರೊ|| ಬಿ. ವಿ. ವೀರಭದ್ರಪ್ಪ* **30.00**

ವೇದಗಳಲ್ಲಿ ಜನಸಾಮಾನ್ಯರು (2ನೇ ಮುದ್ರಣ)
ಪ್ರೊ|| ಬಿ. ವಿ. ವೀರಭದ್ರಪ್ಪ **65.00**

ಬಸವೇಶ್ವರ – ಜ್ಞಾನೇಶ್ವರ. ಒಂದು ಚಿಂತನೆ *ಕೃಷ್ಣ ಮೆಣಸೆ*
(ಅನು : ಚಂದ್ರಕಾಂತ ಪೋಕಳೆ) **15.00**

ನಾನೇಕೆ ನಾಸ್ತಿಕ (7ನೇ ಮು.) *ಭಗತ್‌ಸಿಂಗ್ (ಅನು : ಎನ್. ಗಾಯತ್ರಿ)* **18.00**

ಗಣಪತಿ *ಪುರಾಣಂ ಸುಬ್ರಹ್ಮಣ್ಯ ಶರ್ಮಾ*
(ಅನು : ಸಿದ್ಧರಾಮ ರೆಡ್ಡಿ, ಇಟಗಿ) **12.00**

ರಾಮನಿಗೆ ಸೀತೆ ಏನಾಗಬೇಕು ? *ಡಾ|| ಆರುದ್ರ*
(2ನೇ ಮುದ್ರಣ) *(ಅನು : ಕೆ. ಎಲ್. ಗೋಪಾಲಕೃಷ್ಣ ರಾವ್)* **45.00**

ವಿವಾಹ. ಹುಟ್ಟು ಮತ್ತು ಪೂರ್ವೋತ್ತರ *ತಾಪಿ ಧರ್ಮಾರಾವ್*
(4ನೇ ಮುದ್ರಣ) *(ಅನು : ರವಿ ಬೆಳಗೆರೆ)* **40.00**

ದೇವಾಲಯಗಳು ಮತ್ತು ಲೈಂಗಿಕ ಶಿಲ್ಪ *ತಾಪಿ ಧರ್ಮಾರಾವ್*
(6ನೇ ಮುದ್ರಣ) *(ಅನು : ಎಸ್. ಆರ್. ಶಾಸ್ತ್ರಿ)* **40.00**

ಮಹಿಳೆ : ಒಂದು ಅಧ್ಯಯನ *ಡಾ|| ಜ್ಯೋತ್ಸ್ನಾ ಕಾಮತ್* **30.00**

ಮಹಿಳೆ – ಬಿಡುಗಡೆಯ ಹಾದಿಯಲ್ಲಿ (3ನೇ ಮು.) *ಎನ್. ಗಾಯತ್ರಿ* **55.00**
(ಬಿ.ಎಂ.ಶ್ರೀ. ಪ್ರತಿಷ್ಠಾನದ 'ಸಾವಿತ್ರಮ್ಮ ದತ್ತಿನಿಧಿ' ಪ್ರಶಸ್ತಿ 1992)

ಮಾತೆಯರು ಮಾನ್ಯರಾಗಿದ್ದಾಗ *ದೇವಿಪ್ರಸಾದ್ ಚಟ್ಟೋಪಾಧ್ಯಾಯ*
(3ನೇ ಮುದ್ರಣ) *(ಅನು : ಜಿ. ಕುಮಾರಪ್ಪ)* **20.00**

ಇದು ಮುಗಿಯದ ಕಥೆ *ದೇವಿಪ್ರಸಾದ್ ಚಟ್ಟೋಪಾಧ್ಯಾಯ*
(3ನೇ ಮುದ್ರಣ) *(ಅನು : ಜಿ. ಕುಮಾರಪ್ಪ)* **60.00**
(ಅನುವಾದಕ್ಕಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 1998)

ಪ್ರತಿರೋಧ *(ಸಂ : ದೇವಿಪ್ರಸಾದ್ ಚಟ್ಟೋಪಾಧ್ಯಾಯ,*
ಅನು : ಜಿ. ಕುಮಾರಪ್ಪ) **55.00**

ಸಂಶೋಧನೆಯ ಹಾದಿ *ದೇವಿಪ್ರಸಾದ್ ಚಟ್ಟೋಪಾಧ್ಯಾಯ*
(ಅನು : ಜಿ. ಕುಮಾರಪ್ಪ) **40.00**

ವಾನರನಿಂದ ಮಾನವನವರೆಗೆ (4ನೇ ಮು.) *ಫ್ರೆಡರಿಕ್ ಎಂಗೆಲ್ಸ್*
(ಅನು : ಡಾ|| ಜಿ. ರಾಮಕೃಷ್ಣ) **10.00**

ಆರ್ಯರಿಗಾಗಿ ಹುಡುಕಾಟ *ಪ್ರೊ|| ಆರ್. ಎಸ್. ಶರ್ಮ*
(ಅನು : ಡಾ|| ಎಸ್. ಗುರುದತ್) **25.00**

ಅಸ್ಪೃಶ್ಯರು (ಒಂದು ಪರಿಶೀಲನೆ) *ಎಂ. ವೆಂಕಟಸ್ವಾಮಿ* **70.00**

ಧರ್ಮನಿರಪೇಕ್ಷತೆ ಮತ್ತು ಅಲ್ಪಸಂಖ್ಯಾತರು
ಡಾ|| ಬದರಿನಾಥ್ ಕೆ. ರಾವ್ **65.00**

ಶ್ರೀ ಸ್ವಾಮಿ ವಿವೇಕಾನಂದ ಹಿಂದು ಸನಾತನವಾದಿಯೇ ?
(ಸಂ. : ಕೋ. ಚೆನ್ನಬಸಪ್ಪ) **12.00**

ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ – ಸಾಮಾಜಿಕ ನಿಷ್ಠೆ
ಕೋ. ಚೆನ್ನಬಸಪ್ಪ **70.00**

ಅಕ್ಷತ (ನಾವು, ನಮ್ಮವರು : ರೀತಿ-ರಿವಾಜುಗಳು)
ಡಾ|| ಕೃಷ್ಣಾನಂದ ಕಾಮತ **38.00**

ಸ್ಥಳೀಯ ಪುಸ್ತಕದಂಗಡಿಯಲ್ಲಿ ವಿಚಾರಿಸಿ ಇಲ್ಲವೇ ಅಂಚೆ ವೆಚ್ಚ ರೂ. 20 ಸೇರಿಸಿ ನಮಗೆ ಎಂ. ಓ/ ಡಿ. ಡಿ. ಕಳಿಸಿ

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್

ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಅಂ. ಪೆ. ಸಂಖ್ಯೆ 5159, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು - 560 001
✆ / ಫ್ಯಾಕ್ಸ್ : 22203580 / 81 / 82 e-mail : nkp@bgl.vsnl.net.in web : www.navakarnatakabooks.com

ಶಾಖೆಗಳು

5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ✆ 080-22251382
ಕೆ. ಎಸ್. ಆರ್. ರಸ್ತೆ, ಮಂಗಳೂರು-1 ✆ 0824-2441016
ರಾಮಸ್ವಾಮಿ ವೃತ್ತ, ಮೈಸೂರು-24 ✆ 0821-2424094
ಸ್ಟೇಷನ್ ರಸ್ತೆ, ಗುಲ್ಬರ್ಗಾ-2 ✆ 8472-224302

'SAMVADA' Kannada Monthly, FEBRUARY-2005 RNI-KAR KAN/2002/9246 CPMG/KA/BGW-706/2003-0

ಸುಬೋಧಿ

ಸ್ವಯಂ ಉದ್ಯೋಗ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ

ಸ್ಫೂರ್ತಿಧಾಮ, ಬಾಬಾಸಾಹೇಬ್ ಅಂಬೇಡ್ಕರ್ ಸ್ಮಾರಕ ಕೇಂದ್ರ, ಅಂಜನಾನಗರ,
ಅಂಚೆ ಪೆಟ್ಟಿಗೆ ಸಂಖ್ಯೆ: 9143, ವಿಶ್ವನೀಡಂ ಅಂಚೆ, ಬೆಂಗಳೂರು - 560 091

ನಿಮಗೊಂದು ಸುವರ್ಣಾವಕಾಶ! ಸ್ವಂತ ದುಡಿಮೆಯೊಂದಿಗೆ ನಿಮ್ಮ ಕಾಲಮೇಲೆ ನೀವು ನಿಂತು ಕೊಳ್ಳಬೇಕೆ? ಹಾಗಾದರೆ ತಡಮಾಡದೆ ನಿಮ್ಮ ಗಮನ ವನ್ನೊಮ್ಮೆ ಇತ್ತ ಹರಿಯಬಿಡಿ.

ಮಿಲಿಂದ್ ಡಿ.ಎಡ್ ಟ್ರೈನಿಂಗ್ ಕಾಲೇಜ್

ಮಿಲಿಂದ್ ಪಬ್ಲಿಕ್ ಸ್ಕೂಲ್

(830119 ಈ ಸಂಕೇತದ ಪ್ರಕಾರ ಸಿಬಿಎಸ್‌ಇ ನವದೆಹಲಿ ಇವರಿಂದ ಪ್ರಾಥಮಿಕ ಮತ್ತು ಪ್ರೌಢಶಾಲೆ ನಡೆಸಲು ಮಾನ್ಯತೆ ಪಡೆದಿದೆ.)

ವಿವಿಧ ರೀತಿಯ ತರಬೇತಿಗಳನ್ನು ನೀಡುತ್ತಾ ಬರುತ್ತಿರುವ ನಮ್ಮ ಸಂಸ್ಥೆಯು, ಇಂದಿನ ಸ್ಪರ್ಧಾತ್ಮಕ ಪರಿಸ್ಥಿತಿಗೆ ಅನುಗುಣವಾದ ಮಾಹಿತಿ-ಮಾರ್ಗದರ್ಶನಗಳಿಂದ ಕೂಡಿದ ತರಬೇತಿಗಳನ್ನು ನೀಡಲು ಮುಂದಾಗಿದೆ. ಇದರ ಪ್ರಯೋಜನಗಳನ್ನು ನೀವೂ ಪಡೆದುಕೊಳ್ಳಿ, ಇತರರೂ ಪಡೆದುಕೊಳ್ಳುವಂತೆ ಪ್ರೇರೇಪಿಸಿ.

- ಕಂಪ್ಯೂಟರ್ ಹಾರ್ಡ್‌ವೇರ್ / ಸಾಫ್ಟ್‌ವೇರ್
- ಬೆರಳಚ್ಚು - ಕನ್ನಡ ಮತ್ತು ಇಂಗ್ಲೀಷ್
- ಹೊಲಿಗೆ ತರಬೇತಿ
- ಎಂಬ್ರಾಯಿಡರಿ
- ಇಂಗ್ಲೀಷ್ ಸ್ಪೀಕಿಂಗ್ ಕೋರ್ಸ್

ಸುಬೋಧಿ
ವಿವಿದ್ದೋದ್ದೇಶ
ಮಹಿಳಾ
ಸಹಕಾರ ಸಂಘ